॥ ಶ್ರೀಃ ॥

ಶ್ರೀ ಆನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತ

ಶ್ರೀ ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ -೧೩

ಶ್ರೀಮದ್ಭಾಗವತ ತಾತ್ಪರ್ಯನಿರ್ಣಯ

(ಪ್ರಥಮ ಹಾಗೂ ದ್ವಿತೀಯ ಸ್ಕಂದ)

ಭಾಗ - ೧

ಶ್ರೀ ಪೇಜಾವರ ಮಠಾಧೀಶ ಶ್ರೀ 108 ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ

ಕನ್ನಡ ಸಾರ ಸಹಿತ

ಅನುವಾದಕರು:

ವಿದ್ವಾನ್ ಕೆ.ಹಯವದನ ಪುರಾಣಿಕ ಎಮ್.ಎ.

ಪ್ರಕಾಶಕರು:

ಅಖಿಲ ಭಾರತ ಮಾಧ್ವಮಹಾ ಮಂಡಲ

ಪೂರ್ಣಪ್ರಜ್ಞ ವಿದ್ಯಾಪೀಠ,

ಬೆಂಗಳೂರು - 560 028

KANNADA SARVAMOOLA Vol. 13
SRIMAD BHAGAVATHA TATPARYA NIRNAYA (Part I)
of Sri Anandatirtha with Kannada translation and notes (for 2 Skandas). Published by Akhila Bharata Madhwa Maha Mandala, Bangalore-560028. Released during 23rd Tatvajnaana Sammelana held at Dharwad from 27th to 30th Jan 2004

ಪುಟಗಳು :
ಮೊದಲನೆ ಮುದ್ರಣ **2004**
ಪ್ರತಿಗಳು : **2000**

ಪ್ರತಿ ಬೆಲೆ : **ರೂ. 160.00**

ಗ್ರಂಥಗಳು ದೊರೆಯುವ ಸ್ಥಳ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಕಾರ್ಯಾಲಯ
ಪೂರ್ಣಪ್ರಜ್ಞ ವಿದ್ಯಾಪೀಠ, ಪೂರ್ಣಪ್ರಜ್ಞನಗರ, ಬೆಂಗಳೂರು -28

ಅಕ್ಷರ ಜೋಡಣೆ : ಪೂರ್ಣಪ್ರಜ್ಞ ಸಂಶೋಧನ ಮಂದಿರ

ಮುದ್ರಣ : ಓಂಕಾರ್ ಆಫ್ ಸೆಟ್ ಪ್ರಿಂಟರ್ಸ್, ನ್ಯೂ ತರಗು ಪೇಟೆ, ಬೆಂಗಳೂರು -2

ಸಂಪಾದಕ ಮಂಡಳಿಯ ನಿವೇದನೆ

ಕ್ರಿ.ಶ. 1986ರಲ್ಲಿ ಶ್ರೀ ಮಧ್ವಾಚಾರ್ಯರ 750ನೇ ಜಯಂತಿಯ ಅಂಗವಾಗಿ ಆಚಾರ್ಯರು ಅನುಗ್ರಹಿಸಿದ ಸರ್ವಮೂಲ ಗ್ರಂಥಗಳ ಭಾಷಾಂತರ ಕಾರ್ಯವನ್ನು ಶ್ರೀವಿಶ್ವೇಶತೀರ್ಥರು ಸಂಕಲ್ಪಿಸಿದ್ದಾರೆ. ಅಂದಿನಿಂದ ಇದುವರೆಗೆ ಒಟ್ಟು 12 ಸಂಪುಟಗಳು ಹೊರಬಂದಿವೆ. ಅಲ್ಲದೆ ಮೂರು ಬೃಹತ್ ಸಂಪುಟಗಳ ಪುನರ್ ಮುದ್ರಣ ಕಾರ್ಯವು ನಡೆದಿದೆ. ಇದೀಗ ಅಖಿಲ ಭಾರತ ಮಾಧ್ವ ಮಹಾ ಮಂಡಲದ 23ನೇ ತತ್ವಜ್ಞಾನ ಸಮ್ಮೇಳನವು ಧಾರವಾಡ ನಗರದಲ್ಲಿ ಜನವರಿ 27ರಿಂದ 30ರತನಕ ನಡೆಯುವ ಸಂದರ್ಭದಲ್ಲಿ 13ನೇ ಸಂಪುಟ ಶ್ರೀಭಾಗವತ ತಾತ್ಪರ್ಯ ನಿರ್ಣಯ ಭಾಗ 1 (ಪ್ರಥಮ ಹಾಗೂ ದ್ವಿತೀಯ ಸ್ಕಂಧಗಳು) ಪ್ರಕಾಶನಗೊಳ್ಳುತ್ತಿದೆ.

ಕ್ರಿ.ಶ.1987ರಲ್ಲಿ ಗೀತಾಪ್ರಸ್ಥಾನ ಪ್ರಕಟವಾಯಿತು. ಆಮೇಲಿನ ಎರಡು ವರ್ಷಗಳಲ್ಲಿ ದಶೋಪನಿಷತ್‌ಗಳು, ಬೃಹದಾರಣ್ಯಕ ಮತ್ತು ಛಾಂದೋಗ್ಯೋಪನಿಷತ್‌ಗಳು ಹೀಗೆ ಮೂರು ಸಂಪುಟಗಳು ಹೊರಬಂದವು.

ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ರಾಮಾಯಣ ಮತ್ತು ಮಹಾ ಭಾರತದ ಕಥೆಗಳು ಅಡಕವಾಗಿ ಮೊದಲ ಒಂಬತ್ತು ಅಧ್ಯಾಯದವರೆಗೆ ರಾಮಾಯಣದ ಕಥಾ ಭಾಗವು ಮುಕ್ತಾಯವಾಗಿದೆ. ಹತ್ತನೆ ಅಧ್ಯಾದಲ್ಲಿ ಶ್ರೀವೇದವ್ಯಾಸರ ಅವತಾರ ಮತ್ತು ಅವರು ನಡೆಸಿದ ಜ್ಞಾನ ಕಾರ್ಯಗಳ ವಿವರಣೆ ಇದೆ. ಹನ್ನೊಂದನೆಯ ಅಧ್ಯಾಯದಿಂದ ಮಹಾಭಾರತದ ಕಥೆಯು ಆರಂಭವಾಗುತ್ತದೆ. ಇದರಲ್ಲಿ ಹತ್ತೊಂಬತ್ತನೆ ಅಧ್ಯಾಯದಿಂದ ಇಪ್ಪತ್ತೆರಡನೆಯ ಅಧ್ಯಾಯಗಳ ವರೆಗಿನ ಭಾಗವನ್ನು ಭಾಷಾಂತರ ಮಾಡಿ ಕ್ರಿ.ಶ.1999 ರಲ್ಲಿ ಕೊಡಲಾಗಿದೆ. 1998ರಲ್ಲಿ ಸಂಕೀರ್ಣ ಗ್ರಂಥಗಳ, ಭಾಗ ಬಿಡುಗಡೆಯಾಯಿತು. ಅದರಲ್ಲಿ ಕೃಷ್ಣಾಮೃತ ಮಹಾರ್ಣವ, ಸದಾಚಾರಸ್ಮೃತಿ, ತಂತ್ರಸಾರ ಸಂಗ್ರಹ, ಯಮಕ ಭಾರತ ಮತ್ತು ಸ್ತೋತ್ರಾದಿಗಳನ್ನು ಒಳಗೊಂಡ (ದ್ವಾದಶ ಸ್ತೋತ್ರ, ನರಸಿಂಹನಖಸ್ತುತಿ, ಜಯಂತೀ ನಿರ್ಣಯ, ಯತಿ ಪ್ರಣವ ಕಲ್ಪ, ಕಂದುಕಸ್ತುತಿ, ಬಿಲ್ವ ಮಂಗಲ ಸಾಧು) 10 ಸರ್ವಮೂಲ ಗ್ರಂಥಗಳು ಸೇರಿವೆ. 1999ರ ಜನವರಿಯಲ್ಲಿ ತಾತ್ಪರ್ಯ ನಿರ್ಣಯದ 23 ರಿಂದ 32ರ ಅಧ್ಯಾಯಗಳು ಹತ್ತನೆಯ ಸಂಪುಟವಾಗಿ ಹೊರಬಂದಿದೆ. ಇಲ್ಲಿಗೆ ಮಹಾಭಾರತ ತಾತ್ಪರ್ಯ ನಿರ್ಣಯ ಪೂರ್ಣಗೊಂಡಂತಾಗಿದೆ.

2001ರಲ್ಲಿ ಉಡುಪಿಯಲ್ಲಿ ಸೂತ್ರಪ್ರಸ್ಥಾನದ ಮೊದಲ ಗ್ರಂಥವಾಗಿ ಬ್ರಹ್ಮಸೂತ್ರ ಭಾಷ್ಯದ ಪ್ರಥಮಾಧ್ಯಾಯ ಕನ್ನಡ ಅನುವಾದ ಬಿಡುಗಡೆಯಾಯಿತು. ಇದರಲ್ಲಿ ಮತತ್ರಯ ಸೂತ್ರಾರ್ಥವನ್ನು ನಿರೂಪಿಸಿ ತಾತ್ಪರ್ಯ ಚಂದ್ರಿಕಾದಲ್ಲಿ ಹೇಳಿದಂತೆ ತೌಲನಿಕ ಅಧ್ಯಯನವನ್ನೂ

ಮಾಡಲಾಗಿದೆ. ಜೊತೆಗೆ ಶ್ರೀಮಧ್ವಾಚಾರ್ಯರ ಭಾಷ್ಯವನ್ನು ಕೊಟ್ಟು ಅದರ ಭಾವಾರ್ಥವನ್ನು ಕೊಡಲಾಗಿದೆ. ಅದಕ್ಕೆ ಪೂರಕವಾಗಿ ಅನುವ್ಯಾಖ್ಯಾನದ ಮೊದಲ ಐದು ಅಧಿಕರಣ ಭಾಗದ ಅನುವಾದವು ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಬರೆದ ನ್ಯಾಯ ಸುಧಾಸಾರ ಗ್ರಂಥದ ಆಂಗ್ಲ ಭಾಷಾನುವಾದದ ಜೊತೆಗೆ ಸರ್ವಮೂಲದ 12ನೇ ಸಂಪುಟವು ಅಖಿಲ ಭಾರತ ಮಾಧ್ವ ಮಹಾ ಮಂಡಲದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ 2003ನೇ ಫೆಬ್ರವರಿಯಲ್ಲಿ ಬಿಡುಗಡೆಯಾಯಿತು.

2004ನೇ ಜನವರಿ 27 ರಿಂದ 30ರ ತನಕ ಧಾರವಾಡ ನಗರದಲ್ಲಿ ನಡೆಯುವ 23ನೇ ಅಖಿಲ ಭಾರತ ಮಾಧ್ವ ತತ್ವ ಜ್ಞಾನ ಸಮ್ಮೇಳನ ಸಂದರ್ಭದಲ್ಲಿ ಪುರಾಣಗಳಲ್ಲಿ ಒಂದಾದ ಶ್ರೀಭಾಗವತ ತಾತ್ಪರ್ಯ ನಿರ್ಣಯದ ಮೊದಲನೆಯ ಭಾಗ (ಪ್ರಥಮ ಹಾಗೂ ದ್ವಿತೀಯ ಸ್ಕಂಧದ ಕನ್ನಡ ಅನುವಾದವನ್ನು ಹಾಗೂ ಪಾರಾಯಣಕ್ಕೆ ಅನುಕೂಲವಾಗುವಂತೆ ಕನ್ನಡದಲ್ಲಿ ಮೂಲ ಶ್ಲೋಕವನ್ನು ಒಳಗೊಂಡ) ಸರ್ವಮೂಲದ 13ನೇ ಸಂಪುಟ ಪ್ರಕಟಣೆಗೊಳ್ಳುತ್ತಿದೆ. ಇದರ ಅನುವಾದವನ್ನು ಮಾಡಿರುವ ವಿದ್ವಾನ್ ಶ್ರೀ ಕೆ.ಹಯವದನ ಪುರಾಣಿಕರಿಗೆ ಅಭಿನಂದನೆಗಳು.

ತಮ್ಮ ನಿರಂತರ ಕಾರ್ಯಗಳ ಮಧ್ಯದಲ್ಲೂ ಬಿಡುವುಮಾಡಿಕೊಂಡು ಸರಳ ಸುಂದರ ಭಾಷೆಯಲ್ಲಿ ಗ್ರಂಥದ ಸಾರವನ್ನು, ಅನುಗ್ರಹ ಸಂದೇಶವನ್ನು ನೀಡಿ ಅನುಗ್ರಹಿಸಿದ ಪರಮ ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಅನಂತ ಪ್ರಣಾಮಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ಪೂರ್ಣಪ್ರಜ್ಞ ಸಂಶೋಧನ ಮಂದಿರ ವಹಿಸಿಕೊಂಡು ಅಂದವಾಗಿ ಮಾಡಿಕೊಟ್ಟಿದೆ. ಮಂದಿರದ ಅಧಿಕಾರಿ ವರ್ಗಕ್ಕೆ ಅಭಿನಂದನೆಗಳು.

ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಮುದ್ರಣಾಲಯದವರಿಗೂ ವಂದನೆಗಳು. ಮುಖಪುಟ ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಳದ ಕಾರ್ಯದರ್ಶಿ ಇವರಿಗೂ ಅಭಿನಂದನೆಗಳು.

ಬೆಂಗಳೂರು
ದಿನಾಂಕ : 20.1.2004

ಮಹಾಮಹೋಪಾಧ್ಯಾಯ
ಪ್ರೊ|| ಕೆ.ಟಿ. ಪಾಂಡುರಂಗಿ
ಕಾರ್ಯಾಧ್ಯಕ್ಷರು,
ಸಂಪಾದಕ ಮಂಡಳಿ

ಪ್ರಕಾಶಕರ ಅರಿಕೆ

ಅಖಿಲ ಭಾರತ ಮಾಧ್ವ ಮಹಾ ಮಂಡಲವು ಕ್ರಿ.ಶ.1986 ನೇ ವರ್ಷದಲ್ಲಿ ಸರ್ವಮೂಲದ ಕನ್ನಡ ಅನುವಾದದ ಆವೃತ್ತಿಗಳನ್ನು ಹೊರತರುವ ನಿರ್ಧಾರವನ್ನು ಕೈಗೊಂಡಿತು. ಸುಮಾರು 17 ವರ್ಷಗಳಲ್ಲಿ ಹನ್ನೆರಡು ಸಂಪುಟಗಳನ್ನು ತರಲಾಗಿದೆ. ಗೀತಾಪ್ರಸ್ಥಾನ (ಗೀತಾಭಾಷ್ಯ ಹಾಗೂ ಗೀತಾ ತಾತ್ಪರ್ಯ ನಿರ್ಣಯ), ಉಪನಿಷತ್ ಪ್ರಸ್ಥಾನ ಹತ್ತು ಉಪನಿಷತ್ (3 ಸಂಪುಟದಲ್ಲಿ), ದಶಪ್ರಕರಣಗಳು (ಒಂದು ಸಂಪುಟದಲ್ಲಿ), ಮಹಾಭಾರತ ತಾತ್ಪರ್ಯ ನಿರ್ಣಯ (4 ಸಂಪುಟಗಳಲ್ಲಿ), ಸಂಕೀರ್ಣ ಗ್ರಂಥ (ಒಂದು ಸಂಪುಟದಲ್ಲಿ), ತಂತ್ರಸಾರ ಮತ್ತು ಸ್ತೋತ್ರಗಳ ಒಂದು ಸಂಪುಟ), ಸೂತ್ರ ಪ್ರಸ್ಥಾನದಲ್ಲಿ ಸೇರಿದ ಬ್ರಹ್ಮಸೂತ್ರಭಾಷ್ಯ 1ನೇ ಅಧ್ಯಾಯ ಹಾಗೂ ಶ್ರೀಮದನುವ್ಯಾಖ್ಯಾನ ಭಾಗ 11. (ಮೊದಲಿನ ಐದು ಸೂತ್ರಗಳು) ಈ ಎರಡು ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟನೆಗೊಂಡು ಜಿಜ್ಞಾಸುಗಳ ಕೈ ಸೇರಿತು.ಇದಲ್ಲದೆ ಹಿಂದೆ ಪ್ರಕಟನೆಗೊಂಡಿದ್ದ ಗೀತಾಪ್ರಸ್ಥಾನ ಗ್ರಂಥದ ಬೇಡಿಕೆ ಬಹಳವಾಗಿದ್ದರಿಂದ ಇದರ ಪುನರ್ಮುದ್ರಣ (ಎರಡು ಸಾರಿ) ಹಾಗೂ ದಶೋಪನಿಷತ್‌ನ ಛಾಂದೋಗ್ಯ ಮತ್ತು ಬೃಹದಾರಣ್ಯಕ ಸಂಪುಟಗಳ ಪುನರ್ಮುದ್ರಣವನ್ನು ಮಾಡಲಾಗಿದೆ. ಉಳಿದ 8 ಉಪನಿಷತ್ ಗ್ರಂಥವು ಸದ್ಯದಲ್ಲೇ 3ನೇ ಬಾರಿಗೆ ಮುದ್ರಣಗೊಳ್ಳುತ್ತದೆ.ಮಹಾಭಾರತ ತಾತ್ಪರ್ಯ ನಿರ್ಣಯ 1ನೇ ಭಾಗ ಕೂಡ 2001 ರಲ್ಲಿ ಪುನರ್ಮುದ್ರಣಗೊಂಡಿದೆ. ಈ ರೀತಿ ಮಾಧ್ವ ಮಹಾ ಮಂಡಲವು ಸರ್ವಮೂಲದ ಸಂಪುಟಗಳ ಬಿಡುಗಡೆಗೆ ಒಂದು ನೀಲಿ ನಕ್ಷೆಯನ್ನು ತಯಾರಿಸಿ ಈ ಗ್ರಂಥಗಳ ಬಿಡುಗಡೆಗೆ ಸರ್ವಪ್ರಯತ್ನವನ್ನು ಮಾಡುತ್ತಿದೆ.

ಪ್ರಕೃತ ಪುರಾಣಗಳಲ್ಲಿ ಒಂದಾದ ಶ್ರೀಭಾಗವತ ತಾತ್ಪರ್ಯ ನಿರ್ಣಯದ ಮೊದಲನೇ ಭಾಗ ವನ್ನು (ಪ್ರಥಮ ಹಾಗೂ ದ್ವಿತೀಯ ಸ್ಕಂಧ ಕನ್ನಡ ಅನುವಾದ ಹಾಗೂ ಪಾರಾಯಣಕ್ಕೆ ಅನುಕೂಲವಾಗುವಂತೆ ಮೂಲ ಶ್ಲೋಕಗಳು ಕನ್ನಡದಲ್ಲಿ) ಶ್ರೀ ಹಯವದನ ಪುರಾಣಿಕರು ಅನುವಾದ ಮಾಡಿಕೊಟ್ಟಿರುತ್ತಾರೆ. ಇವರಿಗೆ ಕೃತಜ್ಞತೆಗಳು. ಇದರ ಬಿಡುಗಡೆಯ ಕಾರ್ಯಕ್ರಮ ಧಾರವಾಡ ನಗರದಲ್ಲಿ ತಾ॥ 27.1.2003 ರಿಂದ 30.1.2004 ರತನಕ ನಡೆದ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು ನಡೆಸಿದ 25ನೇ ಶ್ರೀಮನ್ನ್ಯಾಯಸುಧಾ ಅನುವ್ಯಾಖ್ಯಾನ ಮಂಗಳ ಮಹೋತ್ಸವದಲ್ಲಿ ನಡೆಯಲಿದೆ. ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಹಯವದನ ಪುರಾಣಿಕರ ಸಮ್ಮುಖದಲ್ಲಿ ಇದರ ಬಿಡುಗಡೆಯಾಗಿಸುವುದು ಒಂದು ವಿಶೇಷ.

ತಮ್ಮ ನಿರಂತರ ಕಾರ್ಯಗಳ ಮಧ್ಯದಲ್ಲೂ ಬಿಡುವುಮಾಡಿಕೊಂಡು ಸರಳ ಸುಂದರ ಭಾಷೆಯಲ್ಲಿ ಗ್ರಂಥದ ಸಾರವನ್ನು, ಅನುಗ್ರಹ ಸಂದೇಶವನ್ನು ನೀಡಿ ಅನುಗ್ರಹಿಸಿದ ಪರಮ ಪೂಜ್ಯ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರಿಗೆ ಅನಂತ ಪ್ರಣಾಮಗಳು. ಕನ್ನಡ ಅರಿಯದ ಜಿಜ್ಞಾಸುಗಳಿಗೂ ತಿಳಿಯಲು ಅನುಕೂಲವಾಗುವಂತೆ ಆಂಗ್ಲ ಭಾಷೆಯಲ್ಲಿ ಸಾರವನ್ನು ಬರೆದುಕೊಟ್ಟ ಪ್ರೊ|| ಕೆ. ಟಿ. ಪಾಂಡುರಂಗಿ ಇವರಿಗೆ ಕೃತಜ್ಞತೆಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು ಪೂರ್ಣಪ್ರಜ್ಞ ಸಂಶೋಧನ ಮಂದಿರ ವಹಿಸಿಕೊಂಡು ಅಂದವಾಗಿ ಮಾಡಿಕೊಟ್ಟಿದೆ. ಮಂದಿರದ ಅಧಿಕಾರಿ ವರ್ಗಕ್ಕೆ ಅಭಿನಂದನೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓಂಕಾರ್ ಮುದ್ರಣಾಲಯದವರಿಗೂ ವಂದನೆಗಳು. ಮುಖಪುಟ ವಿನ್ಯಾಸ ಹಾಗೂ ಈ ಸಂಪುಟ ಬಿಡುಗಡೆಗೆ ವಿವಿಧ ಹಂತದಲ್ಲಿ ಶ್ರಮಿಸಿದ ಮಂಡಲದ ಕಾರ್ಯದರ್ಶಿ ಇವರಿಗೂ ಅಭಿನಂದನೆಗಳು.

ಸಹೃದಯ ವಾಚಕರು ವಿಳಂಬಕ್ಕೆ ಬೇಸರಿಸದೆ ಆತ್ಮೀಯತೆಯಿಂದ ಈ ಸಂಪುಟವನ್ನು ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

ಬೆಂಗಳೂರು
20.1.2004

ಕೆ. ವಿಷ್ಣುಮೂರ್ತಿ ಎರ್ಕಾಡಿತ್ತಾಯ
ಅಧ್ಯಕ್ಷರು
ಅಖಿಲ ಭಾರತ ಮಾಧ್ವಮಹಾ ಮಂಡಲ
ಬೆಂಗಳೂರು

ಅನುಗ್ರಹ ಸಂದೇಶ

ಶ್ರೀಮದ್ಭಾಗವತ 'ಯದ್ ವೈಷ್ಣವಾನಾಂ ಧನಮ್' – ವೈಷ್ಣವರ ದೊಡ್ಡ ಆಸ್ತಿ. ಮಹಾಭಾರತ ಹಾಗೂ ಇತರ ಪುರಾಣಗಳನ್ನು ರಚಿಸಿದ ವೇದವ್ಯಾಸರು ಅತೃಪ್ತರಂತೆ ನಟಿಸಿ ಈ ಪುರಾಣವನ್ನು ರಚಿಸಿದ್ದಾರೆ. ಅಲ್ಲದೆ, ಇತರ ಪುರಾಣಗಳನ್ನು ರೋಮಹರ್ಷಣ ಸೂತರಿಗೆ ಪ್ರಚಾರಕ್ಕಾಗಿ ನೀಡಿದರೆ, ಭಾಗವತವನ್ನು ತಮ್ಮ ಮಗನಾದ ಶುಕಾಚಾರ್ಯರಿಗೇ ನೀಡಿದ್ದಾರೆ. ಹೀಗೆ ಶ್ರೀವೇದವ್ಯಾಸರು ಕಲಿಕಾಲದ ಸಜ್ಜನರ ಶ್ರೇಯಸ್ಸಿಗಾಗಿಯೇ ರಚಿಸಿರುವ ಪುರಾಣ ಭಾಗವತ.

ಶ್ರೀಮಧ್ವಾಚಾರ್ಯರು ಭಾಗವತಪುರಾಣದ ಅರ್ಥನಿರ್ಣಯಕ್ಕಾಗಿಯೇ ಗ್ರಂಥವೊಂದನ್ನು ರಚಿಸಿದ್ದಾರೆ. ಬಾಲ್ಯದಿಂದಲೇ ಭಾಗವತ ಗ್ರಂಥವನ್ನು ಮುಖೋದ್ಗತವಾಗಿ ಹೇಳಿ ಗುರುಗಳಿಗೆ ಅಚ್ಚರಿಪಡಿಸಿದ್ದಲ್ಲದೆ ತಮ್ಮ ಶಿಷ್ಯರಾದ ಶ್ರೀಹೃಷೀಕೇಶತೀರ್ಥರಿಂದ ರಾಗಬದ್ಧವಾಗಿ ಭಾಗವತದ ಶ್ಲೋಕಗಳನ್ನು ಹಾಡಿಸಿ ತಾವು ಅದರ ವಿವರಣೆಯನ್ನು ಸಾರ್ವಜನಿಕ ಸಭೆಗಳಲ್ಲಿ ನಿರೂಪಿಸುತ್ತಿದ್ದರು. ಹೀಗೆ ಆಚಾರ್ಯರಿಗೂ ಅತ್ಯಂತ ಪ್ರಿಯವಾದ ಪುರಾಣ ಶ್ರೀಮದ್ಭಾಗವತ.

ಶ್ರೀಮದಾಚಾರ್ಯರು ಭಾಗವತದ ಅರ್ಥನಿರ್ಣಯಕ್ಕಾಗಿ ಬರೆದಿರುವ ಗ್ರಂಥ ಭಾಗವತದ ಅಧ್ಯಯನಕ್ಕೆ ಅತ್ಯಂತ ಆವಶ್ಯಕವಾದ ಒಂದು ಕೈಪಿಡಿ. ಮಹಾಭಾರತ ಮತ್ತು ಭಾಗವತಗಳಿಗೆ ವಿರೋಧ ಬಂದಾಗ ಶ್ರೀವೇದವ್ಯಾಸರೇ ರಚಿಸಿದ ಇತರ ಪುರಾಣಗಳ ಆಧಾರ ಕೊಟ್ಟು ವಿರೋಧವನ್ನು ಪರಿಹರಿಸಿರುವುದು ಆಚಾರ್ಯರಿಗೆ ಪುರಾಣಸಾಹಿತ್ಯದಲ್ಲಿದ್ದ ಸಂಶೋಧಕ ದೃಷ್ಟಿಯನ್ನು ಈ ಗ್ರಂಥ ಸ್ಪಷ್ಟಪಡಿಸುತ್ತದೆ. ಭಾಗವತದಲ್ಲಿ ಬರುವ ಅನೇಕ ಕ್ಲಿಷ್ಟವಾದ ಅಪಾರ್ಥವಾಗುವ ಶ್ಲೋಕಗಳಿಗೆ ಪ್ರಮಾಣಬದ್ಧವಾದ ವಿವರಣೆಯೂ ಈ ಗ್ರಂಥದಲ್ಲಿದೆ. ಇತರ ವ್ಯಾಖ್ಯಾನಕಾರರು ಹಿಡಿದಿರುವ ಪಾಠಗಳಿಗಿಂತ ಉತ್ತಮವಾದ, ವೇದ

ವ್ಯಾಸರಿಗೆ, ಶ್ರುತಿಗಳಿಗೆ ಸಮ್ಮತವಾದ ಅಪೂರ್ವ ಪಾಠಗಳನ್ನು ಆಚಾರ್ಯರು ತೋರಿಸಿಕೊಟ್ಟಿದ್ದಾರೆ. ಹೀಗೆ ಭಾಗವತದ ವಸ್ತುನಿಷ್ಠ ಅಧ್ಯಯನಕ್ಕೆ ಅನಿವಾರ್ಯವಾದ ಗ್ರಂಥ ಇದು.

ನಮ್ಮ ಪ್ರಿಯಶಿಷ್ಯರಾದ ಶ್ರೀ ಹಯವದನ ಪುರಾಣಿಕರು ಭಾಗವತದ ತಾತ್ಪರ್ಯದ ಕನ್ನಡಾನುವಾದವನ್ನು ಮಾಡಿದ್ದಾರೆ. ಕನ್ನಡ ಸರ್ವಮೂಲ ಗ್ರಂಥಗಳಲ್ಲಿ ಈಗಾಗಲೇ ಮಹಾಭಾರತ ತಾತ್ಪರ್ಯ ನಿರ್ಣಯದ ಸಮಗ್ರ ಕನ್ನಡ ಅನುವಾದವನ್ನು ಮಾಡಿರುವ ಪುರಾಣಿಕರು ಈಗಾಗಲೇ ಜನರ ಅಭಿಮಾನಗಳಿಸಿರುತ್ತಾರೆ. ನ್ಯಾಯ, ವೇದಾಂತಗಳಲ್ಲಿ ಉತ್ತಮ ಪಾಂಡಿತ್ಯವಿದ್ದರೆ ಮಾತ್ರ ಭಾಗವತ ತಾತ್ಪರ್ಯದ ಸರಿಯಾದ ಅನುವಾದ ಮಾಡಲು ಸಾಧ್ಯ. ಅಂತಹ ಅರ್ಹತೆ ಹಯವದನ ಪುರಾಣಿಕರಿಗೆ ಇದೆ. ಆದ್ದರಿಂದ ನಿರ್ದುಷ್ಟವಾದ ಈ ಅನುವಾದದ ಉಪಯೋಗವನ್ನು ಜಿಜ್ಞಾಸುಗಳು ಪಡೆದು ಶ್ರೀಹರಿಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ನಾವು ಅಪೇಕ್ಷಿಸುತ್ತೇವೆ.

ಶ್ರೀ ವಿಶ್ವೇಶತೀರ್ಥ ಶ್ರೀಪಾದರು
ಶ್ರೀ ಪೇಜಾವರ ಅಧೋಕ್ಷಜ ಮಠ,
ಉಡುಪಿ

BHAGAVATATATPARYANIRNAYA

Introduction

Bhagavata Tatparya Nirnaya of Sri. Anandatirtha (Sri.Madhvacharya) is a critical exposition of Srimad Bhagavata. Srimad Bhagavata is quite distinct from Mahabharata and Puranas in respect of its style, subject matter and the purpose. Its theme is to describe the different incarnations of the supreme God Narayana, particularly, the incarnation of Srikrishna.

In the course of this description discourses on philosophy, theology, ethics are introduced. The process of the creation of the universe is described. The entire universe is described as a visible form of the supreme God. Inculcation of devotion to the supreme God and detachment from all others is stressed. A noble code of conduct designated as Bhagavata dharma is advocated all along. In the course of the narration of the main theme a number of episodes of Sages, Kings and major devotees like Dhruva, Prahlada are introduced. The importance of noble life is highlighted by presenting the aggressive deeds of evil persons like Hiranyakasipu, Sisupala etc.

The style of Bhagavata is not simple like that of Mahabarata and Puranas. It is a scholastic style like later Mahakavyas. The Bhagavata tradition is a continuation of Pancharatra tradition. Hence, a number of technical terms of Pancharatra theology are introduced in Bhagavata. The

philosophy presented in Upanisads and Brahmasutra is also incorporated in the course of developing its theme of the concept of Supreme God designated as Bhagavan. While selecting the episodes to demonstrate bhakti and vairagya information from other puranas particularly from Harivamsa and Vishnupurana is drawn. The first two skandhas establish a link between Mahabharata and Bhagavata. In this way Bhagavata is a composition of multi dimension in respect of its source, theme, thought and purpose.

This is effectively stated by Sri Madhvacharya in the following verse:

अर्थोऽयं ब्रह्मसूत्राणां भारतार्थविनिर्णयः ।
गायत्रीभाष्यरूपोऽसौ वेदार्थपरिबृंहितः ॥
पुराणानां साररूपः साक्षाद् भगवतोदितः ।
द्वादशस्कन्धसंयुक्तः शतविच्छेदसंयुतः ।
ग्रन्थोऽष्टादशसाहस्रः श्रीमद्भागवताभिधः ॥

The very invocatery verse "जन्माद्यस्य यतः" etc., is an exposition of the first four sutras of bralimasutras directly and the entire brahmasutras by appropriate explanation. The teachings of brahmasutra, particularly of sadhanadhaya and phaladhyaya are incorporated in Bhagavata verses all along.

There are a few situations wherein Mahabharata statements are not clear. There are differences in the narration of certain events. These are to be settled on the basis of the remarks in Bhagvata. Thus Bhagavata helps to clarify the statement in Mahabharata. Sri Madhvacharya has written the

digests of both these giving a critical exposition. The importance of the Gayatri hymn is explained in the very first verse of Bhagavata. It is already stated above that many episodes of sages, kings, and incarnations of God described in other puranas are partially and fully incorporated in Bhagvata and their philosophical, theological and moral implications are developed.

पुराणस्थानपान्थानामभाषात्रयवेदिनाम् ।
भवता सुसखा चक्रे श्रीभागवतनिर्णयः ॥

It is difficult for an average reader to grasp all these aspects by reading the text of Bhagavata alone. Naturally very learned commentators have written commentaries on Bhagavata to help such a reader. There were two commentaries composed by Chitsukha and Punya-ranya before Sri Madhvacharya. These interpreted Bahagavata to develop Advaita Philosophy which is against the very spirit of Bhagavata.

Out of eighteen thousand verses of Bhagavata sixteen hundred verses are selected for comment in this work. It is a kind of critical digest and a critical exposition.

Such verses that are significant from philosophical, theological and ethical point of view are selected for comment. In these verses only select words and select phrases are. commented upon. These comments are of three types

i) The meaning of the selected words is given

ii) A remark on the point made by the word or the

phrase or the verse concerned is made

iii) A clarification is offered

The expressions and phrases that are likely to be given advaita interpretation are especially examined and correctly interpreted. In majority of cases an authority is quoted to support the meaning given and to substantiate the point made or the clarification given. Apart from quoting authority for these purposes, the authorities are also quoted giving full details of theological and philosophical issues. In respect of the rare meaning of the words lexicons are quoted. The remarks made on the points are brief but the authorities quoted are long. If one has a curiosity to find out the proportion of the commentor's remark and the authority quoted one can safely say only ten percent are commentators remarks and ninety percent are the authorities quoted. This is a special style of Sri Madhvacharya. In all his works he profusely quotes from 380 work in his 37 works. Among these his quotations in Bhagvata tathparya nirnaya are largest. Here, he quotes from 224 works.

In this volume, the text of Bhagavata tataparya nirnaya of the first two skandhas is given. We will illustrate trate the above special features of Bhagavata tathparya nirnaya from this portion.

Meaning of the technical and rare word.

i) आत्ममायया - स्वरूपभूतेच्छया (१-१८)

आत्ममायया - सदसद्रूपया प्रकृत्या (१-३१)

In both these cases advaitins are likely to take these in the sense of अविद्या. However, the correct meaning of this expression is given above by Tatparya Nirnaya

ii) पार्थिवं वपुः - पृथुशरीराविष्टं वपुः ।

This expression is likely to give an impression that God himself took a physical body when he appared as king पृथु. Therefore, it is clarified that he entered into पृथु's body.

iii) समाधिना - समाधिभाषया (१-५-१३)

The expression समाधि is ordinarily understood in the sense of concentration by yogic practice but here it has to be taken in the sense of समाधिभाषा.

iv) त्यागः - मिथ्याभिधानस्य वर्जनम् । (१.१६.१२७)

The word त्याग ordinarily means giving up interest hi the result withdrawing ownership, giving up self interest etc. Here, it has to be taken as avoiding false pride or false attachment.

v) तीर्थानाम् - शास्त्राणाम् ।

The word तीर्थ ordinarily means a holy water place. Here it has to be taken in the sense of sastra.

vi) अंशांशतः - सामर्थ्यैकदेशेन ।

The word means a portion. It also means a power of capacity lent by a higher being.Such explanations of important words are given all along.

Clarification of the implications of certain words, phrases and verses :

i) स्थित्यादये हरिविरिञ्चिहरेति सञ्ज्ञाः । विष्णोरेव त्रिसञ्ज्ञाः

The general impression that creation sustenance, and destruction are effected by Brahma, Vishnu and Siva. However, these are effected by Vishnu only. He effects creation and destruction being present in Brahma and in Siva . This is clarified here by the remark विष्णोरेव त्रिसञ्ज्ञाः ।

ब्रह्मविष्ण्वीशरूपाणि त्रीणि विष्णोर्महात्मनः ।
ब्रह्मणि ब्रह्मरूपः स शिवरूपी शिवे स्थितः ।
पृथगेव स्थितो देवो विष्णुरूपो जनार्दनः ॥

ii) तस्य पुत्रो महायोगी समदृक् निर्विकल्पकः । (१-४-४)

निर्विकल्पकः मदीयं तदीयमिति भेदमपहाय सर्वमीश्वराधीनमिति विज्ञाय स्थितः ।

The expression निर्विकल्पक is a technical word in the context of epistemology and yogic practice. However, here it is used in altogether a different sense appropriate to the present context.

iii) न यद्वचश्चित्रपदं हरेर्यशः जगत्पवित्रं न गृणीत कर्हिचित् ।
तद् वायसं तीर्थमुशन्ति मानसाः न यत्र हंसा न्यपतन् मिमङ्क्षया ॥

वायसतीर्थम् । वयोमात्रानुजीवि शास्त्रम् । तच्च शास्त्रं जीवनमात्राय भवति । न तु हरिज्ञानभक्त्याद्यर्थमित्यर्थः ।

The literal meaning, of the expression वायसतीर्थ means a place of water wherein crow takes a dip. This meaning does not suit

here. Therefore, a deeper meaning is assigned.

iv) द्वापरादौ - द्वापरे आदौ च कृष्णावतारापेक्षया

The Expression द्वापरादौ gives the inpression that the event of suka learning Bhagavata from Sri Vedavyasa took place at the commencement of द्वापर । How ever, it should be taken in the sense that this event took before कृष्णावतार in द्वापर. This is clarified in Tatparyanirnaya by the remark द्वापरे आदौ कृष्णावतारापेक्षया (II-1-8)

v) कालः - वायुः

The expression काल ordinarily means time. This meaning does not suit in the verse "न यत्र कालोऽनिमिषां परः" etc. अनिमष i.e. not winking refers to the deities chaturmukha brahma etc. cannot be considered as higher. Hence, it is interpreted as वायु i.e. मुख्यप्राण ।

This meaning is supported by quoting the authority.

हरिश्च प्रकृतिश्चैव ब्रह्मवायू तथैव च ।
सुपर्णशेषरुद्राश्च शक्रः सूर्ययमावपि ।
अग्निर्यमानुजश्चैव कालशब्देरिताः क्रमात् ॥
इत्युद्दामसंहितायाम् । (II-2-18)

vi) गृहीतशक्तित्रितयाय

This expression refers to इच्छा - ज्ञान - क्रियाशक्ति of Supreme God. This does not refer to सत्त्व, रजस् and तमस् as interpreted by other commentators.

इच्छा ज्ञानं क्रिया चेति नित्याः शक्तय ईशितुः ।
स्वरूपभूता अपि तु भेदवद्व्यावहारिकाः इति प्रकाशसंहितायाम् । (II-4-12)

vii) विबुभूषुः - बहुधा बुभूषुः

This expression conveys that the Supreme God desired to assume many forms. It has to be made clear as to when he assumes and for what purpose. Tatparyanirnaya clarifies this quoting an authority.

ईशो बह्वीः प्रजाः सृष्ट्वा तत्रैव बहुरूपताम् ।
तत्तन्नियामकतया प्राप्तुं कालाद्युपाददे ।। (II-5-21)

viii) सदसत्त्वम् - व्यक्ताव्यक्तत्वम् ।

This expression should not be taken in the sense exists and does not exists but it should be taken in the sense of manifest and unmanifest. (II-5-22)

ix) सर्वं पुरुष एवेदम् ।

This expression does not convey the identity between the God and the world. It only conveys that the entire world is dependent upon the God.

सर्वं पुरुष एवेति भण्यतेऽभेदवर्जनात् ।
तदधीनं तु सत्तादि यतो ह्यस्य सदा भवेत् ।
इति ब्रह्मतर्के (II-6-15)

x) अमृतं क्षेममभयं त्रिमूर्ध्नोऽधायि मूर्धसु ।

Here the expressions अमृत, क्षेम and अभय refer to अनन्तासन, वैकुण्ठ, नारायणपुर. Tatparya Nirnaya gives these details quoting an authority.

त्रिमूर्धा सन् हरिर्धत्ते द्युत्रयं मूर्धभिः त्रिभिःA

अनन्तासनवैकुण्ठनारायणपुराणि तु - इति मात्स्ये (II-6-19)

3. The expressions and phrases that are prone to advaita interpretation:

I. विशोको ब्रह्मसम्पत्त्या सञ्छिन्नद्वैतसंशयः ।
लीनप्रकृतिनैर्गुण्यादलिङ्गत्वादसम्भवः । (I-15-3)

ब्रह्मसम्पत्तिः - भगवदवगतिः ।

The expression ब्रह्मसम्पत्तिः gives an impression that the attainment of identity is conveyed here. But really speaking the obtaining of the knowledge of Brahman is conveyed here. This is made clear by explaining the meaning of the word सम्पत्ति as अवगति i.e., comprehension

सञ्छिन्नद्वैतसंशयः

भगवन्तं विनान्यत्र प्रवृत्यादिप्रकाशनम् । द्वैतदृष्टिः ।
तां द्वैतदृष्टिं मे देव छिन्धि ज्ञानवरासिना । इति ब्राह्मे ।
तदेव सञ्छिन्नद्वैतसंशयत्वम् ।

Taking interest in other than the supreme God is द्वैतदृष्टि. The अपरोक्षज्ञानिन् will not have such द्वैतदृष्टि.

I. नान्यत् भगवतः किञ्चिद् भाव्यं सदसदात्मकम्
सदिति व्यक्तमुद्दिष्टमसदव्यक्तमुच्यते ।
गम्यागम्यस्वरूपत्वात् तत्सत्तादि हरेः यतः ।
अतस्तस्मादन्यदेव ह्यनन्यदिति भण्यते । इति च ब्रह्मतर्के (II-6-32)

The phrase नान्यत् भगवतः gives an impression that all other entities other than Brahman are denied. The expression सदसदात्मकत्वम् appears to be contradictory. The latter impression is first removed by explaining terms सत् and असत् as and व्यक्त and अव्यक्त. Then the impression of identity is cleared by pointing out that because the very existence of both And are dependent upon God these are stated as if these are identical with him though these are distinct.

III. सर्वं पुरुष एवेदं भूतं भव्यं भवच्च यत् ।
तेनेदमावृतं विश्वं वितस्तिमधितिष्ठता ॥ (II-6-15)

This verse gives an impression that the identity between पुरुष and the whole विश्व is mentioned here. But what is really mentioned is that the existence of the whole universe is dependent upon him.

सर्वं पुरुष एवेति भण्यते भेदवर्जनात् ।
तदधीनं तु सत्तादि यतो ह्यस्य सदा भवेत् ॥

Such clarification of the verses that are prone to convey advaita are made in several other contexts.

4. Reconciliation of the statements between Maha bharata and Bhagavata, and also in different places within Bhagavata.

I. The episode of Asvatthama killing Draupadi's children and he being chased by Bhima and Arjuna is described in different ways in Mahabharata and Bhagavata. The important differences are as under :

I. In Mahabharata Brahmastra is thrown at Bhimasana while in Bhagavata it is thrown at Arjuna.

II. Both in Mahabharata and Bhagavata it is Arjuna who throws Brahmastra at Asvatthama.

III. In Mahabharata Vedavyasa interferes and asks both Arjuna and Asvatthama to withdraw Brahmastra. In Bhagavata Vedavyasa does not figure in this context.

IV. In Bhagavata Arjuna removes the gem from the head of Asvatthama and gives it to Draupadi while in Mahabharata Vedavyasa asks Ashvatthama to hand it over to Bhima and Bhima gives it to Draupadi.

The difference in the two versions is not denied item by item but it is pointed out that Bhagavata version is a dream version while Mahabharata version is real happening. This is indicated in Bhagavata tatparya nirnaya by a single remark स्वप्नोऽयम्. While in Mahabharata tatparya nirnaya it is specifically stated as dream version and both versions are fully narrated. (28-190-192).

II. In the verse अजातशत्रुः कृतमैत्रो etc., it is stated that Dharmaraja who went to see Dhritarastra, Gandhari and Kunti as per his usual practice in the palace did not see them. However, as per Mahabharata narration of event they had already died. Thereafter, the question of seeing them does not arise. This inconsistency is avoided by the remark तस्य मनसि तेषां विपद्भावो बभूव. Even after they went to the forest he used to go to the place in the palace where they used to stay and mentaly

feel their presence. Some how on this particular day their death came to his mind and he was not able to mentally envisage their presence.

III. In the verse इत्युक्तो धर्मराजेन (I-12-12) Vidura is stated to have reported all about his teertha yatra excepting the destruction of Yadava race. However, the destruction of yadava race had not taken place. This inconsistency is solved by the remark यदुकुलक्षयमेष्यत्. Vidura had already come to know from Uddhava the future event of the destruction of yadava race. Sri Krishna himself had told Uddhava. Therefore, we have to understand it not taking it as a past event but as that of a future event known to him.

The same fact is mentioned under III- 1-21 as सुहृद्भिर्निष्टिं यदुकुलविनष्टिमेष्याम् । Here the following verse is quoted in support of it

विदुरस्तु प्रभासस्थः शापं सङ्क्षेपतोऽशृणोत् ।
यदूनां विस्तरात् पश्चादुद्धवाद्यमुनामनु । इति स्कान्दे ।

5. The authorities quoted to substantiate the philosophical and theological concepts and doctrines.

Throughout Bhagavata tatparya nimaya the authorities are quoted. A good portion of the text is covered by these authorities only. We will notice some of them to give an idea of their nature and purpose

I. तितिक्षवः कारुणिकाः सुहृदः सर्वदेहिनाम् ।

अजातशत्रवः शान्ताः साधवः साधुभूषणाः ॥ (I-1-2)

II. धर्मपुष्पस्त्वर्थपत्रः कामपल्लवसंयुतः ।
महामोक्षफलो वृक्षो वेदोऽयं समुदीरितः ॥ (I-1-3) - इति ब्रह्माण्डे

III. इच्छाशक्तिः ज्ञानशक्तिः क्रियाशक्तिरिति त्रिधा ।
शक्तिशक्तमतोश्चापि न भेदः कश्चनेष्यते ॥ (I-1-18) विष्णुसंहितायाम्

IV. न तस्य प्राकृता मूर्तिः मांसमेदोस्थिसम्भवा ।
न योगित्वादीश्वरत्वात् सत्यरूपाच्युतो हरिः ॥ (I-3-3)

V. अवताराः हि असङ्ख्येयाः हरेः सत्त्वनिधेर्द्विजाः ।
यथा विदासिनः कुल्याः सरसः स्युः सहस्रशः ॥ (I-3-26)

VI. यथैकस्तु बहून् सुप्तानसुप्तः पश्यति प्रभुः ।
एवमीशो बहून् जीवानज्ञान् पश्यति नित्यदृक् ॥ (II-2-7)
व्योमसंहितायाम्

VII. दक्षिणाः पिङ्गलाः सर्वाः इडा वामाः प्रकीर्तिताः ।
नाड्योऽथ मध्यमा प्रोक्ता सुषुम्ना वेदपारगैः । (II-2-27) भागवतन्त्रे

VIII. स्वरूपांशो विभिन्नांश इति द्वेधांश इष्यते ।
अनन्तासनवैकुण्ठपद्मनाभाः स्वयं हरिः ।
जीवा इमे विभिन्नांशाः धर्माधर्मसंयुताः ॥ (II-6-18)

These quotations give an idea of the theme and the purpose of quoting these authorities. These enrich the understanding of the doctrines and the concepts of theology

and physiology. Bhagavatatatparyanimaya gives a deep insight into the theme and detailed events of Bhagavata. It is hoped that this brief introduction will enkindle interest to go through this valuable work and utilize it for the understanding of Bhagavata.

Prof. K.T. Pandurangi.
Upakulapati
Poornaprajna Vidyapeetha
Bangalore-28

ವಿಷಯಾನುಕ್ರಮಣಿಕೆ

೧.೧.೧ ಪರಮಾತ್ಮನ ಪ್ರಪಂಚಸೃಷ್ಟಿ ಚಿಪ್ಪಿನಲ್ಲಿ ಕಾಣುವ ಬೆಳ್ಳಿಯಂತೆ ಹಗ್ಗದಲ್ಲಿ ಕಾಣುವ ಹಾವಿನಂತೆ 'ಮೃಷಾ' ಸುಳ್ಳು ಎಂದು ಗ್ರಹಿಸಬೇಕಾಗಿಲ್ಲ, ದಶಮಸ್ಕಂಧದಲ್ಲಿ ಯಶೋದೆ ಕೃಷ್ಣನಿಗೆ ಸ್ತನಪಾನ ಮಾಡಿಸುತ್ತಿದ್ದಾಗ ಒಲೆಯ ಮೇಲಿದ್ದ ಹಾಲು ಉಕ್ಕಿತೆಂದು ಮಗುವನ್ನು ಕೆಳಗಿಟ್ಟು ಓಡಿದಳು. ಕೃಷ್ಣನಿಗೆ ಕೋಪ. ಕಣ್ಣಲ್ಲಿ ಸುಳ್ಳು ನೀರು! ಮೊಸರಿನ ಪಾತ್ರೆ ಒಡೆದು ಬೆಣ್ಣೆ ಚೆಲ್ಲಿ ಬಾಲಲೀಲೆ ತೋರಿದ. ಇಲ್ಲಿ 'ಮೃಷಾಶ್ರು' 'ಸುಳ್ಳು ಕಣ್ಣೀರು' ಎಂದರೆ 'ದುಃಖದ ಕಣ್ಣೀರಲ್ಲ' ಎಂದಿಷ್ಟೇ ಅರ್ಥ. ಕಣ್ಣೀರು ಸುರಿಸುವ ಮುದ್ದುಮುಖವನ್ನು ತಾಯಿಗೆ ತೋರಿ ಮುದ ನೀಡುವುದೊಂದೇ ಉದ್ದೇಶವಾಗಿತ್ತು ಕೃಷ್ಣನಿಗೆ. ಹಾಗೇ ಜಗನ್ನಿರ್ಮಾಣ ದಿಂದ ಭಕ್ತರ ಹಿತ ಸಾಧಿಸುತ್ತಾನೆ. ತನ್ನ ಪ್ರಯೋಜನ ದೃಷ್ಟಿಯಿಂದ ಸೃಷ್ಟಿ 'ಮೃಷಾ', ವ್ಯರ್ಥ. ಭಕ್ತರ ಪ್ರಯೋಜನ ದೃಷ್ಟಿಯಿಂದ 'ಅಮೃಷಾ' ಸಾರ್ಥಕ. ೯೪

೧.೧.೨. ಇಲ್ಲಿ ಭಾಗವತಶ್ರವಣಕ್ಕೆ ಯೋಗ್ಯರಾದ ಶ್ರೋತೃಗಳು, ಪ್ರತಿಪಾದ್ಯ ವಿಷಯ ಮತ್ತು ಪ್ರಯೋಜನಗಳು ಉಕ್ತವಾಗಿವೆ. ಮುಂದೆ ಭಾಗವತದಲ್ಲಿ ಕಪಿಲನಾಮಕ ಪರಮಾತ್ಮ ತಾಯಿದೇವಹೂತಿಗೆ ಉಪದೇಶ ಮಾಡುತ್ತ ಸಜ್ಜನರ ಲಕ್ಷಣಗಳನ್ನು ಹೇಳುತ್ತಾನೆ. ಅಂಥ ಸಜ್ಜನರೇ ಯೋಗ್ಯ ಶ್ರೋತೃಗಳು. ನಿರ್ದೋಷ ಗುಣಪೂರ್ಣನಾದ ಪರಮಾತ್ಮನೆ ಪ್ರತಿಪಾದ್ಯ ವಿಷಯ. ಅವನೆ ಭಾಗವತ ಹೇಳುವ 'ವಾಸ್ತವವಸ್ತು' 'ವಾಸ್ತವ' ಎಂದರೆ ನಿರ್ದೋಷಗುಣ ಪೂರ್ಣನಾದ ಪರಮಾತ್ಮ ಎಂದು ನಿತ್ಯಸಂಹಿತೆ ಹೇಳುತ್ತಿದೆ. ಆದರಿಂದ 'ಪಾರಮಾರ್ಥಿಕ ವಸ್ತುವಾದ ಪರಬ್ರಹ್ಮನ ಅಂಶಗಳಾದ ಜೀವ ಜಡ ಮಾಯೆಗಳೇ ವಾಸ್ತವಗಳು, ಆದರಿಂದ ಜೀವ ಬ್ರಹ್ಮನ ಅಂಶ ಎನ್ನುವುದೆ ಭಾಗವತದ ಪ್ರತಿಪಾದ್ಯವಾದ ವಿಷಯ' ಎಂದು ಹೇಳುವುದು ಪ್ರಮಾಣವಿರುದ್ಧ. ೧೦೭

೧.೧.೩ ವೇದವೃಕ್ಷದಿಂದ ಉದುರಿದ ರಸಭರಿತವಾದ ಹಣ್ಣು ಶ್ರೀಮದ್ಭಾಗವತ ಎನ್ನುತ್ತದೆ ಭಾಗವತ. ಯಾರು ಉದುರಿಸಿದವರು? ನಾರದರೆ? ಶುಕಮುನಿಗಳೆ? ಅಲ್ಲ, ಬ್ರಹ್ಮಾಂಡಪುರಾಣ ಹೇಳುತ್ತದೆ.

ವೇದವ್ಯಾಸರು ವೇದವೃಕ್ಷದ ಫಲವಾದ ಪಂಚರಾತ್ರ ಮೂಲರಾಮಾಯಣ ಮುಂತಾದ ಗ್ರಂಥಗಳನ್ನು ವೇದವೃಕ್ಷದಲ್ಲಿ ತೋರಿಸಿದರು. ಉದುರಿಸಲಿಲ್ಲ, ಏಕೆಂದರೆ ಅವು ಮೂಲರೂಪಿ ನಾರಾಯಣನಿಂದ ಮೊದಲೇ ರಚಿತವಾಗಿದ್ದುವು. ವ್ಯಾಸಾವತಾರದಲ್ಲಿ ಅದೇ ವೇದವೃಕ್ಷದ ಫಲರೂಪವಾಗಿ ಭಾರತ ಭಾಗವತಾದಿ ಗ್ರಂಥಗಳನ್ನು ರಚಿಸಿ ಶುಕಮುನಿ ಮುಂತಾದವರಿಗೆ ಉಪದೇಶಿಸಿ ಕೈಗೇ ಕೊಟ್ಟರು.

ಆದರಿಂದ ಉದುರಿಸಿದರೆಂದು ಹೇಳಿದೆ. ಶುಕಾದಿಗಳು ಲೋಕದಲ್ಲಿ ಅದನ್ನು ಪ್ರಚುರಗೊಳಿಸಿದರು ಎನ್ನುತ್ತದೆ ಬ್ರಹ್ಮಾಂಡಪುರಾಣ. -ಭಾಗ.ತಾತ್ಪರ್ಯ.

ಶೌನಕಾದಿ ಮುನಿಗಳ ಆ ಸತ್ರಯಾಗದಲ್ಲಿ ಶೌನಕರೆ ಸೂತರಲ್ಲಿ ಕೇಳುತ್ತಾರೆ. 'ಮೋಕ್ಷಕ್ಕೆ ನೇರವಾದ ದಾರಿ ಯಾವುದು?' ಎಂದು. ಏಕೆಂದರೆ ಕೇವಲ ಯಾಗಾದಿ ಕರ್ಮಗಳಿಂದ ಮೋಕ್ಷ ಸರ್ವಥಾ ಲಭ್ಯವಿಲ್ಲ ಎಂದು ಅವರಿಗೆ ಗೊತ್ತು. ಸೂತರು ಹೇಳುತ್ತಾರೆ ಭಾಗವತಶ್ರವಣವೆ ಮೋಕ್ಷಕ್ಕೆ ನೇರಮಾರ್ಗ ಎಂದು. ೧೦೯

೧.೧.೭, ೮ ಬಾದರಾಯಣರು ತಿಳಿದಿದ್ದನ್ನೂ, ಜೊತೆಗೆ, ಬೇರೆ ಮುನಿಗಳು ತಿಳಿದಿದ್ದನ್ನೂ ಸೂತರು ತಿಳಿದಿದ್ದಾರೆ ಎಂದರೇನರ್ಥ? ಬಾದರಾಯಣರು ಎಲ್ಲವನ್ನೂ ತಿಳಿದಿಲ್ಲ, ಅವರು ತಿಳಿಯದಿರುವ, ಬೇರೆ ಮುನಿಗಳು ತಿಳಿದಿರುವ, ಅಂಶ ಇನ್ನೂ ಬೇರೆ ಅನೇಕ ಇವೆ ಎಂದೆ? ಸೂತರು ಅವೆಲ್ಲವನ್ನೂ ತಿಳಿದು ಬಾದರಾಯಣರನ್ನೂ ಮೀರಿಸಿದ ಸರ್ವಜ್ಞರಾಗಿದ್ದಾರೆ ಎಂದೆ? ಇದು ಸರಿಯಲ್ಲ. 'ಬಾದರಾಯಣರು ಏನು ತಿಳಿದಿರುವರೋ ಅದನ್ನೇ ಯಥಾಶಕ್ತಿ ಬೇರೆ ಮುನಿಗಳು ತಿಳಿದಿದ್ದಾರೆ. ಸೂತರೂ ಅದನ್ನೇ ತಿಳಿದಿದ್ದಾರೆ ಎಂದರ್ಥ'ವೆಂದು ಬ್ರಹ್ಮಾಂಡಪುರಾಣ ಹೇಳಿದೆ. ೧೧೨

೧.೧.೧೪ 'ವಿಷ್ಣುದ್ವೇಷಿಯಾದರೇನಂತೆ? ಮರಣಕಾಲದಲ್ಲಿ ವಿವಶನಾಗಿ ಅಂದರೆ ಪರವಶನಾಗಿ ಹರಿನಾಮವನ್ನು ಉಚ್ಚರಿಸಿದರೆ ಸಾಕು ಮುಕ್ತಿ ಕರಗತವಾಗುವುದು, ಇದಕ್ಕೆ ಅಜಾಮಿಳನೇ ಸಾಕ್ಷಿ' ಎಂದು ಹೇಳುವುದುಂಟು. ಇದು ಸರಿಯಲ್ಲ. 'ವಿ-ವಶ' ಎಂದರೆ ವಿಷಯಾಕರ್ಷಣೆಗೆ ವಶನಾಗದವನು ಎಂದರ್ಥ. ವಿಷಯಾಕರ್ಷಣೆಗೊಳಗಾಗದೆ, ಭಕ್ತಿಯಿಂದ, ಭಕ್ತಿ ಪರವಶನಾಗಿ, ಹರಿನಾಮೋಚ್ಚಾರಣೆ ಮಾಡಿದರೆ ಮಾತ್ರ ಮುಕ್ತಿ ಎಂದು ಬ್ರಹ್ಮವೈವರ್ತ ಪುರಾಣ ಹೇಳಿದೆ. ೧೧೩

೧.೧.೧೮ ಪರಮಾತ್ಮ ತನ್ನಿಚ್ಛೆಯಂತೆ ಲೀಲೆ ನಡೆಸುತ್ತಾನೆ ಎನ್ನಬಹುದೆ? ಅವನಿಗೆ ಇಚ್ಛೆ ಎಂಬುದು ಉಂಟೆ? ಏಕೆಂದರೆ ಅವನಿಗೆ ನಮ್ಮಂತೆ ಶರೀರ ಇಂದ್ರಿಯ ಮನಸ್ಸುಗಳಿಲ್ಲ. ಮನಸ್ಸೇ ಇಲ್ಲವೆಂದರೆ ಮನಸ್ಸಿನ ವಿಕಾರವಾದ ಇಚ್ಛೆ ಇರಬಲ್ಲುದೆ? ಎಂಬ ಪ್ರಶ್ನೆಗೆ 'ಆತ್ಮಮಾಯಯಾ' ಎಂದು ಉತ್ತರ. ಇಲ್ಲಿ ಮಾಯೆ ಎಂದರೆ ಅನಿರ್ವಚನೀಯ ಮಾಯೆಯಲ್ಲ, ಯೋಗ ಮಾಯೆಯೂ ಅಲ್ಲ, ಭಗವಂತನ ಇಚ್ಛೆ. ಆದಕ್ಕೇ ಮಹಾಮಾಯಾ ಅವಿದ್ಯಾ ನಿಯತಿ ಮೋಹಿನೀ ಪ್ರಕೃತಿ ವಾಸನಾ ಎಂದು ಹೆಸರುಗಳು. ಇಚ್ಛೆಯೂ ಮನಸ್ಸಿನ ವಿಕಾರವಾದ ಇಚ್ಛೆಯಲ್ಲ,

ಸ್ವರೂಪಭೂತವಾದುದೆಂದು ಆತ್ಮಶಬ್ದ ಹೇಳುತ್ತದೆ. ಇದಕ್ಕೆ ಸ್ಕಾಂದಪುರಾಣದ ಆಧಾರವಿದೆ.

ಶುಕಮುನಿ ಸನ್ಯಾಸಿಯಾಗಿ ಹೊರಟುಹೋದಾಗ ವೇದವ್ಯಾಸರು ಅವರ ವಿಯೋಗದಿಂದ ಕಾತರರಾದರು ಎಂದೂ ಈ ಶ್ಲೋಕ ಹೇಳಿದಂತಿದೆ. ವಸ್ತುತಃ ಸರ್ವವ್ಯಾಪ್ತ ಭಗವಂತನ ಅವತಾರರಾದ ಬಾದರಾಯಣರಿಗೆ ವಿಯೋಗ ಹೇಗೆ? ದುಃಖರಹಿತರಿಗೆ ಕಾತರತೆ ಹೇಗೆ? 'ವಿರಹಕಾತರಃ' ಎಂದರೆ ವಿರಹಕಾತರರಂತೆ ತೋರಿಕೊಂಡರು. ಭಕ್ತರ ಸಂತೋಷಕ್ಕಾಗಿ, ಅಸುರ ಮೋಹನಕ್ಕಾಗಿ, ಶುಕಮುನಿಗಳ ಮೇಲೆ ತನಗಿರುವ ಪ್ರೀತಿಯನ್ನು ತೋರುವುದಕ್ಕಾಗಿ. ಇದು ಶುಕಮುನಿಯ ಭಾಗ್ಯ. ಶುಕರಂತೆ ವ್ಯಾಸರು ಜ್ಞಾನಿಗಳಲ್ಲ ವಿರಕ್ತರಲ್ಲ, ಅವರಿಗೆ ನಾರದರ ಉಪದೇಶ ಬೇಕಾಯಿತೆಂದೇ ಭಾಗವತ ವ್ಯಾಖ್ಯಾನಕಾರರು ಸಾಮಾನ್ಯವಾಗಿ ತಪ್ಪು ತಿಳಿದಿದ್ದಾರೆ. ವಸ್ತುತಃ 'ವ್ಯಾಸರು ಕಾತರರಂತೆ ತೋರಿಕೊಂಡರೆ' ನ್ನಬೇಕು. ಇಲ್ಲದಿದ್ದರೆ ಸ್ಕಾಂದ ಪುರಾಣದ ವಿರೋಧ, ಭಾರತದ ವಿರೋಧ. ೧೧೫

೧.೨.೩,೪ 'ಸ್ವಾನುಭಾವಂ' ಎಂದರೆ ಅತ್ಯಂತ ಪ್ರಭಾವ ಬೀರಬಲ್ಲ ಭಾಗವತಗ್ರಂಥ ಎಂದು ಕೆಲವರು ತಪ್ಪು ತಿಳಿದಿದ್ದಾರೆ. ವಸ್ತುತಃ ಸ್ವತಂತ್ರ ಸಾಮರ್ಥ್ಯಶಾಲಿಯಾದ ಭಗವಂತನೆ ಇಲ್ಲಿ 'ಸ್ವಾನುಭಾವ'.

ಈ ಶ್ಲೋಕ ವ್ಯಾಸಕೃತವಾಗಿದ್ದರೂ 'ವ್ಯಾಸಂ' ಎಂದಿರುವುದು ಸೂತರ ಮುಖ ದಿಂದ ಶ್ಲೋಕವನ್ನು ಹೇಳಿಸುವ ಅಭಿಪ್ರಾಯದಿಂದ. ಸೂತರು ಗುರುಗಳಾದ ಗ್ರಂಥಕರ್ತರಾದ ವ್ಯಾಸರನ್ನು ನಮಿಸಲೇಬೇಕು ತಾನೆ? ೧೨೦

೧.೨.೧೧ ಪರಮಾತ್ಮ 'ಅದ್ವಯ' ಎಂದರೆ ಅದ್ವಿತೀಯ, ಸಮಾಧಿಕರಿಲ್ಲದವ ನೆಂದರ್ಥ ಹೊರತು ಅವನಿಂದ ಹೊರತಾಗಿ ಬೇರೆ ಪ್ರಪಂಚ ಮಿಥ್ಯೆ ಎಂದರ್ಥವಲ್ಲ.೧೨೧

೧.೨.೧೨ ಪರಮಾತ್ಮ ಜ್ಞಾನರೂಪ ಎನ್ನುತ್ತೇವೆ. ಆದರೆ ಇಂದ್ರಿಯಗಳಿಗೆ ವಿಷಯಸಂಪರ್ಕ ಬಂದಾಗ ಪ್ರಪಂಚಜ್ಞಾನ ಹುಟ್ಟುತ್ತದೆ. ಅದು ನಿತ್ಯನಾದ ಪರಮಾತ್ಮನ ಸ್ವರೂಪ ವೆನಿಸುವುದು ಹೇಗೆ? ಎಂದರೆ ಹೀಗೆ— 'ಪ್ರಪಂಚಜ್ಞಾನ' ಎಂದರೆ ಪ್ರಪಂಚದ ಸಂಪರ್ಕದಿಂದ ಉಂಟಾದ ಜ್ಞಾನ ಎಂದರ್ಥವಲ್ಲ. ಪ್ರಪಂಚವನ್ನು ಗೋಚರಿಸುವ, ಪ್ರಪಂಚಕ್ಕೆ ಕಾರಣವಾದ ಜ್ಞಾನ. ಪರಮಾತ್ಮಸ್ವರೂಪಭೂತ ವಾದ ನಿತ್ಯವಾದ ಜ್ಞಾನ ಪ್ರಪಂಚವನ್ನು ಗೋಚರಿಸುತ್ತದೆ. ಪ್ರಪಂಚಕ್ಕೆ ಕಾರಣವೆನಿಸುತ್ತದೆ. 'ಪ್ರಪಂಚಜ್ಞಾನ' ವೆನಿಸುತ್ತದೆ, ಹೊರತು ಪ್ರಪಂಚ ಸಂಪರ್ಕದಿಂದ ಹುಟ್ಟುವುದಿಲ್ಲ. ೧೨೨

೧.೨.೧೩ ತತ್ವಜಿಜ್ಞಾಸೆಯಿಂದ ಹೊರಟ ಜ್ಞಾನಿಗಳು ತತ್ವವನ್ನೇ ಕಾಣಬೇಕು, ಪರಮಾತ್ಮನನ್ನು ಹೇಗೆ ಕಾಣುತ್ತಾರೆ ಎಂಬ ಪ್ರಶ್ನೆಗೆ 'ತತ್' 'ಆ ಕಾರಣದಿಂದ' ಎಂದು ಈ ಶ್ಲೋಕ ಸಮಾಧಾನ ನೀಡುತ್ತಿದೆ. ಯಾವ ಕಾರಣದಿಂದ ಎಂದರೆ ಹಿಂದೆ ಹೇಳಿದೆ— 'ಸದಾ ಒಂದೇ ರೀತಿಯಾಗಿ ಸರ್ವಶಕ್ತವಾಗಿರುವ ತತ್ವ ಪರಮಾತ್ಮನೆ. ಆ ಕಾರಣದಿಂದ'. ೧೨೪

೧.೨.೨೨ 'ಆತ್ಮನಿ ಈಶ್ವರೇ ದೃಷ್ಟೇ' 'ಜೀವಾತ್ಮನನ್ನು ಪರಮಾತ್ಮನೆಂದು ತಿಳಿದಾಗ' ಮೋಕ್ಷವೆಂದು ಈ ಶ್ಲೋಕದಲ್ಲಿ ಹೇಳಿದಂತಿದೆ. ಆದರೆ ಇದೇ ಶ್ಲೋಕ ಶ್ರುತಿಯಲ್ಲಿಯೂ ಬರುತ್ತದೆ. ಇಷ್ಟೇ ವ್ಯತ್ಯಾಸ— ಇಲ್ಲಿ 'ದೃಷ್ಟ ಏವಾತ್ಮನೀಶ್ವರೇ' ಎಂದು ನಾಲ್ಕನೇ ಪಾದ. 'ದೃಷ್ಟ ಏವ ಪರಾವರೇ' ಎಂದು ಅಲ್ಲಿ, ಎರಡಕ್ಕೂ ಏಕಾಭಿಪ್ರಾಯವನ್ನೇ ಇಟ್ಟುಕೊಳ್ಳಬೇಕು. ಆಗ 'ಪರಾವರೇ' ಎಂದರೆ 'ಪರ'ರು ಉತ್ತಮರಾದ ಬ್ರಹ್ಮಾದಿ ದೇವತೆಗಳೂ ಕೂಡ ಯಾರಿಗೆ 'ಅವರ'ರು ಕಡಿಮೆಯವರೋ ಅಂಥ ಶ್ರೀಹರಿ ಎಂದರ್ಥ. 'ಭೇದ ದೃಷ್ಟ್ಯಾಭಿಮಾನೇನ' ಎಂದು ಮುಂತಾಗಿ ಮುಂದೆ ಭಾಗವತವೂ ಜೀವಬ್ರಹ್ಮಭೇದವನ್ನೇ ಹೇಳುತ್ತಿದೆ. ಶ್ರುತಿಸೂತ್ರಗಳಲ್ಲಿಯೂ ಭೇದವೆ ಉಕ್ತವಾಗಿದೆ. ಅದರಿಂದ 'ಆತ್ಮನಿ ಈಶ್ವರೇ ದೃಷ್ಟೇ' ಎಂದರೆ ಬಿಂಬರೂಪನಾದ ಭಗವಂತನ ದರ್ಶನವಾದಾಗ ಮುಕ್ತಿ ಎಂದೇ ಈ ಶ್ಲೋಕ ಹೇಳುತ್ತಿದೆ. ೧೨೪

೧.೨.೨೪ 'ಬ್ರಹ್ಮರುದ್ರರಲ್ಲಿ ರಜಸ್ತಮೋಗುಣಗಳಿವೆ. ವಿಷ್ಣುವಿನಲ್ಲಿ ಸತ್ವಗುಣ. ಮೂವರೂ ಪರಬ್ರಹ್ಮಸ್ವರೂಪರೇ ಆದರೂ ಸತ್ವಗುಣಉಳ್ಳ ವಿಷ್ಣುವಿನ ಉಪಾಸನೆಯಿಂದಲೆ ಮೋಕ್ಷ' ಎಂದು ಇಲ್ಲಿ ಹೇಳಿದಂತಿದೆ. ವಸ್ತುತಃ ಮೂರು ಗುಣಗಳಿಗೂ ಮೂರು ರೂಪಗಳಿಂದ ಒಬ್ಬನೆ ಹರಿ ನಿಯಾಮಕನಾಗಿದ್ದರೂ ಸತ್ವಗುಣಉಳ್ಳ ಜೀವರಿಗೆ ಮಾತ್ರ ಜ್ಞಾನಭಕ್ತ್ಯಾದಿ ಮೋಕ್ಷಸಾಧನಗಳು ಕೈಗೂಡುತ್ತವೆ ಎನ್ನುವುದು ಶ್ಲೋಕದ ಅರ್ಥ. ೧೨೯

೧.೨.೨೫ ಭೂಲೋಕದಲ್ಲಿರುವ ಕಟ್ಟಿಗೆಗಿಂತ ಅಂತರಿಕ್ಷಕ್ಕೆ ಏರಿ ಮೋಡವಾಗುವ ಹೊಗೆ ಶ್ರೇಷ್ಠ. ಅದಕ್ಕಿಂತಲೂ ಯಾಗಗಳಲ್ಲಿ ಸ್ವರ್ಗಲೋಕದ ದೇವತೆಗಳನ್ನು ಭೂಮಿಗೆ ತರಿಸಬಲ್ಲ ಅಗ್ನಿ ಶ್ರೇಷ್ಠ. ಹಾಗೇ ಚೇತನರನ್ನು ನರಕಕ್ಕೆ ತಳ್ಳುವ ತಮೋಗುಣಕ್ಕಿಂತ ಸ್ವರ್ಗಾದಿ ಊರ್ಧ್ವಲೋಕಕ್ಕೊಯ್ಯುವ ರಜೋಗುಣ ಶ್ರೇಷ್ಠ. ಅದಕ್ಕಿಂತಲೂ ಮೇಲಿನ ವೈಕುಂಠಕ್ಕೊಯ್ಯುವ ಸತ್ವವಿನ್ನೂ ಶ್ರೇಷ್ಠ ಎಂದು ಈ ಶ್ಲೋಕವನ್ನು ವ್ಯಾಖ್ಯಾನಿಸಬೇಕು. ಇಷ್ಟು ಸಮರ್ಪಕವಾಗಿ ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನಿಸಿಲ್ಲ. ೧೩೦

೧.೨.೩೧ ಪರಮಾತ್ಮ ಆತ್ಮಮಾಯೆಯಿಂದ ಪ್ರಪಂಚಸೃಷ್ಟಿ ಮಾಡಿದನೆಂದರೆ ಸ್ವೇಚ್ಛೆಯಿಂದಲೂ ಸತ್ತ್ವಾದಿ ಗುಣಮಯವಾದ ವ್ಯಕ್ತಾವ್ಯಕ್ತ ಪ್ರಕೃತಿಯಿಂದಲೂ ಸೃಷ್ಟಿಮಾಡಿದನೆಂದರ್ಥ. ೧೩೪

೧.೨.೩೨ ಪರಮಾತ್ಮ ಜೀವರ ಜಡಶರೀರಗಳಲ್ಲಿ ಪ್ರವೇಶಿಸಿ ಅವರ ಇಂದ್ರಿಯಗಳಿಂದ ವಿಷಯ ಸುಖವನ್ನು ಉಣ್ಣುತ್ತಾನೆ ಎನ್ನುತ್ತಿದೆ ಈ ಶ್ಲೋಕ. 'ಪರಮಾತ್ಮ ತಾನು ಉಣ್ಣುವುದಿಲ್ಲ, ಜೀವ ಉಂಡರೆ ಅವರ ಮೂಲಕ ತಾನು ಉಂಡಂತೆಯೆ' ಎಂದು, ಅಥವಾ 'ಉಣ್ಣುತ್ತಾನೆ ಎಂದರೆ ಜೀವರಿಗೆ ಉಣಿಸುತ್ತಾನೆ ಎಂದರ್ಥ' ಎಂದು ಇದರ ಅಭಿಪ್ರಾಯ. ಏಕೆಂದರೆ 'ಅನಶ್ನನ್' ಪರಮಾತ್ಮ ಉಣ್ಣುವುದಿಲ್ಲ ಎಂದು ಶ್ರುತಿ ಹೇಳುತ್ತಿದೆ' ಎನ್ನುತ್ತಾರೆ ಅನೇಕರು ವ್ಯಾಖ್ಯಾನಕಾರರು. ವಸ್ತುತಃ ಪರಮಾತ್ಮ ಉಣ್ಣುತ್ತಾನೆ. ವಿಷಯಪದಾರ್ಥಗಳಲ್ಲಿರುವ ತನ್ನ ಸ್ವರೂಪಭೂತ ವಾದ ರಸವನ್ನೇ ಲೀಲೆಯಿಂದ ಉಣ್ಣುತ್ತಾನೆ. 'ಅನಶ್ನನ್' ಎಂದರೆ 'ಜೀವರಂತೆ ವಿಷಯಪದಾರ್ಥಗಳಲ್ಲಿರುವ ಪ್ರಾಕೃತರಸವನ್ನು ಉಣ್ಣುವುದಿಲ್ಲ, ಉಣಲು ಜೀವರಂತೆ ಪ್ರಯತ್ನ ಮಾಡುವುದಿಲ್ಲ, ಪರಾಧೀನನಾಗಿ ಉಣ್ಣುವುದಿಲ್ಲ, ವಿಷಯ ಭೋಗದಿಂದಲೆ ತನ್ನ ಸ್ವರೂಪಾನಂದ ಅಭಿವ್ಯಕ್ತಿಯಾಗಬೇಕಿಲ್ಲ, ವಿಷಯ ಭೋಗದಲ್ಲಿ ಅವನಿಗೆ ಕಾಮನೆ ಇಲ್ಲ' ಎಂದು ಸ್ಕಂದಪುರಾಣ ಹಲವು ಬಗೆಯಿಂದ ಶ್ರುತಿಯನ್ನು ವ್ಯಾಖ್ಯಾನಿಸಿದೆ. ಅದರಿಂದ ಅದರ ವಿರೋಧ ಬರುವುದಿಲ್ಲ. ೧೩೪

೧.೩.೧ 'ಮಹದಾದಿ ತತ್ತ್ವಗಳಿಂದಲೂ ಪಂಚಭೂತ ಏಕಾದಶೇಂದ್ರಿಯಗಳೆಂಬ ಷೋಡಶಕಲೆಗಳಿಂದಲೂ ಕೂಡಿದ ಪುರುಷರೂಪವನ್ನು ಭಗವಂತ ಸ್ವೀಕರಿಸಿದ' ನೆಂದು ಈ ಶ್ಲೋಕ ಹೇಳುತ್ತಿದೆ. ಹಾಗಾದರೆ ಭಗವಂತನಿಗೂ ನಮ್ಮಂತೆ ಜಡಶರೀರವಿದೆಯೆ? ಎಂದರೆ, ಅವನ ಶರೀರ ಚಿನ್ಮಯವೆ. ಜಡವಲ್ಲ, ಆದರೆ ಮಹದಾದಿ ತತ್ತ್ವಗಳೂ ಷೋಡಶಕಲೆಗಳೂ ಆ ಚಿನ್ಮಯ ಶರೀರದ ಉದರ ದೊಳಗೆ ಇವೆ. ಜೀವರಿಗೆ ಜಡಶರೀರ ನಿರ್ಮಾಣ ಮಾಡಲು ಆತ ಅವುಗಳನ್ನು ತನ್ನ ಉದರದೊಳಗೆ ಜೋಪಾನವಾಗಿ ಇರಿಸಿಕೊಂಡಿದ್ದಾನಷ್ಟೆ. ಇಂತಹ ಚಿನ್ಮಯವಾದ ಪುರುಷರೂಪವನ್ನು 'ಸ್ವೀಕರಿಸಿದನೆ'ಂದರೆ ರಾಮಕೃಷ್ಣಾದಿ ರೂಪಗಳಂತೆ ಲೋಕದ ಕಣ್ಣಿಗೆ ಅಚಿಂತ್ಯಶಕ್ತಿಯಿಂದ ವ್ಯಕ್ತಗೊಳಿಸುವುದೆಂದರ್ಥ ವಲ್ಲ. ಏಕೆಂದರೆ ಈ ಪುರುಷರೂಪ ಸ್ವೀಕಾರದ ಸಮಯದಲ್ಲಿ ಇನ್ನೂ ಲೋಕಸೃಷ್ಟಿಯಾಗಿರಲಿಲ್ಲ. ಅದರಿಂದ ಪ್ರಳಯಕಾಲದಲ್ಲಿ ಅಷ್ಟರವರೆಗೆ ಅವನ ರೂಪವನ್ನು ಆವರಿಸಿದ್ದ ದುರ್ಗಾರೂಪದ ಕತ್ತಲನ್ನು ನುಂಗಿ ಪ್ರಕಟನಾದ

ಎಂದರ್ಥ. ಯೋಗನಿದ್ರೆ ಎಂದರೂ ಕಣ್ಣರೆಪ್ಪೆಗಳ ಯೋಗ, ಅಂದರೆ ಜೊತೆಗೂಡುವುದು, ಅದೇ ನಿದ್ದೆಯಂತೆ, ಬಾಹ್ಯ ಸೃಷ್ಟಿವ್ಯಾಪಾರವನ್ನು ನಿಲ್ಲಿಸಿರುವ ಸ್ಥಿತಿ. ಹೀಗೆ ಬ್ರಹ್ಮಾಂಡದ ಹೊರಗಿನ ಪರಮಪುರುಷರೂಪ ಬ್ರಹ್ಮಾಂಡವ್ಯಾಪಿಯಾದ ವಿರಾಟ್‌ಪುರುಷರೂಪ ಇವೆರಡೂ ಚಿನ್ಮಯರೂಪಗಳೇ, ಸ್ವರೂಪ ಭೂತವೆ ಹೊರತು ಜಡಶರೀರಧಾರಿಯಲ್ಲ. ೧೩೭

೧.೩.೩ ಶುದ್ಧ ಸತ್ವಾತ್ಮಕ ಜಡಶರೀರ ಭಗವಂತನಿಗಿದೆ ಎಂದು ಈ ಶ್ಲೋಕ ಹೇಳಿದಂತಿದೆ. ಎಲ್ಲ ವ್ಯಾಖ್ಯಾನಕಾರರೂ ಹಾಗೇ ಒಪ್ಪಿದ್ದಾರೆ. ವಸ್ತುತಃ 'ಸತ್ವ'ವೆಂದರೆ ಇಲ್ಲಿ ಪ್ರಕೃತಿಯ ಸತ್ವಗುಣವಲ್ಲ. 'ಸತ್' ಎಂದರೆ ಉತ್ತಮವಾದದ್ದು, ಜ್ಞಾನಾನಂದಾದಿ ಉತ್ತಮಗುಣಸ್ವರೂಪವಾದುದು. ತ್ವ ಪ್ರತ್ಯಯ ಸ್ವಾರ್ಥದಲ್ಲಿ. ಅಥವಾ 'ಬಲಜ್ಞಾನಗಳು ಜೊತೆಗೂಡಿದ್ದರೆ ಅದನ್ನು 'ಸತ್ವ' ಎನ್ನುತ್ತಾರೆ' ಎಂದು ಮತ್ಸ್ಯಪುರಾಣ ಹೇಳಿದೆ. ಅದರಿಂದ ಶುದ್ಧಸತ್ವಾತ್ಮಕ ಎಂದರೆ ಅಪ್ರಾಕೃತ ಬಲಜ್ಞಾನಾತ್ಮಕ ಶರೀರ ಹೊರತು ಜಡಶರೀರ ಭಗವಂತನಿಗಿಲ್ಲ. ೧೪೨

೧.೩.೫ ಬ್ರಹ್ಮಾಂಡವ್ಯಾಪಿಯಾದ ಹರಿಯ ಪದ್ಮನಾಭವಿರಾಡ್ರೂಪದಿಂದ ಶ್ವೇತದ್ವೀಪಾದಿಗಳಲ್ಲಿರುವ ನಾರಾಯಣ ವಾಸುದೇವ ವೈಕುಂಠರೂಪಗಳೂ ಅವುಗಳಿಂದ ರಾಮಕೃಷ್ಣಾದಿ ಅವತಾರರೂಪಗಳೂ ಅಚಿಂತ್ಯಶಕ್ತಿಯಿಂದ ಹೊರಗೆ ಬಂದು ಕೊನೆಗೆ ಆ ಎಲ್ಲ ರೂಪಗಳೂ ಆ ಪದ್ಮನಾಭರೂಪದಲ್ಲಿಯೆ ಸೇರಿ ಐಕ್ಯ ಹೊಂದುತ್ತವೆ. ಹೀಗೆ ದೇವ ಮಾನವಾದಿಗಳು ಹರಿಯ ಅಂಶರೂಪರೂ ಅಲ್ಲ, ಅಂಶಾಂಶರೂಪರೂ ಅಲ್ಲ. ಅಂಶಾಂಶದಿಂದ ಅಂದರೆ ಶಕ್ತಿಯ ಅತ್ಯಲ್ಪ ಅಂಶದಿಂದ ಅವರ ಸೃಷ್ಟಿಯಾಗುತ್ತದೆ. ಇದು ಬ್ರಹ್ಮಪುರಾಣದಲ್ಲಿ ಸ್ಪಷ್ಟವಿದೆ. ೧೪೩

೧.೩.೬ ಭಗವಂತನ ಇಪ್ಪತ್ತೆರಡು ಅವತಾರಗಳಲ್ಲಿ ಮೊದಲನೆಯದು ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಸನಕಾದಿಗಳಲ್ಲಿ ಆವೇಶಗೊಂಡ ರೂಪವಲ್ಲ. ಬ್ರಹ್ಮಪುರಾಣ ಹೇಳುವಂತೆ ಸನತ್ಕುಮಾರ ಎಂದು ಬೇರೆಯೆ ಒಂದು ಅವತಾರವಿದೆ. ಸನಕಾದಿಗಳಲ್ಲಿ ಒಬ್ಬನಾದ ಸನತ್ಕುಮಾರನಿಗೆ ಬ್ರಹ್ಮಚರ್ಯವ್ರತವನ್ನು ಹೇಳಿಕೊಟ್ಟವನು ಈ ಸನತ್ಕುಮಾರ. ೧೪೪

೧.೩.೮ ಭಗವಂತನ ಅವತಾರಗಳಲ್ಲಿ ಮೂರನೆಯದು ದೇವರ್ಷಿ ನಾರದಾವತಾರ ವಲ್ಲ. ಬ್ರಹ್ಮಪುರಾಣ ಹೇಳುವಂತೆ ದೇವರ್ಷಿ ಐತರೇಯ ಮಹಿದಾಸಾವತಾರವೆ ಮೂರನೆಯದು. ಈ ಮಹಿದಾಸನೆ ನಾರದರಿಗೆ ಪಂಚರಾತ್ರವನ್ನು ಉಪದೇಶಿಸಿದವನು. ೧೪೫

೧.೩.೯ 'ಧರ್ಮಕಲಾಸರ್ಗ' ಎಂಬಲ್ಲಿ 'ಧರ್ಮಪ್ರಜಾಪತಿಯ 'ಕಲೆ'ಯಲ್ಲಿ ಪತ್ನಿಯಲ್ಲಿ 'ಸರ್ಗ' ಅವತಾರವೆತ್ತಿದ್ದು ಎಂದು ಅರ್ಥವಲ್ಲ. ಕಲೆ ಎಂದರೆ ಪತ್ನಿಯಲ್ಲ. ಧರ್ಮಪ್ರಜಾಪತಿಯ ಮಕ್ಕಳಾಗಿ ಭಗವಂತನ 'ಕಲಾ ಸರ್ಗ' ಅಂಶಾವತಾರವಾಯಿತು. ಅವರಲ್ಲಿ ನರ ಶೇಷಾವತಾರನಾದರೂ ಭಗವಂತನ ಒಂದು ಅಂಶದ ಆವೇಶಾವತಾರನೂ ಆಗಿದ್ದಾನೆ. ನಾರಾಯಣ ಅಂಶಸ್ವರೂಪಾವತಾರ. ೧೪೬

೧.೩.೧೦ ಕಪಿಲಾವತಾರ ಎಂದರೆ ಬ್ರಹ್ಮಸೂತ್ರದಲ್ಲಿ ನಿರಾಕೃತವಾದ ಈಶ್ವರಕೃಷ್ಣನ ನಿರೀಶ್ವರ ಸಾಂಖ್ಯವನ್ನು ಮೊದಲಿಗೆ ಆಸುರಿ ಎಂಬ ಶಿಷ್ಯನಿಗೆ ಉಪದೇಶಿಸಿದ ಕಪಿಲನಲ್ಲ. ಇನ್ನೊಬ್ಬ ಕಪಿಲ, ಇನ್ನೊಬ್ಬ ಆಸುರಿಗೆ ವೈದಿಕ ಸೇಶ್ವರ ಸಾಂಖ್ಯಶಾಸ್ತ್ರವನ್ನು ಉಪದೇಶಿಸಿದ್ದಾನೆ. ಅವನೇ ಭಗವದವತಾರ. ಹೀಗೆ ಪದ್ಮಪುರಾಣ ಹೇಳಿದೆ. ೧೪೬

೧.೩.೧೧ ಅತ್ರಿಮುನಿಯ ಪ್ರಾರ್ಥನೆಯಂತೆ ಅನಸೂಯೆಯಲ್ಲಿ ದತ್ತ ಆತ್ರೇಯನಾಗಿ ಅವತರಿಸಿದುದು ಆರನೆಯ ಅವತಾರ. ಈ ದತ್ತಾತ್ರೇಯ ಉತ್ತಮವಾದ ತರ್ಕಶಾಸ್ತ್ರವನ್ನು ಉಪದೇಶಿಸಿದ. ಇದು ಗೌತಮನ ದುಷ್ಟತರ್ಕಶಾಸ್ತ್ರಕ್ಕಿಂತ ಬೇರೆ. ತರ್ಕಶಾಸ್ತ್ರಗಳು ಎರಡಿವೆ ಎಂದು ಮತ್ಸ್ಯಪುರಾಣ ಹೇಳಿದೆ. ೧೪೭

ಗೌತಮ ಪ್ರಣೀತವಾದ ನ್ಯಾಯಶಾಸ್ತ್ರವೂ 'ಅನು' ಕೇವಲ ಅನುಮಾನ ಬಲದಿಂದ 'ಈಕ್ಷಿಕೀ' ಚಿಂತನ ನಡೆಸುವುದರಿಂದ ಆನ್ವೀಕ್ಷಿಕೀ ಎನಿಸಿದೆ. ಇದು ವೇದ ವಿರುದ್ಧ ಕುತರ್ಕಮಯವಾಗಿದೆ. ಬ್ರಹ್ಮಸೂತ್ರದಲ್ಲಿ ಅದನ್ನು ಬಲವಾಗಿ ಖಂಡಿಸಲಾಗಿದೆ. ಸುಧಾ ತರ್ಕತಾಂಡವ ಅಭಿನವತಾಂಡವಗಳೂ ಖಂಡಿಸಿವೆ.

೧.೩.೧೪ ಪೃಥುಚಕ್ರವರ್ತಿ ಭಗವಂತನ ಆವೇಶಾವತಾರವೆಂದು ಪದ್ಮಪುರಾಣ ಹೇಳಿದೆ. ೧೪೮

೧.೩.೨೧ ಹದಿನೇಳನೆಯದು ವ್ಯಾಸಾವತಾರ, ಹದಿನೆಂಟನೆಯದು ರಾಮಾವತಾರ ಎಂದು ಭಾಗವತ ಹೇಳುವಲ್ಲಿ ಕ್ರಮ ವ್ಯತ್ಯಾಸವಾಯಿತೆನಿಸಬಹುದು. ಅದಕ್ಕೆ ಕ್ರಮ ವಿವಕ್ಷಿತವಲ್ಲವೆಂದು ಸಮಾಧಾನಪಟ್ಟುಕೊಳ್ಳುತ್ತಾರೆ. ವಸ್ತುತಃ ಕ್ರಮ ಸರಿಯಾಗೇ ಇದೆ. ಕೂರ್ಮಪುರಾಣದಲ್ಲಿ ಹೇಳಿದಂತೆ ವೈವಸ್ವತ ಮನ್ವಂತರದಲ್ಲಿ ಮೂರನೆ ಚತುರ್ಯುಗದಿಂದಾರಂಭಿಸಿ ಇಪ್ಪತ್ತೆಂಟನೆ ಚತುರ್ಯುಗ ಪರ್ಯಂತ ಐದು ಬಾರಿ ವ್ಯಾಸಾವತಾರವಾಗಿದೆ. ಅದರಿಂದ ಹದಿನೆಂಟನೆ ಮಹಾಯುಗದ ತ್ರೇತಾಯುಗದಲ್ಲಿ ನಡೆದ ರಾಮಾವತಾರಕ್ಕಿಂತ ಹಿಂದೆ ಮೂರನೆ ಏಳನೆ

ಹದಿನಾರನೆ ಮಹಾಯುಗಗಳ ದ್ವಾಪರಗಳಲ್ಲಿ ವ್ಯಾಸಾವತಾರವಾದುದನ್ನು ಮನಸ್ಸಿನಲ್ಲಿಟ್ಟುಕೊಂಡು ಮೊದಲಿಗೆ ವ್ಯಾಸಾವತಾರವನ್ನು ಹೇಳಿ ಬಳಿಕ ರಾಮಾವತಾರವನ್ನು ಹೇಳಿದ್ದರಲ್ಲಿ ತಪ್ಪಿಲ್ಲ. ೧೪೯

೧.೩.೨೩ ಬಲರಾಮ ಕೃಷ್ಣರು ಹತ್ತೊಂಬತ್ತನೆ ಇಪ್ಪತ್ತನೆ ಅವತಾರಗಳು. ಅವರಲ್ಲಿ ಬಲರಾಮ ಮಹಾವರಾಹ ಪುರಾಣ ಹೇಳುವಂತೆ ಶೇಷನ ಅವತಾರ. ಅವನಲ್ಲಿ ಪದ್ಮನಾಭನ ಬಿಳಿ ಕೂದಲಿನ ಆವೇಶ. ಬಿಳಿಕೂದಲೆಂದರೆ ಅದೂ ಶಂಖಚಕ್ರಧಾರಿ ಮಹಾಬಾಹು ಶ್ವೇತವರ್ಣವಾದ ಒಂದು ಭಗವದ್ರೂಪವೆ. ಶ್ರೀಕೃಷ್ಣ ಭಗವಂತನ ಕೃಷ್ಣಕೇಶದ ಸ್ವರೂಪಾವತಾರ. ಭಗವಂತನಿಗೂ ಅವನ ಕೇಶಗಳಿಗೂ ಭೇದವಿಲ್ಲ. ಆದರಿಂದ ಶ್ರೀಕೃಷ್ಣ ಸಾಕ್ಷಾದ್ ಭಗವಂತನೆ. ೧೫೦

೧.೩.೨೪ ಬುದ್ಧ ಆವೇಶಾವತಾರವಲ್ಲ. ಬ್ರಹ್ಮಾಂಡಪುರಾಣ ಹೇಳುವಂತೆ ಅಸುರ ರನ್ನು ಮೋಹಗೊಳಿಸುವುದಕ್ಕಾಗಿ ಸಾಕ್ಷಾತ್ ಭಗವಂತನೆ ಬುದ್ಧರೂಪದಿಂದ ಅವತರಿಸಿದ. ೧೫೦

೧.೩.೨೬ 'ಯಥಾ ವಿದಾಸಿನಃ' ಎಂಬಲ್ಲಿ ಅವಿದಾಸಿನಃ ಎಂದು ಪದಚ್ಛೇದ ಮಾಡಿ 'ದಸು ಉಪಕ್ಷಯೇ' ಧಾತುವಿಟ್ಟುಕೊಂಡು 'ಎಂದಿಗೂ ಬತ್ತದ ಕೆರೆ' ಎಂದು ವ್ಯಾಖ್ಯಾನಿಸುವುದು ಕ್ಲಿಷ್ಟಕಲ್ಪನೆ. ಬ್ರಹ್ಮಪುರಾಣದಲ್ಲಿ 'ವಿದಾಸಿ' ಶಬ್ದವನ್ನು ಉನ್ನತ ಎಂಬ ಅರ್ಥದಲ್ಲಿಯೂ 'ವಿಭಾಗ ಹೊಂದಿದ' ಎಂಬ ಅರ್ಥದಲ್ಲಿಯೂ ಪ್ರಯೋಗ ಮಾಡಿದ್ದು ಕಂಡಿದೆ. ಪ್ರಕೃತದಲ್ಲಿ ಉನ್ನತವಾದ ಸರೋವರ, ಒಡೆದ ಸರೋವರ ಎಂಬ ಅರ್ಥದಲ್ಲಿ ವಿದಾಸಿ ಶಬ್ದವನ್ನೇ ಇಟ್ಟುಕೊಳ್ಳುವುದು ಸೂಕ್ತ. ೧೫೧

೧.೩.೨೮ ಸನತ್ಕುಮಾರಾದಿ ಅವತಾರಗಳಿಗೂ ಭಗವಾನ್ ಕೃಷ್ಣನಿಗೂ ಭೇದವಿಲ್ಲ. ಯಾವ ವ್ಯತ್ಯಾಸವೂ ಇಲ್ಲ. ಶ್ರೀಕೃಷ್ಣ ಹೇಗೆ ಪೂರ್ಣಾವತಾರನೋ ಹಾಗೇ ಉಳಿದ ಸ್ವರೂಪಾವತಾರಗಳೂ ಪೂರ್ಣಾವತಾರಗಳೆ. ೧೫೨

'ಏತೇ ಚಾಂಶಕಲಾಃ ಪುಂಸಃ ಕೃಷ್ಣಸ್ತು ಭಗವಾನ್ ಸ್ವಯಂ ।' ಎಂಬಲ್ಲಿ ಪುರುಷನ ಅಂಶಕಲಾವತಾರರಾದ ಈ ಸನತ್ಕುಮಾರಾದಿಗಳು ಸಾಕ್ಷಾದ್ ಭಗವಾನ್ ಕೃಷ್ಣನೇ ಎಂದು ಇಡಿಯಾಗಿ ಒಂದು ವಾಕ್ಯವೆಂದು ಗ್ರಹಿಸಬೇಕು. ಪರಮಾತ್ಮನಿಗೂ ಅವನ ಅಂಶಕಲೆಗಳಿಗೂ ಒಂದಿಷ್ಟೂ ಭೇದವಿರುವುದಿಲ್ಲ. ಋಷಿಗಳು ಮನುಗಳು ಮುಂತಾದವರು ಭಗವಂತನ ಅಂಶರೆಂದರೆ ಭಿನ್ನಾಂಶರೆಂದು ತಿಳಿಯಬೇಕು. ಸನತ್ಕುಮಾರಾದಿಭಗವದ್ರೂಪ ಗಳಂತೆ ಸ್ವರೂಪಾಂಶರಲ್ಲ.

ಅಂದರೆ ಮೂಲರೂಪಿ ವಿಷ್ಣುವೆ ಎಂದು ಬ್ರಹ್ಮವೈವರ್ತ ಪುರಾಣ ಹೇಳುವುದರಿಂದ ಭಾಗವತ ಶ್ಲೋಕಕ್ಕೂ ಇದೇ ಅಭಿಪ್ರಾಯ ಹೇಳಬೇಕು.

೧.೩.೩೦ ಬ್ರಹ್ಮಾಂಡ ಜಡಶರೀರರಹಿತನಾದ ಪರಮಾತ್ಮನಲ್ಲಿದ್ದು ಅವನ ಆರೋಪಿತ ರೂಪವೆನಿಸುತ್ತದೆ ಎಂದು ಈ ಶ್ಲೋಕ ಹೇಳುತ್ತದೆ. ಭಗವಂತನಿಗೆ ಬ್ರಹ್ಮಾಂಡವು ಶರೀರವೆಂದು ಆರೋಪಿಸಿ ಧ್ಯಾನಿಸಬೇಕೆಂದು ಇದರ ಅಭಿಪ್ರಾಯವಲ್ಲ. ಹಾಗೆ ಧ್ಯಾನಿಸಿದರೆ ಮಿಥ್ಯೋಪಾಸನೆಯಾಗುತ್ತದೆ. ಅದು ಅನರ್ಥಕರ. ನಿಜವಾದ ಅಭಿಪ್ರಾಯ ಮುಂದಿನ ಶ್ಲೋಕದಲ್ಲಿ ಸ್ಪಷ್ಟವಾಗುತ್ತದೆ. ೧೫೪

೧.೩.೩೧ ಅಜ್ಞಾನಿಗಳು ಮೋಡದ ಚಲನೆಯನ್ನು ಆಕಾಶದಲ್ಲಿ, ಧೂಳಿನ ಬಣ್ಣವನ್ನು ಗಾಳಿಯಲ್ಲಿ ಆರೋಪಿಸುವಂತೆ ಜಡಪದಾರ್ಥದ ಉತ್ಪತ್ತಿನಾಶ ಮುಂತಾದುವನ್ನು ಆ ಜಡಪದಾರ್ಥದ ಆಶ್ರಯನಾದ ಭಗವಂತನಲ್ಲಿ ಆರೋಪಿಸುತ್ತಾರೆ. ಅಂದರೆ, ಸ್ಕಾಂದಪುರಾಣ ಹೇಳುವಂತೆ ಪರಮಾತ್ಮನ ಶರೀರ ನಿತ್ಯ ಅಪ್ರಾಕೃತ ಆನಂದಸ್ವರೂಪ ವಾಗಿದ್ದರೂ ಜಡದಂತೆ ಉತ್ಪತ್ತಿ ನಾಶಉಳ್ಳದ್ದು ಪಂಚಭೂತಾತ್ಮಕ ಜಡ ಎಂದು ಅಜ್ಞರು ತಿಳಿಯುತ್ತಾರೆ. ಅದರಿಂದ ಜಡಪದಾರ್ಥ ಭಗವಂತನ ಆರೋಪಿತರೂಪವೆನಿಸಿದೆ ಹೊರತು ಜ್ಞಾನಿಗಳು ಹಾಗೆ ಉಪಾಸನೆ ಮಾಡಬೇಕೆಂದಲ್ಲ. ೧೫೫

೧.೩.೩೨ ಜೀವ 'ಅದೃಷ್ಟಾಶ್ರುತ ವಸ್ತು' ಎಂದು ಈ ಶ್ಲೋಕ ಹೇಳಿದೆ. ಏನರ್ಥ? ಜೀವ ದೃಷ್ಟನೇ, ತನಗೆ ತಾನು ದೃಷ್ಟನೇ ಆಗಿದ್ದಾನೆ. ಶ್ರುತ್ಯುಕ್ತನೂ ಆಗಿದ್ದಾನೆ. ಅದರಿಂದ 'ವಸ್ತು' ಎಂದರೆ ಪರವಸ್ತುವಾದ ಭಗವಂತ. ಅವನು ಜೀವನಿಂದ ದೃಷ್ಟನಾಗಿಲ್ಲ, ಏಕೆಂದರೆ ಶ್ರುತನಾಗಿಲ್ಲ, ಅಂದರೆ, ಶ್ರವಣಾದಿಗಳನ್ನು ಮಾಡದಿದ್ದುದರಿಂದ ದರ್ಶನವಾಗಲಿಲ್ಲ. ಹೀಗಾಗಿ, ಅದೃಷ್ಟಾಶ್ರುತ ವಸ್ತುತ್ವಾತ್, ಪುನರ್ಭವಃ, ಪುನಃಪುನಃ ಹುಟ್ಟುಸಾವುಗಳ ಸಂಸಾರ ದುಃಖ ಉಣ್ಣುತ್ತಿದ್ದಾನೆ. ೧೫೬

೧.೩.೩೩ ಸ್ಥೂಲ ಸೂಕ್ಷ್ಮ ಶರೀರಗಳು ಅವಿದ್ಯೆಯಿಂದ ಆತ್ಮನಲ್ಲಿ ಆರೋಪಿತ ವಾಗಿರುವುದರಿಂದ ಆತ್ಮಸಾಕ್ಷಾತ್ಕಾರವಾದರೆ ಅವು ತೊಲಗುತ್ತವೆ. ಜೀವ ಜ್ಞಾನರೂಪಿ ಬ್ರಹ್ಮನಾಗುತ್ತಾನೆ ಎಂದು ಈ ಶ್ಲೋಕ ಅದ್ವೈತವನ್ನು ಹೇಳುವಂತೆ ಕಾಣುತ್ತದೆ. ಆದರೆ 'ಜೀವ ಬ್ರಹ್ಮನಾಗುತ್ತಾನೆ' ಎನ್ನಲು 'ಜೀವ' ಎಂಬ ಕರ್ತೃಪದ ಶ್ಲೋಕದಲ್ಲಿ ಇಲ್ಲ. ಅದರಿಂದ 'ಸ್ಥೂಲಸೂಕ್ಷ್ಮ ಶರೀರಗಳು ಪರಮಾತ್ಮನಲ್ಲಿ ಎಂದೂ ಇಲ್ಲ. ಅವಿದ್ಯಾಪರಿಣಾಮವಾಗಿ ಜೀವನಲ್ಲಿ ಇವೆ. ಈ ವೈಲಕ್ಷಣ್ಯವನ್ನು ತಿಳಿದುಕೊಳ್ಳುವುದೇ ಬ್ರಹ್ಮಜ್ಞಾನವೆನಿಸುತ್ತದೆ' ಎಂದೇ ಶ್ಲೋಕದ ಅರ್ಥ. ೧೫೭

೧.೩.೩೪ 'ದೇವಿ ಮಾಯೆ ಉಪರತಳಾದಾಗ, ನಾಶವಾದಾಗ ಜೀವನಿಗೆ ಮೋಕ್ಷ' ಎಂದು ಹೇಳಿದಂತೆ ಕಾಣುತ್ತದೆ. ಆದರೆ ಜಡವಾದ ಮಾಯೆ 'ದೇವಿ' 'ಜೀವನನ್ನು ಜನನ ಮರಣ ಚಕ್ರದಲ್ಲಿ ಸಿಲುಕಿಸಿ ಆಟವಾಡುವವಳು' ಎನ್ನುವುದು ಕೂಡುವುದಿಲ್ಲ. ಅದರಿಂದ ದೇವಿಮಾಯೆ ಎಂದರೆ ಬಂಧಕ ಪ್ರಕೃತಿಯ ಅಭಿಮಾನಿನಿ ದುರ್ಗಾದೇವಿ ಅವಳು ಉಪರತಳಾಗುತ್ತಾಳೆ ಎಂದರೆ ಇನ್ನು ಈ ಜೀವನನ್ನು ಸಂಸಾರದಲ್ಲಿ ಬಂಧಿಸುವುದಿಲ್ಲ ಎಂದು ಸುಮ್ಮನಾಗುತ್ತಾಳೆ. ಆಗ ಜೀವನಿಗೆ ಮೋಕ್ಷ. ೧೫೮

೧.೩.೩೫ 'ಹೀಗೆ' ಎಂದರೆ ಜನನಾದಿಗಳೂ ಕರ್ಮಗಳೂ ಜೀವನಲ್ಲಿಲ್ಲದಿದ್ದರೂ ಹೇಗೆ ಭ್ರಾಂತಿಕಲ್ಪಿತವಾಗಿರುವವೋ ಹಾಗೆ ಪರಮಾತ್ಮನಲ್ಲಿ ಅವು ಇಲ್ಲದ್ದಿದ್ದರೂ ಅವನಲ್ಲಿ ಕಲ್ಪಿತವಾಗುತ್ತವೆ— ಇದು ಅದ್ವೈತಾನುಸಾರಿ ಅರ್ಥ. ಆದರೆ ಪದ್ಮಪುರಾಣ ಹೇಳುತ್ತದೆ— ಪರಮಾತ್ಮನಲ್ಲಿ ಕರ್ಮಕರ್ತೃತ್ವವಿದೆ. ಆದರೂ ಕರ್ಮಕಾಲದಲ್ಲಿ ಅವನಿಗೆ ಆಯಾಸವಾಗುವು ದಿಲ್ಲ. ಅನ್ಯರ ಅಧೀನನಾಗಿಯೂ ಮಾಡುವುದಿಲ್ಲ. ಫಲದಾಸೆಯೂ ಇರುವುದಿಲ್ಲ. ಕರ್ಮವು ಅವನ ಸ್ವರೂಪವೇ ಆಗಿರುತ್ತದೆ. ಈ ಎಲ್ಲ ಕಾರಣಗಳಿಂದ ಅವನಲ್ಲಿ ಕ್ರಿಯೆ ಇಲ್ಲ ಎನ್ನುವುದುಂಟು ಹೊರತು ಅವನು ಕ್ರಿಯೆಯನ್ನು ಮಾಡುವುದೆ ಇಲ್ಲವೆಂದಲ್ಲ. ಅಚಿಂತ್ಯಶಕ್ತಿಯಿಂದ ಸ್ವೇಚ್ಛೆಯಿಂದ ತನ್ನ ಸ್ವರೂಪವೇ ಆದ ಕ್ರಿಯೆಯನ್ನೂ ತಾನು ಮಾಡುತ್ತಾನೆ. ೧೫೯

೧.೩.೪೦ ಶ್ರೀಕೃಷ್ಣ ಪರಂಧಾಮಕ್ಕೆ ತೆರಳಿದ ಬಳಿಕ ಧರ್ಮ ಯಾರಲ್ಲಿ ಆಶ್ರಯ ಪಡೆಯಿತೆಂದು ಶೌನಕರು ಕೇಳಿದ್ದರು. ಅದಕ್ಕೆ ಉತ್ತರವನ್ನು ಭಾಗವತನಿರ್ಮಾಣ ಮಾಡಿದ ವೇದವ್ಯಾಸರಲ್ಲಿ ಆಶ್ರಯಪಡೆಯಿತೆಂದು ಈ ಶ್ಲೋಕದಲ್ಲಿ ಸೂತರು ಹೇಳಿದ್ದಾರೆ. ೧೬೦

೧.೪.೪ ಶುಕಮುನಿ ನಿರ್ವಿಕಲ್ಪಕರಾಗಿದ್ದರು ಎನ್ನುತ್ತದೆ ಭಾಗವತ. 'ನಿರ್ವಿಕಲ್ಪಕ' ಎಂದರೆ ಪ್ರಪಂಚವೆಲ್ಲವೂ ಬ್ರಹ್ಮಸ್ವರೂಪವೆಂದು ಎಲ್ಲಿಯೂ ಭೇದವನ್ನೇ ಕಾಣದವರು ಎಂದು ಅರ್ಥವಲ್ಲ. ಯೋಗಿಗಳು ಎಲ್ಲಿಯೂ ಬೇದವನ್ನು ಕಾಣುವುದಿಲ್ಲ, ನಿಜ. ಯಾವ ಭೇದವನ್ನು? ಇದು ತನ್ನದು, ಅದು ಅವನದು ಎನ್ನುವ ಭೇದವನ್ನು ಕಾಣುವುದಿಲ್ಲ. ಏಕೆಂದರೆ ಎಲ್ಲವೂ ಭಗವಂತನವು. ಎಲ್ಲೆಡೆ ಇರುವ ಭಗವಂತನ ರೂಪಗಳಿಗೂ ಭೇದವನ್ನು ಕಾಣುವುದಿಲ್ಲ. ಹೀಗೆ ನಿರ್ವಿಕಲ್ಪಕರಾಗಿದ್ದರು ಶುಕಮುನಿಗಳು. ೧೬೨

೧.೪.೧೩ ಮೂರನೆಯದಾದ ದ್ವಾಪರಯುಗದ ಕೊನೆಯಲ್ಲಿ ವ್ಯಾಸಾವತಾರವಾಯಿತು.

ಆದರೆ ಈ ಶ್ಲೋಕದಲ್ಲಿ 'ತೃತೀಯೇ ಯುಗ ಪರ್ಯಯೇ' ಮೂರನೆಯ ಯುಗಾವಸಾನದಲ್ಲಿ ವ್ಯಾಸಾವತಾರವೆಂದಿದೆ. ಯುಗಾವಸಾನ, ಒಂದು ಯುಗಕ್ಕೆ ಅವಸಾನ ಮೂರು ಇರುವುದಿಲ್ಲ. ಅದರಿಂದ 'ಯುಗ ಪರ್ಯಯೇ' ಎಂಬಲ್ಲಿ 'ಯುಗ' ಎಂದು ಪ್ರತ್ಯೇಕ ಶಬ್ದ. ಸಪ್ತಮೀವಿಭಕ್ತಿ ಲೋಪವಾಗಿದೆ. ಅದಕ್ಕೆ 'ತೃತೀಯೇ' ಎಂದು ವಿಶೇಷಣ. ಮೂರನೆಯದಾದ ದ್ವಾಪರಯುಗದಲ್ಲಿ ಎಂದರ್ಥ. 'ಪರ್ಯಯೇ' ಎಂದರೆ ಕೊನೆಯಲ್ಲಿ. ದ್ವಾಪರಯುಗದಲ್ಲಿ ಅದರಲ್ಲಿಯೂ ಕೊನೆಭಾಗದಲ್ಲಿ ವ್ಯಾಸಾವತಾರವೆಂದಂತಾಗುವುದು. ೧೬೩

೧.೪.೧೪-೧೭ ಕಲಿಕಾಲದಲ್ಲಿ ಸಜ್ಜನರ ಉದ್ಧಾರ ಹೇಗೆ ಎಂದು ವೇದವ್ಯಾಸರು ಚಿಂತಾಕ್ರಾಂತರಾದರೆಂದು ಭಾಗವತ ಹೇಳುತ್ತಿದೆ. ಅದಕ್ಕೆ ಅಸುರಮೋಹನಕ್ಕಾಗಿ ಅವರು ಹಾಗೆ ತೋರಿಕೊಂಡರೆಂದು ಅಭಿಪ್ರಾಯವಿಟ್ಟುಕೊಳ್ಳಬೇಕೆಂದು ಕೂರ್ಮಪುರಾಣದಿಂದ ತಿಳಿದುಬರುತ್ತದೆ. ೧೬೪

೧.೪.೨೪ ಸ್ತ್ರೀಶೂದ್ರಾದಿಗಳಿಗಾಗಿ ಭಾರತಾದಿಗಳ ರಚನೆ ಎಂದ ಮಾತ್ರಕ್ಕೆ ದ್ವಿಜರು ಅವುಗಳನ್ನು ಓದಬಾರದೆಂದಲ್ಲ. ದ್ವಿಜರು ವೇದಾರ್ಥವನ್ನು ಭಾರತಾದಿಗಳ ಸಹಾಯದಿಂದಲೆ ಸರಿಯಾಗಿ ತಿಳಿಯಬೇಕು. ಅಂತೂ ಭಾರತಾದಿಗಳ ಅಧ್ಯಯನಮಾಡದೆ ಯಾರಿಗೂ ಮೋಕ್ಷವಿಲ್ಲ. ೧೬೫

೧.೪.೨೫ ಇಷ್ಟು ಗ್ರಂಥಗಳನ್ನು ರಚಿಸಿಯೂ ನನ್ನ ಮನಸ್ಸಿಗೆ ಸಂತೋಷವಿಲ್ಲ. 'ನಾತುಷ್ಯತ್ ಹೃದಯಂ' ಎನ್ನುತ್ತಾರೆ ವೇದವ್ಯಾಸರು. ನಿತ್ಯಸಂತುಷ್ಟರಾದ ಭಗವಾನ್ ವ್ಯಾಸರು ಅಸುರ ಮೋಹನಕ್ಕಾಗಿಯಾದರೂ ಸುಳ್ಳುಹೇಳಬಹುದೆ? ಎಂದರೆ ಅವರು ಸುಳ್ಳು ಹೇಳಲಿಲ್ಲ. 'ನಾತುಷ್ಯತ್' ಇಷ್ಟು ಗ್ರಂಥಗಳನ್ನು ಲೋಕೋಪಕಾರಕ್ಕಾಗಿ ನಾನು ರಚನೆ ಮಾಡಿರುವೆನಾದರೂ ನನಗೆ ಸಾಕೆನಿಸಿಲ್ಲ. ಭಾಗವತವನ್ನೂ ರಚಿಸಬೇಕೆಂದು ನನ್ನ ಸಂಕಲ್ಪವಿದೆ. ಎನ್ನುವ ನಿಗೂಢಾಭಿಪ್ರಾಯದಿಂದ ನನಗೆ ಮನಸ್ಸಿಗೆ ಇನ್ನೂ ತೃಪ್ತಿಯಾಗಿಲ್ಲ ಎನ್ನುತ್ತಿದ್ದಾರೆ. ೧೬೬

೧.೪.೨೯ ವೇದವ್ಯಾಸರು ವ್ರತನಿಷ್ಠರಾದುದು ಲೋಕಕ್ಕೆ ವ್ರತನಿಯಮವನ್ನು ಮಾಡಿ ತೋರಿಸುವುದಕ್ಕಾಗಿ. 'ದೈಹ್ಯ ಆತ್ಮಾ' ಎಂದರೆ 'ನನ್ನ ದೇಹದಲ್ಲಿರುವ ಆತ್ಮ' ಎಂದರ್ಥವಲ್ಲ. ಪರಮಾತ್ಮನಿಗೆ ದೇಹದಲ್ಲಿ ಆತ್ಮವಲ್ಲ. ದೇಹವೇ ಆತ್ಮ, ಆತ್ಮವೇ ದೇಹ. ಎರಡರಲ್ಲಿ ಭೇದವಿಲ್ಲ. ಅದರಿಂದ 'ದೈಹ್ಯ' ಎಂದರೆ 'ದೇಹರೂಪವಾದ' ಎಂದರ್ಥ.

'ಆತ್ಮಾ ಆತ್ಮನಾ ಅಸಂಪನ್ನಃ' ನನ್ನ ಆತ್ಮ ಪರಮಾತ್ಮನಲ್ಲಿ ಐಕ್ಯ ಹೊಂದಿಲ್ಲ ಎಂದು ವ್ಯಾಸರು

ಚಿಂತಿಸು ತ್ತಿದ್ದಾರೆಯೆ? ಇಲ್ಲ, 'ಆತ್ಮನಾ ಅಸಂಪನ್ನಃ' ಎಂದು ಅನ್ವಯವಲ್ಲ. 'ಆತ್ಮನಾ ವಿಭುಃ' ಸ್ವತಃ ಪರಿಪೂರ್ಣ ಎಂದು ಅನ್ವಯಿಸಬೇಕು. 'ಅಸಂಪನ್ನ ಇವ' ಎಂದರೆ ನನ್ನ ಅವತಾರ ಕಾರ್ಯ ಇನ್ನೂ ಪೂರ್ತಿಯಾಗಿಲ್ಲದಿರುವುದರಿಂದ ಕೃತಕೃತ್ಯನಲ್ಲದವನಂತಿದ್ದೇನೆ ಎನ್ನುತ್ತಿದ್ದಾರೆ.

'ಬ್ರಹ್ಮವರ್ಚಸ್ಯಸತ್ತಮಃ' ನಾನು ಬ್ರಹ್ಮವರ್ಚಸ್ಸುಳ್ಳವನಾದರೂ ಅತ್ಯಂತ ದುರ್ಜನನಂತೆ ಕಾಣುತ್ತಿದ್ದೇನೆ ಎಂದು ವ್ಯಾಸರು ಹೇಳುತ್ತಾರೆಯೆ? ಇದು ಸರಿಯಲ್ಲ. 'ಬ್ರಹ್ಮವರ್ಚಸ್ವಿ ಸತ್ತಮಃ' ಎಂದು ಪಾಠ. ಬ್ರಹ್ಮವರ್ಚಸ್ಸುಳ್ಳವರಲ್ಲೆಲ್ಲ ಅತ್ಯಂತ ಶ್ರೇಷ್ಠ ನಾನು ಎನ್ನುತ್ತಿದ್ದಾರೆ. ೧೬೮

೧.೪.೩೦ ನಾನು ಮಹಾಭಾರತದಲ್ಲಿ ಭಾಗವತ ಧರ್ಮವನ್ನು ವಿಸ್ತಾರವಾಗಿ ಹೇಳದಿರುವುದೇ ನನ್ನ ಕಾರ್ಯದಲ್ಲಿ ನ್ಯೂನತೆಗೆ ಕಾರಣವಾಗಿದೆಯೆ? ಎಂದು ವ್ಯಾಸರು ಚಿಂತಿಸುವಂತೆ ಕಾಣುತ್ತದೆ. ವಸ್ತುತಃ ಭಾಗವತ ಧರ್ಮನಿರೂಪಣೆ ಮಹಾಭಾರತದಲ್ಲಿ ಬಂದಷ್ಟು ವಿಸ್ತಾರವಾಗಿ ಇನ್ನೆಲ್ಲಿಯೂ ಬಂದಿಲ್ಲ. ಆದರೆ ಗುಹ್ಯಭಾಷಾ ದರ್ಶನಬಾಷಾ ಸಮಾಧಿಬಾಷಾ ಎಂಬ ಮೂರು ಶೈಲಿಗಳು ಮಹಾಭಾರತದಲ್ಲಿದ್ದು ದರ್ಶನಭಾಷೆಯನ್ನು ಸಮಾಧಿಭಾಷೆಯೆಂದೂ ಸಮಾಧಿ ಭಾಷೆಯನ್ನು ದರ್ಶನ ಭಾಷೆಯೆಂದೂ ತಪ್ಪು ತಿಳಿದು ಸಜ್ಜನರು ಗೊಂದಲಕ್ಕೊಳಗಾಗುವ ಸಂಭವವಿದೆ. ವೈದಿಕ ಧರ್ಮದ ಬಗ್ಗೆ ಎಲ್ಲವನ್ನೂ ಪೂರ್ತಿಯಾಗಿ ಮಹಾಭಾರತ ಹೇಳಿದ್ದರೂ ತ್ರಿವಿಧ ಭಾಷೆಗಳ ಸರಿಯಾದ ಪರಿಜ್ಞಾನವಿಲ್ಲದ ಅಶಕ್ತಜನರು ಅದರಿಂದ ಪೂರ್ಣ ಉಪಯೋಗ ಪಡೆಯಲಾರರು. ಆದರಿಂದ ಅವರಿಗಾಗಿ ಕೇವಲ ಸಮಾಧಿಭಾಷೆಯಿಂದಲೇ ತತ್ವವನ್ನು ಹೇಳುವ ಭಾಗವತ ಪುರಾಣದ ರಚನೆಯಾಗಬೇಕಾಗಿದೆ. ಸರ್ವಜ್ಞರಾದ ವ್ಯಾಸರಿಗೆ ಇದು ಗೊತ್ತು. ಆದರೂ ಸಜ್ಜನರೆಲ್ಲರ ಪರವಾಗಿ ನಾರದರು ಪ್ರಾರ್ಥಿಸಬೇಕು, ಆಗ ಗ್ರಂಥರಚನೆ ಮಾಡಿದರೆ ಗ್ರಂಥಕ್ಕೂ ಮಹತ್ವ ಬರುತ್ತದೆ, ತನ್ನ ಪ್ರೀತಿಯ ಭಕ್ತಾಗ್ರಣಿಯಾದ ನಾರದರಿಗೂ ಕೀರ್ತಿಬರುತ್ತದೆ ಅಸುರ ಮೋಹನ ಕಾರ್ಯವೂ ನೆರವೇರುತ್ತದೆ ಎಂದುಕೊಂಡು ವ್ಯಾಸರು ನಾರದರ ಆಗಮನವನ್ನು ನಿರೀಕ್ಷಿಸಿ ಕುಳಿತಿದ್ದಾರೆ. ೧೬೯

೧.೪.೩೧ ವೇದವ್ಯಾಸರಿಗೆ ಅಜ್ಞಾನವಿದ್ದಿತು. ಆದರಿಂದ ಖೇದ ಉಂಟಾಯಿತು ಎಂದು ಕೆಲವರು ಮತ್ತು ಭಗವಾನ್ ಕೃಷ್ಣನೆ ವ್ಯಾಸರಿಗೆ ತತ್ಕಾಲದಲ್ಲಿ ಅಜ್ಞಾನ ಖೇದಗಳನ್ನು ಉಂಟುಮಾಡಿದನೆಂದು ಕೆಲವರು ಹೇಳುವುದು ಅಸಂಗತ. ವ್ಯಾಸರು

ಲೋಕವಿಡಂಬನೆಗಾಗಿ ಸ್ವೇಚ್ಛೆಯಿಂದ ಅಜ್ಞಾನವನ್ನು ಪ್ರದರ್ಶಿಸಿದರು. ಖೇದವೆಂದರೂ ಇಲ್ಲಿ ದುಃಖವಲ್ಲ. ತಾನು ಮಾಡಿದ್ದು ಇನ್ನೂ ಸಾಕೆನಿಸದಿರುವುದೇ ಖೇದ. ಇದು ಬ್ರಹ್ಮಪುರಾಣದಲ್ಲಿ ಸ್ಪಷ್ಟವಿದೆ. ೧೭೧

೧.೫.೨ ನಾರದರು ವ್ಯಾಸರಲ್ಲಿ ಕುಶಲ ಪ್ರಶ್ನೆ ಮಾಡುತ್ತ ಕೇಳುತ್ತಾರೆ, 'ನಿಮ್ಮ ಶಾರೀರ ಮಾನಸ ಆತ್ಮ ತೃಪ್ತವಿದೆ ತಾನೆ?' ಎಂದು. ಶಾರೀರ ಮಾನಸ ಎಂದರೆ ಶರೀರಾಭಿಮಾನಿ ಮನೋऽಭಿಮಾನಿ ಎಂದು ವಿವರಣೆ ನೀಡುವುದುಂಟು. ಇದು ಸರಿಯಲ್ಲ. ಅದಕ್ಕೆ ಶರೀರ ಮನಸ್ಸುಗಳು ತೃಪ್ತವಿವೆ ತಾನೆ ಎಂದು ಕೇಳಬೇಕಾಗಿತ್ತು. ಆದರಿಂದ ಹೀಗೆ ಹೇಳಬೇಕು— 'ಭಗವಂತನ ವಿಷಯದಲ್ಲಿ ಶರೀರ ಮನಸ್ಸುಗಳೆರಡೂ ಅವನ ಆತ್ಮನಿಗಿಂತ ಬೇರೆ ಅಲ್ಲ. ಆದರಿಂದ 'ಶಾರೀರ' ಎಂದರೆ ಶರೀರರೂಪ, ಮಾನಸವೆಂದರೂ ಮನೋರೂಪ ಆತ್ಮ ತೃಪ್ತವಿದೆಯೆ ಎಂದು ಕೇಳುವುದು ಸಮಂಜಸವೇ ಆಗಿದೆ' ಎಂದು. ೧೭೩

೧.೫.೪ ನಾರದರು ವೇದವ್ಯಾಸರಿಗೆ ಹೇಳುತ್ತಾರೆ, 'ತಾವು ಕಾರ್ಯಪೂರ್ತಿ ಯಾಗದಿದ್ದವರಂತೆ 'ಶೋಚಸಿ' 'ಶೋಕಪಡುತ್ತಿರುವಿರಿ' ಇದು ಸರಿಯೆ? ಪರಮಾತ್ಮನಿಗೆ ಶೋಕವೆಲ್ಲಿ? ಆದರಿಂದ ಶುಚಧಾತುವಿಗೆ ಪ್ರಕಾಶಗೊಳಿಸುವುದು, ತೋರುವುದು ಎಂದೂ ಅರ್ಥವಿದೆ. ಅದನ್ನಿಟ್ಟುಕೊಂಡರೆ 'ಶೋಚಸಿ' ಕಾರ್ಯಪೂರ್ತಿ ಯಾಗದಿದ್ದವರಂತೆ ತೋರಿ ಕೊಳ್ಳುತ್ತಿರುವಿರಿ ಎಂದಾಗುತ್ತದೆ. ಶೋಕಪಡುತ್ತಿರುವಿರಿ ಎಂದು ನಾರದರು ಹೇಳುತ್ತಿಲ್ಲ. ೧೭೩

೧.೫.೫ ವೇದವ್ಯಾಸರು ನಾರದರ ಮುಂದೆ, ನನ್ನ ಅತೃಪ್ತಿಗೆ ಕಾರಣ ನನಗೇ ಗೊತ್ತಿಲ್ಲ ಎಂದು ಅಜ್ಞಾನವನ್ನು ಪ್ರದರ್ಶಿಸುವುದು ಅಸುರಮೋಹನಕ್ಕಾಗಿ. ೧೭೪

ಇಲ್ಲಿ ಪರಸ್ಮೈಪದದ ಬದಲು 'ಪರಿತುಷ್ಯತೇ' ಎಂದು ಆತ್ಮನೇ ಪದಪ್ರಯೋಗ ಮಾಡಿರುವುದು ಮತ್ತು 'ಸಂಪೃಚ್ಛಾಮಹೇ' ಎಂದು 'ಸಂ' ಉಪಸರ್ಗವಿರುವಾಗ ಮಾತ್ರ ಆತ್ಮನೇಪದ ಸಾಧುವಾದರೂ 'ಸಂ' ಉಪಸರ್ಗ ಸೇರಿಸದಿರುವುದು ಅರ್ಥಪೂರ್ಣವಾಗಿದೆ. 'ನ ಪರಿತುಷ್ಯತೇ' ನನಗೆ ತೃಪ್ತಿ ಇಲ್ಲ ಎನ್ನುವುದು ಕೇವಲ ಅಸುರಮೋಹನಕ್ಕಾಗಿ ಹೇಳಿದ್ದು ಹೊರತು ವಾಸ್ತವವಲ್ಲ. 'ಪೃಚ್ಛಾಮಹೇ' ನಿಮ್ಮನ್ನೇ ಕೇಳುತ್ತೇವೆ ಎಂದುದೂ ಹಾಗೇ ಯಥಾರ್ಥವಲ್ಲ. ಪ್ರಶ್ನೆ ಸಮೀಚೀನವಲ್ಲ. ಆದರಿಂದ 'ಸಂ' ಶಬ್ದಲೋಪ. ತಿಳಿಯದವನು ತಿಳಿದವನಲ್ಲಿ ಕೇಳಬೇಕು. ಇಲ್ಲಿ ವ್ಯತ್ಯಾಸವಾಗಿದೆ. ಆದರಿಂದ ಸಮೀಚೀನವಲ್ಲ ಎಂದು ಧ್ವನಿತವಾಗುತ್ತದೆ.
–ವಿಜಯಧ್ವಜೀಯ

೧.೫.೯ ನಾರದರು ವೇದವ್ಯಾಸರಿಗೆ ಹೇಳುತ್ತಾರೆ, 'ಧರ್ಮ ಅರ್ಥಕಾಮಗಳ ಬಗ್ಗೆ ಸ್ವಲ್ಪ ಹೇಳಿದರೂ ಸಾಕಾಗುತ್ತಿತ್ತು. ಬಹಳವಾಗಿಯೆ ಮಹಾಭಾರತದಲ್ಲಿ ಹೇಳಿದ್ದೀರಿ. ವಾಸುದೇವನ ಮಹಿಮೆಯನ್ನೂ ಜೊತೆಗೆ ಬಹಳವಾಗಿಯೆ ಅಲ್ಲಿ ಹೇಳಿರುವಿರಿ. ಆದರೆ ಅದು ಎಷ್ಟು ಹೇಳಿದರೂ ಸಾಲದು. ಅದರಿಂದ ಭಾಗವತಪುರಾಣವನ್ನು ರಚಿಸಿ ಇನ್ನಷ್ಟು ವಾಸುದೇವನ ಮಹಿಮೆಯನ್ನು ಹೇಳಿರಿ. ಈ ಕೆಲಸ ಒಂದು ಬಾಕಿ ಉಳಿದಿರುವುದರಿಂದ ನಿಮಗೆ ನಿಮ್ಮ ಅವತಾರ ಕಾರ್ಯ ಪೂರ್ತಿಯಾದಂತೆ ಎನಿಸಲಿಲ್ಲ. ೧೭೫

೧.೫.೧೦ ಹರಿಯ ಮಹಿಮೆಯನ್ನು ಕೊಂಡಾಡದ ಶಾಸ್ತ್ರ ಏನಿದ್ದರೂ ಅದು 'ವಾಯಸತೀರ್ಥ' ಎನ್ನುತ್ತದೆ ಭಾಗವತ. ಕಾಗೆಗಳಂಥ ಕಾಮಿ ಜನರಿಗೆ ರುಚಿಸುವ ಅಪವಿತ್ರಗ್ರಂಥ ಎಂದು ಬೇರೆ ವ್ಯಾಖ್ಯಾನಕಾರರು ಅರ್ಥ ಹೇಳುತ್ತಾರೆ. ಆದರೆ ಆಯುರ್ವೇದ ಸಂಗೀತ ಶಿಲ್ಪ ವಾಸ್ತು ಮುಂತಾದ ಗ್ರಂಥಗಳಿಗೆ ಈ ಮಾತು ಅನ್ವಯಿಸುವುದಿಲ್ಲ. ಇವೆಲ್ಲವೂ ಸುಖಕರವಾದ ಐಹಿಕ ಜೀವನಕ್ಕೆ ಸಾಧನವಾಗಬಹುದು ಮೋಕ್ಷಕ್ಕಲ್ಲ ಎನ್ನಬೇಕು. ಅದಕ್ಕೆ 'ವಾಯಸ' ಎಂದರೆ ಇಲ್ಲಿ ಕಾಗೆಯಲ್ಲ, ವಯಸ್ಸಿಗೆ ಅಂದರೆ ಬಹುಕಾಲ ಸುಖವಾಗಿ ಬಾಳುವುದಕ್ಕೆ ಸಾಧನವಾದ ಶಾಸ್ತ್ರ ಎಂದಿಷ್ಟೇ ಅರ್ಥವಿಟ್ಟುಕೊಳ್ಳಬೇಕು. ೧೭೬

೧.೫.೧೨ ಭಕ್ತಿಯಿಲ್ಲದ ಜ್ಞಾನ ವ್ಯರ್ಥ ಎಂದು ನಾರದರು ಹೇಳುತ್ತಾರೆ. ಇಲ್ಲಿ ಜ್ಞಾನವೆಂದರೆ ಅಪರೋಕ್ಷಜ್ಞಾನವಲ್ಲ. ಅಪರೋಕ್ಷ ಜ್ಞಾನವನ್ನು ಭಗವಂತ ಭಕ್ತಿ ಇಲ್ಲದವರಿಗೆ ಕೊಡುವುದೆ ಇಲ್ಲ. ಅದರಿಂದ ಶಾಸ್ತ್ರ ಓದಿ ಪಡೆದ ಜ್ಞಾನ ಎನ್ನಬೇಕು. ಭಕ್ತಿ ಇಲ್ಲದೆ ಬುದ್ಧಿ ಬಲದಿಂದ ಶಾಸ್ತ್ರ ಓದಿ ಪಡೆದ ಜ್ಞಾನ ವ್ಯರ್ಥ ಎಂದರ್ಥ. ೧೭೭

೧.೫.೧೩ 'ಸಮಾಧಿನಾ ಅನುಸ್ಮರ' ಸಮಾಧಿಯಿಂದ ಅಂದರೆ ಏಕಾಗ್ರಮನಸಿನಿಂದ ಚೆನ್ನಾಗಿ ಆಲೋಚಿಸು, ಎಲ್ಲ ಪ್ರಮೇಯಗಳನ್ನು ಸ್ಮರಣೆಗೆ ತಂದುಕೊಳ್ಳು, ಭಾಗವತ ರಚಿಸು ಎಂದು ನಾರದರು ವೇದವ್ಯಾಸರಿಗೆ ಹೇಳುತ್ತಿರುವಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ಹೇಳಿದ್ದಾರೆ. ನಿತ್ಯಸರ್ವಜ್ಞರಾದ ಭಗವಾನ್ ವ್ಯಾಸರು ಏಕಾಗ್ರಮನಸ್ಸಿನಿಂದ ಆಲೋ ಚಿಸಿ ತಿಳಿಯಬೇಕಾದ ಪ್ರಮೇಯವೆ ಇಲ್ಲ. ವಸ್ತುತಃ 'ಸಮಾಧಿ' ಎಂದರೆ ಇಲ್ಲಿ ಯೋಗ ಸಮಾಧಿಯಲ್ಲ, ಏಕಾಗ್ರಮನಸ್ಸಲ್ಲ, ಅರ್ಥವಾಗದ ಗುಹ್ಯಭಾಷೆಯಲ್ಲಾಗಲಿ, ಪ್ರದರ್ಶನಕಾರರ ಅಭಿಪ್ರಾಯವನ್ನು ತಮ್ಮದೆಂದು ಭ್ರಾಂತಿ ಬರುವ ರೀತಿಯಲ್ಲಿ ಹೇಳುವ ದರ್ಶನ ಭಾಷೆಯಲ್ಲಾಗಲಿ ಹೇಳದೆ ನೇರವಾಗಿ ಸ್ಪಷ್ಟವಾಗಿ ವಿವಕ್ಷಿತ ಪ್ರಮೇಯವನ್ನು ಹೇಳುವ ಭಾಷೆ ಸಮಾಧಿ

ಭಾಷೆ. ಸಮಾಧಿಭಾಷೆಯಿಂದ 'ಅನುಸ್ಮರ' ಭಗವಂತನ ಲೀಲೆಯನ್ನು ಹೇಳುವ ಪುರಾಣರೂಪವಾದ ಸ್ಮೃತಿಗ್ರಂಥ ರಚಿಸು ಎನ್ನುತ್ತಿದ್ದಾರೆ ನಾರದರು. ಹೀಗೆ ಈ ಸಮಾಧಿಭಾಷೆಯ ಸ್ವರೂಪವನ್ನು ಹೇಳಿದವರು ಮಧ್ವಾಚಾರ್ಯರು ಹೊರತು ಇನ್ನಾರೂ ಹೇಳಿಲ್ಲ.

ಶ್ರುತಿಗಳು ಶ್ರುತವಾಗುತ್ತವೆ. ಪುರಾಣ ಭಾರತಾದಿಗಳು ಸ್ಮೃತವಾಗುತ್ತವೆ. ಅದರಿಂದ 'ಸ್ಮರಿಸಿರಿ' ಎಂದರೆ ಪುರಾಣ ರಚಿಸಿರಿ ಎಂದೇ ಅರ್ಥ. ೧೭೮

೧.೫.೧೫ ಸ್ವತಃ ವಿಷಯಾಸಕ್ತರಾದವರಿಗೆ ತಿಳಿದವರು ಧರ್ಮೋಪದೇಶ ಮಾಡುವುದು ದೊಡ್ಡ ತಪ್ಪು ಎಂದು ನಾರದರು ಹೇಳುತ್ತಾರೆ. ಏನರ್ಥ? ಸ್ವತಃ ವಿಷಯಾಸಕ್ತಿಯಿಂದ ವಿಷಯಭೋಗಲಾಭಕ್ಕಾಗಿ ಮೊದಲೇ ಪ್ರವೃತ್ತಿಧರ್ಮದಲ್ಲಿ ತೊಡಗಿಧವರಿಗೆ ಪುನಃ ಪ್ರವೃತ್ತಿಧರ್ಮವನ್ನು ಉಪದೇಶಿಸಿ ಅದನ್ನು ದೃಢಪಡಿಸುವುದು ತಪ್ಪು.

'ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ' ಎಂದು ಭಾರತದಲ್ಲಿ ಹೇಳಿದ್ದು ನಿಜ. ಆದರೆ ಅದು ನಿವೃತ್ತ ಧರ್ಮಾಚರಣೆಯಿಂದ ಮೋಕ್ಷಫಲ ಸಿಗುವಾಗ ಮೊದಲಿಗೆ ಆನುಷಂಗಿಕವಾಗಿ ಅರ್ಥಕಾಮಗಳು ಲಭಿಸುತ್ತವೆ. ಹೊರತು ಕೇವಲ ಅರ್ಥ-ಕಾಮಗಳಿಗಾಗಿ ಪ್ರಯತ್ನ ಮಾಡಬಾರದು ಎಂಬ ಅಭಿಪ್ರಾಯದಿಂದ. ಹೀಗೆ ಭಾರತ ನಿವೃತ್ತ ಧರ್ಮವನ್ನೇ ಬೋಧಿಸಿದೆ ಎಂದು ತಿಳಿಯಬೇಕು. ೧೮೦

೧.೫.೧೬ ಭಗವಂತನ ಸುಖವೆ ಪರಮಪುರುಷಾರ್ಥ ಎಂಬುದನ್ನು ಭಾಗವತಗ್ರಂಥದಿಂದ ಸಜ್ಜನರು ತಿಳಿಯಬಲ್ಲರು ಎಂದು ನಾರದರು ಹೇಳುತ್ತಾರೆಯೇ? ಹಾಗಾದರೆ ಭಗವಂತನ ಸುಖ ಜನರಿಗೆ ಪರಮಪುರುಷಾರ್ಥವಾಗಿ ಸಿಗಬೇಕಾದರೆ ಅವರೂ ಭಗವಂತನಾಗಬೇಕು, ಜೀವಬ್ರಹ್ಮೈಕ್ಯ ಬರಬೇಕು ತಾನೆ? ಬೇಡ. ಭಗವಂತನ ಸುಖವೆಂದರೆ ಇಲ್ಲಿ ಭಗವಂತನ ಸ್ವರೂಪ ಸುಖವಲ್ಲ. ಭಗವಂತನು ಮೋಕ್ಷದಲ್ಲಿ ಜೀವರಿಗೆ ವ್ಯಕ್ತಮಾಡಿಕೊಡುವ ಜೀವರ ಸ್ವರೂಪಸುಖ. ೧೮೧

೧.೫.೨೦ ನಾರದರು ಹೇಳುತ್ತಾರೆ, ಪರಮಾತ್ಮ ಪ್ರಪಂಚಕ್ಕಿಂತ ಬೇರೆಯಾದರೂ ಶ್ರುತಿಗಳಲ್ಲಿ 'ಸರ್ವಂ ಖಲ್ವಿದಂ ಬ್ರಹ್ಮ' ಎಂದು ಪರಮಾತ್ಮ ಪ್ರಪಂಚರೂಪನೆಂಬಂತೆ ಉಕ್ತನಾಗುವುದು ಪ್ರಪಂಚದ ಅಸ್ತಿತ್ವ ಅವನ ಅಧೀನ ಎಂಬ ಅಭಿಪ್ರಾಯದಿಂದ. ೧೮೨

೧.೫.೨೭ ನಾರದರು ಪೂರ್ವಜನ್ಮದಲ್ಲಿ ದಾಸೀಪುತ್ರರಾಗಿದ್ದಾಗ ಚಾತುರ್ಮಾಸ್ಯ ವ್ರತಕ್ಕೆ

ಕುಳಿತಿದ್ದ ಯತಿಗಳಿಂದ, 'ಮಯಿ ಬ್ರಹ್ಮಣಿ' ಬ್ರಹ್ಮಸ್ವರೂಪನಾದ ನನ್ನಲ್ಲಿ ಪ್ರಪಂಚವು 'ಸ್ವಮಾಯಯಾ ಕಲ್ಪಿತಂ' ನನ್ನ ಅವಿದ್ಯೆಯಿಂದ ಕಲ್ಪಿತವಾಗಿದೆ ಎಂದು ಅದ್ವೈತವನ್ನು ತಿಳಿದು ಕೊಂಡಂತೆ ಕಾಣುತ್ತದೆ. ವಸ್ತುತಃ 'ಮಯಿ ಬ್ರಹ್ಮಣಿ' ಎಂದರೆ, ನನ್ನಲ್ಲಿರುವ ಪರಮಾತ್ಮನಲ್ಲಿ 'ಸ್ವಮಾಯಯಾ ಕಲ್ಪಿತಂ' ಅವನ ಇಚ್ಛೆಯಂತೆ ಇರಿಸಲ್ಪಟ್ಟಿದ್ದು ಈ ಪ್ರಪಂಚ ಎಂದರ್ಥ. ೧೮೩

೧.೫.೪೦ 'ನೀವೂ ಕೂಡ ಭಗವಂತನನ್ನು ಕೊಂಡಾಡಿರಿ', ಅಂದರೆ, ನಾನು ಕೊಂಡಾಡಿ ಅವನನ್ನು ಸಂತೋಷಗೊಳಿಸುತ್ತೇನೆ, ಹಾಗೇ ನೀವೂ ಮಾಡಿರೆಂದು ನಾರದರು ವ್ಯಾಸರಿಗೆ ಉಪದೇಶಿಸುತ್ತಿಲ್ಲ. 'ನೀವೂ ಕೂಡ' ಎಂದರೆ ಸಾಕ್ಷಾತ್ ಭಗವಂತನೆ ಆಗಿರುವ ನೀವೂ ಕೂಡ ಸಜ್ಜನರ ಮೇಲಿನ ಕರುಣೆಯಿಂದ ಅವರಿಗಾಗಿ ನಿಮ್ಮ ಮಹಿಮೆಯನ್ನು ಹೊಗಳುವ ಭಾಗವತವನ್ನು ರಚಿಸಿರಿ ಎಂದು ಕೇಳಿಕೊಳ್ಳುತ್ತಿದ್ದಾರೆ. ೧೮೪

೧.೬.೧೧ ನಾರದರು ಪೂರ್ವಜನ್ಮದಲ್ಲಿ ಬಾಲ್ಯದಲ್ಲಿಯೆ ಯತಿಗಳಿಂದ ಜ್ಞಾನೋಪದೇಶ ಪಡೆದು ಮಾತೃವಿಯೋಗದಿಂದ ಅನಾಥರಾಗಿ ದೇಶವನ್ನು ಸುತ್ತಿದರು. ಖೇಟ ವಾಟೀ ಗ್ರಾಮ ಮುಂತಾದುವನ್ನು ದಾಟಿ ಕೊನೆಯಲ್ಲಿ ಅರಣ್ಯವನ್ನು ಸೇರಿದರು. ಇಲ್ಲಿ ಖೇಟವೆಂದರೆ ಬೇಡರಹಳ್ಳಿ. ವಾಟೀ ಎಂದರೆ ಹೂವಾಡಿಗರಹಳ್ಳಿ. ಬಹುಜನ ವಾಸಮಾಡುವ ಸ್ಥಳ ಗ್ರಾಮ. ರಾಜಾಧಿರಾಜರಿರುವ ಸ್ಥಳ ಪುರ. ವಿಸ್ತಾರವಾದ ಜಲ ಸ್ಥಲ ಉಳ್ಳ ಸಮೃದ್ಧವಾದ ಪ್ರದೇಶ ಪತ್ತನ ಎಂದು ಸ್ಕಂದಪುರಾಣ ಹೇಳಿದೆ. ೧೮೬

೧.೬.೨೧ ನಾರದರಿಗೆ ಧ್ಯಾನಾವಸ್ಥೆಯಲ್ಲಿ ಭಗವಂತನ ಅಪರೋಕ್ಷವಾದಾಗ 'ನಾಪಶ್ಯದುಭಯಂ' ತಾನು ಮತ್ತು ಭಗವಂತ ಎಂದು ಎರಡನ್ನು, ಅಂದರೆ ಎರಡರಲ್ಲಿ ಭೇದವನ್ನು ಕಾಣಲಿಲ್ಲ ಎಂದಂತೆ ಕಾಣುತ್ತದೆ. ವಸ್ತುತಃ ಉಭಯಂ ಎಂದರೆ ಎರಡನೆಯ ದನ್ನು, ಅಂದರೆ ಭಗವಂತನಿಗಿಂತ ಬೇರೆಯಾದ ಬಾಹ್ಯ ಪ್ರಪಂಚವನ್ನು ಕಾಣಲಿಲ್ಲ. ೧೮೭

೧.೭.೨ ಬದರಿಯಲ್ಲಿರುವ ವೇದವ್ಯಾಸಾಶ್ರಮಕ್ಕೆ ಶಮ್ಯಾಪ್ರಾಸವೆಂದು ಹೆಸರು. ಯಜ್ಞ ವೇದಿಕೆಯ ಸ್ಥಳದಲ್ಲಿ ನಿಂತು ಶಮ್ಯಾ ಎಂಬ ಯಜ್ಞಾಯುಧವನ್ನೆಸೆದು ಅದು ಬೀಳುವಲ್ಲಿಯ ವರೆಗೆ ಸುತ್ತಲೂ ಯಾಗಶಾಲೆ ನಿರ್ಮಿಸಿ ಯಾಗಮಾಡುವ ಸ್ಥಳ ಶಮ್ಯಾಪ್ರಾಸವೆನಿಸುತ್ತದೆ. ೧೮೯

೧.೭.೪ ವೇದವ್ಯಾಸರು ಭಕ್ತಿಯಿಂದ ಧ್ಯಾನಮಾಡಿ ತಮ್ಮ ಹೃದಯದಲ್ಲಿ ಪರಮಾತ್ಮನನ್ನು

ಕಂಡು ಆದರಿಂದ ಮಾಯೆ ದೂರ ತೊಲಗಿದುದನ್ನೂ ಕಂಡರು ಅಂದರೆ ಪರಮಾತ್ಮನ ಅಪರೋಕ್ಷಜ್ಞಾನ ಪಡೆದರು ಎಂದು ಹೇಳಿದಂತೆ ಕಾಣುತ್ತದೆ. ವಸ್ತುತಃ ಸಜ್ಜನರು ಭಕ್ತಿಯಿಂದ ಧ್ಯಾನಮಾಡಿ ತಮ್ಮ ಹೃದಯದಲ್ಲಿ ಪರಮಾತ್ಮನನ್ನು ಕಂಡು ಆದರಿಂದ ಮಾಯೆ ತೊಲಗುವುದನ್ನು ಕಾಣಲಿ ಎಂದು ವೇದವ್ಯಾಸರು ಮನಸ್ಸಿಗೆ ತಂದುಕೊಂಡರು. ಭಾಗವತದಲ್ಲಿ ಅದನ್ನೆ ವರ್ಣಿಸಿದರೆಂದರ್ಥ. ೧೯೦

೧.೭.೧೪ 'ವಿಪ್ರಿಯಮೇತದಸ್ಯ' ಎಂದರೆ, ಪಾಂಡವರ ಮಕ್ಕಳನ್ನು ಅಶ್ವತ್ಥಾಮ ಕೊಂದಿದ್ದು ದುರ್ಯೋಧನನಿಗೆ ಪ್ರಿಯವೆನಿಸಲಿಲ್ಲ. ಶಿಶುಹತ್ಯೆಯಿಂದ ಅವನಿಗೆ ದುಃಖವೆ ಆಯಿತೆಂದು ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನಿಸುತ್ತಾರೆ. ಇದು ಮಹಾಭಾರತಕ್ಕೆ ವಿರುದ್ಧ. ಅಲ್ಲಿ ಪಾಂಡವರ ಸಂತತಿಯಾದರೂ ನಾಶವಾಯಿತೆಂದು ಸಮಾಧಾನಗೊಂಡು ದುರ್ಯೋಧನ ಕೊನೆಯುಸಿರೆಳೆಯುತ್ತಾನೆ. ಆದರಿಂದ ಏತದ್ 'ಅಸ್ಯ' ವಿಪ್ರಿಯಂ ಎಂದರೆ ಅಶ್ವತ್ಥಾಮನಿಗೆ ತನಗೇ ಪ್ರಿಯವಲ್ಲದ ಕಾರ್ಯವಾಗಿದ್ದರೂ ದುರ್ಯೋಧನನಿಗೆ ಪ್ರಿಯವೆಂದುಕೊಂಡು ಮಾಡಿದನೆಂದರ್ಥ. ಮುಂದೆ ೩೯ನೇ ಶ್ಲೋಕದಲ್ಲಿ 'ದುರ್ಯೋಧನನಿಗೂ ಅಪ್ರಿಯ' ಎಂದು ಹೇಳಿದ್ದರೂ ಅದಕ್ಕೆ, ಪಾಂಡವರ ನಾಶವಾಗದಿರುವುದರಿಂದ ಅವರ ಸಂತತಿ ಮಾತ್ರ ನಾಶವಾದುದು ದುರ್ಯೋಧನನಿಗೆ ಹೆಚ್ಚು ಪ್ರಿಯವಾಗಲಿಲ್ಲ ಎಂದೇ ಅಭಿಪ್ರಾಯ ಹೇಳಬೇಕು.

'ತಾಂ ಸಾಂತ್ವಯನ್ನಾಹ ಕಿರೀಟ ಮಾಲೀ' ಎಂಬಲ್ಲಿಂದ ಅಧ್ಯಾಯದ ಕೊನೆವರೆಗೂ ಹೇಳಿದ ಕಥಾಭಾಗ ವಾಸ್ತವದಲ್ಲಿ ನಡೆದ ಘಟನೆಯಲ್ಲ, ಸ್ವಪ್ನವೃತ್ತಾಂತ.

ಅಶ್ವತ್ಥಾಮನು ಸ್ವಪ್ನದಲ್ಲಿ ತನ್ನನ್ನು ಅರ್ಜುನ ಬೆನ್ನಟ್ಟಿ ಬಂದಂತೆ ತನ್ನನ್ನು ಕಟ್ಟಿದಂತೆ ಮತ್ತೆ ದ್ರೌಪದಿ ತನ್ನನ್ನು ಬಿಡಿಸಿದಂತೆ ಕಂಡನೆಂದು ಸ್ಕಂದಪುರಾಣ ಹೇಳಿದೆ. ೧೯೧

೧.೮.೨೩ ಮುನಿಗಳ ಭಕ್ತಿಯೋಗದ ಅನುಷ್ಠಾನಕ್ಕಾಗಿ ನಾವು ಸ್ತ್ರೀಯರು ನಿನ್ನನ್ನು ಹೇಗೆ ಕಾಣಬಲ್ಲೆವು ಎಂದು ಅಸಂಗತವಾಗಿ ಭಾಗವತ ಹೇಳುತ್ತಿಲ್ಲ. ಅದರ ಅಭಿಪ್ರಾಯ— 'ಮುನಿಗಳ ಮಹಾಭಕ್ತಿಯೋಗಕ್ಕೆ ಮಾತ್ರ ನಿಲುಕುವ ನಿನ್ನನ್ನು ಅಲ್ಪಭಕ್ತಿಯಿಂದ ನಾವು ಸ್ತ್ರೀಯರು ಹೇಗೆ ಕಾಣಬಲ್ಲೆವು' ಎಂದು. ೧೯೪

೧.೮.೨೮ 'ನಿನ್ನ ದರ್ಶನವೆ ಮೋಕ್ಷದ ದರ್ಶನ' ಎಂದರೆ ನಿನ್ನ ದರ್ಶನವೆ ಮೋಕ್ಷದರ್ಶನ ಮಾಡಿಸುವಂಥದ್ದು ಎಂದು ಕುಂತಿ ಶ್ರೀಕೃಷ್ಣನಲ್ಲಿ ಹೇಳುತ್ತಾಳೆ. ೧೯೫

೧.೮.೩೧ 'ಸಮಂ ಚರಂತಂ' ಸಜ್ಜನ ದುರ್ಜನರೆಂಬ ಭೇದ ಕಾಣದೆ ಎಲ್ಲರಲ್ಲಿಯೂ ನೀನು ಸಮಾನವಾಗಿ ವರ್ತಿಸುವಿ ಎಂದು ಕುಂತಿ ಕೃಷ್ಣನಿಗೆ ಹೇಳುತ್ತಾಳೆ ಆದರೆ ಪಾಂಡವ ಪಕ್ಷಪಾತಿ ಕೃಷ್ಣ. ಆದರಿಂದ ಭೇದ ಕಾಣದೆ ಸಮಾನವಾಗಿ ವರ್ತಿಸುವುದೆಂದರೆ ಆವರವರ ಯೋಗ್ಯತೆಯನ್ನೇ ಕಂಡು ಅದಕ್ಕೆ ಅನುಗುಣವಾಗಿ ವರ್ತಿಸುವುದೆಂದರ್ಥ. ೧೯೩

೧.೮.೪೧ ಇಲ್ಲಿ 'ಕೇ ವಯಂ' ಎಂದು ಪಾಠವಲ್ಲ, 'ತೇ ವಯಂ' ಎಂದು ಪಾಠ. 'ಕೇ ವಯಂ' ಎಂಬ ಪಾಠದಲ್ಲಿ 'ನಿನ್ನ ದರ್ಶನವಾಗುವಾಗ ನಮಗೆ ಕೀರ್ತಿ ಸಮೃದ್ಧಿಗಳೆಲ್ಲಿ?' ಎಂದು ಕೇಳುವುದು ಅಸಂಗತ 'ನಿನ್ನ ಕರುಣೆಯಿಂದಲೆ ನಿನ್ನ ದರ್ಶನವಾಗುತ್ತಿರುವಾದ ದರ್ಶನಸಾಧನವಾದ ಕೀರ್ತಿ ಸಮೃದ್ಧಿಗಳು ನಮ್ಮಲ್ಲಿ ಏನಿವೆ?' ಎಂದು ಅರ್ಥೈಸುವುದೂ ಕ್ಲಿಷ್ಟಕಲ್ಪನೆ. 'ತೇ ವಯಂ' ಎಂಬ ಪಾಠದಲ್ಲಿ 'ನಿನ್ನ ದರ್ಶನವಾದಾಗಲೆ ನಮಗೆ ಒಳ್ಳೆಯ ಕೀರ್ತಿ ಸಮೃದ್ಧಿಗಳು' ಎಂದು ಸುಲಭವಾಗಿ ಸುಂದರವಾದ ಅರ್ಥ ಲಭಿಸುತ್ತದೆ. ೧೯೬

೧.೯.೩ 'ನ ಕಲ್ಪತೇ ಶಾಸನಂ ವಚಃ' ಎಂದು ಪಾಠವಿಟ್ಟುಕೊಂಡು 'ರಾಜ್ಯಕ್ಕಾಗಿ ಬಂಧುಗಳಾದ ಕೌರವರನ್ನು ಕೊಂದು ಪಾಪ ಕಟ್ಟಿಕೊಂಡು ಪರಿತಪಿಸುವ ನನಗೆ ಗೀತೋಪದೇಶವೂ ಮನಃಸಮಾಧಾನ ನೀಡದು' ಎಂದು ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನಿಸಿದ್ದಾರೆ. ಸಾಕ್ಷಾತ್ ಕೃಷ್ಣನೆ ಉಪದೇಶಿಸಿದರೂ ಪಾಂಡವರ ಮೇಲಿನ ಅಭಿಮಾನದಿಂದ ಅವನು ಹೇಳುತ್ತಿದ್ದಾನೆ ಎಂದುಕೊಳ್ಳುವ ಧರ್ಮರಾಜ, ಅರ್ಜುನನಿಗೆ ಕೃಷ್ಣ ನೀಡಿದ ಗೀತೋಪದೇಶವನ್ನು ನಂಬುವನೆ? ಆದರಿಂದ 'ಶಾಸನಂ ವಚಃ' ಎಂದು ಪಾಠವಲ್ಲ, 'ಶಾಶ್ವತಂ ವಚಃ' ವೇದವಾಕ್ಯ. ಇದು ಅಪೌರುಷೇಯ. ಅವಿಶ್ವಾಸಯೋಗ್ಯವಲ್ಲ. 'ಯುದ್ಧದಲ್ಲಿ ಕಾಲಾಳುಸೈನ್ಯವನ್ನು ಕೊಂದರೆ ಚಾತುರ್ಮಾಸ್ಯ ಯಾಗದ ಫಲ' ಎಂದು ಮುಂತಾಗಿ ವೇದವಾಕ್ಯವಿದೆ. ಅದೂ ನನಗೆ ಮನಃಸಮಾಧಾನ ನೀಡದು ಎಂದು ಧರ್ಮರಾಜ ಹೇಳುತ್ತಾನೆ. ೧೯೮

೧.೯.೪೩ ನನ್ನ ತೀಕ್ಷ್ಣವಾದ ಬಾಣಗಳಿಂದ ಶ್ರೀಕೃಷ್ಣನ ಕವಚ ಒಡೆದು ಚೂರಾಯಿತು. ಮೈಯೆಲ್ಲ ನೆತ್ತರಿನಿಂದ ತೊಯ್ದಿತೆಂದು ಭೀಷ್ಮರು ಹೇಳಿದರೆ ಅದು ಭಗವಂತನ ಸ್ತುತಿಯಾಗುವುದೆ? ಅದರಿಂದ ಸ್ಕಂದ ಪುರಾಣ ಹೇಳುತ್ತದೆ, ಶ್ರೀಕೃಷ್ಣ ಅಸುರಮೋಹನಕ್ಕಾಗಿ ಹಾಗೆ ತೋರಿಕೊಳ್ಳುವನೆಂದು. ಇದು ಸ್ತುತಿಯೆ.

★ ಭೀಷ್ಮ ಶ್ರೀಕೃಷ್ಣನನ್ನು ಕಣ್ಣಾರೆ ಕಾಣುತ್ತಲೆ ಶರೀರತ್ಯಾಗ ಮಾಡಿದರೂ ವೈಕುಂಠಕ್ಕೆ ಹೋಗಲಿಲ್ಲ. ಇನ್ನೂ ಪ್ರಾರಬ್ಧ ಕರ್ಮವಿದ್ದುದರಿಂದ ಶರೀರ ತ್ಯಾಗ ಕ್ಷಣದಲ್ಲಿ ಅವನ ಅಂತರಂಗದಲ್ಲಿ ಶ್ರೀಕೃಷ್ಣ ಮರೆಯಾದ. ಈ ವಿಸ್ಮರಣೆಯ ಫಲವಾಗಿ ಅವನು ತನ್ನ ಮೂಲರೂಪವಾದ ದ್ಯು ಎಂಬ ವಸುವಿನಲ್ಲಿ ಲೀನನಾದ. ೧೯೯

೧.೧೦.೪ 'ಪ್ರಣಿಧ್ಯುಪಾತ್ತಾಂ ಗಾಂ ಶಶಾಸ' ಎಂದು ಪಾಠ. 'ಪರಿಧ್ಯುಪಾತ್ತಾಂ' ಎಂದಲ್ಲ. ಪ್ರಣಿಧಿಗಳೆಂದರೆ ಅಮಾತ್ಯ, ಮಂತ್ರಿ, ದೂತ, ಅಂಗರಕ್ಷಕ, ಪುರೋಹಿತ, ರಾಜಧಾನಿ, ದೇಶ ಹೀಗೆ ಏಳು ರಾಜ್ಯಾಂಗಗಳೆಂದು ಬ್ರಹ್ಮಪುರಾಣ ಹೇಳಿದೆ. ಏಳು ರಾಜ್ಯಾಂಗಗಳಿಂದ ಯುಕ್ತವಾದ ರಾಜ್ಯವನ್ನು ಧರ್ಮರಾಜ ಆಳಿದ. ೨೦೧

೧.೧೦.೨೦ 'ನಾನುರೂಪಾನುರೂಪಾಶ್ಚ ನಿರ್ಗುಣಸ್ಯ ಗುಣಾತ್ಮನಃ' ಬ್ರಾಹ್ಮಣರು ಕೃಷ್ಣನಿಗೆ 'ನಿನಗೆ ಸುಖವಾಗಲೆ'ಂದು ಹರಸುವುದು ಅವನು ನಿತ್ಯ ಸುಖಿಯಾದ್ದರಿಂದ ಅನನುರೂಪವೂ ಹೌದು. ಭಕ್ತರ ಸಮಾಗಮ ವಿಯೋಗಗಳಿಂದ ಅವನಿಗೆ ಸುಖದುಃಖಗಳಾಗುವುದರಿಂದ ಅನುರೂಪವೂ ಹೌದೆಂದು ಕೆಲವರು ವ್ಯಾಖ್ಯಾನಿಸುತ್ತಾರೆ. ಮಹಾಲಕ್ಷ್ಮಿಯಂಥ ಭಕ್ತರಿಲ್ಲ. ಅವಳ ಆಲಿಂಗನದಿಂದಲೂ ಸುಖಪಡೆಯದ ಸ್ವರಮಣನಾದ ಕೃಷ್ಣನಿಗೆ ಭಕ್ತಸಮಾಗಮದಿಂದ ಸುಖ ಉಂಟೆ? ನಿರ್ಗುಣನಾದ ಭಗವಂತ ಗುಣಾತ್ಮಕ ಹೇಗೆ? ಅದಕ್ಕೆ ಹೀಗೆ ಹೇಳಬೇಕು. ಗುಣಕಾರ್ಯವಾದ ಬ್ರಹ್ಮಾಂಡದೊಳಗೆ ವ್ಯಾಪಿಸಿದ ಭಗವದ್ರೂಪ ಗುಣಾತ್ಮಕ. ಹೊರಗೆ ವ್ಯಾಪಿಸಿದುದು ನಿರ್ಗುಣ. ಒಳಗಿನದು ಬ್ರಹ್ಮಾಂಡ ರಕ್ಷಣಾದಿ ಕಾರ್ಯ ಮಾಡುತ್ತದೆ. ಹೊರಗಿನದು ಮಾಡುವುದಿಲ್ಲ ಎಂದು ಪದ್ಮಪುರಾಣ ಹೇಳುವುದರಿಂದ 'ಪಾಲಿಸು ಅನುಗ್ರಹಿಸು' ಎಂದು ಬ್ರಾಹ್ಮಣರು ಬೇಡುವುದು ಒಳಗಿನ ರೂಪಕ್ಕೆ ಅನುರೂಪ ಹೊರಗಿನ ರೂಪಕ್ಕೆ ಅನನುರೂಪದಂತೆ. ಎರಡು ರೂಪಗಳೂ ಒಂದೇ ಆದರೂ ವಿಶೇಷ ಬಲದಿಂದ ಹೀಗೆ ಹೇಳಿದೆ. ೨೦೨

೧.೧೦.೨೨ ಲಯಕಾಲದಲ್ಲಿ ವಿಷ್ಣುವಿನ ಶಕ್ತಿಗಳು ಸುಪ್ತವಾಗಿದ್ದುವು ಎನ್ನುತ್ತದೆ ಈ ಶ್ಲೋಕ. ಭಗವಂತನ ಸ್ವರೂಪ ಶಕ್ತಿಗೆ ಸುಪ್ತಿ ಇಲ್ಲ. ಅದರಿಂದ ಅವನ ಅಧೀನವಾದ ಸತ್ವಾದಿ ಗುಣಗಳು ತಾವು ಪ್ರಪಂಚರೂಪವಾಗಿ ಪರಿಣಮಿಸುವ ಕಾರ್ಯವನ್ನು ಲಯಕಾಲದಲ್ಲಿ ನಿಲ್ಲಿಸುವುದೇ ಅವುಗಳಿಗೆ ಸುಪ್ತಿ , ತ್ರಿಗುಣಗಳ ಅಭಿಮಾನಿಗಳಾದ ಶ್ರೀ-ಭೂ-ದುರ್ಗಾದೇವಿಯರೂ ಗುಣಗಳನ್ನು ಪರಿಣಾಮಗೊಳಿಸುವ ಕಾರ್ಯವನ್ನು ನಿಲ್ಲಿಸಿ ಹರಿಯಲ್ಲಿಯೆ ರಮಿಸುವುದು ಅವರಿಗೆ ಸುಪ್ತಿ. ೨೦೩

೧.೧೦.೨೩ ಜೀವಮಾಯೆ ಎಂದರೆ ಜೀವರನ್ನು ಸತ್ವಾದಿಗುಣಗಳಿಂದ ಬಂಧಿಸುವ ಸತ್ವಾದ್ಯಭಿಮಾನಿ ಶ್ರೀಭೂದುರ್ಗಾರೂಪಗಳುಳ್ಳ ಮಹಾಲಕ್ಷ್ಮಿ. ಭಗವಂತ 'ಅನಾಮರೂಪ' ನೆಂದರೆ, ಅವನ ಮಹಿಮೆಗಳನ್ನು ಪೂರ್ತಿವರ್ಣಿಸಬಲ್ಲ ನಾಮವಾಗಲಿ ಪ್ರಾಕೃತರೂಪ ವಾಗಲಿ ಇಲ್ಲ ಎಂದರ್ಥ. ೨೦೪

೧.೧೦.೨೬ ಶ್ರೀಕೃಷ್ಣ 'ಸಾತ್ವತ'ನೆನಿಸುವುದು ಪ್ರಾಕೃತ ಸತ್ವಗುಣದಿಂದಲ್ಲ. ಪ್ರಾಕೃತಗುಣ ಯಾವುದೂ ಅವನಲ್ಲಿಲ್ಲ. ಸಾತ್ವಿಕರಿಗೆ ಅನುಗ್ರಹಿಸುವುದರಿಂದಲೆ ಅವನು 'ಸಾತ್ವತ'ನೆನಿಸುತ್ತಾನೆ. 'ಸತ್ವತಃ' ಎಂದು ಪಾಠವಿಟ್ಟುಕೊಂಡು 'ಶುದ್ಧಸತ್ವಮಯವಾದ ಶರೀರ ಮಾತ್ರ ಭಗವಂತನಿಗೆ ಇದೆ. ಸ್ವರೂಪಶರೀರ ಬೇರೆ ಇಲ್ಲ, ತ್ರಿಗುಣಾತ್ಮಕ ಶರೀರವೂ ಇಲ್ಲ ಎಂದು ಕೆಲವರು ಹೇಳುವುದು ಸರಿಯಲ್ಲ. 'ಬ್ರಹ್ಮದರ್ಶನ' ಗ್ರಂಥದ ವಿರೋಧ ಬರುತ್ತದೆ. ಭಗವಂತನಿಗೆ ಸ್ವರೂಪ ಶರೀರಮಾತ್ರವಿದೆ. ೨೦೬

೧.೧೦.೩೧ ಅಸ್ವತಂತ್ರವಾದ ಅಶುಚಿಯಾದ ಸ್ತ್ರೀಜಾತಿಯನ್ನೇ ಕೃಷ್ಣಪತ್ನಿಯರು ಶುದ್ಧೀಕರಿಸಿದರು ಎಂದು ಕೆಲವರ ವ್ಯಾಖ್ಯಾನ. ಉತ್ತಮಸ್ತ್ರೀಯರಿಗೆ ವೇದಾಧಿ ಕಾರವಿರುವುದ ರಿಂದ ಸ್ತ್ರೀಜಾತಿಯೆ ಅಶುಚಿ ಎನ್ನಬಾರದು. ವಸ್ತುತಃ ಈ ಶ್ಲೋಕದಲ್ಲಿ ಕೃಷ್ಣಪತ್ನಿಯರ ಪೂರ್ವಜನ್ಮ ವೃತ್ತಾಂತವಿದೆ. ಅವರು ಅಗ್ನಿಪುತ್ರರು ಕೃಷ್ಣಪತ್ನಿಯರಾಗಲು ಬಯಸಿ ತಪಸ್ಸಿನಿಂದ ಸ್ತ್ರೀಜನ್ಮ ಪಡೆದರೆಂದು ಮಹಾಕೂರ್ಮಪುರಾಣ ಹೇಳಿದೆ.

ಅಗ್ನಿ ಪುತ್ರಾ ಮಹಾತ್ಮಾನಸ್ತಪಸಾ ಸ್ತ್ರೀತ್ವಮಾಪಿರೇ ।
ಭರ್ತಾರಂ ಚ ಜಗದ್ಯೋನಿಂ ವಾಸುದೇವಮಜಂ ವಿಭುಂ ॥

'ಅಗ್ನಿಪುತ್ರರು ತಪಸ್ಸಿನಿಂದ ಸ್ತ್ರೀತ್ವವನ್ನು ಪಡೆದು ಕೃಷ್ಣಪತ್ನಿಯರಾದರು' ಎಂದು. ಅದರಿಂದ ಭಾಗವತವೂ,

'ಏತಾಃ ಪುರಾಸ್ತ್ರೀತ್ವಮವಾಪ್ತಯೇ ಸಮಂ
ನಿರಸ್ತಶೋಕಂಬತ ಸಾಧುಕುರ್ವತೇ'

ಎಂಬ ಮಾತಿನಿಂದ ಇದನ್ನೇ ಹೇಳಿದೆ. ಈ ಕೃಷ್ಣಪತ್ನಿಯರ ಮನೆಗಳಲ್ಲಿ ಕೃಷ್ಣ ಒಂದೊಂದು ರೂಪದಿಂದ ಸದಾ ಇದ್ದುದನ್ನು ನಾರದರು ಪ್ರತ್ಯಕ್ಷ ಕಂಡಿದ್ದಾರೆ ಎಂದು ದಶಮಸ್ಕಂಧದಲ್ಲಿ ವರ್ಣನೆ ಇದೆ. ೨೦೭

೧.೧೦.೩೩ ಶ್ರೀಕೃಷ್ಣ ಹಸ್ತಿನಾವತಿಯಿಂದ ದ್ವಾರಕೆಗೆ ಹೊರಟಾಗ ಅವನಿಗೆ ಶತ್ರುಗಳಿಂದ

ಅಪಾಯ ಬಾರದಿರಲೆಂದು ಧರ್ಮರಾಜ ಚತುರಂಗ ಸೈನ್ಯವನ್ನು ಜೊತೆಗೆ ಕಳಿಸಿದ. ಶ್ರೀಕೃಷ್ಣ ಸರ್ವಶಕ್ತನಾದ ಭಗವಂತ ಎನ್ನುವ ಪ್ರಜ್ಞೆ ತತ್ಕಾಲದಲ್ಲಿ ಅವನಿಗೆ ಮರೆಯಾಗಿತ್ತೆನ್ನಲು ಇದು ಸೂಚಕ. ಇದನ್ನು 'ಸ್ನೇಹಾತ್' ಕೇವಲ ಸ್ನೇಹದಿಂದ ಹೊರತು ಭಕ್ತಿಯಿಂದಲ್ಲ ಎಂದು ಶ್ಲೋಕದಲ್ಲಿ ಸೂಚಿಸಲಾಗಿದೆ. ೨೦೯

೧.೧೦.೩೭ ಶ್ರೀಕೃಷ್ಣ ದ್ವಾರಕೆಗೆ ಬಂದಾಗ ಸಂಜೆಯಾಗಿತ್ತೆನ್ನುವುದನ್ನು 'ಗವಿಷ್ಠೋ ಗಾಂ ಗತಸ್ತದಾ' ಎಂದು ಈ ಶ್ಲೋಕ ಹೇಳುತ್ತಿದೆ. 'ಗವಿ' ಎಂದರೆ ಆಕಾಶದಲ್ಲಿ 'ಸ್ಥ' ಇರುವ ಸೂರ್ಯನು 'ಗಾಂ' ಸಮುದ್ರಜಲವನ್ನು 'ಗತಃ' ಪ್ರವೇಶಿಸಿದ, ಅಸ್ತಂಗತನಾದ ಎಂದರ್ಥ. ೨೦೯

೧.೧೦.೪೬ ಕೃಷ್ಣ ನೀನಿಲ್ಲದ ಒಂದು ಕ್ಷಣವೂ ನಮಗೆ ಕೋಟಿ ವರ್ಷದಷ್ಟು ದೀರ್ಘ ವಾಗಿ ಪರಿಣಮಿಸುವುದು. ಯಾವಾಗ ಎಂದರೆ, ನೀನು ಹಸ್ತಿನಾವತಿಗೆ ಹೋದಾಗಲೂ ದ್ವಾರಕೆಗೆ ಬಂದಾಗಲೂ ಎನ್ನುತ್ತಾರೆ ಯಾದವರು. ಆದರೆ ಕೃಷ್ಣ ಹಸ್ತಿನಾವತಿಗೆ ಹೋದಾಗ ಯಾದವರಿಗೆ ಒಂದು ಕ್ಷಣ ಕೋಟಿ ವರ್ಷವೆನಿಸುವುದು ಸಹಜ. ದ್ವಾರಕೆಗೆ ಬಂದಾಗಲೂ ಹಾಗಾಗುವುದು ಹೇಗೆ? ಅದಕ್ಕೆ ಯಾದವರು ತಮ್ಮ ಜೊತೆಗೆ ಪಾಂಡವರನ್ನು ಸೇರಿಸಿಕೊಂಡು 'ನಮಗೆ' ಎನ್ನುತ್ತಿದ್ದಾರೆ ಎನ್ನಬೇಕು. ಕೃಷ್ಣ ಹಸ್ತಿನಾವತಿಗೆ ಹೋದಾಗ ನಮಗೆ ಯಾದವರಿಗೆ, ದ್ವಾರಕೆಗೆ ಬಂದಾಗ ನಮಗೆ ಪಾಂಡವರಿಗೆ ಕ್ಷಣವೂ ಕೋಟಿ ವರ್ಷವಾಗುತ್ತದೆ ಎನ್ನುತ್ತಿದ್ದಾರೆ. ೨೧೦

೧.೧೦.೭೫ ಶ್ರೀಕೃಷ್ಣ ಸ್ತ್ರೀಯರ ಒಡನಾಟದಲ್ಲಿದ್ದರೂ ಅದರ ಆಸಕ್ತಿಯಿಂದ ದೂರವಿದ್ದ ಅವನ ಸಾಕ್ಷಾತ್ಕಾರ ಪಡೆದ ಜ್ಞಾನಿಯಂತೆ ಎಂದು ಈ ಶ್ಲೋಕ ಹೇಳುತ್ತಿದೆ. ಇದು ವ್ಯತ್ಯಾಸ ದೃಷ್ಟಾಂತ. ಮುಖಕ್ಕೆ ಚಂದ್ರ ದೃಷ್ಟಾಂತವೇ ಹೊರತು ಚಂದ್ರನಿಗೆ ಮುಖ ದೃಷ್ಟಾಂತವಲ್ಲ, ಆದರಿಂದ ಮುಖದಂತೆ ಚಂದ್ರ ಎಂದರೆ ವ್ಯತ್ಯಾಸ. ಹಾಗೇ ಇಲ್ಲಿ ವ್ಯತ್ಯಾಸ ವಾಗಿದೆ. ಆದರ ಅಭಿಪ್ರಾಯ ಹೀಗೆ— ಕೃಷ್ಣನ ಸಾಕ್ಷಾತ್ಕಾರ ಪಡೆದ ಜ್ಞಾನಿಯೆ ನಿರ್ಲೇಪ ನೆಂದ ಮೇಲೆ ಕೃಷ್ಣನ ಬಗ್ಗೆ ಏನು ಹೇಳಬೇಕು ಎಂದು. ವ್ಯತ್ಯಾಸ ದೃಷ್ಟಾಂತ , ಅನನ್ವಯ ದೃಷ್ಟಾಂತ, ಪ್ರಸಿದ್ಧ ದೃಷ್ಟಾಂತ, ಅಭೂತ ದೃಷ್ಟಾಂತ, ಸರ್ವಸಾಂಹಾರಕ ದೃಷ್ಟಾಂತ ಎಂದು ದೃಷ್ಟಾಂತಗಳು ಐದು ವಿಧವೆಂದು ಬ್ರಹ್ಮಪುರಾಣ ಹೇಳಿದೆ. 'ವ್ಯಾಪ್ತವಾದ ಜ್ಞಾನಪ್ರಕಾಶ ಉಳ್ಳ ವ್ಯಾಸರು ಅನಂತಾಕಾಶದಂತೆ ಎಲ್ಲವನ್ನೂ ನೋಡುತ್ತಾರೆ'— ಇಲ್ಲಿ ಆಕಾಶದಂತೆ, ನೋಡುತ್ತಾರೆ ಎಂದು ಅನ್ವಯವಿಲ್ಲ, ಅನಂತಾಕಾಶದಂತೆ ವ್ಯಾಪ್ತವಾದುದು

ಜ್ಞಾನ. ಅಂಥ ಜ್ಞಾನಉಳ್ಳ ವ್ಯಾಸರು ಎಲ್ಲವನ್ನೂ ನೋಡುತ್ತಾರೆ. ಇದು ಅನನ್ವಯ ದೃಷ್ಟಾಂತ. ಚಂದ್ರನಂಥ ಮುಖ ಎಂಬುದು ಪ್ರಸಿದ್ಧ ದೃಷ್ಟಾಂತ. ಸಾವಿರ ಸೂರ್ಯರು ಒಮ್ಮೆಲೆ ಬೆಳಗಿದಂತೆ ಭಗವಂತನ ಪ್ರಕಾಶ ಎಂದರೆ ಅಭೂತ ದೃಷ್ಟಾಂತ. ಏಕೆಂದರೆ ಒಮ್ಮೆಲೆ ಸಾವಿರ ಸೂರ್ಯರು ಬೆಳಗುವುದು ಅಸಂಭವ. ಹೊಗೆ ಇದ್ದಲ್ಲೆಲ್ಲ ಬೆಂಕಿ, ಅಡಿಗೆ ಮನೆಯಲ್ಲಿ ಹೇಗೋ ಹಾಗೆ ಎಂಬುದು, ಬೆಂಕಿಯ ವಿಷಯದಲ್ಲಿ ಮಾತ್ರವಲ್ಲದೆ ಹೊಗೆಯ ವಿಷಯದಲ್ಲಿಯೂ ಸಾಮ್ಯವಿರುವುದರಿಂದ, ಸರ್ವಸಾಂಹಾರಕ ದೃಷ್ಟಾಂತ. ೨೧೧

೧.೧೦.೭೬ 'ಮತಯೋ ಯಥಾ' ಎಂಬಲ್ಲಿ ಯಥಾ ಶಬ್ದವಿದ್ದರೂ 'ಬುದ್ಧಿಗಳಂತೆ' ಎಂದು ದೃಷ್ಟಾಂತವಲ್ಲ. ವಿಷಯಾಸಕ್ತರ ಬುದ್ಧಿಗಳು ಹೇಗೆ ಕೃಷ್ಣನನ್ನು ಸರಿಯಾಗಿ ತಿಳಿಯುವುದಿಲ್ಲವೋ ಹಾಗೇ ಕೃಷ್ಣಪತ್ನಿಯರೂ ಅವನನ್ನು ಸ್ತ್ರೀಲೋಲನೆಂದು ತಪ್ಪಾಗಿಯೆ ತಿಳಿದರು ಎಂದು ಕೆಲವರ ವ್ಯಾಖ್ಯಾನವಿದೆ. ಆದರೆ ಬುದ್ಧಿಗಳು ತಿಳಿಯುವುದಿಲ್ಲ, ಬುದ್ಧಿವಂತರು ತಿಳಿಯುತ್ತಾರೆ. ಮತ್ತು ಬುದ್ಧಿಗೆ ವಿಷಯಾಸಕ್ತರ ಬುದ್ಧಿ ಎಂದು ವಿಶೇಷಣ ಶ್ಲೋಕದಲ್ಲಿಲ್ಲ. ಅದರಿಂದ 'ಯಥಾ' ಎಂದರೆ ಅನುಸಾರವಾಗಿ ಎಂದರ್ಥ. ತಮ್ಮ ಬುದ್ಧಿಗಳಿಗನುಸಾರವಾಗಿ ಕೃಷ್ಣಪತ್ನಿಯರು ಕೃಷ್ಣನನ್ನು ಸ್ತ್ರೀಲೋಲನೆಂದು ತಿಳಿದರು. ಹಾಗಾದರೆ 'ಯಥಾಮತಿ' ಎಂದು ಸಮಾಸವಾಗಬೇಕಾಗಿತ್ತು. ನಿಜ. ವೇದದಲ್ಲಿ ವ್ಯಾಕರಣ ನಿಯಮಗಳು ಸಡಿಲಗೊಳ್ಳುವುದು ವ್ಯಾಕರಣಕ್ಕೆ ಸಮ್ಮತ. ಭಾಗವತ ವೇದತುಲ್ಯವಾದ್ದರಿಂದ ಈ ಸಮಾಸ ನಿಯಮವನ್ನೂ ಪಾಲಿಸಿಲ್ಲ. ೨೦೩

★ ಹೊಕ್ಕಳ ಕುಡಿಯನ್ನು ಕತ್ತರಿಸುವ ಮುನ್ನ ಅಶೌಚ ಬಂದಿರುವುದಿಲ್ಲ. ಅದು ಪ್ರಜಾತೀರ್ಥವೆಂಬ ಪುಣ್ಯಕಾಲ. ಆಗ ಅನ್ನದಾನ ಮಾಡಬಹುದು. ಆಗ ನೀಡುವ ಎಲ್ಲ ದಾನಗಳಿಗೂ ಅಕ್ಷಯ ಫಲವಿದೆ. ಅಥವಾ ಅಶೌಚದಲ್ಲಿಯೂ ಹಸಿ ಅಕ್ಕಿಯ ದಾನ ರೂಪದಿಂದ ಅನ್ನದಾನ ಸಾಧ್ಯವಿದೆ.

೧.೧೧.೧೯ ಪರೀಕ್ಷಿತ ರಾಮನಂತೆ ಸತ್ಯಸಂಧ ಎಂದರೆ ರಾಮನೂ ಪರೀಕ್ಷಿತನಷ್ಟೇ ಸತ್ಯಸಂಧ ಎಂದು ತಪ್ಪು ತಿಳಿಯುವ ಸಂಭವವಿದೆ. ಅದರಿಂದ ರಾಮನಂತೆ ಎಂಬುದು ಪ್ರಸಿದ್ಧ ದೃಷ್ಟಾಂತವಲ್ಲ, ಅಧಿಕ ದೃಷ್ಟಾಂತ. ರಾಮನ ಸತ್ಯಸಂಧತೆ ಬಹಳ ಅಧಿಕ. ಅದಕ್ಕೆ ಸ್ವಲ್ಪ ಮಾತ್ರ ಸದೃಶ ಪರೀಕ್ಷಿತನ ಸತ್ಯಸಂಧತೆ ಎಂದರ್ಥ. ಬ್ರಹ್ಮಪುರಾಣದಲ್ಲಿ ಊನ ಸಾಮ್ಯ ಅಧಿಕ ದೃಷ್ಟಾಂತಗಳಿಗೆ ಉದಾಹರಣೆಗಳು ಉಕ್ತವಾಗಿವೆ. 'ವಿಷ್ಣು

ಸೃಷ್ಟಿಕಾಲದಲ್ಲಿ ತನ್ನುದರದೊಳಗಿನ ಜಗತ್ತನ್ನು ಹೊರಗೆ ಹಾಕಿ ಲಯಕಾಲದಲ್ಲಿ ನುಂಗುತ್ತಾನೆ, ಜೇಡರ ಹುಳದಂತೆ' ಎನ್ನುವುದು ಊನದೃಷ್ಟಾಂತ. ವಿಷ್ಣುವಿಗೆ ವಿಷ್ಣುವಿನ ದೃಷ್ಟಾಂತ ಕೊಟ್ಟರೆ ಅದು ಸಮದೃಷ್ಟಾಂತ. ಪರೀಕ್ಷಿತನಿಗೆ ವಿಷ್ಣುವಿನ ದೃಷ್ಟಾಂತ ಕೊಟ್ಟದ್ದು ಅಧಿಕ ದೃಷ್ಟಾಂತ. ೨೧೫

೧.೧೧.೩೧ 'ಕಾಷ್ಠಾಭಿಃ' ದಿಕ್ಕುಗಳಿಂದ, ಅಂದರೆ ದಿಗ್ದೇವತೆಗಳಿಂದ ಚಂದ್ರನಲ್ಲಿ ಕಲೆಗಳು ತುಂಬಿಕೊಳ್ಳುತ್ತವೆ ಎಂದರ್ಥ. ದಿಗ್ದೇವತೆಗಳೂ ಗೋವುಗಳೂ ಸರಸ್ವತಿಯೂ ಚಂದ್ರನಲ್ಲಿ ಕಲೆಗಳನ್ನು ತುಂಬಿಸುತ್ತಾರೆ ಎಂದು ಗರುಡಪುರಾಣದಲ್ಲಿ ಹೇಳಿದ್ದರಿಂದ ಕಾಷ್ಠಾ ಎಂದರೆ ದಿಕ್ಕುಗಳು. ೨೧೬

★ ಯಜ್ಞಮಾಡಿದ ಬಳಿಕ ಯಾಗಶಾಲೆಯಲ್ಲಿ ಉಳಿದ ಸಂಪತ್ತನ್ನು ಅಲ್ಲಿಯೆ ಬಿಟ್ಟು ಹೋಗಬೇಕೆಂದು ವಿಧಿ ಇದೆ. 'ಉಚ್ಛೇಷಣ ಭಾಗೋ ವೈ ರುದ್ರಃ' ಎಂಬಂತೆ ಅದು ರುದ್ರನಿಗೇ ಸೇರುತ್ತದೆ. ಪಾಂಡವರು ರುದ್ರಾಂತರ್ಗತ ಪರಶುರಾಮನನ್ನಾರಾಧಿಸಿ ಆ ಸಂಪತ್ತನ್ನು ತಂದು ಅವನ ಪ್ರೀತ್ಯರ್ಥವಾಗಿಯೆ ಯಾಗ ಮಾಡಿದರು.

೧.೧೨.೫ 'ಮುಖ್ಯಪ್ರಾಣ ಬಂದಾಗ ಶರೀರೇಂದ್ರಿಯಾಭಿಮಾನಿದೇವತೆಗಳು ಎದ್ದು ಬಂದು ಇದಿರುಗೊಂಡಂತೆ, ವಿದುರ ಬಂದಾಗ ಪಾಂಡವರು ಎದ್ದು ಬಂದು ಅವನನ್ನು ಇದಿರುಗೊಂಡರು'–ಇಲ್ಲಿ ದೃಷ್ಟಾಂತದ ಅಭಿಪ್ರಾಯ ಹೀಗೆ. ಒಮ್ಮೆ ಇಂದ್ರಿಯಾಭಿ ಮಾನಿಗಳು ನಾ ಮೇಲು ನಾ ಮೇಲೆಂದು ಮುಖ್ಯಪ್ರಾಣನೊಂದಿಗೆ ಸ್ಪರ್ಧೆ ನಡೆಸಿದರು. ಮುಖ್ಯಪ್ರಾಣನಿಲ್ಲದಿದ್ದರೂ ನಾವೇ ಶರೀರಧಾರಣಾದಿಗಳನ್ನು ಮಾಡಬಲ್ಲೆವೆಂದುಕೊಂಡು ಅದನ್ನು ತೋರಿಸಲು ಬ್ರಹ್ಮನ ವಿರಾಡ್‌ದೇಹವನ್ನು ಒಬ್ಬೊಬ್ಬರಾಗಿ ಪ್ರವೇಶಿಸಿದ್ದರು. ಆದರೂ ದೇಹ ಎದ್ದೇಳಲಿಲ್ಲ. ಅವರಿಗೆ ತಮ್ಮ ಅಶಕ್ತಿಯ ಅರಿವಾಯಿತು. ಮುಖ್ಯಪ್ರಾಣನ ಪ್ರವೇಶವನ್ನು ಬಯಸಿದರು. ಅವನು ಬಂದಾಗ ಶರೀರ ಚೈತನ್ಯಪೂರ್ಣನಾಗಿ ಎದ್ದಿತು. ಇಂದ್ರಿಯಾಭಿಮಾನಿಗಳು ಅವನನ್ನು ಇದಿರುಗೊಂಡು ಸತ್ಕರಿಸಿದರು ಎಂದು. ಐತರೇಯೋಪನಿಷತ್ತಿನಲ್ಲಿ (೧.೪.೮) ಹೇಳಿದೆ. 'ಪ್ರಾಣಾನ್' ಎಂಬಲ್ಲಿ ಬಹುವಚನ ಪಂಚರೂಪವಿವಕ್ಷೆ ಯಿಂದ 'ತನ್ವಃ' ಎಂಬಲ್ಲಿಯೂ ಬಹುವಚನ ಇಂದ್ರಿಯಾಭಿಮಾನಿಗಳು ಬಹಳ ಎಂದು. ೨೧೮

೧.೧೨.೧೨ ವಿದುರ ಯದುಕುಲಕ್ಷಯವನ್ನು ಕಣ್ಣಾರೆ ಕಂಡಿದ್ದರೂ ಪಾಂಡವರಿಗೆ ಅದನ್ನು ಹೇಳಲಿಲ್ಲ ಎಂದು ಎಲ್ಲ ವ್ಯಾಖ್ಯಾನಕಾರರು ಹೇಳುವುದು ಭಾರತ,

ಪದ್ಮಪುರಾಣಾದಿ ಗಳಿಗೆ ವಿರುದ್ಧ. ಇಪ್ಪತ್ತಾರು ವರ್ಷಗಳ ಬಳಿಕ ಯದುಕುಲ ಕ್ಷಯವೆಂದು ವಿಪ್ರಶಾಪವಿದ್ದಿತು. ಅದನ್ನು ಉದ್ಧವನಿಂದ ಕೇಳಿತಿಳಿದ ವಿದುರ ತೀರ್ಥಯಾತ್ರೆಯನ್ನು ಒಡನೆ ಮೊಟಕುಗೊಳಿಸಿ ಬಂದಿದ್ದಾನೆ. ಆತುರದಿಂದ ಧೃತರಾಷ್ಟ್ರಾದಿಗಳನ್ನು ಕರೆದುಕೊಂಡು ಬದರಿಗೆ ಹೋಗಿ, ಯದುಕುಲ ನಾಶಕ್ಕಿಂತ ಇಪ್ಪತ್ತೊಂದು ವರ್ಷ ಮೊದಲೇ ಧರ್ಮರಾಜನ ಶರೀರದಲ್ಲಿ ಯೋಗಬಲದಿಂದ ಪ್ರವೇಶಿಸಿ ಶರೀರತ್ಯಾಗ ಮಾಡಿದ್ದಾನೆ. ಅದರಿಂದ ಆತ ಮುಂದೆ ಆಗಲಿದ್ದ ಯದುಕುಲ ನಾಶವನ್ನು ಕೇಳಿ ತಿಳಿದೂ ಹೇಳಲಿಲ್ಲ ಎಂದರ್ಥ ಹೇಳಬೇಕು. ೨೧೯

೧.೧೨.೧೫ ಯಮನು ಮಾಂಡವ್ಯ ಮುನಿಶಾಪದಿಂದ ಭೂಮಿಯಲ್ಲಿ ವಿದುರನಾಗಿ ನೂರು ವರ್ಷಕಾಲವಿದ್ದ. ಆ ಸಮಯದಲ್ಲಿ ಯಮಲೋಕದಲ್ಲಿ ಅವನ ಕರ್ತವ್ಯನಿರ್ವಹಣೆ ಮಾಡಿದವನು 'ಅರ್ಯಮ' ಸೂರ್ಯ ಎಂದು ಭಾಗವತ ಹೇಳಿದಂತೆ ಕಾಣುತ್ತದೆ. ಎಲ್ಲ ಬೇರೆ ವ್ಯಾಖ್ಯಾನಕಾರರೂ ಹಾಗೇ ವ್ಯಾಖ್ಯಾನ ಮಾಡಿದ್ದಾರೆ. ಆದರೆ ದೇವತೆಗಳು ಭೂಮಿಯಲ್ಲಿ ಅವತರಿಸುವಾಗ ಅಂಶರೂಪ ದಿಂದ ಅವತರಿಸುತ್ತಾರೆ ಹೊರತು ಮೂಲರೂಪದಿಂದಲ್ಲ ಎಂದು ಸ್ಕಂದಪುರಾಣ ಹೇಳಿದೆ. ಅದರಿಂದ ಒಂದು ಅಂಶದಿಂದ ಯಮ ವಿದುರನಾದಾಗಲೂ ಮೂಲರೂಪದಿಂದ ಯಮಲೋಕದಲ್ಲಿ ಅವನೇ ಇದ್ದಾನೆ. ಅದರಿಂದ ಅರ್ಯಮ ಎಂದರೆ ಸೂರ್ಯಪುತ್ರ ಯಮನೆಂದೇ ಗ್ರಹಿಸಬೇಕು. ೨೨೧

೧.೧೨.೨೦ ವಿದುರ ಧೃತರಾಷ್ಟ್ರನಿಗೆ ವೈರಾಗ್ಯೋಪದೇಶ ನೀಡುತ್ತ ಹೇಳುತ್ತಾನೆ ನಮಗೆಲ್ಲರಿಗೂ ಮರಣವನ್ನೀವ ಭಗವಾನ್ ಕಾಲನನ್ನು ಯಾರೂ ತಡೆಯಲಾರರು ಎಂದು. ಇಲ್ಲಿ ಯಾರು ಈ ಭಗವಾನ್ ಕಾಲ ಎಂದರೆ ವಿಷ್ಣುವೆ. ಹಾಗೆ ಸ್ಕಂದಪುರಾಣ ಹೇಳಿದೆ. ೨೨೩

೧.೧೨.೨೮ 'ಸ್ವೈರಜ್ಞಾತಗತಿಃ' ಇಲ್ಲಿ 'ಬಂಧುಗಳಿಗೂ ತಿಳಿಯಲಾಗದ ರಹಸ್ಯ ಪ್ರದೇಶದಲ್ಲಿ ವನವಾಸ ಮಾಡೆ'ಂದು ವಿದುರ ಧೃತರಾಷ್ಟ್ರನಿಗೆ ಉಪದೇಶ ನೀಡುವಂತೆ ಕಾಣು ತ್ತದೆ. ಬೇರೆ ವ್ಯಾಖ್ಯಾನಕಾರರೂ ಹಾಗೇ ಹೇಳಿದ್ದಾರೆ. ಆದರೆ ಮಹಾಭಾರತದಲ್ಲಿ ಧೃತರಾಷ್ಟ್ರ ಪಾಂಡವರಿಂದ ಅನುಮತಿ ಪಡೆದು ಅವರಿಗೆ ತಿಳಿದಿರುವ ಪ್ರದೇಶದಲ್ಲಿಯೆ ಆಶ್ರಮ ಕಟ್ಟಿಕೊಳ್ಳುತ್ತಾನೆ. ಅದರಿಂದ 'ಸ್ವೈಃ ಅಜ್ಞಾತಗತಿಃ' ಅಲ್ಲ, 'ಸ್ವೈರ-ಜ್ಞಾತಗತಿ ತನ್ನಿಚ್ಛೆಯಂತೆ ಪಾಂಡವರು ಮಾತ್ರ ತಿಳಿದ ಏಕಾಂತ ಪ್ರದೇಶದಲ್ಲಿ ವಾಸಮಾಡೆಂದು ವಿದುರ ಹೇಳುತ್ತಿದ್ದಾನೆ. ೨೨೪

೧.೧೨.೩೧ 'ಧರ್ಮರಾಜ ಒಂದು ದಿನ ಧೃತರಾಷ್ಟ್ರ ಮುಂತಾದವರನ್ನು ನಮಿಸಲು ಹೋದಾಗ ಅರಮನೆಯಲ್ಲಿ ಅವರು ಕಾಣಲಿಲ್ಲ. ವಿಚಾರಿಸಿದಾಗ ತಿಳಿಯಿತು ಅವರು ಅರ್ಧರಾತ್ರಿಯಲ್ಲಿ ಯಾರಿಗೂ ಹೇಳದೆ ಕಾಡಿಗೆ ಹೊರಟು ಹೋಗಿದ್ದರು ಎಂದು'. ಹೀಗೆ ಬೇರೆಲ್ಲ ವ್ಯಾಖ್ಯಾನಕಾರರೂ ವಿವರಣೆ ನೀಡಿದ್ದಾರೆ. ಆದರೆ ಇದು ಮಹಾಭಾರತಕ್ಕೆ ವಿರುದ್ಧ, ಸ್ಕಂದಪುರಾಣಕ್ಕೂ ವಿರುದ್ಧ. ಧೃತರಾಷ್ಟ್ರ ಧರ್ಮರಾಜನ ಅನುಮತಿ ಪಡೆದೇ ವನವಾಸ ಕೈಗೊಂಡಿದ್ದ. ಅದರಿಂದ ಹೀಗೆ ಹೇಳಬೇಕು— ಧೃತರಾಷ್ಟ್ರ ವನವಾಸಕ್ಕೆ ಹೋದ ಬಳಿಕ ಅರಮನೆಯಲ್ಲಿ ಅವನಿದ್ದ ಸ್ಥಳಕ್ಕೆ ಪ್ರತಿದಿನ ಧರ್ಮರಾಜ ಹೋಗಿ ತಲೆಬಾಗುತ್ತಿದ್ದ. ಒಂದು ದಿನ ಹಾಗೆ ನಮಿಸುವಾಗ ಅವನ ಜ್ಞಾನದೃಷ್ಟಿಗೆ ಧೃತರಾಷ್ಟ್ರ ಮುಂತಾದವರು ಜೀವಂತವಾಗಿ ಕಾಡಿನಲ್ಲಿಲ್ಲವೆಂದು ಭಾಸವಾಯಿತು. ಅದರಿಂದ ಈ ಶ್ಲೋಕ 'ಅರಮನೆಯಲ್ಲಿ ಅವರು ಕಾಣಲಿಲ್ಲ' ಎಂದು ಹೇಳುತ್ತಿಲ್ಲ. 'ಕಾಡಿನಲ್ಲಿ ಜೀವಂತವಾಗಿರುವಂತೆ ಕಾಣಲಿಲ್ಲ' ಎನ್ನುತ್ತಿದೆ.

'ನಚಾಪಶ್ಯತ್ ಪಿತರೌ ಸೌಬಲೀಂ ಚ' ಎಂಬಲ್ಲಿ ಮೇಲುನೋಟಕ್ಕೆ ಪಿತರೌ ಎಂದರೆ ವಿದುರ ಧೃತರಾಷ್ಟ್ರರು, ಸೌಬಲಿ ಎಂದರೆ ಗಾಂಧಾರಿ ಎಂದು ಭಾಸವಾಗುತ್ತದೆ. ವಸ್ತುತಃ ಮಹಾಭಾರತದಲ್ಲಿ ಹೇಳಿದಂತೆ ಧೃತರಾಷ್ಟ್ರ ಅನ್ನ ಸತ್ಯಾಗ್ರಹ ಮಾಡಿ ಹೇಗೋ ಕಷ್ಟದಿಂದ ಧರ್ಮರಾಜನ ಅನುಮತಿ ಪಡೆದು ವಿದುರ ಗಾಂಧಾರಿ ಕುಂತಿ ಸಂಜಯರೊಂದಿಗೆ ಬದರಿಕಾಶ್ರಮಕ್ಕೆ ತೆರಳಿ ಮೂರು ವರ್ಷಕಾಲ ವಾಸಮಾಡಿದ. ಆಗ ಪಾಂಡವರು ಅವರನ್ನು ಆಗಾಗ ನೋಡಲು ಬರುತ್ತಿದ್ದರು. ಹಾಗೆ ಒಮ್ಮೆ ಬಂದಾಗ ವಿದುರ ಶರೀರ ತ್ಯಾಗಮಾಡಿ ಧರ್ಮರಾಜನಲ್ಲಿ ಪ್ರವೇಶಿಸಿದ್ದ. ಅದರಿಂದ ಅರಮನೆಯಲ್ಲಿ ಧೃತರಾಷ್ಟ್ರ ಮುಂತಾದವರನ್ನು ಹುಡುಕುವ ಪ್ರಸಂಗವೆ ಇಲ್ಲ. ಪಿತರೌ ಎಂದರೆ ಕುಂತಿ ಧೃತರಾಷ್ಟ್ರರು, ಸೌಬಲಿ ಎಂದರೆ ಗಾಂಧಾರಿ. ಮೂವರೂ ಕಾಳ್ಗಿಚ್ಚಿನಲ್ಲಿ ಬೆಂದು ಹೋದರು. ಧರ್ಮರಾಜನಿಗೆ ಈಗ ಎಂದಿನಂತೆ ಅವರು ಜೀವಂತರಾಗಿ ಜ್ಞಾನ ದೃಷ್ಟಿಗೆ ಗೋಚರಿಸಲಿಲ್ಲ, ಅದರಿಂದ ಕಳವಳಗೊಂಡ. ೨೨೫

೧.೧೨.೩೨ ಧರ್ಮರಾಜ ಕಳವಳದಿಂದ 'ಧೃತರಾಷ್ಟ್ರನೆಲ್ಲಿ? ಕುಂತಿ ಗಾಂಧಾರಿಯರೆಲ್ಲಿ?' ಎಂದು ಸಂಜಯನನ್ನು ಕೇಳುತ್ತಾನೆ. ಇದಕ್ಕೂ 'ಅರಮನೆಯಲ್ಲಿ ಕಾಣುತ್ತಿಲ್ಲ, ಎಲ್ಲಿಗೆ ಹೋದರು?' ಎಂದು ಕೇಳುವ ಅಭಿಪ್ರಾಯವಲ್ಲ. ವನವಾಸ ಮಾಡುತ್ತಿದ್ದಾರೆ ಎಂದು ಗೊತ್ತು. ಸ್ವತಃ ನೋಡಿಯೂ ಬಂದಿದ್ದಾನೆ. ಯಾವ ಪರಲೋಕದಲ್ಲಿ ಇದ್ದಾರೆ, ಎಲ್ಲಿ ಹೇಗೆ ಮರಣ ಹೊಂದಿದರೆಂದೇ ಪ್ರಶ್ನೆ. ಆಗ

ಸಂಜಯನೂ ಅಳುತ್ತ ನಾನೂ ನಿಮ್ಮಂತೆಯೆ ಮೋಸಹೋಗಿದ್ದೇನೆ, ಎನ್ನುತ್ತಾನೆ. ವಸ್ತುತಃ ಧೃತರಾಷ್ಟ್ರಾದಿಗಳು ಕಾಡಿನಲ್ಲಿ ಮರಣಹೊಂದಿದ್ದನ್ನು ಕಂಡೇ ಅದನ್ನು ಪಾಂಡವರಿಗೆ ತಿಳಿಸಲೆಂದೇ ಬಂದಿದ್ದಾನೆ ಸಂಜಯ. ದುಃಖದಿಂದ ಹೇಳಲಾರದೆ ಪ್ರಲಾಪ ಮಾಡುತ್ತ ತಾನು ಮೋಸ ಹೋದೆನೆನ್ನುತ್ತಾನೆ. ಬ್ರಹ್ಮಾಂಡ ಪುರಾಣದಲ್ಲಿ ಇದು ಸ್ಪಷ್ಟವಿದೆ. ಭಾಗವತಕ್ಕೂ ಅದೇ ಅಭಿಪ್ರಾಯ ಹೇಳಬೇಕು.

ಭಾಗವತದಲ್ಲಿ ಇನ್ನೊಂದು ಸಮಸ್ಯೆ— 'ಪಿತೃವ್ಯಃ ಕ್ವ ಗತಃ? ದೊಡ್ಡಪ್ಪನೆಲ್ಲಿ? ಎಂದು ಧರ್ಮರಾಜ ಕೇಳುತ್ತಾನೆ. ಯಾರು ಹಾಗೆಂದರೆ? ಧೃತರಾಷ್ಟ್ರನಲ್ಲ. 'ಕ್ವ ನಸ್ತಾತಃ?' ಎಂದು ಅವನ ಬಗ್ಗೆ ಕೇಳಿಯಾಗಿದೆ. ವಿದುರನೆಂದೂ ಗ್ರಹಿಸಲಾಗುವುದಿಲ್ಲ. ಅವನು ಕಾಡಿನಲ್ಲಿ ಒಮ್ಮೆ ತಾನು ನೋಡುತ್ತಿದ್ದಂತೆಯೆ ತನ್ನ ಶರೀರದೊಳಗೆ ಪರಕಾಯ ಪ್ರವೇಶವೆಂಬ ಯೋಗಸಿದ್ಧಿ ಬಲದಿಂದ ಪ್ರವೇಶಮಾಡಿ ಶರೀರತ್ಯಾಗ ಮಾಡಿದ್ದನ್ನು ತಾನೇ ಕಂಡಿದ್ದಾನೆ. ಅದರಿಂದ 'ಕ್ವ ನಸ್ತಾತಃ? ಪಿತೃವ್ಯಃ ಕ್ವಗತಃ? ಎಂದು, ಪುನಃಪುನಃ ದುಃಖದಿಂದ ಧೃತರಾಷ್ಟ್ರನೆಲ್ಲಿ ಎಂದೇ ಕೇಳುತ್ತಿದ್ದಾನೆ ಎನ್ನಬೇಕು. ಆದರ ಕಳವಳಗಳಿರುವಾಗ ಹೀಗೆ ಪುನಃಪುನಃ ಹೇಳುವುದು ಲೌಕಿಕ ವೈದಿಕ ಪ್ರಯೋಗಗಳಲ್ಲಿ ಕಂಡಿದೆ ಎಂದು ಬ್ರಹ್ಮತರ್ಕ ಹೇಳಿದೆ. ೨೨೭

೧.೧೨.೩೪ 'ಪಿತೃವ್ಯೌ ಕ್ವ ಗತೌ' ತಂದೆಯ ಸೋದರರು ಇಬ್ಬರು, ಧೃತರಾಷ್ಟ್ರ ವಿದುರರು ಎಲ್ಲಿಗೆ ಹೋದರೆಂದು ಧರ್ಮರಾಜ ಕೇಳುವಂತಿದೆ. ವಸ್ತುತಃ ವಿದುರ ಶರೀರ ತ್ಯಾಗ ಮಾಡಿದ್ದು ಅವನಿಗೆ ಗೊತ್ತಿರುವುದರಿಂದ ಪಿತೃವ್ಯರೆಂದರೆ ಧೃತರಾಷ್ಟ್ರ ಗಾಂಧಾರಿಯರೆಂದಿಟ್ಟುಕೊಳ್ಳಬೇಕು. ೨೨೮

೧.೧೨.೩೭ ಧರ್ಮರಾಜ ಸಂಜಯನನ್ನು 'ಎಲ್ಲಿ ಧೃತರಾಷ್ಟ್ರ ಮುಂತಾದವರೆ'ಂದು ಕೇಳಿದಾಗ ಸಂಜಯ ಹೇಳುತ್ತಾನೆ, 'ಮಹಾರಾಜ, ನಾನೂ ವಂಚಿತನಾದೆ' ಸಂಜಯ ತನಗೆ ಗೊತ್ತಿದ್ದೂ ಹೀಗೆ ಹೇಳುವುದೇಕೆ? ಎಂದರೆ ಇದು ದುಃಖ ತಡೆಯಲಾರದೆ ಆಡುವ ನಿರರ್ಥಕ ಪ್ರಲಾಪ. ಮಹಾಭಾರತ ಹೇಳುವಂತೆ ಸಂಜಯ ಕಾಳ್ಗಿಚ್ಚಿನಲ್ಲಿ ಧೃತರಾಷ್ಟ್ರಾದಿಗಳು ಬೆಂದುದನ್ನು ಕಂಡಿದ್ದಾನೆ. ಕಾಳ್ಗಿಚ್ಚು ಸುತ್ತಲೂ ಆವರಿಸಿದಾಗ ಧೃತರಾಷ್ಟ್ರ ಅದರಿಂದ ಪಾರಾಗಲು ಯತ್ನಿಸಲಿಲ್ಲ. ಬೇಕೆಂದೇ ಕದಲದೆ ಧ್ಯಾನ ಮಾಡುತ್ತ ಕುಳಿತುಬಿಟ್ಟ, ಸಂಜಯನನ್ನು ಮಾತ್ರ ಪಲಾಯನ ಮಾಡಲು ಆದೇಶಿಸಿದ. ಸಂಜಯ ಉಪಾಯವಿಲ್ಲದೆ ಓಡಿ ಬಂದು

ಧರ್ಮರಾಜನ ಬಳಿ ಕುಳಿತು ವಿರಹದ ಉದ್ವೇಗದಲ್ಲಿ 'ನಾನು ವಂಚಿತನಾದೆ' ಎಂದೆಲ್ಲ ಪ್ರಲಾಪಗೈದ. ಆತ ಬದರಿಕಾಶ್ರಮದಲ್ಲಿ ಧೃತರಾಷ್ಟ್ರನ ಜೊತೆಗಿದ್ದುದು ಧರ್ಮರಾಜನಿಗೆ ಗೊತ್ತು. ೨೨೯

೧.೧೨.೪೦ ನಾರದರಲ್ಲಿ ಧರ್ಮರಾಜ ಕೇಳುತ್ತಾನೆ, 'ಇತಃ ಕ್ವ ಗತೌ' ಇಲ್ಲಿಂದ, ಅಂದರೆ ಅರಮನೆಯಿಂದ ಧೃತರಾಷ್ಟ್ರಾದಿಗಳು ಎಲ್ಲಿಗೆ ಹೋದರೋ? ನನಗೆ ಅವರು ಕಾಣಿಸುತ್ತಿಲ್ಲ' ಎಂದಲ್ಲ, ಬದರಿಕಾಶ್ರಮದಲ್ಲಿ ಅವರು ಇನ್ನೂ ಜೀವಂತರಾಗಿರುವಂತೆ ನನ್ನ ಜ್ಞಾನದೃಷ್ಟಿಗೆ ಕಾಣಿಸುತ್ತಿಲ್ಲ, ಮರಣ ಹೊಂದಿ ಅಲ್ಲಿಂದ ಅವರು ಯಾವ ಲೋಕಕ್ಕೆ ತೆರಳಿದರೋ? ಎಂದು ಕೇಳುತ್ತಾನೆ. ೨೨೯

೧.೧೨.೪೪ ನಾರದರು ಧರ್ಮರಾಜನಿಗೆ ಹೇಳುತ್ತಾರೆ, ಶರೀರ ಅನಿತ್ಯ, ಎಂದಾದರೂ ನಾಶ ಹೊಂದಲೇಬೇಕು. ಅದಕ್ಕೆ ಏನೂ ಪರಿಹಾರವಿಲ್ಲ, ಅದರಿಂದ ಬಂಧುಗಳ ಮರಣಕ್ಕೆ ಶೋಕಪಡಬಾರದು. ೨೩೦

೧.೧೨.೫೧ ಧೃತರಾಷ್ಟ್ರ ವಿದುರನೊಂದಿಗೆ ಹಿಮಾಲಯದಲ್ಲಿ ಋಷ್ಯಾಶ್ರಮಕ್ಕೆ ನಡೆದನೆಂದು ನಾರದರು ಧರ್ಮರಾಜನಿಗೆ ಹೇಳುತ್ತಿಲ್ಲ. ಕಾಡಿನಲ್ಲಿ ಧೃತರಾಷ್ಟ್ರನನ್ನು ಕಾಣಲು ನಾರದರು ಬಂದಾಗ ಆಗಲೆ ವಿದುರ ಶರೀರತ್ಯಾಗ ಮಾಡಿಯಾಗಿತ್ತು. ಅದರಿಂದ ಅರಮನೆಯಿಂದ ಧೃತರಾಷ್ಟ್ರ ಹೊರಟಾಗ ವಿದುರನೊಂದಿಗೆ ಹೊರಟನೆನ್ನುತ್ತಿದ್ದಾರೆ. ೨೩೧

೧.೧೨.೫೩ ಧೃತರಾಷ್ಟ್ರ ತ್ರಿಕಾಲಸ್ನಾನ ಮುಂತಾದುವನ್ನು ಮಾಡುತ್ತ ತಪಸ್ಸು ಮಾಡುತ್ತ 'ಸ ಆಸ್ತೇ' ಇದ್ದಾನೆ ಎಂದು ನಾರದರು ಧರ್ಮರಾಜನಿಗೆ ಹೇಳುವುದು ಕಾಲವ್ಯತ್ಯಾಸ. 'ಆಸೀತ್' ಇದ್ದನೆನ್ನಬೇಕಾಗಿತ್ತು. ಧೃತರಾಷ್ಟ್ರನ ಮರಣಾನಂತರ ಅವರು ಬಂದು ಹೇಳುವ ಮಾತು ಇದು. ಅದರಿಂದ 'ಸ ಆಸ್ತೇ' ಎಂದರೆ ಅವನಿದ್ದನೆಂದರ್ಥ. ಈ ರೀತಿ ಕಾಲವ್ಯತ್ಯಾಸ ಮಾಡಿಹೇಳುವುದು ವೇದದಲ್ಲಿ ವ್ಯಾಕರಣ ಸಮ್ಮತ. ವೇದತುಲ್ಯ ವಾದ್ದರಿಂದ ಭಾಗವತದಲ್ಲಿಯೂ ಸಮ್ಮತವೆ. ೨೩೧

೧.೧೨.೫೫ ನಾರದರು ಹೇಳುವಂತೆ ಧೃತರಾಷ್ಟ್ರನ ಅಂತ್ಯಕಾಲದ ಧ್ಯಾನ ಹೀಗೆ ಸಾಗಿತ್ತು–

ಲಯಕಾಲದಲ್ಲಿ ರುದ್ರಾದಿ ಸಮಸ್ತ ಪ್ರಪಂಚ ಮಹತ್ತತ್ವಾಭಿಮಾನಿ ಬ್ರಹ್ಮನಲ್ಲಿ ಲಯಹೊಂದುತ್ತದೆ. ಬ್ರಹ್ಮ ಪ್ರಕೃತಿನಿಯಾಮಕ ಭಗವದ್ರೂಪದಲ್ಲಿ ಲಯ ಹೊಂದುತ್ತಾನೆ. ಆ ರೂಪ ಹೊರಗೆ ವ್ಯಾಪ್ತವಾದ ಇನ್ನೊಂದು ಭಗವದ್ರೂಪದಲ್ಲಿ ಸೇರಿ ಒಂದಾಗುತ್ತದೆ. ಮರಣಕಾಲದಲ್ಲಿ ಇಂದ್ರಿಯದೇವತೆಗಳು ಶರೀರದಲ್ಲಿರುವ

ಬ್ರಹ್ಮನಲ್ಲಿ, ಬ್ರಹ್ಮ ಶರೀರ ದಲ್ಲಿರುವ ವಿಷ್ಣುರೂಪದಲ್ಲಿ ಲಯ ಹೊಂದುತ್ತಾನೆ. ಆ ವಿಷ್ಣುರೂಪ ಹೊರಗೆ ವ್ಯಾಪ್ತವಾದ ವಿಷ್ಣುರೂಪದಲ್ಲಿ ಸೇರಿ ಒಂದಾಗುತ್ತದೆ.

ಈ ಎರಡೂ ಬಗೆಯ ಸೇರ್ಪಡೆಗಳಿಗೆ ದೃಷ್ಟಾಂತ ಘಟದೊಳಗಿನ ಆಕಾಶ, ಘಟ ನಾಶವಾದಾಗ, ಹೊರಗಿನ ಮಹಾಕಾಶದಲ್ಲಿ ಸೇರುವಂತೆ ಎಂದು.

ಆಕಾಶಗಳು ಎರಡಿವೆ. ಒಂದು ಭೂತಾಕಾಶ, ಮತ್ತೊಂದು ಅವ್ಯಾಕೃತಾಕಾಶ. ಭೂತಾಕಾಶ ಉತ್ಪತ್ತಿ ವಿನಾಶ ಉಳ್ಳದ್ದು. ಅಂಶಭೇದ ಉಳ್ಳದ್ದು. ಅವ್ಯಾಕೃತಾಕಾಶ ನಿತ್ಯ. ಅಂಶಭೇದ ರಹಿತ. ಆದರೂ ವಿಶೇಷ ಬಲದಿಂದ ಭೇದವ್ಯವಹಾರ 'ವಾಗುತ್ತದೆ.

ಘಟದೊಳಗಿನ ಭೂತಾಕಾಶವು ಘಟ ಹುಟ್ಟಿದಾಗ ಹುಟ್ಟಿ ಘಟ ನಾಶವಾದಾಗ ನಾಶ ಹೊಂದಿ ಮಹಾಕಾಶದಲ್ಲಿ ಲಯ ಹೊಂದುತ್ತದೆ. ಅದೇರೀತಿ ಇಂದ್ರಿಯ ದೇವತೆಗಳು ಬ್ರಹ್ಮನಲ್ಲಿ, ಬ್ರಹ್ಮ ಪರಮಾತ್ಮನಲ್ಲಿ ದೇಹಲಯ ಹೊಂದುತ್ತಾರೆ. ಘಟದೊಳಗಿನ ಅವ್ಯಾಕೃತಾ ಕಾಶ, ಘಟ ಹುಟ್ಟುವಾಗ ಹುಟ್ಟದಿದ್ದರೂ ವಿಶೇಷ ಬಲದಿಂದ ಘಟಾಕಾಶವೆಂದು ವ್ಯವಹಾರ ಗೋಚರವಾಗುತ್ತದೆ. ಘಟನಾಶ ವಾದಾಗ ಘಟದೊಳಗಿನ ಆ ಘಟಾಕಾಶ ನಾಶವಾಗ ದಿದ್ದರೂ ಘಟಾಕಾಶ ಎಂಬ ವ್ಯವಹಾರವಿಲ್ಲವಾಗುತ್ತದೆ. ಹಾಗೇ ಭಗವದ್ರೂಪ ಭಗವದ್ರೂಪ ದೊಂದಿಗೆ ಸೇರಿದಾಗ ನಾಶವಾಗದೆ ಒಂದಾಗುತ್ತದೆ. ಬೇರೆಬೇರೆ ವ್ಯವಹಾರವಿಲ್ಲವಾಗುತ್ತದೆ.

ಧೃತರಾಷ್ಟ್ರ ಇಂದ್ರಿಯದೇವತೆಗಳನ್ನು ಬ್ರಹ್ಮನಲ್ಲಿ ಲಯಗೊಳಿಸಿದನೆಂದು ನಾರದರು ಹೇಳುತ್ತಾರೆ. ಲಯಗೊಳಿಸಿದನೆಂದರೆ ಲಯವಾಗುತ್ತಾರೆ ಎಂದು ಧ್ಯಾನಿಸಿದನೆಂದಿಷ್ಟೇ ಅರ್ಥ. ಮುಂದೆ ನಡೆಯಲಿರುವುದನ್ನು ಹಾಗೇ ಧ್ಯಾನಿಸಿದರೂ ಮುಂದೆ ನಡೆಯಲಿರುವ ಆ ಕ್ರಿಯೆಗೆ ಅವನು ಕರ್ತನೆನಿಸುತ್ತಾನೆ ಎಂದು ನಾರದಪುರಾಣ ಹೇಳಿದೆ. ೨೩೪

೧.೧೨.೫೬ ಧೃತರಾಷ್ಟ್ರ ತನ್ನ ಅಂತ್ಯಕಾಲದಲ್ಲಿ 'ಧ್ವಸ್ತಮಾಯಾ ಗುಣೋದ್ರೇಕ'ನಾಗಿದ್ದ ಎಂದರೇನರ್ಥ? ಮಾಯೆ ಎಂದರೆ ಇಲ್ಲಿ ಬಂಧಕವಾದ ತ್ರಿಗುಣಾತ್ಮಕ ಪ್ರಕೃತಿ ಎಂದರ್ಥ. ಅವನಲ್ಲಿ ಪ್ರಕೃತಿಯ ತ್ರಿಗುಣಗಳು ಉದ್ರೇಕಗೊಳ್ಳುತ್ತಿರಲಿಲ್ಲ, ಅಂದರೆ ಕಾಮಾದಿ ದೋಷರೂಪದಿಂದ ಪರಿಣಮಿಸಿ ಕಾಡುತ್ತಿರಲಿಲ್ಲ ಎಂದರ್ಥ. ೨೩೭

೧.೧.೫೭ 'ಪರತಃ ಪಂಚಮೇಽಹನಿ' ಎಂದರೆ ಮುಂದೆ ಐದನೇ ದಿನದಲ್ಲಿ ಧೃತರಾಷ್ಟ್ರ ಮರಣ ಹೊಂದುತ್ತಾನೆ' ಎಂದು ಹೇಳುವ ಅಭಿಪ್ರಾಯವಿಲ್ಲ. ಮರಣಾನಂತರ

ಐದನೇ ದಿನದಲ್ಲಿ ನಾರದರು ಬಂದು ಈ ಮಾತನ್ನು ಹೇಳುತ್ತಿದ್ದಾರೆ. ಅದರಿಂದ ಹಿಂದೆ ಐದನೆ ದಿನದಲ್ಲಿ ಮರಣ ಹೊಂದಿದ್ದಾನೆ ಎಂದೇ ಅರ್ಥ ಗ್ರಹಿಸಬೇಕು. 'ಪರತಃ' ಶಬ್ದಕ್ಕೆ ಅವರ, ಆರಾತ್ ಶಬ್ದಗಳಂತೆ ಎರಡೂ ವಿರುದ್ಧಾರ್ಥಗಳಿವೆ, 'ಮುಂದೆ' 'ಹಿಂದೆ' ಎಂದು. ಪ್ರಕೃತಕ್ಕೆ 'ಹಿಂದೆ' ಎಂಬ ಅರ್ಥವೆ ಹೊಂದಿಕೆಯಾಗುತ್ತದೆ. ಮುಂದಿನ ಐದನೆ ದಿನದಲ್ಲಿ ಧೃತರಾಷ್ಟ್ರ ಶರೀರ ತ್ಯಾಗ ಮಾಡುತ್ತಾನೆ, ಎಂದು ನಾರದರು ಭವಿಷ್ಯನುಡಿದಂತೆ ಗ್ರಹಿಸಿದರೆ ಅದು ಭಾರತಕ್ಕೆ ವಿರುದ್ಧವಾಗುತ್ತದೆ. ಸಂಜಯ ಧೃತರಾಷ್ಟ್ರನ ಅವಸಾನವನ್ನು ಕಂಡು ವೇದವ್ಯಾಸರ ಬಳಿಗೆ ಧಾವಿಸಿ ಬಂದ. ಗಂಗಾತೀರದಲ್ಲಿ ನಾರದರನ್ನು ಕಂಡು ನಡೆದ ಸಂಗತಿಯನ್ನು ತಿಳಿಸಿದ. ಬಳಿಕ ಹಸ್ತಿನಾವತಿಗೆ ಬಂದು ಧರ್ಮರಾಜನ ಮುಂದೆ ಆ ದಾರುಣ ವೃತ್ತಾಂತವನ್ನು ಹೇಳಲಾರದೆ ವಿಲಾಪಗೈಯುತ್ತ ಕುಳಿತ. ಐದು ದಿನಗಳ ಕಾಲ ಹೀಗೇ ಕಳೆಯಿತು. ಬಳಿಕ ನಾರದರು ಬಂದು ಇಂದಿನಿಂದ ಐದು ದಿನಗಳ ಹಿಂದೆಯೆ ಧೃತರಾಷ್ಟ್ರನ ಅವಸಾನವಾಯಿತೆಂದು ಹೇಳುತ್ತಿದ್ದಾರೆ ಹೊರತು ಭವಿಷ್ಯವನ್ನು ಹೇಳುತ್ತಿಲ್ಲ. ೨೩೮

೧.೧೨.೫೯ ಇಲ್ಲಿ ಧೃತರಾಷ್ಟ್ರನ ಅವಸಾನವನ್ನು ಕಣ್ಣಾರೆ ಕಂಡು ವಿದುರ ತೀರ್ಥಯಾತ್ರೆಗೆ ಹೊರಟುಹೋಗುತ್ತಾನೆ ಎಂದು ನಾರದರು ಭವಿಷ್ಯ ಹೇಳುತ್ತಿಲ್ಲ. ಜ್ಞಾನದೃಷ್ಟಿಯಿಂದ ವಿದುರ ಮೊದಲೆ ಧೃತರಾಷ್ಟ್ರನ ಅವಸಾನ ಹೀಗಾಗುವುದೆಂದು ಕಂಡುಕೊಂಡು ವೈರಾಗ್ಯದಿಂದ ತೀರ್ಥಯಾತ್ರೆಗೆ ಅಂದು ದ್ಯೂತಕಾಲದಲ್ಲಿಯೆ ಹೊರಟು ಹೋದನೆಂದು, ಹಿಂದೆ ನಡೆದುದನ್ನು ನಾರದರು ಹೇಳುತ್ತಿದ್ದಾರೆ.

ವಿದುರ ಧೃತರಾಷ್ಟ್ರನ ಅವಸಾನವನ್ನು ಕಂಡು ತೀರ್ಥಯಾತ್ರೆಗೆ ಹೊರಟನೆಂದು ಹೇಳಿದರೆ ಇದೂ ಭಾರತಕ್ಕೆ ವಿರುದ್ಧ. ವಸ್ತುತಃ ವಿದುರ ಕೌರವರ ವಿನಾಶ ಧೃತರಾಷ್ಟ್ರಾದಿಗಳ ಅವಸಾನಗಳನ್ನು ಮೊದಲೆ ಅಂದರೆ ದ್ಯೂತಕಾಲದಲ್ಲಿಯೆ ಜ್ಞಾನದೃಷ್ಟಿಯಿಂದ ತಿಳಿದು ಆ ಕಾರಣದಿಂದಲೆ ತೀರ್ಥಯಾತ್ರೆಗೆ ಹೊರಟಿದ್ದ. ಬಂಧುವಿನಾಶ ಸಮೀಪಿಸಿದೆ. ಇನ್ನು ಹೆಚ್ಚು ಆಸಕ್ತಿ ಬೇಡ ಎಂದು ದ್ಯೂತಸಭೆಯಿಂದ ಹೊರಗೆ ನಡೆದ ವಿದುರ ಯುದ್ಧಾನಂತರ ಬಂದ ಧೃತರಾಷ್ಟ್ರನ ಅವಸಾನವನ್ನು ಕಣ್ಣಾರೆ ಕಾಣಲು ಶಕ್ತನಾಗದೆ ಮೊದಲೆ ಧರ್ಮರಾಜನ ಶರೀರ ಪ್ರವೇಶ ಮಾಡುತ್ತಾನೆ. ಬಳಿಕ ಧೃತರಾಷ್ಟ್ರನ ಅವಸಾನವಾಗುತ್ತದೆ.

ಹಾಗಾದರೆ ಭಾಗವತದಲ್ಲಿ ಕಾಲ ವ್ಯತ್ಯಾಸಕ್ಕೆ ಏನುಕಾರಣವೆಂದರೆ, ಇದು ವೈದಿಕ

ಪ್ರಯೋಗ, ಭಾಗವತ ವೇದ ತುಲ್ಯವೆಂದು ತಿಳಿಸಲು ಅಲ್ಲಲ್ಲಿ ವೈದಿಕಪ್ರಯೋಗ ಕಾಣುತ್ತದೆ.

ಮಹಾವ್ಯಾಕರಣ ನಿಯಮದಂತೆ ಕಾಲವ್ಯತ್ಯಯ ಮಾಡಿದೆ. ಆದರಿಂದ 'ಕಲೇವರಂ ಹಾಸ್ಯತಿ' ಶರೀರವನ್ನು ಮುಂದೆ ಬಿಡುತ್ತಾನೆ' ಎಂದರೆ 'ಶರೀರವನ್ನು ಬಿಟ್ಟಿದ್ದಾನೆ' ಎಂದರ್ಥ. ಇದು ಅಮುಖ್ಯಾರ್ಥವಲ್ಲ, ವ್ಯಾಕರಣ ನಿಯಮಾನುಸಾರಿಯಾದ ಮುಖ್ಯಾರ್ಥವೆ.

ಇನ್ನೊಂದು ಸಮಾಧಾನ— ಈ ಘಟನೆಗಳು ಪ್ರತಿಕಲ್ಪದಲ್ಲಿಯೂ ಹೀಗೆ ನಡೆಯುತ್ತವೆ ಎಂದು ಸೂಚಿಸಲು ಕಾಲವ್ಯತ್ಯಾಸಪ್ರಯೋಗವಿದೆ. 'ಕಲೇವರಂ ಹಾಸ್ಯತಿ' ಎಂದರೆ 'ಮುಂದಿನ ಕಲ್ಪದಲ್ಲಿಯೂ ಹೀಗೆಯೇ ಇನ್ನೊಬ್ಬ ಧೃತರಾಷ್ಟ್ರ ಶರೀರತ್ಯಾಗ ಮಾಡುವನು ಎಂದರ್ಥ. ಅಬ್ಭಕ್ಷ ಉಪಶಾಂತಾತ್ಮಾ ಸ ಆಸ್ತೇಽವಿಗತೇಕ್ಷಣಃ । 'ಧೃತರಾಷ್ಟ್ರ ಬರೀ ನೀರು ಕುಡಿಯುತ್ತ ವಿರಕ್ತನಾಗಿದ್ದಾನೆ' ಎಂದುದೂ ಪ್ರತಿಕಲ್ಪದಲ್ಲಿಯೂ ಪ್ರತಿಯೊಬ್ಬ ಧೃತರಾಷ್ಟ್ರ ಹೀಗೇ ಮಾಡುತ್ತಾನೆ ಎನ್ನುವ ಅಭಿಪ್ರಾಯದಿಂದ.

ಮತ್ತೊಂದು ಸಮಾಧಾನ ಕಾಲದ ಬಗ್ಗೆ ಗೊಂದಲ ಉಂಟುಮಾಡಿ ಅಸುರರಿಗೆ ಮೋಹ ಉಂಟುಮಾಡುವ ಉದ್ದೇಶದಿಂದಲೂ ಇಂಥ ವ್ಯತ್ಯಾಸಗಳನ್ನು ಪುರಾಣಗಳಲ್ಲಿ ಮಾಡುತ್ತಾರೆ ಎಂದು. ೨೩೯

೧.೧೩.೨ ಅರ್ಜುನ ಯಾದವರ ಕ್ಷೇಮ ಸಮಾಚಾರ ತಿಳಿದು ಬರುವುದಕ್ಕಾಗಿ ದ್ವಾರಕೆಗೆ ಹೋಗಿ ಕೆಲವೇ ದಿನಗಳಾಗಿದ್ದುವು. ಮಹಾಭಾರತ ಹಾಗೇ ಹೇಳಿದೆ. ಧರ್ಮರಾಜನಿಗೆ ಮಾತ್ರ ಆ ಕೆಲವು ದಿನಗಳು ಕೆಲವು ತಿಂಗಳುಗಳಂತಾದುವು ಎಂಬ ಅಭಿಪ್ರಾಯದಿಂದ ಈ ಶ್ಲೋಕದಲ್ಲಿ 'ವ್ಯತೀತಾಃ ಕತಿಚಿನ್ಮಾಸಾಃ' 'ಕೆಲವು ತಿಂಗಳುಗಳೇ ಕಳೆದುವು' ಎಂದಿದೆ. ಚಿಂತೆಯಿಂದ ಕಾಲ ನೂಕುವ ಸಂದರ್ಭದಲ್ಲಿ ದಿನ ತಿಂಗಳಾಗುತ್ತದೆ, ಸುಖವಾಗಿ ಕಳೆದುಹೋಗುವಾಗ ತಿಂಗಳೇ ದಿನವೆನಿಸುತ್ತದೆ ಎಂದು ನಾಮಮಹೋದಧಿ ಎಂಬ ಗ್ರಂಥ ಹೇಳಿದೆ. ೨೪೧

೧.೧೩.೮ ಪರಮಾತ್ಮ ಶರೀರತ್ಯಾಗ ಮಾಡಿದಂತೆ ಎಲ್ಲಿಯಾದರೂ ಹೇಳಿದರೆ ಅದು ಶರೀರತ್ಯಾಗವಲ್ಲ, ಶರೀರ ಸಮೇತನಾಗಿದ್ದೇ ಭೂಮಿಯನ್ನು ಬಿಟ್ಟು ತನ್ನ ಧಾಮಕ್ಕೆ ತೆರಳುವನೆಂದು ತಿಳಿಯಬೇಕು. ಏಕೆಂದರೆ ಪರಮಾತ್ಮನಿಗೆ ನಮ್ಮಂತೆ ಬೇರೆ ಜಡಶರೀರವಿಲ್ಲ, ಸ್ವರೂಪಶರೀರ ಮಾತ್ರವೆ ಇದೆ. ಅದನ್ನು ಬಿಡುವಂತಿಲ್ಲ ಎಂದು ಬ್ರಹ್ಮತರ್ಕ ಹೇಳಿದೆ. ೨೪೨

೧.೧೩.೧೪ ಸ್ವಪ್ನದಲ್ಲಿ ಪಾರಿವಾಳ ಅಗ್ನಿಪ್ರವೇಶ ಮಾಡಿದಂತೆ ಕಂಡರೆ ಅದು ತಾನು ಬಯಸಿದ್ದು ವಿಪರೀತವಾಗುವುದಕ್ಕೆ ಸೂಚಕವಾಗುತ್ತದೆ ಎಂದು ಶ್ರುತಿ ಹೇಳುತ್ತದೆ. ಯದುಕುಲ ಕ್ಷೇಮದಿಂದಿರಲೆಂದು ಬಯಸಿದ್ದ ಧರ್ಮರಾಜನಿಗೆ ಹಾಗೆ ಸ್ವಪ್ನ ದರ್ಶನ ವಾಯಿತು, ಯದುಕುಲ ಕ್ಷಯಕ್ಕೆ ಸೂಚಕವಾಯಿತು. ೨೪೩

೧.೧೩.೩೪ 'ಶ್ರೀಕೃಷ್ಣ ಸುಖವಾಗಿರುವನೆ?' ಎಂಬ ಪ್ರಶ್ನೆಗೆ 'ಶ್ರೀಕೃಷ್ಣ ಲೋಕಕ್ಕೆ ಸುಖ ಉಂಟುಮಾಡುತ್ತಿರುವನೆ?' ಎಂದು ಕೇಳುವ ಅಭಿಪ್ರಾಯ. ಇಲ್ಲದಿದ್ದರೆ ನಿತ್ಯಸುಖಿಯಾದ ಭಗವಂತ ಸುಖವಾಗಿರುವನೆ? ಎಂಬ ಪ್ರಶ್ನೆ ಅಸಂಗತವಾದೀತೆಂದು ನಾರದಪುರಾಣ ಹೇಳಿದೆ. ೨೪೪

೧.೧೩.೩೯ ಅರ್ಜುನ, ನೀನೀಸಲ ಬಹುಕಾಲ ದ್ವಾರಕೆಯಲ್ಲಿದ್ದುದರಿಂದ ಯಾದವರು ನಿನ್ನನ್ನು ಅವಮಾನಿಸಿರಬಹುದೆ? ಎಂದು ಧರ್ಮರಾಜ ಕೇಳಿದಂತಿದೆ. ವಸ್ತುತಃ ಅರ್ಜುನ ಕೆಲವೇ ದಿನಗಳ ಕಾಲ ದ್ವಾರಕೆಯಲ್ಲಿ ವಾಸಮಾಡಿದ್ದ. ಅದರಿಂದ ಪ್ರಶ್ನೆಯ ಅಭಿಪ್ರಾಯ ಹೀಗೆ— ನೀನು ಹಿಂದೆ ದ್ವಾರಕೆಗೆ ಹೋದಾಗಲೆಲ್ಲ ದೀರ್ಘಕಾಲ ಅಲ್ಲಿ ವಾಸಮಾಡುತ್ತಿದ್ದೆ. ಈಗ ಬೇಗನೆ ಬಂದೆ ಏಕೆ? ಯಾದವರು ನಿನ್ನನ್ನು ಅವಮಾನಿಸಿದರೆ?' ಎಂದು. ೨೪೫

೧.೧೪.೧೦ ದ್ರೌಪದಿ ಕೃಷ್ಣನ ಪಾದಗಳಿಗೆರಗಿದಾಗ ಅವಳ ಕಣ್ಣೀರೂ ಪಾದಗಳ ಮೇಲೆ ಬಿದ್ದಿತು. ಅದರಿಂದ ಅದು ಅವಳಿಗೆ ಆಪ್ತನಾದ ಪ್ರಧಾನಮಂತ್ರಿಯಂತೆ ವರ್ತಿಸಿ, ಹಿಂದೆ ಅವಳ ಕೇಶಪಾಶವನ್ನು ಹಿಡಿದೆಳೆದಿದ್ದ ಕೌರವರ ಹೆಂಡಂದಿರನ್ನು ಮುಕ್ತಕೇಶಿಯರನ್ನಾಗಿ ಮಾಡಿತು. ಅಂಥ ಕೃಷ್ಣನ ವಿಯೋಗ ನಮಗೀಗ ಬಂದೊದಗಿದೆ ಎಂದು ಅರ್ಜುನ ಧರ್ಮರಾಜನಿಗೆ ಹೇಳುತ್ತಾನೆ. ೨೪೬

೧.೧೪.೨೧ ಅರ್ಜುನ ತಾನು ಮ್ಲೇಚ್ಛರ ಮುಂದೆ ಅನುಭವಿಸಿದ ಪರಾಭವವನ್ನು ಹೀಗೆ ಧರ್ಮರಾಜನ ಮುಂದೆ ಹೇಳುತ್ತಾನೆ— 'ಅದೇ ಬಿಲ್ಲು ಅದೇ ಬಾಣಗಳು ಅದೇ ರಥ ಅವೇ ಕುದುರೆಗಳು. ಮಹಾಧನುರ್ಧರನೆಂದು ಹೆಸರಾಂತ ಆ ಅರ್ಜುನನೆ ನಾನು, ಆದರೇನು? ಒಂದು ಕ್ಷಣದಲ್ಲಿ ಅದೆಲ್ಲ ಬೂದಿಯಲ್ಲಿ ಹೋಮ ಮಾಡಿದಂತೆ ಅಪ್ರಯೋಜಕವಾಯಿತು! ಏಕೆಂದರೆ ಕೃಷ್ಣ ಜೊತೆಗಿರಲಿಲ್ಲ' ಎಂದು. ಇಲ್ಲಿ ಅದೇ ಬಿಲ್ಲು ಎಂದುದು ಸರಿಯೆ. ಆದರೆ ಅವೇ ಬಾಣಗಳು ಹೇಗೆ? ಅದೇ ರಥ ಅವೇ ಕುದುರೆಗಳು ಹೇಗೆ? ಈಗ ಬೇರೇ ಬಾಣಗಳು, ಬೇರೇ ರಥ, ಬೇರೇ ಕುದುರೆಗಳು ತಾನೆ? ಅದರಿಂದ ಅದೇ ರೀತಿಯ ಬಾಣಗಳು, ರಥ, ಕುದುರೆಗಳು ಎಂದಭಿಪ್ರಾಯ. ಶತ್ರುಗಳ ಮೇಲೆ ಪ್ರಯೋಗಿಸಿದ ಬಾಣ ಹಿಂತಿರುಗಿ

ಬರುವುದಿಲ್ಲ ತಾನೆ? ಹಾಗೇ ರಥವೂ ಬೇರೆಯೆ. ಶ್ರೀಕೃಷ್ಣ ಕುರುಕ್ಷೇತ್ರ ಯುದ್ಧಾನಂತರ ಅರ್ಜುನನನ್ನು ರಥದಿಂದ ಕೆಳಗಿಳಿಸಿ ತಾನಿಳಿದೊಡನೆ ಧ್ವಜದಲ್ಲಿದ್ದ ಹನುಮಂತ ಅದೃಶ್ಯನಾದ. ರಥ ಭೀಷ್ಮ ದ್ರೋಣಾದಿಗಳ ಶಸ್ತ್ರಾಸ್ತ್ರಗಳಿಂದ ಧಗ್ಗನೆ ಹೊತ್ತಿ ಉರಿದು ಬೂದಿಯಾಯಿತು. ಈಗ ಬೇರೆಯೆ ರಥ.

ಬೂದಿಯಲ್ಲಿ ಹೋಮಮಾಡಿದರೂ ಮಂತ್ರೋಚ್ಚಾರಣೆಯ ಫಲ ಸ್ವಲ್ಪವಿದ್ದೇ ಇರುತ್ತದೆ. ಇಂದ್ರಜಾಲದಲ್ಲಿ ತೋರಿದ ಸುಳ್ಳು ವಸ್ತುವಿನಿಂದಲೂ ಪ್ರೇಕ್ಷಕರಿಂದ ಅವನಿಗೆ ಒಂದಿಷ್ಟು ಹಣ ಸಿಗಬಹುದು. ಆದರೆ ಬಂಜರು ಭೂಮಿಯಲ್ಲಿ ಕೃಷಿ ಮಾಡಲು ಹೊರಡುವುದು ವ್ಯರ್ಥವೆಂಬ ಅಭಿಪ್ರಾಯದಿಂದ ಮೂರು ದೃಷ್ಟಾಂತಗಳನ್ನು ನೀಡಲಾಗಿದೆ. ೨೪೭

೧.೧೫-೧,೨,೩ ಅಪರೋಕ್ಷ ಬಂದೊಡನೆ ಜ್ಞಾನಿಗೆ ಜ್ಞಾನದಿಂದ ಹಿಂದಿನ ಅಪ್ರಾರಬ್ಧ ಪಾಪವೆಲ್ಲ ಪೂರ್ತಿಯಾಗಿ ಬೆಂದು ಹೋಗುತ್ತದೆ. ಜೊತೆಗೆ ಪ್ರಾರಬ್ಧಪಾಪ ದಲ್ಲಿಯೂ ಉಪಮರ್ದಯೋಗ್ಯವಾದ ಕೆಲವು ಪ್ರಬಲ ಪಾಪಕರ್ಮಗಳು ಉಪಮರ್ದ ಹೊಂದುತ್ತವೆ. ಉಪಮರ್ದವೆಂದರೆ ಪಾಪಫಲ ಕಡಿಮೆಯಾಗು ವುದೆಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ. ಬೇರೆ ಪ್ರಾರಬ್ಧವಾದ ಕಾಮ್ಯ ನಿಷಿದ್ಧ ಕರ್ಮಗಳಿರುತ್ತವೆ. ಅವನ್ನು ಅನುಭವಿಸಲೇಬೇಕು. ಈ ಪ್ರಾರಬ್ಧ ಪಾಪದಿಂದಲೆ ಜ್ಞಾನಾದಿ ಪ್ರತಿಬಂಧ ಉಂಟಾಗುತ್ತದೆ ಎಂದು ಬ್ರಹ್ಮವೈವರ್ತ ಹೇಳಿದೆ.

'ಬ್ರಹ್ಮ ಸಂಪತ್ತಿ' ಎಂದರೆ ಬ್ರಹ್ಮೈಕ್ಯವಲ್ಲ, ಪರಬ್ರಹ್ಮನ ಅಪರೋಕ್ಷಜ್ಞಾನ.

'ದ್ವೈತ ಸಂಶಯ' ಎಂದರೆ ಭಗವಂತನ ಆರಾಧನಾರೂಪವಲ್ಲದ ವಿಷಯ ಭೋಗ ಪ್ರವೃತ್ತಿ. ಈ ದ್ವೈತ ಸಂಶಯವನ್ನು ಅಪರೋಕ್ಷವೆಂಬ ಖಡ್ಗದಿಂದ ಕತ್ತರಿಸೆಂದು ಜಿಜ್ಞಾಸು ಪ್ರಾರ್ಥಿಸಬೇಕು. ಜ್ಞಾನದಿಂದ ಬಂಧಕ ಪ್ರಕೃತಿ ದಗ್ಧವಾದಾಗ, ತ್ರಿಗುಣಗಳೂ ಇಲ್ಲವಾದಾಗ, ಅಪ್ರಾರಬ್ಧ ಕರ್ಮಪೂರ್ತಿ ನಾಶವಾದಾಗ, ಅಜ್ಞಾನಿಯಂತೆ ಜ್ಞಾನಿ ಅಪ್ರಾರಬ್ಧಕರ್ಮದಿಂದ ಜನನ ಹೊಂದುವುದಿಲ್ಲ, ಪ್ರಾರಬ್ಧ ಪ್ರಯುಕ್ತ ಜನನ ಅದು ತೀರುವವರೆಗೆ ಬ್ರಹ್ಮಪ್ರಲಯ ಪರ್ಯಂತ ಇರಬಹುದು. ೨೫೦

೧.೧೫.೭ ಪರೀಕ್ಷಿದ್ರಾಜ ಗುಣದಲ್ಲಿ ಧರ್ಮರಾಜನಿಗೆ ಕಡಿಮೆಯಲ್ಲದವನೆಂದು ಈ ಶ್ಲೋಕ ಹೇಳುತ್ತಿದೆ. ಇದು ಶಕ್ಯವೆ? ಧರ್ಮರಾಜ ದೇವೋತ್ತಮ. ಪರೀಕ್ಷಿತ ಚಕ್ರವರ್ತಿ. ಆದರಿಂದ ಧರ್ಮರಾಜನಿಗೆ ಮೊಮ್ಮಗನಾಗಿ ಹುಟ್ಟಲು ಪರೀಕ್ಷಿತ ಯೋಗ್ಯನಾಗಿದ್ದ

ಎಂದಿಷ್ಟೇ ವಿವಕ್ಷಿತ. 'ಇಂದ್ರಾದಿ ದೇವತೆಗಳು ಮನುಷ್ಯರಾಗಿ ಅವತರಿಸಿದಾಗ ಅವರ ಕುಲದಲ್ಲಿ ಹುಟ್ಟಿದ ಸಾಮಾನ್ಯ ರಾಜರನ್ನು ಉತ್ತಮರೆಂದು ಹೊಗಳಿದರೆ ಅವರು ಅದೇ ಕುಲದಲ್ಲಿ ಹುಟ್ಟಿದ ಬೇರೆ ಸಾಮಾನ್ಯ ರಾಜರುಗಳಿಗಿಂತ ಉತ್ತಮರೆಂದು ಅಭಿಪ್ರಾಯ ಗ್ರಹಿಸಬೇಕು. ಸಮಾನರೆಂದು ಹೊಗಳಿದರೆ ವಂಶಜರೆಂದು ಹೇಳಿಕೊಳ್ಳಲು ಅರ್ಹರು ಎಂದು ಮಾತ್ರ ಅಭಿಪ್ರಾಯವಿಟ್ಟು ಕೊಳ್ಳಬೇಕು' ಎಂದು ಬ್ರಹ್ಮತರ್ಕ ಹೇಳಿದೆ. ೨೫೩

೧.೧೫.೧೦,೧೧ ಧರ್ಮರಾಜ ಮಹಾಪ್ರಸ್ಥಾನಕ್ಕೆ ಹೊರಡುವ ಮುನ್ನ ಲಯ ಚಿಂತನ ಮಾಡಿದ.

ವಾಗಾದಿ ಬ್ರಹ್ಮಪರ್ಯಂತ ದೇವತೆಗಳಿಗೆ ಉತ್ಪತ್ತಿಲಯಗಳನ್ನು ಚಿಂತಿಸುವುದು ಬ್ರಹ್ಮಯಜ್ಞ ವೆನಿಸುತ್ತದೆ. ಇದು ಸರ್ವಸಂಸಾರಮೋಚಕವೆಂದು ನಾರಾಯಣಾಧ್ಯಾತ್ಮ ಎಂಬ ಗ್ರಂಥ ಹೇಳಿದೆ. ಧರ್ಮರಾಜ ವಾಗಭಿಮಾನಿನಿ ಮುಂತಾದವರನ್ನು ಮನೋಭಿಮಾನಿ ಮುಂತಾದವರಲ್ಲಿ ಹೋಮಿಸಿದನೆಂದರೆ ಲಯಕಾಲದಲ್ಲಿ ಕೆಳಗಿನ ದೇವತೆಗಳಿಗೆ ಉತ್ತಮರಲ್ಲಿ ದೇಹಲಯವಾಗುವುದೆಂದು ಚಿಂತಿಸಿದನೆಂದು ಮಾತ್ರ ಅರ್ಥ ಹೊರತು ಅವನು ಚಿಂತಿಸುವಾಗ ದೇವತೆಗಳಿಗೆ ಲಯವಾಗುವುದಿಲ್ಲ ಎಂದು ಬ್ರಹ್ಮತರ್ಕ ಹೇಳಿದೆ. ೨೫೩

೧.೧೫.೧೩ ಧರ್ಮರಾಜ ಮಹಾಪ್ರಸ್ಥಾನದಲ್ಲಿ ತುಳಿದ ಹಾದಿ 'ನಾವರ್ತೇತ ಗತೋ ಯತಃ' ಎಂದು ಈ ಶ್ಲೋಕದಲ್ಲಿ ವರ್ಣಿತವಾಗಿದೆ ಎಂದ ಮಾತ್ರಕ್ಕೆ ಅದು ತಿರುಗಿ ಸಂಸಾರಕ್ಕೆ ಬಾರದಂಥ ಮೋಕ್ಷಮಾರ್ಗವೆಂದು ತಿಳಿಯಬಾರದು. ಅದು ಶರೀರತ್ಯಾಗದ ಒಂದು ವಿಧಾನಮಾತ್ರ. ಮಹಾಪ್ರಸ್ಥಾನಕ್ಕೆ ಹೊರಟವನು ತಿರುಗಿ ಮನೆಗೆ ಬರುವುದಿಲ್ಲವೆಂದು ನಿಶ್ಚಯ ಮಾಡಿಕೊಂಡೇ ಹೊರಟು ಶರೀರ ಪಾತವಾಗುವವರೆಗೂ ನಿಲ್ಲದೆ ನಡೆಯುತ್ತಲೆ ಇರಬೇಕು, ನಾವರ್ತೇತ, ಎಂದರೆ ಇದೇ ಅರ್ಥ. ಇದೊಂದು ವೀರಗತಿ. ೨೫೫

೧.೧೪.೧೫ ಉಳಿದ ಪಾಂಡವರೂ ಧರ್ಮರಾಜನನ್ನೇ ಹಿಂಬಾಲಿಸಿ ನಡೆದರು. 'ಆತ್ಮನಃ' ಎಂದರೆ ಪರಮಾತ್ಮನ ಸ್ವರೂಪವನ್ನೇ ಪೂರ್ಣಶ್ರೇಯಃ ಸಾಧನವೆಂದು ತಿಳಿದು ಅವನ ಪಾದಕಮಲವನ್ನೆ ಧ್ಯಾನಿಸಿದರು. ೨೫೬

೧.೧೬.೫ ಶೌನಕರು ಸೂತರ ಮುಂದೆ 'ರಾಜವೇಷವನ್ನು ಧರಿಸಿ ಗೋವನ್ನು ತುಳಿವವನು 'ಕೋಽಸೌ' ಯಾರವನು? ಎಂದು ಕೇಳಿದಂತೆ ಕಾಣುತ್ತದೆ. ಆದರೆ ಆತ ಕಲಿ ಎಂದು ಹೇಳಿಯಾಗಿರುವುದರಿಂದ ಪ್ರಶ್ನೆ ಕೂಡುವುದಿಲ್ಲ. ಆದರಿಂದ ಇದು

ಪ್ರಶ್ನೆಯಲ್ಲ. ಆಕ್ಷೇಪ. ರಾಜವೇಷದಿಂದ ಗೋವನ್ನು ತುಳಿಯುವನೆಂದರೆ ಅವನು ಯಾರು? ಸಜ್ಜನನಲ್ಲ, ಅತಿ ದುರ್ಜನ ಎಂದರ್ಥ. ೨೫೮

೧.೧೬.೬ ಕಲಿನಿಗ್ರಹದ ಕಥೆ ಒಂದು ವಿಷ್ಣುಕಥೆಯಾಗಿದ್ದರೆ ಅಥವಾ ವಿಷ್ಣುಭಕ್ತರ ಕಥೆಯಾಗಿದ್ದರೆ ಹೇಳಿರಿ ಎಂದು ಶೌನಕರು ಸೂತರಲ್ಲಿ ಕೇಳಿಕೊಳ್ಳುತ್ತಾರೆ. ಇಲ್ಲಿ ಒಂದು ಯದಿ ಶಬ್ದವಿದೆ. ವಿಷ್ಣು ಕಥೆಯಾಗಿದ್ದರೆ ಎಂದು ಹೇಳಲು ಅದು ಬೇಕು. ವಿಷ್ಣುಭಕ್ತರ ಕಥೆಯಾಗಿದ್ದರೆ ಎನ್ನಲು ಇನ್ನೊಂದು ಯದಿಶಬ್ದವಿಲ್ಲ. ಆದಕ್ಕೆ 'ಅಥವಾ' ಎಂಬಲ್ಲಿ ಅಥವಾ ಎಂಬ ಅರ್ಥ ಪ್ರತೀತಿಗೆ 'ಅಥ' ಎಂದಿಷ್ಟೇ ಸಾಕು. ವಾಶಬ್ದವಿಲ್ಲದಿದ್ದರೂ ನಿರ್ವಾಹವಾಗುತ್ತದೆ. ಅದರಿಂದ ವಾಶಬ್ದವನ್ನು ಬೇರೆಯಾಗಿಸಿ ಯದಿಶಬ್ದಾರ್ಥದಲ್ಲಿ ವಿವಕ್ಷೆ ಮಾಡಿದರೆ ಅದನ್ನು 'ವಿಷ್ಣುಭಕ್ತರ ಕಥೆಯಾಗಿದ್ದರೆ' ಎಂದು ಅನ್ವಯಿಸುವುದು ಶಕ್ಯವಾಗುತ್ತದೆ. ವಾಶಬ್ದಕ್ಕೆ ಯದಿಶಬ್ದಾರ್ಥವೂ ಇದೆ ಎನ್ನಲು ನಾಮಮಹೋದಧಿಗ್ರಂಥ ಆಧಾರ. ೨೫೮

೧.೧೬.೭ ಕೆಟ್ಟ ನರಕಾದ್ಯನರ್ಥ ತಂದುಕೊಳ್ಳುವುದರಲ್ಲಿಯೆ ಆಯುಷ್ಯವನ್ನು ಹಾಳು ಮಾಡಿಕೊಂಡಂತಾಗುವುದೆಂದು ಶೌನಕರು ಇಲ್ಲಿ ಹೇಳುತ್ತಿದ್ದಾರೆ. ಆದರೆ ಇದು ಯಾವಾಗ ಎಂದು ಹೇಳಿಲ್ಲ. ವಿಷ್ಣು ವೈಷ್ಣವರ ಕಥಾಶ್ರವಣವಿಲ್ಲದಿದ್ದಾಗ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ೨೫೯

೧.೧೬.೯ ಯಜ್ಞದಲ್ಲಿ ಪಶುವಧೆಗೆ ನರಸಿಂಹನನ್ನು ಮಹರ್ಷಿಗಳು ಕರೆಸಿಕೊಂಡಿ ದ್ದಾರೆ. ಆದರೆ ಅದೇ ಮುಖ್ಯ ಉದ್ದೇಶವಲ್ಲ. ಮೃತ್ಯು ನಿಯಾಮಕನಾದ ನರಸಿಂಹ ಸತ್ರಕಾಲದಲ್ಲಿ ನಮಗೆ ಮರಣಬಾರದಂತೆ ನೋಡಿಕೊಳ್ಳಲಿ, ಆದರಿಂದ ನಾವು ನಿರಾತಂಕವಾಗಿ ಹರಿಲೀಲಾಮೃತವೆನಿಸಿದ ಭಾಗವತ ರಸವನ್ನು ಪಾನಮಾಡುವಂತಾಗ ಲೆಂಬುದೇ ಮುಖ್ಯ ಉದ್ದೇಶ. ಈ ಅಭಿಪ್ರಾಯ ಸಿಗಲು ಇತಿಶಬ್ದ ಅಧ್ಯಾಹಾರ ಮಾಡಿ ಕೊಳ್ಳಬೇಕು— 'ಪೀಯೇತೇತ್ಯೇತದರ್ಥಂ' ಎಂದು. ೨೬೧

೧.೧೬.೧೭ ಶ್ರೀಕೃಷ್ಣ ಸಾರಥ್ಯ ಮಾಡಿದನೆಂದು ಪಾಂಡವರು ಅವನಲ್ಲಿ ಸ್ನೇಹ ಮಾಡಿದ್ದೂ ಅಲ್ಲ. ಶ್ರೀಕೃಷ್ಣ ಮಾಡಿದ ಸಾರಥ್ಯಾದಿಗಳನ್ನು ಜನರ ಬಾಯಿಂದ ಕೇಳಿ ಪರೀಕ್ಷಿತ ಕೃಷ್ಣನಲ್ಲಿ ಭಕ್ತಿ ಮಾಡಿದ್ದೂ ಅಲ್ಲ. ಪಾಂಡವರು ಸ್ವಾಭಾವಿಕವಾಗಿಯೆ ಭಕ್ತರು. ಪರೀಕ್ಷಿತನೂ ಸ್ವಭಾವತಃ ಭಕ್ತ. ಭಕ್ತರಾದ ಪಾಂಡವರಲ್ಲಿ ಭಗವಂತ ಸಾರಥ್ಯಾದಿಗಳಂತಹ ಸೇವೆಯನ್ನೂ ಮಾಡಿದ್ದರಿಂದ ಎಂಥ ಭಕ್ತವಾತ್ಸಲ್ಯ ಭಗವಂತನಿಗೆ ಎಂದು ಪರೀಕ್ಷಿತ ವಿಶೇಷಭಕ್ತಿ ಮಾಡಿದ. ೨೬೧

೧.೧೭.೨ ವೃಷಭರೂಪಿ ಧರ್ಮ 'ಮೇಹಂತಮಿವ ಬಿಭ್ಯತಂ' ಎಂದು ವರ್ಣಿತ ನಾಗಿದ್ದಾನೆ. ಅದು ಅಸಂಗತವಾಗುತ್ತದೆ. 'ಸೆಗಣಿ ಹಾಕುತ್ತಿರುವವನಂತೆ ಭಯಪಡುತ್ತಾನೆ' ಎಂದರೆ ಏನರ್ಥ? ಆದರಿಂದ 'ಬಿಭ್ಯತಮಿವ ಮೇಹಂತಂ' ಭಯಭೀತನಾದವನಂತೆ ಸೆಗಣಿ ಹಾಕುತ್ತಿದ್ದಾನೆ ಎಂದು ಸರಿಯಾಗಿ ಅನ್ವಯಿಸಿಕೊಳ್ಳಬೇಕು.

ಎತ್ತಿನ ಕಾಲನ್ನು ಮುರಿದವನಾರೆಂದು ಎತ್ತನ್ನು ಕೇಳಿದರೆ ಅದು ನನಗೆ ತಿಳಿಯದು ಎನ್ನುತ್ತದೆ. ವಸ್ತುತಃ ಕಾಲನ್ನು ಮುರಿದವ ಕಲಿ, ಅವನು ದುರ್ಜನ. ದುರ್ಜನರು ಮಾಡಿದ ತಪ್ಪನ್ನು ಎತ್ತಿ ಹೇಳಿದರೆ ದೋಷವಿಲ್ಲ, ಪುಣ್ಯವೆ ಬರುತ್ತದೆ. ಆದರೂ ಸಜ್ಜನರು ಮಾಡುವ ತಪ್ಪನ್ನು ಹೇಳಬಾರದೆಂದು ತಿಳಿಸುವ ಉದ್ದೇಶದಿಂದ ಎತ್ತು ಹಾಗೆ ಹೇಳುತ್ತಿದೆ. ಮತ್ತು ಈ ತಪ್ಪನ್ನು ಮಾಡಿದವ ಕಲಿಯೆಂದು ತಿಳಿಯಲು ರಾಜನಿಗೆ ಶಕ್ಯವಿರುವುದರಿಂದ ತಾನು ಹೇಳಬೇಕಾಗಿಲ್ಲ ಎಂಬುದೂ ಎತ್ತಿನ ಅಭಿಪ್ರಾಯವಾಗಿದೆ. ಕಾಲು ಮುರಿಯಲು ಮುಖ್ಯವಾಗಿ ಭಗವಂತನ ಇಚ್ಛೆ ಕಾರಣ. ಅದು ತನಗೆ ತಿಳಿದಿದ್ದರೂ ಜನರಿಗೆ ತಿಳಿದಿರುವುದಿಲ್ಲ ಎಂದು ತಿಳಿಸುವ ಅಭಿಪ್ರಾಯವೂ ಇದೆ. ೨೬೫

೧.೧೭.೩೨ ಪರೀಕ್ಷಿತ ಕಲಿಗೆ ಆಜ್ಞೆ ಮಾಡುತ್ತಾನೆ. 'ನೀನು ಬ್ರಹ್ಮಾವರ್ತದಲ್ಲಿರ ಕೂಡದು. ಅಲ್ಲಿ ಬ್ರಹ್ಮವಿತಾನಯಜ್ಞರಾದ ಮುನಿಗಳು ಯಜ್ಞಗಳಿಂದ ಭಗವಂತನನ್ನು ಆರಾಧಿಸುತ್ತಾರೆ'. ಇಲ್ಲಿ ಬ್ರಹ್ಮವಿತಾನಯಜ್ಞರೆಂದರೆ ಉಮಾದಿ ಬ್ರಹ್ಮಪರ್ಯಂತ ದೇವತೆಗಳ ಉತ್ಪತ್ತಿಲಯ ಚಿಂತನರೂಪವಾದ ಬ್ರಹ್ಮಯಜ್ಞವನ್ನು ಅಥವಾ ವೇದಾಧ್ಯಯನ ರೂಪವಾದ ಬ್ರಹ್ಮಯಜ್ಞವನ್ನು ಮಾಡುವವರು, ಮತ್ತು ವಿತಾನದಿಂದ ಅಂದರೆ ಚರುಪುರೋಡಾಶಾದಿ ದ್ರವ್ಯವಿಸ್ತಾರದಿಂದ ಯುಕ್ತವಾದ ವಿತಾನಯಜ್ಞವನ್ನು ಮಾಡುವವರೆಂದರ್ಥ. ೨೬೭

೧.೧೭.೩೩ 'ಆರ್ಯಾವರ್ತದಲ್ಲಿ ಇಷ್ಟಾತ್ಮಮೂರ್ತಿಯಾದ ಹರಿ ಸಜ್ಜನರಿಗೆ ಸುಖನೀಡುತ್ತಾನೆ' ಇಲ್ಲಿ ಇಷ್ಟಾತ್ಮಮೂರ್ತಿ ಎಂದರೆ ಸ್ವೇಚ್ಛಾನುಸಾರ ಸ್ವರೂಪಶರೀರವನ್ನು ತೋರುವವನೆಂದರ್ಥ. ೨೬೮

೧.೧೭.೪೦ ಮದ್ಯಪಾನ ಸ್ತ್ರೀಸಂಗ ಮುಂತಾದುವನ್ನು ಮಾಡಬಾರದೆಂದರೆ ಹೇಗೆ? ಬಲಿಪಾಡ್ಯದಂದು ದ್ಯೂತಕ್ರೀಡೆ, ಕೆಲವು ಕ್ಷತ್ರಿಯರಿಗೆ ಮದ್ಯಪಾನ, ಗೃಹಸ್ಥರಿಗೆ ಸ್ವಸ್ತ್ರೀಸಂಗ, ಯಜ್ಞಗಳಲ್ಲಿ ಪಶುಹಿಂಸೆ ಚಿನ್ನದ ಪವಿತ್ರದುಂಗುರಗಳು

ವಿಹಿತವಾಗಿರುವಾಗ ನಿಷೇಧ ಹೇಗೆ? ಎಂದರೆ ಶಾಸ್ತ್ರವಿಹಿತವಲ್ಲದ ಬೇರೆ ದ್ಯೂತ ಮದ್ಯಪಾನಾದಿಗಳನ್ನು ಮಾಡಬಾರದು. ೨೬೯

೧.೧೮.೩ ಪರೀಕ್ಷಿತ 'ವಿಜ್ಞಾನ'ದಿಂದ ಮೋಕ್ಷ ಸಂಪಾದಿಸಿದನೆಂದರೇನರ್ಥ? ಅವರವರಿಗೆ ವಿಶೇಷವಾಗಿ ಯೋಗ್ಯವಾದ ಮೋಕ್ಷಕಾರಣವಾದ ಜ್ಞಾನ 'ವಿಜ್ಞಾನ'ವೆನಿಸು ತ್ತದೆ. ಎಲ್ಲರಿಗೂ ಸಾಧಾರಣವಾಗಿ ಮೋಕ್ಷಸಾಧನವಾಗುವ ಜ್ಞಾನ 'ಜ್ಞಾನ'ವೆನಿಸುತ್ತದೆ ಎಂದು ಭಾಗವತ ತಂತ್ರ ಹೇಳಿದೆ. ೨೭೦

೧.೧೮.೧೩ ಭಗವದ್ಭಕ್ತರ ಸಂಗಸುಖಕ್ಕೆ ಸ್ವರ್ಗಸುಖವಾಗಲಿ ಮೋಕ್ಷಸುಖವಾಗಲಿ ಸಾಟಿಯಾಗದು. ಇನ್ನು ಐಹಿಕ ಭೋಗಭಾಗ್ಯಗಳ ಬಗ್ಗೆ ಏನು ಹೇಳಬೇಕು ಎಂದು ಶೌನಕರು ಹೇಳುತ್ತಾರೆ. ಇಲ್ಲಿ ಸತ್ಸಂಗದಂತಹ ಸಾಂಸಾರಿಕ ಸುಖ ಮೋಕ್ಷಾನಂದಕ್ಕಿಂತಲೂ ಅಧಿಕವೆನ್ನುವುದರ ಅಭಿಪ್ರಾಯ ಹೀಗೆ— ಕೆಲವರಿಗೆ ಅಲ್ಪಪ್ರಯತ್ನದಿಂದ ಪೂರ್ಣಸ್ವರೂಪಾ ನಂದಾನುಭವವಿಲ್ಲದ ಮೋಕ್ಷ ಲಭಿಸುತ್ತದೆ. ಅದಕ್ಕಿಂತ ಮಹಾಪ್ರಯತ್ನ ಮಾಡುವ ಜೀವನ್ಮುಕ್ತರಿಗೆ ಸತ್ಸಂಗದಿಂದ ಸಾಂಸಾರಿಕ ಸುಖವೂ ಅಧಿಕ, ಮೋಕ್ಷಾನಂದವೂ ಅಧಿಕ. ಅದರಿಂದ ಸತ್ಸಂಗ ಮೋಕ್ಷಕ್ಕಿಂತಲೂ ಮಿಗಿಲೆಂದರೆ ತಪ್ಪಿಲ್ಲ. ೨೭೨

೧.೧೮.೧೯ 'ಶ್ರೀಹರಿ ಅನಂತ. ಗುಣಪೂರ್ಣನಾದ್ದರಿಂದ ಅನಂತ' ಎಂದು ಎರಡುಬಾರಿ ಹೇಳುವುದು ಪುನರುಕ್ತಿ ಎಂದು ತಿಳಿಯಬಾರದು. ದೇಶಕಾಲಗಳಿಂದಲೂ ಅನಂತ, ಗುಣಗಳಿಂದಲೂ ಅನಂತ ಎಂದು ಅಭಿಪ್ರಾಯ. ೨೭೩

೧.೧೮.೨೨ 'ಪಾರಮಹಂಸ್ಯಸತ್ಯಂ' ಎಂದರೆ ಪರಮಹಂಸಾಶ್ರಮದಿಂದ ಪ್ರಾಪ್ಯವಾದ ಸತ್ಯವಾದ ಪರಬ್ರಹ್ಮ. ೨೭೪

೧.೧೮.೨೬ ಶಮೀಕಮುನಿ 'ಬ್ರಹ್ಮಭೂತ'ರೆಂದರೆ ಬ್ರಹ್ಮನೆ ಆಗಿದ್ದರೆಂದರ್ಥವಲ್ಲ. 'ಬ್ರಹ್ಮಣಿ ಭೂತಂ' ಬ್ರಹ್ಮನಲ್ಲಿ ಮನಸ್ಸಿಟ್ಟವರು, ಅನಾಯಾಸವಾಗಿ ಮನಸ್ಸನ್ನು ಬ್ರಹ್ಮನಲ್ಲಿ ಏಕಾಗ್ರಗೊಳಿಸಬಲ್ಲವರಾಗಿದ್ದವರು ಎಂದರ್ಥ. ೨೭೫

೧.೧೮.೨೯ ಪರೀಕ್ಷಿದ್ರಾಜನಿಗೆ ಶಮೀಕ ಮುನಿಯಲ್ಲಿ ಮತ್ಸರ ಉಂಟಾಯಿತೆಂದರೆ ಹೇಗೆ? ರಾಜನಿಗೆ ಮುನಿಯಲ್ಲಿ ಮತ್ಸರಪಡುವಂಥದ್ದೇನಿರುತ್ತದೆ? ಕಲಿನಿಗ್ರಹ ಮಾಡಿದವನಾದ್ದರಿಂದ ಕಲಿಪ್ರವೇಶವೂ ಇಲ್ಲ. ಅದರಿಂದ ಇಲ್ಲಿ ಮತ್ಸರ ಎಂದರೆ ಹೊಟ್ಟೆಕಿಚ್ಚಲ್ಲ. ಈತ ನನಗೆ ಅಧೀನವಾಗಿ ವರ್ತಿಸುತ್ತಿಲ್ಲ ಎಂಬ ಅಸಮಾಧಾನವೆ ಇಲ್ಲಿ ಮತ್ಸರ. ಇದೂ ಕೇವಲ ಹರೀಚ್ಛೆ. ವಿಪ್ರಶಾಪದಿಂದ ತಕ್ಷಕ ಕಚ್ಚಿ ಮರಣ

ಬರಲಿದೆ ಎಂದು ಪರೀಕ್ಷಿತನಿಗೆ ಮೊದಲೇ ಗೊತ್ತಿತ್ತು. ಆದರೂ ಆತ ಅದಕ್ಕೆ ಏನು ಮಾಡದೆ ಮತ್ಸರವನ್ನೇ ಮಾಡಿದ ! ೨೭೬

೧.೧೮.೩೬ 'ಕೌಶಿಕ್ಯಪ ಉಪಸ್ಪೃಶ್ಯ' ಎಂದರೆ ಕೌಶಿಕೀನದೀನೀರಿಂದ ಆಚಮನ ಮಾಡಿ ಶೃಂಗಿ ರಾಜನಿಗೆ ಶಾಪವಿತ್ತ ಎಂದು ಅರ್ಥವಲ್ಲ. ಕೌಶಿಕೀನದಿ ಅಲ್ಲಿ ಹರಿಯುತ್ತಿದ್ದರೆ ರಾಜನೇಕೆ ನೀರಿಗಾಗಿ ಆಶ್ರಮದೊಳಗೆ ಬರುತ್ತಿದ್ದ? ಆದರಿಂದ 'ಕೌಶಿಕೀ' ಎಂದರೆ ಕುಶನಿರ್ಮಿತ ಪವಿತ್ರಧಾರಿಯಾದ ಶೃಂಗಿ 'ಅಪ ಉಪಸ್ಪೃಶ್ಯ' ನೀರಿಂದ ಆಚಮನಮಾಡಿ ಶಾಪವಿತ್ತ ಎಂದರ್ಥ. ೨೭೬

೧.೧೮.೪೩ ರಾಜನಿಲ್ಲದ ರಾಜ್ಯ 'ವಿವರೂಥ'ದಂತೆ ನಾಶಹೊಂದುತ್ತದೆ. ಇಲ್ಲಿ 'ವಿ-ವರೂಥ' ಎಂದರೆ ಸೇನಾಧಿಪತಿಯ ರಕ್ಷಣೆಯಲ್ಲಿಲ್ಲದ ಸೈನ್ಯ. ೨೭೭

೧.೧೮.೪೪ 'ಪಶೋರ್ವಿಲುಂಪಕಾಃ' ಪಶುಗಳನ್ನು ಅಪಹರಿಸುವವರು ಪಶು ಗಳನ್ನೂ ಸ್ತ್ರೀಯರನ್ನೂ ಅಪಹರಿಸುತ್ತಾರೆ ಎನ್ನುವುದು ಕೂಡುವುದಿಲ್ಲ. ಅದಕ್ಕೆ 'ಪಶು' ಎಂದರೆ ರಾಷ್ಟ್ರ ಎಂದು ಕೋಶವಿದೆ. ರಾಷ್ಟ್ರವನ್ನು ಕೊಳ್ಳೆ ಹೊಡೆಯುವವರು ಪಶುಗಳನ್ನೂ ಸ್ತ್ರೀಯರನ್ನೂ ಅಪಹರಿಸುತ್ತಾರೆ. ೨೭೮

೧.೧೮.೫೦ ಅನ್ಯರು ಮಾನಾಪಮಾನಗಳನ್ನು ಮಾಡಿದಾಗ ಸಜ್ಜನರು ಅದಕ್ಕೆ ಉಬ್ಬುವುದಿಲ್ಲ ಕುಗ್ಗುವುದಿಲ್ಲ. 'ಆತ್ಮಾ ಗುಣಾಶ್ರಯಃ' ತಾನು ಮಾಡಿದ ಕರ್ಮದ ಫಲ ತನ್ನಲ್ಲಿಯೆ ಬಂದು ಸೇರುತ್ತದೆ. ಮಾನಾಪಮಾನಗಳು ತಮ್ಮ ಪುಣ್ಯಪಾಪಗಳ ಫಲಗಳು. ಅವುಗಳಿಗೆ ಪರರನ್ನು ಹೊಣೆಯಾಗಿಸ ಬಾರದೆಂದು ಸಜ್ಜನರು ತಿಳಿದಿದ್ದಾರೆ. ೨೭೯

೧.೧೯.೧೭ ಗಂಗೆಯ ದಕ್ಷಿಣತೀರದಲ್ಲಿ ಪರೀಕ್ಷಿತ ಪ್ರಾಯೋಪವೇಶಕ್ಕೆ ಕುಳಿತ ಎಂದು ಇಲ್ಲಿ ಹೇಳಿದೆ. ಹಿಂದೆ ೭ನೇ ೫ನೇ ಶ್ಲೋಕಗಳಲ್ಲಿ ಗಂಗೆಯಲ್ಲಿ ಕುಳಿತನೆಂದಿದೆ. ವಿರೋಧಪರಿಹಾರಕ್ಕೆ ಗಂಗಾ ಶಬ್ದಕ್ಕೆ ತೀರದಲ್ಲಿ ಲಕ್ಷಣಾವೃತ್ತಿಯಲ್ಲ. ತೀರ ಶಬ್ದಕ್ಕೆ ಗಂಗೆಯಲ್ಲಿ ಲಕ್ಷಣಾವೃತ್ತಿ. ಏಕೆಂದರೆ ಮಹಾಭಾರತದಲ್ಲಿ ಹೇಳಿದಂತೆ ಗಂಗಾ ಪ್ರವಾಹದಲ್ಲಿಯೆ ಸ್ವಲ್ಪ ದಕ್ಷಿಣ ಭಾಗದಲ್ಲಿ ರಾಜನಿಗೆ ಹಿಂದೆಯೆ ಅರಮನೆಯೊಂದಿತ್ತು. ಅದರಲ್ಲಿ ಪ್ರಾಯೋಪವೇಶಕ್ಕೆ ಕುಳಿತನೆಂದು ಭಾಗವತದ ಅಭಿಪ್ರಾಯ. ೨೮೧

೧.೨೦.೪ ಆಪೀಚ್ಯ ವಯಸ್ಸಿನ ಶರೀರಕಾಂತಿಯಿಂದ ಶುಕಮುನಿ ಸ್ತ್ರೀಯರಿಗೆ ಆಕರ್ಷಕರಾಗಿದ್ದರು. ಇಲ್ಲಿ ಆಪೀಚ್ಯವಯಸ್ಸೆಂದರೆ ಬಾಲ್ಯ ಯೌವನಗಳ ನಡುವಿನ ವಯಸ್ಸೆಂದು ಅಭಿಧಾನ ಗ್ರಂಥ ಹೇಳುತ್ತದೆ.

ಅಪಶ್ಯತಾಂ ಎಂಬಲ್ಲಿಯೂ ಅನ್ವಯಿಸಿಕೊಳ್ಳಬೇಕು. ನಿದ್ರೆ ಎಂದರೆ ಇಲ್ಲಿ ಬಂಧಕ ಪ್ರಕೃತಿ. ಅದರ ಪ್ರಭಾವಕ್ಕೆ ಸಿಲುಕಿ ಅವರು ಪರಾಪರತತ್ವವನ್ನು ಸರಿಯಾಗಿ ತಿಳಿಯುತ್ತಿಲ್ಲ. ೨೮೨

೨.೧.೧ ಮುಮುಕ್ಷುಗಳು ಸದಾ ಏನು ಶ್ರವಣ ಮಾಡಬೇಕು ಏನು ಜಪಿಸಬೇಕು ಎಂದು ಮುಂತಾಗಿ ಪರೀಕ್ಷಿತ ಕೇಳಿದ್ದ. ಶುಕಮುನಿ ಹೇಳುತ್ತಾರೆ, 'ಶ್ರವಣಾದಿಗಳನ್ನು ಮಾಡಬೇಕಾದವುಗಳಲ್ಲಿ ಯಾವುದು ಶ್ರೇಷ್ಠ? ಈ ಪ್ರಶ್ನೆ ಉತ್ತಮ' ಎಂದು. ಇಲ್ಲಿ 'ಯಾವುದು ಶ್ರೇಷ್ಠ?' ಎನ್ನುವ 'ಈ ಪ್ರಶ್ನೆ ಉತ್ತಮ' ಎಂದು ಅನ್ವಯಿಸಲು ಇತಿ ಶಬ್ದವಿಲ್ಲ. ಅಧ್ಯಾಹಾರ ಮಾಡಿಕೊಳ್ಳಬೇಕು. ೩೩೪

೨.೧.೨, ೩ ಪರಾಪರ ತತ್ವಗಳನ್ನು ಸರಿಯಾಗಿ ತಿಳಿಯದ ಅನ್ಯ ದಾರ್ಶನಿಕರಿಗೆ ಯೌವನದ ಎಲ್ಲ ರಾತ್ರಿ ಹಗಲುಗಳೂ ವ್ಯರ್ಥವಾಗಿ ಕಳೆದುಹೋಗುತ್ತವೆ. ಇಲ್ಲಿ ಪ್ರಶ್ನೆ ಬರುತ್ತದೆ. ಅವರು ಪರಾಪರತತ್ವವನ್ನು ಸರಿಯಾಗಿ ಏಕೆ ತಿಳಿಯುವುದಿಲ್ಲ? ಅವರು ವಿಚಾರ ಮಾಡುವುದರಲ್ಲಿ ಬಹಳ ಪ್ರಚಂಡರೇ ತಾನೆ? ಈ ಪ್ರಶ್ನೆಗೆ ಸಮಾಧಾನವಾಗಿ 'ನಿದ್ರಯಾ' ಎಂಬುದನ್ನು ಹಿಂದಕ್ಕೆ ಅಪಶ್ಯತಾಂ ಎಂಬಲ್ಲಿಯೂ ಅನ್ವಯಿಸಿಕೊಳ್ಳಬೇಕು. ನಿದ್ರೆ ಎಂದರೆ ಇಲ್ಲಿ ಬಂಧಕ ಪ್ರಕೃತಿ. ಅದರ ಪ್ರಭಾವಕ್ಕೆ ಸಿಲುಕಿ ಅವರು ಪರಾಪರತತ್ವವನ್ನು ಸರಿಯಾಗಿ ತಿಳಿಯುತ್ತಿಲ್ಲ. ೩೩೫

೨.೧.೪ ಬಂಧಕ ಪ್ರಕೃತಿಯ ಪ್ರಭಾವದಿಂದ ಬುದ್ಧಿವಂತರಾದ ಅನ್ಯದಾರ್ಶನಿಕರೂ ಕೂಡ ಅಸತ್ತಾದ ಶರೀರ ಪತ್ನೀಪುತ್ರಾದಿ ವಿಷಯ ಪದಾರ್ಥಗಳಲ್ಲಿಯೆ ಆಸಕ್ತಿ ತೋರುತ್ತಾರೆ. ಇಲ್ಲಿ ಅಸತ್ತೆಂದರೆ ಮಿಥ್ಯೆಯಲ್ಲ, ಅಮಂಗಲಕರ ತಮಗೆ ದೈನ್ಯಸ್ಥಿತಿಯನ್ನು ತರುವವುಗಳೆಂದರ್ಥ. ೩೩೬

೨.೧.೭ 'ಮುಕ್ತರೂ 'ಪ್ರಾಯೇಣ' ಹೆಚ್ಚಾಗಿ ಹರಿಯ ಗುಣಗಾನದಲ್ಲಿ ನಿರತರಾಗಿರುತ್ತಾರೆ' ಇಲ್ಲಿ 'ಪ್ರಾಯೇಣ' ಹೆಚ್ಚಾಗಿ ಎಂದರೆ ಕೆಲವೊಮ್ಮೆ ಮುಕ್ತರು ಧ್ಯಾನಮಗ್ನರಾಗುತ್ತಾರೆ. ಆ ಕಾಲದಲ್ಲಿ ಹೊರತು ಬೇರೆ ಎಲ್ಲ ಕಾಲಗಳಲ್ಲಿ ಹರಿಯ ಗುಣಗಾನ ಮಾಡುತ್ತಾರೆ. 'ಏತತ್ ಸಾಮಗಾಯನ್ನಾಸ್ತೇ' ಮುಕ್ತಬ್ರಹ್ಮ ಸಾಮಗಾನ ಮಾಡುತ್ತಾನೆ ಎಂದು ಉಪನಿಷತ್ತು ಹೇಳಿದೆ.

ಮುಕ್ತರನ್ನು 'ನೈರ್ಗುಣ್ಯಸ್ಥ'ರೆಂದು ಕರೆಯಲಾಗಿದೆ. ನಿರ್ಗುಣ ಎಂದರೆ ಪ್ರಾಕೃತ ತ್ರಿಗುಣ ರಹಿತನಾದ ಪರಮಾತ್ಮ. ಅವನ ಲೋಕ ನೈರ್ಗುಣ್ಯ. ಅಲ್ಲಿ ಇರುವ ಮುಕ್ತರು ನೈರ್ಗುಣ್ಯಸ್ಥರೆನಿಸುತ್ತಾರೆ. ೩೩೭

೨.೧.೮ ಶುಕಮುನಿ ಹೇಳುತ್ತಾರೆ, 'ದ್ವಾಪರಾದಿಯಲ್ಲಿ ನಾನು ತಂದೆಯಾದ ವೇದವ್ಯಾಸರಲ್ಲಿ ಭಾಗವತವನ್ನು ಅಧ್ಯಯನಮಾಡಿದೆನೆಂದು. 'ದ್ವಾಪರಾದಿಯಲ್ಲಿ' ಎಂದರೆ ದ್ವಾಪರದಲ್ಲಿ, ಅದರಲ್ಲಿಯೂ ಆದಿಯಲ್ಲಿ ಅಂದರೆ, ಕೃಷ್ಣಾವತಾರಕ್ಕೆ ಮೊದಲೇ ಎಂದರ್ಥ. ಏಕೆಂದರೆ ಸ್ಕಾಂದಪುರಾಣ ಹೇಳುವಂತೆ ವ್ಯಾಸರು ಆರುನೂರು ವರ್ಷ ವಯಸ್ಸಿನವರಾಗಿದ್ದಾಗ ಧೃತರಾಷ್ಟ್ರನಿಗೆ ಜನ್ಮವಿತ್ತರು. ಧೃತರಾಷ್ಟ್ರ ದ್ವಾಪರಾಂತ್ಯದಲ್ಲಿ ಹುಟ್ಟಿದನೆಂದು ಭಾರತ ಹೇಳುತ್ತದೆ. ಅದರಿಂದ ವ್ಯಾಸರೂ ದ್ವಾಪರಾಂತ್ಯದಲ್ಲಿಯೆ ಇದ್ದವರು. ದ್ವಾಪರಾಂತೇ ಎಂದೇ ಸ್ಪಷ್ಟ ಹೇಳಿದ್ದರೆ ಕೃಷ್ಣಾವತಾರಕ್ಕೆ ಮೊದಲೇ ಕೃಷ್ಣಕಥೆ ಹೇಳಿದ ಸರ್ವಜ್ಞರು ವ್ಯಾಸರು ಎನ್ನುವ ಮಹಿಮೆ ಉಕ್ತವಾಗುತ್ತಿರಲಿಲ್ಲ. ೩೩೮

೨.೧.೯ 'ನಾನು ಅಪರೋಕ್ಷಜ್ಞಾನಿ. ನನಗೆ ಮುಕ್ತಿ ನಿಶ್ಚಿತವೆ ಆದರೂ ಭಗವಂತನ ಲೀಲಾಮೃತದ ಆಕರ್ಷಣೆಗೊಳಗಾಗಿ ಭಾಗವತವನ್ನು ಅಧ್ಯಯನ ಮಾಡಿದೆ' ಎನ್ನುತ್ತಾರೆ ಶುಕಮುನಿ. ಇಲ್ಲಿ ಪರಿನಿಷ್ಠಿತ' ಶಬ್ದವಿದೆ. ನಿಶ್ಚಿತ ಎಂದರ್ಥ. 'ಮುಕ್ತಿ ನಿಶ್ಚತವಿರುವವರೂ ಕೂಡ ಮುಕ್ತಿಯಲ್ಲಿ ಅಧಿಕ ಆನಂದ ಸಿಗುವುದಕ್ಕೆ ಶಾಸ್ತ್ರಾಧ್ಯಯನ ನಿರತರಾಗುತ್ತಾರೆ' ಎಂದು ಗರುಡ ಪುರಾಣ ಹೇಳಿದೆ. ೩೪೦

೨.೧.೧೮ ವಿಷಯಪದಾರ್ಥ ಸೇವನೆಯಿಂದ ವ್ಯಗ್ರವಾದ ಮನಸ್ಸನ್ನು ಒಂದು ಶುಭ ವಸ್ತುವಿನಲ್ಲಿ ನೆಲೆಗೊಳಿಸಬೇಕು. ಆಗಲೆ, ದಾರಿದ್ರ್ಯದಿಂದ ಬಳಲಿದವನಿಗೆ ಮಹಾನಿಧಿ ಸಿಕ್ಕಂತೆ ಪರಾಮಾನಂದವಾಗುತ್ತದೆ. ಇಲ್ಲಿ 'ಶುಭವಸ್ತು' ಎಂದರೆ ಆನಂದಮಯನಾದ ಪರಮಾತ್ಮ. ೩೪೧

೨.೧.೧೯ 'ಮನಸ್ಸಿಗೆ ವಿಷಯವಿಲ್ಲದಂತೆ ಮಾಡಿ ನಿಲ್ಲಿಸಬೇಕು. ಏನನ್ನೂ ಆಲೋಚಿಸಬಾರದು' ಎಂದರೆ, ಇದು ಶಕ್ಯವೆ? ಆದರಿಂದ 'ಮನಸ್ಸನ್ನು ವಿಷಯ ಪದಾರ್ಥ ದಿಂದ ಈಚೆಗೆ ಸೆಳೆದು ಭಗವಂತನಲ್ಲಿ ನಿಲ್ಲಿಸಬೇಕು. ಬೇರೆ ಏನನ್ನೂ ಆಲೋಚಿಸಬಾರದು' ಎನ್ನಬೇಕು. ೩೪೨

೨.೧.೨೧ ಭಗವಂತನ ಅವಯವಗಳನ್ನು ಒಂದೊಂದಾಗಿ ಚಿಂತಿಸಿದರೆ ಮುಂದೆ ಭದ್ರನ ಸಮಗ್ರಾವಯವ ಧ್ಯಾನಕ್ಕೆ ಬೇಕಾಗುವ ಮನೋನಿಗ್ರಹ ತರಬಲ್ಲ ಭಕ್ತಿ ಎಂಬ ಸಾಧನ ಕೈಗೂಡುತ್ತದೆ. ಇಲ್ಲಿ 'ಭದ್ರ' ಎಂದರೆ ಭಗವಂತ. ೩೪೩

೨.೧.೨೨ ಸಂಸ್ಕೃತದಲ್ಲಿ ಏನು, ಹೇಗೆ, ಯಾವ ವಿಷಯದಲ್ಲಿ, ಯಾವ ರೀತಿ ಎಂದು ಮುಂತಾಗಿ ಪ್ರಶ್ನೆ ಮಾಡಲು 'ಕಿಂ' ಶಬ್ದ. ಯಾವುದೋ ಅದು, ಹೇಗೋ ಹಾಗೆ,

'ರಾಜನು ಹೇಗೋ ಹಾಗೇ ಪ್ರಜೆಗಳು' ಇತ್ಯಾದಿ ವಿವಕ್ಷೆಯಲ್ಲಿ 'ಯತ್' ಶಬ್ದ ಬಳಕೆಯಲ್ಲಿದೆ. 'ಯಥಾ ಸಂಧಾರ್ಯತೇ ಬ್ರಹ್ಮನ್' ಭಗವಂತನ ಅವಯವಗಳನ್ನು ಹೇಗೆ ಧ್ಯಾನಿಸಬೇಕು? ಇತ್ಯಾದಿ ವಾಕ್ಯಗಳು ಪ್ರಶ್ನಾರ್ಥಕವಾಗಿರುವುದರಿಂದ ಕಿಂ ಶಬ್ದ ಪ್ರಯೋಗಿಸಬೇಕಾಗಿತ್ತು. ಆದರೆ 'ಯತ್' ಶಬ್ದವಿದೆ. ಈ ಸಮಸ್ಯೆಗೆ ಪರಿಹಾರವಾಗಿ ಇಲ್ಲಿ 'ಯತ್' ಶಬ್ದವೇ ಪ್ರಶ್ನಾರ್ಥಕವೆನ್ನಬೇಕು. ಉದಾ: ಮುಕ್ತಲೋಕದಲ್ಲಿ ಸೂರ್ಯ ಯಾರ ಪ್ರೇರಣೆಯಿಂದ ಸಕಾಲದಲ್ಲಿ ಉದಿಸುತ್ತಾನೆ? ಎಂದು ಪ್ರಶ್ನೆ ಮಾಡುವ ಅಭಿಪ್ರಾಯದಲ್ಲಿ ವೇದವು 'ಯತಶ್ಚೋದೇತಿ ಸೂರ್ಯಃ' ಎಂದು ಯತ್‌ಶಬ್ದ ಪ್ರಯೋಗ ಮಾಡಿದೆ. ೩೪೩

೨.೧.೨೪ 'ವಿಶೇಷ' ಪರಮಾತ್ಮನಿಗೆ ಶರೀರದಂತಿದೆ. ಇಲ್ಲಿ 'ವಿಶೇಷ' ಎಂದರೇನು? ಪಂಚಭೂತಗಳಲ್ಲಿ ಒಂದಾದ ಪೃಥಿವಿ ಎಂದಿಟ್ಟುಕೊಂಡರೆ 'ಸಾವೃತಿ' ಎಂದು ಸಪ್ತಾವರಣ ಗಳನ್ನು ಹೇಳುವುದು, ಮುಂದೆ 'ಪಾತಾಲಲೋಕ ಈ ಪರಮಾತ್ಮನ ಶರೀರದ ಪಾದ' ಎನ್ನುವುದು ಕೂಡಲಾರದು. ಬ್ರಹ್ಮಾಂಡ ಪರಮಾತ್ಮನ ಶರೀರವೆಂದರೆ ಆದಕ್ಕೆ ಸಪ್ತಾವರಣ ಕೂಡುತ್ತದೆ. ಬ್ರಹ್ಮಾಂಡಶರೀರದ ಪಾದ ಪಾತಾಲ ಎಂದು ಮುಂತಾಗಿ ಹೇಳುವುದೂ ಸರಿಯಾಗುತ್ತದೆ. ಅದು ಅವನಿಗೆ ವಿಷಯ ಪದಾರ್ಥ ಸಂಪರ್ಕದಿಂದ ಸುಖದುಃಖ ಗಳನ್ನುಂಟು ಮಾಡುತ್ತದೆ ಎಂದರ್ಥವಲ್ಲ, ಶಿಲಾ ಪ್ರತಿಮೆಯಂತೆ ಬ್ರಹ್ಮಾಂಡ ಒಂದು ಪ್ರತಿಮೆ. ಅದರ ಪಾದ ಪಾತಾಲಲೋಕ ಎಂದು ಮುಂತಾಗಿ ಗ್ರಹಿಸಬೇಕೆಂದು ಬ್ರಹ್ಮವೈವರ್ತಪುರಾಣ ಹೇಳಿದೆ. ೩೪೫

೨.೧.೨೫ ಇಲ್ಲಿ ಹೇಳಿದ ವೈರಾಜಪುರುಷ ಬ್ರಹ್ಮನಲ್ಲ, ವಿಷ್ಣು. ಏಕೆಂದರೆ ಪಕ್ಷ್ಮಾಣಿ ವಿಷ್ಣೋಃ (ಶ್ಲೋಕ ೩೦) ಎಂದು ಮುಂತಾಗಿ ವಿಷ್ಣುವಿನ ಅವಯವ ವರ್ಣನೆ ಬರುತ್ತದೆ. ಮುಂದಿನ ಅಧ್ಯಾಯದ ಮೊದಲನೆ ಶ್ಲೋಕದಲ್ಲಿ ಈ ಅವಯವ ಧ್ಯಾನದಿಂದ ಬ್ರಹ್ಮನಿಗೆ ಲೋಕಸೃಷ್ಟಿಗೆ ಸರಿಯಾದ ಸ್ಫೂರ್ತಿ ದೊರಕಿತೆಂದೂ ಹೇಳಿದೆ. ಅದರಿಂದ ಚೆನ್ನಾಗಿ ವಿರಾಜ ಮಾನವಾದುದರಿಂದ ಬ್ರಹ್ಮಾಂಡ ವಿರಾಟ್ ಎನಿಸುತ್ತದೆ. ಅದರೊಳಗಿರುವ ಭಗವದ್ರೂಪ ವೈರಾಜ. ಅಥವಾ ವಿಶೇಷವಾಗಿ 'ರಾಟ್' ಎಂದರೆ ಉತ್ತಮ, ಸರ್ವೋತ್ತಮನಾದ್ದರಿಂದ ವಿರಾಟ್, ಅವನೆ ವೈರಾಜ. ೩೪೬

೨.೧.೨೬ ಚಿನ್ಮಯನಾದ ಭಗವಂತನಿಗೆ ಜಡಪಾತಾಲಾದಿಲೋಕ ಅವಯವವಾಗ ಲಾರದು. ಅದರಿಂದ ಅವನ ಶಿಲಾಪ್ರತಿಮೆಯಂತಿರುವ ಬ್ರಹ್ಮಾಂಡಕ್ಕೆ

ಪಾತಾಲಲೋಕ ಪಾದವೆಂದು ತಿಳಿಯಬೇಕು. ಸ್ವರೂಪಶರೀರದ ಪಾದವಿವಕ್ಷೆಯಲ್ಲಿ ಪಾತಾಲ ಪಾದವಲ್ಲ, ಪಾದದಿಂದ ಹುಟ್ಟಿ ಪಾದವನ್ನೇ ಆಶ್ರಯಿಸಿರುವುದು ಪಾತಾಲಲೋಕ ಎನ್ನಬೇಕು. ೩೪೭

೨.೧.೩೧ ಸೂರ್ಯಚಂದ್ರರು ವಿರಾಡ್ರೂಪಿಯಾದ ಪರಮಾತ್ಮನ ಕೋರೆಹಲ್ಲುಗಳು ಎಂದೂ, ಸೂರ್ಯ ಅವನ ಕಣ್ಣು ಎಂದೂ ಒಬ್ಬ ಸೂರ್ಯನನ್ನು ಎರಡು ಬಾರಿ ಎರಡುಕಡೆ ಹುಟ್ಟಿದಂತೆ ವರ್ಣಿಸಿರುವುದು ದೇವತೆಗಳಿಗೆ ಬಹು ರೂಪಗಳಿರುವುದರಿಂದ ಕೂಡುತ್ತದೆ. ಸೂರ್ಯ ಒಂದು ರೂಪದಿಂದ ಪರಮಾತ್ಮನ ಕಣ್ಣಿಂದ, ಇನ್ನೊಂದು ರೂಪದಿಂದ ಕೋರೆಹಲ್ಲಿಂದ ಹುಟ್ಟುವುದು ಅಸಂಗತವಲ್ಲ ಎಂದು ಬ್ರಹ್ಮತರ್ಕ ಹೇಳಿದೆ. ೩೪೮

೨.೨.೨ ಹಿಂದಿನ ಶ್ಲೋಕದಲ್ಲಿ ಬ್ರಹ್ಮ ಪ್ರಕೃತನಾಗಿದ್ದರೂ ಈ ಶ್ಲೋಕದಲ್ಲಿ 'ಏಷ ಪಂಥಾಃ' ಎಂದರೆ 'ವಿಷ್ಣುವೆ ಸಕಲಶಬ್ದ ಮುಖ್ಯವಾಚ್ಯ' ಎಂದರ್ಥ. ಏಕೆಂದರೆ ಬ್ರಹ್ಮ ಪ್ರಕೃತನಾಗಿರುವುದು 'ಆತ್ಮಯೋನಿ' ಶಬ್ದದಿಂದ. 'ಪರಮಾತ್ಮನಾದ ಹರಿಯಿಂದ ಜನಿಸಿ ದವನು' ಎಂದು ಹೇಳುವ ಆ ಶಬ್ದದಿಂದಲೆ ಪರಮಾತ್ಮನಾದ ಹರಿಯೂ ಪ್ರಕೃತನಾಗಿದ್ದಾನೆ. ಇಂದ್ರಾದಿ ಶಬ್ದಗಳಿಂದ ಕರೆದು ಸರ್ವಶಬ್ದವಾಚ್ಯನಾದ ಹರಿಯನ್ನೇ ಉಪಾಸನೆ ಮಾಡಬೇಕು ಅನ್ಯರನ್ನು ಕರೆದು ಉಪಾಸನೆ ಮಾಡಿದರೆ ಮೋಕ್ಷಾದಿ ಪುರುಷಾರ್ಥಗಳು ಸಿಗಲಾರವು. ೩೫೦

೨.೨.೩ ಸರ್ವಶಬ್ದಗಳಿಗೂ ಮುಖ್ಯಾರ್ಥ ವಿಷ್ಣುವೆ ಆಗಿರುವುದರಿಂದ ಇಂದ್ರಾದಿ ನಾಮಗಳಿಂದ ಇಂದ್ರಾದಿಗಳ ಉಪಾಸನೆ ಮಾಡಕೂಡದು. ಶರೀರಧಾರಣೆಗಾಗಿ ಐಹಿಕ ಫಲದ ಉದ್ದೇಶದಿಂದ ಸ್ವಲ್ಪ ಉಪಾಸನೆ ಮಾಡಿದರೂ ಅಷ್ಟಕ್ಕೇ ನಿಲ್ಲಿಬೇಕು. ಇಲ್ಲದಿದ್ದರೆ ಮನೋನಿಗ್ರಹ ಅಸಾಧ್ಯವಾದೀತು. ನರಕಾದ್ಯನರ್ಥವೂ ಉಂಟಾದೀತೆಂದು ಬ್ರಹ್ಮಾಂಡ ಪುರಾಣವೂ ಹೇಳಿದೆ. ೩೫೧

೨.೨.೬ ಮನೋನಿಗ್ರಹ ಸಂಪಾದಿಸಿ ಧ್ಯಾನ ಮಾಡುವಾಗ ನನಗೆ ಪರಮಾತ್ಮ ಪ್ರಾಪ್ತಿಯಾಗೇ ತೀರುವುದೆಂದು ದೃಢ ವಿಶ್ವಾಸವಿಡಬೇಕು. 'ನಿಯತಾರ್ಥ' ಎಂದರೆ 'ನಾನು ಮರಣೋತ್ತರದಲ್ಲಿ ಪರಮಾತ್ಮನನ್ನು ಹೊಂದುತ್ತೇನೆ' ಎಂದು ದೃಢನಿಶ್ಚಯ ಉಳ್ಳವನು. ೩೫೨

೨.೨.೭ ಎಚ್ಚತ್ತಿರುವವನು ಮಲಗಿದವರನ್ನು ಎಲ್ಲರನ್ನೂ ನೋಡುವಂತೆ ಅಜ್ಞಾನದ ನಿದ್ದೆಯಲ್ಲಿ ಮಲಗಿದ ಜೀವರೆಲ್ಲರನ್ನೂ ಸರ್ವಜ್ಞನಾದ ಪರಮಾತ್ಮನೊಬ್ಬನೇ ನೋಡುತ್ತಾನೆ ಎಂದು ವ್ಯೋಮಸಂಹಿತೆ ಹೇಳುತ್ತದೆ. ಹಾಗೇ ಶ್ರುತಿಯೂ

ಹೇಳುತ್ತದೆ. ಅನುಭೂ ಸರ್ವ ಸತ್ಯ ಮುಂತಾದ ಶಬ್ದಗಳು ಹರಿಯನ್ನೇ ಹೇಳುತ್ತವೆ ಎಂದು ಬೃಹತ್ಸಂಹಿತೆ ಹೇಳುತ್ತದೆ. ೩೫೩

೨.೨.೧೩ ಚಿಂತಾಮಯನಾದ ಪರಮಾತ್ಮನನ್ನು ಧ್ಯಾನಿಸಬೇಕೆನ್ನುತ್ತದೆ ಭಾಗವತ. ಪರಮಾತ್ಮ ಚಿಂತಾಮಯ ಏಕೆಂದರೆ ಜೀವರು ಮಾಡುವ ಚಿಂತನೆಯನ್ನು, ಅಂದರೆ ಧ್ಯಾನವನ್ನು ಪ್ರಧಾನ ನಿಮಿತ್ತವಾಗಿಟ್ಟುಕೊಂಡು ಅವರ ಚಿಂತಿತ ಫಲವನ್ನು ಅವರಿಗೆ ಅವನು ನೀಡುತ್ತಾನೆ. ೩೫೪

೨.೨.೧೫ ನಿತ್ಯಕರ್ಮಾನುಷ್ಠಾನದ ಕೊನೆಯಲ್ಲಿ ನಿತ್ಯವೂ ಮಹತ್ತಾದ ವಿರಾಡ್ರೂಪದ ಅವಯವ ಧ್ಯಾನ ಮಾಡುತ್ತಿದ್ದರೆ ಅಖಂಡಧ್ಯಾನಕ್ಕೆ ಆವಶ್ಯಕವಾದ ಭಕ್ತಿ ಉಂಟಾಗುತ್ತದೆ. 'ಸ್ಥವೀಯಃ' ಎಂದರೆ ಮಹತ್ತಾದ ವಿರಾಡ್ರೂಪ. ೩೫೫

೨.೨.೧೬ ಜೀವನ್ಮುಕ್ತನಾದ ಜ್ಞಾನಿ ಚರಮಶರೀರತ್ಯಾಗ ಮಾಡುವಾಗ ಮೊದಲಿಗೆ ಪ್ರಾಣಾಯಾಮದಿಂದ ಪ್ರಾಣನನ್ನು ವಶಕ್ಕೆ ತಂದುಕೊಳ್ಳಬೇಕು. ಆದರೆ ಜೀವರ ಅಂತರ್ಯಾಮಿಯಾದ ಪ್ರಾಣನನ್ನು ಜೀವರು ವಶಕ್ಕೆ ತಂದುಕೊಳ್ಳುವುದು ಹೇಗೆ? ಭಕ್ತಿಯಿಂದ ಎಂದು ಷಾಡ್ಗುಣ್ಯ ಎಂಬ ಗ್ರಂಥ ಹೇಳಿದೆ. ೩೫೬

೨.೨.೧೭ ಬುದ್ಧಿಯನ್ನು ಕ್ಷೇತ್ರಜ್ಞನಲ್ಲಿ, ಕ್ಷೇತ್ರಜ್ಞನನ್ನು ಆತ್ಮನಲ್ಲಿ, ಆತ್ಮನನ್ನು ಆತ್ಮನಲ್ಲಿ ಲಯಗೊಳಿಸಬೇಕು. ಇಲ್ಲಿ ಕ್ಷೇತ್ರಜ್ಞನೆಂದರೆ ಜೀವಾಂತರ್ಯಾಮಿ ಭಗವದ್ರೂಪ. ಬುದ್ಧಿಯ ಅಭಿಮಾನಿ ಬ್ರಹ್ಮ ಜೀವಾಂತರ್ಯಾಮಿಯ ಅಧೀನ ನೆಂದು ಚಿಂತಿಸುವುದೇ ಬುದ್ಧಿಗೆ ಕ್ಷೇತ್ರಜ್ಞನಲ್ಲಿ ಲಯ. ಆತ್ಮ ಎಂದರೆ ದೇಹಾಂತರ್ಗತ ಭಗವದ್ರೂಪ. ಕ್ಷೇತ್ರಜ್ಞನನ್ನು ಈ ಆತ್ಮನಲ್ಲಿ ಲಯಗೊಳಿಸುವುದೆಂದರೆ ಅವನೊಂದಿಗೆ ಐಕ್ಯಚಿಂತನೆ. ಕ್ಷೇತ್ರಜ್ಞ ಆತ್ಮಶಬ್ದಗಳ ಅರ್ಥ ತತ್ವನಿರ್ಣಯವೆಂಬ ಗ್ರಂಥದಲ್ಲಿ ಉಕ್ತವಾಗಿದೆ. ಬುದ್ಧಿಲಯ ಕ್ಷೇತ್ರಜ್ಞಲಯ ಗಳಲ್ಲಿರುವ ವ್ಯತ್ಯಾಸ ಪ್ರಕಾಶ ಸಂಹಿತೆಯಲ್ಲಿ ಸ್ಪಷ್ಟವಿದೆ. ೩೫೭

೨.೨.೧೮ 'ಅನಿಮಿಷಾಂ ಪರಃ ಪ್ರಭುಃ ಕಾಲಃ' ಬ್ರಹ್ಮಾದಿ ದೇವತೆಗಳನ್ನೂ ಆಳುವ ಶಕ್ತಿಶಾಲಿ ಕಾಲ ವಿಷ್ಣುವಿನ ವಿಷಯದಲ್ಲಿ ಏನೂ ಮಾಡಲು ಶಕ್ತನಲ್ಲ. ಇಲ್ಲಿ ಜಡವಾದ ಕಾಲಕ್ಕೆ ಬ್ರಹ್ಮಾದಿ ದೇವತೆಗಳನ್ನೂ ಆಳುವ ಶಕ್ತಿ ಉಂಟೆ? ಅದರಿಂದ ಕಾಲ ಶಬ್ದಕ್ಕೆ ಇಲ್ಲಿ ಮುಖ್ಯಪ್ರಾಣ ಎಂದರ್ಥ. ಅವನು ರುದ್ರಾದಿ ಸಕಲದೇವತೆಗಳನ್ನು ಆಳಬಲ್ಲ ಶಕ್ತಿಶಾಲಿ. ಶ್ರೀಹರಿ ಲಕ್ಷ್ಮಿ ಬ್ರಹ್ಮವಾಯುಗಳು, ಗರುಡಶೇಷರುದ್ರರು, ಇಂದ್ರ ಸೂರ್ಯ ಯಮ ಅಗ್ನಿ ಶನಿ ಇವರೆಲ್ಲರೂ 'ಕಾಲ' ಎನಿಸುವರು. ಇವರಲ್ಲಿ

ಮೊದಲು ಮೊದಲಿನವರು ಅನಂತರದವರನ್ನು ಆಳಲು ಶಕ್ತರೆಂದು ಉದ್ದಾಮಸಂಹಿತೆಯಲ್ಲಿ ಹೇಳಿದೆ. ೩೫೮

೨.೨.೨೧ ಜ್ಞಾನಿ ಚರಮಶರೀರತ್ಯಾಗ ಮಾಡುವಾಗ ಮೂಲಾಧಾರದಿಂದ ನಾಭಿ ಹೃದಯಗಳ ಮಾರ್ಗವಾಗಿ ಉದಾನ ವಾಯುವನ್ನು ಉದಾನಗತಿಯಿಂದ ಮೇಲೆ ಒಯ್ಯಬೇಕು. 'ಉದಾನಗತಿ' ಎಂದರೆ ಉದಾನವಾಯು ಸಂಚರಿಸುವ ಬ್ರಹ್ಮನಾಡಿ. ೩೫೯

೨.೨.೨೨ 'ವಿಸೃಜೇತ್ ಪರಂ ಗತಃ' ಎಂದರೆ ಪರಬ್ರಹ್ಮನನ್ನು ಹೊಂದಿದ ಬಳಿಕ ಶರೀರ ತ್ಯಾಗ ಮಾಡಬೇಕೆಂದರ್ಥವಲ್ಲ. ಶರೀರವನ್ನು ತೊರೆದ ಬಳಿಕ ಅರ್ಚಿರಾದಿ ಮಾರ್ಗದಲ್ಲಿ ಸಂಚಾರ ಮಾಡಿ ಬ್ರಹ್ಮಲೋಕದಲ್ಲಿ ಪ್ರಲಯ ಪರ್ಯಂತವಿದ್ದು ಪ್ರಲಯಾನಂತರ ಲಿಂಗಭಂಗ ಹೊಂದಿ ಪರಬ್ರಹ್ಮನನ್ನು ಹೊಂದಬೇಕು. ಆದರಿಂದ 'ಪರಂ 'ಗತಃ' ಎಂದರೆ ಪರಬ್ರಹ್ಮನನ್ನು ಮನಸ್ಸಿನಿಂದ ಹೊಂದಿ, ಧ್ಯಾನಿಸಿ ಶರೀರತ್ಯಾಗ ಮಾಡಬೇಕು ಎಂದರ್ಥ. ೩೬೦

೨.೨.೨೪ ಚರಮಶರೀರತ್ಯಾಗ ಮಾಡಿದ ಜ್ಞಾನಿಗಳು ಬ್ರಹ್ಮಲೋಕಕ್ಕಾಗಲಿ, ಮಹರಾದಿ ಲೋಕಗಳಿಗಾಗಲಿ ವೈಕುಂಠದ ಅಮುಕ್ತಸ್ಥಾನಕ್ಕಾಗಲಿ ಹೋಗಿರುತ್ತಾರೆ. ಪವನ ನಿಗೆ ಯಾರು ಅಂತರಾತ್ಮನೋ ಆ ವಿಷ್ಣುವನ್ನು ವೈಕುಂಠದ ಅಮುಕ್ತಸ್ಥಾನದಲ್ಲಿ, ಮತ್ತು ಅಂತರಾತ್ಮನಾದ ಪವನನನ್ನು ಬ್ರಹ್ಮಲೋಕದಲ್ಲಿ ಹೊಂದುತ್ತಾರೆ. ಮಹರಾದಿಲೋಕಗಳಲ್ಲಿ ಹರಿ ವಾಯುಗಳು ಇದ್ದರೂ ಅವ್ಯಕ್ತರಾಗಿರುತ್ತಾರೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ೩೬೧

೨.೨.೨೫ 'ಹರೇರುದಸ್ತಾತ್' ಎಂಬಲ್ಲಿ ಹರೇಃ =ಆದಿತ್ಯಲೋಕಕ್ಕಿಂತ, ಉದಸ್ತಾತ್=ಮೇಲಿರುವ ಶಿಂಶುಮಾರ ಚಕ್ರಕ್ಕೆ, ಅಂದರೆ ಧ್ರುವಲೋಕಕ್ಕೆ ಬ್ರಹ್ಮಜ್ಞಾನಿ ಹೋಗುತ್ತಾನೆ ಎಂದು ಅನ್ವಯಿಸಬಾರದು. ಏಕೆಂದರೆ ಆದಿತ್ಯಲೋಕಕ್ಕಿಂತ ಮೇಲೆ ಸೋಮಲೋಕ. ಬಳಿಕ ವೈಶ್ವಾನರಲೋಕ, ಇಂದ್ರಲೋಕ, ಧ್ರುವಲೋಕಗಳು. ವೈಶ್ವಾನರ ಲೋಕಕ್ಕೆ ಬಂದ ಜ್ಞಾನಿ ಆದಿತ್ಯಲೋಕಕ್ಕಿಂತ ಮೇಲಿನ ಧ್ರುವಲೋಕಕ್ಕೆ ಹೋಗುತ್ತಾನೆ ಎನ್ನುವುದು ಅಸಂಗತವಾಗುತ್ತದೆ. ವೈಶ್ವಾನರಲೋಕಕ್ಕಿಂತ ಮೇಲಿನ ಧ್ರುವಲೋಕಕ್ಕೆ ಹೋಗುತ್ತಾನೆ ಎನ್ನಬೇಕು. ಆದರಿಂದ ಹರಿ ಎಂದರೆ ಆದಿತ್ಯನಲ್ಲ, ವಿಷ್ಣುವೆ. ಅವನದೇ ಲೋಕ ಶಿಂಶುಮಾರಚಕ್ರ. ಅರ್ಥಾತ್ ವಿಷ್ಣು ಬೇರೆ ಅಲ್ಲ, ಶಿಂಶುಮಾರ ಬೇರೆ ಅಲ್ಲ ಎಂದು ಹೇಳಿದಂತಾಗುತ್ತದೆ. ಉದಸ್ತಾತ್ ಎಂದರೆ ಮೇಲೆ,

ವೈಶ್ವಾನರಲೋಕಕ್ಕಿಂತ ಮೇಲೆ ಧ್ರುವಲೋಕವೆಂದೂ ಹೇಳಿದಂತಾಗುತ್ತದೆ. ಈ ಪ್ರಮೇಯಗಳು ಬ್ರಹ್ಮಾಂಡಪುರಾಣದಲ್ಲಿ ಸ್ಪಷ್ಟವಾಗಿವೆ. ೩೬೨

೨.೨.೨೬ ವೈಶ್ವಾನರ ಎಂದು ಜಠರಾಗ್ನಿಗೆ ಹೆಸರು. ಅವನೆ ವೈಶ್ವಾನರ ಲೋಕದಲ್ಲಿಯೂ ಬೆಳಗುತ್ತಾನೆ. ದೇವಯಾನ ಪಿತೃಯಾನ ಬ್ರಹ್ಮಯಾನ ಎಂಬ ಮೂರು ಮಾರ್ಗಗಳಲ್ಲಿ ಹೋಗುವವರೂ ಈ ವೈಶ್ವಾನರ ಲೋಕಕ್ಕೆ ಬರಲೇಬೇಕು. ಆದರಿಂದ ವೈಶ್ವಾನರನನ್ನು ವಿಶೇಷವಾಗಿ ಮಾರ್ಗದೇವತೆ ಎಂದು ಎತ್ತಿಹೇಳಿದೆ. ೩೬೩

೨.೨.೨೭ ಹೃದಯದಲ್ಲಿ ಬಲಭಾಗದಲ್ಲಿರುವ ನಾಡಿಗಳಿಗೆ ಪಿಂಗಲಾ ಎಂದು ಹೆಸರು. ಎಡಭಾಗದ ನಾಡಿಗಳಿಗೆ ಇಡಾ ಎಂದು ಹೆಸರು. ಮಧ್ಯದ ನಾಡಿ ಸುಷುಮ್ನಾ. ದೇವಯಾನ ಮಾರ್ಗದ ದೇವತೆಗಳಿಗೆ ಅಹಸ್ ಎಂದು ಹೆಸರು. ಪಿತೃಯಾನ ಮಾರ್ಗದೇವತೆಗಳಿಗೆ ರಾತ್ರಿ ಎಂದು ಹೆಸರು. ಶತಾಯು ಎಂದರೆ ಮರಣ. ವಿಶೇಷವಾಗಿ ಸುಖ ನೀಡುವುದರಿಂದ ವಿಷುವತ್ತಾ ಎನಿಸುವುದು ಬ್ರಹ್ಮಯಾನ ಮಾರ್ಗ. ಪಿಂಗ ಎನಿಸುವ ಸುಖವನ್ನು ನೀಡುವುದರಿಂದ ದೇವಯಾನವೂ ಪಿಂಗಲಾ ಎನಿಸಿದೆ. ಅನ್ನ ನೀಡುವುದರಿಂದ ಪಿತೃಯಾನವೂ ಇಡಾ ಎನಿಸಿದೆ ಎಂದು ಬ್ರಹ್ಮತರ್ಕ ಹೇಳಿದೆ. ೩೬೪

೨.೨.೨೮ ವೈಶ್ವಾನರ ಲೋಕದಿಂದ ಶಿಂಶುಮಾರಲೋಕಕ್ಕೆ ಬಂದ ಜ್ಞಾನಿಗಳು ಅಲ್ಲಿಂದ ಮುಂದೆ ಕಲ್ಪಾಯುಷಿಗಳು ವಾಸಮಾಡುವ ಮಹರಾದಿ ಲೋಕಗಳಿಗೆ ಹೋಗುತ್ತಾರೆ. ಪಿಂಗಲಾನಾಡಿಯಲ್ಲಿ ಉತ್ಕ್ರಮಣ ಹೊಂದಿದವರಲ್ಲಿ ಕೆಳಗಿನವರು ಮಹರ್ಲೋಕವನ್ನೂ ಮಧ್ಯಮರು ಜನಲೋಕವನ್ನೂ ಉತ್ತಮರು ತಪೋಲೋಕವನ್ನೂ ಸೇರುವರು. ಇವರಿಗಿಂತ ಉತ್ತಮರು ಬ್ರಹ್ಮನಾಡಿಯಿಂದ ಉತ್ಕ್ರಮಣ ಹೊಂದುತ್ತಾರೆ. ಅವರಲ್ಲಿಯೂ ಪ್ರತೀಕಾಲಂಬನರು ಸತ್ಯಲೋಕವನ್ನೂ ಅವರಿಗಿಂತ ಉತ್ತಮರಾದ ಅಪ್ರತೀಕಾಲಂಬನರು ವೈಕುಂಠದ ಅಮುಕ್ತಸ್ಥಾನವನ್ನೂ ಹೊಂದುವರು. ೩೬೬

೨.೨.೨೯ ಮಹರಾದಿ ಲೋಕವನ್ನು ಸೇರಿದ ಜ್ಞಾನಿಗಳು ಬ್ರಹ್ಮಪ್ರಲಯ ಕಾಲದಲ್ಲಿ ಸತ್ಯಲೋಕವನ್ನು ಸೇರುತ್ತಾರೆ. ಸತ್ಯಲೋಕದಲ್ಲಿ ದುಃಖವಿಲ್ಲ, ಜರೆ ಮರಣ ಭಯಗಳಿಲ್ಲ. ಬಳಿಕ ಎಲ್ಲ ಜ್ಞಾನಿಗಳಿಗೂ ಪ್ರಲಯ ಕಾಲದಲ್ಲಿ ಮಹತ್ತತ್ತ್ವಾಭಿಮಾನಿ ಬ್ರಹ್ಮನೊಂದಿಗೇ ಮುಕ್ತಿ. ೩೬೭

೨.೨.೩೧, ೩೩, ೩೪ ಬ್ರಹ್ಮಪ್ರಲಯಕಾಲದಲ್ಲಿ ಬ್ರಹ್ಮಾಂಡವೂ ಆವರಣಗಳೂ ಲಯ

ಹೊಂದುವಾಗ ಜ್ಞಾನಿಗಳು ತತ್ತ್ವಾಭಿಮಾನಿ ದೇವತೆಗಳೊಂದಿಗೆ ಪೃಥಿವ್ಯಾದಿ ತತ್ವಗಳನ್ನು ಒಂದೊಂದಾಗಿ ದಾಟಿ ಮೋಕ್ಷ ಹೊಂದುತ್ತಾರೆ. ಮೊದಲಿಗೆ ಬ್ರಹ್ಮಾದಿ ದೇವತೆಗಳೊಂದಿಗೆ ಪೃಥಿವ್ಯಾವರಣದಲ್ಲಿ ಅನ್ನಮಯ ಅನಿರುದ್ಧನನ್ನು ಸೇರಿ, ಪೃಥಿವ್ಯಾವರಣ ನಾಶವಾಗುವಾಗ ಅನ್ನಮಯ ಅನಿರುದ್ಧನೊಂದಿಗೆ ಜಲಾವರಣದಲ್ಲಿರುವ ಅನ್ನಮಯ ಅನಿರುದ್ಧನನ್ನು ಸೇರುತ್ತಾರೆ. ಜಲಾವರಣ ನಾಶವಾಗುವಾಗ ಅಗ್ನ್ಯಾವರಣದಲ್ಲಿರುವ ಪ್ರಾಣಮಯ ಪ್ರದ್ಯುಮ್ನನನ್ನೂ ಅಗ್ನ್ಯಾವರಣ ನಾಶಹೊಂದುವಾಗ ವಾಯ್ವಾವರಣದಲ್ಲಿರುವ ಪ್ರಾಣಮಯ ಪ್ರದ್ಯುಮ್ನನನ್ನೂ ಅದೂ ನಾಶವಾದಾಗ ಆಕಾಶಾವರಣದಲ್ಲಿರುವ ಪ್ರಾಣಮಯ ಪ್ರದ್ಯುಮ್ನನನ್ನೂ ಹೊಂದುತ್ತಾರೆ. ಅದೂ ನಾಶವಾದಾಗ ಮನೋಽಂತರ್ಗತ ಮನೋಮಯ ಸಂಕರ್ಷಣನನ್ನು ಸೇರುತ್ತಾರೆ. ಅಲ್ಲಿಂದ ಬುಧ್ಯಂತರ್ಗತ ಮನೋಮಯ ಸಂಕರ್ಷಣನನ್ನೂ ಅಲ್ಲಿಂದ ಅಹಂಕಾರಾಂತರ್ಗತ ಮನೋಮಯ ಸಂಕರ್ಷಣನನ್ನೂ ಅಲ್ಲಿಂದ ಮಹತ್ತತ್ವಾಂತರ್ಗತ ವಿಜ್ಞಾನಮಯ ವಾಸುದೇವನನ್ನೂ ಅಲ್ಲಿಂದ ಅವ್ಯಕ್ತ ತತ್ವಾಂತರ್ಗತ ಆನಂದಮಯ ನಾರಾಣನನ್ನೂ ಸೇರುತ್ತಾರೆ. ನಾರಾಯಣ ಮುಕ್ತಿದಾಯಕ ನಾದ ವಾಸುದೇವನನ್ನು ಸೇರುತ್ತಾನೆ. ಆಗ ಅವನನ್ನು ಸೇರಿದ ಜ್ಞಾನಿಗಳು ಮತ್ತೆ ಸಂಸಾರಕ್ಕೆ ಹಿಂತಿರುಗಿ ಬರುವುದಿಲ್ಲ. ೩೬

೨.೨.೩೨ ಜ್ಞಾನಿಗಳು ಬ್ರಹ್ಮಪ್ರಲಯಕಾಲದಲ್ಲಿ ಪೃಥಿವಿಯ ಅನಂತರ ಗಂಧ, ಜಲಾನಂತರ ರಸ, ಅಗ್ನಿಯ ಅನಂತರ ರೂಪ, ವಾಯುವಿನ ಅನಂತರ ಸ್ಪರ್ಶ. ಅಕಾಶಾ ನಂತರ ಶಬ್ದ ಹೀಗೆ ಕ್ರಮವಾಗಿ ಎಲ್ಲ ತನ್ಮಾತ್ರೆಗಳನ್ನು ಹೊಂದಿ ಘ್ರಾಣಾದಿ ಇಂದ್ರಿಯಗಳಿಂದ ಭೋಗಿಸುತ್ತಾರೆ. ಹೀಗೆ ತಾಮಸಾಹಂಕಾರಕಾರ್ಯವಾದ ತನ್ಮಾತ್ರೆಗಳು ಲಯಹೊಂದಿದಾಗ ತೈಜಸಾಹಂಕಾರ ಕಾರ್ಯವಾದ ಘ್ರಾಣಾದೀಂದ್ರಿಯಗಳಲ್ಲಿರುವ ಭಗವದ್ರೂಪಗಳೊಂದಿಗೇ ತೈಜಸಾಹಂಕಾರಕಾರ್ಯವಾದ ಬುದ್ದಿ ತತ್ವದಲ್ಲಿರುವ ಪ್ರಾಣಮಯ ಪ್ರದ್ಯುಮ್ನನನ್ನು ಸೇರುತ್ತಾರೆ. ಹೀಗೆ ಮಾರ್ಗದಲ್ಲಿ ದಿವ್ಯಭೋಗಗಳನ್ನು ಅನುಭವಿಸಿ ಮುಂದೆ ಮುಕ್ತರಾದ ಬಳಿಕವೂ ಸ್ವರೂಪಭೂತ ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯ ಮನಸ್ಸುಗಳಿಂದ ದಿವ್ಯ ವಿಷಯಭೋಗಗಳನ್ನು ಅನುಭವಿಸುತ್ತಾರೆ.

★ ಪೃಥಿವಿ ಅಪ್‌ಗಳಲ್ಲಿ ಅನ್ನಮಯ, ತೇಜೋವಾಯ್ವಾಕಾಶ ಬುದ್ಧಿತತ್ವಗಳಲ್ಲಿ

ಪ್ರಾಣಮಯ, ಮನಸ್ಸು ಅಹಂಕಾರಗಳಲ್ಲಿ ಮನೋಮಯ, ಮಹತ್ತತ್ವದಲ್ಲಿ ವಿಜ್ಞಾನಮಯ, ತ್ರಿಗುಣಗಳಲ್ಲಿ ಆನಂದಮಯ ಹೀಗೆ ನಿಯಾಮಕ ಭಗವದ್ರೂಪಗಳು. ವಿಜ್ಞಾನಮಯ ವಾಸುದೇವರೂಪ ಬೇರೆ, ಮುಕ್ತಿದಾಯಕ ವಾಸುದೇವರೂಪ ಬೇರೆ. ೩೭೩

೨.೨.೩೬ ಪರಮ ಆಪ್ತರಾದ ಭಗವಾನ್ ವೇದವ್ಯಾಸರು ಕರುಣೆಯಿಂದ ಭಾಗವತ ವನ್ನು ರಚಿಸಿದರೆಂದು ಮುಂದಿನ ಶ್ಲೋಕದಲ್ಲಿ ಹೇಳುತ್ತಾರೆ. 'ಅತಃ' ಆ ಕಾರಣದಿಂದ ಭಾಗವತವೇ ಕಲಿಯುಗದಲ್ಲಿ ಅಲ್ಪಾಯುಷಿಗಳಾದ ಮಾನವರಿಗೆ ಶ್ರೇಯೋಮಾರ್ಗವೆಂದು ಈ ಶ್ಲೋಕದಲ್ಲಿ ಹೇಳುತ್ತಾರೆ.

೨.೨.೩೭ ವೇದವ್ಯಾಸರು ಎಲ್ಲ ಪ್ರಮೇಯವನ್ನೂ ಸರಿಯಾಗಿ ತಿಳಿದಿಲ್ಲ, ಅವರೂ ವಿಚಾರಮಾಡಬೇಕಾಗುತ್ತದೆ ಎಂದು ಅಸುರರಿಗೆ ಭ್ರಮೆ ಹುಟ್ಟಲೆಂದೇ ನಿತ್ಯಸರ್ವಜ್ಞರಾದ ವೇದವ್ಯಾಸರು ಲೀಲೆಯಿಂದ ಪುನಃಪುನಃ ಮೂರುಬಾರಿ ವೇದಗಳನ್ನು ವಿಚಾರಿಸಿ ಅನಂತರ ಭಾಗವತವನ್ನು ರಚಿಸಿದಂತೆ ತೋರಿಕೊಂಡರೆಂದು ಬ್ರಹ್ಮತರ್ಕ ಹೇಳಿದೆ. ೩೭೭

೨.೨.೩೮ ನಮ್ಮ ಬುದ್ಧಿಯನ್ನು ನಮ್ಮ ಇಚ್ಛೆಯಂತೆ ಒಂದೆಡೆ ಏಕಾಗ್ರತೆಯಿಂದ ನಿಲ್ಲಿಸುವುದಾಗಲಿ ಬೇಕಾದ ಕಡೆ ಹರಿಸುವುದಾಗಲಿ ನಮ್ಮ ವಶದಲ್ಲಿಲ್ಲ. ಅದರಿಂದ ನಮ್ಮ ಬುದ್ಧಿಗೆ ನಿಯಾಮಕನಾದ ಪ್ರಭು ವಾಸುದೇವ ಬೇರೆ ಇದ್ದಾನೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಅದರಿಂದ ಹೊಗೆಯಿಂದ ಅದಕ್ಕೆ ಕಾರಣವಾದ ಬೆಂಕಿಯನ್ನು ಊಹಿಸಿ ತಿಳಿಯುವಂತೆ ನಮ್ಮ ಅಧೀನವಿಲ್ಲದ ಬುದ್ಧಿಯಿಂದ ಅದಕ್ಕೆ ನಿಯಾಮಕನಾದ ಪರಮಾತ್ಮನನ್ನು ಊಹಿಸಿ ತಿಳಿಯಬಹುದೆನ್ನುತ್ತ ಭಾಗವತವು ಪರಮಾತ್ಮನ ಆಸ್ತಿತ್ವ ವಿಷಯದಲ್ಲಿ ಬ್ರಹ್ಮತರ್ಕವೆಂಬ ಆಗಮದ ಸಹಾಯವುಳ್ಳ ಅನುಮಾನ ಪ್ರಮಾಣವನ್ನು ತೋರಿಸಿದೆ. ಮತ್ತು ಜನ್ಮಾದಿಕರ್ತೃತ್ವರೂಪವಾದ ಪರಮಾತ್ಮ ಲಕ್ಷಣವನ್ನೂ ತೋರಿಸಿದೆ. ಅದರಿಂದ ಭಾಗವತ ಪುರಾಣ ಕಲಿಯುಗದ ಅಲ್ಪಾಯುಗಳಾದ ಮಾನವರಿಗೆ ಅತ್ಯುತ್ತಮ ಶ್ರೇಯಸ್ಕರವಾದ ಗ್ರಂಥ. ೩೭೮

೨.೨.೩೯ ಭಾಗವತ ಹರಿಯನ್ನೇ ಕೊಂಡಾಡುವುದರಿಂದ ಹರಿಯನ್ನೇ ಶ್ರವಣಾದಿಗಳಿಂದ ಉಪಾಸನೆ ಮಾಡಬೇಕು. ೩೭೯

೨.೩.೧೦ ಮುಮುಕ್ಷು ಏನನ್ನು ಶ್ರವಣ ಮಾಡಕೂಡದು ಯಾರನ್ನು ಭಜಿಸಕೂಡದು ಎಂದರೆ ಬೇರೆ ಬೇರೆ ಕಾಮನೆಗಳಿಗೆ ಬೇರೆಬೇರೆ ದೇವತೆಗಳನ್ನು ಜನರು

ಭಜಿಸುತ್ತಾರೆ. ಅದು ಸಲ್ಲದು. ಯಾವುದೇ ಕಾಮನೆ ಇರಲಿ, ಯಾವ ಕಾಮನೆ ಇಲ್ಲದೆ ಮೋಕ್ಷವನ್ನೆ ಬಯಸುತ್ತಿರಲಿ, ಅದಕ್ಕೆ ಹರಿಯನ್ನೇ ಭಜಿಸಬೇಕು. ೩೮೦

೨.೩.೧೭ ಸೂರ್ಯನುದಿಸುತ್ತ ಅಸ್ತಮಿಸುತ್ತ ಮಾನವರ ಆಯುಷ್ಯವನ್ನು ಕಳೆಯುತ್ತಲೆ ಇರುತ್ತಾನೆ. ಪ್ರತಿಯೊಂದು ಕ್ಷಣವೂ ಅಮೂಲ್ಯ. ಭಗವಂತನ ಬಗ್ಗೆ ಶ್ರವಣಮಾಡದೆ ವ್ಯರ್ಥವಾಗಿ ಒಂದು ಕ್ಷಣವನ್ನೂ ಕಳೆಯಬಾರದು. ೩೮೧

೨.೪.೨ ಶುಕಮುನಿಯ ಉಪದೇಶದಿಂದ ಪರೀಕ್ಷಿತನಲ್ಲಿ ರೂಢಮೂಲವಾಗಿದ್ದ ರಾಜ್ಯದ ಮೋಹ ಮಮಕಾರ ಹರಿದುಹೋಯಿತೆಂದು ಇಲ್ಲಿ ಹೇಳಿದಂತೆ ಕಾಣುತ್ತದೆ. ಅದು ಸರಿಯಲ್ಲ. ಪರೀಕ್ಷಿತ ಅಪರೋಕ್ಷಜ್ಞಾನಿ ಚರಮಶರೀರಿ. ಅವನಿಗೆ ಶರೀರಾದಿ ಗಳ ಮೇಲೆ ಮೋಹ ಮಮಕಾರವಿರಲೆ ಇಲ್ಲ. ಅದನ್ನು ಆತ ಎಂದೋ ಬಿಟ್ಟಿದ್ದಾನೆ. ಬೇರೆಯವರಲ್ಲಿ ರೂಢಮೂಲವಾಗಿರುತ್ತದೆ ಮೋಹ. ಅಂಥ ಮೋಹವನ್ನು ಪರೀಕ್ಷಿತ ಈಗ ವಿಶೇಷವಾಗಿ ತೊರೆದ ಎಂದು ಅಭಿಪ್ರಾಯ. ೩೮೨

೨.೪.೪ 'ಭಗವತಿ ಸ್ವಾತ್ಮಭಾವಂ' ಭಗವಂತನನ್ನು ತಾನೆ ಎಂದು ಪರೀಕ್ಷಿತ ಉಪಾಸನೆ ಮಾಡಿದ ಎಂದು ಹೇಳಿದಂತೆ ಕಾಣುತ್ತದೆ. ಆದರೆ ವಾಮನಪುರಾಣ ಹೇಳುವಂತೆ 'ಆತ್ಮ' ಎಂದರೆ ಸಕಲಗುಣಗಳಿಂದ ಆಪ್ತ ಕೂಡಿದವನು ಭಗವಂತ ಎಂಬ ಭಾವ, ಭಾವನೆ. ಈ ಸ್ವಾತ್ಮಭಾವನೆಯಿಂದ ಕೂಡಿದವನು 'ಸ್ವಾತ್ಮ-ಭಾವ' 'ಸ್ವ-ಭಾವ' ಅಂದರೆ ಸ್ವರೂಪ ಭೂತವಾದ ಆನಂದವನ್ನು ಮೋಕ್ಷದಲ್ಲಿ ಪಡೆದ ಎಂದರ್ಥ. ೩೮೩

೨.೪.೧೨ ಪರಮಾತ್ಮ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವುದಕ್ಕಾಗಿ ಮೂರು ಶಕ್ತಿಗಳನ್ನು ಸ್ವೀಕರಿಸಿದ್ದಾನೆ. ಅವು ಯಾವುವು? ಪ್ರಕೃತಿಯ ಗುಣತ್ರಯವೆ? ಅಲ್ಲ. ಅವು ಅವನಿಗೆ ನಿಮಿತ್ತ ಮಾತ್ರ. ಲೀಲೆಯಿಂದ ಸ್ವೀಕರಿಸುತ್ತಾನೆ. ಅವನು ಪ್ರವೃತ್ತಿ ಮಾಡುವುದು ಸ್ವರೂಪಭೂತವಾದ ಇಚ್ಛಾಜ್ಞಾನಕ್ರಿಯಾ ಎಂಬ ಮೂರು ಶಕ್ತಿಗಳಿಂದ. ಇವು ಸ್ವರೂಪಭೂತವಾಗಿದ್ದರೂ ವಿಶೇಷಬಲದಿಂದ ಭೇದವ್ಯವಹಾರವಿರುವುದರಿಂದ ಅವನು ನಿತ್ಯ ಸ್ವೀಕರಿಸಿದ್ದಾನೆ. ೩೮೪

೨.೪.೧೩ 'ಅಖಿಲಸತ್ವಮೂರ್ತಿ' ಎಂದರೆ ಪೂರ್ಣಸತ್ವಮಯ, ಶುದ್ಧಸತ್ವಾತ್ಮಕ ಶರೀರ ಉಳ್ಳವನು ಪರಮಾತ್ಮ ಎಂದು ತಿಳಿಯಬಾರದು. ಪರಮಾತ್ಮ ಗುಣತ್ರಯ ರಹಿತ. ಆದರಿಂದ ಮಹಾಸಂಹಿತೆಯಲ್ಲಿ ಹೇಳಿದಂತೆ 'ಸತ್ವ' ಎಂದರೆ ಸಮಸ್ತ ಗುಣಪೂರ್ಣ. ಅಖಿಲಸತ್ವಮೂರ್ತಿ ಎಂದರೆ ಪೂರ್ಣಸದ್ಗುಣ ಸ್ವರೂಪ ಎಂದರ್ಥ. ೩೮೫

೨.೪.೧೯ ಭಗವಂತ 'ತ್ರಯೀಮಯ' ಎಂದರೆ ವೇದಸ್ವರೂಪನೆಂದಾಗಲಿ ವೇದಮಾರ್ಗದಿಂದ ಉಪಾಸ್ಯ ಎಂದಿಷ್ಟೇ ಆಗಲಿ ಅರ್ಥವಲ್ಲ. ಅಧ್ಯಾತ್ಮ ಎಂಬ ಗ್ರಂಥದಲ್ಲಿ ವಿಶೇಷಾರ್ಥ ಉಕ್ತವಾಗಿದೆ. ವೇದಾನುಸಾರವಾಗಿ ಉಪಾಸನೆ ಮಾಡುವ ಭಕ್ತರಿಗೆ ವಶನಾಗುವವನು ಎಂದರ್ಥ. ಇದೇರೀತಿ ಧರ್ಮಮಯ ತಪೋಮಯ ಶಬ್ದಗಳಿಗೂ ಅರ್ಥ ಗ್ರಹಿಸಬೇಕು. ೩೮೬

೨.೫.೧ ನಾರದರು ಬ್ರಹ್ಮನಲ್ಲಿ 'ಭಗವಂತನ ಮಹಿಮೆಯನ್ನು ನನಗೆ ತಿಳಿಸು' ಎನ್ನದೆ 'ನೀನು ತಿಳಿ' ಎನ್ನುತ್ತಾರೆ. ಇಂಥ ವ್ಯತ್ಯಾಸಕ್ಕೆ ವಿಶೇಷಾರ್ಥವಿದೆ. ತಿಳಿಯುವ ನಾರದರಿಗೂ ತಿಳಿಸುವ ಬ್ರಹ್ಮನಿಗೂ ಜ್ಞಾನಾದಿಗುಣಗಳಲ್ಲಿ ಬಹಳ ವೈಲಕ್ಷಣ್ಯವಿದೆ. ಇಬ್ಬರ ಅಂತರ್ಯಾಮಿ ಭಗವದ್ರೂಪಗಳು ಒಂದೇ ಆಗಿವೆ. ನಾರದರು ತಿಳಿವಂತೆ ಮಾಡಲು ಬ್ರಹ್ಮ ಸ್ವತಂತ್ರನಿದ್ದಾನೆ. ಈ ಜ್ಞಾನ ಯಜ್ಞದಲ್ಲಿ ನಾರದ ಕೇವಲ ಕರಣ, ಅಂದರೆ ಸಾಧನ ಇತ್ಯಾದಿ. ೩೮೮

೨.೫.೨ ಜಗತ್ತು ಭಗವಂತನ ರೂಪ ಎಂದರೆ ಅವನ ಅಧೀನ ಎಂದರ್ಥ. ಅವನು ಅಧಿಷ್ಠಾನ ಎಂದರೆ ಮೂಲಾಧಾರ. ಅವನು ಸಂಸ್ಥಾನ ಎಂದರೆ ಅವನಲ್ಲಿ ಜಗತ್ತು ನಿಂತಿರು ವುದು ಕಾಣುತ್ತದೆ ಎಂದರ್ಥ. ಜಗತ್ತು ತತ್ಪರ ಎಂದರೆ ಜಗತ್ತಿಗಿಂತ ಅವನು ಉತ್ತಮ ಎಂದರ್ಥ. ೩೮೯

೨.೫.೪ ನೀನೊಬ್ಬನೆ ಸ್ವತಂತ್ರವಾಗಿ ಸೃಷ್ಟಿಮಾಡುವಿ ಎಂದು ಬ್ರಹ್ಮನನ್ನು ನಾರದರು ಹೊಗಳುತ್ತಾರೆ. ಇದು ವೇದಗಳಲ್ಲಿ ಮೇಲ್ನೋಟಕ್ಕೆ ಕಾಣುವ ಬ್ರಹ್ಮಸರ್ವೋತ್ತಮತ್ವವನ್ನು ಪೂರ್ವಪಕ್ಷವಾಗಿ ಪ್ರಸ್ತುತಪಡಿಸುವ ಅಭಿಪ್ರಾಯದ್ದೆಂದು ತಿಳಿಯಬೇಕು. ಹರಿಸರ್ವೋತ್ತ ಮತ್ವ ಸಿದ್ಧಾಂತ ಬ್ರಹ್ಮನ ಮುಖದಿಂದ ತಿಳಿದುಬರಲಿ ಎನ್ನುವುದು ನಾರದರ ಉದ್ದೇಶ. ೩೯೧

೨.೫.೬ ನೀನೆ ಸ್ವತಂತ್ರಕರ್ತ ಎಂದು ನಾರದರು ಬ್ರಹ್ಮನ ಮುಂದೆ ಹೇಳುವುದನ್ನು ಪೂರ್ವಪಕ್ಷವೆಂದೇ ಗ್ರಹಿಸಬೇಕು. 'ನೀನೇ ಪರಮಾತ್ಮ' ಎಂದಿದ್ದರೆ. 'ನೀನು ಪರಮಾತ್ಮನ ಅಧೀನ' ಎಂದು ಅರ್ಥೈಸಿ ನಾರದರ ಸ್ವಂತ ಅಭಿಪ್ರಾಯವೆನ್ನಬಹುದಾಗಿತ್ತು. ಮತ್ಸ್ಯಪುರಾಣದಲ್ಲಿ 'ಭಗವಂತನ ಅಧೀನವೇ ಎಲ್ಲವೂ ಆಗಿರುವುದರಿಂದ ಎಲ್ಲವನ್ನೂ ಭಗವಂತನೆನ್ನಬಹುದು' ಎಂದು ಹೇಳಿದೆ. ಪ್ರಕೃತ ನಾರದರು ಬ್ರಹ್ಮನಲ್ಲಿ ಪರಮಾತ್ಮನ ಅಭೇದವನ್ನು ಮಾತ್ರವೆ ಹೇಳುತ್ತಿಲ್ಲ, ಬ್ರಹ್ಮನಲ್ಲದೆ ಸ್ವತಂತ್ರಕರ್ತನಿನ್ನೊಬ್ಬನಿಲ್ಲ ಎಂದು ಭೇದನಿರಾಕರಣೆಯನ್ನೂ ಮಾಡುತ್ತಿದ್ದಾರೆ. ಆದರಿಂದ ಇದು ಪೂರ್ವಪಕ್ಷವೆ. ೩೯೧

೨.೫.೧೦ 'ನಾನೃತಂ ಬತ' ಎಂದರೆ 'ನಾರದ, ನೀನು ಹೇಳಿದ್ದು ಸುಳ್ಳಲ್ಲ' ಎಂದರ್ಥವಲ್ಲ. ಇದು ಆಕ್ಷೇಪ. 'ನೀನು ಹೇಳಿದ್ದು ಸುಳ್ಳಲ್ಲವೆ?' ಎಂದು ಬ್ರಹ್ಮ ಆಕ್ಷೇಪಿಸುತ್ತಿದ್ದಾನೆ. ೩೯೨

೨.೫.೧೨ 'ವಿಷ್ಣುಮಾಯೆಯನ್ನು ಯಾರೂ ಮೀರಲಾರರು. ಅದರಿಂದಲೆ ದುರ್ಜನರು ನನ್ನನ್ನು ಸ್ವತಂತ್ರ ಸೃಷ್ಟಿಕರ್ತನೆನ್ನುತ್ತಾರೆ' ಎಂದು ಬ್ರಹ್ಮ ನಾರದರಿಗೆ ಹೇಳುವಲ್ಲಿ ಮಾಯೆ ಎಂದರೇನು? ಮುಖ್ಯವಾಗಿ ಮಾಯೆ ಎಂದರೆ ಪರಮಾತ್ಮನ ಶಕ್ತಿ. ಅಮುಖ್ಯವಾಗಿ ಚೇತನ ಪ್ರಕೃತಿಯೂ ಮಾಯೆ ಎನಿಸುತ್ತಾಳೆ. ಜೀವರಲ್ಲಿರುವ ಸ್ವಗುಣಾಚ್ಛಾದಕವಾದ ಪ್ರಕೃತಿ ಬಹಳ ಅಮುಖ್ಯ ಇಲ್ಲಿ ಈ ಮೂರೂ ವಿವಕ್ಷಿತವಾಗಿವೆ. ೩೯೪

೨.೫.೧೪ 'ವಾಸುದೇವನಿಗಿಂತ ಉತ್ತಮ ಪ್ರಪಂಚದಲ್ಲಿ ಏನೂ ಇಲ್ಲ, ಎಲ್ಲವೂ ಅಸ್ವತಂತ್ರ. ಹಾಗೇ 'ವಾಸುದೇವನಿಗೆ ಸಮಾನವೂ ಇಲ್ಲ' ಎನ್ನುವಾಗ 'ತಾತ್ವತ' ಬೇರೆ ಇಲ್ಲ' ಎನ್ನುತ್ತಾರೆ ಬ್ರಹ್ಮದೇವರು. 'ತಾತ್ವತ' ಎಂದರೆ ಅದರಂತೇ ಇರುವ, ಸಮಾನವಾದ ವಸ್ತು. ಪರಮಾತ್ಮನಿಗೆ ಬೇರೆ ಸಮಾನ ವಸ್ತುವೇ ಇಲ್ಲ. ೩೯೫

೨.೫.೧೫ ವೇದಗಳು ನಾರಾಯಣಪರವಾಗಿವೆ ಎಂದರೆ ನಾರಾಯಣನನ್ನು ಮಾತ್ರ ಹೇಳುತ್ತವೆ ಎಂದರ್ಥವಲ್ಲ. ಮುಖ್ಯವಾಗಿ ಅವನನ್ನೇ ಹೇಳುತ್ತವೆ. ವೇದಪ್ರತಿಪಾದ್ಯ ತತ್ವಗಳಲ್ಲಿ ಪರತತ್ವ ಅವನೆ ಎಂದರ್ಥ. ೩೯೬

೨.೫.೧೮ ಪರಮಾತ್ಮ ತ್ರಿಗುಣಗಳನ್ನು ಒಮ್ಮೆಲೆ ಸ್ವೀಕರಿಸುವನೆ ಅಥವಾ ಕಾಲಕಾಲಕ್ಕೆ ಕ್ರಮವಾಗಿ ಸ್ವೀಕರಿಸುವನೆ? ಎಂಬ ನಾರದರ ಪ್ರಶ್ನೆಗೆ ಬ್ರಹ್ಮದೇವರು ಹೇಳುತ್ತಾರೆ 'ಸೃಷ್ಟಿಕಾಲದಲ್ಲಿ ಕೆಲವರಿಗೆ ಸೃಷ್ಟಿ ಕೆಲವರಿಗೆ ಸ್ಥಿತಿ ಕೆಲವವರಿಗೆ ಸಂಹಾರವಾಗ ಬೇಕಾಗಿರುವುದರಿಂದ ಏಕಕಾಲದಲ್ಲಿ ಮೂರೂ ಗುಣಗಳನ್ನು ತೆಗೆದುಕೊಳ್ಳುತ್ತಾನೆ. ಆದಿಸೃಷ್ಟಿಯಲ್ಲಿ ಸೃಷ್ಟಿಗಾಗಿ ಕೇವಲ ರಜೋಗುಣವನ್ನೂ ಲಯಕಾಲದಲ್ಲಿ ಲಯ ಕ್ಕಾಗಿ ಕೇವಲ ತಮೋಗುಣವನ್ನೂ ಕ್ರಮವಾಗಿ ಸ್ವೀಕರಿಸುತ್ತಾನೆ' ಎಂದು. ೩೯೭

೨.೫.೧೯ ಜೀವ ಸ್ವತಃ ಜಡೇಂದ್ರಿಯರಹಿತ, ನಿತ್ಯಜ್ಞಾನಸ್ವರೂಪ. ಆದರೂ ಪರಮಾತ್ಮನ ಇಚ್ಛೆಯಿಂದ ಗುಣತ್ರಯಗಳು ಅವನನ್ನು ಬಂಧಿಸುತ್ತವೆ. ಅದರಿಂದ ಜೀವೇಶ್ವರ ಭೇದ ಸತ್ಯ. ಸತ್ವಗುಣ ಜ್ಞಾನೇಂದ್ರಿಯ ಮನಸ್ಸುಗಳ ಸಹಾಯದಿಂದ ವಿಷಯಭೋಗದಲ್ಲಿ ಅಭಿಮಾನ ಮೂಡಿಸಿ ಬಂಧಕವಾಗುತ್ತದೆ. ರಜೋಗುಣ ಕರ್ಮೇಂದ್ರಿಯ ಸಹಾಯದಿಂದ ಬಾಹ್ಯಕ್ರಿಯೆಗೆ ಕರ್ತನೆಂದು ಅಭಿಮಾನ ಹುಟ್ಟಿಸಿ ಬಂಧಕವಾಗುತ್ತದೆ. ತಮೋಗುಣ ಶರೀರದ ಸಹಾಯದಿಂದ ಶಾರೀರಕ

ಸುಖದುಃಖಗಳಲ್ಲಿ ತನ್ನವೆಂಬ ಅಭಿಮಾನ ಹುಟ್ಟಿಸಿ ಬಂಧಕವಾಗುತ್ತದೆ ಎಂದು ಪದ್ಮಪುರಾಣ ಹೇಳಿದೆ. ೩೯೯

೨.೫.೨೦ ತ್ರಿಗುಣಗಳಲ್ಲಿ ಸೂಕ್ಷ್ಮತ್ರಿಗುಣಗಳು ಪರಮಾತ್ಮನ ಅನುಗ್ರಹದಿಂದ ಅವನ ದರ್ಶನ ಮಾಡಿಸಬಲ್ಲುವು. ಸೂಕ್ಷ್ಮ ಸತ್ವಗುಣ ಜ್ಞಾನೇಂದ್ರಿಯ ಮನಸ್ಸುಗಳಿಂದ ಶ್ರವಣಾದಿ ಸಾಧನ ಮಾಡಿಸುತ್ತದೆ. ಸೂಕ್ಷ್ಮ ರಜೋಗುಣ ಕರ್ಮೇಂದ್ರಿಯಗಳಿಂದ ಪರಮಾತ್ಮನ ಆರಾಧನೆ ಮಾಡಿಸಿ ಅಂತಃಕರಣ ಶುದ್ಧಿ ನೀಡಿ ಸಾಕ್ಷಾತ್ಕಾರ ಕಾರಣವಾಗುವುದು. ಸೂಕ್ಷ್ಮ ತಮೋಗುಣವೂ ಹರಿದಿನಗಳಲ್ಲಿ ಶರೀರಕ್ಕೆ ಉಪವಾಸಾದಿಕ್ಲೇಶ ದ್ವಾರಾ ಪಾಪಪರಿಹಾರ ಮಾಡಿಸಿ ತತ್ವಜ್ಞಾನಕ್ಕೆ ಕಾರಣವಾಗಬಹುದು. ೪೦೦

೨.೫.೨೧ 'ಸ್ವಯಾ ಮಾಯಯಾ' ಎಂದರೆ ಸ್ವಸಾಮರ್ಥ್ಯದಿಂದ ಎಂದರ್ಥ. 'ಯದೃಚ್ಛಾ' ಎಂದರೂ ಆಕಸ್ಮಿಕ ಎಂದರ್ಥವಲ್ಲ. ಪರಮಾತ್ಮನ ಇಚ್ಛೆ ಹೊರತು ಬೇರಾವ ಕಾರಣವೂ ಇಲ್ಲದೆ ಕಾರ್ಯವಾಗುವಲ್ಲಿ 'ಯದೃಚ್ಛಾ' ಶಬ್ದ ಪ್ರಯೋಗವಿರುವುದರಿಂದ 'ಯದೃಚ್ಛಾ' ಎಂದರೆ ಪರಮಾತ್ಮನ ಇಚ್ಛೆಯೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ಪರಮಾತ್ಮ ಬ್ರಹ್ಮಾದಿ ಬಹು ಜೀವರ ಬಹುಶರೀರಗಳನ್ನು ಸೃಜಿಸಿ ಅವುಗಳೊಳಗೆ ಬಹುರೂಪದಿಂದ ನಿಯಾಮಕನಾಗಬೇಕೆಂದು ಮೊದಲಿಗೆ ಕಾಲ ಪ್ರಕೃತಿ ಮುಂತಾದುವನ್ನು ಬಹುಶರೀರ ಸೃಷ್ಟಿಗೆ ಪ್ರೇರಿಸಿದ ಎಂದೂ ಹೇಳಿದೆ. ೪೦೨

೨.೫.೨೨ 'ಪರಿಣಾಮ ಸ್ವಭಾವದಿಂದ' ಎಂದರೆ ಪ್ರಕೃತಿಯ ಪರಿಣಾಮ ಸ್ವಭಾವದಿಂದ ಎಂದು ಅಭಿಪ್ರಾಯ. ಏಕೆಂದರೆ ಕಾಲಕರ್ಮಗಳು ಬರಿನಿಮಿತ್ತ ಕಾರಣಗಳು. ಪ್ರಕೃತಿಯೆ ಪರಿಣಾಮಿಕಾರಣ. ಈ ಶ್ಲೋಕದ ಅರ್ಥವನ್ನು ಷಾಡ್ಗುಣ್ಯ ಎಂಬ ಗ್ರಂಥ ಹೀಗೆ ಹೇಳಿದೆ. 'ಗುಣ ಕಾಲ ಮತ್ತು ಪ್ರಕೃತಿ ಸ್ವಭಾವಗಳನ್ನೂ ಪರಮಾತ್ಮ ಒಳಗೆ ನಿಂತು ಪ್ರೇರಿಸಿದಾಗ ಅವನ ಇಚ್ಛೆಯಿಂದ ಪ್ರಪಂಚದ ಮೂಲಕಾರಣವಾದ ಮಹತ್ತತ್ವ ಜನಿಸಿತು'! ಎಂದು. ೪೦೩

೨.೫.೨೩ 'ದ್ರವ್ಯಜ್ಞಾನ ಕ್ರಿಯಾತ್ಮಕಃ' ಎಂಬಲ್ಲಿ ದ್ರವ್ಯ ಎಂದರೆ ಪಂಚಭೂತಗಳು. ಜ್ಞಾನವೆಂದರೆ ಜ್ಞಾನೇಂದ್ರಿಯಗಳು, ಕ್ರಿಯೆ ಎಂದರೆ ಕರ್ಮೇಂದ್ರಿಯಗಳು. ಇವು ಮೂರನ್ನು ಉತ್ಪಾದಿಸುವ ಅಹಂಕಾರ ತತ್ವವೂ ಮೂರು ಬಗೆಯಾಗಿದೆ ಎಂದು ಗರುಡಪುರಾಣ ಹೇಳಿದೆ. ೪೦೪

೨.೫.೨೪ ಜ್ಞಾನ ಕರ್ಮಗಳೆಂಬ ವಿಶೇಷಕಾರ್ಯಕಾರಿಗಳಾದ್ದರಿಂದ, ಇಂದ್ರಿಯ ದೇವತೆಗಳು ವೈಕಾರಿಕರೆನಿಸುತ್ತರೆ. ಅವರನ್ನು ಹುಟ್ಟಿಸುವ ಅಹಂಕಾರಕ್ಕೂ ಅದೇ ಹೆಸರಿದೆ. ಇಂದ್ರಿಯಗಳು ಬಹಳ ಜಾಜ್ವಲ್ಯಮಾನವಾದ್ದರಿಂದ ಅವುಗಳಿಗೂ ಅವುಗಳನ್ನು ಹುಟ್ಟಿಸುವ ಅಹಂಕಾರಕ್ಕೂ ತೈಜಸ ಎಂದು ಹೆಸರು. ಪಂಚಭೂತಗಳಿಗೆ ಈ ಎರಡೂ ವೈಶಿಷ್ಟ್ಯವಿಲ್ಲದ್ದ ರಿಂದ ಅವುಗಳಿಗೂ ಅವನ್ನು ಹುಟ್ಟಿಸುವ ಅಹಂಕಾರಕ್ಕೂ ತಾಮಸವೆಂದೇ ಹೆಸರು ಎಂದು ಪದ್ಮಪುರಾಣದಲ್ಲಿ ಹೇಳಿದೆ. ಜ್ಞಾನೇಂದ್ರಿಯಗಳಲ್ಲಿ ಜ್ಞಾನೋತ್ಪಾದನಸಕ್ತಿ, ಕರ್ಮೇಂದ್ರಿಯ ಗಳಲ್ಲಿ ಕರ್ಮೋತ್ಪಾದನಶಕ್ತಿ ಇರುವಂತೆ ಪಂಚಭೂತಗಳಲ್ಲಿಯೂ ದ್ರವ್ಯಶಕ್ತಿ ಇದೆ. ನಾ ಮೊದಲು ತಾಮೊದಲೆಂದು ಸ್ಪರ್ಧೆಯಿಂದ ವೇಗದಿಂದ ಧಾವಿಸಿ ಬಂದು ಮುಟ್ಟಲು ಯೋಗ್ಯ ವೆನಿಸುವುದೇ ದ್ರವ್ಯಶಕ್ತಿ. ಅವ್ಯಾಕೃತಾಕಾಶ ಸರ್ವವ್ಯಾಪಿಯಾದ್ದರಿಂದ ಹೀಗೆ ಧಾವಿಸಿ ಬಂದು ಮುಟ್ಟಲು ಯೋಗ್ಯವಲ್ಲವಾದರೂ, ಅದರ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಧಾವಿಸಿ ಬಂದು ಮುಟ್ಟಲು ಸಾಧ್ಯವಿದೆ. ಅದರಿಂದ ಅದೂ ದ್ರವ್ಯವೆ ಎಂದು ಪ್ರಕಾಶಸಂಹಿತೆ ಹೇಳಿದೆ. ೪೦೪

೨.೫.೨೫ 'ಮಾತ್ರಾಗುಣ' ಎಂದರೆ ಪಂಚೇಂದ್ರಿಯಗಳಿಂದ ತಿಳಿಯಬಹುದಾದ ಗುಣ ಎಂದು ಮತ್ಸ್ಯಪುರಾಣ ಹೇಳಿದೆ. ದ್ರಷ್ಟ್ಯ ಎನಿಸಿದ ಸರ್ವಸಾಕ್ಷಿ ಭಗವಂತನನ್ನೂ ಸರ್ವದೃಶ್ಯವಾದ ಪ್ರಪಂಚವನ್ನೂ ಶಬ್ದದಿಂದಲೆ ತಿಳಿಯಬಹುದೆಂದು ವಿಷ್ಣುಸಂಹಿತೆಯಲ್ಲಿ ಹೇಳಿದೆ. ಅದರಿಂದ ಧ್ವನಿಯೂ ವರ್ಣವನ್ನು ಅಭಿವ್ಯಕ್ತಿಮಾಡಿ ಆ ಮೂಲಕ ಪರಾಪರತತ್ವ ಬೋಧಕವೆ ಆಗುತ್ತದೆ. ೪೦೬

೨.೫.೨೬ ಪ್ರಾಣ ಎಂದರೆ, ಶಾರೀರಕ ಚಟುವಟಿಕೆಗಳಿಗೆ ಪ್ರೇರಕವಾದ ಗುಣ. ಪರಾಭವಗೊಳಿಸುವ ಸಾಮರ್ಥ್ಯ ಓಜೋಗುಣ. ಇನ್ನೊಬ್ಬರಿಗೆ ಸೋಲದಿರುವುದು ಸಹೋಗುಣ. ತನ್ನಿಚ್ಛೆಯಂತೆ ಮಾಡುವ ಸಾಮರ್ಥ್ಯ ಬಲ ಎಂದು ಮಹಾಭಾರತ ಹೇಳಿದೆ. ೪೦೭

೨.೫.೩೦ ಶ್ರೀಹರಿ ಜನನ ಮರಣಗಳಿಲ್ಲದವನಾದರೂ ವೈಕಾರಿಕಾಹಂಕಾರದಿಂದ ಹುಟ್ಟುವ ಇಂದ್ರಿಯದೇವತೆಗಳ ನಡುವೆ ತಾನೂ ಒಬ್ಬನಾಗಿ ಪಾದಾಂಗುಷ್ಠದಲ್ಲಿದ್ದು ಸರ್ವಪಾಲಕನಾಗಿರುತ್ತಾನೆ. ಇನ್ನೊಬ್ಬ ಪಾದಾಭಿಮಾನಿಯಾದ ಇಂದ್ರಪುತ್ರ ಯಜ್ಞನಲ್ಲಿ ಪ್ರವೇಶಿಸಿ ಶರೀರದಲ್ಲಿ ನೆಲೆಸುತ್ತಾನೆ. ೪೦೮

ಸ್ಥಾನತ್ರಯಾತ್ ಪರಂ ಪ್ರಾಪ್ತಂ ಬ್ರಹ್ಮಭೂತಮವಿಕ್ರಿಯಮ್ ॥ ೨೬ ॥

ವಿಪ್ರಕೀರ್ಣಜಟಾಚ್ಛನ್ನಂ ರೌರವೇಣಾಜಿನೇನ ಚ ।
ವಿಶುಷ್ಯತ್ತಾಲುರುದಕಂ ತಥಾಭೂತಮಯಾಚತ ॥ ೨೭ ॥

ಅಲಬ್ಧತೃಣಭೂಮ್ಯಾದಿರಸಂಪ್ರಾಪ್ತಾರ್ಘ್ಯಸೂನೃತಃ ।
ಅವಜ್ಞಾತಮಿವಾತ್ಮಾನಂ ಮನ್ಯಮಾನಶ್ಚುಕೋಪ ಹ ॥ ೨೮ ॥

ಅಭೂತಪೂರ್ವಃ ಸಹಸಾ ಕ್ಷುತ್ತೃಡ್ಭ್ಯಾಮರ್ದಿತಾತ್ಮನಃ ।
ಬ್ರಾಹ್ಮಣಂ ಪ್ರತ್ಯಭೂದ್ ಬ್ರಹ್ಮನ್ ಮತ್ಸರೋ ಮನ್ಯುರೇವ ಚ ॥ ೨೯ ॥

ಸ ತಸ್ಯ ಬ್ರಹ್ಮರ್ಷೇರಂಸೇ ಗತಾಸುಮುರಗಂ ರುಷಾ ।
ವಿನಿರ್ಗಚ್ಛನ್ ಧನುಷ್ಕೋಟ್ಯಾ ನಿಧಾಯ ಪುರಮಾಗತಃ ॥ ೩೦ ॥

ಏಷ ಕಿಂ ನಿಭೃತಾಶೇಷಕರಣೋ ಮೀಲಿತೇಕ್ಷಣಃ ।
ಮುಧಾಸಮಾಧಿರಾಹೋಸ್ವಿತ್ ಕಿಂ ನಃ ಸ್ಯಾತ್ ಕ್ಷತ್ರಬಂಧುಭಿಃ ॥ ೩೧ ॥

ತಸ್ಯ ಪುತ್ರೋಽತಿತೇಜಸ್ವೀ ವಿಹರನ್ ಬಾಲಕೋಽರ್ಭಕೈಃ ।
ರಾಜ್ಞಾಽಘಂ ಪ್ರಾಪಿತಂ ತಾತಂ ಶ್ರುತ್ವಾ ತತ್ರೇದಮಬ್ರವೀತ್ ॥ ೩೨ ॥

ಅಹೋ ಅಧರ್ಮಃ ಪಾಲಾನಾಂ ಪೃಥ್ವ್ಯಾ ಬಲಿಭುಜಾಮಿವ ।
ಸ್ವಾಮಿನ್ಯಘಂ ಯದ್ ದಾಸಾನಾಂ ದ್ವಾರಪಾನಾಂ ಶುನಾಮಿವ ॥ ೩೩ ॥

ಬ್ರಾಹ್ಮಣೈಃ ಕ್ಷತ್ರಬಂಧುರ್ಹಿ ದ್ವಾರಪಾಲೋ ನಿರೂಪಿತಃ ।
ಸ ಕಥಂ ತದ್ಗೃಹೇ ದ್ವಾಃಸ್ಥಃ ಸಭಾಂಡಂ ಭೋಕ್ತುಮರ್ಹತಿ ॥ ೩೪ ॥

ಕೃಷ್ಣೇ ಗತೇ ಭಗವತಿ ಶಾಸ್ತರ್ಯುತ್ಪಥಗಾಮಿನಾಮ್ ।
ತಾನ್ ಭಿನ್ನಸೇತೂನದ್ಯಾಹಂ ಶಾಸ್ಮಿ ಪಶ್ಯತ ಮೇ ಬಲಮ್ ॥ ೩೫ ॥

ಇತ್ಯುಕ್ತ್ವಾ ರೋಷತಾಮ್ರಾಕ್ಷೋ ವಯಸ್ಯಾನೃಷಿಬಾಲಕಾನ್ ।
ಕೌಶಿಕ್ಯಪ ಉಪಸ್ಪೃಶ್ಯ ವಾಗ್ವಜ್ರಂ ವಿಸಸರ್ಜ ಹ ॥ ೩೬ ॥

ಇತೋ ಲಂಘಿತಮರ್ಯಾದಂ ತಕ್ಷಕಃ ಸಪ್ತಮೇಽಹನಿ ।
ಧಕ್ಷ್ಯತಿ ಸ್ಮ ಕುಲಾಂಗಾರಂ ಚೋದಿತೋ ಮೇ ಪಿತೃದ್ರುಹಮ್ ॥ ೩೭ ॥

ತತೋಽಭ್ಯೇತ್ಯಾಶ್ರಮಂ ಬಾಲೋ ಗಳೇಸರ್ಪಕಳೇಬರಮ್ ।
ಪಿತರಂ ವೀಕ್ಷ್ಯ ದುಃಖಾರ್ತೋ ಮುಕ್ತಕಂಠೋ ರುರೋದ ಹ ॥ ೩೮ ॥

ಸ ವಾ ಆಂಗಿರಸೋ ಬ್ರಹ್ಮನ್ ಶ್ರುತ್ವಾ ಸುತವಿಲಾಪಿತಮ್ ।
ಉನ್ಮೀಲ್ಯ ಶನಕೈರ್ನೇತ್ರೇ ದೃಷ್ಟ್ವಾ ಚಾಂಸೇ ಮೃತೋರಗಮ್ ॥ ೩೯ ॥

ವಿಸೃಜ್ಯ ಪುತ್ರಂ ಪಪ್ರಚ್ಛ ವತ್ಸ ಕಸ್ಮಾದ್ ವಿರೋದಿಷಿ ।
ಕೇನ ವಾ ತೇ ವಿಪ್ರಕೃತಮಿತ್ಯುಕ್ತಃ ಸ ನ್ಯವೇದಯತ್ ॥ ೪೦ ॥

ನಿಶಮ್ಯ ಶಪ್ತಮತದರ್ಹಂ ನರೇಂದ್ರಂ
ಸ ಬ್ರಾಹ್ಮಣೋ ನಾತ್ಮಜಮಭ್ಯನಂದತ್ ।
ಅಹೋ ಬತಾಂಹೋ ಮಹದದ್ಯ ತೇ ಕೃತ-
ಮಲ್ಪೀಯಸಿ ದ್ರೋಹ ಉರುರ್ದಮೋ ಧೃತಃ ॥ ೪೧ ॥

ನ ವೈ ನೃಭಿರ್ನರದೇವೋಽಪರಾಧ್ಯಃ
ತಂ ಶಪ್ತುಮರ್ಹಸ್ಯವಿಪಕ್ವಬುದ್ಧೇ ।
ಯತ್ತೇಜಸಾ ದುರ್ವಿಷಹೇಣ ಗುಪ್ತಾ
ವಿಂದಂತಿ ಭದ್ರಾಣ್ಯಕುತೋಭಯಾಃ ಪ್ರಜಾಃ ॥ ೪೨ ॥

ಅರಕ್ಷಮಾಣೇ ನರದೇವನಾಮ್ನಿ
ರಥಾಂಗಪಾಣಾವಯಮಂಗ ಲೋಕಃ ।
ತದಾ ಹಿ ಚೋರಪ್ರಚುರೋ ವಿನಂಕ್ಷ್ಯ-
ತ್ಯರಕ್ಷ್ಯಮಾಣೋ ವಿವರೂಥವತ್ ಕ್ಷಣಾತ್ ॥ ೪೩ ॥

ತದದ್ಯ ನಃ ಪಾಪಮುಪೈತ್ಯನನ್ವಯಂ
ಯನ್ನಷ್ಟನಾಥಸ್ಯ ಪಶೋರ್ವಿಲುಂಪಕಾಃ ।
ಪರಸ್ಪರಂ ಘ್ನಂತಿ ಶಪಂತಿ ವೃಂಜತೇ
ಪಶೂನ್ ಸ್ತ್ರಿಯೋಽರ್ಥಾನ್ ಪುರುದಸ್ಯವೋ ಜನಾಃ ॥ ೪೪ ॥

ತದಾಽಽರ್ಯಧರ್ಮಶ್ಚ ವಿಲೀಯತೇ ನೃಣಾಂ
ವರ್ಣಾಶ್ರಮಾಚಾರಯುತಸ್ತ್ರಯೀಮಯಃ ।
ತತೋಽರ್ಥಕಾಮಾಭಿನಿವೇಶಿತಾತ್ಮನಾಂ
ಶುನಾಂ ಕಪೀನಾಮಿವ ವರ್ಣಸಂಕರಃ ॥ ೪೫ ॥

ಧರ್ಮಪಾಲೋ ನರಪತಿಃ ಸ ತು ಸಮ್ರಾಡ್ ಬೃಹಚ್ಛ್ರವಾಃ ।
ಸಾಕ್ಷಾನ್ಮಹಾಭಾಗವತೋ ರಾಜರ್ಷಿರ್ಹಯಮೇಧಯಾಟ್ ।
ಕ್ಷುತ್ತೃಟ್‌ಶ್ರಮಾನ್ವಿತೋ ದೀನೋ ನೈವಾಸ್ಮಚ್ಛಾಪಮರ್ಹತಿ ॥ ೪೬ ॥

ಅಪಾಪೇಷು ಸ್ವಭೃತ್ಯೇಷು ಬಾಲೇನಾಪಕ್ವಬುದ್ಧಿನಾ ।
ಪಾಪಂ ಕೃತಂ ತದ್ ಭಗವಾನ್ ಸರ್ವಾತ್ಮಾ ಕ್ಷಂತುಮರ್ಹತಿ ॥ ೪೭ ॥

ತಿರಸ್ಕೃತಾ ವಿಪ್ರಲಬ್ಧಾಃ ಶಪ್ತಾಃ ಕ್ಷಿಪ್ತಾ ಹತಾ ಅಪಿ ।
ನಾಸ್ಯ ತತ್ ಪ್ರತಿಕುರ್ವಂತಿ ತದ್ಭಕ್ತಾಃ ಪ್ರಭವೋಽಪಿ ಹಿ ॥ ೪೮ ॥

ಇತಿ ಪುತ್ರಕೃತಾಘೇನ ಸೋಽನುತಪ್ತೋ ಮಹಾಮುನಿಃ ।
ಸ್ವಯಂ ವಿಪ್ರಕೃತೋ ರಾಜ್ಞಾ ನೈವಾಘಂ ತದಚಿಂತಯತ್ ॥ ೪೯ ॥

ಸಾಧವಃ ಪ್ರಾಯಶೋ ಲೋಕೇ ಪರೈರ್ದ್ವಂದ್ವೇಷು ಯೋಜಿತಾಃ ।
ನ ವ್ಯಥಂತಿ ನ ಹೃಷ್ಯಂತಿ ಯತ ಆತ್ಮಾಗುಣಾಶ್ರಯಃ ॥ ೫೦ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ವಿಪ್ರಶಾಪೋಪಲಂಭನಂ ನಾಮ ಅಷ್ಟಾದಶೋಽಧ್ಯಾಯಃ ॥

ಅಥೈಕೋನವಿಂಶೋಽಧ್ಯಾಯಃ

ಸೂತ ಉವಾಚ—

ಮಹೀಪತಿಸ್ತ್ವಥ ತತ್ಕರ್ಮ ಗರ್ಹ್ಯಂ
ವಿಚಿಂತಯನ್ನಾತ್ಮಕೃತಂ ಸುದುರ್ಮನಾಃ ।
ಅಹೋ ಮಯಾ ನೀಚಮನಾರ್ಯವತ್ ಕೃತಂ
ನಿರಾಗಸಿ ಬ್ರಹ್ಮಣಿ ಗೂಢತೇಜಸಿ ॥ ೧ ॥

ಧ್ರುವಂ ತತೋ ಮೇ ಕೃತದೇವಹೇಳನಾದ್
ದುರತ್ಯಯಂ ವ್ಯಸನಂ ನಾತಿದೀರ್ಘಾತ್ ।
ತದಸ್ತು ಕಾಮಮಘನಿಷ್ಕೃತಾಯ ಮೇ
ಯಥಾ ನ ಕುರ್ಯಾಂ ಪುನರೇವಮದ್ಧಾ ॥ ೨ ॥

ಅದ್ಯೈವ ರಾಜ್ಯಂ ಬಲಮೃದ್ಧಕೋಶಂ
ಪ್ರಕೋಪಿತಬ್ರಹ್ಮಕುಲಾನಲೋ ಮೇ ।
ದಹತ್ವಭದ್ರಸ್ಯ ಪುನರ್ನ ಮೇಽಭೂತ್
ಪಾಪೀಯಸೀ ಧೀರ್ದ್ವಿಜದೇವತಾಸು ॥ ೩ ॥

ಸ ಚಿಂತಯನ್ನಿತ್ಥಮಥಾಶೃಣೋದ್ ಯಥಾ
ಮುನೇಃ ಸುತೋಕ್ತಾನ್ನಿಕೃತಿಂ ತಕ್ಷಕಾಖ್ಯಾತ್ ।
ಸ ಸಾಧು ಮೇನೇ ನಚಿರೇಣ ತಕ್ಷಕಾ-
ದಲಂ ಪ್ರಸಕ್ತಸ್ಯ ವಿರಕ್ತಿಕಾರಣಮ್ ॥ ೪ ॥

ಅಥೋ ವಿಹಾಯೇಮಮಮುಂ ಚ ಲೋಕಂ
ವಿಮೃಶ್ಯ ತೌ ಹೇಯತಯಾ ಪುರಸ್ತಾತ್ ।
ಕೃಷ್ಣಾಂಘ್ರಿಸೇವಾಮಭಿಮನ್ಯಮಾನ
ಉಪಾವಿಶತ್ ಪ್ರಾಯಮಮರ್ತ್ಯನದ್ಯಾಮ್ ॥ ೫ ॥

ಯಾ ವೈ ಲಸಚ್ಛ್ರೀತುಳಸೀವಿಮಿಶ್ರ
ಕೃಷ್ಣಾಂಘ್ರಿರೇಣ್ವಭ್ಯಧಿಕಾಂಬುನೇತ್ರೀ ।
ಪುನಾತ್ಯಶೇಷಾನುಭಯತ್ರ ಲೋಕಾನ್
ಕಸ್ತಾಂ ನ ಸೇವೇತ ಮರಿಷ್ಯಮಾಣಃ ॥ ೬ ॥

ಇತಿ ವ್ಯವಸ್ಥಾಯ ಚ ಪಾಂಡವೇಯಃ
ಪ್ರಾಯೋಪವೇಶಂ ಪ್ರತಿ ವಿಷ್ಣುಪದ್ಯಾಮ್ ।
ದಧ್ಯೌ ಮುಕುಂದಾಂಘ್ರಿಮನನ್ಯಭಾವೋ
ಮುನಿವ್ರತೋ ಮುಕ್ತಸಮಸ್ತಸಂಗಃ ॥ ೭ ॥

ತತ್ರೋಪಜಗ್ಮುರ್ಭುವನಂ ಪುನಾನಾ
ಮಹಾನುಭಾವಾ ಮುನಯಃ ಸಶಿಷ್ಯಾಃ ।
ಪ್ರಾಯೇಣ ತೀರ್ಥಾಭಿಗಮಾಪದೇಶೈಃ
ಸ್ವಯಂ ಹಿ ತೀರ್ಥಾನಿ ಪುನಂತಿ ಸಂತಃ ॥ ೮ ॥

ಅತ್ರಿರ್ವಸಿಷ್ಠಶ್ಚ್ಯವನಃ ಶರದ್ವಾ-
ನರಿಷ್ಟನೇಮಿರ್ಭೃಗುರಂಗಿರಾಶ್ಚ ।
ಪರಾಶರೋ ಗಾಧಿಸುತೋಽಥ ರಾಮ
ಉಚಥ್ಯ ಇಂದ್ರಪ್ರಮತೀಧ್ಮವಾಹೌ ॥ ೯ ॥

ಮೇಧಾತಿಥಿರ್ದೇವಲ ಆರ್ಷ್ಟಿಷೇಣೋ
ಭರದ್ವಾಜೋ ಮುದ್ಗಲೋ ಗೌತಮಶ್ಚ ।
ಮೈತ್ರೇಯ ಔರ್ವಃ ಕವಷಃ ಕುಂಭಯೋನಿ
ರ್ದ್ವೈಪಾಯನೋ ಭಗವಾನ್ ನಾರದಶ್ಚ ॥ ೧೦ ॥

ಅನ್ಯೇ ಚ ದೇವರ್ಷಿಬ್ರಹ್ಮರ್ಷಿವರ್ಯಾ
ರಾಜರ್ಷಿವರ್ಯಾ ಅರುಣಾದಯಶ್ಚ ।
ನಾನಾರ್ಷೇಯಪ್ರವರಾನ್ ಸಮೇತಾ-
ನಭ್ಯರ್ಚ್ಯ ರಾಜಾ ಶಿರಸಾ ವವಂದೇ ॥ ೧೧ ॥

ಸುಖೋಪವಿಷ್ಟೇಷ್ವಥ ತೇಷು ಭೂಯಃ
ಕೃತಪ್ರಣಾಮಃ ಸ್ವಚಿಕೀರ್ಷಿತಂ ಯತ್ ।
ವಿಜ್ಞಾಪಯಾಮಾಸ ನಿವೃತ್ತಚೇತಾ
ಉಪಸ್ಥಿತೋಽಗ್ರೇಽಭ್ಯರ್ಗೃಹೀತಪಾಣಿಃ ॥ ೧೨ ॥

ರಾಜೋವಾಚ—

ಅಹೋ ವಯಂ ಧನ್ಯತಮಾ ನೃಪಾಣಾಂ
ಮಹತ್ತಮಾನುಗ್ರಹಣೀಯಶೀಲಾಃ ।
ರಾಜ್ಞಾಂ ಕುಲಂ ಬ್ರಾಹ್ಮಣಪಾದಶೌಚ-
ಮಾರಾದ್ ವಿಸೃಷ್ಟಂ ಬತ ಗರ್ಹ್ಯಕರ್ಮ ॥ ೧೩ ॥

ತಸ್ಯೈವ ಮೇಽಸ್ಯ್ಯದ್ಯ ಪರಾವರೇಶೇ
ವ್ಯಾಸಕ್ತಚಿತ್ತಸ್ಯ ಗೃಹೇಷ್ವಭೀಕ್ಷ್ಣಮ್ ।
ನಿರ್ವೇದಮೂಲೋ ದ್ವಿಜಶಾಪರೂಪೋ
ಯತ್ರ ಪ್ರಸಕ್ತೋಽಭಯಮೇವ ಧತ್ತೇ ॥ ೧೪ ॥

ತಂ ಮೋಪವಿಷ್ಟಂ ಪ್ರತಿಯಾಂತು ವಿಪ್ರಾ
ಗಂಗಾ ಚ ದೇವೀ ಧೃತಚಿತ್ತಮೀಶೇ ।
ದ್ವಿಜೋಪಸೃಷ್ಟಃ ಕುಹಕಸ್ತ್ತಕ್ಷಕೋ ವಾ
ದಶತ್ವಲಂ ಗಾಯತ ವಿಷ್ಣುಗಾಥಾಃ ॥ ೧೫ ॥

ಪುನಶ್ಚ ಭೂಯಾದ್ ಭಗವತ್ಯನಂತೇ
ರತಿಃ ಪ್ರಸಂಗಶ್ಚ ತದಾಶ್ರಯೇಷು ।
ಮಹತ್ಸು ಯಾಂಯಾಮುಪಯಾಮಿ ಸೃಷ್ಟಿಂ
ಮೈತ್ರ್ಯಸ್ತು ಸರ್ವತ್ರ ನಮೋ ದ್ವಿಜೇಭ್ಯಃ ॥ ೧೬ ॥

ಇತಿ ಸ್ಮ ರಾಜಾ ವ್ಯವಸಾಯಯುಕ್ತಃ
ಪ್ರಾಚೀನಕಾಗ್ರೇಷು ಕುಶೇಷು ಧೀರಃ ।
ಉದಙ್ಮುಖೋ ದಕ್ಷಿಣಕೂಲ ಆಸ್ತೇ
ಸಮುದ್ರಪತ್ನ್ಯಾಃ ಸ್ವಸುತನ್ಯಸ್ತಭಾರಃ ॥ ೧೭ ॥

ವಿಹಾಯ ಸರ್ವಂ ನರದೇವಚಿಹ್ನಂ
ಕೇಯೂರಹಾರಾಂಗದಮೌಳಿರತ್ನಾನ್ ।
ರತ್ನಾಂಗುಲೀಯಾನ್ ವಿಮಲಾನ್ ನಿರಸ್ಯ
ಪವಿತ್ರಪಾಣಿರ್ಮುನಿವೇಷ ಆಸ್ತೇ ॥ ೧೮ ॥

ಏವಂ ತು ತಸ್ಮಿನ್ ನರದೇವದೇವೇ
ಪ್ರಾಯೋಪವಿಷ್ಟೇ ದಿವಿ ದೇವಸಂಘಾಃ ।
ಪ್ರಶಸ್ಯ ಭೂಮೌ ವ್ಯಕಿರನ್ ಪ್ರಸೂನೈ
ರ್ಮುದಾ ಮುಹುರ್ದುಂದುಭಯಶ್ಚ ನೇದುಃ ॥ ೧೯ ॥

ಮಹರ್ಷಯೋ ವೈ ಸಮುಪಾಗತಾ ಯೇ
ಪ್ರಶಸ್ಯ ಸಾಧ್ವಿತ್ಯನುಮೋದಮಾನಾಃ ।
ಊಚುಃ ಪ್ರಜಾನುಗ್ರಹಶೀಲಸಾರಾ
ಯದುತ್ತಮಶ್ಲೋಕಗುಣಾನುರೂಪಮ್ ॥ ೨೦ ॥

ನ ವಾ ಇದಂ ರಾಜರ್ಷಿವರ್ಯ ಚಿತ್ರಂ
ಭವತ್ಸು ಕೃಷ್ಣಂ ಸಮನುವ್ರತೇಷು ।
ಯೇಽಧ್ಯಾಸನಂ ರಾಜಕಿರೀಟಜುಷ್ಟಂ
ಸದ್ಯೋ ಜಹುರ್ಭಗವತ್ಪಾರ್ಶ್ವಕಾಮಾಃ ॥ ೨೦ ॥

ಸರ್ವೇ ವಯಂ ತಾವದಿಹಾಸ್ಮಹೇಽಥ
ಕಳೇಬರಂ ಯಾವದಸೌ ವಿಹಾಯ ।
ಅಜಂ ಪರಂ ವಿರಜಸ್ಕಂ ವಿಶೋಕಂ
ಯಾಸ್ಯತ್ಯಯಂ ಭಾಗವತಪ್ರಧಾನಃ ॥ ೨೨ ॥

ಆಶ್ರುತ್ಯ ತದ್ ಋಷಿಗಣವಚಃ ಪರೀಕ್ಷಿತ್
ಸಮಂ ಮಧುಶ್ಚುದ್ ಗುರುಶಾಪವ್ಯಳೀಕಮ್ ।
ಆಭಾಷತೈನಾನಭಿವಂದ್ಯ ಯುಕ್ತಃ
ಶುಶ್ರೂಷಮಾಣಶ್ಚರಿತಾನಿ ವಿಷ್ಣೋಃ ॥ ೨೩ ॥

ರಾಜೋವಾಚ—

ಸಮಾಗತಾಃ ಸರ್ವತ ಏವ ಸರ್ವೇ
ವೇದಾ ಯಥಾ ಮೂರ್ತಿಧರಾಸ್ತ್ರಿಪೃಷ್ಠೇ ।
ನೇಹಾಥವಾಽಮುತ್ರ ಚ ಕಶ್ಚನಾರ್ಥ
ಋತೇ ಪರಾನುಗ್ರಹಮಾತ್ಮಶೀಲಾಃ ॥ ೨೪ ॥

ತತಶ್ಚ ವಃ ಪ್ರಶ್ನಮಿಮಂ ವಿಪೃಚ್ಛೇ
ವಿಸ್ರಭ್ಯ ವಿಪ್ರಾ ಇತಿಕೃತ್ಯತಾಯಾಮ್ ।
ಸರ್ವಾತ್ಮನಾ ಮ್ರಿಯಮಾಣೈಸ್ತು ಕೃತ್ಯಂ
ಶುದ್ಧಂ ಚ ತತ್ರಾಮೃಶತಾಭಿಯುಕ್ತಾಃ ॥ ೨೫ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಏಕೋನವಿಂಶೋಽಧ್ಯಾಯಃ ॥

ಅಥ ವಿಂಶೋಽಧ್ಯಾಯಃ

ತತ್ರಾಭವದ್ ಭಗವಾನ್ ವ್ಯಾಸಪುತ್ರೋ
ಯದೃಚ್ಛಯಾ ಗಾಮಟಮಾನೋಽನಪೇಕ್ಷಃ।
ಅಲಕ್ಷ್ಯಲಿಂಗೋ ನಿಜಲಾಭತುಷ್ಟೋ
ವೃತಶ್ಚ ಬಾಲೈರವಧೂತವೇಷಃ ॥ ೧ ॥

ತಂ ದ್ವ್ಯಷ್ಟವರ್ಷಂ ಸುಕುಮಾರಪಾದ
ಕರೋರುಬಾಹ್ವಂಸಕಪೋಲಗಾತ್ರಮ್ ।
ಚಾರ್ವಾಯತಾಕ್ಷೋನ್ನಸತುಲ್ಯಕರ್ಣಂ
ಸುಭ್ರ್ವಾನನಂ ಕಂಬುಸುಜಾತಕಂಠಮ್ ॥ ೨ ॥

ನಿಗೂಢಜತ್ರುಂ ಪೃಥುತುಂಗವಕ್ಷಸ-
ಮಾವರ್ತನಾಭಿಂ ವಲಿವಲ್ಗೂದರಂ ಚ ।
ದಿಗಂಬರಂ ವಕ್ತ್ರವಿಕೀರ್ಣಕೇಶಂ
ಪ್ರಲಂಬಬಾಹುಂ ಸ್ವಮರೋತ್ತಮಾಭಮ್ ॥ ೩ ॥

ಶ್ಯಾಮಂ ಸದಾಽಽಪೀಚ್ಯವಯೋಽಂಗಲಕ್ಷ್ಮ್ಯಾ
ಸ್ತ್ರೀಣಾಂ ಮನೋಜ್ಞಂ ರುಚಿರಸ್ಮಿತೇನ ।

ಪ್ರತ್ಯುತ್ಥಿತಾ ಮುನಯಶ್ಚಾಸನೇಭ್ಯ-
ಸ್ತಲ್ಲಕ್ಷಣಜ್ಞಾ ಅಪಿ ಗೂಢವರ್ಚಸಮ್ ॥ ೪ ॥

ಸ ವಿಷ್ಣುರಾತೋಽತಿಥಯ ಆಗತಾಯ
ತಸ್ಮೈ ಸಪರ್ಯಾಂ ಶಿರಸಾಽಽಜಹಾರ ।
ತತೋ ನಿವೃತ್ತಾ ಹ್ಯಬುಧಾಃ ಸ್ತ್ರಿಯೋಽರ್ಭಕಾ
ಮಹಾಸನೇ ಚೋಪವಿವೇಶ ಪೂಜಿತಃ ॥ ೫ ॥

ಸ ಸಂವೃತಸ್ತತ್ರ ಮಹಾನ್ ಮಹೀಯಸಾಂ
ಬ್ರಹ್ಮರ್ಷಿರಾಜರ್ಷಿದೇವರ್ಷಿಸಂಘೈಃ ।
ವ್ಯರೋಚತಾಲಂ ಭಗವಾನ್ ಯಥೇಂದು
ರ್ಗ್ರಹರ್ಕ್ಷತಾರಾನಿಕರೈಃ ಪರೀತಃ ॥ ೬ ॥

ಪ್ರಶಾಂತಮಾಸೀನಮಕುಂಠಮೇಧಸಂ
ಮುನಿಂ ನೃಪೋ ಭಾಗವತೋಽಭ್ಯುಪೇತ್ಯ ।
ಪ್ರಣಮ್ಯ ಮೂರ್ಧ್ನಾಽವಹಿತಃ ಕೃತಾಂಜಲಿ
ರ್ನತ್ವಾ ಗಿರಾ ಸೂನೃತಯಾಽನ್ವಪೃಚ್ಛತ್ ॥ ೭ ॥

ರಾಜೋವಾಚ—
ಅಹೋ ಅದ್ಯ ವಯಂ ಬ್ರಹ್ಮನ್ ಸತ್ಸೇವ್ಯಾಃ ಕ್ಷತ್ರಬಂಧವಃ ।
ಕೃಪಯಾಽತಿಥಿರೂಪೇಣ ಭವದ್ಭಿಸ್ತೀರ್ಥಕಾಃ ಕೃತಾಃ ॥ ೮ ॥

ಯೇಷಾಂ ಸಂಸ್ಮರಣಾತ್ ಪುಂಸಃ ಸದ್ಯಃ ಶುದ್ಧ್ಯಂತಿ ವೈ ಗೃಹಾಃ ।
ಕಿಂ ಪುನರ್ದರ್ಶನಸ್ಪರ್ಶಪಾದಶೌಚಾಸನಾದಿಭಿಃ ॥ ೯ ॥

ಸಾನ್ನಿಧ್ಯಾತ್ ತೇ ಮಹಾಯೋಗಿನ್ ಪಾತಕಾನಿ ಮಹಾಂತ್ಯಪಿ ।
ಸದ್ಯೋ ನಶ್ಯಂತಿ ವೈ ಪುಂಸಾಂ ವಿಷ್ಣೋರಿವ ಸುರೇತರಾಃ ॥ ೧೦ ॥

ಅಪಿ ಮೇ ಭಗವಾನ್ ಪ್ರೀತಃ ಕೃಷ್ಣಃ ಪಾಂಡುಸುತಪ್ರಿಯಃ ।
ಪೈತೃಷ್ವಸೇಯಪ್ರೀತ್ಯರ್ಥಂ ತದ್ಗೋತ್ರಸ್ಯಾಪ್ತಬಾಂಧವಃ ॥ ೧೧ ॥

ಅನ್ಯಥಾ ತೇಽವ್ಯಕ್ತಗತೇರ್ದರ್ಶನಂ ನಃ ಕಥಂ ನೃಣಾಮ್ ।
ನಿತರಾಂ ಮ್ರಿಯಮಾಣಾನಾಂ ಸಂಸಿದ್ಧಸ್ಯ ವರೀಯಸಃ ॥ ೧೨ ॥

ಅತಃ ಪೃಚ್ಛಾಮಿ ಸಂಸಿದ್ಧಿಂ ಯೋಗಿನಾಂ ಪರಮಂ ಗುರುಮ್ ।
ಪುರುಷಸ್ಯೇಹ ಯತ್ ಕಾರ್ಯಂ ಮ್ರಿಯಮಾಣಸ್ಯ ಸರ್ವದಾ ॥ ೧೩ ॥

ಯಚ್ಛ್ರೋತವ್ಯಮಥೋ ಜಪ್ಯಂ ಯತ್ ಕರ್ತವ್ಯಂ ನೃಭಿಃ ಸದಾ ।
ಸ್ಮರ್ತವ್ಯಂ ಭಜನೀಯಂ ವಾ ಬ್ರೂಹಿ ಯದ್ವಾ ವಿಪರ್ಯಯಮ್ ॥ ೧೪ ॥

ನೂನಂ ಭಗವತೋ ಬ್ರಹ್ಮನ್ ಗೃಹೇಷು ಗೃಹಮೇಧಿನಾಮ್ ।
ನ ಲಕ್ಷ್ಯತೇ ಹ್ಯವಸ್ಥಾನಮಪಿ ಗೋದೋಹನಂ ಕ್ವಚಿತ್ ॥ ೧೫

ಸೂತ ಉವಾಚ—
ಏವಮಾಭಾಷಿತಃ ಪೃಷ್ಟಃ ಸ ರಾಜ್ಞಾ ಶ್ಲಕ್ಷ್ಣಯಾ ಗಿರಾ ।
ಪ್ರತ್ಯಭಾಷತ ಧರ್ಮಜ್ಞೋ ಭಗವಾನ್ ಬಾದರಾಯಣಿಃ ॥ ೧೬ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ
ಪಾರಮಹಂಸ್ಯಾಮಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಪ್ರಥಮಸ್ಕಂಧೇ ಶುಕಾಗಮನಂ ನಾಮ ವಿಂಶೋಽಧ್ಯಾಯಃ ॥

॥ ಸಮಾಪ್ತಶ್ಚ ಪ್ರಥಮಸ್ಕಂಧಃ ॥

ಓಂ ನಮೋ ಭಗವತೇ ವಾಸುದೇವಾಯ

ಹರಿಃ ಓಂ ॥

ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯಂತಿ ಯಂ ಸೂರಯಃ ।
ತೇಜೋ ವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋ ಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥ ೧ ॥

॥ ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಃ

ಶ್ರೀಮದ್ ಭಾಗವತ ತಾತ್ಪರ್ಯ ನಿರ್ಣಯಃ

ಪ್ರಥಮಸ್ಕಂಧಃ

ಒಂದನೇ ಅಧ್ಯಾಯ

ಅಧ್ಯಾಯ ಸಾರಾಂಶ

ಓಂ ನಮೋ ಭಗವತೇ ವಾಸುದೇವಾಯ ಓಂ ॥

ಭಗವಾನ್ ವಾಸುದೇವ ಜಡವಸ್ತುಗಳನ್ನು ಸೃಷ್ಟಿಸುವಾಗ ಅವುಗಳೊಳಗೆ ಅದೇ ಆಕಾರದಿಂದ ತಾನೂ ಪ್ರಾದುರ್ಭಾವ ಹೊಂದುತ್ತಾನೆ. ಒಂದು ದೀಪದಿಂದ ಅಸಂಖ್ಯದೀಪಗಳು ಬೆಳಗುವಂತೆ ಅವನ ಮೂಲರೂಪದಿಂದ ಅನಂತರೂಪಗಳು ಜಗತ್ತಿನಲ್ಲಿ ಬೆಳಗುತ್ತವೆ. ಮಣ್ಣಿನಿಂದ ನಾನಾ ಬೊಂಬೆಗಳನ್ನು ತಯಾರಿಸುವಂತೆ ಮೂಲಪ್ರಕೃತಿಯಿಂದ ಜಡವಸ್ತುಗಳನ್ನು ಅವನು ನಿರ್ಮಿಸುತ್ತಾನೆ. ಜೀವರ ಕರ್ಮಾನುಸಾರ ಶರೀರಗಳನ್ನೂ ನಿರ್ಮಿಸಿಕೊಡುತ್ತಾನೆ. ಈ ಮೂರು ರೀತಿಯ ಸೃಷ್ಟಿಯಿಂದ ಪೂರ್ಣಕಾಮನಾದ ಆತನಿಗೇನೂ ಪ್ರಯೋಜನವಿಲ್ಲ. ಜೀವರಿಗಾಗಿ ಮಾಡುತ್ತಾನೆ. ಜೀವರು ಅನೇಕ ಜನ್ಮಗಳಲ್ಲಿ ಸಾಧನೆ ಮಾಡಿ ಮೋಕ್ಷ ಸಂಪಾದನೆ ಮಾಡಿಕೊಳ್ಳಲಿ ಎಂಬ ಪರೋಪಕಾರ ಬುದ್ಧಿಯಿಂದಲೆ ಭಗವಂತ ಪ್ರಪಂಚ ಸೃಷ್ಟಿ ಮಾಡುತ್ತಾನೆ. ಈ ಕಾರ್ಯದಲ್ಲಿ ಅವನಿಗೆ ಯಾರ ಸಹಾಯವೂ ಬೇಕಾಗಿಲ್ಲ. ಅವನು ಸ್ವತಂತ್ರ. ಆದರೂ ಲೀಲೆಯಿಂದ ಜಡತತ್ವಗಳನ್ನೂ ಅವುಗಳ ಅಭಿಮಾನಿಗಳನ್ನೂ ತನ್ನ ಕಾರ್ಯಗಳಲ್ಲಿ ಬಳಸಿಕೊಳ್ಳುತ್ತಾನೆ. ಸೃಷ್ಟಿಕರ್ತನಾದ ಈ ಭಗವಂತನೆ ಸೂರ್ಯ ಮಂಡಲದಲ್ಲಿ ನೆಲೆಸಿ ಗಾಯತ್ರೀಮಂತ್ರದಿಂದ ಉಪಾಸನೆ ಮಾಡುವವರಿಗೆ

ತತ್ವಜ್ಞಾನದ ಬೆಳಕನ್ನು ನೀಡುತ್ತಾನೆ. ಈ ಗಾಯತ್ರೀ ಮಂತ್ರದ ಅರ್ಥವೇ ಶ್ರೀಮದ್ಭಾಗವತ. ಆದರಿಂದ ಮೋಕ್ಷಫಲದ ಉದ್ದೇಶದಿಂದ ಭಗವದಾರಾಧನ ರೂಪವಾಗಿ ನಿಷ್ಕಾಮಕರ್ಮವನ್ನು ಮಾಡಲು ಭಾಗವತ ಆದೇಶ ನೀಡುತ್ತದೆ. ಭಾಗವತ ಕೇಳುತ್ತಿದ್ದರೆ ನಿರ್ಮಲ ಭಕ್ತಿ ಮೂಡುತ್ತದೆ ಭಗವಂತ ಎದೆಯಲ್ಲಿ ಸ್ಥಿರವಾಗಿ ನಿಲ್ಲುತ್ತಾನೆ. ವೇದವೆಂಬ ಕಲ್ಪವೃಕ್ಷದ ಒಂದು ಅಮೃತಫಲ ಈ ಶ್ರೀಮದ್ಭಾಗವತ. ನಿರಂತರ ಭಕ್ತಿರಸವನ್ನೇ ಸುರಿಸುವ ಈ ಮಧುರವಾದ ಫಲವನ್ನು ಸಜ್ಜನರೆ, ನಿಮಗಾಗಿ ನಾನು ಬೀಳಿಸಿದ್ದೇನೆ. ಶುಕಮುನಿ ಮುಂತಾದವರ ಪ್ರವಚನಗಳ ಮೂಲಕ ಅದರ ಮಾಧುರ್ಯಾನುಭವವನ್ನು ಹೆಚ್ಚಿಸಿದ್ದೇನೆ, ಯಥೇಚ್ಛ ಪಾನಮಾಡಿರಿ ಎಂದು ವೇದವ್ಯಾಸರು ಪ್ರೀತಿಯಿಂದ ಕರೆ ನೀಡಿದ್ದಾರೆ.

ನೈಮಿಷಾರಣ್ಯದಲ್ಲಿ ಶೌನಕಾದಿ ಮಹರ್ಷಿಗಳು ಮೋಕ್ಷಕಾಮನೆಯಿಂದ ಸಾವಿರ ವರ್ಷಗಳ ದೀರ್ಘಸತ್ರವನ್ನು ಕೈಗೊಂಡರು. ಯಾಗದಿಂದಲೆ ಮೋಕ್ಷ ಸಿಗುವುದೆಂದಲ್ಲ, ಯಾಗ ಕಾಲದಲ್ಲಿ ನಿರಂತರ ಹರಿಕಥಾಶ್ರವಣದಿಂದ ಜ್ಞಾನಸಾಧನೆ ಮಾಡಿದರೆ ಮೋಕ್ಷ ಲಭ್ಯವಾಗುವುದು ಎಂದು. ಒಂದು ದಿನ ಅವರು ಬಯಸಿ ದಂತೆಯೆ ಆಯಿತು. ರೋಮಹರ್ಷಣಪುತ್ರರಾದ ಸೂತರು, ಭಗವಾನ್ ವೇದ ವ್ಯಾಸರಿಂದಲೂ ಶುಕಮುನಿಯಿಂದಲೂ ಎಲ್ಲ ಪುರಾಣಗಳನ್ನು ಕೇಳಿ ಬಲ್ಲವರು ಅಲ್ಲಿಗೆ ದಯಮಾಡಿಸಿದರು. ಅವರನ್ನು ಸತ್ಕರಿಸಿ ಕುಳ್ಳಿರಿಸಿ ಮುನಿಗಳು ಕೇಳಿದರು. ಕಲಿಕಾಲದಲ್ಲಿ ಸಜ್ಜನರು ಅಲ್ಪಾಯುಗಳು, ಅಲ್ಪಶಕ್ತಿ, ಅಲ್ಪಜ್ಞಾನ ಉಳ್ಳವರು. ಅವರಿಗೆ ಮೋಕ್ಷಸಾಧನೆ ಹೇಗೆ? ಹರಿಯ ಮೂಲರೂಪ ಅವತಾರಗಳ ಬಗ್ಗೆ ವಿಶೇಷವಾಗಿ ಕೃಷ್ಣಾವತಾರದ ಬಗ್ಗೆ ನಿಮ್ಮ ಮುಖದಿಂದ ಕೇಳುವ ಆಸೆ ನಮಗೆ. ಕೃಷ್ಣಾವತಾರ ಸಮಾಪ್ತಿಯಾದ ಬಳಿಕ ಯಾರು ಧರ್ಮರಕ್ಷಣೆ ಮಾಡಿದರು?

★★★

ಶ್ರೀಮದ್ ಭಾಗವತ ಮಹಾಪುರಾಣದ ಮಂಗಲಪದ್ಯ—

ಓಂ । ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯಂತಿ ಯಂ ಸೂರಯಃ ।
ತೇಜೋ ವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋ ಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥ ೧ ॥

ಸ್ವತಂತ್ರನಾದ ಭಗವಾನ್ ವಾಸುದೇವನೆ ಜಗಜ್ಜನ್ಮಾದಿಕರ್ತ ಎಂಬುದು ಸದಾಗಮಗಳಿಂದ ಸಿದ್ಧವಾದ ಪ್ರಮೇಯ. ಅದು ಯುಕ್ತಿಯುಕ್ತವೂ ಆಗಿದೆ. ಏಕೆಂದರೆ ತಂದೆ ಇಲ್ಲದೆ ಮಗು ಹುಟ್ಟಲಾರದು ತಾನೆ? ಅವನು ಸರ್ವಜ್ಞನಾದ್ದರಿಂದ ಎಲ್ಲಕ್ಕೂ

ಸಮರ್ಥ. ಚತುರ್ಮುಖನಿಗೆ ಜನ್ಮವಿತ್ತು ಅವನಿಗೆ ವೇದೋಪದೇಶ ನೀಡಿದವನೂ ಅವನೆ. ಅವನ ಅನುಗ್ರಹವಾಗದೆ ಜ್ಞಾನಿಗಳೂ ಕೂಡ ಯಾರೂ ಅವನನ್ನು ತಿಳಿಯಲಾರರು. ಅವನು ತನಗೆ ಯಾವ ಪ್ರಯೋಜನದ ಉದ್ದೇಶವಿಲ್ಲದೆ ಕೇವಲ ಭಕ್ತರಿಗಾಗಿಯೆ ಪ್ರಪಂಚ ಸೃಷ್ಟಿ ಮಾಡುತ್ತಾನೆ. ಮೊದಲಿಗೆ ತನ್ನನ್ನೇ ಸೃಷ್ಟಿಮಾಡಿಕೊಳ್ಳುತ್ತಾನೆ. ಒಂದು ದೀಪದಿಂದ ನೂರಾರು ಸಾವಿರಾರು ದೀಪಗಳಂತೆ ತನ್ನ ಮೂಲರೂಪದಿಂದ ಅಸಂಖ್ಯ ಅವತಾರ ರೂಪಗಳನ್ನು ಹೊರತರುತ್ತಾನೆ. ನೀರಿನಲ್ಲಿ ಸೂರ್ಯನಿಂದ ಅವನ ಪ್ರತಿಬಿಂಬ ಮೂಡುವಂತೆ ಭಗವಂತನಿಂದ ಅವನ ಪ್ರತಿಬಿಂಬನಾದ ಜೀವನು ಜಡಶರೀರದಲ್ಲಿ ಹುಟ್ಟುತ್ತಾನೆ. ಕುಂಬಾರ ಮಣ್ಣಿಂದ ಗಡಿಗೆಯನ್ನು ನಿರ್ಮಿಸುವಂತೆ ಭಗವಂತನೂ ಭಕ್ತನ ಹಿತಕ್ಕಾಗಿ ಪ್ರಕೃತಿಯಿಂದ ಜಡಪದಾರ್ಥಗಳನ್ನೂ ಸೃಷ್ಟಿಮಾಡುತ್ತಾನೆ. ಈ ಸೃಷ್ಟಿ ಯಾವುದೂ ಅಪಾರಮಾರ್ಥಿಕ ವಲ್ಲ. ಯಾವ ಇಂದ್ರಜಾಲಾದಿ ಮಾಯೆಯ ಪರಿಣಾಮವೂ ಅಲ್ಲ. ಸ್ವಸಾಮರ್ಥ್ಯ ದಿಂದಲೆ ಅವನು ಸತ್ಯಜಗತ್ತನ್ನು ನಿರ್ಮಿಸುತ್ತಾನೆ. ಆದರಿಂದ ಅವನು ನಿರ್ದೋಷ, ಗುಣಪೂರ್ಣ. ಅಂಥ ಶ್ರೀವಾಸುದೇವನನ್ನೇ ನಾವು ಉಪಾಸನೆ ಮಾಡಬೇಕು. ಇದು ಶ್ರೀಮದ್ಭಾಗವತದ ಮಂಗಳಪದ್ಯ.

ಶ್ರೀಮದ್‌ಭಾಗವತ ತಾತ್ಪರ್ಯನಿರ್ಣಯದ ಮಂಗಲಪದ್ಯ—

ಓಂ ಸೃಷ್ಟಿಸ್ಥಿತ್ಯಪ್ಯಯೇಹಾ ನಿಯತಿ ದೃಶಿ ತಮೋ ಬಂಧ ಮೋಕ್ಷಾಶ್ಚ ಯಸ್ಮಾದ್
ಅಸ್ಯ ಶ್ರೀ ಬ್ರಹ್ಮ ರುದ್ರ ಪ್ರಭೃತಿ ಸುರ ನರದ್ವೀಶಶತ್ರಾ ತ್ಮಕಸ್ಯ ।
ವಿಷ್ಣೋರ್ವ್ಯಸ್ತಾಃ ಸಮಸ್ತಾಃ ಸಕಲಗುಣನಿಧಿಃ ಸರ್ವದೋಷ ವ್ಯಪೇತಃ
ಪೂರ್ಣಾನಂದೋಽವ್ಯಯೋ ಯೋ ಗುರುರಪಿ
ಪರಮಶ್ಚಿಂತಯೇ ತಂ ಮಹಾಂತಂ ॥

ಲಕ್ಷ್ಮೀಬ್ರಹ್ಮರುದ್ರಾದಿ ದೇವ ಮಾನವ ದಾನವ ಜಡರೂಪವಾದ ಈ ಎಲ್ಲ ಪ್ರಪಂಚಕ್ಕೆ ಸೃಷ್ಟಿ ಸ್ಥಿತಿ ಸಂಹಾರ ಪ್ರವೃತ್ತಿ ಜ್ಞಾನ ಅಜ್ಞಾನ ಬಂದ ಮೋಕ್ಷಗಳೆಲ್ಲವೂ ಯಥಾಯೋಗ್ಯವಾಗಿ ಕೆಲವೆಡೆ ಪೂರ್ತಿ ಕೆಲವೆಡೆ ಸ್ವಲ್ಪ ಹೀಗೆ ವಿಷ್ಣುವಿನಿಂದಲೆ ಆಗುತ್ತವೆ. ಅವನೆ ಸಮಸ್ತಗುಣನಿಧಿ, ಸಮಸ್ತದೋಷದೂರ, ಪೂರ್ಣಾನಂದ, ನಾಶರಹಿತ, ಲೋಕಗುರುಗಳಿಗೂ ಪರಮ ಗುರು, ಅಂಥ ಮಹಾತ್ಮನಾದ ಭಗವಂತನನ್ನು ಧ್ಯಾನಿಸುವೆನು.

ಭಾಗವತದ ಮಂಗಳಪದ್ಯಕ್ಕೆ ಭಾಗವತ ತಾತ್ಪರ್ಯನಿರ್ಣಯದ ಮಂಗಳ ಪದ್ಯ ವ್ಯಾಖ್ಯಾನರೂಪವಾಗಿದೆ. ಮೊದಲಿಗೆ 'ಜನ್ಮಾದಿ' ಎಂಬಲ್ಲಿ ಆದಿಪದದಿಂದ ಸ್ಥಿತಿ

ಸಂಹಾರಾದಿಗಳನ್ನು ಗ್ರಹಿಸಬೇಕೆಂದಿದ್ದಾರೆ. 'ಅಸ್ಯ' ಈ ಪ್ರಪಂಚಕ್ಕೆ ಎಂದರೆ ಲಕ್ಷ್ಮೀಬ್ರಹ್ಮಾದಿ ಪ್ರಪಂಚಕ್ಕೆ ಎಂದರ್ಥ ಉಕ್ತವಾಗಿದೆ. 'ಪರ' ಎಂದರೆ ಸಕಲಗುಣನಿಧಿ ಎಂದೂ, 'ನಿರಸ್ತಕುಹಕ' ಎಂದರೆ ಸರ್ವದೋಷದೂರ ಎಂದೂ 'ಸತ್ಯ' ಎಂದರೆ ಪೂರ್ಣಾನಂದ ಎಂದೂ ಹೇಳಿದಂತಾಯಿತು. ಬ್ರಹ್ಮನಿಗೆ ವೇದೋಪದೇಶ ಮಾಡಿದನೆಂಬ ಅಂಶ 'ಗುರು' ಎಂದು ಉಕ್ತವಾಗಿದೆ. ಅಭಿಜ್ಞ, ಸರ್ವಜ್ಞಎಂಬುದನ್ನೂ ಪರಮಶಬ್ದದಿಂದಲೂ, ಸ್ವರಾಟ್, ಸ್ವತಂತ್ರ ಎಂಬುದನ್ನು 'ಮಹಾಂತಂ' ಎಂಬ ಶಬ್ದದಿಂದಲೂ ಹೇಳಿದ್ದಾರೆ. ಪೂರ್ಣಾನಂದ ಎಂಬುದರಿಂದಲೆ 'ತ್ರಿಸರ್ಗೋ ಮೃಷಾ' ಸೃಷ್ಟಿಕಾರ್ಯದಿಂದ ಅವನಿಗೇನೂ ಪ್ರಯೋಜನವಾಗಬೇಕಿಲ್ಲ ಎಂದೂ ಹೇಳಿದಂತಾಗಿದೆ.

ಸತ್ಯಂ ಪರಂ ಧೀಮಹಿ ಎಂಬಲ್ಲಿ ಪರಶಬ್ದದಿಂದ ಗುಣಪೂರ್ಣನಾದ ವಾಸುದೇವ ಅಪೂರ್ಣನಾದ ತನಗಿಂತ ವಿಲಕ್ಷಣ ಎಂದು ಉಪಾಸಕ ಭಾವಿಸ ಬೇಕೆಂದು ಉಕ್ತವಾಗಿದೆ. ಅವನು ಹೇಗೆ ಗುಣಪೂರ್ಣ ಎಂಬುದನ್ನು 'ಜನ್ಮಾದ್ಯಸ್ಯ ಯತಃ' ಜಗಜ್ಜನ್ಮಾದಿಕರ್ತ ಎಂಬ ವಿಶೇಷಣದಿಂದ ಉಪಪಾದಿಸಿ ಕರ್ತನೆನ್ನುವಲ್ಲಿ ಏನು ಪ್ರಮಾಣ ಎಂಬುದನ್ನು ತೋರಿಸಲು ಅನ್ವಯಾದ್, ಇತರತಃ ಎನ್ನಲಾಗಿದೆ.

[೧]ಶ್ರೀಧರೀ ವ್ಯಾಖ್ಯಾನದಲ್ಲಿ 'ಪ್ರಪಂಚ ಸತ್ಯವೆಂದು ಭಾಸವಾಗುವುದರಿಂದ ಸತ್ಯರೂಪವಾದ ಬ್ರಹ್ಮ ಪ್ರಪಂಚಕ್ಕೆ ಕಾರಣ. ಗಡಿಗೆ ಮಣ್ಣೆಂದು ಭಾಸವಾಗುವ ಪ್ರಯುಕ್ತ ಗಡಿಗೆಗೆ ಮಣ್ಣು ಕಾರಣ ಎನ್ನುವಂತೆಯೆ ಇದು. ಹಾಗೇ ಪ್ರಪಂಚ ಹಿಂದೆ ಪ್ರಲಯಕಾಲದಲ್ಲಿರಲಿಲ್ಲ, ಸತ್ಯವಾದ ಬ್ರಹ್ಮ ಮಾತ್ರವಿತ್ತು. ಆಗ ಸತ್ಯಬ್ರಹ್ಮವು ಪ್ರಪಂಚವೆಂದು ಕಾಣಲಿಲ್ಲ. ಅದರಿಂದ ಪ್ರಪಂಚ ಸೃಷ್ಟಿಕಾಲದಲ್ಲಿ ಹುಟ್ಟಿದ್ದು ಕಾರ್ಯ ಎನ್ನಬೇಕು. ಮಣ್ಣು ಮುದ್ದೆಯನ್ನು ಗಡಿಗೆ ಎನ್ನುವುದಿಲ್ಲ, ಗಡಿಗೆ ಅನಂತರದಲ್ಲಿ

---

೧. ಕಾರ್ಯೇಷು ಸದ್ರೂಪೇಣಾನ್ವಯಾತ್ ಅನುವೃತ್ತೇಃ ಮೃತ್‌ಸುವರ್ಣಾದಿವತ್ ಬ್ರಹ್ಮ ಕಾರಣಂ। ಇತರತೋ ವ್ಯಾವೃತ್ತತ್ವಾದ್ ವಿಶ್ವಂ ಕಾರ್ಯಂ ಘಟ ಕುಂಡಲಾದಿವದಿತ್ಯರ್ಥಃ।
-ಶ್ರೀಧರಃ

ಅರ್ಥೇಷು ಕಾರ್ಯಭೂತೇಷು ದೇವ ಮನುಷ್ಯಾದಿಷು ಅನ್ವಯಾದ್ ಅನುವೃತ್ತೇರುಪಾದಾನತ್ವಂ, ಇತರತೋ ವ್ಯತಿರೇಕಾತ್ ಅನನ್ವಯಾತ್ ಪ್ರಕೃತಿ ಪುರುಷಾಭ್ಯಾಂ ವಿಲಕ್ಷಣತ್ವೇನ ತನ್ನಿಯಂತೃತಯಾ ಪೃಥಗೇವಾವಸ್ಥಾನಾತ್ ನಿಮಿತ್ತತ್ವಂ ಚೈಕಸ್ಯೈವ ಬ್ರಹ್ಮಣ ಉಪಪನ್ನಂ। -ವೀರರಾಘವಃ।

ಯತ್ತು ಶಾರೀರಕೇ ಭಾಗವತಮತ ನಿರಸನಂ ತದ್ ಹಯಗ್ರೀವ ಪಂಚರಾತ್ರೇ ಗಣಿತ ಭಾಗವತಾಖ್ಯ ತಂತ್ರಸ್ಯೈವೇತಿ ತತ್ರೈವ ಸ್ಪಷ್ಟಂ। -ವಂಶೀಧರಃ

ಹುಟ್ಟುವ ಕಾರ್ಯ ಎನ್ನುವಂತೆಯೆ ಇದು. ಹೀಗೆ ಅನುವೃತ್ತಿ-ವ್ಯಾವೃತ್ತಿಗಳಿರುವುದರಿಂದ ಬ್ರಹ್ಮ ಪ್ರಪಂಚಕ್ಕೆ ಉಪಾದಾನಕಾರಣ' ಎಂದು ವ್ಯಾಖ್ಯಾನ ಮಾಡಲಾಗಿದೆ.

ವೀರರಾಘವ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ— ಉಪನಿಷತ್ತು 'ತತ್ವಮಸಿ ಸರ್ವಂ ಖಲ್ವಿದಂ ಬ್ರಹ್ಮ' ಎಂದು ಮುಂತಾಗಿ ಪ್ರಪಂಚವನ್ನು ಬ್ರಹ್ಮರೂಪವೆಂದೂ ಹೇಳಿದೆ. 'ಯಸ್ಯ ಪೃಥಿವೀ ಶರೀರಂ' ಎಂದು ಮುಂತಾಗಿ ಬ್ರಹ್ಮ ಪ್ರಪಂಚಕ್ಕೆ ನಿಯಾಮಕನೆಂದೂ ಹೇಳಿದೆ. ಆದರಿಂದ ಬ್ರಹ್ಮ ಜಗತ್ತಿಗೆ ಉಪಾದಾನ ಕಾರಣವೂ ಹೌದು, ಕರ್ತನೂ ಹೌದು. ಇದು ಅನುವೃತ್ತಿ-ವ್ಯಾವೃತ್ತಿಗಳಿಂದ ಸಿದ್ಧವಾಗುತ್ತದೆ' ಎಂದು. ವಿಶ್ವನಾಥ ವ್ಯಾಖ್ಯಾನದಲ್ಲಿಯೂ ಬ್ರಹ್ಮ ಜಗತ್ತಿಗೆ ಉಪಾದಾನಕಾರಣನೂ ನಿಮಿತ್ತನೂ ಆಗಿದ್ದಾನೆ ಎಂದಿದೆ. ಅವನು ಪ್ರಕೃತಿಗೆ ಅತೀತನಾಗಿ ನಿರ್ವಿಕಾರನಾದರೂ ಅವನಿಂದ ಅಭಿನ್ನವಾದ ಅವನ ಶಕ್ತಿ ಎನಿಸಿರುವ ಪ್ರಕೃತಿ ಸ್ವತಂತ್ರವಾಗಿ ಜಗತ್ತಾಗಿ ಪರಿಣಾಮ ಹೊಂದುವುದರಿಂದ ಅವನು ಜಗದುಪಾದಾನನೆನಿಸುತ್ತಾನೆ, ಮತ್ತು ಸ್ವರೂಪದಿಂದ ಸರ್ವಜ್ಞನಾಗಿದ್ದು ಕರ್ತನೆನಿಸುತ್ತಾನೆ ಎಂದು.

ಮೇಲಿನ ಮೂರು ವ್ಯಾಖ್ಯಾನಗಳೂ ಭಾಗವತತಂತ್ರವೆಂಬ ಗ್ರಂಥಕ್ಕೆ ವಿರುದ್ಧವಾಗಿವೆ. ಅಲ್ಲಿ ಈ ಭಾಗವತ ಮಂಗಲಪದ್ಯವನ್ನು ಅಕ್ಷರಶಃ ವ್ಯಾಖ್ಯಾನ ಮಾಡಲಾಗಿದೆ- ಭಾಗವತ ತಂತ್ರ ಹಯಗ್ರೀವಪಂಚರಾತ್ರಕ್ಕೆ ಸೇರಿದ್ದು, ಅದನ್ನು ಶಾಂಕರಭಾಷ್ಯದಲ್ಲಿ ಬ್ರಹ್ಮಸೂತ್ರದ ಉತ್ಪತ್ತ್ಯಸಂಭವಾಧಿಕರಣದಲ್ಲಿ ಅಪ್ರಮಾಣವೆಂದು ನಿರ್ಣೈಸಲಾಗಿದೆ ಎನ್ನುತ್ತದೆ ವಂಶೀಧರವ್ಯಾಖ್ಯಾನ. ಆದರೆ ಶಾಂಕರಭಾಷ್ಯೋಕ್ತವಾದ ಆ ಅಧಿಕರಣವೆ ಅಸಮಂಜಸ ಎಂಬುದು ಸುಧಾ ಚಂದ್ರಿಕಾದಿ ಗ್ರಂಥಗಳಲ್ಲಿ ಸ್ಪಷ್ಟವಿದೆ. ಆದರಿಂದ ಭಾಗವತತಂತ್ರಾನುಸಾರವಾಗಿ 'ಅನ್ವಯಾದಿತರತಃ' ಎಂಬ ಭಾಗಕ್ಕೆ ತಾತ್ಪರ್ಯದಲ್ಲಿ ಹೀಗೆ ಶ್ರೀಮದಾಚಾರ್ಯರು ವಿವರಣೆ ನೀಡುತ್ತಾರೆ—

ಜನ್ಮಾದ್ಯಸ್ಯೇತ್ಯಾದಿ । ತಂ ಪರಂ ಧೀಮಹಿ । ಅನ್ವಯಾತ್ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ಶ್ರುತಿಸ್ಮೃತಿಭ್ಯಃ । ಇತರತಃ ತರ್ಕತಃ । ಚೇತನಾದ್ಧಿ ಪಿತ್ರಾದೇಃ ಪುತ್ರಾದಿರುತ್ಪದ್ಯತೇ ।

'ಜನ್ಮಾದ್ಯಸ್ಯ' ಎಂದು ಮುಂತಾಗಿರುವ ಶ್ಲೋಕಕ್ಕೆ ಹೀಗೆ ವಿವರಣೆ— ಯಾರಿಂದ ಜಗಜ್ಜನ್ಮಾದಿಗಳು ನಡೆಯುವುವೋ ಗುಣಪೂರ್ಣನಾದ ಆ ಪರಮಾತ್ಮನನ್ನು ಧ್ಯಾನಿಸುವೆವು ಎಂದು ಅನ್ವಯಿಸಿಕೊಳ್ಳಬೇಕು. 'ಅನ್ವಯಾತ್' ಎಂದರೆ 'ಯಾರಿಂದ ಈ ಜೀವಿಗಳು ಹುಟ್ಟುವುವೋ' ಎಂದು ಮುಂತಾಗಿ ಶ್ರುತಿ ಸ್ಮೃತಿಗಳಲ್ಲಿ ಪ್ರತಿಪಾದನೆ ಇರುವುದರಿಂದ, 'ಇತರತಃ' ಎಂದರೆ, ಚೇತನರಾದ ತಂದೆತಾಯಿಗಳಿಂದಲೇ ಮಕ್ಕಳು ಹುಟ್ಟುವುದರಿಂದ ಚೇತನಾಚೇತನಾತ್ಮಕ ಪ್ರಪಂಚ ಹುಟ್ಟಲು ಒಬ್ಬ ತಂದೆ ಬೇಕು,

ಅವನೆ ವಾಸುದೇವ ಎಂಬ ಅನುಮಾನವೂ ಇದನ್ನು ಸಮರ್ಥಿಸುವುದರಿಂದ ವಾಸುದೇವನೆ ಜಗಜ್ಜನ್ಮಾದಿಕರ್ತ.

ಅಭಿಜ್ಞಃ ಸರ್ವಜ್ಞಃ । ಅತೋ ಯುಜ್ಯತೇ । ಯಂ ಕಾಮಯೇ ತಂ ತಮುಗ್ರಂ ಕೃಣೋಮಿ । ಮಮ ಯೋನಿರಿತ್ಯನ್ಯೇಷಾಂ ತದಪೇಕ್ಷತ್ವಾತ್ । ನ ಚಾನ್ಯಾಪೇಕ್ಷೋಽಸೌ । ಸ್ವರಾಟ್ । ಕುತಃ? ತೇನೇ ಬ್ರಹ್ಮ ಹೃದಾ ಯ ಆದಿಕವಯೇ । ಸ ಹಿ 'ವಿಶ್ವಾ ಜಾತಾನಿ ಪರಿ ತಾ ಬಭೂವ' ನಾನ್ಯಃ । ಹೃದಾ ಸ್ನೇಹೇನ । ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮಿತಿ ಚ । ಸ್ವಾತ್ಮತ ಏವ ಹಿ ತಸ್ಯ ಬುದ್ಧಿ ಪ್ರಕಾಶಃ ।

ಎಲ್ಲ ವಿಷಯದಲ್ಲಿ ವಿಶೇಷಜ್ಞಾನಿ, ಸರ್ವಜ್ಞ ಎನ್ನುತ್ತಿದೆ ಅಭಿಜ್ಞ ಎಂಬ ಶಬ್ದ. ಸರ್ವಜ್ಞನಾದ್ದರಿಂದ ಅವನು ಸರ್ವಕರ್ತ ಎನ್ನುವುದು ಯುಕ್ತವಾಗುತ್ತದೆ. 'ನಾನು ಬಯಸಿದಂತೆ ಯಾರನ್ನಾಗಲಿ ರುದ್ರಪದವಿಗೆ ಏರಿಸುತ್ತೇನೆ' ಎಂದು ಮುಂತಾಗಿ ಹೇಳಿ 'ನನಗೂ ಕಾರಣನಾದವನು ಸಮುದ್ರಶಾಯಿ ನಾರಾಯಣ' ಎಂದು ಅಂಭೃಣೀದೇವಿ ಹೇಳುವುದರಿಂದ ಲಕ್ಷ್ಮೀ ಮುಂತಾದವರೆಲ್ಲರೂ ಹರಿಗೆ ಅಧೀನರಾದ್ದರಿಂದ 'ಸ್ವರಾಟ್' ಹರಿ ಇನ್ನೊಬ್ಬರಿಗೆ ಅಧೀನನಲ್ಲ ಎನ್ನಲಾಗಿದೆ. ಶ್ರೀಹರಿ ಸ್ವತಂತ್ರ ಸರ್ವಜ್ಞ ಏಕೆ ಎಂದರೆ ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಎಂದು ಉತ್ತರ. ಆದಿಸರ್ವಜ್ಞನಾದ ಬ್ರಹ್ಮನಿಗೂ ಪ್ರೀತಿಯಿಂದ ವೇದವನ್ನು ಪೂರ್ತಿಯಾಗಿ ಉಪದೇಶಿಸಿದವನು ನಾರಾಯಣ. ಆ ಬ್ರಹ್ಮನೇ ಸಮಸ್ತ ಪ್ರಪಂಚವನ್ನು ವಶದಲ್ಲಿಟ್ಟು ಕೊಂಡವನು. ಬೇರೆ ಯಾರೂ ಅಲ್ಲ. ಅವನಿಗೆ 'ಹೃದಾ' ಪ್ರೀತಿಯಿಂದ ಪರಪ್ರೇರಣೆ ಯಿಲ್ಲದೆಯೆ ವೇದವನ್ನು ಉಪದೇಶಿಸಿದ್ದಾನೆ ಶ್ರೀಹರಿ. ಇದನ್ನು ಶ್ರುತಿಯು 'ಶ್ರೀಹರಿ ಮೊದಲಿಗೆ ಬ್ರಹ್ಮನನ್ನು ಹುಟ್ಟಿಸಿ ಅವನಿಗೆ ವೇದಗಳನ್ನು ಉಪದೇಶಿಸಿದನು. ಸ್ವತಃ ಸರ್ವಜ್ಞನಾದ ಆ ಹರಿಯನ್ನು ಮುಮುಕ್ಷುವಾದ ನಾನು ಶರಣುಹೊಂದುತ್ತೇನೆ' ಎಂದು ವರ್ಣಿಸಿದೆ. ಈ ಶ್ರುತಿಯಲ್ಲಿ 'ಸ್ವಾತ್ಮಬುದ್ಧಿಪ್ರಕಾಶಂ' ಎಂಬ ಶಬ್ದದಿಂದ ಶ್ರೀಹರಿಗೆ ಸರ್ವಜ್ಞತ್ವ ಸ್ವತಃ ಸಿದ್ಧ ಹೊರತು ಪರರ ಉಪದೇಶದಿಂದಲ್ಲ ಎಂದು ಉಕ್ತವಾಗಿದೆ. ಹೀಗೆ ಸಮಸ್ತ ಪ್ರಪಂಚವನ್ನಾಳುವ ಬ್ರಹ್ಮನಿಗೂ ಸ್ವತಃ ಗುರುವಾಗಿರುವು ದರಿಂದ ಶ್ರೀಹರಿ ಸ್ವತಂತ್ರ, ಸರ್ವಜ್ಞನಾಗಿದ್ದು ಸರ್ವಕರ್ತನೆನ್ನುವುದು ಯುಕ್ತವೆ.

ಶ್ರೀಧರಾದಿ ವ್ಯಾಖ್ಯಾನಗಳಲ್ಲಿ ನಾರಾಯಣ ಬ್ರಹ್ಮನಿಗೆ ವೇದೋಪದೇಶ ಮಾಡಿದ್ದು ಪ್ರಸಿದ್ಧಿಯಲ್ಲಿಲ್ಲದುದರಿಂದ 'ಹೃದಾ' ಎಂದರೆ ಬ್ರಹ್ಮನ ಹೃದಯದಲ್ಲಿ, ಮನಸ್ಸಿನಲ್ಲಿ, ವೇದವು ಸ್ವತಃ ಪ್ರಕಾಶಿಸುವಂತೆ ನಾರಾಯಣ ಪ್ರೇರಿಸಿದನೆಂದು ಅರ್ಥೈಸಿದ್ದಾರೆ. ವಸ್ತುತಃ ವಿಷ್ಣುರಹಸ್ಯಾದಿಗಳಲ್ಲಿ ಹಯಗ್ರೀವ ರೂಪದಿಂದ ವೇದೋಪದೇಶ ಮಾಡಿದ್ದು ಪ್ರಸಿದ್ಧವೆ ಇದೆ. 'ಹೃದಾ' ಎಂಬುದನ್ನು ಹೃದಿ ಎಂದು

ವ್ಯತ್ಯಾಸ ಮಾಡಬೇಕಾಗಿಲ್ಲ. 'ಯೋ ವೈ ವೇದಾಂಶ್ಚ ಪ್ರಹಿಣೋತಿ' ಎಂಬ ಶ್ರುತಿಗೆ ಅನ್ಯಾರ್ಥವನ್ನು ಮಾಡಬೇಕಾಗಿಲ್ಲ. ಶ್ರುತಿವಾಕ್ಯದ ಪೂರ್ತಿಪಾಠ—

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ
ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।
ತಂ ಹ ದೇವಮಾತ್ಮಬುದ್ಧಿಪ್ರಕಾಶಂ
ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥

ನ ಚ ಪ್ರಸಾದಂ ವಿನಾ ಜ್ಞಾತುಂ ಶಕ್ಯಃ । 'ಮುಹ್ಯಂತಿ ಯಂ ಸೂರಯಃ' । ನಚಾತೃಪ್ತಃ ಪ್ರವರ್ತತೇ ಕಿಂತು 'ಮೃಷಾ' ವೃಥೈವ । 'ಭಿತ್ವಾ ಮೃಷಾಶ್ರುಃ' ಇತಿವತ್ । 'ದೇವಸ್ಯೈಷಃ ಸ್ವಭಾವೋಽಯಂ' ಇತಿ ಚ । ಯತ್ರೇತಿ ವಿಶೇಷಣಾನ್ನಾನ್ಯತ್ರ। ಸ್ವವಿಷಯ ಏವ ವೃಥಾ ।

ಹರಿಯನ್ನು ಅವನ ಅನುಗ್ರಹವಿಲ್ಲದೆ ತಿಳಿಯುವುದು ಅಶಕ್ಯವೆಂದು 'ಮುಹ್ಯಂತಿ ಯಂ ಸೂರಯಃ' ಎಂಬಲ್ಲಿ ಹೇಳಿದೆ. ಅದರಿಂದಲೆ ಹರಿ ಬ್ರಹ್ಮನಿಗೆ ಅನುಗ್ರಹ ಮಾಡಿ ವೇದವನ್ನೂ ವೇದಪ್ರತಿಪಾದ್ಯವಾದ ತನ್ನ ಸ್ವರೂಪವನ್ನೂ ಉಪದೇಶಿಸಿದ. ಆನಂದದಿಂದ ತೃಪ್ತನಾಗದೆ ಅಪೂರ್ಣನಾಗಿದ್ದು ತನ್ನ ಪ್ರಯೋಜನದ ಉದ್ದೇಶದಿಂದ ಭಗವಂತ ಸೃಷ್ಟ್ಯಾದಿಗಳಲ್ಲಿ ಪ್ರವೃತ್ತಿ ಮಾಡುವುದಿಲ್ಲ. 'ಮೃಷಾ' ಪ್ರಯೋಜನದ ಉದ್ದೇಶವಿಲ್ಲದೆಯೆ ಪ್ರವೃತ್ತಿ ಮಾಡುತ್ತಾನೆ ಎನ್ನುವ ಅಭಿಪ್ರಾಯದಿಂದ 'ಯತ್ರ ತ್ರಿಸರ್ಗೋ ಮೃಷಾ' ಎಂದಿದೆ. ಪ್ರಯೋಜನೋದ್ದೇಶ ವಿಲ್ಲದೆ ಎಂಬ ಅರ್ಥದಲ್ಲಿ ಮೃಷಾ ಶಬ್ದ ಪ್ರಯೋಗ ಭಾಗವತದಲ್ಲಿಯೆ ಮುಂದೆ,

ಭಿತ್ವಾ ಮೃಷಾಶ್ರುರ್ದೃಷದಶ್ಮನಾ ರಹೋ
ಜಘಾಸ ಹೈಯಂಗವಮಂತರಂ ಗತಃ ।

ಎಂಬಲ್ಲಿ ಕಂಡಿದೆ. ಪ್ರಯೋಜನವಿಲ್ಲದೆ ಸ್ವಭಾವದಿಂದಲೆ ಭಗವಂತ ಪ್ರವೃತ್ತಿ ಮಾಡುತ್ತಾನೆ ಎಂದು,

ದೇವಸ್ಯೈಷಃ ಸ್ವಭಾವೋಽಯಂ
ಆಪ್ತಕಾಮಸ್ಯ ಕಾ ಸ್ಪೃಹಾ ।

ಎಂದು ಶ್ರುತಿಯಲ್ಲಿ ಉಕ್ತವಾಗಿದೆ. ತನಗೆ ಪ್ರಯೋಜನವಿಲ್ಲದಿದ್ದ ಮಾತ್ರಕ್ಕೆ ಪ್ರವೃತ್ತಿ ನಿಷ್ಫಲವಲ್ಲ. 'ಯತ್ರ' ಯಾರ ವಿಷಯದಲ್ಲಿ ಅವನ ಪ್ರವೃತ್ತಿ ನಿಷ್ಪ್ರಯೋಜನವೋ ಅವನು ಎಂದು ವಿಶೇಷಣ ಕೊಟ್ಟಿದ್ದರಿಂದ ಭಗವಂತನಿಗೆ ಮಾತ್ರ ನಿಷ್ಪ್ರಯೋಜನ. ಉಳಿದವರಿಗಲ್ಲ. ತನ್ನ ವಿಷಯದಲ್ಲಿ ಮಾತ್ರ ತನ್ನ ಈ ಪ್ರವೃತ್ತಿ ಮೃಷಾ ನಿಷ್ಫಲ.

ಪರಮಾತ್ಮನ ಈ ಪ್ರಪಂಚ ಸೃಷ್ಟಿ ಕೇವಲ ಭ್ರಮೆ. 'ಮೃಷಾ' ಸುಳ್ಳು, ಚಿಪ್ಪಿನಲ್ಲಿ

ಕಾಣುವ ಬೆಳ್ಳಿಯಂತೆ, ಹಗ್ಗದಲ್ಲಿ ಕಾಣುವ ಹಾವಿನಂತೆ ಎಂದು ಅದ್ವೈತಿಗಳು ವ್ಯಾಖ್ಯಾನ ಮಾಡುತ್ತಾರೆ. ಆದರೆ 'ಮೃಷಾ' ಎಂದರೆ ಸುಳ್ಳೆಂದೇ ಅರ್ಥವಾಗಬೇಕಾಗಿಲ್ಲ. ದಶಮಸ್ಕಂಧದಲ್ಲಿ ಯಶೋದೆ ಬಾಲಕೃಷ್ಣನಿಗೆ ಸ್ತನಪಾನ ಮಾಡಿಸುತ್ತಿದ್ದಾಗ ಒಲೆಯ ಮೇಲಿಟ್ಟ ಹಾಲು ಉಕ್ಕಿತ್ತೆಂದು ಮಗುವನ್ನು ಕೆಳಗಿಟ್ಟು ಹಾಲಿನ ಬಳಿಗೆ ಓಡಿದಳು. ಕೃಷ್ಣನಿಗೆ ಕೋಪ. ಕಣ್ಣಲ್ಲಿ ನೀರು. ಮೊಸರಿನ ಪಾತ್ರ ಒಡೆದು ಬೆಣ್ಣೆತಿಂದು ಬಾಲಲೀಲೆ ತೋರಿದ. ಆಗ ತೋರಿದ ಕಣ್ಣೀರು ಸುಳ್ಳಲ್ಲ, ಕೇವಲ ಭ್ರಮೆಯಲ್ಲ. ಆದರೂ 'ಮೃಷಾಶ್ರುಃ' ಎಂದು ಪ್ರಯೋಗವಿದೆ. ದುಃಖದ ಕಣ್ಣೀರಲ್ಲ, ಸುಮ್ಮನೆ ಕಣ್ಣೀರು ತೋರಿದನಷ್ಟೆ ಎಂದು ಅಭಿಪ್ರಾಯ. ಹಾಗೇ ಪ್ರಪಂಚಸೃಷ್ಟಿ ಹರಿಗೆ ತನ್ನ ಸುಖಕ್ಕಾಗಿ ಅಲ್ಲ, ಸುಮ್ಮನೆ ಮಾಡುತ್ತಾನಷ್ಟೆ. ಹೀಗೆಂದ ಮಾತ್ರಕ್ಕೆ ಸೃಷ್ಟಿ ವ್ಯರ್ಥವಲ್ಲ. ಅವನಿಗೆ ಪ್ರಯೋಜನವಿಲ್ಲದಿದ್ದರೂ ಜೀವರಿಗೆ ಮೋಕ್ಷಸಾಧನೆ ಎಂಬ ಪ್ರಯೋಜನವಿದ್ದೇ ಇದೆ. ಅದರಿಂದ 'ಯತ್ರ ಮೃಷಾ' ಅವನಿಗೆ ಮಾತ್ರ ನಿಷ್ಪ್ರಯೋಜನವೆಂದು ಭಾಗವತ ಹೇಳಿದೆ. ಅದರಿಂದ ಈ ಸೃಷ್ಟಿ ವಾಸ್ತವದಲ್ಲಿ 'ಅಮೃಷಾ' ಸತ್ಯ ಎಂದೂ ಪದಚ್ಛೇದ ಮಾಡಬೇಕು. ಸತ್ಯವಾದ ಪ್ರಪಂಚವನ್ನು ತನಗೆ ಅದರಿಂದ ಪ್ರಯೋಜನವಿಲ್ಲದಿದ್ದರೂ ಜೀವರ ಪ್ರಯೋಜನಕ್ಕಾಗಿ ಸೃಷ್ಟಿಮಾಡುವುದು ಪರಮಾತ್ಮನ ಸ್ವಭಾವ ಎಂದು 'ದೇವಸ್ಯೈಷಃ ಸ್ವಭಾವೋಽಯಂ' ಎಂಬ ಶ್ರುತಿ ಹೇಳಿದೆ.

ಜೀವೇಶ್ವರ ಜಡಾನಾಂ ಸರ್ಗಸ್ತ್ರಿಸ್ಸರ್ಗಃ । ಏಕಸ್ಯ ತೇಜಸೋ ಬಹುತ್ವವದೀಶ್ವರಸರ್ಗಃ । ವಾರಿನಿಮಿತ್ತ ಪ್ರತಿಬಿಂಬವಜ್ಜೀವಸರ್ಗಃ । ಮೃದೋ ಘಟಾದಿವದವ್ಯಕ್ತಾಜ್ಜಡಸರ್ಗಃ ।

ಜೀವಸೃಷ್ಟಿ ಈಶ್ವರಸೃಷ್ಟಿ ಜಡಸೃಷ್ಟಿ ಎಂದು ಮೂರು ಬಗೆಯ ಸೃಷ್ಟಿಯನ್ನು ಪರಮಾತ್ಮ ಮಾಡುತ್ತಾನೆ. 'ತೇಜೋವಾರಿ ಮೃದಾಂ ಯಥಾ ವಿನಿಮಯಃ' ಎನ್ನುವುದು ಉದಾಹರಣೆ. ಒಂದು ದೀಪದಿಂದ ಬಹು ದೀಪಗಳುಂಟಾಗುವಾಗ ಒಬ್ಬನೆ ಅಭಿಮಾನಿದೇವತೆ ತನ್ನ ಸ್ವರೂಪವನ್ನು ಬಹುವಾಗಿ ಮಾಡುವಂತೆ ಪರಮಾತ್ಮನೂ ತನ್ನ ಸ್ವರೂಪವನ್ನು ಬಹುವಾಗಿ ಮಾಡುವುದು ಈಶ್ವರಸೃಷ್ಟಿ. ನೀರಿನಿಂದ ಸೂರ್ಯನ ಪ್ರತಿಬಿಂಬ ಹುಟ್ಟುವಂತೆ ಪರಮಾತ್ಮನ ಪ್ರತಿಬಿಂಬರಾದ ಜೀವರೂ ಸ್ಥೂಲಶರೀರದಿಂದ ಹುಟ್ಟುತ್ತಾರೆ ಇದು ಜೀವಸೃಷ್ಟಿ. ಮಣ್ಣಿನಿಂದ ಗಡಿಗೆಯನ್ನು ಮಾಡುವಂತೆ ಪ್ರಕೃತಿಯಿಂದ ಜಗತ್ತನ್ನು ನಿರ್ಮಿಸುತ್ತಾನೆ. ಇದು ಜಡಸೃಷ್ಟಿ.

ಶ್ರೀಧರವ್ಯಾಖ್ಯಾನದಲ್ಲಿ ಈಶ್ವರನ ಮಾಯೆಯ ತಮಸ್ಸು ರಜಸ್ಸು ಸತ್ವ ಎಂಬ ಮೂರು ಗುಣಗಳಿಂದ ಪಂಚಭೂತಗಳು ಇಂದ್ರಿಯಗಳು ದೇವತೆಗಳೆಂದು ಮೂರು

ಬಗೆಯ ಸೃಷ್ಟಿಯಾಗುತ್ತದೆ. ಅದು ಮಿಥ್ಯೆ. ಹೇಗೆಂದರೆ ಬೆಳಕು ನೀರು ಮಣ್ಣುಗಳು ಒಂದು ಮತ್ತೊಂದಾಗಿ ಕಾಣುವುದು, ವಿನಿಮಯ. ಮರುಭೂಮಿಯಲ್ಲಿ ಬಿಸಿಲು ನೀರಿನಂತೆ ಕಾಣುತ್ತದೆ. ಗಾಜು ನೀರಿನಂತೆ ಕಾಣುತ್ತದೆ. ನೀರು ಗಾಜಿನಂತೆ ಕಾಣುತ್ತದೆ ಇತ್ಯಾದಿ ಎಂದು ಹೇಳಿದೆ. ಆದರೆ ಮೂರು ಬಗೆಯ ಸೃಷ್ಟಿ ಸುಳ್ಳೆನ್ನಲು ಮೂರು ಉದಾಹರಣೆ ಬೇಕಾಗಿಲ್ಲ. ಏಕೆಂದರೆ ಮೂರು ಉದಾಹರಣೆಗಳಲ್ಲಿ ಭೇದ ಇಲ್ಲ. ಅದರಿಂದ ಮೂರು ಬಗೆಯ ಸೃಷ್ಟಿಗಳಿಗೆ ಸರಿಯಾದ ಮೂರು ಬಗೆಯ ಉದಾಹರಣೆಗಳು ಎನ್ನುವುದೇ ಯುಕ್ತ. ಭಾಗವತತಂತ್ರೋಕ್ತವಾದ್ದರಿಂದ ಪ್ರಾಮಾಣಿಕ.

ವೀರರಾಘವ ವ್ಯಾಖ್ಯಾನದಲ್ಲಿ ತೇಜೋಬನ್ನಗಳ ತ್ರಿವೃತ್ಕರಣರೂಪವಾದ ಸೃಷ್ಟಿ ಪರಮಾತ್ಮನಿಂದಲೆ ಆಗುತ್ತದೆ, 'ತೇಜೋ ವಾರಿ ಮೃದಾಂ ಯತೋ ವಿನಿಮಯಃ' ಎಂದು ಹೇಳಿ, ಈ ಪ್ರಪಂಚಕ್ಕೆ ಪರಮಾತ್ಮ ಉಪಾದಾನವಾದರೆ ಅವನಿಗೆ ವಿಕಾರ ಇದೆ ಎಂದಾಯಿತೆಂಬ ಆಕ್ಷೇಪಕ್ಕೆ ತ್ರಿಸರ್ಗರೂಪವಾದ ಪ್ರಪಂಚ ಗಡಿಗೆ ಮಣ್ಣಿನಲ್ಲಿರುವಂತೆ ಪರಮಾತ್ಮನಲ್ಲಿ ಇಲ್ಲ, ಹಾಗೆ ಕಂಡರೆ ಅದು ಸುಳ್ಳು ಮೃಷಾ. ಅದರಿಂದ ಪರಮಾತ್ಮ ನಿರ್ವಿಕಾರ ಎಂದಿದೆ. ಇಲ್ಲಿ ಜನ್ಮಾದಿ ಕರ್ತೃತ್ವವನ್ನು ಮೊದಲಿಗೆ ಹೇಳಿ ತಿರುಗಿ ಸೃಷ್ಟಿಕರ್ತೃತ್ವವನ್ನು ಹೇಳುವುದು, ವಿಕಾರವನ್ನು ಶಂಕಿಸುವುದು ಎಲ್ಲವೂ ವ್ಯರ್ಥ ಅಪ್ರಾಮಾಣಿಕ.

ನ ಚ ಮಾಯಾಮಯೀ ಸೃಷ್ಟಿಃ । ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ । ತದ್ಧಾಮ್ನಾ ಶ್ರಿಯೋಽಪಿ ನಿರಸ್ತಕುಹಕತ್ವಂ ಮುಕ್ತಾನಾಂ ಚ । ನಚ ಮುಕ್ತವತ್ ಪೂರ್ವಬಂಧಭಾಕ್ತ್ವಂ । ಸದಾ ನಿರಸ್ತಕುಹಕತ್ವಾತ್ । ಸತ್ಯಂ ನಿತ್ಯ ನಿರ್ದುಃಖ ನಿರತಿಶಯಾನಂದಾನುಭವ ರೂಪಂ । ಪರಂ ಸಂಪೂರ್ಣಗುಣಂ । ಪರತ್ವಸಾಧಕಂ ಜನ್ಮಾದೀತ್ಯಾದಿ ॥

ಪ್ರಪಂಚ ಸೃಷ್ಟಿ ಮಾಯಾಮಯವಲ್ಲ ಎಂದು 'ತ್ರಿಸರ್ಗೋಽಮೃಷಾ' ಎಂಬಲ್ಲಿ ಹೇಳಿದೆ. ಅದಕ್ಕೆ ಸಮರ್ಥನೆ 'ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ' ಸ್ವಸಾಮರ್ಥ್ಯದಿಂದ ಮಾಯಾದಿ ಸಕಲ ದೋಷಗಳನ್ನು ಸದಾ ದೂರಮಾಡಿಕೊಂಡವನು. ಅವನ ಅನುಗ್ರಹದಿಂದ ಲಕ್ಷ್ಮೀದೇವಿಗಾಗಲಿ ಮುಕ್ತರಿಗಾಗಲಿ ದೋಷಗಳಿಂದ ಮುಕ್ತಿ ಇದೆ, ಹರಿಗೆ ಹಾಗೆ ಇನ್ನೊಬ್ಬರ ಅನುಗ್ರಹದಿಂದ ದೋಷಮುಕ್ತಿಯಲ್ಲ ಎನ್ನಲು 'ಧಾಮ್ನಾ ಸ್ವೇನ' ಸ್ವಸಾಮರ್ಥ್ಯದಿಂದ ಎನ್ನಲಾಗಿದೆ. ಮುಕ್ತರಂತೆ ಹಿಂದೆ ಒಂದು ಕಾಲದಲ್ಲಿದ್ದ ದೋಷಗಳಿಂದ ಮುಕ್ತಿಯೂ ಅಲ್ಲ ಎಂದು ತಿಳಿಸಲು 'ಸದಾ' ಯಾವಾಗಲೂ ಎಂದಿದೆ. 'ಯತಃ' ಎಂಬ ಶಬ್ದ ಅಧ್ಯಾಹಾರಮಾಡಿ 'ಯತಃ ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ'

ಹರಿ ಸದಾ ಮಾಯಾದಿ ದೋಷರಹಿತನಾದ್ದರಿಂದ ಅವನ ಸೃಷ್ಟಿ ಮಾಯಿಕವಲ್ಲ. ಹೀಗಾಗಿ ಪಾರಮಾರ್ಥಿಕವಾಗಿ ಸೃಷ್ಟಿಕರ್ತತ್ವಾದಿ ಅನಂತಗುಣ ಪೂರ್ಣನಾದ್ದರಿಂದ ಹರಿ ಜೀವನಿಗಿಂತ ವಿಲಕ್ಷಣನಾಗಿದ್ದು ಅವನಿಗೆ ಆರಾಧ್ಯನೆನಿಸಿದ್ದಾನೆ. ಅವನ ಸೃಷ್ಟಿ ಮಾಯಮಯವಲ್ಲ ಎನ್ನಲು ಸಮರ್ಥನೆಗಾಗಿ ಸತ್ಯಂ ಪರಂ ಎಂದು ವಿಶೇಷಣಗಳು. ಸತ್ಯ ಎಂಬಲ್ಲಿ ಸತ್ ಎಂದರೆ ನಿತ್ಯ ನಿರ್ದುಃಖವಾದ, ತಿ ಎಂದರೆ ಸರ್ವಶ್ರೇಷ್ಠ ಆನಂದದ, ಯ ಎಂದರೆ ಅನುಭವ ಸ್ವರೂಪನಾದವನು ಹರಿ ಎಂದರ್ಥ. ಪರಂ ಎಂದರೆ ಪೂರ್ಣ, ಗುಣಪೂರ್ಣ ಎಂದರ್ಥ. ಇಂಥ ಮಹಾನುಭಾವನಾದ ಹರಿ ಮಾಯಾಮಯ ಸೃಷ್ಟಿಯನ್ನೇಕೆ ಮಾಡುತ್ತಾನೆ. ಅದು ಅಶಕ್ತರಾದವರ ಕೆಲಸ.

'ಅರ್ಥೇಷ್ವಭಿಜ್ಞ' ಮುಂತಾದ ವಿಶೇಷಣಗಳು ಜನ್ಮಾದಿಕರ್ತೃತ್ವದ ಸಮರ್ಥನೆಗಾಗಿ ಮಾತ್ರ ಎಂದು ತಿಳಿಯಬಾರದು. 'ಜನ್ಮಾದ್ಯಸ್ಯ ಯತಃ' ಎನ್ನುವುದರಿಂದಾರಂಭಿಸಿ 'ಸತ್ಯಂ' ಎಂಬಲ್ಲಿವರೆಗೂ ಎಲ್ಲ ವಿಶೇಷಣಗಳು 'ಪರಂ' ಎಂದು ಹೇಳಿದ ಗುಣಪೂರ್ಣತ್ವವನ್ನು ಸಮರ್ಥಿಸುತ್ತವೆ ಎಂದೂ ತಿಳಿಯಬೇಕು.

ತಂತ್ರಭಾಗವತೇ ಚ—

ಸೃಷ್ಟಿಸ್ಥಿತ್ಯಪ್ಯಯೇಹಾದೇಃ ಶ್ರುತಿಸ್ಮೃತಿ ಸಮನ್ವಯಾತ್ ।
ಯುಕ್ತಿತಶ್ಚೇತ್ತ್ರಪೂರ್ವಾದೇಃ ಶ್ರೀಬ್ರಹ್ಮ ಭವ ಪೂರ್ವಿಣಃ ।
ಸುರಗಂಧರ್ವಮನುಜ ಪಿತೃದೈತ್ಯಾತ್ಮನಃ ಪೃಥಕ್ ।
ಕರ್ತಾ ವಿಷ್ಣುರಜೋ ನಿತ್ಯಃ ಸರ್ವಜ್ಞತ್ವಾನ್ನ ಚಾಪರಃ ।
ಅನನ್ಯಾಧಿಪತಿಶ್ಚಾಸೌ ಗರೀಯಾನ್ ಬ್ರಹ್ಮಣೋ ಯತಃ ।
ತತ್ಪ್ರಸಾದಮೃತೇ ತಸ್ಯ ನಾನ್ಯೋ ವೇತ್ತಾಽಸ್ತಿ ಕಶ್ಚನ ।
ತೇಜಸೋ ರೂಪವದ್ ರೂಪಂ ಬಹುಧಾ ಕುರುತೇ ಹರಿಃ ।
ವಾರಿಸ್ಥತೇಜಃಪ್ರತಿಮಾ ಜೀವಾಸ್ತಸ್ಮಾದ್ ವಿನಿರ್ಗತಾಃ ।
ಕುಲಾಲೇನ ಮೃದಾ ಯದ್ವನ್ನಿರ್ಮೀಯಂತೇ ಘಟಾದಯಃ ।
ವಿಷ್ಣುನೈವಂ ಪ್ರಕೃತ್ಯೈವ ನಿರ್ಮ್ಯತೇ ಜಗದೀದೃಶಂ ।

ತಂತ್ರಭಾಗವತದಲ್ಲಿಯೂ ನಾವು ಹೇಳಿದಂತೆಯೆ ಈ ಶ್ಲೋಕಕ್ಕೆ ವ್ಯಾಖ್ಯಾನ ಮಾಡಲಾಗಿದೆ—

ಲಕ್ಷ್ಮಿ ಬ್ರಹ್ಮ ರುದ್ರಾದಿ ದೇವತೆಗಳು ಗಂಧರ್ವರು ಮನುಷ್ಯರು ಪಿತೃಗಳು ದೈತ್ಯರು ಮುಂತಾದ ಈ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರ ನಿಯಮನಾದಿಗಳನ್ನು ಯಥಾಯೋಗ್ಯವಾಗಿ ಮಾಡುವವನು ಜನನರಹಿತನಾದ ನಿತ್ಯನಾದ ವಿಷ್ಣು ಹೊರತು ಇನ್ನೊಬ್ಬನಲ್ಲ. ಏಕೆಂದರೆ ಅವನು ಸರ್ವಜ್ಞ. ಇದು ಶ್ರುತಿಸ್ಮೃತಿಗಳು ಪ್ರತಿಪಾದಿಸುವ

ಮುಖ್ಯಪ್ರಮೇಯವಾಗಿದೆ. ಚೇತನಾಚೇತನಾತ್ಮಕವಾದ ಈ ಪ್ರಪಂಚ ಹುಟ್ಟಲು ಒಬ್ಬ ಚೇತನನೆ ಕಾರಣವಾಗಿರಬೇಕು. ಅವನು ಅಲ್ಪಶಕ್ತರಾದ ಬ್ರಹ್ಮಾದಿಗಳಲ್ಲಿ ಯಾರೊಬ್ಬನೂ ಅಲ್ಲ, ಸರ್ವಶಕ್ತನಾದ ಹರಿಯೆ ಎಂದು ಯುಕ್ತಿಯಿಂದಲೂ ಈ ಪ್ರಮೇಯ ಸಿದ್ಧವಾಗುತ್ತದೆ. ಎಲ್ಲವನ್ನೂ ಆಳುವ ಬ್ರಹ್ಮನಿಗೂ ಗುರುವಾದ್ದರಿಂದ ಹರಿ ಸ್ವತಂತ್ರ. ಅವನ ಅನುಗ್ರಹವಿಲ್ಲದೆ ಅವನನ್ನು ಅರಿವವನು ಬೇರೊಬ್ಬನಿಲ್ಲ. ತೇಜೋಭಿಮಾನಿ ದೇವನು ತನ್ನ ರೂಪವನ್ನು ಬಹುವಾಗಿ ಮಾಡಿಕೊಳ್ಳುತ್ತಾನೆ. ನೀರಿನಲ್ಲಿ ಬೀಳುವ ಸೂರ್ಯನ ಪ್ರತಿಬಿಂಬದಂತೆ ಹರಿಯ ಪ್ರತಿಬಿಂಬರಾದ ಜೀವರು ಹರಿಯಿಂದ ಜಡದೇಹಗಳಲ್ಲಿ ಹುಟ್ಟುತ್ತಾರೆ. ಕುಂಬಾರನು ಮಣ್ಣಿನಿಂದ ಗಡಿಗೆ ಮುಂತಾದುವನ್ನು ನಿರ್ಮಿಸುವಂತೆ ವಿಷ್ಣು ಪ್ರಕೃತಿಯಿಂದ ಈ ಜಗತ್ತನ್ನು ನಿರ್ಮಿಸುತ್ತಾನೆ.

ಏಷ ತ್ರಿಸರ್ಗೋ ವಿಷ್ಣೋಸ್ತು ವೃಥಾ ಲೋಕಸ್ಯ ಚಾವೃಥಾ ।
ಇಂದ್ರಜಾಲವಿಧಾಂ ಸೃಷ್ಟಿಂ ಮನ್ಯಂತೇ ಜ್ಞಾನದುರ್ಬಲಾಃ ।
ನಿತ್ಯಂ ನಿರಸ್ತೇಂದ್ರಜಾಲೇ ಸ್ವತ ಏವ ಕಥಂ ಭವೇತ್ ।
ಅಕ್ಷಮಾಃ ಸತ್ಯಸೃಷ್ಟೌ ಹಿ ಮಾಯಾಸೃಷ್ಟಿಂ ವಿತನ್ವತೇ ।
ಅನಂತಾಚಿಂತ್ಯ ವಿಭವಃ ಕಥಂ ತಾಮೀಹತೇ ಹರಿಃ ।
ನಿರ್ದುಃಖಪೂರ್ಣಾನಂದತ್ವಾದ್ ಯಮಾಹುಃ ಸತ್ಯಮಚ್ಯುತಂ ।
ನಿರ್ದೋಷ ಗುಣಪೂರ್ಣತ್ವಾತ್ ಪರಂ ಚಾಹುರ್ಜನಾರ್ದನಂ ।
ಏವಂವಿಧಾನುಭಾವೋ ಯಃ ಸ ಕಥಂ ನಿಂದಿತಂ ಸೃಜೇತ್ ।
ಸ್ವಪ್ನಾದಿಕಂ ಪರೋ ದೇವಃ ಪ್ರಾಣಾದಿಸ್ಥಸ್ತನೋತ್ಯಸೌ ।
ಕೇವಲಸ್ಯ ಪರಸ್ಯಾಸ್ಯ ಮಾಯಾಸೃಷ್ಟಿರ್ನ ಯುಜ್ಯತೇ ॥

ಈ ಈಶ್ವರ ಜೀವ ಜಡಸೃಷ್ಟಿಗಳು ಮೂರೂ ಪರಮಾತ್ಮನಿಗೆ ನಿರರ್ಥಕ, ಲೋಕಕ್ಕೆ ಸಾರ್ಥಕ. ಆದರಿಂದ ಶ್ಲೋಕದಲ್ಲಿ ಮೃಷಾ ಅಮೃಷಾ ಎಂದು ಎರಡು ರೀತಿಯಿಂದಲೂ ಪದಚ್ಛೇದವಿಟ್ಟುಕೊಳ್ಳಬೇಕು. ಮೃಷಾ ಎಂಬ ಪದಚ್ಛೇದದಲ್ಲಿ ಅಜ್ಞಾನಿಗಳು ಮೃಷಾಶಬ್ದದಿಂದ ಪ್ರಪಂಚಸೃಷ್ಟಿಯನ್ನು ಇಂದ್ರಜಾಲದಂತೆ ಮಾಯಾಮಯವೆಂದು ತಿಳಿಯುತ್ತಾರೆ. ಸ್ವಸಾಮರ್ಥ್ಯದಿಂದ ಮಾಯಾದಿ ಸಕಲ ದೋಷಗಳನ್ನೂ ಸದಾ ದೂರವಿರಿಸಿಕೊಂಡ ಹರಿಯಲ್ಲಿ ಮಾಯಾಮಯಸೃಷ್ಟಿಗೆ ಅವಕಾಶ ಹೇಗೆ ಉಂಟಾದೀತು? ಸತ್ಯಸೃಷ್ಟಿಯಲ್ಲಿ ಶಕ್ತಿ ಇಲ್ಲದವರು ಮಾಯಾಸೃಷ್ಟಿ ಮಾಡುತ್ತಾರೆ. ಅನಂತ ಅಚಿಂತ್ಯಶಕ್ತಿಉಳ್ಳ ಹರಿ ಅದನ್ನು ಹೇಗೆ ಮಾಡಿಯಾನು? ಹರಿ ನಿರ್ದುಃಖಪೂರ್ಣಾನಂದಸ್ವರೂಪನಾದ್ದರಿಂದ ಅವನನ್ನು ಸತ್ಯ ಎಂದು ಕರೆಯುತ್ತಾರೆ. ನಿರ್ದೋಷ ಗುಣಪೂರ್ಣನಾದ್ದರಿಂದ ಪರ ಎಂದೂ ಕರೆಯುತ್ತಾರೆ. ಇಂಥಾ

ಮಹಾನುಭಾವನು ಕ್ಷುದ್ರವಾದ ಮಾಯಾಸೃಷ್ಟಿಯನ್ನು ಹೇಗೆ ಮಾಡಿಯಾನು? ಸ್ವಪ್ನಾದಿ ಭ್ರಮವನ್ನೂ ಕೂಡ ಸರ್ವೋತ್ತಮನಾದ ಹರಿ ಇಂದ್ರಿಯಗಳಲ್ಲಿದ್ದು ಸೃಷ್ಟಿಮಾಡುತ್ತಾನೆ, ಮಾಯಾಮಯ ಪದಾರ್ಥಗಳನ್ನೂ ಮಾಯಾವಿಜನರಲ್ಲಿದ್ದು ಸೃಷ್ಟಿಮಾಡುತ್ತಾನೆ ಹೊರತು ಬೇರೆ ಅಧಿಷ್ಠಾನವಿಲ್ಲದೆ ಕೇವಲ ಹರಿಯಿಂದಲೆ ಆಗುವ ಸೃಷ್ಟಿ ಮಾಯಾಸೃಷ್ಟಿಯಾಗಲಾರದು.

ತಸ್ಮಾದ್ ಬಾಧಾಯುತಾಃ ಸರ್ವೇ ಸ್ವಪ್ನಾದ್ಯಾ ಯೇ ತ್ವಕೇವಲಾಃ ।
ಇದಂ ನ ಬಾಧ್ಯತೇ ಸರ್ವಂ ಜಗತ್ ಕೇವಲಜಂ ಯತಃ ।
ಮೋಕ್ಷವತ್ ಕೇವಲಸ್ಯಾಸ್ಯ ಶಕ್ತ್ಯಾ ಸಮ್ಯಗ್ ವಿಜೃಂಭಿತಂ ।
ಏತದ್ ರಹಸ್ಯಂ ಪರಮಂ ಬ್ರಹ್ಮಸೂತ್ರಪದೋದಿತಂ ।
ಯೇ ತ್ವೇವಂ ನ ವಿಜಾನಂತಿ ತೇ ಹಿ ಯಾಂತ್ಯಧರಂ ತಮಃ ॥
ಯೇ ತ್ವೇತದಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಂ ।
ಸರ್ವಜ್ಞಾನವಿಮೂಢಾಂಸ್ತಾನ್ ವಿದ್ಧಿ ನಷ್ಟಾನಚೇತಸಃ ॥
ಯೇ ತ್ವೇತದನುತಿಷ್ಠಂತಿ ಪಾರಂಪರ್ಯಾಗತಂ ಮಮ ।
ತೇ ಯಾಂತಿ ಪರಮಂ ಸ್ಥಾನಂ ಮಯ್ಯೈವೋದಿತಮಂಜಸಾ॥ ಇತ್ಯಾದಿ ॥

ಆದರಿಂದ ಇಂದ್ರಿಯಾದಿ ಅಧಿಷ್ಠಾನ ದ್ವಾರಾ ಶ್ರೀಹರಿ ತೋರುವ ಸ್ವಪ್ನಾದಿ ಅಸತ್ಯ ಪದಾರ್ಥಗಳೆಲ್ಲವೂ ಬಾಧಿತವಾಗುತ್ತವೆ. ಬೇರೆ ಅಧಿಷ್ಠಾನವಿಲ್ಲದೆ ತಾನೇ ನಿರ್ಮಿಸಿದ್ದರಿಂದ ಈ ಅನುಭವಸಿದ್ಧವಾದ ಜಗತ್ತು ಬಾಧಿತವಾಗುವುದಿಲ್ಲ. ಮೋಕ್ಷದಂತೆ ಸತ್ಯವೆ ಆಗಿದೆ. 'ಜನ್ಮಾದ್ಯಸ್ಯ ಯತಃ' ಎಂದರೆ 'ಯತ ಏವ', ಅಧಿಷ್ಠಾನ ವಿಲ್ಲದೆ ಕೇವಲ ಹರಿಯ ಶಕ್ತಿಯಿಂದಲೆ ಈ ಜಗತ್ತಿನ ಸೃಷ್ಟ್ಯಾದಿಗಳಾಗುತ್ತವೆ. ಆದರಿಂದ ಮಾಯಾಮಯವಲ್ಲ ಎಂದು 'ತ್ರಿಸರ್ಗಃ ಅಮೃಷಾ' ಎಂದು ಶ್ಲೋಕದಲ್ಲಿ ಉಕ್ತವಾಗಿದೆ. ಇದು ಉತ್ತಮ ರಹಸ್ಯಪ್ರಮೇಯ. ಬ್ರಹ್ಮಸೂತ್ರದಲ್ಲಿಯೂ ಉಕ್ತವಾಗಿದೆ ಎಂಬುದನ್ನೂ 'ಅನ್ವಯಾದ್ ಇತರತಶ್ಚ' ಎಂದಿದೆ.

ಜಗತ್ಸತ್ಯತ್ವವು ಶ್ರುತಿಸ್ಮೃತಿಗಳ ಅಂತರ್ಯವೆನ್ನಲು ಅದರ ಜ್ಞಾನಕ್ಕೆ ಮೋಕ್ಷ ಫಲವನ್ನೂ ಅಜ್ಞಾನಕ್ಕೆ ಅನರ್ಥಫಲವನ್ನೂ ಹೇಳುವುದು ಸಾಕ್ಷಿ. ''ಯಾರು ಜಗತ್ಸತ್ಯತ್ವವನ್ನು ಜ್ಞಾನಿಗಳು ಉಪದೇಶಿಸಿದಾಗಲೂ ಒಪ್ಪುವುದಿಲ್ಲವೋ ಅವರು ತಮೋ ಭಾಗಿಗಳಾಗುತ್ತಾರೆ. ನನ್ನನ್ನು ದ್ವೇಷಿಸುತ್ತ ನಾನು ಹೇಳುವ ಜಗತ್ಸತ್ಯತ್ವವನ್ನು ಒಪ್ಪದವರು ಮಲಿನ ಹೃದಯದವರು ತತ್ವಜ್ಞಾನಕ್ಕೆ ಅಯೋಗ್ಯರು ಆದರಿಂದ ಅನರ್ಥ ಭಾಜನ ರಾಗುತ್ತಾರೆ. ಪರಂಪರೆಯಿಂದ ಪ್ರಾಪ್ತವಾದ ಶ್ರುತಿಸ್ಮೃತಿಗಳಲ್ಲಿ ನಾನು ಹೇಳಿದ ಈ ಪ್ರಮೇಯಗಳನ್ನು ಆದರದಿಂದ ಒಪ್ಪುವವರು ಉತ್ತಮ ಗತಿಯನ್ನು ಹೊಂದುತ್ತಾರೆ.

ಆದರಿಂದ ಈ ಸೃಷ್ಟಿ ನನಗೆ ವ್ಯರ್ಥವಾದರೂ ಜೀವರಿಗೆ ಅವರ ಯೋಗ್ಯತಾನುಸಾರ ಗತಿನೀಡುತ್ತ ಸಾರ್ಥಕವಾಗಿದೆ. ಇದನ್ನೇ ಭಾಗವತದಲ್ಲಿ 'ಅನ್ಯತ್ರ ಅಮೃಷಾ' ಎಂದಿದೆ ಎಂದು ಮುಂತಾಗಿ ತಂತ್ರಭಾಗವತದಲ್ಲಿ ಉಕ್ತವಾಗಿದೆ.

ವೈಧರ್ಮ್ಯಾಚ್ಚ ನ ಸ್ವಪ್ನಾದಿವದಿತಿ ಚ । ಪ್ರ ಘಾ ನ್ವಸ್ಯ ಮಹತೋ ಮಹಾನಿ ಸತ್ಯಾ ಸತ್ಯಸ್ಯ ಕರಣಾನಿ ವೋಚಮಿತ್ಯಾದಿ । ಬ್ರಹ್ಮಸೂತ್ರ ಮಹಾಭಾರತ ಗಾಯತ್ರೀ ವೇದ ಸಂಬಂಧಶ್ಚಾಯಂ ಗ್ರಂಥಃ । ಉಕ್ತಂ ಚ ಗಾರುಡೇ—

ಅರ್ಥೋಽಯಂ ಬ್ರಹ್ಮಸೂತ್ರಾಣಾಂ ಭಾರತಾರ್ಥವಿನಿರ್ಣಯಃ ।
ಗಾಯತ್ರೀಭಾಷ್ಯರೂಪೋಽಸೌ ವೇದಾರ್ಥಪರಿಬೃಂಹಿತಃ ।
ಪುರಾಣಾನಾಂ ಸಾರರೂಪಃ ಸಾಕ್ಷಾದ್ ಭಗವತೋದಿತಃ ।
ದ್ವಾದಶಸ್ಕಂಧ ಸಂಯುಕ್ತಃ ಶತವಿಚ್ಛೇದ ಸಂಯುತಃ ।
ಗ್ರಂಥೋಽಷ್ಟಾದಶ ಸಾಹಸ್ರಃ ಶ್ರೀಮದ್ಭಾಗವತಾಭಿಧಃ । ಇತಿ ।

ಸ್ವಪ್ನ ಪದಾರ್ಥಗಳನ್ನು ಬಾಹ್ಯಪದಾರ್ಥವೆಂದು ಭ್ರಮಿಸುವಂತೆ ಜಗತ್ತಿನ ಅನುಭವವೂ ಭ್ರಮವೆ ಎನ್ನಕೂಡದು. ಎಚ್ಚರವಾದಾಗ ಸ್ವಾಪ್ನಪದಾರ್ಥದ ಬಾಹ್ಯ ಪದಾರ್ಥತ್ವ ಅವಾಸ್ತವವೆಂದು ಜ್ಞಾನೋದಯವಾಗುತ್ತದೆ. ಜಗತ್ತು ಅವಾಸ್ತವವೆಂದು ಎಂದೂ ಜ್ಞಾನೋದಯವಾಗುವುದಿಲ್ಲ. ಹೀಗೆ ವೈಲಕ್ಷಣ್ಯವಿರುವುದರಿಂದ ಪ್ರಪಂಚ ಸ್ವಾಪ್ನ ಪದಾರ್ಥದ ಬಾಹ್ಯತ್ವದಂತೆ ಅಸತ್ತಲ್ಲ ಎಂದು ಬ್ರಹ್ಮಸೂತ್ರದಲ್ಲಿ ಹೇಳಿದೆ. ಆದರಿಂದ ತ್ರಿಸರ್ಗೋಽಮೃಷಾ ಜಗತ್ತಿನ ಸೃಷ್ಟಿ ಮಾಯಮಯವಲ್ಲ ಎಂಬುದು ಬ್ರಹ್ಮಸೂತ್ರೋಕ್ತಪ್ರಮೇಯವೇ ಆಗಿದೆ. ವೇದದಲ್ಲಿಯೂ ಈ ಪ್ರಮೇಯ ಉಕ್ತವಾಗಿದೆ. 'ಸತ್ಯನಾದ ಪರಮಾತ್ಮನ ಸತ್ಯ ಜಗತ್‌ಸೃಷ್ಟಿಯನ್ನು ನಾನು ಹೊಗಳುತ್ತೇನೆ' ಇಲ್ಲಿ ಜಗತ್‌ಸೃಷ್ಟಿ ಸತ್ಯವೆನಿಸಬೇಕಾದರೆ ಸೃಷ್ಟವಾದ ಜಗತ್ತು ಸತ್ಯವೇ ಆಗಿರಬೇಕು ಎಂಬುದು ಸ್ಪಷ್ಟವಿದೆ. ಬ್ರಹ್ಮಸೂತ್ರ ಮಹಾಭಾರತ ಗಾಯತ್ರಿ ವೇದಗಳ ಸಂಬಂಧವೂ ಭಾಗವತ ಪುರಾಣಕ್ಕೆ ಇದೆ. ಆದರಿಂದ ಇದು ಪ್ರಮಾಣ ಗ್ರಂಥವಾಗಿದೆ. ಇದು ಗರುಡಪುರಾಣದಲ್ಲಿಯೂ ಉಕ್ತವಾಗಿದೆ— ''ಬ್ರಹ್ಮ ಸೂತ್ರೋಕ್ತ ಪ್ರಮೇಯ ಭಾಗವತ ಪ್ರತಿಪಾದ್ಯವಾಗಿದೆ. ಇದನ್ನು ಸೂಚಿಸುವುದಕ್ಕಾಗಿ ಜನ್ಮಾದ್ಯಸ್ಯಯತಃ ಎಂದು ಮೊದಲಿಗೇ ಬ್ರಹ್ಮಸೂತ್ರ ಉಕ್ತವಾಗಿದೆ. ಭಾಗವತ ಭಾರತದ ಅರ್ಥವನ್ನೂ ನಿರ್ಣಯಿಸಿ ಹೇಳುತ್ತದೆ. ಗಾಯತ್ರಿಗೆ ಭಾಷ್ಯದಂತೆಯೂ ಇದೆ. ಹೆಜ್ಜೆಹೆಜ್ಜೆಗೂ ವೇದಾರ್ಥವನ್ನು ಪ್ರತಿಪಾದಿಸುತ್ತಿದೆ. ಎಲ್ಲ ಪುರಾಣಗಳ ಸಾರ ರೂಪವೂ ಆಗಿದೆ. ಸಾಕ್ಷಾತ್ ಭಗವಾನ್ ವೇದವ್ಯಾಸರಿಂದಲೆ ಉಕ್ತವಾಗಿದೆ. ಹನ್ನೆರಡು ಸ್ಕಂಧಗಳಿಂದ

'ಶತವಿಚ್ಛೇದ'ಗಳಿಂದ ಅಂದರೆ, ಮುನ್ನೂರ ನಲವತ್ತ ನಾಲ್ಕು ಅಧ್ಯಾಯಗಳಿಂದ, ಹದಿನೆಂಟು ಸಾವಿರ ಶ್ಲೋಕಗಳಿಂದ ಕೂಡಿದೆ'' ಎಂದು.

ಪಾಂಷ್ರೀ ಶ್ರೀನಿವಾಸಾಚಾರ್ಯರ ವಿರೋಧೋದ್ಧಾರ ಗ್ರಂಥದಲ್ಲಿ 'ಶತವಿಚ್ಛೇದ ಸಂಯುತಃ' ಎಂಬುದಕ್ಕೆ ಹೀಗೆ ವ್ಯಾಖ್ಯಾನವಿದೆ— 'ಶತ' ಎಂದು ಬಹುವಚನಾಂತ ಶಬ್ದವಿಟ್ಟುಕೊಳ್ಳಬೇಕು. ಬಹುಶತಗಳೆಂದರೆ ಮೂರು ಶತಗಳು, ಮುನ್ನೂರು, 'ವಿ' ಎಂಬುದು 'ಯರಲವ' ಎಂದು ನಾಲ್ಕನೆ ವರ್ಣ, ನಾಲ್ಕು ಎಂಬ ಸಂಖ್ಯೆಗೆ ಸೂಚಕ. ಅದನ್ನು ಇನ್ನೊಮ್ಮೆ ಆವೃತ್ತಿಮಾಡಿಕೊಂದರೆ 'ವಿವಿ' ಎಂದರೆ ನಲವತ್ತನಾಲ್ಕು. ಒಟ್ಟು ಮುನ್ನೂರ ನಲವತ್ತನಾಲ್ಕು 'ಛೇದ'ಗಳು, ಅಂದರೆ ಪರಿಚ್ಛೇದಗಳು, ಅಧ್ಯಾಯಗಳು. ಹನ್ನೆರಡು ಸ್ಕಂಧಗಳಲ್ಲಿ ಒಟ್ಟು ಮುನ್ನೂರ ನಲವತ್ತನಾಲ್ಕು ಅಧ್ಯಾಯಗಳು. 'ವಿವಿಚ್ಛೇದ' ಎಂಬುದು 'ಸಮಾನೇ ಲೋಪಃ' ಎಂದು ಒಂದು 'ವಿ'ಲೋಪವಾಗಿ 'ವಿಚ್ಛೇದ' ಎಂದಾಗಿದೆ. 'ಬಹು' ಶತಗಳೆಂದರೆ ಎಷ್ಟು ಎಂದು ಹೇಳದಿರುವ ಸ್ಥಳಗಳಲ್ಲಿ ಪೂರ್ವಮೀಮಾಂಸೆಯ ಕಪಿಂಜಲಾಧಿಕರಣನ್ಯಾಯದಿಂದ 'ಮೂರು' ಎಂದು ಪರ್ಯವಸಾನವಾಗುವುದು. ಮೂರುಶತಗಳೆಂದರೆ ಮುನ್ನೂರು.

★★★

ಶ್ರೀಮದ್ಭಾಗವತ ಮಹಾಪುರಾಣದ ಅಧಿಕಾರಿ, ವಿಷಯ ಮತ್ತು
ಪ್ರಯೋಜನಗಳು —

ಧರ್ಮಃ ಪ್ರೋಜ್ಝಿತ ಕೈತವೋಽತ್ರ ಪರಮೋ ನಿರ್ಮತ್ಸರಾಣಾಂ ಸತಾಂ
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ ತಾಪತ್ರಯೋನ್ಮೂಲನಂ ।
ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂ ವಾ ಪರೈರೀಶ್ವರಃ
ಸದ್ಯೋ ಹೃದ್ಯವರುಧ್ಯತೇಽತ್ರ ಕೃತಿಭಿಃ ಶುಶ್ರೂಷುಭಿಸ್ತತ್ಕ್ಷಣಾತ್ ॥ ೨ ॥

ಈ ಭಾಗವತ ಪುರಾಣ ವರ್ಣಿಸುವುದು ಸ್ವಾತಂತ್ರ್ಯಾಭಿಮಾನರಹಿತ ನಿಷ್ಕಾಮ ಧರ್ಮವನ್ನು ಮತ್ತು ಮಾತ್ಸರ್ಯರಹಿತರಾದ ಸಜ್ಜನರಿಗೆ ತಾಪತ್ರಯ ಕಳೆವ ಮೋಕ್ಷದಾಯಕನಾದ ಸದಾ ನಿರ್ದೋಷನಾದ ದೇಶಕಾಲಗುಣಗಳಲ್ಲಿ ಪರಿಪೂರ್ಣನಾದ ಪರಮಾತ್ಮನನ್ನು. ಬೇರೆ ಅರ್ಥಕಾಮಾದಿಗಳನ್ನು ಹೇಳಿದರೆ ಏನು ಫಲ? ಗುರುಶುಶ್ರೂಷೆ ಮಾಡಿ ಶಾಸ್ತ್ರ ಓದಿದವರಿಗೆ ಈ ಗ್ರಂಥಾಧ್ಯಯನದಿಂದ ತತ್ಕ್ಷಣವೇ ಭಗವಂತ ಹೃದಯದಲ್ಲಿ ಭಕ್ತಿಪಾಶಬದ್ಧನಾಗಿ ನಿಲ್ಲುತ್ತಾನೆ. ಏಕೆಂದರೆ ಇದು ಮಹಾಮುನಿ ನಾರದರಿಂದ ಪ್ರಾರ್ಥಿತರಾಗಿ ಸರ್ವಜ್ಞರಾದ ವೇದವ್ಯಾಸರು ರಚಿಸಿದ ಮಹಾಪುರುಷಾರ್ಥದಾಯಕವಾದ ಭಾಗವತಗ್ರಂಥ.

ಅಧಿಕಾರಿ ವಿಷಯ ಫಲಾನ್ಯುಚ್ಯಂತೇ ಧರ್ಮ ಇತಿ । ಪ್ರೋಜ್ಝಿತ ಕೈತವಃ ಫಲಾನಪೇಕ್ಷಯಾ । ಈಶ್ವರಾರ್ಪಣೇನ ಪರಮಃ ।

ತಿತಿಕ್ಷವಃ ಕಾರುಣಿಕಾಃ ಸುಹೃದಃ ಸರ್ವದೇಹಿನಾಂ ।
ಅಜಾತ ಶತ್ರವಃ ಶಾಂತಾಃ ಸಾಧವಃ ಸಾಧುಭೂಷಣಾಃ ।
ಮಯ್ಯನನ್ಯೇನ ಭಾವೇನ ಭಕ್ತಿಂ ಕುರ್ವಂತಿ ಯೇ ದೃಢಾಂ ॥

ಇತ್ಯಾದಿ ಸತಾಂ ಲಕ್ಷಣಂ । ಸತಾಂ ಮಾತ್ಸರ್ಯಮರ್ಜುನಸ್ಯ ಏಕಲವ್ಯ ಇವ ಕುತ್ರಚಿದ್ ದೃಶ್ಯತೇ । ತದ್ ವರ್ಜನೀಯಮುತ್ತಮೇಷು ಜ್ಞಾನಾರ್ಥಿನಾ । ಮಹಾಸಂಹಿತಾಯಾಂ ಚ-

ಉತ್ತಮೇಷ್ವಾತ್ಮನೋ ನಿತ್ಯಂ ಮಾತ್ಸರ್ಯಂ ಪರಿವರ್ಜಯೇತ್
ಕುರುತೇ ಯತ್ರ ಮಾತ್ಸರ್ಯಂ ತತ್ ತಸ್ಯೈವ ವಿಹೀಯತೇ । ಇತಿ ।

ಧರ್ಮಃ ಪ್ರೋಜ್ಝಿತಕೈತವಃ ಎಂಬ ಶ್ಲೋಕದಲ್ಲಿ ಭಾಗವತ ಗ್ರಂಥದ ಅಧಿಕಾರಿ ವಿಷಯ ಪ್ರಯೋಜನಗಳು ಉಕ್ತವಾಗುತ್ತವೆ. 'ಪ್ರೋಜ್ಝಿತ ಕೈತವ' ಫಲ ರಹಿತ ಎಂದರೆ ಫಲಕಾಮನಾ ರಹಿತ ಎಂದರ್ಥ. ಪರಮ ಎಂದರೆ ನಾಹಂಕರ್ತಾ ಹರಿಃಕರ್ತಾ ಎಂದು ಭಗವಂತನಿಗೆ ಕರ್ತೃತ್ವ ಸಮರ್ಪಣೆಯುಳ್ಳದ್ದೆಂದರ್ಥ. ''ಸಹನೆಯುಳ್ಳವರು, ಕರುಣಾಳುಗಳು ಎಲ್ಲರನ್ನೂ ಪ್ರೀತಿಸುವವರು, ಯಾರಲ್ಲಿಯೂ ಶತ್ರು ಎಂಬ ದೃಷ್ಟಿ ಇಲ್ಲದವರು, ಹರಿಯಲ್ಲಿಯೆ ಮನಸ್ಸಿಟ್ಟವರು, ಒಳ್ಳೆಯ ಸ್ವಭಾವದವರು, ಸತ್ಕರ್ಮವನ್ನೆ ಭೂಷಣವೆಂದು ಬಗೆಯುವವರು. ಪರಮಾತ್ಮನಲ್ಲಿ ಅನನ್ಯಭಕ್ತಿ ಮಾಡುವವರು ಇವರೇ ಸಜ್ಜನರು'' ಎಂದು ಮುಂತಾಗಿ ಮುಂದೆ ಭಾಗವತದಲ್ಲಿ (೩.೨೬.೨೧) ಕಪಿಲನು ತಾಯಿಗೆ ಸಜ್ಜನರ ಲಕ್ಷಣವನ್ನು ಹೇಳುತ್ತಾನೆ. ಅರ್ಜುನನಿಗೆ ಏಕಲವ್ಯ ನಲ್ಲಿದ್ದಂತೆ ಸಜ್ಜನರಿಗೆ ಮಾತ್ಸರ್ಯ ಕೆಲವು ಕಡೆ ಕಂಡುಬರುತ್ತದೆ. ಆದರೆ ಜ್ಞಾನಾರ್ಥಿಯು ಉತ್ತಮರಲ್ಲಿ ಮಾತ್ಸರ್ಯ ಮಾಡಕೂಡದು ಎಂಬ ಅಭಿಪ್ರಾಯ ದಿಂದ ನಿರ್ಮತ್ಸರಾಣಾಂ ಎಂದಿದೆ. ಮಹಾಸಂಹಿತೆಯಲ್ಲಿ ಹಾಗೇ ಹೇಳಿದೆ—

ತನಗಿಂತ ಉತ್ತಮರಲ್ಲಿ ಮಾತ್ಸರ್ಯವನ್ನು ಸದಾ ವರ್ಜಿಸಬೇಕು. ಇಲ್ಲದಿದ್ದರೆ ಯಾವ ವಿಷಯದಲ್ಲಿ ಮತ್ಸರಿಸುವನೋ ಅದೇ ಅವನಿಗೆ ಕೈತಪ್ಪಿ ಹೋಗುತ್ತದೆ.

ನಿತ್ಯನಿರಸ್ತದೋಷಪೂರ್ಣಗುಣಂ ವಾಸ್ತವಂ । ನಿತ್ಯಸಂಹಿತಾಯಾಂ ಚ—

ನಿರಸ್ತಾಖಿಲ ದೋಷಂ ಯದಾನಂದಾದಿ ಮಹಾಗುಣಂ ।
ಸರ್ವದಾ ಪರಮಂ ಬ್ರಹ್ಮ ತಸ್ಮಾದ್ ವಾಸ್ತವಮೀರ್ಯತೇ ॥ ಇತಿ ।

ವಸ್ತು ಅಪ್ರತಿಹತಂ ನಿತ್ಯಂ ಚ । ಸ್ಕಾಂದೇ ಚ—

ವಸನಾದ್ ವಾಸನಾದ್ ವಸ್ತು ನಿತ್ಯಾಪ್ರತಿಹತಂ ಯತಃ ।
ವಾಸೇನೇದಂ ಯತಸ್ತುನ್ನಮತಸ್ತದ್ ಬ್ರಹ್ಮ ಶಬ್ದ್ಯತೇ ॥ ಇತಿ ।

'ವಾಸ್ತವ' ಎಂದರೆ ಸದಾ ನಿರ್ದೋಷವೂ ಗುಣಪೂರ್ಣವೂ ಆದುದು. ''ಪರಬ್ರಹ್ಮ ನಾರಾಯಣ ಸದಾ ಸಕಲ ದೋಷದೂರನೂ ಆನಂದಾದಿ ಮಹಾಗುಣ ಪೂರ್ಣನೂ ಆಗಿರುವನು. ಅದರಿಂದ ವಾಸ್ತವನೆನಿಸಿರುವನು'' ಎಂದು ನಿತ್ಯಸಂಹಿತೆ ಯಲ್ಲಿ ಉಕ್ತವಾಗಿದೆ. ಸರ್ವದೇಶಗಳಲ್ಲಿ ವ್ಯಾಪ್ತನಾಗಿದ್ದು ನಿತ್ಯನೂ ಆಗಿರುವುದರಿಂದ ಶ್ರೀಹರಿ ವಸ್ತು ಎನಿಸುತ್ತಾನೆ. ಸ್ಕಾಂದಪುರಾಣದಲ್ಲಿ ಹಾಗೇ ಹೇಳಿದೆ— ''ಜಗತ್ತಿನಲ್ಲಿ ವಾಸವಾಗಿದ್ದಾನೆ, ಜಗತ್ತು ತನ್ನಲ್ಲಿ ವಾಸಮಾಡುವಂತೆ ಆಶ್ರಯನೀಡುತ್ತಾನೆ ಎಂಬುದು ವಸ್ತುಶಬ್ದದ ಅವಯವಾರ್ಥ. ನಿತ್ಯನಾಗಿದ್ದು ಸರ್ವವ್ಯಾಪಿಯಾದವನು ಎಂಬುದು ರೂಢಿಯ ಅರ್ಥ. ಜೀವರೊಳಗಿದ್ದು ಅವರಿಗೆ ಸಂಸಾರದುಃಖವನ್ನು ಉಣಿಸುವವನು ಎಂಬುದೂ ವಸ್ತುಶಬ್ದದ ಅವಯವಾರ್ಥ'', ಎಂದು.

ಕಿಂ ವಾ ಪರೈಃ ಅರ್ಥಕಾಮಾದಿಕಥನೈಃ । ಗಾರುಡೇ ಚ—

ಧರ್ಮಾರ್ಥಕಾಮ ಮೋಕ್ಷಾಣಾಮೇಕಮೇವ ಪದಂ ಯತಃ ।
ಅವರೋಧೋ ಹೃದೀಶಸ್ಯ ಪೃಥಗ್ ವಕ್ಷ್ಯೇ ನ ತಾನಹಮಿತಿ ।

ಸದ್ಯಃಶಬ್ದ ಆಪೇಕ್ಷಿಕ ಇತಿ ತತ್‌ಕ್ಷಣಾದಿತಿ । ನ ಚಾಸಂಪೂರ್ಣಾಧಿಕಾರಿಣಾಂ ತತ್‌ಕ್ಷಣಾದವರುಧ್ಯತ ಇತಿ ಸದ್ಯಃಶಬ್ದಃ । ಅಧಿಕಾರಿ ವಿಷಯ ಫಲಾನಾಂ ಸ್ಮರಣಾತ್ ಫಲಾಧಿಕ್ಯಂ ಭವತಿ । ವಾಮನೇ ಚ—

ಅಧಿಕಾರಂ ಫಲಂ ಚೈವ ಪ್ರತಿಪಾದ್ಯಂ ಚ ವಸ್ತು ಯತ್ ।
ಸ್ಮೃತ್ವಾ ಪ್ರಾರಭತೋ ಗ್ರಂಥಂ ಕರೋತೀಶೋ ಮಹತ್ಫಲಮ್ । ಇತಿ ।

ಕಿಂ ವಾ ಪರೈಃ ಎಂದರೆ ಬೇರೆ ಅರ್ಥಕಾಮಾದಿಗಳನ್ನು ಹೇಳಿ ಏನು ಫಲ ಎಂದರ್ಥ. ಗರುಡಪುರಾಣದಲ್ಲಿ ಹಾಗೇ ಹೇಳಿದೆ— 'ಧರ್ಮ ಅರ್ಥ ಕಾಮ ಮೋಕ್ಷಗಳನ್ನು ಹೇಳುವುದಕ್ಕೆ ಹೃದಯದಲ್ಲಿ ಪರಮಾತ್ಮ ನೆಲೆಸುವುದೇ ಮುಖ್ಯಫಲ. ಅದು ನಿಷ್ಕಾಮಕರ್ಮವನ್ನು ಪ್ರತಿಪಾದಿಸುವ ಈ ಪುರಾಣದ ಶ್ರವಣ ಮಾತ್ರದಿಂದಲೆ ಲಭ್ಯವಿರುವಾಗ ಅರ್ಥಕಾಮಾದಿಗಳನ್ನು ಪ್ರತ್ಯೇಕವಾಗಿ ನಾನು ಹೇಳಬೇಕಾಗಿಲ್ಲ' ಎಂದು. ಸದ್ಯಃ ಬೇಗನೆ ಎಂದರೆ ಎಷ್ಟು ಬೇಗ? ವರ್ಷಕ್ಕಿಂತ ಬೇಗ, ತಿಂಗಳಿಗಿಂತ ಬೇಗ ಎಂದು ಮುಂತಾಗಿ ಆಯಾ ಸಂದರ್ಭಗಳಲ್ಲಿ ಬೇರೆಬೇರೆ ಅರ್ಥ ಕೊಡಬಹುದು. ಪ್ರಕೃತ ಬೇಗನೆ ಎಂದರೆ ತತ್‌ಕ್ಷಣದಲ್ಲಿ ಎಂದರ್ಥ ವಿವಕ್ಷಿತ ಎನ್ನಲು ಸದ್ಯಃ ಎಂದು ಹೇಳಿ ತತ್‌ಕ್ಷಣಾತ್ ಎಂದೂ ಹೇಳಿದೆ. ಹೀಗೆಂದ ಮಾತ್ರಕ್ಕೆ ಸದ್ಯಃ ಶಬ್ದ

ವ್ಯರ್ಥವಲ್ಲ, ಅಧಿಕಾರ ಸಂಪತ್ತನ್ನು ಪೂರ್ತಿಯಾಗಿ ಹೊಂದದಿರುವವರಿಗೆ ತತ್‌ಕ್ಷಣದಲ್ಲಿಯೆ ಪರಮಾತ್ಮ ಹೃದಯದಲ್ಲಿ ನಿಲ್ಲುವುದಿಲ್ಲ, ಬೇಗನೆ ನಿಲ್ಲುತ್ತಾನೆ ಎಂದು ತಿಳಿಸಲು ಸದ್ಯಃ ಶಬ್ದವಿದೆ. ಬ್ರಹ್ಮಸೂತ್ರಮಹಾಭಾರತಾದಿ ಸಂಬಂಧಉಳ್ಳ ಈ ಭಾಗವತ ಮುಮುಕ್ಷುಗಳಿಗೆ ಅವಶ್ಯಗ್ರಾಹ್ಯವೆಂದು ಮೊದಲನೆ ಪದ್ಯದಲ್ಲಿಯೆ ಹೇಳಿದ ಬಳಿಕ ಇಲ್ಲಿ ಅಧಿಕಾರಿ ವಿಷಯಾದಿಗಳನ್ನು ಹೇಳುವ ಮೂಲಕ ಪುನಃ ಗ್ರಾಹ್ಯತ್ವವನ್ನು ಏಕೆ ಹೇಳಬೇಕು ಎಂದರೆ, ಗ್ರಾಹ್ಯತ್ವ ಸೂಚನೆಗಾಗಿ ಅಲ್ಲ, ಅಧ್ಯಯನ ಮಾಡುವವರಿಗೆ ಮಹಾಫಲ ಲಭಿಸಲೆಂಬ ಉದ್ದೇಶದಿಂದ ಅಧಿಕಾರಿ ವಿಷಯ ಫಲಗಳನ್ನು ಇಲ್ಲಿ ಹೇಳಲಾಗಿದೆ. ಅವುಗಳನ್ನು ಸ್ಮರಿಸಿ ಗ್ರಂಥಾಧ್ಯಯನ ಮಾಡಿದರೆ ಹೆಚ್ಚು ಫಲ ಲಭಿಸುತ್ತದೆ. ವಾಮನಪುರಾಣದಲ್ಲಿ ಹಾಗೇ ಹೇಳಿದೆ— ಅಧಿಕಾರ ಫಲ ಪ್ರತಿಪಾದ್ಯ ವಿಷಯಗಳನ್ನು ನೆನೆದು ಗ್ರಂಥಾಧ್ಯಯನ ಪ್ರಾರಂಭಿಸುವವನಿಗೆ ಭಗವಂತ ಹೆಚ್ಚು ಫಲ ನೀಡುತ್ತಾನೆ ಎಂದು.

ಇಲ್ಲಿ ಶ್ರೀಧರ ವ್ಯಾಖ್ಯಾನದಲ್ಲಿ ಶ್ರೋತೃಪ್ರವೃತ್ತಿಗಾಗಿ ಭಾಗವತ ಇತರ ಗ್ರಂಥಗಳಿಗಿಂತ ಹೇಗೆ ಶ್ರೇಷ್ಠ ಎಂಬುದನ್ನು ಈ ಪದ್ಯ ಹೇಳುತ್ತದೆ ಎಂದಿದೆ. ವೀರರಾಘವ ವ್ಯಾಖ್ಯಾನದಲ್ಲಿ ಅಧಿಕಾರಿ ವಿಷಯ ಫಲಗಳು ಉಕ್ತವಾಗಿವೆ ಎಂದಿದೆ. 'ವಾಸ್ತವ ವಸ್ತು' ಎಂದರೆ ವಸ್ತುವಿನ ಅಂದರೆ ಪಾರಮಾರ್ಥಿಕವಸ್ತುವಾದ ಪರಬ್ರಹ್ಮನ ಅಂಶ ಜೀವ'. ವಸ್ತುವಿನ ಶಕ್ತಿ ಮಾಯೆ, ವಸ್ತುವಿನ ಕಾರ್ಯ ಜಗತ್ತು. ಇವೆಲ್ಲವೂ ಪರಬ್ರಹ್ಮ ವಸ್ತುವೆ, ಅದಕ್ಕಿಂತ ಬೇರೆ ಅಲ್ಲ ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ. ಇತರ ದೇವತೆಗಳನ್ನು ಅವರಲ್ಲಿ ಇಲ್ಲದ ಗುಣವನ್ನಾರೋಪಿಸಿ ಸ್ತೋತ್ರ ಮಾಡ ಬೇಕಾಗುತ್ತದೆ, ಪರಮಾತ್ಮನಲ್ಲಿ ವಾಸ್ತವಗುಣವೆ ಇದೆ, ಅಂಥ ವಸ್ತು ಪರಮಾತ್ಮ ಎಂದು ವೀರರಾಘವ ವ್ಯಾಖ್ಯಾನ. ಇದೆಲ್ಲವೂ ಪ್ರಮಾಣವಿರುದ್ಧವೆನ್ನಲು ತಾತ್ಪರ್ಯದಲ್ಲಿ ಪ್ರಮಾಣಪುರಃಸರವಾಗಿಯೆ ವ್ಯಾಖ್ಯಾನಿಸಲಾಗಿದೆ.

★★★

ಭಾಗವತ ಶ್ರವಣವನ್ನು ಪ್ರಶಂಸಾಪೂರ್ವಕವಾಗಿ ವಿಧಿಸುತ್ತಾರೆ—

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವ ಸಂಯುತಂ ।
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾಃ ॥ ೩ ॥

ಮರ್ತ್ಯಲೋಕದಲ್ಲಿರುವ ರಸಿಕರೆ, ಈ ಭಾಗವತವೆಂದರೆ ವೇದವೆಂಬ ಕಲ್ಪವೃಕ್ಷದಿಂದ ವೇದವ್ಯಾಸರು ಉದುರಿಸಿದ ಹಣ್ಣು, ಗಿಣಿ ಕಚ್ಚಿದ ಹಣ್ಣು ಅಮೃತದಂತೆ

ಸವಿಯಾಗಿರುತ್ತದೆ. ಹಾಗೇ ಈ ಹಣ್ಣು ಕೂಡ ಶುಕಮುನಿ ಮುಂತಾದವರು ಪ್ರವಚನ ಮಾಡಿದ್ದರಿಂದ ಬಹಳ ಮಧುರವಾಗಿದೆ. ಮೋಕ್ಷ ಜನಕವಾಗಿದೆ. ಅದರಿಂದ ಮೋಕ್ಷ ಸಿಗುವವರೆಗೂ ಮಾತ್ರವಲ್ಲದೆ, ಅನಂತರವೂ ಇದರ ರಹಸ್ಯರಸಸಾರವನ್ನು ಪಾನಮಾಡಿರಿ. ಅದರಿಂದ ಭಗವಂತನಿಗೆ ನಿಮ್ಮ ಮೇಲೆ ಬಲು ಅಕ್ಕರೆ ಮೂಡುತ್ತದೆ. ನಿಮಗೆ ಸಕಲ ಪುರುಷಾರ್ಥ ಲಭಿಸುತ್ತದೆ.

ಜ್ಞಾತಫಲಸ್ಯಾಪಿ ಪ್ರಶಂಸಾವಿಧಿಭ್ಯಾಂ ಕ್ಷಿಪ್ರಪ್ರವೃತ್ತಿರ್ಭವತೀತಿ ಪ್ರಶಸ್ಯ ವಿಧತ್ತೇ ನಿಗಮಕಲ್ಪತರೋರ್ಗಲಿತಮಿತಿ । ಭಗವತಾ ಗಲಿತಂ । ಶುಕೇನ ದ್ರವೀಕೃತಂ ।
ಉಕ್ತಂ ಚ ಬ್ರಹ್ಮಾಂಡೇ—

ಧರ್ಮಪುಷ್ಪಸ್ತ್ವರ್ಥಪತ್ರಃ ಕಾಮಪಲ್ಲವ ಸಂಯುತಃ ।
ಮಹಾಮೋಕ್ಷ ಫಲೋ ವೃಕ್ಷೋ ವೇದೋಽಯಂ ಸಮುದೀರಿತಃ ।
ಶಾತಿತಾನಿ ಫಲಾನೀಹ ಕೃಷ್ಣದ್ವೈಪಾಯನೇನ ತು ।
ಭಾರತಾದೀನಿ ಯಾನೀಹ ತಥಾ ಭಾಗವತಂ ಭುವಿ ।
ಆರ್ದ್ರೀಕೃತಾನಿ ತಾನೀಹ ಶುಕಪ್ರಭೃತಿಭಿರ್ಜನೈಃ ।
ಖ್ಯಾಪಯದ್ಭಿರ್ಗುರುಪ್ರೋಕ್ತಾನ್ ವೇದಾರ್ಥಾನ್ ಗ್ರಂಥನಿಷ್ಠಿತಾನ್ ।
ಕಾನಿಚಿದ್ ದರ್ಶಯಾಮಾಸ ವೃಕ್ಷಸ್ಯಾಗ್ರೇ ಫಲಾನಿ ತು ।
ವ್ಯಾಚಕ್ಷಮಾಣೋ ವೇದಾರ್ಥಂ ಭಗವಾನ್ ಲೋಕಪೂಜಿತಃ ।
ಏತೇಷಾಮಥ ತೇಷಾಂ ವಾ ರಸಾನ್ ಪಿಬತ ಸಜ್ಜನಾಃ ।
ಆ ಮೋಕ್ಷಾನ್ಮಹತೀ ತೃಪ್ತಿರಹೋ ಮೇ ಪಶ್ಯತೋ ಭವೇತ್ । ಇತಿ ।

ವಿಷಯ ಪ್ರಯೋಜನಾದಿಗಳನ್ನು ತಿಳಿದವನಿಗೂ ಗ್ರಂಥವನ್ನು ಪ್ರಶಂಸೆ ಮಾಡಿದಾಗ ಮತ್ತು ಶ್ರವಣ ಮಾಡಬೇಕೆಂದು ವಿಧಿಸಿದಾಗ ಬೇಗನೆ ಪ್ರವೃತ್ತಿಯಾಗುವುದೆಂಬ ಅಭಿಪ್ರಾಯದಿಂದ ಪ್ರಶಂಸೆ ಮಾಡಿ ಶ್ರವಣವನ್ನು ವಿಧಿಸುತ್ತಾರೆ 'ನಿಗಮಕಲ್ಪತರೋರ್ಗಲಿತಂ' ಎಂಬ ಪದ್ಯದಿಂದ. ''ಭಗವಾನ್ ವೇದವ್ಯಾಸರು ಈ ಹಣ್ಣನ್ನು ಬೀಳಿಸಿದರು. ಶುಕಮುನಿ ಅದರ ರಸವನ್ನು ತೋರಿಸಿದರು.'' ಇದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ— ವೇದವೆಂಬ ವೃಕ್ಷಕ್ಕೆ ಧರ್ಮವೇ ಪುಷ್ಪ, ಅರ್ಥವು ಎಲೆ. ಕಾಮ ಎಂಬ ಚಿಗುರೆಲೆಯಿಂದ ಯುಕ್ತವಾಗಿದೆ. ಪರಮ ಪುರುಷಾರ್ಥವಾದ ಮೋಕ್ಷವೆಂಬ ಫಲ ನೀಡುತ್ತದೆ. ಈ ವೃಕ್ಷದ ಫಲದಂತಿರುವ ಭಾರತಾದಿಗಳನ್ನೂ ಭಾಗವತವನ್ನೂ ವೇದವ್ಯಾಸರು ರಚಿಸಿ ಲೋಕದಲ್ಲಿ ಉಪದೇಶಿಸಿದರು. ಶುಕಮುನಿ ಮುಂತಾದವರು ಆ ಗ್ರಂಥಗಳಲ್ಲಿರುವ ವೇದಾರ್ಥಗಳನ್ನು ಗುರೂಪದೇಶಾನುಸಾರ ಎಲ್ಲರಿಗೂ ತಿಳಿಯುವಂತೆ ಮಾಡಿದರು. ಲೋಕಪೂಜ್ಯರಾದ

ಆ ಭಗವಾನ್ ವೇದವ್ಯಾಸರು ವೇದಾರ್ಥವನ್ನು ಉಪದೇಶಿಸುತ್ತ ವೇದವೃಕ್ಷದ ತುದಿಯಲ್ಲಿ ಪಂಚರಾತ್ರ ಮೂಲರಾಮಾಯಣ ಮುಂತಾದ ಫಲಗಳಿರುವುದನ್ನೂ ತೋರಿಸಿ ಉಪದೇಶಿಸಿದರು. ಸಜ್ಜನರೆ, ನೀವು ಈ ಭಾರತಾದಿ ಗ್ರಂಥಗಳ ಮತ್ತು ಆ ಪಂಚರಾತ್ರಾದಿ ಗ್ರಂಥಗಳ ಅರ್ಥವನ್ನು ಸದಾ ಶ್ರವಣ ಮಾಡಿರಿ. ಅದನ್ನು ಕಂಡರೆ ನನಗೆ ಬಹಳ ಸಂತೋಷವಾಗುತ್ತದೆ ಎಂದು.

ಶ್ರೀಧರ ವ್ಯಾಖ್ಯಾನದಲ್ಲಿ— 'ಭಾಗವತವೆಂಬ ಹಣ್ಣನ್ನು ವೈಕುಂಠದಿಂದ ನಾರದರು ತಂದು ನನ್ನ ಕೈಗಿತ್ತರು ನಾನು ಶುಕಮುನಿಯ ಬಾಯಿಗೆ ಕೊಟ್ಟೆ. ಅವರು ಅದನ್ನು ಭೂಮಿಯಲ್ಲಿ ಹಾಕಿದರು' ಎಂದು ವೇದವ್ಯಾಸರು ಹೇಳುತ್ತಾರೆ. ವೀರ ರಾಘವ ವ್ಯಾಖ್ಯಾನದಲ್ಲಿ— 'ವೇದವೃಕ್ಷದ ತುತ್ತತುದಿಯಲ್ಲಿದ್ದ ಭಾಗವತ ಫಲವನ್ನು ಶುಕಮುನಿ ಎಂಬ ಗಿಳಿ ಆಸ್ವಾದಿಸಿ ಬೀಳಿಸಿತು' ಎಂದಿದೆ. ವಸ್ತುತಃ ವೇದವೃಕ್ಷದ ಫಲಗಳು, ಪಂಚರಾತ್ರ ಮೂಲರಾಮಾಯಣ ಮುಂತಾದುವು ವ್ಯಾಸಾವತಾರಕ್ಕೆ ಮೊದಲೇ ಇದ್ದವುಗಳು. ಅವನ್ನು ವೇದವ್ಯಾಸರು ಲೋಕಕ್ಕೆ ತೋರಿಸಿದರು. ಭಾರತ ಭಾಗವತ ಪುರಾಣಾದಿಗಳು ಹಾಗಲ್ಲ, ಅವು ವೇದವ್ಯಾಸರು ರಚಿಸಿ ಸಜ್ಜನರ ಕೈಗೇ ಹಾಕಿದ ವೇದವೃಕ್ಷ ಫಲಗಳು. ಶುಕಮುನಿ ಭಾಗವತವೆಂಬ ಒಂದು ಫಲವನ್ನು ಪರೀಕ್ಷಿತನಿಗೆ ಉಪದೇಶಿಸಿ ಅದರ ಸ್ವಾರಸ್ಯವನ್ನು ತೋರಿಸಿದರು. ಇದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದ ವಾಸ್ತವ ವೃತ್ತಾಂತ ಎನ್ನುತ್ತಾರೆ ಶ್ರೀಮದಾಚಾರ್ಯರು.

★★★

ನೈಮಿಷೇऽನಿಮಿಷಕ್ಷೇತ್ರೇ ಋಷಯಃ ಶೌನಕಾದಯಃ ।
ಸತ್ರಂ ಸ್ವರ್ಗಾಯ ಲೋಕಾಯ ಸಹಸ್ರಸಮಮಾಸತ ॥ ೪ ॥

ದೇವತೆಗಳ ಆವಾಸಸ್ಥಾನವಾದ ನೈಮಿಷಾರಣ್ಯದಲ್ಲಿ ಶೌನಕಾದಿ ಮುನಿಗಳು ವೈಕುಂಠಲೋಕ ಪ್ರಾಪ್ತಿಗಾಗಿ ಸಾವಿರವರ್ಷಗಳ ದೀರ್ಘಸತ್ರವನ್ನು ಪ್ರಾರಂಭಿಸಿದರು.

ಪ್ರಕಾರಾಂತರೇಣ ಪುರುಷಾರ್ಥಶಂಕಾನಿವೃತ್ತ್ಯರ್ಥಮಾಖ್ಯಾಯಿಕಾ ।
ಪಾದ್ಮೇ ಚ—
ಆಖ್ಯಾಯಿಕಾಃ ಪ್ರದರ್ಶ್ಯಂತೇ ಸರ್ವವೇದೇಷು ಸರ್ವಶಃ ।
ದ್ಯೋತಯಂತ್ಯಸ್ತು ಮಹತಾಂ ತಾತ್ಪರ್ಯಂ ತತ್ರತತ್ರ ಹ ।
ಅಲಾಭಃ ಪುರುಷಾರ್ಥಸ್ಯ ಪ್ರೋಕ್ತಮರ್ಥಮೃತೇ ತ್ವಿತಿ ।
ದ್ಯೋತನಾಯ ಮಹಾರಾಜ ಶ್ರದ್ಧಾವೃದ್ಧ್ಯರ್ಥಮೇವ ಚ । ಇತಿ ॥

ಜ್ಞಾನಸಂಪಾದನೆಯಿಂದ ಹೊರತು ಬೇರೆ ರೀತಿಯಿಂದ ಅಂದರೆ ಕರ್ಮಾನು

ಷ್ಠಾನದಿಂದಲೂ ಮೋಕ್ಷಪ್ರಾಪ್ತಿ ಸಾಧ್ಯವೆಂಬ ಶಂಕೆಯನ್ನು ಕಳೆಯುವುದಕ್ಕಾಗಿ 'ನೈಮಿಷೇऽನಿಮಿಷಕ್ಷೇತ್ರೇ' ಎಂದು ಮುಂತಾಗಿ ಕಥೆ ಹೇಳುತ್ತಾರೆ. ಪದ್ಮಪುರಾಣದಲ್ಲಿ ಹಾಗೇ ಹೇಳಿದೆ— 'ತಾವು ಹೇಳಿದ ಆಯಾ ಪ್ರಮೇಯಗಳಲ್ಲಿ ಮಹಾತ್ಮರಿಗೆ ಆದರವಿದೆ ಎಂದು ತಿಳಿಸುವುದಕ್ಕೂ, ಬೇರೆ ರೀತಿಯಿಂದ ಪುರುಷಾರ್ಥ ಲಾಭ ಶಕ್ಯವಿಲ್ಲವೆಂದು ತಿಳಿಸುವುದಕ್ಕೂ ಹೇಳಿದ ವಿಷಯದಲ್ಲಿ ಶ್ರದ್ಧೆ ಹೆಚ್ಚಿಸುವ ಉದ್ದೇಶ ದಿಂದಲೂ ಎಲ್ಲ ವೇದಗಳಲ್ಲಿಯೂ ಅಲ್ಲಲ್ಲಿ ಕಥೆಗಳು ಉಕ್ತವಾಗುತ್ತವೆ' ಎಂದು.

ಶೌನಕಾದಿ ಮುನಿಗಳು ಸತ್ರಯಾಗ ಕೈಗೊಂಡಾಗ ಸೂತಪುರಾಣಿಕರು ಅಲ್ಲಿಗೆ ಬಂದರು. ಆಗ ಮುನಿಗಳು 'ಪುಂಸಾಮೇಕಾಂತತಃ ಶ್ರೇಯಃ' ಸಾಧಕರಿಗೆ ನಿಶ್ಚಿತವಾಗಿ ಶ್ರೇಯಃಸಾಧನ ಯಾವುದು ಹೇಳಿರಿ ಎಂದು ಕೇಳಿಕೊಳ್ಳುತ್ತಾರೆ. ಅದರಿಂದ ಸತ್ರಯಾಗ ಸಾಕ್ಷಾತ್ ಮೋಕ್ಷಸಾಧನವಲ್ಲ ಎನ್ನುವುದು ಸ್ಪಷ್ಟ. ಹೀಗೆ ಈ ಕಥೆಯಿಂದ ಕೇವಲ ಕರ್ಮ ಮಾಡಿ ಮೋಕ್ಷ ಸಂಪಾದಿಸಬಹುದೆನ್ನುವ ಶಂಕೆ ದೂರವಾತ್ತದೆ. ಅದಕ್ಕಾಗಿ ಕಥೆಯನ್ನು ಭಾಗವತ ಹೇಳಿದೆ. ಈ ಅಂಶ ಬೇರೆ ವ್ಯಾಖ್ಯಾನಕಾರರಿಗೆ ಯಾರಿಗೂ ಗೋಚರವಾಗದಿದ್ದುದು, ಆದರೆ ಪದ್ಮಪುರಾಣೋಕ್ತವಾದ್ದರಿಂದ ಪ್ರಾಮಾಣಿಕವಾಗಿದೆ.

★★★

ಶೌನಕರು ಸತ್ರಯಾಗದ ನಡುವೆ ಅಲ್ಲಿಗೆ ಆಗಮಿಸಿದ ಸೂತಪುರಾಣಿಕರಿಂದ ಭಾಗವತವನ್ನು ಕೇಳಬಯಸಿ ನೀವು ಬಾದರಾಯಣ ಸಂಪ್ರದಾಯಾಭಿಜ್ಞರೆಂದು ಪ್ರಶಂಸೆ ಮಾಡುತ್ತಾರೆ—

ಯಾನಿ ವೇದವಿದಾಂ ಶ್ರೇಷ್ಠೋ ಭಗವಾನ್ ಬಾದರಾಯಣಃ ।
ಅನ್ಯೇ ಚ ಮುನಯಃ ಸೂತ ಪರಾವರವಿದೋ ವಿದುಃ ॥ ೭ ॥

ವೇತ್ಥ ತ್ವಂ ಸೌಮ್ಯ ತತ್ ಸರ್ವಂ ತತ್ತ್ವತಸ್ತದನುಗ್ರಹಾತ್ ।
ಬ್ರೂಯುಃ ಸ್ನಿಗ್ಧಸ್ಯ ಶಿಷ್ಯಸ್ಯ ಗುರವೋ ಗುಹ್ಯಮಪ್ಯುತ ॥ ೮ ॥

ಭಗವಾನ್ ವೇದವ್ಯಾಸರೂ ಬೇರೆ ಮುನಿಗಳೂ ತಿಳಿದಿರುವ ಪ್ರಮೇಯಗಳನ್ನೇ ಪರಾಪರ ತತ್ತ್ವವೇತ್ತರಾದ ಬ್ರಹ್ಮಾದಿ ದೇವತೆಗಳೂ ಶುಕಾದಿ ಮುನಿಗಳೂ ವೇದವ್ಯಾಸರ ಅನುಗ್ರಹದಿಂದ ತಮ್ಮ ಯೋಗ್ಯತಾನುಸಾರ ತಿಳಿಯುತ್ತಾರೆ. ನೀವೂ ಅವರ ಅನುಗ್ರಹದಿಂದ ವೇದವನ್ನು ಹೊರತು ಬೇರೆ ಎಲ್ಲ ಶಾಸ್ತ್ರಗಳನ್ನು ಯಥಾರ್ಥವಾಗಿ ತಿಳಿದಿರುವಿರಿ. ಪ್ರೀತಿಯ ಶಿಷ್ಯನಿಗೆ ಗುರುಗಳು ಗೋಪ್ಯವಾದ ಪ್ರಮೇಯವನ್ನೂ ಹೇಳುತ್ತಾರೆ ತಾನೆ ?

ಶ್ಲೋಕದಲ್ಲಿ ಸೂತರು ಬಾದರಾಯರಣರು ತಿಳಿದಿರುವುದನ್ನೂ ಬೇರೆ ಮುನಿ

ಗಳು (ಗೌತಮ ಕಣಾದಾದಿ ದುಃಶಾಸ್ತ್ರಪ್ರವರ್ತಕರಲ್ಲ, ಶುಕ ವಾಮದೇವಾದಿ ಮುನಿಗಳು) ತಿಳಿದುದನ್ನೂ ತಿಳಿದಿದ್ದಾರೆ, ಎಂದರೆ, ಬಾದರಾಯಣರು ತಿಳಿಯದಿರುವುದನ್ನು ಬೇರೆ ಮುನಿಗಳು ತಿಳಿದಿದ್ದಾರೆ, ಅದನ್ನು ಸೂತರು ತಿಳಿದಿದ್ದಾರೆ ಎನ್ನುತ್ತಿರುವುದರಿಂದ ಬಾದರಾಯಣರು ಎಲ್ಲವನ್ನೂ ತಿಳಿದಿಲ್ಲ, ಸೂತರು ಬಾದರಾಯಣರನ್ನೂ ಮೀರಿಸಿದ್ದಾರೆ ಎಂದಂತಾಗುವುದು. ಶುಕದೇವ ವ್ಯಾಖ್ಯಾನ ದಲ್ಲಿ ಶ್ಲೋಕಕ್ಕೆ ಅನ್ವಯಾರ್ಥ ಹಾಗೇ ಹೇಳಿದೆ.[೧] ಆದರಿಂದ ಅನ್ವಯಾರ್ಥ ಹೀಗೆ ಹೇಳಬೇಕು—

ಯಾನಿ ಭಗವಜ್ಜ್ಞಾತಾನಿ ಅನ್ಯೈರಪ್ಯೃಷಿಭಿರ್ಜ್ಞಾಯಂತೇ, ತಾನಿ ವೇತ್ಥ ।
ಉಕ್ತಂ ಹಿ ಬ್ರಹ್ಮಾಂಡೇ—

ದ್ವೈಪಾಯನೇನ ಯದ್‌ಬುದ್ಧಂ ಬ್ರಹ್ಮಾದ್ಯೈಸ್ತನ್ನ ಬುಧ್ಯತೇ ।
ಸರ್ವಬುದ್ಧಂ ಸ ವೈ ವೇದ ತದ್ಬುದ್ಧಂ ನಾನ್ಯಗೋಚರಂ । ಇತಿ ॥

ಭಗವಾನ್ ವ್ಯಾಸರಿಗೆ ತಿಳಿದ ಯಾವ ಪ್ರಮೇಯಗಳು ಯಥಾಶಕ್ತಿ ಬೇರೆ ಮುನಿಗಳಿಗೂ ತಿಳಿದಿವೆಯೋ ಅವುಗಳನ್ನು ಸೂತರು ತಿಳಿದಿದ್ದಾರೆ ಎಂದು ಅನ್ವಯಾರ್ಥ ಹೇಳಬೇಕು. ಏಕೆಂದರೆ ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ— ವೇದವ್ಯಾಸರು ತಿಳಿದುದುದೆಲ್ಲ ಬ್ರಹ್ಮಾದಿಗಳಿಗೆ ತಿಳಿದಿಲ್ಲ, ಎಲ್ಲರೂ ತಿಳಿದಿರುವುದನ್ನೆಲ್ಲ ವೇದವ್ಯಾಸರೊಬ್ಬರೆ ತಿಳಿದಿದ್ದಾರೆ. ಅವರು ತಿಳಿದುದೆಲ್ಲವೂ ಇನ್ನೊಬ್ಬರಿಗೆ ತಿಳಿದಿಲ್ಲ ಎಂದು.

★★★

ಶೌನಕರು ಸೂತರಲ್ಲಿ ಕೇಳಿಕೊಳ್ಳುತ್ತಾರೆ, 'ನಮಗೆ ಶ್ರೀಕೃಷ್ಣನ ಚರಿತ್ರೆಯನ್ನು ಹೇಳಿರಿ. ಅವನ ನಾಮೋಚ್ಚಾರಣೆಯಿಂದಲೆ ಮುಕ್ತಿ ಲಭ್ಯವಿರುವಾಗ ಚರಿತ್ರಶ್ರವಣದ ಮಹಿಮೆಯನ್ನು ಏನು ಹೇಳಲಿ' ಎಂದು—

ಆಪನ್ನಃ ಸಂಸೃತಿಂ ಘೋರಾಂ ಯನ್ನಾಮ ವಿವಶೋ ಗೃಣನ್ ।
ತತಃ ಸದ್ಯೋ ವಿಮುಚ್ಯೇತ ಯಂ ಬಿಭೇತಿ ಸ್ವಯಂ ಭವಃ ॥ ೧೪ ॥

ಯಾರಿಗೆ ಸಂಸಾರ ಭಯಪಡುವುದೋ ಯಾರ ನಾಮವನ್ನು ಭಕ್ತಿಪರವಶನಾಗಿ ಉಚ್ಚರಿಸುವವನು ಘೋರ ಸಂಸಾರದಲ್ಲಿ ಬಳಲುತ್ತಿದ್ದರೂ ಬೇಗನೆ ಮುಕ್ತಿ

---

೧. ವೇದವಿದಾಂ ಮಧ್ಯೇ ಶ್ರೇಷ್ಠೋ ಬಾದರಾಯಣೋ ಯಾನಿ ವೇದ ಪರಾವರವಿದೋಽನ್ಯೇ ಚ ಯಾನಿ ವಿದುಃ ತಾನಿ ತ್ವಯಾ ಆಖ್ಯಾತಾನ್ಯಪ್ಯಧೀತಾನೀತಿ ಪೂರ್ವೇಣಾನ್ವಯಃ । -ಶುಕದೇವಃ

ಹೊಂದುವನೋ ಆ ಶ್ರೀಕೃಷ್ಣನ ಚರಿತ್ರಶ್ರವಣ ಮೋಕ್ಷದಾಯಕವೆಂದು ಬೇರೇನು ಹೇಳಬೇಕು?

ಇಲ್ಲಿ 'ವಿವಶಃ ಗೃಣನ್' ಪರವಶತೆಯಿಂದ ನಾಮೋಚ್ಚಾರಣ ಮಾಡಿದರೆ ಸಾಕು ಮುಕ್ತಿ ಕರಗತವಾಗುವುದು ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನ ಕಾರರು ಹೇಳಿದ್ದಾರೆ. ವೀರರಾಘವ ವ್ಯಾಖ್ಯಾನದಲ್ಲಿ 'ಶತ್ರುರಪಿ' ವಿಷ್ಣುದ್ವೇಷಿಯೂ ಕೂಡ— 'ದೇಹಾವಸಾನ ಇತಿಶೇಷಃ' ಮರಣಕಾಲದಲ್ಲಿ ಎಂದು ಸೇರಿಸಿಕೊಳ್ಳ ಬೇಕು—ಪರವಶನಾಗಿ ನಾಮೋಚ್ಚಾರಣೆ ಮಾಡಿದರೆ, ಭಕ್ತಿ ಯೋಗಾನುಷ್ಠಾನ ವಿಲ್ಲದೆಯೆ, ತತ್ಕ್ಷಣವೆ ಮುಕ್ತಿ ಎನ್ನುವುದು ಅಜಾಮಿಳೋಪಾಖ್ಯಾನದಲ್ಲಿ ಕಂಡಿದೆ ಎಂದಿದೆ.[೧] ಇದು ಅಸಂಭಾವಿತ. ಆದರಿಂದ ಹೀಗೆ ಹೇಳಬೇಕು—

ವಿವಶಃ ಬಹ್ವಭ್ಯಾಸಾತ್ । ಉಕ್ತಂ ಚ ಬ್ರಹ್ಮವೈವರ್ತೇ-
ಶಾರೀರಾದ್ ವಾಚಿಕಾಭ್ಯಾಸೋ ವಾಚಿಕಾನ್ಮಾನಸೋ ಭವೇತ್ ।
ಮಾನಸಾದ್ ವಿವಶಾನ್ಮುಚ್ಯೇನ್ನಾನ್ಯಥಾ ಮುಕ್ತಿರಿಷ್ಯತೇ । ಇತಿ ॥

ನಿರಂತರ ಹರಿಸ್ಮರಣರೂಪವಾದ ಮಾನಸವಾದ ಬಹು ಅಭ್ಯಾಸ ಬಲದಿಂದ ಶರೀರ ಮುಂತಾದ ಬಾಹ್ಯ ವಿಷಯಗಳ ಆಕರ್ಷಣೆಗೆ ಒಳಗಾಗದಿರುವವನು 'ವಿ-ವಶ' ಎನಿಸುತ್ತಾನೆ. ಇಂಥ ವಿವಶನಿಗೇ ಮುಕ್ತಿ ಲಭ್ಯ. ಬ್ರಹ್ಮವೈವರ್ತಪುರಾಣದಲ್ಲಿ ಹಾಗೇ ಹೇಳಿದೆ— 'ವಿಷ್ಣು ವೈಷ್ಣವ ಸೇವಾರೂಪವಾದ ಶಾರೀರಕ ಅಭ್ಯಾಸದಿಂದ ಅಧ್ಯಯನ ಪ್ರವಚನರೂಪವಾದ ವಾಚಿಕಾಭ್ಯಾಸ ಕೈಗೂಡುತ್ತದೆ. ಆದರಿಂದ ನಿರಂತರ ಹರಿಸ್ಮರಣ ರೂಪವಾದ ಮಾನಸ ಅಭ್ಯಾಸ ಸಿದ್ಧಿಸುತ್ತದೆ. ಆದರಿಂದ ವಿಷಯಾಸಕ್ತಿರಹಿತನಾಗಿ ಮುಕ್ತಿ ಹೊಂದುತ್ತಾನೆ.'

★★★

ಶೌನಕಾದಿ ಮುನಿಗಳು ಸೂತರಲ್ಲಿ ಕೇಳಿಕೊಳ್ಳುತ್ತಾರೆ 'ಶ್ರೀಹರಿ ಸ್ವೇಚ್ಛೆಯಿಂದ ನಡೆಸುವ ಅವತಾರಲೀಲೆಗಳನ್ನು ನಮಗೆ ವರ್ಣಿಸಿರಿ' ಎಂದು—

---

೧. ಶತ್ರುರಪಿ ವಿವಶಃ ಪಾರವಶ್ಯೇನಾಪೀತ್ಯರ್ಥಃ । ನಾಮ ಗೃಣನ್ ಉಚ್ಚೈಃ । ದೇಹಾವಸಾನ ಇತಿಶೇಷಃ । ತತಃ ಸಂಸೃತೇಃ ಸದ್ಯ ಏವ ವಿಮುಚ್ಯೇತ । ದೇಹಾವಸಾನ ಕಾಲಿಕ ಭಗವನ್ನಾಮೋಚ್ಚಾರಣಸ್ಯಾವ್ಯವಧಾನೇನ ಮುಕ್ತಿಸಾಧನತ್ವಂ । ಇತರ ಕಾಲಿಕಸ್ಯ ತು ಕರ್ಮಜ್ಞಾನಯೋಗಾದಿವತ್ ಭಕ್ತಿಯೋಗಾನುಗ್ರಾಹಕತ್ವೇನ ತದ್‌ದ್ವಾರೇತಿ ವಿವೇಕಃ । ಏತಚ್ಚ ಷಷ್ಠೇಽಜಾಮಿಲೋಪಾಖ್ಯಾನೇ ಪ್ರಪಂಚಯಿಷ್ಯತೇ ।

-ವೀರರಾಘವಃ

ಅಥಾಖ್ಯಾಹಿ ಹರೇರ್ಧೀಮನ್ ಅವತಾರಕಥಾಃ ಶುಭಾಃ ।
ಲೀಲಾ ವಿದಧತಃ ಸ್ವೈರಮೀಶ್ವರಸ್ಯಾತ್ಮಮಾಯಯಾ ॥ ೧೮ ॥

ಸ್ವರೂಪಭೂತ ಇಚ್ಛೆಯಿಂದಲೆ ಯಥೇಷ್ಟವಾಗಿ ಲೀಲೆಗಳನ್ನು ನಡೆಸುವ ಹರಿಯ ಮಂಗಳಕರವಾದ ಅವತಾರಕಥೆಗಳನ್ನು ಹೇಳಿರಿ.

ಇಲ್ಲಿ 'ಸ್ವೈರಂ' ಎಂದರೆ ಯಥೇಚ್ಛವಾಗಿ ಲೀಲೆಗಳನ್ನು ನಡೆಸುತ್ತಾನೆ ಎಂದಿದೆ. ಆದರೆ ಭಗವಂತನಿಗೆ ನಮ್ಮಂತೆ ಜಡವಾದ ಶರೀರ ಇಂದ್ರಿಯ ಅಂತಃಕರಣಗಳಿಲ್ಲ. ಜಡ ಅಂತಃಕರಣವಿಲ್ಲದಿರುವಾಗ ಅದರ ಪರಿಣಾಮರೂಪವಾದ ಇಚ್ಛೆ ಇರಲು ಶಕ್ಯವಿಲ್ಲ. ಯಥೇಚ್ಛವಿಹಾರ ಹೇಗೆ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ 'ಆತ್ಮಮಾಯಯಾ' ಸ್ವರೂಪಭೂತವಾದ ಇಚ್ಛೆಯಿಂದ ಲೀಲೆಗಳು ನಡೆಯುತ್ತವೆ ಎಂದು ಸಮಾಧಾನ. ಭಗವಂತನಿಗೆ ಜಡ ಅಂತಃಕರಣವಿಲ್ಲದಿದ್ದರೂ ವಿಶೇಷ ಬಲದಿಂದ ಸ್ವರೂಪಭೂತವಾದ ಅಂತಃಕರಣವಿದೆ. ಅದರಲ್ಲಿ ಸ್ವರೂಪಭೂತವಾದ ಇಚ್ಛೆ ವ್ಯಕ್ತವಾಗುತ್ತದೆ. ಅದರಿಂದ ಲೀಲೆಗಳು ನಡೆಯುತ್ತವೆ.

ಬೇರೆ ವ್ಯಾಖ್ಯಾನಕಾರರು ಈ ಪ್ರಶ್ನೆಯನ್ನು ಮಾಡಿಕೊಂಡಿಲ್ಲ. ಆತ್ಮಮಾಯೆ ಎಂದರೆ ತನ್ನ ಮಾಯೆ, ಮಾಯೆ ಎಂದರೆ ಆಶ್ಚರ್ಯಕರವಾದ ಸಾಮರ್ಥ್ಯವೆಂದು ಕೆಲವರು, ಯೋಗಸಾಮರ್ಥ್ಯ ಎಂದು ಕೆಲವರು ಹೇಳುತ್ತಾರೆ. ಇಲ್ಲಿ ಆತ್ಮ ಎಂಬ ಶಬ್ದವ್ಯರ್ಥ. ತಾತ್ಪರ್ಯಕಾರರ ಪ್ರಕಾರ ಆತ್ಮಶಬ್ದವೆ 'ಸ್ವರೂಪಭೂತ' ಎಂಬ ಅರ್ಥದಲ್ಲಿದ್ದು ಮುಖ್ಯವಾಗುತ್ತದೆ. ವೀರರಾಘವ ವ್ಯಾಖ್ಯಾನದಲ್ಲಿ ಮಾಯಾ ಎಂದರೆ ಜ್ಞಾನ. ಜ್ಞಾನದಿಂದ ಲೀಲೆ ಹೇಗೆ? ಇಚ್ಛೆಯಿಂದ ಲೀಲೆ ಎನ್ನಬೇಕು ತಾನೆ? ಎಂದರೆ ಧರ್ಮಭೂತಜ್ಞಾನದ ಪರಿಣಾಮ ರೂಪವಾದ ಇಚ್ಛೆ ಎಂದು ಅರ್ಥಗ್ರಹಿಸಬೇಕು. ಅದರಿಂದ ಸಂಕಲ್ಪರೂಪವಾದ ಜ್ಞಾನ ಎಂದರ್ಥವೆಂದು ಬಹಳ ಕ್ಲೇಶದಿಂದ ವ್ಯಾಖ್ಯಾನ ಮಾಡಲಾಗಿದೆ. ಹಾಗಿದ್ದರೂ ಆತ್ಮಶಬ್ದಕ್ಕೆ ಸಾರ್ಥಕ್ಯವನ್ನು ತೋರಿಸಲಿಲ್ಲ.[೧] ಅದರಿಂದ ತಾತ್ಪರ್ಯಕಾರರ ಈ ವ್ಯಾಖ್ಯಾನವೆ ಸಮಂಜಸ—

---

೧. ಆತ್ಮಮಾಯಯಾ ಯೋಗಮಾಯಯಾ । -ವಿಶ್ವನಾಥಃ

ಸರ್ವಭವನ ಸಾಮರ್ಥ್ಯಂ ಮಾಯಾ । -ವಲ್ಲಭಃ

ಮಾಯಯಾ ಅಚಿಂತ್ಯಶಕ್ತಿರೂಪಯಾ । -ಗಿರಿಧರಃ

ಆತ್ಮಮಾಯಯಾ ಆತ್ಮನಃ ಸ್ವಸ್ಯ ಮಾಯಯಾ ಆಶ್ಚರ್ಯಶಕ್ತಿ ಯುಕ್ತೇನ । ಆಶ್ಚರ್ಯತ್ವಂ ಮಾಯಾ ಶಬ್ದ ಪ್ರವೃತ್ತಿ ನಿಮಿತ್ತಂ । ಸಂಕಲ್ಪರೂಪ ಜ್ಞಾನೇನ ವಾ। ಮಾಯಯಾ ಸತತಂ ವೇತ್ತಿ ಪ್ರಾಣಿನಾಂ ಚ ಶುಭಾಶುಭಂ ಇತಿ ಜ್ಞಾನೇಽಭಿಯುಕ್ತಪ್ರಯೋಗಃ ।

-ವೀರರಾಘವಃ

ಆತ್ಮಮಾಯಯಾ ಸ್ವರೂಪಭೂತೇಚ್ಛಯಾ ।
ಮಹಾಮಾಯೇತ್ಯವಿದ್ಯೇತಿ ನಿಯತಿರ್ಮೋಹಿನೀತಿ ಚ ।
ಪ್ರಕೃತಿರ್ವಾಸನೇತ್ಯೇವ ತವೇಚ್ಛಾಽನಂತ ಕಥ್ಯತೇ ॥
ಇತಿ ಸ್ಕಾಂದೇ । ವಿಷ್ಣು ಸಂಹಿತಾಯಾಂ ಚ—

ಇಚ್ಛಾಶಕ್ತಿ ರ್ಜ್ಞಾನಶಕ್ತಿಃ ಕ್ರಿಯಾಶಕ್ತಿರಿತಿ ತ್ರಿಧಾ ।
ಶಕ್ತಿಶಕ್ತಿಮತೋಶ್ಚಾಪಿ ನ ಭೇದಃ ಕಶ್ಚನೇಷ್ಯತೇ । ಇತಿ ॥

ಆತ್ಮಮಾಯಯಾ ಎಂದರೆ ಸ್ವರೂಪಭೂತವಾದ ಇಚ್ಛೆಯಿಂದ ಎಂದರ್ಥ. ಸ್ಕಂದಪುರಾಣದಲ್ಲಿ ಮಹಾಮಾಯೆ ಎಂದರೆ ಇಚ್ಛೆ ಎಂದು ಹೇಳಿದೆ. ಮತ್ತು 'ಮಾಯಾಂ ತು ಪ್ರಕೃತಿಂ ವಿದ್ಯಾತ್' ಎಂಬಂತೆ ಮಾಯಾಶಬ್ದ ಸಮಾನಾರ್ಥಕವಾದ ಪ್ರಕೃತಿಶಬ್ದಕ್ಕೆ ಅದೇ ಸ್ಕಾಂದಪುರಾಣ ವಚನ ಇಚ್ಛೆ ಎಂದು ಅರ್ಥ ಹೇಳಿದೆ—'ಶ್ರೀಹರಿ, ಮಹಾಮಾಯೆ ಎಂದೂ ಅವಿದ್ಯೆ ಎಂದೂ, ನಿಯತಿ ಎಂದೂ ಮೋಹಿನೀ ಎಂದೂ ಪ್ರಕೃತಿ ಎಂದೂ ವಾಸನಾ ಎಂದೂ ನಿನ್ನ ಇಚ್ಛೆಯೆ ಬೇರೆ ಬೇರೆ ಹೆಸರುಗಳಿಂದ ಕರೆಸಿಕೊಳ್ಳುತ್ತದೆ' ಎಂದು. ಮತ್ತು ಮಾಯೆ ಎನಿಸಿದ ಇಚ್ಛೆ ಭಗವಂತನ ಸ್ವರೂಪಭೂತವೆಂದೂ ವಿಷ್ಣುಸಂಹಿತೆಯಲ್ಲಿ ಹೇಳಿದೆ— ಭಗವಂತನ ಶಕ್ತಿಯು ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿಗಳೆಂದು ಮೂರು ಬಗೆಯಾಗಿದೆ. ಈ ಶಕ್ತಿಗಳಿಗೂ ಶಕ್ತಿಉಳ್ಳ ಭಗವಂತನಿಗೂ ಸ್ವಲ್ಪವೂ ಭೇದವಿಲ್ಲ' ಎಂದು.

ಇತಿ ಪ್ರಥಮಸ್ಕಂಧೇ ಪ್ರಥಮೋಽಧ್ಯಾಯಃ

ಎರಡನೆಯ ಅಧ್ಯಾಯ

ಅಧ್ಯಾಯ ಸಾರಾಂಶ

ಸೂತರು ಮೊದಲಿಗೆ ತಮ್ಮ ಗುರುಗಳಾದ ಶುಕಮುನಿಗಳನ್ನು ವಂದಿಸುತ್ತಾರೆ. ತಮ್ಮ ತಂದೆಯಾದ ಭಗವಾನ್ ವೇದವ್ಯಾಸರಿಗೆ ಶುಕಮುನಿ ಎಷ್ಟು ಪ್ರೀತಿಪಾತ್ರರೆಂದರೆ ಅವರು ವಿರಕ್ತಿಯಿಂದ ಸನ್ಯಾಸಿಗಳಾಗಿ ಹೊರಟಾಗ ಮಗೂ ಎಂದು ವೇದವ್ಯಾಸರು ಕಾತರತೆಯಿಂದ ಕೂಗಿದಂತೆ ತೋರಿಕೊಂಡರು. ಆಗ ಸುತ್ತಲಿದ್ದ ಗಿಡಮರಗಳೂ ಶುಕಮುನಿಗಳ ಪರವಾಗಿ ಪ್ರತಿಧ್ವನಿ ಮಾಡಿದುವು. ಅಂಥ ಶುಕಮುನಿಗಳು ಪುರಾಣಪ್ರವಚನದ ಮೂಲಕ ಸಜ್ಜನರಿಗೆ ವೇದವೇದ್ಯನಾದ ಭಗವಂತನ ತತ್ವಜ್ಞಾನವನ್ನು ನೀಡಿ ಮೋಕ್ಷಮಾರ್ಗವನ್ನು ತೋರಿದರು. ಇಂಥ ಶುಕಮುನಿಗಳನ್ನು ನಮಿಸಿ ಭಾಗವತಕ್ಕೆ ಎರಡು ರೂಪಗಳಿಂದ ಕರ್ತನೂ, ಪ್ರತಿಪಾದ್ಯನೂ ಆಗಿರುವ

ಭಗವಂತನನ್ನೂ ಭಾಗ್ಯಾತ್ಮಕಳಾದ ಲಕ್ಷ್ಮೀದೇವಿಯನ್ನೂ ವಾಯು ಭಾರತಿಯರನ್ನೂ ಶೇಷನನ್ನೂ ನಮಿಸಿ ಶೌನಕಾದಿ ಮುನಿಗಳನ್ನು ಸೂತರು ಪ್ರಶಂಸಿಸುತ್ತಾರೆ. ಯಾಗಾದಿಕರ್ಮಗಳ ಸಾರ್ಥಕ್ಯವಿರುವುದು ಅವು ಹರಿಭಕ್ತಿ ಉಂಟುಮಾಡಿ ವಿಷಯ ವೈರಾಗ್ಯ ತತ್ವಜ್ಞಾನಗಳಿಗೆ ಕಾರಣವಾದಾಗ ಮಾತ್ರ ಎಂದು ನೀವು ತಿಳಿದಿರುವಿರಿ. ಭಗವಂತನ ಬಗ್ಗೆ ಶ್ರವಣ ಕೀರ್ತನ ಧ್ಯಾನಗಳನ್ನು ಮಾಡುತ್ತಲೆ ಧರ್ಮಾಚರಣೆ ಮಾಡಬೇಕು. ಹಾಗೆ ಮಾಡಿದರೆ ಶ್ರವಣ ಮಾಡುವವರ ಹೃದಯದಲ್ಲಿ ಕೃಷ್ಣ ಬಂದು ನೆಲೆಸಿ ಮೈದೋರಿ ಅವಿದ್ಯೆಯನ್ನು ದೂರಮಾಡುತ್ತಾನೆ. ಅದಕ್ಕಾಗಿ ಮುಮುಕ್ಷುಗಳು ತಮ್ಮಲ್ಲಿ ಸತ್ವಗುಣವನ್ನು ಬೆಳೆಸಿಕೊಳ್ಳಬೇಕು. ಸತ್ವಗುಣಕ್ಕೇ ಭಗವಂತ ಒಲಿಯುತ್ತಾನೆ. ಸತ್ವಗುಣದಿಂದ ಲೋಕವನ್ನು ಪಾಲಿಸುವುದಕ್ಕಾಗಿ ಅವನು ಅನೇಕ ಅವತಾರಗಳನ್ನೆತ್ತುತ್ತಾನೆ.

★★★

ಸೂತರು ಶೌನಕಾದಿಗಳಿಗೆ ಭಾಗವತವನ್ನು ಹೇಳುವುದಕ್ಕೆ ಮೊದಲು ಗುರುಗಳಾದ ಶುಕಮುನಿಯನ್ನು ನಮಿಸುತ್ತಾರೆ—

ಯಂ ಪ್ರವ್ರಜಂತಮನುಪೇತಮಪೇತಕೃತ್ಯಂ
ದ್ವೈಪಾಯನೋ ವಿರಹಕಾತರ ಆಜುಹಾವ ।
ಪುತ್ರೇತಿ ತನ್ಮಯತಯಾ ತರವೋಽಪಿ ನೇದು-
ಸ್ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥ ೨ ॥

ದೇಹಾಭಿಮಾನ ತೊರೆದಿದ್ದ ಶುಕಮುನಿ ಗೃಹಸ್ಥಧರ್ಮವನ್ನು ತೊರೆದು ಸನ್ಯಾಸಿಯಾಗಿ ಹೊರಟಾಗ ವೇದವ್ಯಾಸರು ಪುತ್ರವಿಯೋಗದಿಂದ ಕಾತರರಂತೆ ತೋರಿಕೊಂಡು ಮಗುಽಽಽ ಎಂದು ಕರೆದರು. ಆಗ ಅಹಂಕಾರಾಭಿಮಾನಿ ಶಿವನ ಅವತಾರರಾದ ಶುಕಮುನಿ ಎಲ್ಲ ಸ್ಥಾವರ ಜಂಗಮಗಳ ಮನಸ್ಸಿನಲ್ಲಿದ್ದುದರಿಂದ ಮರಗಳೂ ಪ್ರತ್ಯುತ್ತರ ನೀಡಿದುವು. ಅಂಥಹ ಎಲ್ಲ ಜೀವಿಗಳ ಹೃದಯಗಳಲ್ಲಿ ನೆಲೆಸಿರುವ ಶುಕಮುನಿಯನ್ನು ನಮಿಸುತ್ತೇನೆ.

ಇಲ್ಲಿ 'ಅನುಪೇತಂ' ಎಂದರೆ ಉಪನಯನವಾಗದಿರುವವನು ಎಂದು ಶ್ರೀಧರ ವ್ಯಾಖ್ಯಾನ. ಅನುಪನೀತರಿಗೆ ಸನ್ಯಾಸಾಧಿಕಾರವಿಲ್ಲ. ಹೇಗೆ ಸನ್ಯಾಸಿಗಳಾದರು ಶುಕಮುನಿಗಳು ಎಂದು ಆಕ್ಷೇಪಕ್ಕೆ ಅವಕಾಶವಿರುವುದರಿಂದ ಈ ವ್ಯಾಖ್ಯಾನ ಸರಿಯಲ್ಲ. ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿ ಪೂರ್ವಜನ್ಮದಲ್ಲಿ ಉಪನಯನ ವಾಗಿತ್ತೆಂದು ಸಮಾಧಾನ. ಆದರೆ ಷೋಡಶಸಂಸ್ಕಾರಗಳು ಆಯಾ ಜನ್ಮಕ್ಕೇ ಸಂಬಂಧಿಸಿದವು.

ಭಗವಂತನ ಧ್ಯಾನಪರರಾದ ಶುಕಮುನಿಗೆ ಬೇರೆ ಕರ್ತವ್ಯವೆ ಇಲ್ಲ, ಅಪೇತಕೃತ್ಯರು ಅದರಿಂದ ಉಪನಯನ ಬೇಡ ಎಂದು ಗಿರಿಧರ ವ್ಯಾಖ್ಯಾನ. ಹಾಗಿದ್ದರೆ ಸನ್ಯಾಸವೂ ಬೇಡ ಎನ್ನಬೇಕಾಗುತ್ತದೆ. ಈ ಸಮಸ್ಯೆಗಳನ್ನು ಆಲೋಚಿಸಿ ಶ್ರೀಧರವ್ಯಾಖ್ಯಾನದಲ್ಲಿ ಅನುಪೇತಂ ಎಂದರೆ ಜೊತೆಗೆ ಯಾರೂ ಇರಲಿಲ್ಲ, ಏಕಾಕಿ ಎಂದೂ ಹೇಳಿದೆ. ಆದರೆ ಸನ್ಯಾಸಿಗಳು ಏಕಾಕಿಯಾಗಿರುವುದಿಲ್ಲ. ದುರ್ವಾಸರಿಗೆ ಸಾವಿರಾರು ಶಿಷ್ಯರು ಜೊತೆಯಲ್ಲಿರುತ್ತಿದ್ದರು. ಅದರಿಂದ 'ಅನುಪೇತಂ' ಎಂದರೆ ದೇಹಾಭಿಮಾನ ರಹಿತರಾದ್ದರಿಂದ 'ಪ್ರವ್ರಜಂತಂ' ಸನ್ಯಾಸಿಗಳಾದರು ಎಂದು ಹೇಳಬೇಕು. ಅವರಿಗೆ ಉಪನಯನವಾಗಿತ್ತೆಂದು ಮಹಾಭಾರತ ಶಾಂತಿಪರ್ವ (ಅ.೩೨೪)ದಲ್ಲಿ ಹೇಳಿದೆ. ಶಿವ ಪಾರ್ವತಿಯರು ಉಪನಯನ ಮಾಡಿದರು. ಬೃಹಸ್ಪತ್ಯಾಚಾರ್ಯರು ವೇದಾಧ್ಯಯನ ಮಾಡಿಸಿದರೆಂದು ಅಲ್ಲಿ ಹೇಳಿದೆ. ಮುಂದೆ ಭಾರತ ಭಾಗವತಾದಿಗಳ ಅಧ್ಯಯನ ತಂದೆಯಾದ ವೇದವ್ಯಾಸರಲ್ಲಿ. ಬಳಿಕ ಪರೀಕ್ಷಿತನಿಗೆ ಭಾಗವತ ಹೇಳಲು ಬಂದಾಗ ಅವರಿನ್ನೂ ಹದಿನಾರು ವಯಸ್ಸಿನ ತರುಣರು. ಇದು ಯೋಗಾಭ್ಯಾಸದ ಬಲ ಎನ್ನಬೇಕು.

ಸರ್ವವ್ಯಾಪಿ ನಿರ್ದುಃಖರಾದ ವೇದವ್ಯಾಸರು 'ವಿರಹಕಾತರ'ರಾದರು ಎಂದರೆ ಹೇಗೆ? ಸಾಕ್ಷಾದ್ ಭಗವದವತಾರಕ್ಕೆ ಯಾರಿಂದಲಾದರೂ ವಿರಹ ಉಂಟೆ? ಕಾತರತೆ ಉಂಟೆ? ಬೇರೆ ವ್ಯಾಖ್ಯಾನಕಾರರೆಲ್ಲರೂ ಉಂಟೆನ್ನುತ್ತಾರೆ. ನಾರದರ ಉಪದೇಶದಿಂದ ಕಾತರತೆ ಪರಿಹಾರವಾಯಿತೆನ್ನುತ್ತದೆ ವಲ್ಲಭಾಚಾರ್ಯರ ವ್ಯಾಖ್ಯಾನ. ವ್ಯಾಸರಿಗಿಂತ ಹೆಚ್ಚು ಜ್ಞಾನಿ ಶುಕಮುನಿಯಾಗಿದ್ದನೆನ್ನುತ್ತದೆ ವೀರರಾಘವ ವ್ಯಾಖ್ಯಾನ. ಉಪನಿಷತ್ತಿನ ರಹಸ್ಯವನ್ನು ನಿರ್ಣಯಿಸುವ ವೇದಾಂತ ಸೂತ್ರ ರಚಿಸಿದ ವ್ಯಾಸರಿಗೂ ಅಂತಃಕರಣ ಶುದ್ಧವಾಗಿರಲಿಲ್ಲ, ಪ್ರಸನ್ನವಾಗಿರಲಿಲ್ಲ, ಪ್ರಸನ್ನಗೊಳಿಸಲು ಭಾಗವತವನ್ನು ನಾರದರು ಉಪದೇಶಿಸಬೇಕಾಯಿತು ಎನ್ನುತ್ತದೆ ವಿಶ್ವನಾಥ ವ್ಯಾಖ್ಯಾನ. ವ್ಯಾಸರು 'ಮಗು!' ಎಂದು ಕರೆದರೆ ಮರಗಳು ವ್ಯಾಸರನ್ನು 'ಮಗು' ಎಂದು ಕರೆದುವು. ಏಕೆಂದರೆ ಆಗ ಯೋಗಬಲದಿಂದ ಶುಕಮುನಿ ಮರಗಳ ಹೃದಯದಲ್ಲಿದ್ದರು. ಶುಕಮುನಿ ತಾನೇ ಹಿಂತಿರುಗಿ ಉತ್ತರಕೊಟ್ಟರೆ ತಂದೆ ಮಕ್ಕಳ ಬಾಂಧವ್ಯಮೋಹ ತಿರುಗಿ ಹುಟ್ಟೀತು ಎಂದು ಶುಕರೂಪದಿಂದ ಮರಗಳು ಹೇಳುತ್ತವೆ— 'ನಾ ನಿನ್ನ ಮಗನಾದರೆ ನೀನೂ ನನ್ನ ಮಗನೆ. ಏಕೆಂದರೆ ತಂದೆ-ಮಗ ಎಂಬ ಸಂಬಂಧ ಬರಿ ಮೋಹ. ನಿನಗೇಕೆ ಇಂಥ ಮೋಹ?' ಎಂದು. ಇದೆಲ್ಲವೂ 'ವ್ಯಾಸಃ ಕಶ್ಚನ ಋಷಿಃ' ಎಂಬ ಕಲುಷಿತ ಭಾವನೆಯಿಂದ ಹೊರಟ ಅಪವ್ಯಾಖ್ಯಾನ. 'ಸರ್ವಭೂತಹೃದಯಂ' ಎಂದರೆ ಯೋಗಬಲದಿಂದ ಎಲ್ಲರ ಹೃದಯವನ್ನು ಪ್ರವೇಶಿಸುವ ಶುಕಮುನಿಗಳೆಂದೂ ಇವರ ವ್ಯಾಖ್ಯಾನವಿದೆ. ಅದರಿಂದ ತಾತ್ಪರ್ಯಕಾರರು ಹೇಳುತ್ತಾರೆ—

ಅನುಪೇತಂ ದೇಹಾದಿಭಿಃ । ಅನಭಿಮಾನಾತ್ । ಅಕಾತರಃ ಕಾತರವದದರ್ಶಯತ್ । ಉಕ್ತಂ ಚ ಸ್ಕಾಂದೇ—

ನಿತ್ಯತೃಪ್ತಃ ಪರಾನಂದೋ ಯೋಽವ್ಯಯಃ ಪರಮೇಶ್ವರಃ ।
ಯಸ್ಯ ಪುತ್ರಫಲಂ ನೈವ ಯಜ್ಜಾತಂ ಜಗದೀದೃಶಂ ।
ಯದಧೀನಶ್ರಿಯೋಽಪಾಂಗಾದ್ ಬ್ರಹ್ಮರುದ್ರಾದಿ ಸಂಸ್ಥಿತಿಃ ।
ಸ ಪುತ್ರಾರ್ಥಂ ತಪಸ್ತೇಪೇ ವ್ಯಾಸೋ ರುದ್ರಸ್ಯ ಚೇಶ್ವರಃ ।
ಕಾತರ್ಯಂ ದರ್ಶಯಾಮಾಸ ವಿಯೋಗೇ ಲೌಕಿಕಂ ಹರಿಃ ।
ಕುತಃ ಕಾತರತಾ ತಸ್ಯ ನಿತ್ಯಾನಂದ ಮಹೋದಧೇಃ । ಇತಿ ॥
ಈಶನ್ನಪಿ ಹಿ ಲೋಕಸ್ಯ ಸರ್ವಸ್ಯ ಜಗತೋ ಹರಿಃ ।
ಕರ್ಮಾಣಿ ಕುರುತೇ ವಿಷ್ಣುಃ ಕೀನಾಶ ಇವ ದುರ್ಬಲಃ ।

ಇತಿ ಚೋದ್ಯೋಗೇ ।

ದೇವತ್ವೇ ದೇವಷಚ್ಚೇಷ್ಟಾ ಮಾನುಷತ್ವೇ ಚ ಮಾನುಷೀ ।

ಇತಿ ವಿಷ್ಣುಧರ್ಮೇ । ಸರ್ವಭೂತ ಹೃದಯಂ ಅಹಂಕಾರಾತ್ಮಕತ್ವಾತ್ ।

ಅಹಂಕಾರಾತ್ಮಕೋ ರುದ್ರಃ ಶುಕೋ ದ್ವೈಪಾಯನಾತ್ಮಜಃ ।

ಇತಿ ಸ್ಕಾಂದೇ।

ಶುಕಮುನಿ ದೇಹಾದಿರಹಿತರು. ದೇಹಾದಿಗಳಿದ್ದರೂ ಅವುಗಳಲ್ಲಿ ಅಭಿಮಾನ ರಹಿತರಾದ್ದರಿಂದ ಹಾಗೆ ಹೇಳಿದೆ. 'ವಿರಹಕಾತರಃ' ಎಂದರೆ ವೇದವ್ಯಾಸರು ವಿರಹ ಕಾತರರಾಗದಿದ್ದರೂ ಆದಂತೆ ತೋರಿಕೊಂಡರು ಎಂದರ್ಥ. ಏಕೆಂದರೆ ಸ್ಕಾಂದ ಪುರಾಣದಲ್ಲಿ ಹೇಳಿದೆ— ''ಶ್ರೀಹರಿ ನಿತ್ಯತೃಪ್ತ, ಪೂರ್ಣಾನಂದಸ್ವರೂಪ ನಾಶರಹಿತ, ಈ ಜಗತ್ತೆಲ್ಲ ಅವನಿಂದಲೆ ಹುಟ್ಟಿರುವುದರಿಂದ ಮಕ್ಕಳನ್ನು ಪಡೆದು ಅವನು ತೃಪ್ತಿ ಹೊಂದಬೇಕಾಗಿಲ್ಲ, ಅವನ ಅಧೀನಳಾದ ಮಹಾಲಕ್ಷ್ಮಿಯ ಕಟಾಕ್ಷ ಬಲದಿಂದಲೆ ಬ್ರಹ್ಮರುದ್ರಾದಿಗಳು ಅವರ ಪದವಿಗಳಲ್ಲಿ ಇರಬಲ್ಲರು. ಇಂಥ ವೇದವ್ಯಾಸರು ರುದ್ರನಿಗೂ ಪ್ರಭುವಾಗಿದ್ದು ಪುತ್ರಪ್ರಾಪ್ತಿಗಾಗಿ ರುದ್ರನನ್ನು ಕುರಿತು ತಪಸ್ಸು ಮಾಡಿದಂತೆ ತೋರಿಕೊಂಡರು. ಶುಕಮುನಿ ಸಂನ್ಯಾಸವನ್ನು ಸ್ವೀಕರಿಸಿದಾಗ ಸಾಮಾನ್ಯಜನರಂತೆ ವಿರಹಕಾತರತೆಯನ್ನು ತೋರಿದರು. ನಿತ್ಯವೂ ಆನಂದದ ಮಹಾಸಾಗರವೆ ಆಗಿರುವ ಅವರಿಗೆ ಕಾತರತೆ ಎಲ್ಲಿಯದು?'' ಎಂದು. ಮಹಾಭಾರತ ಉದ್ಯೋಗ ಪರ್ವ ದಲ್ಲಿಯೂ ಹೇಳಿದೆ— ''ವಿಷ್ಣು ಸಮಸ್ತ ಜಗತ್ತಿಗೆ ಪ್ರಭುವಾಗಿದ್ದರೂ ದುರ್ಬಲರಾದ ಸಾಮಾನ್ಯ ಜನರಂತೆ ಕಾತರತೆಯನ್ನು ತೋರುವುದು ಮುಂತಾದುವನ್ನೂ ಮಾಡುತ್ತಾನೆ'' ಎಂದು. ವಿಷ್ಣುಧರ್ಮದಲ್ಲಿಯೂ ಹೇಳಿದೆ— ''ದೇವತೆಗಳು ಮೂಲ

ರೂಪದಲ್ಲಿರುವಾಗ ದೇವತೆಗಳಂತೆ, ಮಾನವರಾಗಿ ಅವತರಿಸುವಾಗ ಮಾನವರಂತೆ ತೋರಿಕೊಳ್ಳುವುದು ಅವರ ಕರ್ತವ್ಯ'' ಎಂದು. ಆದರಿಂದ ವೇದವ್ಯಾಸರು ಮಾನವ ರಂತೆ ತೋರಿಕೊಂಡರು. 'ಸರ್ವಭೂತ ಹೃದಯಂ' ಎಂದರೆ ಅಹಂಕಾರ ತತ್ವಕ್ಕೆ ಮತ್ತು ಅಹಂಕಾರ ಎಂಬ ಮನೋವೃತ್ತಿಗೆ ರುದ್ರ ಪ್ರೇರಕನಾದ್ದರಿಂದ ಎಲ್ಲ ಜೀವಿಗಳ ಹೃದಯದಲ್ಲಿ ರುದ್ರಾವತಾರರಾದ ಶುಕಮುನಿ ಇದ್ದಾರೆ ಎಂದರ್ಥ. ಸ್ಕಂದಪುರಾಣ ದಲ್ಲಿ ಹಾಗೇ ಹೇಳಿದೆ— ''ಅಹಂಕಾರತತ್ವಕ್ಕೂ ಅಹಂಕಾರವೆಂಬ ಮನೋವೃತ್ತಿಗೂ ಪ್ರೇರಕನಾದ ರುದ್ರ ವೇದವ್ಯಾಸಪುತ್ರ ಶುಕಮುನಿಯಾಗಿ ಅವತರಿಸಿದ'' ಎಂದು.

ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಚೇತನಾ ಎಂದು ಮನೋವೃತ್ತಿಗಳು ಐದು ಬಗೆ. ಅವುಗಳಲ್ಲಿ ಅಹಂಕಾರ ಎಂಬ ಮನೋವೃತ್ತಿಗೂ ಅಹಂಕಾರತತ್ವಕ್ಕೂ ಪ್ರೇರಕ ರಾಗಿ ರುದ್ರಾವತಾರರಾದ ಶುಕಮುನಿ ಎಲ್ಲ ಜೀವರ ಹೃದಯದಲ್ಲಿ ಸದಾ ಇರುವವರೆ, ಯೋಗಬಲದಿಂದ ಪರಕಾಯವನ್ನು ಪ್ರವೇಶಿಸಬೇಕಾಗಿಲ್ಲ. ನಾನು ಎಲ್ಲ ಜೀವರ ಹೃದಯದಲ್ಲಿ ಸದಾ ಇರುವಾಗ ಸರ್ವಾಂತರ್ಯಾಮಿಯಾಗಿ ಅಲ್ಲಿಯೆ ಇರುವ ನಿಮಗೆ ನನ್ನ ವಿಯೋಗ ಹೇಗೆ ಶಕ್ಯ? ಎಂದು ಲೋಕರೀತಿಯಿಂದ ತಂದೆಯನ್ನು ಸಂತೈಸಲು ಶುಕಮುನಿ ಸ್ವತಃ ಮಾತ್ರವಲ್ಲದೆ ಮರಗಿಡ ಪ್ರಾಣಿಪಕ್ಷಿಗಳೊಳಗಿಂದಲೂ ಪ್ರತ್ಯುತ್ತರ ನೀಡಿದರು ಎಂದರ್ಥ.

★★★

ಸೂತರು ಶೌನಕಾದಿಗಳಿಗೆ ಭಾಗವತವನ್ನು ಹೇಳುವುದಕ್ಕೆ ಮೊದಲಿಗೆ ಗುರು ಶುಕಮುನಿಗಳನ್ನು ಇನ್ನೊಂದು ಪದ್ಯದಿಂದ ನಮಿಸುತ್ತಾರೆ—

ಯಃ ಸ್ವಾನುಭಾವಮಖಿಲಶ್ರುತಿಸಾರಮೇಕಂ
ಅಧ್ಯಾತ್ಮದೀಪಮತಿತೀರ್ಷತಾಂ ತಮೋಽಂಧಂ ।
ಸಂಸಾರಿಣಾಂ ಕರುಣಯಾಽಽಹ ಪುರಾಣಗುಹ್ಯಂ
ತಂ ವ್ಯಾಸಸೂನುಮುಪಯಾಮಿ ಗುರುಂ ಮುನೀನಾಂ ॥ ೩ ॥

ಅಜ್ಞಾನದ ಕತ್ತಲನ್ನು ಪೂರ್ಣದಾಟಲು ಬಯಸುವ ಸಂಸಾರಿಗಳಿಗೆ ಸ್ವತಂತ್ರ ಸಾಮರ್ಥ್ಯಉಳ್ಳ ಸಕಲವೇದ ಮುಖ್ಯಪ್ರತಿಪಾದ್ಯನಾದ ಸಕಲಪುರಾಣ ರಹಸ್ಯ ಸ್ವರೂಪನಾದ ಎಲ್ಲ ಜೀವಿಗಳ ಶರೀರದಲ್ಲಿ ಜ್ಯೋತಿಯಾಗಿ ಬೆಳಗುವ ಪರಮಾತ್ಮನನ್ನು ಕರುಣೆಯಿಂದ ಉಪದೇಶಿಸಿದ, ಮುನಿಗಳಿಗೆಲ್ಲ ಗುರುವಾದ, ವ್ಯಾಸಪುತ್ರ ಶುಕಮುನಿಯನ್ನು ಶರಣು ಹೊಂದುವೆನು.

ಇಲ್ಲಿ 'ಸ್ವಾನುಭಾವಂ' ಎಂದರೆ ಅಸಾಧಾರಣ ಪ್ರಭಾವ ಉಳ್ಳ ಭಾಗವತ ಗ್ರಂಥ

ಎಂದು ಶ್ರೀಧರವ್ಯಾಖ್ಯಾನ. ಶುಕಮುನಿ ತಾವೇ ಮೊದಲಿಗೆ ಅನುಭವಿಸಿದ ಗ್ರಂಥ ಎಂದು ವೀರರಾಘವ ವ್ಯಾಖ್ಯಾನ. ಶುಕಮುನಿ ತಾವೆ ಅದರೊಳಗೆ ರಸಾನುಭವವನ್ನು ಉಂಡು ಜಿಜ್ಞಾಸುಗಳಿಗೆ ತೋರಿದರು, ಅಂಥ ಗ್ರಂಥ ಎಂದು ವಿಶ್ವನಾಥ ವ್ಯಾಖ್ಯಾನ. ಮುನಿಗಳ ಮಧ್ಯದಲ್ಲಿ ಶುಕರಿಗೆ ತನ್ನ ಪ್ರಭಾವವನ್ನು ಹೆಚ್ಚಿಸಿರುವ ಗ್ರಂಥ ಎಂದು ವಂಶೀಧರ ವ್ಯಾಖ್ಯಾನ. ಹೀಗೆ ಇಲ್ಲಿ ಭಾಗವತವನ್ನು ಹೊಗಳಲು ಕಾರಣ ಅದು ಭಗವದ್ರೂಪವಾಗಿದೆ ಎಂದು ವಲ್ಲಭಾಚಾರ್ಯ ವ್ಯಾಖ್ಯಾನ. ಅದಕ್ಕಿಂತಲೂ ಭಗವಂತನನ್ನೆ ಸ್ವತಂತ್ರ ಸಾಮರ್ಥ್ಯಉಳ್ಳವನೆಂದು ಇಲ್ಲಿ ಏಕೆ ಪ್ರಶಂಸಿಸಬಾರದು? ಆದರಿಂದ ಹೀಗೆ ಹೇಳಬೇಕು—

ಸ್ವಾನುಭಾವಂ ಬ್ರಹ್ಮ ।

'ಸ್ವಾನುಭಾವಂ' ಎಂದರೆ ಸ್ವತಂತ್ರಸಾಮರ್ಥ್ಯಉಳ್ಳ ಭಗವಂತ.

★★★

ಯಾಗಾದಿ ಕರ್ಮಾನುಷ್ಠಾನದಿಂದ ಭಕ್ತಿ ವೈರಾಗ್ಯಗಳೂ ಅದರಿಂದ ತತ್ವಜಿಜ್ಞಾಸೆಯೂ ಉಂಟಾದರೆ ಮಾತ್ರ ಆ ಕರ್ಮ ಸಫಲವಾಗುತ್ತದೆ. ತತ್ವವೆಂದರೇನೆಂದು ತತ್ವಜ್ಞಾನಿಗಳು ಬಲ್ಲರು ಎನ್ನುತ್ತಾರೆ ಸೂತರು—

ವದಂತಿ ತತ್ ತತ್ವವಿದಸ್ತತ್ವಂ ಯಜ್ಜ್ಞಾನಮದ್ವಯಂ ।
ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ ॥ ೧೧ ॥

ಸರಿ ಮಿಗಿಲಿಲ್ಲದ ಜ್ಞಾನಸ್ವರೂಪನಾದ ಹರಿಯನ್ನೆ ತತ್ವಜ್ಞಾನಿಗಳು ತತ್ವವೆನ್ನುತ್ತಾರೆ. ಅವನಿಗೇ ಬ್ರಹ್ಮ ಎಂದೂ ಪರಮಾತ್ಮ ಎಂದೂ ಭಗವಾನ್ ಎಂದೂ ಹೆಸರುಗಳು.

ಇಲ್ಲಿ 'ಜ್ಞಾನಮದ್ವಯಂ' ಎಂಬಲ್ಲಿ ನಿರಾಕಾರವಾದ ಜ್ಞಾತೃಜ್ಞೇಯವಿಭಾಗ ರಹಿತವಾದ ಅಖಂಡ ಚೈತನ್ಯವನ್ನೆ ಜ್ಞಾನಿಗಳು ಬ್ರಹ್ಮ ಎನ್ನುತ್ತಾರೆ. ಪ್ರಪಂಚ ಬ್ರಹ್ಮಕಾರ್ಯವಾದ್ದರಿಂದ ಬ್ರಹ್ಮನಿಗಿಂತ ಬೇರೆ ಅಲ್ಲ. ಆದರಿಂದ ಅದ್ವಿತೀಯ ಎಂದು ವಿಶ್ವನಾಥವ್ಯಾಖ್ಯಾನ. ಈ ಬ್ರಹ್ಮ ಒಂದೇ ತತ್ವ ಎಂದರೆ ಬೇರೆ ಎಲ್ಲ ಮಿಥ್ಯೆ ಎಂದಂತಾಗುತ್ತದೆ. ಆದರಿಂದ ಅದ್ವಿತೀಯ ನಿರ್ಗುಣ ಬ್ರಹ್ಮವೆ ಅದ್ವಯ ಎಂದು ತಿಳಿಯುವ ಸಂಭವವಿದೆ. ಅದಕ್ಕೆ ಹೇಳುತ್ತಾರೆ—

ಅದ್ವಯಂ ಅಸಮಾಧಿಕಂ । ತಥಾ ಚ ಬಾಲ್ಲವೇಯಶ್ರುತಿಃ—

ಸ ಪುರುಷಃ ಸೋಽದ್ವಯ ಇತಿ । ನ ಹ್ಯೇನಮಭಿ ಕಶ್ಚನ ನ ಹ್ಯೇನಮತಿ ಕಶ್ಚನೇತಿ ಚ ॥

ಸೋಽದ್ವಯಃ ಪುರುಷಸ್ತಸ್ಮಾನ್ನ ಸಮೋ ನಾಧಿಕೋ ಹ್ಯತಃ ।
ಇತಿ ಮಹಾಸಂಹಿತಾಯಾಂ । ತತ್ವಶಬ್ದಾರ್ಥಸ್ತತ್ರೈವೋಕ್ತಃ—
ಅತೀತಾನಾಗತೇ ಕಾಲೇ ಯತ್ ತಾದೃಶಮುದೀರ್ಯತೇ ।
ಕುತಶ್ಚಿದನ್ಯಥಾ ನೇಯಾತ್ ತತ್ ತತ್ವಂ ತತ್ತ್ವತೋ ವಿದುಃ ॥ ಇತಿ ।

'ಅದ್ವಯಂ' ಎಂದರೆ ತನಗೆ ಸಮರಾಗಲಿ ಮಿಗಿಲಾಗಲಿ ಇಲ್ಲದವನು ಶ್ರೀಹರಿ. ಹಾಗೇ ಭಾಲ್ಲವೇಯ ಶ್ರುತಿ ಹೇಳಿದೆ. ಆ ಪರಮಾತ್ಮನು ಅದ್ವಯನೆನಿಸಿದ್ದಾನೆ. ಏಕೆಂದರೆ ಅವನಿಗೆ ಯಾರೂ ಸಮಾನರಿಲ್ಲ, ಮತ್ತು ಅವನಿಗಿಂತ ಉತ್ತಮರೂ ಯಾರೂ ಇಲ್ಲ ಎಂದು. ಮಹಾಸಂಹಿತೆಯಲ್ಲಿಯೂ ಹೀಗೇ ಹೇಳಿದೆ— 'ಆ ಪರಮಾತ್ಮನು ಅದ್ವಯನೆನಿಸಿದ್ದಾನೆ. ಏಕೆಂದರೆ ಅವನಿಗೆ ಸಮಾನರಿಲ್ಲ, ಉತ್ತಮರೂ ಇಲ್ಲ ಎಂದು. ತತ್ವಶಬ್ದಾರ್ಥವೂ ಅಲ್ಲಿಯೆ ಉಕ್ತವಾಗಿದೆ. ಭೂತ ಭವಿಷ್ಯತ್ ಕಾಲಗಳಲ್ಲಿಯೂ ಯಾವುದು ಈಗಿರುವಂತೆಯೇ ಇರುವುದೋ ಯಾವ ಕಾರಣದಿಂದಲೂ ವ್ಯತ್ಯಾಸ ಹೊಂದುವುದಿಲ್ಲವೋ ಅಂಥ ಪರಬ್ರಹ್ಮವನ್ನೇ ತತ್ವವೆಂದು ಯಥಾರ್ಥವಾಗಿ ಜ್ಞಾನಿಗಳು ತಿಳಿಯುತ್ತಾರೆ ಎಂದು.

★★★

ಪರಮಾತ್ಮ ಆನಂದಜ್ಞಾನಸ್ವರೂಪ ಎನ್ನುತ್ತಾರೆ ಸೂತರು—

ಸತ್ತಾಮಾತ್ರಂ ತು ಯತ್ಕಿಂಚಿತ್ ಸದಸಚ್ಚಾವಿಶೇಷಣಂ ।
ಉಭಾಭ್ಯಾಂ ಭಾಷ್ಯತೇ ಸಾಕ್ಷಾದ್ ಭಗವಾನ್ ಕೇವಲಃ ಸ್ಮೃತಃ ॥ ೧೨ ॥

ಭಗವಂತ ಕೇವಲನೆನಿಸಿದ್ದಾನೆ. ಏಕೆಂದರೆ ಆನಂದ ಶರೀರಿಯಾದ ಅವನ ಸ್ವರೂಪಭೂತವಾದ ಜ್ಞಾನ ಕಾರ್ಯಕಾರಣರೂಪ ಪ್ರಪಂಚದ ಸಂಪರ್ಕದಿಂದ ಜನಿಸುವ ಇಂದ್ರಿಯಜನ್ಯಜ್ಞಾನರೂಪವಲ್ಲ. ಆದರೂ ಕಾರ್ಯಕಾರಣಗಳೆರಡನ್ನೂ ಅದು ವಿಷಯೀಕರಿಸುವುದರಿಂದ ಕಾರ್ಯಜ್ಞಾನ ಕಾರಣಜ್ಞಾನ ಎಂದು ವ್ಯವಹರಿಸಲ್ಪಡುತ್ತದೆ.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಈ ಶ್ಲೋಕವೆ ಇಲ್ಲ. ವಿಜಯಧ್ವಜೀಯದಲ್ಲಿ 'ಕೇಚಿದ್ ವ್ಯಾಚಕ್ಷತೇ ತದಸಾರಂ' ಎಂದು ಅದ್ವೈತ ವ್ಯಾಖ್ಯಾನವನ್ನು ತೋರಿಸಿ ನಿರಾಕರಿಸುವುದರಿಂದ ಪ್ರಾಯಃ ಚಿತ್ಸುಖಿ ವ್ಯಾಖ್ಯಾನ ಪಾಠದಲ್ಲಿ ಈ ಶ್ಲೋಕ ಇದ್ದಿರಬಹುದು. ಇಲ್ಲಿ ಪರಮಾತ್ಮ ಕೇವಲ ಸತ್ತಾ ಸ್ವರೂಪ, ಅವನಲ್ಲಿ ಯಾವ ಧರ್ಮವೂ ಇಲ್ಲ ಎಂದು ತಿಳಿಯುವ ಸಂಭವ ಉಂಟು. ಸತ್ ಎಂದರೆ ಮಹತತ್ತ್ವ ಮುಂತಾದ ಕಾರ್ಯಪದಾರ್ಥಗಳು, ಅಸತ್ ಎಂದರೆ ಅವ್ಯಕ್ತವಾದ ಪ್ರಕೃತಿ,

ಕಾರಣವಸ್ತು. ಇವುಗಳ ಸಂಪರ್ಕದಿಂದಲೆ ಜ್ಞಾನ ಹುಟ್ಟಬೇಕು. ಹಾಗೆ ಹುಟ್ಟಿದರೆ ಜ್ಞಾನಸ್ವರೂಪ ಭಗವಂತನೆನಿಸುವುದು ಹೇಗೆ? ಜ್ಞಾನಸ್ವರೂಪ ನೆನಿಸಿದರೆ ಕೇವಲನೆನಿಸುವುದೂ ಹೇಗೆ? ಎಂಬ ಪ್ರಶ್ನೆಗಳು ಬರುತ್ತವೆ. ಅದಕ್ಕೆ ಹೀಗೆ ಹೇಳಬೇಕು—

ಸತ್ತಾಮಾತ್ರಮಾನಂದಮಾತ್ರಂ । ತಥಾ ಚ ಪೈಂಗಿಶ್ರುತಿಃ-

ಅಥ ಕಸ್ಮಾದುಚ್ಯತೇ ಸತ್ತೇತಿ, ನಂದತಿ ನಂದಯತಿ ಚೇತೀತಿ ।

ನ ಕಾರ್ಯಕಾರಣ ವಿಷಯ ವಿಶೇಷಿತವೈಷಯಿಕಜ್ಞಾನಂ । ಕೇವಲಮೇವ ತದ್‌ಜ್ಞಾನಂ । ಸ್ರಷ್ಟೃತ್ವಾದಿಭಿಃ ಕಾರ್ಯಕಾರಣ ವಿಶೇಷಿತಂ ಚ । ತಂತ್ರಭಾಗವತೇ ಚ—

ವಿಷಯಾಪೇಕ್ಷಿ ನ ಜ್ಞಾನಂ ವಿಷಯೈಶ್ಚ ವಿಶೇಷಿತಂ ।
ಯತ್ತದಾನಂದಮಾತ್ರಂ ಚ ತದ್ ಬ್ರಹ್ಮೇತ್ಯವಧಾರ್ಯತಾಂ ।

ಇತಿ ಚ ।

ಯತ್ಕಿಂಚಿದ್ ಅಲೋಕಸಿದ್ಧಂ ।

ಸತ್ತಾಮಾತ್ರಂ ಎಂದರೆ ಆನಂದಪಡುವ ಮತ್ತು ಆನಂದ ನೀಡುವ ಶರೀರ ಉಳ್ಳವನು ಎಂದರ್ಥ. ಪೈಂಗಿಶ್ರುತಿ ಹಾಗೇ ಹೇಳುತ್ತದೆ— 'ಪರಮಾತ್ಮ ಏಕೆ ಸತ್ತಾ ಎನಿಸುತ್ತಾನೆ ಎಂದರೆ ಅವನು ಆನಂದಪಡುತ್ತಾನೆ ಆನಂದ ನೀಡುತ್ತಾನೆ' ಎಂದು.

ಪರಮಾತ್ಮನ ಜ್ಞಾನವು ಕಾರ್ಯಕಾರಣರೂಪವಾದ ವಿಷಯಗಳ ಸಂಪರ್ಕ ದಿಂದ ಇಂದ್ರಿಯ ಜನ್ಯವಾಗುವ ಜ್ಞಾನವಲ್ಲ. ಅದು ಕೇವಲ ಜ್ಞಾನ. ಪರಮಾತ್ಮನಿಗೆ ಸೃಷ್ಟಿಕರ್ತೃತ್ವಾದಿಗಳಿರುವುದರಿಂದ ಅವನ ಜ್ಞಾನವು ಕಾರ್ಯಕಾರಣಗಳನ್ನು ವಿಷಯೀಕರಿಸುತ್ತದೆಂದು ಒಪ್ಪಲೇಬೇಕು. ತಂತ್ರಭಾಗವತದಲ್ಲಿ ಹಾಗೇ ಹೇಳಿದೆ— ಪರಮಾತ್ಮನ ಜ್ಞಾನ ವಿಷಯಗಳಿಂದ ಹುಟ್ಟಿಲ್ಲ. ಆದರೆ ವಿಷಯಗಳನ್ನು ವಿಷಯೀಕರಿಸಿದೆ. ಯಾರು ಇಂಥ ಜ್ಞಾನಸ್ವರೂಪನೂ ಆನಂದಸ್ವರೂಪನೂ ಆಗಿರುವನೋ ಅವನೆ ಪರಮಾತ್ಮನೆಂದು ತಿಳಿಯಬೇಕು ಎಂದು.

'ಯತ್ ಕಿಂಚಿತ್' ಎಂದರೆ ಲೋಕವಿಲಕ್ಷಣ ಎಂದರ್ಥ.

★★★

ತತ್ವ ಜಿಜ್ಞಾಸೆ ಉಂಟಾದರೆ ಜ್ಞಾನ ವೈರಾಗ್ಯ ಭಕ್ತಿದ್ವಾರಾ ಅಪರೋಕ್ಷ ಉಂಟಾಗುತ್ತದೆ ಎಂದು ಸೂತರು ಶೌನಕರಿಗೆ ಹೇಳುತ್ತಾರೆ—

ತಚ್ಛ್ರದ್ದಧಾನಾ ಮುನಯೋ ಜ್ಞಾನವೈರಾಗ್ಯಯುಕ್ತಯಾ ।
ಪಶ್ಯಂತ್ಯಾತ್ಮನಿ ಚಾತ್ಮಾನಂ ಭಕ್ತ್ಯಾ ಶ್ರುತಿಗೃಹೀತಯಾ ॥ ೧೩ ॥

ಪರಮಾತ್ಮನು ತತ್ವವೆನಿಸಿರುವುದರಿಂದ ಜ್ಞಾನಿಗಳು ಶ್ರದ್ಧೆಯಿಂದ ಶಾಸ್ತ್ರಜ್ಞಾನ ವೈರಾಗ್ಯಗಳನ್ನು ಸಂಪಾದಿಸಿ ಭಗವಂತನ ಮಾಹಾತ್ಮ್ಯಶ್ರವಣದಿಂದ ದೃಢಭಕ್ತಿಯನ್ನೂ ಪಡೆದು ಪರಮಾತ್ಮನನ್ನೆ ತಮ್ಮ ಹೃದಯದಲ್ಲಿ ಪ್ರತ್ಯಕ್ಷ ಕಾಣುತ್ತಾರೆ.

ಇಲ್ಲಿ ತತ್ವಜಿಜ್ಞಾಸೆಯಿಂದ ಪ್ರವೃತ್ತಿಮಾಡುವ ಜ್ಞಾನಿಗಳು ತತ್ವಸಾಕ್ಷಾತ್ಕಾರವನ್ನು ಪಡೆಯುವವರು ಎನ್ನದೆ ಪರಮಾತ್ಮನನ್ನು ಪ್ರತ್ಯಕ್ಷ ಕಾಣುವರು ಎನ್ನುವುದು ಹೇಗೆ ಕೂಡುತ್ತದೆ? ಹಿಂದೆ ಕರ್ಮಾನುಷ್ಠಾನದಿಂದ ತತ್ವಜಿಜ್ಞಾಸೆ ಉಂಟಾಗುತ್ತದೆ ಎಂದಿದೆ ತಾನೆ? ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಸಮಾಧಾನವಾಗಿ ಇಲ್ಲಿ 'ತತ್' ಆ ಕಾರಣದಿಂದ ಎನ್ನುತ್ತಿದೆ ಈ ಶ್ಲೋಕ. ಏನು ಆ ಕಾರಣ?

ಯಸ್ಮಾತ್ ಪರಮಾತ್ಮೈವ ತತ್ವಂ ತಸ್ಮಾತ್ ತಮೇವ ಪಶ್ಯಂತಿ ಮುನಯಃ ।

ಹರಿಯೆ ತತ್ವವೆನಿಸಿರುವುದರಿಂದ ಹರಿಯನ್ನೇ ಜ್ಞಾನಿಗಳು ಸಾಕ್ಷಾತ್ಕಾರಿಸಿ ಕೊಳ್ಳುತ್ತಾರೆ ಎನ್ನುತ್ತಿದೆ ಈ ಶ್ಲೋಕ.

ಶ್ರೀಧರ ವ್ಯಾಖ್ಯಾನದಲ್ಲಿ 'ತತ್' ಅದನ್ನು, ಅಂದರೆ ಯಾವುದನ್ನು 'ಆತ್ಮಾನಂ' ಪರಮಾತ್ಮನನ್ನು ಎಂದು ವ್ಯಾಖ್ಯಾನಿಸಿದೆ. ಆದರೆ 'ತಂ ಆತ್ಮಾನಂ' ಎನ್ನದೇ 'ತತ್ ಆತ್ಮಾನಂ' ಎಂದು ಲಿಂಗವ್ಯತ್ಯಾಸ ಮಾಡಿದ್ದು ಕೂಡಲಾರದು. ವೀರರಾಘವ ವ್ಯಾಖ್ಯಾನದ್ಲಲಿ 'ತತ್' ಮೋಕ್ಷವೆ ಪರಮಪುರುಷಾರ್ಥವಾದ್ದರಿಂದ ಎಂದಿದೆ. ಇದು ದೂರದಲ್ಲಿ ಹೇಳಿದ ಅಂಶವಾದ್ದರಿಂದ 'ತತ್' ಶಬ್ದದಿಂದ ಪರಾಮರ್ಶ ಸ್ವರಸವಲ್ಲ.

★★★

ಭಕ್ತಿಯಿಂದ ವೈರಾಗ್ಯ ಅದರಿಂದ ಶ್ರವಣ ಮನನ ಧ್ಯಾನರೂಪವಾದ ಜಿಜ್ಞಾಸೆ, ಅದರಿಂದ ಅಪರೋಕ್ಷ, ಆಗಲೆ ಪರಾಪರತತ್ವ ವಿಷಯದಲ್ಲಿ ಸರ್ವಸಂಶಯನಿವೃತ್ತಿ ಕರ್ಮಕ್ಷಯ ಎಂದು ಸೂತರು ಶೌನಕಾದಿಗಳಿಗೆ ವಿವರಿಸಿ ಹೇಳುತ್ತಾರೆ—

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ದೃಷ್ಟ ಏವಾತ್ಮನೀಶ್ವರೇ ॥ ೨೨ ॥

ಬಿಂಬಾಪರೋಕ್ಷವಾದೊಡನೆ ಲಿಂಗಶರೀರ ಸುಟ್ಟ ಬಟ್ಟೆಯಂತಾಗುತ್ತದೆ ಎಲ್ಲ ಸಂಶಯ ಪರಿಹಾರವಾಗುತ್ತದೆ ಪ್ರಾರಬ್ಧ ಹೊರತು ಬೇರೆ ಎಲ್ಲ ಕರ್ಮ ನಾಶ ವಾಗುತ್ತದೆ.

ಇಲ್ಲಿ 'ಆತ್ಮನಿ ಈಶ್ವರೇ' ಎಂದರೆ ಅಂತರ್ಯಾಮಿಯಾದ ಬಿಂಬರೂಪನಾದ ಭಗವಂತನ ಅಪರೋಕ್ಷವಾದೊಡನೆ ಎಂದರ್ಥ. ಆದರೆ ಶ್ರೀಧರ ವ್ಯಾಖ್ಯಾನದಲ್ಲಿ 'ಆತ್ಮ' ಎಂದರೆ ಜೀವ. ಜೀವಸ್ವರೂಪಭೂತನೇ ಆದ ಈಶ್ವರನ ಅಪರೋಕ್ಷವಾದಾಗ ಎಂದು ಹೇಳಿದೆ. ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿಯೂ ಬ್ರಹ್ಮಾತ್ಮೈಕ್ಯಾನುಭವ ವಾದಾಗ ಹೃದಯಗ್ರಂಥಿ ಭೇದಾದಿ ಕಾರ್ಯವಾಗುತ್ತದೆ. ಅದರಿಂದ ಭಗವಂತನನ್ನು ತಾನೆಂದು ಪ್ರತ್ಯಕ್ಷ ಕಂಡುಕೊಂಡಾಗ ಎಂದರ್ಥ ಎಂದಿದೆ. ಹೀಗೆ ಭಾಗವತದಲ್ಲಿ ಅಲ್ಲಲ್ಲಿ ಮೇಲುನೋಟಕ್ಕೆ ಅದ್ವೈತ ಕಾಣಬಹುದು. ಆದರೆ ಅದು ಗ್ರಂಥದ ಆಶಯವಲ್ಲ ಎನ್ನುತ್ತಾರೆ ಶ್ರೀಮದಾಚಾರ್ಯರು—

ಆತ್ಮನೀಶ್ವರ ಇತಿ ನ ಜೀವೈಕ್ಯಮುಚ್ಯತೇ। ಪರೇಷಾಮಪಿ ಬ್ರಹ್ಮಾದೀನಾಂ ಯತೋಽವರತ್ವಂ ಸ ಪರಾವರಃ ।

ಭೇದದೃಷ್ಟ್ಯಾಭಿಮಾನೇನೇತಿ ಹಿ ಕಾಪಿಲೇಯೇ । 'ಬ್ರಹ್ಮ ಪ್ರಧಾನಮುಪಯಾಂತ್ಯಗತಾಭಿಮಾನಾಃ' ಇತಿ ಚ । ವಿದ್ಯಾತ್ಮನಿ ಭಿದಾಬೋಧಃ । ಯತ್ರ ಹಿ ದ್ವೈತಮಿವ ಭವತಿ । ಅನ್ಯಮೀಶಮಸ್ಯ ಮಹಿಮಾನಮಿತಿ । ಅನಶ್ನನ್ನನ್ಯೋ ಅಭಿಚಾಕಶೀತಿ । ಛಾಯಾತಪೌ ಬ್ರಹ್ಮವಿದೋ ವದಂತಿ । ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್ । ಸತ್ಯಃ ಸೋ ಅಸ್ಯ ಮಹಿಮಾ ಗೃಣೇ ಶವೋ ಯಜ್ಞೇಷು ವಿಪ್ರರಾಜ್ಯೇ । ಸತ್ಯಮೇನಮನು ವಿಶ್ವೇ ಮದಂತಿ ರಾತಿಂ ದೇವಸ್ಯ ಗೃಣತೋ ಮಘೋನಃ। ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ । ಶೃಣ್ವೇ ವೀರ ಉಗ್ರಮುಗ್ರಂ ದಮಾಯನ್ನಿತ್ಯಾದಿ ।

'ಆತ್ಮನಿ ಈಶ್ವರೇ' ಎಂಬಲ್ಲಿ ಭಾಗವತ ಜೀವಬ್ರಹ್ಮೈಕ್ಯವನ್ನು ಹೇಳುತ್ತಿಲ್ಲ. ಏಕೆಂದರೆ ಈ ಶ್ಲೋಕ ಮೂಲತಃ ಶ್ರುತಿವಾಕ್ಯ. ಸ್ವಲ್ಪ ವ್ಯತ್ಯಾಸ ಮಾಡಿದೆ. ಶ್ರುತಿಯಲ್ಲಿ ನಾಲ್ಕನೆ ಪಾದ 'ತಸ್ಮಿನ್ ದೃಷ್ಟೇ ಪರಾವರೇ' ಎಂದಿದೆ. ಇಲ್ಲಿ 'ದೃಷ್ಟ ಏವಾತ್ಮನೀಶ್ವರೇ' ಎಂದಿದೆ. ಎರಡಕ್ಕೂ ಒಂದೇ ಅರ್ಥ ಎಂದು ಭಾಗವತದ ಅಭಿಪ್ರಾಯ. 'ಪರಾವರ' ಎಂದು ಪರರು ಅಂದರೆ ಉತ್ತಮರಾದ ಬ್ರಹ್ಮಾದಿಗಳೂ ಹರಿಗಿಂತ 'ಅವರ'ರು ಕಡಿಮೆಯವರು ಎಂದರ್ಥ. ಇಂಥ ಹರಿಗೆ ಜೀವೈಕ್ಯ ಹೇಗೆ ಸಾಧ್ಯ?

ಭಾಗವತದಲ್ಲಿಯೆ ಮುಂದೆ ಕಪಿಲ ದೇವಹೂತಿ ಸಂವಾದದಲ್ಲಿ ಜೀವಬ್ರಹ್ಮಭೇದ ಸಾಕ್ಷಾತ್ಕಾರ ಭಕ್ತಿಗಳಿಂದಲೆ ಪರಮಾತ್ಮಪ್ರಾಪ್ತಿ ಎಂದಿದೆ. ಅದರ ವಿರೋಧವೂ ಬರುತ್ತದೆ. ಮತ್ತು 'ಅಗತ ಅಭಿಮಾನ'ರು ನಾನು ಜೀವ ಎಂಬ ಅಭಿಮಾನವನ್ನು

ತೊರೆಯದೆಯೇ ಪರಮಾತ್ಮನನ್ನು ಹೊಂದುತ್ತಾರೆ ಎಂದೂ ಮುಂದೆ ಹೇಳಿದೆ. ಅದರಿಂದ ಪರಮಮುಕ್ತಿಯಲ್ಲಿಯೂ ಜೀವರ ಜೀವತ್ವನಿವೃತ್ತಿ ಇಲ್ಲ. ಅದರಿಂದ ಬ್ರಹ್ಮೈಕ್ಯ ಶಕ್ಯವಿಲ್ಲ. ಮತ್ತು ಮುಂದೆ ಜೀವೇಶ್ವರರಿಗೆ ಭೇದವನ್ನು ತಿಳಿಯುವುದೇ ತತ್ವಜ್ಞಾನ ಎಂದು ಹೇಳಿದೆ. ಶ್ರುತಿಗಳಲ್ಲಿಯೂ ಸ್ಪಷ್ಟವಾಗಿ ಜೀವೇಶ್ವರರಲ್ಲಿ ಭೇದಉಕ್ತವಾಗಿದೆ. ಮುಕ್ತಿಯಲ್ಲಿ ಭೇದವಿದ್ದರೆ ಮಾತ್ರ ಒಬ್ಬರು ಇನ್ನೊಬ್ಬರನ್ನು ನೋಡುವುದು ಮುಂತಾದ ವ್ಯವಹಾರ ಶಕ್ಯ. ಭೇದವಿಲ್ಲದಿದ್ದರೆ ಹೇಗೆ? ಎನ್ನುತ್ತ ಶ್ರುತಿ ಭೇದ ಉಂಟು ಎಂದಿದೆ. ಹರಿ ತನಗಿಂತ ಭಿನ್ನನೆಂದು ತಿಳಿದು ಅವನ ಮಹಿಮೆಯನ್ನು ಕಂಡರೆ ಮಾತ್ರ ಸಂಸಾರ ದುಃಖ ನಿವೃತ್ತಿ ಎಂದೂ ಶ್ರುತಿ ಹೇಳುತ್ತದೆ. ಜೀವನ ಶರೀರದಲ್ಲಿ ಜೀವನೊಂದಿಗೆ ಇದ್ದರೂ ಜೀವನಂತೆ ಕರ್ಮಫಲ ಉಣದೆ ಪರಮಾತ್ಮ ನಲಿಯುತ್ತ ಇರುತ್ತಾನೆ ಎಂದೂ ಶ್ರುತಿ ಇದೆ. ಜೀವರ ಶರೀರದಲ್ಲಿರುವ ಆತ್ಮ ಅಂತರಾತ್ಮ ಎಂಬ ಎರಡು ಭಗವದ್ರೂಪಗಳು ಸಜ್ಜನರಿಗೆ ಸುಖವನ್ನೂ ದುರ್ಜನರಿಗೆ ದುಃಖವನ್ನೂ ನೀಡುವುವು ಎಂದೂ ಶ್ರುತಿ ಭೇದವನ್ನು ಹೇಳಿದೆ. ಒಬ್ಬ ಪರಮಾತ್ಮ ಅನಂತ ಜೀವರಿಗೆ ಅವರ ಅಭೀಷ್ಟಗಳನ್ನು ಪೂರೈಸುತ್ತಾನೆ ಎಂದೂ ಶ್ರುತಿ ಭೇದವನ್ನು ಹೇಳಿದೆ. ಪರಮಾತ್ಮನ ಮಹಿಮೆ ಎಲ್ಲವೂ ಸತ್ಯವೆಂದು ಯಜ್ಞಗಳಲ್ಲಿ ನಾನು ಕೊಂಡಾಡುತ್ತೇನೆ ಎಂಬ ಶ್ರುತಿಯೂ ಭೇದವನ್ನು ಹೇಳಿದೆ. ನಿರ್ದುಃಖ ಸುಖಾನುಭವಿಯಾದ ಪರಮಾತ್ಮನ ಅನುಗ್ರಹದಿಂದಲೆ ಎಲ್ಲರೂ ಸುಖಪಡೆಯುತ್ತಾರೆ ಎಂದೂ ಶ್ರುತಿ ಭೇದವನ್ನು ಹೇಳಿದೆ. 'ನಾಕ' ಎಂದರೆ ನಿರ್ದುಃಖ ಸುಖರೂಪನಾದ ಹರಿಯಲ್ಲಿ ಸಾಯುಜ್ಯ ಹೊಂದಿ ಪೂರ್ವಕಲ್ಪದ ದೇವತೆಗಳಿರುವಾಗಲೆ ಮುಂದಿನ ಕಲ್ಪದ ದೇವತೆಗಳೂ ಅವನಲ್ಲಿ ಸಾಯುಜ್ಯ ಹೊಂದುತ್ತಾರೆ ಎಂದು ಪುರುಷಸೂಕ್ತವೂ ಭೇದವನ್ನು ಹೇಳಿದೆ. ಹರಿ ಉಗ್ರರಾದ ಅಸುರರಿಗೆ ಅಧೋಗತಿಯನ್ನೂ ದೇವತೆ ಗಳಿಗೆ ಉತ್ತಮಗತಿಯನ್ನೂ ಕೊಡುತ್ತಾನೆ ಎಂದೂ ಶ್ರುತಿ ಭೇದವನ್ನೇ ಹೇಳಿದೆ.

> ಮಗ್ನಸ್ಯ ಹಿ ಪರೇಽಜ್ಞಾನೇ ಕಿಂ ನ ದುಃಖತರಂ ಭವೇತ್ ।
> ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು ।
> ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ ।

ಇತಿ ಮೋಕ್ಷಧರ್ಮೇ ।

> ಭೇದದೃಷ್ಟ್ಯಾಭಿಮಾನೇನ ಪಶ್ಯಂತೋ ಯಾಂತಿ ತತ್ಪದಂ ।

ಇತಿ ವಾಯುಪ್ರೋಕ್ತೇ ।

> ಅನುಪಪತ್ತೇಸ್ತು ನ ಶಾರೀರಃ । ಭೇದವ್ಯಪದೇಶಾಚ್ಚ । ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ। ಪೃಥಗುಪದೇಶಾದಿತ್ಯಾದಿ ಚ ।

ಸತ್ಯತ್ವಂ ಚ ಭೇದಸ್ಯೋಕ್ತಂ ಭಾಲ್ಲವೇಯಶ್ರುತೌ-
ಸ್ಥಾಣುರ್ಹೋಚ್ಚಕ್ರಾಮ ಸ ಪ್ರಜಾಪತಿಮುವಾಚ ಕೋಽಸಿ ಕೇ ಸ್ಥಃ ಕಃ ಸ ಇತಿ ಹೋವಾಚ ಯೋಽಸ್ಮಿ ಯೇ ಸ್ಥ ಯಃ ಸ ಇತಿ । ಅಥ ಹೈನಮುಪಾಕ್ರೋಶತ್ ಸತ್ಯಂ ಭಿದಾ ಸತ್ಯಂ ಭಿದಾ ಸತ್ಯಂ ಭಿದೇತಿ ।
ಮೈವಾರುವಣ್ಯೋ ಮೈವಾರುವಣ್ಯೋ ಮೈವಾರುವಣ್ಯ ಇತೀತಿ ।
ಸತ್ಯಮೇನಂ । ಸತ್ಯಃ ಸೋ ಅಸ್ಯ ಮಹಿಮೇತಿ ಚೋಕ್ತಂ ।

ಮೋಕ್ಷದಲ್ಲಿ ಒಬ್ಬರು ಇನ್ನೊಬ್ಬರನ್ನು ನೋಡುವುದು ಮುಂತಾದ ವ್ಯವಹಾರ ಭೇದವಿಲ್ಲದಿದ್ದರೆ ಹೇಗೆ ಶಕ್ಯ? ವ್ಯವಹಾರ ಬೇಡ ಎನ್ನುವುದಾದರೆ ಬರಿ ಅಜ್ಞಾನದಲ್ಲಿ ಮುಳುಗಿದರೆ ಬಹಳ ದುಃಖವಾಗದೆ? ಎಂದು ಮೋಕ್ಷಧರ್ಮದಲ್ಲಿ ಹೇಳಿದೆ. ಚೇತನರು ಬಹುವಾಗಿರುವರೊ? ಒಬ್ಬನೆಯೋ? ಎಂದು ಜನಮೇಜಯ ಕೇಳಿದಾಗ ವೈಶಂಪಾಯನರು ಚೇತನ ಒಬ್ಬನೆ ಎಂದು ಜ್ಞಾನಿಗಳು ಒಪ್ಪುವುದಿಲ್ಲ ಎಂದ್ದಿದಾರೆ ಮೋಕ್ಷಧರ್ಮದಲ್ಲಿ. ಭೇದಸಾಕ್ಷಾತ್ಕಾರ ಭಕ್ತಿಗಳಿಂದಲೆ ಪರಮಾತ್ಮನನ್ನು ಕಂಡು ಜೀವರು ಮೋಕ್ಷ ಪಡೆಯುತ್ತಾರೆ ಎಂದು ವಾಯುಪ್ರೋಕ್ತದಲ್ಲಿ ಹೇಳಿದೆ.

ಒಬ್ಬ ಜೀವನು ಸರ್ವಶರೀರದಲ್ಲಿರುವುದು ಕೂಡದಿರುವುದರಿಂದ ಸರ್ವಶರೀರದಲ್ಲಿರುವವನು ಜೀವನಲ್ಲ, ಪರಮಾತ್ಮನೆ. ಆನಂದಮಯನಿಗಿಂತ ಚತುರ್ಮುಖಾದಿಗಳಿಗೆ ಭೇದವನ್ನು ಹೇಳಿದ್ದರಿಂದ ಆನಂದಮಯ ಚತುರ್ಮುಖಾದಿ ಅಲ್ಲ, ಪರಮಾತ್ಮನೆ. ಕಾಣ್ವ ಮಾಧ್ಯಂದಿನ ಎರಡೂ ಶಾಖೆಯವರು ಅಂತರ್ಯಾಮಿಗಿಂತ ಜೀವರು ಬೇರೆ ಎಂದಿರುವುದರಿಂದ ಅಂತರ್ಯಾಮಿ ಜೀವನಲ್ಲ, ಪರಮಾತ್ಮನೆ. ಭಿನ್ನೋಽಚಿಂತ್ಯಃ ಪರಮೋ ಜೀವಸಂಘಾತ್ ಎಂದು ಮುಂತಾಗಿ ಶ್ರುತಿಗಳು ಭೇದವನ್ನು ಹೇಳಿರುವುದರಿಂದಲೂ ಜೀವ ಪರಮಾತ್ಮನಿಗಿಂತ ಭಿನ್ನ, ಇತ್ಯಾದಿ ಬ್ರಹ್ಮಸೂತ್ರಗಳಿಂದಲೂ ಜೀವಬ್ರಹ್ಮಭೇದ ಸಿದ್ಧವಾಗುವುದು.

ಈ ಭೇದ ಪಾರಮಾರ್ಥಿಕವಲ್ಲ ಎನ್ನಕೂಡದು. ಭೇದ ಪಾರಮಾರ್ಥಿಕವೆಂದು ಭಾಲ್ಲವೇಯ ಶ್ರುತಿ ಹೇಳಿದೆ— ರುದ್ರ ಬ್ರಹ್ಮನ ಬಳಿಗೆ ಧಾವಿಸಿ ಹೇಳಿದ, 'ನೀನು ನಮಗಿಂತ ಬೇರೆ ಅಲ್ಲ, ನಾವು ನಿನಗಿಂತ ಬೇರೆ ಅಲ್ಲ, ಹರಿಯೂ ನಮಗಿಂತ ಬೇರೆ ಅಲ್ಲ, ತೋರುವ ಭೇದವೆಲ್ಲ ಸುಳ್ಳು, ಎಂದು. ಆಗ ಬ್ರಹ್ಮ ನುಡಿದ, ''ನಾನು ಯಾರಿಂದ ಬೇರೆಯಾಗಿ ಕಾಣುತ್ತಿರುವೆನೋ ಅವರಿಂದ ನಾನು ಬೇರೆಯೆ ಆಗಿದ್ದೇನೆ. ಯಾರು ಯಾರಿಂದ ಬೇರೆಯಾಗಿ ಕಾಣುವರೋ ಅವರು ಅವರಿಂದ ಬೇರೆಯೆ ಆಗಿದ್ದಾರೆ. ಹರಿ ಯಾರಿಂದ ಬೇರೆಯಾಗಿ ಕಾಣುವನೋ ಅವರಿಂದ ಅವನು ಬೇರೆಯೆ ಆಗಿದ್ದಾನೆ. ತೋರುವ ಭೇದ ಸುಳ್ಳಲ್ಲ'' ಇಷ್ಟು ಹೇಳಿ ಬ್ರಹ್ಮ ಆಗ್ರಹದಿಂದ ನುಡಿದ, ''ಭೇದ ಸತ್ಯ,

ಭೇದ ಸತ್ಯ, ಭೇದ ಸತ್ಯ. ಅಭೇದವಾದಿಗಳು ಹೇಳುವಂತೆ ತಿಳಿಯಕೂಡದು, ತಿಳಿಯಕೂಡದು, ತಿಳಿಯಕೂಡದು'' ಎಂದು.

ಹರಿಯ ಅನುಗ್ರಹದಿಂದಲೆ ಎಲ್ಲರೂ ಸುಖ ಪಡೆಯುತ್ತಾರೆ ಎನ್ನುವುದು ಸತ್ಯ. ಹರಿಯ ಮಹಿಮೆ ಎಲ್ಲವೂ ಸತ್ಯ ಎಂದು ಶ್ರುತಿಗಳನ್ನು ಹಿಂದೆ ತೋರಿಸಿದ್ದೇವೆ. ಅವುಗಳು ಭೇದವನ್ನು ಹೇಳುವುದು ಮಾತ್ರವಲ್ಲದೆ ಭೇದ ಸತ್ಯವೆಂದೂ ಹೇಳುತ್ತಿವೆ.

ಮಹಾಸಂಹಿತಾಯಾಂ ಚ—

ತ್ರಿವಿಧಂ ಜೀವಸಂಘಂ ಚ ಪರಮಾತ್ಮಾನಮವ್ಯಯಂ ।
ತೇಷಾಂ ಭೇದಂ ಚ ಯೇ ಸತ್ಯಂ ವಿದುರ್ಮೋಹವಿವರ್ಜಿತಾಃ ।
ತೇ ಯಾಂತಿ ಪರಮಂ ಸ್ಥಾನಂ ವಿಷ್ಣೋರೇವಾಚಲಂ ಧ್ರುವಂ ।
ಜೀವೇಶ್ವರಭಿದಾಂ ಭ್ರಾಂತಿಂ ಕೇಚಿದಾಹುರಪಂಡಿತಾಃ ।
ಅನಾರತಂ ತಮೋ ಯಾಂತಿ ಪರಮಾತ್ಮವಿನಿಂದನಾತ್ ।
ಪರಾಧೀನಶ್ಚ ಬದ್ಧಶ್ಚ ಸ್ವಲ್ಪಜ್ಞಾನಸುಖೇಹಿತಃ ।
ಅಲ್ಪಶಕ್ತಿಃ ಸದೋಷಶ್ಚ ಜೀವಾತ್ಮಾಽನೀದೃಶಃ ಪರಃ ।
ವದತಾ ತು ತಯೋರೈಕ್ಯಂ ಕಿಂ ತೇನಾದುಷ್ಕೃತಂ ಕೃತಂ ।
ಅಂತರ್ಯಾಮ್ಯೈಕ್ಯವಾಚೀನಿ ವಚನಾನೀಹ ಯಾನಿ ತು ।
ತಾನಿ ದೃಷ್ಟ್ವಾ ಭ್ರಮಂತೀಹ ದುರಾತ್ಮಾನೋಽಲ್ಪಚೇತಸಃ ।
ಅಸ್ಯಸ್ಮಿ ತ್ವಮಹಂ ಸ್ವಾತ್ಮೇತ್ಯಭಿಧಾಗೋಚರೋ ಯತಃ ।
ಸರ್ವಾಂತರತ್ವಾತ್ ಪುರುಷಸ್ತ್ವಂತರ್ಯಾಮೀ ನಿಯಾಮಯನ್ ।
ಅತೋ ಭ್ರಮಂತಿ ವಚನೈರಾಸುರಾ ಮೋಹತತ್ಪರೈಃ ।
ತನ್ಮೋಹನೇ ಪರಾ ಪ್ರೀತಿರ್ದೇವಾನಾಂ ಪರಮಸ್ಯ ಚ ।
ಅತೋ ಮಹಾಂಧಕಾರೇಷು ಪತಂತ್ಯಜ್ಞಾನಮೋಹಿತಾಃ ॥ ಇತ್ಯಾದಿ ।

ಮಹಾಸಂಹಿತೆಯಲ್ಲಿಯೂ ಭೇದ ಸತ್ಯತ್ವ ಸ್ಪಷ್ಟವಾಗಿ ಉಕ್ತವಾಗಿದೆ— ಮೂರು ಬಗೆಯ ಜೀವರನ್ನೂ ನಾಶರಹಿತನಾದ ಪರಮಾತ್ಮನನ್ನೂ ಅವರೊಳಗಿನ ಭೇದ ವನ್ನೂ ಸತ್ಯವೆಂದು ಮೋಹರಹಿತರಾಗಿ ತಿಳಿಯುವವರು ಶಾಶ್ವತವಾದ ಉತ್ತಮ ವಿಷ್ಣುಲೋಕವನ್ನು ಹೊಂದುತ್ತಾರೆ. ಅಜ್ಞಾನಿಗಳು ಕೆಲವರು ಮಾತ್ರ ಜೀವೇಶ್ವರ ಭೇದಜ್ಞಾನವನ್ನು ಭ್ರಮೆ ಎನ್ನುತ್ತಾರೆ. ಇದು ಪರಮಾತ್ಮನ ನಿಂದೆಯಾಗುವುದರಿಂದ ಶಾಶ್ವತ ತಮಸ್ಸನ್ನು ಹೊಂದುತ್ತಾರೆ. ಜೀವ ಪರಾಧೀನ. ಸಂಸಾರ ಬಂಧನದಲ್ಲಿ ಸಿಲುಕಿದವ. ಅಲ್ಪ ಜ್ಞಾನ ಸುಖ ಶಕ್ತಿಗಳುಳ್ಳವ, ದೋಷಉಳ್ಳವ. ಶ್ರೀಹರಿ ಅವನಿಗಿಂತ

ವಿಲಕ್ಷಣ. ಅವರಿಗೆ ಐಕ್ಯವನ್ನು ಹೇಳುವವನು ಮಾಡುವ ಕರ್ಮ ಯಾವುದು ತಾನೆ ಪಾಪವೆನಿಸುವುದಿಲ್ಲ? ಏನು ಮಾಡಿದರೂ ಪಾಪವೆ. ಅಂತರ್ಯಾಮಿ ಒಬ್ಬನೆ ಎಂಬ ಅಭಿಪ್ರಾಯದಿಂದ ಹೊರಟ ತತ್ವಮಸಿ ಮುಂತಾದ ವಾಕ್ಯಗಳನ್ನು ಜೀವಬ್ರಹ್ಮೈಕ್ಯ ಪರವೆಂದು ಭ್ರಮಿಸುವವರು ದುರಾತ್ಮರು, ಅಲ್ಪಬುದ್ಧಿಯವರು ವಸ್ತುತಃ ಸರ್ವಾಂತ ರ್ಯಾಮಿಯಾಗಿ ಸರ್ವರನ್ನೂ ನಿಯಮಿಸುವ ಹರಿ ಎಲ್ಲರ ಒಳಗಿರುವುದರಿಂದ, ಮಾತ್ರವಲ್ಲದೆ, ಮಹಾಯೋಗ ವೃತ್ತಿಯಿಂದಲೂ ಅಸಿ, ಅಸ್ಮಿ, ತ್ವಂ, ಅಹಂ, ಸ್ವಃ, ಆತ್ಮಾ ಎಂದು ಮುಂತಾದ ಶಬ್ದಗಳಿಂದ ಕರೆಸಿಕೊಳ್ಳುತ್ತಾನೆ. ಅದರಿಂದ ಅಸುರ ಸ್ವಭಾವದವರು ಮೇಲುನೋಟಕ್ಕೆ ಐಕ್ಯಪರವೆಂದು ಕಾಣುವ ಮೋಹಕ ವಾಕ್ಯಗಳಿಂದ ಭ್ರಮೆಗೊಳಗಾಗುತ್ತಾರೆ. ಅವರನ್ನು ಭ್ರಾಂತಿಗೊಳಿಸುವುದರಲ್ಲಿ ವೇದಾಭಿಮಾನಿಗಳಿಗೂ ಪರಮಾತ್ಮನಿಗೂ ಬಹಳ ಆಸಕ್ತಿ. ಅದರಿಂದ ಐಕ್ಯವಾದಿಗಳು ಅಜ್ಞಾನಮೋಹಿತರು ಅಂಧಂತಮಸ್ಸುಗಳಲ್ಲಿ ಬೀಳುತ್ತಾರೆ, ಇತ್ಯಾದಿ.

★★★

ಸೂತರು ಶೌನಕರಿಗೆ ಹೇಳುತ್ತಾರೆ- 'ಸತ್ವ ರಜಸ್ ತಮಸ್ ಎಂಬ ಮೂರು ಗುಣಗಳಿಗೂ ಒಬ್ಬನೆ ಪರಮಾತ್ಮ ಪ್ರೇರಕ. ಹಾಗಿದ್ದರೂ ಸತ್ವಗುಣ ಶ್ರೇಷ್ಠ. ಸಾತ್ವಿಕರಿಗೇ ಜ್ಞಾನಭಕ್ತ್ಯಾದಿಗಳು ಮತ್ತು ಮೋಕ್ಷ'—

ಸತ್ವಂ ರಜಸ್ತಮ ಇತಿ ಪ್ರಕೃತೇರ್ಗುಣಾಸ್ತೈ
ರ್ಯುಕ್ತಃ ಪರಃ ಪುರುಷ ಏಕ ಇಹಾಸ್ಯ ಧತ್ತೇ ।
ಸ್ಥಿತ್ಯಾದಯೇ ಹರಿ ವಿರಿಂಚ ಹರೇತಿ ಸಂಜ್ಞಾಃ
ಶ್ರೇಯಾಂಸಿ ತತ್ರ ಖಲು ಸತ್ವತನೌ ನೃಣಾಂ ಸ್ಯುಃ ॥ ೨೪ ॥

ಸತ್ವ ರಜಸ್ ತಮಸ್ ಇವು ಮೂರು ಪ್ರಕೃತಿಯ ಗುಣಗಳು. ಅವುಗಳಿಗೆ ಪ್ರೇರಕ ಒಬ್ಬನೇ ಹರಿ. ಜಗತ್ತಿನ ಪಾಲನೆಗಾಗಿ ಸತ್ವಗುಣಪ್ರೇರಕನಾಗಿ ಹರಿ ಎನಿಸುತ್ತಾನೆ. ಸೃಷ್ಟಿಗಾಗಿ ರಜೋಗುಣ ಪ್ರೇರಕನಾಗಿ ಬ್ರಹ್ಮನಲ್ಲಿದ್ದು ಬ್ರಹ್ಮ ಎನಿಸುತ್ತಾನೆ. ಸಂಹಾರಕ್ಕಾಗಿ ತಮೋಗುಣ ಪ್ರೇರಕನಾಗಿ ಶಿವನಲ್ಲಿದ್ದು ಶಿವ ಎನಿಸುತ್ತಾನೆ. ಈ ಮೂರು ಗುಣಗಳಲ್ಲಿ ಶ್ರೇಷ್ಠವಾದ ಅಧಿಕಸತ್ವಮಯವಾದ ಶರೀರ ಉಳ್ಳ ಜೀವರಲ್ಲಿಯೇ ಶ್ರೇಯಃಸಾಧನವಾದ ಜ್ಞಾನಭಕ್ತ್ಯಾದಿಗಳು ಉಂಟಾಗುತ್ತವೆ.

ಇಲ್ಲಿ ವಿಷ್ಣು ಬ್ರಹ್ಮ ರುದ್ರರೆಂದು ಹೆಸರುಗಳು ಮಾತ್ರ ಬೇರೆ ಹೊರತು ಗುಣತ್ರಯ ಪ್ರೇರಕ ದೇವನೊಬ್ಬನೆ. ಆದರೂ ಸತ್ವಶರೀರ ಪ್ರೇರಕನಾದ ವಿಷ್ಣುವಿನಿಂದಲೆ ಮೋಕ್ಷಲಾಭ ಎಂದು ಶ್ರೀಧರ ಮುಂತಾದವರ ವ್ಯಾಖ್ಯಾನವಿದೆ. ಬ್ರಹ್ಮರುದ್ರರು ಬೇರೆಯೆ ಜೀವರು. ಅವರೊಳಗೆ ಪರಮಾತ್ಮನೆ ಬ್ರಹ್ಮರುದ್ರನಾಮ ಗಳಿಂದ ಇರುತ್ತಾನೆ.

ಬ್ರಹ್ಮರುದ್ರರ ಉಪಾಸನೆಯಿಂದ ಮೋಕ್ಷವಿಲ್ಲ. ಸತ್ವಪ್ರೇರಕನಾದ ವಿಷ್ಣುವಿನ ಉಪಾಸನೆಯಿಂದಲೇ ಮೋಕ್ಷ. ಏಕೆಂದರೆ ಕರ್ಮಫಲ ಉಣ್ಣುತ್ತಿರುವ ಅವರು ವಿಷ್ಣುವಿಗೆ ಶರೀರಗಳು, ವಿಷ್ಣು ಆತ್ಮ. ಶರೀರದ ಧರ್ಮ ಆತ್ಮನಲ್ಲಿ ಬರುವುದಿಲ್ಲ ಎಂದು ವೀರರಾಘವ ವ್ಯಾಖ್ಯಾನ. ಒಬ್ಬನೆ ಪರಮಾತ್ಮನಿಗೆ ಮೂರು ಗುಣಗಳು ಉಪಾಧಿಗಳು. ಉಪಾಧಿವಿಶಿಷ್ಟನ ಉಪಾಸನೆಯು ಉಪಾಧಿಯ ಉಪಾಸನೆಯೇ ಆಗುವುದು. ಅದರಿಂದ ಸತ್ವೋಪಾಧಿ ಉಪಾಸನೆಯಿಂದಲೆ ಶ್ರೇಯಸ್ಸು ಎಂದು ವಲ್ಲಭಾಚಾರ್ಯ ವ್ಯಾಖ್ಯಾನ. ಬ್ರಹ್ಮರುದ್ರರು ಜೀವರು. ಅವರಲ್ಲಿ ವಿಷ್ಣುವಿನ ಶಕ್ತಿಲೇಶ ಮಾತ್ರವಿರುವುದರಿಂದ ಅವರ ಉಪಾಸನೆ ಶ್ರೇಯಸ್ಕರವಲ್ಲ ಎಂದು ಶುಕದೇವ ವ್ಯಾಖ್ಯಾನ. ರಜಸ್ತಮೋಗುಣಗಳು ಅವಿದ್ಯೆಯ ಆವರಣ ವಿಕ್ಷೇಪಶಕ್ತಿಗಳಿಂದ ಬ್ರಹ್ಮರುದ್ರರೂಪಗಳಲ್ಲಿ ಪರಮಾತ್ಮನನ್ನು ಬಂಧಿಸುತ್ತವೆ. ವಿಷ್ಣುರೂಪದಲ್ಲಿ ಮಾತ್ರ ಸತ್ವಗುಣ ಉದಾಸೀನವಾಗಿದ್ದು ಬಂಧಕವಾಗುವುದಿಲ್ಲ. ಅಂದರೆ ಸಂಯೋಗ ಸಮವಾಯ ಸಂಬಂಧಗಳಿಂದ ಇರುವುದಿಲ್ಲ, ಸಮೀಪದಲ್ಲಿ ಇರುತ್ತದೆ. ಅದರಿಂದ ವಿಷ್ಣುರೂಪದಿಂದ ಶ್ರೇಯಸ್ಸು ಸಾಧ್ಯ ಎಂದು ವಿಶ್ವನಾಥವ್ಯಾಖ್ಯಾನ.[೧] ಹೀಗೆ ಅನೇಕ

---

೧. ಬ್ರಹ್ಮಾದೀನಾಂ ತ್ರಯಾಣಾಮೇಕಾತ್ಮಕತ್ವೇಽಪಿ ಶ್ರೇಯಾಂಸಿ ಶುಭಫಲಾನಿ ಸತ್ವತನೋರ್ವಾಸುದೇವಾದೇವ ಸ್ಯುಃ। -ಶ್ರೀಧರಃ

ಬ್ರಹ್ಮ ವಿಷ್ಣು ಮಹೇಶಾನಾಂ ಭೇದಸ್ತಾವನ್ನಾಸ್ತ್ಯೇವ । ತಥಾಪಿ ಯತ್ ಸತ್ವ ತನೋರ್ವಾಸುದೇವಾದೇವ ಶ್ರೇಯಾಂಸಿ ಸ್ಯುರಿತ್ಯುಕ್ತಂ ತದ್ವಸ್ತುತಾರತಮ್ಯಾನ್ನ । ಕಿಂತು ಗುಣತಾರತಮ್ಯಾದೇವ । -ರಾಧಾರಮಣದಾಸಃ

ಯದ್ಯಪಿ ಹಿರಣ್ಯಗರ್ಭಾದಿ ಜೀವ ಶರೀರಕತಯಾ ತದ್ರೂಪೇಣಾವಸ್ಥಿತಃ ಪರಮಾತ್ಮೈವ। ತಥಾಪಿ ಕರ್ತೃತ್ವ ಭೋಕ್ತೃತ್ವಾದಿಕಂ ಜೀವಗತಮೇವ । ನ ಪರಮಾತ್ಮಗತಂ । ನಹಿ ಶರೀರಗತ ಧರ್ಮಾಣಾಂ ಶರೀರಿಣಿ ಪ್ರಸಕ್ತಿಃ । ಸಮ್ಯಗ್‌ಜ್ಞಾನವರ್ಧಕ ಸತ್ವಪ್ರವರ್ತಕತ್ವಾತ್ ವಾಸುದೇವ ಭಕ್ತಿರೇವ ಮೋಕ್ಷಪ್ರದಾ । -ವೀರರಾಘವಃ

ಯಥಾ ಭೌತಿಕ ನಿರ್ಮಾಣೇ ಭೂತಾಪೇಕ್ಷಾ ತಥಾ ಪ್ರಾಕೃತನಿರ್ಮಾಣೇ ಕರಣತ್ವೇನ ಪ್ರಕೃತ್ಯಪೇಕ್ಷಾ । ಅದ್ವೈತೇ ಗುಣಾಃ ಕಾರ್ಯಾರ್ಥಂ ಕರಣತ್ವೇನ ಗೃಹಿತಾ ಅಪಿ ನಿರಂತರ ಗ್ರಹಣಾದುಪಾಧಿರೂಪಾ ಜಾತಾಃ । ತೇನ ಯದ್‌ಭಜನಂ ತದುಪಾಧಾವೇವ ಪರ್ಯವಸಿತಂ ಭವತೀತಿ ಸತ್ವೋಪಾಧಿರೇವ ಸೇವ್ಯಃ । -ವಲ್ಲಭಾಚಾರ್ಯಃ

ಸೃಷ್ಟ್ಯರ್ಥಂ ಸ್ವಪ್ರಸಾದವಿಷಯೇಣ ಸ್ವಶಕ್ತಿಲೇಶೋಪಬೃಂಹಿತೇನ ಸ್ವಾಂಶಭೂತೇನ ಕ್ಷೇತ್ರಜ್ಞವಿಶೇಷೇಣ ರಜೋಗುಣಯುಕ್ತೇನ ವಿರಿಂಚಿರಿತಿ ಸಂಜ್ಞಾಂ ಧತ್ತೇ... ಸ್ವಾವತಾರೇಣ ಸ್ಥಿತ್ಯರ್ಥಂ ಸತ್ವಗುಣ ನಿಯಂತೃತಯಾ ಹರಿರಿತಿ ಸಂಜ್ಞಾಂ ಧತ್ತೇ । ಶ್ರೇಯಾಂಸಿ ತು ಸತ್ವತನೋಃ ಸತ್ವನಿಯಂತುಃ ಸಕಾಶಾದೇವ ಸ್ಯುಃ । -ಶುಕದೇವಃ

ಹರೌ ಮಾಯಾಗುಣಸ್ಯ ಸತ್ವಸ್ಯ ಯುಕ್ತತ್ವೇಽಪಿ ಪ್ರಾಕೃತಸತ್ವಸ್ಯ ನ ಹರಿಶರೀರಾರಂಭಕತ್ವಂ।

ವ್ಯಾಹತ ಅಪ್ರಾಮಾಣಿಕ ಅಸಂಗತ ಕಲ್ಪನೆಗಳಿಗೆ ಅವಕಾಶವಿರುವುದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ—

ವಿಷ್ಣೋರೇವ ತ್ರಿಸಂಜ್ಞಾಃ । ವಾಮನೇ ಚ—
ಬ್ರಹ್ಮವಿಷ್ಣ್ವೀಶರೂಪಾಣಿ ತ್ರೀಣಿ ವಿಷ್ಣೋರ್ಮಹಾತ್ಮನಃ ।
ಬ್ರಹ್ಮಣಿ ಬ್ರಹ್ಮರೂಪೋಽಸೌ ಶಿವರೂಪೀ ಶಿವೇ ಸ್ಥಿತಃ ।
ಪೃಥಗೇವ ಸ್ಥಿತೋ ದೇವೋ ವಿಷ್ಣುರೂಪೀ ಜನಾರ್ದನಃ । ಇತಿ ।
ತ್ರಯೋಽಪಿ ಗುಣಾ ವಿಷ್ಣ್ವಾಶ್ರಯಾಃ । ತಥಾಪಿ ಸತ್ವತನೌ ಜೀವೇ ಶ್ರೇಯಾಂಸಿ ಸ್ಯುಃ ।

ವಿಷ್ಣುವಿಗೇ ಮೂರು ಹೆಸರುಗಳು, ಮುಖ್ಯವಾಗಿ. ವಾಮನಪುರಾಣದಲ್ಲಿ ಇದು ಉಕ್ತವಾಗಿದೆ. ಬ್ರಹ್ಮವಿಷ್ಣುರುದ್ರ ಎಂದು ವಿಷ್ಣುವಿಗೆ ಮೂರು ರೂಪಗಳು. ಬ್ರಹ್ಮನಲ್ಲಿ ಬ್ರಹ್ಮರೂಪದಿಂದಲೂ ಶಿವನಲ್ಲಿ ಶಿವರೂಪದಿಂದಲೂ ಪ್ರತ್ಯೇಕವಾಗಿ ವಿಷ್ಣುರೂಪದಿಂದಲೂ ಜನಾರ್ದನನಿರುತ್ತಾನೆ ಎಂದು. ಮೂರು ಗುಣಗಳಿಗೂ ವಿಷ್ಣುವೆ ಪ್ರೇರಕ. ಆದರೂ ಸತ್ತ್ವಗುಣ ಅಧಿಕವಾಗಿರುವ ಶರೀರಿಂದ ಕೂಡಿದ ಜೀವನಲ್ಲಿಯೆ ಜ್ಞಾನಭಕ್ತ್ಯಾದಿ ಶ್ರೇಯಃ ಸಾಧನಗಳು ಕಂಡುಬರುತ್ತವೆ. ಏಕೆಂದರೆ ಸತ್ವಗುಣ ಶ್ರೇಷ್ಠ.

★★★

ಸತ್ವಗುಣ ಶ್ರೇಷ್ಠವಾದ್ದರಿಂದ ಸಾತ್ವಿಕ ಶರೀರಧಾರಿಯಾದ ಜೀವನಲ್ಲಿಯೆ ಜ್ಞಾನ ಭಕ್ತ್ಯಾದಿ ಗುಣಗಳು ವೃದ್ಧಿಹೊಂದುವುವು ಎಂದು ಹಿಂದೆ ಹೇಳಿದೆ. ಸತ್ವಗುಣ ಏಕೆ ಶ್ರೇಷ್ಠ ಎಂದು ಸೂತರು ಹೇಳುತ್ತಾರೆ—

ಪಾರ್ಥಿವಾದ್ ದಾರುಣೋ ಧೂಮಸ್ತಸ್ಮಾದಗ್ನಿಸ್ತ್ರಯೀಮಯಃ ।
ತಮಸಸ್ತು ರಜಸ್ತಸ್ಮಾತ್ ಸತ್ವಂ ಯದ್ ಬ್ರಹ್ಮದರ್ಶನಂ ॥ ೨೪ ॥

ಪಾರ್ಥಿವವಾದ ಕಟ್ಟಿಗೆಗಿಂತ ಅಂತರಿಕ್ಷದಲ್ಲಿ ಮೋಡವಾಗುವ ಹೊಗೆ ಶ್ರೇಷ್ಠ. ಹೊಗೆಗಿಂತಲೂ ಸ್ವರ್ಗಲೋಕದ ದೇವತೆಗಳನ್ನು ತೋರಬಲ್ಲ ಅಗ್ನಿ ಶ್ರೇಷ್ಠ. ಹಾಗೇ

ರಜಸ್ತಮಸೋಸ್ತು ವಿಕ್ಷೇಪರೂಪತ್ವಾವರಣರೂಪತ್ವಾಭ್ಯಾಂ ಆನಂದಸ್ಯ ವಿಕ್ಷಿಪ್ತತ್ವಮಾವೃತತ್ವಮಿತ್ಯುಪರಾಗಸಂಭವಾತ್ ಬ್ರಹ್ಮರುದ್ರಯೋಃ ರಜಸ್ತಮಸ್ತನುತ್ವಮೇವೇತಿ ತಯೋಃ ಸಗುಣತ್ವಂ ಹರೇರ್ನಿರ್ಗುಣತ್ವಂಚ ಯುಕ್ತಿಸಿದ್ಧಮೇವ । ಪ್ರಾಕೃತಸತ್ವಸ್ಯ ಪ್ರಕಾಶರೂಪೇಣ ತತ್ಸಮೀಪವರ್ತಿತಯಾ ತತ್ರ ಸ್ಥಿತತ್ವಾತ್ ವಿಶ್ವಪಾಲನಲಕ್ಷಣಸ್ತದ್ಧರ್ಮ ಔದಾಸೀನ್ಯೇನ ಹರೌ ಪ್ರತೀಯತೇ । ಸಂಯೋಗ ಸಮವಾಯಾಭ್ಯಾಂ ಪ್ರಾಕೃತ ಸತ್ವಸ್ಯ ತತ್ರಾಸಂಭವಾತ್ । -ವಿಶ್ವನಾಥಃ

ತಮಸ್ಸಿಗಿಂತಲೂ ಸ್ವರ್ಗಾದಿ ಊರ್ಧ್ವಲೋಕಕ್ಕೆ ಒಯ್ಯುವ ರಜಸ್ಸು ಶ್ರೇಷ್ಠ. ರಜಸ್ಸಿಗಿಂತಲೂ ಪರಮಾತ್ಮದರ್ಶನ ಮಾಡಿಸುವ ಸತ್ವಗುಣ ಶ್ರೇಷ್ಠ.

ಇಲ್ಲಿ ಕಟ್ಟಿಗೆಗಿಂತ ಹೊಗೆ ಶ್ರೇಷ್ಠ ಹೇಗೆ ಎನ್ನಲು ಕಾರಣ ಕೊಟ್ಟಿಲ್ಲ. ಹೊಗೆ ಬಂದರೆ ಮಾತ್ರ ಅಗ್ನಿ ಇನ್ನು ಜ್ವಲಿಸುವುದೆಂದು ಯಾಜ್ಞಿಕರು ತಯಾರಾಗುತ್ತಾರೆ ಎಂದು ಶ್ರೀಧರಾದಿ ವ್ಯಾಖ್ಯಾನಗಳು ಹೇಳುತ್ತವೆ. ವೀರರಾಘವ ವ್ಯಾಖ್ಯಾನದಲ್ಲಿ ಕಟ್ಟಿಗೆಯಿಂದ ಹುಟ್ಟುವ ಹೊಗೆಗಿಂತ ಅಗ್ನಿ ಶ್ರೇಷ್ಠ. ಏಕೆಂದರೆ ಅಗ್ನಿ ಪ್ರಕಾಶಕ, ಮತ್ತು ಯಾಗದ ಮೂಲಕ ಸ್ವರ್ಗಕ್ಕೆ ಕಾರಣವಾಗುತ್ತದೆ. ಹೊಗೆ ಪ್ರಕಾಶಕವಲ್ಲ, ಯಾಗಸಾಧನವೂ ಅಲ್ಲ. ಹಾಗೇ ಸತ್ವವು ಬ್ರಹ್ಮಜ್ಞಾನಸಾಧನವಾದ್ದರಿಂದ ತಮೋರಜ ಗಳಿಗಿಂತ ಶ್ರೇಷ್ಠ ಎಂದಿದೆ. ಇಲ್ಲಿ ಕಟ್ಟಿಗೆಯಿಂದ ಹೊಗೆ ಹುಟ್ಟುವ ಅಂಶ ಹೇಳಿದ್ದು ಪ್ರಕೃತಕ್ಕೆ ಅನುಪಯುಕ್ತ ಮತ್ತು ತಮಸ್ಸಿಗಿಂತ ರಜಸ್ಸು ಶ್ರೇಷ್ಠವೆಂಬ ಅಂಶ ಹೇಳಿದಂತಾಗಿಲ್ಲ. ಆದರಿಂದ ಹೀಗೆ ಹೇಳಬೇಕು—

ಮೇಘರೂಪತ್ವಾದ್ ಧೂಮ ಉತ್ತಮಃ ।

ಮೋಡವಾಗಿ ಪರಿಣಮಿಸುವುದರಿಂದ ಹೊಗೆ ಉತ್ತಮ.

'ಧೂಮ ಜ್ಯೋತಿಃ ಸಲಿಲ ಮರುತಾಂ ಸನ್ನಿಪಾತಃ ಕ್ವ ಮೇಘಃ' ಎಂಬಂತೆ ಹೊಗೆ ತೇಜಸ್ಸು ನೀರು ಗಾಳಿ ಇವು ನಾಲ್ಕು ಸೇರಿ ಮೋಡವಾಗುತ್ತದೆ. ಇದು ಅಂತರಿಕ್ಷಕ್ಕೆ ಸಂಬಂಧಿಸಿದೆ. ಭೂಲೋಕದಲ್ಲಿ ಕಟ್ಟಿಗೆ, ಅಂತರಿಕ್ಷದಲ್ಲಿ ಹೊಗೆ, ಸ್ವರ್ಗಲೋಕದ ದೇವತೆಗಳನ್ನು ತೋರುವುದು ಯಾಗಾಗ್ನಿ. ಹಿಂದಿನ ಯುಗಗಳಲ್ಲಿ ದೇವತೆಗಳು ಪ್ರತ್ಯಕ್ಷವಾಗಿ ಯಾಗಶಾಲೆಗೆ ಬರುತ್ತಿದ್ದರು. ಕಲಿಯುಗದಲ್ಲಿ ಅಪ್ರತ್ಯಕ್ಷವಾಗಿ ಬಂದು ಕುಳಿತಿರುತ್ತಾರೆ. ಹೀಗೆ ಕಟ್ಟಿಗೆ ಹೊಗೆ ಬೆಂಕಿಗಳು ಕ್ರಮವಾಗಿ ಶ್ರೇಷ್ಠವಾದಂತೆ ತಮಸ್ಸು ಅಧೋಲೋಕಕ್ಕೂ, ರಜಸ್ಸು ಸ್ವರ್ಗಾದಿಗಳಿಗೂ, ಸತ್ವ ಇನ್ನೂ ಮೇಲಿನ ವೈಕುಂಠಾದಿ ಲೋಕ್ಕೂ ಕಾರಣವಾದ್ದರಿಂದ ಅವುಗಳಲ್ಲಿ ತಾರತಮ್ಯವಿದೆ. ಅದರಿಂದ ಸತ್ವ ಶ್ರೇಷ್ಠ.

★★★

ಮುಮುಕ್ಷುಗಳು ಶ್ರೇಯಃಸಾಧನವಾದ ಸತ್ವಗುಣವನ್ನೇ ತಮ್ಮಲ್ಲಿ ಬೆಳೆಸಿಕೊಳ್ಳ ಬೇಕು ಎನ್ನುತ್ತಾರೆ ಸೂತರು—

ಭೇಜಿರೇ ಮುನಯೋಽಥಾಗ್ರೇ ಭಗವಂತಮಧೋಕ್ಷಜಂ ।
ಸತ್ವಂ ವಿಶುದ್ಧಂ ಕ್ಷೇಮಾಯ ಕಲ್ಪತೇ ನೇತರಾವಿಹ ॥ ೨೬ ॥

ಸಾತ್ವಿಕ ಸ್ವಭಾವದವರು ಹಿಂದೆ, ಭಗವಾನ್ ವಿಷ್ಣುವನ್ನೇ ಸೇವಿಸಿದ್ದಾರೆ. ಸಾತ್ವಿಕ ಸ್ವಭಾವದವರಿಗೆ ಮಾತ್ರ ವಾಸುದೇವನಲ್ಲಿ ಭಕ್ತಿ ಹುಟ್ಟುವುದರಿಂದ ಅವರಿಗೇ ಮೋಕ್ಷ

ರಜಸ್ಸು ತಮಸ್ಸುಗಳಿಂದ ಕಲುಷಿತವಲ್ಲದ ಸತ್ವಗುಣವೇ ಮೋಕ್ಷಸಾಧನ ವಾಗುತ್ತದೆ ಹೊರತು ರಜಸ್ಸು ತಮಸ್ಸುಗಳಲ್ಲ.

ರಜಸ್ತಮಃಪ್ರಕೃತಯಃ ಸಮಶೀಲಾನ್ ಭಜಂತಿ ವೈ ।
ಪಿತೃಭೂತಪ್ರಜೇಶಾದೀನ್ ಶ್ರಿಯೈಶ್ವರ್ಯಪ್ರಜೇಪ್ಸವಃ ॥ ೨೮ ॥

ರಾಜಸ ತಾಮಸ ಪ್ರಕೃತಿಯವರು ಸಂಪತ್ತು ಅಧಿಕಾರ ಸಂತತಿಗಳ ಲಾಲಸೆಯಿಂದ ಪಿತೃಗಳನ್ನೂ ರುದ್ರಾದಿಗಳನ್ನೂ ಪ್ರಜಾಪತಿಗಳನ್ನೂ ಆರಾಧಿಸುತ್ತಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಕಲ್ಪಂತೇ ಯೇಽನು ತಾನಿಹ' ಎಂದು ಪಾಠವಿಟ್ಟುಕೊಂಡು ಪೂರ್ವಿಕರು 'ವಿಶುದ್ಧಸತ್ವ' ಎಂದರೆ 'ಸತ್ವಮೂರ್ತಿ'ಯಾದ ಸತ್ವಶರೀರಿಯಾದ ಹರಿಯನ್ನು ಭಜಿಸಿದರು. ಅವರನ್ನು ಅನುಸರಿಸುವವರು ಸಂಸಾರದಲ್ಲಿ ಕ್ಷೇಮ ಹೊಂದುತ್ತಾರೆ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಆದರೆ ಹಿಂದೆ ಎಲ್ಲಕಡೆ 'ಸತ್ವಗುಣಯುಕ್ತ' ಎಂದೇ ಭಗವಂತನನ್ನು ಹೇಳಲಾಗಿದೆ. 'ಸತ್ವಶರೀರಿ' ಎಂದಿಲ್ಲ. ಪ್ರಾಕೃತ ಸತ್ವಗುಣ ಭಗವಂತನ ಶರೀರ ಎಂದು ವೀರರಾಘವ ವ್ಯಾಖ್ಯಾನದಲ್ಲಿ ಒಪ್ಪಿದ್ದರೂ ಅದು 'ನಿರ್ಗುಣಶ್ಚ' ಇತ್ಯಾದಿ ಶ್ರುತಿಸ್ಮೃತಿ ವಿರುದ್ಧ. ಆದರಿಂದ ಅದು ಅಪಪಾಠ. 'ಕಲ್ಪತೇ ನೇತರಾವಿಹ' ಎಂಬ ಶುದ್ಧಪಾಠದಲ್ಲಿ ಸತ್ವಗುಣವೇ ಕ್ಷೇಮಕರ ಹೇಗೆ ಎನ್ನುವುದನ್ನು ಸಮರ್ಥಿಸುವುದು ಹೇಗೆ? ಎಂದು ಒಂದು ಪ್ರಶ್ನೆ.

ಪಿತೃಭೂತ ಪ್ರಜೇಶಾದೀನ್ ಎಂಬಲ್ಲಿ 'ಪಿತೃಭೂತಪ್ರಜಾ' ಎಂಬ ದ್ವಂದ್ವ ಸಮಾಸದ ಮೇಲೆ 'ಈಶ' ಶಬ್ದವಿರುವುದರಿಂದ ಪಿತೃಗಳ ಈಶರನ್ನು ಭಜಿಸುತ್ತಾರೆ ಎಂದಂತಾಗುವುದು. ವಸ್ತುತಃ ಪಿತೃಗಳನ್ನು ಭಜಿಸುತ್ತಾರೆ. ಆದಕ್ಕೆ ಅನುಗುಣವಾಗಿ ಹೇಗೆ ಸಮಾಸವಿಟ್ಟುಕೊಳ್ಳಬೇಕು? ಈ ಎರಡು ಪ್ರಶ್ನೆಗಳಿಗೆ ಸಮಾಧಾನ—

ಸಾತ್ವಿಕಾನಾಂ ವಾಸುದೇವೇ ಭಕ್ತಿರುತ್ಪದ್ಯತೇ ।
ಭೂತೇಶ ಪ್ರಜೇಶಾದೀನ್ ।

ಸಾತ್ವಿಕಸ್ವಭಾವದವರಿಗೆ ಹರಿಯಲ್ಲಿ ಭಕ್ತಿ ಹುಟ್ಟುತ್ತದೆ. ಆದರಿಂದ ಸತ್ವಗುಣ ಭಕ್ತಿವರ್ಧನೆ ಮಾಡಿ ಕ್ಷೇಮಕಾರಿಯಾಗುತ್ತದೆ. ಪಿತೃಭೂತ ಪ್ರಜೇಶಾದೀನ್ ಎಂಬಲ್ಲಿ ಪಿತೃಗಳನ್ನೂ ಭೂತೇಶಪ್ರಜೇಶಾದಿಗಳನ್ನೂ ಎಂದು ಅರ್ಥವಿಟ್ಟುಕೊಳ್ಳಬೇಕು. ಮೊದಲಿಗೆ ಭೂತಶಬ್ದ-ಪ್ರಜಾಶಬ್ದಗಳಿಗೆ ಮಾತ್ರ ದ್ವಂದ್ವಸಮಾಸ.

★★★

ಮೋಕ್ಷಶಾಸ್ತ್ರವಾದ ವೇದ ಮುಖ್ಯವಾಗಿ ಜನ್ಮಾದಿಕಾರಣನಾದ ಹರಿಯನ್ನೇ ಕೊಂಡಾಡುವುದರಿಂದ ಮೋಕ್ಷಕ್ಕಾಗಿ ಹರಿಯನ್ನೇ ಭಜಿಸಬೇಕು ಎನ್ನುತ್ತ ಹರಿ ಹೇಗೆ ಜನ್ಮಾದಿಕಾರಣನೆಂಬುದನ್ನು ಸೂತರು ವರ್ಣಿಸುತ್ತಾರೆ—

ಸ ಏವೇದಂ ಸಸರ್ಜಾಗ್ರೇ ಭಗವಾನಾತ್ಮ ಮಾಯಯಾ ।
ಸದಸದ್ರೂಪಯಾ ಚಾಸೌ ಗುಣಮಯ್ಯಾಽ ಗುಣೋ ವಿಭುಃ ॥ ೩೧ ॥
ತಯಾ ವಿಲಸಿತೇಷ್ವೇಷು ಗುಣೇಷು ಗುಣವಾನಿವ ।
ಅಂತಃ ಪ್ರವಿಷ್ಟ ಆಭಾತಿ ವಿಜ್ಞಾನೇನ ವಿಜೃಂಭಿತಃ ॥ ೩೨ ॥

ಪ್ರಾಕೃತ ಗುಣರಹಿತನೂ ಸರ್ವವ್ಯಾಪಕನೂ ಆದ ಭಗವಂತನೇ ಸ್ವೇಚ್ಛೆಯಿಂದ ಪ್ರಾಕೃತ ಗುಣಮಯ ಕಾರ್ಯಕಾರಣರೂಪವಾದ ಪ್ರಕೃತಿಯಿಂದ ಪ್ರಪಂಚವನ್ನು ನಿರ್ಮಿಸಿದ. ಬಳಿಕ ವಿಶೇಷಜ್ಞಾನ ಪೂರ್ಣನಾದ ಆ ಭಗವಂತ ಪ್ರಕೃತಿ ಪರಿಣಾಮರೂಪವಾದ ಕಾರ್ಯವಸ್ತುಗಳಲ್ಲಿ ಪ್ರೇರಕನಾಗಿ ಒಳಗೆ ಪ್ರವೇಶಿಸಿದ್ದರಿಂದ ಅಜ್ಞಾನಿಗಳು ಅವನನ್ನು ಗುಣಬದ್ಧನಾದ ಜೀವನೆಂದು ಭ್ರಮಿಸುತ್ತಾರೆ.

ಇಲ್ಲಿ ಆತ್ಮಮಾಯಾ ಎಂದರೆ ಮಾಯಾವಾದಿಗಳ ಮಾಯೆ ಎಂಬ ಭ್ರಾಂತಿ ಬರಬಹುದು. ಪ್ರಪಂಚರೂಪವಾಗಿ ಪರಿಣಮಿಸುವ ಶಕ್ತಿ ಭಗವಂತನಿಗೆ ಇದೆ. ಇದೇ ಮಾಯೆ ಎಂದು ವಲ್ಲಭಾಚಾರ್ಯ ವ್ಯಾಖ್ಯಾನ, ಶುಕದೇವವ್ಯಾಖ್ಯಾನವೂ ಹಾಗೇ ಹೇಳುತ್ತದೆ. ವೀರರಾಘವ ವ್ಯಾಖ್ಯಾನದಲ್ಲಿ ಮಾಯೆ ಎಂದರೆ ಭಗವಂತನ ಸೂಕ್ಷ್ಮಶರೀರರೂಪವಾದ ಪ್ರಕೃತಿ. ವಸ್ತುತಃ ಆತ್ಮಮಾಯಾ ಎಂದರೆ ಸ್ವೇಚ್ಛೆ. ಹಾಗೆ ಹೇಳಿದರೆ 'ಸದಸದ್ರೂಪಯಾ' ಕಾರ್ಯಕಾರಣರೂಪವಾದ ಎಂಬ ವಿಶೇಷಣ ಹೇಗೆ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಚಕಾರವಿದೆ. ಕಾರ್ಯಕಾರಣರೂಪವಾದ ಪ್ರಕೃತಿ ಮತ್ತು ಸ್ವೇಚ್ಛೆಗಳು ಸೃಷ್ಟಿಗೆ ಕಾರಣ ಎನ್ನಬೇಕು. ಬೇರೆ ವ್ಯಾಖ್ಯಾನಕಾರರು ಚಕಾರವನ್ನು 'ಅಗುಣಶ್ಚ' ಎಂದು ಅನ್ವಯಿಸಿ 'ನಿರ್ಗುಣನಾದರೂ' ಎಂದು ಕ್ಲೇಶದಿಂದ ವ್ಯಾಖ್ಯಾನ ಮಾಡಿದ್ದಾರೆ. ಅದಕ್ಕೆ ಹೇಳುತ್ತಾರೆ—

ಆತ್ಮಮಾಯಯಾ ಸ್ವೇಚ್ಛಯಾ, ಸದಸದ್ರೂಪಯಾ ಪ್ರಕೃತ್ಯಾ ಚ ।

ಆತ್ಮಮಾಯೆಯಿಂದ ಎಂದರೆ ಸ್ವೇಚ್ಛೆಯಿಂದಲೂ, ಚಕಾರವಿರುವುದರಿಂದ, ಕಾರ್ಯಕಾರಣರೂಪವಾದ ಪ್ರಕೃತಿಯಿಂದಲೂ ಪ್ರಪಂಚವನ್ನು ಸೃಷ್ಟಿಮಾಡಿ ಎಂದು ಅರ್ಥ.

'ತಯಾ ವಿಲಸಿತೇಷು' ಎಂಬಲ್ಲಿ 'ತಯಾ' ಎಂದರೆ ಯಾವ ಮಾಯೆ? ಸ್ವೇಚ್ಛೆ ಮತ್ತು ಪ್ರಕೃತಿ ಎಂದು ಎರಡು ಮಾಯೆಗಳು ಹಿಂದಿನ ಶ್ಲೋಕದಲ್ಲಿ ಪ್ರಸಕ್ತವಾಗಿವೆ.

'ವಿಜ್ಞಾನೇನ ವಿಜೃಂಭಿತಃ' ಎಂಬಲ್ಲಿ ವಿಜ್ಞಾನವೆಂದರೆ ಜೀವ ಎಂದು ವೀರರಾಘವ ಶುಕದೇವ ವಲ್ಲಭ ವ್ಯಾಖ್ಯಾನಗಳು ಹೇಳುತ್ತಿವೆ. ಜೀವನೊಳಗಿರುವುದರಿಂದ ಪರಮಾತ್ಮನಿಗೆ ಜೀವನು ಶರೀರ, ಜೀವನ ಪುಣ್ಯಪಾಪಾನುಸಾರ ಪರಮಾತ್ಮ ಪ್ರವೃತ್ತಿ ಮಾಡುತ್ತಾನೆ ಎಂದು ಮುಂತಾಗಿ ವಿವರಣೆ ನೀಡುತ್ತಿವೆ. ಆದಕ್ಕೆ ಹೇಳುತ್ತಾರೆ—

'ತಯಾ' ಸದಸದ್ರೂಪಯಾ ।
ವಿಜ್ಞಾನೇನ ವಿಜೃಂಭಿತಃ ವಿಜ್ಞಾನೇನ ಸಂಪೂರ್ಣಃ ।

'ಆ ಮಾಯೆಯಿಂದ' ಎಂದರೆ, ಕಾರ್ಯಕಾರಣರೂಪವಾದ ಪ್ರಕೃತಿಯಿಂದ ಎಂದರ್ಥ. ವಿಜ್ಞಾನೇನ ವಿಜೃಂಭಿತಃ ಎಂದರೆ ವಿಶೇಷ ಜ್ಞಾನದಿಂದ ಪೂರ್ಣನಾದ ಭಗವಂತ ಎಂದರ್ಥ.

★★★

ಪರಮಾತ್ಮ ಬಹುರೂಪನಾಗಿ ಎಲ್ಲರೊಳಗೆ ಅಂತರ್ಯಾಮಿಯಾಗಿ ಶುಭ ವಿಷಯಭೋಗವನ್ನೆ ಮಾಡುತ್ತಾನೆ ಎನ್ನುತ್ತಾರೆ ಸೂತರು—

ಅಸೌ ಗುಣಮಯೈರ್ಭಾವೈರ್ಭೂತಸೂಕ್ಷ್ಮೇಂದ್ರಿಯಾತ್ಮಭಿಃ ।
ಸ್ವನಿರ್ಮಿತೇಷು ನಿರ್ವಿಷ್ಟೋ ಭುಂಕ್ತೇ ಭೂತೇಷು ತದ್ಗುಣಾನ್ ॥ ೩೪ ॥

ಶ್ರೀಹರಿ ಸತ್ವಾದಿಗುಣಮಯವಾದ ಪಂಚಭೂತ ಪಂಚತನ್ಮಾತ್ರ ದಶೇಂದ್ರಿಯ ಮನಸ್ಸುಗಳಿಂದ ತಾನು ನಿರ್ಮಿಸಿರುವ ಶರೀರಗಳಲ್ಲಿ ತಾನು ಪ್ರವೇಶಮಾಡಿ ಇಂದ್ರಿಯಗಳಿಂದ ಶುಭವಿಷಯಗಳನ್ನೆ ಭೋಗಿಸುತ್ತಾನೆ.

ಇಲ್ಲಿ ಅಂತರ್ಯಾಮಿಯೂ ಜೀವನಂತೆ ವಿಷಯಭೋಗ ಮಾಡುತ್ತಾನೆ ಎಂದುದು ಎಲ್ಲ ವ್ಯಾಖ್ಯಾನಕಾರರಿಗೆ ಸಮಸ್ಯೆಯಾಗಿದೆ. ಜೀವದ್ವಾರಾ ಅಂತರ್ಯಾಮಿ ಭೋಗಿಸುತ್ತಾನೆ, ಅಂದರೆ ತಾನು ಭೋಗಿಸುವುದಿಲ್ಲ. ಜೀವ ಭೋಗಿಸಿದರೆ ಜೀವದ್ವಾರಾ ತಾನು ಭೋಗಿಸಿದಂತಾಯಿತು ಎಂದು ವಿವರಣೆ ನೀಡಿದ್ದಾರೆ. ಅಥವಾ 'ಭುಂಕ್ತೇ' ಎಂದರೆ 'ಅಂತರ್ನೀತ ಣಿಚ್' ಇಟ್ಟುಕೊಂಡು ಜೀವರಿಗೆ ಅವರವರ ಕರ್ಮಫಲ ಉಣಿಸುತ್ತಾನೆ ಎಂದೂ ಅರ್ಥೈಸಿದ್ದಾರೆ. ವಸ್ತುತಃ ಇಲ್ಲಿ ಸಮಸ್ಯೆ ಇಲ್ಲ. ಜೀವನು ಶುಭ ಅಶುಭ ಎಲ್ಲವನ್ನೂ ಕರ್ಮಾನುಸಾರ ಉಣ್ಣುತ್ತಾನೆ. ಅಂತರ್ಯಾಮಿ ಸ್ವಶಕ್ತಿಯಿಂದ ಅಶುಭವನ್ನು ಬಿಟ್ಟು ಶುಭವನ್ನೆ ಉಣ್ಣುತ್ತಾನೆ. ತದ್ ಗುಣಾನ್ ಭುಂಕ್ತೇ ಎಂದು ಗುಣಶಬ್ದವಿದೆ. ಗುಣ ಎಂದರೆ ಶುಭವಿಷಯ.

ತದ್ಗುಣಾನೇವ ಭುಂಕ್ತೇ, ನ ದೋಷಾನ್ ।
ಸರ್ವತ್ರ ಸಾರಭುಗ್ ದೇವೋ ನಾಸಾರಂ ಸ ಕದಾಚನ ।
ಇತಿ ವಾಮನಪುರಾಣೇ । ಅನಶ್ನನ್ನಿತ್ಯಶುಭಾಪೇಕ್ಷಯಾ,
ಪರವಶತ್ವಾಪೇಕ್ಷಯಾ, ಕ್ಲಪ್ತ್ಯಪೇಕ್ಷಯಾ ಚ ।
ಅಕ್ಲಪ್ತ್ಯಾಚ ಸ್ವತಂತ್ರತ್ವಾದಶುಭಸ್ಯ ಚ ವರ್ಜನಾತ್ ।
ಅಭೋಕ್ತಾ ಶುಭಭೋಕ್ತೃತ್ವಾದ್ ಭೋಕ್ತೇತ್ಯೇವ ಚ ತಂ ವಿದುಃ ।
ಅನ್ಯೂನಾನಧಿಕತ್ವಾಚ್ಚ ಪೂರ್ಣಃ ಸ್ವಾನಂದಭೋಜನಾತ್ ।
ವಿರಾಗಾಚ್ಚ ಪರಸ್ಯಾಸ್ಯ ಭೋಕ್ತೃತ್ವ ಪ್ರತಿಷೇಧನಂ ।
ಇತಿ ಸ್ಕಾಂದೇ ।

ವಿಷಯಪದಾರ್ಥಗಳಲ್ಲಿ ಶುಭರಸವನ್ನೇ ಅಂದರೆ ತನ್ನ ಸ್ವರೂಪಭೂತವಾದ ಆನಂದವನ್ನೇ ಭೋಗಿಸುತ್ತಾನೆ ಹೊರತು ಅಶುಭವಾದ ಜೀವಯೋಗ್ಯವಾದ ರಸವನ್ನು ಹರಿ ಉಣ್ಣುವುದಿಲ್ಲ. ''ಎಲ್ಲೆಡೆ ಸಾರಪದಾರ್ಥವನ್ನೇ ಹರಿ ಉಣ್ಣುತ್ತಾನೆ, ಅಸಾರ ಪದಾರ್ಥವನ್ನಲ್ಲ'' ಎಂದು ವಾಮನಪುರಾಣ ಹೇಳಿದೆ. 'ಅನಶ್ನನ್ನನ್ಯೋ ಅಭಿಚಾಕಶೀತಿ' ಶರೀರವೃಕ್ಷದಲ್ಲಿರುವ ಜೀವಪರಮಾತ್ಮಪಕ್ಷಿಗಳಲ್ಲಿ ಪರಮಾತ್ಮಪಕ್ಷಿ ಏನೂ ಉಣ್ಣುವುದಿಲ್ಲ ಎಂದರೆ ಅಶುಭವನ್ನು ಉಣ್ಣುವುದಿಲ್ಲ, ಶುಭವನ್ನೂ ಕರ್ಮ ಬದ್ಧನಾಗಿ ಪರವಶತೆಯಿಂದ ಉಣ್ಣುವುದಿಲ್ಲ ಪ್ರಯತ್ನದಿಂದ ಸಂಪಾದಿಸಿ ಉಣ್ಣುವುದಿಲ್ಲ ಎಂದರ್ಥ. ಸ್ಕಂದಪುರಾಣದಲ್ಲಿ ಹಾಗೇ ಹೇಳಿದೆ—''ಪ್ರಯತ್ನ ಮಾಡುವುದಿಲ್ಲ, ಪರಾಧೀನವಾಗಿ ಉಣ್ಣುವುದಿಲ್ಲ, ಅಶುಭವನ್ನು ಉಣ್ಣುವುದಿಲ್ಲ ಈ ಮೂರು ಕಾರಣ ಗಳಿಂದ ಹರಿ ಅಭೋಕ್ತ ಎನಿಸುತ್ತಾನೆ. ಶುಭರಸ ಉಣ್ಣುವುದರಿಂದ ಭೋಕ್ತನೆಂದೂ ಕರೆಸಿಕೊಳ್ಳುತ್ತಾನೆ. ಅಥವಾ ಅನಶ್ನನ್ ಎಂಬಲ್ಲಿ ಭೋಗ ನಿಷೇಧ ಮಾಡಿದುದರ ಅಭಿಪ್ರಾಯ ಹೀಗೆ— ''ವಿಷಯ ಭೋಗದಿಂದ ಹರಿಗೆ ತನ್ನ ಸ್ವರೂಪದಲ್ಲಿ ಉಚ್ಚತ್ವವೆಂಬ ವಿಕಾರವಿಲ್ಲ, ವಿಷಯಭೋಗವಿಲ್ಲದ್ದರಿಂದ ನೀಚತ್ವವೂ ಇಲ್ಲ. ವಿಷಯ ಭೋಗದಿಂದಲೆ ಸ್ವರೂಪಭೂತ ಆನಂದ ವ್ಯಕ್ತವಾಗಬೇಕೆಂಬುದೂ ಇಲ್ಲ. ಮತ್ತು ವಿಷಯ ಭೋಗದಲ್ಲಿ ಕಾಮನೆ ಇಲ್ಲ'' ಎಂದು. ಹೀಗೆ ಸ್ಕಂದಪುರಾಣ ಹೇಳಿದೆ.

ಇತಿ ಪ್ರಥಮಸ್ಕಂಧೇ ದ್ವಿತೀಯೋಽಧ್ಯಾಯಃ

ಮೂರನೆಯ ಅಧ್ಯಾಯ

ಅಧ್ಯಾಯ ಸಾರಾಂಶ

ಲಯಕಾಲದಲ್ಲಿ ಸುಮ್ಮನೆ ಮಲಗಿದ್ದ ಶೂನ್ಯನಾಮಕ ನಾರಾಯಣ ಲಯಕಾಲ ಕಳೆದಕೂಡಲೆ ಸೃಷ್ಟಿ ಮಾಡಲು ಬಯಸಿ ಕತ್ತಲ ಆವರಣವನ್ನು ಕಳೆದು ವ್ಯಕ್ತನಾದ. ಬಳಿಕ ಇಪ್ಪತ್ತನಾಲ್ಕು ತತ್ವಗಳನ್ನೂ ಬ್ರಹ್ಮಾಂಡವನ್ನೂ ಸೃಷ್ಟಿಮಾಡಿ ಅದರೊಳಗೆ ನೀರಲ್ಲಿ ಶೇಷಶಾಯಿಯಾಗಿ ಮಲಗಿದ. ಆಗ ಅವನ ನಾಭಿಯಿಂದ ಚತುರ್ದಶಲೋಕಾತ್ಮಕ ವಾದ ಪದ್ಮ ಉದಿಸಿತು. ಪದ್ಮದಲ್ಲಿ ಚತುರ್ಮುಖ ಜನಿಸಿದ. ಈ ಪದ್ಮನಾಭರೂಪ ದಿಂದ ಧಾಮತ್ರಯದಲ್ಲಿರುವ ನಾರಾಯಣ ವಾಸುದೇವ ವೈಕುಂಠರೂಪಗಳೂ ಅವುಗಳಿಂದ ಮತ್ಸ್ಯಾದಿ ಅವತಾರಗಳೂ ವ್ಯಕ್ತವಾದುವು. ಮೊದಲಿಗೆ ಸನಕಾದಿ ಮುನಿಗಳಿಗೆ ಬ್ರಹ್ಮಚರ್ಯವನ್ನು ಉಪದೇಶಿಸಿದ ಸನತ್ಕುಮಾರಾವತಾರ. ಬಳಿಕ ವರಾಹ, ಐತರೇಯಮಹಿದಾಸ ನರ ನಾರಾಯಣ ಕಪಿಲ ದತ್ತ ಯಜ್ಞ ಋಷಭ ಪೃಥು ಮತ್ಸ್ಯ ಕೂರ್ಮ ಧನ್ವಂತರಿ ಮೋಹಿನಿ ನರಸಿಂಹ ವಾಮನ ಪರಶುರಾಮ ವೇದವ್ಯಾಸ ರಾಮ ಬಲರಾಮ ಕೃಷ್ಣ ಬುದ್ಧ ಕಲ್ಕಿ ಅವತಾರಗಳು. ಇವುಗಳಲ್ಲಿ ನರ ಪೃಥು ಬಲರಾಮ ಈ ಮೂರು ಹರಿಯ ಆವೇಶಾವತಾರಗಳು. ಬೇರೆ ಎಲ್ಲವೂ ಸ್ವರೂಪಾವತಾರಗಳು. ಸ್ವರೂಪಾವತಾರ ಮೂಲರೂಪ ಭಗವಾನ್ ಕೃಷ್ಣನೇ ಹೊರತು ಬೇರೆಯಲ್ಲ. ಮೂಲರೂಪ ಅವತಾರ ರೂಪಗಳಿಗೆ ಏನೂ ವ್ಯತ್ಯಾಸವಿಲ್ಲ. ದೇವತೆಗಳು ಋಷಿಗಳು ಮುಂತಾದವರನ್ನೂ ಭಗವಂತನ ಅಂಶಗಳೆನ್ನುವುದುಂಟು. ಅದು ಭಿನ್ನಾಂಶರೆಂಬ ಅಭಿಪ್ರಾಯದಿಂದ ಹೊರತು ಸ್ವರೂಪಾಂಶರೆಂದಲ್ಲ. ಹರಿಗೆ ಮೂರು ಬಗೆಯ ರೂಪಗಳಿವೆ. ಮತ್ಸ್ಯಾದಿಗಳು ಸ್ವರೂಪರು. ಜೀವರು ಪ್ರತಿಬಿಂಬರೂಪರು, ಜಡವಸ್ತುಗಳು ಪ್ರತಿಮಾರೂಪಗಳು ಎಂದು. ಕೃಷ್ಣಾವತಾರ ಸಮಾಪ್ತಿಯಾದ ಬಳಿ ಆ ಕೃಷ್ಣನೆ ವ್ಯಾಸರೂಪದಿಂದ ಭಾಗವತ ಪುರಾಣದ ಮೂಲಕ ಧರ್ಮರಕ್ಷಣೆ ಮಾಡಿದ್ದಾನೆ. ವೇದತುಲ್ಯವಾದ ಈ ಭಾಗವತವನ್ನು ರಚಿಸಿ ಶುಕಮುನಿಗಳಿಗೆ ಉಪದೇಶಿಸಿದ್ದಾನೆ. ಶುಕಮುನಿ ಪ್ರಾಯೋಪವೇಶಕ್ಕೆ ಕುಳಿತ ಪರೀಕ್ಷಿತನಿಗೆ ಉಪದೇಶಿಸಿದರು. ಆಗ ನಾನೂ ಅವರ ಉಪದೇಶ ಕೇಳಿ ತಿಳಿದೆನೆನ್ನುತ್ತಾರೆ ಸೂತರು.

★★★

ಸೂತರು ಶೌನಕರಿಗೆ ಪರಮಾತ್ಮನ ಅವತಾರಲೀಲೆಗಳನ್ನು ವರ್ಣಿಸಲು ತೊಡಗಿ ಮೊದಲಿಗೆ ಬ್ರಹ್ಮಾಂಡವ್ಯಾಪಿ ವಿರಾಡ್ರೂಪ ಪುರುಷಾವತಾರವನ್ನು ವರ್ಣಿಸುತ್ತಾರೆ—

ಜಗೃಹೇ ಪೌರುಷಂ ರೂಪಂ ಭಗವಾನ್ ಮಹದಾದಿಭಿಃ ।
ಸಂಭೂತಂ ಷೋಡಶಕಲಂ ಆದೌ ಲೋಕಸಿಸೃಕ್ಷಯಾ ॥ ೧ ॥

ಭಗವಾನ್ ಶ್ರೀಹರಿ ಲೋಕಸೃಷ್ಟಿ ಮಾಡುವ ಇಚ್ಛೆಯಿಂದ ಮೊದಲಿಗೆ ಮಹದಾದಿ ತತ್ತ್ವಗಳಿಂದ ಕೂಡಿದ ಪ್ರಾಣಾದಿ ಷೋಡಶಕಲೆಗಳುಳ್ಳ ಪುರುಷ ಎಂಬ ರೂಪವನ್ನು ವ್ಯಕ್ತಮಾಡಿಕೊಂಡನು.

ಇಲ್ಲಿ 'ರೂಪಂ ಜಗೃಹೇ' ರೂಪವನ್ನು ಸ್ವೀಕರಿಸಿದನು' ಎಂದಿದೆ. ಪರಮಾತ್ಮನಿಗೆ ಮಹದಾದಿ ತತ್ತ್ವಗಳಿಂದಾದ ಶರೀರವಿಲ್ಲದಿರುವುದರಿಂದ ಇದು ಕೂಡುವುದಿಲ್ಲ ಎಂಬ ಆಕ್ಷೇಪಕ್ಕೆ ಇಲ್ಲಿ ಅವಕಾಶವಿದೆ. ಶ್ರೀಧರವ್ಯಾಖ್ಯಾನದಲ್ಲಿ ಹಿರಣ್ಯಗರ್ಭನೆಂಬ ಸಮಷ್ಟಿಜೀವನಿಗೆ ಇಂಥ ಶರೀರವಿದೆ, ಅವನ ಅಂತರ್ಯಾಮಿ ಭಗವಂತನನ್ನು ವಿರಾಟ್‌ರೂಪನೆಂದು ಉಪಾಸನೆ ಮಾಡಬೇಕು. ಇದು ಭಗವಂತನ ಅನುಪ್ರವೇಶಾವತಾರ ಹೊರತು ಸ್ವರೂಪಾವತಾರವಲ್ಲ. ಅದರಿಂದ ಮಹದಾದಿ ನಿರ್ಮಿತ ಶರೀರವೂ ಭಗವಂತನಿಗೆ ಕೂಡುತ್ತದೆ ಎಂದಿದೆ. ಇದಕ್ಕೆ ನಿರ್ಣಯ ಹೀಗೆ—

ವ್ಯಕ್ತ್ಯಪೇಕ್ಷಯಾ ಜಗೃಹ ಇತಿ । ತಥಾಹಿ ತಂತ್ರಭಾಗವತೇ—

ಅಹೇಯಮನುಪಾದೇಯಂ ಯದ್ರೂಪಂ ನಿತ್ಯಮವ್ಯಯಂ ।
ಸ ಏವಾಪೇಕ್ಷ್ಯ ರೂಪಾಣಾಂ ವ್ಯಕ್ತಿಮೇವ ಜನಾರ್ದನಃ ।
ಅಗೃಹ್ಣಾದ್ ವ್ಯಸೃಜಚ್ಚೇತಿ ಕೃಷ್ಣರಾಮಾದಿಕಾಂ ತನುಂ ।
ಪಠ್ಯತೇ ಭಗವಾನೀಶೋ ಮೂಢಬುದ್ಧಿವ್ಯಪೇಕ್ಷಯಾ ।
ತಮಸಾ ಹ್ಯುಪಗೂಢಸ್ಯ ಯತ್ತಮಃಪಾನಮೀಶಿತುಃ ।
ಏತತ್ ಪುರುಷರೂಪಸ್ಯ ಗ್ರಹಣಂ ಸಮುದೀರ್ಯತೇ ।
ಕೃಷ್ಣ ರಾಮಾದಿ ರೂಪಾಣಾಂ ಲೋಕವ್ಯಕ್ತಿವ್ಯಪೇಕ್ಷಯಾ' ಇತಿ ॥

ಮಹದಾದಿಭಿಃ ಸಂಭೂತಂ ಅಂತರ್ಗತ ಮಹದಾದಿ । ನ ಮಹದಾದಿಶರೀರಂ । ಷೋಡಶಕಲಂ - ಯಸ್ಮಿನ್ನೇತಾಃ ಷೋಡಶಕಲಾಃ ಪ್ರಭವಂತೀತಿ ಶ್ರುತಿಃ ।

'ಜಗೃಹೇ' ಎಂದರೆ ವ್ಯಕ್ತ ಮಾಡಿಕೊಂಡನೆಂದರ್ಥ. ಹಾಗೇ ತಂತ್ರಭಾಗವತ ದಲ್ಲಿ ಹೇಳಿದೆ— "ಹರಿಯು ಶರೀರವನ್ನು ಎಂದೂ ಬಿಡುವುದೂ ಇಲ್ಲ, ತೆಗೆದುಕೊಳ್ಳುವುದೂ ಇಲ್ಲ. ಅವನ ಶರೀರ ನಿತ್ಯ ಅವಿನಾಶಿ. ಶರೀರಗಳ ಅಭಿವ್ಯಕ್ತಿಯ ಮತ್ತು ಅಂತರ್ಧಾನದ ಅಭಿಪ್ರಾಯದಿಂದ ಹರಿ ರಾಮಕೃಷ್ಣಾದಿ ಶರೀರಗಳನ್ನು ಗ್ರಹಿಸಿದನೆಂದೂ ತ್ಯಜಿಸಿದನೆಂದೂ ಅಜ್ಞಜನರ ದೃಷ್ಟಿಗನುಸಾರ ವರ್ಣಿತ ನಾಗುತ್ತಾನೆ. ಪುರುಷಾವತಾರದಲ್ಲಿ ಈ ರೀತಿಯ ಶರೀರಗ್ರಹಣವೂ ಇಲ್ಲ, ಆ ಕಾಲದಲ್ಲಿ ಅಜ್ಞಜನರೆ ಇಲ್ಲ. ಅದರಿಂದ ಹೀಗೆ ಹೇಳಬೇಕು— ಬ್ರಹ್ಮಾಂಡಾಂತರ್ಗತವಾದ ಹರಿಯ ವಿರಾಡ್ರೂಪ ತಮಸ್ಸಿನಿಂದ ಆಚ್ಛಾದಿತವಾಗಿತ್ತು. ಹರಿ ಪ್ರಲಯಕಾಲದ ಆ ತಮಸ್ಸಿನ

ಆವರಣವನ್ನು ದೂರಮಾಡಿಕೊಳ್ಳುವುದೇ ಶರೀರಗ್ರಹಣ, ಕೃಷ್ಣರಾಮಾದಿ ರೂಪಗಳಿಗೆ ಹಾಗೆ ಆವರಣವಿಲ್ಲದ್ದರಿಂದ ಲೋಕದಲ್ಲಿ ಅಜ್ಞಜನರಿಗೆ ವ್ಯಕ್ತಮಾಡುವುದೇ ಶರೀರಗ್ರಹಣವೆನಿಸುತ್ತದೆ'' ಎಂದು.

'ಮಹದಾದಿಭಿಃ ಸಂಭೂತಂ' ಎಂದರೆ ಪುರುಷನ ಶರೀರ ಚಿನ್ಮಯವೆ ಆಗಿದ್ದರೂ ಜೀವರಿಗೆ ಶರೀರವನ್ನು ಸೃಷ್ಟಿಸುವ ಸಲುವಾಗಿ ಮಹದಾದಿಗಳ ಅಂಶಗಳನ್ನು ತನ್ನ ಉದರದಲ್ಲಿ ಇಟ್ಟುಕೊಂಡಿದ್ದನೆಂದರ್ಥ.

'ಷೋಡಶಕಲಂ' ಎಂದರೂ ಹೀಗೇ. ಜೀವರ ಶರೀರಗಳ ಹದಿನಾರು ಅಂಶಗಳಾದ ಪಂಚಭೂತ ಹಾಗೂ ಏಕಾದಶ ಇಂದ್ರಿಯಗಳನ್ನು ಅವರಿಗಾಗಿ ತನ್ನ ಉದರದಲ್ಲಿಟ್ಟುಕೊಂಡವನೆಂದರ್ಥ. ಶ್ರುತಿಯು ಹಾಗೇ ಹೇಳುತ್ತದೆ— 'ಹರಿಯ ಉದರದಲ್ಲಿ ಹದಿನಾರು ಕಲೆಗಳಿರುತ್ತವೆ' ಎಂದು.

ಯತ್‌ಕಿಂಚಿದಿಹ ಲೋಕೇ ವೈ ದೇಹಬದ್ಧಂ ವಿಶಾಂಪತೇ ।
ಸರ್ವಂ ಪಂಚಭಿರಾವಿಷ್ಟಂ ಭೂತೈರೀಶ್ವರಬುದ್ಧಿಜೈಃ ।
ಈಶ್ವರೋ ಹಿ ಮಹದ್ಭೂತಂ ಪ್ರಭುರ್ನಾರಾಯಣೋ ವಿರಾಟ್ ।
ಭೂತಾಂತರಾತ್ಮಾ ವಿಜ್ಞೇಯಃ ಸಗುಣೋ ನಿರ್ಗುಣೋಽಪಿ ಚ ।
ಭೂತಪ್ರಲಯಮವ್ಯಕ್ತಂ ಶುಶ್ರೂಷುರ್ನೃಪಸತ್ತಮ' ॥
ಇತಿ ಮೋಕ್ಷಧರ್ಮೇ ।

'ನಾಸೀದಹೋ ನ ರಾತ್ರಿರಾಸೀನ್ನ ಸದಾಸೀತ್ ತನ್ಮಹದ್‌ವಪು-
ಸ್ತದಾಽಭವದ್ ವಿಶ್ವರೂಪಂ ಸಾ ವಿಶ್ವರೂಪಸ್ಯ ರಜನೀ'
ಇತಿ ಭಾಲ್ಲವೇಯಶ್ರುತಿಃ ।

ನ ತಸ್ಯ ಪ್ರಾಕೃತಾ ಮೂರ್ತಿರ್ಮಾಂಸ ಮೇದೋಽಸ್ಥಿಸಂಭವಾ ।
ನ ಯೋಗಿತ್ವಾದೀಶ್ವರತ್ವಾತ್ ಸತ್ಯರೂಪಾಚ್ಯುತೋ ವಿಭುಃ ।
ಇತಿ ವಾರಾಹೇ ।

ಸರ್ವೇ ನಿತ್ಯಾಃ ಶಾಶ್ವತಾಶ್ಚ ದೇಹಾಸ್ತಸ್ಯ ಪರಾತ್ಮನಃ ।
ಹಾನೋಪಾದಾನರಹಿತಾ ನೈವ ಪ್ರಕೃತಿಜಾಃ ಕ್ವಚಿತ್ ।
ಪರಮಾನಂದಸಂದೋಹಾ ಜ್ಞಾನಮಾತ್ರಾಶ್ಚ ಸರ್ವಶಃ ।
ಸರ್ವೇ ಸರ್ವಗುಣೈಃ ಪೂರ್ಣಾಃ ಸರ್ವೇ ಭೇದವಿವರ್ಜಿತಾಃ ।
ಅನ್ಯೂನಾನಧಿಕಾಶ್ಚೈವ ಗುಣೈಃ ಸರ್ವೈಶ್ಚ ಸರ್ವಶಃ ।
ದೇಹದೇಹಿಭಿದಾ ಚೈವ ನೇಶ್ವರೇ ವಿದ್ಯತೇ ಕ್ವಚಿತ್ ।

ತತ್‌ಸ್ವೀಕಾರಾದಿಶಬ್ದಸ್ತು ಹಸ್ತಸ್ವೀಕಾರವತ್ ಸ್ಮೃತಃ ।
ವೈಲಕ್ಷಣ್ಯಾನ್ನ ವಾ ತತ್ರ ಜ್ಞಾನಮಾತ್ರಾರ್ಥಮೀರಿತಂ ।
ಕೇವಲೈಶ್ವರ್ಯಸಂಯೋಗಾದೀಶ್ವರಃ ಪ್ರಕೃತೇಃ ಪರಃ ।
ಜಾತೋ ಗತಸ್ತ್ವಿದಂ ರೂಪಂ ತದಿತ್ಯಾದಿ ವ್ಯವಹ್ರಿಯತೇ ॥

ಇತಿ ಮಹಾವಾರಾಹೇ ।

''ರಾಜನೆ, ಲೋಕದಲ್ಲಿ ಶರೀರಧಾರಿಗಳಾದ ಜೀವರೆಲ್ಲರೂ ಪಂಚಭೂತಗಳಿಂದ ಯುಕ್ತರೇ ಆಗಿರುತ್ತಾರೆ. ಶ್ರೀಹರಿ ಹಾಗಲ್ಲ, ಅವನು ಸರ್ವನಿಯಾಮಕ, ಸರ್ವೋತ್ತಮ, ವಿಶೇಷವಾಗಿ ಪ್ರಕಾಶಿಸುವವನು, ಎಲ್ಲರ ಅಂತರಾತ್ಮ, ಆನಂದಾದಿ ಗುಣಪೂರ್ಣ ಸತ್ವಾದಿ ಗುಣರಹಿತ. ಅವ್ಯಕ್ತಾಭಿಮಾನಿ ರಮೆಯೂ ಅವನ ಸೇವಕಿಯಾಗಿರುವುದರಿಂದ ಅವ್ಯಕ್ತಾತ್ಮಕ ಶರೀರವೂ ಅವನಿಗೆ ಇಲ್ಲ'' ಎಂದು ಮೋಕ್ಷಧರ್ಮ ಹೇಳಿದೆ.

ಪ್ರಳಯಕಾಲದಲ್ಲಿ ಹಗಲು ರಾತ್ರಿ ಇಲ್ಲ, ಕಾರ್ಯರೂಪ ಪ್ರಪಂಚವಿಲ್ಲ, ವ್ಯಾಪ್ತಶರೀರಿಯಾದ ವಿಶ್ವರೂಪಿ ಹರಿಯೊಬ್ಬನೆ ಇರುತ್ತಾನೆ. ಪ್ರಳಯಕಾಲವೆ ಅವನಿಗೆ ರಾತ್ರಿಯಂತೆ ಎಂದು ಭಾಲ್ಲವೇಯಶ್ರುತಿ ಹೇಳಿದೆ. ಅದರಿಂದ ಹರಿಯ ಶರೀರ ಪ್ರಾಕೃತವಲ್ಲ.

ವರಾಹಪುರಾಣವೂ ಹಾಗೇ ಹೇಳುತ್ತದೆ. ''ಶ್ರೀಹರಿಗೆ ಮಾಂಸ ಮೇದಸ್ಸು ಅಸ್ಥಿಮಯವಾದ ಶರೀರವಿಲ್ಲ, ಅಪ್ರಾಕೃತಶರೀರವಿದೆ. ಇದು ಯೋಗಬಲದಿಂದಲ್ಲ, ಅಚಿಂತ್ಯಶಕ್ತಿಪ್ರಯುಕ್ತವಾಗಿದೆ. ಪೂರ್ಣಾನಂದಜ್ಞಾನರೂಪ ಶರೀರಿಯಾಗಿದ್ದು ನಾಶರಹಿತನಾದ್ದರಿಂದ ಅವನು ಸರ್ವಶಕ್ತನೆನಿಸಿದ್ದಾನೆ'' ಎಂದು.

ಮಹಾವರಾಹ ಪುರಾಣದಲ್ಲಿ ಹೀಗೆ ಹೇಳಿದೆ—''ಪರಮಾತ್ಮನ ಎಲ್ಲ ಶರೀರಗಳೂ ನಿತ್ಯ, ಶಾಶ್ವತ, ಅವುಗಳಲ್ಲಿ ಹೇಯ ಉಪಾದೇಯ ಎಂಬ ಭೇದವಿಲ್ಲ, ಅವು ಪ್ರಕೃತಿಯಿಂದ ಉಂಟಾದುವಲ್ಲ, ಪರಮಾನಂದ ಸಮೂಹರೂಪ. ಜ್ಞಾನಸ್ವರೂಪ. ಸರ್ವಗುಣ ಪರಿಪೂರ್ಣ, ಸ್ವಗತ ಭೇದರಹಿತ, ಒಂದು ಶರೀರದಲ್ಲಿ ಗುಣಗಳು ಅಧಿಕ ಇನ್ನೊಂದರಲ್ಲಿ ಕಡಿಮೆ ಎಂಬ ವೈಲಕ್ಷಣ್ಯ ಯಾವ ಶರೀರದಲ್ಲಿಯೂ ಇಲ್ಲ, ಅವನು ಶರೀರಿ, ಇದು ಅವನ ಶರೀರ ಎಂಬ ಭೇದವೂ ಇಲ್ಲ, ಅವನು ಶರೀರ ಸ್ವೀಕಾರ ಮಾಡುವುದೆಂದರೆ ದೇವದತ್ತನ ಶರೀರ ಹಸ್ತವನ್ನು ಸ್ವೀಕರಿಸಿತು ಎಂಬಂತೆಯೆ. ಶರೀರ ಹಸ್ತಗಳಿಗೆ ಅಭೇದವಿದ್ದರೂ ಸ್ವೀಕಾರವಿದೆ. ಹಾಗೇ ಹರಿಗೂ ಅವನ ಶರೀರಕ್ಕೂ ಅಭೇದವಿದ್ದರೂ ಅವನು ಶರೀರಗ್ರಹಣ ಮಾಡುತ್ತಾನೆ ಎನ್ನುವುದು ಕೂಡುತ್ತದೆ. ಯದ್ಯಪಿ ದೇವದತ್ತನ ಶರೀರ ಹಸ್ತಗಳಿಗೆ ಕೇವಲ ಅಭೇದವಲ್ಲ,

ಭೇದವೂ ಇದೆ. ಆದರಿಂದ ಸ್ವೀಕಾರ ಶಕ್ಯ. ಹರಿಗೂ ಅವನ ಶರೀರಕ್ಕೂ ಭೇದವಿಲ್ಲ. ಆದರೂ ಅಭೇದವಿರುವಲ್ಲಿಯೂ ಸ್ವೀಕಾರ ಉಂಟೆನ್ನುವಲ್ಲಿ ಮಾತ್ರ ದೇವದತ್ತ ಶರೀರ ಹಸ್ತಗಳ ದೃಷ್ಟಾಂತ. ಹಾಗಾದರೆ ಕೇವಲ ಅಭೇದವೆ ಇರುವಾಗ ಹರಿಗೆ ಶರೀರ ಸ್ವೀಕಾರ ಹೇಗೆ ಸಾಧ್ಯ ಎಂದರೆ ಅಚಿಂತ್ಯಶಕ್ತಿಯಿಂದ ಸಾಧ್ಯ. ಪ್ರಕೃತಿಯನ್ನು ಮೀರಿದವನಾದ್ದರಿಂದ ಅವನು ಶರೀರದಿಂದ ಹುಟ್ಟಿದ, ಈ ಶರೀರ ಸ್ವೀಕರಿಸಿದ ಆ ಶರೀರ ಸ್ವೀಕರಿಸಿದ ಎಂದು ಮುಂತಾಗಿ ವ್ಯವಹಾರ ಗೋಚರನಾಗುತ್ತಾನೆ'' ಎಂದು.

ಏಕಮೇವಾದ್ವಿತೀಯಂ । ನೇಹ ನಾನಾಸ್ತಿ ಕಿಂಚನ । ಏವಂ ಧರ್ಮಾನ್ ಪೃಥಕ್ ಪಶ್ಯನ್ ಇತ್ಯಾದಿ ಚ ।
ತಸ್ಯೈವಾಸ್ಥೂಲತ್ವಾದ್ಯೈಶ್ವರ್ಯಯೋಗಾತ್ । ತಥಾ ಚ ಕೌರ್ಮೇ—

ಅಸ್ಥೂಲಶ್ಚಾನಣುಶ್ಚೈವ ಸ್ಥೂಲೋಽಣುಶ್ಚೈವ ಸರ್ವತಃ ।
ಅವರ್ಣಃ ಸರ್ವತಃ ಪ್ರೋಕ್ತಃ ಶ್ಯಾಮೋ ರಕ್ತಾಂತಲೋಚನಃ ।
ಐಶ್ವರ್ಯಯೋಗಾದ್ ಭಗವಾನ್ ವಿರುದ್ಧಾರ್ಥೋಽಭಿಧೀಯತೇ ।
ತಥಾಪಿ ದೋಷಾಃ ಪರಮೇ ನೈವಾಹಾರ್ಯಾಃ ಕಥಂಚನ ।
ಗುಣಾ ವಿರುದ್ಧಾ ಅಪಿ ತು ಸಮಾಹಾರ್ಯಾಶ್ಚ ಸರ್ವತಃ । ಇತಿ ।

ಶ್ರೀಹರಿ ಸ್ವಗತ ಭೇದವರ್ಜಿತನೂ ಸರ್ವೋತ್ತಮನೂ ಆಗಿದ್ದಾನೆ. ಅವನಲ್ಲಿ ರೂಪ ಅವಯವ ಗುಣಕ್ರಿಯಾದಿಗಳಾವುವೂ ಬೇರೆಯಾಗಿ ಇಲ್ಲ. ಶರೀರ ಗ್ರಹಣ ರೂಪಕ್ರಿಯೆಯೂ ಹರಿಗೆ ಅಭಿನ್ನವಾಗಿರುವಾಗ ಒಬ್ಬನೇ ಕ್ರಿಯೆಯೂ ಕರ್ತನೂ ಆಗುವುದು ಅಚಿಂತ್ಯಶಕ್ತಿಯಿಂದ ಎನ್ನಬೇಕು. ಕ್ರಿಯೆಯೂ ಒಂದು ಧರ್ಮ. ಹರಿಯ ಧರ್ಮಗಳನ್ನು ಹರಿಗಿಂತ ಬೇರೆ ಎಂದು ತಿಳಿದರೆ ಮಹಾಅನರ್ಥವಿದೆ ಎಂದು ಶ್ರುತಿಗಳು ಹೇಳುತ್ತವೆ.

ಪ್ರಾಕೃತ ದೇಹ ಹರಿಗೆ ಇಲ್ಲ ಎನ್ನಲು ಅಸ್ಥೂಲಮನಣು ಇತ್ಯಾದಿ ವಾಕ್ಯವೂ ಪ್ರಮಾಣ. ಪ್ರಾಕೃತ ಸ್ಥೂಲತ್ವ ಅಣುತ್ವಗಳಿಲ್ಲ. ಅಪ್ರಾಕೃತ ಸ್ಥೂಲತ್ವ ಅಣುತ್ವಗಳು ಮಾತ್ರ ಇವೆ ಎಂದು ಅದರ ಅರ್ಥ. ಅಪ್ರಾಕೃತ ಸ್ಥೂಲತ್ವ ಅಣುತ್ವಗಳು ಪರಸ್ಪರ ವಿರುದ್ಧವಲ್ಲ. ಅಚಿಂತ್ಯ ಶಕ್ತಿಯಿಂದ ಕೂಡುತ್ತವೆ. ಹಾಗೇ ಕೂರ್ಮಪುರಾಣದಲ್ಲಿ ಹೇಳಿದೆ—

ಎಲ್ಲಕ್ಕಿಂತ ಸ್ಥೂಲನಾಗಿರುವ ಹರಿ ಅಚಿಂತ್ಯಶಕ್ತಿಯಿಂದ ಅಸ್ಥೂಲನೆನಿಸುತ್ತಾನೆ. ಎಲ್ಲಕ್ಕಿಂತ ಅಣುವಾದ ಅವನೆ ಅನಣು ಎನಿಸುತ್ತಾನೆ. ಅಪ್ರಾಕೃತ ಶ್ಯಾಮವರ್ಣದವನು ಅಪ್ರಾಕೃತ ರಕ್ತವರ್ಣದ ಕಡೆಗಣ್ಣಿನವನು. ಅಚಿಂತ್ಯಶಕ್ತಿಯಿಂದಲೆ ಅವರ್ಣನೆನಿಸುತ್ತಾನೆ. ಅಚಿಂತ್ಯಶಕ್ತಿಯಿಂದ ಅಸ್ಥೂಲಾದಿ ಪದಗಳಿಂದ ಎಲ್ಲ ವಿರುದ್ಧಧರ್ಮ ಉಳ್ಳವನೆಂದು ಕರೆಸಿಕೊಳ್ಳುತ್ತಾನೆ. ಆದರಿಂದ ಅವನಲ್ಲಿ ದೋಷಗಳಿವೆ ಎಂದು

ಸರ್ವಥಾ ತಿಳಿಯಬಾರದು. ಲೋಕದೃಷ್ಟಿಯಿಂದ ವಿರುದ್ಧಗಳಾದರೂ ಹರಿಯಲ್ಲಿ ಅಂಥ ಗುಣ ಗಳನ್ನು ಉಪಾಸನೆ ಮಾಡಬೇಕು ಎಂದು.

ವಿಷ್ಣುಧರ್ಮೋತ್ತರೇ ಚ—

ಗುಣಾಃ ಸರ್ವೇಽಪಿ ಯುಜ್ಯಂತೇ ಹ್ಯೈಶ್ವರ್ಯಾತ್ ಪುರುಷೋತ್ತಮೇ ।
ದೋಷಾಃ ಕಥಂಚಿನ್ನೈವಾತ್ರ ಯುಜ್ಯಂತೇ ಪರಮೋ ಹಿ ಸಃ ।
ಗುಣದೋಷೌ ಮಾಯಯೈವ ಕೇಚಿದಾಹುರಪಂಡಿತಾಃ ।
ನ ತತ್ರ ಮಾಯಾ ಮಾಯಾವೀ ತದೀಯೌ ತೌ ಕುತೋ ಹ್ಯತಃ ।
ತಸ್ಮಾನ್ನ ಮಾಯಯಾ ಸರ್ವಂ ಸರ್ವಮೈಶ್ವರ್ಯಸಂಭವಂ ।
ಅಮಾಯೋ ಹೀಶ್ವರೋ ಯಸ್ಮಾತ್ ತಸ್ಮಾತ್ ತಂ ಪರಮಂ ವಿದುಃ ॥

ಇತಿ ।

ವಿಷ್ಣುಧರ್ಮೋತ್ತರದಲ್ಲಿಯೂ ಹೀಗೆ ಹೇಳಿದೆ— ವಿರುದ್ಧ ಅವಿರುದ್ಧ ಎಲ್ಲ ಗುಣಗಳೂ ಅಚಿಂತ್ಯಶಕ್ತಿಯಿಂದ ಪರಮಾತ್ಮನಲ್ಲಿ ಕೂಡುತ್ತವೆ. ದೋಷಗಳು ಸರ್ವಥಾ ಕೂಡುವುದಿಲ್ಲ, ಏಕೆಂದರೆ ಅವನು ಪರಮೇಶ್ವರ. ದೋಷವಿದ್ದರೆ ಪರಮೇಶ್ವರನೆ ಅಲ್ಲ ಎಂದಾದೀತು. ಕೆಲವು ಅಜ್ಞರು ಹರಿಯಲ್ಲಿ ಗುಣದೋಷ ಗಳೆರಡೂ ಮಾಯೆಯಿಂದ ಕೂಡುತ್ತವೆ ಎನ್ನುತ್ತಾರೆ. ಆದರೆ ಅವನಲ್ಲಿ ಮಾಯೆ ಇಲ್ಲ, ಮಾಯೆಯನ್ನು ಅವನಲ್ಲಿ ಕಲ್ಪಿಸುವ ಮಾಯಾವಿಯೂ ಯಾರೂ ಇಲ್ಲ, ಏಕೆಂದರೆ ಮಾಯೆ ಮಾಯಾವಿ ಗಳಿಬ್ಬರೂ ಅವನ ಅಧೀನ. ಏಕೆಂದರೆ ಎಲ್ಲವೂ ಅವನ ಅಧೀನ. ಹೀಗೆ ಹರಿಗೆ ಅಧೀನವಾದ ಮಾಯೆ ಮಾಯಾವಿಗಳು ಹರಿಗೆ ದೋಷವನ್ನು ತಂದುಕೊಡಲು ಶಕ್ತವಲ್ಲ, ಆದರಿಂದ ಹರಿಯಲ್ಲಿ ಯಾವ ಗುಣವೂ ಮಾಯಾಕಲ್ಪಿತವಲ್ಲ, ಅಚಿಂತ್ಯಶಕ್ತಿ ಪ್ರಯುಕ್ತವೆ ಆಗಿದೆ. ಮಾಯೆ ಇಲ್ಲದವನಾದ್ದರಿಂದಲೆ ಹರಿ ಪರಮೇಶ್ವರನೆನಿಸಿದ್ದಾನೆ, ಎಂದು.

★★★

ಬ್ರಹ್ಮಾಂಡವ್ಯಾಪಿಯಾದ ಹರಿಯ ವಿರಾಡ್ರೂಪದ ಮಹಿಮೆಯನ್ನು ಸೂತರು ಶೌನಕರಿಗೆ ಹೇಳುತ್ತಾರೆ—

ಯಸ್ಯಾವಯವಸಂಸ್ಥಾನೈಃ ಕಲ್ಪಿತೋ ಲೋಕವಿಸ್ತರಃ ।
ತದ್ವೈ ಭಗವತೋ ರೂಪಂ ವಿಶುದ್ಧಂ ಸತ್ವಮೂರ್ಜಿತಂ ॥ ೩ ॥

ಹದಿನಾಲ್ಕು ಲೋಕಗಳಿಗೆ ಎಲ್ಲವುಗಳಿಗೂ ಹರಿಯ ಆ ವಿರಾಡ್ರೂಪದ ಅವಯವಗಳೆ ಉತ್ಪತ್ತಿ ಸ್ಥಾನ ಮತ್ತು ಆಶ್ರಯಗಳೆನಿಸಿವೆ. ಆದರೂ ಆ ರೂಪ ದೋಷ ರಹಿತವೆ ಆಗಿದೆ. ಬಲಜ್ಞಾನಾದಿಗುಣಗಳ ಮೇಲನವೆನಿಸಿ ಸರ್ವೋತ್ಕೃಷ್ಟವೆ ಆಗಿದೆ.

ಇಲ್ಲಿ ವೀರರಾಘವ ವ್ಯಾಖ್ಯಾನ ಪ್ರಕಾರ ಭಗವಂತನ ಎರಡು ಶರೀರಗಳ ವರ್ಣನೆಯಿದೆ. ''ಅವಯವ ಸಂಸ್ಥಾನ' ಎಂದರೆ ಅವಯವ ಪರಿಣಾಮ. ಅದರಿಂದ ಲೋಕನಿರ್ಮಾಣ. ಅಂತಹ ಅವಯವವುಳ್ಳ ಮೂಲಪ್ರಕೃತಿ ಭಗವಂತನ ಒಂದು ಶರೀರ. ಅದು ಚತುರ್ಮುಖ ಬ್ರಹ್ಮನ ಶರೀರವಾಗಿದ್ದು ಅದರೊಳಗೆ ಭಗವಂತ ಪ್ರವೇಶ ಮಾಡಿದ್ದರಿಂದ ಭಗವಂತನ ಶರೀರವೆನಿಸಿದೆ. ಆ ಬ್ರಹ್ಮನನ್ನು ನಾಭಿಕಮಲ ದಲ್ಲಿ ಹುಟ್ಟಿಸಿದ ಶುದ್ಧಸತ್ವಮಯವಾದ ಇನ್ನೊಂದು ಶರೀರ ರಜಸ್ತಮೋ ಗುಣರಹಿತವಾದ್ದರಿಂದ ಅಪ್ರಾಕೃತವೆನಿಸಿದೆ'' ಎಂದು. ಎಲ್ಲ ವ್ಯಾಖ್ಯಾನಕಾರರೂ ಹೀಗೇ ಶುದ್ಧಸತ್ವವನ್ನು ಭಗವಂತನ ಶರೀರವೆಂದು ಒಪ್ಪಿದ್ದಾರೆ. ಅದು ಯುಕ್ತವಲ್ಲ, ಭಗವಂತನಿಗೆ ಜಡಶರೀರವಿಲ್ಲ. ಅದರಿಂದ ಹೀಗೆ ಹೇಳಬೇಕು—

ಯಸ್ಯಾವಯವಸಂಸ್ಥಾನೈಃ- ನಾಭ್ಯಾ ಆಸೀದಂತರಿಕ್ಷಮಿತ್ಯಾದಿ ।
ಸತ್ವಂ ಸಾಧುಗುಣಂ । ಜ್ಞಾನಬಲರೂಪಂ ವಾ ।
ಬಲಜ್ಞಾನ ಸಮಾಹಾರಃ ಸತ್ವಮಿತ್ಯಭಿಧೀಯತೇ ।
ಇತಿ ಮಾತ್ಸ್ಯೇ ।

ಹರಿಯ ಅವಯವಗಳೆಂಬ ಉತ್ತಮ ಸ್ಥಾನಗಳಿಂದ ಲೋಕಗಳು ಹುಟ್ಟಿ ಅಲ್ಲಿಯೆ ಆಶ್ರಯಪಡೆದಿವೆ. ಇದಕ್ಕೆ ಪುರುಷಸೂಕ್ತ ಪ್ರಮಾಣ. ಅಲ್ಲಿ ಅದರ ವಿವರವೂ ಸಿಗುತ್ತದೆ, 'ನಾಭಿಯಿಂದ ಅಂತರಿಕ್ಷ ಹುಟ್ಟಿತು' ಎಂದು ಮುಂತಾಗಿ. ಸತ್ವಂ ಎಂದರೆ ಸ್ವರೂಪಭೂತ ಜ್ಞಾನಾನಂದಾದಿ ಉತ್ತಮಗುಣ ಉಳ್ಳದ್ದು ಎಂದರ್ಥ. ಇದು ಸತ್ ಶಬ್ದಾರ್ಥ. ತ್ವಪ್ರತ್ಯಯವನ್ನು ಸ್ವಾರ್ಥದಲ್ಲಿಟ್ಟುಕೊಳ್ಳಬೇಕು. ಅಥವಾ 'ಬಲಜ್ಞಾನ ಸಮೂಹವು 'ಸತ್ವ'ವೆನಿಸುತ್ತದೆ' ಎಂಬ ಮತ್ಸ್ಯಪುರಾಣ ವಚನದಂತೆ ಜ್ಞಾನಬಲ ಮೇಲನ ರೂಪ ಭಗವಂತನ ಶರೀರ ಎಂದರ್ಥ.

★★★

ಬ್ರಹ್ಮಾಂಡ ವ್ಯಾಪಿಯಾದ ಹರಿಯ ವಿರಾಡ್ರೂಪದ ಇನ್ನೊಂದು ಮಹಿಮೆಯನ್ನು ಸೂತರು ಶೌನಕರಿಗೆ ತಿಳಿಸುತ್ತಾರೆ—

ಏತನ್ನಾನಾವತಾರಾಣಾಂ ನಿಧಾನಂ ಬೀಜಮವ್ಯಯಂ ।
ಯಸ್ಯಾಂಶಾಂಶೇನ ಸೃಜ್ಯಂತೇ ದೇವತಿರ್ಯಙ್‌ನರಾದಯಃ ॥ ೫ ॥

ಈ ವಿಷ್ಣುವಿನ ಪದ್ಮನಾಭವಿರಾಡ್ರೂಪದಿಂದ ಶ್ವೇತದ್ವೀಪಾದಿಗಳಲ್ಲಿರುವ ನಾರಾಯಣ ವಾಸುದೇವ ವೈಕುಂಠ ಮುಂತಾದ ರೂಪಗಳೂ ಅವುಗಳಿಂದ

ರಾಮಕೃಷ್ಣಾದಿರೂಪಗಳೂ ಹೊರಬರುತ್ತವೆ. ಈ ವಿರಾಡ್ರೂಪದಲ್ಲಿಯೆ ಕೊನೆಗೆ ಎಲ್ಲ ಅವತಾರ ರೂಪಗಳೂ ಸೇರಿ ಐಕ್ಯ ಹೊಂದುತ್ತವೆ. ಈ ಪದ್ಮನಾಭನ ಶಕ್ತಿಯ ಒಂದು ಅತ್ಯಲ್ಪ ಅಂಶದಿಂದ ದೇವ ಪಶು ಮಾನವಾದಿಗಳ ಸೃಷ್ಟಿ ನಡೆಯುತ್ತದೆ.

ಇಲ್ಲಿ 'ನಿಧಾನ' ಎಂದರೆ ವಿರಾಡ್ರೂಪ ಎಲ್ಲ ಅವತಾರಗಳಿಗೆ ಆಶ್ರಯ, ಅಂದರೆ ಎಲ್ಲ ಅವತಾರಗಳು ಅದರ ಅಂಶಗಳು ಎಂದು ವಿಶ್ವನಾಥ ವ್ಯಾಖ್ಯಾನ. ಎಲ್ಲ ವ್ಯಾಖ್ಯಾನಗಳಲ್ಲಿ 'ನಿದಾನಂ' ಎಂದು ಪಾಠ. ಎಲ್ಲ ಅವತಾರಗಳಿಗೆ ಮೂಲಕಾರಣ ಎಂದು ವಿವರಣೆ. 'ಬೀಜಂ' ಎಂಬ ಶಬ್ದಕ್ಕೆ ಜಗತ್ಕಾರಣ ಎಂದರ್ಥ. ಆದರಿಂದ ಪುನರುಕ್ತಿ ಇಲ್ಲ. ಆದರೆ ಇದು ಅಪಪಾಠ.

'ಅಂಶಾಶೇನ' ಎಂದರೆ ಪದ್ಮನಾಭನ ಅಂಶ ಚತುರ್ಮುಖಬ್ರಹ್ಮ. ಅವನ ಅಂಶ ಮರೀಚ್ಯಾದಿಗಳು ಎಂದು ಎಲ್ಲ ವ್ಯಾಖ್ಯಾನಕಾರರು ಹೇಳಿದ್ದಾರೆ. ವೀರರಾಘವ ವ್ಯಾಖ್ಯಾನದಲ್ಲಿ ಪದ್ಮನಾಭನ ಶರೀರ ರೂಪವಾದ ಚೇತನಾಚೇತನ ತತ್ವದ ಅಂಶಗಳು ದೇವಾದಿಗಳು. ಇವು ಅಪವ್ಯಾಖ್ಯಾನಗಳು. ಆದರಿಂದ ಹೀಗೆ ಹೇಳಬೇಕು—

ನಿಧಾನಂ ಅತ್ರೈಕೀಭವಂತ್ಯಂತತ ಇತಿ । ಅಂಶಾಂಶೇನ
ಸಾಮರ್ಥ್ಯೈಕದೇಶೇನ । ಬ್ರಾಹ್ಮೇ ಚ—
ಯಚ್ಛಕ್ತ್ಯೇಕಾಂಶಸಂಭೂತಂ ಜಗದೇತಚ್ಚರಾಚರಂ ಇತಿ ।

ಪದ್ಮನಾಭರೂಪದಲ್ಲಿ ಕೊನೆಗೆ ಎಲ್ಲ ಅವತಾರರೂಪಗಳು ಸೇರಿ ಐಕ್ಯ ಹೊಂದುತ್ತವೆ ಎಂಬ ಅಭಿಪ್ರಾಯದಿಂದ ನಿಧಾನಂ ಎಂದಿದೆ. ಅಂಶಾಂಶೇನ ಎಂದರೆ ದೇವಪಶುಮಾನವಾದಿಗಳು ಪದ್ಮನಾಭನ ಸಾಮರ್ಥ್ಯದ ಒಂದು ಅತ್ಯಲ್ಪ ಅಂಶದಿಂದ ಸೃಷ್ಟರಾಗುತ್ತಾರೆ ಎಂದರ್ಥ. 'ಈ ಚರಾಚರಜಗತ್ತು ಪದ್ಮನಾಭನ ಸಾಮರ್ಥ್ಯದ ಒಂದು ಅಂಶದಿಂದ ಹುಟ್ಟಿತು' ಎಂದು ಬ್ರಹ್ಮಪುರಾಣ ಹೇಳಿದೆ.

★★★

ಪದ್ಮನಾಭರೂಪದಿಂದ ಇಪ್ಪತ್ತೆರಡು ಅವತಾರಗಳು ಹೊರಗೆ ಬರುವುದರ ವಿವರವನ್ನು ಸೂತರು ಶೌನಕರಿಗೆ ಹೇಳುತ್ತಾರೆ—

ಸ ಏವ ಪ್ರಥಮಂ ದೇವಃ ಕೌಮಾರಂ ಸರ್ಗಮಾಸ್ಥಿತಃ ।
ಚಚಾರ ದುಶ್ಚರಂ ಬ್ರಹ್ಮಾ ಬ್ರಹ್ಮಚರ್ಯಮಖಂಡಿತಂ ॥ ೬ ॥

ಪದ್ಮನಾಭನೆ ಮೊದಲಿಗೆ ಸನತ್ಕುಮಾರ ಎಂಬ ಅವತಾರ ಮಾಡಿ ಸರ್ವಗುಣ ಪೂರ್ಣನಾಗಿದ್ದೇ ದುಷ್ಕರವಾದ ಅಖಂಡಬ್ರಹ್ಮಚರ್ಯವ್ರತವನ್ನು ಮಾಡಿತೋರಿಸಿದ.

ಇಲ್ಲಿ ಎಲ್ಲ ವ್ಯಾಖ್ಯಾನಕಾರರೂ ಸನಕಾದಿಗಳಲ್ಲಿ ಆವೇಶಗೊಂಡ ಪದ್ಮನಾಭನ ರೂಪವೆ ಮೊದಲನೆಯ ಅವತಾರ ಆವೇಶಾವಾತಾರ ಎಂದಿದ್ದಾರೆ. ವಸ್ತುತಃ ಸನತ್ಕುಮಾರನಿಗೆ ಬ್ರಹ್ಮಚರ್ಯವನ್ನು ಹೇಳಿಕೊಟ್ಟ ಇನ್ನೊಬ್ಬ ಸನತ್ಕುಮಾರ ಹರಿಯ ಮೊದಲನೆ ಅವತಾರ, ಸ್ವರೂಪಾವತಾರ—

ಕುಮಾರೋ ನಾಮ ಭಗವಾನ್ ಸ್ವಯಂ ಸ್ವಸ್ಮಾದಜಾಯತ ।
ದಿದೇಶ ಬ್ರಹ್ಮಣೇ ಬ್ರಹ್ಮ ಬ್ರಹ್ಮಚರ್ಯೇ ಸ್ಥಿತೋ ವಿಭುಃ ।
ಯಸ್ಮಾತ್ ಸನತ್ಕುಮಾರಶ್ಚ ಬ್ರಹ್ಮಚರ್ಯಮಪಾಲಯತ್ ।
ಯಃ ಸ್ಥಾಣೋಃ ಸ್ಥಾಣುತಾಂ ಪ್ರಾದಾತ್ ಭಗವಾನವ್ಯಯೋ ಹರಿಃ ।
ಇತಿ ಬ್ರಾಹ್ಮೇ ।

ಬ್ರಹ್ಮಪುರಾಣದಲ್ಲಿ ಹೇಳಿದೆ— "ಶ್ರೀಹರಿ ತಾನು ತನ್ನಿಂದಲೆ ಸನತ್ಕುಮಾರ ಎಂಬ ಅವತಾರ ತಳೆದ. ಬ್ರಹ್ಮಚರ್ಯವನ್ನು ಆಚರಿಸಿ ತೋರಿಸಿದ. ಬ್ರಹ್ಮನಿಗೆ ವೇದೋಪದೇಶ ಮಾಡಿದ. ಸನತ್ಕುಮಾರನಿಗೆ ಬ್ರಹ್ಮಚರ್ಯ ಹೇಳಿಕೊಟ್ಟ. ಮೋಟು ಮರದಂತೆ ನಿಶ್ಚಲವಾಗಿ ಕುಳಿತು ಹೇಗೆ ತಪಸ್ಸು ಮಾಡಬೇಕೆಂಬುದನ್ನು ಶಿವನಿಗೂ ಹೇಳಿಕೊಟ್ಟ" ಎಂದು.

★★★

ಮುಂದೆ ಸೂತರು ಎರಡನೆಯದಾದ ವರಾಹಾವತಾರವನ್ನು ಹೇಳಿ ಮೂರನೆಯದಾದ ಮಹಿದಾಸಾವತಾರವನ್ನು ಶೌನಕರಿಗೆ ಹೇಳುತ್ತಾರೆ—

ತೃತೀಯಮೃಷಿಸರ್ಗಂ ವೈ ದೇವರ್ಷಿತ್ವಮುಪೇತ್ಯ ಸಃ ।
ತಂತ್ರಂ ಸಾತ್ವತಮಾಚಷ್ಟ ನೈಷ್ಕರ್ಮ್ಯಂ ಕರ್ಮಣಾಂ ಯತಃ ॥ ೮ ॥

ಆ ಪದ್ಮನಾಭನೆ ಋಷಿಸ್ವಭಾವದ ಮಹಿದಾಸಾವತಾರವನ್ನು ಮಾಡಿ ದೇವರ್ಷಿತ್ವವನ್ನು ಸ್ವೀಕರಿಸಿ ಪಂಚರಾತ್ರಶಾಸ್ತ್ರವನ್ನು ನಾರದರಿಗೆ ಉಪದೇಶಿಸಿದ. ಪಂಚರಾತ್ರಾನುಸಾರ ಕರ್ಮ ಮಾಡಿದರೆ ಅದು ಮೋಕ್ಷಸಾಧನವಾಗುವುದು.

ಇಲ್ಲಿ ಎಲ್ಲ ವ್ಯಾಖ್ಯಾನಕಾರರೂ ನಾರದಾವತಾರ ಎಂದಿದ್ದಾರೆ. ಅದು ಬ್ರಹ್ಮ ಪುರಾಣಕ್ಕೆ ವಿರುದ್ಧ—

ಅವತಾರಸ್ತೃತೀಯೋಽಸ್ಯ ದೇವರ್ಷಿಃ ಪ್ರಥಿತೋ ದಿವಿ ।
ಮಹಿದಾಸಸ್ತ್ವೈತರೇಯೋ ಯಸ್ತಂತ್ರಂ ನಾರದೇಽವದತ್' । ಇತಿ ಚ ।

ಪದ್ಮನಾಭನ ಮೂರನೆ ಅವತಾರ ದೇವಲೋಕದಲ್ಲಿ ಪ್ರಸಿದ್ಧನಾದ ದೇವರ್ಷಿ

ಐತರೇಯ ಮಹಿದಾಸ. ಅವನು ಪಂಚರಾತ್ರವನ್ನು ನಾರದರಿಗೆ ಉಪದೇಶಿಸಿದ ಎಂದೂ ಬ್ರಹ್ಮಪುರಾಣದಲ್ಲಿ ಉಕ್ತವಾಗಿದೆ.

★★★

ನಾಲ್ಕನೆಯದಾಗಿ ನರ ನಾರಾಯಣಾವತಾರವೆಂದು ಸೂತರು ಶೌನಕರಿಗೆ ಹೇಳುತ್ತಾರೆ—

ತುರ್ಯೇ ಧರ್ಮಕಲಾಸರ್ಗೇ ನರನಾರಾಯಣಾವೃಷೀ ।
ಭೂತ್ವಾಽತ್ಮೋಪಶಮೋಪೇತಮಕರೋದ್ ದುಶ್ಚರಂ ತಪಃ ॥ ೯ ॥

ನಾಲ್ಕನೆಯದಾಗಿ ವಿಷ್ಣು ಯಮಪುತ್ರ ನರ ನಾರಾಯಣ ಋಷಿರೂಪನಾಗಿ ವಿಷ್ಣು ಅಂಶದಿಂದ ಅವತರಿಸಿ ಲೋಕರೀತಿಯಿಂದ ಅಂತಃಕರಣದಲ್ಲಿ ಅಧಿಕ ವಿಷ್ಣುನಿಷ್ಠೆ ತೋರುತ್ತ ದುಷ್ಕರವಾದ ತಪಸ್ಸು ಮಾಡಿದ.

ಇಲ್ಲಿ ಎಲ್ಲ ವ್ಯಾಖಾನಕಾರರು ಯಮಧರ್ಮನ ಕಲೆ ಎಂದರೆ ಅರ್ಧಾಂಶ, ಅರ್ಧಾಂಗಿಯೆನಿಸಿದ ಭಾರ್ಯೆಯಲ್ಲಿ ನರನಾರಾಯಣಾವತಾರ ಎಂದಿದ್ದಾರೆ. ಭಾರ್ಯೆ ಎಂಬ ಅರ್ಥದಲ್ಲಿ ಕಲಾಶಬ್ದ ವ್ಯವಹಾರವಿಲ್ಲ. ಅದರಿಂದ ಹೀಗೆ ಹೇಳಬೇಕು—

ಧರ್ಮಕಲಾಸರ್ಗಃ ಧರ್ಮೇ ಸ್ವಾಂಶಾವತಾರಃ ।
ಲೋಕದೃಷ್ಟ್ಯಾ ಆತ್ಮಶಮೋಪೇತಂ ।

ಧರ್ಮಕಲಾಸರ್ಗವೆಂದರೆ ಧರ್ಮನಲ್ಲಿ ಯಮಧರ್ಮನಲ್ಲಿ ಕಲಾಸರ್ಗ ತನ್ನ ಅಂಶದಿಂದ ಅವತಾರ, ನರನಲ್ಲಿ ತನ್ನ ಅಂಶದ ಆವೇಶ. ನಾರಾಯಣ ತನ್ನ ಅಂಶ ಸ್ವರೂಪನೆ, ಅಂಶವೂ ತನ್ನ ಅಭಿನ್ನಾಂಶವೆ ವಿವಕ್ಷಿತ, ಭಿನ್ನಾಂಶವಲ್ಲ- 'ಆತ್ಮಶಮೋಪೇತಂ' ಲೋಕದೃಷ್ಟಿಯಿಂದ ಅಂತಃಕರಣದಲ್ಲಿ ವಿಷ್ಣುಭಕ್ತಿಯಿಂದ ಕೂಡಿದ ಎಂದರ್ಥ.

★★★

ಐದನೆಯದು ಕಪಿಲಾವತಾರವೆಂದು ಸೂತರು ಶೌನಕರಿಗೆ ಹೇಳುತ್ತಾರೆ—

ಪಂಚಮಃ ಕಪಿಲೋ ನಾಮ ಸಿದ್ಧೇಶಃ ಕಾಲವಿಪ್ಲುತಂ ।
ಪ್ರೋವಾಚಾಸುರಯೇ ಸಾಂಖ್ಯಂ ತತ್ವಗ್ರಾಮವಿನಿರ್ಣಯಂ ॥ ೧೦ ॥

ಐದನೆಯ ಅವತಾರ ಸಿದ್ಧರಿಗೆ ಒಡೆಯನಾದ ಕಪಿಲ ಮಹರ್ಷಿ. ಆಗ ಕಾಲ

ಬಲದಿಂದ ಲುಪ್ತವಾಗಿದ್ದ ವೈದಿಕ ಸಾಂಖ್ಯಶಾಸ್ತ್ರವನ್ನು ಆಸುರಿಗೆ ಉಪದೇಶಿಸಿದ. ಇದರಲ್ಲಿ ಇಪ್ಪತ್ತನಾಲ್ಕು ತತ್ವಗಳ ವಿವೇಚನೆ ಇದೆ.

ಇಲ್ಲಿ ಬ್ರಹ್ಮಸೂತ್ರದಲ್ಲಿ ನಿರಾಕೃತವಾಗಿರುವ ಈಶ್ವರಕೃಷ್ಣನ ನಿರೀಶ್ವರ ಸಾಂಖ್ಯವನ್ನು ಆಸುರಿ ಎಂಬ ಶಿಷ್ಯನಿಗೆ ಉಪದೇಶಿಸಿದ ಕಪಿಲನೆ ಭಗವಂತನ ಅವತಾರ ಎಂದು ಎಲ್ಲ ವ್ಯಾಖ್ಯಾನಕಾರರು ಭ್ರಮಿಸಿದ್ದಾರೆ. ಶುಕದೇವ ಮಾತ್ರ ಹೇಯ ಸಾಂಖ್ಯ ಪ್ರವರ್ತಕ ಕಪಿಲ ಬೇರೆ ಎಂದಿದ್ದಾನೆ. ಅದು ಸರಿ.

ತಂತ್ರಂ ಸಾಂಖ್ಯಂ ವೇದಾನುಸಾರಿ । ಪಾದ್ಮೇ ಚ-
ಕಪಿಲೋ ವಾಸುದೇವಾಖ್ಯಸ್ತಂತ್ರಂ ಸಾಂಖ್ಯಂ ಜಗಾದ ಹ ।
ಬ್ರಹ್ಮಾದಿಭ್ಯಶ್ಚ ದೇವೇಭ್ಯೋ ಭೃಗ್ವಾದಿಭ್ಯಸ್ತಥೈವ ಚ ।
ತಥೈವಾಸುರಯೇ ಸರ್ವಂ ವೇದಾರ್ಥೈರುಪಬೃಂಹಿತಂ ।
ಸರ್ವವೇದವಿರುದ್ಧಂ ಚ ಕಪಿಲೋಽನ್ಯೋ ಜಗಾದ ಹ ।
ಸಾಂಖ್ಯಮಾಸುರಯೇಽನ್ಯಸ್ಮೈ ಕುತರ್ಕಪರಿಬೃಂಹಿತಮಿತಿ ಚ ।

ಹಿಂದಿನ ಶ್ಲೋಕದಿಂದ 'ತಂತ್ರಂ' ಎಂಬ ಶಬ್ದವನ್ನು ತಂದು 'ತಂತ್ರಂ ಸಾಂಖ್ಯಂ' ಎಂದರೆ ವೇದಾನುಸಾರಿಯಾದ ಸಾಂಖ್ಯಶಾಸ್ತ್ರವನ್ನು ಎಂದು ವ್ಯಾಖ್ಯಾನಿಸಬೇಕು. ವೇದಾನುಸಾರಿ ಎಂಬ ಅರ್ಥದಲ್ಲಿ ತಂತ್ರಶಬ್ದರೂಢಿ. ಹೀಗೆ ಏಕೆ ವ್ಯಾಖ್ಯಾನಿಸಬೇಕೆಂದರೆ ಪದ್ಮಪುರಾಣ ಹೇಳುತ್ತದೆ—''ಭಗವಂತನ ಅವತಾರನಾದ ಕಪಿಲ ವೇದಾನುಸಾರಿಯಾದ ಸಾಂಖ್ಯಶಾಸ್ತ್ರವನ್ನು ಬ್ರಹ್ಮಾದಿ ದೇವತೆಗಳಿಗೂ ಭೃಗು ಮುಂತಾದ ಋಷಿಳಿಗೂ ಹಾಗೇ ಆಸುರಿ ಎಂಬ ಶಿಷ್ಯನಿಗೂ ಉಪದೇಶಿಸಿದ. ಈ ಶಾಸ್ತ್ರ ವೇದಾರ್ಥಗಳಿಂದ ತುಂಬಿದೆ. ಇನ್ನೊಬ್ಬ ಕಪಿಲ ಇನ್ನೊಬ್ಬ ಆಸುರಿಗೆ ಸರ್ವವೇದ ವಿರುದ್ಧವಾದ ಕುತರ್ಕಮಯವಾದ ಸಾಂಖ್ಯವನ್ನು ಉಪದೇಶಿಸಿದ'' ಎಂದು.

★★★

ಆರನೆಯದು ದತ್ತಾತ್ರೇಯಾವತಾರವೆಂದು ಸೂತರು ಶೌನಕರಿಗೆ ಹೇಳುತ್ತಾರೆ.

ಷಷ್ಠಮತ್ರೇರಪತ್ಯತ್ವಂ ವೃತಃ ಪ್ರಾಪ್ತೋಽನಸೂಯಯಾ ।
ಆನ್ವೀಕ್ಷಿಕೀಮಲರ್ಕಾಯ ಪ್ರಹ್ಲಾದಾದಿಭ್ಯ ಊಚಿವಾನ್ ॥ ೧೧ ॥

ಶ್ರೀಹರಿ ಅತ್ರಿಮುನಿಯ ಪಾರ್ಥನೆಯಂತೆ ಅನಸೂಯಾದೇವಿಯಲ್ಲಿ ದತ್ತ ಎಂಬ ಮಗನಾಗಿ ಅವತರಿಸಿ ಅಲರ್ಕರಾಜನಿಗೂ ಪ್ರಹ್ಲಾದ ಮುಂತಾದವರಿಗೂ ತರ್ಕಶಾಸ್ತ್ರವನ್ನು ಉಪದೇಶಿಸಿದ. ಇದು ಆರನೆ ಅವತಾರ.

'ಆನ್ವೀಕ್ಷಿಕೀ' ಎಂದರೆ ಬ್ರಹ್ಮಸೂತ್ರದಲ್ಲಿ ನಿರಾಕೃತವಾದ ಗೌತಮ ಪ್ರಣೀತವಾದ ದುಷ್ಟಶಾಸ್ತ್ರವೆಂದೇ ಪ್ರಸಿದ್ಧಿ ಇದೆ. ಆದರೆ ಇಲ್ಲಿ ಅದು ವಿವಕ್ಷಿತವಲ್ಲ—

ಆನ್ವೀಕ್ಷಿಕೀಂ ತತ್ವವಿದ್ಯಾಂ ।

'ಆನ್ವೀಕ್ಷಿಕೀ ಕುತರ್ಕಾಖ್ಯಾ ತಥೈವಾನ್ವೀಕ್ಷಿಕೀ ಪರಾ।' ಇತಿ ಮಾತ್ಸ್ಯೇ ।

ಆನ್ವೀಕ್ಷಿಕೀ ಎಂದರೆ ಭಾಗವತದಲ್ಲಿ ತತ್ವವಿದ್ಯೆಯೆ ವಿವಕ್ಷಿತವಾಗಿದೆ. ಗೌತಮನ ದುಷ್ಟತರ್ಕವಲ್ಲ. ಎರಡು ಅನ್ವೀಕ್ಷಿಕಿಗಳಿವೆ ಎಂಬುದು ಮತ್ಸ್ಯಪುರಾಣದಲ್ಲಿ ಉಕ್ತವಾಗಿದೆ— 'ಕುತರ್ಕವೆಂಬ ಆನ್ವೀಕ್ಷಿಕಿ ಒಂದಿದೆ. ಹಾಗೇ ತತ್ವವಿದ್ಯೆ ಎಂಬ ಇನ್ನೊಂದು ಆನ್ವೀಕ್ಷಿಕಿಯೂ ಇದೆ' ಎಂದು.

★★★

ಒಂಬತ್ತನೆಯ ಪೃಥು ಎಂಬ ಆವೇಶಾವತಾರವನ್ನು ಸೂತರು ಶೌನಕರಿಗೆ ವರ್ಣಿಸುತ್ತಾರೆ—

ಋಷಿಭಿರ್ಯಾಚಿತೋ ಭೇಜೇ ನವಮಂ ಪಾರ್ಥಿವಂ ವಪುಃ ।
ದುಗ್ಧವಾನೋಷಧೀರ್ವಿಪ್ರಾಸ್ತೇನಾಯಂ ಚ ಉಶತ್ತಮಃ ॥ ೧೪ ॥

ಋಷಿಗಳ ಪ್ರಾರ್ಥನೆಯಂತೆ ಶ್ರೀಹರಿ ಪೃಥುಶರೀರಾವಿಷ್ಟನಾಗಿ ಒಂಬತ್ತನೆ ಅವತಾರ ತಾಳಿದ. ಅವನು ಗೋರೂಪದ ಭೂಮಿಯಿಂದ ಸಸ್ಯಸಂಪತ್ತು ಮುಂತಾದ ಸಾರಪದಾರ್ಥಗಳನ್ನು ಹಾಲಿನಂತೆ ಕರೆದ. ಅದರಿಂದ ಪೃಥುರಾಜನೂ ಭಗವಂತನಂತೆ ಸತ್ಯಸಂಕಲ್ಪನೆನಿಸಿದ.

ಇಲ್ಲಿ ಪೃಥುರಾಜನೆ ಭಗವಂತನ ಅವತಾರವೆಂದು ಹೇಳಿದಂತೆ ಕಾಣುತ್ತದೆ. ಅದು ಸರಿಯಲ್ಲ. ಪ್ರಮಾಣ ವಿರೋಧವಿದೆ. 'ಉಶತ್ತಮಃ' ಎಂದರೆ ಅತಿ ಸುಂದರ, ಎಲ್ಲರಿಗೂ ಇಷ್ಟ ಎಂದು ವ್ಯಾಖ್ಯಾನಿಸುತ್ತಾರೆ. ಅದೂ ಸರಿಯಲ್ಲ. 'ತೇನ' ಎಂದು ಸಮರ್ಥಿಸುವುದು ಕೂಡಲಾರದು.

ಪೃಥುಶರೀರಾವಿಷ್ಟಂ ರೂಪಂ ।

ಆವಿವೇಶ ಪೃಥುಂ ದೇವಃ ಶಂಖೀ ಚಕ್ರೀ ಚತುರ್ಭುಜಃ ।

ಇತಿ ಪಾದ್ಮೇ । ಉಶ ಇಚ್ಛಾಯಾಂ । ಸತ್ಯಕಾಮಃ ।

'ಪಾರ್ಥಿವಂ ವಪುಃ ಭೇಜೇ' ಎಂದರೆ ಪೃಥುವಿನ ಶರೀರವೆ ಭಗವಂತನ ಶರೀರ ಎಂದರ್ಥವಲ್ಲ. ಪೃಥುವಿನ ಶರೀರದಲ್ಲಿ ಆವಿಷ್ಟವಾದ ಅವತಾರ ತಾಳಿದ ಎಂದರ್ಥ.

''ಶಂಖಚಕ್ರಧಾರಿ ಚತುರ್ಭುಜನಾದ ಹರಿ ಪೃಥುಶರೀರವನ್ನು ಪ್ರವೇಶಿಸಿದ'' ಎಂದು ಪದ್ಮಪುರಾಣ ಹೇಳಿದೆ. 'ಉಶತ್ತಮಃ' ಎಂದರೆ ಇಚ್ಛಾರ್ಥಕ ಉಶಧಾತುವಿನ ರೂಪವಾದ್ದರಿಂದ ಅಮೋಘವಾದ ಇಚ್ಛೆಉಳ್ಳವನು, ಸತ್ಯಸಂಕಲ್ಪ ಎಂದರ್ಥ.

★★★

ಹದಿನೇಳನೆಯದು ವ್ಯಾಸಾವತಾರ ಎನ್ನುತ್ತಿದ್ದಾರೆ ಸೂತರು—

ತತಃ ಸಪ್ತದಶೇ ಜಾತಃ ಸತ್ಯವತ್ಯಾಂ ಪರಾಶರಾತ್ ।
ಚಕ್ರೇ ವೇದತರೋಃ ಶಾಖಾ ದೃಷ್ಟ್ವಾ ಪುಂಸೋಽಲ್ಪಮೇಧಸಃ ॥ ೨೧ ॥

ಬಳಿಕ ಹದಿನೇಳನೆ ಅವತಾರದಲ್ಲಿ ಶ್ರೀಹರಿ ಪರಾಶರ ಮುನಿಯಿಂದ ಸತ್ಯವತೀದೇವಿಯಲ್ಲಿ ವ್ಯಾಸರೂಪದಿಂದ ಅವತರಿಸಿ ಅಲ್ಪಬುದ್ಧಿಯವರಿಗಾಗಿ ವೇದ ವೃಕ್ಷವನ್ನು ನಾನಾ ಶಾಖೆಗಳಾಗಿ ವಿಭಾಗಿಸಿದ.

ಇಲ್ಲಿ 'ಹದಿನೇಳನೆಯದು ವ್ಯಾಸಾವತಾರ. ಹದಿನೆಂಟನೇದ್ದು ರಾಮಾವತಾರ' ವೆಂದು ರಾಮಾವತಾರಕ್ಕಿಂತ್ಲ ಮೊದಲಿಗೆ ವ್ಯಾಸಾವತಾರ ಹೇಳಿದ್ದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಬೇರೆ ವ್ಯಾಖ್ಯಾನಕಾರರು ಕ್ರಮವನ್ನಿಟ್ಟುಕೊಂಡೇ ಇಲ್ಲ, ಇದು ಅವತಾರ ಕ್ರಮವಲ್ಲ, ಅವತಾರ ನಿರ್ದೇಶಕ್ರಮ ಮಾತ್ರ ಎಂದಿದ್ದಾರೆ. ಆದರಿಂದ ಅವರಿಗೆ ಈ ಪ್ರಶ್ನೆ ಬರುವುದಿಲ್ಲ, ಅದಕ್ಕೆ ಹೀಗೆ ಹೇಳಬೇಕು—

ರಾಮಾತ್ ಪೂರ್ವಮಪ್ಯಸ್ತಿ ವ್ಯಾಸಾವತಾರಃ ।
'ತೃತೀಯಂ ಯುಗಮಾರಭ್ಯ ವ್ಯಾಸೋ ಬಹುಷು ಜಜ್ಞಿವಾನ್'
ಇತಿ ಕೌರ್ಮೇ ।

ರಾಮಾವತಾರಕ್ಕಿಂತ ಮೊದಲೂ ವ್ಯಾಸಾವತಾರವಿದೆ. ಕೂರ್ಮಪುರಾಣದಲ್ಲಿ ಮೂರನೆ ದ್ವಾಪರದಿಂದಾರಂಭಿಸಿ ಅನೇಕ ದ್ವಾಪರಗಳಲ್ಲಿ ವ್ಯಾಸರು ಅವತರಿಸಿದ್ದಾರೆ ಎಂದಿದೆ.

ವೈವಸ್ವತ ಮನ್ವಂತರದ ಎಪ್ಪತ್ತೊಂದು ಮಹಾಯುಗಗಳಲ್ಲಿ ಮೂರನೆ ಮಹಾಯುಗದಿಂದಾರಂಭಿಸಿ ಇಪ್ಪತ್ತೆಂಟನೇ ಮಹಾಯುಗಗಳವರೆಗೆ ಐದು ಬಾರಿ ವ್ಯಾಸಾವತಾರವಾಗಿದೆ. ಹದಿನೆಂಟನೆ ಮಹಾಯುಗದ ತ್ರೇತಾಯುಗದಲ್ಲಿ ರಾಮಾವತಾರ. ಆದಕ್ಕಿಂತ ಹಿಂದಿನವುಗಳಾದ ಮೂರು ಏಳು ಹದಿನಾರನೇ ಮಹಾಯುಗಗಳ ದ್ವಾಪರಗಳಲ್ಲಿ ವ್ಯಾಸಾವತಾರವಾಗಿರುವುದರಿಂದ ಮೊದಲಿಗೆ ವ್ಯಾಸಾವತಾರವನ್ನು ಹೇಳಿ ಬಳಿಕ ರಾಮಾವತಾರ ಹೇಳಿದ್ದರಲ್ಲಿ ತಪ್ಪಿಲ್ಲ.

★★★

ಹತ್ತೊಂಬತ್ತನೆ ಮತ್ತು ಇಪ್ಪತ್ತನೆ ಅವತಾರಗಳನ್ನು ಸೂತರು ಹೇಳುತ್ತಾರೆ—

ಏಕೋನವಿಂಶೇ ವಿಂಶತಿಮೇ ವೃಷ್ಣಿಷು ಪ್ರಾಪ್ಯ ಜನ್ಮನೀ ।
ರಾಮಕೃಷ್ಣಾವಿತಿ ಭುವೋ ಭಗವಾನಹರದ್ ಭರಂ ॥ ೨೩ ॥

ಹತ್ತೊಂಬತ್ತನೆ ಮತ್ತು ಇಪ್ಪತ್ತನೆ ಅವತಾರಗಳಲ್ಲಿ ಹರಿ ಬಲರಾಮ ಕೃಷ್ಣ ಎಂಬ ಹೆಸರುಗಳಿಂದ ಯಾದವರಲ್ಲಿ ಜನ್ಮತಳೆದು ಭೂಭಾರವನ್ನು ಕಳೆದ.

ಇಲ್ಲಿ ಜೀವಗೋಸ್ವಾಮಿ ಮತ್ತು ವಂಶೀಧರ ವ್ಯಾಖ್ಯಾನ ಪ್ರಕಾರ ಶ್ರೀಕೃಷ್ಣ ವಾಸುದೇವಾವತಾರ. ಬಲರಾಮ ಸಂಕರ್ಷಣಾವತಾರ. ವಸ್ತುತಃ ಈ ಅವತಾರಗಳಲ್ಲಿ ವ್ಯತ್ಯಾಸವಿದು—

ಆವೇಶೋ ಬಲಭದ್ರೇ ।
ಶಂಖಚಕ್ರಭೃದೀಶೇಶಃ ಶ್ವೇತವರ್ಣೋ ಮಹಾಭುಜಃ ।
ಆವಿಷ್ಟಃ ಶ್ವೇತಕೇಶಾತ್ಮಾ ಶೇಷಾಂಶಂ ರೋಹಿಣೀಸುತಂ ।
ಇತಿ ಮಹಾವಾರಾಹೇ ।

ಬಲರಾಮ ಆವೇಶಾವತಾರ ಹೊರತು ಸ್ವರೂಪಾವತಾರವಲ್ಲ. ಮಹಾವರಾಹ ಪುರಾಣದಲ್ಲಿ ಹೇಳಿದೆ— ಶಂಖಚಕ್ರಧಾರಿ, ಬಿಳಿ ಬಣ್ಣದವನು, ಮಹಾಬಾಹು, ಪದ್ಮನಾಭನ ಬಿಳಿ ಕೂದಲಾಗಿರುವವನು. ಇಂಥ ಶ್ರೀಹರಿ ಶೇಷಾವತಾರಿಯಾದ ರೋಹಿಣೀಪುತ್ರ ಬಲರಾಮನಲ್ಲಿ ಆವಿಷ್ಟನಾದ ಎಂದು.

★★★

ಬುದ್ಧಾವತಾರವನ್ನು ಸೂತರು ಹೇಳುತ್ತಿದ್ದಾರೆ—

ತತಃ ಕಲೌ ಸಂಪ್ರವೃತ್ತೇ ಸಂಮೋಹಾಯ ಸುರದ್ವಿಷಾಂ ।
ಬುದ್ಧೋ ನಾಮ್ನಾ ಜಿನಸುತಃ ಕೀಕಟೇಷು ಭವಿಷ್ಯತಿ ॥ ೨೪ ॥

ಬಳಿಕ ಕಲಿಯುಗ ಪ್ರಾರಂಭದಲ್ಲಿ ತ್ರಿಪುರಾಸುರರಿಗೆ ಮೋಹ ಉಂಟು ಮಾಡುವುದಕ್ಕಾಗಿ ಗಯೆಯಲ್ಲಿ ಬುದ್ಧ ಎಂಬ ಹೆಸರಿನಿಂದ ಜಿನನ ಪುತ್ರನೆನಿಸಿದ, ಶ್ರೀಹರಿ.

ವೀರರಾಘವ ಮತದಲ್ಲಿ ಬುದ್ಧ ಆವೇಶಾವತಾರ. ಸ್ವರೂಪಾವತಾರವಲ್ಲ. ಇದು ಸರಿಯಲ್ಲ—

ಮೋಹನಾರ್ಥಂ ದಾನವಾನಾಂ ಬಾಲರೂಪೀ ಪರಃ ಸ್ಥಿತಃ ।
ಪುತ್ರಂ ತಂ ಕಲ್ಪಯಾಮಾಸ ಮೂಢಬುದ್ಧಿರ್ಜಿನಃ ಸ್ವಯಂ ।
ತತಃ ಸಂಮೋಹಯಾಮಾಸ ಜಿನಾದ್ಯಾನಸುರಾಂಶಕಾನ್ ।
ಭಗವಾನ್ ವಾಗ್ಭಿರುಗ್ರಾಭಿರಹಿಂಸಾವಾಚಿಭಿರ್ಹರಿಃ ।

ಇತಿ ಬ್ರಹ್ಮಾಂಡೇ ।

ದಾನವರನ್ನು ಮೋಹಗೊಳಿಸುವುದಕ್ಕಾಗಿ ಬಾಲರೂಪನಾಗಿ ಹರಿ ಪ್ರಕಟ ನಾದ. ಅವನನ್ನು ಮೂಢನಾದ ಜಿನನು ತನ್ನ ಮಗನೆಂದು ಸ್ವೀಕರಿಸಿದ. ಬಳಿಕ ಆ ಬುದ್ಧ ಅಹಿಂಸೆಯೆ ಪರಮಧರ್ಮ ಯಜ್ಞಗಳಲ್ಲಿಯೂ ಪಶುಹಿಂಸೆ ಮಾಡಕೂಡದು ಎನ್ನುವ ಕ್ರೂರ ಮಾತುಗಳಿಂದ ಅಸುರಾಂಶರಾದ ಜಿನ ಮೊದಲಾದವರನ್ನು ಮೋಹಗೊಳಿಸಿದ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

★★★

ಹರಿಯ ಅವತಾರಗಳು ಅನಂತವಾದ್ದರಿಂದ ಎಲ್ಲವನ್ನೂ ಹೇಳುವುದು ಅಶಕ್ಯ ಎನ್ನುತ್ತಾರೆ ಸೂತರು—

ಅವತಾರಾ ಹ್ಯಸಂಖ್ಯೇಯಾ ಹರೇಃ ಸತ್ವನಿಧೇರ್ದ್ವಿಜಾಃ ।
ಯಥಾ ವಿದಾಸಿನಃ ಕುಲ್ಯಾಃ ಸರಸಃ ಸ್ಯುಃ ಸಹಸ್ರಶಃ ॥ ೨೬ ॥

ಎತ್ತರವಾದ ಅಥವಾ ಒಡೆದ ಸರೋವರದಿಂದ ಹೊರಡುವ ನೀರಿನ ಪ್ರವಾಹಗಳು ಹೇಗೆ ಅಸಂಖ್ಯವೋ ಹಾಗೆ ಅಸಂಖ್ಯಗಳು ಗುಣಪೂರ್ಣನಾದ ಹರಿಯ ಅವತಾರಗಳು.

ಇಲ್ಲಿ 'ಯಥಾ ವಿದಾಸಿನಃ' ಎಂಬಲ್ಲಿ ಅವಿದಾಸಿನಃ ಎಂದು ಪದಚ್ಛೇದ ಮಾಡಿ 'ದಸು ಉಪಕ್ಷಯೇ' ಧಾತು ಇಟ್ಟುಕೊಂಡು ಬತ್ತದೆ ಇರುವ ಸರೋವರ ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಕ್ಲೇಶಪಟ್ಟಿದ್ದಾರೆ. ಇದು ಸರಿಯಲ್ಲ. 'ವಿದಾಸಿ' ಶಬ್ದಕ್ಕೆ 'ಉನ್ನತ' ಮತ್ತು 'ಒಡೆದು ಹೋಗಿರುವ' ಎಂದು ಪ್ರಕೃತಕ್ಕೆ ಹೊಂದಿಕೆಯಾಗುವ ಎರಡು ಅರ್ಥಗಳಲ್ಲಿ ಪೌರಾಣಿಕ ಪ್ರಯೋಗಗಳು ಕಣ್ಣ ಮುಂದೇ ಇವೆ—

ವಿದಾಸಿನಃ ಉನ್ನತಾದ್ ಭಿನ್ನಾದ್ವಾ ।
ತ್ರಿವಿಧಾಃ ಪುರುಷಾ ಲೋಕೇ ನೀಚಮಧ್ಯವಿದಾಸಿನಃ ।

ಇತಿ ಬ್ರಾಹ್ಮೇ ।

ಚತುರ್ಧಾ ವರ್ಣರೂಪೇಣ ಜಗದೇತದ್ ವಿದಾಸಿತಂ । ಇತಿ ಚ ।

ವಿದಾಸಿಯಾದ ಸರೋವರ ಎಂದರೆ ಉನ್ನತ ಪ್ರದೇಶದಲ್ಲಿರುವ ಅಥವಾ

ಒಡೆದುಹೋದ ಸರೋವರ ಎಂದರ್ಥ. ಬ್ರಹ್ಮಪುರಾಣದಲ್ಲಿ ಹಾಗೇ ಪ್ರಯೋಗ ವಿದೆ— 'ಲೋಕದಲ್ಲಿ ಜನರು ಕ್ಷುದ್ರರು, ಮಧ್ಯಮರು, ಉತ್ತಮರೆಂದು ಮೂರು ಬಗೆಯಾಗಿದ್ದಾರೆ' ಇಲ್ಲಿ ಉತ್ತಮ ಎನ್ನಲು ವಿದಾಸಿ ಶಬ್ದವಿದೆ. 'ಈ ಜಗತ್ತು ನಾಲ್ಕು ವರ್ಣಗಳಾಗಿ ವಿಭಾಗ ಹೊಂದಿದೆ. ಒಡೆದಿದೆ'. ಇಲ್ಲಿ ಒಡೆದಿದೆ ಎಂಬ ಅರ್ಥದಲ್ಲಿ ವಿದಾಸಿ ಶಬ್ದವಿದೆ.

★★★

'ಋಷಿಗಳು ಮನುಗಳು ದೇವತೆಗಳು ಮುಂತಾದವರೂ ಹರಿಯ ಭಿನ್ನಾಂಶರು' ಎಂದು ಹೇಳಿ 'ಹಾಗಾದರೆ ಹಿಂದೆ ಹೇಳಿದ ಅವತಾರಗಳೂ ಹರಿಯ ಭಿನ್ನಾಂಶರೆ?' ಎಂಬ ಪ್ರಶ್ನೆ ಮಾಡಿಕೊಂಡು 'ಅಲ್ಲ' ಎನ್ನುತ್ತಿದ್ದಾರೆ ಸೂತರು—

ಏತೇ ಸ್ವಾಂಶಕಲಾಃ ಪುಂಸಃ ಕೃಷ್ಣಸ್ತು ಭಗವಾನ್ ಸ್ವಯಂ
ಇಂದ್ರಾರಿವ್ಯಾಕುಲಂ ಲೋಕಂ ಮೃಡಯಂತಿ ಯುಗೇಯುಗೇ ॥ ೨೮ ॥

ಹರಿಯ ಸ್ವರೂಪಾಂಶರೂಪವಾದ ಈ ಅವತಾರಗಳು ಮೂಲರೂಪಿ ಭಗವಂತನೇ. ಯುಗಯುಗಗಳಲ್ಲಿ ಅಸುರರಿಂದ ಪೀಡಿತವಾದ ಲೋಕಕ್ಕೆ ಈ ಅವತಾರಗಳು ನೆಮ್ಮದಿ ತರುತ್ತವೆ.

[೧]ಇಲ್ಲಿ ಶ್ರೀಧರ ವಂಶೀಧರ ವಿಶ್ವನಾಥ ಜೀವಗೋಸ್ವಾಮಿ ವಲ್ಲಭ ಎಲ್ಲ ವ್ಯಾಖ್ಯಾನ ಪ್ರಕಾರ ಭಗವಂತನ ಮೊದಲನೆ ಅವತಾರ ಬ್ರಹ್ಮಾಂಡವ್ಯಾಪಿಯಾದ ಪುರುಷ ಅನಿರುದ್ಧ. ಈ ಪುರುಷನ ಅವತಾರಗಳು ಮತ್ಸ್ಯಾದಿಗಳು. ಅದರಿಂದ ಶಕ್ತಿ ಕಡಿಮೆ. ಕೃಷ್ಣ ಮಾತ್ರ ಈ ಪುರುಷನ ಅವತಾರವಲ್ಲ, ಪುರುಷಾವತಾರದ ಮೂಲರೂಪೀ ಭಗವಂತನೆ ಕೃಷ್ಣ. ಅವನಲ್ಲಿ ಎಲ್ಲ ಷಡ್ಗುಣಗಳೂ ವ್ಯಕ್ತವಾಗಿವೆ.

---

೧. ಸಾತ್ವತಾಸ್ತು ವರ್ಣಯಂತಿ-ಪಂಚೀಕೃತ ಪಂಚಮಹಾಭೂತೋಪಹಿತಂ ಶುದ್ಧಚೈತನ್ಯಂ ತದಭಿಮಾನಿ ವಿರಾಡಂತರ್ಯಾಮಿರೂಪಂ ಔತಮಿತ್ಯನಿರುದ್ಧ ಇತಿ ಚಾಖ್ಯಾಯತೇ । ಏವಮಪಂಚೀಕೃತ ಮಹಾಭೂತೋಪಹಿತಂ ಶುದ್ಧಚೈತನ್ಯಂ ತದಭಿಮಾನಿ ಹಿರಣ್ಯಗರ್ಭಾಂತ ರ್ಯಾಮಿರೂಪಂ ಅನುಜ್ಞಾತ್ರೇತಿ ಪ್ರದ್ಯುಮ್ನ ಇತಿ ಚಾಖ್ಯಾಯತೇ । ಏವಂ ಸ್ಥೂಲಸೂಕ್ಷ್ಮ ಭೂತಕಾರಣೀಭೂತಂ ಯನ್ಮಾಯಾತ್ಮಕಂ ಅವ್ಯಾಕೃತಂ ತದುಪಹಿತಂ ಶುದ್ಧ ಚೈತನ್ಯಂ ತನ್ನಿಷ್ಠಚಿದಾಭಾಸೋಪಲಕ್ಷಿತಂ ಅನುಜ್ಞೇತಿ ಸಂಕರ್ಷಣ ಇತಿ ಚಾಖ್ಯಾಯತೇ । ಅನುಪಹಿತಂ ತು ಚೈತನ್ಯಂ ಸರ್ವಾನುಸ್ಯೂತಂ ಸನ್ಮಾತ್ರಂ ಸರ್ವಸಾಕ್ಷಿ ಪರಮಾನಂದಘನೋಽವಿಕಲ್ಪ ಇತಿ ವಾಸುದೇವ ಇತಿ ಚಾಖ್ಯಾಯತೇ । ಸಂಕರ್ಷಣಪ್ರದ್ಯುಮ್ನಾನಿರುದ್ಧಾನಾಮಪಿ ವಾಸುದೇವತ್ವಂ ವರ್ತತ ಏವ । ಉಪಾಧಿಕೃತಃ ಕೇವಲಂ ವಿಶೇಷಃ । ಏತಚ್ಚ ನೃಸಿಂಹತಾಪನೀಯೋತ್ತರಭಾಗೇ ವ್ಯಾಖ್ಯಾತಂ ಔತಾನುಜ್ಞಾತ್ರನುಜ್ಞಾವಿಕಲ್ಪೈಃ ಸ್ಥೂಲಸೂಕ್ಷ್ಮಬೀಜ ಸಾಕ್ಷಿಭಿರಿತಿ

ಅದರಿಂದ ಶ್ರೇಷ್ಠ. ಅದ್ವೈತ ವ್ಯಾಖ್ಯಾನ ಪ್ರಕಾರ ಪಂಚೀಕೃತ ಪಂಚಭೂತಗಳಿಂದ ಕೂಡಿದ ಬ್ರಹ್ಮಾಂಡಕ್ಕೆ ಅಭಿಮಾನಿ ವಿರಾಟ್‌ಪುರುಷನೆಂಬ ಜೀವನಿದ್ದಾನೆ. ಅವನ ಅಂತರ್ಯಾಮಿ ಭಗವದ್ರೂಪ ಅನಿರುದ್ಧ. ಇದು ಬ್ರಹ್ಮಾಂಡವೆಂಬ ಸ್ಥೂಲೋಪಾಧಿ ಯುಕ್ತವಾದ ಬ್ರಹ್ಮಚೈತನ್ಯ. ಅಪಂಚೀಕೃತ ಪಂಚಭೂತಗಳೆಂಬ ಸೂಕ್ಷ್ಮೋಪಾಧಿ ಯುಕ್ತವಾದ ಬ್ರಹ್ಮಚೈತನ್ಯ ಪ್ರದ್ಯುಮ್ನರೂಪ. ಇದು ಸಮಷ್ಟಿಜೀವನಾದ ಹಿರಣ್ಯಗರ್ಭನ ಅಂತರ್ಯಾಮಿಯಾಗಿದೆ. ಈ ಸ್ಥೂಲಸೂಕ್ಷ್ಮ ಉಪಾಧಿಗಳಿಗೂ ಕಾರಣವಾದ ಮಾಯಾರೂಪ ಉಪಾಧಿ ಸಂಬಂಧಉಳ್ಳ ಬ್ರಹ್ಮಚೈತನ್ಯ ಸಂಕರ್ಷಣ. ಈ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರು ಮೂವರೂ ಉಪಾಧಿ ವಿಶಿಷ್ಟರಾದ್ದರಿಂದ ಅವರಿಗೆ ಮೋಹ ಅಶಕ್ತಿ ಮುಂತಾದ ದೋಷಗಳಿವೆ. ಯಾವ ಉಪಾಧಿಯೂ ಇಲ್ಲದ ಶುದ್ಧ ಚೈತನ್ಯ ವಾಸುದೇವ. ಅವನಲ್ಲಿ ಮೋಹಾದಿ ಯಾವ ದೋಷವೂ ಇಲ್ಲ. ಅನಿರುದ್ಧನ ಅವತಾರಗಳು ಮತ್ಸ್ಯಾದಿಗಳು, ವಾಸುದೇವನ ಅವತಾರ ಕೃಷ್ಣ

ವಿಶಿಷ್ಟಾದ್ವೈತ ರೀತಿಯಿಂದ ಚತುರ್ವ್ಯೂಹದಲ್ಲಿ ವೈಲಕ್ಷಣ್ಯ ಹೀಗಿದೆ— ಜ್ಞಾನ ಶಕ್ತಿ ಬಲ ಐಶ್ವರ್ಯ ವೀರ್ಯ ತೇಜಸ್ಸು ಎಂಬ ಷಡ್ಗುಣಗಳು ಎಲ್ಲವೂ ವಾಸುದೇವನಲ್ಲಿ ವ್ಯಕ್ತವಾಗಿರುವುದರಿಂದ ಅವನು ಪೂರ್ಣ. ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರಲ್ಲಿ ಕ್ರಮವಾಗಿ ಜ್ಞಾನ-ಶಕ್ತಿಗಳು, ಬಲ-ಐಶ್ವರ್ಯಗಳು, ವೀರ್ಯ- ತೇಜಸ್ಸುಗಳು ಹೀಗೆ

ಬಹುಕೃತ್ವೋಽಭ್ಯಾಸೇನ । ಅತ್ರ ಚ ವಾಸುದೇವಃ ಪರಮಾತ್ಮಾ, ಸಂಕರ್ಷಣೋ ಜೀವಃ ಪ್ರದ್ಯುಮ್ನಸ್ತು ಮನೋಽನಿರುದ್ಧೋಽ ಹಂಕಾರ ಇತಿ ಪಾಂಚರಾತ್ರಿಕಪ್ರಕ್ರಿಯಾನಾದರಣೀಯಾ ತದ್ವಚನವಿರೋಧಾಚ್ಚೇತ್ಯಾದ್ಯುತ್ಪತ್ತ್ಯ- ಸಂಭವಾದಿತ್ಯಧಿಕರಣೇ ವ್ಯಾಖ್ಯಾತಂ । ಕೇವಲಂ ಪರಮಾತ್ಮೈವಾನುಪಹಿತೋ ವಾಸುದೇವಃ । ಕಾರಣೋಪಹಿತಃ ಸಂಕರ್ಷಣಃ । ಸೂಕ್ಷ್ಮಭೂತೋಪಹಿತಃ ಪ್ರದ್ಯುಮ್ನಃ । ಸ್ಥೂಲಭೂತೋಪ ಹಿತೋಽನಿರುದ್ಧಃ ಇತಿ ಯಥಾ ವ್ಯಾಖ್ಯಾನ ಮೇವಾದರಣೀಯಂ ಶ್ರೌತತ್ವಾದುಪಪನ್ನತ್ವಾಚ್ಚ। -ವಂಶೀಧರಃ

ಇಹ ಯೋ ವಿಂಶತಿತಮಾವತಾರತ್ವೇನ ಕಥಿತಃ ಸ ಕೃಷ್ಣಸ್ತು ಭಗವಾನ್ । ನ ತ್ವಂಶೋ, ನ ಚಾಂಶೀ ಪುರುಷಃ । ಕಿಂ ತು ಭಗವಾನ್ । ಜಗೃಹೇ ಪೌರುಷಂ ರೂಪಂ ಭಗವಾನ್ ಮಹದಾದಿಭಿರಿತಿ ಪದ್ಯೋಕ್ತೋ ಯಃ ಪುರುಷಸ್ಯಾವತಾರೀ ಭಗವಾನ್ ಸ ಏವೇತ್ಯರ್ಥಃ। ತೇನ ಪುರುಷಾವತಾರಿಣೋ ಭಗವತೋ ಮಹಾನಾರಾಯಣಾದಪಿ ಕೃಷ್ಣಸ್ಯೋತ್ಕರ್ಷಃ ಸಾಧಿತಃ । ತೇನಾತ್ರ ಪುರುಷಾದಿಭ್ಯೋಽಪಿ ಶ್ರೇಷ್ಠೋ ದೇವಕೀಪುತ್ರ ಏವ ಜ್ಞೇಯಃ। ತಥಾಪ್ಯವತಾರಮಧ್ಯೇ ತಸ್ಯ ಗಣನಂ ತು ಭೂಲೋಕಸ್ಥಮಥುರಾದಿ ಧಾಮವಿಲಾಸಿತ್ವಾತ್ ನರಲೀಲತ್ವಾತ್ ಪ್ರಾಪಂಚಿಕ ಲೋಕೇಷು ಕರುಣಾಧಿಕ್ಯಾತ್ ಆವಿರ್ಭಾವತಿರೋಭಾವಾಭ್ಯಾಂ ಚ । -ವಿಶ್ವನಾಥಃ

ಏತೇ ಋಷಿಪ್ರಭೃತಯಸ್ತು ಪುಂಸೋಽನಿರುದ್ಧಾಖ್ಯಸ್ಯಾಂಶಕಲಾಃ ಅಂಶಾಂಶಸಂಭೂತಾಃ । ಕೃಷ್ಣಸ್ತು ಭಗವಾನ್ ಸ್ವಯಮಿತಿ ಶ್ರೀಕೃಷ್ಣಸ್ಯ ಪೂರ್ಣಾವತಾರತ್ವಮುಕ್ತಂ । ಪೂರ್ಣತ್ವಂ ನಾಮ ಷಾಡ್ಗುಣ್ಯಪೂರ್ಣತ್ವೇನ ರೂಪೇಣ ಸಾಕ್ಷಾದವತೀರ್ಣತ್ವಂ। -ವೀರರಾಘವಃ

ಎರಡೆರಡೇ ಗುಣಗಳಿರುವುದರಿಂದ ಅವರು ಅಂಶಗಳು, ಋಷ್ಯಾದಿಗಳು ಅಂಶಾಂಶರು, ಅಂದರೆ ಆವೇಶಾವತಾರರು. ವರಾಹ ನಾರಾಯಣ ಮತ್ಸ್ಯ ಕೂರ್ಮ ಮೋಹಿನಿ ನೃಸಿಂಹ ವಾಮನ ರಾಮ ಕೃಷ್ಣ - ಇವರು ಪೂರ್ಣಾವತಾರರು.

ಚೈತನ್ಯ ಸಂಪ್ರದಾಯದಲ್ಲಿ ಗೋಲೋಕ ವೈಕುಂಠಕ್ಕಿಂತ ಆಚೆ ಬೇರೆಯೆ ಇದೆ. ಅಲ್ಲಿ ಗೋಪಗೋಪಿಯರೊಡನಿರುವ ಕೃಷ್ಣ ಸ್ವಯಂ ಭಗವಾನ್. ಅವನೆ ಮಥುರೆಯಲ್ಲಿ ವೃಂದಾವನದಲ್ಲಿ ಕೃಷ್ಣ. ಅವನು ಅವತಾರವಲ್ಲ. ವೈಕುಂಠದಲ್ಲಿರುವ ಮಹಾನಾರಾಯಣ ಅವನ ಒಂದು ಅವತಾರ. ಮತ್ಸ್ಯಾದಿಗಳೆಲ್ಲವೂ ಅವತಾರಗಳು, ಅಂಶಗಳು. ಅಂಶವೆಂದರೆ ಭಾಗವೆಂದರ್ಥವಲ್ಲ. ಅಖಂಡವಾದ್ದ ರಿಂದ ಭಾಗವಿಲ್ಲ. ಮೂಲರೂಪದ ಎಲ್ಲ ಶಕ್ತಿ ಪ್ರಕಟವಾಗಿರುವುದಿಲ್ಲ, ಅಪೂರ್ಣ ಎಂದರ್ಥ.

ಇದು ಸರಿಯಲ್ಲ. ಪರಮಾತ್ಮನ ಸ್ವರೂಪಾವತಾರಗಳಲ್ಲಿ ಭೇದವಿಲ್ಲ. ಅದರಿಂದ ಭಾಗವತ ಶ್ಲೋಕಕ್ಕೆ ಹೀಗೆ ಅರ್ಥ ಹೇಳಬೇಕು—

ಏತೇ ಪ್ರೋಕ್ತಾ ಅವತಾರಾ ಮೂಲರೂಪೀ ಕೃಷ್ಣಃ ಸ್ವಯಮೇವ ।
ಜೀವಾಸ್ತತ್ಪ್ರತಿಬಿಂಬಾಂಶಾ ವರಾಹಾದ್ಯಾಃ ಸ್ವಯಂ ಹರಿಃ ।
ದೃಶ್ಯತೇ ಬಹುಧಾ ವಿಷ್ಣುರೈಶ್ವರ್ಯಾದೇಕ ಏವ ತು ।
ಇತಿ ಬ್ರಹ್ಮವೈವರ್ತೇ।

'ಏತೇ' ಎಂದರೆ ಹಿಂದೆ ಹೇಳಿದ ವರಾಹಾದಿ ಅವತಾರಗಳು 'ಸ್ವಯಂ ಕೃಷ್ಣಃ ಭಗವಾನ್ ತು' ಸ್ವತಃ ಮೂಲರೂಪಿ ಭಗವಂತನೇ ಎಂದರ್ಥ. ಏಕೆಂದರೆ ಬ್ರಹ್ಮವೈವರ್ತ ಪುರಾಣದಲ್ಲಿ ಹಾಗೇ ಹೇಳಿದೆ— ಋಷಿಗಳು ದೇವತೆಗಳು ಮುಂತಾದ ಜೀವರು ಭಗವಂತನ ಪ್ರತಿಬಿಂಬರೂಪರಾದ ಭಿನ್ನಾಂಶರು. ವರಾಹಾದಿ ಅವತಾರಗಳು ಸ್ವಯಂ ಭಗವಂತನಿಂದ ಅಭಿನ್ನವಾಗಿವೆ. ಒಬ್ಬನೇ ವಿಷ್ಣು ಅಚಿಂತ್ಯ ಶಕ್ತಿಯಿಂದ ಅನೇಕರೂಪನಾಗಿ ಕಾಣಿಸಿಕೊಳ್ಳುತ್ತಾನೆ' ಎಂದು.

★★★

ಅವತಾರಗಳು ಪರಮಾತ್ಮನ ಸ್ವರೂಪ, ಋಷಿಗಳು ದೇವತೆಗಳು ಮುಂತಾದ ಜೀವರು ಪ್ರತಿಬಿಂಬರೂಪ. ಇವೆರಡನ್ನೂ ಹೇಳಿ ಜಡಪದಾರ್ಥಗಳು ಆರೋಪಿತರೂಪ, ಪ್ರತಿಮಾರೂಪ ಎಂದು ಸೂತರು ಹೇಳುತ್ತಾರೆ—

ಏತದ್ ರೂಪಂ ಭಗವತೋ ಹ್ಯರೂಪಸ್ಯ ಚಿದಾತ್ಮನಃ ।
ಮಾಯಾಗುಣೈರ್ವಿರಚಿತಂ ಮಹದಾದಿಭಿರಾತ್ಮನಿ ॥ ೩೦ ॥

ಪ್ರಕೃತಿಜನ್ಯವಾದ ಮಹದಾದಿಗಳಿಂದ ಭಗವಂತ ನಿರ್ಮಿಸಿದ ಈ ಬ್ರಹ್ಮಾಂಡವು

ಶರೀರರಹಿತನಾದ ಜ್ಞಾನಸ್ವರೂಪಶರೀರನಾದ ಭಗವಂತನ್ನಲ್ಲಿ ಅವನ ಆರೋಪಿತರೂಪವೆನಿಸುತ್ತದೆ.

ಇಲ್ಲಿ 'ಆತ್ಮನಿ ವಿರಚಿತಂ ಭಗವತೋ ರೂಪಂ' ಜೀವಾತ್ಮನಿಗೆ ಸಂಬಂಧಿಸಿದಂತೆ ನಿರ್ಮಿತವಾದ ಈ ಶರೀರ ಭಗವಂತನ ಶರೀರವೆನಿಸುತ್ತದೆ. ಮಂಚದಲ್ಲಿರುವವರನ್ನು ಮಂಚಗಳೆಂದೆ ಹೇಳುವಂತೆ ಭಗವಂತನಲ್ಲಿರುವ ವಿರಾಡ್ ಜೀವನನ್ನು ಭಗವಂತನೆಂದೆ ಹೇಳುತ್ತಾರೆ, ಹಾಗೇ ಯೋಗಿಗಳು ಉಪಾಸನೆ ಮಾಡುತ್ತಾರೆ. ಆದರಿಂದ ಬ್ರಹ್ಮಾಂಡ ವಿರಾಡ್‌ಜೀವನ ಶರೀರವೆ ಆಗಿದ್ದರೂ ಭಗವಂತನ ಶರೀರವೆ ಎಂದು ಆರೋಪ ಮಾಡಬೇಕು ಎಂದು ವಿಶ್ವನಾಥ ಜೀವಗೋಸ್ವಾಮಿ ಮುಂತಾದವರು ಹೇಳುತ್ತಾರೆ. ಆದರೆ ಆರೋಪ ಮಾಡಿ ಉಪಾಸನೆ ಮಾಡುವುದು ಮಿಥ್ಯೋಪಾಸನೆ ಅನರ್ಥಕರವಾದ್ದರಿಂದ ಈ ವ್ಯಾಖ್ಯಾನ ಸಮಂಜವಲ್ಲ. 'ಆತ್ಮನಿ' ಎಂದರೆ ಪರಮಾತ್ಮನಲ್ಲಿಯೆ ಇರುವ ಬ್ರಹ್ಮಾಂಡ ಪರಮಾತ್ಮನ ರೂಪವೆಂದು ಅಜ್ಞರಿಂದ ಆರೋಪಿತವಾಗುತ್ತದೆ ಎಂದು ಉಪಾಸನೆ ಮಾಡಬಹುದು. ಆದರಿಂದ ಅದು ಪರಮಾತ್ಮನ ಆರೋಪಿತರೂಪ—

ಏತದ್ ಜಡಂ ರೂಪಂ ।

ನಾರಾಯಣವರಾಹಾದ್ಯಾಃ ಪರಮಂ ರೂಪಮೀಶಿತುಃ ।
ಜೈವಂ ತು ಪ್ರತಿಬಿಂಬಾಖ್ಯಂ ಜಡಮಾರೋಪಿತಂ ಹರೇಃ ।
ಏವಂ ಹಿ ತ್ರಿವಿಧಂ ತಸ್ಯ ರೂಪಂ ವಿಷ್ಣೋರ್ಮಹಾತ್ಮನಃ ।

ಇತಿ ಪಾದ್ಮೇ ।

ಜಡವಾದ ಈ ಬ್ರಹ್ಮಾಂಡವು ಪರಮಾತ್ಮನ ಆರೋಪಿತರೂಪ. ಪದ್ಮಪುರಾಣದಲ್ಲಿ ಹಾಗೇ ಹೇಳಿದೆ— ಧರ್ಮಪುತ್ರನಾದ ನಾರಾಯಣ, ವರಾಹ ಮುಂತಾದುದು ಪರಮಾತ್ಮನ ಸ್ವರೂಪ. ಜೀವರು ಪ್ರತಿಬಿಂಬರೂಪರು. ಜಡವು ಆರೋಪಿತರೂಪ. ಹೀಗೆ ವಿಷ್ಣುವಿನ ರೂಪಗಳು ಮೂರು ಬಗೆಯಾಗಿವೆ' ಎಂದು.

★★★

'ಜಡವು ಭಗವಂತನ ಆರೋಪಿತರೂಪ' ಎಂದು ಹೇಳಿದಾಗ ಹಾವು ಹಗ್ಗದ ಆರೋಪಿತರೂಪ ಎನ್ನುವಂತೆ ಮಿಥ್ಯೆ ಎಂದು ಹೇಳಿದಂತಾವುದಿಲ್ಲವೆ? ಎಂದು ಪ್ರಶ್ನೆ ಮಾಡಿಕೊಂಡು ಸಮಾಧಾನವನ್ನು ಸೂತರು ಹೇಳುತ್ತಾರೆ—

ಯಥಾ ನಭಸಿ ಮೇಘೌಘಾ ರೇಣುರ್ವಾ ಪಾರ್ಥಿವೋಽನಿಲೇ ।
ಏವಂ ದ್ರಷ್ಟರಿ ದೃಶ್ಯತ್ವಮಾರೋಪಿತಮಬುದ್ಧಿಭಿಃ ॥ ೩೧ ॥

ಅಜ್ಞಾನಿಗಳು ಮೋಡದ ಚಲನೆಯನ್ನು ಆಕಾಶದಲ್ಲಿ, ದೂಳಿನ ರೂಪವನ್ನು ಗಾಳಿಯಲ್ಲಿ ಆರೋಪಿಸುವಂತೆ ಜಡಪದಾರ್ಥದ ಉತ್ಪತ್ತ್ಯಾದಿಗಳನ್ನು ಚಿನ್ಮಯವಾದ ಭಗವಂತನ ಶರೀರದಲ್ಲಿ ಆರೋಪಿಸುತ್ತಾರೆ.

ಬೇರೆ ವ್ಯಾಖ್ಯಾನಕಾರರು ಜಡಪ್ರಪಂಚ ಆರೋಪಿತವಾಗಿರುವುದರಿಂದ ಮಿಥ್ಯಾ ಎಂದೇ ಹೇಳಿದ್ದಾರೆ. ಆದರೆ ಶ್ಲೋಕದಲ್ಲಿ ದೃಶ್ಯತ್ವ ಆರೋಪಿತವಾಗಿದೆ ಎಂದಿದೆ ಹೊರತು ದೃಶ್ಯವಾದ ಜಡ ಆರೋಪಿತ ಎನ್ನಲಿಲ್ಲ. ಅದರಿಂದ ಹೀಗೆ ಹೇಳಬೇಕು—

ದೃಶ್ಯತ್ವಂ ಜಡರೂಪತ್ವಂ ।
ಅವಿಜ್ಞಾಯ ಪರಂ ದೇಹಮಾನಂದಾತ್ಮಾನಮವ್ಯಯಂ ।
ಆರೋಪಯಂತಿ ಜನಿಮತ್ ಪಂಚಭೂತಾತ್ಮಕಂ ಜಡಂ॥

ಇತಿ ಸ್ಕಾಂದೇ ।

ದೃಶ್ಯತ್ವವೆಂದರೆ ದೃಶ್ಯವಾದ ಜಡದ ಅಭೇದ ಮತ್ತು ಅದರ ಉತ್ಪತ್ತ್ಯಾದಿ ಧರ್ಮ ಎಂದರ್ಥ. ಸ್ಕಾಂದಪುರಾಣದಲ್ಲಿ ಹೇಳಿದೆ— ಪರಮಾತ್ಮನ ಶರೀರ ಅಪ್ರಾಕೃತ ಆನಂದಸ್ವರೂಪ ಅವಿನಾಶಿ ಎಂದು ತಿಳಿಯದ ಅಜ್ಞರು ಅದನ್ನು ಉತ್ಪತ್ತಿ ಉಳ್ಳದ್ದು ಪಂಚಭೂತಾತ್ಮಕ, ಜಡ ಎಂದು ಆರೋಪಿಸುತ್ತಾರೆ ಎಂದು.

ಪರಮಾತ್ಮನಲ್ಲಿ ಜಡದ ಆರೋಪವಲ್ಲ, ಪರಮಾತ್ಮನ ಚಿನ್ಮಯ ಶರೀರದಲ್ಲಿ ಜಡಾಭೇದಾರೋಪ, ಜಡದ ಉತ್ಪತ್ತ್ಯಾದಿ ದೋಷಗಳ ಆರೋಪ. ಅದರಿಂದ ಜಡಪದಾರ್ಥ ಸತ್ಯವೇ. ಅದರ ಅಭೇದ, ಅದರ ಉತ್ಪತ್ತ್ಯಾದಿ ದೋಷಗಳು ಪರಮಾತ್ಮನ ಶರೀರದಲ್ಲಿ ಅಜ್ಞಾನಿಗಳಿಂದ ಆರೋಪಿತವಾಗಿರುವುದರಿಂದ ಜಡವು ಆರೋಪಿತರೂಪವೆಂದು ವ್ಯವಹಾರ ಹೊರತು ಜ್ಞಾನಿಗಳು ತಾವೇ ಆರೋಪಿಸಿ ಉಪಾಸನ ಮಾಡಬಾರದು.

★★★

ಜೀವರು ಪರಮಾತ್ಮನ ಪ್ರತಿಬಿಂಬರೂಪರು ಹೇಗೆ ವಿಲಕ್ಷಣರಾಗಿದ್ದಾರೆ ಎಂದು ಸೂತರು ಹೇಳುತ್ತಾರೆ—

ಅತಃ ಪರಂ ಯದವ್ಯಕ್ತಂ ಅವ್ಯೂಢ ಗುಣಬೃಂಹಿತಂ ।
ಅದೃಷ್ಟಾಶ್ರುತವಸ್ತುತ್ವಾತ್ ಸ ಜೀವೋ ಯಃ ಪುನರ್ಭವಃ ॥ ೩೨ ॥

ಅನಾದಿಕಾಲದಿಂದಲೂ ಎಂದೂ ಸತ್ವಾದಿಗುಣದಿಂದ ಮುಕ್ತನಾಗದೆ ಸ್ವರೂಪ ವನ್ನು ವ್ಯಕ್ತಮಾಡಿಕೊಳ್ಳದೆ ಇರುವ ಜೀವ ಪರಮಾತ್ಮನನ್ನು ಶ್ರವಣಾದಿಗಳಿಂದ

ಸಾಕ್ಷಾತ್ಕಾರ ಮಾಡಿಕೊಳ್ಳದಿರುವುದರಿಂದ ಮತ್ತೆಮತ್ತೆ ಹುಟ್ಟುತ್ತಾನೆ. ಆದರಿಂದ ಅವನು ಹಿಂದೆ ಹೇಳಿದ ಪರಮಾತ್ಮನ ಸ್ವರೂಪ ಜಡರೂಪಗಳಿಂದ ವಿಲಕ್ಷಣನಾಗಿದ್ದಾನೆ.

ಇಲ್ಲಿ ಜೀವನ ಸೂಕ್ಷ್ಮಲಿಂಗಶರೀರದ ವಿವರಣೆ ಇದೆ. ಸೂಕ್ಷ್ಮವಾದ್ದರಿಂದ ಅದಕ್ಕೆ ಆಕಾರವಿಲ್ಲ, ಅದರಿಂದ ಅದೃಷ್ಟ ಇಂದ್ರಾದಿದೇವತೆಗಳಂತೆ ಶ್ರುತವೂ ಅಲ್ಲ, ಪುನರ್ಜನ್ಮರೂಪಕಾರ್ಯದಿಂದ ಅನುಮಾನ ಮಾಡಬೇಕಷ್ಟೆ' ಎಂದು ಶ್ರೀಧರ ವ್ಯಾಖ್ಯಾನ. ವೀರರಾಘವ ವ್ಯಾಖ್ಯಾನದಲ್ಲಿ ಜೀವಸ್ವರೂಪ ವಿವರಣೆ ಎಂದು ಹೇಳಿ ಕಾರ್ಯವಾದ ಜಡ ದೃಷ್ಟವಾಗುತ್ತದೆ. ಕಾರಣವಾದ ಜಡ ಶ್ರುತವಾಗುತ್ತದೆ. ಎರಡಕ್ಕಿಂತ ವಿಲಕ್ಷಣ ಜೀವಸ್ವರೂಪ ಎಂದಿದೆ. ವಲ್ಲಭ ವ್ಯಾಖ್ಯಾನದಲ್ಲಿ ಜೀವಸ್ವರೂಪ ಜಡವಲ್ಲ, ಜಡವಾದರೆ ದೃಷ್ಟವಾಗಬೇಕು ಭಗವಂತನಲ್ಲ; ಭಗವಂತನಾದರೆ ವೇದಾದಿಗಳಲ್ಲಿ ಶ್ರುತವಾಗಬೇಕು. ಅದೃಷ್ಟ ಅಶ್ರುತವಾದ್ದರಿಂದ ಜೀವ ಉಭಯವಿಲಕ್ಷಣ ಎಂದು ವಿವರಣೆ ಇದೆ. ಶ್ರೀಮದಾಚಾರ್ಯರ ವಿವರಣೆ ಇಲ್ಲಿ ಆವಶ್ಯಕ. ಏಕೆಂದರೆ ಜೀವನ ಸೂಕ್ಷ್ಮಲಿಂಗಶರೀರ ದೃಷ್ಟವಲ್ಲದಿದ್ದರೂ 'ಭಿದ್ಯತೇ ಹೃದಯಗ್ರಂಥಿಃ' ಎಂದು ಮುಂತಾಗಿ ಶ್ರುತವಾಗಿದೆ. ಜೀವಸ್ವರೂಪ 'ಅಹಂ' ಎಂದು ದೃಷ್ಟವೂ ಆಗಿದೆ, ಶ್ರುತವೂ ಆಗಿದೆ. ಅದರಿಂದ ಹೀಗೆ ಹೇಳಬೇಕು—

ಅತಃ ಪರಂ ಜಡೇಶ್ವರಯೋಃ ಪರಂ ।
ಅವ್ಯೂಢಗುಣಬೃಂಹಿತಂ ಅನಾದಿಕಾಲೇ ಕದಾಚಿದಪ್ಯನಪಗತ
ಸತ್ವಾದಿ ಗುಣ ಬೃಂಹಿತಂ ।
ಅದೃಷ್ಟಾಶ್ರುತ ವಸ್ತುತ್ವಾತ್ ಪುನರ್ಭವಃ ।

ಜೀವ ಸ್ವರೂಪ ಜಡ ಈಶ್ವರರಿಗಿಂತ ವಿಲಕ್ಷಣ. 'ಅವ್ಯೂಢಗುಣಬೃಂಹಿತಂ' ಎಂದರೆ, ಅನಾದಿಕಾಲದಲ್ಲಿ ಎಂದೂ ತೊಲಗದಿರುವ ಸತ್ವಾದಿಗುಣಗಳಿಂದ ತುಂಬಿದವನು ಜೀವ. 'ಅದೃಷ್ಟಾಶ್ರುತ ವಸ್ತುತ್ವಾತ್ ಪುನರ್ಭವಃ' ಎಂದು ಅನ್ವಯ. ಸಂಸಾರಿ ಜೀವ ಏಕೆ ಪುನಃ ಪುನಃ ಹುಟ್ಟುತ್ತಾನೆ ಎಂದರೆ ಅವನು ಅದೃಷ್ಟ ವಸ್ತು. ವಸ್ತು ಎಂದರೆ ಹಿಂದೆ ಹೇಳಿದಂತೆ ಭಗವಂತ. ಅವನ ಅಪರೋಕ್ಷ ಪಡೆದಿಲ್ಲ, ಅದೂ ಏಕೆ ಎಂದರೆ ಅಶ್ರುತವಸ್ತು, ಭಗವಂತನ ಬಗ್ಗೆ ಶ್ರವಣಾದಿಗಳನ್ನು ಮಾಡಿಲ್ಲ.

★★★

'ಜೀವ ಪರಮಾತ್ಮನನ್ನು ಕಂಡಿಲ್ಲ, ಆದರಿಂದ ಅವನು ಪುನಃ ಪುನಃ ಹುಟ್ಟುತ್ತಾನೆ' ಎಂದು ಹಿಂದೆ ಹೇಳಿದೆ. ಇದು ಸರಿಯಲ್ಲ, ಜೀವ ಪರಮಾತ್ಮನೇ ಆಗಿರುವುದರಿಂದ 'ಅಹಂ' ಎಂಬ ಅನುಭವ ಪರಮಾತ್ಮಾನುಭವವೆ ಎಂಬ ಆಕ್ಷೇಪ ಬಂದರೆ ಪರಿಹಾರವನ್ನು ಸೂತರು ಹೇಳುತ್ತಾರೆ—

ಯತ್ರೇಮೇ ಸದಸದ್ರೂಪೇ ಪ್ರತಿಷಿದ್ಧೇ ಸ್ವಸಂವಿದಾ ।
ಅವಿದ್ಯಯಾಽಽತ್ಮನಿ ಕೃತೇ ಇತಿ ತದ್ ಬ್ರಹ್ಮದರ್ಶನಂ ॥ ೩೩ ॥

ಸ್ಥೂಲ ಸೂಕ್ಷ್ಮ ಶರೀರ ಸಂಬಂಧಕ್ಕೆ ನಿವರ್ತಕ ಪರಮಾತ್ಮಜ್ಞಾನ. ಅದು ಪರಮಾತ್ಮನಿಗೆ ಸದಾ ಇರುವುದರಿಂದ ಅವನಿಗೆ ಎಂದೂ ಸ್ಥೂಲ ಸೂಕ್ಷ್ಮ ಜಡಶರೀರಗಳಿಲ್ಲ. ಆದರೆ ಜೀವ ಅವಿದ್ಯೆಯ ಪರಿಣಾಮವಾಗಿ ಪರಮಾತ್ಮ ಜ್ಞಾನವನ್ನು ಹೊಂದುತ್ತಿಲ್ಲ. ಅದರಿಂದ ಅವನಿಗೆ ಪರಮಾತ್ಮ ಸ್ಥೂಲಸೂಕ್ಷ್ಮ ಶರೀರ ಬಂಧ ನೀಡಿದ್ದಾನೆ. ಹೀಗೆ ಜೀವ ತನಗಿಂತ ಪರಮಾತ್ಮ ವಿಲಕ್ಷಣ ಎಂದು ತಿಳಿಯುವುದೆ ಪರಮಾತ್ಮಜ್ಞಾನ ಹೊರತು ಅಹಂ ಎಂಬ ಅನುಭವ ಪರಮಾತ್ಮ ಜ್ಞಾನವಲ್ಲ.

ಇಲ್ಲಿ ಮೇಲುನೋಟಕ್ಕೆ 'ಸ್ಥೂಲ ಸೂಕ್ಷ್ಮ ಶರೀರಗಳು ಅವಿದ್ಯಾ ಪರಿಣಾಮವಾಗಿರುವುದರಿಂದ ಆತ್ಮಸಾಕ್ಷಾತ್ಕಾರದಿಂದ ಅವು ನಿವೃತ್ತವಾಗುತ್ತವೆ. ಆಗ ಜೀವ ಜ್ಞಾನರೂಪಿ ಬ್ರಹ್ಮನಾಗುತ್ತಾನೆ' ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಶ್ರೀಧರ ವ್ಯಾಖ್ಯಾನವಿದೆ. ಆದರೆ 'ಬ್ರಹ್ಮದರ್ಶನಂ' ಎಂಬುದನ್ನು ಒಡೆದು 'ಜೀವ ಬ್ರಹ್ಮನಾಗುತ್ತಾನೆ. ಬ್ರಹ್ಮ ದರ್ಶನರೂಪನಾಗಿದ್ದಾನೆ' ಎಂದು ವ್ಯಾಖ್ಯಾನಿಸಲು ಜೀವ ಎಂಬ ಕರ್ತೃಪದವೆ ಇಲ್ಲ. 'ದರ್ಶನ' ಶಬ್ದ ವ್ಯರ್ಥ. ಅದರಿಂದ ಹೀಗೆ ವ್ಯಾಖ್ಯಾನಿಸಬೇಕು—

ಅವಿದ್ಯಯಾ ಜೀವೇ ಕೃತೇ, ಪರಮೇಶ್ವರೇ ಪ್ರತಿಷಿದ್ಧೇ
ಇತಿ ಬ್ರಹ್ಮದರ್ಶನಂ ।

ಅವಿದ್ಯೆಯಿಂದ ಅಂದರೆ ಪರಮಾತ್ಮಜ್ಞಾನದ ಅಭಾವದಿಂದಾಗಿ ಜೀವನಲ್ಲಿ ಸ್ಥೂಲಸೂಕ್ಷ್ಮ ಶರೀರಗಳು ಇವೆ. ಪರಮಾತ್ಮನಲ್ಲಿ ಎಂದೂ ಇಲ್ಲ ಎಂದು ಭೇದವನ್ನು ತಿಳಿಯುವುದೆ ಬ್ರಹ್ಮಜ್ಞಾನವೆನಿಸುತ್ತದೆ.

★★★

ಬ್ರಹ್ಮಜ್ಞಾನಿಗಳಾದ ಶುಕಾದಿಗಳಿಗೆ ಸಂಸಾರನಿವೃತ್ತಿಯಾಗಿಲ್ಲ. ಅದರಿಂದ ಬ್ರಹ್ಮಜ್ಞಾನ ಸಂಸಾರನಿವರ್ತಕವೆಂದು ಹೇಗೆ ಹೇಳಲಿ? ಎಂಬ ಪ್ರಶ್ನೆಗೆ ಸಮಾಧಾನ ಹೇಳುತ್ತಾರೆ ಸೂತರು—

ಯದ್ಯೇಷೋಪರತಾ ದೇವೀ ಮಾಯಾ ವೈಶಾರದೀ ಮತಿಃ ।
ಸಂಪನ್ನ ಏವೇತಿ ವಿದುರ್ಮಹಿಮ್ನಿ ಸ್ವೇ ಮಹೀಯತೇ ॥ ೩೪ ॥

ಬಂಧಕಳಾದ ಮಾಯಾದೇವಿ ದುರ್ಗೆ ಬ್ರಹ್ಮಜ್ಞಾನ ನೀಡಿ, ಬಂಧಿಸುವುದನ್ನು

ನಿಲ್ಲಿಸಿದಾಗ ಜೀವನನ್ನು ಮುಕ್ತನೆಂದೇ ತಿಳಿಯುತ್ತಾರೆ. ಜೀವ ಬೇಗನೆ ಸ್ವರೂಪಾನಂದಾವಿರ್ಭಾವ ಹೊಂದಿ ವಿಷ್ಣುಲೋಕದಲ್ಲಿ ಸತ್ಕಾರ ಹೊಂದುತ್ತಾನೆ.

ಇಲ್ಲಿ ಶ್ರೀಧರ ವ್ಯಾಖ್ಯಾನದಲ್ಲಿ 'ಯದಿ ದೇವೀ ಮಾಯಾ ಉಪರತಾ' ಜೀವನನ್ನು ಸಂಸಾರದ ಜನನ ಮರಣ ಚಕ್ರದಲ್ಲಿ ಸಿಲುಕಿಸಿ ಆಟವಾಡುವ ಮಾಯೆ ನಾಶವಾದಾಗ' ಎಂದು ಹೇಳಿದೆ. ಆದರೆ ಆಟವಾಡುವುದು ಚೇತನಸ್ವಭಾವ. ಜಡವಾದ ಮಾಯೆ ಆಟವಾಡುವುದಿಲ್ಲ. ಅದರಿಂದ 'ದೇವೀ' ಆಟವಾಡುವವಳು ಜಡಮಾಯೆ ಎಂಬುದು ಕೂಡುವುದಿಲ್ಲ. ಅದರಿಂದ 'ದೇವೀ ಮಾಯಾ' ಎಂದರೆ ಬಂಧಕ ಪ್ರಕೃತಿಯ ಅಭಿಮಾನಿನಿಯಾದ ದುರ್ಗಾದೇವಿ. ಅವಳಿಗೆ 'ಉಪರತಿ' ಎಂದರೆ ನಾಶ ಕೂಡುವುದಿಲ್ಲ. ಬಂಧನ ವ್ಯಾಪಾರವನ್ನು ನಿಲ್ಲಿಸುವುದೇ ಉಪರತಿ. ಅದರಿಂದ ಹೀಗೆ ಹೇಳಬೇಕು—

ವಿಶಾರದಃ ಪರಮೇಶ್ವರಃ । ತನ್ಮತಿರ್ಮಾಯಾ ಯದಾ
ನೈನಂ ಶೋಚಯಾಮೀತ್ಯುಪರತಾ ತದಾ ಸಂಪನ್ನ ಏವ ।

ವಿಶಾರದ ಎಂದರೆ ಸರ್ವಜ್ಞನಾದ ಪರಮಾತ್ಮ. ದುರ್ಗೆ ಆ ಪರಮಾತ್ಮನ ಜ್ಞಾನ ಹುಟ್ಟಿಸಿ ಅದಕ್ಕೆ ಅಭಿಮಾನಿನಿಯಾಗಿ ಇನ್ನು ಈ ಜೀವನನ್ನು ನೋಯಿಸುವುದಿಲ್ಲ ಎಂದು ಸುಮ್ಮನಾದಾಗ ಜೀವ ಮುಕ್ತನಾದನೆಂದೇ ತಿಳಿಯುತ್ತಾರೆ ಎಂದರ್ಥ.

★★★

'ಜನ್ಮರಹಿತನಾದ ಪರಮಾತ್ಮ ಅವತಾರಗಳಲ್ಲಿ ಜನಿಸುವುದು, ನಿಷ್ಕ್ರಿಯನಾದ ಅವನು ಅವತಾರಲೀಲೆಗಳನ್ನು ಮಾಡುವುದು ಎಲ್ಲವೂ ಭ್ರಾಂತಿ ಕಲ್ಪಿತ' ಎಂದು ಬಲ್ಲವರು ಹೇಳುವುದಿಲ್ಲ ಎನ್ನುತ್ತಾರೆ ಸೂತರು—

ಏವಂ ಜನ್ಮಾನಿ ಕರ್ಮಾಣಿ ಹ್ಯಕರ್ತುರಜನಸ್ಯ ಚ ।
ವರ್ಣಯಂತಿ ಸ್ಮ ಕವಯೋ ವೇದಗುಹ್ಯಾನಿ ಹೃತ್ಪತೇಃ ॥ ೩೫ ॥

ಜನನರಹಿತನಾದ ಪರಮಾತ್ಮನ ಜನನಗಳು, ನಿಷ್ಕ್ರಿಯನಾದ ಆತನ ಅವತಾರ ಲೀಲೆಗಳು ಹೀಗೇ ಅಚಿಂತ್ಯಶಕ್ತಿಯಿಂದ ಕೂಡುವುದೆಂದು ಜ್ಞಾನಿಗಳು ಹೊಗಳುತ್ತಾರೆ. ಆ ಪರಮಾತ್ಮ ಹೃದಯದಲ್ಲಿ ನಿಂತು ಪ್ರೇರಿಸುವವ. ಅವನ ಲೀಲೆ ವೇದಗಳಲ್ಲಿ ಗೋಪ್ಯವಾಗಿವೆ. ಅವನು ಪ್ರೇರಿಸಿದರೆ ಮಾತ್ರ ಅವುಗಳನ್ನು ತಿಳಿಯಬಹುದು. ಅದರಿಂದ ಅಜ್ಞರು ತಿಳಿಯದೆ ಭ್ರಾಂತಿಕಲ್ಪಿತವೆನ್ನುತ್ತಾರೆ, ಜ್ಞಾನಿಗಳು ಹಾಗೆ ಅನ್ನುವುದಿಲ್ಲ.

ಇಲ್ಲಿ ಶ್ರೀಧರವ್ಯಾಖ್ಯಾನ 'ಏವಂ' ಜೀವನಲ್ಲಿಲ್ಲದ ಜನನಗಳೂ ಕರ್ಮಗಳೂ ಅವನಲ್ಲಿ ಹೇಗೆ ಭ್ರಾಂತಿ ಕಲ್ಪಿತವೋ ಹಾಗೇ ಪರಮಾತ್ಮನಲ್ಲಿ ಜನನ ಹಾಗೂ ಕರ್ಮಗಳೂ ಅವನಲ್ಲಿ ಭ್ರಾಂತಿಕಲ್ಪಿತವೆಂದು ಜ್ಞಾನಿಗಳು ಹೇಳುತ್ತಾರೆ' ಎಂದು ಹೇಳಿದೆ. ಇದು ಪ್ರಮಾಣವಿರುದ್ಧ.

ಅಪ್ರಯತ್ನಾತ್ ಸ್ವತಂತ್ರತ್ವಾತ್ ಫಲಾನಾಂ ಚ ವಿವರ್ಜನಾತ್ ।
ಕ್ರಿಯಾಯಾಶ್ಚ ಸ್ವರೂಪತ್ವಾತ್ ಅಕರ್ತೇತಿ ಚ ತಂ ವಿದುಃ ।
ಕರ್ತೃತ್ವಂ ಭ್ರಾಂತಿಜಂ ಪ್ರಾಹುರತತ್ತ್ವವಿದೋ ಜನಾಃ ।
ಐಶ್ವರ್ಯಜಂ ತು ಕರ್ತೃತ್ವಂ ಸಮ್ಯಕ್ ತತ್ತ್ವವೇದಿನಃ ।

ಇತಿ ಪಾದ್ಮೇ ।

ಪರಮಾತ್ಮ ಕ್ರಿಯೆಯನ್ನು ಮಾಡುವಾಗ ಆಯಾಸಪಡುವುದಿಲ್ಲ, ಪ್ರಯತ್ನದಲ್ಲಿ ಅನ್ಯರ ಅಧೀನನಾಗಿರುವುದಿಲ್ಲ, ಫಲೋದ್ದೇಶ ಅವನಿಗೆ ಇಲ್ಲ, ಕ್ರಿಯೆ ಅವನ ಸ್ವರೂಪವೇ ಆಗಿದೆ. ಈ ಎಲ್ಲ ಕಾರಣಗಳಿಂದ ಅವನಲ್ಲಿ ಕ್ರಿಯೆ ಇಲ್ಲ ಎಂದು ಜ್ಞಾನಿಗಳು ಹೇಳುವುದುಂಟು ಹೊರತು ಕ್ರಿಯೆಯನ್ನು ಮಾಡುವುದೆ ಇಲ್ಲ ಎಂದಲ್ಲ. ಅದರಿಂದ ಅಜ್ಞರು ಮಾತ್ರ ಕರ್ತೃತ್ವ ಹರಿಯಲ್ಲಿ ಭ್ರಾಂತಿಕಲ್ಪಿತ ಎನ್ನುತ್ತಾರೆ. ತಿಳಿದವರು ಸ್ವರೂಪಭೂತವಾದ ಕ್ರಿಯೆಯನ್ನು ಮಾಡುವುದು ಅಚಿಂತ್ಯಶಕ್ತಿಯಿಂದ ಕೂಡುತ್ತದೆ ಎನ್ನುತ್ತಾರೆ ಎಂದು ಪದ್ಮಪುರಾಣದಲ್ಲಿದೆ.

★★★

ಈ ಭಾಗವತ ಗ್ರಂಥವನ್ನು ವೇದವ್ಯಾಸರು ರಚಿಸಿದರು ಎನ್ನುತ್ತಾರೆ ಸೂತರು—

ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಂಮಿತಂ ।
ಉತ್ತಮ ಶ್ಲೋಕಚರಿತಂ ಚಕಾರ ಭಗವಾನ್ ಋಷಿಃ ॥ ೪೦ ॥

ಸರ್ವಜ್ಞರಾದ ವೇದವ್ಯಾಸರು ಹರಿಯ ಲೀಲೆಗಳನ್ನು ಕೊಂಡಾಡುವ ವೇದಸಮಾನವಾದ ಈ ಭಾಗವತವನ್ನು ರಚಿಸಿದರು.

ಇದನ್ನು ಹೇಳಲು ಏನು ಪ್ರಸಕ್ತಿ ಎಂದು ಪ್ರಶ್ನೆ ಬರುವುದು ಸಹಜ. ಅದಕ್ಕೆ ಹೇಳುತ್ತಾರೆ—

ಧರ್ಮಃ ಕಂ ಶರಣಂ ಗತ ಇತ್ಯಸ್ಯ ತಮೇವ ವ್ಯಾಸ ರೂಪಿಣಮಿತಿ ಪರಿಹಾರ ಉಚ್ಯತೇ ಇದಂ ಭಾಗವತಮಿತ್ಯಾದಿನಾ ।

ಶ್ರೀಕೃಷ್ಣ ಪರಂಧಾಮಕ್ಕೆ ತೆರಳಿದ ಬಳಿಕ ಧರ್ಮ ಯಾರನ್ನು ಶರಣು

ಹೊಂದಿತೆಂದು ಶೌನಕರು ಮಾಡಿದ ಪ್ರಶ್ನೆಗೆ ವ್ಯಾಸರೂಪನಾದ ಆ ಕೃಷ್ಣನನ್ನೆ ಶರಣು ಹೊಂದಿತೆಂದು 'ಇದಂ ಭಾಗವತಂ' ಎಂದು ಮುಂತಾಗಿ ಸಮಾಧಾನವನ್ನು ಸೂತರು ಹೇಳುತ್ತಿದ್ದಾರೆ.

ಧರ್ಮವು ಭಾಗವತವನ್ನು ಶರಣು ಹೊಂದಿತೆಂದು ಶುಕದೇವ ವ್ಯಾಖ್ಯಾನ ಹೇಳಿದೆ. ಜಡವಾದ ಭಾಗವತವು ಧರ್ಮವನ್ನು ಕಾಪಾಡದು. ಭಾಗವತಕರ್ತರಾದ ವ್ಯಾಸರು ಕಾಪಾಡುತ್ತಾರೆ.

ಇತಿ ಪ್ರಥಮಸ್ಕಂಧೇ ತೃತೀಯೋಽಧ್ಯಾಯಃ

4ನೇ ಅಧ್ಯಾಯ

ಅಧ್ಯಾಯ ಸಾರಾಂಶ

ಶೌನಕರು ಕೇಳಿದರು— ವೇದವ್ಯಾಸರು ಯಾವಾಗ ಏಕೆ ಭಾಗವತವನ್ನು ರಚಿಸಿದರು? ಅದಕ್ಕೆ ಯಾರು ಪ್ರಾರ್ಥನೆ ಮಾಡಿದರು? ಶುಕಮುನಿ ವಿರಕ್ತರು ಹಸು ಹಾಲು ಕರೆವಷ್ಟಕ್ಕಿಂತ ಹೆಚ್ಚು ಕಾಲ ಯಾರ ಮನೆಯಂಗಳದಲ್ಲಿಯೂ ಭಿಕ್ಷೆಗಾಗಿ ನಿಲ್ಲದವರು ಒಂದು ಸಪ್ತಾಹಕಾಲ ಪರೀಕ್ಷಿದ್ರಾಜನ ಅರಮನೆಯಲ್ಲಿ ಹೇಗೆ ಇದ್ದರು? ಪರೀಕ್ಷಿತ ಪ್ರಾಯೋಪವೇಶಕ್ಕೆ ಕುಳಿತುದೇಕೆ? ಅವನ ಚರಿತ್ರೆ ಏನು?

ಸೂತರು ಹೇಳಿದರು— ವೇದವ್ಯಾಸರು ವೇದವಿಭಾಗ ಮಾಡಿ ಭಾರತ ಪುರಾಣಗಳನ್ನೂ ಬ್ರಹ್ಮಸೂತ್ರವನ್ನೂ ರಚಿಸಿ ಇನ್ನೂ ತೃಪ್ತಿ ಕಾಣದೆ ಕಲಿಕಾಲದಲ್ಲಿ ಅಜ್ಞಾನಿಗಳಾದ ಸಜ್ಜನರ ಉಪಕಾರಕ್ಕಾಗಿ ತಾನು ಇನ್ನೂ ಏನಾದರೂ ಗ್ರಂಥ ರಚಿಸ ಬೇಕೆ ಏನು ಗ್ರಂಥ ರಚಿಸಬೇಕೆಂಬ ಪ್ರಶ್ನೆ ಬಗೆ ಹರಿಯುತ್ತಿಲ್ಲವೆಂಬಂತೆ ತೋರಿಕೊಂಡು ಚಿಂತಾಕ್ರಾಂತರಾದಂತೆ ಕುಳಿತರು. ಅಷ್ಟರಲ್ಲಿ ಅಲ್ಲಿಗೆ ನಾರದ ಮುನಿ ಬಂದರು.

ತಾವು ಮಹಾಭಾರತದಲ್ಲಿ ಭಗವಂತನ ಮಹಿಮೆ ಎಲ್ಲವನ್ನೂ ಹೇಳಿರುವಿರಿ. ಆದರೂ ಗುಹ್ಯ-ದರ್ಶನ-ಸಮಾಧಿ ಭಾಷೆಗಳೆಂಬ ಭಾಷಾತ್ರಯ ಪರಿಜ್ಞಾನವಿಲ್ಲದ ಅಲ್ಪಜ್ಞರಿಗೆ ಅದು ತಿಳಿಯಲಾರದು. ಸ್ಪಷ್ಟವಾದ ಸಮಾಧಿಭಾಷೆಯಿಂದ ಹೇಳುವ ಭಾಗವತವನ್ನು ರಚಿಸಬೇಕು. ಧರ್ಮ-ಅರ್ಥ-ಕಾಮಗಳನ್ನು ಮಹಾಭಾರತದಲ್ಲಿ ಬಹಳ ಹೇಳಿದ್ದೀರಿ. ಅದು ಸಾಕು. ಭಾಗವತ ಧರ್ಮವನ್ನೂ ಅಷ್ಟೇ ವಿಸ್ತಾರವಾಗಿ ಹೇಳಿದ್ದೀರಿ. ಆದ್ದರೆ ಅದು ಎಷ್ಟು ಹೇಳಿದರೂ ಕಡಿಮೆಯೆ, ಇನ್ನೂ ಹೇಳಬೇಕು. ಅದಕ್ಕಾಗಿ ಭಾಗವತ ರಚಿಸಿರಿ. ಧರ್ಮ ಅರ್ಥ ಕಾಮಗಳಲ್ಲಿ ವಿಷಯ ಭೋಗಾಸಕ್ತರಾದ ಜನರು

ತಾವೇ ಪ್ರವೃತ್ತಿ ಮಾಡುತ್ತಾರೆ. ಅಂಥವರಿಗೆ ತಿರುಗಿ ಆ ಧರ್ಮಾದಿಗಳನ್ನು ಬೋಧಿಸಿ ಅವರ ವಿಷಯಾಸಕ್ತಿಯನ್ನು ಹೆಚ್ಚಿಸುವುದೂ ಯುಕ್ತವಲ್ಲ. ಅದರಿಂದ ಭಾಗವತಧರ್ಮವನ್ನೆ ಬೋಧಿಸುವ ಭಾಗವತವನ್ನು ರಚಿಸಿರಿ. ವೇದೋಪನಿಷತ್ತುಗಳಲ್ಲಿ ಅಲ್ಲಲ್ಲಿ ಅದ್ವೈತವನ್ನು ಹೇಳಿದಂತೆ ಕಾಣುತ್ತದೆ. ಅದಕ್ಕೆ ಸ್ವತಂತ್ರನು ಭಗವಾನ್ ವಿಷ್ಣು ಒಬ್ಬನೆ ಎನ್ನುವ ಅಭಿಪ್ರಾಯ ಸ್ಪಷ್ಟವಿದೆ. ಅದನ್ನೂ ಭಾಗವತದಲ್ಲಿ ವರ್ಣಿಸಿರಿ. ಮತ್ತು ಲೋಕಕಲ್ಯಾಣಕ್ಕಾಗಿ ಶ್ರೀಹರಿಯ ಅಂಶದಿಂದ ಅವತರಿಸಿದ ತಾವೇ ತಮ್ಮ ಮಹಿಮೆಯನ್ನು ವರ್ಣಿಸಬೇಕು ಎಂದು ನಾರದರು ಕೇಳಿಕೊಂಡರು.

★★★

ಶೌನಕರು ಕೇಳುತ್ತಾರೆ, ಸೂತರೆ, ಶುಕಮುನಿ ಪರೀಕ್ಷಿತನಿಗೆ ಭಾಗವತವನ್ನು ಹೇಳಿದನೆಂದಿರಿ. ಅದು ಹೇಗೆ ಸಾಧ್ಯವಾಯಿತು? ಲೋಕಕ್ಕೆ ಅವರ ದರ್ಶನ ಸಿಗುವುದೆ ಕಷ್ಟ—

ತಸ್ಯ ಪುತ್ರೋ ಮಹಾಯೋಗೀ ಸಮದೃಙ್ ನಿರ್ವಿಕಲ್ಪಕಃ ।
ಏಕಾಂತಗತಿರುನ್ನಿದ್ರೋ ಗೂಢೋ ಮೂಢ ಇವೇಯತೇ ॥ ೪ ॥

ವೇದವ್ಯಾಸರ ಪುತ್ರರಾದ ಶುಕಮುನಿ ಮಹಾಯೋಗಿ. ಏಕೆಂದರೆ ಎಲ್ಲೆಡೆ ಭಗವಂತನ ರೂಪಗಳಲ್ಲಿ ಸಾಮ್ಯವನ್ನು ಕಾಣುವವರು. ಎಲ್ಲವೂ ಅವನ ಅಧೀನವೆಂದು ತಿಳಿದವರು. ಅಜ್ಞಾನರಹಿತರಾಗಿದ್ದು ಶ್ರೀಹರಿಸರ್ವೋತ್ತಮತ್ವವನ್ನು ಬಲ್ಲವರು. ನಿಗೂಢರಾಗಿದ್ದು ಲೋಕಕ್ಕೆ ಅಜ್ಞರಂತೆ ಕಾಣಿಸಿಕೊಳ್ಳುವರು.

ಇಲ್ಲಿ ನಿರ್ವಿಕಲ್ಪಕ ಎಂದರೆ 'ಪ್ರಪಂಚವೆಲ್ಲವೂ ಬ್ರಹ್ಮಸ್ವರೂಪ. ಎಲ್ಲಿಯೂ ಭೇದವೆಂಬುದೇ ಇಲ್ಲ' ಎಂದು ತಿಳಿದವರು ಶುಕಮುನಿ ಎನ್ನುತ್ತವೆ ಶ್ರೀಧರ ಶುಕದೇವ ವ್ಯಾಖ್ಯಾನಗಳು. ದೇವತ್ವ ಮನುಷ್ಯತ್ವ ಮುಂತಾದುವು ಶರೀರಗಳಿಗೆ ಸಂಬಂಧಿಸಿದವು, ಆತ್ಮನಿಗೆ ಅಲ್ಲದರಿಂದ ಇವನು ದೇವ ಇವನು ಮನುಷ್ಯ ಎಂದು ಮುಂತಾಗಿ ಭೇದವಿಲ್ಲ ಎಂದು ತಿಳಿದವರು ಶುಕಮುನಿ ಎನ್ನುತ್ತದೆ ವೀರರಾಘವ ಟೀಕೆ.[೧] ನಿಜವಾದ ಅರ್ಥ ಇದು—

---

೧. ನಿರ್ವಿಕಲ್ಪಕಃ । ಸ್ವಾರ್ಥೇ ಕಃ । ನಿರಸ್ತಭೇದಃ । -ಶ್ರೀಧರಃ

ನಿರ್ವಿಕಲ್ಪಕಃ ಭೇದಾನುಸಂಧಾನರಹಿತಃ । ದೇಹಗತ ವಿಕಲ್ಪಾನಾಂ ದೇವ ಮನುಷ್ಯತ್ವಾದೀನಾಂ ಆತ್ಮನಿ ನಾರೋಪಯಿತಾ । -ವೀರರಾಘವಃ

ಬ್ರಹ್ಮೈವೇದಂ ಸರ್ವಮಿತಿ ವಿಜ್ಞಾನಾನ್ನಿರ್ವಿಕಲ್ಪಕೋ ಭೇದಾನುಸಂಧಾನ ರಹಿತಃ । ಸ್ವಾರ್ಥೇ ಕಃ । -ಶುಕದೇವಃ

ನಿರ್ವಿಕಲ್ಪಕಃ ಮದೀಯಂ ತದೀಯಮಿತಿ ಭೇದಮಪಹಾಯ
ಸರ್ವಮೀಶ್ವರಾಧೀನಮಿತಿ ಸ್ಥಿತಃ ।
ಸಾಮ್ಯಮೀಶ್ವರರೂಪೇಷು ಸರ್ವತ್ರ ತದಧೀನತಾಂ ।
ಪಶ್ಯತಿ ಜ್ಞಾನಸಂಪತ್ತ್ಯಾ ವಿನಿದ್ರೋ ಯಃ ಸ ಯೋಗವಿತ್ ॥
ಇತಿ ಬ್ರಾಹ್ಮೇ ॥

'ನಿರ್ವಿಕಲ್ಪಕ' ಎಂದರೆ ಇದು ನನ್ನದು, ಅದು ಅವನದೆಂದು ಭೇದವೆಣಿಸದೆ ಎಲ್ಲವೂ ಭಗವಂತನವೆಂದು ತಿಳಿದಿರುವವನು. ವಿಷ್ಣುಸರ್ವೋತ್ತಮತ್ವ ಜ್ಞಾನ ಸಂಪತ್ತಿನಿಂದ ವಿಷ್ಣುರೂಪಗಳಲ್ಲಿ ಸಾಮ್ಯವನ್ನೂ ಎಲ್ಲೆಡೆ ಅವನ ಸ್ವಾಮ್ಯವನ್ನೂ ಕಾಣುವ ಜ್ಞಾನಿಯೇ ಯೋಗಿ ಎನಿಸುತ್ತಾನೆ ಎಂದು ಬ್ರಹ್ಮಪುರಾಣ ಹೇಳುತ್ತದೆ.

ಭಾಗವತ ಶ್ಲೋಕ ಶುಕಮುನಿಯನ್ನು ಮಹಾಯೋಗಿ ಎಂದಿದೆ. ಯೋಗಿಯಾಗ ಬೇಕಾದರೆ ಬ್ರಹ್ಮಪುರಾಣ ಹೇಳುವಂತಹ ನಿರ್ವಿಕಲ್ಪಕತ್ವಾದಿಗಳೆ ಬೇಕು. ಶ್ರೀಧರ ಶುಕದೇವ ವೀರರಾಘವ ಮುಂತಾದವರು ಹೇಳುವ ನಿರ್ವಿಕಲ್ಪಕತ್ವವಲ್ಲ.

★★★

ಯಾವ ಯುಗದಲ್ಲಿ ಭಾಗವತ ಪುರಾಣ ರಚನೆಯಾಯಿತೆಂದು ಶೌನಕರು ಕೇಳಿದ್ದಕ್ಕೆ ಸೂತರು ದ್ವಾಪರದಲ್ಲಿ ಎನ್ನುತ್ತ ದ್ವಾಪರದಲ್ಲಿ ವೇದವ್ಯಾಸಾವತಾರವನ್ನು ಹೇಳುತ್ತಾರೆ—

ದ್ವಾಪರೇ ಸಮನುಪ್ರಾಪ್ತೇ ತೃತೀಯೇ ಯುಗಪರ್ಯಯೇ ।
ಜಾತಃ ಪರಾಶರಾದ್ ಯೋಗೀ ವಾಸವ್ಯಾಂ ಕಲಯಾ ಹರೇಃ ॥ ೧೩ ॥

ಮೂರನೆಯದಾದ ದ್ವಾಪರಯುಗದ ಕೊನೆಭಾಗ ಬಂದಾಗ ಪರಾಶರರಿಂದ ಸತ್ಯವತಿಯಲ್ಲಿ ಹರಿಯ ಸ್ವರೂಪಾಂಶದಿಂದ ಯೋಗಿ ವೇದವ್ಯಾಸರು ಪ್ರಾದುರ್ಭವಿಸಿದರು.

ಇಲ್ಲಿ 'ಯುಗ ಪರ್ಯಯ' ಎಂದರೆ ಯುಗಪರ್ಯವಸಾನ. ತೃತೀಯ, ಮೂರನೆಯ, ಯುಗಪರ್ಯವಸಾನ ಹೇಗೆ? ಯುಗಕ್ಕೆ ಮೂರು ಪರ್ಯವಸಾನಗಳುಂಟೆ? ಶ್ರೀಧರ ವೀರರಾಘವ ಶುಕದೇವ ಮುಂತಾದ ಎಲ್ಲ ವ್ಯಾಖ್ಯಾನಕಾರರು ಮೂರನೆಯ ಯುಗಪರ್ಯಯ ಎಂದೇ ಅನ್ವಯಿಸಿ ಯುಗಪರ್ಯಯ ಶಬ್ದಕ್ಕೆ ಯುಗಸ್ವರೂಪ ಎಂದು ಅರ್ಥೈಸಿದ್ದಾರೆ. ಸಂಧ್ಯಾ, ಯುಗ ಮತ್ತು ಸಂಧ್ಯಾಂಶ ಎಂದು ಮೂರು ಯುಗಸ್ವರೂಪಗಳಲ್ಲಿ ಮೂರನೆಯದಾದ ಸಂಧ್ಯಾಂಶದಲ್ಲಿ ವ್ಯಾಸಾವತಾರ

ಎಂದಿದ್ದಾರೆ.[೧] ಆದರೆ ಪರ್ಯಾಯ ಶಬ್ದಕ್ಕೆ ಹಾಗೆ ಅರ್ಥ ಇಲ್ಲ. ಪರ್ಯವಸಾನ ಎಂದೇ ಅರ್ಥ. ಯುಗಪರ್ಯಯೇ ಎಂಬಲ್ಲಿ ಯುಗಶಬ್ದದಲ್ಲಿ ಸುಪಾಂಸುಲುಕ್ ಎಂಬ ವ್ಯಾಕರಣನಿಯಮದಂತೆ ಸಪ್ತಮೀವಿಭಕ್ತಿ ಲೋಪ. ದ್ವಾಪರೇ ಯುಗೇ ಪರ್ಯಯೇ ದ್ವಾಪರಯುಗದಲ್ಲಿ ತತ್ರಾಪಿ ಅದರ ಪರ್ಯವಸಾನಭಾಗದಲ್ಲಿ ವ್ಯಾಸಾವತಾರ. ತೃತೀಯೇ ಎಂಬುದು ದ್ವಾಪರೇ ಎಂಬುದಕ್ಕೆ ವಿಶೇಷಣ ಎನ್ನಬೇಕು.

ತೃತೀಯೇ ದ್ವಾಪರೇ ಯುಗೇ ಪರ್ಯವಸಾನೇ ಪ್ರಾಪ್ತೇ ಸತಿ ।

ಮೂರನೆಯದಾದ ದ್ವಾಪರಯುಗದಲ್ಲಿ ಅದರ ಕೊನೆಯ ಭಾಗ ಬಂದಾಗ ಎಂದರ್ಥ.

★★★

ವೇದವ್ಯಾಸರು ಒಂದುದಿನ ಒಬ್ಬರೇ ಕುಳಿತು ಬಹಳ ಆಲೋಚನೆ ಮಾಡಿದರು ಎನ್ನುತ್ತಾರೆ ಸೂತರು—

ಸ ಕದಾಚಿತ್ ಸರಸ್ವತ್ಯಾ ಉಪಸ್ಪೃಶ್ಯ ಜಲಂ ಶುಚಿಃ ।
ವಿವಿಕ್ತ ಏಕ ಆಸೀನ ಉದಿತೇ ರವಿಮಂಡಲೇ ॥ ೧೪ ॥

ಪರಾವರಜ್ಞಃ ಸ ಋಷಿಃ ಕಾಲೇನಾವ್ಯಕ್ತರಂಹಸಾ ।
ಯುಗಧರ್ಮ ವ್ಯತಿಕರಂ ಪ್ರಾಪ್ತಂ ಭುವಿ ಯುಗೇಯುಗೇ ॥ ೧೫ ॥

ಭೌತಿಕಾನಾಂ ಚ ಭಾವಾನಾಂ ಶಕ್ತಿಹ್ರಾಸಂ ಚ ತತ್ಕೃತಂ ।
ಅಶ್ರದ್ದಧಾನಾನ್ ನಿಃಸತ್ವಾನ್ ದುರ್ಮೇಧಾನ್ ಹ್ರಸಿತಾಯುಷಃ ॥ ೧೬ ॥

ದುರ್ಭಗಾಂಶ್ಚ ಜನಾನ್ ವೀಕ್ಷ್ಯ ಮುನಿರ್ದಿವ್ಯೇನ ಚಕ್ಷುಷಾ ।
ಸರ್ವವರ್ಣಾಶ್ರಮಾಣಾಂ ಯದ್ ದಧ್ಯೌ ಚಿರಮಮೋಘದೃಕ್ ॥೧೭॥

ವೇದವ್ಯಾಸರು ಒಮ್ಮೆ ಸೂರ್ಯೋದಯವಾದಾಗ ಸರಸ್ವತೀ ನದಿಯಲ್ಲಿ ಸ್ನಾನಾದಿಗಳನ್ನು ತೀರಿಸಿ ಏಕಾಂತದಲ್ಲಿ ಒಬ್ಬರೇ ಕುಳಿತರು. ಪರಾಪರತತ್ವಗಳನ್ನು ಅಮೋಘ ದೃಷ್ಟಿಶಕ್ತಿಯುಳ್ಳ ಆ ಮುನಿ ದಿವ್ಯಚಕ್ಷುಸ್ಸಿನಿಂದ ಅದೃಶ್ಯಕಾಲ ವೇಗದಿಂದಾಗುವ

---

೧. ತೃತೀಯೇ ಯುಗಸ್ಯ ಪರ್ಯಯೇ ಪರಿವರ್ತೇ । -ಶ್ರೀಧರಃ

ಸಂಧ್ಯಾರೂಪ ಯುಗರೂಪ ಸಂಧ್ಯಾಂಶರೂಪಾಣೀತಿ ಸರ್ವಯುಗಾನಿ ತ್ರಿರೂಪಾಣಿ ಭವಂತಿ । ಅತಸ್ತೃತೀಯೇ ಸಂಧ್ಯಾಂಶರೂಪೇ । -ವಿಶ್ವನಾಥ

ದ್ವಾಪರೇ ಯುಗೇ ಸಮನುಪ್ರಾಪ್ತೇ ತತ್ರಾಪಿ ತೃತೀಯೇಽಸ್ಯ ಯುಗಸ್ಯ ಪರ್ಯಯೇಽವಸಾನೇ । -ವೀರರಾಘವಃ

ಯುಗಧರ್ಮಸಾಂಕರ್ಯವನ್ನೂ, ಅದರಿಂದಾಗಿ ಭೂಮಿಯಲ್ಲಿ ಪ್ರತಿಯುಗದಲ್ಲಿ ನಡೆಯುವ ಭೌತಿಕವಸ್ತುಗಳ ಶಕ್ತಿಹ್ರಾಸವನ್ನೂ, ಜನರು ಆಸ್ತಿಕ್ಯಬುದ್ಧಿಯನ್ನು ಕಳೆದುಕೊಂಡು ಸಜ್ಜನಿಕೆಯನ್ನು ಕಳೆದುಕೊಂಡು ಪಾಪಪ್ರಜ್ಞೆ ಉಳ್ಳವರಾಗಿ ಅಲ್ಪಾಯುಷಿಗಳಾಗಿ ಸೌಭಾಗ್ಯದಿಂದ ವಂಚಿತರಾಗುತ್ತಿರುವುದನ್ನೂ ಕಂಡು ಎಲ್ಲ ವರ್ಣ ಆಶ್ರಮಗಳವರಿಗೂ ಹಿತವೇನೆಂಬುದನ್ನು ಬಹಳ ಹೊತ್ತು ಆಲೋಚಿಸಿದರು.

ಹೀಗೆ ಸುದೀರ್ಘವಾಗಿ ಆಲೋಚಿಸಿ ತಿಳಿಯುವುದು ಪೃಥು ಬಲರಾಮ ಮುಂತಾದ ಆವೇಶಾವತಾರಗಳಿಗೆ ಸರಿಹೊಂದೀತು. ವಿಶಿಷ್ಟಾದ್ವೈತಪ್ರಕಾರ ವೇದವ್ಯಾಸರೂ ಆವೇಶಾವತಾರರು. ವಾಸ್ತವದಲ್ಲಿ ಅವರು ಸಾಕ್ಷಾತ್ ಸರ್ವಜ್ಞ ಸರ್ವಶಕ್ತನಾದ ಭಗವಂತನ ಸ್ವರೂಪಾವತಾರ. ಅದರಿಂದ ಇದು ಲೋಕವಿಡಂಬನೆ ಎಂದು ಕೂರ್ಮಪುರಾಣ ಹೇಳುತ್ತದೆ—

ನಿತ್ಯಜ್ಞಾನಸ್ಯ ಚಿರದೃಷ್ಟಿರ್ಲೋಕದೃಷ್ಟ್ಯಪೇಕ್ಷಯಾ ।
ಸರ್ವಜ್ಞೋಽಪ್ಯಜ್ಞವದ್‌ದೇವಃ ಸರ್ವಶಕ್ತಿರಶಕ್ತವತ್ ।
ಪ್ರತ್ಯಾಪಯತಿ ಲೋಕಾನಾಂ ಅಜ್ಞಾನಾಂ ಮೋಹನಾಯ ಚ ॥

ಇತಿ ಕೌರ್ಮೇ ।

ನಿತ್ಯಸರ್ವಜ್ಞರಾದ ವ್ಯಾಸರು ಸುದೀರ್ಘವಾಗಿ ಆಲೋಚಿಸುವುದೆಂದರೆ ಅದು ಲೋಕದೃಷ್ಟಿಯಿಂದ. ವಸ್ತುತಃ ಸರ್ವಜ್ಞರು ಅಜ್ಞನಂತೆ, ಸರ್ವಶಕ್ತರು ಅಶಕ್ತನಂತೆ ಅಜ್ಞಲೋಕಕ್ಕೆ ಮೋಹನಕ್ಕಾಗಿ ತೋರಿಕೊಳ್ಳುತ್ತಾರೆ ಎಂದು ಕೂರ್ಮಪುರಾಣ ಹೇಳಿದೆ.

★★★

ಶ್ರೀವೇದವ್ಯಾಸರು ಶಿಷ್ಯರ ಮುಂದೆ ತಾನೆ ವೇದಾಧಿಕಾರಿಗಳಾದ ಮೂರು ವರ್ಣದವರಿಗಾಗಿ ವೇದವಿಭಾಗ ಮಾಡಿದೆನೆಂದೂ ವೇದಾಧಿಕಾರವಿಲ್ಲದ ಸ್ತ್ರೀಶೂದ್ರಾದಿಗಳಿಗಾಗಿ ಭಾರತವನ್ನು ರಚಿಸಿದೆನೆಂದೂ ಹೇಳುತ್ತಾರೆ—

ಸ್ತ್ರೀ ಶೂದ್ರ ದ್ವಿಜಬಂಧೂನಾಂ ತ್ರಯೀ ನ ಶ್ರುತಿಗೋಚರಾ ।
ಕರ್ಮಶ್ರೇಯಸಿ ಮೂಢಾನಾಂ ಶ್ರೇಯ ಏವಂ ಭವೇದಿಹ ।
ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾ ಕೃತಂ ॥ ೨೫ ॥

ಸ್ತ್ರೀಯರಿಗೂ, ಶೂದ್ರರಿಗೂ, ಬ್ರಾಹ್ಮಣರಂತಿದ್ದು ನಿಜವಾಗಿ ಬ್ರಾಹ್ಮಣರಲ್ಲದವರಿಗೂ ವೇದೋಕ್ತ ಶ್ರೇಯಃ ಸಾಧನಕರ್ಮಗಳ ಬಗ್ಗೆ ಅರಿವಿಲ್ಲದಿರುವುದರಿಂದ ಅವರ ಶ್ರೇಯಸ್ಸಿಗಾಗಿ ಭಾರತಾದಿಗಳನ್ನು ನಾನು ರಚಿಸಿದ್ದೇನೆ.

ಇಲ್ಲಿ ಸ್ತ್ರೀಶೂದ್ರರಿಗಾಗಿ ಭಾರತಾದಿ ರಚನೆ ಎಂದಾಗ ದ್ವಿಜರಿಗೆ ಅದರ ಅಧ್ಯಯನಕ್ಕೆ ಅಧಿಕಾರವಿಲ್ಲವೆಂದಂತಾಗುತ್ತದೆ. ಆದರೆ ದ್ವಿಜರು ವೇದಾರ್ಥವನ್ನು ಇತಿಹಾಸಪುರಾಣಗಳಿಂದಲೇ ತಿಳಿಯಬೇಕೆಂದು ವಿಧಿ ಇದೆ—

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರಚಲೇದಿತಿ ॥

ಈ ಸಮಸ್ಯೆಗೆ ಸ್ಕಾಂದಪುರಾಣದಲ್ಲಿ ಸಮಾಧಾನ ಉಕ್ತವಾಗಿದೆ—

ಭಾರತಂ ಬ್ರಾಹ್ಮಣಾದೀನಾಂ ವೇದಾರ್ಥಪರಿವಿತ್ತಯೇ ।
ತ ಏವ ವೇದಾಸ್ತ್ವನ್ಯೇಷಾಂ ನರ್ತೇ ತತ್ ಕಸ್ಯಚಿತ್ ಸುಖಂ ॥

ಇತಿ ಸ್ಕಾಂದೇ ॥

ಬ್ರಾಹ್ಮಣಾದಿಗಳಿಗೆ ವೇದಾರ್ಥಜ್ಞಾನಕ್ಕಾಗಿ ಭಾರತಾದಿಗಳು ಆವಶ್ಯಕವೆ. ಇತರರಿಗೆ ಅವು ವೇದದ ಸ್ಥಾನದಲ್ಲಿವೆ. ಅಂತೂ ಭಾರತಾದಿಗಳಿಲ್ಲದೆ ಯಾರಿಗೂ ಸುಖವಿಲ್ಲ ಎಂದು ಸ್ಕಾಂದ ಪುರಾಣದಲ್ಲಿ ಉಕ್ತವಾಗಿದೆ.

★★★

ಲೋಕೋಪಕಾರಕ್ಕಾಗಿ ಎಷ್ಟು ಗ್ರಂಥ ರಚಿಸಿದರೂ ಕಡಿಮೆಯೆ. ಭಾಗವತ ರಚಿಸಬೇಕು. ಆಗ ತನ್ನ ಅವತಾರಕಾರ್ಯ ಪೂರ್ತಿಯಾಗುವುದು. ನಾರದರು ಬಂದು ತನ್ನನ್ನು ಪ್ರಾರ್ಥಿಸಿದ ಬಳಿಕ ಭಾಗವತ ಬರೆದರೇ ಅದಕ್ಕೆ ಹೆಚ್ಚಿನ ಮಹತ್ವ ಬರುವುದು ಎಂಬ ಅಭಿಪ್ರಾಯದಿಂದ ವೇದವ್ಯಾಸರು ತನ್ನ ಅಂದಿನವರೆಗಿನ ಗ್ರಂಥರಚನಾಕಾರ್ಯದಿಂದ ತಾನು ಅತೃಪ್ತನಾಗಿರುವಂತೆ ತೋರಿಕೊಳ್ಳುತ್ತಾರೆ—

ಏವಂ ಪ್ರವೃತ್ತಸ್ಯ ಸದಾ ಭೂತಾನಾಂ ಶ್ರೇಯಸಿ ದ್ವಿಜಾಃ ।
ಸರ್ವಾತ್ಮಕೇನಾಪಿ ಯದಾ ನಾತುಷ್ಯದ್ ಹೃದಯಂ ತತಃ ॥ ೨೫ ॥
ನಾತಿಪ್ರಸನ್ನಹೃದಯಃ ಸರಸ್ವತ್ಯಾಸ್ತಟೇ ಶುಚೌ ।
ವಿತರ್ಕಯನ್ ವಿವಿಕ್ತಸ್ಥ ಇದಂ ಚೋವಾಚ ಧರ್ಮವಿತ್ ॥ ೨೬ ॥

ಸೂತರು ಶೌನಕಾದಿ ಮುನಿಗಳಿಗೆ ಹೇಳುತ್ತಾರೆ, ಮುನಿಗಳೆ, ವೇದವ್ಯಾಸರು ಜೀವರ ಮೋಕ್ಷಕ್ಕಾಗಿ ಪ್ರವೃತ್ತರಾಗಿ ಸರ್ವ ವರ್ಣಾಶ್ರಮದವರಿಗೂ ನಿಲುಕುವ ಭಾರತವನ್ನು ರಚಿಸಿದರೂ ಅದು ಅವರ ಮನಸ್ಸಿಗೆ ಸಾಕೆನಿಸಲಿಲ್ಲ. ಮನಸ್ಸಿನಲ್ಲಿ ಪೂರ್ಣತೃಪ್ತಿ ಹೊಂದದೆ ಅವರು ಸರಸ್ವತೀತೀರದಲ್ಲಿ ಏಕಾಂತದಲ್ಲಿ ಕುಳಿತು ಆಲೋಚಿಸುತ್ತ ಶಿಷ್ಯರಿಗೆ ಹೇಳಿದರು.

ಇಲ್ಲಿ 'ನಾತುಷ್ಯತ್' ಎಂದರೆ ಹರ್ಷಗೊಳ್ಳಲಿಲ್ಲ ಎಂದು ವೀರರಾಘವ ಟೀಕೆ. ವಲ್ಲಭಾಚಾರ್ಯರ ಪ್ರಕಾರ 'ಲೋಕೋಪಕಾರಕ್ಕಾಗಿ ಭಾರತಾದಿ ಗ್ರಂಥರಚನೆಯ ರೂಪದ ಧರ್ಮವನ್ನಾಚರಿಸಿದ್ದಕ್ಕೆ ನನಗೆ ಸುಖದ ಬದಲಿಗೆ ದುಃಖವಾಗುತ್ತಿದೆ' ಎನ್ನುತ್ತಾರೆ ವ್ಯಾಸರು![೧] ಆದರೆ ಲೋಕಮೋಹನಕ್ಕಾಗಿಯಾದರೂ ವ್ಯಾಸರು ಸುಳ್ಳು ಹೇಳುವರೆ? ಇಲ್ಲ. ಅವರ ಮಾತಿಗೆ ಹೀಗೆ ಅರ್ಥ—

ಅತೋಽಷೋಽನಲಂಬುದ್ಧಿಃ ।
ಶ್ರುತ್ವಾ ಕಥಾಂ ನ ತುಷ್ಯಾಮಿ ಹರೇರದ್ಭುತ ಕರ್ಮಣಃ ।
ಇತಿ ಮಾತ್ಸ್ಯೇ । ಅಪ್ರಸಾದಶ್ಚ ಸ ಏವ ।
ಕಃ ಪ್ರಸನ್ನೋ ಭವೇದ್ ದಿವ್ಯಾಂ ಕಥಾಂ ಶೃಣ್ವನ್ ಹರೇಃ ಪರಾಂ ।
ಇತಿ ಚ ।

'ನಾತುಷ್ಯತ್' ಎಂದರೆ 'ಮನಸ್ಸಿಗೆ ಸಾಕೆನಿಸಲಿಲ್ಲ' ಎಂದರ್ಥ. ಇಂಥ ಪ್ರಯೋಗ ಮತ್ಸ್ಯಪುರಾಣದಲ್ಲಿ ಕಂಡಿದೆ—'ಅದ್ಭುತ ಲೀಲೆಗೈವ ಹರಿಯ ಕಥೆ ಕೇಳಿದಷ್ಟೂ ನನಗೆ 'ಸಂತೋಷ'ವಾಗುತ್ತಿಲ್ಲ' ಎಂದು. 'ನಾತಿ ಪ್ರಸನ್ನ ಹೃದಯಃ' ಎಂದರೂ ಇದೇ ಅರ್ಥ. ಹರಿಯ ದಿವ್ಯಕಥೆಗಳನ್ನು ಕೇಳುತ್ತಿದ್ದರೆ ಯಾರಿಗೆ 'ಪ್ರಸನ್ನತೆ' ಉಂಟಾಗುತ್ತದೆ ಎಂದೂ ಇದೇ ಅರ್ಥದಲ್ಲಿ ಪ್ರಯೋಗವಿದೆ.

ಇಲ್ಲಿ ಸಂತೋಷವಾಗುವುದಿಲ್ಲ ಎಂದರೂ ಪ್ರಸನ್ನತೆ ಉಂಟಾಗುವುದಿಲ್ಲ ಎಂದರೂ ಸಾಕೆನಿಸುವುದಿಲ್ಲ ಎಂದೇ ಅರ್ಥವೆಂಬುದು ಸ್ಪಷ್ಟ. ಇನ್ನೂ ಭಾಗವತ ರಚನೆಯಾಗಿಲ್ಲದಿರುವುದರಿಂದ ವ್ಯಾಸರಿಗೆ ಸಾಕೆನಿಸದಿರುವುದು ಸ್ವಾಭಾವಿಕ. ಅದು ದೋಷವಲ್ಲ, ಗುಣವೇ.

★★★

ವೇದವ್ಯಾಸರು ತಮ್ಮ ಮನಸ್ಸಿನ ಅತೃಪ್ತಿಯನ್ನು ಹೇಳಿಕೊಳ್ಳಲು ಮೊದಲಿಗೆ ಹೀಗೆ ಹೇಳುತ್ತಾರೆ—

ಧೃತವ್ರತೇನ ಹಿ ಮಯಾ ಛಂದಾಂಸಿ ಗುರವೋಽಗ್ನಯಃ ।
ಮಾನಿತಾ ನಿರ್ವ್ಯಲೀಕೇನ ಗೃಹೀತಂ ಚಾನುಶಾಸನಂ ॥ ೨೭ ॥

---

೧. ನಾತುಷ್ಯತ್ ನ ಜಹರ್ಷ । -ವೀರರಾಘವಃ

ಪರೋಪಕಾರ ಲಕ್ಷಣೋ ಧರ್ಮೋ ಮಹಾನ್ ವೇದವ್ಯಾಸೇ ಸಿದ್ಧಃ । ಧರ್ಮಸ್ಯ ಚಾಂತಃಕರಣ ಪರಿತೋಷಃ ಫಲಂ । ತದಭಾವೇ ಧರ್ಮಃ ಶ್ರಮ ಇತಿ ಪೂರ್ವಮುಕ್ತಂ । ಅತ್ರ ದುಃಖಹೇತುರಿತಿ ವಕ್ತುಂ ಪೂರ್ವೋಕ್ತ ಸ್ಮಾರಣಾರ್ಥಂ ದ್ವಿಜಾ ಇತಿ ಸಂಬೋಧನಂ ।
-ವಲ್ಲಭಾಚಾರ್ಯಃ

ನಾನು ವ್ರತನಿಷ್ಠನಾಗಿ ವೇದಗಳನ್ನೂ ಗುರುಗಳನ್ನೂ ಅಗ್ನಿಗಳನ್ನೂ ಸತ್ಕರಿಸಿದ್ದೇನೆ. ಗುರುಗಳಾಜ್ಞೆಯಂತೆ ನಡೆದಿದ್ದೇನೆ.

ಪರಿಪೂರ್ಣಕಾಮರಾದ ವೇದವ್ಯಾಸರಿಗೆ ವ್ರತಾಚರಣೆಯಿಂದ ಸಾಧಿಸಿಕೊಳ್ಳಬೇಕಾದುದೇನಿಲ್ಲ. ಮತ್ತೇಕೆ ವ್ರತನಿಷ್ಠರಾದರು?

ಆಚಾರಾಪೇಕ್ಷಯಾ ಧೃತವ್ರತತ್ವಾದಿ ಪರಿಪೂರ್ಣಸ್ಯ ।

ಶಿಷ್ಯರಿಗೆ ಆಚಾರವನ್ನು ಕಲಿಸುವ ಅಪೇಕ್ಷೆಯಿಂದ ತಾನು ಮಾಡಿ ತೋರಿದ್ದಾರೆ ಪರಿಪೂರ್ಣಕಾಮರಾದ ವೇದವ್ಯಾಸರು.

★★★

ತಾನಿನ್ನೂ ಮಾಡಬೇಕಾದುದು ಇದೆ. ಪೂರ್ತಿಯಾಗಿಲ್ಲ ಎನಿಸುತ್ತದೆ ಎನ್ನುತ್ತಾರೆ, ವ್ಯಾಸರು—

ಅಥಾಪಿ ಬತ ಮೇ ದೈಹ್ಯೋ ಹ್ಯಾತ್ಮಾ ಚೈವಾತ್ಮನಾ ವಿಭುಃ ।
ಅಸಂಪನ್ನ ಇವಾಭಾತಿ ಬ್ರಹ್ಮವರ್ಚಸ್ವಿಸತ್ತಮಃ ॥ ೨೯ ॥

ಆದರೂ ಬ್ರಹ್ಮವರ್ಚಸ್ವಿಗಳಲ್ಲಿ ಉತ್ತಮವಾದ ಸ್ವತಃ ಪೂರ್ಣವಾದ ದೇಹರೂಪವಾದ ನನ್ನ ಆತ್ಮ ಕೃತಕೃತ್ಯವಾಗಿಲ್ಲದಂತೆ ಕಾಣುತ್ತದೆ.

ಇಲ್ಲಿ 'ದೈಹ್ಯ' ಎಂದರೆ ದೇಹದಲ್ಲಿರುವ ಆತ್ಮ ಎಂದೇ ಮೇಲುನೋಟಕ್ಕೆ ಕಾಣುತ್ತದೆ. ಬೇರೆ ಭಾಗವತ ವ್ಯಾಖ್ಯಾನಕಾರರು ಎಲ್ಲರೂ ಹಾಗೇ ಅರ್ಥ ಹೇಳಿದ್ದಾರೆ. ಆದರೆ ಭಗವಂತನಿಗೆ ಸ್ವರೂಪದೇಹ ಹೊರತು ಬೇರೆ ಜಡಶರೀರವಿಲ್ಲ. 'ಆತ್ಮಾ ಆತ್ಮನಾ ಅಸಂಪನ್ನಃ' ಎಂದರೆ ಜೀವ ಪರಮಾತ್ಮನಿಂದ ತಾದಾತ್ಮ್ಯ ಹೊಂದಿಲ್ಲ ಎಂದು ಶ್ರೀಧರ ಮುಂತಾದವರ ವ್ಯಾಖ್ಯಾನವಿದೆ. 'ಆತ್ಮನಾ ವಿಭುಃ' ಸ್ವತಃ ಪರಿಪೂರ್ಣ ಎಂದು ಅನ್ವಯಿಸದೆ ಆತ್ಮನಾ ಅಸಂಪನ್ನಃ ಎಂದು ಅನ್ವಯಿಸಿದ್ದಾರೆ. 'ಬ್ರಹ್ಮವರ್ಚಸ್ಯಸತ್ತಮಃ' ಎಂದು ಪಾಠವಿಟ್ಟುಕೊಂಡು ಬ್ರಹ್ಮವರ್ಚಸ್ಸು ಉಳ್ಳವ ನಾಗಿದ್ದೂ ಮಹಾದುಷ್ಟನಂತೆ ಕಾಣುತ್ತೇನೆ ಎಂದೂ ಅರ್ಥೈಸಿದ್ದಾರೆ. ಬ್ರಹ್ಮವರ್ಚಸೀ ಅಸತ್ತಮಃ ಎಂದು ಪದವಿಭಾಗ ಮಾಡಿದ್ದಾರೆ.[೧] 'ಬ್ರಹ್ಮವರ್ಚಸ್ಯ ಸತ್ತಮಃ' ಎಂದು ವಿಭಾಗ ಮಾಡಬಹುದಾಗಿತ್ತು. ಈ ಎಲ್ಲ ಸಮಸ್ಯೆಗಳಿಗೆ ಇದು ಪರಿಹಾರ—

---

೧. ದೈಹ್ಯಃ ದೇಹೇ ಭವಃ ಆತ್ಮಾ ಜೀವಃ ವಸ್ತುತೋ ವಿಭುಃ ಪರಿಪೂರ್ಣ ಏವ । ಆತ್ಮನಾ ಸ್ವೇನ ರೂಪೇಣ ಅಸಂಪನ್ನಃ ತಾದಾತ್ಮ್ಯಮಪ್ರಾಪ್ತ ಇವಾಭೂತ್ । ಬ್ರಹ್ಮವರ್ಚಸೀ ಬ್ರಹ್ಮವರ್ಚಸವಾನಪಿ ಅಸತ್ತಮ ಇವಾಭಾತಿ । -ಶ್ರೀಧರಃ

ದೈಹ್ಯಃ ದೇಹರೂಪಃ । ಆತ್ಮನಾ ವಿಭುಃ ಸ್ವತ ಏವ ವ್ಯಾಪ್ತಃ ।
ತಸ್ಯ ಸರ್ವಾವತಾರೇಷು ನ ವಿಶೇಷೋಽಸ್ತಿ ಕಶ್ಚನ ।
ದೇಹದೇಹಿವಿಭೇದಶ್ಚ ನ ಪರೇ ವಿದ್ಯತೇ ಕ್ವಚಿತ್ ।
ಸರ್ವೇಽವತಾರಾ ವ್ಯಾಪ್ತಾಶ್ಚ ಸರ್ವೇ ಸೂಕ್ಷ್ಮಾಶ್ಚ ತತ್ತ್ವತಃ ।
ಐಶ್ವರ್ಯಯೋಗಾದ್ ಭಗವಾನ್ ಕ್ರೀಡತ್ಯೇವಂ ಜನಾರ್ದನಃ ।
ಇತಿ ಮಹಾಸಂಹಿತಾಯಾಂ ।

ಅವತಾರ ಪ್ರಯೋಜನಾಸಂಪತ್ತ್ಯಾಽಸಂಪನ್ನ ಇವ ।
ಬ್ರಹ್ಮವರ್ಚಸ ಯುಕ್ತಾನಾಮುತ್ತಮಃ ।

ದೈಹ್ಯ ಎಂದರೆ ದೇಹರೂಪ ಎಂದರ್ಥ. ಆತ್ಮನಾ ಎಂಬುದು ವಿಭುಃ ಎಂಬಲ್ಲಿಗೇ ಅನ್ವಯಿಸುತ್ತದೆ. ಸ್ವಸಾಮರ್ಥ್ಯದಿಂದಲೇ ಪರಿಪೂರ್ಣನೆನಿಸಿದ್ದಾನೆ ಎಂದರ್ಥ. ಏಕೆಂದರೆ,

'ಭಗವಂತನಿಗೆ ಯಾವ ಅವತಾರಗಳಲ್ಲಿಯೂ ಯಾವುದೇ ವ್ಯತ್ಯಾಸವಿರುವುದಿಲ್ಲ, ಅವನು, ಅವನ ದೇಹ ಎಂದು ಭೇದವೂ ಪರಮಾತ್ಮನಿಗೆ ಯಾವ ಅವತಾರದಲ್ಲಿಯೂ ಇಲ್ಲ, ಎಲ್ಲ ಅವತಾರಗಳೂ ವ್ಯಾಪ್ತ ಎಲ್ಲ ಅವತಾರಗಳೂ ಸೂಕ್ಷ್ಮ. ಅಂಚಿತ್ಯಶಕ್ತಿಯಿಂದ ಭಗವಾನ್ ಜನಾರ್ದನ ಹೀಗೆ ಲೀಲೆ ಮಾಡುತ್ತಾನೆ' ಎಂದು ಮಹಾಸಂಹಿತೆಯಲ್ಲಿ ಹೇಳಿದೆ.

ಅದರಿಂದ 'ಅಸಂಪನ್ನ ಇವ' ಎಂದರೆ ಅವತಾರ ಕಾರ್ಯ ಪೂರ್ತಿ ಗೊಳಿಸಿಲ್ಲದವನಂತೆ ಎಂದರ್ಥ. ಬ್ರಹ್ಮವರ್ಚಸ್ವಿಗಳಲ್ಲಿ ಸತ್ತಮ ಅತ್ಯುತ್ತಮ ಎಂದರ್ಥ.

★★★

ಮಹಾಭಾರತದಲ್ಲಿ ನಾನು ಭಾಗವತ ಧರ್ಮಗಳನ್ನು ವಿಸ್ತಾರವಾಗಿ ನಿರೂಪಿಸಿಲ್ಲವೆ? ನಿರೂಪಿಸಿದ್ದೇನೆ. ಇನ್ನೇನು ಕೊರತೆ ಇದೆ? ಎಂದು ಕೇಳುತ್ತಾರೆ ವ್ಯಾಸರು—

ಕಿಂ ವಾ ಭಾಗವತಾ ಧರ್ಮಾ ನ ಪ್ರಾಯೇಣ ನಿರೂಪಿತಾಃ ।
ಪ್ರಿಯಾಃ ಪರಮ ಹಂಸಾನಾಂ ತ ಏವ ಹ್ಯಚ್ಯುತಪ್ರಿಯಾಃ ॥ ೩೦ ॥

ಭಗವತ್ಪ್ರೀತಿಕರವಾದ ಧರ್ಮಗಳನ್ನು ನಾನು ಭಾರತದಲ್ಲಿ ವಿಸ್ತಾರವಾಗಿ ನಿರೂಪಿಸಿಲ್ಲವೇನು? ಅವು ಭಗವಂತನಿಗೆ ಪ್ರಿಯ. ಅದರಿಂದ ಪರಮಹಂಸರಿಗೂ ಪ್ರಿಯ.

ಇಲ್ಲಿ ಭಾರತದಲ್ಲಿ ಭಾಗವತಧರ್ಮ ವಿಸ್ತಾರವಾಗಿ ಬಂದಿಲ್ಲದಿರುವುದೇ ನನ್ನ ಕಾರ್ಯದ ಅಪೂರ್ಣತೆಗೆ ಕಾರಣವಿರಬಹುದೆ? ಎಂದು ವ್ಯಾಸರು ಹೇಳುವಂತೆ ಕಾಣುತ್ತದೆ. ವಸ್ತುತಃ ಭಾರತದಲ್ಲಿ ಭಗವಂತನನ್ನೂ ಭಾಗವತಧರ್ಮವನ್ನೂ ಹೇಳಿದಷ್ಟು ಇನ್ನೆಲ್ಲೂ ಹೇಳಿಲ್ಲ. ಅದರಿಂದ ಇದು ಕಾರಣವಲ್ಲ. ವಸ್ತುತಃ ಭಾಷಾತ್ರಯವನ್ನರಿಯದ ಅಜ್ಞರಿಗೆ ಭಾರತ ಕಠಿನವಾಗಿರುತ್ತದೆ. ಅವರಿಗೆ ಅದರಿಂದ ಹೇಳಿಯೂ ಹೇಳದಂತಾಗಿದೆ. ಇನ್ನೊಂದು ಸುಲಭವಾಗಿ ಹೇಳುವ ಗ್ರಂಥ ಬೇಕು ಎನ್ನುವುದು ವ್ಯಾಸರ ಅಭಿಪ್ರಾಯ—

ಪುನರಪೇಕ್ಷಿತತ್ವಾನ್ನ ಪ್ರಾಯೇಣ ನಿರೂಪಿತಾಃ ।
ಯಥಾ ತು ಭಾರತೇ ದೇವೋ ನ ತಥಾನ್ಯೇಷು ಕೇಷುಚಿತ್ ।
ಉಚ್ಯತೇ ನ ತಥಾಪೀಶಂ ಜಾನಂತ್ಯಜ್ಞಾ ಜನಾರ್ದನಂ ।
ಇತಿ ಸ್ಕಾಂದೇ ।

ಸ್ಪಷ್ಟ ಸಮಾಧಿಭಾಷೆಯಿಂದ ಭಗವಂತನನ್ನೂ ಭಾಗವತ ಧರ್ಮಗಳನ್ನೂ ನಿರೂಪಿಸುವ ಇನ್ನೊಂದು ಗ್ರಂಥ ಬೇಕಾಗಿರುವುದರಿಂದ ಆ ಅಭಿಪ್ರಾಯದಿಂದಲೇ 'ಭಾರತದಲ್ಲಿ ವಿಸ್ತಾರವಾದ ನಿರೂಪಣೆ ಬಂದಿಲ್ಲ' ಎನ್ನಲಾಗಿದೆ. ವಸ್ತುತಃ ವಿಸ್ತಾರವಾದ ನಿರೂಪಣೆ ಇಲ್ಲವೆಂದಲ್ಲ. ಏಕೆಂದರೆ, 'ಭಾರತದಲ್ಲಿ ಭಗವಂತನನ್ನೂ ಭಾಗವತ ಧರ್ಮವನ್ನೂ ಹೇಳಿದಷ್ಟು ಇನ್ನಾವ ಗ್ರಂಥದಲ್ಲಿಯೂ ಹೇಳುತ್ತಿಲ್ಲ. ಆದರೂ ಅಜ್ಞರು ಕಠಿನವಾದ ಭಾರತದಿಂದ ಭಗವಂತನನ್ನು ತಿಳಿಯುವುದಿಲ್ಲ' ಎಂದು ಸ್ಕಾಂದ ಪುರಾಣದಲ್ಲಿ ಹೇಳಿದೆ.

ವೀರರಾಘವಟೀಕೆಯಲ್ಲಿ ಭಾರತದಲ್ಲಿ ಅಲ್ಲಲ್ಲಿ ಸ್ವಲ್ಪ ಮಾತ್ರವೆ ಭಾಗವತಧರ್ಮ ನಿರೂಪಿತವಾಗಿದೆ. ವಿಸ್ತಾರವಾದ ನಿರೂಪಣೆ ಬಂದಿಲ್ಲ. ಅದರಿಂದ ವ್ಯಾಸರಿಗೆ ಖೇದ ಉಂಟಾಯಿತು ಎಂದೇ ವ್ಯಾಖ್ಯಾನಿಸಲಾಗಿದೆ. ಅದು ಮೇಲೆ ಹೇಳಿದ ಸ್ಕಾಂದಪುರಾಣವಚನಕ್ಕೆ ವಿರುದ್ಧವಾಗಿದೆ. ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿಯೂ ಭಾರತದಲ್ಲಿ ಭಾಗವತ ಧರ್ಮ ನಿರೂಪಣೆ ಇಲ್ಲವೆಂದೇ ಹೇಳಿದೆ. ಹಾಗಾದರೆ ವ್ಯಾಸರು ಭಾಗವತ ಧರ್ಮನಿರೂಪಣೆಗೆ ಭಾಗವತವನ್ನು ರಚಿಸಿದರಾಯಿತು. ಯೋಚನೆ ಏಕೆ ಎಂದರೆ, ಹಾಗೆ ಭಾಗವತವನ್ನು ನಾನು ಸ್ವಯಂ ಪ್ರೇರಣೆಯಿಂದಲೆ ಬರೆದರೆ ಹಿಂದೆ ಹೇಳಿದ ಭಾರತಕ್ಕೂ ಈಗ ಹೇಳುವ ಭಾಗವತಕ್ಕೂ ವಿರೋಧ ಎದ್ದು ಕಾಣುತ್ತದೆ. ನನ್ನ ಮಾತು ಯಾವಾಗಲೂ ಒಂದೇ ರೀತಿ ಇರುವುದಿಲ್ಲ ಎಂದು ಜನರಿಗೆ ಅವಿಶ್ವಾಸ ಉಂಟಾದೀತು. ನಾರದರ ಉಪದೇಶದಿಂದಲೆ ಭಾಗವತ ಬರೆದೆನಾದರೆ ಈ ಸಮಸ್ಯೆ ಇರುವುದಿಲ್ಲ ಎಂಬ ಅಭಿಪ್ರಾಯದಿಂದ ನಾರದರ ಆಗಮನಕ್ಕೆ ವ್ಯಾಸರು

ಕಾದಿದ್ದಾರೆ ಎನ್ನುತ್ತಾರೆ ವಲ್ಲಭಾಚಾರ್ಯರು.[೧] ಅವರಿಗೂ ಮೇಲೆ ಹೇಳಿದ ಸ್ಕಾಂದ ಪುರಾಣವಚನ ವಿರೋಧ ಅಪರಿಹಾರ್ಯ.

★★★

ತಸ್ಯೈವಂ ಖಿನ್ನಮಾತ್ಮಾನಂ ಮನ್ಯಮಾನಸ್ಯ ಖಿದ್ಯತಃ ।
ಕೃಷ್ಣಸ್ಯ ನಾರದೋಽಭ್ಯಾಗಾದ್ ಆಶ್ರಮಂ ಪ್ರಾಗುದಾಹೃತಂ ॥ ೩೧ ॥

ಲೋಕವಿಡಂಬನೆಗಾಗಿ ಸ್ವೇಚ್ಛೆಯಿಂದಲೆ ವ್ಯಾಸರು ತನ್ನನ್ನು ಅತೃಪ್ತನಂತೆ ಭಾವಿಸಿ ಯೋಚಿಸುತ್ತ ಕುಳಿತಿದ್ದಾಗ ಹಿಂದೆ ಹೇಳಿದ ಆ ಆಶ್ರಮಕ್ಕೆ ನಾರದರು ಬಂದರು.

ಇಲ್ಲಿ 'ಖಿನ್ನ' 'ಖಿದ್ಯತಃ' ಶಬ್ದಗಳು ವೇದವ್ಯಾಸರಿಗೆ ಖೇದ ಉಂಟಾಯಿತೆನ್ನುತ್ತಿವೆ. ಹಾಗೆಯೆ ಬೇರೆ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ. ಭಾರತದಲ್ಲಿ ಭಾಗವತಧರ್ಮ ನಿರೂಪಣೆ ಇಲ್ಲದಿರುವುದೇ ನನ್ನ ಅತೃಪ್ತಿಗೆ ಕಾರಣವಾಗಿರಬಹುದೆ ಎಂದು ಸಂಶಯಪಡುವುದೂ ಸರ್ವಜ್ಞರಾದ ವ್ಯಾಸರಿಗೆ ಕೂಡಲಾರದು. ವಿಶ್ವನಾಥ ಚಕ್ರವರ್ತಿಯ ವ್ಯಾಖ್ಯಾನದಲ್ಲಿ ಈ ಸಮಸ್ಯೆಗೆ ಹೀಗೆ ಪರಿಹಾರ ಉಕ್ತವಾಗಿದೆ— ಸರ್ವಶಾಸ್ತ್ರ ಶಿರೋಮಣಿಯಾದ ಭಾಗವತದ ಪ್ರಾದುರ್ಭಾವ ವಾಗಬೇಕೆನ್ನುವ ಉದ್ದೇಶದಿಂದ ಭಗವಾನ್ ಶ್ರೀಕೃಷ್ಣನೆ ವ್ಯಾಸರಿಗೆ ತತ್ಕಾಲದಲ್ಲಿ ಅಜ್ಞಾನ ಉಂಟುಮಾಡಿದನೆಂದು ತಿಳಿಯಬೇಕು. ಬ್ರಹ್ಮನಿಗೆ ಮೋಹ ಉಂಟುಮಾಡುವ ಸಂದರ್ಭದಲ್ಲಿ ತನ್ನ ಲೀಲೆಯನ್ನು ಮೆರೆಸುವ ಉದ್ದೇಶದಿಂದ ಬಲರಾಮನಿಗೆ ಅಜ್ಞಾನ ಉಂಟುಮಾಡಿದ್ದು ಇದಕ್ಕೆ ನಿದರ್ಶನ ಎನ್ನುತ್ತಾನೆ ವಿಶ್ವನಾಥ.[೨] ಇದೆಲ್ಲ ಅಪ್ರಾಮಾಣಿಕ, ಪ್ರಮಾಣವಿರುದ್ಧ ಏಕೆಂದರೆ—

---

೧. ಪ್ರಾಯೇಣೇತ್ಯನೇನ ಕ್ವಚಿತ್ ಕ್ವಚಿದೇವ ಭಾರತೇ ಭಾಗವತಧರ್ಮ ನಿರೂಪಣಂ ಇತಿ ಸೂಚಿತಂ । ಏವಮಿತ್ಥಮಾತ್ಮಾನಂ ಖಿಲಂ ನ್ಯೂನಂ ಮನ್ಯಮಾನಸ್ಯ ಅತ ಏವ ಖಿದ್ಯತಸ್ತಸ್ಯ ಕೃಷ್ಣಸ್ಯ ವ್ಯಾಸಸ್ಯ । -ವೀರರಾಘವಃ

ಸ್ವತ ಏವ ಭಗವದ್ಧರ್ಮ ನಿರೂಪಣೇ ತು ಪೂರ್ವೋಕ್ತ ಭಾರತಾದೇರಸ್ಯ ಚ ವಿರೋಧಾತ್ ವಿರುದ್ಧ ವಕ್ತೃತ್ವೇನಾಪ್ರಾಮಾಣ್ಯಂ ಸ್ಯಾತ್ । ಅತಃ ಖಿದ್ಯತಾ ನಾರದವಚನಾತ್ತು ತಥಾ ಕಥನೇ ನ ವಿರೋಧಃ । -ವಲ್ಲಭಾಚಾರ್ಯಃ

೨. ಅತ್ರ ಭಗವದವತಾರತ್ವಾದಸಂಭಾವಿನಾವಪ್ಯಸರ್ವಜ್ಞತಾಚಿತ್ತಾಪ್ರಸಾದೌ ವ್ಯಾಸಸ್ಯ ಸ್ವಯಂ ಭಗವತಾ ಶ್ರೀಕೃಷ್ಣೇನೈವ ಸ್ವಸದೃಶಸ್ಯ ಸರ್ವಶಾಸ್ತ್ರ ಶಿರೋಮಣೇಃ ಶ್ರೀಭಾಗವತಸ್ಯ ಪ್ರಾದುರ್ಭಾವಾರ್ಥಮೇವ ಬಲಾದುಪಪಾದಿತಾವಿತ್ಯವಸೀಯತೇ । ಯಥಾ ಬ್ರಹ್ಮಮೋಹನ ಪ್ರಸ್ತಾವೇ ಸ್ವಲೀಲಾ ಸೌಂದರ್ಯಾರ್ಥಂ ಬಲದೇವಸ್ಯಾಪ್ಯಸರ್ವಜ್ಞತಾ ಕಲ್ಪಿತಾ । -ವಿಶ್ವನಾಥಃ

ಖೇದೋऽನಲಂಬುದ್ಧಿಃ ।

ಅತುಷ್ಟಿರಪ್ರಸಾದಶ್ಚ ಖೇದೋऽತೃಪ್ತಿಸ್ತಥೈವ ಚ ।

ಅನಲತ್ವಂ ವದಂತ್ಯೇತೇ ಸರ್ವೇ ಪರ್ಯಾಯವಾಚಕಾಃ ।

ಇತಿ ಬ್ರಾಹ್ಮೇ । ಮನ್ಯಮಾನಸ್ಯ ಸ್ವೇಚ್ಛಯಾ ।

ಇಲ್ಲಿ ಖೇದವೆಂದರೆ ಸಾಕೆನಿಸದಿರುವುದು. ಏಕೆಂದರೆ, ಅತುಷ್ಟಿ ಅಪ್ರಸಾದ ಖೇದ ಅತೃಪ್ತಿ ಅನಲತ್ವ ಇವು ಒಂದೇ ಅರ್ಥದ ಬೇರೆ ಬೇರೆ ಶಬ್ದಗಳು ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ. ನನ್ನ ಅತೃಪ್ತಿಗೆ ಕಾರಣ ಇದೇ ಆಗಿರಬಹುದೇ ಎಂದು ಸಂದೇಹಪಟ್ಟುದೂ ಲೋಕವಿಡಂಬನೆಗಾಗಿ ಸ್ವೇಚ್ಛೆಯಿಂದಲೆ.

ಇತಿ ಪ್ರಥಮಸ್ಕಂಧೇ ಚತುರ್ಥೋऽಧ್ಯಾಯಃ

ಐದನೆಯ ಅಧ್ಯಾಯ

ಅಧ್ಯಾಯ ಸಾರಾಂಶ

ಶ್ರೀಹರಿಯ ಮಹಿಮೆಯನ್ನು ಶ್ರವಣ ಮಾಡಿದರೆ ಮೋಕ್ಷಸಾಧನೆ ಸುಲಭವೆನ್ನಲು ತಮ್ಮ ಪೂರ್ವಜನ್ಮ ವೃತ್ತಾಂತವೆ ಸಾಕ್ಷಿ ಎನ್ನುತ್ತ ನಾರದರು ವೇದವ್ಯಾಸರ ಮುಂದೆ ಆ ವೃತ್ತಾಂತವನ್ನು ವರ್ಣಿಸಿದರು. ನಾನು ಪೂರ್ವಜನ್ಮದಲ್ಲಿ ದಾಸೀಪುತ್ರನಾಗಿದ್ದೆ. ಒಮ್ಮೆ ಜ್ಞಾನಿಗಳಾದ ಅನೇಕ ಸನ್ಯಾಸಿಗಳು ಒಂದುಕಡೆ ಚಾತುರ್ಮಾಸ್ಯ ಸಂಕಲ್ಪಮಾಡಿ ಕುಳಿತರು. ಐದು ವರ್ಷದ ಬಾಲಕನಾಗಿದ್ದ ನಾನು ಅವರುಂಡ ಎಂಜಲೆಲೆ ತೆಗೆದು ಸಾರಿಸುವುದು ಉಳಿದಿದ್ದ ಅನ್ನ ಉಣ್ಣುವುದು ಅವರು ಹೇಳುತ್ತಿದ್ದ ಹರಿಕಥೆಯನ್ನು ಕೇಳುವುದು ಹೀಗೆ ಮಾಡುತ್ತಿದ್ದೆ. ಇವುಗಳಿಂದ ನನ್ನ ಅಂತಃಕರಣ ಶುದ್ಧವಾಯಿತು. ಭಕ್ತಿವೈರಾಗ್ಯಗಳು ಮೂಡಿದುವು. ಯತಿಗಳು ವ್ರತವನ್ನು ಮುಗಿಸಿ ಹೊರಡುವಾಗ ನನ್ನನ್ನು ಕರೆದು ಪ್ರೀತಿಯಿಂದ ಗೋಪ್ಯವಾದ ಪರಮಾತ್ಮತತ್ವವನ್ನು ಉಪದೇಶಿಸಿದರು. ಜ್ಞಾನಪೂರ್ವಕ ಕರ್ಮಾಚರಣೆಗೆ ಆದೇಶವಿತ್ತು ಹೊರಟುಹೋದರು. ಆದರಿಂದ ಜ್ಞಾನಪೂರ್ವಕ ಕರ್ಮಾಚರಣೆಯಿಂದ ಸಜ್ಜನರಿಗೆ ಜ್ಞಾನಲಾಭವಾಗುವಂತೆ ಭಾಗವತ ಗ್ರಂಥ ರಚಿಸಿರಿ ಎಂದರು.

★★★

ನಾರದರು ಬಂದು ವೇದವ್ಯಾಸರಲ್ಲಿ ಲೋಕರೀತಿಯಿಂದ ಕೇಳಿದರು—

ಪಾರಾಶರ್ಯ ಮಹಾಭಾಗ ಭವತಃ ಕಚ್ಚಿದಾತ್ಮನಾ ।
ಪರಿತುಷ್ಯತಿ ಶಾರೀರ ಆತ್ಮಾ ಮಾನಸ ಏವ ವಾ ॥ ೨ ॥

ಮಹಾಭಾಗ್ಯಶಾಲಿಯಾದ ವ್ಯಾಸರೆ ನಿಮ್ಮ ಶರೀರರೂಪ ಆತ್ಮವೂ, ಮನೋರೂಪ ಆತ್ಮವೂ ಸ್ವತಃ ಸಂತೃಪ್ತವಾಗಿದೆ ತಾನೆ?

ಇಲ್ಲಿ ನಿಮ್ಮ ಶರೀರ ಮನಸ್ಸುಗಳು ತೃಪ್ತವಾಗಿವೆ ತಾನೆ? ಎಂದು ಕೇಳಬೇಕಿತ್ತು. ಶರೀರರೂಪ ಆತ್ಮ, ಮನೋರೂಪ ಆತ್ಮ ಎಂದು ಕೇಳುವುದು ಲೋಕದಲ್ಲಿ ಕಂಡಿಲ್ಲ. ಮತ್ತು ಆತ್ಮನಾ ಪರಿತುಷ್ಯತಿ? ಸ್ವತಃ ತೃಪ್ತವಾಗಿದೆಯೆ? ಎಂದು ಕೇಳುವುದೂ ಕಂಡಿಲ್ಲ. ಬೇರೆ ವ್ಯಾಖ್ಯಾನಕಾರರ ಪ್ರಕಾರ ಶರೀರಾಭಿಮಾನಿ ಮನೋಭಿಮಾನಿ ಆತ್ಮ ಸುಖವಾಗಿರುವನೆ ಎಂದು ಪ್ರಶ್ನೆ. ಪರಮಾತ್ಮ ತನ್ನ ಶರೀರ ಮನಸ್ಸುಗಳಿಗೆ ತಾನು ಅಭಿಮಾನಿಯೆನಿಸಲಾರ. ಈ ಪ್ರಶ್ನೆಗಳಿಗೆ ಸಮಾಧಾನ—

ಶಾರೀರಮಾನಸಯೋರಭೇದಾದುಭಯಥಾಪಿ ಯುಜ್ಯತೇ ।
ಸ್ವತಂತ್ರತ್ವಾದಾತ್ಮನೈವ ಹ್ಯಲಂಬುದ್ಧಿಃ ॥

ಭಗವಂತನ ವಿಷಯದಲ್ಲಿ ಶರೀರ ಮನಸ್ಸುಗಳೆರಡೂ ಆತ್ಮರೂಪವೆ ಆಗಿರುವುದರಿಂದ ಶರೀರರೂಪ ಆತ್ಮ ಮನೋರೂಪ ಆತ್ಮ ತೃಪ್ತವಾಗಿದೆಯೆ ಎಂದಾಗಲೀ ಶರೀರ ಮನಸುಗಳು ತೃಪ್ತವಾಗಿವೆಯೆ ಎಂದಾಗಲೀ ಎರಡು ರೀತಿ ಯಿಂದಲೂ ಕೇಳಬಹುದು. ಸ್ವತಂತ್ರನಾಗಿರುವುದರಿಂದ 'ಸ್ವತಃ ತೃಪ್ತವಾಗಿದೆಯೆ' ಎಂದೂ ಕೇಳಬಹುದು.

'ಶಾರೀರ ಮಾನಸಯೋಃ' ಎಂದರೆ 'ಶರೀರ ಮನಸೋಃ' ಎಂದು ಹೇಳುವ ಅಭಿಪ್ರಾಯ. ಭಾಗವತದಲ್ಲಿ ಶಾರೀರ ಮಾನಸ ಶಬ್ದಗಳಿರುವುದರಿಂದ ತಾತ್ಪರ್ಯ ದಲ್ಲಿ ಅವೇ ಶಬ್ದಗಳು ಪ್ರಯುಕ್ತವಾಗಿವೆ.

★★★

ನಾರದರು ಪುನಃ ಹೇಳುತ್ತಾರೆ—

ಜಿಜ್ಞಾಸಿತಮಧೀತಂ ಚ ಬ್ರಹ್ಮ ಯತ್ತತ್ ಸನಾತನಂ ।
ತಥಾಪಿ ಶೋಚಸ್ಯಾತ್ಮಾನಮಕೃತಾರ್ಥ ಇವ ಪ್ರಭೋ ॥ ೪ ॥

ಸನಾತನವಾದ ವೇದವನ್ನೂ ಅದರಲ್ಲಿ ಉಕ್ತವಾದ ಪರಮಾತ್ಮ ತತ್ವವನ್ನೂ ನೀವು ಚೆನ್ನಾಗಿ ವಿಚಾರ ಮಾಡಿದ್ದಾಯಿತು. ಆದರೂ ಕಾರ್ಯ ಪೂರ್ತಿಗೊಳಿಸದಿದ್ದವರಂತೆ ತೋರಿಕೊಳ್ಳುತ್ತಿರುವಿರಿ.

ಇಲ್ಲಿ 'ಶೋಚಸಿ' ಎಂದರೆ ಶೋಕಪಡುವಿರಿ ಎಂದು ಅರ್ಥ ಮೇಲುನೋಟಕ್ಕೆ ಕಾಣುತ್ತದೆ. ಭಗವಂತನ ವಿಷಯದಲ್ಲಿ ಬೇರೆ ಅರ್ಥ—

ಶೋಚಸಿ ಪ್ರಕಾಶಯಸಿ । 'ಅಜಸ್ರೇಣ ಶೋಚಿಷಾ ಶೋಶುಚಾನಃ ।'

ಇತಿ ಹಿ ಶ್ರುತಿಃ ।

ಶೋಚಸಿ ಎಂದರೆ ಇಲ್ಲಿ 'ತೋರಿಕೊಳ್ಳುತ್ತಿರುವಿರಿ' ಎಂದರ್ಥ. 'ನಿತ್ಯಪ್ರಕಾಶ ದಿಂದ ಚೆನ್ನಾಗಿ ತೋರಿಕೊಳ್ಳುತ್ತಾನೆ' ಎಂದು ಶ್ರುತಿಯಿದೆ.

ಶುಚಧಾತುವಿಗೆ ಪ್ರಕಾಶ, ತೋರುವುದು ಎಂಬ ಅರ್ಥದಲ್ಲಿ ವೈದಿಕ ಪ್ರಯೋಗವಿದೆ. ಇಲ್ಲಿಯೂ ಅಂತರ್ಣೀತಣಿಚ್ ಪ್ರತ್ಯಯವಿಟ್ಟುಕೊಂಡು ಶೋಚಸಿ, ಶೋಚಯಸಿ, ತೋರಿಕೊಳ್ಳುವಿರಿ ಎಂದು ಅರ್ಥೈಸಬೇಕು. 'ಶೋಕಪಡುವಿರಿ' ಎಂದಲ್ಲ. ಬೇರೆ ವ್ಯಾಖ್ಯಾನಕಾರರು ಶೋಕಪಡುವಿರೆಂದೇ ವ್ಯಾಖ್ಯಾನ ಮಾಡಿದ್ದಾರೆ.

★★★

ನನ್ನ ಅತೃಪ್ತಿಗೆ ಕಾರಣವೇನೆಂಬುದು ನನಗೆ ತಿಳಿದಿಲ್ಲ ಎಂದು ವೇದವ್ಯಾಸರು ನಾರದರ ಮುಂದೆ ಹೇಳುತ್ತಾರೆ—

ಶ್ರೀ ವ್ಯಾಸ ಉವಾಚ—

ಅಸ್ತ್ಯೇವ ಮೇ ಸರ್ವಮಿದಂ ತ್ವಯೋಕ್ತಂ
ತಥಾಪಿ ನಾತ್ಮಾ ಪರಿತುಷ್ಯತೇ ಮೇ ।
ತನ್ಮೂಲಮವ್ಯಕ್ತಮಗಾಧಬೋಧಂ
ಪೃಚ್ಛಾಮಹೇ ತ್ವಾಽಽತ್ಮಭವಾತ್ಮಭೂತಂ ॥ ೫ ॥

ಶ್ರೀವೇದವ್ಯಾಸರು ನುಡಿದರು—ನಾರದರೆ, ನೀವು ನನ್ನ ಬಗ್ಗೆ ಹೇಳಿದ್ದೆಲ್ಲವೂ ನನ್ನಲ್ಲಿ ಇದ್ದೇ ಇದೆ. ಆದರೂ ನನ್ನ ಶರೀರಮನೋರೂಪವಾದ ಆತ್ಮವು ತೃಪ್ತಿ ಹೊಂದಿಲ್ಲ. ಇದಕ್ಕೆ ಕಾರಣ ತಿಳಿದಿಲ್ಲ. ಬ್ರಹ್ಮಪುತ್ರರಾದ ಮಹಾಜ್ಞಾನಿಗಳಾದ ನಿಮ್ಮನ್ನೇ ಕೇಳುತ್ತೇನೆ.

ತನ್ನ ಅತೃಪ್ತಿಗೆ ಕಾರಣ ತನಗೇ ತಿಳಿದಿಲ್ಲ ಎನ್ನುವುದು ಸರ್ವಜ್ಞರಾದ ವೇದವ್ಯಾಸರ ವಿಷಯದಲ್ಲಿ ಸರ್ವಥಾ ಕೂಡುವುದಿಲ್ಲ. ಆದರೂ ಅವರು ಹಾಗೆ ಹೇಳುತ್ತಾರೆ. ಅದಕ್ಕೆ ಕಾರಣ—

ಜ್ಞಾನ ಶಕ್ತಿ ಸ್ವರೂಪೋಽಪಿ ಹ್ಯಜ್ಞಾಶಕ್ತಂ ವದೇದ್ಧರಿಃ ।
ಅಜ್ಞಾನಾಂ ಮೋಹನಾಯೇಶಸ್ತೇನ ಮುಹ್ಯಂತಿ ಮೋಹಿತಾಃ ।

ಇತಿ ಪಾದ್ಮೇ ।

ಶ್ರೀಹರಿ ಜ್ಞಾನ ಶಕ್ತಿಸ್ವರೂಪನಾಗಿದ್ದರೂ ವೇದವ್ಯಾಸಾದಿ ಅವತಾರಗಳಲ್ಲಿ ತಾನು ಅಜ್ಞ ಅಶಕ್ತ ಎನ್ನುತ್ತಾನೆ. ಅದು ಅಜ್ಞರನ್ನು ಮೋಹಗೊಳಿಸುವುದಕ್ಕಾಗಿ. ಇಂಥ ಭ್ರಾಮಕ ಮಾತುಗಳಿಂದ ವಂಚಿತರಾಗಿ ಅಜ್ಞರು ಮೋಹಕ್ಕೊಳಗಾಗುತ್ತಾರೆ ಎಂದು ಪದ್ಮಪುರಾಣದಲ್ಲಿ ಉಕ್ತವಾಗಿದೆ.

★★★

ನಾರದರು ವ್ಯಾಸರ ಮುಂದೆ ಅವರ ಅತೃಪ್ತಿಗೆ ಕಾರಣವನ್ನು ಹೇಳುತ್ತಾರೆ—

ಯಥಾ ಧರ್ಮಾದಯೋ ಹ್ಯರ್ಥಾ ಮುನಿವರ್ಯಾನುವರ್ಣಿತಾಃ ।
ನ ತಥಾ ವಾಸುದೇವಸ್ಯ ಮಹಿಮಾ ಹ್ಯನುವರ್ಣಿತಃ ॥ ೯ ॥

ಮುನಿಶ್ರೇಷ್ಠರೆ, ನೀವು ಭಾರತದಲ್ಲಿ ಧರ್ಮಾದಿ ಪುರುಷಾರ್ಥಗಳನ್ನು ಎಲ್ಲರೂ ತಿಳಿವಂತೆ ಹೇಗೆ ಸುಲಭವಾಗಿ ಸಾಕಷ್ಟು ವರ್ಣಿಸಿರಿವಿರೋ ಹಾಗೆ ಸುಲಭವಾಗಿ ತೃಪ್ತಿಯಾಗುವಷ್ಟು ವಾಸುದೇವನ ಮಹಿಮೆಯನ್ನು ವರ್ಣಿಸಿಲ್ಲ.

ಇಲ್ಲಿ 'ಎಲ್ಲರೂ ತಿಳಿವಂತೆ ಸುಲಭವಾಗಿ ತೃಪ್ತಿಯಾಗುವಷ್ಟು' ಎಂಬ ಅಂಶ ಶ್ಲೋಕದಲ್ಲಿ ಕಾಣುವುದಿಲ್ಲ. ಅದನ್ನು ಅಧ್ಯಾಹಾರ ಮಾಡಿಟ್ಟುಕೊಳ್ಳಬೇಕು—

ಧರ್ಮಾದೀನಾಮಲ್ಪಕಥನೇನ ಪೂರ್ತಿಃ ।
ನ ವಾಸುದೇವ ಮಹಿಮ್ನೋಽತಿಕಥಿತಸ್ಯಾಪಿ ।

ಧರ್ಮಾದಿಗಳನ್ನು ಸ್ವಲ್ಪ ಹೇಳಿದರೂ ಸಾಕಾಗುತ್ತದೆ. ವಾಸುದೇವನ ಮಹಿಮೆಯನ್ನು ಎಷ್ಟು ಹೇಳಿದರೂ ಕಡಿಮೆಯೆ.

ಭಾರತಾದಿಗಳಲ್ಲಿ ವಸ್ತುತಃ ಧರ್ಮಾದಿ ಪುರುಷಾರ್ಥಗಳಿಗಿಂತಲೂ ಹೆಚ್ಚಾಗಿ ವಾಸುದೇವನ ಮಹಿಮೆಯೆ ಉಕ್ತವಾಗಿದೆ. ಧರ್ಮಾದಿಗಳ ವರ್ಣನೆ ಕಡಿಮೆಯೆ. ಆದರೂ ಅದು ಸಾಕೆನಿಸುತ್ತದೆ. ಸಜ್ಜನರಿಗೆ ವಾಸುದೇವನ ಮಹಿಮೆ ತಿಳಿಯುವುದರಲ್ಲಿಯೆ ಹೆಚ್ಚು ಆಸಕ್ತಿ. ಅದನ್ನು ಎಷ್ಟು ಕೇಳಿದರೂ ಸಾಕೆನಿಸುವುದಿಲ್ಲ. ಸೂರ್ಯೋದಯವನ್ನು ಇದಿರುನೋಡುತ್ತಿರುವವನಿಗೆ ಮಿಣುಕುಹುಳದ ಬೆಳಕು ತೃಪ್ತಿ ನೀಡುವುದೆ? ಈ ಅಭಿಪ್ರಾಯದಿಂದ ಧರ್ಮಾದಿಗಳಂತೆ ವಾಸುದೇವನ ಮಹಿಮೆ ವರ್ಣಿತವಾಗಿಲ್ಲ ಎನ್ನುತ್ತಿದ್ದಾರೆ ನಾರದರು. ಬೇರೆ ವ್ಯಾಖ್ಯಾನಕಾರರು ಇಲ್ಲಿ ಎಡವಿದ್ದಾರೆ. ವಿಶ್ವನಾಥಚಕ್ರವರ್ತಿಯ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ— 'ಧರ್ಮಾದಿಗಳು ವಾಸುದೇವನ ಮಹಿಮೆಗಿಂತ ಅತಿ ನಿಕೃಷ್ಟ. ಆದರೂ ಅವುಗಳನ್ನು ಭಾರತದಲ್ಲಿ ಪುರುಷಾರ್ಥಗಳೆಂದು ವರ್ಣಿಸಿದಿರಿ. ವಾಸುದೇವನ ಮಹಿಮೆಯನ್ನು ಪುರುಷಾರ್ಥವೆಂದು ಹೇಳಲೆ ಇಲ್ಲ. ಅದನ್ನು ಧರ್ಮಾದಿಗಳಂತೆ ವಿಸ್ತಾರವಾಗಿ

ವರ್ಣಿಸಿಯೂ ಇಲ್ಲ. ಅಲ್ಲಲ್ಲಿ ಸ್ವಲ್ಪವೆ ಹೇಳಿ ಕೊನೆಗೆ ಅದನ್ನು ಮೋಕ್ಷಸಾಧನವೆಂದು ಹೇಳಿದಿರಿ. ಪರಮಾದರದಿಂದ ಹೇಳಬೇಕಾದುದನ್ನು ಹೀಗೆ ತಾನು ಅನಾದರದಿಂದ ಕಂಡುದು ನಿಮಗೆ ವ್ಯಾಸರಿಗೆ ಮನಸ್ಸಿನಲ್ಲಿ ದುಃಖ ಉಂಟುಮಾಡದಿರುತ್ತದೆಯೆ?'[೧]

ಆದರೆ 'ವಕ್ಷ್ಯಾಮಿ ನಾರಾಯಣಕಥಾಮಿಮಾಂ' ಎಂದು ಭಾರತವನ್ನು ನಾರಾಯಣಕಥೆ ಎಂದೇ ಆದರದಿಂದ ಕಂಡು 'ಯತಃ ಕೃಷ್ಣಸ್ತತೋ ಜಯಃ' ಕೃಷ್ಣನ ಅನುಗ್ರಹ ಯಾವ ಪಕ್ಷದಲ್ಲಿ ಇದೆಯೋ ಆ ಪಕ್ಷಕ್ಕೆ ಜಯ ಎಂದೂ, ಇಂಥ ಜಯವನ್ನೇ ವರ್ಣಿಸುವೆನೆಂದೂ, ತತೋ ಜಯಮುದೀರಯೇತ್ ಎಂದಿರುವ ವೇದವ್ಯಾಸರ ನಿಜವಾದ ಅಭಿಪ್ರಾಯವನ್ನು ಭಾಗವತ ಶ್ಲೋಕದಲ್ಲಿ ಕಾಣಬೇಕೇ ಹೊರತು ಅದಕ್ಕೆ ವಿಪರೀತವಾಗಿ ಅಲ್ಲ.

★★★

ಧರ್ಮಾದಿಗಳನ್ನು ಭಾರತದಲ್ಲಿ ಹೇಳಿದ್ದು ಸಾಕು. ಇನ್ನು ಹೆಚ್ಚು ಹೇಳಬೇಕಾಗಿಲ್ಲ. ಅವುಗಳನ್ನು ರಸಾಲಂಕಾರಾದಿ ಭರಿತವಾಗಿ ಚಮತ್ಕಾರವಾಗಿ ಹೇಳಿದರೂ ಸಜ್ಜನರು ಅದರಲ್ಲಿ ಆಸಕ್ತಿವಹಿಸುವುದಿಲ್ಲ ಎಂದು ನಾರದರು ವೇದವ್ಯಾಸರಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದಾರೆ—

ನ ತದ್ ವಚಶ್ಚಿತ್ರಪದಂ ಹರೇರ್ಯಶೋ
ಜಗತ್ಪವಿತ್ರಂ ನ ಗೃಣೀತ ಕರ್ಹಿಚಿತ್ ।
ತದ್ ವಾಯಸಂ ತೀರ್ಥಮುಶಂತಿ ಮಾನಸಾ
ನ ಯತ್ರ ಹಂಸಾ ನ್ಯಪತನ್ ಮಿಮಂಕ್ಷಯಾ ॥ ೧೦ ॥

ಲೋಕಪಾವನವಾದ ಹರಿಮಹಿಮೆಯನ್ನು ಕೊಂಡಾಡದ ವಾಙ್ಮಯ ರಸಾಲಂಕಾರಾದಿಭರಿತವಾಗಿ ಎಷ್ಟು ಸುಂದರವಾಗಿದ್ದರೂ ಅದು ಕಾಗೆಗಳು ಮುಳುಗುವ ನೀರಿನ ಹಳ್ಳದಂತೆ. ಮಾನಸ ಸರೋವರದಲ್ಲಿ ವಿಹರಿಸುವ ಹಂಸಗಳು ಅದರಲ್ಲಿ ಮುಳುಗುವುದಿಲ್ಲ. ಅಜ್ಞ ಜನರಿಗೆ ವಿಷಯಭೋಗಯುಕ್ತವಾದ ಜೀವನಕ್ಕೆ ಮಾತ್ರ ಉಪಯೋಗಿಯಾದ ಆ ವಾಙ್ಮಯವನ್ನು ಪರತತ್ವ ಜಿಜ್ಞಾಸುಗಳಾದ ಬ್ರಹ್ಮಮಾನಸ ಪುತ್ರರಾದ ಪರಮಹಂಸಸನ್ಯಾಸಿಗಳಾದ ಸನಕಾದಿಗಳಂಥ ಸಜ್ಜನರು ಸ್ವೀಕರಿಸುವುದಿಲ್ಲ.

---

೧. 'ಧರ್ಮಾದಯೋಽಪಿ ವಾಸುದೇವ ಮಹಿಮತೋಽತಿನಿಕೃಷ್ಟಾ ಅಪಿ ಯಥಾ ಅರ್ಥಾ ಅನುಕೀರ್ತಿತಾಃ ಪುರುಷಾರ್ಥತ್ವೇನೋಕ್ತಾಃ ತಥಾ ವಾಸುದೇವಸ್ಯ ಮಹಿಮಾ ನ ವರ್ಣಿತಃ ಪುರುಷಾರ್ಥತ್ವೇನಾಪಿ ನ ವರ್ಣಿತಃ । ವರ್ಣಿತೋಽಪಿ ನ ಭೂರಿಶಃ । ತತ್ರತತ್ರ । ಮಹಿಮಾಽಂತತೋ ಮೋಕ್ಷಸಾಧನತ್ವೇನೋಕ್ತಃ । ಅತೋಽತ್ಯಾದರಣೀಯಸ್ಯ ವಸ್ತುನಃ ಆದರಾಭಾವಃ ಚಿತ್ತಾಸ್ಯಾಪ್ರಸಾದಮಪಿ ಕಿಂ ನ ಕರೋತೀತಿ ಭಾವಃ । -ವಿಶ್ವನಾಥ ಚಕ್ರವರ್ತೀ

ಇಲ್ಲಿ ದೃಷ್ಟಾಂತ ಮತ್ತು ಪ್ರಕೃತ ಪ್ರಮೇಯಗಳಿಗೆ ಅನುಗುಣವಾಗಿ ಹಂಸಶಬ್ದ ಹಂಸಪಕ್ಷಿ ಮತ್ತು ಪರಮಹಂಸ ಸನ್ಯಾಸಿಗಳೆಂದು ಎರಡು ಅರ್ಥಗಳನ್ನು ಸುಲಭವಾಗಿ ಹೇಳುತ್ತವೆ. ಆದರೆ 'ವಾಯಸತೀರ್ಥ' ಶಬ್ದ ಕಾಗೆ ಮೀಯುವ ನೀರಿನ ಹಳ್ಳ ಎಂದು ಒಂದೇ ಅರ್ಥ ನೀಡುತ್ತದೆ ಎಂದು ಕಾಣುತ್ತದೆ. ವಸ್ತುತಃ ಪ್ರಕೃತ ಪ್ರಮೇಯಕ್ಕೆ ಅನುಗುಣವಾಗಿ ಅದೂ ಬೇರೆ ಅರ್ಥವನ್ನು ಕೊಡುತ್ತದೆ—

ವಾಯಸಂ ತೀರ್ಥಂ ವಯೋಮಾತ್ರಾನುಜೀವಿ ಶಾಸ್ತ್ರಂ ।

ವಾಯಸತೀರ್ಥವೆಂದರೆ ಜೀವನಮಾತ್ರೋಪಯೋಗಿ ಶಾಸ್ತ್ರ. 'ವಯಸ್' ಎಂದರೆ ಬಹಳ ವಯಸ್ಸಿನ ಕಾಲ ಜೀವಿಸುವುದು. ಅದಕ್ಕೆ ಸಾಧನವಾದುದು 'ವಾಯಸ' ಅಂಥ ತೀರ್ಥ ಎಂದರೆ ಆಯುರ್ವೇದಾದಿ ಶಾಸ್ತ್ರ. ಬೇರೆ ವ್ಯಾಖ್ಯಾನಕಾರರ ಪ್ರಕಾರ 'ವಾಯಸ ತೀರ್ಥ' ಎಂದರೆ ಕಾಗೆಗಳಂಥ ಕಾಮುಕ ಜನರಿಗೆ ರುಚಿಸುವ ಅಪವಿತ್ರ ಗ್ರಂಥ.[೧] ಆಯುರ್ವೇದಾದಿ ಉತ್ತಮ ಗ್ರಂಥಗಳಿಗೆ ಈ ಮಾತು ಕೂಡುವುದಿಲ್ಲ.

★★★

ಜ್ಞಾನ ಮತ್ತು ಕರ್ಮಗಳಿಂದಲೆ ಮೋಕ್ಷ ಪಡೆಯಬಹುದು. ಭಕ್ತಿ ಏಕೆ ಎಂಬ ಪ್ರಶ್ನೆ ಮಾಡಿಕೊಂಡು ನಾರದರು ವೇದವ್ಯಾಸರ ಮುಂದೆ ಹೇಳುತ್ತಾರೆ—

ನೈಷ್ಕರ್ಮ್ಯಮಪ್ಯಚ್ಯುತ ಭಾವವರ್ಜಿತಂ
ನ ಶೋಭತೇ ಜ್ಞಾನಮಲಂ ನಿರಂಜನಂ ।
ಕುತಃ ಪುನಃ ಶಶ್ವದಭದ್ರಮೀಶ್ವರೇ
ನ ಚಾರ್ಪಿತಂ ಕರ್ಮ ಯದಪ್ಯಕಾರಣಂ ॥ ೧೨ ॥

ನಿರ್ಮಲವಾಗಿದ್ದು ಮೋಕ್ಷಸಾಧನವೆನಿಸಿರುವ ಶಾಸ್ತ್ರಜ್ಞಾನವೂ ಭಕ್ತಿ ಇಲ್ಲದಿದ್ದರೆ ಮೋಕ್ಷ ನೀಡಲಾರದೆಂದ ಮೇಲೆ ಅನುಷ್ಠಾನ ಕಾಲದಲ್ಲಿ ರಾಗದ್ವೇಷಾದಿಗಳಿಂದ ಮಲಿನವಾಗುವ ನಿಷ್ಕಾಮಕರ್ಮ ಭಕ್ತಿಯಿಂದ ಭಗವಂತನಿಗೆ ಅರ್ಪಿತವಾಗದಿದ್ದಲ್ಲಿ ಮೋಕ್ಷಜನಕವಾಗದೆಂದು ಬೇರೇನು ಹೇಳಬೇಕು?

ಈ ಶ್ಲೋಕದಲ್ಲಿ ಜ್ಞಾನವು ಭಕ್ತಿ ಇಲ್ಲದಿದ್ದಲ್ಲಿ ಮೋಕ್ಷಜನಕವಾಗದೆಂದು ಹೇಳಿದೆ. ಜ್ಞಾನವೆಂದರೆ ಅಪರೋಕ್ಷವಲ್ಲ, ಭಕ್ತಿ ಇಲ್ಲದೆ ಅಪರೋಕ್ಷ ಹುಟ್ಟುವುದೇ ಇಲ್ಲ. ಆದರಿಂದ ಭಕ್ತಿ ಇಲ್ಲದೆ ಪಾಂಡಿತ್ಯ ಬಲದಿಂದ ಸಂಪಾದಿಸಿದ ಶಾಸ್ತ್ರಜ್ಞಾನವನ್ನಿಟ್ಟುಕೊಳ್ಳಬೇಕು. ವಿಶ್ವನಾಥವ್ಯಾಖ್ಯಾನದಲ್ಲಿ ಅಪರೋಕ್ಷಿಯಾದ

೧. ವಾಯಸಂ ತೀರ್ಥಂ ಕಾಕತುಲ್ಯಾನಾಂ ಕಾಮಿನಾಂ ರತಿಸ್ಥಾನಂ । -ಶ್ರೀಧರಃ

ಜೀವನ್ಮುಕ್ತನೂ ಭಕ್ತಿಮಾಡದಿದ್ದರೆ, ಉದಾ: ರಥೋತ್ಸವದಲ್ಲಿ ಭಾಗಿಯಾಗದಿದ್ದರೆ, ಬ್ರಹ್ಮರಾಕ್ಷಸನಾಗುತ್ತಾನೆ, ಪರಮಾತ್ಮನ ಅಚಿಂತ್ಯಶಕ್ತಿಯಿಂದ ಎಂದು ಹೇಳಿದೆ.

ಪರೋಕ್ಷಜ್ಞಾನಂ ನ ಶೋಭತೇ । ಅಪರೋಕ್ಷಜ್ಞಾನಂ ನ ಭಕ್ತ್ಯಾ ವಿನೋತ್ಪದ್ಯತೇ । ಯಸ್ಯ ದೇವೇ ಪರಾ ಭಕ್ತಿಃ, ಯಮೇವೈಷ ವೃಣುತೇ ತೇನ ಲಭ್ಯಃ, ಯದ್ ವಾಸುದೇವಶರಣಾ ವಿದುರಂಜಸೈವೇತ್ಯಾದೇಃ ।

ಭಕ್ತಿ ಇಲ್ಲದೆ ಪರೋಕ್ಷಜ್ಞಾನವು ಶೋಭಿಸುವುದಿಲ್ಲ, ಅಂದರೆ, ಮೋಕ್ಷ ಕಾರಣವಾಗುವುದಿಲ್ಲ ಎಂದು ಅರ್ಥವಿಟ್ಟುಕೊಳ್ಳಬೇಕು. ಏಕೆಂದರೆ ಅಪರೋಕ್ಷ ಜ್ಞಾನವಿಟ್ಟುಕೊಂಡರೆ ಅದು ಭಕ್ತಿ ಇಲ್ಲದೆ ಹುಟ್ಟುವುದಿಲ್ಲವಾದ್ದರಿಂದ ಭಕ್ತಿ ಇಲ್ಲದೆ ಶೋಭಿಸುವುದಿಲ್ಲ ಎನ್ನುವುದು ಕೂಡಲಾರದು. 'ಯಾರಿಗೆ ಭಗವಂತನಲ್ಲಿ ಪರಮಭಕ್ತಿ ಇದೆಯೋ ಅವನಿಗೆ' 'ಯಾರನ್ನು ಭಗವಂತನು ಭಕ್ತನೆಂದು ಸ್ವೀಕರಿಸುವನೋ ಅವನಿಗೇ ಅಪರೋಕ್ಷ ನೀಡುವನು. 'ವಾಸುದೇವನಲ್ಲಿ ಭಕ್ತಿಉಳ್ಳವರು ಮಾತ್ರ ಅವನ ಅಪರೋಕ್ಷವನ್ನು ಪಡೆಯಬಲ್ಲರು' ಎಂದು ಮುಂತಾಗಿ ಶ್ರುತಿಸ್ಮೃತಿಗಳು ಹೇಳಿವೆ.

★★★

ಹೀಗೆ ಭಕ್ತಿ ಆವಶ್ಯಕವಾದುದರಿಂದ ಭಕ್ತಿಪ್ರಚೋದಕವಾದ ಗ್ರಂಥವನ್ನು ರಚಿಸಿರೆಂದು ನಾರದರು ವೇದವ್ಯಾಸರಲ್ಲಿ ಪ್ರಾರ್ಥಿಸುತ್ತಿದ್ದಾರೆ—

ಅತೋ ಮಹಾಭಾಗ ಭವಾನಮೋಘದೃಕ್
ಶುಚಿಶ್ರವಾಃ ಸತ್ಯರತೋ ಧೃತವ್ರತಃ ।
ಉರುಕ್ರಮಸ್ಯಾಖಿಲಬಂಧಮುಕ್ತಯೇ
ಸಮಾಧಿನಾಽನುಸ್ಮರ ಯದ್ ವಿಚೇಷ್ಟಿತಂ ॥ ೧೩ ॥

ಆದರಿಂದ ಮಹಾಭಾಗ್ಯಶಾಲಿ ಅಮೋಘಜ್ಞಾನರು ಸತ್ಯನಿಷ್ಠರು ಸಜ್ಜನರಿಗೆ ಉತ್ತಮ ಜ್ಞಾನ ನೀಡುವ ವ್ರತ ತೊಟ್ಟವರು ವಿಷ್ಣುವಿನ ಅವತಾರರು ನೀವು ಪರಮಾಪ್ತರಾಗಿದ್ದು ಎಲ್ಲ ಸಜ್ಜನರ ಬಂಧಮುಕ್ತಿಗಾಗಿ ಹರಿಯ ಲೀಲೆಯನ್ನು ಸಮಾಧಿ ಭಾಷೆಯಿಂದ ಅಜ್ಞರ ಗ್ರಹಣಶಕ್ತಿಯನ್ನು ಆಲೋಚಿಸಿ ವರ್ಣಿಸಿರಿ.

ಇಲ್ಲಿ 'ಸಮಾಧಿನಾನುಸ್ಮರ' ಎಂದರೆ ಚೆನ್ನಾಗಿ ಏಕಾಗ್ರಮನಸ್ಸಿನಿಂದ ಆಲೋಚಿಸಿ ಗ್ರಂಥ ರಚಿಸಿರಿ ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಎಲ್ಲರೂ ಹೀಗೇ ಅರ್ಥ ಬರೆದಿದ್ದಾರೆ. ವಲ್ಲಭಾಚಾರ್ಯರೂ 'ಭಕ್ತಿಮಾರ್ಗಾನುಸಾರಿ ಯೋಗಜಧರ್ಮೇಣ ಸ್ಮೃತ್ವಾ ಕಥಯ' ತಪಸ್ಸಿನ ಪುಣ್ಯದ ಬಲದಿಂದ ಸಮಾಧಿಯಲ್ಲಿ

ಕಂಡುಕೊಂಡು ಅದನ್ನು ಸ್ಮರಿಸಿ ಗ್ರಂಥ ರಚಿಸಿರಿ' ಎಂದು ವ್ಯಾಖ್ಯಾನಿಸಿದ್ದಾರೆ. ನಿತ್ಯ ಸರ್ವಜ್ಞರಾದ ವ್ಯಾಸರಿಗೆ ಸಮಾಧಿಯಲ್ಲಿ ಏಕಾಗ್ರತೆಯಿಂದ ಆಲೋಚಿಸುವ ಪ್ರಮೇಯವೆ ಇಲ್ಲ. ಅದರಲ್ಲಿಯೂ ತಾನೆ ಕೃಷ್ಣರೂಪದಿಂದ ನಡೆಸಿದ ತನ್ನ ಲೀಲೆಯನ್ನು ತಾನು ಏಕಾಗ್ರಮನಸ್ಸಿನಿಂದ ಆಲೋಚಿಸಿ ತಿಳಿಯಬೇಕೆನ್ನುವುದು ಅತ್ಯಂತ ಅಯುಕ್ತ. ಪುಣ್ಯಫಲವೀವ ಭಗವಂತ ಯೋಗಾನುಷ್ಠಾನದ ಪುಣ್ಯಬಲ ದಿಂದ ತಿಳಿಯುವುದಂತೂ ಅಸಂಗತವೇ. 'ಶುಚಿಶ್ರವಸ್' ಎಂದರೂ ನಿರ್ಮಲ ಕೀರ್ತಿಉಳ್ಳವರು, ಲೋಕಹಿತ ಕ್ಕಾಗಿ ಅವತರಿಸಿದವರೆಂದು ಹೆಸರಾದವರು ಎಂದು ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ.[೧] ಹಾಗೆ ಹೇಳಬೇಕಾಗಿಲ್ಲ. ಅದು ವಿಷ್ಣುವಿನ ಸಹಸ್ರನಾಮಗಳಲ್ಲಿ ಒಂದು. 'ರುದ್ರೋ ಬಹುಶಿರಾ ಬಭ್ರುರ್ವಿಶ್ವಯೋನಿಃ ಶುಚಿಶ್ರವಾಃ' ಆದರಿಂದ ಸಾಕ್ಷಾದ್ ವಿಷ್ಣುರೂಪರು ವ್ಯಾಸರು ಆದರಿಂದ, ಅವರಲ್ಲಿ ಒಳ್ಳೆಯ ಗ್ರಂಥರಚನೆಗೆ ಬೇಕಾಗುವ ಎಲ್ಲ ಸಾಮರ್ಥ್ಯವಿರುವುದರಿಂದ ಪರಮಾಪ್ತರು ಎಂದೂ ಹೇಳಿದಂತಾಗುವುದು—

ಶುಚಿಶ್ರವಾ ವಿಷ್ಣುಃ । ಸಮಾಧಿನಾ ಸಮಾಧಿಭಾಷಯಾ ।
ಸ್ಮರಣಂ ಗ್ರಂಥಕೃತಿಃ । ಸ್ಮರಂತಿ ಚೇತ್ಯಾದೇಃ ।

'ಶುಚಿಶ್ರವಾ' ಎಂದರೆ ವಿಷ್ಣು. 'ಸಮಾಧಿನಾ' ಎಂದರೆ ಸಮಾಧಿಭಾಷೆಯಿಂದ. ಸ್ಮರಣವೆಂದರೆ ಗ್ರಂಥರಚನೆ. ಈ ಅರ್ಥದಲ್ಲಿ 'ಸ್ಮರಂತಿ ಚ' 'ಸ್ಮರ್ಯತೇ ಚ' ಎಂದು ಮುಂತಾಗಿ ಪ್ರಯೋಗ ಕಂಡಿದೆ.

ಭಾಷೆಗಳು ಮೂರು ವಿಧ— ದರ್ಶನ ಭಾಷೆ, ಗುಹ್ಯ ಭಾಷೆ, ಸಮಾಧಿ ಭಾಷೆ ಎಂದು. ಪಾಶುಪತಾದಿ ಪರದರ್ಶನ ರೀತಿಯಿಂದ ಶಿವಸರ್ವೋತ್ತಮತ್ವಾದಿಗಳನ್ನು ನಿರೂಪಿಸುವುದು ದರ್ಶನಭಾಷೆ. ಆ ದಾರ್ಶನಿಕರ ಅಭಿಪ್ರಾಯ ಹೀಗಿದೆ ಎಂದಿಷ್ಟೇ ಇಲ್ಲಿ ವಿವಕ್ಷಿತವಾಗಿರುತ್ತದೆ. ನಿಗೂಢವಾಗಿ ಹೇಳುವ ಕ್ಲಿಷ್ಟಶೈಲಿ ಗುಹ್ಯಭಾಷೆ. ಉದಾ:

---

೧. ಶುಚಿ ಶುದ್ಧಂ ಶ್ರವೋ ಯಶೋ ಯಸ್ಯ । -ಶ್ರೀಧರಃ

ಶುಚಿ ವಿಶುದ್ಧಂ ಶ್ರವಃ 'ಲೋಕಹಿತಾರ್ಥಮವತೀರ್ಣೋ ವ್ಯಾಸಃ' ಇತ್ಯೇವಂವಿಧಾ ಪ್ರಥಾ ಯಸ್ಯ ಸಃ । -ವೀರರಾಘವಃ ವಿಶ್ವನಾಥಃ ವಲ್ಲಭಾಚಾರ್ಯಃ

ಸಮಾಧಿನಾ ಚಿತ್ತೈಕಾಗ್ರ್ಯೇಣ ಅನುಸ್ಮರ ಸ್ಮೃತ್ವಾ ವರ್ಣಯ । -ಶ್ರೀಧರಃ ವೀರರಾಘವಃ

ಚೇಷ್ಟಿತಂ ಲೀಲಾಂ ಸಮಾಧಿನಾ ಚಿತ್ತೈಕಾಗ್ರ್ಯೇಣ ಸ್ಮರ । ಲೀಲಾ ಹಿ ಭಕ್ತಿಮತಿ ಶುದ್ಧೇ ಚಿತ್ತೇ ಸ್ವಯಮೇವ ಸ್ಫುರತಿ । ತಸ್ಯಾಃ ಸ್ವಪ್ರಕಾಶತ್ವಾತ್ ಅನಂತತ್ವಾತ್ ಅತಿರಹಸ್ಯತ್ವಾತ್ । ಅನ್ಯಥಾ ಕೇನಾಪಿ ವಕ್ತುಂ ಗ್ರಹೀತುಂ ಚಾಶಕ್ಯತ್ವಾದಿತಿ ಭಾವಃ । -ವಿಶ್ವನಾಥಃ

ಭಕ್ತಿಮಾರ್ಗಾನುಸಾರಿಯೋಗಜ ಧರ್ಮೇಣ ಸ್ಮೃತ್ವಾ ಕಥಯ । -ವಲ್ಲಭಚಾರ್ಯಃ

ಎಂಜಲು ಪವಿತ್ರ ಎಂದಿದೆ ಭಾರತ. ಕರು ಎಂಜಲು ಮಾಡಿರುವ ಆಕಳ ಹಾಲು ಪವಿತ್ರ ಎನ್ನುವ ಅಭಿಪ್ರಾಯ ಇಲ್ಲಿ ನಿಗೂಢವಾಗಿದೆ. ವ್ಯಾಸರು ತಮ್ಮ ಸಿದ್ಧಾಂತವನ್ನೆ ಸ್ಪಷ್ಟ ಶಬ್ದಗಳಿಂದ ನಿರೂಪಿಸುವ ಸರಳಶೈಲಿ ಸಮಾಧಿ ಭಾಷೆ. ಉದಾ: ನಾಸ್ತಿ ನಾರಾಯಣ ಸಮಂ, ನ ಭೂತಂ ನ ಭವಿಷ್ಯತಿ' ಎಂದು ಮುಂತಾದುದು. ಭಾರತದಲ್ಲಿ ದರ್ಶನ ಭಾಷೆ ಗುಹ್ಯಭಾಷೆಗಳೂ ಇರುವುದರಿಂದ ಸಾಮಾನ್ಯಜನರಿಗೆ ವ್ಯಾಸರ ಹಾರ್ದ ಏನೆಂದು ತಿಳಿಯುವುದು ಕಷ್ಟವಾಗಿದೆ. ಆದರಿಂದ ಕೇವಲ ಸಮಾಧಿ ಭಾಷೆಯಿಂದಲೆ ಭಕ್ತಿ ಪ್ರಚೋದಕವಾದ ,ಭಾಗವತ ಗ್ರಂಥವನ್ನು ರಚಿಸಿರಿ ಎಂದು ನಾರದರು ಪ್ರಾರ್ಥಿಸುತ್ತಿದ್ದಾರೆ.

ಈ ಅಪೂರ್ವ ಪ್ರಮೇಯ ಬೇರೆ ವ್ಯಾಖ್ಯಾನಕಾರರಿಗೆ ಹೊಳೆಯಲಿಲ್ಲ. 'ಸಮಾಧಿ ಭಾಷೆ' ಒಂದಿದೆ ಎಂದೇ ತಿಳಿದಿಲ್ಲ. ವಲ್ಲಭಾಚಾರ್ಯರು ಮಾತ್ರ 'ಭಾಷಾಸು ತ್ರಿವಿಧಾಃ ಪ್ರೋಕ್ತಾಃ' ಎಂಬ ವ್ಯಾಸವಾಕ್ಯದ ಆಧಾರದಿಂದ ಸಮಾಧಿಭಾಷೆ ಮತಾಂತರಭಾಷೆ ಲೌಕಿಕಭಾಷೆಗಳೆಂದು ಮೂರು ಭಾಷೆಗಳನ್ನು ಒಪ್ಪಿ ಸಮಾಧಿಯಲ್ಲಿ ಅನುಭವದಿಂದ ಕಂಡುಕೊಂಡ ವಿಷಯವನ್ನು ಹೇಳುವುದು ಸಮಾಧಿಭಾಷೆ. ಪರಮತವನ್ನು ಅನುವಾದ ಮಾಡಿದರೆ ಮತಾಂತರ ಭಾಷೆ. ಲೋಕಸಿದ್ಧವಾದ ವಿಷಯವನ್ನು ಹೇಳಿದರೆ ಲೌಕಿಕ ಭಾಷೆ ಎಂದಿದ್ದಾರೆ. (ತತ್ವಾರ್ಥದೀಪನಿಬಂಧ- ಭಾಗವತಾರ್ಥ ಪ್ರಕರಣ ಪ್ರಥಮ ಸ್ಕಂಧಾರ್ಥ ೧೧, ೧೨ನೇ ಶ್ಲೋಕಗಳು)

'ಅನುಸ್ಮರ' ಎಂದರೆ ಆಲೋಚನ ಮಾಡು ಎಂಬ ಅರ್ಥ ಪ್ರಕೃತ ವ್ಯಾಸರ ವಿಷಯದಲ್ಲಿ ಕೂಡುವುದಿಲ್ಲ. 'ಸ್ಮರಣ' ಎಂದರೆ ಗ್ರಂಥರಚನೆ. ಉದಾ: 'ಸ್ಮರಂತಿ ಚ' ಎಂಬ ಬ್ರಹ್ಮಸೂತ್ರ (೨.೩.೪೬, ೩.೧.೧೫, ೪.೧.೧೦) 'ಹೀಗೆ ಸ್ಮೃತಿ ಗ್ರಂಥವಿದೆ' ಎನ್ನುತ್ತ ಸ್ಮೃತಿಗ್ರಂಥ ರಚನೆಯನ್ನು ಸ್ಮರಣ ಎಂದು ಕರೆದಿದೆ. ಆದರಿಂದ 'ಸಮಾಧಿನಾ ಅನುಸ್ಮರ' ಎಂದರೆ ಸಮಾಧಿಭಾಷೆಯಿಂದ ಭಾಗವತವೆಂಬ ಸ್ಮೃತಿಗ್ರಂಥ ರಚಿಸಿರಿ ಎಂದರ್ಥ.

★★★

ಸಾಮಾನ್ಯಜನರು ವಿಷಯಾಸಕ್ತರು. ಅವರಿಗೆ ಮೋಕ್ಷಸಾಧನ ನಿರೂಪಣೆ ರುಚಿಸುವುದಿಲ್ಲ. ನಿಜ. ಆದರೆ ಮೊದಲೇ ವಿಷಯಾಸಕ್ತರಾದವರಿಗೆ ತಿರುಗಿ ಪ್ರವೃತ್ತಿ ಧರ್ಮನಿರೂಪಣ ಮಾಡುವುದು ಮಹಾತ್ಮರಿಗೆ ತಕ್ಕುದಲ್ಲ ಎನ್ನುತ್ತಾರೆ ನಾರದರು—

ಜುಗುಪ್ಸಿತಂ ಧರ್ಮಕೃತೇಽನುಶಾಸನಂ
ಸ್ವಭಾವರಕ್ತಸ್ಯ ಮಹಾನ್ ವ್ಯತಿಕ್ರಮಃ ।
ಯದ್ವಾಕ್ಯತೋ ಧರ್ಮ ಇತೀತರಃ ಸ್ಥಿತೋ
ನ ಮನ್ಯತೇ ತಸ್ಯ ನಿವಾರಣಂ ಜನಃ ॥ ೧೫ ॥

ಸ್ವಾಭಾವಿಕವಾಗಿ ಪ್ರವೃತ್ತಿಧರ್ಮದಲ್ಲಿ ಆಸಕ್ತರಾದವರಿಗೆ ಪುನಃ ಪ್ರವೃತ್ತಿಧರ್ಮವನ್ನೇ ಬೋಧಿಸುವುದು ಅನುಚಿತವಾಗುವುದು. ಯಾರು ನಿಮ್ಮಂಥವರ ಮಾತನ್ನು ನಂಬುತ್ತಾರೆ ಅವರು ಅಡ್ಡದಾರಿ ಹಿಡಿಯುತ್ತಿದ್ದರೆ ಅದನ್ನು ನೀವು ತಡೆಯದಿರುವುದು ಮಹಾಅನ್ಯಾಯವೂ ಹೌದು.

ಇಲ್ಲಿ ಧರ್ಮದಲ್ಲಿ ಆಸಕ್ತರಾದವರಿಗೆ ಧರ್ಮವನ್ನೇ ಬೋಧಿಸುವುದು ಅನುಚಿತವೆಂದು ಹೇಳಿದಂತಿದೆ. ಆದರೆ ನಿವೃತ್ತಿ ಧರ್ಮಬೋಧನೆ ಅನುಚಿತವಲ್ಲ. ಅದು ಮೋಕ್ಷ ಸಾಧನವೆ. ಅದರಿಂದ 'ಧರ್ಮ' ಎಂದರೆ ಇಲ್ಲಿ ಪ್ರವೃತ್ತಿ ಧರ್ಮ ವಿವಕ್ಷಿತ—

ಪ್ರವೃತ್ತಿಧರ್ಮಕೃತೇ ॥

ಪ್ರವೃತ್ತಿ ಧರ್ಮ ಮಾಡಲು ಬೋಧಿಸುವುದು ಅನುಚಿತ ಎಂದೇ ಅರ್ಥವನ್ನು ಗ್ರಹಿಸಬೇಕು.

★★★

ಸಾಂಖ್ಯ ನ್ಯಾಯಾದಿಶಾಸ್ತ್ರವನ್ನು ನಂಬದ ಜನರು ಭಾಗವತವನ್ನು ನಂಬಬಹುದೆ? ಎಂದು ಅನುಮಾನಪಡಬೇಕಾಗಿಲ್ಲ. ಅವರು ವಿವೇಕಿಗಳು. ಭಾಗವತವನ್ನು ಆದರಿಸುತ್ತಾರೆ. ಅದರಿಂದ ಅದನ್ನು ರಚಿಸಿರೆಂದು ನಾರದರು ಪ್ರಾರ್ಥಿಸುತ್ತಾರೆ—

ವಿಚಕ್ಷಣೋಽಸ್ಯಾರ್ಹತಿ ವೇದಿತುಂ ವಿಭೋ-
ರನಂತಪಾರಸ್ಯ ನಿವೃತ್ತಿತಃ ಸುಖಂ ।
ಪ್ರವರ್ತಮಾನಸ್ಯ ಗುಣೈರನಾತ್ಮನ-
ಸ್ತತೋ ಭವಾನ್ ದರ್ಶಯ ಚೇಷ್ಟಿತಂ ವಿಭೋಃ ॥ ೧೬ ॥

ಮನೋನಿಗ್ರಹವಿಲ್ಲದೆ ವಿಷಯಸುಖವನ್ನರಸಿ ಹೋಗುವವರೂ ವೈರಾಗ್ಯ ಹೊಂದಿ, ಗುಣಪೂರ್ಣನಾದ ದೇಶಕಾಲಗಳ ಮಿತಿಯೂ ಇಲ್ಲದ ಹರಿಯ ಅನುಗ್ರಹದಿಂದ ಲಭಿಸುವ ಮೋಕ್ಷಸುಖವನ್ನೆ ಪುರುಷಾರ್ಥವೆಂದು ಭಾಗವತದಿಂದ ತಿಳಿಯಬಲ್ಲರು. ಏಕೆಂದರೆ ಸಾಂಖ್ಯನ್ಯಾಯವೈಶೇಷಿಕಾದಿ ಶಾಸ್ತ್ರಗಳನ್ನು ಅನಾದರಣೀಯವೆಂದೂ ಭಗವಂತನ ವಚನ ಆದರಣೀಯವೆಂದೂ ಸರಿಯಾಗಿಯೆ ತಿಳಿದ ಬುದ್ಧಿವಂತರೆ ಅವರು. ಅದರಿಂದ ಅವರಿಗಾಗಿ ಭಗವಂತನ ಲೀಲೆಯನ್ನು ಭಾಗವತಗ್ರಂಥದಲ್ಲಿ ತೋರಿಸಿರಿ.

ಇಲ್ಲಿ 'ಅನಂತಪಾರಸ್ಯ ವಿಭೋಃ ಸುಖಂ' ಎಂದರೆ ಗುಣಪೂರ್ಣನೂ ದೇಶಕಾಲಾತೀತನೂ ಆದ ಪರಮಾತ್ಮನ ಸುಖವನ್ನೇ ಜನರು ಪುರುಷಾರ್ಥವೆಂದು

ಭಾಗವತನಿಂದ ತಿಳಿಯಬಲ್ಲರು. ಅಂದರೆ, ಜೀವಬ್ರಹ್ಮರಿಗೆ ಐಕ್ಯವಿರುವುದರಿಂದ ಬ್ರಹ್ಮಾನಂದವನ್ನು ಸಂಪಾದಿಸುವುದೇ ಜೀವನಿಗೆ ಪರಮಪುರುಷಾರ್ಥವೆಂದು ಭಾಗವತ ಹೇಳುತ್ತಿದೆ ಎಂದು ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ.[೧] ಅದು ಕೂಡದು. ಪರಮಾತ್ಮನ ಸುಖವೆಂದರೆ ಪರಮಾತ್ಮನ ಅನುಗ್ರಹದಿಂದ ಜೀವನಿಗೆ ಲಭಿಸುವ ಸುಖ. ಜೀವನಿಗೆ ಜೀವನ ಸ್ವರೂಪಭೂತ ಸುಖವೆ ಲಭಿಸುತ್ತದೆ.

ಅನಂತಪಾರಸ್ಯ ವಿಭೋಃ ಸಕಾಶಾದ್ ಯತ್ ಸುಖಂ ।

ದೇಶಕಾಲಾತೀತ ಗುಣಪೂರ್ಣ ಪರಮಾತ್ಮನಿಂದ ಜೀವನಿಗೆ ಬರುವ ಸುಖವೇ ಇಲ್ಲಿ 'ಅನಂತಪಾರಸ್ಯ ವಿಭೋಃ ಸುಖಂ' ಎಂದು ಉಕ್ತವಾಗಿದೆ.

★★★

'ಸರ್ವಂ ಖಲ್ವಿದಂ ಬ್ರಹ್ಮ' ಎಂದು ಮುಂತಾಗಿ ವೇದದಲ್ಲಿ ಪ್ರಪಂಚಕ್ಕೆ ಬ್ರಹ್ಮಾಭೇದವನ್ನು ಹೇಳಿದಂತೆ ಕಂಡರೂ ಅವನ ಅಧೀನವಾದ ಪ್ರಪಂಚವನ್ನು ಅವನೇ ಎಂದು ಹೇಳುವ ಅಭಿಪ್ರಾಯದಲ್ಲಿ ಆ ಮಾತನ್ನು ಗ್ರಹಿಸಬೇಕು ಎಂದು ಭಾಗವತದಲ್ಲಿ ತಿಳಿಸಲು ನಾರದರು ಪ್ರಾರ್ಥಿಸುತ್ತಾರೆ—

ಇದಂ ಹಿ ವಿಶ್ವಂ ಭಗವಾನಿವೇತರೋ
ಯತೋ ಜಗತ್‌ಸ್ಥಾನನಿರೋಧಸಂಭವಃ ।
ತದ್ಧಿ ಸ್ವಯಂ ವೇದ ಭವಾಂಸ್ತಥಾಪಿ
ಪ್ರಾದೇಶಮಾತ್ರಂ ಭವತಃ ಪ್ರದರ್ಶಿತಂ ॥ ೨೦ ॥

ಪ್ರಪಂಚದ ಸ್ಥಿತಿ ಲಯ ಉತ್ಪತ್ತಿಗಳು ಪರಮಾತ್ಮನ ಅಧೀನವಾದ್ದರಿಂದ ಅವನು ಪ್ರಪಂಚಕ್ಕಿಂತ ಭಿನ್ನನೇ ಆಗಿದ್ದೂ ಪ್ರಪಂಚರೂಪನೆಂಬಂತೆ ವೇದದಲ್ಲಿ ಉಕ್ತನಾಗುತ್ತಾನೆ. ಅದನ್ನು ತಾವು ಸ್ವತಃ ತಿಳಿದೇ ಇರುವಿರಿ. ನಾನು ಲೋಕಶಿಕ್ಷಣಕ್ಕಾಗಿ ನಿಮ್ಮ ಮುಂದೆ ಸ್ವಲ್ಪ ಮಾತ್ರ ಹೇಳಿದ್ದೇನೆ. ಅದನ್ನು ಭಾಗವತದಲ್ಲಿ ವಿಶದಪಡಿಸಬೇಕು.

ಈ ಶ್ಲೋಕದಲ್ಲಿ 'ಈ ಪ್ರಪಂಚ ಭಗವತ್‌ಸ್ವರೂಪವೆ. ಅವನಿಗಿಂತ ಭಿನ್ನನಂತೆ ಕಾಣುವ ಜೀವನೂ ಅವನೇ. ಚೇತನಾಚೇತನ ಪ್ರಪಂಚ ಯಾವುದೂ ಅವನಿಂದ ಬೇರೆಯಲ್ಲ. ಅವನೊಬ್ಬನೆ ಸತ್ಯ. ಬೇರೆ ಎಲ್ಲವೂ ಮಿಥ್ಯ' ಎಂದು ಶ್ರೀಧರ ವ್ಯಾಖ್ಯಾನ.

---

೧. ಸಾಂತಾದಲ್ಪಪ್ರಮಾಣಾಚ್ಚ ವಿಷಯಸುಖಾನ್ನಿವೃತ್ಯ ಅನಂತಮಪಾರಪ್ರಮಾಣಂ ಚ ವಿಭೋಃ ಸುಖಂ ವಿದಿತ್ವಾ ತದರ್ಥಂ ಭಕ್ತಿಂ ಕರ್ತುಮರ್ಹತೀತಿ ಭಾವಃ । -ವಿಶ್ವನಾಥ ಚಕ್ರವರ್ತೀ

ಪರಮಾತ್ಮ ಪ್ರಪಂಚಸ್ವರೂಪನೂ ಹೌದು ಅದಕ್ಕಿಂತ ವಿಲಕ್ಷಣನೂ ಹೌದು. ಏಕೆಂದರೆ ಅವನು ಪ್ರಪಂಚಕ್ಕೆ ಉಪಾದಾನ ಕಾರಣ ನಿಮಿತ್ತಕಾರಣ ಎರಡೂ ಆಗಿದ್ದಾನೆ. ಇದು ಅವನ ಸರ್ವಶಕತ್ತ್ವ ಮೋಕ್ಷದಾಯಕತ್ವ ಮುಂತಾದ ಗುಣಪೂರ್ಣತ್ವಕ್ಕೆ ಸಾಕ್ಷಿಯಾಗಿದೆ ಎಂದು ವೀರರಾಘವ ವ್ಯಾಖ್ಯಾನ.[೧] ಇವೆರಡೂ ಸರಿಯಲ್ಲ. ಜಗತ್ತಿಗೆ ಪರಮಾತ್ಮನಿಂದಲೆ ಉತ್ಪತ್ತಿ ಸ್ಥಿತಿ ಲಯಗಳಾಗುತ್ತವೆ ಎಂದು ಹೇಳುವ ಮೂಲಕ ಜಗತ್ತಿಗೂ ಪರಮಾತ್ಮನಿಗೂ ಭೇದವೆ ಈ ಶ್ಲೋಕದಲ್ಲಿ ಉಕ್ತವಾಗಿದೆ. ಅದರಿಂದ ಶ್ರುತಿಯಲ್ಲಿ ಕೆಲವೆಡೆ ಅಭೇದವನ್ನು ಹೇಳುವುದು 'ಪರಮಾತ್ಮ ಸ್ವತಂತ್ರ; ಜಗತ್ತು ಅವನ ಅಧೀನ'ವೆಂದು ಹೇಳುವ ವೈಖರಿಯಷ್ಟೆ—

ಇತರೋಽಪಿ ಭಗವಾನ್ ವಿಶ್ವಮಿವ, ಸ್ವಾತಂತ್ರ್ಯಾತ್ ।

ಪರಮಾತ್ಮ ಜಗತ್ತಿಗಿಂತ ವಿಲಕ್ಷಣನೇ ಆದರೂ ಜಗತ್ತೇ ಎಂಬಂತೆ ಶ್ರುತಿಯಲ್ಲಿ ಉಕ್ತನಾಗಿದ್ದಾನೆ ಹೊರತು ಜಗದ್ರೂಪನೆ ಆಗಿದ್ದಾನೆ ಎಂದಲ್ಲ. ಏಕೆಂದರೆ ಅವನು ಸ್ವತಂತ್ರ, ಜಗತ್ತು ಅವನ ಅಧೀನ.

★★★

ನಾರದರು ತಮ್ಮ ಪೂರ್ವಜನ್ಮ ವೃತ್ತಾಂತವನ್ನು ವೇದವ್ಯಾಸರ ಮುಂದೆ ಹೇಳುತ್ತಾರೆ- ನಾನು ದಾಸೀಪುತ್ರನಾಗಿ ಹುಟ್ಟಿ ಯತಿಗಳ ಸೇವೆ ಮಾಡಿದಾಗ ಪರಮಾತ್ಮ ತತ್ವಜ್ಞಾನ ಲಭಿಸಿತು—

ತಸ್ಮಿಂಸ್ತದಾ ಲಬ್ಧರುಚೇರ್ಮಹಾಮತೇ
ಪ್ರಿಯಶ್ರವಸ್ಯಸ್ಖಲಿತಾ ಮತಿರ್ಮಮ ।
ಯಯಾಽಹಮೇತತ್ ಸದಸತ್ ಸ್ವಮಾಯಯಾ
ಪಶ್ಯೇ ಮಯಿ ಬ್ರಹ್ಮಣಿ ಕಲ್ಪಿತಂ ಪರೇ ॥ ೨೭ ॥

ಮಹಾಮುನಿಯೆ, ಪ್ರಿಯವಾದ ಕೀರ್ತಿಯುಳ್ಳ ಶ್ರೀಹರಿಯಲ್ಲಿ ನನಗೆ ಆಸಕ್ತಿ ಮೂಡಿದಾಗ ಅವನ ಬಗ್ಗೆ ಸ್ಥಿರವಾದ ಜ್ಞಾನ ಮೂಡಿತು. ಅದರಿಂದ ಈ ಕಾರ್ಯಕಾರಣರೂಪ ಪ್ರಪಂಚವೆಲ್ಲವೂ ನನ್ನೊಳಗಿರುವ ಆ ಹರಿಯಲ್ಲಿ ಅವನಿಚ್ಛೆಯಿಂದಲೆ ನಿಂತಿದೆ ಎಂದು ತಿಳಿದುಕೊಂಡೆ.

---

೧. ಇದಂ ವಿಶ್ವಂ ಭಗವಾನ್ । ಇತರ ಇವ ಯಃ ಸ ಜೀವೋಽಪಿ ಭಗವಾನ್ । ಚೇತನಾಚೇತನ ಪ್ರಪಂಚಸ್ತದ್‌ವ್ಯತಿರೇಕೇಣ ನಾಸ್ತಿ । ಸ ಏವೈಕಸತ್ತ್ವಮಿತ್ಯರ್ಥಃ । ಹಿಶಬ್ದೇನ ಸರ್ವಂ ಖಲ್ವಿದಂ ಬ್ರಹ್ಮೇತ್ಯಾದಿ ಪ್ರಮಾಣಂ ಸೂಚಿತಂ । -ಶ್ರೀಧರಃ

ಸ ಭಗವಾನ್ ವಿಶ್ವಾಭಿನ್ನೋಽಪಿ ವಿಶ್ವವಿಲಕ್ಷಣ ಇತ್ಯರ್ಥಃ । ಏವಂ ಜಗದುಪಾದಾನತ್ವಂ ಜಗನ್ನಿಮಿತ್ತತ್ವಂ ತದುಭಯಾಕ್ಷಿಪ್ತಂ ಸರ್ವಶಕ್ತಿತ್ವಂ । -ವೀರರಾಘವಃ

ಇಲ್ಲಿ 'ಪರೇ ಬ್ರಹ್ಮಣಿ ಮಯಿ ಸ್ವಮಾಯಯಾ ಕಲ್ಪಿತಂ' ಎಂಬ ಮಾತಿನಿಂದ ಪರಬ್ರಹ್ಮ ಸ್ವರೂಪನಾದ ನನ್ನಲ್ಲಿ ನನ್ನ ಅವಿದ್ಯೆಯಿಂದ ಪ್ರಪಂಚ ಕಲ್ಪಿತವಾಗಿದೆ' ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಶ್ರೀಧರ ವ್ಯಾಖ್ಯಾನವಿದೆ.[೧] ಅದು ಸರಿಯಲ್ಲ. ಹಿಂದಿನ ಪದ್ಯದಲ್ಲಿ ಯತಿಗಳು ಕೃಷ್ಣಕಥೆಯನ್ನು ಹೇಳಿದಾಗ ಅದನ್ನು ಕೇಳಿ ಈ ಜ್ಞಾನವನ್ನು ಪಡೆದೆನೆನ್ನುತ್ತಾರೆ ನಾರದರು. ಕೃಷ್ಣಕಥೆಯಿಂದ ಅದ್ವೈತಜ್ಞಾನ ಬರಲಾರದು. ಅದರಿಂದ, ದ್ವೈತಜ್ಞಾನವೇ ಬಂದಿದೆ—

ಮಯಿ ಸ್ಥಿತೇ ಬ್ರಹ್ಮಣಿ ಸ್ಥೀಯತಾಮತ್ರೇತೀಶ್ವರೇಚ್ಛಯಾ ಪರಿಕಲ್ಪಿತಂ ।

ನನ್ನಲ್ಲಿ ನಿಯಾಮಕನಾಗಿರುವ ಪರಮಾತ್ಮನಲ್ಲಿ, ಜಗತ್ತು ತನ್ನಲ್ಲಿ ಇರಲೆಂಬ ಅವನ ಸಂಕಲ್ಪದಿಂದ ಇರಿಸಲ್ಪಟ್ಟ ಜಗತ್ತನ್ನು ನಾನು ತಿಳಿದೆ.

'ಮಯಿ ಬ್ರಹ್ಮಣಿ' ಎಂಬಲ್ಲಿ ಮಯಿ ಎಂಬ ಸಪ್ತಮೀವಿಭಕ್ತಿ ವಿಶೇಷಣ ವಿಭಕ್ತಿಯಲ್ಲ, ಅಧಿಕರಣಾರ್ಥಕ. ಅದಕ್ಕೆ ಸ್ಥಿತೇ ಎಂದು ಕ್ರಿಯಾಧ್ಯಾಹಾರ ಮಾಡಿಕೊಳ್ಳಬೇಕು.

★★★

ವ್ಯಾಸರೆ, ನೀವು ಸಾಕ್ಷಾದ್ ಭಗವಂತನೆ ಆಗಿದ್ದು, ನಿಮಗೆ ಪ್ರಯೋಜನವಿಲ್ಲದಿದ್ದರೂ ಜನರ ದುಃಖಶಾಂತಿಗಾಗಿ ಕರುಣೆಯಿಂದ ಭಗವಂತನ ಮಹಿಮೆಯನ್ನು ನೀವು ಭಾಗವತದಲ್ಲಿ ಹೊಗಳಬೇಕು ಎನ್ನುತ್ತಾರೆ ನಾರದರು—

ತ್ವಮಪ್ಯದಭ್ರಶ್ರುತ ವಿಶ್ರುತಂ ವಿಭೋ
ಸಮಾಪ್ಯತೇ ಯೇನ ವಿದಾಂ ಬುಭುತ್ಸಿತಂ ।
ಪ್ರಖ್ಯಾಹಿ ದುಃಖೈರ್ಮುಹುರರ್ದಿತಾತ್ಮನಾಂ
ಸಂಕ್ಲೇಶನಿರ್ವಾಣಮುಶಂತಿ ನಾನ್ಯಥಾ **॥ ೪೦ ॥**

ಮಹಾತ್ಮರಿಗೂ ತತ್ತ್ವೋಪನೀಡುವ ವೇದವ್ಯಾಸರೆ, ತಾವು ಸಾಕ್ಷಾತ್ ಪರಮಾತ್ಮನೆ ಆಗಿದ್ದರೂ ವೇದಾದಿ ಪ್ರಸಿದ್ಧವಾದ ಪರಮಾತ್ಮನ ಮಹಿಮೆಯನ್ನು ಹೇಳುವ ಭಾಗವತವನ್ನು ರಚಿಸಿರಿ, ನಾನಾ ದುಃಖಗಳಿಂದ ಮತ್ತೆ ಮತ್ತೆ ಪೀಡಿತರಾಗುತ್ತಿರುವ ಜಿಜ್ಞಾಸುಗಳಿಗೆ ಆ ಗ್ರಂಥದಿಂದ ತಾವು ತಿಳಿಯಬಯಸಿದ್ದನ್ನೆಲ್ಲ ತಿಳಿಯಲು

---

೧. ಯಯಾ ಮತ್ಯಾ ಪರೇ ಪ್ರಪಂಚಾತೀತೇ ಬ್ರಹ್ಮರೂಪೇ ಮಯಿ ಸದಸತ್ ಸ್ಥೂಲಂ ಸೂಕ್ಷ್ಮಂ ಚೈತಚ್ಛರೀರಂ ಸ್ವಮಾಯಯಾ ಸ್ವಾವಿದ್ಯಯಾ ಕಲ್ಪಿತಂ । ನತು ವಸ್ತುತೋಽಸ್ತೀತಿ ಪಶ್ಯಾಮಿ । -ಶ್ರೀಧರಃ

ಸಾಧ್ಯವಾಗುತ್ತದೆ. ಅವರು ಬೇರೆ ಯಾವ ರೀತಿಯಿಂದಲೂ ದುಃಖ ಪರಿಹಾರ ಮಾಡಿಕೊಳ್ಳಲಾರರು.

ಈ ಶ್ಲೋಕದಲ್ಲಿ 'ನೀವೂ ಪರಮಾತ್ಮನ ಮಹಿಮೆಯನ್ನು ಹೇಳಿರಿ' ಎಂದರೆ, 'ನಾನು ಪರಮಾತ್ಮನ ಮಹಿಮೆಯನ್ನು ಜನರಿಗೆ ಉಪದೇಶಿಸಿದ್ದರಿಂದಲೆ ಪರಮಾತ್ಮ ನನಗೆ ಯೋಗ್ಯವಾದ ತತ್ವಜ್ಞಾನಾದಿಗಳನ್ನು ನೀಡಿದ್ದಾನೆ. ಅದರಿಂದ ನೀವೂ ಹಾಗೇ ಮಾಡಿರಿ' ಎಂದು ನಾರದರು ವ್ಯಾಸರಿಗೆ ಉಪದೇಶಿಸುತ್ತಾರೆ, ಶ್ರೀಧರ ವ್ಯಾಖ್ಯಾನದಲ್ಲಿ. ವಲ್ಲಭಾಚಾರ್ಯವ್ಯಾಖ್ಯಾನದಲ್ಲಿಯೂ 'ನಾನು ಪರಮಾತ್ಮನ ಮಹಿಮೆಯನ್ನು ಹೊಗಳುವ ಮೂಲಕ ಅವನ ಆಜ್ಞೆಯನ್ನು ಹೇಗೆ ಪಾಲಿಸಿರುವೆನೋ ಹಾಗೇ ನೀವೂ ಕೂಡ ಪಾಲಿಸಬೇಕು' ಎನ್ನುತ್ತಾರೆ ![೧] ಆದರೆ 'ತ್ವಮಪಿ' ಎಂದರೆ ಇಲ್ಲಿ ನನ್ನ ಹಾಗೆ ನೀನೂ ಕೂಡ' ಎಂದರ್ಥವಲ್ಲ. ನಾರದರಿಗೆ ವ್ಯಾಸರು ಸಾಕ್ಷಾದ್ ಭಗವಂತನೆಂಬ ಪ್ರಜ್ಞೆ ಸದಾ ಇದ್ದಿದ್ದರಿಂದ ಬುದ್ಧಿಸ್ಥವಾದುದನ್ನು ಹೇಳುವ ಸರ್ವನಾಮವಾದ ತ್ವಂ ಶಬ್ದದಿಂದ 'ಭಗವಂತನಾದ ನೀನೂ ಕೂಡ, ನೀನು ಭಗವಂತನಾಗಿದ್ದರೂ ಕೂಡ' ಎಂದು ಹೇಳುತ್ತಿದ್ದಾರೆ—

ತ್ವಮೀಶ್ವರೋಽಪಿ ।

'ತ್ವಮಪಿ' ಎಂದರೆ 'ನೀನು ಭಗವಂತನೆ ಆಗಿದ್ದರೂ' ಎಂದರ್ಥ. 'ನೀನೂ ಕೂಡ' ಎಂದರ್ಥವಲ್ಲ.

ಇತಿ ಪ್ರಥಮಸ್ಕಂಧೇ ಪಂಚಮೋಽಧ್ಯಾಯಃ

ಆರನೆಯ ಅಧ್ಯಾಯ

ಅಧ್ಯಾಯ ಸಾರಾಂಶ

ನಾರದರು ತಮ್ಮ ಪೂರ್ವಜನ್ಮದ ವೃತ್ತಾಂತವನ್ನು ಮುಂದುವರಿಸಿ ಹೇಳಿದರು. ನನ್ನ ತಾಯಿ ಒಂದುದಿನ ರಾತ್ರಿಯ ಕತ್ತಲಲ್ಲಿ ಹಾಲು ಕರೆಯಲು ಹೊರಟು ದಾರಿಯಲ್ಲಿ ಹಾವನ್ನು ತುಳಿದಳು. ಅದೇ ಅವಳಿಗೆ ಮೃತ್ಯುವಾಯಿತು. ಮೊದಲೆ ವಿರಕ್ತನಾಗಿದ್ದ ನನಗೆ ತಪ್ಪಿಸಿಕೊಳ್ಳಲಾಗದಿದ್ದ ಒಂದೇ ಒಂದು ಇಹದ ಬಂಧನ ಹೀಗೆ ಹರಿದುಹೋಯಿತು.

---

೧. ಏವಂ ಕೃತವತಿ ಮಯಿ ಹರಿಃ ಸ್ವಸದೃಶಂ ಜ್ಞಾನಾದಿಕಂ ದತ್ತವಾನ್ । ಅತಸ್ತ್ವಮಪ್ಯೇವಂ ಕುರು । -ಶ್ರೀಧರಃ

ಯಥಾ ಮಯಾ ತಸ್ಯಾಜ್ಞಾ ಪರಿಪಾಲಿತಾ ತಥಾ ತ್ವಮಪಿ ಪರಿಪಾಲಯ । -ವಲ್ಲಭಾಚಾರ್ಯಃ

ನಾನು ಏಕಾಂಗಿಯಾಗಿ ಅಲೆಯುತ್ತ ಕಾಡನ್ನು ಸೇರಿದೆ. ಹಸಿವು ಬಾಯಾರಿಕೆಗಳಿಂದ ದಣಿವಿಂದ ಬಳಲಿದ್ದ ನಾನು ಒಂದು ಮಡುವಿನಲ್ಲಿ ಮಿಂದು ನೀರು ಕುಡಿದು ಅರಳಿಗಿಡದ ಕೆಳಗೆ ಕುಳಿತು ಧ್ಯಾನಸ್ಥನಾದೆ. ಆಗ ಹೃದಯದಲ್ಲಿ ಹರಿ ಮೈದೋರಿದ. ನನಗೆ ಪರಮಾನಂದವಾಯಿತು. ಆದರೆ ಕ್ಷಣದಲ್ಲಿ ಹರಿ ಮರೆಯಾಗಿ ಹೋದ. ತಿರುಗಿ ಅವನನ್ನು ಕಾಣುವ ತವಕದಿಂದ ನಾನು ಅತ್ತು ಅತ್ತು ಹುಚ್ಚನಂತೆ ಅಲೆಯತೊಡಗಿದೆ. ಆಗ ಹರಿ ಅದೃಶ್ಯನಾಗಿಯೆ ನುಡಿದ. ನನ್ನ ದರ್ಶನದ ತವಕ ನಿನಗೆ ಹೀಗೆ ಉಂಟಾಗಲೆಂದೇ ಒಮ್ಮೆ ನಿನಗೆ ದರ್ಶನ ನೀಡಿದ್ದೇನೆ. ಇನ್ನು ನೀನು ಶರೀರತ್ಯಾಗ ಮಾಡಿ ಮುಂದಿನ ಕಲ್ಪದಲ್ಲಿ ಬ್ರಹ್ಮಪುತ್ರನಾಗಿ ಜನಿಸಿದಾಗ ಪರಮಭಾಗವತನೆನಿಸುವಿ. ಆಗ ಪೂರ್ವಜನ್ಮದ ಸ್ಮರಣೆ ನಿನಗೆ ನನ್ನ ಅನುಗ್ರಹದಿಂದ ಇರುತ್ತದೆ' ಎಂದು. ನಾನು ಭಗವಂತನಿಗೆ ತಲೆಬಾಗಿದೆ. ಬಳಿಕ ಶರೀರತ್ಯಾಗ ಮಾಡಿ ಕಲ್ಪಾಂತ್ಯದಲ್ಲಿ ಬ್ರಹ್ಮ ಹರಿಯ ಉದರವನ್ನು ಪ್ರವೇಶಿಸುವಾಗ ಬ್ರಹ್ಮನ ಉದರವನ್ನು ಹೊಕ್ಕೆ. ಲಯಕಾಲ ಕಳೆದಾಗ ಸೃಷ್ಟಿಯ ಪ್ರಾರಂಭದಲ್ಲಿ ಬ್ರಹ್ಮದೇವರ ತೊಡೆಯಿಂದ ಜನಿಸಿದೆ. ದೇವದತ್ತ ಎಂಬ ಈ ವೀಣೆಯನ್ನು ನುಡಿಸುತ್ತ ಹರಿಕಥೆಯನ್ನು ಹಾಡುತ್ತಿದ್ದರೆ ಕರೆದಾಗ ಓಗೊಟ್ಟು ಬರುವಂತೆ ಹರಿ ಬೇಗನೆ ನನ್ನ ಹೃದಯದಲ್ಲಿ ಮೈದೋರುತ್ತಾನೆ. ಅವನ ಗುಣಗಾನವೆ ಅಜ್ಞರನ್ನು ಸಂಸಾರ ಸಮುದ್ರದಿಂದ ದಾಟಿಸುವ ನೌಕೆಯಾಗುವುದು ನನ್ನ ಅನುಭವದಲ್ಲಿ ಸಿದ್ಧವಾಗಿದೆ. ಆದರಿಂದ ಬಾದರಾಯಣರೆ ತಾವು ಅಜ್ಞಾನಿಗಳ ಉದ್ಧಾರಕ್ಕಾಗಿ ಹರಿಯ ಗುಣಗಾನಗೈವ ಭಾಗವತವನ್ನು ರಚಿಸಿರಿ.

★★★

ನಾರದರು ಪೂರ್ವಜನ್ಮದಲ್ಲಿ ದಾಸೀಪುತ್ರರಾಗಿ ಜನಿಸಿ ಐದು ವರ್ಷದ ಬಾಲಕರಾಗಿದ್ದಾಗ ಯತಿಗಳ ಸೇವೆ ಮಾಡುತ್ತಿದ್ದರು. ಆಗ ಅವರ ತಾಯಿ ಸರ್ಪಕಚ್ಚಿ ಮೃತಳಾದಳು. ಅಂತ್ಯೇಷ್ಟಿಯನ್ನು ಮುಗಿಸಿ ಬಾಲಕ ಸರ್ವಸಂಗತ್ಯಾಗಮಾಡಿ ಉತ್ತರದಿಕ್ಕಿಗೆ ಪ್ರಯಾಣ ಬೆಳೆಸಿದೆನೆಂದು ಹೇಳುತ್ತ ವೇದವ್ಯಾಸರಿಗೆ ನಾರದರು ತಮ್ಮ ಪೂರ್ವಜನ್ಮ ವೃತ್ತಾಂತವನ್ನು ಅರಿಕೆ ಮಾಡಿಕೊಂಡರು—

ಸ್ಫೀತಾನ್ ಜನಪದಾಂಸ್ತತ್ರ ಪುರಗ್ರಾಮ ವ್ರಜಾಕರಾನ್ ।
ಖೇಟಾನ್ ಪಟ್ಟನವಾಟೀಶ್ಚ ವನಾನ್ಯುಪವನಾನಿ ಚ ॥ ೧೧ ॥

ಸ್ಫೀತಾನ್-ಸಮೃದ್ಧವಾದ, ಜನಪದಾನ್-ದೇಶಗಳನ್ನೂ, ಪುರ-ರಾಜಧಾನಿ, ಗ್ರಾಮ-ಬಹುಜನರ ಆವಾಸಸ್ಥಾನ, ವ್ರಜ-ಗೊಲ್ಲರಹಳ್ಳಿ, ಆಕರಾನ್-ರತ್ನಾದಿಗಳ ಉತ್ಪತ್ತಿ ಸ್ಥಾನಗಳನ್ನೂ ಖೇಟಾನ್-ಬೇಡರ ವಾಸಸ್ಥಾನಗಳನ್ನೂ ಪಟ್ಟನ-ವಿಸ್ತಾರವಾಗಿ ಜಲಸ್ಥಲಉಳ್ಳ ಪ್ರದೇಶ, ವಾಟೀಃ-ಹೂವಾಡಿಗರ ವಾಸಸ್ಥಾನಗಳನ್ನೂ ವನ-ಕಾಡುಗಳು ಉಪವನಾನಿ-ಉದ್ಯಾನಗಳನ್ನೂ ದಾಟಿ ಮುಂದೆ ನಡೆದೆನು.

ಮೃಗಯಾಜೀವಿನಾಂ ಖೇಟೋ ವಾಟೀ ಪುಷ್ಪೋಪಜೀವಿನಾಂ ।
ಗ್ರಾಮೋ ಬಹುಜನಾಕೀರ್ಣೋ ರಾಜರಾಜಾಶ್ರಯಂ ಪುರಂ ।
ಜಲಸ್ಥಲಾಯತಿ ಸ್ಫೀತಂ ಪತ್ತನಂ ಕೀರ್ತ್ಯತೇ ಬುಧೈಃ ॥

ಇತಿ ಸ್ಕಾಂದೇ ॥

ಬೇಟೆಯಿಂದ ಬದುಕುವವರಿರುವ ಸ್ಥಳ ಖೇಟ. ಹೂಗಳಿಂದ ಜೀವನ ಮಾಡುವವರ ಸ್ಥಳ ವಾಟೀ. ಬಹುಜನರ ವಾಸಸ್ಥಾನ ಗ್ರಾಮ. ರಾಜಾಧಿರಾಜರಿರುವ ಸ್ಥಳ ಪುರ. ವಿಸ್ತಾರವಾದ ಜಲಸ್ಥಲಗಳುಳ್ಳ ಸಮೃದ್ಧವಾದ ಪ್ರದೇಶ ಪತ್ತನ ಎನಿಸುತ್ತದೆ ಎಂದು ಸ್ಕಾಂದಪುರಾಣದಲ್ಲಿ ಉಕ್ತವಾಗಿದೆ.

★★★

ಹೀಗೆ ಜನಪದ ಪುರ ಗ್ರಾಮ ಮುಂತಾದುವನ್ನು ದಾಟಿ ಬಾಲಕ ಒಂದು ಗೊಂಡಾರಣ್ಯವನ್ನು ಪ್ರವೇಶಿಸಿ ಹಸಿದು ಬಸವಳಿದು ನದಿಯಲ್ಲಿ ಮಿಂದು ಜಲಪಾನ ಮಾಡಿ ಅಶ್ವತ್ಥವೃಕ್ಷದ ಬುಡದಲ್ಲಿ ಕುಳಿತು ಭಗವಂತನನ್ನು ಧ್ಯಾನಿಸಿದಾಗ ಅಪರೋಕ್ಷ ಲಭಿಸಿತು. ಆಗಿನ ತನ್ನ ಅವಸ್ಥೆಯನ್ನು ನಾರದರು ವೇದವ್ಯಾಸರಿಗೆ ತಿಳಿಸುತ್ತಾರೆ—

ಪ್ರೇಮಾತಿಭರನಿರ್ಭಿನ್ನ ಪುಲಕಾಂಗೋಽತಿನಿರ್ವೃತಃ ।
ಆನಂದಸಂಪ್ಲವೇ ಲೀನೋ ನಾಪಶ್ಯಮುಭಯಂ ಮುನೇ ॥ ೨೧ ॥

ಭಕ್ತಿಯ ಉದ್ರೇಕದಿಂದ ರೋಮಾಂಚಗೊಂಡೆ, ಪರಮಾನಂದ ಪಡೆದೆ. ಆನಂದದ ಸಾಗರದಲ್ಲಿ ಮುಳುಗಿದೆ. ಪರಮಾತ್ಮನನ್ನು ಹೊರತು ಇನ್ನೇನನ್ನೂ ಕಾಣದಾದೆ.

ಇಲ್ಲಿ 'ಉಭಯಂ ನಾಪಶ್ಯಂ' ಎರಡನ್ನೂ ಕಾಣದಾದೆನೆಂದು ಹೇಳಿದಂತೆ ಕಾಣುತ್ತದೆ. 'ತಾನು ಮತ್ತು ಭಗವಂತ ಎಂದು ಎರಡನ್ನೂ ಎಂದರೆ ಇಬ್ಬರೊಳಗೆ ಭೇದವನ್ನು ನೋಡಲಿಲ್ಲ' ಎಂದೇ ಎಲ್ಲ ಬೇರೆ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ.[೧] ವಸ್ತುತಃ ಎರಡನ್ನೂ ಎಂದರೆ ಎರಡನೆಯದನ್ನು, ಪರಮಾತ್ಮನನ್ನು ಹೊರತು ಅವನಿಗಿಂತ ಎರಡನೆಯದಾದ ಬಾಹ್ಯಪ್ರಪಂಚವನ್ನು ನೋಡಲಿಲ್ಲ ಎಂದರ್ಥ—

ಉಭಯಂ ದ್ವಿತೀಯಂ ನಾಪಶ್ಯಂ ತಮೇವಾಪಶ್ಯಂ ।

---

೧. ಉಭಯಮಾತ್ಮಾನಂ ಪರಂ ಚ । -ಶ್ರೀಧರಃ
ಉಭಯಂ ಧ್ಯಾತೃಧ್ಯೇಯಯುಗ್ಮಂ । -ಶುಕದೇವಃ
ಆತ್ಮಾನಂ ಭಗವಂತಂ ಚೋಭಯಂ । -ವಲ್ಲಭಾಚಾರ್ಯಃ

'ಉಭಯಂ' ಎಂದರೆ ಬೇರೆ ಪ್ರಪಂಚವನ್ನು ನೋಡಲಿಲ್ಲ, ಭಗವಂತನನ್ನೇ ನೋಡಿದೆ ಎಂದರ್ಥ.

ಇತಿ ಪ್ರಥಮಸ್ಕಂಧೇ ಷಷ್ಠೋಽಧ್ಯಾಯಃ

ಏಳನೆಯ ಅಧ್ಯಾಯ

ಅಧ್ಯಾಯ ಸಾರಾಂಶ

ನಾರದರ ಪ್ರಾರ್ಥನೆಯಂತೆ ವೇದವ್ಯಾಸರು ಶಮ್ಯಾಪ್ರಾಸವೆಂಬ ತಮ್ಮ ಆಶ್ರಮದಲ್ಲಿ ಭಾಗವತವನ್ನು ರಚಿಸಿ ಶುಕಮುನಿಗಳಿಗೆ ಉಪದೇಶಿಸಿದರು. ಶುಕಮುನಿಗಳಿಗೆ ಯಾವುದರಲ್ಲಿಯೂ ಆಸಕ್ತಿ ಇರಲಿಲ್ಲ. ಆದರೂ ಭಗವಂತನ ಗುಣಗಳಲ್ಲಿ ವಿರಕ್ತರನ್ನೂ ಸೆಳೆಯುವ ಶಕ್ತಿ ಇರುವುದರಿಂದ ಭಗವಂತನ ಗುಣಗಾನ ಮಾಡುವ ಭಾಗವತದ ಅಧ್ಯಯನದಲ್ಲಿ ಶುಕಮುನಿ ಆಕರ್ಷಿತರಾದರು.

ಇನ್ನು ಪರೀಕ್ಷಿದ್ರಾಜನ ಕಥೆ ಹೀಗಿದೆ— ಕುರುಕ್ಷೇತ್ರದ ರಣರಂಗದಲ್ಲಿ ದುರ್ಯೋಧನ ಭೀಮನ ಗದೆಯೇಟಿನಿಂದ ತೊಡೆ ಮುರಿದು ಬಿದ್ದಾಗ ದುರ್ಯೋಧನನ ಅಪೇಕ್ಷೆಯಂತೆ ಅಶ್ವತ್ಥಾಮ ದ್ರೌಪದೀಪುತ್ರರ ಹತ್ಯೆ ಮಾಡಲು ಸಂಕಲ್ಪಿಸಿದ. ಕಾಡಿನಲ್ಲಿ ರಾತ್ರಿ ಒಂದು ಮರದ ಕೆಳಗೆ ಮಲಗಿದ್ದಾಗ ಅವನಿಗೆ ಒಂದು ಕನಸು ಬಿದ್ದಿತು. ಕನಸಿನಲ್ಲಿ ಅಶ್ವತ್ತಾಮ ದ್ರೌಪದಿಯ ಮಕ್ಕಳನ್ನು ರಾತ್ರಿ ಅವರು ಶಿಬಿರದಲ್ಲಿ ಮಲಗಿದ್ದಂತೆ ಕ್ರೂರವಾಗಿ ಹತ್ಯೆ ಮಾಡಿದ್ದಾನೆ. ಪುತ್ರಶೋಕದಿಂದ ಅಳುತ್ತಿದ್ದ ದ್ರೌಪದಿಯನ್ನು ಅರ್ಜುನ ಸಂತೈಸಿ ಅಶ್ವತ್ಥಾಮನ ಬೆನ್ನಟ್ಟಿ ಹೋಗುತ್ತಾನೆ. ಅಶ್ವತ್ಥಾಮ ಪ್ರಾಣರಕ್ಷಣೆಗಾಗಿ ಬ್ರಹ್ಮಾಸ್ತ್ರ ಪ್ರಯೋಗಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಕೃಷ್ಣನ ಆದೇಶದಂತೆ ಅರ್ಜುನನೂ ಬ್ರಹ್ಮಾಸ್ತ್ರ ಪ್ರಯೋಗಿಸುತ್ತಾನೆ. ಎರಡೂ ಬ್ರಹ್ಮಾಸ್ತ್ರಗಳು ಜೊತೆ ಸೇರಿ ಪ್ರಳಯಾಗ್ನಿಯಂತೆ ಪ್ರಜ್ವಲಿಸಿ ಲೋಕವನ್ನು ಸುಡತೊಡಗುತ್ತವೆ. ಆಗ ಅರ್ಜುನ ಎರಡನ್ನೂ ಉಪಸಂಹಾರ ಮಾಡುತ್ತಾನೆ. ಅಶ್ವತ್ತಾಮನನ್ನು ಹೆಡಮುರಿ ಕಟ್ಟಿ ಎಳೆದುತಂದು ದ್ರೌಪದಿಯ ಮುಂದೆ ನಿಲ್ಲಿಸುತ್ತಾನೆ. ದ್ರೌಪದಿ ಹೇಳುತ್ತಾಳೆ ಇವನನ್ನು ಬಿಡು. ಈತ ಬ್ರಾಹ್ಮಣ ಗುರುಪುತ್ರ. ಪತಿಯನ್ನು ಕಳೆದುಕೊಂಡ ಕೃಪಿಗೆ ಏಕ ಮಾತ್ರ ಪುತ್ರ. ನಾನು ಪುತ್ರಶೋಕದಿಂದ ಅಳುವಂತೆ ಅವಳೂ ಅಳುವಂತಾಗಬಾರದು ಎಂದು. ಆದರೆ ಭೀಮನೆಂದ, ವ್ಯರ್ಥವಾಗಿ ಶಿಶುಹತ್ಯೆ ಮಾಡಿದ ಈತನಿಗೆ ಮರಣದಂಡನೆ ಆವಶ್ಯಕ ಎಂದು. ಆಗ ಕೃಷ್ಣನ ಆದೇಶದಂತೆ ಅರ್ಜುನ ಅಶ್ವತ್ಥಾಮನಿಗೆ ಮರಣದಂಡನೆಗೆ ಸಮಾನವಾದ ಶಿಕ್ಷೆಯಾಗಿ ಅವನ ತಲೆಯಲ್ಲಿ ಸಹಜವಾಗಿ ಬೆಳೆದಿದ್ದ

ರತ್ನವನ್ನು ಕಿತ್ತುತೆಗೆದು ಆವನನ್ನು ಬಿಟ್ಟುಬಿಟ್ಟ. ಹೀಗೆ ಕನಸು ಕಂಡ ಅಶ್ವತ್ಥಾಮ ಮಹಾಭಾರತ ಹೇಳುವಂತೆ, ಶಿಬಿರವನ್ನು ನುಗ್ಗಿ ಧೃಷ್ಟದ್ಯುಮ್ನ ಶಿಖಂಡಿ ಮುಂತಾದ ವರನ್ನೂ ದ್ರೌಪದಿಯ ಮಕ್ಕಳನ್ನೂ ಕೊಂದು ಪಲಾಯನ ಮಾಡ ತೊಡಗಿದ. ಭೀಮ ಅವನನ್ನು ಬೆನ್ನಟ್ಟಿ ಹೋದಾಗ ಆತ ಬ್ರಹ್ಮಾಸ್ತ್ರ ಪ್ರಯೋಗಿಸಿದ. ಒಡನೆ ಅಲ್ಲಿಗೆ ಬಂದ ಅರ್ಜುನ ಕೃಷ್ಣನ ಆದೇಶದಂತೆ ತಾನೂ ಬ್ರಹ್ಮಾಸ್ತ್ರ ಪ್ರಯೋಗಿಸಿದ. ವೇದವ್ಯಾಸರು ಬಂದು ಆ ಅಸ್ತ್ರಗಳನ್ನು ಉಪಸಂಹರಿಸಲು ಇಬ್ಬರಿಗೂ ಆದೇಶ ನೀಡಿದರು. ಆದರೆ ಅರ್ಜುನನೇ ಉಪಸಂಹಾರ ಮಾಡಿದ. ಅಶ್ವತ್ಥಾಮ ಬ್ರಹ್ಮಾಸ್ತ್ರವನ್ನು ಪಾಂಡವರಿಂದ ಹಿಂದಕ್ಕೆ ಕರೆಸಿಕೊಂಡನೆ ಹೊರತು ಉತ್ತರೆಯ ಗರ್ಭಕ್ಕೆ ರಕ್ಷಣೆ ನೀಡಲು ನಿರಾಕರಿಸಿದ. ಶ್ರೀಕೃಷ್ಣ ತಾನೆ ಗರ್ಭವನ್ನು ರಕ್ಷಿಸುವ ಹೊಣೆ ಹೊತ್ತ.

★★★

ನಾರದರು ಹೊರಟುಹೋದ ಬಳಿಕ ವೇದವ್ಯಾಸರು ತಮ್ಮ ಶಮ್ಯಾಪ್ರಾಸವೆಂಬ ಬದರಿಕಾಶ್ರಮದಲ್ಲಿ ಕುಳಿತು ಧ್ಯಾನಿಸಿದರು—

ಬ್ರಹ್ಮನದ್ಯಾಃ ಸರಸ್ವತ್ಯಾ ಆಶ್ರಮಃ ಪಶ್ಚಿಮೇ ತಟೇ ।
ಶಮ್ಯಾಪ್ರಾಸ ಇತಿ ಪ್ರೋಕ್ತ ಋಷೀಣಾಂ ಸತ್ರವರ್ಧನಃ ॥ ೨ ॥

ಬ್ರಾಹ್ಮಣರು ಸೇವಿಸುವ ಸರಸ್ವತೀನದಿಯ ಪಶ್ಚಿಮತೀರದಲ್ಲಿ ಶಮ್ಯಾಪ್ರಾಸ ಎಂಬ ಆಶ್ರಮ. ಅದು ಋಷಿಗಳು ಬಹುವಾಗಿ ಸತ್ರಯಾಗ ಮಾಡುವ ಸ್ಥಳ.

ಇಲ್ಲಿ ಬದರಿಕಾಶ್ರಮಕ್ಕೆ 'ಶಮ್ಯಾಪ್ರಾಸ' ಎಂದು ಹೆಸರು ಬರಲು ಕಾರಣವೇನು?

ಶಮ್ಯಾಂ ಪ್ರಾಸ್ಯ ತತ್ರ ಶಾಲಾಂ ಕೃತ್ವಾ
ಯತ್ರ ಯಜ್ಞಃ ಕ್ರಿಯತೇ ಸ ಶಮ್ಯಾಪ್ರಾಸಃ ।

ಶಮ್ಯಾವನ್ನೆಸೆದು ಅಲ್ಲಿ ಯಾಗಶಾಲೆ ನಿರ್ಮಿಸಿ ಎಲ್ಲಿ ಯಜ್ಞ ಮಾಡುವರೋ ಆ ಸ್ಥಳವು ಶಮ್ಯಾಪ್ರಾಸ.

'ಶಮ್ಯಾ' ಎಂದರೆ ಖದಿರವೃಕ್ಷಕಾಷ್ಠದಿಂದ ನಿರ್ಮಿತವಾದ ಮೂವತ್ತಾರು ಅಂಗುಲ ಉದ್ದದ ಗದೆಯ ಆಕಾರದ ಯಜ್ಞಾಯುಧ. ಇದರ ತುದಿಯ ಎಂಟು ಅಂಗುಲ ಪ್ರದೇಶದಲ್ಲಿ ಎಂಟು ಕುಂಬಗಳು, ಅಂದರೆ ಯಜಮಾನನ ಪತ್ನಿ ತಲೆಗೆ ಸುತ್ತಿಕೊಳ್ಳುವ ಬಟ್ಟೆಗಳಿರುತ್ತವೆ. ಕೃಷ್ಣಾಜಿನದ ಮೇಲೆ ಈ ಶಮ್ಯಾವನ್ನಿರಿಸಿ ಅದರ ಮೇಲೆ ಬೀಸುಕಲ್ಲನ್ನಿಟ್ಟು ಆಗ್ನೀಧ್ರನೆಂಬ ಋತ್ವಿಜನು ಯಾಗದ ಹವಿಸ್ಸಿಗಾಗಿ ಅಕ್ಕಿ ಮುಂತಾದುವನ್ನು ಬೀಸಿ ಹಿಟ್ಟು ಮಾಡಬೇಕೆಂದು ವಿಧಿ ಇದೆ. ಪ್ರಕೃತ ಈ ಶಮ್ಯಾವನ್ನು ಯಜ್ಞವೇದಿ ಸ್ಥಲದಿಂದ ದೂರ ಎಸೆದು ಅದು ಬೀಳುವಲ್ಲಿವರೆಗೆ ಸುತ್ತಲೂ ಯಾಗಶಾಲೆ ನಿರ್ಮಿಸಬೇಕು. ಈ ಪ್ರದೇಶದೊಳಗೇ ಅಗ್ನಿ ಅಗ್ನಿಕುಂಡದಿಂದ ಹೊರಗೆ ಬಿದ್ದರೆ

'ಕವಿರಗ್ನಿಃ' ಎಂಬ ಮಂತ್ರ ಜಪಿಸಿ ಮೂರು ಪ್ರದಕ್ಷಿಣೆ ಬಂದು ಆ ಅಗ್ನಿಯನ್ನು ತಿರುಗಿ ಕುಂಡದಲ್ಲಿ ಹಾಕಬೇಕು. ಈ ಪ್ರದೇಶದಿಂದಲೂ ಹೊರಗೆ ಅಗ್ನಿಯ ಕೆಂಡ ಹಾರಿ ಬಿದ್ದರೆ ಕುಂಡದಲ್ಲಿರುವ ಎಲ್ಲ ಅಗ್ನಿಯನ್ನೂ ಅಲ್ಲಿಗೇ ತಂದು ಸೇರಿಸಿ ಆ ದಿನವಿಡೀ ಋತ್ವಿಜರು ಅಲ್ಲಿ ವಾಸ ಮಾಡಬೇಕು ಎಂದು ಮುಂತಾಗಿ ವಿಧಿ ಇದೆ. ಈ ಪ್ರದೇಶಕ್ಕೆ 'ಶಮ್ಯಾಪರಾಸ' ಎಂದು ಆಪಸ್ತಂಬ ಶ್ರೌತಸೂತ್ರದಲ್ಲಿ (೯.೧.೧೭) ಹೆಸರು ಕಾಣುತ್ತದೆ. 'ಶಮ್ಯಾಪ್ರಾಸ'ವೆಂದರೂ ಅದೇ ಅರ್ಥ. ಅಸುಕ್ಷೇಪಣೇ ಧಾತು ನಿಷ್ಪನ್ನವಾಗಿದೆ.

★★★

ಅಸುರಮೋಹನಕ್ಕಾಗಿ ಧ್ಯಾನಮಾಡುತ್ತ ವ್ಯಾಸರು ಸಜ್ಜನರಿಗೆ ಭಕ್ತಿಯೋಗದಿಂದ ಪರಮಾತ್ಮಸಾಕ್ಷಾತ್ಕಾರವಾಗಿ ಮಾಯಾಬಂಧನ ತೊಲಗುವುದನ್ನು ಭಾಗವತದಲ್ಲಿ ಹೇಳಬೇಕೆಂದು ಸಂಕಲ್ಪಿಸಿದರು—

ಭಕ್ತಿಯೋಗೇನ ಮನಸಿ ಸಮ್ಯಕ್ ಪ್ರಣಿಹಿತೇಽಮಲೇ ।
ಅಪಶ್ಯತ್ ಪುರುಷಂ ಪೂರ್ಣಂ ಮಾಯಾಂ ಚ ತದಪಾಶ್ರಯಾಂ ॥ ೪ ॥

ಭಕ್ತಿಯೋಗದಿಂದ ನಿರ್ಮಲವಾದ, ಭಗವಂತನಲ್ಲಿ ಸ್ಥಿರವಾಗಿ ನಿಂತ ಸಜ್ಜನರ ಮನಸ್ಸಿನಲ್ಲಿಯೆ ಗುಣಪೂರ್ಣನಾದ ಪರಮಾತ್ಮ ತೋರುತ್ತಾನೆ ಎಂದೂ, ಅದರಿಂದ ಅವರ ಮಾಯಾಬಂಧನ ತೊಲಗುವುದೆಂದೂ ವ್ಯಾಸರು ಮನಸ್ಸಿಗೆ ತಂದು ಕೊಂಡರು.

ಇಲ್ಲಿ ಮೇಲುನೋಟಕ್ಕೆ 'ವ್ಯಾಸರು ಭಕ್ತಿಯೋಗದಿಂದ ತಮ್ಮ ಅಂತಃಕರಣದಲ್ಲಿ ಪರಮಾತ್ಮ ಸಾಕ್ಷಾತ್ಕಾರ ಪಡೆದರು. ತಮ್ಮಿಂದ ಮಾಯೆ ದೂರ ತೊಲಗಿದುದನ್ನೂ ಕಂಡರು' ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ವ್ಯಾಖ್ಯಾನ ಮಾಡಿದ್ದಾರೆ.[೧] ಇದು ವ್ಯಾಸರೂ ಒಬ್ಬ ಜೀವ, ಅವರಲ್ಲಿ ಭಗವಂತನ ಆವೇಶ ಎಂಬ ತಪ್ಪುಕಲ್ಪನೆಯ ಪರಿಣಾಮವಾಗಿದೆ. ವ್ಯಾಸರು ಭಗವಂತನ ಸ್ವರೂಪಾವತಾರ. ಅದರಿಂದ 'ಮನಸಿ' ಮನಸ್ಸಿನಲ್ಲಿ ಎನ್ನುವಾಗ ತನ್ನ ಮನಸಿನಲ್ಲಿ ಎಂದಿಟ್ಟುಕೊಳ್ಳಬಾರದು. ಜನರ ಮನಸಿನಲ್ಲಿ ಎಂದಿಟ್ಟುಕೊಳ್ಳಬೇಕು. ಸಜ್ಜನರ ಮನಸ್ಸಿನಲ್ಲಿ ಭಕ್ತಿಯೋಗದಿಂದ ಭಗವಂತನ ಸಾಕ್ಷಾತ್ಕಾರವಾಗುವುದೆಂದು ವ್ಯಾಸರು ಆಲೋಚಿಸಿ ಹಾಗೇ ಭಾಗವತದಲ್ಲಿ ಹೇಳಿದರೆಂದು ತಿಳಿಯಬೇಕು.

ಭಕ್ತಿಯೋಗೇನ ಸಮ್ಯಕ್ ಪ್ರಣಿಹಿತೇ ಲೋಕಾನಾಂ ಮನಸಿ ।

---

೧. ಪ್ರಣಿಹಿತೇ ನಿಶ್ಚಲೇ । ಅತ್ರ ಹೇತುಃ ಭಕ್ತಿಯೋಗೇನಾಮಲೇ ಪೂರ್ವಂ ಪ್ರಥಮಂ ಪುರುಷಮೀಶ್ವರಮಪಶ್ಯತ್ । -ಶ್ರೀಧರಃ

ಭಕ್ತಿಯೋಗದಿಂದ ಭಗವಂತನಲ್ಲಿ ಸ್ಥಿರವಾಗಿ ನಿಂತ ಸಜ್ಜನರ ಮನಸ್ಸಿನಲ್ಲಿ ಎಂದು ಅನ್ವಯಿಸಿಕೊಳ್ಳಬೇಕು.

★★★

ವೇದವ್ಯಾಸರು ಭಾಗವತವನ್ನು ರಚಿಸಿ ಶುಕಮುನಿಗೆ ಉಪದೇಶಿಸಿದರು. ಅದರಲ್ಲಿ ಕುರುಕ್ಷೇತ್ರ ಯುದ್ಧದಲ್ಲಿ ಭೀಮಸೇನನ ಗದಾಪ್ರಹಾರದಿಂದ ದುರ್ಯೋಧನ ತೊಡೆ ಮುರಿದು ಬಿದ್ದಲ್ಲಿಂದಾರಂಭಿಸಿ ಪಾಂಡವರ ಕಥೆ ಬರುತ್ತದೆ. ಅಶ್ವತ್ಥಾಮಾಚಾರ್ಯರು ರಾತ್ರಿಯಲ್ಲಿ ಪಾಂಡವರ ಶಿಬಿರಕ್ಕೆ ನುಗ್ಗಿ ದ್ರೌಪದಿಯ ಮಕ್ಕಳನ್ನು ಕೊಂದು ಅವರ ತಲೆಗಳನ್ನು ದುರ್ಯೋಧನನ ಮುಂದೆ ತಂದು ಚೆಲ್ಲಿದರು. ಆಗ ದ್ರೌಪದೀದೇವಿ ಅಳತೊಡಗಿದಾಗ ಅರ್ಜುನ ಸಂತೈಸಿ ಅಶ್ವತ್ಥಾಮನ ಬೆನ್ನಟ್ಟಿದ—

ಭರ್ತುಃ ಪ್ರಿಯಂ ದ್ರೌಣಿರಿತಿ ಸ್ಮ ಪಶ್ಯನ್
ಕೃಷ್ಣಾಸುತಾನಾಂ ಸ್ವಪತಾಂ ಶಿರಾಂಸಿ ।
ಅಪಾಹರದ್ ವಿಪ್ರಿಯಮೇತದಸ್ಯ
ಜುಗುಪ್ಸಿತಂ ಕರ್ಮ ವಿಗರ್ಹಯಂತೀ ॥ ೧೪ ॥

ಮಾತಾ ಶಿಶೂನಾಂ ನಿಧನಂ ಸುತಾನಾಂ
ನಿಶಮ್ಯ ಘೋರಂ ಪರಿತಪ್ಯಮಾನಾ ।
ತದಾಽರುದದ್ ಬಾಷ್ಪಕಲಾಕುಲಾಕ್ಷೀ
ತಾಂ ಸಾಂತ್ವಯನ್ನಾಹ ಕಿರೀಟಮಾಲೀ ॥ ೧೫ ॥

ದುರ್ಯೋಧನನಿಗೆ ಪ್ರಿಯವಾಗುವುದೆಂದು ಬಗೆದು ತನಗೆ ಪ್ರಿಯವಲ್ಲದಿದ್ದರೂ ಮಲಗಿ ನಿದ್ದೆ ಹೋಗಿದ್ದ ದ್ರೌಪದೀಪುತ್ರರ ತಲೆಗಡಿದರು ಅಶ್ವತ್ಥಾಮಾಚಾರ್ಯರು. ಎಳೆ ವಯಸ್ಸಿನ ಮಕ್ಕಳ ಭೀಕರ ಹತ್ಯೆಯನ್ನು ಕೇಳಿ ತಾಯಿ ದ್ರೌಪದಿ ಈ ದುಷ್ಕೃತ್ಯವನ್ನು ನಿಂದಿಸಿದಳು. ಪರಿತಾಪಗೊಂಡಳು. ಕಣ್ಣುಗಳಲ್ಲಿ ನೀರು ತುಂಬಿಕೊಂಡು ಅತ್ತಳು. ಅರ್ಜುನ ಅವಳನ್ನು ಸಂತೈಸುತ್ತ ನುಡಿದ.

ಇಲ್ಲಿ 'ವಿಪ್ರಿಯಮೇತದಸ್ಯ' ಈ ಕುಕೃತ್ಯ ದುರ್ಯೋಧನನಿಗೆ ಅಪ್ರಿಯವಾಗಿತ್ತು ಎಂದು ಮೇಲುನೋಟಕ್ಕೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ವ್ಯಾಖ್ಯಾನ ಮಾಡಿದ್ದಾರೆ. ವಿಶ್ವನಾಥ ಚಕ್ರವರ್ತಿ ವ್ಯಾಖ್ಯಾನದಲ್ಲಿ ಹೇಳಿದೆ— ಐದು ಶಿರಸ್ಸುಗಳನ್ನು ಕಂಡಾಗ ಮೊದಲಿಗೆ ದುರ್ಯೋಧನನಿಗೆ ಪ್ರಿಯವಾಯಿತು. ಬಳಿಕ ಅವು ಪಾಂಡವರ ಶಿರಸ್ಸುಗಳಲ್ಲವೆಂದು ತಿಳಿದಾಗ ಪಾಂಡವರ ವಧೆಯಾಗಲಿಲ್ಲ ಎಂದು ಒಂದು ದುಃಖ, ಜೊತೆಗೆ ಬಾಲಕರ ವಧೆಯಿಂದ ಶಿಶುಹತ್ಯಾದೋಷ, ಮುಂದೆ ಪಿತೃಕಾರ್ಯ

ಮಾಡಬೇಕಾಗಿದ್ದ ಕುರು ಸಂತತಿ ನಾಶದ ದೋಷ ಇವುಗಳಿಂದಲೂ ದುಃಖ ಉಂಟಾಯಿತು. ಹೀಗೆ ಹರ್ಷಶೋಕಗಳಿಂದ ದುರ್ಯೋಧನ ಕೊನೆಯುಸಿರೆಳೆದ' ಎಂದು.[೧] ಇದು ತಪ್ಪು.

ಸ್ವಾತ್ಮನ ಏವ ವಿಪ್ರಿಯಂ, ನ ಭರ್ತುಃ । ಪ್ರಯೋಜನಾಭಾವಾದ್ ವಿಪ್ರಿಯಮಿವ ಚ ತಸ್ಯ । ಪ್ರಿಯಮಿತಿ ಹಿ ಪ್ರಸ್ವಾಪ್ತೋಕ್ತಂ ॥

'ವಿಪ್ರಿಯಮೇತದಸ್ಯ' ಎಂದರೆ ಅಶ್ವತ್ಥಾಮಾಚಾರ್ಯರಿಗೆ ತನಗೇ ಅಪ್ರಿಯ ಎಂದರ್ಥ. ದುರ್ಯೋಧನನಿಗೆ ಅಪ್ರಿಯ ಎಂದಲ್ಲ. ಮುಂದೆ 'ಭರ್ತುಶ್ಚ ವಿಪ್ರಿಯಂ ವೀರ' (ಶ್ಲೋ.೩೯) 'ದುರ್ಯೋಧನನಿಗೂ ಅಪ್ರಿಯ' ಎಂದು ಹೇಳಿದಂತೆ ಕಂಡರೂ 'ನಿಷ್ಪ್ರಯೋಜನವಾದ್ದರಿಂದ ಅಪ್ರಿಯದಂತೆ' ಎಂದು ಅಲ್ಲಿ ಅಭಿಪ್ರಾಯ. ಏಕೆಂದರೆ ಮಹಾಭಾರತ ಸೌಪ್ತಿಕ ಪರ್ವದಲ್ಲಿ ದುರ್ಯೋಧನನಿಗೆ ಪ್ರಿಯವಾಯಿತೆಂದೇ ಹೇಳಿದೆ.

ಶಿಶುಹತ್ಯೆ ಎಂದು ದುರ್ಯೋಧನನಿಗೆ ಅಪ್ರಿಯವಾಗಿತ್ತೆನ್ನುವುದು ಮಹಾಭಾರತಕ್ಕೆ ವಿರುದ್ಧವಾಗುವುದು. ಅಲ್ಲಿ ಪಾಂಡವರ ಸಂತತಿ ನಾಶವಾಯಿತೆಂದು ತೃಪ್ತಿಯಿಂದ ಕೊನೆಯುಸಿರೆಳೆಯುತ್ತಾನೆ ದುರ್ಯೋಧನ. ಭಾಗವತದಲ್ಲಿ ಅಪ್ರಿಯವೆಂದು ಮುಂದೆ ಹೇಳಿದರೆ ಅದಕ್ಕೆ ಪಾಂಡವರ ಹತ್ಯೆಯಾಗದಿದ್ದುದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ, ಅಪ್ರಿಯವಲ್ಲದಿದ್ದರೂ ಅಪ್ರಿಯದಂತೆ ಎಂದು ಅಭಿಪ್ರಾಯ ಹೇಳಬೇಕು.

★★★

ಪುತ್ರಶೋಕದಿಂದ ಅಳುತ್ತಿದ್ದ ದ್ರೌಪದಿಯನ್ನು ಸಂತೈಸಿ ಅಶ್ವತ್ಥಾಮನನ್ನು ಬೆನ್ನಟ್ಟಿಹೊದ ಅರ್ಜುನ ಅವನನ್ನು ಕಟ್ಟಿ ಎಳೆತಂದು ದ್ರೌಪದಿಯ ಕಾಲುಬುಡದಲ್ಲಿ ಹಾಕಿದ. ದ್ರೌಪದಿಯ ಮಾತಿನಂತೆ ಅವನನ್ನು ಕೊಲ್ಲದೆ ಬಿಟ್ಟು ಮರಣದಂಡನೆಗೆ ಬದಲಾಗಿ ಅವನ ಸರ್ವಸ್ವವೆನಿಸಿದ್ದ ಶಿರೋರತ್ನವನ್ನು ಕಿತ್ತುಕೊಂಡ. ಈ ಅಧ್ಯಾಯದ ಕೊನೆವರೆಗೂ ಈ ಕಥೆ ವರ್ಣಿತವಾಗಿದೆ. ಆದರೆ ಇದು ಮಹಾಭಾರತಕ್ಕೆ

---

೧. ಭರ್ತುರ್ದುರ್ಯೋಧನಸ್ಯ ಪ್ರಿಯಂ ಸ್ಯಾದಿತಿ ಪಶ್ಯನ್ । ತಸ್ಯ ತದ್ ವಿಪ್ರಿಯಮೇವ ।
-ಶ್ರೀಧರಃ

ಭರ್ತುರ್ದುರ್ಯೋಧನಸ್ಯೈವಂ ಪ್ರಿಯಂ ಸ್ಯಾದಿತಿ ಪಶ್ಯನ್ । ವಸ್ತುತಸ್ತು ತಸ್ಯ ದುರ್ಯೋಧನಸ್ಯ ವಿಪ್ರಿಯಮೇವ ತತ್ । ಪ್ರಥಮಂ ಶತ್ರುವಧ ಶ್ರವಣೇನ ಹರ್ಷೋದಯಾತ್ ಸ್ವಶೇನ ಭೀಮಾದೀನಾಂ ಸ್ವಶತ್ರೂಣಾಂ ಅವಧಜ್ಞಾನಾತ್ ಬಾಲವಧಾಚ್ಚ ಕುರುವಂಶಲೋಪ ಶ್ರವಣಾಚ್ಚ ವಿಷಾದೋತ್ಪತ್ತೇಃ ಹರ್ಷ ವಿಷಾದಾಭ್ಯಾಂ ಚ ತನ್ಮೃತ್ಯುಪ್ರಾಪ್ತಿರಿತಿ ಭಾವಃ । -ವಿಶ್ವನಾಥಃ

ವಿರುದ್ಧವಾಗಿದೆ. ಅಲ್ಲಿ ಭೀಮಸೇನನೆ ಅಶ್ವತ್ಥಾಮನನ್ನು ಬೆನ್ನಟ್ಟಿ ಹೋಗಿ ನಿಗ್ರಹಿಸಿ ಅವನ ಶಿರೋರತ್ನವನ್ನು ಅಪಹರಿಸಿದನೆಂದಿದೆ. ಈ ವಿರೋಧಪರಿಹಾರಕ್ಕೆ ಏನು ಉಪಾಯ? ಬೇರೆ ವ್ಯಾಖ್ಯಾನಕಾರರು ಯಾರೂ ಈ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಶ್ರೀಮದಾಚಾರ್ಯರು ಹೇಳುತ್ತಾರೆ—

ಸ್ವಪ್ನೋಽಯಂ ।

ಪಾರ್ಥಾನುಯಾತಮಾತ್ಮಾನಂ ದ್ರೌಣಿಃ ಸ್ವಪ್ನೇ ದದರ್ಶ ಹ ।
ಬಂಧನಂ ಚಾತ್ಮನಸ್ತತ್ರ ದ್ರೌಪದ್ಯಾ ಚೈವ ಮೋಕ್ಷಣಂ ॥
ಇತಿ ಸ್ಕಾಂದೇ । ತಸ್ಮಾನ್ನೈಷೀಕ ವಿರೋಧಃ ।

ಭಾಗವತದಲ್ಲಿ ಹೇಳಿದ್ದು ಸ್ವಪ್ನವೃತ್ತಾಂತ.

ಮಹಾಭಾರತದಲ್ಲಿ ಹೇಳಿದ್ದೇ ವಾಸ್ತವ ವೃತ್ತಾಂತ. ಅಶ್ವತ್ಥಾಮನು ತನ್ನನ್ನು ಅರ್ಜುನ ಬೆನ್ನಟ್ಟಿ ಬಂದಂತೆ ತನ್ನನ್ನು ಕಟ್ಟಿದಂತೆ, ಮತ್ತೆ ದ್ರೌಪದಿ ತನ್ನನ್ನು ಬಿಡಿಸಿದಂತೆ ಸ್ವಪ್ನದಲ್ಲಿ ಕಂಡನು ಎಂದು ಸ್ಕಾಂದಪುರಾಣದಲ್ಲಿ ಉಕ್ತವಾಗಿದೆ. ಅದರಿಂದ ಮಹಾಭಾರತ ಸೌಷುಪ್ತಿಕಪರ್ವದ ವಿರೋಧವಿಲ್ಲ.

ಸ್ಕಾಂದಪುರಾಣದಲ್ಲಿ ಈ ರೀತಿ ವಿರೋಧ ಪರಿಹಾರ ಮಾಡಿರುವುದರಿಂದ 'ಭಾರತಾರ್ಥವಿನಿರ್ಣಯಃ ಎಂಬಂತೆ ಭಾರತಕ್ಕೆ ಭಾಗವತ ವಿನಿರ್ಣಾಯಕ. ಅದರಿಂದ ಭಾಗವತಾನುಸಾರ ಭಾರತಕ್ಕೇ 'ಪುರುಷವ್ಯತ್ಯಾಸದಿಂದ ಅರ್ಥ ಮಾಡಬೇಕು' ಎಂದು ಸ್ವೀಕರಿಸಲು ಅವಕಾಶವಿಲ್ಲ.

ಇತಿ ಪ್ರಥಮಸ್ಕಂಧೇ ಸಪ್ತಮೋಽಧ್ಯಾಯಃ

ಎಂಟನೆಯ ಅಧ್ಯಾಯ

ಅಧ್ಯಾಯ ಸಾರಾಂಶ

ಧರ್ಮರಾಜನಿಗೆ ಪಟ್ಟಾಭಿಷೇಕ ಮಾಡಿಸಿ ಪಾಂಡವರಿಂದ ಪ್ರತಿಯೊಬ್ಬ ನಿಂದಲೂ ಮೂರುಪಟ್ಟು ದಕ್ಷಿಣೆಗಳಿಂದ ಕೂಡಿದ ವೈಭವದ ಅಶ್ವಮೇಧಯಾಗ ಗಳನ್ನೂ ಮಾಡಿಸಿ ಶ್ರೀಕೃಷ್ಣ ದ್ವಾರಕೆಗೆ ಹೊರಟ ಸಂದರ್ಭದಲ್ಲಿ ಉತ್ತರೆ ಓಡಿ ಬಂದು 'ಕೃಷ್ಣ ಕಾಪಾಡು ಅಶ್ವತ್ಥಾಮಾಸ್ತ್ರ ನನ್ನನ್ನು ಸುಡಲು ಬರುತ್ತಿದೆ ನಾನು ಸತ್ತರೂ ಚಿಂತಿಲ್ಲ. ಗರ್ಭದಲ್ಲಿ ಬೆಳೆಯುತ್ತಿರುವ ಮಗು ಕ್ಷೇಮವಾಗಿರಲಿ' ಎಂದಳು. ಶ್ರೀಕೃಷ್ಣ ಒಂದು

ರೂಪದಿಂದ ತಾನೇ ಗರ್ಭವನ್ನು ಪ್ರವೇಶಿಸಿ ಮಗು ಪರೀಕ್ಷಿತನ ರಕ್ಷಣೆಗೆ ನಿಂತ. ಬಳಿಕ ಶ್ರೀಕೃಷ್ಣನನ್ನು ಕುಂತಿ ಸ್ತುತಿಸಿದಳು. 'ನಮಗೆ ಆಪತ್ತು ಬಂದಾಗಲೆಲ್ಲ ನಿನ್ನ ದರ್ಶನವಾಗಿ ಆಪತ್ತುಗಳು ಪರಿಹಾರವಾದುವು. ಆದರಿಂದ ನಿನ್ನ ದರ್ಶನಕ್ಕೆ ಕಾರಣವಾಗಬಲ್ಲ ಆಪತ್ತೇ ನಮಗಿರಲಿ' ಎಂದಳು. ಧರ್ಮರಾಜ ಪ್ರೀತಿಯಿಂದ ತಡೆದು ಕೃಷ್ಣನನ್ನು ತನ್ನ ಬಳಿಯೆ ನಿಲ್ಲಿಸಿಕೊಂಡ.

★★★

ಧರ್ಮರಾಜನಿಗೆ ಪಟ್ಟಾಭಿಷೇಕವಾಯಿತು. ಆತ ಮಹಾವೈಭವದಿಂದ ಅಶ್ವಮೇಧಯಾಗ ಮಾಡಿದ. ಬಳಿಕ ಶ್ರೀಕೃಷ್ಣ ದ್ವಾರಕೆಗೆ ಹೊರಟುನಿಂತಾಗ ಅಶ್ವತ್ಥಾಮಾಚಾರ್ಯರ ಬ್ರಹ್ಮಾಸ್ತ್ರ ಪಾಂಡವರನ್ನೂ ಉತ್ತರೆಯ ಗರ್ಭವನ್ನೂ ಸುಡಲು ಉದ್ಯುಕ್ತವಾಯಿತು. ಶ್ರೀಕೃಷ್ಣ ಅದನ್ನು ಸುದರ್ಶನ ಚಕ್ರದಿಂದ ಶಾಂತಗೊಳಿಸಿದ. ಆಗ ಕುಂತಿ ಶ್ರೀಕೃಷ್ಣನನ್ನು ಸ್ತೋತ್ರ ಮಾಡಿದಳು—

ತಥಾ ಪರಮಹಂಸಾನಾಂ ಮುನೀನಾಮಮಲಾತ್ಮನಾಂ ।
ಭಕ್ತಿಯೋಗವಿಧಾನಾರ್ಥಂ ಕಥಂ ಪಶ್ಯೇಮ ಹಿ ಸ್ತ್ರಿಯಃ ॥ ೨೩ ॥

ನಿರ್ಮಲಾಂತಃಕರಣರಾದ ಸನಕಾದಿ ಪರಮಹಂಸ ಸನ್ಯಾಸಿಗಳ ಭಕ್ತಿಯೋಗಾನುಷ್ಠಾನಕ್ಕೆ ಮಾತ್ರ ಗೋಚರನಾಗುವ ನಿನ್ನನ್ನು ನಾವು ಸ್ತ್ರೀಯರು ಹೇಗೆ ಭಕ್ತಿಯೋಗದಿಂದ ಕಾಣಬಲ್ಲೆವು?

ಇಲ್ಲಿ 'ಮುನೀನಾಂ ಭಕ್ತಿಯೋಗವಿಧಾನಾರ್ಥಂ ವಯಂ ಸ್ತ್ರಿಯಃ ಕಥಂ ಪಶ್ಯೇಮ' ಮುನಿಗಳ ಭಕ್ತಿಯೋಗಾನುಷ್ಠಾನಕ್ಕಾಗಿ ನಾವು ಸ್ತ್ರೀಯರು ನಿನ್ನನ್ನು ಹೇಗೆ ಕಾಣಬಲ್ಲೆವು? ಎಂದು ಹೇಳಿದಂತೆ ಕಾಣುತ್ತದೆ. ಇದು ಅಸಂಗತ. ಆದರಿಂದ ಹೀಗೆ ಅರ್ಥ ಹೇಳಬೇಕು—

ಭಕ್ತಿಯೋಗವಿಧಾನವಿಷಯಂ ।

ಭಕ್ತಿಯೋಗ ವಿಧಾನಾರ್ಥಂ ಎಂದರೆ ಭಕ್ತಿಯೋಗಾನುಷ್ಠಾನಕ್ಕೆ ಗೋಚರ ನಾಗುವವನು ಎಂದರ್ಥ.

ಈಗ ವಿಸಂಗತಿ ಇಲ್ಲ. ಮುನಿಗಳ ಮಹಾಭಕ್ತಿಯೋಗಾನುಷ್ಠಾನಕ್ಕೆ ಮಾತ್ರ ಗೋಚರನಾಗುವವ ನೀನು ನಮ್ಮ ಅಲ್ಪಭಕ್ತಿಗೆ ಹೇಗೆ ಗೋಚರನಾಗುವಿ? ಕೇವಲ ಕರುಣೆಯಿಂದಲೆ ನಮಗೆ ನೀನೊಲಿಯಬೇಕು ಎಂದರ್ಥ.

★★★

'ಕೃಷ್ಣ, ನೀನು ನಮ್ಮನ್ನು ವಿಷ, ಲಾಕ್ಷಾಗೃಹ, ಹಿಡಿಂಬ ಬಕ ಕಿರ್ಮಿರಾದಿ ರಾಕ್ಷಸರ ಉಪದ್ರವ, ವನವಾಸದುಃಖ ಇಂಥ ಎಲ್ಲ ಆಪತ್ತುಗಳಲ್ಲಿ ರಕ್ಷಿಸಿರುವಿ. ಆಪತ್ತುಗಳಲ್ಲಿ ಆಪದ್ಬಾಂಧವನಾದ ನಿನ್ನ ಸ್ಮರಣೆ ಸುಲಭವಾಗಿ ಬರುವುದರಿಂದ ಆಪತ್ತುಗಳೆ ಮೇಲಿಂದ ಮೇಲೆ ಬರುತ್ತಿರಲಿ' ಎಂದು ಕುಂತಿ ಕೃಷ್ಣನನ್ನು ಬೇಡುತ್ತಾಳೆ.

ವಿಪದಃ ಸಂತು ನಃ ಶಶ್ವತ್ ತತ್ರತತ್ರ ಜಗತ್ಪತೇ ।
ಭವತೋ ದರ್ಶನಂ ಯತ್ ಸ್ಯಾದ್ ಅಪುನರ್ಭವದರ್ಶನಂ ॥ ೨೮ ॥

ಜಗನ್ನಾಥ, ನಮಗೆ ಯಾವಾಗಲೂ ಆಗಾಗ ವಿಪತ್ತುಗಳು ಬರುತ್ತಿರಲಿ. ಏಕೆಂದರೆ ಆಗ ನಿನ್ನ ಸ್ಮರಣೆಯಿಂದ ಮೋಕ್ಷವನ್ನು ತಂದು ತೋರುವ ನಿನ್ನ ದರ್ಶನ ಲಭಿಸುವುದು.

ಇಲ್ಲಿ 'ಅಪುನರ್ಭವದರ್ಶನ' ಎಂದರೆ ಪುನರ್ಜನ್ಮವಿಲ್ಲದ ಮೋಕ್ಷದ ದರ್ಶನವೆ ನಿನ್ನ ದರ್ಶನ ಎಂದು ಹೇಳಿದಂತೆ ಕಾಣುತ್ತದೆ. ಇದು ಅಸಂಗತ. ಮೋಕ್ಷದ ದರ್ಶನ ಮಾಡಿಸುವುದು ನಿನ್ನ ದರ್ಶನವೆನ್ನಬೇಕು—

ಅಪುನರ್ಭವಂ ದರ್ಶಯತಿ ।

ಮೋಕ್ಷದ ದರ್ಶನ ಮಾಡಿಸುವಂಥದ್ದು ಎಂದರ್ಥ.

★★★

ಕುಂತಿಯ ಸ್ತೋತ್ರಗಳಲ್ಲಿ ಇನ್ನೊಂದು ಪದ್ಯ—

ಮನ್ಯೇ ತ್ವಾಂ ಕಾಲಮೀಶಾನಂ ಅನಾದಿನಿಧನಂ ಪರಂ ।
ಸಮಂ ಚರಂತಂ ಸರ್ವತ್ರ ಭೂತಾನಾಂ ಯನ್ಮಿಥಃ ಕಲಿಃ ॥ ೩೧ ॥

ನಿನ್ನನ್ನು ನಾನು ಬಲ್ಲೆ, ನೀನು ಎಲ್ಲವನ್ನೂ ಲಯಗೈವ, ಸ್ವತಃ ಉತ್ಪತ್ತಿ ನಾಶರಹಿತನಾದ ಸರ್ವಶಕ್ತ, ಎಲ್ಲರಿಗಿಂತ ವಿಲಕ್ಷಣ. ಏಕೆಂದರೆ ನೀನು ಯಾರಲ್ಲಿಯೂ ವೈಷಮ್ಯ ಮಾಡುವುದಿಲ್ಲ, ಎಲ್ಲರೂ ತಾವು ವೈಷಮ್ಯ ಮಾಡುತ್ತ ಪರಸ್ಪರ ಜಗಳವಾಡುತ್ತಾರೆ.

ಇಲ್ಲಿ 'ಸಮಂ ಚರಂತಂ' ಎಂದರೆ ನೀನು ಎಲ್ಲರಲ್ಲಿಯೂ ಸಮಾನವಾಗಿ ವರ್ತಿಸುವಿ. ಸಜ್ಜನ ದುರ್ಜನರೆಂಬ ಭೇದವಿಲ್ಲ ಎಂದು ಹೇಳಿದಂತೆ ಕಾಣುತ್ತದೆ. ಆದರೆ ಪಾರ್ಥನಿಗೆ ಸಾರಥಿಯಾದವನಿಗೆ ಮಮ ಪ್ರಾಣಾ ಹಿ ಪಾಂಡವಾಃ ಎಂದವನಿಗೆ ಸಜ್ಜನ ದುರ್ಜನ ಭೇದವಿಲ್ಲ ಹೇಗೆ? ಇದಕ್ಕೆ ಶ್ರೀಧರವ್ಯಾಖ್ಯಾನದಲ್ಲಿ ಉತ್ತರ- 'ಭಗವಂತನ ಪ್ರೇರಣೆಯಿಂದ ಜನಗಳೆ ಪರಸ್ಪರ ಹೊಡೆದಾಡುತ್ತಾರೆ, ಭಗವಂತನಲ್ಲಿ

ಸ್ವತಃ ವೈಷಮ್ಯಬುದ್ಧಿ ಇಲ್ಲ' ಎಂದು.[೧] ಇದರಿಂದ ಸಮಾಧಾನವಾಗುವುದಿಲ್ಲ. ಹೀಗೆ ಹೇಳಬೇಕು—

ತತ್ತದ್ಯೋಗ್ಯತಯಾ ಸಮತ್ವಂ ।

ಅವರವರ ಯೋಗ್ಯತೆಗನುಗುಣವಾಗಿ ಫಲ ನೀಡುತ್ತಾನೆ. ಅದರಿಂದ ಸಮತ್ವ ಕೂಡುತ್ತದೆ.

ಜನಗಳ ಯೋಗ್ಯತಾಕರ್ಮಾನುಸಾರವೆ ಅವರಿಗೆ ಪ್ರೇರಣೆ ಮಾಡಿ ಜಗಳ ಹುಟ್ಟಿಸುತ್ತಾನೆ. ಅವರ ಕರ್ಮಾನುಸಾರವೆ ಸಜ್ಜನರ ಪಕ್ಷದಲ್ಲಿ ನಿಲ್ಲುತ್ತಾನೆ. ದುರ್ಜನರನ್ನು ನಾಶಪಡಿಸುತ್ತಾನೆ. ಇದೇ ಸಮತ್ವ. ಕರ್ಮಾನುಸಾರ ಫಲ ನೀಡದಿದ್ದರೆ ಅದೇ ವೈಷಮ್ಯ. ಲೋಕದಲ್ಲಿ ಜನರು ಪರಸ್ಪರ ಯೋಗ್ಯತೆಗಳಿಗೆ ಬೆಲೆ ಕೊಡದೇ ವರ್ತಿಸುವುದರಿಂದ ಜಗಳ ಉಂಟಾಗುತ್ತದೆ. ಅದರಿಂದ ಅವರಲ್ಲಿ ವೈಷಮ್ಯ ದೋಷವಿದೆ. ಹರಿಯಲ್ಲಿ ಈ ದೋಷವಿಲ್ಲ. ಅದರಿಂದ ಅವನು 'ಪರಂ' ಲೋಕವಿಲಕ್ಷಣ.

★★★

ಕುಂತಿ ಶ್ರೀಕೃಷ್ಣನಿಗೆ ಹೇಳುತ್ತಾಳೆ—

ತೇ ವಯಂ ನಾಮರೂಪಾಭ್ಯಾಂ ಯದುಭಿಃ ಸಹ ಪಾಂಡವಾಃ ।
ಭವತೋ ದರ್ಶನಂ ಯರ್ಹಿ ಹೃಷೀಕಾಣಾಮಿವೇಶಿತುಃ ॥ ೪೧ ॥

ಇಂದ್ರಿಯ ಪ್ರೇರಕನಾದ ಪ್ರಾಣನಿದ್ದರೆ ಮಾತ್ರ ಶರೀರಕ್ಕೆ ನಾಮ ಮತ್ತು ರೂಪಗಳಿರುತ್ತವೆ. ಹಾಗೇ ನಿನ್ನ ದರ್ಶನವಿದ್ದರೆ ಮಾತ್ರ ಯಾದವರ ಸಮೇತ ನಾವು ಪಾಂಡವರು ನಾಮರೂಪಗಳಿಂದ ಯುಕ್ತರಾಗುತ್ತೇವೆ.

ಕೃಷ್ಣನ ಸಾನ್ನಿಧ್ಯವಿದ್ದರೆ ಮಾತ್ರ ಯಾದವರಾಗಲಿ ಪಾಂಡವರಾಗಲಿ ನಾಮವನ್ನು ಅಂದರೆ ಪರಾಕ್ರಮಿಗಳು ಶೂರರೆಂದು ಹೆಸರನ್ನು ಗಳಿಸುತ್ತಾರೆ. ರೂಪವನ್ನು ಅಂದರೆ ಸಂಪತ್ಸಮೃದ್ಧಿಯನ್ನೂ ಗಳಿಸುತ್ತಾರೆ. ಶರೀರದಲ್ಲಿ ಪ್ರಾಣ ಇದ್ದರೆ ಮಾತ್ರ ಒಳ್ಳೆಯ ಕೀರ್ತಿ ಸಂಪತ್ತು ಲಭ್ಯವಾಗುತ್ತವೆ ಎಂಬುದು ಇದಕ್ಕೆ ನಿದರ್ಶನ. ಅದರಿಂದ ಕೃಷ್ಣನ ಅನುಗ್ರಹವಿಲ್ಲದೆ ಕೇವಲ ಯಾದವರಿಂದ ಪಾಂಡವರಿಂದಲೆ ನನ್ನ ಆಪತ್ತುಗಳು ಪರಿಹಾರವಾಗಲಾರವು ಎನ್ನುತ್ತಾಳೆ ಕುಂತಿ.

---

೧. ಸಮಂ ಯಥಾ ಭವತಿ ತಥಾ ಚರಂತಂ । ನನು ಪಾರ್ಥಸಾರಥೇಃ ಕಥಂ ಮಮ ಸಾಮ್ಯಂ? ತತ್ರಾಹ ಯದ್ಯತಃ ತ್ವತ್ತೋ ನಿಮಿತ್ತಭೂತಾತ್ ಭೂತಾನಾಮೇವ ಮಿಥಃ ಕಲಿಃ ಕಲಹೋ ಭವತಿ । ನತು ಸ್ವತಸ್ತ್ವಯಿ ವೈಷಮ್ಯಂ । -ಶ್ರೀಧರಃ

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಕೇ ವಯಂ' ಎಂದು ಪಾಠ ಇಟ್ಟುಕೊಂಡಿದ್ದಾರೆ. ನಿನ್ನ ದರ್ಶನ ನಿನ್ನ ಕೃಪೆಯಿಂದಲೆ ಆಗುತ್ತಿರುವಾಗ ಅದಕ್ಕೆ ನಾವು ಯಾರು? ನಿನ್ನ ದರ್ಶನವನ್ನು ಸಂಪಾದಿಸಲು ಶಕ್ತವಾಗಬಲ್ಲ ನಾಮರೂಪಗಳು ನಮ್ಮಲ್ಲಿ ಏನಿವೆ? ಎಂದು ವೀರರಾಘವವ್ಯಾಖ್ಯಾನ.[೧] ಆದರೆ 'ನಿನ್ನ ದರ್ಶನವಾಗುವಾಗ ನಮಗೆ ನಾಮರೂಪಗಳೆಲ್ಲಿ' ಎಂದು ಅಸಂಗತ ಪ್ರಶ್ನೆ ಮಾಡಿಕೊಂಡು ಅದನ್ನು ಸರಿಪಡಿಸುವುದಕ್ಕಾಗಿ 'ನಿನ್ನ ಕರುಣೆಯಿಂದಲೆ' ಎಂದು ಅಧ್ಯಾಹಾರ ಮಾಡಿ 'ನಿನ್ನ ದರ್ಶನಕ್ಕೆ ಸಾಧನವಾಗಬಲ್ಲ ನಾಮರೂಪ'ವೆಂದು ಅರ್ಥ ಕಲ್ಪಿಸುವುದು ಕ್ಲಿಷ್ಟ ಕಲ್ಪನೆ. 'ತೇ ವಯಂ' ಎಂಬುದೇ ಬಾದರಾಯಣರಿಗೆ ಸಮ್ಮತವಾದ ಪಾಠ. ಅದಕ್ಕೆ ಅನುಗುಣವಾಗಿಯೆ ಸುಂದರವಾಗಿ ಸರಳವಾಗಿ ಹೀಗೆ ವ್ಯಾಖ್ಯಾನಿಸಬೇಕು—

ಯರ್ಹಿ ಭವತೋ ದರ್ಶನಂ ತದಾ
ಯದೂನಾಮಸ್ಮಾಕಂ ನಾಮರೂಪೇ ॥

ನಿನ್ನ ದರ್ಶನವಿದ್ದರೆ, ಸಾನ್ನಿಧ್ಯವಿದ್ದರೆ ಮಾತ್ರ ಯಾದವರಿಗೂ ನಮಗೂ ಒಳ್ಳೆಯ ಕೀರ್ತಿ ಸಮೃದ್ಧಿಗಳು.

ಇತಿ ಪ್ರಥಮಸ್ಕಂಧೇ ಅಷ್ಟಮೋऽಧ್ಯಾಯಃ

ಒಂಬತ್ತನೆಯ ಅಧ್ಯಾಯ

ಅಧ್ಯಾಯ ಸಾರಾಂಶ

ಧರ್ಮರಾಜ ತಾನು ರಾಜ್ಯಕ್ಕಾಗಿ ಬಂಧುಗಳನ್ನು ಕೊಲ್ಲಿಸಿದೆನೆಂದು ಅಧರ್ಮ ವಾಯಿತೆಂದು ಪರಿತಪಿಸಿದ. ತಮ್ಮಂದಿರೂ ಶ್ರೀಕೃಷ್ಣನೂ ಎಷ್ಟೇ ಹೇಳಿದರೂ ಅವ ರೆಲ್ಲರೂ ಅಭಿಮಾನದಿಂದ ಹೇಳುತ್ತಿದ್ದಾರೆ ಎಂದು ಗ್ರಹಿಸಿದನೇ ಹೊರತು ಮನಸ್ಸಿಗೆ ಸಮಾಧಾನ ತಂದುಕೊಳ್ಳಲಿಲ್ಲ. ಶತ್ರುಪಕ್ಷದಲ್ಲಿ ನಿಂತು ಹೋರಾಡಿ ಶರಶಯ್ಯೆಯಲ್ಲಿ ಮಲಗಿದ ಭೀಷ್ಮರಿಂದಲೆ ಸಮಾಧಾನ ಹೇಳಿಸಿದರೆ ಧರ್ಮರಾಜ ನಂಬುತ್ತಾನೆ ಎಂದು ಬಗೆದು ಶ್ರೀಕೃಷ್ಣ ಅವನನ್ನು ಭೀಷ್ಮರ ಬಳಿಗೊಯ್ದ. ಭೀಷ್ಮರಲ್ಲಿ ಆವೇಶಗೊಂಡು ಅವರ ಮೂಲಕ ಧರ್ಮರಾಜನಿಗೆ ಎಲ್ಲ ಧರ್ಮಗಳನ್ನು ಉಪದೇಶಿಸಿದ-

---

೧. ತವ ದರ್ಶನಂ ಯರ್ಹಿ ಯದಾ ಯೇಷಾಂ ಜಾತಂ ತೇ ಪಾಂಡವಾ ವಯಂ ಯದುಭಿಃ ಸಹ ಕೇ? ನ ಕೇऽಪಿ । ನ ಕೇನಾಪಿ ತ್ವದ್ದರ್ಶನ ಹೇತುನಾ ಗುಣೇನ ಯುಕ್ತಾಃ । ಕಿಂತು ತ್ವತ್ಕೃಪಯೈವೇತ್ಥಂ ಜಾತಮಿತಿ ಭಾವಃ । -ವೀರರಾಘವಃ

'ಧರ್ಮರಾಜ, ನಿನಗೆ ಈ ಭಗವಾನ್ ಕೃಷ್ಣ ಸಖ, ಎಡಬಲದಲ್ಲಿ ಭೀಮಾರ್ಜುನರು, ಆದರೂ ನಿಮಗೆ ಕಷ್ಟ ಬಂದಿತು. ಇದು ಪರಮಾತ್ಮನ ಸಂಕಲ್ಪ, ಅದನ್ನು ಯಾರೂ ತಿಳಿಯಲಾರರು. ನೀನು ಲೋಕವೆಲ್ಲ ಅವನ ಅಧೀನವೆಂದು ತಿಳಿದು ಅವನ ಆದೇಶಾನುಸಾರ ಅನಾಥರಾದ ಪ್ರಜೆಗಳನ್ನು ಕಾಪಾಡು. ಕೃಷ್ಣ ನಿನ್ನ ಸೋದರಮಾವನ ಮಗ, ಪ್ರಿಯಸಖ ಪರಮೋಪಕಾರಿ ಎಂದು ಮಾತ್ರ ನೀನು ತಿಳಿದಿರುವಿ. ವಸ್ತುತಃ ಈತ ಆದಿನಾರಾಯಣ. ಏಕಾಂತ ಭಕ್ತರಲ್ಲಿ ಬಲು ಮಮತೆ ಉಳ್ಳವ. ನೋಡು, ನಾನು ಪ್ರಾಣತ್ಯಾಗಮಾಡುವೆನೆಂದು ನನಗೆ ಪ್ರತ್ಯಕ್ಷ ದರ್ಶನ ನೀಡಲು ತಾನೆ ಬಂದಿದ್ದಾನೆ!

ಭೀಷ್ಮ ಹೀಗೆ ಹೇಳಿ ಎಲ್ಲ ಧರ್ಮಗಳನ್ನೂ ನಾನಾ ಆಖ್ಯಾನ ಇತಿಹಾಸ ಗಳೊಂದಿಗೆ ಉಪದೇಶಿಸಿದ. ಉತ್ತರಾಯಣ ಕಾಲ ಬಂದಿತು. ಶರೀರತ್ಯಾಗಕ್ಕೆ ಸಂಕಲ್ಪಿಸಿ ಶ್ರೀಕೃಷ್ಣನನ್ನು ಸುಂದರವಾಗಿ ಸ್ತುತಿಸಿದ. ಮನಸು ಮಾತು ನೋಟಗಳಿಂದ ತನ್ನನ್ನು ಭಗವಂತನಿಗೆ ಅರ್ಪಿಸಿಕೊಂಡು ಪ್ರಾಣಾಯಾಮಪೂರ್ವಕವಾಗಿ ಯೋಗ ಬಲದಿಂದ ಶರೀರತ್ಯಾಗ ಮಾಡಿದ. ದೇವದುಂದುಭಿ ಮೊಳಗಿತು. ಪುಷ್ಪವೃಷ್ಟಿ ಯಾಯಿತು. ಧರ್ಮರಾಜ ಅವನಿಗೆ ಉತ್ತರಕ್ರಿಯೆ ನಡೆಸಿ ಹಸ್ತಿನಾವತಿಗೆ ಮರಳಿದ. ಧರ್ಮದಿಂದ ರಾಜ್ಯಭಾರ ಮಾಡಿದ.

★★★

ಧರ್ಮರಾಜ ತಾನು ರಾಜ್ಯಲೋಭದಿಂದ ಬಂಧುಗಳನ್ನು ಕೊಲ್ಲಿಸಿದೆನು. ಈ ಮಹಾಪಾಪ ಅಶ್ವಮೇಧಯಾಗದಿಂದಲೂ ಪರಿಹಾರವಾಗುವಂಥದ್ದಲ್ಲ ಎಂದು ಪರಿತಪಿಸುತ್ತಾನೆ—

ನೈನೋ ರಾಜ್ಞಃ ಪ್ರಜಾಭರ್ತುರ್ಧರ್ಮ್ಯೋ ಯುದ್ಧೇ ವಧೋ ದ್ವಿಷಾಂ ।
ಇತಿ ಮೇ ನತು ಬೋಧಾಯ ಕಲ್ಪತೇ ಶಾಶ್ವತಂ ವಚಃ ॥ ೫ ॥

ಪ್ರಜೆಗಳ ರಕ್ಷಣೆಯ ಹೊಣೆ ಹೊತ್ತ ರಾಜನಿಗೆ ಯುದ್ಧದಲ್ಲಿ ಶತ್ರುವಧೆ ಪಾಪಕರವಲ್ಲ ಎಂದು ಹೇಳುವ ವೇದವಾಕ್ಯ ನನಗೆ ಈ ವಿಷಯದಲ್ಲಿ ತೃಪ್ತಿಕರ ಸಮಾಧಾನ ನೀಡುವುದಿಲ್ಲ.

ಪ್ರಜಾವಿರೋಧಿಗಳನ್ನು ಕೊಂದರೆ ರಾಜನಿಗೆ ಪಾಪವಿಲ್ಲ, ನಿಜ. ಆದರೆ ದುರ್ಯೋಧನ ಪ್ರಜೆಗಳನ್ನು ಬಾಧಿಸುತ್ತಿರಲಿಲ್ಲ. ನಾನೇ ರಾಜ್ಯಲೋಭದಿಂದ ಅವನನ್ನು ಕೊಲ್ಲಿಸಿದೆ. ಅದರಿಂದ ನನ್ನ ಸಮಸ್ಯೆಗೆ ವೇದವಾಕ್ಯ ಏನೂ ಪರಿಹಾರ ನೀಡಲಾರದು. ಆ ವೇದವಾಕ್ಯ ಹೀಗಿದೆ—

'ಯಃ ಪದಾತಿಂ ಹಂತಿ ಸ ಭವತಿ ಚಾತುರ್ಮಾಸ್ಯಯಾಜೀ । ಯಃ ಸಾದಿನಂ ಸೋಽಗ್ನಿಷ್ಟೋಮಸ್ಯ । ಯೋ ಹಂತಿ ಗಜರಥೌ ಸೋಽಶ್ವಮೇಧ ರಾಜಸೂಯಾಭ್ಯಾಂ' ಇತ್ಯಾದಿ ಶಾಶ್ವತಂ ವಚಃ ।

'ಯುದ್ಧದಲ್ಲಿ ಕಾಲಾಳನ್ನು ಕೊಲ್ಲುವವನು ಚಾತುರ್ಮಾಸ್ಯ ಯಾಗಫಲಕ್ಕೆ ಭಾಗಿಯಾಗುತ್ತಾನೆ. ಅಶ್ವಾರೂಢನನ್ನು ಕೊಲ್ಲುವವನು ಅಗ್ನಿಷ್ಟೋಮಯಾಗಫಲಕ್ಕೆ ಭಾಗಿ. ಗಜಾರೂಢರನ್ನೂ ರಥಿಕರನ್ನೂ ಕೊಲ್ಲುವವನು ಅಶ್ವಮೇಧ ರಾಜಸೂಯ ಯಾಗಗಳ ಫಲಗಳಿಗೆ ಭಾಗಿ' ಎಂದು ಮುಂತಾಗಿ ವೇದವಾಕ್ಯವಿದೆ.

ಬೇರೆ ವ್ಯಾಖ್ಯಾನಕಾರರ ಪ್ರಕಾರ ಇಲ್ಲಿ 'ಶಾಸನಂ ವಚಃ' ಎಂದು ಪಾಠ.

ವೀರರಾಘವ ವ್ಯಾಖ್ಯಾನದಲ್ಲಿ 'ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಂ' 'ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ' ಎಂದು ಗೀತಾವಚನವನ್ನು ಧರ್ಮಶಾಸನವೆಂದು ಉದಾಹರಿಸಿದ್ದಾರೆ. ಶ್ರೀಕೃಷ್ಣನೆಷ್ಟು ಸಮಾಧಾನ ಹೇಳಿದರೂ ನೀನು ನಮ್ಮವನು, ಅಭಿಮಾನದಿಂದ ಹೇಳುತ್ತಿರುವಿ ಎನ್ನುತ್ತ ನಂಬಲು ನಿರಾಕರಿಸಿದವನು ಧರ್ಮರಾಜ. ಗೀತಾವಾಕ್ಯವೂ ಅರ್ಜುನನಿಗೆ ಕೃಷ್ಣ ಹೇಳಿದ್ದೆಂದ ಮೇಲೆ ಅದನ್ನು ನಂಬುವುದುಂಟೆ? ಅದನ್ನು ಶಾಸನವೆಂದೇ ಆತ ಸ್ವೀಕರಿಸಲಾರ. ವಸ್ತುತಃ ಸರ್ವಜ್ಞರಾದ ಆಚಾರ್ಯರು ಹೇಳಿದ್ದೇ ನಿಜವಾದ ಪಾಠ. ವೇದವಾಕ್ಯವನ್ನೇ ಉದಾಹರಿಸಬೇಕು.

★★★

ಶತ್ರುಪಕ್ಷದವರಾದ ಭೀಷ್ಮಾಚಾರ್ಯರ ಮುಖದಿಂದಲೆ ಧರ್ಮರಾಜನಿಗೆ ಸಮಾಧಾನ ಹೇಳಿಸುತ್ತಾನೆ ಶ್ರೀಕೃಷ್ಣ. ಅವರು ಕೊನೆಗೆ ಉತ್ತರಾಯಣಕಾಲ ಬಂದಾಗ ಶರೀರ ತ್ಯಾಗಕ್ಕೆ ಉದ್ಯುಕ್ತರಾಗಿ ಶ್ರೀಕೃಷ್ಣನನ್ನು ಸ್ತುತಿಸುತ್ತಾರೆ—

ಶಿತವಿಶಿಖಹತೋ ವಿಶೀರ್ಣ ದಂಶಃ
ಕ್ಷತಜಪರಿಪ್ಲುತ ಆತತಾಯಿನೋ ಮೇ ।
ಪ್ರಸಭಮಭಿಸಸಾರ ಮದ್ವಧಾರ್ಥಂ
ಸ ಭವತು ಮೇ ಭಗವಾನ್ ಮುದೇ ಮುಕುಂದಃ ॥ ೪೫ ॥

ಆತತಾಯಿಯಾಗಿ ನಾನು ತೀಕ್ಷ್ಣಬಾಣಗಳಿಂದ ಹೊಡೆದೆ. ಆಗ ಕೃಷ್ಣನ ಕವಚ ಒಡೆದು ಚೂರಾಯಿತು. ಮೈ ಎಲ್ಲ ನೆತ್ತರಿಂದ ತೊಯ್ದಿತು. ಅರ್ಜುನ ತಡೆಯುತ್ತಿದ್ದರೂ ಬಲಾತ್ಕಾರದಿಂದ ನನ್ನೆಡೆಗೆ ನನ್ನ ವಧೆಗಾಗಿ ನುಗ್ಗಿ ಬಂದ ಆ ಮುಕುಂದ ನನಗೆ ಸುಖನೀಡಲಿ.

ಭಕ್ತರು ಅಪರಾಧ ಮಾಡಿದರೂ ಕ್ಷಮಿಸಿ ಮುಕ್ತಿ ನೀಡುತ್ತಾನೆ ಶ್ರೀಹರಿ ಎನ್ನುತ್ತಾರೆ ಭೀಷ್ಮರು.

ಇಲ್ಲಿ ಭೀಷ್ಮರ ಬಾಣಗಳಿಗೆ ಶ್ರೀಕೃಷ್ಣನ ಕವಚ ಒಡೆಯಿತು. ಮೈಯೆಲ್ಲ ರಕ್ತಮಯವಾಯಿತೆಂದು ಹೇಳಿದೆ. ಹಾಗಾದರೆ ಇದು ಸ್ತುತಿಯಲ್ಲ ಎಂದು ತಿಳಿಯುವ ಸಂಭವವಿದೆ. ಸ್ಕಂದಪುರಾಣವಚನ ನಮ್ಮನ್ನು ಎಚ್ಚರಿಸುತ್ತಿದೆ. ಅಸುರಮೋಹನಕ್ಕಾಗಿ ಕೃಷ್ಣ ಹಾಗೆ ತೋರಿಸಿಕೊಳ್ಳುವನೆಂದು ಸ್ತುತಿ.

ಅಸಂಗಶ್ಚಾವ್ಯಯೋಽಭೇದ್ಯೋಽನಿಗ್ರಾಹ್ಯೋಽಶೋಷ್ಯ ಏವ ಚ ।
ವಿದ್ಧೋಽಸೃಗಂಚಿತೋ ಬದ್ಧ ಇತಿ ವಿಷ್ಣುಃ ಪ್ರದೃಶ್ಯತೇ ।
ಅಸುರಾನ್ ಮೋಹಯನ್ ದೇವಃ ಕ್ರೀಡಯ್ಯೈವ ಸುರೇಷ್ವಪಿ ।
ಮಾನುಷಾನ್ ಮಧ್ಯಯಾ ದೃಷ್ಟ್ಯಾ ನ ಮುಕ್ತೇಷು ಕಥಂಚನ ॥

ಇತಿ ಸ್ಕಾಂದೇ ॥

ಶ್ರೀಹರಿ ಕರ್ಮಫಲಸಂಗವಿಲ್ಲದವನು. ನಾಶವಿಲ್ಲದವನು. ಅವನನ್ನು ಭೇದಿಸಲಾಗದು ನಿಗ್ರಹಿಸಲಾಗದು ಶೋಷಿಸಲಾಗದು. ಆದರೂ ಬಾಣದೇಟಿಗೆ ಸಿಲುಕಿದಂತೆ, ರಕ್ತದಿಂದ ತೋಯ್ದಂತೆ, ಸೆರೆಸಿಕ್ಕಿದವನಂತೆ ತೋರಿಕೊಳ್ಳುತ್ತಾನೆ. ಇದು ಅಸುರ ಮೋಹನಕ್ಕಾಗಿ. ದೇವತೆಗಳಿಗೆ ಇದೊಂದು ಭಗವಂತನ ಆಟವಾಗಿ ಹಬ್ಬವಾಗಿ ಕಾಣುತ್ತದೆ. ಮನುಷ್ಯರು ತಟಸ್ಥ ದೃಷ್ಟಿಯಿಂದ ನೋಡುತ್ತಾರೆ. ಮುಕ್ತರಿಗೆ ಭಗವಂತನಲ್ಲಿ ಯಾವ ದೋಷವೂ ಕಾಣುವುದಿಲ್ಲ ಎಂದು ಸ್ಕಂದ ಪುರಾಣದಲ್ಲಿ ಹೇಳಿದೆ.

ಇತಿ ಪ್ರಥಮಸ್ಕಂಧೇ ನವಮೋಽಧ್ಯಾಯಃ

ಹತ್ತನೇ ಅಧ್ಯಾಯ

ಅಧ್ಯಾಯ ಸಾರಾಂಶ

ಕೆಲವು ತಿಂಗಳಕಾಲ ಶ್ರೀಕೃಷ್ಣ ಪಾಂಡವರ ಬಳಿ ಇದ್ದು ಬಳಿಕ ದ್ವಾರಕೆಗೆ ಹೊರಟ. ಪಾಂಡವರ ಮತ್ತು ಹಸ್ತಿನಾವತಿಯ ಎಲ್ಲ ಸ್ತ್ರೀಪುರುಷರು ಅವನನ್ನು ಸಂಭ್ರಮದಿಂದ ಬೀಳ್ಕೊಟ್ಟರು. ಸ್ತ್ರೀಯರೂ ಕೂಡ ಶ್ರೀಕೃಷ್ಣ ಸಾಕ್ಷಾತ್ ಭಗವಂತನೆ ಎನ್ನುವ ತತ್ತ್ವವನ್ನು ಪರಸ್ಪರ ಹೇಳಿಕೊಂಡರು. ಬಳಿಕ ಕೃಷ್ಣ ದ್ವಾರಕೆಗೆ ಪ್ರಯಾಣ ಮಾಡಿ ಸಂಜೆಹೊತ್ತಿನಲ್ಲಿ ನಗರವನ್ನು ಪ್ರವೇಶಿಸಿದ. ಯಾದವರು ಸಂಭ್ರಮದಿಂದ ಅವನನ್ನು ಇದಿರುಗೊಂಡರು. ಹದಿನಾರು ಸಾವಿರ ಪತ್ನಿಯರು ಪತಿದೇವನನ್ನು ಕಂಡು ನೋಟದಿಂದಲೆ ಆಲಿಂಗಿಸಿದರು. ಪರಮಾನಂದ ಭರಿತರಾದರು. ಶ್ರೀಕೃಷ್ಣ ಅವರ ನಡುವೆ ಸಾಮಾನ್ಯ

ಮಾನವನಂತೆ ರಮಿಸಿದ. ಆದರೆ ಅವರು ಯಾರೂ ತಮ್ಮ ಹಾವಭಾವಗಳಿಂದ ಕೃಷ್ಣನೆದೆಯನ್ನು ಕಲಕಲಾರದೆ ಹೋದರು. ಹೀಗೆ ಸುಂದರವಾದ ವಿಷಯ ಪದಾರ್ಥಗಳ ನಡುವೆ ಇದ್ದೂ ಮೋಹಪರವಶನಾಗದಿರುವುದೇ ಭಗವಂತನ ವೈಶಿಷ್ಟ್ಯ. ಅವನನ್ನರಿತ ಜ್ಞಾನಿಗಳೆ ಮೋಹಗೊಳ್ಳುವುದಿಲ್ಲ, ಎಂದಮೇಲೆ ಅವನ ಬಗ್ಗೆ ಹೇಳುವುದೇನಿದೆ? ಮೂಢದುರ್ಜನರು ಮಾತ್ರ ತಮ್ಮ ತಾಮಸ ಬುದ್ಧಿಗನುಸಾರವಾಗಿ ಕೃಷ್ಣನನ್ನು ಕಾಮಾಸಕ್ತನೆಂದೇ ಬಗೆದರು.

★★★

ಧರ್ಮರಾಜನ ಆಳ್ವಿಕೆ ಹೀಗಿತ್ತು—

ನಿಶಮ್ಯ ಭೀಷ್ಮೋಕ್ತಮಥಾಚ್ಯುತೋದಿತಂ
ಪ್ರವೃತ್ತವಿಜ್ಞಾನ ವಿಧೂತ ವಿಭ್ರಮಃ ।
ಶಶಾಸ ಗಾಮಿಂದ್ರ ಇವಾಜಿತಾಶ್ರಯಃ
ಪ್ರಣಿಧ್ಯುಪಾತ್ತಾಮನುಜಾನುವರ್ತಿತಃ ॥ ೪ ॥

ಶ್ರೀಕೃಷ್ಣನಾಶ್ರಯದಲ್ಲಿದ್ದು ಧರ್ಮರಾಜ ಭೀಷ್ಮರ ಉಪದೇಶವನ್ನು ಕೇಳಿದ. ಶ್ರೀಕೃಷ್ಣನ ಉಪದೇಶವನ್ನೂ ಕೇಳಿದ. ಅದರಿಂದ ಸರಿಯಾದ ತಿಳುವಳಿಕೆಯಿಂದ ದುರ್ಯೋಧನವಧ ಅಧರ್ಮವೆಂಬ ಭ್ರಮವನ್ನು ನಿವಾರಿಸಿಕೊಂಡ. ಇಂದ್ರ ಸ್ವರ್ಗವನ್ನಾಳುವಂತೆ ತಮ್ಮಂದಿರ ಸಹಾಯದಿಂದ ಅಮಾತ್ಯರು ಮಂತ್ರಿಗಳು ದೂತರು ಅಂಗರಕ್ಷಕರು ಪುರೋಹಿತರು ರಾಜಧಾನಿ ದೇಶ ಹೀಗೆ ಏಳು ಬಗೆಯ ಪ್ರಣಿಧಿಗಳಿಂದ ಕೂಡಿದ ಭೂಮಿಯನ್ನಾಳಿದ.

ಈ ಶ್ಲೋಕದಲ್ಲಿ ಪ್ರಣಿಧಿಶಬ್ದಾರ್ಥ ಹೀಗೆ—

ಅಮಾತ್ಯಾ ಮಂತ್ರಿಣೋ ದೂತಾಃ ಶ್ರೇಣಯಶ್ಚ ಪುರೋಹಿತಾಃ ।
ಪುರಂ ಜನಪದಂ ಚೇತಿ ಸಪ್ತ ಪ್ರಣಿಧಯಃ ಸ್ಮೃತಾಃ ।

ಇತಿ ಬ್ರಾಹ್ಮೇ ।

ಬ್ರಹ್ಮಪುರಾಣದಲ್ಲಿ ಹೇಳಿದೆ, ಆಡಳಿತ ಸಹಕಾರಿಗಳು, ಆಪ್ತಾಲೋಚನೆ ಕೊಡುವವರು, ಸಂದೇಶವಾಹಕರು, ಅಂಗರಕ್ಷಕರು, ರಾಜಪುರೋಹಿತರು, ರಾಜಧಾನಿ ಮತ್ತು ದೇಶ ಹೀಗೆ ಏಳು ಬಗೆಯಾಗಿ ರಾಜನಿಗೆ ಪ್ರಣಿಧಿಗಳಿರುತ್ತಾರೆ ಎಂದು.

ಬೇರೆ ವ್ಯಾಖ್ಯಾನಕಾರರೆಲ್ಲರೂ 'ಪರಿಧ್ಯುಪಾಂತಾಂ' ಎಂದು ಪಾಠವಿಟ್ಟುಕೊಂಡಿದ್ದಾರೆ. ಹೆಚ್ಚಿನವರು ಪರಿಧಿ ಎಂದರೆ ಸಮುದ್ರ ಎಂದೂ ವೀರರಾಘವರು

ದಿಗಂತವೆಂದೂ ಅರ್ಥೈಸಿದ್ದಾರೆ. ಶ್ರೀಮದಾಚಾರ್ಯರು ವ್ಯಾಸಸಮ್ಮತವಾದ ಪಾಠ ಇಟ್ಟುಕೊಂಡು ವ್ಯಾಸರ ಬ್ರಹ್ಮಪುರಾಣ ವಾಕ್ಯದಿಂದಲೆ ವ್ಯಾಖ್ಯಾನ ಮಾಡಿ ತೋರಿದ್ದಾರೆ.

★★★

ಧರ್ಮರಾಜ ರಾಜ್ಯ ಆಳುತ್ತಿದ್ದಾಗ ಶ್ರೀಕೃಷ್ಣ ಕೆಲವು ತಿಂಗಳುಗಳ ಕಾಲ ಹಸ್ತಿನಾವತಿಯಲ್ಲಿಯೆ ಇದ್ದು ಬಳಿಕ ದ್ವಾರಕೆಗೆ ಹೊರಟು ರಥವನ್ನೇರಿದ. ಆಗ—

ಅಶ್ರೂಯಂತಾಶಿಷಃ ಸತ್ಯಾಸ್ತತ್ರತತ್ರ ದ್ವಿಜೇರಿತಾಃ ।
ನಾನುರೂಪಾನುರೂಪಾಶ್ಚ ನಿರ್ಗುಣಸ್ಯ ಗುಣಾತ್ಮನಃ ॥ ೨೦ ॥

ಬ್ರಹ್ಮಾಂಡದ ಆಚೆಗೂ ಬ್ರಹ್ಮಾಂಡದಲ್ಲಿ ವ್ಯಾಪಿಸಿಯೂ ಇರುವ ಶ್ರೀಕೃಷ್ಣನಿಗೆ ದ್ವಿಜರು ಅಲ್ಲಲ್ಲಿ ಉಚ್ಚರಿಸಿದ ಅನುರೂಪ ಅನನುರೂಪ ಎರಡೂ ಆಗಿರುವ ಶುಭವಚನಗಳು ಕೇಳಿಬಂದುವು.

ಈ ಶ್ಲೋಕದಲ್ಲಿ 'ನಿರ್ಗುಣಸ್ಯ ಗುಣಾತ್ಮನಃ' ಶ್ರೀಕೃಷ್ಣ ನಿರ್ಗುಣನೂ ಗುಣಾತ್ಮಕನೂ ಆಗಿದ್ದಾನೆ ಎಂದುದು ಹೇಗೆ? ದ್ವಿಜರು ಉಚ್ಚರಿಸಿದ ಶುಭವಚನಗಳು ಅವನಿಗೆ 'ನಾನುರೂಪಾನುರೂಪಾಶ್ಚ' ಅನುರೂಪ ಅನನುರೂಪ ಎರಡೂ ಆಗುವುದು ಹೇಗೆ?

ಪಾಲನಾನುಗ್ರಹ ಜಯಾನ್ ಗೌಣೇಽಂಡೇ ಸಂಸ್ಥಿತೋ ಹರಿಃ ।
ಕರೋತ್ಯಸೌ ಬಹಿಃ ಸಂಸ್ಥೋ ನ ಕರೋತೀವ ನಿರ್ಗುಣಃ ॥
ಇತಿ ಪಾದ್ಮೇ । ಅತೋ ನಾನುರೂಪಾನುರೂಪಾಶ್ಚ ॥

ತ್ರಿಗುಣಕಾರ್ಯವಾದ ಬ್ರಹ್ಮಾಂಡದೊಳಗಿರುವ ಭಗವದ್ರೂಪದಿಂದ ಲೋಕಕ್ಕೆ ಪಾಲನ ಅನುಗ್ರಹ ಜಯಗಳನ್ನು ಮಾಡುತ್ತಾನೆ. ಹೊರಗಿರುವ ರೂಪದಿಂದ ಮಾಡುವುದಿಲ್ಲ, ಆ ರೂಪದಿಂದ ಅವನು ನಿರ್ಗುಣ. ಅದರಿಂದ 'ಸಜ್ಜನರನ್ನು ಪಾಲಿಸು, ನಮ್ಮನ್ನು ಅನುಗ್ರಹಿಸು, ದುಷ್ಟರನ್ನು ಜಯಿಸು' ಎಂದು ಮುಂತಾಗಿ ಹೇಳುವ ಶುಭವಚನಗಳು ಬ್ರಹ್ಮಾಂಡದ ಹೊರಗಿರುವ ರೂಪಗಳಿಗೆ ಅನ್ವಯಿಸುವುದಿಲ್ಲ, ಒಳಗಿನ ರೂಪಗಳಿಗೆ ಅನುರೂಪವಾಗಿವೆ. ಈ ಹೊರಗಿನ ಒಳಗಿನ ರೂಪಗಳಿಗೆ ವಸ್ತುತಃ ಕಿಂಚಿತ್ತೂ ಭೇದವಿಲ್ಲ, ಆದರೂ ವಿಶೇಷಬಲದಿಂದ ಒಳಗಿನ ರೂಪಗಳು ಪಾಲನಾದಿ ಮಾಡುತ್ತವೆ, ಹೊರಗಿನವು ಮಾಡುವುದಿಲ್ಲ ಎಂದು ಬೇರೆಬೇರೆಯಾಗಿ ಕಾಣುತ್ತವೆ ಎಂದು ಪದ್ಮಪುರಾಣದಲ್ಲಿ ಹೇಳಿದೆ.

ಗುಣಾತ್ಮ ಎಂದರೆ ಗುಣಕಾರ್ಯವಾದ ಬ್ರಹ್ಮಾಂಡದಲ್ಲಿ ವ್ಯಾಪಿಸಿರುವ ರೂಪ. ನಿರ್ಗುಣನೆಂದರೆ ಹೊರಗೆ ವ್ಯಾಪ್ತವಾದ ರೂಪ. ಎರಡಕ್ಕೂ ಭೇದವಿಲ್ಲದಿದ್ದರೂ

ವಿಶೇಷಬಲದಿಂದ ಒಳಗಿನ ರೂಪಗಳು ಪಾಲನಾದಿಗಳನ್ನು ಮಾಡುವುದರಿಂದ 'ಪಾಲಿಸು' ಎನ್ನುವುದು ಅನುರೂಪವಾದ ಪ್ರಾರ್ಥನೆಯಾಗುವುದು. ಹೊರಗಿನ ರೂಪಗಳು ಪಾಲನಾದಿಗಳನ್ನು ಮಾಡದಿರುವುದರಿಂದ ಅವುಗಳಿಗೆ ಈ ಪ್ರಾರ್ಥನೆ ಅನುರೂಪವಲ್ಲ.

ಶ್ರೀಮದಾಚಾರ್ಯರು ಇಲ್ಲಿ ಪದ್ಮಪುರಾಣದ ಆಧಾರಕೊಟ್ಟು ವಿವರಣೆ ನೀಡಿದ್ದಾರೆ. ಬೇರೆ ವ್ಯಾಖ್ಯಾನಕಾರರು 'ನಿನಗೆ ಸುಖವಾಗಲಿ' ಎಂಬ ಬ್ರಾಹ್ಮಣಾಶೀರ್ವಾದ ಶ್ರೀಕೃಷ್ಣನಿಗೆ ಅನುರೂಪವೂ ಆಗಿದೆ, ಅನನುರೂಪವೂ ಆಗಿದೆ, ನಿತ್ಯಸುಖಿಯಾದುದರಿಂದ ಸುಖವಾಗಲಿ ಎಂಬ ಆಶೀರ್ವಾದ ಅನನುರೂಪ ವಾಗಿದ್ದರೂ ಭಕ್ತರ ಸಮಾಗಮ ವಿಯೋಗಗಳಿಂದ ಭಗವಂತನಿಗೆ ಅಲೌಕಿಕ ಸುಖದುಃಖಗಳಿರುವುದರಿಂದ 'ಸುಖವಾಗಲಿ' ಎಂದು ಆಶೀರ್ವಾದ ಮಾಡಿದರೆ ಅದು ಅನುರೂಪವೂ ಹೌದು ಎನ್ನುತ್ತಾರೆ.[೧] ಮಹಾಲಕ್ಷ್ಮಿಯ ಆಲಿಂಗನದಿಂದಲೂ ಸ್ವರಮಣನಾದ ಭಗವಂತನಿಗೆ ಸುಖ ಉಂಟಾಗುವುದಿಲ್ಲ, ಭಕ್ತರ ಸಮಾಗಮ ವಿಯೋಗಗಳಿಂದ ಸುಖದುಃಖಗಳೆಂದರೆ ಹೇಗೆ? ಸರ್ವವ್ಯಾಪಕನಿಗೆ ನಿತ್ಯ ನಿರ್ದುಃಖನಿಗೆ ದುಃಖವಾಗುವುದು ಹೇಗೆ? ಭಕ್ತವಿಯೋಗ ಹೇಗೆ?

★★★

ದ್ವಾರಕೆಗೆ ಹೊರಟು ರಥವೇರಿದ ಶ್ರೀಕೃಷ್ಣನನ್ನು ಕುರಿತು ಹಸ್ತಿನಾವತಿಯ ನಾರಿಯರು ಪರಸ್ಪರ ಹೇಳಿಕೊಂಡರು—

ಸ್ತ್ರಿಯ ಊಚುಃ—

ಸ ವೈ ಕಿಲಾಯಂ ಪುರುಷಃ ಪುರಾತನೋ
ಯ ಏಕ ಆಸೀದವಿಶೇಷ ಆತ್ಮನಿ ।
ಅಗ್ರೇ ಗುಣೇಭ್ಯೋ ಜಗದಾತ್ಮನೀಶ್ವರೇ
ನಿಮೀಲಿತಾತ್ಮಾ ನಿಶಿ ಸುಪ್ತಶಕ್ತಿಷು ॥ ೨೨ ॥

ಪ್ರಲಯಾನಂತರದ ಆದಿ ಕಾರ್ಯೋತ್ಪತ್ತಿಗೆ ಮೊದಲು ಲಯಕಾಲದಲ್ಲಿ ಸತ್ವಾದಿ ಗುಣಗಳು ಇನ್ನೂ ಪರಿಣಾಮಗೊಳ್ಳದೆ ಸುಪ್ತವಾಗಿರುವಾಗ ಸರ್ವೋತ್ತಮನಾದ

---

೧. ಐಶ್ವರ್ಯದೃಷ್ಟ್ಯಾನಿರ್ಗುಣಸ್ಯ ಪರಮಾನಂದಸ್ಯ ಸುಖೀ ಭವೇತ್ಯಾದಯೋ ನಾನುರೂಪಾಃ ಮಾಧುರ್ಯದೃಷ್ಟ್ಯಾ ಗುಣಾತ್ಮನೋ ಬ್ರಹ್ಮಣ್ಯತ್ವ ಪ್ರೇಮವಶ್ಯತ್ವಾದ್ಯಪ್ರಾಕೃತ ಗುಣಮಯಸ್ಯ ತಸ್ಯ ಅನುರೂಪಾಶ್ಚ । ಯುಷ್ಮಾಕಮಾಶೀರ್ಭಿರೇವ ಮಮ ಸದಾ ಸುಖಮಿತಿ ತತ್ಪ್ರತಿವಚನಸ್ಯ ಮಿಥ್ಯಾತ್ವಾನರ್ಹತ್ವಾತ್ । ತಸ್ಯ ದಾಸ್ಯ ಸಖ್ಯ ವಾತ್ಸಲ್ಯಾದಿ ರಸ ವಿಷಯಾಶ್ರಯತ್ವೇ ಸತಿ ತತ್ತದ್ ಭಕ್ತಜನ ಸಂಯೋಗವಿರಹಾದ್ಯಲೌಕಿಕ ಸುಖ ದುಃಖಾದಿ ಮಯತ್ವಾಚ್ಚ। -ವಿಶ್ವನಾಥಃ

ಯಾವ ಶ್ರೀಹರಿ ಲಯಕಾರಕವಾದ ತನ್ನ ಸ್ವರೂಪದಲ್ಲಿಯೆ ತಾನು ಕಣ್ಣುಮುಚ್ಚಿ ಮಲಗಿದ್ದನೋ ಆ ಪುರಾಣಪುರುಷನೇ ಈ ಶ್ರೀಕೃಷ್ಣ.

ಇಲ್ಲಿ ತನ್ನ ಶಕ್ತಿಗಳು ಸುಪ್ತವಾಗಿದ್ದಾಗ ತಾನೂ ಕಣ್ಣುಮುಚ್ಚಿ ಮಲಗಿದ ಎಂದರೇನರ್ಥ? ಶ್ರೀಹರಿಯ ಶಕ್ತಿಗಳು ಹರಿಗಿಂತ ಬೇರೆ ಅಲ್ಲ ಎಂದಮೇಲೆ ಅವುಗಳಿಗೆ ಸುಪ್ತಿ ಎಂಬುದಿಲ್ಲ. ಆದರಿಂದ ಶಕ್ತಿಗಳೆಂದರೆ ಸತ್ವಾದಿಗುಣಗಳು. ಅವುಗಳಿಗೆ ಕಾರ್ಯರೂಪದಿಂದ ಪರಿಣಾಮಗೊಳ್ಳದಿರುವ ಅವಸ್ಥೆಯೆ ಸುಪ್ತಿ ಅಥವಾ ಶಕ್ತಿಗಳೆಂದರೆ ಸತ್ವಾದಿಗುಣಾಭಿಮಾನಿ ಶ್ರೀಭೂದುರ್ಗಾರೂಪಗಳು. ಅವರು ತಮ್ಮ ಕಾರ್ಯ ನಿಲ್ಲಿಸಿ ಹರಿಯಲ್ಲಿ ರಮಿಸುವುದೇ ಸುಪ್ತಿ.

ಸತ್ವಾದಿ ಶಕ್ತಿಷು ।

ನಿಶಿ ಸುಪ್ತಶಕ್ತಿಷು ಎಂಬಲ್ಲಿ ಶಕ್ತಿಗಳೆಂದರೆ ಸತ್ವಾದಿ ಗುಣಗಳು.

ಶಕ್ಯತ್ವಾತ್ ಶಕ್ತಯಃ ಎಂಬ ವ್ಯುತ್ಪತ್ತಿಯಿಂದ ಪರಮಾತ್ಮನ ಅಧೀನವಾಗಿರುವ ಸತ್ವಾದಿ ಗುಣಗಳೂ ಅವುಗಳ ಅಭಿಮಾನಿ ಲಕ್ಷ್ಮೀರೂಪಗಳೂ ಇಲ್ಲಿ ಶಕ್ತಿಗಳೆಂದು ವಿವಕ್ಷಿತವಾಗಿದೆ.

★★★

ಲಯಕಾರಿ ಮಾತ್ರವಲ್ಲ ಸೃಷ್ಟಿಕರ್ತನೂ ಈ ಕೃಷ್ಣನೇ ಎನ್ನುತ್ತಾರೆ ಹಸ್ತಿನಾವತಿಯ ನಾರಿಯರು—

ಸ ಏವ ಭೂಯೋ ನಿಜವೀರ್ಯಚೋದಿತಾಂ
ಸ್ವಜೀವಮಾಯಾಂ ಪ್ರಕೃತಿಂ ಸಿಸೃಕ್ಷತೀಂ ।
ಅನಾಮರೂಪಾತ್ಮನಿ ರೂಪನಾಮನೀ
ವಿಧಿತ್ಸಮಾನೋಽನುಸಸಾರ ಶಾಸ್ತ್ರಕೃತ್ ॥ ೨೩ ॥

ಅಚಿಂತ್ಯಗುಣ ಅಪ್ರಾಕೃತಶರೀರಗಳುಳ್ಳ ಸರ್ವನಿಯಾಮಕನಾದ ಯಾವ ಶ್ರೀಹರಿ ತನ್ನಲ್ಲಿ ನಾಮರೂಪಾತ್ಮಕ ಪ್ರಪಂಚವನ್ನು ನಿರ್ಮಿಸಲು ಸಂಕಲ್ಪಿಸಿ, ತನ್ನ ಶಕ್ತಿಯಿಂದ ಪ್ರೇರಣೆ ಹೊಂದಿ ಸೃಷ್ಟಿಮಾಡಲು ಬಯಸಿದ್ದ, ಜೀವ ಬಂಧಕಳಾದ ತನ್ನ ಪತ್ನಿಯಾದ ಮಹಾಲಕ್ಷ್ಮಿಯಲ್ಲಿ ಗರ್ಭಾಧಾನ ಮಾಡಿದನೊ, ಅವನೇ ಈ ಕೃಷ್ಣ.

ಇಲ್ಲಿ ಸ್ವಜೀವ ಮಾಯೆ ಎಂದರೆ, ತನ್ನ ಸ್ವರೂಪಭೂತರೇ ಆದ ಜೀವರನ್ನು ಸಂಸಾರಬಂಧನದಲ್ಲಿ ಕಟ್ಟಿಹಾಕುವ ಅವಿದ್ಯೆ ಎಂದು ಶ್ರೀಧರ ವ್ಯಾಖ್ಯಾನವಿದೆ. 'ಸಿಸೃಕ್ಷತೀಂ' ಎಂದರೆ ಅವಿದ್ಯೆ ಪ್ರಪಂಚ ಸೃಷ್ಟಿಮಾಡಲು ಇಚ್ಛೆಪಟ್ಟಿತು ಎಂದೂ ಆ ವ್ಯಾಖ್ಯಾನ ಹೇಳಿದೆ. ಜೀವರಿಗೆ ಪರಮಾತ್ಮ ಸ್ವರೂಪತ್ವವಾಗಲಿ ಜಡವಾದ ಅವಿದ್ಯೆಗೆ

ಇಚ್ಛೆಯಾಗಲಿ ಎರಡೂ ಪ್ರಮಾಣಬಾಧಿತವಾಗಿವೆ. 'ಅನಾಮರೂಪಾತ್ಮನಿ' ಎಂದರೆ ನಾಮರೂಪಗಳು ಸರ್ವಥಾ ಇಲ್ಲದ ಜೀವ ಎಂದೂ ಅದೇ ವ್ಯಾಖ್ಯಾನ ಹೇಳಿದೆ.[೧] ಇದೂ ಪ್ರಮಾಣಬಾಧಿತವೆ. ಜೀವ ನಿರ್ಧರ್ಮನಲ್ಲ. ಆದರಿಂದ ಹೀಗೆ ಹೇಳಬೇಕು—

ಶ್ರೀ ಭೂ ದುರ್ಗೇತಿ ಯಾ ಭಿನ್ನಾ ಜೀವಮಾಯಾ ಮಹಾತ್ಮನಃ ।
ಆತ್ಮಮಾಯಾ ತದಿಚ್ಛಾ ಸಾ ಗುಣಮಾಯಾ ಜಡಾತ್ಮಿಕಾ ॥

ಇತಿ ಮಹಾಸಂಹಿತಾಯಾಂ ॥

ಅಪ್ರಸಿದ್ಧೇಸ್ತದ್ಗುಣಾನಾಂ ಅನಾಮಾಸೌ ಪ್ರಕೀರ್ತಿತಃ ।
ಅಪ್ರಾಕೃತತ್ವಾದ್ ರೂಪಸ್ಯಾಪ್ಯರೂಪೋಽಸಾವುದೀರ್ಯತೇ ॥

ಇತಿ ವಾಸುದೇವಾಧ್ಯಾತ್ಮೇ ॥

ವಿಷ್ಣುಮಾಯೆಗಳು ಮೂರು ಇವೆ. ಜೀವಮಾಯೆ, ಆತ್ಮಮಾಯೆ ಮತ್ತು ಗುಣಮಾಯೆ ಎಂದು. ಶ್ರೀ ಭೂ ದುರ್ಗಾ ಎಂಬ ಮೂರು ರೂಪಗಳಿಂದ ಜೀವರನ್ನು ಬಂಧಿಸುವ ವಿಷ್ಣುಪತ್ನಿ ಮಹಾಲಕ್ಷ್ಮಿ ಜೀವಮಾಯೆ ಎನಿಸುತ್ತಾಳೆ. ವಿಷ್ಣುವಿನ ಇಚ್ಛೆ ವಿಷ್ಣುವಿನ ಆತ್ಮಮಾಯೆ ಎನಿಸುತ್ತದೆ. ಜಡಪ್ರಕೃತಿ ವಿಷ್ಣುವಿನ ಗುಣಮಾಯೆ ಎನಿಸುತ್ತದೆ ಎಂದು ಮಹಾಸಂಹಿತೆಯಲ್ಲಿ ಹೇಳಿದೆ. ವಿಷ್ಣುವಿನ ಗುಣರೂಪ ಕರ್ಮಗಳನ್ನು ಪೂರ್ತಿಯಾಗಿ ಶಬ್ದದಿಂದ ತಿಳಿಸಲಾಗದುದರಿಂದ, ತಿಳಿಸುವ ಶಬ್ದಗಳಿಲ್ಲದ ಅವನು ಅನಾಮನೆನಿಸುತ್ತಾನೆ. ಅವನ ರೂಪ ಅಪ್ರಾಕೃತವಾದುದರಿಂದ ಪ್ರಾಕೃತರೂಪವಿಲ್ಲದ ಅವನು ಅರೂಪನೆನಿಸುತ್ತಾನೆ ಎಂದು ವಾಸುದೇವಾಧ್ಯಾತ್ಮ ಗ್ರಂಥದಲ್ಲಿ ಉಕ್ತವಾಗಿದೆ.

ಜೀವಮಾಯೆ ಎಂದರೆ ಮಹಾಲಕ್ಷ್ಮಿ. ಅವಳಿಗೆ ಹರಿಯ ಪ್ರೇರಣೆಯಿಂದ ಸೃಷ್ಟಿಮಾಡುವ ಇಚ್ಛೆ ಉದಿಸುತ್ತದೆ. ಅನಾಮರೂಪನೆಂದರೆ ಶ್ರೀಹರಿ. ಅವನನ್ನು ಪೂರ್ತಿ ವರ್ಣಿಸಬಲ್ಲ ಶಬ್ದಗಳೆ ಇಲ್ಲದಿರುವುದರಿಂದ, ಪ್ರಾಕೃತ ರೂಪವೂ ಇಲ್ಲದಿರುವುದರಿಂದ ಅವನೆ ಅನಾಮರೂಪ. ಅನಾಮರೂಪನಾದ ತನ್ನಲ್ಲಿಯೆ ನಾಮರೂಪಾತ್ಮಕವಾದ ಪ್ರಪಂಚವನ್ನು ನಿರ್ಮಿಸುತ್ತಾನೆ.

★★★

ದುಷ್ಟಸಂಹಾರಕ್ಕಾಗಿ ನಾನಾ ಅವತಾರಗಳನ್ನು ತಾಳುವ ಭಗವಂತನೂ ಇವನೇ ಎನ್ನುತ್ತಾರೆ. ಹಸ್ತಿನಾವತಿಯ ನಾರಿಯರು—

---

೧. ಸ್ವಾಂಶಭೂತಾನಾಂ ಜೀವಾನಾಂ ಮಾಯಾಂ ಮೋಹಿನೀಂ ಅತ ಏವ ಸಿಸೃಕ್ಷತೀಂ ಸ್ರಷ್ಟುಮಿಚ್ಛಂತೀಂ । ಕಿಮರ್ಥಮನುಸಸಾರ? ಅನಾಮರೂಪೇ ಆತ್ಮನಿ ಜೀವೇ ರೂಪನಾಮನೀ ವಿಧಾತುಮಿಚ್ಛನ್ ಉಪಾಧಿಸೃಷ್ಟ್ಯಾ ಜೀವಾನಾಂ ಭೋಗಾಯೇತ್ಯರ್ಥಃ । -ಶ್ರೀಧರಃ

ಯದಾ ಹ್ಯಧರ್ಮೇಣ ತಮೋಽಧಿಕಾ ನೃಪಾ
ಜೀವಂತಿ ತತ್ರೈಷ ಹಿ ಸಾತ್ವತಃ ಕಿಲ ।
ಧರ್ಮಂ ಭಗಂ ಸತ್ಯಮೃತಂ ದಯಾಂ ಯಶೋ
ಭವಾಯ ರೂಪಾಣಿ ದಧದ್ ಯುಗೇಯುಗೇ ॥ ೨೬ ॥

ತಾಮಸ ಗುಣದ ರಾಜರು ಅಧರ್ಮದಿಂದ ಬದುಕುವ ಕಾಲದಲ್ಲಿ ಸಜ್ಜನರ ಹಿತಕ್ಕಾಗಿ ದುಷ್ಟರ ಸಂಹಾರಕ್ಕಾಗಿ ಧರ್ಮ ಭಗ ಸತ್ಯ ಋತ ದಯಾ ಯಶಸ್ಸುಗಳಿಗೆ ನಿಯಾಮಕವಾದ ಅವೇ ಹೆಸರಿನ ರೂಪಗಳನ್ನೂ ಮತ್ಸ್ಯಾದಿರೂಪಗಳನ್ನೂ ತಳೆದು ಯಾರು ಪ್ರತಿಯುಗಗಳಲ್ಲಿ ಅವತರಿಸುವನೋ ಆ ವಿಷ್ಣುವೂ ಈ ಕೃಷ್ಣನೇ.

ಈ ಶ್ಲೋಕದಲ್ಲಿ ಸಾತ್ವತಃ ಎಂದರೆ ಶ್ರೀಕೃಷ್ಣ ಹೇಗೆ? ಪ್ರಾಕೃತ ಗುಣರಹಿತನಾದ್ದರಿಂದ ಅವನಲ್ಲಿ ಸತ್ವಗುಣವಿಲ್ಲ ತಾನೆ? ಧರ್ಮ ಭಗ ಮುಂತಾದವುಗಳಿಗೆ ನಿಯಾಮಕವಾದ ಭಗವದ್ರೂಪಗಳಿಗೆ ಅವೇ ಹೆಸರುಗಳು ಹೇಗೆ ಕೂಡುತ್ತವೆ? ಈ ಪ್ರಶ್ನೆಗಳಿಗೆ ಸಮಾಧಾನ—

ಸಾತ್ವಿಕಾನಾಮನುಗ್ರಾಹಕಃ ।

ಅಗುಣೋಽಪಿ ಪರೋ ದೇವೋ ಹ್ಯನುಗೃಹ್ಣಾತಿ ಸಾತ್ವಿಕಾನ್ ।
ದೇವಾಂಸ್ತು ಮಾನವಾನ್ ಮಧ್ಯಾನ್ ಉಪೇಕ್ಷ್ಯಕ್ಲೇಶ್ಯತೇಽಸುರಾನ್ ।
ಇತಿ ಬ್ರಹ್ಮದರ್ಶನೇ ।

ಸಾತ್ವತಃ ಸಾತ್ವಿಕಸ್ನೇಹಾತ್ ಸತ್ತ್ವೋ ಹ್ಯಾನಂದರೂಪತಃ ।
ಇತಿ ಬ್ರಹ್ಮವೈವರ್ತೇ।

ಧಾರಕತ್ವಾದ್ ಧರ್ಮರೂಪೋ ಹ್ಯೈಶ್ವರ್ಯಾದೇರ್ಭಗೋ ಹ್ಯಸೌ
ಸತ್ಯಮಾನಂದ ರೂಪತ್ವಾತ್ ಋತೋ ಜ್ಞಾನಸ್ವರೂಪತಃ ।
ಯಶೋ ಹ್ಯಲಂ ಪ್ರಸಿದ್ಧತ್ವಾದ್ ದಯಾ ಹಿ ಕರುಣಾಕರಃ ।
ಇತಿ ತಂತ್ರಭಾಗವತೇ ।

ಏವಂವಿಧ ಗುಣಸ್ವರೂಪಾಣಿ ರೂಪಾಣಿ ದಧದ್ ಯುಗೇಯುಗೇ ॥

ಸಾತ್ವಿಕರಿಗೇ ಅನುಗ್ರಹಿಸುವುದರಿಂದ ಭಗವಂತ ಸಾತ್ವತನೆನಿಸಿದ್ದಾನೆ.

ಸತ್ವಾದಿ ಗುಣರಹಿತನಾದರೂ ಭಗವಂತ ಸಾತ್ವಿಕರಾದ ದೇವತೆಗಳಿಗೆ ಅನುಗ್ರಹಿಸುತ್ತಾನೆ. ಮಧ್ಯಮ ಮನುಷ್ಯರಲ್ಲಿ ಉದಾಸೀನ ಭಾವದಿಂದಿರುತ್ತಾನೆ. ತಾಮಸರಾದ ಅಸುರರಿಗೆ ದುಃಖ ನೀಡುತ್ತಾನೆ ಎಂದು ಬ್ರಹ್ಮದರ್ಶನ ಎಂಬ ಗ್ರಂಥದಲ್ಲಿ ಹೇಳಿದೆ.

ಸಾತ್ವಿಕರಲ್ಲಿ ಪ್ರೀತಿ ಉಳ್ಳವನಾದ್ದರಿಂದ ಶ್ರೀಹರಿ ಸಾತ್ವತನೆನಿಸಿದ್ದಾನೆ. ಆನಂದ ರೂಪನಾಗಿರುವುದರಿಂದ ಸತ್ವ ಎನಿಸಿದ್ದಾನೆ ಎಂದು ಬ್ರಹ್ಮವೈವರ್ತಪುರಾಣದಲ್ಲಿದೆ.

ಧರ್ಮದಲ್ಲಿ ನಿಯಾಮಕವಾಗಿರುವ ಭಗವದ್ರೂಪ ಲೋಕಧಾರಕವಾದ್ದರಿಂದ ಧರ್ಮ ಎನಿಸಿದೆ. ಐಶ್ವರ್ಯವೀರ್ಯ ಮುಂತಾದ ಷಡ್ಗುಣಗಳಿಗೆ ಭಗ ಎಂದು ಹೆಸರು. ಪ್ರಾಕೃತವಾದ ಆ ಗುಣಗಳಿಗೆ ನಿಯಾಮಕವಾದ ಭಗವದ್ರೂಪದಲ್ಲಿ ಅಪ್ರಾಕೃತವಾದ ಭಗ ಎಂಬ ಗುಣಗಳಿರುವುದರಿಂದ ಆ ರೂಪಕ್ಕೆ ಭಗ ಎಂದು ಹೆಸರು. ಸತ್ಯನಿಯಾಮಕರೂಪ ಆನಂದಸ್ವರೂಪವಾದುದರಿಂದ ಅದಕ್ಕೆ ಸತ್ಯ ಎಂದು ಹೆಸರು. ಋತವೆಂದರೆ ಜ್ಞಾನ, ಜ್ಞಾನನಿಯಾಮಕರೂಪ ಅಪ್ರಾಕೃತ ಜ್ಞಾನಸ್ವರೂಪವಾದ್ದರಿಂದ ಅದಕ್ಕೆ ಋತ ಎಂದು ಹೆಸರು. ಅತಿ ಪ್ರಸಿದ್ಧವಾದ್ದರಿಂದ ಯಶೋ ನಿಯಾಮಕವಾದ ರೂಪಕ್ಕೆ ಯಶಸ್ ಎಂದು ಹೆಸರು. ದಯಾನಿಯಾಮಕ ರೂಪ ದಯಾಕರವಾದ್ದರಿಂದ ದಯಾ ಎಂದು ಹೆಸರು ಎಂದು ತಂತ್ರಭಾಗವತ ಗ್ರಂಥದಲ್ಲಿ ಉಕ್ತವಾಗಿದೆ. ಇಂಥ ಗುಣಗಳುಳ್ಳ ಗುಣನಿಯಾಮಕರೂಪಗಳನ್ನೂ ಮತ್ಸ್ಯಾದಿರೂಪಗಳನ್ನೂ ಧರಿಸಿ ಪ್ರತಿಯುಗದಲ್ಲಿ ಅವತರಿಸುತ್ತಾನೆ, ಶ್ರೀಕೃಷ್ಣ.

ಬೇರೆ ವ್ಯಾಖ್ಯಾನಕಾರರು 'ಸಾತ್ವತಃ' ಎಂಬಲ್ಲಿ 'ಸತ್ವತಃ' ಎಂದು ಪಾಠವಿಟ್ಟುಕೊಂಡು ಶುದ್ಧಸತ್ವಮಯವಾದ ಶರೀರಗಳನ್ನು ಧರಿಸಿ ಭಗವಂತ ಅವತರಿಸುತ್ತಾನೆ ಎಂದಿದ್ದಾರೆ.[೧] ಅವರಿಗೆ 'ಅಗುಣೋಽಪಿ ಪರೋ ದೇವೋ ಹ್ಯನುಗೃಹ್ಣಾತಿ ಸಾತ್ವಿಕಾನ್' ಎಂದು ಶ್ರೀಮದಾಚಾರ್ಯರು ಉದಾಹರಿಸಿರುವ ಬ್ರಹ್ಮದರ್ಶನ ಗ್ರಂಥದ ವಿರೋಧ ಸ್ಪಷ್ಟ. ಅಗುಣ ಎಂದರೆ ಸತ್ವಾದ್ವಿಗುಣರಹಿತನಾದ ಪರಮಾತ್ಮನಿಗೆ ಶುದ್ಧಸತ್ವಮಯ ಶರೀರವೂ ಕೂಡಲಾರದು. ಅದರಿಂದ ಅದು ಅಪಪಾಠ.

★★★

ಶ್ರೀಕೃಷ್ಣಪತ್ನಿಯರು ಧನ್ಯರೆಂದು ಹೊಗಳುತ್ತಾರೆ ಹಸ್ತಿನಾವತಿಯ ನಾರಿಯರು—

ಏತಾಃ ಪುರಾ ಸ್ತ್ರೀತ್ವಮುವಾಪ್ತಯೇ ಸಮಂ
ನಿರಸ್ತಶೋಕಂ ಬತ ಸಾಧು ಕುರ್ವತೇ ।
ಯಾಸಾಂ ಗೃಹಾತ್ ಪುಷ್ಕರಲೋಚನಃ ಪತಿ-
ರ್ನ ಜಾತ್ವಪೈತ್ಯಾಕೃತಿಭಿರ್ಹೃದಿ ಸ್ಪೃಶನ್ ॥ ೩೧ ॥

---

೧. ಸತ್ವತೋ ವಿಶುದ್ಧ ಸತ್ವೇನ ರೂಪಾಣಿ ದಧತ್ । -ಶ್ರೀಧರಃ

ಸತ್ವತಃ ಶುದ್ಧಸತ್ವಮಯಾನಿ ರೂಪಾಣಿ ಯುಗೇಯುಗೇ ದಧತ್ । -ವೀರರಾಘವಃ

ಸತ್ವೇನ ರೂಪಾಣಿ ಧತ್ತೇ ಸತ್ವಸ್ಯ ಶರೀರ ಸಮವಾಯಿತ್ವಂ ವಾ ಶರೀರಶೋಧಕತ್ವಂ ವಾ ಶರೀರತ್ವಂ ವಾ ಪ್ರಾದುರ್ಭಾವ ನಿಮಿತ್ತತ್ವಂ ವಾ ಭವತಿ । -ವಲ್ಲಭಾಚಾರ್ಯಃ

ಈ ಕೃಷ್ಣಪತ್ನಿಯರು ಸ್ತ್ರೀತ್ವವನ್ನು ಪಡೆಯಲು ಪೂರ್ವಜನ್ಮದಲ್ಲಿ ಎಲ್ಲರೂ ಜೊತೆಗೂಡಿ ಎಲ್ಲ ಕ್ಲೇಶಗಳನ್ನೂ ಮರೆತು ಒಳ್ಳೆಯ ತಪಸ್ಸನ್ನು ಮಾಡಿದ್ದರು. ಅದರಿಂದಲೆ ಕೃಷ್ಣ ತನ್ನ ರೂಪದಿಂದ ಮಾತು ಕೃತಿಗಳಿಂದ ಅವರ ಮನಸ್ಸನ್ನು ಸೂರೆಗೊಳ್ಳುತ್ತ ಅವರ ಮನೆಯಿಂದಾಚೆ ಎಂದೂ ತೊಲಗದೆ ಬಳಿಯಲ್ಲಿಯೆ ಇರುತ್ತಾನೆ !

ಇವರು ತಪಸ್ಸಿನಿಂದ ಸ್ತ್ರೀತ್ವಪಡೆದವರೆಂಬ ಮಾತಿನಿಂದ ಹಿಂದೆ ಇವರು ಪುರುಷರೆಂದು ಹೇಳಿದಂತಾಯಿತು. ಯಾರು ಈ ಪುರುಷರು?

ಅಗ್ನಿಪುತ್ರಾ ಮಹಾತ್ಮಾನಸ್ತಪಸಾ ಸ್ತ್ರೀತ್ವಮಾಪಿರೇ ।
ಭರ್ತಾರಂ ಚ ಜಗದ್ಯೋನಿಂ ವಾಸುದೇವಮಜಂ ವಿಭುಂ ॥

ಇತಿ ಮಹಾಕೌರ್ಮೇ ।

ಮಹಾತ್ಮರಾದ ಅಗ್ನಿಪುತ್ರರು ತಪಸ್ಸಿನಿಂದ ಸ್ತ್ರೀತ್ವವನ್ನು ಹೊಂದಿದರು ಮತ್ತು ಜಗತ್ಕರ್ತನಾದ ಪ್ರಭು ವಾಸುದೇವನನ್ನು ಪತಿಯಾಗಿ ಪಡೆದರು ಎಂದು ಮಹಾಕೌರ್ಮ ಪುರಾಣದಲ್ಲಿದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ ಅಪಪಾಠವಿಟ್ಟುಕೊಂಡಿದ್ದಾರೆ—

ಏತಾಃ ಪರಂ ಸ್ತ್ರೀತ್ವಮಪಾಸ್ತಪೇಶಲಂ
ನಿರಸ್ತಶೌಚಂ ಬತ ಸಾಧು ಕುರ್ವತೇ ॥

'ಸ್ತ್ರೀಜಾತಿಯೆ ಅಸ್ವತಂತ್ರ ಮತ್ತು ಅಶುಚಿ. ಹಾಗಿದ್ದರೂ ಕೃಷ್ಣಪತ್ನಿಯರು ಅದನ್ನು ಶುದ್ಧಿಗೊಳಿಸಿದರು' ಎಂದು ವ್ಯಾಖ್ಯಾನ. ವಸ್ತುತಃ ಉತ್ತಮ ಸ್ತ್ರೀಯರು ವೇದಾಧಿಕಾರ ಉಳ್ಳವರೆನಿಸಿರುವುದರಿಂದ ಸ್ತ್ರೀಜಾತಿಯೆ ಅಶುಚಿ ಎನ್ನಲಾಗದು. ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಈ ಪ್ರಶ್ನೆಗೆ 'ಇತರ ಸ್ತ್ರೀಜಾತಿಯನ್ನು ತಮ್ಮ ಕೀರ್ತಿಯಿಂದ ಶುದ್ಧಗೊಳಿಸಿದರೆಂದು ಸಮಾಧಾನ ನೀಡಿದ್ದಾರೆ.[೧] ಕೃಷ್ಣಪತ್ನಿಯರು ಉತ್ತಮ ಸ್ತ್ರೀಯರು ಅವರೇನೂ ಗೋಪಿಯರಲ್ಲ, ಕ್ಷತ್ರಿಯ ಜಾತಿಯವರು. ಉತ್ತಮ ಸ್ತ್ರೀಯರ ನಡತೆಗಳಿಂದ ಅಧಮ ಸ್ತ್ರೀಜಾತಿ ಶುದ್ಧವಾಗುವುದೆಂದರೇನು?

★★★

೧. ಸ್ತ್ರೀತ್ವಂ ಸ್ತ್ರೀಜಾತಿಃ । ಸಾ ಚ ರುಕ್ಮಿಣ್ಯಾದ್ಯವರ ತಜ್ಜಾತಿಭೇದತ್ವೇನೈವಾತ್ರ ಗೃಹೀತಾ । ಅಪಾಸ್ತಪೇಶಲತ್ವಾದಿಕಂ ತಜ್ಜಾತ್ಯಂತರಾಶ್ರಯಂ । ನ ತು ರುಕ್ಮಿಣ್ಯಾದ್ಯಾಶ್ರಯಂ । ತಾಭಿ ಸ್ವಾಸ್ವಾಮಪಿ ಸಾಧುತ್ವಕರಣಾತ್ । ತತಶ್ಚಾನ್ಯಾಂ ತತ್ತದ್ದೋಷಯುಕ್ತಾಂ ಸ್ತ್ರೀಜಾತಿಮಪಿ ಯಾ ನಿಜಕೀರ್ತ್ಯಾದಿನಾ ಶುದ್ಧಾಂ ಕುರ್ವಂತೀತ್ಯರ್ಥಃ । -ಜೀವಗೋಸ್ವಾಮೀ, ವಂಶೀಧರಃ

ಶ್ರೀಕೃಷ್ಣ ಹಸ್ತಿನಾವತಿಯಿಂದ ದ್ವಾರಕೆಗೆ ಪ್ರಯಾಣ ಮಾಡುವಾಗ ಶತ್ರುಗಳು ಆಕ್ರಮಣ ಮಾಡಬಹುದೆಂಬ ಭೀತಿಯಿಂದ ಧರ್ಮರಾಜ ಚತುರಂಗ ಸೈನ್ಯವನ್ನು ಜೊತೆಗೆ ಕಳಿಸಿಕೊಟ್ಟ—

ಅಜಾತಶತ್ರುಃ ಪೃತನಾಂ ಗೋಪೀಥಾಯ ಮಧುದ್ವಿಷಃ ।
ಪರೇಭ್ಯಃ ಶಂಕಿತಃ ಸ್ನೇಹಾತ್ ಪ್ರಾಯುಂಕ್ತ ಚತುರಂಗಿಣೀಂ ॥ ೩೩ ॥

ಶತ್ರುಗಳಿಂದ ಅಪಾಯವಾದೀತೆಂದು ಬಗೆದು ಕೃಷ್ಣನ ರಕ್ಷಣೆಗಾಗಿ ಧರ್ಮರಾಜ ಸ್ನೇಹದಿಂದ ಚತುರಂಗ ಸೈನ್ಯವನ್ನು ಜೊತೆಗೆ ಕಳಿಸಿದ.

ಮಾಹಾತ್ಮ್ಯಜ್ಞಾನಪೂರ್ವಕ ಸ್ನೇಹವೆ ಭಕ್ತಿ ಎನಿಸಿದರೂ ಈ ಶ್ಲೋಕದಲ್ಲಿ ಸ್ನೇಹವೆಂದರೆ ಭಕ್ತಿ ಎನ್ನುವಂತಿಲ್ಲ. ಭಗವಂತನಿಗೆ ಶತ್ರುಗಳಿಂದ ಅಪಾಯ ಶಂಕೆ ಮಾಡುತ್ತಿದ್ದಾನೆ ಧರ್ಮರಾಜ. ಆದರಿಂದ ಸ್ನೇಹವೆಂದರೆ ಬರಿ ಸ್ನೇಹವೆ ಹೊರತು ಮಾಹಾತ್ಮ್ಯಜ್ಞಾನ ಆಗ ಮರೆಯಾಗಿತ್ತೆನ್ನಬೇಕು.

ಸ್ನೇಹಮಾತ್ರಾತ್ ।

ಇಲ್ಲಿ ಸ್ನೇಹ ಶಬ್ದದಿಂದ ಸ್ನೇಹ ಮಾತ್ರವೆ ವಿವಕ್ಷಿತ ಹೊರತು ಭಕ್ತಿಯಲ್ಲ.

★★★

ಶ್ರೀಕೃಷ್ಣ ಹಸ್ತಿನಾವತಿಯಿಂದ ಹೊರಟು ಕುರುಜಾಂಗಲ ಪಾಂಚಾಲ ಮುಂತಾದ ಅನೇಕ ದೇಶಗಳನ್ನು ದಾಟಿ ಸಂಜೆ ಸೂರ್ಯಾಸ್ತ ಸಮಯದಲ್ಲಿ ಆನರ್ತದೇಶವನ್ನು ತಲುಪಿದ.

ತತ್ರತತ್ರ ಚ ತತ್ರತ್ಯೈರ್ಹರಿಃ ಪ್ರತ್ಯುದ್ಯತಾರ್ಹಣಃ ।
ಸಾಯಂ ಭೇಜೇ ದಿಶಂ ಪಶ್ಚಾದ್ ಗವಿಷ್ಠೋ ಗಾಂ ಗತಸ್ತದಾ ॥ ೩೭ ॥

ಅಲ್ಲಲ್ಲಿ ಅಲ್ಲಿಯ ಜನರಿಂದ ಸತ್ಕಾರ ಸ್ವೀಕರಿಸುತ್ತ ಶ್ರೀಕೃಷ್ಣ ಸಾಯಂಕಾಲದಲ್ಲಿ ಪಶ್ಚಿಮ ದಿಕ್ಕನ್ನು ಸೇರಿದ. ಆಗ ಸೂರ್ಯ ಸಮುದ್ರಜಲದಲ್ಲಿ ಅಸ್ತಂಗತನಾದ.

ಈ ಶ್ಲೋಕದಲ್ಲಿ 'ಗವಿಷ್ಠ' ಎಂದರೇನು?—

ಗವಿಷ್ಠ ಆದಿತ್ಯಃ ।

'ಅಸೌ ವಾವ ಗವಿಷ್ಠೋಽಪ್ಸ್ವಾದೇತ್ಯಪ್ಸ್ವಸ್ತಮೇತಿ'

ಇತಿ ಮಾಧ್ಯಂದಿನಾಯನ ಶ್ರುತಿಃ ।

'ಗವಿಷ್ಠ' ಎಂದರೆ ಸೂರ್ಯ. 'ಗವಿಷ್ಠನು ನೀರಲ್ಲಿ ಉದಿಸುತ್ತಾನೆ. ನೀರಲ್ಲಿ ಅಸ್ತಂಗತನಾಗುತ್ತಾನೆ' ಎಂದು ಮಾಧ್ಯಂದಿನಾಯನ ಶ್ರುತಿ ಇದೆ.

ಗೋ ಶಬ್ದಕ್ಕೆ ಇಲ್ಲಿ ಆಕಾಶ ಅಥವಾ ಸಮುದ್ರಜಲ ಎಂದರ್ಥ. ಗವಿ-ಆಕಾಶದಲ್ಲಿ ಅಥವಾ ಸಮುದ್ರಜಲದಲ್ಲಿ 'ಷ್ಠ'-ಇರುವವನು ಸೂರ್ಯ ಎಂದರ್ಥ. ಅಲುಕ್ ಸಮಾಸ. ಏಕೆಂದರೆ ಶ್ರುತಿಯಲ್ಲಿ ಸೂರ್ಯ ಎಂಬ ಅರ್ಥದಲ್ಲಿ ಗವಿಷ್ಠ ಶಬ್ದ ಪ್ರಯೋಗ ಕಂಡಿದೆ.

★★★

ದ್ವಾರಕೆಯ ಪ್ರಜೆಗಳು ಶ್ರೀಕೃಷ್ಣನನ್ನು ಇದಿರುಗೊಂಡು ಹೇಳುತ್ತಾರೆ—

ಯರ್ಹ್ಯಂಬುಜಾಕ್ಷಾಂಚತಿ ಮಾಧವೋ ಭವಾನ್
ಕುರೂನ್ ಮಧೂನ್ ವಾಽಥ ಸುಹೃದ್ದಿದೃಕ್ಷಯಾ ।
ತತ್ರಾಬ್ದಕೋಟಿ ಪ್ರತಿಮಃ ಕ್ಷಣೋ ಭವೇದ್
ರವಿಂ ವಿನಾಽಕ್ಷ್ಣೋಮಿವ ನಸ್ತವಾಚ್ಯುತ ॥ ೪೬ ॥

ಕಮಲಾಕ್ಷ, ನೀನು ಕುರುದೇಶಕ್ಕೆ ಮಿತ್ರರಾದ ಪಾಂಡವರನ್ನು ಕಾಣುವ ಇಚ್ಛೆಯಿಂದ ಹೋಗುವಾಗ ಇತ್ತ ಯಾದವರಿಗೂ, ಕುರುದೇಶದಿಂದ ಮಧುದೇಶಕ್ಕೆ ಬರುವಾಗ ಅತ್ತ ಪಾಂಡವರಿಗೂ ನೀನಿಲ್ಲದ ಒಂದು ಕ್ಷಣವೂ, ಕಣ್ಣುಗಳಿಗೆ ಸೂರ್ಯನಿಲ್ಲದ ಕ್ಷಣದಂತೆ, ಕೋಟಿ ವರ್ಷದಂತೆ ದೀರ್ಘವಾಗಿ ಕಾಣುವುದು.

ಇಲ್ಲಿ 'ಅಕ್ಷ್ಣೋಮಿವ ನಃ' ಎಂದು 'ನಃ' ನಮಗೆ ಎಂದರೆ ಯಾರಿಗೆ? ಯಾದವರಿಗೆ ಎನ್ನುವುದಾದರೆ ಶ್ರೀಕೃಷ್ಣ ಮಧುದೇಶಕ್ಕೆ ಬರುವಾಗ ಯಾದವರಿಗೆ ಕ್ಷಣ ಯುಗವೆನಿಸುವುದು ಕೂಡುವುದಿಲ್ಲ. ಪಾಂಡವರಿಗೆ ಎನ್ನುವುದಾದರೆ ಕುರುದೇಶಕ್ಕೆ ಹೋಗುವಾಗ ಪಾಂಡವರಿಗೆ ಕ್ಷಣ ಯುಗವೆನಿಸುವುದು ಕೂಡುವುದಿಲ್ಲ' ಎಂಬ ಸಮಸ್ಯೆ. ಇದಕ್ಕೆ ಪರಿಹಾರ—

ಕುರೂಣಾಂ ಮಧೂನಾಂ ಚ ನಃ ।

ನಮಗೆ ಎಂದರೆ ಪಾಂಡವರಿಗೂ ಯಾದವರಿಗೂ ಎಂದರ್ಥ. ಪಾಂಡವರನ್ನು ಕಾಣಲು ನೀನು ಅತ್ತ ಹೋದರೆ ಇತ್ತ ನಮಗೆ ನಿನ್ನ ವಿರಹ. ನೀನಿತ್ತ ಬಂದರೆ ಅತ್ತ ಪಾಂಡವರಿಗೆ ವಿರಹ ಅಸಹನೀಯವಾಗುವುದೆಂದರ್ಥ.

ಬೇರೆ ವ್ಯಾಖ್ಯಾನಕಾರರು 'ನಃ ನಮಗೆ ಎಂದರೆ ಯಾದವರಿಗೆ' ಎಂದೇ ಅರ್ಥ. ನೀನು ಕುರುದೇಶಕ್ಕೆ ಅಥವಾ ನಂದಗೋಕುಲಕ್ಕೆ ಹೋದರೆ ನಮಗೆ ಇಲ್ಲಿ ನಿನ್ನ

ವಿರಹವೇದನೆ ಉಂಟಾಗುವುದು ಎಂದು ವ್ಯಾಖ್ಯಾನ ಮಾಡಿದ್ದಾರೆ.[೧] ಆದರೆ ನಂದಗೋಕುಲದಲ್ಲಿ ಇರುವವರು ವೈಶ್ಯರಾದ ಗೊಲ್ಲರು ಹೊರತು ಕ್ಷತ್ರಿಯರಾದ ಮಧು ಎಂಬ ಯಾದವರಲ್ಲ. ಆದರಿಂದ ಮಧೂನ್ ಎಂದರೆ ಮಧುರಾನ್ ಎಂದೂ ಮಧುರೆ ಎಂದರೆ ನಂದಗೋಕುಲ ಎಂದೂ ವ್ಯಾಖ್ಯಾನಿಸುವುದು ಸರಿಯಲ್ಲ. ಮುಂದೆ ೪೮ನೇ ಶ್ಲೋಕದಲ್ಲಿ ಮಧು ಭೋಜ ದಶಾರ್ಹ ಅರ್ಹ ಕುಕುರ ಅಂಧಕ ವೃಷ್ಣಿ ಎಂದು ಏಳು ಯಾದವ ಕುಲಗಳನ್ನು ಭಾಗವತ ಹೆಸರಿಸಿದೆ. 'ಮಧ್ವಾದಯಃ ಸಪ್ತ ಯದೂನಾಮವಾಂತರಭೇದಾಃ' ಮಧು ಮುಂತಾದವರು ಏಳು ಯಾದವ ಒಳಪಂಗಡದವರು ಎಂದು ವಂಶೀಧರ ವ್ಯಾಖ್ಯಾನವೆ ಹೇಳುತ್ತದೆ.

★★★

ದ್ವಾರಕೆಯಲ್ಲಿ ಶ್ರೀಕೃಷ್ಣ ಹದಿನಾರು ಸಾವಿರ ಸ್ತ್ರೀಯರೊಡನೆ ಇದ್ದೂ ತಾನು ಮಾತ್ರ ಅವರಿಗೆ ವಶನಾಗದೆ ತನ್ನ ಸರ್ವೇಶ್ವರತ್ವವನ್ನು ಮೆರೆದ—

ಯತ್ತದೀಶನಮೀಶಸ್ಯ ಪ್ರಕೃತಿಸ್ಥೋಽಪಿ ತದ್ಗುಣೈಃ ।
ನ ಯುಜ್ಯತೇ ಸದಾಽಽತ್ಮಸ್ಥೈರ್ಯಥಾ ಬುದ್ಧಿಸ್ತದಾಶ್ರಯಾ ॥ ೭೫ ॥

ಭಗವಂತನ ಜ್ಞಾನಿಗಳೇ ಪ್ರಾಕೃತ ಶರೀರದಲ್ಲಿದ್ದೂ ಅದರ ಕಾರ್ಯವಾದ ದುಃಖಾದಿಗಳ ಲೇಪವಿಲ್ಲದವರಾಗುತ್ತಾರೆ ಎಂದ ಮೇಲೆ ಭಗವಂತನಾದ ಕೃಷ್ಣ ಪ್ರಾಕೃತಸ್ತ್ರೀಯರೊಡನಿದ್ದೂ ಅವರಿಂದಾಗುವ ಸುಖಾದಿಗಳ ಲೇಪವಿಲ್ಲದೇ ಇರುತ್ತಾನೆ ಎಂದು ಬೇರೇನು ಹೇಳಬೇಕು? ಇದೇ ಭಗವಂತನ ಸರ್ವೇಶ್ವರತ್ವ.

'ಯಥಾ ಬುದ್ಧಿಸ್ತದಾಶ್ರಯಾ' ಪರಮಾತ್ಮನ ಜ್ಞಾನದಂತೆ ಎಂದು ದೃಷ್ಟಾಂತ ಕಾಣುತ್ತದೆ. ಅದರ ಅರ್ಥವೇನು?

ತದಾಶ್ರಯಾ ಬುದ್ಧಿಃ । ತಜ್ಜ್ಞಾನಿನಾಮಪಿ ಪ್ರಕೃತಿಸ್ಥಾನಾಂ ನ ತತ್ಸಂಗಃ ।
ಕಿಮು ತಸ್ಯೇತಿ ವ್ಯತ್ಯಾಸದೃಷ್ಟಾಂತಃ ।
ವ್ಯತ್ಯಾಸೋಽನನ್ವಯಶ್ಚೈವ ಪ್ರಸಿದ್ಧೋಽಭೂತ ಏವ ಚ ।
ಸರ್ವಸಾಂಹಾರಕಶ್ಚೇತಿ ದೃಷ್ಟಾಂತಃ ಪಂಚಧಾ ಸ್ಮೃತಃ ॥ ಇತಿ ಬ್ರಾಹ್ಮೇ ।

ಭಗವಂತನ ಜ್ಞಾನ. ಭಗವಂತನ ಜ್ಞಾನಿಗಳಿಗೂ ಕೂಡ ಪ್ರಾಕೃತ

---

೧. ಕುರೂನ್ ಹಸ್ತಿನಾಪುರಂ ಮಧೂನ್ ಮಥುರಾಂ ವಾ । -ಶ್ರೀಧರಃ

ಮಥುರಾಶಬ್ದೇನ ತನ್ಮಂಡಲಂ ಗ್ರಾಹ್ಯಂ । ನಂದವ್ರಜಮಿತ್ಯರ್ಥಃ । ನ ತು ಮಥುರಾಯಾಂ ತದಾನೀಂ ತಸ್ಯ ಸುಹೃದಃ ಸಂತಿ । 'ತತ್ರ ಯೋಗ ಪ್ರಭಾವೇಣ ನೀತ್ವಾ ಸರ್ವಜನಂ ಹರಿಃ' ಇತಿ ಸರ್ವಶಬ್ದಾತ್।... ಮಧ್ವಾದಯಃ ಸಪ್ತ ಯದೂನಾಮವಾಂತರಭೇದಾಃ । -ವಂಶೀಧರಃ

ಶರೀರದಲ್ಲಿರುವವರಿಗೆ ಅದರ ಲೇಪವಿಲ್ಲ ಎಂದಮೇಲೆ ಭಗವಂತನಿಗೆ ಇಲ್ಲವೆಂದು ಬೇರೇನು ಹೇಳಬೇಕು ಎಂದು ವ್ಯತ್ಯಾಸದೃಷ್ಟಾಂತವಾಗಿದೆ. .

ವ್ಯತ್ಯಾಸ ದೃಷ್ಟಾಂತ, ಅನನ್ವಯ ದೃಷ್ಟಾಂತ, ಪ್ರಸಿದ್ಧ ದೃಷ್ಟಾಂತ, ಅಭೂತ ದೃಷ್ಟಾಂತ, ಸರ್ವಸಾಂಹಾರಕ ದೃಷ್ಟಾಂತ ಎಂದು ದೃಷ್ಟಾಂತ ಐದು ಬಗೆಯಾಗಿದೆ ಎಂದು ಬ್ರಹ್ಮಪುರಾಣದಲ್ಲಿದೆ.

ವಿವಕ್ಷಿತಧರ್ಮವು ದಾರ್ಷ್ಟಾಂತಿಕಕ್ಕಿಂತ ದೃಷ್ಟಾಂತದಲ್ಲಿ ಮುಖ್ಯವಾಗಿರಬೇಕು. ಇದು ವ್ಯತ್ಯಾಸ ಹೊಂದಿ ದಾರ್ಷ್ಟಾಂತಿಕದಲ್ಲಿಯೆ ಮುಖ್ಯವಾದರೆ ಕೈಮುತ್ಯನ್ಯಾಯ ಬರುವುದರಿಂದ ವ್ಯತ್ಯಾಸ ದೃಷ್ಟಾಂತವೆನಿಸುತ್ತದೆ. ಪ್ರಕೃತ ದೃಷ್ಟಾಂತ ಇದಕ್ಕೆ ಉದಾಹರಣೆ.

ಸ್ವಯಂ ತು ಭಗವಾನ್ ವ್ಯಾಸೋ ವ್ಯಾಪ್ತಜ್ಞಾನ ಮಹಾಂಶುಮಾನ್ ।
ಅನಂತಾಕಾಶವತ್ ಪಶ್ಯನ್ ।

ಅನಂತಾಕಾಶದಂತೆ ವ್ಯಾಪ್ತಜ್ಞಾನಪ್ರಕಾಶಉಳ್ಳ ವ್ಯಾಸರು ನೋಡುತ್ತಾರೆ ಎಂಬಲ್ಲಿ ಅನಂತಾಕಾಶದಂತೆ ನೋಡುತ್ತಾರೆ ಎಂದು ಅನ್ವಯವಿಲ್ಲ, ಜ್ಞಾನ ಅನಂತಾಕಾಶದಂತೆ ವ್ಯಾಪ್ತ ಎಂದು ಮಾತ್ರ ದೃಷ್ಟಾಂತ. ಅದರಿಂದ ಇದು ಅನನ್ವಯ ದೃಷ್ಟಾಂತ.

ಚಂದ್ರನಂತೆ ಮುಖ, ಕಮಲದಂತೆ ಕಣ್ಣು ಎಂದು ಮುಂತಾದುದು ಪ್ರಸಿದ್ಧ ದೃಷ್ಟಾಂತ.

ದಿವಿ ಸೂರ್ಯಸಹಸ್ರಸ್ಯ ಭವೇದ್ ಯುಗಪದುತ್ಥಿತಾ ।
ಯದಿ ಭಾ ಸದೃಶೀ ಸಾ ಸ್ಯಾತ್ ಭಾಸಸ್ತಸ್ಯ ಮಹಾತ್ಮನಃ ॥

'ಆಕಾಶದಲ್ಲಿ ಒಮ್ಮೆಲೆ ಸಾವಿರ ಸೂರ್ಯರ ಬೆಳಕು ತೋರಿದರೆ ಆಗ ಅವನ ಪ್ರಕಾಶಕ್ಕೆ ಸಮವಾದೀತು'. ಇಲ್ಲಿ ಸಾವಿರಸೂರ್ಯರ ಬೆಳಕು ಒಮ್ಮೆಲೆ ತೋರುವುದು. 'ಅಭೂತ' ಎಂದೂ ಸಂಭವಿಸಲಾರದ್ದು. ಅದನ್ನು ದೃಷ್ಟಾಂತ ನೀಡಿದ್ದರಿಂದ ಅಭೂತ ದೃಷ್ಟಾಂತ.

'ಯಾವ ಯಾವ ಪ್ರದೇಶ ಹೊಗೆಉಳ್ಳದೊ ಅದು ಬೆಂಕಿ ಉಳ್ಳದೂ ಆಗಿರುತ್ತದೆ. ಅಡಿಗೆ ಮನೆಯಂತೆ' ಎಂಬುದು ಸರ್ವ ಸಾಂಹಾರಕ ದೃಷ್ಟಾಂತ. ಕೇವಲ ಬೆಂಕಿ ಮಾತ್ರವಲ್ಲದೆ ಹೊಗೆಯ ವಿಷಯದಲ್ಲಿಯೂ ಅಡಿಗೆಮನೆ ಸರ್ವಸಂಗ್ರಾಹಕವಾದ ದೃಷ್ಟಾಂತವಾಗುತ್ತದೆ.

★★★

ಅಜ್ಞರು ಮಾತ್ರ ಶ್ರೀಕೃಷ್ಣನನ್ನು ಸ್ತ್ರೀಲೋಲನೆಂದೇ ತಪ್ಪು ತಿಳಿದರು—

ತಂ ಮೇನಿರೇ ಖಲಾ ಮೂಢಾಃ ಸ್ತ್ರೈಣಂ ಚಾನುವ್ರತಂ ಹರೇಃ ।
ಅಪ್ರಮಾಣವಿದೋ ಭರ್ತುರೀಶ್ವರಂ ಮತಯೋ ಯಥಾ ॥ ೭೬ ॥

ವಿಷಯಾಸಕ್ತರಾಗಿದ್ದು ಮೂಢರಾದ ಶಾಸ್ತ್ರಜ್ಞಾನವಿಲ್ಲದ ಜನರು ತಮ್ಮ ಬುದ್ಧಿಗೆ ಅನುಸಾರವಾಗಿ ಶ್ರೀಕೃಷ್ಣ ಹೆಂಡತಿಯರಿಗೆ ಗುಲಾಮನಂತೆ ಅವರಿಗೆ ವಶನಾಗಿದ್ದಾನೆ ಎಂದು ಭಾವಿಸಿದರು.

'ಯಥಾ ಮತಯಃ' 'ಬುದ್ಧಿಗಳಂತೆ' ಎಂದು ಇಲ್ಲಿ ದೃಷ್ಟಾಂತವಲ್ಲ. ತಮ್ಮ ತಮ್ಮ ಬುದ್ಧಿಗಳಿಗೆ ಅನುಸಾರವಾಗಿ ಎಂದರ್ಥ.

ಮತಯೋ ಯಥಾ, ಯಥಾಮತಿ, ಮೇನಿರೇ ।

'ಮತಯೋ ಯಥಾ' ಎಂದರೆ ತಮ್ಮ ಬುದ್ಧಿಗನುಸಾರವಾಗಿ ತಿಳಿದರು ಎಂದರ್ಥ.

'ಯಥಾಮತಿ' ಎಂಬು ಅವ್ಯಯೀಭಾವಸಮಾಸ ನಿತ್ಯ. 'ಮತಿಂ ಅನತಿಕ್ರಮ್ಯ' ಎಂದು ಅಸ್ವಪದವಿಗ್ರಹ ಮಾಡಬೇಕಾಗಿತ್ತು. 'ಯಥಾ ಮತಯಃ' ಎಂದು ಸ್ವಪದವಿಗ್ರಹ ಮಾಡಿ ಸಮಾಸ ಮಾಡದಿರುವುದು ಲೌಕಿಕ ಪ್ರಯೋಗದಲ್ಲಿ ವ್ಯಾಕರಣ ಸಮ್ಮತ ವಾಗುವುದಿಲ್ಲ. ಆದರೆ ಭಾಗವತಗ್ರಂಥ ವೇದಸಮಾನವೆಂದು ತಿಳಿಸಲು ವೈದಿಕ ಪ್ರಯೋಗ ಮಾಡಿದ್ದಾರೆ.

ಬೇರೆ ವ್ಯಾಖ್ಯಾನಕಾರರು,
'ತಂ ಮೇನಿರೇಽಬಲಾ ಮೂಢಾಃ'

ಎಂದು ಪಾಠವಿಟ್ಟುಕೊಂಡು ವಿಷಯಾಸಕ್ತರ ಬುದ್ಧಿಗಳು ಪರಮಾತ್ಮನನ್ನು ಹೇಗೆ ತಿಳಿಯುವುದಿಲ್ಲವೋ ಹಾಗೇ ಕೃಷ್ಣಪತ್ನಿಯರೂ ಕೃಷ್ಣನನ್ನು ತಿಳಿಯದೆ ಸ್ತ್ರೀಲೋಲ ಸ್ತ್ರೀವಶನೆಂದು ಭಾವಿಸಿದರು ಎಂದು ವ್ಯಾಖ್ಯಾನಿಸಿದ್ದಾರೆ. ಬುದ್ಧಿಗಳು ಜಡವಾಗಿರುವುದರಿಂದ, ಅವು ಹೇಗೆ 'ತಿಳಿಯುವುದಿಲ್ಲವೋ' ಎಂಬ ದೃಷ್ಟಾಂತ ಕೂಡುವುದಿಲ್ಲ. ಮತ್ತು ಇಂದ್ರಿಯಾಸಕ್ತರ ಬುದ್ಧಿಗಳೆಂದು ಶ್ಲೋಕದಲ್ಲಿ ಹೇಳಿಲ್ಲ. 'ಖಲಾಃ' ಎಂಬ ಪಾಠದಲ್ಲಿಯೇ ಖ-ಇಂದ್ರಿಯಗಳನ್ನು ಲ-ಆಶ್ರಯಿಸುವವರು ಇಂದ್ರಿಯಾಸಕ್ತರು ಎಂದು ಅರ್ಥ ಸಿಗುತ್ತಿತ್ತು.

ಇತಿ ಪ್ರಥಮಸ್ಕಂಧೇ ದಶಮೋಽಧ್ಯಾಯಃ

ಹನ್ನೊಂದನೇ ಅಧ್ಯಾಯ

ಅಧ್ಯಾಯ ಸಾರಾಂಶ

ಉತ್ತರೆಯ ಗರ್ಭದಲ್ಲಿ ಬೆಳೆಯುತ್ತಿದ್ದ ಶಿಶು ಪರೀಕ್ಷಿತ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ಬೇಯತೊಡಗಿದಾಗಲೆಲ್ಲ ಹೆಬ್ಬೆಟ್ಟಿನಷ್ಟು ಗಾತ್ರದ ಆಜಾನುಬಾಹು ವಾದ ವ್ಯಕ್ತಿಯೊಬ್ಬ (ಹರಿ) ಗದೆ ತಿರುಗಿಸುತ್ತ ಬೆಂಕಿಯನ್ನು ದೂರ ಅಟ್ಟುತ್ತಿದ್ದ ದೃಶ್ಯವನ್ನು ಆಶ್ಚರ್ಯಚಕಿತನಾಗಿ ನೋಡುತ್ತಿದ್ದ. ಶಿಶುವಿಗೆ ಹತ್ತು ತಿಂಗಳಾದಾಗ ಆ ವ್ಯಕ್ತಿ ಅದೃಶ್ಯನಾದ. ಅದರಿಂದ ಪ್ರಸವಕಾಲದಲ್ಲಿ ಪರೀಕ್ಷಿತ ಸತ್ತುಹುಟ್ಟಿದ. ಶ್ರೀಕೃಷ್ಣನೆ ಆ ಮಗುವನ್ನು ಬದುಕಿಸಿದ. ಧರ್ಮರಾಜ ಸಂಭ್ರಮದಿಂದ ಜಾತಕರ್ಮಾದಿಗಳನ್ನು ನಡೆಸಿದ. ಬ್ರಾಹ್ಮಣರು ಮಗುವಿನ ಜಾತಕಫಲವನ್ನು ಹೇಳಿದರು. ನಿಮ್ಮ ವಂಶ ನಾಶಹೊಂದುವ ಸಮಯದಲ್ಲಿ ವಿಷ್ಣು ನಿಮ್ಮಲ್ಲಿ ಅನುಗ್ರಹ ಮಾಡಿ ನಿಮಗಾಗಿ ಈತನನ್ನು ಬದುಕಿಸಿ ಕೊಟ್ಟಿದ್ದರಿಂದ ಈತ ವಿಷ್ಣುರಾತನೆಂದೇ ಪ್ರಸಿದ್ಧನಾಗುವನು. ಮಹಾಭಗವದ್ಭಕ್ತನೆನಿಸುವನು ಎಂದರು. ಈತ ಇಕ್ಷ್ವಾಕು ಮಹಾರಾಜನಂತೆ ರಾಜ್ಯವಾಳುತ್ತಾನೆ. ಶ್ರೀರಾಮಚಂದ್ರನಂತೆ ಬ್ರಾಹ್ಮಣಪ್ರಿಯನೂ ಸತ್ಯಸಂಧನೂ ಆಗುತ್ತಾನೆ. ಅಧರ್ಮಿಗಳಿಗೆ ಶಾಸನ ಮಾಡುತ್ತಾನೆ. ಭೂದೇವಿಯನ್ನೂ ಧರ್ಮ ವನ್ನೂ ಉಳಿಸುವುದಕ್ಕಾಗಿ ಕಲಿಯನ್ನು ನಿಗ್ರಹಿಸುತ್ತಾನೆ. ಮುನಿಕುಮಾರನ ಶಾಪದಿಂದ ತಾನು ತಕ್ಷಕ ಕಚ್ಚಿ ಮೃತನಾಗುವೆನೆಂದು ತಿಳಿದಾಗ ವಿರಕ್ತನಾಗಿ ಶುಕಮುನಿಯಿಂದ ಭಾಗವತ ಶ್ರವಣಮಾಡಿ ವೈಕುಂಠಲೋಕವನ್ನು ಪಡೆಯುತ್ತಾನೆ ಎಂದರು.

ವಿಷ್ಣುರಾತ ಮುಂದೆ ಎಲ್ಲರನ್ನೂ 'ಈತನೇ ತಕ್ಷಕನಿರಬಹುದೆ?' ಎಂದು ಪರೀಕ್ಷಿಸುತ್ತಿದ್ದುದರಿಂದ ಪರೀಕ್ಷಿತನೆಂದು ಪ್ರಸಿದ್ಧನಾದ.

ಹಿಮಾಲಯದ ಉತ್ತರದಲ್ಲಿ ಹಿಂದೆ ಮರುತ್ತರಾಜ ಮುಂತಾದವರು ಯಜ್ಞಮಾಡಿ ಬಿಟ್ಟುಹೋಗಿದ್ದ ಅಪಾರ ಧನಸಂಪತ್ತನ್ನು ತಂದು ಪಾಂಡವರು ವೈಭವದಿಂದ ಅಶ್ವಮೇಧಯಾಗ ಮಾಡಿದರು. ಶ್ರೀಕೃಷ್ಣ ಆ ಯಾಗಗಳನ್ನು ತಾನೆ ನಡೆಸಿಕೊಟ್ಟು ಕೆಲತಿಂಗಳ ಕಾಲವಿದ್ದು ಬಳಿಕ ಅರ್ಜುನನೊಂದಿಗೆ ಯಾದವ ರಿಂದಲೂ ಸಮೇತನಾಗಿ ದ್ವಾರಕೆಗೆ ತೆರಳಿದ.

★★ ★

ಉತ್ತರೆಯ ಗರ್ಭದಿಂದ ಪರೀಕ್ಷಿದ್ರಾಜನ ಜನನವಾಯಿತು. ಧರ್ಮರಾಜ ಅವನಿಗೆ ಜಾತಕರ್ಮವನ್ನು ನಡೆಸಿ ಬ್ರಾಹ್ಮಣರಲ್ಲಿ ಮಗುವಿನ ಭವಿಷ್ಯದ ಬಗ್ಗೆ ಕೇಳಿದಾಗ ಅವರು ಹೇಳಿದರು—

ಪಾರ್ಥ ಪ್ರಜಾವಿತಾ ಸಾಕ್ಷಾದ್ ಇಕ್ಷ್ವಾಕುರಿವ ಮಾನವಃ ।
ಬ್ರಹ್ಮಣ್ಯಃ ಸತ್ಯಸಂಧಶ್ಚ ರಾಮೋ ದಾಶರಥಿರ್ಯಥಾ ॥ ೧೯ ॥

ಧರ್ಮರಾಜ, ಈ ಪರೀಕ್ಷಿತ ಮುಂದೆ ಮನುಪುತ್ರನಾದ ಇಕ್ಷ್ವಾಕು ಮಹಾರಾಜನಂತೆ ಪ್ರಜೆಗಳನ್ನು ರಕ್ಷಿಸುತ್ತಾನೆ. ದಶರಥ ಪುತ್ರನಾದ ಶ್ರೀರಾಮನಂತೆ ಬ್ರಾಹ್ಮಣರಿಗೆ ಹಿತಕಾರಿಯಾಗಿದ್ದು ಸತ್ಯಸಂಧನೆನಿಸುತ್ತಾನೆ.

ಇಲ್ಲಿ ರಾಮನಂತೆ ಪರೀಕ್ಷಿತನೆಂದರೆ ಪರೀಕ್ಷಿತನಂತೆಯೇ ರಾಮ ಎಂದಾಂತಾಗುವುದು. ಆದರೆ ಇಲ್ಲಿ ಆ ಅಭಿಪ್ರಾಯವಿಲ್ಲ.

ರಾಮೋ ದಾಶರಥಿರ್ಯಥಾ । ಅಧಿಕ ದೃಷ್ಟಾಂತಃ ।
ಊರ್ಣನಾಭ್ಯಾದಿಕೋ ವಿಷ್ಣೋರ್ವಿಷ್ಣುರ್ವಿಷ್ಣೋಸ್ತಥೈವ ಚ ।
ವಿಷ್ಣುರ್ಜೀವಸ್ಯ ದೃಷ್ಟಾಂತಾಃ ಊನಸಾಮ್ಯಾಧಿಕಾಃ ಕ್ರಮಾತ್ ।
ಇತಿ ಬ್ರಾಹ್ಮೇ ॥

ಪರೀಕ್ಷಿತ ದಾಶರಥಿರಾಮನಂತೆ ಎಂದರೆ ಇದು ಅಧಿಕ ದೃಷ್ಟಾಂತ. ವಿಷ್ಣುವಿಗೆ ಜೇಡರ ಹುಳು ಮುಂತಾದ ದೃಷ್ಟಾಂತ, ವಿಷ್ಣುವಿಗೆ ವಿಷ್ಣುವಿನ ದೃಷ್ಟಾಂತ, ಜೀವನಿಗೆ ವಿಷ್ಣುವಿನ ದೃಷ್ಟಾಂತ ಇವು ಕ್ರಮವಾಗಿ ಊನ, ಸಮ, ಅಧಿಕ ದೃಷ್ಟಾಂತಗಳೆನಿಸುವುವು ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ
ಯಥಾ ಪೃಥಿವ್ಯಾಮೋಷಧಯಃ ಸಂಭವಂತಿ ॥

ಜೇಡರಹುಳು ತನ್ನುದರದಿಂದ ದಾರವನ್ನು ಹೊರಗೆ ಹಾಕುತ್ತದೆ ಮತ್ತೆ ನುಂಗುತ್ತದೆ ಹಾಗೆ ವಿಷ್ಣು ಸೃಷ್ಟಿಕಾಲ ಬಂದಾಗ ತನ್ನುದರದೊಳಗಿರುವ ಸೂಕ್ಷ್ಮಮಹದಾದಿ ತತ್ವಗಳನ್ನು ಸ್ಥೂಲವಾಗಿಸಿ ಹೊರಗೆ ಹಾಕುತ್ತಾನೆ. ಲಯಕಾಲ ಬಂದಾಗ ನುಂಗುತ್ತಾನೆ. ನಾನಾ ಬಗೆಯ ಸಸ್ಯಗಳ ಉತ್ಪತ್ತಿಗೆ ಭೂಮಿ ಮಾತ್ರ ಸಮಾನವಾಗಿಯೆ ಕಾರಣವಾಗುವಂತೆ ನಾನಾ ಜೀವರಾಶಿಗೆ ವಿಷ್ಣುವೂ ಸಮಾನವಾಗಿ ವೈಷಮ್ಯನೈರ್ಘೃಣ್ಯಗಳನ್ನು ತೋರದೆ ಸೃಷ್ಟ್ಯಾದಿಗಳನ್ನು ಮಾಡುತ್ತಾನೆ ಎಂದು ಮುಂತಾಗಿ ವಿಷ್ಣುವಿಗೆ ಜೇಡರಹುಳು ಪೃಥಿವಿ ಮುಂತಾದ ದೃಷ್ಟಾಂತಗಳನ್ನು ಆಥರ್ವಣೋಪನಿಷತ್ತು ನೀಡಿದೆ. ಇವು ಊನ ದೃಷ್ಟಾಂತಗಳು. ಅಧಿಕನಾದ ವಿಷ್ಣುವಿನಲ್ಲಿಯೂ ನ್ಯೂನವಾದ ಜೇಡರಹುಳು ಮುಂತಾದವುಗಳ ಸಾದೃಶ್ಯವಿದೆ ಎಂದು ಅಭಿಪ್ರಾಯ. ವಿಷ್ಣುವಿಗೆ ವಿಷ್ಣುವನ್ನೆ ದೃಷ್ಟಾಂತವಾಗಿ ಹೇಳಿದರೆ ಅದು ಸಮದೃಷ್ಟಾಂತವಾಗುವುದು. ಪರೀಕ್ಷಿತನಿಗೆ ವಿಷ್ಣುದೃಷ್ಟಾಂತವನ್ನು ಇಲ್ಲಿ ಕೊಟ್ಟಿದ್ದಾರೆ ಅದು ಅಧಿಕ

ದೃಷ್ಟಾಂತ. ಪರೀಕ್ಷಿತನಿಗೆ ಅವನಿಗಿಂತ ಉತ್ತಮರಾದ ಕಾರ್ತವೀರ್ಯಾರ್ಜುನ ಮುಂತಾದವರ ದೃಷ್ಟಾಂತವೂ ಅಧಿಕದೃಷ್ಟಾಂತವೆ. ಸಮಾನರಾದ ಬೇರೆ ರಾಜರ ದೃಷ್ಟಾಂತ ಸಮದೃಷ್ಟಾಂತ. ಮೃಗೇಂದ್ರ ಇವ ವಿಕ್ರಾಂತಃ ಎಂದು ಮುಂತಾಗಿ ಸಿಂಹಾದಿ ದೃಷ್ಟಾಂತಗಳು ಮುಂದೆ ಬರುತ್ತವೆ. ಇವು ಊನ ದೃಷ್ಟಾಂತಗಳು.

★★★

ಮುಂದೆ ಪರೀಕ್ಷಿದ್ರಾಜ ಶುಕ್ಲಪಕ್ಷದ ಚಂದ್ರನಂತೆ ಬೆಳೆದು ನಿಂತ—

ಸ ರಾಜಪುತ್ರೋ ವವೃಧ ಆಶು ಶುಕ್ಲ ಇವೋಡುಪಃ ।
ಆಪೂರ್ಯಮಾಣಃ ಪಿತೃಭಿಃ ಕಾಷ್ಠಾಭಿರಿವ ಸೋಽನ್ವಹಂ ॥ ೩೧ ॥

ಶುಕ್ಲಪಕ್ಷದಲ್ಲಿ ದಿಗ್ದೇವತೆಗಳು ತುಂಬುವ ಕಲೆಗಳಿಂದ ಚಂದ್ರ ದಿನೇದಿನೇ ವೃದ್ಧಿ ಹೊಂದುವಂತೆ ರಾಜಕುಮಾರ ಪರೀಕ್ಷಿತನೂ ಧರ್ಮರಾಜಾದಿಗಳು ನೀಡುವ ಅನ್ನಪಾನಾದಿಗಳಿಂದ ದಿನೇದಿನೇ ಪ್ರವರ್ಧಮಾನನಾದ.

ಇಲ್ಲಿ 'ಕಾಷ್ಠಾಭಿಃ' ಎಂದರೆ ಹದಿನೈದು ಕಲೆಗಳಿಂದ ಎಂದು ಶ್ರೀಧರ ವೀರರಾಘವ ವಲ್ಲಭಾಚಾರ್ಯ ಮುಂತಾದ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ.[೧] ಆದರೆ ಕಾಷ್ಠಾಶಬ್ದದಿಂದ ಕಲೆಗಳೆಂಬ ಅರ್ಥಸಿಗಲಾರದು. ದಿಕ್ಕುಗಳೆಂದರ್ಥ. ದಿಗಭಿಮಾನಿ ದೇವತೆಗಳಿಂದ ಎಂದು ವ್ಯಾಖ್ಯಾನಿಸಬೇಕು. ಕಲೆಗಳಿಂದ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ದಿಗ್ದೇವತೆಗಳು ಚಂದ್ರನನ್ನು ಕಲೆಗಳಿಂದ ತುಂಬುತ್ತಾರೆ ಎಂಬುದು ಪ್ರಮಾಣಸಿದ್ಧ.

ಪೂರಯಂತಿ ದಿಶಃ ಸೋಮಂ ದೇವಾ ಗಾವಃ ಸರಸ್ವತೀ ।

ಇತಿ ಗಾರುಡೇ ।

ದಿಗಭಿಮಾನಿಗಳಾದ ವಹ್ನ್ಯಾದಿದೇವತೆಗಳು, ಗೋವುಗಳು ಸರಸ್ವತಿ ಇವರು ಚಂದ್ರನನ್ನು ಕಲೆಗಳಿಂದ ತುಂಬುತ್ತಾರೆ ಎಂದು ಗರುಡಪುರಾಣದಲ್ಲಿ ಉಕ್ತವಾಗಿದೆ.

ಇತಿ ಪ್ರಥಮಸ್ಕಂಧೇ ಏಕಾದಶೋಽಧ್ಯಾಯಃ

---

೧. ಉಡುಪೋಽನ್ವಹಂ ಯಥಾ ಕಾಷ್ಠಾಭಿಃ ಪಂಚದಶಕಲಾಭಿರಾಪೂರ್ಯಮಾಣೋ ವರ್ಧತೇ । -ಶ್ರೀಧರಃ ವಲ್ಲಭಾಚಾರ್ಯಃ

ಯಥಾ ಶುಕ್ಲೇ ಪಕ್ಷೇ ಆಪೂರ್ಯಮಾಣಾಭಿರ್ವೃದ್ಧಿಂ ಗತಾಭಿಃ ಕಾಷ್ಠಾಭಿರುಡುಪಶ್ಚಂದ್ರೋ ವರ್ಧತೇ । -ವೀರರಾಘವಃ

ಹನ್ನೆರಡನೇ ಅಧ್ಯಾಯ

ಅಧ್ಯಾಯ ಸಾರಾಂಶ

ತೀರ್ಥಯಾತ್ರೆ ಮಾಡುತ್ತಿದ್ದ ವಿದುರ ಮೈತ್ರೇಯರಿಂದ ಉಪದೇಶ ಪಡೆದು ಹಸ್ತಿನಾವತಿಗೆ ಹಿಂತಿರುಗಿದ. ಧೃತರಾಷ್ಟ್ರ ಗಾಂಧಾರಿ ಧರ್ಮರಾಜ ಮುಂತಾದವರು ಎಲ್ಲರೂ ಅವನನ್ನು ಆದರದಿಂದ ಇದಿರುಗೊಂಡರು. ಧರ್ಮರಾಜ ಯಾದವರ ಕ್ಷೇಮ ಸಮಾಚಾರವನ್ನು ಕೇಳಿದಾಗ ವಿದುರ ಬ್ರಾಹ್ಮಣಶಾಪದಿಂದ ಮುಂದೆ ಇಪ್ಪತ್ತಾರು ವರ್ಷಗಳ ಬಳಿಕ ಯದುಕುಲ ಕ್ಷಯವಾಗುವುದೆಂಬ ವೃತ್ತಾಂತವನ್ನು ತಾನು ಕೇಳಿ ತಿಳಿದಿದ್ದರೂ ಹೇಳದೆ ಮುಚ್ಚಿಟ್ಟ. ಆ ಅಪ್ರಿಯವಾರ್ತೆಯನ್ನು ಯಾರೂ ಕೇಳಿ ಸಹಿಸಲಾರರು ಎಂದು. ಮುಂದೆ ಧೃತರಾಷ್ಟ್ರ ವೈರಾಗ್ಯಹೊಂದಿ ಪರಲೋಕ ಸಾಧನೆ ಮಾಡಲಿ ಎಂಬ ಉದ್ದೇಶದಿಂದ ವಿದುರ ಅವನಿಗೆ ಉಪದೇಶ ಮಾಡಿದ. ಅವನು ದಾಸೀಪುತ್ರನಾಗಿದ್ದರೂ ವಾಸ್ತವದಲ್ಲಿ ಅಣಿಮಾಂಡವ್ಯ ಮುನಿಯ ಶಾಪದಿಂದ ಹುಟ್ಟಿದ ಯಮಧರ್ಮರಾಜನೇ ಆಗಿದ್ದ. ಧರ್ಮೋಪದೇಶ ನೀಡಬಲ್ಲವನಾಗಿದ್ದ. ಶೂದ್ರನಾಗಿ ಭೂಮಿಯಲ್ಲಿ ನೂರುವರ್ಷಕಾಲ ಬದುಕಿದ್ದಾಗ ಅತ್ತ ಯಮಲೋಕದಲ್ಲಿಯೂ ಅವನೇ ತನ್ನ ಮೂಲರೂಪದಿಂದ ಇದ್ದ. ದೇವತೆಗಳು ಯಾವಾಗಲೂ ಅಂಶರೂಪದಿಂದ ಅವತರಿಸುತ್ತಾರೆ ಹೊರತು ಮೂಲರೂಪದಿಂದಲ್ಲ. ಹೀಗಾಗಿ ವಿದುರನ ಉಪದೇಶದಿಂದ ಎಚ್ಚತ್ತುಕೊಂಡ ಧೃತರಾಷ್ಟ್ರ ಗಾಂಧಾರೀಕುಂತಿಯರೊಡನೆ ವಿದುರನ ಮಾರ್ಗದರ್ಶನದಲ್ಲಿ ನಡೆದು ಬದರಿಗೆ ಹೋಗಿ ಅಲ್ಲಿ ತಪಸ್ಸು ಮಾಡಿದ. ಪಾಂಡವರು ಅವರನ್ನು ಆಗಾಗ ಕಂಡುಬರುತ್ತಿದ್ದರು. ಒಮ್ಮೆ ಪಾಂಡವರು ಬಂದಾಗ ವಿದುರ ಪರಕಾಯ ಪ್ರವೇಶವೆಂಬ ಯೋಗಬಲದಿಂದ ತನ್ನ ಶರೀರವನ್ನು ಬಿಟ್ಟು ಧರ್ಮರಾಜನಲ್ಲಿ ಸೇರಿ ಐಕ್ಯಹೊಂದಿದ. ಏಕೆಂದರೆ ವಿದುರ ಧರ್ಮರಾಜರಿಬ್ಬರೂ ಒಬ್ಬನೆ ಯಮಧರ್ಮನ ಎರಡು ಬೇರೆಬೇರೆ ಅಂಶಗಳು. ಬಳಿಕ ಒಂದುದಿನ ಧರ್ಮರಾಜ ಎಂದಿನಂತೆ ಅರಮನೆಯಲ್ಲಿ ಧೃತರಾಷ್ಟ್ರನಿದ್ದ ಸ್ಥಳಕ್ಕೆ ಬಂದು ನಮಿಸುತ್ತಿದ್ದಾಗ ಅವನ ಧ್ಯಾನದೃಷ್ಟಿಗೆ ಧೃತರಾಷ್ಟ್ರ ಮುಂತಾದವರು ಬದುಕಿದ್ದಂತೆ ಗೋಚರಿಸಲಿಲ್ಲ. ಆಗಲೆ ಸಂಜಯ ಬಂದು ಅವರು ಕಾಳ್ಗಿಚ್ಚಿನಲ್ಲಿ ಶರೀರತ್ಯಾಗ ಮಾಡಿದರೆಂದು ಹೇಳಿದ. ಧರ್ಮರಾಜ ಶೋಕತಪ್ತನಾದ. ಐದು ದಿನಗಳ ಬಳಿಕ ನಾರದರು ಬಂದು ಸಮಾಧಾನ ಮಾಡಿದರು. 'ಕುರುಕ್ಷೇತ್ರ ಯುದ್ಧದಿಂದ ತೊಡಗಿ ಧೃತರಾಷ್ಟ್ರ ಮುಂತಾದವರ ಅವಸಾನದವರೆಗಿನ ಎಲ್ಲ ವಿದ್ಯಮಾನಗಳನ್ನು ಮೊದಲೆ ಧ್ಯಾನದೃಷ್ಟಿಯಿಂದ ಅರಿತಿದ್ದ ವಿದುರ ವಿರಕ್ತಿಯಿಂದ ಆಗಲೆ ತೀರ್ಥಯಾತ್ರೆ ಕೈಗೊಂಡಿದ್ದ. ಪ್ರತಿಕಲ್ಪದಲ್ಲಿಯೂ ಈ ಚರಿತ್ರೆಗಳು ಪುನರಾವೃತ್ತಿ ಹೊಂದುತ್ತವೆ. ಅದಕ್ಕೆ ಶೋಕಿಸಿ ಫಲವಿಲ್ಲ' ಎಂದರು.

ವಿದುರ ತೀರ್ಥಯಾತ್ರೆಯಲ್ಲಿ ಮೈತ್ರೇಯರಿಂದ ತತ್ತ್ವೋಪದೇಶ ಪಡೆದು ಕೃತಾರ್ಥನಾಗಿ ಹಸ್ತಿನಾವತಿಗೆ ಮರಳಿಬಂದ—

ಪ್ರತ್ಯುಜ್ಜಗ್ಮುಃ ಪ್ರಹರ್ಷೇಣ ಪ್ರಾಣಾಂಸ್ತನ್ವ ಇವಾಗತಾನ್ ।
ಅಭಿಸಂಗಮ್ಯ ವಿಧಿವತ್ ಪರಿಷ್ವಂಗಾಭಿವಾದನೈಃ ॥ ೫ ॥

ಮುಖ್ಯಪ್ರಾಣ ಬಂದಾಗ ಶರೀರ ಇಂದ್ರಿಯ ದೇವತೆಗಳು ಎದ್ದು ಇದಿರುಗೊಂಡಂತೆ ವಿದುರ ಬಂದಾಗ ಧರ್ಮರಾಜ ಮುಂತಾದವರು ವಿಧಿವತ್ತಾಗಿ ಆಲಿಂಗನ ಅಭಿವಾದನಗಳಿಂದ ಸತ್ಕರಿಸುತ್ತ ಸಂತೋಷದಿಂದ ಇದಿರುಗೊಂಡರು.

ಒಮ್ಮೆ ಮುಖ್ಯಪ್ರಾಣನೊಡನೆ ಇಂದ್ರಿಯಾಭಿಮಾನಿದೇವತೆಗಳು ತಾವು ಮೇಲು ತಾವು ಮೇಲೆಂದು ಸ್ಪರ್ಧೆಗಿಳಿದರು. ಬ್ರಹ್ಮನ ವಿರಾಡ್‌ದೇಹದಲ್ಲಿ ಸ್ಪರ್ಧೆ ನಡೆಯಿತು. ಇಂದ್ರಿಯಾಭಿಮಾನಿಗಳು ಒಬ್ಬೊಬ್ಬರಾಗಿ ಪ್ರವೇಶ ಮಾಡಿದಾಗ ಆ ಶರೀರ ಏಳಲಿಲ್ಲ, ಬಿದ್ದೇ ಇದ್ದಿತು. ಮುಖ್ಯಪ್ರಾಣ ಬಂದಾಗ ಅವರಿಗೆ ಪ್ರಾಣ ಬಂದಂತಾಯಿತು. ಶರೀರ ಎದ್ದಿತು. ಎಲ್ಲ ಇಂದ್ರಿಯಾಭಿಮಾನಿಗಳೂ ಮುಖ್ಯಪ್ರಾಣನನ್ನು ಇದಿರುಗೊಂಡು ಸತ್ಕರಿಸಿದರು. ಹಾಗೇ ವಿದುರ ತೀರ್ಥಯಾತ್ರೆಯಿಂದ ಮರಳಿ ಬಂದಾಗ ಧರ್ಮರಾಜ ಮುಂತಾದವರಿಗೆ ಹೋದ ಜೀವ ಮರಳಿ ಬಂದಂತಾಯಿತು. ಆಲಿಂಗನ ನಮಸ್ಕಾರಾದಿಗಳಿಂದ ಸತ್ಕರಿಸಿ ಇದಿರುಗೊಂಡರು. ಇಲ್ಲಿ ಕೊಟ್ಟಿರುವ ಇಂದ್ರಿಯ ದೇವತೆಗಳ ದೃಷ್ಟಾಂತ ಶ್ರುತ್ಯುಕ್ತವಾಗಿದೆ—

ತತ್ ಪ್ರಾಣೇ ಪ್ರಪನ್ನ ಉದತಿಷ್ಠತ್ ಇತಿ ಶ್ರುತಿಃ ।

ಮುಖ್ಯಪ್ರಾಣ ಬಂದಾಗ ವಿರಾಟ್‌ಶರೀರ ಎದ್ದಿತು ಎಂದು ಶ್ರುತಿ ಇದೆ.

ಬೇರೆ ವ್ಯಾಖ್ಯಾನಕಾರರು ಶ್ರುತ್ಯುಕ್ತವಾದ ವಿರಾಟ್‌ಶರೀರ ದೃಷ್ಟಾಂತವನ್ನು ಬಿಟ್ಟು ಮೂರ್ಛಿತಶರೀರವನ್ನು ದೃಷ್ಟಾಂತವಾಗಿ ಇಟ್ಟುಕೊಂಡಿದ್ದಾರೆ. ಮೂರ್ಛಿತ ಶರೀರದಲ್ಲಿ ತಿರುಗಿ ಪ್ರಾಣ ಆವಿರ್ಭೂತವಾದಾಗ ಕೈಕಾಲು ಮುಂತಾದ ಶರೀರಾವಯವಗಳು ಪುನಃ ಚಟುವಟಿಕೆಗಳನ್ನು ನಡೆಸುವಂತೆ ಎಂದು.[೧] ಜಡವಾದ ಶರೀರಾವಯವಗಳು ಪ್ರಾಣವನ್ನು ಇದಿರುಗೊಳ್ಳುವುದೆಂದರೇನು? ಗೌಣಾರ್ಥ ಮಾಡಬೇಕು. ಆದರಿಂದ ಈ ದೃಷ್ಟಾಂತಕ್ಕಿಂತಲೂ ಇಂದ್ರಿಯದೇವತೆಗಳು ಮುಖ್ಯಪ್ರಾಣನನ್ನು ಇದಿರು

೧. ಕುತಶ್ಚಿನ್ಮೂರ್ಛಾದಿದೋಷತಃ ಪ್ರಾಣೇಽವಸನ್ನೇ ಸತಿ ತನ್ವಃ ಕರಾಂಘ್ರ್ಯಾದಯೋ ನಿಶ್ಚೇಷ್ಟಾ ಭವಂತಿ । ಪುನಸ್ತಸ್ಮಿನ್ನಾವಿರ್ಭೂತೇ ಯಥೋತ್ತಿಷ್ಠಂತಿ ತದ್ವತ್।

-ಶ್ರೀಧರಃ ಶುಕದೇವಃ ವಲ್ಲಭಾಚಾರ್ಯಃ

ಗೊಂಡಂತೆ ಧರ್ಮರಾಜಾದಿಗಳು ವಿದುರನನ್ನು ಇದಿರು ಗೊಂಡರು ಎನ್ನುವ ಶ್ರುತ್ಯುಕ್ತ ದೃಷ್ಟಾಂತ ಹೆಚ್ಚು ರಮ್ಯ ಭವ್ಯವಾಗಿದೆ.

★★★

ತೀರ್ಥಯಾತ್ರೆಯಲ್ಲಿ ಯಾವಯಾವ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದೆ? ನಮ್ಮ ಬಂಧುಗಳಾದ ಯಾದವರ ಬಗ್ಗೆ ಏನಾದರೂ ಸಮಾಚಾರ ಉಂಟೆ? ಎಂದು ಮುಂತಾಗಿ ಧರ್ಮರಾಜ ಕೇಳಿದಾಗ ವಿದುರ ಯದುಕುಲಕ್ಷಯ ಒಂದನ್ನು ಹೊರತು ಬೇರೆ ಎಲ್ಲವನ್ನೂ ವರ್ಣಿಸಿದ—

ಇತ್ಯುಕ್ತೋ ಧರ್ಮರಾಜೇನ ಸರ್ವಂ ತತ್ ಸಮವರ್ಣಯತ್ ।
ಯಥಾನುಭೂತಂ ಭ್ರಮತಾ ವಿನಾ ಯದುಕುಲಕ್ಷಯಂ ॥ ೧೨ ॥

ಹೀಗೆ ಧರ್ಮರಾಜ ಕೇಳಿದಾಗ ವಿದುರ ಯದುಕುಲಕ್ಷಯವನ್ನು ಬಿಟ್ಟು ಬೇರೆ ಎಲ್ಲವನ್ನೂ ತಾನು ಅನುಭವದಲ್ಲಿ ಕಂಡಂತೆ ವರ್ಣಿಸಿ ಹೇಳಿದ.

ಇಲ್ಲಿ ವಿದುರ ಯದುಕುಲಕ್ಷಯವನ್ನು ಕಂಡಿದ್ದಾನೆ ಎಂದು ಹೇಳಿದಂತಿದೆ. ಬೇರೆ ವ್ಯಾಖ್ಯಾನಕಾರರೂ ಹಾಗೇ ವ್ಯಾಖ್ಯಾನ ಮಾಡಿದ್ದಾರೆ.[೧] ಆದರೆ ಹಾಗೆ ಹೇಳಿದರೆ ಪ್ರಮಾಣ ವಿರೋಧವಿದೆ. ಅದರಿಂದ ಮುಂದೆ ನಡೆಯಲಿದ್ದ ಯದುಕುಲಕ್ಷಯವನ್ನು ವಿದುರ ತಿಳಿದೂ ಹೇಳಲಿಲ್ಲ ಎಂದು ವ್ಯಾಖ್ಯಾನಿಸಬೇಕು.

ಯದುಕುಲಕ್ಷಯಮೇಷ್ಯತ್ ।
ಶಾಪಂ ಶ್ರುತ್ವಾ ಬ್ರಾಹ್ಮಣಾನಾಮುದ್ಧವಃ ಖಿನ್ನಮಾನಸಃ ।
ಉದಾಸೀನಂ ತಥಾ ಕೃಷ್ಣಮಿವ ಸುಪ್ರೀತಮೇವ ಚ ।
ನಶಿಷ್ಯಮಾಣಂ ಸ್ವಕುಲಂ ಸ್ವರ್ಯಿಯಾಸುಂ ಚ ಕೇಶವಂ ।
ಜ್ಞಾತ್ವಾ ಪಪ್ರಚ್ಛ ಭಗವತ್ಸ್ವರೂಪಂ ತಮುಪಹ್ವರೇ ।
ಮೈತ್ರೇಯೋಽಪಿ ತದೈವಾಗಾದ್ ಜಿಜ್ಞಾಸುಸ್ತತ್ತ್ವಮುತ್ತಮಂ ।
ತಯೋರದಾತ್ ಸ ಭಗವಾನ್ ಜ್ಞಾನಂ ನಿರ್ಮಲಮಂಜಸಾ ।
ಷಟ್ತ್ರಿಂಶದ್ವತ್ಸರಾತ್ ಪೂರ್ವಂ ಸ್ವರ್ಗತೇಃ ಪುರುಷೋತ್ತಮಃ ।
ಪ್ರೇಷಯಾಮಾಸ ಚ ಹರಿರುದ್ಧವಂ ಬದರೀಮನು ।
ಕಲಾಪಗ್ರಾಮಿಣಾಂ ವಕ್ತುಮೇತತ್ ತತ್ವಮಶೇಷತಃ ।
ವಿದುರಂ ತೀರ್ಥಯಾತ್ರಾಸ್ಥಮಂತರಾಲೇ ಸ ಉದ್ಧವಃ ।

---

೧. ಯದುಕುಲಕ್ಷಯಂ ತು ಜಾನನ್ನಪಿ ನ ವರ್ಣಯಾಮಾಸ । -ಶುಕದೇವಃ

ದೃಷ್ಟ್ವಾ ನಶಿಷ್ಯಮಾಣಂ ಚ ಕುಲಂ ಜಿಗಮಿಷುಂ ಹರಿಂ ।
ಕಥಯಿತ್ವಾ ಬದರ್ಯಾಂ ಚ ಕಲಾಪಗ್ರಾಮ ವಾಸಿನಾಂ ।
ಪ್ರೋಚ್ಯ ತತ್ವಮಶೇಷೇಣ ವಾಸುದೇವ ಮುಖೋದ್ಗತಂ ।
ಷಡ್ವಿಂಶದ್ವರ್ಷಗಣನೇ ಪುನರಾಗತಿಮಾತ್ಮನಃ ।
ತೇಷಾಮುಕ್ತ್ವಾ ಪುನಃ ಕೃಷ್ಣಸನ್ನಿಧೌ ವಿಚಚಾರ ಹಿ ।
ಮೈತ್ರೇಯೋ ವಿದುರಾಯೈತದೂಚಿವಾನ್ ಕೃಷ್ಣಚೋದಿತಃ ।
ವಿದುರಃ ಪಾಂಡವಾನಾಂ ಚ ವಿನಾ ಯದುವಿನಾಶನಂ ।
ಷಡ್ವಿಂಶದ್ವರ್ಷತಃ ಪೂರ್ವಂ ಜ್ಞಾತ್ವಾಪ್ಯಪ್ರಿಯಮೇವ ತತ್ ।
ನಾವೋಚದ್ ವಿದುರೋ ಧೀಮಾನ್ ತಸ್ಮಾನ್ನಾಪ್ರಿಯಮಾವದೇತ್ ।
ಇತಿ ಪಾದ್ಮೇ ।

ತಾವಚ್ಛಶಾಸ ಕ್ಷಿತಿಮೇಕಚಕ್ರಾಮೇಕಾತಪತ್ರಾಮಜಿತೇನ ಪಾರ್ಥಃ ಇತಿ ಚೋಪರಿ । ವಿದುರಂ ಚಾಗತಂ ಪುನರಿತಿ ಚ । ಭಾರತೇ ಚೈಕವಿಂಶದ್ವರ್ಷಾತ್ ಪೂರ್ವಂ ವಿದುರಸ್ಯ ಯುಧಿಷ್ಠಿರಭಾವ ಉಕ್ತಃ ॥

ಬ್ರಾಹ್ಮಣರ ಶಾಪದಿಂದ ಮುಂದೆ ಇಪ್ಪತ್ತಾರು ವರ್ಷಗಳ ಕೊನೆಯಲ್ಲಿ ಯದುಕುಲ ನಾಶವಾಗುವುದೆಂಬ ಅಪ್ರಿಯ ವಾರ್ತೆಯನ್ನು ಉದ್ಧವನಿಂದ ಕೇಳಿ ತಿಳಿದಿದ್ದರೂ ವಿದುರ ಅದನ್ನು ಧರ್ಮರಾಜಾದಿಗಳಿಗೆ ಹೇಳಲಿಲ್ಲ ಎಂದು ಭಾಗವತ ಶ್ಲೋಕಕ್ಕೆ ಅಭಿಪ್ರಾಯ. ವಿದುರನ ತೀರ್ಥಯಾತ್ರೆಯ ಕಾಲದಲ್ಲಿಯೆ ಯದುಕುಲ ನಾಶವಾಯಿತೆಂದು ಹೇಳಿದರೆ ಪದ್ಮಪುರಾಣ ವಿರೋಧ ಬರುತ್ತದೆ. ಅಲ್ಲಿ ಹೇಳಿದೆ— 'ಯದುಕುಲ ನಾಶವಾಗುವುದೆಂದು ಬ್ರಾಹ್ಮಣರ ಶಾಪವನ್ನು ಕೇಳಿ ಉದ್ಧವನ ಮನಸ್ಸಿಗೆ ವೇದನೆ ಉಂಟಾಯಿತು. ಶ್ರೀಕೃಷ್ಣ ಸಂತುಷ್ಟನೇ ಆಗಿದ್ದ. ಆದರೆ ಬೇಸರ ಗೊಂಡವನಂತೆ ಕಾಣುತ್ತಿದ್ದ. ಉದ್ಧವ ತನ್ನ ಕುಲ ನಾಶವಾಗಲಿರುವುದನ್ನೂ ಶ್ರೀಕೃಷ್ಣ ಪರಂಧಾಮಕ್ಕೆ ತೆರಳಲು ಸಂಕಲ್ಪಿಸಿರುವುದನ್ನೂ ತಿಳಿದು ಅವನ ಬಳಿ ಏಕಾಂತದಲ್ಲಿ ಪರಮಾತ್ಮಸ್ವರೂಪದ ಬಗ್ಗೆ ಕೇಳಿದ. ಆಗಲೆ ಮೈತ್ರೇಯರೂ ಉತ್ತಮತತ್ವವನ್ನು ತಿಳಿಯುವ ಬಯಕೆಯಿಂದ ಅಲ್ಲಿಗೆ ಬಂದರು. ಅವರಿಗೆ ಶ್ರೀಕೃಷ್ಣ ನಿರ್ಮಲಜ್ಞಾನವನ್ನು ಚೆನ್ನಾಗಿ ಉಪದೇಶಿಸಿದ. ಶ್ರೀಕೃಷ್ಣ ತನ್ನ ಲೋಕಕ್ಕೆ ತೆರಳುವುದಕ್ಕೆ ಇಪ್ಪತ್ತಾರು ವರ್ಷಗಳಿಗಿಂತ ಮೊದಲೇ ಕಲಾಪಗ್ರಾಮದ ಜನರಿಗೆ ಈ ಎಲ್ಲ ತತ್ವವನ್ನು ಹೇಳಲು ಬದರಿಗೆ ಉದ್ಧವನನ್ನು ಕಳುಹಿಸಿದ. ಉದ್ಧವ ಮಾರ್ಗಮಧ್ಯದಲ್ಲಿ ತೀರ್ಥಯಾತ್ರೆ ಮಾಡುತ್ತಿದ್ದ ವಿದುರನನ್ನು ಕಂಡು ಯದುಕುಲ ನಾಶವಾಗಲಿರುವುದನ್ನೂ ಶ್ರೀಕೃಷ್ಣ ಪರಂಧಾಮಕ್ಕೆ ತೆರಳಲು ಸಂಕಲ್ಪಿಸಿರುವುದನ್ನೂ ಹೇಳಿ, ಬದರಿಯಲ್ಲಿ ಕಲಾಪಗ್ರಾಮ

ವಾಸಿಗಳಿಗೆ ಶ್ರೀಕೃಷ್ಣ ಉಪದೇಶಿಸಿದ ಎಲ್ಲ ತತ್ವವನ್ನೂ ಹೇಳಿ ಇಪ್ಪತ್ತಾರು ವರ್ಷಗಳು ಕಳೆದಾಗ ಪುನಃ ತಾನು ಬರುವುದಾಗಿಯೂ ಹೇಳಿ ತಿರುಗಿ ಕೃಷ್ಣನ ಬಳಿಯಲ್ಲಿರ ತೊಡಗಿದ. ಮೈತ್ರೇಯ ಕೃಷ್ಣನ ಆಜ್ಞೆಯಂತೆ ಅವನು ಉಪದೇಶಿಸಿದ ತತ್ವವನ್ನು ವಿದುರ ನಿಗೆ ಹೇಳಿದ. ವಿದುರ ಯಾದವರ ನಾಶವನ್ನು ಹೊರತು ಬೇರೆ ಎಲ್ಲವನ್ನೂ ಪಾಂಡವ ರಿಗೆ ಹೇಳಿದ. ಇಪ್ಪತ್ತಾರು ವರ್ಷ ಮೊದಲೇ ಮುಂದೆ ಆಗಲಿ ರುವ ಯಾದವನಾಶ ವನ್ನು ತಿಳಿದಿದ್ದರೂ ಸರ್ವಥಾ ಅಪ್ರಿಯವಾದ ಆ ವಾರ್ತೆಯನ್ನು ವಿವೇಕಿಯಾದ ವಿದುರ ಹೇಳಲಿಲ್ಲ. ಅದರಿಂದ ಯಾರೂ ಇನ್ನೊಬ್ಬರಿಗೆ ಅಪ್ರಿಯ ವಾದುದನ್ನು ಹೇಳಬಾರದು' ಎಂದು. ವಿದುರ ತೀರ್ಥಯಾತ್ರೆಯಲ್ಲಿ ಪ್ರಭಾಸಕ್ಕೆ ಬಂದಿದ್ದಾಗ ಧರ್ಮರಾಜ ಕೃಷ್ಣನ ಸಹಾಯದಿಂದ ಏಕಛತ್ರಾಧಿಪತಿಯಾಗಿ ಅಖಂಡ ಭೂಮಂಡಲವನ್ನು ಆಳುತಿದ್ದ ನೆಂದೂ ಮುಂದೆ ಭಾಗವತದಲ್ಲಿ ಮೂರನೆ ಸ್ಕಂಧದಲ್ಲಿ (೩.೧.೨೦) ಉಕ್ತವಾಗಿದೆ. ಮುಂದೆ ಹತ್ತನೆ ಸ್ಕಂಧದಲ್ಲಿಯೂ (೧೦.೯೮.೫) ಅಶ್ವಮೇಧಯಾಗದ ಬಳಿಕ ಶ್ರೀಕೃಷ್ಣ ಹಸ್ತಿನಾವತಿಯಿಂದ ದ್ವಾರಕೆಗೆ ಹೊರಟಾಗ ಗಾಂಧಾರಿ ಧೃತರಾಷ್ಟ್ರರನ್ನೂ ಆ ಸಮಯ ದಲ್ಲಿ ತೀರ್ಥಯಾತ್ರೆ ಮುಗಿಸಿ ಬಂದಿದ್ದ ವಿದುರನನ್ನೂ ಸಂತೋಷಗೊಳಿಸಿದನೆಂದು ಹೇಳಿದೆ. ಭಾರತದಲ್ಲಿ ಯದುಕುಲನಾಶಕ್ಕಿಂತ ಇಪ್ಪತ್ತೊಂದು ವರ್ಷ ಮೊದಲೇ ವಿದುರ ಯುಧಿಷ್ಠಿರನ ಶರೀರದಲ್ಲಿ ಸೇರಿದ್ದು ವರ್ಣಿತ ವಾಗಿದೆ. (ಆಶ್ರಮ.೨೬.೨೦-೩೩)

ಹೀಗೆ ಪದ್ಮಪುರಾಣ ಭಾಗವತ ತೃತೀಯಸ್ಕಂಧ ದಶಮಸ್ಕಂಧ ವಚನಗಳು ಮಹಾಭಾರತ ಇವೆಲ್ಲವುಗಳ ವಿರೋಧ ಬರುವುದರಿಂದ ವಿದುರನ ತೀರ್ಥಯಾತ್ರಾ ಕಾಲದಲ್ಲಿಯೆ ಯದುಕುಲ ನಾಶವಾಗಿ ಹೋಗಿತ್ತೆಂದು ಭಾಗವತ ಶ್ಲೋಕಕ್ಕೆ ಅಭಿಪ್ರಾಯ ಹೇಳಬಾರದು.

ವಂಶೀಧರ ವ್ಯಾಖ್ಯಾನದಲ್ಲಿ ಶ್ರೀಕೃಷ್ಣ ಪರಂಧಾಮಕ್ಕೆ ತೆರಳಿದ ಬಳಿಕ ವಿದುರ ದೇಹತ್ಯಾಗ ಮಾಡಿದನೆಂದಿದೆ ![೧]

★★★

ವಿದುರ ಧೃತರಾಷ್ಟ್ರನಿಗೆ ವೈರಾಗ್ಯೋಪದೇಶ ಮಾಡಿದ. ಏಕೆಂದರೆ ಅವನು ಬೇರೆ ಶೂದ್ರನಂತೆ ಅಲ್ಲ. ಎಲ್ಲ ಪಾಪಿಗಳಿಗೆ ಶಿಕ್ಷೆ ನೀಡುವ ಸಾಕ್ಷಾದ್ ಯಮನ ಅವತಾರ. ಹಾಗಾದರೆ ಅವನು ಭೂಮಿಗೆ ಬಂದಾಗ ಯಮಲೋಕದಲ್ಲಿ ಅವನ ಕರ್ತವ್ಯವನ್ನು ನಿರ್ವಹಿಸಿದವರು ಯಾರು? ಅವನೇ ಮೂಲರೂಪದಿಂದ—

ಅಬಿಭ್ರದರ್ಯಮಾ ದಂಡಂ ಯಥಾಘಮಘಕಾರಿಷು ।
ಯಾವದ್ ಬಭಾರ ಶೂದ್ರತ್ವಂ ಶಾಪಾದ್ ವರ್ಷಶತಂ ಯಮಃ ॥ ೧೫ ॥

---

೧. ವಿದುರಸ್ಯ ಶ್ರೀಕೃಷ್ಣಾಂತರ್ಧಾನಾನಂತರಂ ದೇಹತ್ಯಾಗೋಕ್ತಿರ್ವಕ್ಷ್ಯಮಾಣಾ... ।
-ವಂಶೀಧರಃ

ಪಾಪಿಗಳಿಗೆ ಅವರ ಪಾಪಕ್ಕೆ ಅನುಗುಣವಾಗಿ ಶಿಕ್ಷೆ ನೀಡುವ ಸೂರ್ಯ ಪುತ್ರನಾದ ಯಮನು ಮಾಂಡವ್ಯ ಶಾಪದಿಂದ ಒಂದು ಅಂಶದಿಂದ ಮಾತ್ರ ಭೂಮಿಯಲ್ಲಿ ಅವತರಿಸಿ ನೂರು ವರ್ಷಕಾಲ ಶೂದ್ರಶರೀರವನ್ನು ಧರಿಸಿದ.

ಈ ಶ್ಲೋಕದಲ್ಲಿ ಯಮ ಒಂದು ಅಂಶದಿಂದ ಭೂಮಿಯಲ್ಲಿ ಅವತರಿಸಿದನೆಂದು ಏಕೆ ಗ್ರಹಿಸಬೇಕು? 'ಯಾವದ್ ವರ್ಷಶತಂ' ನೂರು ವರ್ಷಗಳವರೆಗೆ ಎಂದು ಅನ್ವಯಿಸದೆ 'ಯಾವತ್ ಶೂದ್ರತ್ವಂ ಬಭಾರ' ಯಮನು ಭೂಮಿಯಲ್ಲಿ ಶೂದ್ರನಾಗಿದ್ದಷ್ಟು ಕಾಲ ಯಮಲೋಕದಲ್ಲಿ ಅರ್ಯಮನೆಂಬ ಆದಿತ್ಯ ಅಥವಾ ಪಿತೃದೇವ ಕರ್ತವ್ಯ ನಿರ್ವಹಿಸಿದನೆಂದೇ ಏಕೆ ಅನ್ವಯಿಸಬಾರದು? ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೇ ಮಾಡಿದ್ದಾರೆ.[೧] ಅರ್ಯಮಾ ಎಂದರೆ ಸೂರ್ಯನೆ. ಸೂರ್ಯಪುತ್ರನೆಂದು ಅಮುಖ್ಯಾರ್ಥವಿಟ್ಟುಕೊಳ್ಳಬೇಕಾಗಿಲ್ಲ, ಎಂದರೆ ಇದು ಸರಿಯಲ್ಲ—

ಯೋಽರ್ಯಮಾ ದಂಡಮಬಿಭ್ರತ್
ಸ ವರ್ಷಶತಂ ಯಾವತ್ ಶೂದ್ರತ್ವಂ ಬಭಾರ ।
ನ ದೇವಾನಾಂ ನ ದೇವೀನಾಂ ಸಾಮಸ್ತ್ಯೇನ ಜನಿರ್ಭುವಿ ।
ಅಂಶಾಂಶೇನೈವ ಜಾಯಂತೇ ಸರ್ವೇ ತ್ವಾಜಾನಜಾದಯಃ ॥

ಯಾರು ಪಾಪಿಗಳಿಗೆ ಶಿಕ್ಷೆ ನೀಡುವನೋ ಆ ಸೂರ್ಯಪುತ್ರ ಯಮನೆ ನೂರು ವರ್ಷಗಳವರೆಗೆ ಶೂದ್ರಶರೀರವನ್ನು ಧರಿಸಿದನೆಂದು ಅನ್ವಯ. ಹಾಗಾದರೆ ಯಮಲೋಕದಲ್ಲಿ ಆಗ ಯಾರು ಅಧಿಕಾರಿ ಎಂದರೆ, ಅವನೆ ಮೂಲರೂಪದಿಂದ. ದೇವತೆಗಳಿಗೂ ದೇವತಾ ಸ್ತ್ರೀಯರಿಗೂ ಮೂಲರೂಪದಿಂದ ಭೂಮಿಯಲ್ಲಿ ಅವತಾರವಿಲ್ಲ. ಆಜಾನಜ ದೇವತೆಗಳಿಂದಾರಂಭಿಸಿ ಮೇಲಿನ ದೇವತೆಗಳಿಗೆ ಈ ನಿಯಮ. ಬ್ರಹ್ಮಾಂಡದ ಹೊರಗೆ ಅವರ ಮೂಲರೂಪವಿರುತ್ತದೆ. ಅದರ ಅಂಶಗಳು

---

೧. ಯಮೇ ಚಾತ್ರಾಗತೇಽಮುತ್ರ ಕೋ ದಂಡಧರಃ ಇತ್ಯಪೇಕ್ಷಾಯಾಮಾಹ ಅಬಿಭ್ರದಿತಿ ।
-ಶ್ರೀಧರಃ

ಶಾಪಾದ್ ಮಾಂಡವ್ಯ ಶಾಪಾದ್ ಹೇತೋಃ ಯಮೋ ಯಾವತ್ ಶೂದ್ರತ್ವಂ ವಿದುರ ರೂಪಂ ಶೂದ್ರಭಾವಂ ದಧಾರ ತಾವದ್ ವರ್ಷಶತಮರ್ಯಮಾ ಸೂರ್ಯೋಽಘಕಾರಿಷು ಪಾಪಿಷು ಯಥಾಘಂ ತತ್ಪಾಪಾನುರೂಪಂ ದಂಡಮಬಿಭ್ರತ್ ಕಾರಯಾಮಾಸ । -ವೀರರಾಘವಃ

ವಿವಸ್ವಾನರ್ಯಮಾ । ಪೂಷೇತ್ಯಾದಿದ್ವಾದಶಾದಿತ್ಯಾಃ । ತತ್ರ ದ್ವಿತೀಯೋಽರ್ಯಮಾ ।
-ವಲ್ಲಭಾಚಾರ್ಯಃ

ಅರ್ಯಮಾ ಪಿತೃರಾಜಃ । -ಗಿರಿಧರಃ

ಅರ್ಯಮಾ ತು ಪುಮಾನ್ ಸೂರ್ಯೇ ಪಿತೃದೇವಾಂತರೇಽಪಿ ಚ । ಇತಿ ಮೇದಿನೀ।
-ವಂಶೀಧರಃ

ಒಳಗೆ ಆಯಾ ಲೋಕಗಳಲ್ಲಿರುತ್ತವೆ. ಅವುಗಳ ಅಂಶಗಳಿಂದ ಅವರು ಭೂಮಿಯಲ್ಲಿ ಅವತರಿಸುತ್ತಾರೆ'. ಎಂದು ಸ್ಕಂದಪುರಾಣ ಹೇಳಿದೆ. ಆದರಿಂದ ಮೇಲಿನ ಪ್ರಶ್ನೆಗೆ ಅವಕಾಶವಿಲ್ಲ.

★★★

ವಿದುರ ಧೃತರಾಷ್ಟ್ರನಿಗೆ ವೈರಾಗ್ಯೋಪದೇಶ ನೀಡುತ್ತಾನೆ—

ಪ್ರತಿಕ್ರಿಯಾ ನ ಯಸ್ಯೇಹ ಕುತಶ್ಚಿತ್ ಕರ್ಹಿಚಿತ್ ಪ್ರಭೋ ।
ಸ ಏಷ ಭಗವಾನ್ ಕಾಲಃ ಸರ್ವೇಷಾಂ ನಃ ಸಮಾಗತಃ ॥ ೨೦ ॥

ಯಾರಿಗೆ ಈ ಲೋಕದಲ್ಲಿ ಪ್ರತೀಕಾರ ಎಲ್ಲಿಯೂ ಯಾವ ಕಾರಣದಿಂದಲೂ ಇಲ್ಲವೋ ಆ ಕಾಲನಾಮಕ ಭಗವಂತ ಎಲ್ಲರಿಗೂ ಮರಣ ನೀಡಲು ಬರುತ್ತಿದ್ದಾನೆ.

ಇಲ್ಲಿ ಭಗವಾನ್ ಕಾಲ ಎಂದರೆ ಯಾರು? ವಿಷ್ಣು. 'ನ ದೇವಾನಾಂ ನ ದೇವೀನಾಂ' ಎಂದು ಮುಂತಾಗಿ ಹೇಳಿದ ಸ್ಕಂದಪುರಾಣ ವಚನವೆ ಮುಂದುವರಿದು ಹೀಗೂ ಹೇಳುತ್ತದೆ—

ಸಂಹರ್ತಾ ಭಗವಾನ್ ವಿಷ್ಣುಃ ಕಾಲ ಇತ್ಯಭಿಧೀಯತೇ ।
ಅಥವಾ ಗುಣಸರ್ವಸ್ವಂ ಕಾಲಶಬ್ದೋ ವ್ಯನಕ್ತಿ ಹಿ ॥

ಇತಿ ಸ್ಕಾಂದೇ ॥

ಸರ್ವಸಂಹಾರಕನಾದ್ದರಿಂದ ವಿಷ್ಣು ಕಾಲ ಎನಿಸುತ್ತಾನೆ. ಅಥವಾ ಅವನ ಸ್ವೀಯ ಸಕಲ ಗುಣಗಳನ್ನೂ ಕಾಲಶಬ್ದ ಹೇಳುತ್ತದೆ ಎಂದು ಸ್ಕಾಂದಪುರಾಣ ಹೇಳಿದೆ.

ಕಲ ಚ್ಛೇದನೇ ಧಾತು ಇಟ್ಟುಕೊಂಡರೆ ಸಂಹಾರಕ ಎಂಬ ಅರ್ಥ. ಕಲ ಕಾಮಧೇನುಃ ಎಂಬ ಧಾತು ಇಟ್ಟುಕೊಂಡರೆ ಗುಣ-ಸರ್ವ-ಸ್ವ ಅಂದರೆ ಸ್ವೀಯ ಸರ್ವಗುಣಗಳನ್ನು ಅದು ಹೇಳುತ್ತದೆ.

ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿ 'ನಿನ್ನ ಮಕ್ಕಳನ್ನೆಲ್ಲ ನಾಶಮಾಡಿದ ಕೃಷ್ಣ ನಿನಗೂ ಮೃತ್ಯುವಾಗಿ ಬರುತ್ತಿದ್ದಾನೆ. ಅವನು ಅಂದೇ ನನ್ನ ತೀರ್ಥಯಾತ್ರಾ ಕಾಲದಲ್ಲಿ ಪರಂಧಾಮಕ್ಕೆ ಹೋಗಿದ್ದರೂ ಭಗವಂತನಾದ್ದರಿಂದ ಇನ್ನೊಂದು ಕಾಲ ರೂಪದಿಂದ ಬರುತ್ತಿದ್ದಾನೆ' ಎಂದಿದೆ.[೧] ಇಲ್ಲಿ ವಿದುರನ ತೀರ್ಥಯಾತ್ರಾಕಾಲದಲ್ಲಿ ಕೃಷ್ಣಾವತಾರ

---

೧. ಯಃ ಪೂರ್ವಂ ಕೃಷ್ಣಾಖ್ಯಸ್ತ್ವತ್ಪುತ್ರಾದೀನುಪಸಂಹೃತವಾನ್ ಸ ಏವೇದಾನೀಂ ತ್ವಾಮುಪಸಂಹರ್ತುಮಾಗತಃ। ನ ಚ ಸ ಗತ ಇತಿ ಮಂತವ್ಯಂ। ಭಗವತ್ತ್ವಾತ್ ಪೂರ್ವಮನ್ಯೇನ ರೂಪೇಣ ಸ್ಥಿತಃ। ಸಾಂಪ್ರತಮನ್ಯೇನ। ಸ್ವರೂಪತಃ ಸ ಏವ। ಆಕೃತಿಮಾತ್ರಂ ಭಿದ್ಯತೇ ಇತ್ಯಾಹ।
-ವಲ್ಲಭಾಚಾರ್ಯಃ

ಸಮಾಪ್ತಿ ಎಂದುದು ಹಿಂದೆ ಹೇಳಿದ ಪದ್ಮಪುರಾಣಾದಿಗಳಿಗೆ ವಿರುದ್ಧ. ಇಲ್ಲಿ ಸ್ಕಂದಪುರಾಣ ವಚನದಲ್ಲಿ 'ಕೃಷ್ಣಃ' ಎನ್ನದೆ 'ವಿಷ್ಣುಃ' ಎಂದುದೂ ಈ ವ್ಯಾಖ್ಯಾನಕ್ಕೆ ಅನುಕೂಲವಾಗಿಲ್ಲ.

★★★

'ನಿನ್ನೆಲ್ಲ ಮಕ್ಕಳನ್ನು ಕೊಂದ ಭೀಮ ನಿನಗೆ ಅನಾದರದಿಂದ ಕೊಡುವ ಅನ್ನವನ್ನು ನಾಯಿಯಂತೆ ತಿಂದು ನೀನೇಕೆ ಬದುಕಬೇಕು? ಇನ್ನಾದರೂ ವಿರಕ್ತನಾಗಿ ಕಾಡಿಗೆ ಹೊರಡು' ಎಂದು ವಿದುರ ಧೃತರಾಷ್ಟ್ರನಿಗೆ ಉಪದೇಶಿಸುತ್ತಾನೆ—

ಅಥೋದೀಚೀಂ ದಿಶಂ ಯಾತು ಸ್ವೈರಜ್ಞಾತಗತಿರ್ಭವಾನ್ ।
ಇತೋಽರ್ವಾಕ್ ಪ್ರಾಯಶಃ ಕಾಲಃ ಪುಂಸಾಂ ಗುಣವಿಕರ್ಷಣಃ ॥೨೮॥

ಉತ್ತರದಿಕ್ಕಿಗೆ ಹೋಗು, ಜನರಿಲ್ಲದ ಕಡೆ ಇರು. ನಿನಗೆ ಈ ಉಪದೇಶವನ್ನು ಈಗ ನೀಡುತ್ತಿದ್ದೇನೆ. ಏಕೆಂದರೆ ಈ ಹಿಂದಿನ ಕಾಲದಲ್ಲಿ ಪರಮಾತ್ಮ ನಮ್ಮ ವೈರಾಗ್ಯಾದಿಗುಣಗಳನ್ನು ಸೆಳೆಯುತ್ತಿದ್ದ. ವಿಷಯಾಸಕ್ತಿ ಹೆಚ್ಚಿಸುತ್ತಿದ್ದ. ವೈರಾಗ್ಯೋಪದೇಶ ಆಗ ವ್ಯರ್ಥವಾಗುತ್ತಿತ್ತು.

ಈ ಶ್ಲೋಕದಲ್ಲಿ 'ಸ್ವೈರಜ್ಞಾತಗತಿಃ' ಎಂದರೆ 'ಸ್ವೈಃ ಅಪಿ ಅಜ್ಞಾತಗತಿಃ' 'ತನ್ನ ಬಂಧುಗಳಿಂದಲೂ ತಿಳಿಯಲಾಗದ ಪ್ರದೇಶದಲ್ಲಿರು' ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ.[೧] ಅದು ಸರಿಯಲ್ಲ. ಪಾಂಡವರ ಅನುಜ್ಞೆಯಿಂದಲೆ ಅವರಿಗೆ ತಿಳಿದಿರುವ ಪ್ರದೇಶದಲ್ಲಿಯೆ ಧೃತರಾಷ್ಟ್ರ ವನವಾಸ ಮಾಡಿದನೆಂದು ಮಹಾಭಾರತ ಹೇಳಿದೆ. ಅದರಿಂದ ಹೀಗೆ ಹೇಳಬೇಕು—

ಸ್ವೈರಜ್ಞಾತಗತಿಃ ವಿವಿಕ್ತಗತಿಃ ।

ಸ್ವೈರಜ್ಞಾತಗತಿ ಎಂದರೆ ಜನರಿಲ್ಲದ ಪ್ರದೇಶದಲ್ಲಿ ವಾಸ ಮಾಡುವವನೆಂದರ್ಥ.

ಎಲ್ಲರೂ ತಮ್ಮ ಇಚ್ಛೆಯಂತೆ ತಿಳಿಯಬಹುದಾದ ಪ್ರದೇಶವಲ್ಲ, ತನ್ನಿಚ್ಛೆಯಂತೆ ತನ್ನ ಸಮೀಪದ ಬಂದುಗಳು ಮಾತ್ರ ತಿಳಿಯಬಹುದಾದ ಜನರಹಿತ ಪ್ರದೇಶದಲ್ಲಿ ಧೃತರಾಷ್ಟ್ರ ವನವಾಸ ಮಾಡಲೆಂದು ವಿದುರ ಹೇಳುತ್ತಿದ್ದಾನೆ. 'ಸ್ವೈರ-ಜ್ಞಾತಗತಿಃ' ಎಂದು ಪದವಿಭಾಗ.

★★★

---

೧. ಸ್ವೈರ್ಜ್ಞಾತಿಭಿರಜ್ಞಾತಾ ಗತಿರ್ಯಸ್ಯ ಸ ಭವಾನ್ । -ವೀರರಾಘವಃ

ಧೃತರಾಷ್ಟ್ರ ಗಾಂಧಾರೀ ಕುಂತಿಯರು ಬದರಿಕಾಶ್ರಮದಲ್ಲಿ ವಾಸಮಾಡಿದರು. ಧರ್ಮರಾಜ ಪ್ರತಿದಿನ ಅರಮನೆಯಲ್ಲಿ ಅವರಿದ್ದ ಸ್ಥಳಕ್ಕೆ ಹೋಗಿ ನಮಸ್ಕರಿಸುತ್ತಿದ್ದ. ಒಂದು ದಿನ ಹಾಗೇ ನಮಸ್ಕರಿಸುತ್ತಿದ್ದಾಗ ಅವರು ಈ ಲೋಕವನ್ನು ತೊರೆದು ಹೋಗಿರುವಂತೆ ಅವನ ಜ್ಞಾನದೃಷ್ಟಿಗೆ ಭಾಸವಾಯಿತು. ಈ ಹಿಂದೆ ಪ್ರತಿದಿನ ಅವರಿದ್ದಂತೇ ಭಾಸವಾಗುತ್ತಿತ್ತು.

ಅಜಾತಶತ್ರುಃ ಕೃತಮೈತ್ರೋ ಹುತಾಗ್ನಿ-
ರ್ವಿಪ್ರಾನ್ ನತ್ವಾ ತಿಲಗೋವಸ್ತ್ರರುಗ್ಮೈಃ ।
ಗೃಹಾನ್ ಪ್ರವಿಷ್ಟೋ ಗುರುವಂದನಾಯ
ನ ಚಾಪಶ್ಯತ್ ಪಿತರೌ ಸೌಬಲೀಂ ಚ ॥ ೩೧ ॥

ಧರ್ಮರಾಜ ಸಂಧ್ಯಾವಂದನ ಔಪಾಸನ ಹೋಮಾದಿಗಳನ್ನು ತೀರಿಸಿ ತಿಲ ಗೋ ವಸ್ತ್ರ ಹಿರಣ್ಯದಾನ ಪೂರ್ವಕವಾಗಿ ಬ್ರಾಹ್ಮಣರಿಗೆ ನಮಿಸಿ ಅರಮನೆಯಲ್ಲಿ ಹಿಂದೆ ಹಿರಿಯರು ಇದ್ದ ಸ್ಥಳಕ್ಕೆ ನಮಿಸುವುದಕ್ಕಾಗಿ ಅವರ ಮನೆಗಳನ್ನು ಪ್ರವೇಶಿಸಿದ. ಆಗ ಅವರು ಈ ಲೋಕದಲ್ಲಿಲ್ಲ ಎಂದು ಅವನಿಗೆ ಭಾಸವಾಯಿತು.

ಈ ಶ್ಲೋಕದಲ್ಲಿ ಮೇಲುನೋಟಕ್ಕೆ ಹೀಗೆ ಕಾಣುತ್ತದೆ- 'ಧರ್ಮರಾಜ ಒಂದುದಿನ ಬೆಳಿಗ್ಗೆ ಎಂದಿನಂತೆ ಹಿರಿಯರಿಗೆ ನಮಸ್ಕರಿಸಲು ಹೋದಾಗ ಅರಮನೆಯಲ್ಲಿ ಅವರು ಕಾಣಿಸಲಿಲ್ಲ. ವಿಚಾರಿಸಿದಾಗ ತಿಳಿಯಿತು, 'ಅವರು ಅರ್ಧರಾತ್ರಿಯಲ್ಲಿ ಯಾರಿಗೂ ಹೇಳದೆ ಎಲ್ಲರ ಕಣ್ಣುತಪ್ಪಿಸಿ ಕಾಡಿಗೆ ನಡೆದಿದ್ದರು' ಎಂದು. ಹಾಗೇ ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನಿಸಿದ್ದಾರೆ.[೧]

'ಪಿತರೌ' ಎಂಬ ಶಬ್ದದಿಂದ ವಿವಕ್ಷಿತವಾದ ಅರ್ಥವೂ ತಿಳಿಯುವುದಿಲ್ಲ. ಗಾಂಧಾರಿ ಧೃತರಾಷ್ಟ್ರರೆಂದಿಟ್ಟುಕೊಂಡರೆ 'ಸೌಬಲೀಂ ಚ' ಎಂದು ತಿರುಗಿ ಗಾಂಧಾರಿಯನ್ನು ನಿರ್ದೇಶಿಸುವುದು ಪುನರುಕ್ತಿಯಾದೀತು. ವಿದುರ ಧೃತರಾಷ್ಟ್ರರೆಂದಿಟ್ಟುಕೊಂಡರೂ ಕೂಡುವುದಿಲ್ಲ. ಒಮ್ಮೆ ಪಾಂಡವರು ಧೃತರಾಷ್ಟ್ರಾದಿಗಳನ್ನು ಕಾಣಲು ಹೋದಾಗ ಅಲ್ಲಿ ವಿದುರ ಕಾಣಿಸಲಿಲ್ಲ. ಅವನನ್ನು ಅರಸುತ್ತ ಧರ್ಮರಾಜ ನಡೆದಾಗ ಒಂದೆಡೆ ಅವನು ಸಿಕ್ಕಿದ. ಆದರೆ ಅವನು ಧರ್ಮರಾಜನ ಶರೀರದಲ್ಲಿ

---

೧. ಅನೇನ ರಾತ್ರಾವೇವ ಧೃತರಾಷ್ಟ್ರೋ ನಿರಗಾತ್ ಇತಿ ಸೂಚಿತಂ ।

-ವೀರರಾಘವಃ ಗಿರಿಧರಃ

ಏವಮರ್ಧರಾತ್ರ ಸಮಯೇ ಧೃತರಾಷ್ಟ್ರೇ ನಿರ್ಗತೇ ಉದಯಾನಂತರ ಪ್ರಹರಪರ್ಯಂತಂ ಜಿಜ್ಞಾಸಾ ನಾಭೂತ್ ।

-ವಲ್ಲಭಾಚಾರ್ಯಃ

ಯೋಗಬಲದಿಂದ ಪ್ರವೇಶಿಸಿ ಐಕ್ಯಹೊಂದಿ ಶರೀರವನ್ನು ತ್ಯಜಿಸಿದ. ಆದರಿಂದ ಈಗ ಧೃತರಾಷ್ಟ್ರನ ಜೊತೆ ವಿದುರನಿಲ್ಲ. ಹಾಗಾದರೆ ಪಿತರೌ ಎಂದರೆ ಯಾರು? ಈ ಪ್ರಶ್ನೆಗಳಿಗೆ ಸಮಾಧಾನ—

ಪಿತರೌ- ಕುಂತೀಧೃತರಾಷ್ಟ್ರೌ। ನ ಚಾಪಶ್ಯತ್ ತಸ್ಯ ಮನಸಿ ತೇಷಾಂ ವಿಪದ್ಭಾವೋ ಬಭೂವ । ಅನ್ಯಥಾ ಮಹಾಭಾರತವಿರೋಧಾತ್ ।

ಸ್ಕಾಂದೇ ಚ—

ಭೀಮಸಂತರ್ಜಿತೋ ರಾಜ್ಞಸ್ತ್ವನುಜ್ಞಾಂ ಪ್ರಾಪ್ಯ ಯತ್ನತಃ ।
ಧೃತರಾಷ್ಟ್ರೋ ವನೇ ವಾಸಮಕರೋದ್ ವತ್ಸರತ್ರಯಂ ।
ವಿದುರಸ್ತದ್ದಿದೃಕ್ಷಾರ್ಥಮಾಗತೇಷು ವನಂ ಪುರಾ ।
ಪಾಂಡವೇಷು ತು ರಾಜಾನಂ ಪ್ರವಿಶ್ಯೈಕತ್ವಮಾಗತಃ ।
ತತೋ ದಾವಾಗ್ನಿನಾ ದಗ್ಧಂ ಧೃತರಾಷ್ಟ್ರಂ ಚ ಸೌಬಲೀಂ ।
ಶ್ರುತ್ವಾ ಕುಂತೀಂ ಚ ಚಿಂತಾಂ ತೇ ಪ್ರಾಪುಃ ಪಾಂಡುಸುತಾಸ್ತದಾ ।
ತಾಂಸ್ತದಾ ನಾರದೋ ವಿದ್ವಾನ್ ಶಮಯಾಮಾಸ ಧರ್ಮವಿತ್ ।
ಉಕ್ತ್ವೋತ್ತಮಾಂ ಗತಿಂ ತೇಷಾಂ ನಿಷ್ಠಾಂ ತಾತ್ಕಾಲಿಕೀಂ ತಥಾ ॥

ಇತ್ಯಾದಿ ।

ಪಿತರೌ ಎಂದರೆ ಕುಂತೀ ಧೃತರಾಷ್ಟ್ರರನ್ನು ಎಂದರ್ಥ. ನ ಚಾಪಶ್ಯತ್ ಎಂದರೆ ಅವರು ಗತಿಸಿ ಹೋದರೆಂದು ಅವನಿಗೆ ಮನಸ್ಸಿನಲ್ಲಿ ಭಾಸವಾಯಿತೆಂದರ್ಥ. ಪಿತರೌ ಎಂಬ ಶಬ್ದಕ್ಕೆ ವಿದುರ ಧೃತರಾಷ್ಟ್ರರೆಂದೂ 'ನ ಚಾಪಶ್ಯತ್' ಎಂದರೆ ಅವರೆಲ್ಲರೂ ನಡುರಾತ್ರಿ ಹೇಳದೆ ಮನೆಬಿಟ್ಟುಹೋದರೆಂದೂ ಅರ್ಥವಿಟ್ಟು ಕೊಂಡರೆ ಮಹಾ ಭಾರತ ವಿರೋಧ ಬರುತ್ತದೆ. ಸ್ಕಾಂದಪುರಾಣದಲ್ಲಿಯೂ ಹೀಗೆ ಹೇಳಿದೆ—'ವೈರಾಗ್ಯ ಬರಲೆಂದು ಭೀಮನಿಂದ ಅಪಮಾನಿತನಾದ ಧೃತರಾಷ್ಟ್ರ ಉಪವಾಸ ಸತ್ಯಾಗ್ರಹ ಮಾಡಿ ಹೇಗೋ ಕಷ್ಟದಿಂದ ಧರ್ಮರಾಜನ ಅನುಮತಿ ಪಡೆದು ಮೂರು ವರ್ಷಕಾಲ ಬದರಿಕಾಶ್ರಮದಲ್ಲಿ ವಾಸಮಾಡಿದ. ಮೂರು ವರ್ಷಗಳಿಗಿಂತ ಮೊದಲೇ ಅವರನ್ನು ಕಾಣಲು ಪಾಂಡವರು ಒಮ್ಮೆ ಬಂದಾಗ ವಿದುರ ಧರ್ಮರಾಜನನ್ನು ಸೇರಿ ಐಕ್ಯ ಹೊಂದಿದ್ದ. ಮೂರು ವರ್ಷಗಳು ಕಳೆದಾಗ ಧೃತರಾಷ್ಟ್ರ ಗಾಂಧಾರೀ ಕುಂತಿಯರು ಕಾಳ್ಗಿಚ್ಚಿನಲ್ಲಿ ಬೆಂದು ಹೋದರೆಂದು ಸಂಜಯನಿಂದ ತಿಳಿದು ಪಾಂಡವರು ದುಃಖಿಸಿದರು. ಜ್ಞಾನಿಗಳಾದ ನಾರದರು ಅವರಿಗೆ ಉತ್ತಮ ಗತಿಯೇ ಆಗಿದೆ ಎಂದು ಹೇಳಿ. ಉತ್ತಮ ಜ್ಞಾನವನ್ನು ಉಪದೇಶಿಸಿ ತತ್ಕಾಲದಲ್ಲಿ ಮಾಡಬೇಕಾದುದನ್ನು ತಿಳಿಸಿ ಸಂತೈಸಿದರು ಎಂದು.

★★★

ಧೃತರಾಷ್ಟ್ರ ಮುಂತಾದವರು ಇನ್ನಿಲ್ಲವೆಂದೆನಿಸಿತು, ಧರ್ಮರಾಜನಿಗೆ. ಅದೇ ಸಮಯದಲ್ಲಿ ಧೃತರಾಷ್ಟ್ರನ ಬಳಿಯಿಂದ ಸಂಜಯ ಬಂದು ಕುಳಿತಿದ್ದಾನೆ. ಅವನನ್ನು ಕೇಳುತ್ತಾನೆ ಧರ್ಮರಾಜ—

ತತ್ರ ಸಂಜಯಮಾಸೀನಂ ಪಪ್ರಚ್ಛೋದ್ವಿಗ್ನಮಾನಸಃ ।
ಗಾವಲ್ಗಣೇ ಕ್ವ ನಸ್ತಾತೋ ವೃದ್ಧೋ ಹೀನಶ್ಚ ನೇತ್ರಯೋಃ ।
ಅಂಬಾ ವಾ ಹತಪುತ್ರಾಽಽರ್ತಾ ಪಿತೃವ್ಯಃ ಕ್ವ ಗತಃ ಸುಹೃತ್ ॥ ೩೨ ॥

ಆಗ ಅಲ್ಲಿಗೆ ಬದರಿಕಾಶ್ರಮದಿಂದ ಬಂದು ಕುಳಿತಿದ್ದ ಸಂಜಯನನ್ನು ಉದ್ವಿಗ್ನಮನಸ್ಕನಾದ ಧರ್ಮರಾಜ ಕೇಳಿದ, 'ಸಂಜಯ, ನೇತ್ರಹೀನ ವೃದ್ಧನಾದ ನಮ್ಮ ತಂದೆ ಧೃತರಾಷ್ಟ್ರ ಎಲ್ಲಿ? ಹತಪುತ್ರಳಾಗಿ ದುಃಖಿತಳಾದ ಗಾಂಧಾರಿ ಎಲ್ಲಿ? ತಾಯಿ ಕುಂತಿ ಎಲ್ಲಿ? ಹೇಳು, ಧೃತರಾಷ್ಟ್ರನೆಲ್ಲಿ?

ಧೃತರಾಷ್ಟ್ರನೆಲ್ಲಿ? ಕುಂತಿ ಗಾಂಧಾರಿಯರೆಲ್ಲಿ? ಎಂದರೆ ಯಾವ ಪರಲೋಕಕ್ಕೆ ಹೋದರು ಅಥವಾ ಎಲ್ಲಿ ಹೇಗೆ ಮರಣ ಹೊಂದಿದರು? ಎಂದೇ ಅಭಿಪ್ರಾಯ. ಅರಮನೆಯಿಂದ ಎಲ್ಲಿಗೆ ಹೋದರು ಎಂದಲ್ಲ. ಆದರೆ ಇಲ್ಲಿಯೆ ಮುಂದೆ ಸಂಜಯ ನಾನೂ ವಂಚಿತನಾದೆ. 'ಅಹಂ ಚ ವ್ಯಂಸಿತೋ ರಾಜನ್' ಎನ್ನುವುದರಿಂದ ಸಂಜಯನಿಗೂ ತಿಳಿಯದಂತೆ ಅರಮನೆಯಿಂದ ಹೊರಟು ಹೋದರೆಂದೆ ಹೇಳಿದಂತೆ ಕಾಣುತ್ತದೆ. ಈ ಸಮಸ್ಯೆಗೆ ಬ್ರಹ್ಮಾಂಡಪುರಾಣದಲ್ಲಿ ಸಮಾಧಾನವಿದೆ—

ಬ್ರಹ್ಮಾಂಡೇ ಚ—
ಧೃತರಾಷ್ಟ್ರೇ ಮೃತೇ ಸೂತಃ ಸಂಜಯಃ ಪಾಂಡುಸೂನವೇ ।
ಗತಿಂ ಶಶಂಸ ಕುಂತ್ಯಾಶ್ಚ ಗಾಂಧಾರೀಧೃತರಾಷ್ಟ್ರಯೋಃ ॥ ಇತ್ಯಾದಿ ॥

ಮಹಾಭಾರತದಲ್ಲಿ ಮಾತ್ರವಲ್ಲದೆ ಬ್ರಹ್ಮಾಂಡಪುರಾಣದಲ್ಲಿಯೂ ಹೀಗೆ ಹೇಳಿದೆ— 'ಧೃತರಾಷ್ಟ್ರ ಮೃತನಾದಾಗ ಸಾರಥಿ ಸಂಜಯ ಧರ್ಮರಾಜನಿಗೆ ಕುಂತೀ ಗಾಂಧಾರಿ ಧೃತರಾಷ್ಟ್ರರ ಮರಣ ಹೇಗಾಯಿತೆಂದು ತಿಳಿಸಿದ' ಎಂದು ಮುಂತಾಗಿ.

'ಪಿತೃವ್ಯಃ ಕ್ವಗತಃ ಸುಹೃತ್' ಎಂಬಲ್ಲಿ ಪಿತೃವ್ಯನೆಂದರೆ ಯಾರು? ಧೃತರಾಷ್ಟ್ರನಲ್ಲ. 'ಕ್ವ ನಸ್ತಾತಃ' ಎಂದು ಧೃತರಾಷ್ಟ್ರನ ಬಗ್ಗೆ ಕೇಳಿಯಾಗಿದೆ. ವಿದುರನೆಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಹೇಳುತ್ತಿದ್ದಾರೆ. ಆದರೆ ವಿದುರನ ಬಗ್ಗೆ ಕೇಳುವ ಸಂಭವವಿಲ್ಲ. ವಿದುರ ಮೊದಲೇ ತನ್ನ ಶರೀರವನ್ನು ಪ್ರವೇಶಿಸಿ ಐಕ್ಯ ಹೊಂದಿದ್ದು ಧರ್ಮರಾಜನಿಗೆ ಗೊತ್ತೇ ಇದೆ. ಈ ಸಮಸ್ಯೆಗೆ ಉತ್ತರ—

ಪಿತೃವ್ಯೋಽಪಿ ಧೃತರಾಷ್ಟ್ರ ಏವ । ದ್ವಿರುಕ್ತಿ ಸ್ತಾತ್ಪರ್ಯಾರ್ಥಾ ।

ಯತ್ರಾಧಿಕಂ ತತ್ಪರತಾ ಬಹುವಾರಮಪಿ ಧ್ರುವಂ ।
ತದ್ ವದಂತಿ ಮಹಾಪ್ರಾಜ್ಞಾ ಲೋಕವೇದಾನುಸಾರತಃ ।
ಇತಿ ಬ್ರಹ್ಮತರ್ಕೇ ।

ಪಿತೃವ್ಯ ಎಂದರೂ ಧೃತರಾಷ್ಟ್ರನೆ. 'ಕ್ವ ತಾತಃ' ಎಂದು 'ಕ್ವ ಪಿತೃವ್ಯಃ' ಎಂದು ಎರಡು ಬಾರಿ ಧೃತರಾಷ್ಟ್ರನ ಬಗ್ಗೆ ಪ್ರಶ್ನೆ ಮಾಡಿದುದು ಅವನ ಬಗ್ಗೆ ತನಗೆ ಬಹಳ ಚಿಂತೆಯಾಗಿದೆ ಎಂದು ತಿಳಿಸುವ ಉದ್ದೇಶದಿಂದ. 'ಯಾವ ವಿಷಯದಲ್ಲಿ ಬಹಳ ಆದರವಿದೆಯೋ ಅದನ್ನು ಬಹಳ ಸಾರಿ ಹೇಳುತ್ತಾರೆ' ಎಂದು ಲೌಕಿಕ ವೈದಿಕ ಪ್ರಯೋಗಾನುಸಾರ ಮಹಾಜ್ಞಾನಿಗಳು ಹೇಳುತ್ತಾರೆ ಎಂದು ಬ್ರಹ್ಮತರ್ಕದಲ್ಲಿದೆ.

★★★

'ಧೃತರಾಷ್ಟ್ರನೆಲ್ಲಿ?' ಎಂದು ಪುನಃ ಪುನಃ ಆದರದಿಂದ ಕೇಳಲು ಕಾರಣವನ್ನು ಧರ್ಮರಾಜ ಸ್ವತಃ ಹೇಳುತ್ತಾನೆ—

ಪಿತರ್ಯುಪರತೇ ಪಾಂಡೌ ಸರ್ವಾನ್ ನಃ ಸುಹೃದಃ ಶಿಶೂನ್ ।
ಅರಕ್ಷತಾಂ ವ್ಯಸನತಃ ಪಿತೃವ್ಯೌ ಕ್ವ ಗತಾವಿತಃ ॥ ೩೪ ॥

ತಂದೆ ಪಾಂಡುರಾಜ ಮೃತನಾಗಲು ಪ್ರೀತಿಯ ಮಕ್ಕಳಾದ ನಮ್ಮೆಲ್ಲರನ್ನೂ ಆಪತ್ತುಗಳಿಂದ ಕಾಪಾಡಿದ ಆ ಧೃತರಾಷ್ಟ್ರ ಗಾಂಧಾರಿಯರು ಬದರಿಕಾಶ್ರಮದಿಂದ ಎಲ್ಲಿಗೆ ಹೋದರು? ಅಥವಾ ಈ ಲೋಕದಿಂದ ಎಲ್ಲಿಗೆ ಹೋದರು?

ಇಲ್ಲಿಯೂ 'ಪಿತೃವ್ಯೌ' ಎಂದರೆ ತಂದೆಯ ಸೋದರರು ಧೃತರಾಷ್ಟ್ರ ವಿದುರರು ಎಂದೇ ಹೇಳಿದಂತೆ ಕಾಣುತ್ತದೆ. ಬೇರೆ ಎಲ್ಲ ವ್ಯಾಖ್ಯಾನಕಾರರೂ ಹಾಗೇ ವ್ಯಾಖ್ಯಾನ ಮಾಡಿದ್ದಾರೆ.[೧] ಆದರೆ ಇದು ಸರಿಯಲ್ಲ. ವಿದುರನ ಶರೀರ ತ್ಯಾಗ ಮೊದಲೇ ಆಗಿದೆ. ಅದಕ್ಕೆ ಈಗ ಶೋಕಪಡುವ ಕಾರಣವಿಲ್ಲ. ಅದರಿಂದ ಹೀಗೆ ಹೇಳಬೇಕು—

ಪಿತೃವ್ಯೌ ಗಾಂಧಾರೀ ಧೃತರಾಷ್ಟ್ರೌ ।

ಪಿತೃವ್ಯೌ ಎಂದರೆ ಗಾಂಧಾರಿ ಧೃತರಾಷ್ಟ್ರರು.

'ಪಿತೃವ್ಯಶ್ಚ ಪಿತೃವ್ಯಾ ಚ ಪಿತೃವ್ಯೌ' ಎಂದು ಏಕಶೇಷವಾಗಿದೆ. ಪಿತೃವ್ಯಭಾರ್ಯೆಯಲ್ಲಿ ಪಿತೃವ್ಯಾಶಬ್ದ ಯೋಗವೃತ್ತಿಯಿಂದ ಕೂಡುತ್ತದೆ.

★★★

---

೧. ಪಿತೃವ್ಯೌ ಪಿತುರ್ಭ್ರಾತರೌ ಧೃತರಾಷ್ಟ್ರ ವಿದುರೌ । -ವೀರರಾಘವಃ

ಧರ್ಮರಾಜನ ಪ್ರಶ್ನೆಗಳಿಗೆ ಸಂಜಯ ನೀಡುವ ಉತ್ತರ-

ಅಹಂ ಚ ವ್ಯಂಸಿತೋ ರಾಜನ್ ಪಿತ್ರೋರ್ವಃ ಕುಲನಂದನ ।
ನ ವೇದ ಸಾಧ್ವ್ಯಾ ಗಾಂಧಾರ್ಯಾ ಮುಷಿತೋಽಸ್ಮಿ ಮಹಾತ್ಮಭಿಃ॥ ೩೭ ॥

ರಾಜನೆ, ನಾನೂ ವಂಚಿತನಾದೆ, ನಿಮ್ಮ ತಂದೆತಾಯಿಗಳಾದ ಧೃತರಾಷ್ಟ್ರ ಕುಂತಿ ಗಾಂಧಾರಿಯರೆಲ್ಲಿ ಎಂದು ನಾನೂ ತಿಳಿದಿಲ್ಲ. ಮಹಾತ್ಮರು ನನ್ನನ್ನು ವಂಚಿಸಿದ್ದಾರೆ.

ಇಲ್ಲಿ ನಾನು ರಾತ್ರಿ ನಿದ್ರೆ ಮಾಡುತ್ತಿದ್ದಾಗ ನನಗೆ ತಿಳಿಯದಂತೆ ಹೊರಟು ಹೋದರು ಎನ್ನುತ್ತಾನೆ ಸಂಜಯ ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರೂ ಹಾಗೇ ವ್ಯಾಖ್ಯಾನ ಮಾಡಿದ್ದಾರೆ.[೧] ಹೀಗೆ ಹೇಳದಿದ್ದರೆ, ಎಲ್ಲರ ಅನುಮತಿ ಪಡೆದೇ ಅವರು ಬದರಿಕಾಶ್ರಮಕ್ಕೆ ಹೋಗಿದ್ದರೆ ವಂಚನೆ ಎಲ್ಲಿ? ಈ ಸಮಸ್ಯೆಗೆ ಪರಿಹಾರ—

ಮುಷಿತೋಽಸ್ಮೀತಿ ಪ್ರಲಾಪಃ ।

'ಅಹಂ ಚ ವ್ಯಂಸಿತಃ' 'ಮುಷಿತೋಽಸ್ಮಿ' ನಾನು ವಂಚಿತನಾದೆ, ವಂಚಿತನಾದೆ ಎಂದು ಸಂಜಯ ಪ್ರಲಾಪ ಮಾಡುತ್ತಿದ್ದಾನಷ್ಟೆ.

ದುಃಖ ತಡೆಯಲಾರದೆ ಪ್ರಲಾಪ ಮಾಡುವಾಗ ಅರ್ಥವಿಲ್ಲದ ಮಾತೂ ಬರುವುದುಂಟು. ಪರಿಹಾಸಕಾಲದಲ್ಲಿಯೂ ಅಷ್ಟೆ—

ಪರಿಹಾಸ ಪ್ರಲಾಪಾದಿಷ್ವನರ್ಥಾ ವಾಗ್ ಭವೇತ್ ಕ್ವಚಿತ್ ।

★★★

ಹೀಗೆ ಧೃತರಾಷ್ಟ್ರಾದಿಗಳ ಬಗ್ಗೆ ಧರ್ಮರಾಜ ಶೋಕಿಸುತ್ತಿದ್ದಾಗ ಅಲ್ಲಿಗೆ ನಾರದ ತುಂಬುರರು ಬರುತ್ತಾರೆ. ಅವರಲ್ಲಿಯೂ ಧರ್ಮರಾಜ ತನ್ನ ದುಃಖವನ್ನು ಹೇಳಿ ಕೊಳ್ಳುತ್ತಾನೆ—

ಯುಧಿಷ್ಠಿರ ಉವಾಚ—

ನಾಹಂ ವೇದ ಗತಿಂ ಪಿತ್ರೋರ್ಭಗವನ್ ಕ್ವ ಗತಾವಿತಃ ।
ಕರ್ಣಧಾರ ಇವಾಪಾರೇ ಸೀದತಾಂ ಪಾರದರ್ಶನಃ ॥ ೪೦ ॥

ಧರ್ಮರಾಜ ಹೇಳಿದ, 'ಪೂಜ್ಯರೆ, ತಂದೆತಾಯಿಗಳು ಇಲ್ಲಿಂದ ಯಾವ

---

೧. ಮುಷಿತೋ ವಂಚಿತಃ । ಮನ್ನಿದ್ರಾಸಮಯೇ ತೇ ಗತಾ ಇತಿ ಭಾವಃ । -ವಿಶ್ವನಾಥಃ

ಲೋಕಕ್ಕೆ ಹೋದರೆಂದು ನನಗೆ ತಿಳಿಯದಾಗಿದೆ. ಅಪಾರವಾದ ಸಮುದ್ರದಲ್ಲಿ ಭೀತರಾದವರಿಗೆ ಪಾರಗಾಣಿಸುವ ನಾವಿಕರಂತಿರುವ ನಿಮ್ಮನ್ನು ಕೇಳುತ್ತಿದ್ದೇನೆ.

ಈ ಶ್ಲೋಕದಲ್ಲಿಯೂ 'ಇತಃ ಕ್ವ ಗತೌ' ಅರಮನೆಯಿಂದ ಎಲ್ಲಿಗೆ ಹೋದರೆಂದೇ ಹೇಳಿದಂತೆ ಕಾಣುತ್ತದೆ. ಬದರಿಕಾಶ್ರಮಕ್ಕೆ ಹೋದರೆಂದು ತಿಳಿದೇ ಇದೆ. ಪ್ರಶ್ನೆ ಹೇಗೆ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಸಮಾಧಾನ—

ಕ್ವ ಗತಾವಿತ್ಯದೃಷ್ಟ್ಯಪೇಕ್ಷಯಾ ।

ಎಲ್ಲಿಗೆ ಹೋದರೆಂದು ಕೇಳಿದ್ದು ಬದರಿಕಾಶ್ರಮದಲ್ಲಿಯೂ ಅವರು ಜೀವಂತರಾಗಿರುವಂತೆ ನನಗೆ ಜ್ಞಾನದೃಷ್ಟಿಗೆ ಕಾಣಿಸುತ್ತಿಲ್ಲ, ಯಾವ ಪರಲೋಕಕ್ಕೆ ಹೋದರು ಎಂಬ ಅಭಿಪ್ರಾಯದಿಂದ.

★★★

ನಾರದರು ಧರ್ಮರಾಜನಿಗೆ ಉಪದೇಶಿಸುತ್ತಾರೆ—

ಯನ್ಮನ್ಯಸೇ ಧ್ರುವಂ ಲೋಕಮಧ್ರುವಂ ವಾಽಥವೋಭಯಂ ।
ಸರ್ವಥಾ ಹಿ ನ ಶೋಚ್ಯಾಸ್ತೇ ಸ್ನೇಹಾದನ್ಯತ್ರ ಮೋಹಜಾತ್ ॥ ೪೪ ॥

ನಿತ್ಯನಾದ ಆತ್ಮನಿಗಾಗಿ, ಅಥವಾ ಅನಿತ್ಯವಾದ ಶರೀರಕ್ಕಾಗಿ, ಅಥವಾ ಎರಡನ್ನೂ ಉದ್ದೇಶಿಸಿ ನೀನು ಶೋಕಿಸುವಿಯಾದರೆ ಈ ಮೂರು ಪಕ್ಷಗಳಲ್ಲಿಯೂ ಧೃತರಾಷ್ಟ್ರ ಮುಂತಾದವರ ಬಗ್ಗೆ ನಿನಗೆ ಶೋಕ ಯುಕ್ತವಲ್ಲ. ಲೋಕದಲ್ಲಿ ಮೃತರ ಬಗ್ಗೆ ಶೋಕಪಡಲು ಕಾರಣ ಮೋಹಜನ್ಯವಾದ ಬಂಧುಸ್ನೇಹ ಹೊರತು ಬೇರೆ ಇಲ್ಲ.

ಇಲ್ಲಿ ಆತ್ಮ ನಿತ್ಯನಾದ್ದರಿಂದ ಅವನಿಗೆ ನಾಶವಿಲ್ಲ ಎಂದಮೇಲೆ ಅವನ ಬಗ್ಗೆ ಶೋಕ ಸರಿಯಲ್ಲ, ನಿಜ. ಆದರೆ ಶರೀರ ಅನಿತ್ಯ. ಅದು ನಾಶವಾಯಿತೆಂದು ಶೋಕಪಡುವುದು ಸರಿಯೆ, ಎಂದರೆ,

ಅಪರಿಹಾರ್ಯತ್ವಾದಶೋಚ್ಯಾಃ ।

ಶರೀರ ಅನಿತ್ಯವಾದ್ದರಿಂದ ಅದಕ್ಕೆ ನಾಶ ಅಪರಿಹಾರ್ಯ. ಅದರಿಂದ ಶೋಕಿಸುವುದು ಸರಿಯಲ್ಲ.

★★★

ಧೃತರಾಷ್ಟ್ರಾದಿಗಳ ಮರಣ ಹೇಗಾಯಿತೆನ್ನಲು ಮೊದಲಿಗೆ ಅವರು ಎಲ್ಲಿಗೆ ಹೋದರು ಏನು ಮಾಡಿದರು ಎಂದೆಲ್ಲ ವಿವರಗಳನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ—

ಧೃತರಾಷ್ಟ್ರಃ ಸಹ ಭ್ರಾತ್ರಾ ಗಾಂಧಾರ್ಯಾ ಚ ಸ್ವಭಾರ್ಯಯಾ ।
ದಕ್ಷಿಣೇನ ಹಿಮವತ ಋಷೀಣಾಮಾಶ್ರಮಂ ಗತಃ ॥ ೫೦ ॥

ಧೃತರಾಷ್ಟ್ರ ತನ್ನ ತಮ್ಮನಾದ ವಿದುರ, ಪತ್ನಿ ಗಾಂಧಾರಿ ಹಾಗೂ ಕುಂತಿಯರೊಂದಿಗೆ ಹಿಮಾಲಯದ ದಕ್ಷಿಣ ಭಾಗದಲ್ಲಿ ಋಷಿಗಳ ಆಶ್ರಮವನ್ನು ಸೇರಿದ.

ಇಲ್ಲಿ ನಾರದರು ಕಾಡಿನಲ್ಲಿ ಧೃತರಾಷ್ಟ್ರನನ್ನು ಕಾಣಲು ಬಂದಾಗ ವಿದುರನಿರಲಿಲ್ಲ, ಅವನು ಆಗಲೇ ಧರ್ಮರಾಜನೊಂದಿಗೆ ಐಕ್ಯಹೊಂದಿದ್ದ. ವಿದುರನೊಂದಿಗೆ ಎಂದು ಹೇಗೆ ಹೇಳಿದರು?

ಗಮನಕಾಲೇ ಸಹ ಭ್ರಾತ್ರಾ ।

ಅರಮನೆಯಿಂದ ಕಾಡಿಗೆ ಹೋಗುವ ಕಾಲದಲ್ಲಿ ವಿದುರನೊಂದಿಗೆ ಧೃತರಾಷ್ಟ್ರ ನಡೆದಿದ್ದ.

ನಾರದರು ಇಲ್ಲಿ ಹೇಳುತ್ತಿರುವುದು ವಿದುರನ ಶರೀರ ತ್ಯಾಗದ ಅನಂತರದ ವೃತ್ತಾಂತವಲ್ಲ, ಪೂರ್ವವೃತ್ತಾಂತ.

★★★

ಧೃತರಾಷ್ಟ್ರ ಋಷಿಗಳ ಆಶ್ರಮದಲ್ಲಿ ಹೇಗೆ ಯೋಗವನ್ನು ಅನುಷ್ಠಾನ ಮಾಡಿದನೆಂಬುದನ್ನು ನಾರದರು ಧರ್ಮರಾಜನಿಗೆ ಹೇಳುತ್ತಿದ್ದಾರೆ—

ಸ್ನಾತ್ವಾ ತ್ರಿಷವಣಂ ತಸ್ಮಿನ್ ಹುತ್ವಾ ಚಾಗ್ನೀನ್ ಯಥಾವಿಧಿ ।
ಅಬ್ಭಕ್ಷ ಉಪಶಾಂತಾತ್ಮಾ ಸ ಆಸ್ತೇಽವಿಗತೇಕ್ಷಣಃ ॥ ೫೩ ॥

ವ್ಯಾಸರ ಉಪದೇಶದಿಂದ ಜ್ಞಾನವಂತನಾದ ಧೃತರಾಷ್ಟ್ರ ಆ ಆಶ್ರಮದಲ್ಲಿ ತ್ರಿಕಾಲ ಸ್ನಾನಮಾಡಿ ವಿಧ್ಯುಕ್ತವಾಗಿ ಔಪಾಸನಾದಿ ಹೋಮಗಳನ್ನು ಮಾಡಿ ಕೇವಲ ನೀರು ಕುಡಿದು ವಿಷಯ ವಿರಕ್ತನಾಗಿದ್ದ.

ಇಲ್ಲಿ 'ಸ ಆಸ್ತೇ' 'ಧೃತರಾಷ್ಟ್ರ ಈಗ ಹೀಗಿದ್ದಾನೆ' ಎಂದು ನಾರದರು ವರ್ತಮಾನಕಾಲ ಪ್ರಯೋಗ ಮಾಡಿದ್ದೇಕೆ? ಧೃತರಾಷ್ಟ್ರನೀಗ ಇಲ್ಲ, ಮೃತನಾಗಿದ್ದಾನೆ ಅದನ್ನು ತಿಳಿದೇ ಪಾಂಡವರಿಗೆ ಹೇಳಲು ನಾರದರು ಬಂದಿದ್ದಾರೆ ತಾನೆ? ಎಂದರೆ,

ಆಸ್ತ ಇತ್ಯಾದ್ಯತೀತಾರ್ಥೇ ।
ಸ ಏಷ ಏತರ್ಹ್ಯಧ್ಯಾಸ್ತ ಆಸನಂ ಪಾರ್ಥಿವೋಚಿತಂ ।
ಇತ್ಯಾದಿವತ್ ।

ಸುಪ್ತಿಙುಪಗ್ರಹಲಿಂಗನರಾಣಾಂ
ಕಾಲಹಲಚ್‌ಸ್ವರಕರ್ತೃಯಙಾಂ ಚ ।
ವ್ಯತ್ಯಯಮಿಚ್ಛತಿ ಶಾಸ್ತ್ರಕೃದೇಷಾಂ
ಸೋಽಪಿ ಚ ಸಿಧ್ಯತಿ ಬಾಹುಲಕೇನ ॥

ಇತಿ ಮಹಾವ್ಯಾಕರಣೇ ।

ವ್ಯಾಸಾದಯೋ ವರ್ತಮಾನಮತೀತಾನಾಗತೇ ತಥಾ ।
ವ್ಯತ್ಯಸ್ಯಾಪಿ ವದಂತ್ಯದ್ಧಾ ಮೋಹನಾರ್ಥಂ ದುರಾತ್ಮನಾಂ ।
ಪೌರ್ವಾಪರ್ಯಂ ಯತೋ ನೈವ ಸದೈವ ಪರಿವರ್ತನಾತ್
ಅತಶ್ಚ ವ್ಯತ್ಯಯಾದೇತದ್ ವದಂತಿ ಜ್ಞಾನಚಕ್ಷುಷಃ ॥

ಇತಿ ಬ್ರಾಹ್ಮೇ ।

'ಸ ಆಸ್ತೇ' ಎಂದು ಇಲ್ಲಿ, 'ತಚ್ಚ ಭಸ್ಮೀಭವಿಷ್ಯತಿ' 'ತಮಗ್ನಿಮನುವೇಕ್ಷ್ಯತಿ' ಎಂದು ಮುಂದೆ ಹೇಳುವುದೆಲ್ಲವೂ ಭೂತಕಾಲಾರ್ಥದಲ್ಲಿದೆ. 'ಪರೀಕ್ಷಿದ್ರಾಜನು ಈಗ ರಾಜಸಿಂಹಾಸನದಲ್ಲಿ ಕುಳಿತಿದ್ದಾನೆ' ಎಂದು ಮುಂದೆ (ಭಾಗ.೧.೧೭.೪೨) ಹೇಳುವುದು ಭೂತಕಾಲ ವಿವಕ್ಷೆಯಿಂದ ಹೇಗೋ ಹಾಗೆ.

ಸುಪ್, ತಿಙ್, ಪರಸ್ಮೈಪದ ಆತ್ಮನೇಪದಗಳು, ಲಿಂಗ, ಪುರುಷ, ಕಾಲ, ಹಲ್, ಅಚ್, ಸ್ವರ, ಕರ್ತೃ, ಯಙ್ ಇವುಗಳಲ್ಲಿ ವ್ಯತ್ಯಾಸವನ್ನು ಕೆಲವೆಡೆ ಶಾಸ್ತ್ರಕಾರರು ಬಯಸುತ್ತಾರೆ. ಅದೂ 'ಬಹುಲಂ' ಎಂಬ ಶಬ್ದಪೂರ್ವಕವಾದ ವಿಧಿಯಿಂದ ಸಿದ್ಧಿಸುತ್ತದೆ ಎಂದು ಮಹಾವ್ಯಾಕರಣದಲ್ಲಿ ಉಕ್ತವಾಗಿದೆ.

ವ್ಯಾಸರು ಮುಂತಾದವರು ವರ್ತಮಾನ ಭೂತ ಭವಿಷ್ಯತ್ಕಾಲಗಳನ್ನು ವ್ಯತ್ಯಾಸ ಮಾಡಿಯೂ ಹೇಳುತ್ತಾರೆ. ಅದು ಅಸುರಮೋಹನಕ್ಕಾಗಿ. ಮತ್ತು ಪ್ರತಿಕಲ್ಪದಲ್ಲಿಯೂ ಈ ಘಟನೆಗಳು ಪುನರಾವೃತ್ತಿ ಹೊಂದುತ್ತಲೆ ಇರುವುದರಿಂದ ಪೌರ್ವಾಪರ್ಯವಾಗುವುದೂ ಇಲ್ಲ. ಆದರಿಂದಲೂ ಜ್ಞಾನಿಗಳು ಕಾಲವನ್ನು ವ್ಯತ್ಯಾಸ ಮಾಡಿ ಹೇಳುತ್ತಾರೆ ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಆಸ್ತೇ ಇದ್ದಾನೆ ಎಂದು ವರ್ತಮಾನಕಾಲ ಪ್ರಯೋಗ ಮಾಡಿದರೂ ಅದಕ್ಕೆ ಭೂತಕಾಲ ಅರ್ಥ. ಇದು ಅಮುಖ್ಯಾರ್ಥವಲ್ಲ, ಮುಖ್ಯಾರ್ಥವೆ. ಏಕೆಂದರೆ ಹಾಗೆ ಬಹಳ ಪ್ರಯೋಗಗಳಿವೆ. ಉದಾಹರಣೆಗೆ ಭಾಗವತದಲ್ಲಿ ಸೂತರು ಶೌನಕಾದಿಗಳಿಗೆ ಹೇಳುತ್ತಾರೆ, 'ಈಗ ಪರೀಕ್ಷಿತನು ರಾಜಸಿಂಹಾಸನದಲ್ಲಿ ಮಂಡಿಸಿದ್ದಾನೆ' ಎಂದು (೧.೧೭.೪೨) ಪ್ರಯೋಗ ಮಾತ್ರವಲ್ಲ, ವ್ಯಾಕರಣವಿಧಿಯೂ ಈ ವ್ಯತ್ಯಾಸವನ್ನು ಸಂಮತಿಸುತ್ತದೆ. ಮಹಾವ್ಯಾಕರಣದ ಒಂದು ಸೂತ್ರದಲ್ಲಿ ಕಾಲ ಮಾತ್ರವಲ್ಲದೆ ಇನ್ನೂ ಅನೇಕ ವ್ಯತ್ಯಾಸಗಳನ್ನು ವಿಧಿಸಿದೆ. ಸುಪ್ ಎಂದರೆ ಪ್ರಥಮಾದಿ ವಿಭಕ್ತಿಗಳ ವ್ಯತ್ಯಾಸ.

ತಿಙ್ ಎಂದರೆ ತಿಙ್‌ವಿಭಕ್ತಿಗಳ ವ್ಯತ್ಯಾಸ. ಉಪಗ್ರಹ ಎಂದರೆ ವಿಕರಣ ಪ್ರತ್ಯಯ ಅಥವಾ ಪರಸ್ಮೈಪದ ಆತ್ಮನೇಪದಗಳ ವ್ಯತ್ಯಾಸ. ಸ್ತ್ರೀ ಲಿಂಗ, ಪುಲ್ಲಿಂಗ, ನಪುಂಸಕ ಲಿಂಗ ವ್ಯತ್ಯಾಸ. ಪ್ರಥಮ ಪುರುಷ, ಮಧ್ಯಮ ಪುರುಷ, ಉತ್ತಮ ಪುರುಷಗಳ ವ್ಯತ್ಯಾಸ, ವರ್ತಮಾನ ಭೂತ ಭವಿಷ್ಯತ್ಕಾಲ ವ್ಯತ್ಯಾಸ. ಹಲ್ ಎಂದರೆ ವ್ಯಂಜನಾಕ್ಷರ ಗಳಲ್ಲಿ ವ್ಯತ್ಯಾಸ. ಅಚ್ ಎಂದರೆ ಸ್ವರಾಕ್ಷರಗಳಲ್ಲಿ ವ್ಯತ್ಯಾಸ. ಸ್ವರ ಎಂದರೆ ಉದಾತ್ತ ಅನುದಾತ್ತ ಸ್ವರಿತ ಸ್ವರಗಳಲ್ಲಿ ವ್ಯತ್ಯಾಸ. ಕರ್ತೃ ಎಂದರೆ ಕರ್ತೃ ಮುಂತಾದ ಕಾರಕಗಲ್ಲಿ ವ್ಯತ್ಯಾಸ. ಯಙ್ ಎಂದರೆ ಯಙ್ ಪ್ರತ್ಯಯದಿಂದಾರಂಭಿಸಿ ಅಙ್ ಪ್ರತ್ಯಯದವರೆಗಿನ ಪ್ರತ್ಯಯಗಳಲ್ಲಿ ವ್ಯತ್ಯಾಸ. ವ್ಯತ್ಯಯೋ ಬಹುಲಂ (ಪಾ.ಸೂ. ೩.೧.೮೫) ಎಂಬ ಸೂತ್ರ ವೃತ್ತಿಯಲ್ಲಿ ಸಿದ್ಧಾಂತಕೌಮುದಿ ಈ ಕಾರಿಕೆಯನ್ನು ಉದಾಹರಿಸಿ ವ್ಯಾಖ್ಯಾನ ಮಾಡಿದೆ. ಆದರಿಂದ 'ಬಹುಲಂ' ಶಬ್ದಪೂರ್ವಕವಾದ ಈ ಸೂತ್ರದಿಂದ ಈ ಎಲ್ಲ ವ್ಯತ್ಯಾಸಗಳನ್ನು ಪಾಣಿನಿ ವ್ಯಾಕರಣಶಾಸ್ತ್ರ ವಿಧಿಸಿರುವುದರಿಂದ ಶಾಸ್ತ್ರಕಾರರು ಈ ವ್ಯತ್ಯಾಸಗಳನ್ನು ಸಾಧು ಎಂದು ಒಪ್ಪುತ್ತಾರೆ ಎನ್ನುತ್ತದೆ ಕಾರಿಕೆ.

ಈ ವ್ಯತ್ಯಾಸಗಳಿಗೆ ಇನ್ನೊಂದು ಸಮಾಧಾನ ಇದು— ಅಸುರ ಜನ ಮೋಹನಾರ್ಥವಾಗಿ ಅವರಿಗೆ ಕಾಲದ ಬಗ್ಗೆ ಗೊಂದಲ ಉಂಟುಮಾಡುವ ಅಭಿಪ್ರಾಯದ್ದು ಎಂದು. ಮತ್ತೊಂದು ಸಮಾಧಾನ ಈ ಘಟನೆಗಳು ಪ್ರತಿಕಲ್ಪದಲ್ಲಿಯೂ ಹಾಗೇ ನಡೆಯುವುದರಿಂದ ಈಗ ನಡೆಯುವುದನ್ನು ಮುಂದೆ ನಡೆಯುತ್ತದೆ ಎಂದರೆ ಮುಂದಿನ ಕಲ್ಪದಲ್ಲಿ ನಡೆಯುತ್ತದೆ ಎಂದರ್ಥ. ಈಗ ನಡೆಯುತ್ತಿರುವುದನ್ನೂ ಮುಂದೆ ನಡೆಯಲಿರುವುದನ್ನೂ ನಡೆದಿತ್ತೆಂದು ಹೇಳಿದರೆ ಹಿಂದಿನ ಕಲ್ಪದಲ್ಲಿ ನಡೆದಿತ್ತೆಂದರ್ಥ. ಆದರಿಂದ ಧೃತರಾಷ್ಟ್ರನ ಮರಣೋತ್ತರದಲ್ಲಿ ನಾರದರು ಧೃತರಾಷ್ಟ್ರ ಈಗ ಯೋಗಾನುಷ್ಠಾನ ಮಾಡುತ್ತಿದ್ದಾನೆ ಎಂದುದು ಪ್ರತಿಕಲ್ಪದಲ್ಲಿಯೂ ಹೀಗೇ ನಡೆಯುತ್ತದೆ ಎಂದು ತಿಳಿಸುವ ಅಭಿಪ್ರಾಯದ ಕಾಲವ್ಯತ್ಯಾಸ ಎಂದು ತಿಳಿಯಬೇಕು. 'ಸ ಏಷ ಏತರ್ಹ್ಯಧ್ಯಾಸ್ತೇ' ಎಂಬ ಭಾಗವತದ ವರ್ತಮಾನ ಪ್ರಯೋಗ ಭೂತಕಾಲ ವಿವಕ್ಷೆಯಿಂದ.

ಆದರೆ ವಲ್ಲಭಾಚಾರ್ಯ ವ್ಯಾಖ್ಯಾನ ಹೇಳುತ್ತದೆ- 'ಪರೀಕ್ಷಿತ ಮೃತನಾದರೂ ಕೀರ್ತಿಶೇಷನಾಗಿ ಈಗಲೂ ಇದ್ದಾನೆ, ಅಥವಾ ಭಗವಂತನಲ್ಲಿ ಸಾಯುಜ್ಯ ಹೊಂದಿ ಸೂತರಿಗೆ ಮತ್ತು ಶೌನಕಾದಿಗಳಿಗೆ ಭಗವಂತನ ಶರೀರದಲ್ಲಿ ಕಾಣುತ್ತಿದ್ದಾನೆ ಅಥವಾ 'ಆತ್ಮಾ ವೈ ಪುತ್ರನಾಮಾಸಿ' ಎಂಬಂತೆ ಪುತ್ರನಾದ ಜನಮೇಜಯನ ರೂಪದಿಂದ ಈಗಲೂ ಇದ್ದಾನೆ. ಅಥವಾ 'ವರ್ತಮಾನ ಸಾಮೀಪ್ಯೇ ವರ್ತಮಾನವದ್ವಾ' ಎಂಬ ವ್ಯಾಕರಣಸೂತ್ರದಂತೆ ಪರೀಕ್ಷಿತ ಮೃತನಾಗಿ ಬಹಳ ಕಾಲ ಕಳೆದಿಲ್ಲ ಎಂಬ ಅಭಿಪ್ರಾಯದಿಂದ ಸಮೀಪದ ಭೂತಕಾಲ ವಿವಕ್ಷೆಯಿಂದ ವರ್ತಮಾನಪ್ರಯೋಗ'

ಎಂದು. ಮಹಾವ್ಯಾಕರಣ ಸೂತ್ರಪ್ರಕಾರ ಸುಲಭವಾಗಿ ಕಾಲವ್ಯತ್ಯಾಸವನ್ನು ಕೂಡಿಸಲು ಬರುವಾಗ ಇಂಥ ಪ್ರಯಾಸ ಯುಕ್ತವಲ್ಲ.

★★★

ಅಂತ್ಯಕಾಲದಲ್ಲಿ ಧೃತರಾಷ್ಟ್ರ ಹೇಗೆ ಧ್ಯಾನಮಾಡಿದನೆಂಬ ವಿವರವನ್ನು ನಾರದರು ಧರ್ಮರಾಜನಿಗೆ ಹೇಳುತ್ತಾರೆ—

ವಿಜ್ಞಾನಾತ್ಮನಿ ಸಂಯೋಜ್ಯ ಕ್ಷೇತ್ರಜ್ಞೇ ಪ್ರವಿಲಾಪ್ಯ ತಂ ।
ಬ್ರಹ್ಮಣ್ಯಾತ್ಮಾನಮಾಧಾರೇ ಘಟಾಂಬರಮಿವಾಂಬರೇ ॥ ೫೫ ॥

ಲಯಕಾಲದಲ್ಲಿ ರುದ್ರಾದಿ ಸಮಸ್ತ ಪ್ರಪಂಚವು ಮಹತ್ತತ್ತ್ವಾಭಿಮಾನಿ ಚತುರ್ಮುಖನಲ್ಲಿಯೂ, ಚತುರ್ಮುಖ ಪ್ರಕೃತಿನಿಯಾಮಕ ಭಗವದ್ರೂಪದಲ್ಲಿಯೂ, ಪ್ರಕೃತಿನಿಯಾಮಕರೂಪ ಹೊರಗೆ ವ್ಯಾಪ್ತವಾದ ಸರ್ವಾಧಾರವಾದ ಭಗವದ್ರೂಪದಲ್ಲಿಯೂ ಸೇರುತ್ತದೆ ಎಂದು ಧೃತರಾಷ್ಟ್ರ ಧ್ಯಾನಿಸಿದ. ಮತ್ತು ಮರಣಕಾಲದಲ್ಲಿ ಎಲ್ಲ ಇಂದ್ರಿಯಗಳು ದೇಹದಲ್ಲಿರುವ ಚತುರ್ಮುಖನಲ್ಲಿ, ಚತುರ್ಮುಖ ಹೃದಯದಲ್ಲಿರುವ ಹರಿಯಲ್ಲಿ, ಹೃದಯಾಂತರ್ಗತ ವಿಷ್ಣುರೂಪ ಸಕಲಜಗದ್ಧಾರವಾದ ವಿಷ್ಣುರೂಪದಲ್ಲಿ ಸೇರುತ್ತದೆ ಎಂದೂ ಧ್ಯಾನಿಸಿದ. ಈ ಎರಡೂ ಬಗೆಯ ಸೇರ್ಪಡೆಗಳಿಗೆ ಘಟದೊಳಗಿನ ಆಕಾಶ ಘಟನಾಶವಾದಾಗ ಹೊರಗಿನ ಆಕಾಶದಲ್ಲಿ ಸೇರುವಂತೆ ಎಂದು ದೃಷ್ಟಾಂತ.

ಆಕಾಶಗಳು ಭೂತಾಕಾಶ ಅವ್ಯಾಕೃತಾಕಾಶಗಳೆಂದು ಎರಡಿವೆ. ಭೂತಾಕಾಶ ದಲ್ಲಿ ಅಂಶಭೇದಗಳಿವೆ. ಅವ್ಯಾಕೃತಾಕಾಶದಲ್ಲಿ ಅಂಶಭೇದವಿಲ್ಲ. ವಿಶೇಷಬಲದಿಂದ ಅಂಶಗಳೆಂದು ವ್ಯವಹಾರ ಮಾತ್ರ ಇದೆ. ಘಟದೊಳಗಿನ ಭೂತಾಕಾಶ ಘಟ ಹುಟ್ಟುವಾಗ ಹುಟ್ಟಿ ಘಟನಾಶವಾದಾಗ ಮಹಾಕಾಶದಲ್ಲಿ ಲಯಹೊಂದುತ್ತದೆ. ಹಾಗೇ ಪ್ರಲಯಕಾಲದಲ್ಲಿ ಮಹತ್ತತ್ತ್ವಾಭಿಮಾನಿಯೂ, ಮರಣಕಾಲದಲ್ಲಿ ದೇಹಾಂತರ್ಗತ ಚತುರ್ಮುಖನೂ ಶ್ರೀಹರಿಯಲ್ಲಿ ದೇಹಲಯ ಹೊಂದುತ್ತಾನೆ. ಘಟದೊಳಗಿನ ಅವ್ಯಾಕೃತಾಕಾಶ ಘಟ ಹುಟ್ಟುವಾಗ ಹುಟ್ಟುವುದೂ ಇಲ್ಲ, ಘಟನಾಶವಾದಾಗ ನಾಶವಾಗುವುದೂ ಇಲ್ಲ. ಆದರೆ ಘಟ ಹುಟ್ಟುವಾಗ ಅದರೊಳಗಿನ ಅವ್ಯಾಕೃತಾಕಾಶ ವಿಶೇಷ ಬಲದಿಂದ ಹೊರಗಿನ ಅವ್ಯಾಕೃತಾಕಾಶಕ್ಕಿಂತ ಬೇರೆಯಾಗಿ ವ್ಯವಹಾರ ಗೋಚರವಾಗುತ್ತದೆ. ಘಟನಾಶವಾದಾಗ ಈ ವ್ಯವಹಾರವೂ ಇಲ್ಲವಾಗುತ್ತದೆ. ಹಾಗೇ ಲಯಕಾಲದಲ್ಲಿ ಅವ್ಯಕ್ತಾಂತರ್ಗತ ಭಗವದ್ರೂಪವೂ ಮರಣಕಾಲದಲ್ಲಿ ಹೃದಯಾಂತರ್ಗತ ಭಗವದ್ರೂಪವೂ ವ್ಯಾಪ್ತವಾದ ಭಗವದ್ರೂಪದಲ್ಲಿ ಸೇರುವುದೆಂದರೆ ಆ ಎರಡು ರೂಪಗಳು ಬೇರೆಯಾಗಿ ವ್ಯವಹಾರ ಗೋಚರವಾಗದಿರುವುದು, ಐಕ್ಯ ಹೊಂದುವುದು.

ಹೀಗೆ ಶ್ಲೋಕಾಭಿಪ್ರಾಯವನ್ನು ಹೇಳಲು ಏನು ಆಧಾರವೆಂದರೆ—

ವಿಜ್ಞಾನಾತ್ಮಾ ವಿರಿಂಚೋಽಯಂ ಯಸ್ಮಿನ್ ಲೀಯತೇ ಜಗತ್ ।
ಯಾದಾಂಸಿ ಸಾಗರೇ ಯದ್ವತ್ ಸ ಕ್ಷೇತ್ರಜ್ಞೋ ಜನಾರ್ದನೇ ।
ಹೃದಿಸ್ಥೇಽಥ ಚ ಸ ವ್ಯಾಪ್ತೇ ಸ್ವಾತ್ಮನ್ಯೇಕೀಭವತ್ಯುತ ।
ಪ್ರಲಯೌ ಭೇದವಂತೌ ತು ಪೂರ್ವೋಕ್ತೌ ಬ್ರಹ್ಮ ಕೃಷ್ಣಯೋಃ ।
ಅಂತಸ್ಥಸ್ಯ ಬಹಿಷ್ಠೇ ತು ತಸ್ಯ ತಸ್ಮಿನ್ನಭೇದತಃ ।

ಇತಿ ಬ್ರಹ್ಮವೈವರ್ತೇ । ಕಾಲೇ ತಸ್ಯ ತತ್ರ ಲಯೋ ಭವಿಷ್ಯತೀತಿ ಧ್ಯಾನಮಾತ್ರಂ ವಿಲಾಪನಂ ।

ಅವಿದ್ಯಮಾನಮಪಿ ಯೋ ಧ್ಯಾಯೇತ್ತೈವಂ ವಿನಿಶ್ಚಿತಃ ।
ಉಚ್ಯತೇ ತಸ್ಯ ಕರ್ತೇತಿ ತಥೈವ ಮುನಯೋಽಮಲಾಃ ।
ಜಗದ್ ವಿಲಾಪಯಾಮಾಸುರಿತ್ಯುಚ್ಯಂತೇಽಥ ತತ್ಸ್ಮೃತೇಃ ।
ನ ಚ ತತ್ಸ್ಮೃತಿಮಾತ್ರೇಣ ಲಯೋ ಭವತಿ ನಿಶ್ಚಿತಂ ॥

ಇತಿ ನಾರದೀಯೇ ॥

ಸ್ವರೂಪಂ ಜಾಯಮಾನಂ ಚ ಆಕಾಶಂ ಚ ಘಟೇ ದ್ವಿಧಾ ।
ಸ್ವರೂಪಂ ಜಾಯಮಾನೇ ತು ಘಟೇ ನಿರ್ಭೇದಮೇವ ತು ।
ಭಿನ್ನವದ್ ವ್ಯವಹಾರಾಯ ಸಮರ್ಥಂ ತಲ್ಲಯೇ ನ ತು ।
ತದ್ವದೇವಾವತಾರೇಷು ದೇಹಸ್ಥಶ್ಚ ಹರಿಃ ಸ್ವಯಂ ।
ಭಿನ್ನವದ್ ವ್ಯವಹಾರಾಯ ಶಕ್ತೋ ಲೀನೇ ಜಗತ್ಯಪಿ ।
ಸ ಏವ ಪೂರ್ವವದ್ಜ್ಞೇಯೋ ನಿರ್ವಿಶೇಷೇಣ ಕೇಶವಃ ।
ಜಾಯಮಾನಂ ಘಟೇ ಜಾತೇ ಜಾಯತೇ ತಲ್ಲಯೇ ನ ತು ।
ತಸ್ಮಾದ್ ಭಿನ್ನಂ ಮಹಾಕಾಶಾದೇವಂ ಜೀವೋಽಪಿ ಕೀರ್ತಿತಃ ।
ಉಪಾಧೇಶ್ಚೈವ ನಿತ್ಯತ್ವಾನ್ನೈವ ಜೀವೋಽಪಿ ನಶ್ಯತಿ ।
ಸ್ವರೂಪತ್ವಾದುಪಾಧೇಶ್ಚ ನ ಭಿನ್ನೋಪಾಧಿಕಲ್ಪನಂ ।
ನ ಚಾಭಿನ್ನತ್ವಮೀಶೇನ ಚಿನ್ಮಾತ್ರತ್ವಂ ಚ ಯುಜ್ಯತೇ ॥

ಇತಿ ಬ್ರಹ್ಮತರ್ಕೇ ।

ಸಾಗರದಲ್ಲಿ ಜಲಚರಗಳಂತೆ ಲಯಕಾಲದಲ್ಲಿ ಎಲ್ಲ ಜಗತ್ತು ಸೇರುವುದು ಮಹತ್ತತ್ವಾಭಿಮಾನಿ ಚತುರ್ಮುಖನಲ್ಲಿ. ಈ ಚತುರ್ಮುಖನು ಪ್ರಕೃತಿನಿಯಾಮಕ ನಾದ ಹೃದಯಾಂತರ್ಗತನಾದ ಹರಿಯಲ್ಲಿ ಸೇರುತ್ತಾನೆ. ಆ ಹರಿಯೂ ವ್ಯಾಪ್ತವಾದ

ತನ್ನ ರೂಪದಲ್ಲಿ ಐಕ್ಯಹೊಂದುತ್ತಾನೆ. ಚತುರ್ಮುಖನ ಮತ್ತು ಹರಿಯ ಪ್ರಲಯಗಳು ಒಂದೇ ರೀತಿಯವುಗಳಲ್ಲ. ಪ್ರಕೃತ್ಯಂತರ್ಗತ ದೇಹಾಂತರ್ಗತ ಹರಿಯ ರೂಪಗಳು ಅವನ ವ್ಯಾಪ್ತರೂಪದಲ್ಲಿ ಲಯಹೊಂದುವುದೆಂದರೆ ಐಕ್ಯಹೊಂದುವುದೆಂದೇ ಅರ್ಥ. ಚತುರ್ಮುಖ ಹರಿಯಲ್ಲಿ ಲಯ ಹೊಂದುವುದು ದೇಹಲಯರೂಪವಾದುದು ಎಂದು ಬ್ರಹ್ಮವೈವರ್ತಪುರಾಣದಲ್ಲಿದೆ.

ಧೃತರಾಷ್ಟ್ರ ಧ್ಯಾನಮಾಡುವಾಗ ಪ್ರಪಂಚಲಯವಾಗಿರದಿದ್ದರೂ ಪ್ರಲಯ ಕಾಲದಲ್ಲಿ ಲಯವಾಗುವುದೆಂದು ಅವನು ಧ್ಯಾನಮಾಡುತ್ತಾನಷ್ಟೆ. ಇದನ್ನೆ 'ಲಯಮಾಡಿ' ಎನ್ನಲಾಗಿದೆ. ಏಕೆಂದರೆ ಇನ್ನೂ ಆಗದಿರುವುದನ್ನು ಆಗಲಿದೆ ಎಂದು ಧ್ಯಾನಿಸುವವನು ಅದಕ್ಕೆ ಕರ್ತನೆನಿಸುತ್ತಾನೆ. ಅದರಿಂದಲೆ ದೋಷರಹಿತರಾದ ಮುನಿಗಳು ಲಯ ಚಿಂತನೆಯಿಂದಲೆ ಜಗತ್ತನ್ನು ಲಯಗೈದರೆಂದು ಉಕ್ತರಾಗುತ್ತಾರೆ ಹೊರತು ಅವರ ಚಿಂತನ ಮಾತ್ರದಿಂದ ಈಗಲೇ ಲಯ ನಿಶ್ಚಿತವಾಗಿ ಆಗುವುದಿಲ್ಲ ಎಂದು ನಾರದ ಪುರಾಣದಲ್ಲಿ ಹೇಳಿದೆ.

ಅವ್ಯಾಕೃತಾಕಾಶ ಭೂತಾಕಾಶ ಎಂದು ಆಕಾಶ ಎರಡು ವಿಧ. ಘಟದೊಳಗಿರುವ ಅವ್ಯಾಕೃತಾಕಾಶ ಘಟ ಹುಟ್ಟಿದರೂ ಬಾಹ್ಯವಾದ ಅವ್ಯಾಕೃತಾಕಾಶದಿಂದ ಭೇದರಹಿತವಾಗಿದ್ದು ವಿಶೇಷ ಬಲದಿಂದ ಭೇದವ್ಯವಹಾರಗೋಚರವಾಗುತ್ತದೆ. ಘಟ ನಾಶವಾದಾಗ ಘಟದೊಳಗಿನ ಅವ್ಯಾಕೃತಾಕಾಶಕ್ಕೆ ಬಾಹ್ಯಾವ್ಯಾಕೃತಾಕಾಶದಿಂದ ಭೇದವ್ಯವಹಾರವಿಲ್ಲ. ಹಾಗೆಯೆ ಅವತಾರಾದಿ ರೂಪಗಳಿಂದ ದೇಹಾಂತರ್ಗತನಾದ ಹರಿ ಅಭಿನ್ನನಾಗಿದ್ದರೂ ವಿಶೇಷ ಬಲದಿಂದ ಭೇದವ್ಯವಹಾರಗೋಚರನಾಗುತ್ತಾನೆ. ರುದ್ರಾದಿ ಜಗತ್ತು ದೇಹ ಲಯಹೊಂದಿದರೂ ಕೇಶವ ತಾನು ಹಿಂದಿನಂತೆಯೆ ಏನೂ ವ್ಯತ್ಯಾಸವಿಲ್ಲದೇ ಇರುತ್ತಾನೆ. ಘಟದೊಳಗಿನ ಭೂತಾಕಾಶವು ಘಟ ಹುಟ್ಟುವಾಗ ಹುಟ್ಟುತ್ತದೆ. ನಾಶವಾಗುವಾಗ ಅದು ಇರುವುದಿಲ್ಲ. ಅದರಿಂದ ಅದು ಬಾಹ್ಯ ಭೂತಾಕಾಶಕ್ಕಿಂತ ಭಿನ್ನವೆ. ಹಾಗೇ ಜೀವನೂ ಶರೀರದಿಂದ ಉತ್ಪತ್ತಿನಾಶ ಉಳ್ಳವನಾದ್ದರಿಂದ ಲಯದಲ್ಲಿಯೂ ಹರಿಯಿಂದ ಭಿನ್ನನೇ ಆಗಿರುತ್ತಾನೆ. ಸ್ವರೂಪದಿಂದ ಜೀವನಿಗೆ ಉತ್ಪತ್ತಿ ನಾಶಗಳಿಲ್ಲ ಏಕೆಂದರೆ ಜೀವೋಪಾಧಿಯು ಅನಾದಿ ನಿತ್ಯವಾಗಿದ್ದು ಅವನ ಸ್ವರೂಪಭೂತವೆ ಆಗಿದೆ. ಭಿನ್ನವಾದ ಉಪಾಧಿಯನ್ನು ಕಲ್ಪಿಸುವು ದಿಲ್ಲ. ಜೀವಸ್ವರೂಪ ಭೂತವಾದ ಉಪಾಧಿ ಹರಿಯಿಂದ ಭಿನ್ನವಾಗಿರುವುದರಿಂದ ಆ ಉಪಾಧಿಯಿಂದ ವಿಶೇಷ ಬಲದಿಂದ ವಿಶಿಷ್ಟನಾದ ಜೀವನೂ ಹರಿಯಿಂದ ಭಿನ್ನನೆ. ಅಭಿನ್ನತ್ವವಿಲ್ಲ. ಈ ಉಪಾಧಿ ಚಿನ್ಮಯನಾದ ಜೀವನಿಗೆ ಸ್ವರೂಪವಾಗಿರುವುದರಿಂದ, ಮುಕ್ತಿಯಲ್ಲಿ ಉಪಾಧಿ ಇದ್ದರೂ ಜೀವನಿಗೆ ಚಿನ್ಮಯತ್ವ ಕೂಡುತ್ತದೆ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಶುಕದೇವನ ವ್ಯಾಖ್ಯಾನದಲ್ಲಿ ಘಟಾಕಾಶ ಮಹಾಕಾಶಗಳಿಗೆ ಸ್ವರೂಪೈಕ್ಯವಿರುವಂತೆ ಜೀವಬ್ರಹ್ಮರೊಳಗೆ ಸ್ವರೂಪೈಕ್ಯವೆಂದು ಧೃತರಾಷ್ಟ್ರ ಚಿಂತಿಸಿದನೆ ಎಂದು ಪ್ರಶ್ನೆ ಮಾಡಿಕೊಂಡು ದೃಷ್ಟಾಂತ ದಾರ್ಷ್ಟಾಂತಿಕಗಳಿಗೆ ಸ್ವರೂಪೈಕ್ಯದಿಂದ ಸಾಮ್ಯ ವಿವಕ್ಷಿತವಲ್ಲ, ಆಕಾಶದಂತೆ ಜೀವಬ್ರಹ್ಮರಿಬ್ಬರೂ ನಿರ್ಮಲರು, ಘಟಾಕಾಶದಂತೆ ಜೀವ ಅಲ್ಪ, ಮಹಾಕಾಶದಂತೆ ಬ್ರಹ್ಮ ವ್ಯಾಪ್ತ ಎಂದು ಮಾತ್ರ ಸಾಮ್ಯ ವಿವಕ್ಷಿತವಾಗಿದೆ. ಎಲ್ಲ ಸಾಮ್ಯ ಬೇಕೆನ್ನುವುದಾದರೆ ಜೀವಬ್ರಹ್ಮರು ಇಬ್ಬರೂ ಆಕಾಶದಂತೆ ಜಡ ಭೌತಿಕವೆಂದೂ ಹೇಳಬೇಕಾದೀತು ಎಂದು ಹೇಳಿ, ವಸ್ತುತಃ ಘಟಾಕಾಶ ಮಹಾಕಾಶಗಳು ಪಂಚೀಕೃತಪದಾರ್ಥಗಳಾದ್ದರಿಂದ ಸ್ವರೂಪೈಕ್ಯವಿಲ್ಲ ಎಂದು ಸಮಾಧಾನ ನೀಡಲಾಗಿದೆ.[೧] ಆದರೆ ಇಲ್ಲಿ ಜೀವಬ್ರಹ್ಮರಿಗೆ ಘಟಾಕಾಶ ಮಹಾಕಾಶ ದೃಷ್ಟಾಂತ ನೀಡಿಲ್ಲ. ಜೀವನಿಗೆ ಬ್ರಹ್ಮನಲ್ಲಿ, ಬ್ರಹ್ಮನಿಗೆ ತನ್ನಲ್ಲಿ ಲಯಕ್ಕೆ, ಘಟಾಕಾಶಕ್ಕೆ ಮಹಾಕಾಶದಲ್ಲಿ ಲಯ ದೃಷ್ಟಾಂತ ನೀಡಲಾಗಿದೆ. ಆದರಿಂದ ಭೇದ ಅಭೇದಗಳಿಂದಲೆ ಸಾಮ್ಯ ವಿವಕ್ಷಿತವಾಗಿದೆ. ನಿರ್ಮಲತ್ವಾದಿ ಸಾಮ್ಯವಲ್ಲ. ಘಟಾಕಾಶ ಮಹಾಕಾಶಗಳಿಗೆ ಭೇದವೆ ಇರುತ್ತದೆ ಎಂದಿಟ್ಟುಕೊಂಡರೆ ಜೀವನಿಗೆ ಬ್ರಹ್ಮನಲ್ಲಿ ಲಯವಾದಾಗ ಭೇದವಿರುವುದನ್ನು ಈ ದೃಷ್ಟಾಂತ ಬಲದಿಂದ ಉಪಪಾದಿಸಬಹುದು. ಆದರೆ ಅದೇ ರೀತಿಯಿಂದ ಬ್ರಹ್ಮನಿಗೂ ತನ್ನಿಂದ ಭೇದವಿದೆ ಎನ್ನಬೇಕಾದೀತು. ಆದರಿಂದ ಶ್ರೀಮದಾಚಾರ್ಯರು ಹೇಳಿದಂತೆ ಎರಡು ಬಗೆಯ ಆಕಾಶವಿಟ್ಟುಕೊಂಡು ಜೀವಲಯದಲ್ಲಿ ಭೇದವನ್ನೂ ಬ್ರಹ್ಮಲಯದಲ್ಲಿ ಅಭೇದವನ್ನೂ ಉಪಪಾದಿಸುವುದೇ ಯುಕ್ತ.

★★★

ಅಂತ್ಯಕಾಲದಲ್ಲಿ ಧೃತರಾಷ್ಟ್ರ ಹೇಗಿದ್ದನೆಂದೂ ಯಾವ ದಿನದಲ್ಲಿ ಮರಣವಾಯಿತೆಂದೂ ನಾರದರು ಧರ್ಮರಾಜನಿಗೆ ಹೇಳುತ್ತಾರೆ—

ಧ್ವಸ್ತಮಾಯಾಗುಣೋದ್ರೇಕೋ ನಿರುದ್ಧಕರಣಾಶಯಃ ।
ನಿವರ್ತಿತಾಖಿಲಾಹಾರ ಆಸ್ತೇ ಸ್ಥಾಣುರಿವಾಧುನಾ ।
ತಸ್ಯಾಂತರಾಯೋ ನೈವಾಭೂತ್ ಸಂನ್ಯಸ್ತಾಖಿಲಕರ್ಮಣಃ ॥ ೫೬ ॥

---

೧. ನ ಚ ಘಟಾಂಬರ ಶುದ್ಧಾಂಬರಯೋಃ ಸ್ವರೂಪೈಕ್ಯವತ್ ಜೀವಬ್ರಹ್ಮಣೋರಪಿ ಸ್ವರೂಪೈಕ್ಯಮಿತಿ ವಾಚ್ಯಂ । ಜೀವ ಬ್ರಹ್ಮಣೋರ್ನೈರ್ಮಲ್ಯೇ, ಜೀವಸ್ಯಾಲ್ಪತ್ವೇ ಬ್ರಹ್ಮಣೋಽನಲ್ಪತ್ವೇ ಚ ದೃಷ್ಟಾಂತ ಸಂಭವಾತ್ । ಅನ್ಯಥಾಂಬರವತ್ ಬ್ರಹ್ಮಣಿ ಜಡತ್ವ ಭೌತಿಕತ್ವ ಪ್ರಸಂಗಾಪತ್ತೇಶ್ಚ । ವಸ್ತುತಸ್ತು ಘಟಾಂಬರ ಶುದ್ಧಾಂಬರಯೋಃ ಪಂಚೀಕೃತ ಪದಾರ್ಥತ್ವೇನ ಸ್ವರೂಪೈಕ್ಯಮಪಿ ನಾಸ್ತಿ । -ಶುಕದೇವಃ

ಸ ವಾ ಅದ್ಯತನಾದ್ ರಾಜಾ ಪರತಃ ಪಂಚಮೇಽಹನಿ ।
ಕಲೇವರಂ ಹಾಸ್ಯತಿ ಹ ತಚ್ಚ ಭಸ್ಮೀಭವಿಷ್ಯತಿ ॥ ೫೭ ॥

ಮರಣಕ್ಕಿಂತ ಹಿಂದಿನ ದಿನದಲ್ಲಿ ಧೃತರಾಷ್ಟ್ರನ ಸ್ಥಿತಿ ಹೇಗಿತ್ತೆಂದರೆ ಪ್ರಕೃತಿಯ ಸತ್ವಾದಿಗುಣಗಳು ಅವನಲ್ಲಿ ಕಾಮಾದಿರೂಪದಿಂದ ಉದ್ರೇಕಗೊಳ್ಳುತ್ತಿರಲಿಲ್ಲ. ಮನಸ್ಸು ನಿಶ್ಚಲವಾಗಿ ಹರಿಯಲ್ಲಿಯೆ ನೆಲೆಸಿತ್ತು. ಎಲ್ಲ ಆಹಾರಗಳನ್ನೂ ತೊರೆದಿದ್ದ. ಮೋಟು ಮರದಂತೆ ನಿಶ್ಚಲವಾಗಿ ಕುಳಿತಿದ್ದ. ಎಲ್ಲ ಕರ್ಮಗಳನ್ನೂ ಹರಿಯಲ್ಲಿ ಸಮರ್ಪಿಸಿ ಧ್ಯಾನ ಮಾಡುತ್ತಿದ್ದ. ಅವನ ಧ್ಯಾನಕ್ಕೆ ಏನೂ ವಿಘ್ನ ಬರಲಿಲ್ಲ. ಬಳಿಕ ಇಂದಿನಿಂದ ಐದು ದಿನಗಳ ಹಿಂದೆ ಶರೀರತ್ಯಾಗ ಮಾಡಿದ. ಶರೀರ ಸುಟ್ಟು ಭಸ್ಮವಾಯಿತು.

ಇಲ್ಲಿ ಮಾಯಾಗುಣ ಎಂದರೇನು? ಮತ್ತು ಮರಣವಾದ ಐದು ದಿನಗಳ ಬಳಿಕ ಬಂದ ನಾರದರು ಇಂದಿನಿಂದ ಐದನೆ ದಿನದಲ್ಲಿ ಧೃತರಾಷ್ಟ್ರ ಶರೀರತ್ಯಾಗ ಮಾಡಲಿದ್ದಾನೆ, ಅದು ಭಸ್ಮವಾಗಲಿದೆ ಎಂದುದು ಹೇಗೆ ಕೂಡುತ್ತದೆ ಎಂಬ ಪ್ರಶ್ನೆಗಳಿಗೆ ಸಮಾಧಾನ—

ತ್ರಿಗುಣಾತ್ಮಿಕಾ ತಥಾ ಜ್ಞಾನಂ ವಿಷ್ಣುಶಕ್ತಿಸ್ತಥೈವ ಚ ।
ಮಾಯಾಶಬ್ದೇನ ಭಣ್ಯಂತೇ ಶಬ್ದತತ್ವಾರ್ಥವೇದಿಭಿಃ ॥
ಇತಿ ನಾಮಮಹೋದಧೌ । ಅತ್ರ ಸತ್ವಾದಯೋ ಮಾಯಾಗುಣಾಃ ।
ಪರಾವರೇ ತಥೈವಾರಾದುಭಯಾರ್ಥಾಭಿಧಾಯಿನಃ । ಇತಿ ಚ ।

ತ್ರಿಗುಣಾತ್ಮಕ ಪ್ರಕೃತಿ, ವಿಷ್ಣುವಿನ ಜ್ಞಾನ ಶಕ್ತಿ ಇಚ್ಛಾದಿಗಳು ಶಬ್ದತತ್ವಾರ್ಥ ಜ್ಞಾನಿಗಳಿಂದ ಮಾಯೆ ಎಂದು ವ್ಯವಹೃತವಾಗುತ್ತವೆ ಎಂದು ನಾಮಮಹೋದಧಿ ಎಂಬ ಗ್ರಂಥದಲ್ಲಿ ಹೇಳಿದೆ. ಅದರಿಂದ ಇಲ್ಲಿ ಸತ್ವಾದಿಗುಣಗಳೆ ಮಾಯಾ ಗುಣಗಳು.

ಪರ, ಅವರ, ಆರಾತ್ ಈ ಶಬ್ದಗಳು 'ಪರ-ಅಪರ' ಎಂದೂ, 'ವರ-ಅವರ' ಎಂದೂ, 'ದೂರ-ಸಮೀಪ'ವೆಂದೂ ವಿರುದ್ಧ ಅರ್ಥಗಳೆರಡನ್ನೂ ಹೇಳುತ್ತವೆ ಎಂದೂ ಹೇಳಿದೆ.

ಇಲ್ಲಿ ಎಲ್ಲ ಬೇರೆ ವ್ಯಾಖ್ಯಾನಕಾರರೂ 'ಪರತಃ ಪಂಚಮೇಽಹನಿ' ಎಂದರೆ ಮುಂದಿನ ಐದನೆ ದಿನದಲ್ಲಿ ಎಂದೇ ಅರ್ಥ ಹೇಳಿದ್ದಾರೆ.[೧] ಆದರೆ 'ಪರ' ಶಬ್ದಕ್ಕೆ

---

೧. ಸ ವಾ ಅದ್ಯತನಾದಹಃ ಪರತ ಉತ್ತರತ್ರ । -ಶ್ರೀಧರಃ

ಸ ಧೃತರಾಷ್ಟ್ರಃ ಅದ್ಯತನಾದ್ ವರ್ತಮಾನದಿನಾದಾರಭ್ಯ ಪರತಃ ಪಂಚಮೇಽಹನಿ ।
-ವೀರರಾಘವಃ ವಲ್ಲಭಾಚಾರ್ಯಃ

ಮುಂದೆ ಹಿಂದೆ ಎಂದು ಎರಡು ಅರ್ಥವಿರುವುದರಿಂದ ಹಿಂದಿನ ಐದನೇ ದಿನದಲ್ಲಿ ಧೃತರಾಷ್ಟ್ರ ಮೃತನಾದನೆಂದು ನಾರದರು ಹೇಳುತ್ತಿದ್ದಾರೆ. ಮುಂದಿನ ಐದನೆ ದಿನದಲ್ಲಿ ಮರಣ ಹೊಂದಲಿದ್ದಾನೆ ಎಂದು ಭವಿಷ್ಯವನ್ನು ಹೇಳುತ್ತಿಲ್ಲ.

★★★

ವಿದುರ ತೀರ್ಥಯಾತ್ರೆಗೆ ಹೋಗಲು ಕಾರಣವೇನೆಂದು ನಾರದರು ಧರ್ಮರಾಜನಿಗೆ ಹೇಳುತ್ತಾರೆ—

ವಿದುರಸ್ತು ತದಾಶ್ಚರ್ಯಂ ನಿಶಾಮ್ಯ ಕುರುನಂದನ ।
ಹರ್ಷಶೋಕಯುತಸ್ತಸ್ಮಾದ್ ಗಂತಾ ತೀರ್ಥನಿಷೇವಕಃ ॥ ೫೯ ॥

ಕೌರವರ ನಾಶ ಧೃತರಾಷ್ಟ್ರಾದಿಗಳ ಅಂತ್ಯ ಈ ಎಲ್ಲ ಆಶ್ಚರ್ಯವನ್ನು ವಿದುರ ಮೊದಲೇ ಜ್ಞಾನದೃಷ್ಟಿಯಿಂದ ಕಂಡು ಹರ್ಷ ಶೋಕಗಳಿಂದ ಯುಕ್ತನಾಗಿ ಆ ಕಾರಣದಿಂದಲೇ ತೀರ್ಥಯಾತ್ರೆಗೆ ಹೊರಟುಹೋದ.

ಈ ಶ್ಲೋಕದಲ್ಲಿ ಧೃತರಾಷ್ಟ್ರನ ಅಂತ್ಯವನ್ನು ಕಂಡು ವಿದುರ ತೀರ್ಥಯಾತ್ರೆಗೆ ಹೊರಟು ಹೋಗುತ್ತಾನೆ ಎಂದು ನಾರದರು ಭವಿಷ್ಯ ಹೇಳುವಂತೆ ಕಾಣುತ್ತದೆ. ಇದು ಎಲ್ಲ ಪ್ರಮಾಣಗಳಿಗೆ ವಿರುದ್ಧವಾಗುವುದರಿಂದ ಹೀಗೆ ಹೇಳಬೇಕು—

ಏತತ್ ಸರ್ವಂ ಪೂರ್ವಮೇವ ಜ್ಞಾತ್ವಾ ತಸ್ಮಾದೇವ ಕಾರಣಾದ್
ವಿದುರಸ್ತೀರ್ಥಾನಿ ಯಯೌ ॥

ವಿದುರ ಕೌರವರ ವಿನಾಶ ಧೃತರಾಷ್ಟ್ರಾದಿಗಳ ಅವಸಾನಗಳನ್ನು ಮೊದಲೆ ಜ್ಞಾನ ದೃಷ್ಟಿಯಿಂದ ತಿಳಿದು ಆ ಕಾರಣದಿಂದಲೆ ತೀರ್ಥಯಾತ್ರೆಗೆ ಹೊರಟ.

ಕುರುಕ್ಷೇತ್ರ ಯುದ್ಧಕ್ಕಿಂತ ಮೊದಲೇ ವಿದುರ ತೀರ್ಥಯಾತ್ರೆಗೆ ಹೊರಟು ಹೋಗಲು ಕಾರಣ ಅವನಿಗೆ ಜ್ಞಾನ ದೃಷ್ಟಿಯಿಂದ 'ಕೌರವರೆಲ್ಲ ನಾಶ ಹೊಂದುತ್ತಾರೆ. ಆದರಿಂದಲೆ ಅವರಿಗೆ ಇಂಥ ದುರ್ಬುದ್ಧಿ. ಧೃತರಾಷ್ಟ್ರಾದಿಗಳೂ ಮುಂದೆ ಅವತಾರ ಸಮಾಪ್ತಿ ಹೊಂದಲಿದ್ದಾರೆ' ಎಂದು ತಿಳಿದುಹೋಯಿತು. ಹರಿಲೀಲೆ ವಿಚಿತ್ರವೆಂದು ಹರ್ಷ. ಬಂಧುವಿಯೋಗ ಪ್ರಯುಕ್ತ ಶೋಕ. ಬಂಧು ವಿನಾಶ ಸಮೀಪಿಸಿರುವುದ ರಿಂದ ಹೆಚ್ಚು ಆಸಕ್ತಿ ಸರಿಯಲ್ಲ. ಅದರಿಂದ ಪ್ರಯೋಜನವಿಲ್ಲ ಎಂದುಕೊಂಡು ಯುದ್ಧಕ್ಕಿಂತ ಮೊದಲೇ ತೀರ್ಥಯಾತ್ರೆಗೆ ಹೊರಟ. ಯುದ್ಧ ಮುಗಿದ ಬಳಿಕ ಧೃತರಾಷ್ಟ್ರನನ್ನು ಕಾಣಲು ಬಂದರೂ ತನ್ನ ಮನೆಗೆ ಹೋಗಲಿಲ್ಲ. ಧೃತರಾಷ್ಟ್ರನೊಂದಿಗೆ ಕಾಡಿಗೆ ಹೋದ ಅವನ ಅವಸಾನಕ್ಕಿಂತ ಮೊದಲೇ ಧರ್ಮರಾಜನಲ್ಲಿ ಸೇರಿ ಐಕ್ಯ ಹೊಂದಿದ. ಇದೆಲ್ಲವೂ ವಿದುರನಿಗೆ ಭವಿಷ್ಯಜ್ಞಾನವಿತ್ತೆನ್ನಲು ಸೂಚಕ.

ಬೇರೆ ಎಲ್ಲ ವ್ಯಾಖ್ಯಾನಕಾರರೂ ಮೇಲ್ನೋಟಕ್ಕೆ ಕಾಣುವ ಅರ್ಥವನ್ನೇ

ಸ್ವೀಕರಿಸಿದ್ದಾರೆ. ಪಾಂಡವರ ಮಹಾಪ್ರಸ್ಥಾನವಾದ ಬಳಿಕ ವಿದುರ ಪ್ರಭಾಸದಲ್ಲಿ ಶರೀರತ್ಯಾಗ ಮಾಡುತ್ತಾನೆ. ಪಿತೃಗಳು ಅವನನ್ನು ತಮ್ಮ ಲೋಕಕ್ಕೆ ಒಯ್ಯುತ್ತಾರೆ ಎಂದು ಒಂದು ಶ್ಲೋಕ ಅಧಿಕವಿಟ್ಟುಕೊಂಡು, ಭಾರತವಿರೋಧ ಬಂದರೆ ಕಾಯವ್ಯೂಹಲೀಲೆ ಯಿಂದ ಕೂಡಿಸಬೇಕೆಂದಿದ್ದಾರೆ. ವಂಶೀಧರ ವ್ಯಾಖ್ಯಾನದಲ್ಲಿ ಮಾತ್ರ ಎಲ್ಲ ಕಡೆ ಸಾಮಾನ್ಯವಾಗಿ 'ತೀರ್ಥಸ್ತು' ಎನ್ನುತ್ತ ವಿಜಯಧ್ವಜತೀರ್ಥೀಯವನ್ನು ಅಕ್ಷರಶಃ ಅನುವಾದಮಾಡಿ ಅದನ್ನೆ ಸರಿ ಎನ್ನುವುದುಂಟು. ಇಲ್ಲಿಯೂ ಕೂಡ ವಿಜಯಧ್ವಜೀಯ ವನ್ನೆ ಅನುವಾದಿಸಿ ಕೊನೆಗೆ ಹೇಳಿದೆ— 'ಯಥಾಶ್ರುತಾರ್ಥ ಗ್ರಹಿಸುವ ಪಕ್ಷದಲ್ಲಿ ಕಲ್ಪಾಂತರದಲ್ಲಿ ಮುಂದೆ ಆಗಲಿದೆ ಎಂಬ ಅಭಿಪ್ರಾಯದಿಂದ ಕೂಡಿಸಬೇಕಾಗುತ್ತದೆ. ಇದು ಬೇರೆ ಗತಿ ಇಲ್ಲದಾಗಿನ ಮಾತು. ಪ್ರಕೃತ ಋಜುಮಾರ್ಗದಿಂದಲೆ ಸರಿಯಾದ ಅರ್ಥ ಸಿಗುವಾಗ ಈ ವಕ್ರಮಾರ್ಗ ಬೇಡ' ಎಂದು. ಪರತಃ ಪಂಚಮೇಽಹನಿ ಎಂಬ ಲ್ಲಿಯೂ ಪರಶಬ್ದಕ್ಕೆ ಪೂರ್ವ ಎಂಬ ಅರ್ಥದಲ್ಲಿ 'ಪರಃ ಸ್ಯಾತ್ ಪೂರ್ವಪರಯೋ ರೀಶೇ ಶತ್ರೌ ಚ ಪಾಲನೇ' ಎಂದು ನಿರುಕ್ತಿವಾಕ್ಯವನ್ನು ಉದಾಹರಿಸಿದೆ.[೧]

ಇತಿ ಪ್ರಥಮಸ್ಕಂಧೇ ದ್ವಾದಶೋಽಧ್ಯಾಯಃ

ಹದಿಮೂರನೇ ಅಧ್ಯಾಯ

ಅಧ್ಯಾಯ ಸಾರಾಂಶ

ದ್ವಾರಕೆಯಲ್ಲಿ ಬಂಧುಗಳಾದ ಯಾದವರನ್ನೂ ಶ್ರೀಕೃಷ್ಣನನ್ನೂ ನೋಡಿ ಕ್ಷೇಮಸಮಾಚಾರವನ್ನು ತಿಳಿದುಬರಲು ಧರ್ಮರಾಜ ಅರ್ಜುನನ್ನು ಕಳಿಸಿದ್ದ. ಏಳುದಿನಗಳಾದುವು ಅವನು ಬರಲಿಲ್ಲ. ಧರ್ಮರಾಜನಿಗೆ ಆ ಏಳು ದಿನಗಳು ಏಳು ತಿಂಗಳುಗಳಂತಾದುವು. ಅನೇಕ ದುರ್ನಿಮಿತ್ತಗಳೂ ಕಂಡುಬಂದುವು. ಎಲ್ಲೆಡೆ ಅಧರ್ಮಪ್ರವೃತ್ತಿಗಳು ತಲೆದೋರಿದುವು. ಅಷ್ಟರಲ್ಲಿ ಅರ್ಜುನ ಬಂದು ತಲೆತಗ್ಗಿಸಿ ನಿಂತ. ಕಣ್ಣುಗಳಿಂದ ನೀರು ಸುರಿಸಿದ. ಧರ್ಮರಾಜ ಕೇಳಿದ- ದ್ವಾರಕೆಯಲ್ಲಿ ಎಲ್ಲರೂ ಕ್ಷೇಮವೆ? ಶ್ರೀಕೃಷ್ಣ ಲೋಕಕ್ಷೇಮ ಉಂಟುಮಾಡುತ್ತಿದ್ದಾನೆಯೆ? ಅದಿರಲಿ ಅರ್ಜುನ ನೀನು ಆರೋಗ್ಯವಾಗಿರುವೆಯ? ನಿನ್ನ ಮುಖದಲ್ಲಿ ಮೊದಲಿನ ಕಾಂತಿ ಕಂಡುಬರುತ್ತಿಲ್ಲ. ಹಿಂದೆ ಅಲ್ಲಿಗೆ ಹೋದಾಗಲೆಲ್ಲ ಹೆಚ್ಚು ಕಾಲ ಇರುತ್ತಿದ್ದೆ. ಈಗ ಬೇಗನೆ

---

೧. ಯಥಾಶ್ರುತಾರ್ಥಪರಿಗ್ರಹೇ ತು ಕಲ್ಪಾಂತರೀಯವ್ಯವಸ್ಥಯೈವ ವ್ಯವಸ್ಥಾ । ಸಾ ಚಾಗತಿಕಗತಿರೇವ । ಋಜುಮಾರ್ಗೇಣ ಸಿಧ್ಯತೋಽರ್ಥಸ್ಯ ವಕ್ರೇಣ ದರ್ಶನಾಯೋಗಾತ್ ಇದಮೇವ ವ್ಯಾಖ್ಯಾನಂ ಕೃತಿಜನಾನಂದಕರಮಿತಿ । -ವಂಶೀಧರಃ

ಹಿಂತಿರುಗಿ ಬಂದೆ ಏಕೆ? ಯಾರಾದರೂ ಅವಮಾನಿಸಿದರೆ? ಮೊರೆಹೊಕ್ಕವರನ್ನು ಕಾಪಾಡಲು ಅಶಕ್ತನಾದೆಯ? ಯಾರಿಂದಾದರೂ ಸೋಲನ್ನು ಅನುಭವಿಸಿದೆಯ ಅಥವಾ ಶ್ರೀಕೃಷ್ಣನ ವಿಯೋಗವಾಯಿತೆ ಹೇಳು'.

★★★

ಶ್ರೀಕೃಷ್ಣನ ಮತ್ತು ಯಾದವರ ಸಮಾಚಾರ ತಿಳಿದು ಬರಲು ಧರ್ಮರಾಜ ಅರ್ಜುನನನ್ನು ದ್ವಾರಕೆಗೆ ಕಳಿಸಿ ಏಳು ದಿನಗಳಾದಾಗ ಧರ್ಮರಾಜನಿಗೆ ಆ ಏಳು ದಿನಗಳು ಏಳು ತಿಂಗಳುಗಳಂತೆ ಕಂಡುವು. ಜೊತೆಗೆ ಯದುಕುಲನಾಶ ಸೂಚಕವಾಗಿ ಅನೇಕ ಉತ್ಪಾತಗಳೂ ಕಂಡುಬಂದುವು—

ವ್ಯತೀತಾಃ ಕತಿಚಿನ್ಮಾಸಾಸ್ತದಾ ತು ಶತಶೋ ನೃಪಃ ।
ದದರ್ಶ ಘೋರರೂಪಾಣಿ ನಿಮಿತ್ತಾನಿ ಭೃಗೂದ್ವಹ ॥ ೨ ॥

ಧರ್ಮರಾಜನಿಗೆ ಕೆಲವು ತಿಂಗಳುಗಳೆ ಕಳೆದಂತೆ ಭಾಸವಾಯಿತು. ನೂರಾರು ಭಯಂಕರ ಉತ್ಪಾತಗಳೂ ಕಂಡುಬಂದುವು.

ಇಲ್ಲಿ ದಿನಗಳು ಕಳೆದರೆ ತಿಂಗಳು ಕಳೆದುವೆನ್ನುವುದು ಸರಿಯೆ? ಎಂದರೆ ಇದು ಸಮಾಧಾನ—

ಮಾಸಶಬ್ದೇನಾಹಾನ್ಯುಚ್ಯಂತೇ । ತಥಾ ಹಿ ಮಹಾಭಾರತೇ ।
ಅಹಸ್ತು ಮಾಸಶಬ್ದೋಕ್ತಂ ಯತ್ರ ಚಿಂತಾಯುತಂ ವ್ರಜೇತ್ ।
ಏವಂ ವತ್ಸರಭಾದ್ಯಂ ಚ ವಿಪರೀತೇ ವಿಪರ್ಯಯಃ ।
ಇತಿ ನಾಮಮಹೋದಧೌ ।

ಇಲ್ಲಿ ಮಾಸಶಬ್ದದಿಂದ ದಿನಗಳು ಉಕ್ತವಾಗಿವೆ. ಏಕೆಂದರೆ ಮಹಾಭಾರತದಲ್ಲಿ (ಮ.ಭಾ.ಮೌ.೭-೩೨) ಹಾಗೇ, 'ಏಳು ದಿನಗಳು ಕಳೆದುವು' ಎಂದೇ ಹೇಳಿದೆ. 'ದಿನ ಚಿಂತೆಯಿಂದ ಕಳೆದರೆ ಅದನ್ನು ಮಾಸ ಎಂದು ಕರೆಯುವುದುಂಟು. ಹೀಗೇ ಚಿಂತೆಯ ದಿನವನ್ನು ಸೌರವರ್ಷವೆಂದೂ, ನಾಕ್ಷತ್ರವರ್ಷ ಗ್ರಹವರ್ಷಗಳೆಂದೂ ಹೇಳುವುದುಂಟು. ಸುಖದಿಂದ ಕಳೆದ ವರ್ಷ ಮುಂತಾದುವನ್ನು ಇದಕ್ಕೆ ವಿಪರೀತವಾಗಿ ದಿನವೆಂದೂ ಕರೆಯುವುದುಂಟು' ಎಂದು ನಾಮ ಮಹೋದಧಿ ಗ್ರಂಥದಲ್ಲಿ ಹೇಳಿದೆ.

ಬೇರೆ ವ್ಯಾಖ್ಯಾನಕಾರರು ತಿಂಗಳುಗಳೆಂದೇ ಅರ್ಥ ಸ್ವೀಕರಿಸಿದ್ದಾರೆ. ಅವರಿಗೆ ಮಹಾಭಾರತದ ವಿರೋಧ ಸ್ಪಷ್ಟ.

★★★

'ಶ್ರೀಕೃಷ್ಣ ಕೌರವವಿನಾಶ ಮುಂತಾದ ದೇವಕಾರ್ಯಗಳನ್ನು ಮಾಡಿ ಪೂರೈಸಿ ಇನ್ನುಳಿದ ಯದುಕುಲನಾಶವನ್ನು ಇದಿರುನೋಡುತ್ತಿದ್ದಾನೆ. ಅದೂ ಆದ ಬಳಿಕ ಪರಂಧಾಮಕ್ಕೆ ಹೋಗುತ್ತಾನೆ. ನೀವು ಅಲ್ಲಿಯವರೆಗೆ ಇರಿ, ಬಳಿಕ ನೀವೂ ಹೊರಡಬೇಕು' ಎಂದು ನಾರದರು ಧರ್ಮರಾಜನಿಗೆ ಹೇಳಿದ್ದರು. ಅದರಂತೆ ಇದೀಗ ಯದುಕುಲನಾಶವಾಗಿರಬಹುದೆ ಎಂದು ಧರ್ಮರಾಜ ಭೀಮಸೇನನ ಮುಂದೆ ತನ್ನ ದುಗುಡವನ್ನು ಹೇಳಿಕೊಳ್ಳುತ್ತಾನೆ—

ಅಪಿ ದೇವರ್ಷಿಣಾऽऽದಿಷ್ಟಃ ಸ ಕಾಲಃ ಪ್ರತ್ಯುಪಸ್ಥಿತಃ ।
ಯದಾऽऽತ್ಮನೋऽಂಗಮಾಕ್ರೀಡಂ ಭಗವಾನುತ್‌ಸಿಸೃಕ್ಷತಿ ॥ ೮ ॥

ಭಗವಾನ್ ಶ್ರೀಕೃಷ್ಣ ತನ್ನ ವಿಹಾರಸ್ಥಾನವಾದ ಈ ಭೂಲೋಕವನ್ನು ಮುಂದೆ ಬಿಡಲಿರುವನೆಂದು ನಾರದರು ಹೇಳಿದ ಆ ಕಾಲ ಈಗ ಬಂದಿರಬಹುದೆ?

ಇಲ್ಲಿ ಶ್ರೀಕೃಷ್ಣ ತನ್ನ ಅಂಗವನ್ನು ಅಂದರೆ ಶರೀರವನ್ನು ತೊರೆಯುವ ಕಾಲ ಬಂದಿತೇ ಎಂದು ಕೇಳಿದಂತೆ ಕಾಣುತ್ತದೆ. ಪ್ರಾಯಃ ಎಲ್ಲ ಬೇರೆ ವ್ಯಾಖ್ಯಾನಕಾರರು 'ಅಂಗ' ಎಂದರೆ ಶರೀರ ಎಂದೇ ವ್ಯಾಖ್ಯಾನಿಸಿದ್ದಾರೆ.[೧] ವೀರರಾಘವ ವ್ಯಾಖ್ಯಾನದಲ್ಲಿ ಶರೀರವನ್ನು ಭೂಮಿಯಿಂದ ಬೇರ್ಪಡಿಸಲು ಕೃಷ್ಣ ಬಯಸಿದನೆಂದಿದೆ. ಇದು 'ಉತ್ಸಿಸೃಕ್ಷತಿ' ಶಬ್ದಾರ್ಥವಲ್ಲ. ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಬ್ರಹ್ಮಾಂಡವೆಂಬ ಶರೀರವನ್ನು ಬಿಟ್ಟು ತನ್ನ ಧಾಮಕ್ಕೆ ಹೋಗಬಯಸುತ್ತಾನೆ ಎಂದಿದೆ. ಬ್ರಹ್ಮಾಂಡದೊಳಗೇ ಧಾಮವಿರುವುದರಿಂದ ಇದು ಸರಿಯಾಗದು. ವಿಶ್ವನಾಥ ವ್ಯಾಖ್ಯಾನದಲ್ಲಿ ಅಂಗ ಎಂದರೆ ತನ್ನ ಅಂಶನಾದ ನಾರಾಯಣ. ಅವನನ್ನು ವೈಕುಂಠಕ್ಕೆ ಕಳಿಸಲು ಬಯಸಿದನೆಂದಿದೆ. ಆದರೆ ಕೃಷ್ಣನಾರಾಯಣರು ಬೇರೆ ಅಲ್ಲ. ಮತ್ತು ಈ ಎಲ್ಲ ವ್ಯಾಖ್ಯಾನಕಾರರಿಗೆ ಬ್ರಹ್ಮತರ್ಕಗ್ರಂಥದ ವಿರೋಧವಿದೆ—

---

೧. ಅಂಗಂ ಮನುಷ್ಯನಾಟ್ಯಂ । -ಶ್ರೀಧರಃ

ಮನುಷ್ಯಸಂಸ್ಥಾನಮಂಗಂ ಶುದ್ಧಸತ್ವಮಯಮಪ್ರಾಕೃತಂ ಶರೀರಂ ಭೂಮೇರ್ವಿಶ್ಲೇಷಯಿತು ಮಿಚ್ಛತಿ । -ವೀರರಾಘವಃ

ಅಂಗಂ ಸ್ವಧಾಮಗಮನೇನ ವಿರಾಡ್ರೂಪಂ ತ್ಯಕ್ಷ್ಯತಿ । -ಜೀವಗೋಸ್ವಾಮೀ

ಅಂಗಂ ಮನುಷ್ಯನಾಟ್ಯರೂಪಂ ದೇಹಂ । -ಗಿರಿಧರಃ

ಅಂಗಂ ಸ್ನೇಹಾಸ್ಪದಂ ತಾತಾದಿಪದವಾಚ್ಯಮಸ್ಮದಾದಿಜನಂ ಆಕ್ರೀಡಂ ಕ್ರೀಡಾಸ್ಥಾನಂ ಲೋಕಂ ಚ । -ಶುಕದೇವಃ

ಅಂಗಮಂಶರೂಪಂ ನಾರಾಯಣಮುತ್‌ಸಿಸೃಕ್ಷತಿ ಊರ್ಧ್ವಂ ವೈಕುಂಠಂ ಪ್ರತಿಪ್ರಸ್ಥಾಪಯಿತುಮಿಚ್ಛತಿ । -ವಿಶ್ವನಾಥಃ

ಅಂಗಂ ಪೃಥಿವೀಂ ।

ಯದಾ ತ್ಯಾಗಾದಿರುಚ್ಯೇತ ಪೃಥಿವ್ಯಾದ್ಯಂಗಕಲ್ಪನಾ ।
ತದಾ ಜ್ಞೇಯಾ ನಹಿ ಸ್ವಾಂಗಂ ಕದಾಚಿದ್ ವಿಷ್ಣುರುತ್ಸೃಜೇತ್ ।
ಇತಿ ಬ್ರಹ್ಮತರ್ಕೇ ।

ಅಂಗವನ್ನು ಎಂದರೆ ಭೂಲೋಕವನ್ನು ಎಂದರ್ಥ ಏಕೆಂದರೆ 'ವಿಷ್ಣುವಿನ ವಿಷಯದಲ್ಲಿ ಶರೀರತ್ಯಾಗಾದಿಗಳನ್ನು ಹೇಳುತ್ತಿದ್ದರೆ ಆಗ ಭೂಲೋಕ ಮುಂತಾದುವನ್ನೆ ಅಂಗ ಶಬ್ದದಿಂದ ಕರೆದಿದೆ ಎಂದು ತಿಳಿಯಬೇಕು. ವಿಷ್ಣು ಎಂದೂ ತನ್ನ ಶರೀರವನ್ನು ತ್ಯಾಗ ಮಾಡುವುದಿಲ್ಲ' ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ—

★★★

ಧರ್ಮರಾಜ ಭೀಮಸೇನನ ಮುಂದೆ ಉತ್ಪಾತಗಳನ್ನು ವರ್ಣಿಸುತ್ತಾನೆ—

ಮೃತ್ಯುದೂತಃ ಕಪೋತೋಽಗ್ನಾವುಲೂಕಃ ಕಂಪಯನ್ ಮನಃ ।
ಪ್ರತ್ಯುಲೂಕಶ್ಚ ಹುಂಕಾರೈರನಿದ್ರಾ ಶೂನ್ಯಮಿಚ್ಛತಃ ॥ ೧೪ ॥

ಮರಣ ಸೂಚಕವಾದ ಪಾರಿವಾಳ ಕನಸಿನಲ್ಲಿ ಬೆಂಕಿಯನ್ನು ಪ್ರವೇಶಿಸಿದಂತೆ ಕಂಡಿತು. ಎದೆ ನಡುಗಿಸುವಂಥ ಒಂದು ಗೂಬೆ ಮತ್ತು ಅದಕ್ಕೆ ಇದಿರಾಗಿ ನಿಂತ ಇನ್ನೊಂದು ಗೂಬೆ ಎಲ್ಲರ ನಿದ್ರೆಯನ್ನು ಹಾಳುಮಾಡುತ್ತ ಹುಂಕಾರಗಳಿಂದ ಜಗತ್ತಿನ ನಾಶವನ್ನು ಸೂಚಿಸುತ್ತವೆ.

ಇಲ್ಲಿ 'ಕಪೋತೋಽಯಂ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. ಪಾರಿವಾಳ ವಿಪರೀತ ಶಬ್ದ ಮಾಡುತ್ತ ಮರಣಸೂಚನೆ ಮಾಡುತ್ತದೆ ಎಂದು ಗಿರಿಧರ ವ್ಯಾಖ್ಯಾನ. ಮೃತ್ಯುಸಮೀಪಕ್ಕೆ ಕರೆಯಲೆಂಬಂತೆ ದಕ್ಷಿಣ ದಿಕ್ಕಿನಲ್ಲಿ ಬಂದು ಪಾರಿವಾಳ ಕೂಗುತ್ತದೆ ಎಂದು ವಲ್ಲಭಾಚಾರ್ಯ[೧] ವ್ಯಾಖ್ಯಾನ. ಇವು ಕೇವಲ ಕಲ್ಪನೆಗಳು. ವಸ್ತುತಃ ಪಾರಿವಾಳ ಬೆಂಕಿಯೊಳಗೆ ಪ್ರವೇಶಿಸಿದಂತೆ ಸ್ವಪ್ನದಲ್ಲಿ ಕಂಡರೆ ಅದು ನಾವು ಬಯಸಿದ್ದು ವಿಪರೀತವಾಗುತ್ತದೆ ಎಂಬುದಕ್ಕೆ ಸೂಚಕ. ಧರ್ಮರಾಜ ಯದುಕುಲದ ಉಳಿವನ್ನು ಬಯಸುತ್ತಿದ್ದಾನೆ. ಈ ಸ್ವಪ್ನದ ಪಾರಿವಾಳ ನಾಶವನ್ನು ಸೂಚಿಸುತ್ತದೆ. ಈ ಅರ್ಥ ಪ್ರಮಾಣಸಿದ್ಧವೂ ಆಗಿದೆ—

---

೧. ಅಯಂ ಕಪೋತೋ ಮೃತ್ಯುದೂತಃ ವಿಪರೀತ ಶಬ್ದವತ್ತ್ವೇನ ಮೃತ್ಯುದೂತ ಇವ ಪ್ರತಿಭಾತಿ । -ಗಿರಿಧರಃ

ಅಯಂ ಕಪೋತೋ ಮೃತ್ಯುದೂತಃ ಮೃತ್ಯುಸಮೀಪೇ ಆಕಾರಣಾರ್ಥಮಾಗತಃ ದಕ್ಷಿಣದಿಶಾಮಾಗತ್ಯ ಶಬ್ದಕರಣಾದವಸೀಯತೇ । -ವಲ್ಲಭಾಚಾರ್ಯಃ

ಅಗ್ನೌ ಪದಂ ಕರೋತಿ
'ಯದುಲೂಕೋ ವದತಿ ಮೋಘಮೇತದ್
ಯತ್ ಕಪೋತಃ ಪದಮಗ್ನೌ ಕೃಣೋತಿ' ಇತಿ ಹಿ ಶ್ರುತಿಃ ॥

'ಅಗ್ನೌ' ಅಗ್ನಿಯಲ್ಲಿ ಎಂದ ಬಳಿಕ ಶ್ಲೋಕದಲ್ಲಿ 'ಪದಂ ಕರೋತಿ' ಪ್ರವೇಶಿಸುತ್ತದೆ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ಏಕೆಂದರೆ ಶ್ರುತಿಯು ಪಾರಿವಾಳ ಗೂಬೆಗಳು ಅನಿಷ್ಟವನ್ನು ಸೂಚಿಸುವ ಬಗೆಯನ್ನು ಹೀಗೆ ಹೇಳಿದೆ— 'ಗೂಬೆ ಹುಂಕರಿಸುವುದೂ ಪಾರಿವಾಳ ಬೆಂಕಿಯಲ್ಲಿ ಪ್ರವೇಶಿಸುವುದೂ ಬಯಸಿದ್ದು ವಿಫಲವಾಗುತ್ತದೆ ಎಂಬುದಕ್ಕೆ ಸೂಚಕವಾಗುವುದು'.

★★★

ಅದೇ ಸಮಯದಲ್ಲಿ ದ್ವಾರಕೆಯಿಂದ ಹಿಂತಿರುಗಿ ಬಂದ ಅರ್ಜುನ ಧರ್ಮರಾಜನ ಮುಂದೆ ದುಃಖದಿಂದ ತಲೆತಗ್ಗಿಸಿ ನಿಂತಾಗ ಧರ್ಮರಾಜ ಕೇಳಿದ-

ಭಗವಾನಪಿ ಗೋವಿಂದೋ ಬ್ರಹ್ಮಣ್ಯೋ ಭಕ್ತವತ್ಸಲಃ ।
ಕಚ್ಚಿತ್ ಪುರೇ ಸುಧರ್ಮಾಯಾಂ ಸುಖಮಾಸ್ತೇ ಸುಹೃದ್‌ವೃತಃ ॥ ೩೪ ॥

ಬ್ರಾಹ್ಮಣರಿಗೆ ಹಿತಕಾರಿಯಾದ ಭಕ್ತವತ್ಸಲನಾದ ಭಗವಾನ್ ಶ್ರೀಕೃಷ್ಣ ಲೋಕಕ್ಕೆ ಸುಖವಾಗುವಂತೆ ಪ್ರಿಯಜನರೊಂದಿಗೆ ದ್ವಾರಕೆಯ ಸುಧರ್ಮಸಭೆಯಲ್ಲಿ ಇರುವನು ತಾನೆ?

ನಿತ್ಯಸುಖಿಯಾದ ಶ್ರೀಕೃಷ್ಣನ ವಿಷಯದಲ್ಲಿ 'ಸುಖವಾಗಿರುವನು ತಾನೆ?' ಎಂದು ಪ್ರಶ್ನಿಸುವುದು ಅಸಂಗತ. ಅದರಿಂದ ಪ್ರಶ್ನೆಯ ಅಭಿಪ್ರಾಯ ಹೀಗೆ-

ಯಥಾನ್ಯೇಷಾಂ ಸುಖಂ ಭವಿಷ್ಯತಿ ತಥಾ । ನಿತ್ಯಸುಖತ್ವಾದ್ಧರೇಃ ।
ಅತ್ಯುತ್ತಮಾನಾಂ ಕುಶಲಪ್ರಶ್ನೋ ಲೋಕಸುಖೇಚ್ಛಯಾ ।
ನಿತ್ಯದಾಪ್ತ ಸುಖತ್ವಾತ್ತು ನ ತೇಷಾಂ ಯುಜ್ಯತೇ ಕ್ವಚಿತ್ ॥
ಇತಿ ನಾರದೀಯೇ ।

'ಬೇರೆಯವರಿಗೆ ಸುಖವಾಗುವಂತೆ ಇರುವನು ತಾನೆ?' ಎಂದೇ ಪ್ರಶ್ನೆ. ತಾನು ಸುಖವಾಗಿರುವನೆ ಎಂದಲ್ಲ. ಏಕೆಂದರೆ, ಅವನು ಸದಾ ಸುಖಿಯೆ.

ಸರ್ವೋತ್ತಮರಾದ ಭಗವದವತಾರಗಳ ವಿಷಯದಲ್ಲಿ ಕುಶಲ ಪ್ರಶ್ನೆಯನ್ನು

'ಲೋಕಕ್ಕೆ ಸುಖ ಉಂಟುಮಾಡುತ್ತ ಇರುವರೆ?' ಎಂದು ತಿಳಿಯುವ ಅಪೇಕ್ಷೆಯಿಂದ ಮಾಡುತ್ತಾರೆ. ಇಲ್ಲದಿದ್ದರೆ ಸದಾ ಸುಖಿಗಳಾಗಿರುವುದರಿಂದ ಸುಖಿಯಾಗಿರುವರೆ ಎಂಬ ಪ್ರಶ್ನೆ ಕೂಡುವುದಿಲ್ಲ ಎಂದು ನಾರದ ಪುರಾಣದಲ್ಲಿ ಉಕ್ತವಾಗಿದೆ.

★★★

ಧರ್ಮರಾಜ ಮುಂದುವರಿದು ಇನ್ನೂ ಅರ್ಜುನನನ್ನು ಪ್ರಶ್ನಿಸುತ್ತಾನೆ-

ಕಚ್ಚಿತ್ತೇऽನಾಮಯಂ ತಾತ ಭ್ರಷ್ಟತೇಜಾ ವಿಭಾಸಿ ಮೇ ।
ಅಲಬ್ಧಮಾನೋऽವಜ್ಞಾತಃ ಕಿಂ ವಾ ತಾತ ಚಿರೋಷಿತಃ ॥ ೩೯ ॥

ಪ್ರಿಯ ಅರ್ಜುನ, ನೀನು ಚೆನ್ನಾಗಿರುವೆ ತಾನೆ? ತೇಜಸ್ಸನ್ನು ಕಳೆದು ಕೊಂಡವ ನಂತೆ ಕಾಣುವಿ. ಬಂಧುಗಳು ನಿನಗೆ ತಕ್ಕ ಮನ್ನಣೆ ನೀಡಲಿಲ್ಲವೆ? ಹಿಂದೆ ನೀನು ಹೋದಾಗಲೆಲ್ಲ ಹೆಚ್ಚುಕಾಲ ಅಲ್ಲಿ ವಾಸಮಾಡುತ್ತಿದ್ದಿ. ಈಗ ಬೇಗನೆ ಬಂದಿರುವಿ ಏಕೆ?

ಈಗ ಬಹುಕಾಲ ಅಲ್ಲಿ ವಾಸಮಾಡಿದ್ದರಿಂದ ಅವರು ನಿನ್ನನ್ನು ಅವಮಾನಿಸಿರ ಬಹುದೆ? ಎಂದು ಧರ್ಮರಾಜ ಕೇಳಿದಂತೆ ಮೇಲುನೋಟಕ್ಕೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ವ್ಯಾಖ್ಯಾನ ಮಾಡಿದ್ದಾರೆ.[೧] ಆದರೆ ಅರ್ಜುನ ಏಳು ದಿನಗಳಲ್ಲಿಯೆ ಹಿಂತಿರುಗಿ ಬಂದಿದ್ದಾನೆ. ಅದಕ್ಕೆ ಹೀಗೆ ಹೇಳಬೇಕು—

ಪೂರ್ವಂ ಚಿರೋಷಿತಃ ।

ಹಿಂದೆ ನೀನು ಹೋದಾಗಲೆಲ್ಲ ಹೆಚ್ಚುಕಾಲ ವಾಸಮಾಡುತ್ತಿದ್ದಿ. ಈಗ ಮಾತ್ರ ಏಕೆ ಬೇಗನೆ ಬಂದಿ ? ಎಂದು ಪ್ರಶ್ನೆಯ ಅಭಿಪ್ರಾಯ.

ಬಂಧುಗಳು ಬೇರಾವುದೋ ಕಾರಣದಿಂದ ನಿನ್ನನ್ನು ಅಪಮಾನಿಸಿರಬೇಕು. ಅದನ್ನು ತಾಳಲಾರದೆ ಬೇಗನೆ ಬಂದಿರುವೆಯೇನು? ಎಂದು ಪ್ರಶ್ನೆಯ ಅಭಿಪ್ರಾಯ ಹೇಳಬೇಕು.

ಇತಿ ಪ್ರಥಮಸ್ಕಂಧೇ ತ್ರಯೋದಶೋऽಧ್ಯಾಯಃ

---

೧. ಕಿಂ ವಾ ಪ್ರತ್ಯುತ ತೈರವಜ್ಞಾತಸ್ತಿರಸ್ಕೃತಃ ಯತಶ್ಚಿರೋಷಿತೋ ಬಹುಕಾಲಂ ತತ್ರ ಸ್ಥಿತಃ ।
-ವಿಶ್ವನಾಥಃ ಗಿರಿಧರಃ ಶ್ರೀಧರಃ ಶುಕದೇವಃ

ಚಿರಮುಷಿತತ್ವಾತ್ ಅಲಬ್ಧೋ ಮಾನಃ ಸಂಮಾನನಂ ಯೇನ ತಥಾಭೂತಃ ಕಿಂ ?
–ವೀರರಾಘವಃ

ಶ್ವಶುರಗೃಹೇ ಬಹುಕಾಲವಾಸೇऽವಜ್ಞಾ ಭವತಿ । ಅವಜ್ಞಾತಃ ಕಿಂ ವಾ ?
-ವಲ್ಲಭಾಚಾರ್ಯಃ

ಹದಿನಾಲ್ಕನೇ ಅಧ್ಯಾಯ

ಅಧ್ಯಾಯ ಸಾರಾಂಶ

ಅರ್ಜುನ ಶ್ರೀಕೃಷ್ಣನ ವಿಯೋಗದುಃಖದಿಂದ ಕಂಗೆಟ್ಟಿದ್ದ. ಧರ್ಮರಾಜನ ಪ್ರಶ್ನೆಗಳಿಗೆ ಉತ್ತರಿಸುವ ಸ್ಥಿತಿಯಲ್ಲಿ ಅವನಿರಲಿಲ್ಲ. ಗದ್ಗದ ಕಂಠದಿಂದ ನುಡಿದ. 'ನಾನಿಂದು ಆಪ್ತಬಂಧುವಾದ ಶ್ರೀಕೃಷ್ಣನ ಒಡನಾಟದಿಂದ ವಂಚಿತನಾಗಿದ್ದೇನೆ. ಜೀವವಿಲ್ಲದ ಶವದಂತಾಗಿದ್ದೇನೆ. ನಮ್ಮೆಲ್ಲ ವಿಜಯೋತ್ಸವಗಳಿಗೆ ಸುಖ ಸಮೃದ್ಧಿಗಳಿಗೆ ಕೀರ್ತಿಪ್ರತಿಷ್ಠೆಗಳಿಗೆ ಅವನು ಜೊತಗಿದ್ದುದೆ ಕಾರಣ. ನಾನು ಅವನನ್ನು ಮನುಷ್ಯನೆಂದು ಬಗೆದು ಸಲುಗೆಯಿಂದ ಅವನೊಡನೆ ಒಂದೇ ಆಸನದಲ್ಲಿ ಕುಳಿತೆ. ಒಂದೇ ಹಾಸಿಗೆಯಲ್ಲಿ ಮಲಗಿದೆ. ಅವನ ಮುಂದೆ ನನ್ನನ್ನು ನಾನು ಹೊಗಳಿಕೊಂಡೆ. ಸರ್ವೋತ್ತಮನ ಮುಂದೆ ನಾನು ಹೀಗೆ ವ್ಯವಹರಿಸಿದುದು ಮಹಾಪರಾಧವಾಯಿತು. ಅವನು ಅದೆಲ್ಲವನ್ನೂ ಸಹಿಸಿದ. ದೇವತೆಗಳನ್ನೂ ಅಚ್ಚರಿಪಡಿಸುತ್ತಿದ್ದ ನನ್ನ ತೇಜಸ್ಸು ಅವನೊಂದಿಗೇ ಹೊರಟುಹೋಯಿತು. ನಾನು ಅವನ ಪತ್ನಿಯರನ್ನು ರಕ್ಷಿಸುತ್ತ ಬರುತ್ತಿದ್ದಾಗ ದಾರಿಯಲ್ಲಿ ದುರ್ಬಲರಾದ ಗೊಲ್ಲರು ಇದಿರಿಸಿದರು. ಅಬಲೆಯಾದ ಹೆಣ್ಣಿನಂತೆ ನಾನು ಅವರ ಮುಂದೆ ಸೋತೆ. ಅದೇ ಗಾಂಡೀವ ಧನುಸ್ಸು ಹಿಡಿದು ಅದೇ ರೀತಿಯ ರಥದಲ್ಲಿ ನಿಂತು ಅದೇ ರೀತಿಯ ಬಾಣಗಳನ್ನೆಸೆದೆ. ಆದರೇನು? ಏನು ಉಪಯೋಗವಾಗಲಿಲ್ಲ. ಏಕೆ? ಜೊತೆಯಲ್ಲಿ ಕೃಷ್ಣನಿಲ್ಲ! ಅಷ್ಟೆ ಅವನು ಪರಂಧಾಮಕ್ಕೆ ತೆರಳಿದ. ಯಾದವರೆಲ್ಲರೂ ಕುಡಿದು ಮತ್ತರಾಗಿ ಪರಸ್ಪರ ಬಡಿದಾಡಿ ಸತ್ತರು. ಪರಮಾತ್ಮನ ಲೀಲೆ ಎಂದರೆ ಹೀಗೇ. ಪ್ರಬಲರಾದ ಯಾದವರಿಂದ ಭೂಭಾರ ಭೂತರಾದ ಅಸುರರನ್ನು ಮಾತ್ರವಲ್ಲದೆ ಯಾದವರನ್ನೂ ಕೊಲ್ಲಿಸಿದ. ಕರ್ಮಾನುಗುಣವಾಗಿ ಫಲ ನೀಡುವ ಆತನಿಗೆ ಕಾಯುವುದೂ ಕೊಲ್ಲುವುದೂ ಎರಡೂ ಒಂದೆ'. ಅರ್ಜುನ ಹೀಗೆ ಹೇಳುತ್ತಿದ್ದಂತೆ ಅವನ ನಿರ್ಮಲವಾದ ಮನಸ್ಸು ಕೃಷ್ಣನ ಪಾದಕಮಲಧ್ಯಾನಮಗ್ನವಾಗಿ ಗಾಢಭಕ್ತಿರಸದಲ್ಲಿ ಮುಳುಗಿತು.

★★★

ದ್ವಾರಕೆಯಿಂದ ಹಿಂತಿರುಗಿ ಬಂದ ಅರ್ಜುನ ಧರ್ಮರಾಜನಿಗೆ ಹೇಳುತ್ತಾನೆ, ನಮಗೆಲ್ಲರಿಗೂ ಎಲ್ಲ ಬಗೆಯ ಸುಖಕ್ಕೆ ಕಾರಣನಾದ ಶ್ರೀಕೃಷ್ಣನ ವಿಯೋಗ ನಮಗಾಗಿದೆ ಎಂದು—

ಪತ್ನ್ಯಾಸ್ತವಾಪಿ ಮಖ ಕ್ಲಪ್ತ ಮಹಾಭಿಷೇಕ
ಶ್ಲಾಘಿಷ್ಠಚಾರು ಕಬರಂ ಕಿತವೈಃ ಸಭಾಯಾಂ ।

ಸ್ಪೃಷ್ಟಂ ವಿಕೀರ್ಯ ಪದಯೋಃ ಪತಿತಾಶ್ರುಮುಖ್ಯೋ
ಯೈಸ್ತತ್‌ಸ್ತ್ರಿಯೋ ನ್ಯಕೃತ ತತ್ ಸವಿಮುಕ್ತಕೇಶ್ಯಃ ॥ ೧೧ ॥

ರಾಜಸೂಯಯಾಗದಲ್ಲಿ ಮಾಡಿದ ಮಹಾಭಿಷೇಕದಿಂದ ಅತ್ಯಂತ ಶ್ಲಾಘ್ಯವೆನಿಸಿದ ದ್ರೌಪದಿಯ ಕೇಶಪಾಶವನ್ನು ಜೂಜುಕೋರರು ಸಭೆಯಲ್ಲಿ ಹಿಡಿದೆಳೆದರು. ದ್ರೌಪದಿ ಶ್ರೀಕೃಷ್ಣನ ಕಾಲುಗಳಿಗೆರಗಿದಾಗ ಅವಳ ಕಣ್ಣೀರೂ ಅವನ ಕಾಲುಗಳಲ್ಲಿ ಬಿದ್ದಿತು. ಆ ಕಣ್ಣೀರು ಕೃಷ್ಣನ ಪಾದಗಳಲ್ಲಿ ಬಿದ್ದ ಸಾಮರ್ಥ್ಯದಿಂದ ದ್ರೌಪದಿಗೆ ಪ್ರಧಾನಮಂತ್ರಿಯಂತೆ ವರ್ತಿಸಿ ಆ ಜೂಜುಕೋರರ ಹೆಂಡಂದಿರು ವಿಧವೆಯರಾಗಿ ಕೂದಲುಗಳನ್ನು ಹರಡಿಕೊಳ್ಳುವಂತೆ ಮಾಡಿತು.

ಬೇರೆ ವ್ಯಾಖ್ಯಾನಕಾರರು ಇಲ್ಲಿ ಪತಿತಾಶ್ರುಮುಖ್ಯಾಃ ಎಂಬ ಪಾಠವಿಟ್ಟು ಕೊಂಡಿದ್ದಾರೆ. ಪತಿತಾಶ್ರುಮುಖ್ಯಃ ಎಂಬ ಪಾಠದಲ್ಲಿ ಹೀಗೆ ಅನ್ವಯಾರ್ಥ—

ಯತ್ಪದಯೋಃ ಪತಿತಾಯಾ ಅಶ್ರುಪ್ರಧಾನಃ, ಯೈಃ ಕಬರಂ ಸ್ಪೃಷ್ಟಂ ತತ್‌ಸ್ತ್ರಿಯಃ, ತತ್ ಫದಯೋಃ ಪತಿತತ್ವಾದೇವ, ಸಹವಿಮುಕ್ತಕೇಶ್ಯೋ ನ್ಯಕೃತ ॥

ಯಾವ ಕೃಷ್ಣನ ಪಾದಗಳಿಗೆರಗಿದ ದ್ರೌಪದಿಯ ಕಣ್ಣೀರು ತಾನೂ ಪಾದಗಳ ಮೇಲೆ ಬಿದ್ದುದರಿಂದ, ದ್ರೌಪದಿಗೆ ಪ್ರಧಾನಮಂತ್ರಿಯಂತೆ ವರ್ತಿಸಿ, ಅವಳ ಕೇಶಪಾಶವನ್ನು ಹಿಡಿದೆಳೆದವರ ಹೆಂಡಂದಿರನ್ನು, ಎಲ್ಲರನ್ನೂ ಒಮ್ಮೆಗೇ ಮುಕ್ತ ಕೇಶಿಯರನ್ನಾಗಿ ಮಾಡಿತೋ, ಆ ಶ್ರೀಕೃಷ್ಣನಿಂದ ನಾವು ವಿಯೋಗ ಹೊಂದಿದ್ದೇವೆ.

★★★

ದ್ವಾರಕೆಯಿಂದ ಹಿಂತಿರುಗಿ ಬರುವಾಗ ಅರ್ಜುನ ಕೃಷ್ಣಪತ್ನಿಯರನ್ನೂ ಜೊತೆಗೆ ಕರೆತರುತ್ತಿದ್ದ. ದಾರಿಯಲ್ಲಿ ಮ್ಲೇಚ್ಛರು ಆಕ್ರಮಿಸಿದರು. ಅರ್ಜುನ ಸೋತ. ಇದಕ್ಕೆ ಕಾರಣ ಕೃಷ್ಣನ ವಿಯೋಗದಿಂದ ತನ್ನಲ್ಲಿ ಉಂಟಾದ ಶಕ್ತಿಹ್ರಾಸ ಹೊರತು ಇನ್ನೇನಲ್ಲ ಎನ್ನುತ್ತಿದ್ದಾನೆ, ಧರ್ಮರಾಜನ ಮುಂದೆ—

ತದ್ವೈ ಧನುಸ್ತ ಇಷವಃ ಸ ರಥೋ ಹಯಾಸ್ತೇ
ಸೋಽಹಂ ರಥೀ ನೃಪತಯೋ ಯತ ಆಮನಂತಿ ।
ಸರ್ವಂ ಕ್ಷಣೇನ ತದಭೂದಸದೀಶರಿಕ್ತಂ
ಭಸ್ಮನ್ ಹುತಂ ಕುಹಕರಾದ್ಧಮಿವೋಪ್ತಮೂಷೇ ॥ ೨೧ ॥

ಹಿಂದೆ ಇದ್ದ ಅದೇ ಧನುಸ್ಸು, ಅದೇ ರೀತಿಯ ಬಾಣುಗಳು. ಅದೇ ರೀತಿಯ

ರಥ, ಅದೇ ರೀತಿಯ ಕುದುರೆಗಳು, ರಾಜರು ಹೊಗಳುವ ಆ ಅರ್ಜುನನೆನಿಸಿದ ನಾನು ರಥಿಕ. ಆದರೇನು? ಶ್ರೀಕೃಷ್ಣನಿಲ್ಲದಿದ್ದಾಗ ಎಲ್ಲವೂ ಬೂದಿಯಲ್ಲಿ ಹೋಮಿಸಿದಂತೆ, ಜಾದುಗಾರ ತೋರಿದ ವಸ್ತುವಿನಂತೆ, ಬಂಜರು ಭೂಮಿಯಲ್ಲಿ ಬಿತ್ತಿದ ಬೀಜದಂತೆ, ಕೆಲಸಕ್ಕೆ ಬಾರದಂತಾದುವು.

ಇಲ್ಲಿ 'ತದ್ವೈಧನುಃ' ಅದೇ ಗಾಂಡೀವ ಧನುಸ್ಸು ಎಂದುದು ಸರಿಯೆ. ಆದರೆ ಅವೇ ಬಾಣಗಳು ಹೇಗೆ? ಯುದ್ಧಕಾಲದಲ್ಲಿ ಎಸೆದ ಬಾಣಗಳು ಹಿಂತಿರುಗಿ ಬರಲಿಲ್ಲ ತಾನೆ? ಆದ್ದರಿಂದ ಅವೇ ಬಾಣಗಳೆಂದರೆ ಅವೇ ರೀತಿಯ ಬಾಣಗಳು. ಹಾಗೇ ಅದೇ ರಥ ಅವೇ ಕುದುರೆಗಳು ಎನ್ನುವುದೂ ಅದೇ ರೀತಿಯ ರಥ, ಅದೇ ರೀತಿಯ ಕುದುರೆಗಳೆಂದು ಹೇಳುವ ಅಭಿಪ್ರಾಯದಿಂದ ಎನ್ನಬೇಕು. ಏಕೆಂದರೆ ಆ ರಥ ಕುದುರೆಗಳು ಯುದ್ಧದ ಕೊನೆಯಲ್ಲಿ ಅಂದೇ ಸುಟ್ಟುಹೋಗಿದ್ದುವು ಎನ್ನುತ್ತಾರೆ—

ಸ ರಥೋ ಹಯಾಸ್ತ ಇತಿ ತಾದೃಶಾ ಇತ್ಯರ್ಥಃ, ತ ಇಷವ ಇತೀವ ।
ಸದೃಶೇ ವಾ ಪ್ರಧಾನೇ ವಾ ಕಾರಣೇ ವಾ ತದಿತ್ಯಯಂ ।
ಶಬ್ದಃ ಸಂಘಟತೇ ಭೇದೇ ವಿದ್ಯಮಾನೇಽಪಿ ತತ್ವತಃ ॥
ಇತಿ ಬ್ರಹ್ಮತರ್ಕೇ । ತದ್ರಥಹಯಾನಾಂ ದಾಹೋಕ್ತೇಃ ।

ಅದೇ ರಥ ಅವೇ ಕುದುರೆಗಳು ಎನ್ನುವುದಕ್ಕೆ ಅವೇ ರೀತಿಯ ರಥ ಕುದುರೆಗಳೆಂದರ್ಥ. ಅವೇ ಬಾಣಗಳು ಎನ್ನುವಂತೆ.

ಅದಕ್ಕೆ ಸದೃಶ, ಅದರ ಅಧೀನ, ಅದರಿಂದ ಜನ್ಯ- ಎಂಬ ಅರ್ಥಗಳಲ್ಲಿ 'ಅದೇ' ಎಂದು ಹೇಳುವುದು ಕೂಡುತ್ತದೆ, ವಸ್ತುತಃ ಭೇದವಿದ್ದರೂ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. ರಥ ಕುದುರೆಗಳು ಸುಟ್ಟು ಹೋದುದು ಭಾರತದಲ್ಲಿ ಉಕ್ತವಾಗಿರುವುದರಿಂದ ಹೀಗೇ ಹೇಳಬೇಕು.

ಯುದ್ಧಕಾಲದಲ್ಲಿ ದ್ರೋಣ ಕರ್ಣ ಅಶ್ವತ್ಥಾಮ ಮುಂತಾದವರು ಅರ್ಜುನನ ರಥವನ್ನು ಸುಡಲು ಅಸಂಖ್ಯ ಅಸ್ತ್ರಗಳನ್ನೆಸೆದಿದ್ದರೂ ಶ್ರೀಕೃಷ್ಣನ ಸನ್ನಿಧಾನದಿಂದ ರಥ ಆಗ ಸುಡಲಿಲ್ಲ. ಯುದ್ಧ ಮುಗಿದಾಗ ಶ್ರೀಕೃಷ್ಣ ಮೊದಲು ಅರ್ಜುನನನ್ನು ಕೆಳಗಿಳಿಸಿ ಬಳಿಕ ತಾನಿಳಿದ. ಒಡನೆ ಧ್ವಜದಲ್ಲಿದ್ದ ಕಪಿ ಅದೃಶ್ಯನಾದ. ರಥ ಕುದುರೆಗಳೊಂದಿಗೆ ಸುಟ್ಟು ಬೂದಿಯಾಯಿತೆಂದು ಭಾರತದಲ್ಲಿ ಉಕ್ತವಾಗಿದೆ. ಆಗಲೆ ರಥ ಕುದುರೆಗಳು ಸುಟ್ಟುಹೋಗಿರುವುದರಿಂದ ಅವೇ ರಥ ಕುದುರೆಗಳೆಂದರೆ ಅವೇ ರೀತಿಯ ಬೇರೆ ರಥ ಕುದುರೆಗಳೆಂದೇ ಅರ್ಥ ಹೇಳಬೇಕು. ಇಲ್ಲದಿದ್ದರೆ ಅವೇ ಬಾಣಗಳೆನ್ನುವುದು ಹೇಗೆ? ಶತ್ರುಗಳ ಮೇಲೆ ಪ್ರಯೋಗಿಸಿದ ಬಾಣಗಳು ಹಿಂತಿರುಗಿ ಬರುವುದಿಲ್ಲ ತಾನೆ? ವಾಸ್ತವ ಭೇದವಿದ್ದಾಗಲೂ ಅದೇ ಇದು, ಅವನೆ ಇವನು ಎಂದು ತಚ್ಛಬ್ದವನ್ನು

ಪ್ರಯೋಗಿಸುವುದು ಸಾದೃಶ್ಯಾದಿ ವಿವಕ್ಷೆಯಿಂದ 'ತತ್ವಮಸಿ' ಮುಂತಾದ ವಾಕ್ಯದಲ್ಲಿ ಕಂಡಿದೆ. 'ತತ್ ತ್ವಮಸಿ' 'ಆ ಪರಮಾತ್ಮನೆ ನೀನು' ಎಂದರೆ ಆ ಪರಮಾತ್ಮನಂತೆ ಚಿನ್ಮಯ ಸ್ವರೂಪ ನೀನು, ಅವನ ಅಧೀನ ನೀನು, ಅವನಿಂದ ಹುಟ್ಟಿದವನು ನೀನು ಎಂದು ಮುಂತಾಗಿ ಆ ವಾಕ್ಯಕ್ಕೆ ಅರ್ಥವಿದೆ.

ಇತಿ ಪ್ರಥಮಸ್ಕಂಧೇ ಚತುರ್ದಶೋಽಧ್ಯಾಯಃ

ಹದಿನೈದನೇ ಅಧ್ಯಾಯ

ಅಧ್ಯಾಯ ಸಾರಾಂಶ

ಅರ್ಜುನನಿಗೆ ಶ್ರೀಕೃಷ್ಣ ಅಂದು ಉಪದೇಶಿಸಿದ್ದ ಗೀತಾಜ್ಞಾನ ತತ್ಕಾಲದಲ್ಲಿ ಪ್ರಾರಬ್ಧದಿಂದ ಮರೆಯಾದರೂ ಈಗ ತಿರುಗಿ ಪ್ರಾರಬ್ಧ ಪುಣ್ಯದಿಂದ ವ್ಯಕ್ತವಾದ್ದರಿಂದ ಬಂಧುಮರಣ ಶೋಕವನ್ನು ಬಿಟ್ಟು ಸ್ವಸ್ಥಚಿತ್ತನಾದ. ಶ್ರೀಕೃಷ್ಣ ಭೂಲೋಕವನ್ನು ಬಿಟ್ಟು ಹೋದೊಡನೆ ಕಲಿ ಭೂಮಿಯಲ್ಲಿ ಸಂಚರಿಸತೊಡಗಿದ್ದನ್ನು ಕಂಡು ಧರ್ಮರಾಜ ಸ್ವರ್ಗಕ್ಕೆ ಮಹಾಪ್ರಸ್ಥಾನ ಕೈಗೊಳ್ಳಲು ನಿರ್ಧರಿಸಿದ. ತನ್ನ ಸಿಂಹಾಸನದಲ್ಲಿ ಮೊಮ್ಮಗನಾದ ಪರೀಕ್ಷಿತನನ್ನು ಕೂಡಿಸಿದ. ಶೂರಸೇನದೇಶದ ರಾಜನಾಗಿ ಅನಿರುದ್ಧನ ಮಗನಾದ ವಜ್ರನನ್ನು ಮಧುರೆಯಲ್ಲಿ ಪಟ್ಟಾಭಿಷೇಕಗೈದ. ಸರ್ವಸ್ವ ದಕ್ಷಿಣೆಯಿಂದ ಕೂಡಿದ ಪ್ರಾಜಾಪತ್ಯೇಷ್ಟಿಮಾಡಿ ಅಗ್ನಿಗಳನ್ನು ತನ್ನಲ್ಲಿ ಸಮಾರೋಪ ಮಾಡಿಕೊಂಡ. ಇಂದ್ರಿಯದೇವತೆಗಳು ಮನೋದೇವನಲ್ಲಿ ಮನೋದೇವ ಪ್ರಾಣನಲ್ಲಿ ಪ್ರಾಣ ವಿಷ್ಣುವಿನಲ್ಲಿ ಲಯಹೊಂದುವುದನ್ನು ಧ್ಯಾನಿಸುವ ಬ್ರಹ್ಮಯಜ್ಞವನ್ನು ನಡೆಸುತ್ತ ಉನ್ಮತ್ತನಂತೆ ಜಡನಂತೆ ತೋರಿಕೊಂಡು ಹಸ್ತಿನಾವತಿಯಿಂದ ಹೊರಗೆ ನಡೆದ. ಉತ್ತರ ದಿಕ್ಕಿನಲ್ಲಿ ನಡೆಯಬೇಕು. ಶರೀರ ಬಿದ್ದುಹೋಗುವವರೆಗೂ ನಡೆಯುತ್ತಲೇ ಇರಬೇಕು ಹಿಂತಿರುಗಬಾರದು ಇಂಥ ವೀರಗತಿಯನ್ನು ಧರ್ಮರಾಜ ಕೈಗೊಂಡು ಮಹಾಪ್ರಸ್ಥಾನಕ್ಕೆ ಹೊರಟಾಗ ತಮ್ಮಂದಿರೂ ದ್ರೌಪದಿಯೂ ಅವನನ್ನು ಹಾಗೇ ಹಿಂಬಾಲಿಸಿದರು. ಎಲ್ಲರೂ ಭಗವಂತನ ಧ್ಯಾನಮಾಡುತ್ತ ಏಳು ದಿನಗಳ ಕಾಲ ಅಖಂಡ ಭೂಪ್ರದಕ್ಷಿಣೆ ಮಾಡಿ ಗಂಧಮಾದನ ಪರ್ವತದ ನಾರಾಯಣಾಶ್ರಮದಲ್ಲಿ ಶರೀರ ತ್ಯಾಗ ಮಾಡಿದರು. ತಮ್ಮ ತಮ್ಮ ಮೂಲರೂಪಗಳನ್ನು ಸೇರಿಕೊಂಡರು. ಮೊದಲಿಗೆ ದ್ರೌಪದಿ, ಬಳಿಕ ಸಹದೇವ ನಕುಲ ಅರ್ಜುನ ಭೀಮಸೇನರು ಕ್ರಮವಾಗಿ ಶರೀರತ್ಯಾಗ ಮಾಡಿದರು. ಧರ್ಮರಾಜ ಸಶರೀರನಾಗಿ ಸ್ವರ್ಗಕ್ಕೆ ಹೋಗಿ ಅಲ್ಲಿ ಶರೀರತ್ಯಾಗ ಮಾಡಿ ಮೂಲರೂಪದಲ್ಲಿ ಸೇರಿಕೊಂಡ.

★★★

ಅರ್ಜುನ ಗೀತೋಪದೇಶವನ್ನು ನೆನೆದು ಕೃಷ್ಣವಿಯೋಗ ದುಃಖವನ್ನು ತಡೆದುಕೊಂಡ—

ವಾಸುದೇವಾಂಘ್ರ್ಯಭಿಧ್ಯಾನ ಪರಿಬೃಂಹಿತರಂಹಸಾ ।
ಭಕ್ತ್ಯಾ ನಿರ್ಮಥಿತಾಶೇಷ ಕಷಾಯ ಧಿಷಣೋಽರ್ಜುನಃ ॥ ೧ ॥
ಗೀತಂ ಭಗವತಾ ಜ್ಞಾನಂ ಯತ್ತತ್ ಸಂಗ್ರಾಮ ಮೂರ್ಧನಿ ।
ಕಾಲಕರ್ಮತಮೋರುದ್ಧಂ ಪುನರಧ್ಯಗಮದ್‌ವಿಭುಃ ॥ ೨ ॥

ವಿಶೋಕೋ ಬ್ರಹ್ಮಸಂಪತ್ತ್ಯಾ ಸಂಛಿನ್ನದ್ವೈತಸಂಶಯಃ ।
ಲೀನ ಪ್ರಕೃತಿ ನೈರ್ಗುಣ್ಯಾದಲಿಂಗತ್ವಾದಸಂಭವಃ ॥ ೩ ॥

ವಾಸುದೇವನ ಪಾದಧ್ಯಾನದಿಂದ ಭಕ್ತಿಯನ್ನೂ ಅದರಿಂದ ಬ್ರಹ್ಮಾಪರೋಕ್ಷವನ್ನೂ ಅರ್ಜುನ ಇಪ್ಪತ್ತು ಬ್ರಹ್ಮಕಲ್ಪಗಳಿಗಿಂತ ಹಿಂದೆಯೆ ಪಡೆದು ನಿಷಿದ್ಧ ವಿಷಯ ಭೋಗವನ್ನು ತ್ಯಜಿಸಿ ಜೀವಾಚ್ಛಾದಕ ಪರಮಾಚ್ಛಾದಕ ಪ್ರಕೃತಿ, ಸತ್ವಾದಿಗುಣ ಮತ್ತು ಲಿಂಗಶರೀರಗಳನ್ನು ದುರ್ಬಲಗೊಳಿಸಿಕೊಂಡು ಅದರಿಂದ, ಅಜ್ಞಾನಿಯಂತೆ ಅಪ್ರಾರಬ್ಧ ನಿಮಿತ್ತವಾಗಿ ಉಂಟಾಗಬಹುದಾದ ಉತ್ಪತ್ತಿ ಇಲ್ಲದವನಾಗಿ ಜ್ಞಾನ ಸಾಮರ್ಥ್ಯದಿಂದ ದುಷ್ಟಪ್ರಾರಬ್ಧದ ಹೆಚ್ಚಿನ ಪ್ರಭಾವದಿಂದಲೂ ಮುಕ್ತನಾಗಿದ್ದ. ಆದರೂ ಕುರುಕ್ಷೇತ್ರ ಯುದ್ಧಪ್ರಾರಂಭದಲ್ಲಿ ಶ್ರೀಕೃಷ್ಣ ಉಪದೇಶಿಸಿದ್ದ ಗೀತಾಜ್ಞಾನ ಈಗ ತತ್ಕಾಲದಲ್ಲಿ ಕಾಲಪ್ರಭಾವ, ದುಷ್ಟ ಪ್ರಾರಬ್ಧ ಹಾಗೂ ತಮೋಗುಣಗಳಿಂದ ಮರೆಯಾದುದರಿಂದ ಶೋಕಿಸಿದ. ಬಳಿಕ ಪ್ರಾರಬ್ಧ ಪುಣ್ಯದಿಂದ ತಿರುಗಿ ಅದನ್ನು ವ್ಯಕ್ತಮಾಡಿಕೊಂಡು ಬಂಧುಮರಣದ ಶೋಕವನ್ನು ಮರೆತ.

ಇಲ್ಲಿ 'ಅಶೇಷ ಕಷಾಯ'ವನ್ನು ಅಂದರೆ ಎಲ್ಲ ಕರ್ಮಗಳನ್ನು ಅರ್ಜುನ ಈಗ ನೀಗಿಕೊಂಡನೆಂದು ಹೇಳಿದಂತೆ ಕಾಣುತ್ತದೆ. ಆದರೆ ಅರ್ಜುನ ಅಪರೋಕ್ಷ ಜ್ಞಾನಿ ದೇವೇಂದ್ರ. ಇಪ್ಪತ್ತು ಬ್ರಹ್ಮಕಲ್ಪಗಳ ಹಿಂದೆಯೆ ಅಪರೋಕ್ಷ ಪಡೆದು ಕರ್ಮಕ್ಷಯ ಹೊಂದಿದವನು. ಈಗ ಕರ್ಮಕ್ಷಯ ಎನ್ನುವುದು ಸರಿಯಲ್ಲ.

'ಕಾಲಕರ್ಮತಮೋರುದ್ಧಂ' ಎಂದು ಕರ್ಮದಂತೆ ಸ್ವತಂತ್ರವಾಗಿ ಕಾಲ ತಮಸ್ಸುಗಳೂ ಜ್ಞಾನವನ್ನು ಪ್ರತಿಬಂಧಿಸುತ್ತವೆ ಎಂದುದೂ ಸರಿಯಲ್ಲ. ಕರ್ಮವೆ ಸ್ವತಂತ್ರವಾಗಿ ಪ್ರತಿಬಂಧಕ.

ಬ್ರಹ್ಮಸಂಪತ್ತಿ ದ್ವೈತಸಂಶಯ ಅಸಂಭವ ಮುಂತಾದ ಶಬ್ದಗಳೂ ಮೇಲು ನೋಟಕ್ಕೆ ಅಪಾರ್ಥಕಗಳು. ಗೀತೋಪದೇಶವನ್ನು ಕೇಳಿದ ಬಳಿಕ ಬ್ರಹ್ಮಜ್ಞಾನ ಬಂದಿತೆಂದೂ ಹೇಳಿದಂತೆ ಕಾಣುತ್ತದೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಹೀಗೆ—

ಜ್ಞಾನಿನಾಂ ಪ್ರಾರಬ್ಧಸ್ಯೈವ ವಿನಿರ್ಮಥನಂ । ಯೋಗ್ಯಸ್ಯೈವ ।
ಮಹತಾ ಕಾರಣೇನೈವ ಪ್ರಾರಬ್ಧಾನ್ಯಪಿ ಕಾನಿಚಿತ್ ।
ಕರ್ಮಾಣಿ ಕ್ಷಯಮಾಯಾಂತಿ ಬ್ರಹ್ಮದೃಷ್ಟಿಮತಃ ಕ್ವಚಿತ್ ।
ಇತಿ ಭವಿಷ್ಯತ್ಪರ್ವಣಿ । ತೇಷಾಮಪಿ ಕಾಮ್ಯಕರ್ಮಫಲ ದೃಷ್ಟೇಶ್ಚ ।
ತಮ ಆದಿ ನಿರೋಧಶ್ಚ ಪ್ರಾರಬ್ಧ ಕರ್ಮಣೈವ ।
ಜ್ಞಾನಾದಿ ವ್ಯಕ್ತಿರವ್ಯಕ್ತಿಃ ಸುಖದುಃಖಾದಿಕಂ ತಥಾ ।
ಸುದೃಷ್ಟ ಬ್ರಹ್ಮ ತತ್ವಾನಾಂ ಭವತ್ಯಾರಬ್ಧ ಕರ್ಮಣಾ ॥
ಇತಿ ಬ್ರಹ್ಮವೈವರ್ತೇ । ಬ್ರಹ್ಮಸಂಪತ್ತಿರವಗತಿಃ ।
ಭಗವಂತಂ ವಿನಾನ್ಯತ್ರ ಪ್ರವೃತ್ಯಾದಿ ಪ್ರಕಾಶನಂ ।
ಪ್ರಾರಬ್ಧಕರ್ಮಣೈವ ಸ್ಯಾತ್ ಕದಾಚಿದ್‌ಜ್ಞಾನಿನಾಮಪಿ ।
ತಾಂ ದ್ವೈತದೃಷ್ಟಿಂ ಮೇ ದೇವ ಛಿಂಧಿ ಜ್ಞಾನವರಾಸಿನಾ ॥

ಇತಿ ಬ್ರಾಹ್ಮೇ। ತದೇವ ಸಂಛಿನ್ನದ್ವೈತ ಸಂಶಯತ್ವಂ । ಲೀನ ಪ್ರಕೃತಿತ್ವಂ ನೈರ್ಗುಣ್ಯಂ ಚ ಲೀನಪ್ರಕೃತಿನೈರ್ಗುಣ್ಯಂ। ತಸ್ಮಾದಸೂಕ್ಷ್ಮ ಶರೀರತ್ವಾದ್ ಅನಾರಬ್ಧಕರ್ಮ ಮೂಲತ್ವಾತ್ ಅಸಂಭವಃ ಪುನರುತ್ಪತ್ತಿವರ್ಜಿತಃ । ಜ್ಞಾನೋದಯ ಕಾಲ ಏವೈವಂ ಭೂತಃ ಸನ್ ಪುನರಪ್ಯಧ್ಯಗಚ್ಛತ್ ।

ಪ್ರಕೃತಿಂ ಸ್ವಾತ್ಮಸಂಶ್ಲಿಷ್ಟಾಂ ಗುಣಾನ್ ಸತ್ವಾದಿಕಾನಪಿ ।
ಕರ್ಮಾಣಿ ಸೂಕ್ಷ್ಮದೇಹಂ ಚ ಜಾಯಮಾನಾ ಹರೇರ್ದೃಶಿಃ ।
ದಹೇದಥಾಪಿ ಸಂದಗ್ಧೇಂಧನವತ್ ತತ್ ಪುನಃಪುನಃ ।
ಯಾವದಾರಬ್ಧ ಕರ್ಮ ಸ್ಯಾತ್ ಆವಿರ್ವಾಪಿ ತಿರೋ ವ್ರಜೇತ್ ॥

ಇತಿ ಬ್ರಹ್ಮತರ್ಕೇ ।

'ನಿರ್ಮಥಿತಾಶೇಷಕಷಾಯಧಿಷಣಃ' ಎಂಬಲ್ಲಿ ಈಗ ಪ್ರಾರಬ್ಧ ಕರ್ಮಕ್ಕೇ ಉಪಮರ್ದರೂಪವಾದ ವಿಶೇಷ ನಾಶ ಉಕ್ತವಾಗಿದೆ. ಅಪ್ರಾರಬ್ಧ ಕರ್ಮ ಅಪರೋಕ್ಷ ಬಂದಾಗಲೇ ನಾಶವಾಗಿರುತ್ತದೆ. ಪ್ರಾರಬ್ಧಕರ್ಮಗಳಲ್ಲಿಯೂ ಉಪಮರ್ದಯೋಗ್ಯ ವಾದ ಪ್ರಬಲ ಪ್ರಾರಬ್ಧಕ್ಕೆ ಮಾತ್ರ ಜ್ಞಾನದಿಂದ ಉಪಮರ್ದ ರೂಪವಾದ ನಾಶ. ಹೀಗೆ ಸಂಕೋಚವನ್ನೇಕೆ ಮಾಡಬೇಕೆಂದರೆ ಭವಿಷ್ಯತ್ಪರ್ವದಲ್ಲಿ ಹೇಳಿದೆ— 'ಜ್ಞಾನಭಕ್ತ್ಯಾದ್ಯಭಿವೃದ್ಧಿರೂಪವಾದ ಮಹತ್ತಾದ ಕಾರಣದಿಂದ ಜ್ಞಾನಿಗಳಿಗೆ ಕೆಲವು ಪ್ರಬಲ ದುಷ್ಟಪ್ರಾರಬ್ಧಗಳು ಮಾತ್ರ ಉಪಮರ್ದ ಹೊಂದುತ್ತವೆ ಎಂದು. ಜ್ಞಾನಿಗಳಿಗೂ ಕಾಮ್ಯ ಮತ್ತು ನಿಷಿದ್ಧ ಕರ್ಮಫಲ ಕಂಡಿದೆಯಾದ್ದರಿಂದಲೂ ಹೀಗೆ ಸಂಕೋಚ ಮಾಡಬೇಕು.

ತಮಸ್ಸಿನಿಂದಲೂ ಕಾಲದಿಂದಲೂ ಆಗುವ ಜ್ಞಾನಾದಿ ಪ್ರತಿಬಂಧವೂ ಕೂಡ ಮುಖ್ಯವಾಗಿ ಪ್ರಾರಬ್ಧಕರ್ಮದಿಂದಲೆ ಆಗುತ್ತದೆ. ಏಕೆಂದರೆ 'ಜ್ಞಾನಾದಿಗಳ ಅಭಿವ್ಯಕ್ತಿ ಅನಭಿವ್ಯಕ್ತಿಗಳೂ ಸುಖದುಃಖಾದಿಗಳೂ ಚೆನ್ನಾಗಿ ಬ್ರಹ್ಮಾಪರೋಕ್ಷಹೊಂದಿದ ಜ್ಞಾನಿಗಳಿಗೆ ಪ್ರಾರಬ್ಧಕರ್ಮದಿಂದಲೆ ಆಗುತ್ತವೆ' ಎಂದು ಬ್ರಹ್ಮವೈವರ್ತದಲ್ಲಿ ಹೇಳಿದೆ.

ಬ್ರಹ್ಮಸಂಪತ್ತಿ ಎಂದರೆ ಪರಬ್ರಹ್ಮನ ಅಪರೋಕ್ಷಜ್ಞಾನ. ಹೊರತು ಬ್ರಹ್ಮಪ್ರಾಪ್ತಿಯಲ್ಲ. ದ್ವೈತಸಂಶಯವೆಂದರೆ ಭೇದಭ್ರಮವಲ್ಲ.

'ಭಗವಂತನ ಪೂಜೆಯಲ್ಲಿ ವಿನಿಯೋಗವಾಗದ ವಿಷಯಭೋಗದಲ್ಲಿ ಪ್ರವೃತ್ತಿ ಅದರ ಅನುಭವಗಳು ದ್ವೈತ ಸಂಶಯಗಳು. ಇವು ಕೆಲವೊಮ್ಮೆ ಜ್ಞಾನಿಗಳಿಗೂ ಪ್ರಾರಬ್ಧವಶದಿಂದ ಬರುತ್ತವೆ. ಈ ದ್ವೈತ ಸಂಶಯವನ್ನು ಅಪರೋಕ್ಷಜ್ಞಾನ ರೂಪವಾದ ಉತ್ತಮ ಕತ್ತಿಯಿಂದ ಕತ್ತರಿಸೆಂದು ಜಿಜ್ಞಾಸುವು ಪ್ರಾರ್ಥಿಸಬೇಕೆ'ಂದು ಬ್ರಹ್ಮಪುರಾಣದಲ್ಲಿದೆ.

ಹೀಗೆ ಭಗವದನುಸಂಧಾನರಹಿತವಾದ ವಿಷಯಭೋಗದ ನಿವೃತ್ತಿಯೆ ಸಂಛಿನ್ನ ದ್ವೈತಸಂಶಯತ್ವ.

ಲೀನಪ್ರಕೃತಿ ನೈರ್ಗುಣ್ಯವೆಂದರೆ ಲೀನಪ್ರಕೃತಿಯ ನೈರ್ಗುಣ್ಯವಲ್ಲ, ಭಾವ ಪ್ರಧಾನ ನಿರ್ದೇಶದಿಂದ ಲೀನಪ್ರಕೃತಿತ್ವ ಸಹಿತವಾದ ನಿರ್ಗುಣತ್ವ. ಅದರಿಂದಲೂ, ಲಿಂಗಶರೀರದಲ್ಲಿ ಶಕ್ತಿ ಇಲ್ಲದಿರುವುದರಿಂದಲೂ ಅಪರೋಕ್ಷ ಜ್ಞಾನಿಯು ಅನಾರಬ್ಧಕರ್ಮ ಪ್ರಯುಕ್ತವಾದ ಪುನರ್ಜನ್ಮವಿಲ್ಲದವನಾಗುತ್ತಾನೆ. ಪ್ರಾರಬ್ಧ ಪ್ರಯುಕ್ತ ಜನ್ಮ ಮಾತ್ರ ಬ್ರಹ್ಮಪ್ರಲಯಪರ್ಯಂತ ಅವನಿಗೂ ಇದ್ದೇ ಇರುತ್ತದೆ.

ಗೀತೋಪದೇಶ ಪಡೆದ ಬಳಿಕ ಅರ್ಜುನನಿಗೆ ಬ್ರಹ್ಮಾಪರೋಕ್ಷ ದ್ವೈತಸಂಶಯನಿವೃತ್ತಿ ಮುಂತಾದುವು ಲಭಿಸಿದುವು ಎಂದು ಅನ್ವಯಿಸಬಾರದು. ಹಿಂದೆ ಅಪರೋಕ್ಷ ಜ್ಞಾನೋದಯಕಾಲದಲ್ಲಿಯೆ ದ್ವೈತಸಂಶಯ ನಿವೃತ್ತ್ಯಾದಿಗಳು ಲಭಿಸಿವೆ. ಬಳಿಕ ಗೀತೋಪದೇಶ. ಅದೂ ಕಾಲಕರ್ಮತಮಸ್ಸುಗಳಿಂದ ಮರೆಯಾದಾಗ ಪ್ರಾರಬ್ಧ ಪುಣ್ಯದಿಂದ ಪುನಃ ಅದನ್ನು ವ್ಯಕ್ತಮಾಡಿಕೊಂಡನೆಂದರ್ಥ. ಏಕೆಂದರೆ ಬ್ರಹ್ಮತರ್ಕದಲ್ಲಿ ಹೀಗೆ ಹೇಳಿದೆ— ಜೀವಾಚ್ಛಾದಕಾದಿ ಪ್ರಕೃತಿಯನ್ನೂ ಸತ್ವಾದಿ ಗುಣಗಳನ್ನೂ ಅಪ್ರಾರಬ್ಧ ಕರ್ಮಗಳನ್ನೂ ಸೂಕ್ಷ್ಮಲಿಂಗಶರೀರವನ್ನೂ ಹರಿಯ ಅಪರೋಕ್ಷ ಜ್ಞಾನವು ಹುಟ್ಟುವಾಗಲೆ ದಹಿಸಿರುತ್ತದೆ. ಆದರೂ ಅದು ಅರ್ಧ ಸುಟ್ಟ ಇಂಧನದಂತೆ ಇದ್ದು ಪ್ರಾರಬ್ಧವಿರುವಷ್ಟು ಕಾಲ ಆಗಾಗ ತನ್ನ ಕಾರ್ಯ ಮಾಡಲು ಆವಿರ್ಭವಿಸುತ್ತದೆ ತಿರೋಧಾನ ಹೊಂದುತ್ತದೆ' ಎಂದು.

★★★

ಶ್ರೀಕೃಷ್ಣ ಪರಂಧಾಮಕ್ಕೆ ತೆರಳಿದನೆಂದು ವಾರ್ತೆಯನ್ನು ಕೇಳಿದ ಧರ್ಮರಾಜ

ಎಲ್ಲೆಡೆ ಕಲಿಪ್ರವೇಶವಾದುದನ್ನೂ ನೋಡಿ ಇನ್ನು ಭೂಮಿಯಲ್ಲಿ ತಾನಿರಕೂಡದು ತನ್ನ ಲೋಕಕ್ಕೆ ಮರಳಬೇಕೆಂದು ಸಂಕಲ್ಪಿಸಿದ. ಹೋಗುವ ಮುನ್ನ ಮಾಡಬೇಕಾಗಿದ್ದ ಕರ್ತವ್ಯ ಸಿಂಹಾಸನದಲ್ಲಿ ಪರೀಕ್ಷಿತನನ್ನು ಕೂಡಿಸುವುದು—

ಸ್ವರಾಟ್ ಪೌತ್ರಂ ವಿನೀತಂ ತಮಾತ್ಮನೋಽನವಮಂ ಗುಣೈಃ ।
ತೋಯನೀವ್ಯಾಃ ಪತಿಂ ಭೂಮೇರಭ್ಯಷಿಂಚದ್ ಗಜಾಹ್ವಯೇ ॥ ೭ ॥

ಚಕ್ರವರ್ತಿ ಧರ್ಮರಾಜ ವಿನಯಶಾಲಿಯೂ ತನಗೆ ಮೊಮ್ಮಗನೆನಿಸಲು ಗುಣಗಳಿಂದ ಯೋಗ್ಯನೂ ಆಗಿದ್ದ ಪರೀಕ್ಷಿತನನ್ನು ಸಮುದ್ರಪರ್ಯಂತ ಭೂಮಿಗೆ ಚಕ್ರವರ್ತಿಯನ್ನಾಗಿ ಹಸ್ತಿನಾವತಿಯಲ್ಲಿ ಪಟ್ಟಾಭಿಷೇಕಗೈದ.

ಇಲ್ಲಿ 'ಆತ್ಮನೋಽನವಮಂ ಗುಣೈಃ' ಧರ್ಮರಾಜನಿಗೆ ಗುಣಗಳಿಂದ ಕಡಿಮೆಯಲ್ಲದವನು ಪರೀಕ್ಷಿತ ಎಂದಂತೆ ಕಾಣುತ್ತದೆ. ಇದು ಅಸಂಗತ. ಪರೀಕ್ಷಿತ ಒಬ್ಬ ಚಕ್ರವರ್ತಿ. ಧರ್ಮರಾಜ ದೇವೋತ್ತಮನಾದ ಯಮ. ಅವನಿಗೆ ಪರೀಕ್ಷಿತ ಸಮನೆನಿಸುವುದು ಅಸಂಭವ. ಆದರಿಂದ ಹೀಗೆ ಹೇಳಬೇಕು—

ಪೌತ್ರತ್ವಯೋಗ್ಯತ್ವಮನವಮತ್ವಂ ।
ಇಂದ್ರಾದ್ಯುತ್ತಮತಾಽನ್ಯೇಷಾಂ ಸಮತಾ ವಾ ಸ್ವಕೇ ಕುಲೇ ।
ಉತ್ತಮತ್ವಮುಪಾಸ್ತ್ಯಾದಿಯೋಗ್ಯತಾ ವಾ ನಿಗದ್ಯತೇ ॥
ಇತಿ ಚ ಬ್ರಹ್ಮತರ್ಕೇ ।

'ಪರೀಕ್ಷಿತ ಧರ್ಮರಾಜನಿಗೆ ಕಡಿಮೆಯವನಲ್ಲ' ಎಂದರೆ ಅವನ ಮೊಮ್ಮಗನೆನಿಸಲು ಯೋಗ್ಯ ಎಂದಿಷ್ಟೆ ಅರ್ಥ.

ಮನುಷ್ಯರಾಗಿ ಅವತರಿಸಿದ ಇಂದ್ರಾದಿಗಳಿಗೆ ಅವರ ಕುಲದಲ್ಲಿ ಹುಟ್ಟಿದ ಅಲ್ಪರನ್ನು ಉತ್ತಮರೆಂದು ಅಥವಾ ಸಮಾನರೆಂದು ಹೇಳಿದರೆ ಅದರ ಅಭಿಪ್ರಾಯ, ಆ ಕುಲದಲ್ಲಿ ಬಂದ ಬೇರೆ ರಾಜರುಗಳಿಗಿಂತ ಭಗವದುಪಾಸನಾದಿ ಗುಣಗಳಲ್ಲಿ ಇವರು ಉತ್ತಮರೆನಿಸಿದ್ದು ಇಂದ್ರಾದಿಗಳ ವಂಶಜರೆನಿಸಲು ಯೋಗ್ಯರಾಗಿದ್ದಾರೆ ಎಂದು. ಹಾಗೆ ಬ್ರಹ್ಮತರ್ಕದಲ್ಲಿ ಹೇಳಿದೆ.

★★★

ಧರ್ಮರಾಜ ಮಹಾಪ್ರಸ್ಥಾನಕ್ಕೆ ಸಂಕಲ್ಪಿಸಿ ಮರಣಕಾಲದಲ್ಲಿ ಮಾಡಬೇಕಾದ ಲಯಚಿಂತನೆ ಮಾಡತೊಡಗಿದ—

ವಾಚಂ ಜುಹಾವ ಮನಸಿ ತತ್ಪ್ರಾಣ ಇತರೇ ಪರಂ ।
ಧೃತ್ವಾ ಹ್ಯಪಾನಂ ಸೋತ್ಸರ್ಗಂ ತತ್ಪರತ್ವೇ ಹ್ಯಜೋಹವೀತ್ ॥ ೧೦ ॥

ತ್ರಿತ್ವೇ ಹುತ್ವಾಥ ಪಂಚತ್ವಂ ತಚ್ಚೈಕತ್ವೇಽಜುಹೋನ್ಮುನಿಃ ।
ಸರ್ವಮಾತ್ಮನ್ಯಜುಹವೀತ್ ಬ್ರಹ್ಮಣ್ಯಾತ್ಮಾನಮವ್ಯಯೇ ॥ ೧೧ ॥

ಪ್ರಲಯಕಾಲದಲ್ಲಿ ವಾಗಿಂದ್ರಿಯಾಭಿಮಾನಿನಿ ಉಮೆ ಮನೋಭಿಮಾನಿ ರುದ್ರನಲ್ಲಿ ಲಯಹೊಂದುತ್ತಾಳೆ, ರುದ್ರ ಪ್ರಾಣಾಭಿಮಾನಿ ಪ್ರಾಣನಲ್ಲಿ, ಪ್ರಾಣ ತನ್ನದೇ ಆದ ಅಪಾನ ಎಂಬ ರೂಪದಲ್ಲಿ, ಅಪಾನ ವ್ಯಾನನಲ್ಲಿ, ಉದಾನ ಸಮಾನರು ಪ್ರಾಣಾಪಾನ ವ್ಯಾನರಲ್ಲಿ, ಐದೂ ಪ್ರಾಣರು ಪ್ರಾಣ ಎಂಬ ತಮ್ಮ ಮೂಲರೂಪದಲ್ಲಿ ಅಪ್ರಾಣನೂ ಹೃದಯದಲ್ಲಿರುವ ವಿಷ್ಣುರೂಪದಲ್ಲಿ, ಆ ವಿಷ್ಣುರೂಪವೂ ಸರ್ವವ್ಯಾಪ್ತವಾದ ವಿಷ್ಣುರೂಪದಲ್ಲಿ ಲಯ ಹೊಂದುವುದೆಂದು ಚಿಂತನ ಮಾಡಿದ.

ಪ್ರಾಣಮಪಾನೇ, ತಂ ವ್ಯಾನೇ, ಸಮಾನೋದಾನೌ ತೇಷು,
ತಾಂಶ್ಚ ಮೂಲಪ್ರಾಣೇ । ಆತ್ಮಾ ಹೃದಿಸ್ಥೋ ವಿಷ್ಣುಃ ಬ್ರಹ್ಮ ಸರ್ವಗತಂ ।
ಉಮಾ ವಾಗಾತ್ಮಿಕಾ ರುದ್ರಾಜ್ಜಾತಾ ಸಾ ಮನಆತ್ಮನಃ ।
ಪ್ರಾಣಾಹ್ವಯಾತ್ ಸ ವಾಯೋಶ್ಚ ಸೋಽಪಾನಾದಾತ್ಮರೂಪತಃ ।
ಸ್ವರೂಪಾದೇವ ಸ ವ್ಯಾನಾದುದಾನೋ ವ್ಯಾನತಸ್ತಥಾ ।
ತಸ್ಮಾತ್ ಸಮಾನೋ ವ್ಯಾನಾಚ್ಚಾಪ್ಯಪಾನಃ ಪ್ರಾಣ ಏವ ಚ ।
ಅಪಾನಾತ್ ತಿಸೃಭಿಶ್ಚಾಪಿ ಸಮಾನೋದಾನಯೋರ್ಜನಿಃ ।
ತ್ರಯಾಣಾಮಥ ಪಂಚಾನಾಮನಾದ್ವಾ ಪ್ರಾಣತೋ ಭವಃ ।
ಏಕಸ್ಯೈವ ಸ್ವರೂಪಾಣಿ ಪ್ರಾಣಸ್ಯೈತಾನಿ ಪಂಚ ಚ ।
ಸ ಚ ಪ್ರಾಣೋ ಹರೇರ್ಜಾತೋ ಹೃದಿಸ್ಥಾದಾತ್ಮನೋ ಮತಃ ।
ಸ ಆತ್ಮಾ ಬ್ರಹ್ಮಣೋ ಜಾತೋ ವಿಶ್ವರೂಪಾಜ್ಜನಾರ್ದನಾತ್ ।
ಏತೇಷಾಂ ಬ್ರಹ್ಮಪರ್ಯಂತಂ ವಿಲಯೋತ್ಪತ್ತಿಚಿಂತನಂ ।
ಬ್ರಹ್ಮಯಜ್ಞ ಇತಿ ಪ್ರೋಕ್ತಃ ಸರ್ವಸಂಸಾರ ಮೋಚಕಃ ।

ಇತಿ ನಾರಾಯಣಾಧ್ಯಾತ್ಮೇ ।

ಅಸ್ಯಾಸ್ಮಿನ್ ವಿಲಯೋ ಭವತೀತ್ಯೇವಂ ವಿಜ್ಞಾನಮಾಹುತಿಃ ।
ನತು ತತ್ಕಾಲ ವಿಲಯಸ್ತ್ವನ್ಯೋ ವಾ ತಸ್ಯ ದರ್ಶನಾತ್ ।

ಇತಿ ಬ್ರಹ್ಮತರ್ಕೇ ।

ಪ್ರಾಣನನ್ನು ಅಪಾನನಲ್ಲಿ, ಅಪಾನನನ್ನು ವ್ಯಾನನಲ್ಲಿ, ಸಮಾನ ಉದಾನರನ್ನು ಪ್ರಾಣ ಅಪಾನ ವ್ಯಾನರಲ್ಲಿ, ಆ ಐವರನ್ನೂ ಅವರಿಗೆ ಮೂಲಕಾರಣನಾದ ಮುಖ್ಯ ಪ್ರಾಣನಲ್ಲಿ ಲಯಗೊಳಿಸಿದನು, ಅಂದರೆ ಲಯಕಾಲದಲ್ಲಿ ಲಯಹೊಂದುವರೆಂದು

ಚಿಂತಿಸಿದನು. ಆತ್ಮ ಎಂದರೆ ಹೃದಯದಲ್ಲಿರುವ ವಿಷ್ಣುರೂಪ. ಬ್ರಹ್ಮ ಎಂದರೆ ಸರ್ವವ್ಯಾಪ್ತವಾದ ವಿಷ್ಣುರೂಪ.

ವಾಗಿಂದ್ರಿಯಾಭಿಮಾನಿನಿ ಉಮೆ ಮನೋಭಿಮಾನಿಯಾದ ರುದ್ರನಿಂದ ಜನಿಸಿದಳು. ಆ ರುದ್ರನು ಪ್ರಾಣನಾಮಕ ಮುಖ್ಯವಾಯುವಿನಿಂದ ಜನಿಸಿದ. ಪಂಚಪ್ರಾಣರ ಉತ್ಪತ್ತಿ ಕ್ರಮ ಐದು ಬಗೆಯಾಗಿದೆ. (೧) ಪ್ರಾಣನು ಸ್ವಸ್ವರೂಪನಾದ ಅಪಾನನಿಂದ, ಅಪಾನ ಸ್ವಸ್ವರೂಪನಾದ ವ್ಯಾನನಿಂದ, (೨) ಉದಾನ ವ್ಯಾನನಿಂದ, ಸಮಾನ ಉದಾನನಿಂದ, (೩) ಸಮಾನ ವ್ಯಾನನಿಂದ, ಉದಾನನೂ ಸಮಾನನಿಂದ, (೪) ಅಪಾನನೂ ಪ್ರಾಣನೂ ಅಪಾನನಿಂದ (೫) ಸಮಾನ ಉದಾನರು ಪ್ರಾಣಾಪಾನವ್ಯಾನ ಎಂಬ ಮೂರು ಮೂರ್ತಿಗಳಿಂದ—ಹೀಗೆ ಜನಿಸಿದರು. ಈ ದೇವತೆಗಳಿಗೆ ಯಾರಿಂದ ಉತ್ಪತ್ತಿಯೋ ಅವರಲ್ಲಿ ಲಯ. ಇನ್ನೊಂದು ರೀತಿಯ ಲಯ ಚಿಂತನೆ ಹೀಗೆ— ಪ್ರಾಣಾಪಾನ ವ್ಯಾನ ಈ ಮೂವರಿಗೆ ಪ್ರಾಣನಿಂದ ಉತ್ಪತ್ತಿ ಅವನಲ್ಲಿಯೆ ಲಯ ಅಥವಾ ಪ್ರಾಣಾದಿ ಐವರಿಗೂ ಮೂಲ ರೂಪಪ್ರಾಣನಿಂದ ಉತ್ಪತ್ತಿ ಅವನಲ್ಲಿಯೆ ಲಯ. ಐದೂ ಮುಖ್ಯಪ್ರಾಣನ ರೂಪಗಳೇ. ಆದರೂ ರೂಪಭೇದದಿಂದ ಜನ್ಯ ಜನಕಭಾವ. ಮುಖ್ಯಪ್ರಾಣ ಹೃದಯದಲ್ಲಿರುವ ವಿಷ್ಣುರೂಪದಿಂದ ಜನಿಸಿದ ಅವನಿಗೆ ಅದರಲ್ಲಿ ಲಯ. ಹೃದಯಾಂತರ್ಗತ ವಿಷ್ಣುರೂಪ ಸರ್ವವ್ಯಾಪಕವಾದ ವಿಷ್ಣುರೂಪದಿಂದ ವ್ಯಕ್ತವಾಗಿದೆ. ಅದರಿಂದ ಅಲ್ಲಿಯೆ ಲಯ. ವಾಗಾದಿ ಬ್ರಹ್ಮಪರ್ಯಂತ ದೇವತೆಗಳಿಗೆ ಹೀಗೆ ಉತ್ಪತ್ತಿ ಲಯವೆಂದು ಧ್ಯಾನಿಸುವುದೇ ಬ್ರಹ್ಮಯಜ್ಞವೆನಿಸುತ್ತದೆ. ಇದು ಸರ್ವಸಂಸಾರ ಮೋಚಕ ಎಂದು ನಾರಾಯಣಾಧ್ಯಾತ್ಮದಲ್ಲಿ ಹೇಳಿದೆ. ಲಯಕಾಲದಲ್ಲಿ ಕೆಳಗಿನ ದೇವತೆಗಳಿಗೆ ಉತ್ತಮರಲ್ಲಿ ಲಯವಾಗುವುದು ಎಂದು ತಿಳಿಯುವುದೇ 'ಹೋಮಿಸಿದನೆಂ' ಬುದರ ಅಭಿಪ್ರಾಯ. ಏಕೆಂದರೆ ಧರ್ಮರಾಜ ಲಯವನ್ನು ಚಿಂತಿಸುತ್ತಿದ್ದಾಗ ದೇವತೆಗಳಿಗೆ ಲಯವಾಗಲಿಲ್ಲ. ಅಥವಾ ಅಗ್ನಿಯಲ್ಲಿ ಹೋಮ ನಡೆಯಲೂ ಇಲ್ಲ. ಹೋಮವಾದ ಅನಂತರವೂ ಈ ದೇವತೆಗಳು ದೃಶ್ಯರಾಗಿಯೆ ಇದ್ದರು ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

★★★

ಧರ್ಮರಾಜ ಉತ್ತರದಿಕ್ಕಿನಲ್ಲಿ ಮಹಾಪ್ರಸ್ಥಾನ ಕೈಗೊಂಡ—

ಉದೀಚೀಂ ಪ್ರವಿವೇಶಾಶಾಂ ಗತಪೂರ್ವಾಂ ಮಹಾತ್ಮಭಿಃ ।
ಹೃದಿ ಬ್ರಹ್ಮ ಪರಂ ಧ್ಯಾಯನ್ ನಾವರ್ತೇತ ಗತೋ ಯತಃ ॥ ೧೩ ॥

ಹಿಂದೆ ಮಹಾತ್ಮರು ನಡೆದ ಉತ್ತರದಿಕ್ಕಿನ ವೀರಮಾರ್ಗದಲ್ಲೇ ಧರ್ಮರಾಜ ಹೃದಯದಲ್ಲಿ ಪರಬ್ರಹ್ಮನನ್ನು ಧ್ಯಾನಿಸುತ್ತ ನಡೆದ. ಆ ಮಾರ್ಗದಲ್ಲಿ ಹೋದವರು ಮರಳಿ ಮನೆಗೆ ಬರುವುದಿಲ್ಲ.

'ಆ ಮಾರ್ಗದಲ್ಲಿ ಹೋದವರು ತಿರುಗಿ ಸಂಸಾರಕ್ಕೆ ಬರುವುದಿಲ್ಲ' ಎಂದೂ ಈ ಶ್ಲೋಕದಿಂದ ಅರ್ಥ ಹೊರಡಬಹುದು. ಹಾಗೇ ಬೇರೆ ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ.[೧] ವಸ್ತುತಃ ಇದೇನೂ ಮುಕ್ತಿಮಾರ್ಗವಲ್ಲ, ಶರೀರತ್ಯಾಗದ ಒಂದು ವಿಧಾನವಷ್ಟೆ. ಅದರಿಂದ ಮುಂದೆ ಅವರವರ ಕರ್ಮಾನುಸಾರ ಆಯಾ ಲೋಕಪ್ರಾಪ್ತಿಯಾಗುವುದು—

ನಾವರ್ತೇತ ವೀರಗತಿಂ ।

'ನಾವರ್ತೇತ ಯತೋ ಗತಃ' ಎಂದರೆ ಮನೆಗೆ ಹಿಂತಿರುಗಿ ಬರುವುದಿಲ್ಲ ಎಂದು ನಿಶ್ಚಯ ಮಾಡಿಕೊಂಡು ಶರೀರ ಪಾತವಾಗುವವರೆಗೂ ನಿಲ್ಲದೆ ನಡೆಯುತ್ತಲೇ ಇರುವ ವೀರಮಾರ್ಗ' ಎಂದರ್ಥ.

★★★

ಧರ್ಮರಾಜನನ್ನು ಅನುಸರಿಸಿ ಉಳಿದ ಪಾಂಡವರೂ ಮಹಾಪ್ರಸ್ಥಾನ ಕೈಗೊಂಡರು—

ತೇ ಸಾಧುಕೃತ ಸರ್ವಾರ್ಥಾ ಜ್ಞಾತ್ವಾಽತ್ಯಂತಿಕಮಾತ್ಮನಃ ।
ಮನಸಾ ಧಾರಯಾಮಾಸುರ್ವೈಕುಂಠ ಚರಣಾಂಬುಜಂ ॥ ೧೫ ॥

ಪಾಂಡವರು ಚೆನ್ನಾಗಿ ಎಲ್ಲ ಪುರುಷಾರ್ಥಗಳನ್ನು ಸಾಧಿಸಿಕೊಂಡವರು. ಪರಮಾತ್ಮನ ಸ್ವರೂಪವೆ ಸಂಪೂರ್ಣ ಶ್ರೇಯಃ ಸಾಧನವೆಂದು ತಿಳಿದು ಅವನ ಪಾದಕಮಲವನ್ನು ಮನಸಿನಿಂದ ಧ್ಯಾನಿಸಿದರು.

ಆತ್ಮನಃ ಸ್ವರೂಪಮಾತ್ಯಂತಿಕಂ ಜ್ಞಾತ್ವಾ ।

ಪರಮಾತ್ಮನ ಸ್ವರೂಪವನ್ನು ಸಂಪೂರ್ಣಶ್ರೇಯಃ ಸಾಧನವೆಂದು ತಿಳಿದು.

ಆತ್ಮನಃ ಎಂದರೆ ಪರಮಾತ್ಮನ ಎಂದರ್ಥ. ಸ್ವರೂಪಂ ಎಂದು ಅಧ್ಯಾಹಾರ ಎಂದು ಇದರಿಂದ ಸೂಚಿತವಾಗುತ್ತದೆ.

ಬೇರೆ ವ್ಯಾಖ್ಯಾನಕಾರರು 'ಆತ್ಮನಃ ಆತ್ಯಂತಿಕಂ' ಎಂದರೆ, ತಮಗೆ ಅತ್ಯಂತ ಶ್ರೇಯಃಸಾಧನವೆಂದು ಅನ್ವಯಿಸಿದ್ದಾರೆ. ಎಲ್ಲರಿಗೂ ಶ್ರೇಯಃಸಾಧನವಾಗಿರುವಾಗ 'ಆತ್ಮನಃ' ತಮಗೆ ಎಂಬ ಶಬ್ದ ವ್ಯರ್ಥ. ಅದರಿಂದ 'ಸರ್ವಮಾತ್ಮನ್ಯಜುಹವೀತ್'

---

೧. ಉದೀಚೀಂ ಉತ್ತರಾಂ ದಿಶಂ ಪ್ರವಿವೇಶ । 'ಏಷಾ ವೈ ದೇವ ಮನುಷ್ಯಾಣಾಂ ಶಾಂತಾ ದಿಕ್' ಇತಿ ಶ್ರುತೇಃ ಶಾಂತತ್ವಾತ್ ನ ತತ್ರ ಕಾಲಸ್ಯ ಬಾಧಕತ್ವಂ । ಅತ ಏವ ಮಹಾತ್ಮಭಿರ್ಗತ ಪೂರ್ವಾಂ। ಅತ ಏವ ಯಾಂ ದಿಶಂ ಗತಃ ಪುನಃ ಸಂಸಾರೇ ನಾವರ್ತೇತ ।

-ಗಿರಿಧರಃ

ಎಂದು ಧರ್ಮರಾಜ ಲಯಚಿಂತನ ಮಾಡಿದಂತೆ ತಮ್ಮಂದಿರೂ ಆತ್ಮನಲ್ಲಿ ಲಯ ಚಿಂತನ ಮಾಡಿದರೆಂದು ಸೂಚಿಸುತ್ತ ಆತ್ಮ ಪದ ಸಾರ್ಥಕವಾಗುವುದು ಶ್ರೀಮದಾಚಾರ್ಯರ ವ್ಯಾಖ್ಯಾನದಲ್ಲಿಯೆ.

ಇತಿ ಪ್ರಥಮಸ್ಕಂಧೇ ಪಂಚದಶೋಽಧ್ಯಾಯಃ

ಹದಿನಾರನೇ ಅಧ್ಯಾಯ

ಅಧ್ಯಾಯ ಸಾರಾಂಶ

ಮುಂದೆ ಪರೀಕ್ಷಿತ ರಾಜ್ಯಭಾರ ಮಾಡಿದ. ಉತ್ತರನ ಮಗಳಾದ ಇರಾವತಿಯನ್ನು ಮದುವೆಯಾಗಿ ಅವಳಲ್ಲಿ ಜನಮೇಜಯ ಮುಂತಾದ ನಾಲ್ವರು ಮಕ್ಕಳನ್ನು ಪಡೆದು ಮೂರು ಅಶ್ವಮೇಧಯಾಗ ಮಾಡಿದ. ಒಮ್ಮೆ ದಿಗ್ವಿಜಯ ಮಾಡುತ್ತಿದ್ದಾಗ ಕಲಿಯನ್ನು ನಿಗ್ರಹಿಸಿದ.

ಶೌನಕರು : ಈ ಕಲಿನಿಗ್ರಹದ ಕಥೆ ಭಗವಂತನ ಅಥವಾ ಭಗವದ್ಭಕ್ತರ ಕಥೆಯಾಗಿರುವುದಾದರೆ ಆ ಕಥೆಯನ್ನೂ ಹೇಳಿರಿ. ನಮ್ಮ ಆಯುಷ್ಯ ಅಲ್ಪವೆ ಆದರೂ ಈ ಸತ್ರಯಾಗ ಮುಗಿವವರೆಗೆ ನಾವು ಬದುಕಿಯೇ ಇರುತ್ತೇವೆ. ಏಕೆಂದರೆ ಈ ಯಜ್ಞದಲ್ಲಿ ಪಶುವನ್ನು ಹೊರತು ಬೇರೆ ಯಾರನ್ನೂ ಕೊಲ್ಲದಿರಲು ಮೃತ್ಯುವಿಗೆ ನಿಯಾಮಕನಾದ ನರಸಿಂಹನನ್ನು ಕರೆಸಿಕೊಂಡಿದ್ದೇವೆ. ಅದರಿಂದ ಯಥೇಚ್ಛ ಹರಿಕಥಾಮೃತಪಾನ ಮಾಡಬಲ್ಲೆವು.

ಸೂತರು : ಕಲಿಯುಗದಲ್ಲಿ ಕಲಿಯನ್ನು ಪೂರ್ತಿ ನಾಶಮಾಡುವುದು ಶಕ್ಯವಿಲ್ಲವಾದರೂ ಸ್ವಲ್ಪಮಟ್ಟಿಗೆ ಅವನ ಪ್ರಭಾವವನ್ನು ಕಡಿಮೆಮಾಡುವ ಅವಕಾಶವಿದೆಂದು ಪರೀಕ್ಷಿತ ಉತ್ಸಾಹದಿಂದ ಅವನನ್ನು ಹುಡುಕತೊಡಗಿದ. ಒಂದುಕಡೆ ಧರ್ಮಾಭಿಮಾನಿ ಯಮ ಎತ್ತಿನ ರೂಪದಿಂದಲೂ ಭೂದೇವಿ ಗೋರೂಪದಿಂದಲೂ ನಿಂತಿದ್ದಾರೆ. ಹಸು ಕಣ್ಣೀರಿಡುತ್ತಿದೆ. ಎತ್ತು ಮೂರು ಕಾಲು ಮುರಿದುಕೊಂಡು ಒಂಟಿಕಾಲಲ್ಲಿ ನಿಂತಿದೆ. ರಾಜವೇಷ ಧರಿಸಿದ ಕಲಿ ಕಾಲಿಂದ ಎತ್ತು ಹಸುಗಳೆರಡನ್ನೂ ಒದೆಯುತ್ತಿದ್ದಾನೆ. ಈ ದೃಶ್ಯವನ್ನು ಪರೀಕ್ಷಿತ ಕಂಡ. ಹಸುಎತ್ತುಗಳು ಹೀಗೆ ಮಾತನಾಡಿಕೊಳ್ಳುತ್ತಿದ್ದುವು.

ಧರ್ಮ: ದೇವಿ, ನೀನೇಕೆ ಕಣ್ಣೀರು ಸುರಿಸುತ್ತಿರುವೆ? ನಾನು ಒಂಟಿಕಾಲಲ್ಲಿ ಕುಂಟುತ್ತಿರುವೆನೆಂದೆ? ಲೋಕದಲ್ಲಿ ಅಧರ್ಮ ತಾಂಡವವಾಡುತ್ತಿದೆ ಎಂದೆ? ಶ್ರೀಕೃಷ್ಣ ಪರಂಧಾಮಕ್ಕೆ ತೆರಳಿದನೆಂದೆ?

ಭೂದೇವಿ: ಧರ್ಮರಾಜ, ನೀನಿಷ್ಟರವರೆಗೆ ನಾಲ್ಕು ಕಾಲುಗಳಿಂದ

ನಡೆಯುತ್ತಿದ್ದೆ. ಅದು ಶ್ರೀಕೃಷ್ಣನ ದಯದಿಂದ. ಸಕಲ ಸದ್ಗುಣನಿಧಿಯಾದ ಆ ಶ್ರೀನಿವಾಸ ನಿಲ್ಲವೆಂದು ಈಗ ಲೋಕದಲ್ಲೆಲ್ಲ ಪಾಪಾಭಿಮಾನಿ ಕಲಿ ಸಂಚರಿಸುತ್ತಿದ್ದಾನೆ. ಅದಕ್ಕೆ ವ್ಯಥೆಪಡುತ್ತಿದ್ದೇನೆ. ನನ್ನ ತಪಸ್ಸಿನ ಫಲವಾಗಿ ಇಂದಿನವರೆಗೆ ಶ್ರೀಕೃಷ್ಣನ ಪಾದಾರವಿಂದಗಳ ಹೆಜ್ಜೆಯ ಗುರುತು ನನ್ನ ಮೈಮೇಲೆಲ್ಲ ಶೋಭಿಸುತ್ತಿತ್ತು. ನಾನು ಅಹಂಕಾರ ಪಟ್ಟೆ. ಅದಕ್ಕೆ ಈಗ ಅವನು ನನ್ನನ್ನು ತೊರೆದು ಹೋಗಿದ್ದಾನೆ. ಅವನ ಪಾದಸ್ಪರ್ಶದಿಂದ ನನಗೆ ಮೈನವಿರೇಳುತ್ತಿತ್ತು. ಇಂಥ ಪರಮಪುರುಷನ ವಿರಹವನ್ನು ಯಾವ ಸ್ತ್ರೀ ತಾನೆ ಸಹಿಸಬಲ್ಲಳು? ಹೀಗೆ ಧರ್ಮ-ಭೂದೇವಿಯರ ಸಂವಾದ ಸಾಗುತ್ತಿತ್ತು. ಆಗ ಪರೀಕ್ಷಿತ ಬಂದ.

★★★

ಪರೀಕ್ಷಿದ್ರಾಜ ದಿಗ್ವಿಜಯ ಸಂಚಾರ ಮಾಡುತ್ತಿದ್ದಾಗ ಒಂದೆಡೆ ಕಲಿ ಶೂದ್ರರಾಜನ ವೇಷದಲ್ಲಿ ಗೋವನ್ನು ಒದೆಯುತ್ತಿದ್ದ ದೃಶ್ಯವನ್ನು ಕಂಡ. ಒಡನೆ ಕಲಿಯನ್ನು ನಿಗ್ರಹಿಸಿದ ಎಂದು ಸೂತರು ಹೇಳಿದಾಗ ಶೌನಕರು ಕೇಳುತ್ತಾರೆ—

ಕಸ್ಯ ಹೇತೋರ್ನಿಜಗ್ರಾಹ ಕಲಿಂ ದಿಗ್ವಿಜಯೇ ನೃಪಃ ।
ನೃದೇವಚಿಹ್ನಧೃಕ್ ಶೂದ್ರಃ ಕೋಽಸೌ ಗಾಂ ಯಃ ಪದಾಽಹನತ್ ॥ ೫ ॥

ಪರೀಕ್ಷಿದ್ರಾಜ ದಿಗ್ವಿಜಯ ಕಾಲದಲ್ಲಿ ಕಲಿಯನ್ನೇಕೆ ನಿಗ್ರಹಿಸಿದ? ರಾಜನ ವೇಷ ಧರಿಸಿ ಗೋವನ್ನು ಒದೆಯುವ ಈ ಶೂದ್ರರೂಪನಾದ ಕಲಿಯಂತೂ ಬಲು ಕೆಟ್ಟವನು.

ಶ್ಲೋಕದಲ್ಲಿ 'ಕೋಽಸೌ' 'ಅವನು ಯಾರು' ಎಂದು ಪ್ರಶ್ನೆ ಮಾಡಿದಂತಿದೆ. ಆದರೆ ಕಲಿ ಎಂದು ಹೇಳಿಯಾಗಿದೆ. ಪ್ರಶ್ನೆಗೆ ಅವಕಾಶವಿಲ್ಲ. ಅದರಿಂದ,

ಕೋಽಸಾವಿತ್ಯಾಕ್ಷೇಪಃ । ಕಲಿಮಿತ್ಯುಕ್ತತ್ವಾತ್ ।

ಯಾರು ಅವನು ಎಂಬುದು ಪ್ರಶ್ನೆಯಲ್ಲ ಆಕ್ಷೇಪ. ಏಕೆಂದರೆ ಅವನು ಕಲಿ ಎಂದು ಹೇಳಿರುವುದರಿಂದ ತಿರುಗಿ ಯಾರು ಎಂದು ಪ್ರಶ್ನೆ ಕೂಡುವುದಿಲ್ಲ.

ಇಲ್ಲಿ 'ಯಾರು' ಎಂದರೆ ಯಾವ ಸಜ್ಜನ? ಯಾವ ಸಜ್ಜನನೂ ಅಲ್ಲ, ದುರ್ಜನ ಎಂದು ಆಕ್ಷೇಪಾರ್ಥದಲ್ಲಿ 'ಕಃ' ಎಂದಿದೆ.

★★★

ಪರೀಕ್ಷಿದ್ರಾಜನ ಕಲಿನಿಗ್ರಹ ಕಥೆಯನ್ನು ಹೇಳಿರೆಂದು ಶೌನಕರು ಸೂತರಲ್ಲಿ ಕೇಳುತ್ತಾರೆ—

ತತ್ ಕಥ್ಯತಾಂ ಮಹಾಭಾಗ ಯದಿ ವಿಷ್ಣುಕಥಾಶ್ರಯಂ ।
ಅಥ ವಾಽಸ್ಯ ಪದಾಂಭೋಜಮಕರಂದಲಿಹಾಂ ಸತಾಂ ॥ ೬ ॥

ಸೂತರೆ, ಕಲಿನಿಗ್ರಹಕಥೆ ವಿಷ್ಣುಕಥೆಯನ್ನು ಒಳಗೊಂಡಿದ್ದರೆ ಅಥವಾ ವಿಷ್ಣುವಿನ ಪಾದಕಮಲಮಕರಂದ ಪಾನಮಾಡುವವರ ಕಥೆಯನ್ನು ಒಳಗೊಂಡಿದ್ದರೆ ಹೇಳಿರಿ.

ಇಲ್ಲಿ ಒಂದು 'ಯದಿ' ಶಬ್ದ 'ವಿಷ್ಣುಕಥೆಯನ್ನೊಳಗೊಂಡಿದ್ದರೆ' ಎಂಬಲ್ಲಿ 'ರೆ' ಎನ್ನುತ್ತ ಅನ್ವಯಹೊಂದಿದೆ. ವಿಷ್ಣುಭಕ್ತರ ಕತೆಯನ್ನೊಳಗೊಂಡಿದ್ದರೆ ಎಂದು ಇನ್ನೊಂದು 'ಯದಿ' ಶಬ್ದ ಬೇಕು. 'ಅಥವಾ' ಎಂಬಲ್ಲಿ ಆ ಶಬ್ದದಿಂದ ಪೂರ್ತಿಯಾಗಿ ವಿಕಲ್ಪ ವಿವಕ್ಷಿತವೆನ್ನುವುದು ಯುಕ್ತವಲ್ಲ. ಅಥ ಎಂಬುದರಿಂದಲೆ ಪಕ್ಷಾಂತರವೆಂದು ಲಭ್ಯವಾಗುತ್ತದೆ. 'ವಾ' ಶಬ್ದ ವ್ಯರ್ಥವಾಗುತ್ತದೆ. ಆದರಿಂದ ಹೀಗೆ ಹೇಳಬೇಕು—

ಅಥ ಪಕ್ಷಾಂತರೇ । ವಾ ಯದಿ ।

ಅಥವಾ ಎಂಬಲ್ಲಿ 'ಅಥ' ಎಂಬುದು ಪಕ್ಷಾಂತರ ಎಂಬ ಅರ್ಥದಲ್ಲಿಯೂ 'ವಾ' ಶಬ್ದ 'ಯದಿ' ಎಂಬರ್ಥದಲ್ಲಿಯೂ ಇದೆ.

★★★

ವಿಷ್ಣುವೈಷ್ಣವರ ಕಥೆಯನ್ನೊಳಗೊಂಡಿದ್ದರೆ ಮಾತ್ರ ಮಾತು ಕೇಳಲು ಯೋಗ್ಯ. ಇಲ್ಲದಿದ್ದರೆ ನರಕಾದ್ಯನರ್ಥಕರವಾಗುವುದು ಎಂದು ಶೌನಕರು ಸೂತರಿಗೆ ಹೇಳುತ್ತಾರೆ—

ಕಿಮನ್ಯೈರಸದಾಲಾಪೈರಾಯುಷೋ ಯದಸದ್ವ್ಯಯಃ ।
ಕ್ಷುದ್ರಾಯುಷಾಂ ನೃಣಾಮಂಗ ಮರ್ತ್ಯಾನಾಮೃತಮಿಚ್ಛತಾಂ ॥ ೭ ॥

ವಿಷ್ಣುವೈಷ್ಣವರ ಕಥೆಯಿಲ್ಲದಿದ್ದರೆ ಕೆಟ್ಟ ನರಕಾದಿಗಳ ಸಾಧನೆಗಾಗಿ ಆಯುಷ್ಯವನ್ನು ಕಳೆದಂತಾಗುವುದು. ಅಲ್ಪಾಯುಷಿಗಳಾದರೂ ತತ್ವಜ್ಞಾನವನ್ನು ಬಯಸುವ ಸಜ್ಜನರಿಗೆ ಬೇರೆ ಕೆಟ್ಟ ಮಾತುಗಳಿಂದೇನು ಪ್ರಯೋಜನ?

ಈ ಶ್ಲೋಕದಲ್ಲಿ 'ಆಯುಷೋ ಯದಸದ್ವ್ಯಯಃ' ಎಂಬಲ್ಲಿ 'ಅನ್ಯಥಾ ಚೇತ್' ವಿಷ್ಣುವೈಷ್ಣವರ ಕಥೆ ಇಲ್ಲದಿದ್ದಲ್ಲಿ ಎಂದು ಅಧ್ಯಾಹಾರ ಬೇಕು. ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ವಾಕಾರಕ್ಕೆ ಯದ್ಯರ್ಥ ಇದೆ ಎನ್ನಲು ಪ್ರಮಾಣವೂ ಬೇಕು, ಅದನ್ನೇ ಹೇಳುತ್ತಾರೆ—

ಅನ್ಯಥಾ ಚೇದಾಯುಷೋಽಸದ್ವ್ಯಯ ಇತ್ಯರ್ಥಃ ।
ಯದ್ಯರ್ಥೇ ಚ ವಿಕಲ್ಪಾರ್ಥೇ ವಾಶಬ್ದಃ ಸಮುದೀರ್ಯತೇ ।
ಇತಿ ನಾಮಮಹೋದಧೌ ।

ವಿಷ್ಣುವೈಷ್ಣವರ ಕಥೆ ಇಲ್ಲದಿದ್ದರೆ ಆಯುಷ್ಯವನ್ನು ನರಕಾದಿ ಅನರ್ಥ ಸಂಪಾದನೆಗಾಗಿ ಕಳೆದಂತಾಗುವುದು ಎಂದರ್ಥ. 'ಯದಿ' ಎಂಬ ಅರ್ಥದಲ್ಲಿಯೂ ವಿಕಲ್ಪಾರ್ಥದಲ್ಲಿಯೂ ವಾಶಬ್ದ ಪ್ರಯೋಗವಿದೆ ಎಂದು ನಾಮಮಹೋದಧಿ ಗ್ರಂಥ ಹೇಳಿದೆ.

★★★

ಭಾಗವತದಂಥ ಮಹಾಪುರಾಣವನ್ನು ಕೇಳಲು ಅಲ್ಪಾಯುಷಿಗಳಿಗೆ ಅಸಾಧ್ಯ ವೆಂದು ಭಾವಿಸಬೇಡಿ. ನಾವು ಪ್ರಾರಂಭಿಸಿರುವ ಈ ದೀರ್ಘಸತ್ರ ಮುಗಿವವರೆಗೂ ನಾವು ನಿಶ್ಚಿತವಾಗಿ ಬದುಕಿಯೆ ಇರುತ್ತೇವೆ. ಅದರಿಂದ ಭಾಗವತ ಹೇಳಿರಿ ಎಂದು ಶೌನಕರು ಸೂತರಲ್ಲಿ ಕೇಳುತ್ತಾರೆ—

ಏತದರ್ಥಂ ಹಿ ಭಗವಾನಾಹೂತಃ ಪರಮರ್ಷಿಭಿಃ ।
ಅಹೋ ನೃಲೋಕೇ ಪೀಯೇತ ಹರಿಲೀಲಾಮೃತಂ ವಚಃ ॥ ೯ ॥

ಹರಿಲೀಲಾಮೃತ ರೂಪವಾದ ಭಾಗವತವನ್ನು ಮನುಷ್ಯಲೋಕದಲ್ಲಿ ಪಾನ ಮಾಡಲೆಂದೇ ಮಹರ್ಷಿಗಳು ಮರಣನಿಯಾಮಕನಾದ ನರಸಿಂಹನನ್ನು ಇಲ್ಲಿಗೆ ಕರೆಸಿಕೊಂಡಿದ್ದಾರೆ.

ಯಜ್ಞದಲ್ಲಿ ಪಶುಮಾರಣಕ್ಕಾಗಿ ನರಸಿಂಹನನ್ನು ಮಹರ್ಷಿಗಳು ಸತ್ರಕ್ಕೆ ಆಹ್ವಾನಿಸಿದ್ದು ನಿಜವೆ. ಆದರೆ ಅದೇ ಮುಖ್ಯ ಉದ್ದೇಶವಲ್ಲ. ಮೃತ್ಯುನಿಯಾಮಕನಾದ ನರಸಿಂಹ ನಾವು ಈ ಸತ್ರಕಾಲದಲ್ಲಿ ಭಾಗವತ ಶ್ರವಣಮಾಡುವಂತೆ ನಮ್ಮ ಮೃತ್ಯುವನ್ನು ದೂರಮಾಡಲಿ ಎಂಬುದು ಮುಖ್ಯಉದ್ದೇಶ. ಅವನಿರುವಷ್ಟು ಕಾಲ ನಮಗೆ ಮರಣ ಭಯವಿಲ್ಲ. ಆದರಿಂದ ನಿಃಶಂಕೆಯಿಂದ ಭಾಗವತವನ್ನು ನೀವು ನಮಗೆ ಹೇಳಬೇಕು ಎನ್ನುತ್ತಿದ್ದಾರೆ ಶೌನಕರು. ಇಲ್ಲಿ ಶ್ಲೋಕದಲ್ಲಿ ಪೂರ್ವಾರ್ಧ ಉತ್ತರಾರ್ಧಗಳಿಗೆ ಸಂಬಂಧ ಕಾಣುವುದಿಲ್ಲ. ಅದಕ್ಕೆ ಇತಿಶಬ್ದ ಅಧ್ಯಾಹಾರ ಮಾಡಬೇಕು—

ಏತದರ್ಥಂ ಹಿ ಮೃತ್ಯುರುಪಹೂತಃ, ಅಹೋ ನೃಲೋಕೇ ಪೀಯೇತೇತಿ ।

ಮನುಷ್ಯಲೋಕದಲ್ಲಿ ಹರಿಲೀಲಾಮೃತವನ್ನು ತಾವು ಪಾನಮಾಡುವಂತಾಗಲಿ 'ಇತಿ' 'ಎಂದು' ಈ ಉದ್ದೇಶದಿಂದ ನರಸಿಂಹನನ್ನು ಇಲ್ಲಿಗೆ ಕರೆಸಿಕೊಂಡಿದ್ದಾರೆ ಮಹರ್ಷಿಗಳು.

★★★

ಪರೀಕ್ಷಿದ್ರಾಜ ದಿಗ್ವಿಜಯಕಾಲದಲ್ಲಿ ಪಾಂಡವರ ಮೇಲಿನ ಶ್ರೀಕೃಷ್ಣಾನುಗ್ರಹ ವನ್ನು ಜನರು ಹೊಗಳುತ್ತಿದ್ದುದನ್ನು ಕೇಳಿ ಕೃಷ್ಣನಲ್ಲಿ ಇನ್ನೂ ಹೆಚ್ಚು ಭಕ್ತಿ ಮಾಡಿದ.

ಸಾರಥ್ಯ ಪಾರ್ಷದ ಸೇವನ ಸಖ್ಯ ದೌತ್ಯ
ವೀರಾಸನಾನುಗಮನ ಸ್ತವನ ಪ್ರಣಾಮೈಃ ।
ಸ್ನಿಗ್ಧೇಷು ಪಾಂಡುಷು ಜಗತ್ಪ್ರಣತಸ್ಯ ವಿಷ್ಣೋ-
ರ್ಭಕ್ತಿಂ ಕರೋತಿ ನೃಪತಿಶ್ಚರಣಾರವಿಂದೇ ॥ ೧೭ ॥

ಸ್ವತಃ ಭಕ್ತರಾದ ಪಾಂಡವರ ವಿಷಯದಲ್ಲಿ ಜಗದ್ವಂದ್ಯನಾದ ಶ್ರೀಕೃಷ್ಣ ಮಾಡಿದ ಸಾರಥ್ಯ, ಸಭಾನಿರ್ವಹಣೆ, ಸೇವೆ, ಸಖ್ಯ, ದೂತಕಾರ್ಯ, ಅಂಗರಕ್ಷಕನಾಗಿ ನಿಲ್ಲುವುದು, ಹಿಂದೆ ಹಿಂದೆ ನಡೆಯುತ್ತ ಅನುಸರಿಸುವುದು, ಹೊಗಳುವುದು, ತಲೆ ಬಾಗುವುದು ಮುಂತಾದುವುಗಳಿಂದ ಪರೀಕ್ಷಿತ ಶ್ರೀಕೃಷ್ಣನ ಪಾದಕಮಲದಲ್ಲಿ ಇನ್ನೂ ಹೆಚ್ಚಿನ ಭಕ್ತಿ ಮಾಡಿದ.

ಈ ಶ್ಲೋಕದಲ್ಲಿ ಶ್ರೀಕೃಷ್ಣ ಸಾರಥ್ಯಾದಿಗಳನ್ನು ಮಾಡಿದ್ದರಿಂದ ಪಾಂಡವರು ಅವನಲ್ಲಿ ಸ್ನೇಹಮಾಡಿದರೆಂದೂ ಶ್ರೀಕೃಷ್ಣ ಮಾಡಿದ ಸಾರಥ್ಯಾದಿಗಳನ್ನು ಜನರಿಂದ ಕೇಳಿದಾಗಲೆ ಪರೀಕ್ಷಿತ ಕೃಷ್ಣನಲ್ಲಿ ಭಕ್ತಿ ಮಾಡಿದನೆಂದೂ ಹೇಳಿದಂತೆ ಕಾಣುತ್ತದೆ. ವಸ್ತುತಃ ಪಾಂಡವರು ಶ್ರೀಕೃಷ್ಣನಲ್ಲಿ ಸ್ವತಃಭಕ್ತರು. ಭಕ್ತರಾದ ಪಾಂಡವರಲ್ಲಿ ಭಕ್ತವತ್ಸಲ ಶ್ರೀಕೃಷ್ಣ ಸಾರಥ್ಯಾದಿಗಳನ್ನು ಮಾಡಿದ್ದರಿಂದ ಮೊದಲೇ ಭಕ್ತನಾಗಿದ್ದ ಪರೀಕ್ಷಿತ ವಿಶೇಷ ಭಕ್ತಿ ಮಾಡಿದ.

ಸ್ನಿಗ್ಧೇಷು ಪಾಂಡುಷು ವಿಷ್ಣೋಃ ಸಾರಥ್ಯಾದಿಭಿ-
ರ್ವಿಶೇಷತೋ ಭಕ್ತಿಂ ಕರೋತಿ ।

ಭಕ್ತರಾದ ಪಾಂಡವರಲ್ಲಿ ಶ್ರೀಕೃಷ್ಣ ಸಾರಥ್ಯಾದಿಗಳನ್ನು ಮಾಡಿದ್ದರಿಂದ ಪರೀಕ್ಷಿತ ವಿಶೇಷವಾಗಿ ಭಕ್ತಿಮಾಡುತ್ತಾನೆ.

ಬೇರೆ ವ್ಯಾಖ್ಯಾನಕಾರರು 'ಪ್ರಣಾಮಾನ್' ಎಂದು ಪಾಠವಿಟ್ಟುಕೊಂಡು ಅದಕ್ಕೆ ಅನ್ವಯ ಕಾಣದಿರುವುದರಿಂದ 'ಶ್ರುತ್ವಾ' 'ಕೇಳಿ' ಅಥವಾ 'ಸ್ಮೃತ್ವಾ' ನೆನೆದು ಎಂದು ಅಧ್ಯಾಹಾರ ಮಾಡಿ ಕಷ್ಟದಿಂದ ಕೂಡಿಸಿದ್ದಾರೆ. ಶ್ರೀಮದಾಚಾರ್ಯರು 'ಪ್ರಣಾಮೈಃ' ಎಂಬ ಪಾಠವಿಟ್ಟುಕೊಂಡು ಅನಾಯಾಸವಾಗಿ ಅನ್ವಯ ತೋರಿಸಿದ್ದಾರೆ— 'ಸಾರಥ್ಯಾದಿಭಿರ್ವಿಶೇಷತೋ ಭಕ್ತಿಂ ಕರೋತಿ' ಎಂದು.

ವಲ್ಲಭಾಚಾರ್ಯರು ಹೇಳುತ್ತಾರೆ— ಈ ಒಂದು ಶ್ಲೋಕ ನಡುವೆ ವಿವಾದಗ್ರಸ್ತವಾಗಿದೆ. ಕೆಲವರು 'ಶ್ರುತ್ವಾ' ಎಂದು ಅಧ್ಯಾಹಾರ ಮಾಡಿ ಕೂಡಿಸುತ್ತಾರೆ' ಎಂದು.[೧] ಅವರು ಶ್ರೀಮದಾಚಾರ್ಯರ ಪಾಠವನ್ನು ಕಂಡಿದ್ದರೆ ಹೀಗೆ ಹೇಳುತ್ತಿರಲಿಲ್ಲ.

★★★

೧. ವಿಷ್ಣೋರ್ಯಾನಿ ಸಾರಥ್ಯಾದೀನಿ ಕರ್ಮಾಣಿ ತಾನಿ ಶೃಣ್ವನ್ । -ಶ್ರೀಧರಃ ಶುಕದೇವಃ

ಪರೀಕ್ಷಿತ ದಿಗ್ವಿಜಯ ಕಾಲದಲ್ಲಿ ಕಲಿನಿಗ್ರಹ ಮಾಡುವ ಸಂದರ್ಭ. ಗೋರೂಪ ದಿಂದ ನಿಂತಿದ್ದ ಭೂದೇವಿ ವೃಷಭರೂಪದಿಂದ ನಿಂತಿದ್ದ ಧರ್ಮನಿಗೆ ಹೇಳುತ್ತಾಳೆ. 'ಸಕಲ ಗುಣಪರಿಪೂರ್ಣನಾದ ಕೃಷ್ಣ ನನ್ನಿಂದ ದೂರಾದನೆಂದು ಶೋಕಿಸುತ್ತಿದ್ದೇನೆ'. ಅವನ ಗುಣಗಳು ಕೆಲವು ಹೀಗೆ—

ಸತ್ಯಂ ಶೌಚಂ ದಯಾ ದಾನಂ ತ್ಯಾಗಃ ಸಂತೋಷ ಆರ್ಜವಂ ।
ಶಮೋ ದಮಸ್ತಪಃ ಸಾಮ್ಯಂ ತಿತಿಕ್ಷೋಪರತಿಃ ಶ್ರುತಂ ॥ ೨೭ ॥

ಜ್ಞಾನಂ ವಿರಕ್ತಿರೈಶ್ವರ್ಯಂ ಶೌರ್ಯಂ ತೇಜೋ ಧೃತಿಃ ಸ್ಮೃತಿಃ ।
ಸ್ವಾತಂತ್ರ್ಯಂ ಕೌಶಲಂ ಕಾಂತಿಃ ಸೌಭಗಂ ಮಾರ್ದವಂ ಕ್ಷಮಾ ॥ ೨೮ ॥

ಪ್ರಾಗಲ್ಭ್ಯಂ ಪ್ರಶ್ರಯಃ ಶೀಲಂ ಸಹ ಓಜೋ ಬಲಂ ಭಗಃ ।
ಗಾಂಭೀರ್ಯಂ ಸ್ಥೈರ್ಯಮಾಸ್ತಿಕ್ಯಂ ಕೀರ್ತಿರ್ಮಾನೋಽನಹಂಕೃತಿಃ॥೨೯॥

ಇಮೇ ಚಾನ್ಯೇ ಚ ಭಗವನ್ ನಿತ್ಯಾ ಯತ್ರ ಮಹಾಗುಣಾಃ ।
ಪ್ರಾರ್ಥ್ಯಾ ಮಹತ್ವಮಿಚ್ಛದ್ಭಿರ್ನ ಚ ಯಾಂತಿ ಸ್ಮ ಕರ್ಹಿಚಿತ್ ॥ ೩೦ ॥

ನಿರ್ದುಃಖಾನಂದಾನುಭವ, ನಿರ್ಮಲತ್ವ, ದಯೆ, ಜೀವರಿಗೆ ಕರ್ಮಾನು ಗುಣ ಫಲ ನೀಡುವುದು, ತನ್ನದಲ್ಲದುದರಲ್ಲಿ ತನ್ನದೆಂದು ಸುಳ್ಳು ಅಭಿಮಾನ ಮಾಡದಿರುವುದು, ಪೂರ್ಣಸುಖ, ತ್ರಿಕರಣಗಳಲ್ಲಿ ಒಂದೇರೀತಿ ಇರುವುದು, ಇದು ಪ್ರಿಯ ಇದು ಅಪ್ರಿಯ ಎನ್ನದೆ ಪ್ರಿಯವಾದುದನ್ನೆ ಅನುಭವಿಸುವುದು. ಇಂದ್ರಿಯಗಳ ಮೇಲೆ ಹತೋಟಿ, ವಿಷಯಗಳ ಬಗ್ಗೆ ಸರಿಯಾದ ಅರಿವು, ತನ್ನೆಲ್ಲ ರೂಪಗಳಲ್ಲಿ ಯಾವುದೇ ತಾರತಮ್ಯವಿಲ್ಲದಿರುವುದು, ಭಕ್ತಾಪರಾಧಸಹಿಷ್ಣುತ್ವ, ವಿಷಯ ವೈರಾಗ್ಯ, ಶಾಸ್ತ್ರರಹಸ್ಯಜ್ಞಾನ, ಎಲ್ಲ ವಸ್ತುಗಳ ಸಾಕ್ಷಾತ್ಕಾರ, ವಿಷಯ ಪದಾರ್ಥಗಳಲ್ಲಿ ಸಾರವಿಲ್ಲ ಎಂಬ ಅರಿವು. ಜಗತ್ತನ್ನು ನಿಯಂತ್ರಿಸುವ ಸಾಮರ್ಥ್ಯ, ಶೌರ್ಯ ಪರಾಕ್ರಮ ನಿರ್ವಿಕಾರ ಚಿತ್ತತೆ, ಅನಂತ ಬ್ರಹ್ಮಾಂಡ ಸ್ಮರಣೆ, ಪರರ ಅಧೀನನಾಗಿಲ್ಲದಿರುವುದು, ಎಲ್ಲ ಕಾರ್ಯಗಳಲ್ಲಿ ನೈಪುಣ್ಯ, ಶರೀರ ಸೌಂದರ್ಯ, ಕೇವಲ ಶುಭವನ್ನೆ ಅನುಭವಿಸುವುದು, ಭಕ್ತರಲ್ಲಿ ಮೃದು ಹೃದಯ, ದ್ವೇಷಿಗಳಲ್ಲಿ ಕೋಪಾದಿಗಳಿಲ್ಲದಿರು

ವಿಷ್ಣೋಃ ಶ್ರೀಕೃಷ್ಣಸ್ಯ ಸಾರಥ್ಯಾದಿಕಂ ಜಗತ್‌ಕೃತಂ ಪ್ರಣಾಮಂ ಚ ಸ್ಮೃತ್ವೇತಿ ಶೇಷಃ ।
-ವೀರರಾಘವಃ

ಮಧ್ಯೇ ಸಾರಥ್ಯೇತಿ ಶ್ಲೋಕಃ ಪ್ರಾಯೇಣ ವಿಗೀತಃ । ತಂ ಕೇಚನ ಶ್ರುತ್ವೇತಿ ಪದಮಧ್ಯಾಹೃತ್ಯ ಯೋಜಯಂತಿ । ಜಗತ್ಕರ್ತೃಕಾಂ ಪ್ರಣತಿಂ ಚ ಶ್ರುತ್ವೇತಿ । ಜಗತ್ಪ್ರಣತಸ್ಯೇತಿ ಪಾಠಃ । -ವಲ್ಲಭಾಚಾರ್ಯಃ

ವುದು, ಆಕ್ರಮಣ ಸ್ವಭಾವ, ವಿನಯ, ಒಳ್ಳೆಯ ಶೀಲ, ಪರರ ಆಕ್ರಮಣವನ್ನು ಇದಿರಿಸುವುದು, ಪರರನ್ನು ಆಕ್ರಮಿಸುವ ಸಾಮರ್ಥ್ಯ, ತನ್ನಿಚ್ಛೆಯಂತೆ ಮಾಡುವ ಸಾಮರ್ಥ್ಯ, ಷಡ್ಗುಣಪೂರ್ಣತ್ವ, ಪರರಿಗೆ ಅರಿಯಲಾಗದ ವ್ಯಕ್ತಿತ್ವ, ಸ್ಥಿರತೆ, ಆಸ್ತಿಕ್ಯ ಬುದ್ಧಿ ಕೀರ್ತಿ, ನಾರದಾದಿಗಳನ್ನು ಸತ್ಕರಿಸುವುದು, ಅಹಂಕಾರವಿಲ್ಲದಿರುವುದು, ಈ ಗುಣಗಳು ಮಾತ್ರವಲ್ಲದೆ ಬೇರೆ ಮಹಾಗುಣಗಳು ಎಲ್ಲವೂ ಸದಾ ಇರುವುದು ಶ್ರೀಕೃಷ್ಣನಲ್ಲಿಯೆ. ಇಂಥ ಗುಣಗಳು ತಮ್ಮಲ್ಲಿ ಮೋಕ್ಷದಲ್ಲಿ ವ್ಯಕ್ತವಾಗಬಯಸು ವವರೆಲ್ಲರೂ ಈ ಭಗವದ್ಗುಣಗಳ ಸಾಕ್ಷಾತ್ಕಾರವನ್ನು ಬೇಡುತ್ತಾರೆ. ಭಗವಂತನಲ್ಲಿ ಈ ಗುಣಗಳು ಸ್ವರೂಪ ಭೂತವಾಗಿದ್ದು ಎಂದೂ ಅವನನ್ನು ಬಿಟ್ಟು ಹೋಗಲಾರವು.

ತ್ಯಾಗೋ ಮಿಥ್ಯಾಭಿಮಾನವರ್ಜನಂ ।
ಮಿಥ್ಯಾಭಿಮಾನವಿರತಿಸ್ತ್ಯಾಗ ಇತ್ಯಭಿಧೀಯತೇ ।
ಇತಿ ನಾರಾಯಣಾಧ್ಯಾತ್ಮೇ । ಏಕಾಂತತಃ ಶುಭ ಭಾಗಿತ್ವಂ ಸೌಭಾಗ್ಯಂ ।
ಶುಭೈಕಭಾಗೀ ಸುಭಗೋ ದುರ್ಭಗಸ್ತದ್ವಿಪರ್ಯಯಃ। ಇತಿ ಗೀತಾಕಲ್ಪೇ।
ಶಮಃ ಪ್ರಿಯಾದಿಬುದ್ಧ್ಯುಜ್ಝಾ ಕ್ಷಮಾ ಕ್ರೋಧಾದ್ಯನುತ್ಥಿತಿಃ ।
ಮಹಾವಿರೋಧಕರ್ತುಶ್ಚ ಸಹನಂ ತು ತಿತಿಕ್ಷಣಂ ॥ ಇತಿ ಪಾದ್ಮೇ ।
ಸ್ವಯಂ ಸರ್ವಸ್ಯ ಕರ್ತೃತ್ವಾತ್ ಕುತಸ್ತಸ್ಯ ಪ್ರಿಯಾಪ್ರಿಯೇ । ಇತಿ ಚ ।
ಪ್ರಿಯಮೇವ ಯತಃ ಸರ್ವಮಪ್ರಿಯಂ ನಾಸ್ತಿ ಕುತ್ರಚಿತ್ ।
ಸ್ವಯಮೇವ ಯತಃ ಕರ್ತಾ ಶಾಂತೋಽತೋ ಹರಿರೀಶ್ವರಃ ।
ಇತಿ ಬ್ರಹ್ಮತರ್ಕೇ । ಮಾನಃ ಪರೇಷಾಂ ।
ಗುಣೈಃ ಸ್ವರೂಪಭೂತೈಸ್ತು ಗುಣ್ಯಸೌ ಹರಿರೀಶ್ವರಃ ।
ನ ವಿಷ್ಣೋರ್ನಚ ಮುಕ್ತಾನಾಂ ಕೋಽಪಿ ಭಿನ್ನೋ ಗುಣೋ ಮತಃ ।
ಇತಿ ಬ್ರಹ್ಮತರ್ಕೇ ।

ತ್ಯಾಗವೆಂದರೆ ತನ್ನದಲ್ಲದುದರಲ್ಲಿ ತನ್ನದೆಂದು ಸುಳ್ಳು ಅಭಿಮಾನವನ್ನು ಮಾಡದಿರುವುದು. 'ಸುಳ್ಳು ಅಭಿಮಾನವನ್ನು ಮಾಡದಿರುವುದು ತ್ಯಾಗ ವೆನಿಸುವು ದೆ'ಂದು ನಾರಾಯಣಾಧ್ಯಾತ್ಮದಲ್ಲಿ ಹೇಳಿದೆ.

ಕೇವಲ ಶುಭವನ್ನೇ ಅನುಭವಿಸುವುದು ಸೌಭಾಗ್ಯ. 'ಕೇವಲ ಶುಭವನ್ನೇ ಅನುಭವಿಸುವವನು ಸುಭಗ. ಹಾಗಿಲ್ಲದವನು ದುರ್ಭಗ' ಎಂದು ಗೀತಾಕಲ್ಪದಲ್ಲಿ ಹೇಳಿದೆ.

'ಇದು ಪ್ರಿಯ ಇದು ಅಪ್ರಿಯ ಎಂದು ತಿಳಿಯದಿರುವುದು ಶಮ, ದ್ವೇಷಿಗಳಲ್ಲಿ

ಕೋಪಾದಿ ಉಂಟಾಗದಿರುವುದು ಕ್ಷಮಾ. ಭಕ್ತರು ಮಹಾಪರಾಧ ಮಾಡಿದರೂ ಸಹಿಸುವುದು ತಿತಿಕ್ಷಾ' ಎಂದು ಪದ್ಮಪುರಾಣದಲ್ಲಿದೆ.

ತಾನೇ ಎಲ್ಲಕ್ಕೂ ಕರ್ತನಾಗಿರುವುದರಿಂದ ಅವನಿಗೆಲ್ಲಿ ಪ್ರಿಯ ಅಪ್ರಿಯ ಎಂಬ ಭೇದ? ಎಂದೂ ಅಲ್ಲಿ ಹೇಳಿದೆ. ಎಲ್ಲವೂ ಹರಿಗೆ ಪ್ರಿಯವೆ, ಅಪ್ರಿಯವೆಲ್ಲಿಯೂ ಇಲ್ಲ. ಏಕೆಂದರೆ ಎಲ್ಲಕ್ಕೂ ಅವನು ತಾನೇ ಕರ್ತ. ಆದರಿಂದ ಸರ್ವಶಕ್ತನಾದ ಹರಿ ಶಾಂತನೆನಿಸುತ್ತಾನೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಇತರರಾದ ನಾರದಾದಿಗಳಿಗೆ ಹರಿಯು ಮಾಡುವ ಸತ್ಕಾರ ಮಾನವೆನಿಸುತ್ತದೆ.

ಸರ್ವನಿಯಾಮಕನಾದ ಹರಿ ತನ್ನ ಸ್ವರೂಪಭೂತಗುಣಗಳಿಂದಲೆ ಗುಣಿ ಎನಿಸುತ್ತಾನೆ. ವಿಷ್ಣುವಿಗಾಗಲಿ ಮುಕ್ತರಿಗಾಗಲಿ , ಯಾವ ಗುಣವೂ ಅವರಿಗಿಂತ ಭಿನ್ನವಾಗಿರುವುದಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದದೆ.

ಇತಿ ಪ್ರಥಮಸ್ಕಂಧೇ ಷೋಡಶೋऽಧ್ಯಾಯಃ

ಹದಿನೇಳನೇ ಅಧ್ಯಾಯ

ಅಧ್ಯಾಯ ಸಾರಾಂಶ

ರಾಜವೇಷದ ಕಲಿ ಕೈಯಲ್ಲಿ ಕೋಲು ಹಿಡಿದು ಎತ್ತು ಹಸುಗಳನ್ನು ಹೊಡೆಯುತ್ತಿದ್ದಾನೆ. ಬಿಳಿ ಎತ್ತು ಭಯದಿಂದ ನಡುಗುತ್ತ ಸೆಗಣಿ ಹಾಕುತ್ತಿತ್ತು. ಒಂಟಿಕಾಲಲ್ಲಿ ಕುಂಟುತ್ತ ಬಹಳ ವೇದನೆಪಡುತ್ತಿತ್ತು. ಹಸುವೂ ಕಲಿಯ ಒದೆ ತಿನ್ನುತ್ತ ಕಣ್ಣೀರು ಸುರಿಸುತ್ತಿತ್ತು. ಪರೀಕ್ಷಿತ ಕಂಡು ಬಿಲ್ಲಿಗೆ ಹೆದೆಯೇರಿಸಿ ಗರ್ಜಿಸಿದ, 'ಯಾರು ನೀನು? ಏಕೆ ಎತ್ತು ಹಸುಗಳನ್ನು ಹಿಂಸಿಸುವಿ? ಎತ್ತೆ, ನೀನಾದರೂ ಹೇಳು, ಯಾರು ನೀನು? ಏಕೆ ಕಣ್ಣೀರಿಡುವೆ? ಗೋಮಾತೆ, ನೀನೂ ದುಃಖಿಸಬೇಡ. ದುಷ್ಟರಿಗೆ ಶಾಸನ ಮಾಡಲು ನಾನಿದ್ದೇನೆ. ಎತ್ತೆ, ನಿನ್ನ ಕಾಲುಗಳನ್ನು ಮುರಿದವರಾರು? ಕೃಷ್ಣಭಕ್ತರಾದ ರಾಜರಿರುವ ರಾಷ್ಟ್ರದಲ್ಲಿ ನಿನ್ನಂಥವರು ದುಃಖಿಗಳಾಗಬಾರದು. ನಿರಪರಾಧಿ ಪ್ರಾಣಿಗಳನ್ನು ಪೀಡಿಸುವವನು ದೇವತೆಯೆ ಆಗಿದ್ದರೂ ಸರಿಯೆ ಅವನ ಭುಜವನ್ನು ನಾನೀಗಲೆ ಕತ್ತರಿಸುತ್ತೇನೆ'.

ಧರ್ಮ: ಕಷ್ಟದಲ್ಲಿರುವವರಿಗೆ ಅಭಯ ನೀಡುವ ಈ ಮಾತು ಪಾಂಡವ ವಂಶಜನಾದ ನಿನಗೆ ತಕ್ಕುದೆ. ಆದರೆ ನಮ್ಮ ಕಷ್ಟಕ್ಕೆ ಯಾರು ಕಾರಣ ನಾನರಿಯೆ. ಅಜ್ಞಾನವೆ, ಅದೃಷ್ಟವೆ, ಪರಮಾತ್ಮನೆ, ಸ್ವಭಾವವೆ? ಅನಿರ್ವಚನೀಯವಾದ ಅವಿದ್ಯೆಯೆ? ನೀನೆ ವಿಚಾರಮಾಡು.

ಪರೀಕ್ಷಿತ: ಅನ್ಯರು ಮಾಡಿದ ಪಾಪಕಾರ್ಯವನ್ನು ಎತ್ತಿ ಹೇಳಬಾರದು ಎಂಬುದನ್ನು ಈರೀತಿ ತಿಳಿಸುತ್ತಿರುವೆಯ? ನಿರಪರಾಧಿಗಳನ್ನು ಪೀಡಿಸುವವನು ಕಲಿಯೆ ಎಂಬುದು ನಿನಗೇ ತಿಳಿದಿದೆ, ಅದನ್ನು ಹೇಳಬೇಕಾಗಿಲ್ಲ ಎನ್ನುವೆಯ? ಅಥವಾ ಜೀವಾತ್ಮರಿಗೆ ಅವರ ಕರ್ಮಾನುಸಾರ ಫಲ ಕೊಡುವವನು ಪರಮಾತ್ಮ. ಅವನ ಸಂಕಲ್ಪವನ್ನು ನಾವು ತಿಳಿಯಲಾರೆವು ಎನ್ನುತ್ತಿರುವೆಯ? ಅಹಂಕಾರ ವಿಷಯಾಸಕ್ತಿ ಮದಗಳೆಂಬ ಅಧರ್ಮದ ಅಂಗಗಳಿಂದ ತಪಸ್ ಶೌಚ ದಯೆಗಳೆಂಬ ಧರ್ಮದ ಮೂರು ಕಾಲುಗಳು ಮುರಿದುವು ಸತ್ಯವೆಂಬ ಒಂದೇ ಕಾಲು ಉಳಿದಿದೆ ಎಂದು ತಿಳಿಸಲು ಒಂಟಿಕಾಲಲ್ಲಿ ಕುಂಟುತ್ತಿರುವ ನೀನು ಧರ್ಮದೇವತೆಯೆ ಸರಿ. ಈ ಹಸುವೂ ಭೂದೇವಿ, ಕೃಷ್ಣ ತನ್ನ ಮಂಗಳಕರವಾದ ಪಾದಗಳ ಹೆಜ್ಜೆಗಳಿಂದ ಅವಳಿಗೆ ಮೈರೋಮಾಂಚನಗೊಳಿಸಿ ಈಗ ಹೊರಟುಹೋಗಿದ್ದಾನೆ. ಅದಕ್ಕೆ ಕಣ್ಣೀರಿಡುತ್ತಾಳೆ.

ಹೀಗೆ ಹೇಳಿ ಪರೀಕ್ಷಿತ ಕಲಿಯನ್ನು ಕೊಲ್ಲಲು ಹೊರಟಾಗ ಆತ ಶರಣಾದ. ಅದಕ್ಕೆ ಕೊಲ್ಲದೆ ಬಿಟ್ಟು ನೀ ನನ್ನ ರಾಜ್ಯದಲ್ಲಿರಕೂಡದು ಎಂದ. ಕಲಿ ಬೇಡಿಕೊಂಡ. ನನಗೆ ನಿನ್ನ ಉಗ್ರರೂಪ ಎಲ್ಲೆಡೆ ಕಂಡು ಭಯವಾಗುತ್ತದೆ. ನನಗೆ ಕೆಲವು ಸುರಕ್ಷಿತವಾದ ಸ್ಥಾನಗಳನ್ನು ನೀಡು' ಆಗ ದ್ಯೂತ, ನಿಷಿದ್ಧವಾದ ಮದ್ಯಪಾನ, ನಿಷಿದ್ಧವಾದ ಸ್ತ್ರೀಸಂಗ, ನಿಷಿದ್ಧವಾದ ಪ್ರಾಣಿಹಿಂಸೆ, ಬಂಗಾರದ ಮೋಹ ಈ ಐದು ಸ್ಥಾನಗಳನ್ನಿತ್ತ ಪರೀಕ್ಷಿತ.

★★★

ಪರೀಕ್ಷಿತ ಆಕಳು ಎತ್ತುಗಳನ್ನು ಕಂಡ. ಅವುಗಳನ್ನು ಕಲಿ ಹೊಡೆಯುತ್ತಿದ್ದ. ಎತ್ತಿನ ಆಗಿನ ಸ್ಥಿತಿಯ ಬಗ್ಗೆ ವಿವರಣೆ—

ವೃಷಂ ಮೃಣಾಲಧವಲಂ ಮೇಹಂತಮಿವ ಬಿಭ್ಯತಂ ।
ವೇಪಮಾನಂ ಪದೈಕೇನ ಸೀದಂತಂ ಶೂದ್ರ ಪೀಡಿತಂ ॥ ೨ ॥

ಬಿಳಿ ಎತ್ತು ತಾವರೆಯ ದಂಟಿನಂತೆ ಶುಭ್ರವಾಗಿ ಹೊಳೆಯುತ್ತಿತ್ತು. ಭಯಗೊಂಡರೆ ಹೇಗೆ ಪುನಃ ಪುನಃ ಸೆಗಣಿ ಹಾಕುವುದೋ ಹಾಗೆ ಸೆಗಣಿ ಹಾಕುತ್ತಿತ್ತು. ನಡುಗುತ್ತಿತ್ತು. ಶೂದ್ರನ ಪೀಡೆಯಿಂದ ಒಂಟಿಕಾಲಲ್ಲಿ ನಿಂತು ವೇದನೆ ಪಡುತ್ತಿತ್ತು. ಅದನ್ನು ಪರೀಕ್ಷಿತ ಕಂಡು ಪ್ರಶ್ನೆ ಮಾಡಿದ.

ಈ ಶ್ಲೋಕದಲ್ಲಿ 'ಮೇಹಂತಮಿವ ಬಿಭ್ಯತಂ' 'ಸೆಗಣಿ ಹಾಕುತ್ತಿರುವಂತೆ ಮೂತ್ರ ಸುರಿಸುತ್ತಿರುವಂತೆ ಭಯಪಡುತ್ತಿತ್ತು' ಎನ್ನುವುದು ಅಸಂಗತವಾಗುತ್ತದೆ. ಹಾಗೇ ಬೇರೆ ಎಲ್ಲ ವ್ಯಾಖ್ಯಾನಕಾರರೂ ವ್ಯಾಖ್ಯಾನ ಮಾಡಿದ್ದಾರೆ. ಅದಕ್ಕೆ ಹೀಗೆ ಹೇಳಬೇಕು—

ಬಿಭ್ಯತಮಿವ ಮೇಹಂತಂ ।

ಭಯಪಡುತ್ತಿರುವಂತೆ ಅಂದರೆ ಭಯಪಟ್ಟರೆ ಹೇಗೆ ಸಗಣಿಹಾಕುವುದೊ ಹಾಗೆ ಸೆಗಣಿ ಹಾಕುತ್ತಿತ್ತು ಎಂದರ್ಥ.

ಬೇರೆ ವ್ಯಾಖ್ಯಾನಕಾರರು 'ಮೇಹಂತಮಿವ' ಎಂದೇ ಅನ್ವಯಿಸಿದ್ದಾರೆ. ಆದರೆ ಇವ ಶಬ್ದಾರ್ಥವನ್ನು ಹೇಳುವಲ್ಲಿ ವಿಫಲರಾಗಿದ್ದಾರೆ. 'ಧರ್ಮವು ಒಂದು ಪಾದದ ಮಟ್ಟಿಗೆ ಮಾತ್ರ ಉಳಿದಿದ್ದು, ಅದೂ ಭಯದಿಂದ ಮೂತ್ರಿಸುವಂತೆ ಪ್ರತಿಕ್ಷಣ ಅಂಶ ಅಂಶವಾಗಿ ಕ್ಷೀಣಿಸುತ್ತ, ಅದನ್ನೂ ನಿರ್ವಾಹ ಮಾಡಲಾಗದೆ ನಡುಗುತ್ತಿರುವಂತೆ' ಎಂದು ವರ್ಣಿಸುತ್ತಾರೆ![೧] ಇದು ಪರೀಕ್ಷಿತ ಕಂಡ ಎತ್ತಿನ ವರ್ಣನೆಯಲ್ಲ. ಅದು ಮೂತ್ರಿಸುತ್ತಿತ್ತು, ನಡುಗುತ್ತಿತ್ತು ತಾನೆ? ಮೂತ್ರಿಸುತ್ತಿರಲಿಲ್ಲ, ಮೂತ್ರಿಸುವುದನ್ನು ಅನುಕರಣ ಮಾಡುತ್ತಿತ್ತೆಂದು ಶುಕದೇವ ವ್ಯಾಖ್ಯಾನ.

★★★

ಎತ್ತಿನ ಕಾಲುಗಳನ್ನು ಮುರಿದವರಾರೆಂದು ಎತ್ತನ್ನು ಕೇಳಿದರೆ ಎತ್ತು 'ನನಗೆ ತಿಳಿಯದು' ಎನ್ನುತ್ತದೆ. ಇದು ಅರ್ಥಪೂರ್ಣವಾದ ಮಾತು ಎನ್ನುತ್ತಾನೆ ಪರೀಕ್ಷಿತ.

ಧರ್ಮಂ ಬ್ರವೀಷಿ ಧರ್ಮಜ್ಞ ಧರ್ಮೋಽಸಿ ವೃಷರೂಪಧೃಕ್
ಯದಧರ್ಮಕೃತಃ ಸ್ಥಾನಂ ಸೂಚಕಸ್ಯಾಪಿ ತದ್‌ಭವೇತ್ ॥ ೨೧ ॥
ಅಥವಾ ದೇವಮಾಯಾಯಾ ನೂನಂ ಗತಿರಗೋಚರಾ ॥ ೨೨ ॥

ಧರ್ಮಜ್ಞನೆ, ನೀನು ಧರ್ಮವನ್ನೆ ಹೇಳುತ್ತಿರುವೆ, ಎತ್ತಿನ ರೂಪದಲ್ಲಿರುವ ಧರ್ಮರಾಜನೆ ನೀನು. ಏಕೆಂದರೆ, ಸಜ್ಜನರು ಅಧರ್ಮ ಮಾಡಿದಾಗ ಅದನ್ನು ಹೇಳಿದರೆ ಹೇಳಿದವನಿಗೂ ಅನರ್ಥ. ಅದರಿಂದ ನನಗೆ ತಿಳಿಯದೆಂದು ನೀನು ಧರ್ಮವನ್ನೆ ಹೇಳುತ್ತಿರುವೆ. ಅಥವಾ ಕಾಲು ಮುರಿದುದು ಈಶ್ವರೇಚ್ಛೆಯಿಂದ ಎಂಬ ಅಭಿಪ್ರಾಯದಿಂದ ಈಶ್ವರೇಚ್ಛೆಯನ್ನು ನೀನು ತಿಳಿದರೂ ನಾವು ತಿಳಿಯಲಾರೆವೆಂದು ಹೇಳುತ್ತಿರುವಿ.

ಈ ಶ್ಲೋಕದಲ್ಲಿ 'ಯಾರೇ ತಪ್ಪು ಮಾಡಲಿ ಅದನ್ನು ಹೇಳಬಾರದೆಂದಂತೆ ಕಾಣುತ್ತದೆ. ಈಶ್ವರೇಚ್ಛೆಯನ್ನು ಯಾರೂ ತಿಳಿಯಲಾರರೆಂದೂ ಹೇಳಿದಂತೆ ಕಾಣುತ್ತದೆ. ನಿಜವಾದ ಅಭಿಪ್ರಾಯ ಇದು—

---

೧. ಇವೇತ್ಯನೇನ ಪಾದಾವಶೇಷೋ ಧರ್ಮೋ ಭಯಾನ್ಮೂತ್ರಯನ್ನಿವ ಪ್ರತಿಕ್ಷಣಂ ಕ್ಷೀಯಮಾಣಾಂಶಃ ತಸ್ಯಾಪ್ಯನಿರ್ವಾಹಾತ್ ಕಂಪಮಾನ ಇವೇತಿ ದರ್ಶಿತಂ। -ಶ್ರೀಧರಃ

ಮೇಹಂತಂ ಮೂತ್ರಯಂತಮಿವೇತಿ ಪಾದಾವಶಿಷ್ಟೋಽಪಿ ಧರ್ಮಃ ಪ್ರತಿಕ್ಷಣಂ ಕ್ಷರನ್ನಿವೇತ್ಯುತ್ಪ್ರೇಕ್ಷಾಯಾಂ ನಶ್ಯದವಸ್ಥ ಇತ್ಯರ್ಥಃ। -ವಿಶ್ವನಾಥಃ

ಅಸತಾಂ ಸೂಚಕಸ್ಯ ನ ದೋಷಃ । ತಥಾಪಿ ಸತಾಂ ನ
ಸೂಚನೀಯಮಿತಿ ದರ್ಶಯಿತುಂ । ಜ್ಞಾತುಂ ಶಕ್ಯತ್ವಾಚ್ಚ ರಾಜ್ಞಃ ।
ಯದ್ಯಧರ್ಮಃ ಕೃತಃ ಸದ್ಭಿಃ ಸ ನ ವಾಚ್ಯಃ ಕಥಂಚನ ।
ಅಸತ್‌ಕೃತಮಧರ್ಮಂ ತು ವದನ್ ಧರ್ಮಮವಾಪ್ನುಯಾತ್ ।
ಇತಿ ವ್ಯಾಸಸ್ಮೃತೌ । ತಸ್ಯ ಗೋಚರತ್ವೇऽಪಿ
ಭೂತಾನಾಮಗೋಚರೇತಿ ಜ್ಞಾಪಯಿತುಂ ವಾ ।

ದುರ್ಜನರು ಮಾಡಿದ ಅಪರಾಧವನ್ನು ಹೇಳಿದರೆ ದೋಷವಿಲ್ಲ. ಆದರೂ ಸಜ್ಜನರು ಮಾಡಿದ್ದನ್ನು ಹೇಳಬಾರದೆಂದು ತಿಳಿಸಲು ನನಗೆ ತಿಳಿಯದೆನ್ನುತ್ತಿದೆ ಎತ್ತು. ಕಲಿಯ ಅಪರಾಧವಿದೆನ್ನುವುದನ್ನು ತಿಳಿಯುವುದು ರಾಜನಿಗೆ ಶಕ್ಯವಿರುವುದರಿಂದ ನಾನೇಕೆ ಹೇಳಬೇಕು ಎಂಬ ಅಭಿಪ್ರಾಯದಿಂದಲೂ ನನಗೆ ತಿಳಿಯದೆನ್ನುತ್ತಿದೆ.

ಸಜ್ಜನರು ಅಧರ್ಮ ಮಾಡಿದರೆ ಅದನ್ನು ಸರ್ವಥಾ ಹೇಳಬಾರದು. ದುರ್ಜನರು ಮಾಡಿದ ಅಧರ್ಮವನ್ನು ಮಾತ್ರ ಹೇಳಿದರೆ ಪುಣ್ಯ ಬರುತ್ತದೆ ಎಂದು ವ್ಯಾಸಸ್ಮೃತಿ ಹೇಳಿದೆ. ಕಾಲು ಮುರಿಯಲು ಈಶ್ವರೇಚ್ಛೆಯೂ ಕಾರಣ. ಅದು ತನಗೆ ತಿಳಿದಿದ್ದರೂ ಜನರಿಗೆ ತಿಳಿಯದೆನ್ನುವ ಅಭಿಪ್ರಾಯದಿಂದಲೂ ಎತ್ತು ನನಗೆ ತಿಳಿಯದೆಂದು ಹೇಳಿರಬಹುದು.

★★★

ಪರೀಕ್ಷಿತ ಕಲಿಯನ್ನು ಕೊಲ್ಲಲು ಹೊರಟಾಗ ಆತ ಶರಣಾಗತನಾದ. ಆಗ ಪರೀಕ್ಷಿತ ಆತನಿಗೆ ಅಭಯವಿತ್ತು ಹೇಳುತ್ತಾನೆ—

ನ ವರ್ತಿತವ್ಯಂ ತದಧರ್ಮಬಂಧೋ
ಧರ್ಮೇಣ ಸತ್ಯೇನ ಚ ವರ್ತಿತವ್ಯೇ ।
ಬ್ರಹ್ಮಾವರ್ತೇ ಯತ್ರ ಯಜಂತಿ ಯಜ್ಞೈ-
ರ್ಯಜ್ಞೇಶ್ವರಂ ಬ್ರಹ್ಮವಿತಾನಯಜ್ಞಾಃ ॥ ೩೨ ॥

ಅಧರ್ಮಬಂಧುವಾದ ಕಲಿಯೆ, ವೇದಾಧ್ಯಯನ, ದೇವತೆಗಳ ಉತ್ಪತ್ತಿ ಲಯಚಿಂತನ ಹೋಮಹವನಗಳಿಂದ ಮುನಿಗಳು ಯಜ್ಞೇಶ್ವರನಾದ ಭಗವಂತ ನನ್ನು ಆರಾಧಿಸುತ್ತಿರುವ ಆರ್ಯಾವರ್ತದಲ್ಲಿ ನೀನಿರಕೂಡದು, ಧರ್ಮಸತ್ಯಗಳೇ ಇರಬೇಕು.

ಈ ಶ್ಲೋಕದಲ್ಲಿ 'ಬ್ರಹ್ಮವಿತಾನಯಜ್ಞಾಃ' ಎಂಬುದರ ಅರ್ಥ ಅಸ್ಪಷ್ಟ. ಬೇರೆ

ವ್ಯಾಖ್ಯಾನಕಾರರು 'ಯಜ್ಞವಿತಾನ ವಿಜ್ಞಾಃ' ಯಜ್ಞವಿಸ್ತಾರ ನಿಪುಣರು ಎಂದು ಪಾಠವಿಟ್ಟುಕೊಂಡಿದ್ದಾರೆ.

ಬ್ರಹ್ಮಯಜ್ಞಾ ವಿತಾನಯಜ್ಞಾಶ್ಚ।

ಬ್ರಹ್ಮವಿತಾನಯಜ್ಞರೆಂದರೆ ಪಾರ್ವತ್ಯಾದಿ ಬ್ರಹ್ಮ ಪರ್ಯಂತ ದೇವತೆಗಳ ಉತ್ಪತ್ತಿ ಲಯ ಚಿಂತನೆ ಅಥವಾ ವೇದಾಧ್ಯಯನ ರೂಪವಾದ ಬ್ರಹ್ಮಯಜ್ಞ ಉಳ್ಳವರು ಮತ್ತು ಚರುಪುರೋಡಾಶಾದಿ ದ್ರವ್ಯವಿಸ್ತಾರದಿಂದ ಯಜ್ಞ ಮಾಡುವವರು ಎಂದರ್ಥ.

★★★

ಆರ್ಯಾವರ್ತದ ವೈಶಿಷ್ಟ್ಯವನ್ನು ಪರೀಕ್ಷಿತ ಕಲಿಗೆ ಹೇಳುತ್ತಿದ್ದಾನೆ—

ಯಸ್ಮಿನ್ ಹರಿರ್ಭಗವಾನಿಜ್ಯಮಾನ
ಇಷ್ಟಾತ್ಮ ಮೂರ್ತಿರ್ಯಜತಾಂ ಶಂ ತನೋತಿ।
ಕಾಮಾನಮೋಘಾನ್ ಸ್ಥಿರಜಂಗಮಾನಾಂ
ಅಂತರ್ಬಹಿ ರ್ವಾಯುರಿವೇಶ ಆತ್ಮಾ ॥ ೩೩ ॥

ಆರ್ಯಾವರ್ತದಲ್ಲಿ ಯಜ್ಞಗಳಿಂದ ಆರಾಧಿತನಾಗುವ ಭಗವಂತ ಸ್ವೇಚ್ಛಾನುಸಾರ ತನ್ನ ಸ್ವರೂಪಭೂತ ದೇಹದಿಂದ ವ್ಯಕ್ತನಾಗಿ ಆರಾಧಕರಿಗೆ ಸುಖ ನೀಡುತ್ತಾನೆ. ಸ್ಥಾವರ ಜಂಗಮಗಳ ಒಳಹೊರಗೆ ನಿಯಾಮಕನಾಗಿ ವಾಯುವಿನಂತೆ ವ್ಯಾಪಿಸಿ ಅಮೋಘ ವರಗಳನ್ನು ಯಜ್ಞಾರಾಧ್ಯರಾದ ಇಂದ್ರಾದಿ ದೇವತೆಗಳ ಮೂಲಕವೂ ಕೊಡುತ್ತಾನೆ.

ಈ ಶ್ಲೋಕದಲ್ಲಿ ಇಷ್ಟಾತ್ಮಮೂರ್ತಿ ಶಬ್ದದ ಅರ್ಥ ಅಸ್ಪಷ್ಟ. ಬೇರೆ ವ್ಯಾಖ್ಯಾನಕಾರರು 'ಇಜ್ಯಾತ್ಮಮೂರ್ತಿಃ' ಎಂದು ಪಾಠವಿಟ್ಟುಕೊಂಡು ಯಾಗ ಸ್ವರೂಪವಾದ ದೇಹ ಉಳ್ಳವನು ಅಥವಾ ಯಜ್ಞಾರಾಧ್ಯರಾದ ಇಂದ್ರಾದಿಗಳ ಅಂತರ್ಯಾಮಿ ಎಂದು ಅರ್ಥೈಸಿದ್ದಾರೆ.

ಇಷ್ಟಾತ್ಮಮೂರ್ತಿಃ ಇಚ್ಛಾತನುಃ।

ಇಷ್ಟಾತ್ಮಮೂರ್ತಿ' ಎಂದರೆ ಸ್ವೇಚ್ಛಾನುಸಾರ ಸ್ವರೂಪಭೂತವಾದ ಶರೀರವನ್ನು ತೋರುವವನು ಎಂದರ್ಥ.

★★★

ಪರೀಕ್ಷಿತ ಕಲಿಗೆ ಜೂಜು ಮದ್ಯಪಾನ ಸ್ತ್ರೀಸಂಗ ಹಿಂಸೆ ಬಂಗಾರ ಎಂದು ಐದು ಸ್ಥಾನಗಳನ್ನು ನೀಡಿದ. ಮುಮುಕ್ಷುಗಳು ಇವನ್ನು ಸೇವಿಸಬಾರದು—

ಅಥೈತಾನಿ ನ ಸೇವೇತ ಬುಭೂಷುಃ ಪುರುಷಃ ಕ್ವಚಿತ್ ।
ವಿಶೇಷತೋ ಧರ್ಮಶೀಲೋ ರಾಜಾ ಲೋಕಪತಿರ್ಗುರುಃ ॥ ೪೦ ॥

ಮುಮುಕ್ಷು, ವಿಶೇಷವಾಗಿ ಧರ್ಮಿಷ್ಠನಾದ ಲೋಕಪಾಲಕ ರಾಜ ಮತ್ತು ಧರ್ಮಬೋಧಕನಾದ ಗುರು ಇವುಗಳನ್ನು ಸೇವಿಸಬಾರದು.

ಜೂಜು ಮದ್ಯಪಾನ ಸ್ತ್ರೀಸಂಗ ಜೀವಹತ್ಯೆ ಸುವರ್ಣಧಾರಣಗಳು ಕೆಲವೆಡೆ ಶಾಸ್ತ್ರಗಳಲ್ಲಿ ವಿಹಿತವಾಗುವುದೂ ಕಂಡುಬರುತ್ತದೆ. ಸೇವಿಸಲೇಬಾರದೆಂದರೆ ಈ ಶಾಸ್ತ್ರ ವಿಧಿಗಳಿಗೆ ಏನು ಗತಿ? ಸ್ತ್ರೀ ಸುವರ್ಣಗಳ ಸೇವನೆ ಮಾಡದಿರುವುದೆಂದರೆ ಅವುಗಳಲ್ಲಿ ಅನಾಸಕ್ತಿ ಎಂದು ಶ್ರೀಧರ ವ್ಯಾಖ್ಯಾನ.[೧] ಹಾಗಾದರೆ ನಿಷಿದ್ಧವಾದ ಮದ್ಯಪಾನಾದಿಗಳನ್ನೂ ಮಿತವಾಗಿ ಅನಾಸಕ್ತಿಯಿಂದ ಮಾಡಬಹುದೆ? ಅದರಿಂದ ಹೀಗೆ ಹೇಳಬೇಕು—

ವಿಹಿತಾತಿರೇಕೇಣ ನ ಸೇವೇತೇತಿ ।

ಶಾಸ್ತ್ರವಿಹಿತವಾದುದನ್ನು ಹೊರತು ಬೇರೆ ಸೇವಿಸಬಾರದು ಎಂದು.

ಕ್ಷತ್ರಿಯಾದಿಗಳಿಗೆ ವಿಹಿತವಾದ ಮದ್ಯಪಾನ, ಗೃಹಸ್ಥರಿಗೆ ವಿಹಿತವಾದ ಸ್ವಸ್ತ್ರೀಸಂಗ, ಯಜ್ಞಗಳಲ್ಲಿ ವಿಹಿತವಾದ ಪಶುಹಿಂಸೆ, ಶರೀರ ಪಾವಿತ್ರ್ಯಕ್ಕಾಗಿ ಧರಿಸುವ ಸುವರ್ಣ ಹೀಗೆ ಶಾಸ್ತ್ರವಿಹಿತವಾದುದನ್ನು ಹೊರತುಪಡಿಸಿ ಬೇರೆ ಮದ್ಯಪಾನಾದಿಗಳನ್ನು ಸೇವಿಸಬಾರದೆಂದರ್ಥ.

ಇಲ್ಲಿ ಜೀವಗೋಸ್ವಾಮಿ ಹಾಗೂ ವಲ್ಲಭಾಚಾರ್ಯರ ವ್ಯಾಖ್ಯಾನ ಶ್ರೀಮದಾಚಾರ್ಯರ ವ್ಯಾಖ್ಯಾನಕ್ಕೆ ಸಂವಾದಿಗಳಾಗಿವೆ. ಸೌತ್ರಾಮಣ್ಯಾದಿ ಯಾಗ ವಿಹಿತ ಮದ್ಯಪಾನ ವ್ಯತಿರಿಕ್ತವಾದ ಪಾನ, ಧರ್ಮಪತ್ನಿ ವ್ಯತಿರಿಕ್ತ ಸ್ತ್ರೀಸಂಗ, ಧರ್ಮ ವ್ಯತಿರಿಕ್ತ ಜೀವಹಿಂಸೆಗಳನ್ನು ವರ್ಜಿಸಬೇಕೆಂದು ಜೀವಗೋಸ್ವಾಮಿ ವ್ಯಾಖ್ಯಾನ. 'ಈ ಐದು ಸ್ಥಾನಗಳಲ್ಲಿ ಎಲ್ಲಿ ಅಧರ್ಮಕ್ಕೆ ಆಸ್ಪದವಿದೆಯೋ ಅಲ್ಲಿ ಕಲಿಗೆ ಸ್ಥಾನವಿದೆ. ಹೊರತು ಶಾಸ್ತ್ರವಿಹಿತವಾದವುಗಳಲ್ಲಿ ಅಲ್ಲ' ಎಂದು ವಲ್ಲಭಾಚಾರ್ಯರ ವ್ಯಾಖ್ಯಾನ.[೨] ಪರೀಕ್ಷಿತ ತಲೆಯ ಮೇಲೆ ಬಂಗಾರದ ಕಿರೀಟ ಹೊತ್ತಿದ್ದರಿಂದ ಅವನಲ್ಲಿ ಕಲಿಪ್ರವೇಶವಾಗಿ ಶಮೀಕಮುನಿಯಲ್ಲಿ ಅಪರಾಧಗೈಯಲು ಕಾರಣವಾಯಿತೆಂದು ಭಾವಿಸುವುದು ತಪ್ಪು.

---

೧. ಸ್ತ್ರೀಸುವರ್ಣಯೋರಸೇವನಂ ನಾಮ ತಯೋರನಾಸಕ್ತಿಃ । -ಶ್ರೀಧರಃ

೨. ಪಾನಂ ಸೌತ್ರಾಮಣ್ಯಾದಿ ವಿಹಿತವ್ಯತಿರಿಕ್ತಂ । ಸ್ತ್ರಿಯಃ ಕಾಮಸ್ತ್ರಿಯಃ ನ ತು ಧರ್ಮಪತ್ನ್ಯಃ । ಸೂನಾಶ್ಚ ಧರ್ಮವ್ಯತಿರಿಕ್ತಾಃ । -ಜೀವಗೋಸ್ವಾಮೀ

ಏತೇಷು ಯತ್ರಾಧರ್ಮೋ ಭವತಿ ತದಸ್ಯ ಸ್ಥಾನಂ । ನ ತು ಸ್ವಭಾವತಃ ಶಾಸ್ತ್ರತೋ ವಾ ಯತ್ರೈತಾನಿ ಭವಂತಿ । -ವಲ್ಲಭಾಚಾರ್ಯಃ

ಚಕ್ರವರ್ತಿಗೆ ಬಂಗಾರದ ಕಿರೀಟಧಾರಣೆ ವಿಹಿತ. ಅದರಿಂದ ಪ್ರಾರಬ್ಧಕರ್ಮವೆ ಕಾರಣವೆನ್ನಬೇಕು.

ಇತಿ ಪ್ರಥಮಸ್ಕಂಧೇ ಸಪ್ತದಶೋಽಧ್ಯಾಯಃ

ಹದಿನೆಂಟನೇ ಅಧ್ಯಾಯ

ಅಧ್ಯಾಯ ಸಾರಾಂಶ

ಪರೀಕ್ಷಿತ ಕಲಿಯನ್ನು ಕೊಲ್ಲದೆ ಬಿಡಲು ಕಲಿಕಾಲದಲ್ಲಿ ಒಂದು ಗುಣವಿರುವುದೂ ಕಾರಣವಾಗಿತ್ತು. ಅದೇನೆಂದರೆ ಕಲಿಕಾಲದಲ್ಲಿ ಪುಣ್ಯಕಾರ್ಯ ಬೇಗನೆ ಬಹುವಾಗಿ ಫಲಿಸುತ್ತದೆ. ಪಾಪಕಾರ್ಯ ನಿಧಾನವಾಗಿ ಸ್ವಲ್ಪವೆ ಫಲಿಸುತ್ತದೆ. ಮತ್ತು ಕಲಿ ದುರ್ಬಲರಲ್ಲಿ ಮಾತ್ರ ತನ್ನ ಶೌರ್ಯಪ್ರದರ್ಶನ ಮಾಡುತ್ತಾನೆ. ಯಾರು ಧರ್ಮಾಚರಣೆಯಲ್ಲಿ ತಪ್ಪುವರೊ ಅವರ ಮೇಲೆ ಮಾತ್ರ ತೋಳನಂತೆ ಎರಗುತ್ತಾನೆ. ಅಂಥ ಹೇಡಿಯ ಮುಂದೆ ತಾನೇಕೆ ಶೌರ್ಯವನ್ನು ಮೆರೆಸಬೇಕೆಂದು ಪರೀಕ್ಷಿತ ಉಪೇಕ್ಷೆ ಮಾಡಿದ.

ಋಷಿಗಳು : ಸೂತರೆ, ನೀವು ಭಗವಂತನ ಪಾದಕಮಲ ಮಕರಂದವನ್ನು ನಮಗೆ ಉಣಿಸುತ್ತಿರುವಿರಿ. ಶ್ರವಣ ಮನನಾದಿ ಮಹಾ ಪ್ರಯತ್ನ ಮಾಡದೆ, ಯೋಗಾಭ್ಯಾಸದಂಥ ಅಲ್ಪಪ್ರಯತ್ನದಿಂದ ಪಡೆಯುವ ಮೋಕ್ಷವೂ ಕೂಡ ಇಂಥ ಹರಿಕಥಾಮೃತಪಾನದ ಸುಖಕ್ಕೆ ಸಮವಲ್ಲ, ಆದರಿಂದ ನಮಗೆ ಇನ್ನೂ ಭಾಗವತವನ್ನು ಹೇಳಿರಿ.

ಸೂತ : ಯಾರ ಪಾದ ತೊಳೆದ ನೀರು ಗಂಗೆಯಾಗಿ ಹರಿದು ಸಮಸ್ತಲೋಕವನ್ನು ಪಾವನಗೊಳಿಸುವುದೋ ಆ ಭಗವಾನ್ ನಾರಾಯಣನ ಮಹಿಮೆಯನ್ನು ನಾನು ತಿಳಿದಷ್ಟು ನಿಮಗೆ ಹೇಳುತ್ತೇನೆ. ಹಕ್ಕಿ ಆಕಾಶದಲ್ಲಿ ತನಗೆ ಶಕ್ತಿ ಇದ್ದಷ್ಟು ಮಾತ್ರವೆ ಮೇಲೇರಬಲ್ಲುದು ತಾನೆ?

ಒಮ್ಮೆ ಬೇಟೆಯಾಡಿ ಬಳಲಿ ಬಾಯಾರಿದ ಪರೀಕ್ಷಿತ ಎಲ್ಲಿಯೂ ಜಲಾಶಯವನ್ನು ಕಾಣದೆ ಶಮೀಕಮುನಿಯ ಆಶ್ರಮವನ್ನು ಪ್ರವೇಶಿಸಿದ. ಮುನಿ ಧ್ಯಾನಮಗ್ನನಾಗಿದ್ದುದರಿಂದ ರಾಜನಿಗೆ ಸತ್ಕಾರ ಮಾಡಲಿಲ್ಲ, ಕಣ್ತೆರೆದೂ ನೋಡಲಿಲ್ಲ, ಮಾತನಾಡಿಸಲಿಲ್ಲ, ಮುನಿ ತನ್ನನ್ನು ತಿರಸ್ಕಾರ ಮಾಡುತ್ತಿದ್ದಾನೆ ಎಂಬ ತಪ್ಪು ಕಲ್ಪನೆಯಿಂದ ಕುಪಿತನಾಗಿ ರಾಜ ಅಲ್ಲಿಯೆ ಬಿದ್ದಿದ್ದ ಒಂದು ಸರ್ಪದ ಶವವನ್ನು ಬಿಲ್ಲಿನ ತುದಿಯಿಂದೆತ್ತಿ ಮುನಿಯ ಕೊರಳಿಗೆ ಹಾಕಿ ರಾಜಧಾನಿಗೆ ನಡೆದ. ದಾರಿಯಲ್ಲಿ ಅವನಿಗೆ ತಾನು ಮಾಡಿದ್ದು ತಪ್ಪೆನಿಸಿತು. ಮುನಿ ನಿಜವಾಗಿ ಧ್ಯಾನಮಗ್ನನಾಗಿದ್ದನೆ ಅಥವಾ ಹಾಗೆ

ಸುಳ್ಳು ಪ್ರದರ್ಶನ ಮಾಡಿದ್ದನೆ? ಎಂದು ಸಂದೇಹಿಸುತ್ತಲೆ ಅರಮನೆ ಯನ್ನು ಸೇರಿದ. ಇತ್ತ ಶಮೀಕಮುನಿಯ ಮಗ ಶೃಂಗಿ ಬಾಲಕ, ಗೆಳೆಯರೊಂದಿಗೆ ಆಟವಾಡುತ್ತಿದ್ದಾಗ ರಾಜ ಮಾಡಿದ ಅಪಚಾರವನ್ನು ಕೇಳಿ ಸಿಟ್ಟಾಗಿ ಇಂದಿಗೆ ಏಳನೆ ದಿನದಲ್ಲಿ ತಕ್ಷಕಸರ್ಪ ಕಡಿದು ರಾಜ ಸಾಯಲಿ ಎಂದು ಶಾಪವಿತ್ತ. ಧ್ಯಾನದಿಂದ ಬಹಿರ್ಮುಖನಾದ ಶಮೀಕಮುನಿ ಮಗನನ್ನೆ ಆಕ್ಷೇಪಿಸಿದ. ರಾಜ ಮಾಡಿದ ಒಂದು ಸಣ್ಣ ತಪ್ಪಿಗೆ ಇಷ್ಟು ದೊಡ್ಡ ಶಾಪವಿತ್ತೆಯ? ರಾಜನಿಲ್ಲದಿದ್ದರೆ ರಾಷ್ಟ್ರ ಉಳಿಯದು. ರಾಷ್ಟ್ರನಾಶದ ಪಾಪ ನಮಗೆ ನಮ್ಮ ಸಂತತಿಗೇ ಶಾಪವಾಗಿ ಪರಿಣಮಿಸುವುದು. ಶ್ರೀಹರಿ, ಬಾಲಕ ತಿಳಿಯದೆ ಅಪರಾಧ ಮಾಡಿದ್ದಾನೆ ಕ್ಷಮಿಸು ಎಂದ.

★★★

ವಿಪ್ರಶಾಪ ಪ್ರಯುಕ್ತ ತಕ್ಷಕನಿಂದ ತನಗೆ ಮರಣವಾಗುವುದೆಂದು ತಿಳಿದರೂ ಪರೀಕ್ಷಿತ ಧೃತಿಗೆಡದೆ ಭಾಗವತ ಶ್ರವಣದಿಂದ ಮೋಕ್ಷ ಸಾಧನೆಯನ್ನೇ ಮಾಡಿಕೊಂಡ—

ಉತ್ಸೃಜ್ಯ ಸರ್ವತಃ ಸಂಗಂ ವಿಜ್ಞಾನಾರ್ಜಿತ ಸಂಸ್ಥಿತಿಃ ।
ವೈಯಾಸಕೇರ್ಜಹೌ ಶಿಷ್ಯೋ ಗಂಗಾಯಾಂ ಸ್ವಕಲೇವರಂ ॥ ೩ ॥

ಪರೀಕ್ಷಿತ ಸರ್ವಸಂಗ ಪರಿತ್ಯಾಗ ಮಾಡಿ ಶುಕಮುನಿಯ ಶಿಷ್ಯನಾಗಿ ತನಗೆ ಯೋಗ್ಯವಾದ ಮೋಕ್ಷಸಾಧನ ಜ್ಞಾನದಿಂದ ಮೋಕ್ಷ ಪಡೆದ. ಗಂಗೆಯಲ್ಲಿ ತನ್ನ ಶರೀರವನ್ನು ತೊರೆದ.

ಇಲ್ಲಿ ಬೇರೆ ವ್ಯಾಖ್ಯಾನಕಾರರಿಗೆ 'ವಿಜ್ಞಾತಾಜಿತಸಂಸ್ಥಿತಿಃ' ಎಂದು ಪಾಠ. ಪರಮಾತ್ಮ ತತ್ವವನ್ನು ತಿಳಿದುಕೊಂಡವನೆಂದರ್ಥ. ಇಲ್ಲಿ ವಿಜ್ಞಾನ ಎಂದರೆ ವಿಶೇಷ ಜ್ಞಾನವಷ್ಟೆ. ವಿಶೇಷಾರ್ಥವಿಲ್ಲ.

'ವಿಜ್ಞಾನಾರ್ಜಿತ ಸಂಸ್ಥಿತಿಃ' ಎಂಬ ಪಾಠದಲ್ಲಿ ವಿಜ್ಞಾನ ಎಂದರೇನು?

ವಿಜ್ಞಾನಮಾತ್ಮಯೋಗ್ಯಂ ಸ್ಯಾದ್ ಜ್ಞಾನಂ ಸಾಧಾರಣಂ ಸ್ಮೃತಂ ।
ಇತಿ ಭಾಗವತ ತಂತ್ರೇ ।

ಅವರವರಿಗೆ ವಿಶೇಷವಾಗಿ ಸಾಧಿಸಲು ಯೋಗ್ಯವಾದ ಮೋಕ್ಷಕಾರಣವಾದ ಜ್ಞಾನ ವಿಜ್ಞಾನವೆನಿಸುತ್ತದೆ. ಎಲ್ಲರಿಗೂ ಸಾಧಾರಣವಾಗಿ ಮೋಕ್ಷಕಾರಣವಾದ ಜ್ಞಾನ ಜ್ಞಾನವೆನಿಸುತ್ತದೆ ಎಂದು ಭಾಗವತತಂತ್ರದಲ್ಲಿ ಉಕ್ತವಾಗಿದೆ.

★★★

ಭಗವದ್ಭಕ್ತರ ಸಂಗದಿಂದ ಲಭಿಸುವ ಭಾಗವತಾಮೃತಪಾನಕ್ಕೆ ಸಮಾನವಾದ

ಸುಖ ಇನ್ನೊಂದಿಲ್ಲ. ಆದರಿಂದ ಪರೀಕ್ಷಿತನ ಕಥೆಯನ್ನೆ ಮುಂದುವರಿಸಿರೆಂದು ಶೌನಕರು ಸೂತರಲ್ಲಿ ಹೇಳುತ್ತಾರೆ—

ತುಲಯಾಮ ಲವೇನಾಪಿ ನ ಸ್ವರ್ಗಂ ನಾಪುನರ್ಭವಂ ।
ಭಗವತ್ಸಂಗಿಸಂಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ॥ ೧೩ ॥

ಉತ್ತಮ ಜೀವನ್ಮುಕ್ತರಿಗೆ ಭಗವದ್ಭಕ್ತರ ಸಹವಾಸದಿಂದ ಸಿಗುವ ಸುಖಕ್ಕೆ ಸಾಮಾನ್ಯರು ಪಡೆಯುವ ಸ್ವರ್ಗಸುಖವನ್ನಾಗಲಿ ಮೋಕ್ಷಸುಖವನ್ನಾಗಲಿ ಹೋಲಿಸಲಾರೆವು ಎಂದಮೇಲೆ ಮಾನವರ ಐಹಿಕ ಭೋಗಭಾಗ್ಯಗಳ ಬಗ್ಗೆ ಏನು ಹೇಳಬೇಕು?

ಇಲ್ಲಿ ಶೌನಕಾದಿ ಮುನಿಗಳ ಸತ್ಸಂಗದ ಸಾಂಸಾರಿಕ ಸುಖಕ್ಕಿಂತ ಮೋಕ್ಷಾನಂದ ಕಡಿಮೆ ಎಂದಿದೆ. ಇದು ಹೇಗೆ ಸಾಧ್ಯ? ವಲ್ಲಭಾಚಾರ್ಯರು ಹೇಳುತ್ತಾರೆ. ಭಾಗವತ ಶ್ರವಣದಿಂದ ದೊರಕುವ ಭಗವದಾನಂದಕ್ಕೆ ಮೋಕ್ಷದಲ್ಲಿ ಸಿಗುವ ಆತ್ಮಾನಂದವೂ ಕಡಿಮೆಯೆ ಎಂದು. ಉಳಿದ ವ್ಯಾಖ್ಯಾನಕಾರರೂ ಕರ್ಮಜ್ಞಾನ ಫಲಗಳಾದ ಸ್ವರ್ಗಮೋಕ್ಷಗಳಿಗಿಂತಲೂ ಭಕ್ತಿಫಲವಾದ ಪ್ರೇಮವೆ ಅತ್ಯಂತ ಶ್ರೇಷ್ಠ ಎಂದಿದ್ದಾರೆ.[೧] ಇವು ಸರಿಯಲ್ಲ. ಮೋಕ್ಷಸುಖಕ್ಕೆ ಸಮಾನ ಬೇರೆ ಸುಖವಿಲ್ಲ. ಆದರಿಂದ ಹೀಗೆ ಹೇಳಬೇಕು-

ಸಮ್ಯಕ್ ಸ್ವರೂಪಸ್ಯಾವ್ಯಕ್ತಿರಭಾವೋ ಜನನಸ್ಯ ಚ ।
ಅಲ್ಪಯತ್ನಾತ್ ತತೋ ವೃದ್ಧಿ ಹೇತೋಃ ಸತ್ಸಂಗತಿರ್ವರಾ ॥

ಇತಿ ವಾಯುಪ್ರೋಕ್ತೇ ।

---

೧. ಭಕ್ತೇಃ ಸಾಧನಸ್ಯಾಪಿ ಸಾಧುಸಂಗಸ್ಯ ಲವೇನಾಪಿ ಕರ್ಮಜ್ಞಾನಾದೇಃ ಫಲಂ ಸಂಪೂರ್ಣಮಪಿ ನ ತುಲಯಾಮ । ಕಿಮುತ ಬಹುಕಾಲ ವ್ಯಾಪಿನಾ ಸಾಧುಸಂಗೇನ । ಕಿಮುತತರಾಂ ತತ್ಫಲ ಭೂತಯಾ ಭಕ್ತ್ಯಾ । ಕಿಮುತತಮಾಂ ಭಕ್ತಿಫಲೇನ ಪ್ರೇಮ್ಣೇತಿ ಚ ಕೈಮುತ್ಯಾತಿಶಯೋ ದ್ಯೋತಿತೋ ಭವತಿ । -ವಿಶ್ವನಾಥಃ

ಯಥಾ ತ್ವತ್ಸಂಗೇನ ಕಥಾಮೃತಪಾನೇ ಸುಖಂ ಜಾತಂ ತಥಾ ಸ್ವರ್ಗೇ ಭವಿಷ್ಯತೀತಿ ನ ಕಲ್ಪಯಾಮಃ । ತದಾ ಸಮಾನತ್ವಾಪಾದನೇನಾನಾದರಃ ಸ್ಯಾತ್ । ಸ್ವರ್ಗೇ ಹಿ ಯನ್ನ ದುಃಖೇನ ಸಂಭಿನ್ನಮಿತಿ ವಾಕ್ಯಾತ್ ದುಃಖಾಸಂಶ್ಲಿಷ್ಟಃ ಸುಖವಿಶೇಷಃ । ಸ ಚ ಜೀವೋಪಭೋಗ್ಯ ಜೀವಾತ್ಮಾನಂದಾತ್ ನ್ಯೂನಃ । ತಸ್ಯೈವ ಜೀವಾವರಣನಿವೃತ್ತಿರೂಪಃ ಅಪುನರ್ಭವಃ ಯತೋ ನ ಪುನರ್ಭವತೀತಿ । ಸ ಚ ಮಾನುಷಾನಂದಾಪೇಕ್ಷಯಾ ಉತ್ತಮೋಽಪಿ ಬ್ರಹ್ಮಾನಂದಾಪೇಕ್ಷಯಾ, ಸ ಏವ ವಾ, ಉಭಯಥಾಪಿ ಆನಂದಮಯಸ್ಯ ಭಗವತಸ್ತುಲ್ಯೋ ನ ಭವತಿ । ಅನ್ಯಥಾ ಜೀವಸ್ಯ ಬ್ರಹ್ಮಭಾವೋ ನೋಚ್ಯೇತ, ಬ್ರಹ್ಮಭೂತಸ್ಯ ವಾ ಭಗವತ್ಪ್ರವೇಶಃ ।

-ವಲ್ಲಭಾಚಾರ್ಯಃ

ಅಲ್ಪಯತ್ನದಿಂದ ಕೆಲವರಿಗೆ ಪೂರ್ತಿ ಸ್ವರೂಪಸುಖಾಭಿವ್ಯಕ್ತಿ ಇಲ್ಲದ ಪುನರ್ಜನ್ಮಾಭಾವರೂಪ ಮೋಕ್ಷ ದೊರಕಬಹುದು. ಆದರೆ ಅದಕ್ಕಿಂತಲೂ ಮಹಾಪ್ರಯತ್ನಮಾಡುವ ಜೀವನ್ಮುಕ್ತರಿಗೆ ಸಜ್ಜನ ಸಂಗದಿಂದ ಅಧಿಕ ಸಾಂಸಾರಿಕ ಸುಖದೊಂದಿಗೆ ಮೋಕ್ಷದಲ್ಲಿಯೂ ಅಧಿಕ ಸುಖಾಭಿವ್ಯಕ್ತಿ ಸಾಧ್ಯವಿದೆ. ಅದರಿಂದ ಅದಕ್ಕೆ ಕಾರಣವಾದ ಸಜ್ಜನಸಂಗವೆ ಶ್ರೇಷ್ಠ ಎಂದು ವಾಯುಪ್ರೋಕ್ತದಲ್ಲಿ ಹೇಳಿದೆ.

★★★

ಸೂತರು ತಾವು ಹೀನಕುಲದವರೆಂದು ದುಃಖಿಸುವುದಿಲ್ಲ. ಏಕೆಂದರೆ ಶುಕಮುನಿಯ ಶಿಷ್ಯರಾಗಿ ಅವರ ಉಪದೇಶದಂತೆ ಭಾಗವತದಲ್ಲಿ ವೈಷ್ಣವರ ಬಗ್ಗೆ ಹೇಳುವ ಯೋಗ ತನ್ನದಾಗಿದೆ. ಇನ್ನು ಸಾಕ್ಷಾದ್ ವಿಷ್ಣುವಿನ ಲೀಲೆಗಳನ್ನು ವರ್ಣಿಸುವ ಅವಕಾಶವೂ ದೊರಕಿದೆ ಎಂದ ಮೇಲೆ ಇನ್ನೇನು?

ಕುತಃ ಪುನರ್ಗೃಣತೋ ನಾಮ ತಸ್ಯ
ಮಹತ್ತಮೈಕಾಂತ ಪಥಾಯಣಸ್ಯ ।
ಯೋಽನಂತಶಕ್ತಿರ್ಭಗವಾನನಂತೋ
ಮಹದ್ಗುಣತ್ವಾದ್ ಯಮನಂತಮಾಹುಃ ॥ ೧೯ ॥

ಮಹಾತ್ಮರಾದ ಪರೀಕ್ಷಿತ ಮುಂತಾದವರ ಮಹಿಮ ವರ್ಣನ ಮಾಡಿದ್ದರಿಂದಲೆ ನಾನು ಹೀನ ಕುಲದವನೆಂಬ ಕೊರಗು ಪರಿಹಾರವಾಗುತ್ತಿರುವಾಗ ಆ ಮಹಾತ್ಮರಿಗೂ ಮುಖ್ಯ ಆರಾಧ್ಯನಾದ ಹರಿಯ ಮಹಿಮೆಯನ್ನು ಹೇಳಿದರೆ ಇನ್ನೇನು? ಹರಿ ಅಪರಿಮಿತ ಗುಣಶಾಲಿಯಾದ್ದರಿಂದಲೆ ವೇದಗಳು ಅವನನ್ನು ಅನಂತ ಎಂದು ಕರೆದಿವೆ. ಅನಂತಶಕ್ತಿ ಉಳ್ಳ ಸರ್ವದೇಶ ಸರ್ವಕಾಲ ವ್ಯಾಪ್ತನಾದ ಭಗವಂತ ಅವನು.

ಇಲ್ಲಿ 'ಮಹದ್ಗುಣತ್ವಾದ್ ಯಮನಂತಮಾಹುಃ' ಗುಣಪೂರ್ಣನಾದ್ದರಿಂದ ಅನಂತನೆನಿಸುತ್ತಾನೆ ಎಂದು ಪ್ರತ್ಯೇಕ ಹೇಳಿದಮೇಲೆ ಭಗವಾನನಂತಃ ಎಂದು ಪುನಃ ಅನಂತ ಎಂದರೇನು?

ಬೇರೆ ವ್ಯಾಖ್ಯಾನಕಾರರು ಮಹದ್ಗುಣತ್ವವೆಂದರೆ ಮಹಾತ್ಮರಲ್ಲಿ ಭಗವಂತನ ಗುಣಗಳು ಬಂದು ಸೇರುತ್ತವೆ. ಅದರಿಂದಲೆ ಭಗವಂತನಂತೆ ಭಕ್ತನೂ ಪ್ರಾರಬ್ಧ ರಹಿತನಾಗುತ್ತಾನೆ ಎನ್ನುತ್ತಾರೆ.[೧] ಆದರೆ ಈ ಅರ್ಥ 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ,

---

೧. ಮಹತ್ಸು ಸ್ವಭಕ್ತೇಷು ಗುಣಾ ಯಸ್ಯ ಸ ಮಹದ್ಗುಣಃ ತಸ್ಯ ಭಾವಸ್ತತ್ತ್ವಂ । ತದ್ಭಕ್ತೇಷು ತದೀಯಗುಣ ಸಂಕ್ರಮಾತ್ ತಸ್ಮಿನ್ನಿವ ತದ್ಭಕ್ತೇಽಪಿ ಪ್ರಾರಬ್ಧಂ ನ ತಿಷ್ಠತಿ । -ವಿಶ್ವನಾಥಃ

ಬೃಹಂತೋ ಹ್ಯಸ್ಮಿನ್ ಗುಣಾಃ' ಎಂಬ ಶ್ರುತಿಗೆ ಅನುಗುಣವಲ್ಲ. ಅದರಿಂದ ಮಹದ್‌ಗುಣತ್ವವೆಂದರೆ ಅನಂತಗುಣ ಪೂರ್ಣತ್ವವೇ ಎಂದು ಹೇಳಬೇಕು. ಆಗಲೂ ಪುನಃ 'ಅನಂತ' ಶಬ್ದವೇಕೆ? 'ಸ್ವರೂಪೇಣ ಅನಂತ' ಸ್ವರೂಪದಿಂದ ಅನಂತ ಎಂದು ಹೇಳಿ ಪುನರುಕ್ತಿ ಪರಿಹಾರ ಮಾಡುತ್ತಾರೆ.[೧] ಆದರೆ ಗುಣಗಳು ಭಗವಂತನ ಸ್ವರೂಪವೇ ಆಗಿರುವುದರಿಂದ 'ಸ್ವರೂಪದಿಂದ ಅನಂತ' ಎಂದು ಬೇರೆ ಇಲ್ಲ. ಅದರಿಂದ ಹೀಗೆ ಹೇಳಬೇಕು—

ಅನಂತೋ ದೇಶತಃ ಕಾಲತಶ್ಚ ।

ಸರ್ವದೇಶಗಳಲ್ಲಿಯೂ ಸರ್ವಕಾಲಗಳಲ್ಲಿಯೂ ಇರುವವನು ದೇಶಕಾಲ ಗಳಲ್ಲಿ ಮಿತಿಯಿಲ್ಲದವನು ಅನಂತ ಎನಿಸುತ್ತಾನೆ.

★★★

ಶ್ರೀಹರಿ ಅನಂತಗುಣ ಪೂರ್ಣನಾದ್ದರಿಂದ ಅವನೇ ಮಹಾತ್ಮರೆಲ್ಲರಿಗೂ ಮುಖ್ಯ ಆರಾಧ್ಯನೆನಿಸಿದ್ದಾನೆ ಎಂದು ಹಿಂದೆ ಹೇಳಿದೆ. ಈಗ ಆ ಮುಖ್ಯ ಆರಾಧ್ಯತ್ವವನ್ನೇ ವಿಶದಪಡಿಸುತ್ತಾರೆ, ಸೂತರು—

ಯತ್ರಾನುರಕ್ತಾಃ ಸಹಸೈವ ಧೀರಾ
ವ್ಯಪೋಹ್ಯ ದೇಹಾದಿಷು ಸಂಗಮೂಢಂ ।
ವ್ರಜಂತಿ ತತ್ ಪಾರಮಹಂಸ್ಯಸತ್ಯಂ
ಯಸ್ಮಿನ್ನಹಿಂಸೋಪರಮಶ್ಚ ಧರ್ಮಃ ॥ ೨೨ ॥

ಹರಿಯಲ್ಲಿ ಅನುರಕ್ತರಾದ ಬ್ರಹ್ಮಾದಿ ಜ್ಞಾನಿಗಳು ದೇಹಾದಿಗಳಲ್ಲಿ ರೂಢಮೂಲವಾದ ಆಸಕ್ತಿಯನ್ನು ತೊರೆದು, ಗೃಹಸ್ಥರ ವಿಹಿತಹಿಂಸೆಯನ್ನೂ ಮಾಡದಿರುವ ಮತ್ತು ವಿಷಯಸುಖಗಳನ್ನು ತೊರೆಯುವ ಸನ್ಯಾಸಧರ್ಮದಿಂದ ಪ್ರಾಪ್ಯನಾದ ಸತ್ಯಸ್ವರೂಪನಾದ ಹರಿಯನ್ನು ಹೊಂದುತ್ತಾರೆ.

ಇಲ್ಲಿ 'ಪಾರಮಹಂಸ್ಯ ಸತ್ಯಂ' ಎಂದರೆ ಪರಮಹಂಸರು ಹೇಳುವ ಸತ್ಯವಚನ ಎಂದರ್ಥವಲ್ಲ. ಬೇರೆ ವ್ಯಾಖ್ಯಾನಕಾರರು ಹಿಡಿದಿರುವ 'ಪಾರಮಹಂಸ್ಯಮಂತ್ಯಂ' ಎಂಬ ಪಾಠವೂ ಅಪಪಾಠ. ಅದರಿಂದ ಹೀಗೆ ಅರ್ಥ ಹೇಳಬೇಕು—

ಪರಮಹಂಸಾಶ್ರಮಪ್ರಾಪ್ಯಂ ಸತ್ಯಂ ಬ್ರಹ್ಮ ।

---

೧. ಯಶ್ಚ ಸ್ವರೂಪೇಣಾನಂತಃ ಯಂ ಚ ಮಹದ್ಗುಣತ್ವಾದ್ ಅನಂತಗುಣತ್ವಾತ್ ಅನಂತಮಾಹುಃ । -ವೀರರಾಘವಃ

ಪಾರಮಹಂಸ್ಯ ಎಂದರೆ ಪರಮಹಂಸಾಶ್ರಮದಿಂದ ಪ್ರಾಪ್ಯವಾದ್ಧ, ಸತ್ಯ ಅಂದರೆ ಸತ್ಯಸ್ವರೂಪವಾದ ಪರಬ್ರಹ್ಮ ಎಂದರ್ಥ.

★★★

ಪರೀಕ್ಷಿತ ಕಾಡಿನಲ್ಲಿ ಬೇಟೆಯಾಡಿ ಬಳಲಿ ಬಾಯಾರಿ ಎಲ್ಲಿಯೂ ನೀರನ್ನು ಕಾಣದೆ ಶಮೀಕರ ಆಶ್ರಮವನ್ನು ಪ್ರವೇಶಿಸಿದ. ಮುನಿ ಆಗ ಗಾಢವಾಗಿ ಧ್ಯಾನ ಮಾಡುತ್ತಿದ್ದ—

ಪ್ರತಿರುದ್ಧೇಂದ್ರಿಯಪ್ರಾಣಮನೋಬುದ್ಧಿಮುಪಾರತಂ ।
ಸ್ಥಾನತ್ರಯಾತ್ ಪರಂ ಪ್ರಾಪ್ತಂ ಬ್ರಹ್ಮಭೂತಮವಿಕ್ರಿಯಂ ॥ ೨೬ ॥

ಶಮೀಕಮುನಿ ಇಂದ್ರಿಯ ಪ್ರಾಣ ಮನಸ್ಸು ಬುದ್ಧಿಗಳನ್ನು ಹರಿಯಲ್ಲೆ ನಿಲ್ಲಿಸಿದ್ದ. ವಿಷಯಾಸಕ್ತಿ ತೊರೆದಿದ್ದ. ಜಾಗ್ರದಾದಿ ಅವಸ್ಥಾತ್ರಯಕ್ಕಿಂತ ಆಚಿನ ಸಮಾಧಿಯ ಅವಸ್ಥೆಯನ್ನು ಹೊಂದಿದ್ದ. ಅನಾಯಾಸವಾಗಿ ಪ್ರಯತ್ನವಿಲ್ಲದೆ ಹರಿಯಲ್ಲಿ ಮನಸ್ಸಿಟ್ಟಿದ್ದ. ನಿಷ್ಕ್ರಿಯನಾಗಿ ಕುಳಿತಿದ್ದ.

ಇಲ್ಲಿ 'ಬ್ರಹ್ಮಭೂತಂ' ಎಂದರೆ ಬ್ರಹ್ಮನೊಂದಿಗೆ ಐಕ್ಯ ಹೊಂದಿದ್ದ. ಇದು ಸಮಾಧಿಯ ಫಲ. 'ಬ್ರಹ್ಮ ವೇದ ಬ್ರಹ್ಮೈವ ಭವತಿ' ಎಂದು ಶ್ರುತಿ ಹಾಗೆ ಹೇಳುತ್ತದೆ. ಎಂದು ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ.[೧] ಇದು ಸರಿಯಲ್ಲ.

ಬ್ರಹ್ಮಭೂತಂ ಬ್ರಹ್ಮಣಿ ಭೂತಂ ।
ಸ್ವತೋ ಮನಃಸ್ಥಿತಿರ್ವಿಷ್ಣೌ ಬ್ರಹ್ಮಭಾವ ಉದಾಹೃತಃ ।

ಇತಿ ಬ್ರಹ್ಮಾಂಡೇ ।

'ಬ್ರಹ್ಮಭೂತಂ' ಎಂದರೆ ಬ್ರಹ್ಮನಲ್ಲಿ ಮನಸ್ಸಿಟ್ಟವನೆಂದರ್ಥ. ಮನಸ್ಸು ಅನಾಯಾಸವಾಗಿ ಸ್ವತಃ ಬ್ರಹ್ಮನಲ್ಲಿ ನಿಲ್ಲುವುದೇ ಬ್ರಹ್ಮಭಾವವೆನಿಸುತ್ತದೆ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

★★★

ಮಹಾರಾಜ ತಾನು ಬಂದಿದ್ದೇನೆ ಮುನಿ ಏನೂ ಸತ್ಕಾರ ಮಾಡುತ್ತಿಲ್ಲ. ಮಾತಿನಿಂದಲಾದರೂ ಕುಳಿತುಕೊ ಎನ್ನಲಿಲ್ಲ, ಬಾಯಾರಿದವನಿಗೆ ನೀರು ಕೊಡಲಿಲ್ಲ. ಧ್ಯಾನ ಸಮಾಧಿಯ ಸೋಗಿನಿಂದ ತನ್ನನ್ನು ಅವಮಾನಿಸುತ್ತಿದ್ದಾನೆ ಎಂದುಕೊಂಡು ಪರೀಕ್ಷಿತ ಸಿಟ್ಟಾದ—

---

೧. ಸ್ಥಾನತ್ರಯಾತ್ ಪರಂ ಸಮಾಧಿಂ ಪ್ರಾಪ್ತಸ್ಯ ಸ್ವರೂಪಂ ಭಾಸತೇ ಇತ್ಯರ್ಥಃ । ನ ಕೇವಲಂ ಭಾನಮಾತ್ರಂ, ಕಿಂತು ಫಲಮಪಿ ಜಾತಮಿತ್ಯಾಹ ಬ್ರಹ್ಮಭೂತಮಿತಿ । ಬ್ರಹ್ಮ ವೇದ ಬ್ರಹ್ಮೈವ ಭವತೀತಿ ಶ್ರುತೇಃ । -ವಲ್ಲಭಾಚಾರ್ಯಃ

ಅಭೂತಪೂರ್ವಃ ಸಹಸಾ ಕ್ಷುತ್‌ತೃಡ್‌ಭ್ಯಾಮರ್ದಿತಾತ್ಮನಃ ।
ಬ್ರಾಹ್ಮಣಂ ಪ್ರತ್ಯಭೂದ್ ಬ್ರಹ್ಮನ್ ಮತ್ಸರೋ ಮನ್ಯುರೇವ ಚ ॥ ೨೯ ॥

ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿದ್ದ ಪರೀಕ್ಷಿತನಿಗೆ ಶಮೀಕ ಮುನಿಯ ಬಗ್ಗೆ ಅನಿರೀಕ್ಷಿತವಾಗಿ ಕೋಪ ಅಸಮಾಧಾನಗಳು ಉಂಟಾದುವು. ಬ್ರಾಹ್ಮಣನ ಬಗ್ಗೆ ರಾಜನಿಗೆ ಹೀಗೆ ಕೋಪ ಅಸಮಾಧಾನ ಹಿಂದೆ ಎಂದೂ ಬಂದಿರಲಿಲ್ಲ, ಅಭೂತ ಪೂರ್ವ.

ಇಲ್ಲಿ 'ಮತ್ಸರ' ಎಂದರೆ ಬೇರೆ ವ್ಯಾಖ್ಯಾನಕಾರರು ಹೊಟ್ಟೆ ಕಿಚ್ಚು ಎಂದಿದ್ದಾರೆ. ರಾಜನಿಗೆ ಮುನಿಯಲ್ಲಿ ಹೊಟ್ಟೆಕಿಚ್ಚು ಪಡುವಂಥದ್ದೇನಿದೆ? ವೀರರಾಘವವ್ಯಾಖ್ಯಾನ ದಲ್ಲಿ ಮತ್ಸರವೆಂದರೆ ದ್ರೋಹಬುದ್ಧಿ, ಮನ್ಯು ಎಂದರೆ ಕ್ರೋಧ ಎಂದಿದೆ. ಆದರೆ ಈ ಎರಡರಲ್ಲಿ ಹೆಚ್ಚಿನ ಭೇದವಿಲ್ಲ, ಮತ್ತು ಹೀಗೆ ವ್ಯಾಖ್ಯಾನಿಸಲು ಪ್ರಮಾಣದ ಆಧಾರವೂ ಇಲ್ಲ. ಅದರಿಂದ ಹೀಗೆ ಹೇಳಬೇಕು—

ಅಪ್ರೀತಿರ್ಮದ್ವಶೋ ನಾಯಮಿತಿ ಮತ್ಸರ ಈರಿತಃ ।
ಇತಿ ನಾಮಮಹೋದಧೌ ।

ಈತ ನನ್ನ ಅಧೀನನಾಗಿ ವರ್ತಿಸುತ್ತಿಲ್ಲ ಎಂಬ ಅಸಮಾಧಾನ ಮತ್ಸರವೆನಿಸುತ್ತದೆ ಎಂದು ನಾಮಮಹೋದಧಿಯಲ್ಲಿ ಹೇಳಿದೆ.

★★★

ಪರೀಕ್ಷಿತ ಕೋಪದಿಂದ 'ಮುನಿಯೆ, ನೀನು ನನಗೇನೂ ಸತ್ಕಾರ ಮಾಡಲಿಲ್ಲ. ನಾನು ನಿನಗೆ ಈ ಸತ್ಕಾರ ಮಾಡುತ್ತೇನೆ' ಎಂದು ಹಾವಿನ ಶವವನ್ನು ಬಿಲ್ಲಿನ ತುದಿಯಿಂದೆತ್ತಿ ಮುನಿಯ ಕೊರಳಿಗೆ ಹಾಕಿ ಹೊರಟುಹೋದ. ದೂರದಲ್ಲಿ ಗೆಳೆಯರೊಡನೆ ಆಟವಾಡುತ್ತಿದ್ದ ಮುನಿಕುಮಾರ ಶೃಂಗಿ ಇದನ್ನು ಕೇಳಿ ಕೋಪದಿಂದ ರಾಜನಿಗೆ ಶಪಿಸಿದ—

ಇತ್ಯುಕ್ತ್ವಾ ರೋಷತಾಮ್ರಾಕ್ಷೋ ವಯಸ್ಯಾನ್ ಋಷಿಬಾಲಕಾನ್ ।
ಕೌಶಿಕ್ಯಪ ಉಪಸ್ಪೃಶ್ಯ ವಾಗ್‌ವಜ್ರಂ ವಿಸಸರ್ಜ ಹ ॥ ೩೬ ॥

ತಪ್ಪಿ ನಡೆವವರನ್ನು ಶಿಕ್ಷಿಸುತ್ತಿದ್ದ ಕೃಷ್ಣ ಈಗ ಇಲ್ಲವೆಂದು ರಾಜರು ಕೊಬ್ಬಿದ್ದಾರೆ. ನೋಡಿರಿ, ನಾನೇ ಈತನನ್ನು ಶಿಕ್ಷಿಸುತ್ತೇನೆ ಎಂದು ಶೃಂಗಿ ತನ್ನ ಜೊತೆಯ ಋಷಿಕುಮಾರರಿಗೆ ಹೇಳಿ ರೋಷದಿಂದ ಕಣ್ಣು ಕೆಂಪಗೆ ಮಾಡಿಕೊಂಡು ದರ್ಭೆಯ ಪವಿತ್ರ ಧರಿಸಿ ಆಚಮನಮಾಡಿ ವಜ್ರಾಯುಧದಂತಹ ಶಾಪವನ್ನಿತ್ತ.

ಇಲ್ಲಿ 'ಕೌಶಿಕ್ಯಪ ಉಪಸ್ಪೃಶ್ಯ' ಎಂದರೆ ಕೌಶಿಕೀನದಿಯ ನೀರಿಂದ ಆಚಮನ

ಮಾಡಿ' ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. ಆದರೆ ಅಲ್ಲಿ ಕೌಶಿಕೀನದಿ ಇರಲಿಲ್ಲ. ಇರುತ್ತಿದ್ದರೆ ರಾಜ ನೀರಿಗಾಗಿ ಆಶ್ರಮಕ್ಕೆ ಬರುತ್ತಿರಲಿಲ್ಲ. ಅದರಿಂದ ಹೀಗೆ ಹೇಳಬೇಕು—

ಕೌಶಿಕೀ ಕುಶಪಾಣಿಃ ।

ಕೌಶಿಕೀ ಎಂದರೆ ದರ್ಭೆಯ ಪವಿತ್ರವನ್ನು ಕೈಯಲ್ಲಿ ಧರಿಸಿದವನೆಂದರ್ಥ.

ಕುಶದಿಂದ ನಿರ್ಮಿತವಾದುದು ಕೌಶಿಕ, ಪವಿತ್ರ. ಕೌಶಿಕ ಉಳ್ಳವನು ಕೌಶಿಕೀ, ಹೊರತು, ಕೌಶಿಕೀ ಎಂಬ ನದಿಯಲ್ಲ.

'ಕೌಶಿಕೀ ಕುಶಾಪಾಣಿಃ' ಎಂದು ಹೃಷಿಕೇಶತೀರ್ಥಪಾಠ. ಲೇಖಕ ದೋಷವಿರಬೇಕು. ಏಕೆಂದರೆ 'ಕುಶಾ' ಎಂದು ದರ್ಭೆಗೆ ಹೆಸರಿಲ್ಲ. ಯಜ್ಞಗಳಲ್ಲಿ ಸಾಮಗಾನ ವನ್ನು ಎಣಿಸಲು ಸಾಮಗರು ಉಪಯೋಗಿಸುವ ಅತ್ತಿಯ ಕಡ್ಡಿಗಳನ್ನು ಕುಶಾ ಎನ್ನುತ್ತಾರೆ. ಪ್ರಕೃತ ಆ ಅರ್ಥ ಕೂಡುವುದಿಲ್ಲ. ಬ್ರಹ್ಮಸೂತ್ರದಲ್ಲಿ 'ಕುಶಾಛಂದಸ್ತುತ್ಯುಪಗಾನವತ್' ಎಂಬಲ್ಲಿ ಕುಶಾ ಶಬ್ದವಿಲ್ಲ. ಕುಶೈರಾಚ್ಛಂದೇನ ಕ್ರಿಯಮಾಣ ಸ್ತುತ್ಯುಪಗಾನವತ್ ಎಂದು ತತ್ವಪ್ರಕಾಶಿಕೆಯಲ್ಲಿ ಕುಶ ಶಬ್ದವನ್ನೇ ಗ್ರಹಿಸಲಾಗಿದೆ.

★★★

ಶಮೀಕ ಮುನಿ ಶೃಂಗಿಗೆ ಹೇಳುತ್ತಾನೆ, 'ರಾಜ ತಪ್ಪು ಮಾಡಿದರೂ ನಾವು ಪ್ರಜೆಗಳು ಅವನನ್ನು ಸಾಯಲೆಂದು ಶಪಿಸಕೂಡದು. ಶಪಿಸಿದರೆ ಅದರಿಂದ ನಮಗೇ ಅನರ್ಥ. ರಾಜನಿಲ್ಲದಿದ್ದರೆ ಎಲ್ಲೆಡೆ ಅರಾಜಕತೆಯಿಂದ ಪ್ರಜೆಗಳು ನಾಶಹೊಂದುತ್ತಾರೆ'—

ಅರಕ್ಷ್ಯಮಾಣೇ ನರದೇವನಾಮ್ನಿ
ರಥಾಂಗಪಾಣಾವಯಮಂಗ ಲೋಕಃ ।
ತದಾ ಹಿ ಚೋರಪ್ರಚುರೋ ವಿನಂಕ್ಷ್ಯ-
ತ್ಯರಕ್ಷ್ಯಮಾಣೋ ವಿವರೂಥವತ್ ಕ್ಷಣಾತ್ ॥ ೪೩ ॥

ರಾಜನೊಳಗೆ ನಿಂತು ಚಕ್ರಧಾರಿ ನಾರಾಯಣ ಪ್ರಜೆಗಳನ್ನು ಕಾಪಾಡದಿದ್ದರೆ ಎಲ್ಲೆಡೆ ಕಳ್ಳರು ದರೋಡೆಕೋರರೇ ತುಂಬುತ್ತಾರೆ. ಆಗ ಸೇನಾಧಿಪತಿ ಇಲ್ಲದ ಸೈನ್ಯದಂತೆ ರಾಜ್ಯ ಕ್ಷಣದಲ್ಲಿ ನಾಶಹೊಂದುತ್ತದೆ.

ಇಲ್ಲಿ 'ವಿವರೂಥವತ್' ಎಂದರೇನು? ಬೇರೆ ವ್ಯಾಖ್ಯಾನಕಾರರು 'ಅವಿ ವರೂಥವತ್' ಎಂದು ಪದವಿಭಾಗಮಾಡಿ ತೋಳಗಳ ಆಕ್ರಮಣಕ್ಕೆ ಬಲಿಯಾದ ಕುರಿಹಿಂಡಿನಂತೆ ಎಂದು ಅರ್ಥೈಸಿದ್ದಾರೆ. ಅವಿ ಎಂದರೆ ಕುರಿಗಳು, ವರೂಥ ಹಿಂಡು ಎಂದು. ಇವರಿಗೆ ವರೂಥ ಶಬ್ದಾರ್ಥ ತಿಳಿದಿಲ್ಲ. ತೋಳವನ್ನು ಹೇಳುವ ಶಬ್ದವಿಲ್ಲ.

ಸೇನಾ ಪರಾಕಿಣೀ ಪ್ರೋಕ್ತಾ ವರೂಥೋ ಗುಪ್ತಿರುಚ್ಯತೇ ॥

ಇತ್ಯಭಿಧಾನಂ ।

ಸೈನ್ಯವು ಪರಾಕಿಣಿ ಎನಿಸುತ್ತದೆ, ಸೈನ್ಯದ ರಕ್ಷಣೆಯು ವರೂಥವೆನಿಸುತ್ತದೆ ಎಂದು ಅಭಿಧಾನ ಎಂಬ ಕೋಶದಲ್ಲಿದೆ.

ಆದರಿಂದ 'ವಿವರೂಥವತ್' ಎಂದೇ ಪದವಿಭಾಗ. ವಿವರೂಥ ಅಂದರೆ ರಕ್ಷಣೆ ಅಥವಾ ರಕ್ಷಕ ಇಲ್ಲದ ಸೈನ್ಯ ವಿ-ವರೂಥವೆನಿಸುತ್ತದೆ. ಸೈನ್ಯ ಹೇಗೆ ಸೇನಾಧಿಪತಿಯ ರಕ್ಷಣೆಯಲ್ಲಿಲ್ಲದೆ ನಾಶವಾಗುವುದೋ ಹಾಗೇ ರಾಜ್ಯವೂ ರಾಜನಿಲ್ಲದೆ ಉಳಿಯ ಲಾರದು. 'ವಿ-ವರೂಥ' ಎಂಬ ಶಬ್ದದಿಂದ 'ರಕ್ಷಣೆ ಇಲ್ಲದ್ದು' ಎಂದು ಮಾತ್ರ ಉಕ್ತವಾಗಬಹುದು. 'ರಕ್ಷಣೆ ಇಲ್ಲದ ಸೈನ್ಯ' ಅಥವಾ 'ರಕ್ಷಕನಾದ ಸೇನಾಧಿಪತಿ ಇಲ್ಲದ ಸೈನ್ಯ' ಎಂದಿಷ್ಟು ಅರ್ಥ ಹೇಗೆ ಲಭಿಸುತ್ತದೆ ಎನ್ನಕೂಡದು. ಸೈನ್ಯರಕ್ಷಣೆ ಅಥವಾ ಸೇನಾಧಿಪತಿ ಎಂಬ ಅರ್ಥದಲ್ಲಿಯೆ 'ವರೂಥ' ಶಬ್ದ ವ್ಯವಹಾರವೆಂದು ಸೂಚಿಸಲು ತಾತ್ಪರ್ಯದಲ್ಲಿ 'ಸೇನಾ ಪರಾಕಿಣೀ ಪ್ರೋಕ್ತಾ' ಎಂಬ ಅಂಶವನ್ನು ಹೇಳಿದೆ. ಇಲ್ಲದಿದ್ದರೆ ಆ ಅಂಶ ಪ್ರಕೃತ ಅನುಪಯುಕ್ತ. 'ಸೇನಾ ವರೂಥಿನೀ ಪ್ರೋಕ್ತಾ' ಎಂದು ಹೃಷೀಕೇಶ ತೀರ್ಥರ ಪಾಠವೂ ಇದೆ. ಆ ಪಾಠದಲ್ಲಿ ವರೂಥವೆಂದರೆ ಸೇನಾರಕ್ಷಣೆ ಎಂದೇ ಸ್ಪಷ್ಟವಾಗುವುದು.

★★★

ರಾಜನಿಲ್ಲದ ರಾಜ್ಯ ನಾಶ ಹೊಂದುವ ಬಗೆಯನ್ನು ಶಮೀಕರು ಶೃಂಗಿಗೆ ಹೇಳುತ್ತಾರೆ—

ತದದ್ಯ ನಃ ಪಾಪಮುಪೈತ್ಯನನ್ವಯಂ
ಯನ್ನಷ್ಟನಾಥಸ್ಯ ಪಶೋರ್ವಿಲುಂಪಕಾಃ ।
ಪರಸ್ಪರಂ ಘ್ನಂತಿ ಶಪಂತಿ ವೃಂಜತೇ
ಪಶೂನ್ ಸ್ತ್ರಿಯೋಽರ್ಥಾನ್ ಪುರುದಸ್ಯವೋ ಜನಾಃ ॥ ೪೪ ॥

ರಾಜನಿಲ್ಲದ ರಾಷ್ಟ್ರದಲ್ಲಿ ಜನರಲ್ಲಿ ಹೆಚ್ಚಿನವರು ಕಳ್ಳರು ದರೋಡೆಕೋರರೆ ಆಗಿ ರಾಷ್ಟ್ರವನ್ನೆ ಕೊಳ್ಳೆ ಹೊಡೆಯುತ್ತಾರೆ. ಪರಸ್ಪರ ಕಲಹ ಮಾಡಿ ಶಾಪಹಾಕುತ್ತಾರೆ. ಸ್ತ್ರೀಯರನ್ನೂ ಪಶುಗಳನ್ನೂ ಸಂಪತ್ತುಗಳನ್ನೂ ದೋಚುತ್ತಾರೆ. ಈ ರಾಷ್ಟ್ರನಾಶದ ಮಹಾಪಾಪ ರಾಜನಿಲ್ಲದಂತೆ ಮಾಡಿದ ನಮಗೇ ಬರುತ್ತದೆ. ನಮ್ಮ ಸಂತತಿಯನ್ನೇ ಹಾಳುಮಾಡುತ್ತದೆ.

ಇಲ್ಲಿ 'ಪಶೋರ್ವಿಲುಂಪಕಾಃ' ಎಂದರೆ 'ಪಶುಗಳನ್ನು ನಾಶ ಮಾಡುವವರು'

ಎಂದು ಹೇಳಿದಂತಿದೆ. ಕಳ್ಳರು ದರೋಡೆಕೋರರು ಪಶುಗಳನ್ನು ಅಪಹರಿಸುತ್ತಾರೆ ಹೊರತು ನಾಶಮಾಡುವುದಿಲ್ಲ. 'ಪಶುಗಳನ್ನು ಅಪಹರಿಸುವವರು' ಎಂದು ಹೇಳಿದರೂ 'ಪಶುಗಳನ್ನು ಅಪಹರಿಸುವವರು ಸ್ತ್ರೀಯರನ್ನೂ ಪಶುಗಳನ್ನೂ ಅಪಹರಿಸುತ್ತಾರೆ' ಎನ್ನುವುದು ಕೂಡುವುದಿಲ್ಲ. ಅದಕ್ಕೆ ಬೇರೆ ವ್ಯಾಖ್ಯಾನಕಾರರು 'ವಸೋರ್ವಿಲುಂಪಕಾತ್' ಸಂಪತ್ತನ್ನು ಕೊಳ್ಳೆ ಹೊಡೆಯುವವರಿಂದ ನಮಗೆ ಪಾಪ ತಗಲುವುದು ಎಂದು ಬೇರೆಯೆ ಪಾಠವಿಟ್ಟುಕೊಂಡು ವ್ಯಾಖ್ಯಾನಿಸಿದ್ದಾರೆ. ಇವರಿಗೆ ಪಶುಶಬ್ದಕ್ಕೆ ಇಲ್ಲಿ ಸಂಗತವಾದ ಅರ್ಥ ತಿಳಿಯಲಿಲ್ಲ.

ವಿಡ್‌ರಾಷ್ಟ್ರಂ ಪಶುರುತ್ಸೇಕೋ ಭ್ರಮರಶ್ಚೇತಿ ಕಥ್ಯತೇ । ಇತಿ ಚ ।

ವಿಟ್ ರಾಷ್ಟ್ರ ಪಶು ಉತ್ಸೇಕ ಭ್ರಮರ ಇವು ಸಮಾನಾರ್ಥಕ ಪದಗಳೆಂದು ಕೋಶವಿದೆ.

ಪಶು ಶಬ್ದಕ್ಕೆ ರಾಷ್ಟ್ರ ಎಂದು ಅರ್ಥ ಕೋಶದಲ್ಲಿದೆ. ಅದರಿಂದ ರಾಷ್ಟ್ರ ನಾಶಕರು, ಅಥವಾ ರಾಷ್ಟ್ರವನ್ನೆ ಕೊಳ್ಳೆ ಹೊಡೆಯುವವರು ಪಶುಗಳನ್ನೂ ಸ್ತ್ರೀಯರನ್ನೂ ಸಂಪತ್ತುಗಳನ್ನೂ ದೋಚುತ್ತಾರೆ ಎಂದರ್ಥ.

★★★

ರಾಜನಿಗೆ ಶಾಪವಿತ್ತು ನಾವೇ ತಪ್ಪು ಮಾಡಿದ್ದೇವೆ ಎಂದು ಶಮೀಕ ಋಷಿ ಪಶ್ಚಾತ್ತಾಪ ಪಡುತ್ತಾನೆ ಹೊರತು ರಾಜ ಮಾಡಿದ ತಪ್ಪನ್ನು ತಪ್ಪೆಂದು ಪರಿಗಣಿಸುವುದೇ ಇಲ್ಲ. ಇದು ಸಜ್ಜನರ ಸ್ವಭಾವ—

ಸಾಧವಃ ಪ್ರಾಯಶೋ ಲೋಕೇ ಪರೈರ್ದ್ವಂದ್ವೇಷು ಯೋಜಿತಾಃ ।
ನ ವ್ಯಥಂತಿ ನ ಹೃಷ್ಯಂತಿ ಯತ ಆತ್ಮಾ ಗುಣಾಶ್ರಯಃ ॥ ೫೦ ॥

ಲೋಕದಲ್ಲಿ ಸಜ್ಜನರು ಪ್ರಾಯಃ ಹೀಗೇ. ಅನ್ಯರು ಸಮ್ಮಾನ ಮಾಡಿದರೆ ಉಬ್ಬುವುದಿಲ್ಲ. ಅಪಮಾನ ಮಾಡಿದರೆ ಕುಗ್ಗುವುದಿಲ್ಲ. ಮಾನಾಪಮಾನ ಮುಂತಾದುವೆಲ್ಲ ತನ್ನ ಕರ್ಮದ ಫಲವೆ ತನಗೆ ಬರುತ್ತದೆ ಹೊರತು ಬೇರೆಯವರು ಕೊಡುವುದಲ್ಲ ಎಂದು ಅವರಿಗೆ ಗೊತ್ತು.

ಇಲ್ಲಿ 'ಆತ್ಮಾಗುಣಾಶ್ರಯಃ' ಎಂಬುದನ್ನು ಬೇರೆ ವ್ಯಾಖ್ಯಾನಕಾರರು 'ಆತ್ಮಾ ಅಗುಣಾಶ್ರಯ'. ಆತ್ಮ ಸುಖದುಃಖ ರಾಗದ್ವೇಷಾದಿಗಳಿಗೆ ಆಶ್ರಯನಲ್ಲ ಎಂದು ವ್ಯಾಖ್ಯಾನ ಮಾಡಿದ್ದಾರೆ. ಆತ್ಮ ನಿರ್ಗುಣ ಎಂಬುದು ಎಲ್ಲ ಪ್ರಮಾಣಗಳಿಗೂ ವಿರುದ್ಧವಾದ್ದರಿಂದ ಇದು ಸರಿಯಲ್ಲ. ಆತ್ಮಾ ಗುಣಾಶ್ರಯಃ ಎಂದೇ ಪದಚ್ಛೇದ ಮಾಡಬೇಕು. ಆಗ ಪ್ರಕೃತಕ್ಕೆ ಸಂಗತಿ ಹೇಗೆ?

ಸ್ವಕೃತೋ ಗುಣಸ್ತಸ್ಯೈವ ಯತಃ ।

ಗುಣವೆಂದರೆ ತಾನು ಮಾಡಿದ ಕರ್ಮದ ಫಲ ಆತ್ಮಾಶ್ರಯ ತನಗೇ ಬರುವುದರಿಂದ ಇನ್ನೊಬ್ಬರನ್ನು ಅದಕ್ಕೆ ಹೊಣೆಯಾಗಿ ಮಾಡಬಾರದು.

ಆತ್ಮಾ ಅಗುಣಾಶ್ರಯಃ ಎಂದು ಪದಚ್ಛೇದ ಮಾಡಿದರೂ 'ಗುಣಾಶ್ರಯನಲ್ಲ' ಎಂದರ್ಥವಲ್ಲ. ಅಗುಣಕ್ಕೆ ಆಶ್ರಯ ಅಂದರೆ ತಾನು ಮಾಡಿದ್ದ ಕರ್ಮಫಲವಾದ ದುಃಖಾದಿ ದೋಷಕ್ಕೆ ತಾನೇ ಆಶ್ರಯ. ಜೊತೆಗೆ, ಆತ್ಮಾ ಗುಣಾಶ್ರಯಃ ಎಂದೂ ಪದಚ್ಛೇದ ಮಾಡಬೇಕು. ತಾನು ಮಾಡಿದ ಕರ್ಮಫಲವಾದ ಗುಣಕ್ಕೆ ಸುಖಜ್ಞಾನಾದಿ ಗುಣಕ್ಕೆ ತಾನೇ ಆಶ್ರಯ. ಇತರರು ತನ್ನಲ್ಲಿ ಬಂದಿರುವ ಗುಣಕ್ಕಾಗಲಿ ದೋಷಕ್ಕಾಗಲಿ ಸುಖಕ್ಕಾಗಲಿ ದುಃಖಕ್ಕಾಗಲಿ ಹೊಣೆಯಲ್ಲ ಎಂದರ್ಥ.

ಇತಿ ಪ್ರಥಮಸ್ಕಂಧೇ ಅಷ್ಟಾದಶೋಽಧ್ಯಾಯಃ

ಹತ್ತೊಂಬತ್ತನೇ ಅಧ್ಯಾಯ

ಅಧ್ಯಾಯ ಸಾರಾಂಶ

ಇತ್ತ ರಾಜಾ ಪರೀಕ್ಷಿತ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪಗೊಂಡು ಹರಿಭಕ್ತನೊಬ್ಬನಿಗೆ ಮಾಡಿದ ಅಪಚಾರ ಹರಿಗೇ ಮಾಡಿದಂತೆ. ನನಗೆ ಮಹಾ ಆಪತ್ತು ಬರಲಿದೆ. ಅದು ಬರಲಿ, ನನಗಿಂಥ ದುರ್ಬುದ್ಧಿ ಎಂದೂ ಬಾರದಿರಲಿ ಎಂದುಕೊಂಡ. ಅಷ್ಟರಲ್ಲಿ ಶಾಪವೃತ್ತಾಂತವನ್ನು ಕೇಳಿ ನನಗಿದು ವೈರಾಗ್ಯಕ್ಕೆ ಕಾರಣವಾಗುವುದರಿಂದ ಶಾಪವಲ್ಲ ವರವೆ ಎಂದುಕೊಂಡ. ಗಂಗಾಪ್ರವಾಹದ ನಡುವೆ ನಿರ್ಮಿಸಿದ್ಧ ಅರಮನೆಯಲ್ಲಿ ಪ್ರಾಯೋಪವೇಶಕ್ಕೆ ಕುಳಿತ. ಆಗ ಎಲ್ಲ ಮುನಿಗಳೂ ಅಲ್ಲಿ ಬಂದರು. ತಾನು ಒಬ್ಬ ಮುನಿಯಲ್ಲಿ ಅಪಚಾರ ಮಾಡಿದವನಾದರೂ ಎಲ್ಲ ಮುನಿಗಳೂ ಅನುಗ್ರಹಿಸಲು ಬಂದರು ತಾನು ಧನ್ಯನೆಂದುಕೊಂಡ. ಮಗನಾದ ಜನಮೇಜಯನಿಗೆ ರಾಜ್ಯಭಾರದ ಹೊಣೆಯನ್ನಿತ್ತು ತಾನು ರಾಜವೇಷ ತೊರೆದು ಮುನಿವೇಷದಿಂದ ದರ್ಭೆಯ ಮೇಲೆ ಪ್ರಾಯೋಪವೇಶಕ್ಕೆ ಕುಳಿತ. 'ಮುನಿಗಳೆ, ಮರಣೋನ್ಮುಖನಾದ ಮುಮುಕ್ಷು ಅವಶ್ಯ ಮಾಡಬೇಕಾದ ಕರ್ತವ್ಯವನ್ನು ನನಗೆ ಬೋಧಿಸಿರೆ'ಂದು ಕೇಳಿಕೊಂಡ.

★★★

ಪರೀಕ್ಷಿತ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುತ್ತ ಋಷಿಶಾಪವನ್ನು ಸ್ವಾಗತಿಸಿದ. ವಿರಕ್ತನಾಗಿ ನಿರಶನ ವ್ರತ ಕೈಗೊಂಡು ಹರಿಧ್ಯಾನಪರನಾದ. ಆಗ ಅತ್ರಿ

ವಸಿಷ್ಠಾದಿ ಮುನಿಗಳೆಲ್ಲರೂ ಬಂದರು. ಅವರಿಗೆ ನಮಸ್ಕರಿಸಿ ನೀವೆಲ್ಲರೂ ಹರಿಯ ಗುಣಗಾನ ಮಾಡಿರಿ. ನನಗೆ ಮುಂದಿನ ಜನ್ಮಗಳಲ್ಲೆಲ್ಲ ಹರಿಭಕ್ತಿ ಹರಿದಾಸರ ಸಂಗ ಒದಗುವಂತೆ ಆಶೀರ್ವದಿಸಿ ಎಂದು ಬೇಡಿದ—

ಇತಿ ಸ್ಮ ರಾಜಾ ವ್ಯವಸಾಯಯುಕ್ತಃ
ಪ್ರಾಚೀನಕಾಗ್ರೇಷು ಕುಶೇಷು ಧೀರಃ ।
ಉದಙ್ಮುಖೋ ದಕ್ಷಿಣಕೂಲ ಆಸ್ತೇ
ಸಮುದ್ರಪತ್ನ್ಯಾಃ ಸ್ವಸುತನ್ಯಸ್ತಭಾರಃ ॥ ೧೭ ॥

ಪರೀಕ್ಷಿತ ಹೀಗೆ ನಿಶ್ಚಯಿಸಿ ತನ್ನ ಮಗನಾದ ಜನಮೇಜಯನಿಗೆ ರಾಜ್ಯಭಾರವನ್ನೊಪ್ಪಿಸಿ ಗಂಗಾ ಪ್ರವಾಹದ ನಡುವೆ ಅದರ ದಕ್ಷಿಣಭಾಗದಲ್ಲಿರುವ ಅರಮನೆಯಲ್ಲಿ ಪೂರ್ವಾಭಿಮುಖವಾಗಿ ದರ್ಭೆ ಹಾಸಿ ಅದರ ಮೇಲೆ ಉತ್ತರಾಭಿಮುಖವಾಗಿ ಪ್ರಾಯೋಪವೇಶಕ್ಕೆ ಕುಳಿತ.

ಇಲ್ಲಿ 'ಸಮುದ್ರಪತ್ನ್ಯಾಃ ದಕ್ಷಿಣಕೂಲೇ' 'ಗಂಗೆಯ ದಕ್ಷಿಣತೀರದಲ್ಲಿ ಎಂದಿದೆ. ಹಿಂದೆ ೭ನೇ ಶ್ಲೋಕದಲ್ಲಿ 'ವಿಷ್ಣುಪದ್ಯಾಂ ಪ್ರಾಯೋಪವೇಶಂ ಪ್ರತಿ ವ್ಯವಸ್ಥಾಯ' ಗಂಗಾಪ್ರವಾಹದಲ್ಲಿ ಪ್ರಾಯೋಪವೇಶಕ್ಕೆ ಕುಳಿತುಕೊಳ್ಳಲು ಪರೀಕ್ಷಿತ ನಿಶ್ಚಯಿಸಿದನೆಂದು ಹೇಳಿದೆ. ೫ನೇ ಶ್ಲೋಕದಲ್ಲಿಯೂ 'ಪ್ರಾಯಮಮರ್ತ್ಯನದ್ಯಾಂ' ಎಂದು ಹಾಗೇ ಹೇಳಿದೆ. ಈ ವಿರೋಧಕ್ಕೆ ಪರಿಹಾರ ಹೀಗೆ—

ಗಂಗಾಯಾಮುದಕ ಏವ ಕಿಂಚಿದ್ ದಕ್ಷಿಣಭಾಗೇ ಪ್ರಾಸಾದೇ ।
ತಥಾ ಹಿ ಮಹಾಭಾರತೇ ।

ಗಂಗಾಜಲದಲ್ಲಿಯೆ ಸ್ವಲ್ಪ ದಕ್ಷಿಣದ ಭಾಗದಲ್ಲಿದ್ದ ಅರಮನೆಯಲ್ಲಿ ಎಂದರ್ಥ. ಭಾರತದಲ್ಲಿ ಹಾಗೇ ಹೇಳಿದೆ.

'ವಿಷ್ಣುಪದ್ಯಾಂ' 'ಅಮರ್ತ್ಯನದ್ಯಾಂ' ಎಂಬ ಶಬ್ದಗಳಿಗೆ ಗಂಗಾತೀರದಲ್ಲಿ ಎಂದು ಲಕ್ಷಣಾ ಮಾಡದೆ 'ದಕ್ಷಿಣಕೂಲೇ' ಎಂಬ ಶಬ್ದಕ್ಕೇ ದಕ್ಷಿಣತೀರದ ಸಂಬಂಧಿಯಾದ ಗಂಗಾಪ್ರವಾಹದಲ್ಲಿ ಎಂದು ಲಕ್ಷಣಾ. ಪ್ರವಾಹವಾಚಕ ಶಬ್ದ ತೀರದಲ್ಲಿ ಲಾಕ್ಷಣಿಕವಾಗುವುದಾದರೆ ತೀರವಾಚಕ ಶಬ್ದ ಪ್ರವಾಹದಲ್ಲಿ ಲಾಕ್ಷಣಿಕ ಏಕಾಗಬಾರದು! ವಿನಿಗಮಕ ಏನು ಎಂದರೆ, ಮಹಾಭಾರತದಲ್ಲಿ 'ಗಂಗಾಪ್ರವಾಹದಲ್ಲಿಯೇ ಅರಮನೆಯೊಂದು ಪರೀಕ್ಷಿತನಿಗೆ ಇದ್ದಿತೆ'ಂದು ಹೇಳಿದೆ.

ಇತಿ ಪ್ರಥಮಸ್ಕಂಧೇ ಏಕೋನವಿಂಶೋಽಧ್ಯಾಯಃ

ಇಪ್ಪತ್ತನೇ ಅಧ್ಯಾಯ

ಅಧ್ಯಾಯ ಸಾರಾಂಶ

ಆಗ ದೈವಾತ್ ಶುಕಮುನಿಗಳು ಅಲ್ಲಿಗೆ ಬಂದರು. ರಾಜ ಅವರಿಗೆ ನಮಿಸಿ ಸತ್ಕರಿಸಿ ಕುಳ್ಳಿರಿಸಿದ. ಶ್ರೀಕೃಷ್ಣ ಪಾಂಡವಪ್ರಿಯನಾದ್ದರಿಂದ ಪಾಂಡವ ವಂಶಜನಾದ ನನ್ನ ಬಳಿಗೆ ನಿಮ್ಮನ್ನು ಅವನೆ ಕರೆಸಿಕೊಂಡಿದ್ದಾನೆ. ಇಲ್ಲದಿದ್ದರೆ ತಾವು ಯಾರ ಕಣ್ಣಿಗೂ ಕಾಣದೆ ಸಂಚರಿಸುವವರು ಕೃತಕೃತ್ಯರು. ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಸಾವಿನ ಅಂಚಿನಲ್ಲಿರುವ ಮುಮುಕ್ಷು ಏನು ಮಾಡಬೇಕು, ಏನು ಕೇಳಬೇಕು, ಏನು ಜಪಿಸಬೇಕು ಇದಕ್ಕೆ ವ್ಯತಿರಿಕ್ತವಾಗಿ ಏನೆಲ್ಲ ಮಾಡಬಾರದು ಹೇಳಿರಿ. ಹೀಗೆ ರಾಜ ಬೇಡಿಕೊಂಡಾಗ ಭಗವಾನ್ ಶುಕಮುನಿ ಹೇಳತೊಡಗಿದರು.

★★★

ಪರೀಕ್ಷಿತ ಪ್ರಾಯೋಪವೇಶಕ್ಕೆ ಕುಳಿತಾಗ ಅಲ್ಲಿಗೆ ಶುಕಮುನಿಗಳು ಬಂದರು—

ಶ್ಯಾಮಂ ಸದಾಽಽಪೀಚ್ಯವಯೋಽಂಗಲಕ್ಷ್ಮ್ಯಾ
ಸ್ತ್ರೀಣಾಂ ಮನೋಜ್ಞಂ ರುಚಿರಸ್ಮಿತೇನ ।
ಪ್ರತ್ಯುತ್ಥಿತಾ ಮುನಯಶ್ಚಾಸನೇಭ್ಯ-
ಸ್ತಲ್ಲಕ್ಷಣಜ್ಞಾ ಅಪಿ ಗೂಢವರ್ಚಸಂ ॥ ೪ ॥

ನೀಲವರ್ಣದ ಮೈಕಾಂತಿ ಇನ್ನೂ ನವಯೌವನದಲ್ಲಿ ಕಾಲಿಡುತ್ತಿರುವಂಥ ವಯಸಿನ ಶರೀರ ಕಾಂತಿಯಿಂದ ಮತ್ತು ಮೋಹಕವಾದ ಮುಗುಳುನಗೆಯಿಂದ ಸ್ತ್ರೀಯರನ್ನು ಆಕರ್ಷಿಸುವಂತಿದ್ದ ಆ ಶುಕಮುನಿಯನ್ನು ಕಂಡು ಮುನಿಗಳು ಆಸನಗಳಿಂದ ಎದ್ದು ನಿಂತರು. ಶುಕಮುನಿ ನಿಗೂಢ ವರ್ಚಸ್ಸಿನವರಾದರೂ ಅವರ ಲಕ್ಷಣಗಳಿಂದ ಅವರನ್ನು ಮುನಿಗಳು ಬಲ್ಲವರಾಗಿದ್ದರು.

ಇಲ್ಲಿ ಆಪೀಚ್ಯಶಬ್ದಾರ್ಥವೇನು? ಬೇರೆ ವ್ಯಾಖ್ಯಾನಕಾರರು ಸದಾ ಅಪೀಚ್ಯ ಎಂದು ಪದವಿಭಾಗ ಮಾಡಿ ಅಪೀಚ್ಯ ಎಂದರೆ ಅತ್ಯುತ್ತಮ ಎಂದು ವ್ಯಾಖ್ಯಾನಿಸಿದ್ದಾರೆ. ಅತ್ಯುತ್ತಮ ಮನೋಜ್ಞ ಸ್ತ್ರೀಯರಿಗೆ ಹಿತಕರ ವಯಸ್ಸು ಎಂದರೆ ಯೌವನ ಎಂದು ಗ್ರಹಿಸಿದ್ದಾರೆ. ಮನೋಜ್ಞ ವಯಸ್ಸು ಯೌವನವೇ ಆಗಬೇಕಿಲ್ಲ, ಶೈಶವವೂ ಮನೋಜ್ಞವೇ. ಮತ್ತು ಅವರು ಇದಕ್ಕೆ ಪ್ರಮಾಣ ಕೊಟ್ಟಿಲ್ಲ.

ಕೈಶೋರಯೌವನಾಭ್ಯಂತಃಕಾಲ ಆಪೀಚ್ಯಮುಚ್ಯತೇ ॥

ಇತ್ಯಭಿಧಾನಮ್ ।

ಬಾಲ್ಯ ಯೌವನಗಳ ಮಧ್ಯದ ವಯಸ್ಸು ಆಪೀಚ್ಯವೆನಿಸುತ್ತದೆ ಎಂದು ಅಭಿಧಾನಕೋಶವಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್ ಭಾಗವತ ತಾತ್ಪರ್ಯನಿರ್ಣಯೇ ಪ್ರಥಮಸ್ಕಂಧೇ ವಿಂಶೋಽಧ್ಯಾಯಃ ॥

ಪ್ರಥಮಃ ಸ್ಕಂಧಃ ಸಮಾಪ್ತಃ ॥

ಓಂ ಶ್ರೀಮದ್ಧನುಮದ್ ಭೀಮ ಮಧ್ವಾಂತರ್ಗತ ರಾಮ ಕೃಷ್ಣ
ವೇದವ್ಯಾಸಾತ್ಮಕ ಲಕ್ಷ್ಮೀ ಹಯಗ್ರೀವಾಯ ನಮಃ

ಭಗವದ್ ಬಾದರಾಯಣ ಪ್ರಣೀತಂ

ಶ್ರೀಮದ್ಭಾಗವತ ಮಹಾಪುರಾಣಂ

ದ್ವಿತೀಯಸ್ಕಂಧಃ

ಅಥ ಪ್ರಥಮೋಽಧ್ಯಾಯಃ

ಓಂ ನಮೋ ಭಗವತೇ ವಾಸುದೇವಾಯ

ಹರಿಃ ಓಂ

ಶ್ರೀಶುಕ ಉವಾಚ—

ವರೀಯಾನೇಷ ತೇ ಪ್ರಶ್ನಃ ಕೃತೋ ಲೋಕಹಿತಂ ನೃಪ ।
ಆತ್ಮವಿತ್ಸಮ್ಮತಃ ಪುಂಸಾಂ ಶ್ರೋತವ್ಯಾದಿಷು ಯಃ ಪರಃ ॥ ೧ ॥

ಶ್ರೋತವ್ಯಾನೀಹ ರಾಜೇಂದ್ರ ನೃಣಾಂ ಸಂತಿ ಸಹಸ್ರಶಃ ।
ಅಪಶ್ಯತಾಮಾತ್ಮತತ್ವಂ ಗೃಹೇಷು ಗೃಹಮೇಧಿನಾಮ್ ॥ ೨ ॥

ನಿದ್ರಯಾ ಹ್ರಿಯತೇ ನಕ್ತಂ ವ್ಯವಾಯೇನ ನವಂ ವಯಃ ।
ದಿವಾ ಚಾರ್ಥೇಹಯಾ ರಾಜನ್ ಕುಡುಂಬಭರಣೇನ ವಾ ॥ ೩ ॥

ದೇಹಾಪತ್ಯಕಳತ್ರಾದಿಷ್ವಾತ್ಮಸೈನ್ಯೇಷ್ವಸತ್ಸ್ವಪಿ ।
ತೇಷು ಪ್ರಸಕ್ತೋ ನಿಧನಂ ಪಶ್ಯನ್ನಪಿ ನ ಪಶ್ಯತಿ ॥ ೪ ॥

ತಸ್ಮಾದ್ ಭಾರತ ಸರ್ವಾತ್ಮಾ ಭಗವಾನ್ ಹರಿರೀಶ್ವರಃ ।
ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯಶ್ಚೇಚ್ಛತಾऽಭಯಮ್ ॥ ೫ ॥

ಏತಾವಾನ್ ಸಾಂಖ್ಯಯೋಗಾಭ್ಯಾಂ ಸ್ವಧರ್ಮಪರಿನಿಷ್ಠಯಾ ।
ಜನ್ಮಲಾಭಃ ಪರಃ ಪುಂಸಾಮಂತೇ ನಾರಾಯಣಸ್ಮೃತಿಃ ॥ ೬ ॥

ಪ್ರಾಯೇಣ ಮುನಯೋ ರಾಜನ್ ನಿವೃತ್ತಾ ವಿಧಿನಿಷೇಧತಃ ।
ನೈರ್ಗುಣ್ಯಸ್ಥಾ ರಮಂತೇ ಸ್ಮ ಗುಣಾನುಕಥನೇ ಹರೇಃ ॥ ೭ ॥

ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।
ಅಧೀತವಾನ್ ದ್ವಾಪರಾದೌ ಪಿತುರ್ದ್ವೈಪಾಯನಾದಹಮ್ ॥ ೮ ॥

ಪರಿನಿಷ್ಠಿತೋऽಪಿ ನೈರ್ಗುಣ್ಯ ಉತ್ತಮಶ್ಲೋಕಲೀಲಯಾ ।
ಗೃಹೀತಚೇತಾ ರಾಜರ್ಷೇ ಆಖ್ಯಾನಂ ಯದಧೀತವಾನ್ ॥ ೯ ॥

ತದಹಂ ತೇऽಭಿಧಾಸ್ಯಾಮಿ ಮಹಾಪೌರುಷಿಕೋ ಭವಾನ್ ।
ಯತ್ರ ಶ್ರದ್ಧಧತಾಮಾಶು ಸ್ಯಾನ್ಮುಕುಂದೇ ಮತಿಃ ಸತೀ ॥ ೧೦ ॥

ಏತನ್ನಿರ್ವಿದ್ಯಮಾನಾನಾಮಿಚ್ಛತಾಮಕುತೋಭಯಮ್ ।
ಯೋಗಿನಾಂ ನೃಪ ನಿರ್ಣೀತಂ ಹರೇರ್ನಾಮಾನುಕೀರ್ತನಮ್ ॥ ೧೧ ॥

ಕಿಂ ಪ್ರಮತ್ತಸ್ಯ ಬಹುಭಿಃ ಪರೋಕ್ಷೈರ್ಹಾಯನೈರಿಹ ।
ವರಂ ಮುಹೂರ್ತಂ ವಿದಿತಂ ಘಟತೇ ಶ್ರೇಯಸೇ ಯತಃ ॥ ೧೨ ॥

ಖಟ್ವಾಂಗೋ ನಾಮ ರಾಜರ್ಷಿಃ ಜ್ಞಾತ್ವೇಯತ್ತಾಮಿಹಾಯುಷಃ ।
ಮುಹೂರ್ತಾತ್ ಸಂಗಮುತ್ಸೃಜ್ಯ ಗತವಾನಭಯಂ ಹರಿಮ್ ॥ ೧೩ ॥

ತವಾಪ್ಯೇತರ್ಹಿ ಕೌರವ್ಯ ಸಪ್ತಾಹಂ ಜೀವಿತಾವಧಿಃ ।
ಉಪಕಲ್ಪಯ ತತ್ಸರ್ವಂ ಯತ್ತಾವತ್ ಸಾಂಪರಾಯಿಕಮ್ ॥ ೧೪ ॥

ಅಂತಕಾಲೇ ತು ಪುರುಷ ಆಗತೇ ಗತಸಾಧ್ವಸಃ ।
ಛಿಂದ್ಯಾದಸಂಗಶಸ್ತ್ರೇಣ ಸ್ಪೃಹಾಂ ದೇಹೇऽನು ಯೇ ಚ ತಮ್ ॥ ೧೫ ॥

ಗೃಹಾತ್ ಪ್ರವ್ರಜಿತೋ ಧೀರಃ ಪುಣ್ಯತೀರ್ಥಜಲಾಪ್ಲುತಃ ।
ಶುಚೌ ವಿವಿಕ್ತ ಆಸೀನೋ ವಿಧಿವತ್ ಕಲ್ಪಿತಾಸನೇ ॥ ೧೬ ॥

ಅಭ್ಯಸೇನ್ಮನಸಾ ಶುದ್ಧಂ ತ್ರಿವೃದ್ ಬ್ರಹ್ಮಾಕ್ಷರಂ ಪರಮ್ ।
ಮನೋ ಯಚ್ಛೇಜ್ಜಿತಶ್ವಾಸೋ ಬ್ರಹ್ಮಬೀಜಮನುಸ್ಮರನ್ ॥ ೧೭ ॥

ನಿಯಚ್ಛೇದ್ ವಿಷಯೇಭ್ಯೋಽಕ್ಷಾನ್ ಮನಸಾ ಬುದ್ಧಿಸಾರಥಿಃ ।
ಮನಃ ಕರ್ಮಭಿರಾಕ್ಷಿಪ್ತಂ ಶುಭಾರ್ಥೇ ಧಾರಯೇದ್ ಧಿಯಾ ॥ ೧೮ ॥

ತತ್ರೈಕಾವಯವಂ ಧ್ಯಾಯೇದವ್ಯುಚ್ಛಿನ್ನೇನ ಚೇತಸಾ ।
ಮನೋ ನಿರ್ವಿಷಯಂ ಯುಂಕ್ತ್ವಾ ತತಃ ಕಿಂಚಿನ್ನ ಸಂಸ್ಮರೇತ್ ।
ಪದಂ ತತ್ ಪರಮಂ ವಿಷ್ಣೋರ್ಮನೋ ಯತ್ರ ಪ್ರಸೀದತಿ ॥ ೧೯ ॥
ರಜಸ್ತಮೋಭ್ಯಾಮಾಕ್ಷಿಪ್ತಂ ವಿಮೂಢಂ ಮನ ಆತ್ಮನಃ ।
ಯಚ್ಛೇದ್ ಧಾರಣಯಾ ಧೀರೋ ಹಂತಿ ಯಾ ತತ್ಕೃತಂ ಮಲಮ್ ॥ ೨೦ ॥

ಯಸ್ಯಾಂ ಸಂಧಾರ್ಯಮಾಣಾಯಾಂ ಯೋಗಿನೋ ಭಕ್ತಿಲಕ್ಷಣಃ ।
ಆಶು ಸಂಪದ್ಯತೇ ಯೋಗ ಆಶ್ರಯಂ ಭದ್ರಮೀಕ್ಷತಃ ॥ ೨೧ ॥

ರಾಜೋವಾಚ—
ಯಥಾ ಸಂಧಾರ್ಯತೇ ಬ್ರಹ್ಮನ್ ಧಾರಣಾ ಯತ್ರ ಸಮ್ಮತಾ ।
ಯಾದೃಶೀ ವಾ ಹರೇದಾಶು ಪುರುಷಸ್ಯ ಮನೋಮಲಮ್ ॥ ೨೨ ॥

ಶ್ರೀಶುಕ ಉವಾಚ—
ಜಿತಾಸನೋ ಜಿತಶ್ವಾಸೋ ಜಿತಸಂಗೋ ಜಿತೇಂದ್ರಿಯಃ ।
ಸ್ಥೂಲೇ ಭಗವತೋ ರೂಪೇ ಮನಃ ಸಂಧಾರಯೇದ್ ಧಿಯಾ ॥ ೨೩ ॥

ವಿಶೇಷಸ್ತಸ್ಯ ದೇಹೋಽಯಂ ಸ್ಥವಿಷ್ಠಶ್ಚ ಸ್ಥವೀಯಸಾಮ್ ।
ಯತ್ರೇದಂ ದೃಶ್ಯತೇ ವಿಶ್ವಂ ಭೂತಂ ಭವ್ಯಂ ಭವಚ್ಚ ಯತ್ ॥ ೨೪ ॥

ಆಂಡಕೋಶೇ ಶರೀರೇಽಸ್ಮಿನ್ ಸಪ್ತಾವರಣಸಂಯುತೇ ।
ವೈರಾಜಃ ಪುರುಷೋ ಯೋಽಸೌ ಭಗವಾನ್ ಧಾರಣಾಶ್ರಯಃ ॥ ೨೫ ॥

ಪಾತಾಲಮೇತಸ್ಯ ಹಿ ಪಾದಮೂಲಂ
ಪಠಂತಿ ಪಾರ್ಷ್ಣಿಪ್ರಪದೇ ರಸಾತಲಮ್ ।
ಮಹಾತಲಂ ವಿಶ್ವಸೃಜಃ ಸುಗುಲ್ಫೌ
ತಲಾತಲಂ ವೈ ಪುರುಷಸ್ಯ ಜಂಘೇ ॥ ೨೬ ॥

ದ್ವೇ ಜಾನುನೀ ಸುತಲಂ ವಿಶ್ವಮೂರ್ತೇ
ರೂರುದ್ವಯಂ ವಿತಲಂ ಚಾತಲಂ ಚ ।
ಮಹೀತಲಂ ತಜ್ಜಘನಂ ಮಹೀಪತೇ
ನಭಸ್ತಲಂ ನಾಭಿಸರೋ ಗೃಣಂತಿ ॥ ೨೭ ॥

ಉರಃಸ್ಥಲಂ ಜ್ಯೋತಿರನೀಕಮಸ್ಯ
ಗ್ರೀವಾ ಮಹರ್ವದನಂ ವೈ ಜನೋಽಸ್ಯ ।
ತಪೋ ರರಾಟಿಂ ವಿದುರಾದಿಪುಂಸಃ
ಸತ್ಯಂ ತು ಶೀರ್ಷಾಣಿ ಸಹಸ್ರಶೀರ್ಷ್ಣಃ ॥ ೨೮ ॥

ಇಂದ್ರಾದಯೋ ಬಾಹವ ಆಹುರಸ್ಯ
ಕರ್ಣೌ ದಿಶಃ ಶ್ರೋತ್ರಮಮುಷ್ಯ ಶಬ್ದಃ ।
ನಾಸತ್ಯದಸ್ರೌ ಪರಮಸ್ಯ ನಾಸೇ
ಘ್ರಾಣಂ ಚ ಗಂಧೋ ಮುಖಮಗ್ನಿರಿದ್ಧಃ ॥ ೨೯ ॥

ದ್ಯೌರಕ್ಷಿಣೀ ಚಕ್ಷುರಭೂತ್ ಪತಂಗಃ
ಪಕ್ಷ್ಮಾಣಿ ವಿಷ್ಣೋರಹನೀ ಉಭೇ ಚ ।
ತದ್ ಭ್ರೂವಿಜೃಂಭಃ ಪರಮೇಷ್ಠಿಧಿಷ್ಣ್ಯ
ಮಾಪೋಽಸ್ಯ ತಾಲೂ ರಸ ಏವ ಜಿಹ್ವಾ ॥ ೩೦ ॥

ಛಂದಾಂಸ್ಯನಂತಸ್ಯ ಗಿರೋ ಗೃಣಂತಿ
ದಂಷ್ಟ್ರಾರ್ಯಮೇಂದೂಡುಗಣಾ ದ್ವಿಜಾನಿ ।
ಹಾಸೋ ಜನೋನ್ಮಾದಕರೀ ಚ ಮಾಯಾ
ದುರಂತಸರ್ಗೋ ಯದಪಾಂಗಮೋಕ್ಷಃ ॥ ೩೦ ॥

ವ್ರೀಳೋತ್ತರೋಷ್ಠೋಽಧರ ಏವ ಲೋಭೋ
ಧರ್ಮಃ ಸ್ತನೋಽಧರ್ಮಪಥಶ್ಚ ಪೃಷ್ಠಃ ।
ಕಸ್ತಸ್ಯ ಮೇಢ್ರಂ ವೃಷಣೌ ಚ ಮಿತ್ರಃ
ಕುಕ್ಷಿಃ ಸಮುದ್ರಾ ಗಿರಯೋಽಸ್ಥಿಸಂಘಾಃ ॥ ೩೨ ॥

ನದ್ಯೋಽಸ್ಯ ನಾಡ್ಯೋಽಥ ತನೂರುಹಾಣಿ
ಮಹೀರುಹಾ ವಿಶ್ವತನೋರ್ನೃಪೇಂದ್ರ ।

ಅನ್ನಂ ಚ ವೀರ್ಯಂ ಶ್ವಸಿತಂ ಮಾತರಿಶ್ವಾ
ಗತಿರ್ವಯಃ ಕರ್ಮ ಗುಣಪ್ರವಾಹಃ ॥ ೩೩ ॥

ಈಶಸ್ಯ ಕೇಶಾನ್ ವಿದುರಂಬುವಾಹಾನ್
ವಾಸಸ್ತು ಸಂಧ್ಯೇ ಕುರುವರ್ಯ ಭೂಮ್ನಃ ।
ಅವ್ಯಕ್ತಮಾಹುರ್ಹೃದಯಂ ಮನಶ್ಚ
ಸ ಚಂದ್ರಮಾಃ ಸರ್ವವಿಕಾರಕೋಶಃ ॥ ೩೪ ॥

ವಿಜ್ಞಾನಶಕ್ತಿಂ ಮತಿಮಾಮನಂತಿ
ಸರ್ವಾತ್ಮನೋಽಂತಃಕರಣಂ ಗಿರಿತ್ರಃ ।
ಅಶ್ವಾಶ್ವತರ್ಯುಷ್ಟ್ರಗಜಾ ನಖಾನಿ
ಸರ್ವೇ ಮೃಗಾಃ ಪಶವಃ ಶ್ರೋಣಿದೇಶೇ ॥ ೩೫ ॥

ವಚಾಂಸಿ ತದ್ವ್ಯಾಹರಣಂ ವಿಚಿತ್ರಂ
ಮನುರ್ಮನೀಷಾ ಮನುಜೋ ನಿವಾಸಃ ।
ಗಂಧರ್ವವಿದ್ಯಾಧರಚಾರಣಾಪ್ಸರಃ
ಸ್ವರಸ್ಮೃತೀರ್ಹ್ಯಸುರಾನೀಕವೀರ್ಯಃ ॥ ೩೬ ॥

ಬ್ರಹ್ಮಾನನಃ ಕ್ಷತ್ರಭುಜೋ ಮಹಾತ್ಮಾ
ವಿಡೂರುರಂಘ್ರಿಶ್ರಿತಕೃಷ್ಣವರ್ಣಃ ।
ಸ್ವಾಹಾಸ್ವಧಾವೀರ್ಯಗುಣೋಪಪನ್ನೋ
ಹವ್ಯಾತ್ಮಕಃ ಕರ್ಮವಿತಾನಯೋಗಃ ॥ ೩೭ ॥

ಇಯಾನಸಾವೀಶ್ವರವಿಗ್ರಹಸ್ಯ
ಯಃ ಸನ್ನಿವೇಶಃ ಕಥಿತೋ ಮಯಾ ತೇ ।
ಸಂಧಾರ್ಯತೇಽಸ್ಮಿನ್ ವಪುಷಿ ಸ್ಥವಿಷ್ಠೇ
ಮನಃ ಸ್ವಬುದ್ಧ್ಯಾ ನ ಯತೋಽಸ್ತಿ ಕಿಂಚಿತ್ ॥ ೩೮ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ
ಪ್ರಥಮೋಽಧ್ಯಾಯಃ ॥

ಅಥ ದ್ವಿತೀಯೋಽಧ್ಯಾಯಃ

ಶ್ರೀಶುಕ ಉವಾಚ—

ಏವಂ ಪುರಾ ಧಾರಣಯಾಽಽತ್ಮಯೋನಿ
ರ್ನಷ್ಟಾಂ ಸ್ಮೃತಿಂ ಪ್ರತ್ಯವರುಹ್ಯ ತುಷ್ಯನ್ ।
ತಥಾ ಸಸರ್ಜೇದಮಮೋಘದೃಷ್ಟಿ
ರ್ಯಥಾಽಪ್ಯಯಾತ್ ಪ್ರಾಗ್ ವ್ಯವಸಾಯಬುದ್ಧಿಃ ॥ ೧ ॥

ಶಬ್ದಸ್ಯ ಹಿ ಬ್ರಹ್ಮಣ ಏಷ ಪಂಥಾ
ಯನ್ನಾಮಭಿರ್ಧ್ಯಾಯತಿ ಧೀರಪಾರ್ಥೈಃ ।
ಪರಿಭ್ರಮಂಸ್ತತ್ರ ನ ವಿಂದತೇಽರ್ಥಾನ್
ಮಾಯಾಮಯೇ ವಾಸನಯಾ ಶಯಾನಃ ॥ ೨ ॥

ಅತಃ ಕವಿರ್ನಾಮಸು ಯಾವದರ್ಥಃ
ಸ್ಯಾದಪ್ರಮತ್ತೋ ವ್ಯವಸಾಯಬುದ್ಧಿಃ ।
ಸಿದ್ಧೇಽನ್ಯಥಾರ್ಥೇ ನ ಯತೇತ ತತ್ತತ್
ಪರಿಶ್ರಮಂ ತತ್ರ ಸಮೀಕ್ಷಮಾಣಃ ॥ ೩ ॥

ಸತ್ಯಾಂ ಕ್ಷಿತೌ ಕಿಂ ಕಶಿಪೋಃ ಪ್ರಯಾಸೈ
ರ್ಬಾಹೌ ಸ್ವಸಿದ್ಧೇ ಹ್ಯುಪಬರ್ಹಣೈಃ ಕಿಮ್ ।
ಸತ್ಯಂಜಲೌ ಕಿಂ ಪುರುಪರ್ಣಪಾತ್ರ್ಯೈ
ರ್ದಿಗ್ವಸ್ತ್ರಲಾಭೇ ಸತಿ ಕಿಂ ದುಕೂಲೈಃ ॥ ೪ ॥

ಚೀರಾಣಿ ಕಿಂ ಪಥಿ ನ ಸಂತಿ ದಿಶಂತಿ ಭಿಕ್ಷಾಂ
ನೋ ವಾಂಽಘ್ರಿಪಾಃ ಪರಭೃತಃ ಸರಿತೋಽಪ್ಯಶುಷ್ಯನ್ ।
ರುದ್ಧಾ ಗುಹಾಃ ಕಿಮವಧೂತಸುಹೃನ್ನ ಕೃಷ್ಣಃ
ಕಸ್ಮಾದ್ ಭಜಂತಿ ಕವಯೋ ಧನದುರ್ಮದಾಂಧಾನ್ ॥ ೫ ॥

ಏವಂ ಸ್ವಚಿತ್ತೇ ಸ್ವತ ಏವ ಸಿದ್ಧ
ಆತ್ಮಾ ಪ್ರಿಯೋಽರ್ಥೋ ಭಗವಾನನಂತಃ ।
ತಂ ನಿರ್ವೃತೋ ನಿಯತಾರ್ಥೋ ಭಜೇತ
ಸಂಸಾರಹೇತೂಪರಮಶ್ಚ ಯತ್ರ ॥ ೬ ॥

ಸ ಸರ್ವವಿದ್ ಹೃದ್ಯನುಭೂಶ್ಚ ಸರ್ವ
ಆತ್ಮಾ ಯಥಾ ಸುಪ್ತಜನೇಕ್ಷಿತೈಕಃ ।
ತಂ ಸತ್ಯಮಾನಂದನಿಧಿಂ ಭಜೇತ
ಸರ್ವಾತ್ಮನಾಽತೋಽನ್ಯತ ಆತ್ಮಘಾತಃ ॥ ೭ ॥

ಕಸ್ತಂ ತ್ವನಾದೃತ್ಯ ಪರಾನುಚಿಂತಾ
ಮೃತೇ ಪಶುತ್ವಮಸತೀಂ ನಾಮ ಯುಂಜ್ಯಾತ್ ।
ಪಶ್ಯನ್ ಜನಂ ಪತಿತಂ ವೈತರಣ್ಯಾಂ
ಸ್ವಕರ್ಮಜಾನ್ ಪರಿತಾಪಾನ್ ಜುಷಾಣಮ್ ॥ ೮ ॥

ಕೇಚಿತ್ ಸ್ವದೇಹಾಂತರ್ಹೃದಯಾವಕಾಶೇ
ಪ್ರಾದೇಶಮಾತ್ರಂ ಪುರುಷಂ ವಸಂತಮ್ ।
ಚತುರ್ಭುಜಂ ಕಂಜರಥಾಂಗಶಂಖ
ಗದಾಧರಂ ಧಾರಣಯಾ ಸ್ಮರಂತಿ ॥ ೯ ॥

ಪ್ರಸನ್ನವಕ್ತ್ರಂ ನಳಿನಾಯತೇಕ್ಷಣಂ
ಕದಂಬಕಿಂಜಲ್ಕಪಿಶಂಗವಾಸಸಮ್ ।
ಲಸನ್ಮಹಾಹಾರಹಿರಣ್ಮಯಾಂಗದಂ
ಸ್ಫುರನ್ಮಹಾರತ್ನಕಿರೀಟಕುಂಡಲಮ್ ॥ ೧೦ ॥

ಉನ್ನಿದ್ರಹೃತ್ಪಂಕಜಕರ್ಣಿಕಾಲಯೇ
ಯೋಗೇಶ್ವರಾಸ್ಥಾಪಿತಪಾದಪಲ್ಲವಮ್ ।
ಶ್ರೀಲಕ್ಷಣಂ ಕೌಸ್ತುಭರತ್ನಕಂಧರ
ಮಮ್ಲಾನಲಕ್ಷ್ಮ್ಯಾ ವನಮಾಲಯಾಽಂಚಿತಮ್ ॥ ೧೧ ॥

ವಿಭೂಷಿತಂ ಮೇಖಲಯಾಽಂಗುಲೀಯಕೈ
ರ್ಮಹಾಧನೈರ್ನೂಪುರಕಂಕಣಾದಿಭಿಃ ।
ಸ್ನಿಗ್ಧಾಮಲೈಃ ಕುಂಚಿತನೀಲಕುಂತಳೈ
ರ್ವಿರೋಚಮಾನಾನನಹಾಸಪೇಶಲಮ್ ॥ ೧೨ ॥

ಅದೀನಲೀಲಾಹಸಿತೇಕ್ಷಣೋಲ್ಲಸದ್
ಭ್ರೂಭಂಗಸಂಸೂಚಿತಭೂರ್ಯನುಗ್ರಹಮ್ ।

ಈಕ್ಷೇತ ಚಿಂತಾಮಯಮೇನಮೀಶ್ವರಂ
ಯಾವನ್ಮನೋ ಧಾರಣಯಾಽವತಿಷ್ಠತೇ ॥ ೧೩ ॥

ಏಕೈಕಶೋಽಂಗಾನಿ ಧಿಯಾಽನುಭಾವಯೇತ್
ಪಾದಾದಿ ಯಾವದ್ ಹಸಿತಂ ಗದಾಭೃತಃ ।
ಜಿತಂಜಿತಂ ಸ್ಥಾನಮಪೋಹ್ಯ ಧಾರಯೇತ್
ಪರಂಪರಂ ಶುಧ್ಯತಿ ಧೀರ್ಯಥಾಯಥಾ ॥ ೧೪ ॥

ಯಾವನ್ನ ಜಾಯೇತ ಪರಾವರೇಽಸ್ಮಿನ್
ವಿಶ್ವೇಶ್ವರೇ ದ್ರಷ್ಟರಿ ಭಕ್ತಿಯೋಗಃ ।
ತಾವತ್ ಸ್ಥವೀಯಃ ಪುರುಷಸ್ಯ ರೂಪಂ
ಕ್ರಿಯಾವಸಾನೇ ಪ್ರಯತಃ ಸ್ಮರೇತ ॥ ೧೫ ॥

ಸ್ಥಿರಂ ಸುಖಂ ಚಾಸನಮಾಸ್ಥಿತೋ ಯತಿ
ರ್ಯದಾ ಜಿಹಾಸುರಿಮಮಂಗ ಲೋಕಮ್ ।
ಕಾಲೇ ಚ ದೇಶೇ ಚ ಮನೋ ನ ಸಜ್ಜೇತ್
ಪ್ರಾಣಾನ್ ನಿಯಚ್ಛೇನ್ಮನಸಾ ಜಿತಾಸುಃ ॥ ೧೬ ॥

ಮನಶ್ಚ ಬುದ್ಧ್ಯಾಽಮಲಯಾ ನಿಯಮ್ಯ
ಕ್ಷೇತ್ರಜ್ಞ ಏತಾಂ ನಿನಯೇತ್ ತಮಾತ್ಮನಿ ।
ಆತ್ಮಾನಮಾತ್ಮನ್ಯವರುಧ್ಯ ಧೀರೋ
ಲಬ್ಧೋಪಶಾಂತಿರ್ವಿರಮೇತ ಕೃತ್ಯಾತ್ ॥ ೧೭ ॥

ನ ಯತ್ರ ಕಾಲೋಽನಿಮಿಷಾಂ ಪರಃ ಪ್ರಭುಃ
ಕುತೋ ನು ದೇವಾ ಜಗತಾಂ ಯ ಈಶಿರೇ ।
ನ ಯತ್ರ ಸತ್ವಂ ನ ರಜಸ್ತಮಶ್ಚ
ನ ವೈ ವಿಕಾರೋ ನ ಮಹಾನ್ ಪ್ರಧಾನಮ್ ॥ ೧೮ ॥

ಪರಂ ಪದಂ ವೈಷ್ಣವಮಾಮನಂತಿ ತದ್
ಯನ್ನೇತಿನೇತೀತ್ಯತದುತ್ಸಿಸೃಕ್ಷವಃ ।
ವಿಸೃಜ್ಯ ದೌರಾತ್ಮ್ಯಮನನ್ಯಸೌಹೃದಾ
ಹೃದೋಪಗುಹ್ಯಾಪುರಮುಂ ಪದೇಪದೇ ॥ ೧೯ ॥

ಇತ್ಥಂ ಮುನಿಸ್ತೂಪರಮೇದ್ ವ್ಯವಸ್ಥಿತೋ
ವಿಜ್ಞಾನದೃಗ್ವೀರ್ಯಸುರಂಧಿತಾಶಯಃ ।
ಸ್ವಪಾರ್ಷ್ಣಿನಾಽಽಪೀಡ್ಯ ಗುದಂ ತತೋಽನಿಲಂ
ಸ್ಥಾನೇಷು ಷಟ್ಸೂನ್ನಮಯೇಜ್ಜಿತಕ್ಲಮಃ ॥ ೨೦ ॥

ನಾಭ್ಯಾಂ ಸ್ಥಿತಂ ಹೃದ್ಯವರೋಪ್ಯ ತಸ್ಮಾ
ದುದಾನಗತ್ಯೋರಸಿ ತಂ ನಯೇನ್ಮುನಿಃ ।
ತತೋಽನುಸಂಧಾಯ ಧಿಯಾ ಮನಸ್ವೀ
ಸ್ವತಾಲುಮೂಲಂ ಶನಕೈರ್ನಯೇತ ॥ ೨೧ ॥

ತಸ್ಮಾದ್ ಭ್ರುವೋರಂತರಮುನ್ನಯೇತ
ನಿರುದ್ಧಸಪ್ತಾಯತನೋಽನಪೇಕ್ಷಃ ।
ಸ್ಥಿತ್ವಾ ಮುಹೂರ್ತಾರ್ಧಮಕುಂಠದೃಷ್ಟಿ
ರ್ನಿರ್ಭಿದ್ಯ ಮೂರ್ಧನ್ ವಿಸೃಜೇತ್ ಪರಂ ಗತಃ ॥ ೨೨ ॥

ಯದಿ ಪ್ರಯಾಸ್ಯನ್ನೃಪ ಪಾರಮೇಷ್ಠ್ಯಂ
ವೈಹಾಯಸಾನಾಮುತ ಯದ್ ವಿಹಾರಮ್ ।
ಅಷ್ಟಾಧಿಪತ್ಯಂ ಗುಣಸನ್ನಿವಾಯೇ
ಸಹೈವ ಗಚ್ಛೇನ್ಮನಸೇಂದ್ರಿಯೈಶ್ಚ ॥ ೨೩ ॥

ಯೋಗೇಶ್ವರಾಣಾಂ ಗತಿಮಾಹುರಂತ
ರ್ಬಹಿಸ್ತ್ರಿಲೋಕ್ಯಾಃ ಪವನಾಂತರಾತ್ಮಾ ।
ನ ಕರ್ಮಭಿಸ್ತಾಂ ಗತಿಮಾಪ್ನುವಂತಿ
ವಿದ್ಯಾತಪೋಯೋಗಸಮಾಧಿಭಾಜಾಮ್ ॥ ೨೪ ॥

ವೈಶ್ವಾನರಂ ಯಾತಿ ವಿಹಾಯಸಾ ಗತಃ
ಸುಷುಮ್ಣಯಾ ಬ್ರಹ್ಮಪಥೇನ ಶೋಚಿಷಾ ।
ವಿಧೂತಕಲ್ಕೋಽಥ ಹರೇರುದಸ್ತಾತ್
ಪ್ರಯಾತಿ ಚಕ್ರಂ ನೃಪ ಶೈಂಶುಮಾರಮ್ ॥ ೨೫ ॥

ಯೋಽಂತಃ ಪಚತಿ ಭೂತಾನಾಂ ಯಸ್ತತ್ಪತ್ಯಂಡಮಧ್ಯಗಃ ।
ಸೋಽಗ್ನಿರ್ವೈಶ್ವಾನರೋ ಮಾರ್ಗೋ ದೇವಾನಾಂ ಪಿತೃಣಾಂ ಮುನೇಃ ॥೨೬॥

ದೇವಯಾನಂ ಪಿಂಗಲಾಭಿರಹಾನ್ಯೇತಿ ಶತಾಯುಷಾ ।
ರಾತ್ರೀರಿಡಾಭಿಃ ಪಿತೃಣಾಂ ವಿಷುವತ್ತಾಂ ಸುಷುಮ್ನಯಾ ॥ ೨೭ ॥

ತದ್ ವಿಶ್ವನಾಭಿಂ ತ್ವಭಿಪದ್ಯ ವಿಷ್ಣೋ
ರಣೀಯಸಾ ವಿರಜೇನಾತ್ಮನೈಕಮ್ ।
ನಮಸ್ಕೃತಂ ಬ್ರಹ್ಮವಿದಾಮುಪೈತಿ
ಕಲ್ಪಾಯುಷೋ ವಿಬುಧಾ ಯದ್ ರಮಂತೇ ॥ ೨೮ ॥

ಅಥೋ ಅನಂತಸ್ಯ ಮುಖಾನಲೇನ
ದಂದಹ್ಯಮಾನಂ ಸ ನಿರೀಕ್ಷ್ಯ ವಿಶ್ವಮ್ ।
ನಿರ್ಯಾತಿ ಸಿದ್ಧೇಶ್ವರಜುಷ್ಟಧಿಷ್ಣ್ಯಂ
ಯದ್ ದ್ವೈಪರಾರ್ಧ್ಯಂ ತದು ಪಾರಮೇಷ್ಠ್ಯಮ್ ॥ ೨೯ ॥

ನ ಯತ್ರ ಶೋಕೋ ನ ಜರಾ ನ ಮೃತ್ಯು
ರ್ನಾರ್ತಿರ್ನ ಚೋದ್ವೇಗ ಋತೇ ಕುತಶ್ಚಿತ್ ।
ಯಚ್ಚಿತ್ತತೋದಃ ಕ್ರಿಯಯಾಽನಿದಂವಿದಾಂ
ದುರಂತದುಃಖಪ್ರಭವಾನುದರ್ಶನಾತ್ ॥ ೩೦ ॥

ತತೋ ವಿಶೇಷಂ ಪ್ರತಿಪದ್ಯ ನಿರ್ಭಯ
ಸ್ತೇನಾತ್ಮನಾಽಪೋಽನಲಮೂರ್ಧ್ನಿ ಚ ತ್ವರನ್ ।
ಜ್ಯೋತಿರ್ಮಯೋ ವಾಯುಮುಪೇತ್ಯ ಕಾಲೇ
ವಾಯ್ವಾತ್ಮನಾ ಖಂ ಬೃಹದಾತ್ಮಲಿಂಗಮ್ ॥ ೩೦ ॥

ಘ್ರಾಣೇನ ಗಂಧಂ ರಸನೇನ ವೈ ರಸಂ
ರೂಪಂ ತು ದೃಷ್ಟ್ಯಾ ಸ್ಪರ್ಶಂ ತ್ವಚೈವ ।
ಶ್ರೋತ್ರೇಣ ಚೋಪೇತ್ಯ ನಭೋಗುಣಂ ತತ್
ಪ್ರಾಯೇಣ ನಾವೃತ್ತಿಮುಪೈತಿ ಯೋಗೀ ॥ ೩೨ ॥

ಸ ಭೂತಸೂಕ್ಷ್ಮೇಂದ್ರಿಯಸನ್ನಿಕರ್ಷಾತ್
ಸನಾತನೋಽಸೌ ಭಗವಾನನಾದಿಃ ।
ಮನೋಮಯಂ ದೇವಮಯಂ ವಿಕಾರ್ಯಂ
ಸಂಸಾದ್ಯ ಮತ್ಯಾ ಸಹ ತೇನ ಯಾತಿ ॥ ೩೩ ॥

ವಿಜ್ಞಾನತತ್ವಂ ಗುಣಸನ್ನಿರೋಧಂ
ತೇನಾತ್ಮನಾऽऽತ್ಮಾನಮುಪೈತಿ ಶಾಂತಿಮ್ ।
ಆನಂದಮಾನಂದಮಯೋऽವಸಾನೇ
ಸರ್ವಾತ್ಮಕೇ ಬ್ರಹ್ಮಣಿ ವಾಸುದೇವೇ ॥ ३१ ॥

ಏತಾಂ ಗತಿಂ ಭಾಗವತೋ ಗತೋ ಯಃ
ಸ ವೈ ಪುನರ್ನೇಹ ವಿಷಜ್ಜತೇऽಂಗ ।
ಏತೇ ಸೃತೀ ತೇ ನೃಪ ವೇದಗೀತೇ
ತ್ವಯಾऽಭಿಪೃಷ್ಟೇऽಥ ಸನಾತನೇ ಚ ॥
ಯೇ ದ್ವೇ ಪುರಾ ಬ್ರಹ್ಮಣ ಆಹ ಪೃಷ್ಟ
ಆರಾಧಿತೋ ಭಗವಾನ್ ವಾಸುದೇವಃ ॥ ३३ ॥

ನ ಹ್ಯತೋऽನ್ಯಃ ಶಿವಃ ಪಂಥಾ ವಿಶ್ರುತಃ ಸಂಸೃತಾವಿಹ ।
ವಾಸುದೇವೇ ಭಗವತಿ ಭಕ್ತಿಯೋಗೋ ಯತೋ ಭವೇತ್ ॥ ३६ ॥

ಭಗವಾನ್ ಬ್ರಹ್ಮ ಕಾರ್ತ್ಸ್ನ್ಯೇನ ತ್ರಿರನ್ವೀಕ್ಷ್ಯ ಮನೀಷಯಾ ।
ತದ್ಧಿ ಹ್ಯಪಶ್ಯತ್ ಕೂಟಸ್ಥೇ ರತಿರಾತ್ಮನ್ ಯತೋ ಭವೇತ್ ॥ ३२ ॥

ಭಗವಾನ್ ಸರ್ವಭೂತೇಷು ಲಕ್ಷಿತಶ್ಚಾತ್ಮನಾ ಹರಿಃ ।
ದೃಶ್ಯೈರ್ಬುದ್ಧ್ಯಾದಿಭಿರ್ದ್ರಷ್ಟಾ ಲಕ್ಷಣೈರನುಮಾಪಕೈಃ ॥ ३८ ॥

ತಸ್ಮಾತ್ಸರ್ವಾತ್ಮನಾ ರಾಜನ್ ಹರಿಃ ಸರ್ವತ್ರ ಸರ್ವದಾ ।
ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯೋ ಭಗವಾನ್ ನೃಣಾಮ್ ॥ ३९ ॥

ಪಿಬಂತಿ ಯೇ ಭಗವತ ಆತ್ಮನಃ ಸತಾಂ
ಕಥಾಮೃತಂ ಶ್ರವಣಪುಟೇಷು ಸಂಭೃತಮ್ ।
ಪುನಂತಿ ತೇ ವಿಷಯವಿದೂಷಿತಾಶಯಂ
ವ್ರಜಂತಿ ತಚ್ಚರಣಸರೋರುಹಾಂತಿಕಮ್ ॥ ४० ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ
ದ್ವಿತೀಯೋऽಧ್ಯಾಯಃ ॥

ಅಥ ತೃತೀಯೋಽಧ್ಯಾಯಃ

ಶ್ರೀಶುಕ ಉವಾಚ—

ಏವಮೇತನ್ನಿಗದಿತಂ ಪೃಷ್ಟವಾನ್ ಯದ್ ಭವಾನ್ ಮಮ ।
ನೃಣಾಂ ಯನ್ಮ್ರಿಯಮಾಣಾನಾಂ ಮನುಷ್ಯೇಷು ಮನೀಷಿಣಾಮ್ ॥ ೧ ॥

ಬ್ರಹ್ಮವರ್ಚಸಕಾಮಸ್ತು ಯಜೇತ ಬ್ರಹ್ಮಣಸ್ಪತಿಮ್ ।
ಇಂದ್ರಮಿಂದ್ರಿಯಕಾಮಸ್ತು ಪ್ರಜಾಕಾಮಃ ಪ್ರಜಾಪತೀನ್ ॥ ೨ ॥

ದೇವೀಂ ಮಾಯಾಂ ತು ಶ್ರೀಕಾಮಃ ತೇಜಸ್ಕಾಮೋ ವಿಭಾವಸುಮ್ ।
ವಸುಕಾಮೋ ವಸೂನ್ ರುದ್ರಾನ್ ವೀರ್ಯಕಾಮಸ್ತು ವೀರ್ಯದಾನ್ ॥ ೩ ॥

ಅನ್ನಾದ್ಯಕಾಮಸ್ತ್ವದಿತಿಂ ಸ್ವರ್ಗಕಾಮೋಽದಿತೇಃ ಸುತಾನ್ ।
ವಿಶ್ವಾನ್ ದೇವಾನ್ ರಾಷ್ಟ್ರಕಾಮಃ ಸಾಧ್ಯಾನ್ ಸಂಸಾಧಕೋ ವಿಶಾಮ್ ।
ಆಯುಷ್ಕಾಮೋಽಶ್ವಿನೌ ದೇವೌ ಪುಷ್ಟಿಕಾಮ ಇಳಾಂ ಯಜೇತ್ ।
ಪ್ರತಿಷ್ಠಾಕಾಮಃ ಪುರುಷೋ ರೋದಸೀ ಲೋಕಮಾತರೌ ॥ ೪ ॥

ರೂಪಾಭಿಕಾಮೋ ಗಂಧರ್ವಾನ್ ಸ್ತ್ರೀಕಾಮೋಽಪ್ಸರ ಉರ್ವಶೀಮ್ ।
ಆಧಿಪತ್ಯಕಾಮಃ ಸರ್ವೇಷಾಂ ಯಜೇತ ಪರಮೇಷ್ಠಿನಮ್ ॥ ೬ ॥

ಯಜ್ಞಂ ಯಜೇದ್ ಯಶಸ್ಕಾಮಃ ಕೋಶಕಾಮಃ ಪ್ರಚೇತಸಮ್ ।
ವಿದ್ಯಾಕಾಮಸ್ತು ಗಿರಿಶಂ ದಾಂಪತ್ಯಾರ್ಥ ಉಮಾಂ ಸತೀಮ್ ॥ ೭ ॥

ಧರ್ಮಾರ್ಥಮುತ್ತಮಶ್ಲೋಕಂ ತಂತುಂ ತನ್ವನ್ ಪಿತೄನ್ ಯಜೇತ್ ।
ರಕ್ಷಾಕಾಮಃ ಪುಣ್ಯಜನಾನೋಜಸ್ಕಾಮೋ ಮರುದ್ಗಣಾನ್ ॥ ೮ ॥

ರಾಜ್ಯಕಾಮೋ ಮನೂನೇವ ನಿರ್ಋತಿಂ ತ್ವಭಿಚರನ್ ನರಃ ।
ಗ್ರಾಮಕಾಮೋ ಯಜೇತ್ ಸೋಮಮಕಾಮಃ ಪುರುಷಂ ಪುಮಾನ್ ॥ ೯ ॥

ಅಕಾಮಃ ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ ।
ತೀವ್ರೇಣ ಭಕ್ತಿಯೋಗೇನ ಯಜೇತ ಪುರುಷಂ ಪರಮ್ ॥ ೧೦ ॥

ಏತಾವಾನೇವ ಯಜತಾಮಿಹ ನಿಃಶ್ರೇಯಸೋದಯಃ ।
ಭಗವತ್ಯಚಲೋ ಭಾವೋ ಯದ್ ಭಾಗವತಸಂಗತಃ ॥ ೧೧ ॥

ಜ್ಞಾನಂ ಯದಾ ಪ್ರತಿನಿವೃತ್ತಗುಣೋರ್ಮಿಚಕ್ರ
ಮಾತ್ಮಪ್ರಸಾದ ಉಭಯತ್ರ ಗುಣೇಷ್ವಸಂಗಃ ।
ಕೈವಲ್ಯಸಂಭೃತಪಥಸ್ತ್ವಥ ಭಕ್ತಿಯೋಗಃ
ಕೋ ನಿರ್ವೃತೋ ಹರಿಕಥಾಸು ರತಿಂ ನ ಕುರ್ಯಾತ್ ॥ ೧೨ ॥

ಶೌನಕ ಉವಾಚ—

ಇತ್ಯಭಿವ್ಯಾಹೃತಂ ರಾಜಾ ನಿಶಮ್ಯ ಭರತರ್ಷಭಃ ।
ಕಿಮನ್ಯತ್ ಪೃಷ್ಟವಾನ್ ಭೂಯೋ ವೈಯಾಸಕಿಮೃಷಿಂ ಕವಿಮ್ ॥ ೧೩ ॥

ಏತಚ್ಛುಶ್ರೂಷತಾಂ ವಿದ್ವನ್ ಸೂತ ನೋಽರ್ಹಸಿ ಭಾಷಿತುಮ್ ।
ಕಥಾ ಹರಿಗುಣೋದಾರಾಃ ಸತಾಂ ಸ್ಯುಃ ಸದಸಿ ಧ್ರುವಮ್ ॥ ೧೪ ॥

ಸ ವೈ ಭಾಗವತೋ ರಾಜಾ ಪಾಂಡವೇಯೋ ಮಹಾರಥಃ ।
ಬಾಲಃ ಕ್ರೀಡನಕೈಃ ಕ್ರೀಡನ್ ಕೃಷ್ಣಕ್ರೀಡಾಂ ಯ ಆದದೇ ॥ ೧೫ ॥

ವೈಯಾಸಕಿಶ್ಚ ಭಗವಾನ್ ವಾಸುದೇವಪರಾಯಣಃ ।
ಉರುಗಾಯಗುಣೋದಾರಾಃ ಸತಾಂ ಸ್ಯುರ್ಹಿ ಸಮಾಗಮೇ ॥ ೧೬ ॥

ಆಯುರ್ಹರತಿ ವೈ ಪುಂಸಾಂ ಉದ್ಯನ್ನಸ್ತಂ ಚ ಯನ್ನಸೌ ।
ತಸ್ಯರ್ತೇ ಯಃ ಕ್ಷಣೋ ನೀತ ಉತ್ತಮಶ್ಲೋಕವಾರ್ತಯಾ ॥ ೧೭ ॥

ತರವಃ ಕಿಂ ನ ಜೀವಂತಿ ಭಸ್ತ್ರಾಃ ಕಿಂ ನ ಶ್ವಸಂತ್ಯುತ ।
ನ ಖಾದಂತಿ ನ ಮೇಹಂತಿ ಕಿಂ ಗ್ರಾಮಪಶವೋಽಪರೇ ॥ ೧೮ ॥

ಶ್ವವಿಡ್ವರಾಹೋಷ್ಟ್ರಖರೈಃ ಸ ತುಲ್ಯಃ ಪುರುಷಃ ಪಶುಃ ।
ನ ಯತ್ಕರ್ಣಪಥೋಪೇತೋ ಜಾತು ನಾಮ ಗದಾಗ್ರಜಃ ॥ ೧೯ ॥

ಬಿಲೇ ಬತೋರುಕ್ರಮವಿಕ್ರಮಾನ್ ಯೇ
ನ ಶೃಣ್ವತಃ ಕರ್ಣಪುಟೇ ನರಸ್ಯ ।
ಜಿಹ್ವಾಸತೀ ದಾರ್ದುರಿಕೇವ ಯಾಽಸೌ
ನ ಚೇತ್ ಪ್ರಗಾಯತ್ಯುರುಗಾಯಗಾಥಾಮ್ ॥ ೨೦ ॥

ಭಾರಃ ಪರಂ ಪಟ್ಟಕಿರೀಟಜುಷ್ಟ
ಮಪ್ಯುತ್ತಮಾಂಗಂ ನ ನಮೇನ್ಮುಕುಂದಮ್ ।

ಶಾವೌ ಕರೌ ನೋ ಕುರುತಃ ಸಪರ್ಯಾಂ
ಹರೇರ್ಲಸತ್ಕಾಂಚನಕಂಕಣೌ ವಾ ॥ ೨೦ ॥

ಬರ್ಹಾಯಿತೇ ತೇ ನಯನೇ ನರಾಣಾಂ
ಲಿಂಗಾನಿ ವಿಷ್ಣೋರ್ನ ನಿರೀಕ್ಷತೋ ಯೇ ।
ಪಾದೌ ನೃಣಾಂ ತೌ ದ್ರುಮಜನ್ಮಭಾಜೌ
ಕ್ಷೇತ್ರಾಣಿ ನಾನುವ್ರಜತೋ ಹರೇರ್ಯೌ ॥ ೨೨ ॥

ಜೀವಚ್ಛವೋ ಭಾಗವತಾಂಘ್ರಿರೇಣುಂ
ನ ಜಾತು ಮರ್ತ್ಯೋಽಭಿಲಷೇತ ಯಸ್ತು ।
ಶ್ರೀವಿಷ್ಣುಪದ್ಯಾ ಮನುಜಸ್ತುಳಸ್ಯಾಃ
ಶ್ವಸಚ್ಛವೋ ಯಸ್ತು ನ ವೇದ ಗಂಧಮ್ ॥ ೨೩ ॥

ತದಶ್ಮಸಾರಂ ಹೃದಯಂ ಬತೇದಂ
ಯದ್ ಗೃಹ್ಯಮಾಣೈರ್ಹರಿನಾಮಧೇಯೈಃ ।
ನ ವಿಕ್ರಿಯೇತಾಥ ಮುಖೇ ವಿಕಾಸೋ
ನೇತ್ರೇ ಜಲಂ ಗಾತ್ರರುಹೇಷು ಹರ್ಷಃ ॥ ೨೪ ॥

ಅಥಾಭಿಧೇಹ್ಯಂಗ ಮನೋಽನುಕೂಲಂ ಪ್ರಭಾಷಸೇ ಭಾಗವತಪ್ರಧಾನಃ ।
ಯದಾಹ ವೈಯಾಸಕಿರಾತ್ಮವಿದ್ಯಾವಿಶಾರದೋ ನೃಪತಿಂ ಸಾಧು ಪೃಷ್ಟಃ ॥ ೨೫ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ
ತೃತೀಯೋಧ್ಯಾಯಃ ॥

ಅಥ ಚತುರ್ಥೋಽಧ್ಯಾಯಃ

ಸೂತ ಉವಾಚ—
ವೈಯಾಸಕೇರಿತಿ ವಚಸ್ತತ್ವನಿಶ್ಚಯಮಾತ್ಮನಃ ।
ಉಪಧಾರ್ಯ ಮತಿಂ ಕೃಷ್ಣೇ ಔತ್ತರೇಯಃ ಸತೀಂ ವ್ಯಧಾತ್ ॥ ೧ ॥

ಆತ್ಮಜಾಯಾಸುತಾಗಾರ ಪಶುದ್ರವಿಣಬಂಧುಷು ।
ರಾಜ್ಯೇ ಚಾವಿಕಲೇ ನಿತ್ಯನಿರೂಢಾಂ ಮಮತಾಂ ಜಹೌ ॥ ೨ ॥

ಪಪ್ರಚ್ಛ ಚೇಮಮೇವಾರ್ಥಂ ಯನ್ಮಾಂ ಪೃಚ್ಛಥ ಸತ್ತಮಾಃ ।
ಕೃಷ್ಣಾನುಭಾವಶ್ರವಣೇ ಶ್ರದ್ದಧಾನೋ ಮಹಾಯಶಾಃ ॥ ೩ ॥

ಸಂಸ್ಥಾಂ ವಿಜ್ಞಾಯ ಸನ್ನ್ಯಸ್ಯ ಕರ್ಮ ತ್ರೈವರ್ಗಿಕಂ ಚ ಯತ್ ।
ವಾಸುದೇವೇ ಭಗವತಿ ಸ್ವಾತ್ಮಭಾವಂ ದೃಢಂ ಗತಃ ॥ ೪ ॥

ರಾಜೋವಾಚ—
ಸಮೀಚೀನಂ ವಚೋ ಬ್ರಹ್ಮನ್ ಸರ್ವಜ್ಞಸ್ಯ ತವಾನಘ ।
ತಮೋ ವಿಶೀರ್ಯತೇ ಮಹ್ಯಂ ಹರೇಃ ಕಥಯತಃ ಕಥಾಃ ॥ ೫ ॥

ಭೂಯ ಏವ ವಿವಿತ್ಸಾಮಿ ಭಗವಾನಾತ್ಮಮಾಯಯಾ ।
ಯಥೇದಂ ಸೃಜತೇ ವಿಶ್ವಂ ದುರ್ವಿಭಾವ್ಯಮಧೀಶ್ವರೈಃ ।
ಯಥಾ ಗೋಪಾಯತಿ ವಿಭುರ್ಯಥಾ ಸಂಯಚ್ಛತೇ ಪುನಃ ॥ ೬ ॥

ಯಾಂಯಾಂ ಶಕ್ತಿಮುಪಾಶ್ರಿತ್ಯ ಪುರುಶಕ್ತಿಃ ಪರಃ ಪುಮಾನ್ ।
ಆತ್ಮಾನಂ ಕ್ರೀಡಯನ್ ಕ್ರೀಡನ್ ಕರೋತಿ ವಿಕರೋತಿ ಚ ॥ ೭ ॥

ನೂನಂ ಭಗವತೋ ಬ್ರಹ್ಮನ್ ಹರೇರದ್ಭುತಕರ್ಮಣಃ ।
ದುರ್ವಿಭಾವ್ಯಮಿವಾಭಾತಿ ಕವಿಭಿಶ್ಚ ವಿಚೇಷ್ಟಿತಮ್ ॥ ೮ ॥

ಯಥಾ ಗುಣಾಂಸ್ತು ಪ್ರಕೃತೇರ್ಯುಗಪತ್ ಕ್ರಮಶೋಽಪಿ ವಾ ।
ಬಿಭರ್ತಿ ಭೂರಿಶಸ್ತ್ವೇಕಃ ಕುರ್ವನ್ ಕರ್ಮಾಣಿ ಜನ್ಮಭಿಃ ॥ ೯ ॥

ವಿಚಿಕಿತ್ಸಿತಮೇತನ್ಮೇ ಬ್ರವೀತು ಭಗವಾನ್ ಯಥಾ ।
ಶಬ್ದಬ್ರಹ್ಮಣಿ ನಿಷ್ಣಾತಃ ಪರಸ್ಮಿಂಶ್ಚ ಭವಾನ್ ಖಲು ॥ ೧೦ ॥

ಸೂತ ಉವಾಚ
ಇತ್ಯುಪಾಮಂತ್ರಿತೋ ರಾಜ್ಞಾ ಗುಣಾನುಕಥನೇ ವಿಭೋಃ ।
ಹೃಷೀಕೇಶಮನುಸ್ಮೃತ್ಯ ಪ್ರತಿವಕ್ತುಂ ಪ್ರಚಕ್ರಮೇ ॥ ೧೧ ॥

ಶ್ರೀಶುಕ ಉವಾಚ—

ನಮಃ ಪರಸ್ಮೈ ಪುರುಷಾಯ ಭೂಯಸೇ
ಸದುದ್ಭವಸ್ಥಾನನಿರೋಧಲೀಲಯಾ ।
ಗೃಹೀತಶಕ್ತಿತ್ರಿತಯಾಯ ದೇಹಿನಾ
ಮಂತರ್ಭ್ರುವಾಯಾನುಪಲಭ್ಯವರ್ತ್ಮನೇ ॥ ೧೨ ॥

ಭೂಯೋ ನಮಃ ಸದ್‌ವೃಜಿನಚ್ಛಿದೇಽಸತಾ
ಮಸಂಭವಾಯಾಖಿಲಸತ್ವಮೂರ್ತಯೇ ।
ಪುಂಸಾಂ ಪುನಃ ಪಾರಮಹಂಸ್ಯ ಆಶ್ರಮೇ
ವ್ಯವಸ್ಥಿತಾನಾಮನುಮೃಗ್ಯ ದಾಶುಷೇ ॥ ೧೩ ॥

ನಮೋನಮಸ್ತೇಽಸ್ತ್ವೃಷಭಾಯ ಸಾತ್ವತಾಂ
ವಿದೂರಕಾಷ್ಠಾಯ ಮುಹುಃ ಕುಯೋಗಿನಾಮ್ ।
ನಿರಸ್ತಸಾಮ್ಯಾತಿಶಯೇನ ರಾಧಸಾ
ಸ್ವಧಾಮನಿ ಬ್ರಹ್ಮಣಿ ರಂಸ್ಯತೇ ನಮಃ ॥ ೧೪ ॥

ಯತ್ಕೀರ್ತನಂ ಯಚ್ಛ್ರವಣಂ ಯದೀಕ್ಷಣಂ
ಯದ್ವಂದನಂ ಯತ್ಸ್ಮರಣಂ ಯದರ್ಹಣಮ್ ।
ಲೋಕಸ್ಯ ಸದ್ಯೋ ವಿಧುನೋತಿ ಕಲ್ಮಷಂ
ತಸ್ಮೈ ಸುಭದ್ರಶ್ರವಸೇ ನಮೋನಮಃ ॥ ೧೫ ॥

ತಪಸ್ವಿನೋ ದಾನಪರಾ ಯಶಸ್ವಿನೋ
ಮನಸ್ವಿನೋ ಮಂತ್ರವಿದಃ ಸುಮಂಗಳಾಃ ।
ಕ್ಷೇಮಂ ನ ವಿಂದಂತಿ ವಿನಾ ಯದರ್ಪಣಂ
ತಸ್ಮೈ ಸುಭದ್ರಶ್ರವಸೇ ನಮೋನಮಃ ॥ ೧೬ ॥

ವಿಚಕ್ಷಣಾ ಯಚ್ಚರಣೋಪಸಾದನಾತ್
ಸಂಗಂ ವ್ಯುದಸ್ಯೋಭಯತೋಽಂತರಾತ್ಮನಃ ।
ವಿಂದಂತಿ ಹಿ ಬ್ರಹ್ಮಗತಿಂ ಗತಕ್ಲಮಾ
ಸ್ತಸ್ಮೈ ಸುಭದ್ರಶ್ರವಸೇ ನಮೋನಮಃ ॥ ೧೭ ॥

ಕಿರಾತಹೂಣಾಂಧ್ರಪುಳಿಂದಪುಲ್ಕಸಾ
ಆಭೀರಕಂಕಾ ಯವನಾಃ ಶಕಾದಯಃ ।

ಯೇಽನ್ಯೇ ಚ ಪಾಪಾ ಯದಪಾಶ್ರಯಾಶ್ರಯಾ
ಚ್ಛುಧ್ಯಂತಿ ತಸ್ಮೈ ಪ್ರಭವಿಷ್ಣವೇ ನಮಃ ॥ ೧೮ ॥

ಸ ಏಷ ಆತ್ಮಾಽಽತ್ಮವತಾಮಧೀಶ್ವರ
ಸ್ತ್ರಯೀಮಯೋ ಧರ್ಮಮಯಸ್ತಪೋಮಯಃ ।
ಗತವ್ಯಲೀಕೈರಜಶಂಕರಾದಿಭಿ
ರ್ವಿತರ್ಕ್ಯಲಿಂಗೋ ಭಗವಾನ್ ಪ್ರಸೀದತಾಮ್ ॥ ೧೯ ॥

ಶ್ರಿಯಃ ಪತಿರ್ಯಜ್ಞಪತಿಃ ಪ್ರಜಾಪತಿ
ರ್ಧಿಯಾಂ ಪತಿರ್ಲೋಕಪತಿರ್ಧರಾಪತಿಃ ।
ಪತಿರ್ಗತಿಶ್ಚಾಂಧಕವೃಷ್ಣಿಸಾತ್ವತಾಂ
ಪ್ರಸೀದತಾಂ ಮೇ ಭಗವಾನ್ ಸತಾಂ ಪತಿಃ ॥ ೨೦ ॥

ಯದಂಘ್ರ್ಯಭಿಧ್ಯಾನಸಮಾಧಿಧೌತಯಾ
ಧಿಯಾಽನುಪಶ್ಯಂತಿ ಹಿ ತತ್ತ್ವಮಾತ್ಮನಃ ।
ವದಂತಿ ಚೈತತ್ ಕವಯೋ ಯಥಾರುಚಂ
ಸ ಮೇ ಮುಕುಂದೋ ಭಗವಾನ್ ಪ್ರಸೀದತಾಮ್ ॥ ೨೧ ॥

ಪ್ರಚೋದಿತಾ ಯೇನ ಪುರಾ ಸರಸ್ವತೀ
ವಿತನ್ವತಾಽಜಸ್ಯ ಸತೀಂ ಸ್ಮೃತಿಂ ಹೃದಿ ।
ಸ್ವಲಕ್ಷಣಾ ಪ್ರಾದುರಭೂತ್ ಕಿಲಾಸ್ಯತಃ
ಸ ಮೇ ಋಷೀಣಾಮೃಷಭಃ ಪ್ರಸೀದತಾಮ್ ॥ ೨೨ ॥

ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭು
ರ್ನಿರ್ಮಾಯ ಶೇತೇ ಯದಮೂಷು ಪೂರುಷಃ ।
ಭುಂಕ್ತೇ ಗುಣಾನ್ ಷೋಡಶ ಷೋಡಶಾತ್ಮಕಃ
ಸೋಽಲಂಕೃಷೀಷ್ಟ ಭಗವಾನ್ ವಚಾಂಸಿ ಮೇ ॥ ೨೩ ॥

ನಮಸ್ತಸ್ಮೈ ಭಗವತೇ ವಾಸುದೇವಾಯ ವೇಧಸೇ ।
ಪಪುರ್ಜ್ಞಾನಮಯಂ ಸೌಮ್ಯಾ ಯನ್ಮುಖಾಂಬುರುಹಾಸವಮ್ ॥ ೨೪ ॥

ಏತದೇವಾತ್ಮಭೂ ರಾಜನ್ ನಾರದಾಯೇತಿ ಪೃಚ್ಛತೇ ।
ವೇದಗರ್ಭೋಽಭ್ಯಧಾತ್ ಸರ್ವಂ ಯದಾಹ ಹರಿರಾತ್ಮನಃ ॥ ೨೫ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ ಚತುರ್ಥೋಽಧ್ಯಾಯಃ ॥

ಅಥ ಪಂಚಮೋಽಧ್ಯಾಯಃ

ಶ್ರೀನಾರದ ಉವಾಚ—
ದೇವದೇವ ನಮಸ್ತೇಽಸ್ತು ಭೂತಭಾವನ ಪೂರ್ವಜ ।
ತದ್ ವಿಜಾನೀಹಿ ಯಜ್ಜ್ಞಾನಮಾತ್ಮತತ್ವನಿದರ್ಶನಮ್ ॥ ೧ ॥

ಯದ್ರೂಪಂ ಯದಧಿಷ್ಠಾನಂ ಯತಃ ಸೃಷ್ಟಮಿದಂ ವಿಭೋ ।
ಯತ್ಸಂಸ್ಥಂ ಯತ್ಪರಂ ಯಚ್ಚ ತತ್ ತತ್ವಂ ವದ ತತ್ವತಃ ॥ ೨ ॥

ಸರ್ವಂ ಹ್ಯೇತದ್ ಭವಾನ್ ವೇದ ಭೂತಭವ್ಯಭವತ್ಪ್ರಭುಃ ।
ಕರಾಮಲಕವದ್ ವಿಶ್ವಂ ವಿಜ್ಞಾನಾವಸಿತಂ ತವ ॥ ೩ ॥

ಯದ್ವಿಜ್ಞಾನೋ ಯದಾಧಾರೋ ಯತ್ಪರಸ್ತ್ವಂ ಯದಾತ್ಮಕಃ ।
ಏಕಃ ಸೃಜಸಿ ಭೂತಾನಿ ಭೂತೈರೇವಾತ್ಮಮಾಯಯಾ ॥ ೪ ॥

ಆತ್ಮನ್ ಭಾವಯಸೇ ತಾನಿ ನ ಪರಾಗ್ ಭಾವಯೇಽಸ್ವಯಮ್ ।
ಆತ್ಮಶಕ್ತಿಮವಷ್ಟಭ್ಯ ಸೂತ್ರನಾಭಿರಿವಾಕ್ಲಮಃ ॥ ೫ ॥

ನಾಹಂ ವೇದ ಪರಂ ತ್ವಸ್ಮಾನ್ನಾವರಂ ನ ಸಮಂ ವಿಭೋ ।
ನಾಮರೂಪಗುಣೈರ್ಭಾವ್ಯಂ ಸದಸತ್ ಕಿಂಚಿದನ್ಯತಃ ॥ ೬ ॥

ಸ ಭವಾನಚರದ್ ಘೋರಂ ಯತ್ ತಪಃ ಸುಸಮಾಹಿತಃ ।
ತೇನ ಖೇದಯಸೇ ನಸ್ತ್ವಂ ಪರಾಂ ಶಂಕಾಂ ಚ ಯಚ್ಛಸಿ ॥ ೭ ॥

ಏತನ್ಮೇ ಪೃಚ್ಛತಃ ಸರ್ವಂ ಸರ್ವಜ್ಞ ಸಕಲೇಶ್ವರ ।
ವಿಜಾನೀಹಿ ಯಥೈವೇದಮಹಂ ಬುಧ್ಯೇಽನುಶಾಸಿತಃ ॥ ೮ ॥

ಬ್ರಹ್ಮೋವಾಚ—
ಸಮ್ಯಕ್ ಕಾರುಣಿಕಸ್ಯೇದಂ ವತ್ಸ ತೇ ವಿಚಿಕಿತ್ಸಿತಮ್ ।
ಯದಹಂ ಚೋದಿತಃ ಸೌಮ್ಯ ಭಗವದ್ವೀರ್ಯದರ್ಶನೇ ॥ ೯ ॥

ನಾನೃತಂ ಬತ ತಚ್ಚಾಪಿ ಯಥಾ ಮಾಂ ಪ್ರಬ್ರವೀಷಿ ಭೋಃ ।
ಅವಿಜ್ಞಾಯ ಪರಂ ಮತ್ತ ಏತಾವತ್ತ್ವಂ ಯತೋ ಹಿ ಮೇ ॥ ೧೦ ॥

ಯೇನ ಸ್ವರೋಚಿಷಾ ವಿಶ್ವಂ ರೋಚಿತಂ ರೋಚಯಾಮ್ಯಹಮ್ ।
ಯಥಾರ್ಕೋಽಗ್ನಿರ್ಯಥಾ ಸೋಮೋ ಯಥರ್ಕ್ಷಗ್ರಹತಾರಕಾಃ ॥ ೧೧ ॥

ನಮಸ್ತಸ್ಮೈ ಭಗವತೇ ವಾಸುದೇವಾಯ ಧೀಮಹಿ ।
ಯನ್ಮಾಯಯಾ ದುರ್ಜಯಯಾ ಮಾಂ ವದಂತಿ ಜಗದ್ಗುರುಮ್ ॥ ೧೨ ॥

ವಿಲಜ್ಜಮಾನಯಾ ಯಸ್ಯ ಸ್ಥಾತುಮೀಕ್ಷಾಪಥೇಽಮುಯಾ ।
ವಿಮೋಹಿತಾ ವಿಕತ್ಥಂತೇ ಮಮಾಹಮಿತಿ ದುರ್ಧಿಯಃ ॥ ೧೩ ॥

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ವಾಸುದೇವಾತ್ ಪರೋ ಬ್ರಹ್ಮನ್ ನ ಚಾನ್ಯೋಽರ್ಥೋಽಸ್ತಿ ತಾತ್ತ್ವತಃ ॥೧೪

ನಾರಾಯಣಪರಾ ವೇದಾ ದೇವಾ ನಾರಾಯಣಾಂಗಜಾಃ ।
ನಾರಾಯಣಪರಾ ಲೋಕಾ ನಾರಾಯಣಪರಾ ಮಖಾಃ ॥ ೧೫ ॥

ನಾರಾಯಣಪರೋ ಯೋಗೋ ನಾರಾಯಣಪರಂ ತಪಃ ।
ನಾರಾಯಣಪರಂ ಜ್ಞಾನಂ ನಾರಾಯಣಪರಾ ಗತಿಃ ॥ ೧೬ ॥

ತಸ್ಯಾಪಿ ದ್ರಷ್ಟುರೀಶಸ್ಯ ಕೂಟಸ್ಥಸ್ಯಾಖಿಲಾತ್ಮನಃ ।
ಸೃಜ್ಯಂ ಸೃಜಾಮಿ ಸೃಷ್ಟೋಽಹಮೀಕ್ಷಯೈವಾಭಿಚೋದಿತಃ ॥ ೧೭ ॥

ಸತ್ತ್ವಂ ರಜಸ್ತಮ ಇತಿ ನಿರ್ಗುಣಸ್ಯ ಗುಣಾಸ್ತ್ರಯಃ ।
ಸ್ಥಿತಿಸರ್ಗನಿರೋಧೇಷು ಗೃಹೀತಾ ಮಾಯಯಾ ವಿಭೋಃ ॥ ೧೮ ॥

ಕಾರ್ಯಕಾರಣಕರ್ತೃತ್ವೇ ದ್ರವ್ಯಜ್ಞಾನಕ್ರಿಯಾಶ್ರಯಾಃ ।
ಬಧ್ನಂತಿ ನಿತ್ಯದಾ ಮುಕ್ತಂ ಮಾಯಿನಂ ಪುರುಷಂ ಗುಣಾಃ ॥ ೧೯ ॥

ಸ ಏಷ ಭಗವಾಂಲ್ಲಿಂಗೈಸ್ತ್ರಿಭಿರೇತೈರಧೋಕ್ಷಜಃ ।
ಸ್ವಲಕ್ಷಿತಗತಿರ್ಬ್ರಹ್ಮನ್ ಸರ್ವೇಷಾಂ ಮಮ ಚೇಶ್ವರಃ ॥ ೨೦ ॥

ಕಾಲಂ ಕರ್ಮ ಸ್ವಭಾವಂ ಚ ಮಾಯೇಶೋ ಮಾಯಯಾ ಸ್ವಯಾ ।
ಆತ್ಮನ್ ಯದೃಚ್ಛಯಾ ಪ್ರಾಪ್ತಂ ವಿಬುಭೂಷುರುಪಾದದೇ ॥ ೨೧ ॥

ಕಾಲಾದ್ ಗುಣವ್ಯತಿಕರಾತ್ ಪರಿಣಾಮಸ್ಸ್ವಭಾವತಃ ।
ಕರ್ಮಣೋ ಜನ್ಮ ಮಹತಃ ಪುರುಷಾಧಿಷ್ಠಿತಾದಭೂತ್ ॥ ೨೨ ॥

ಮಹತಸ್ತು ವಿಕುರ್ವಾಣಾದ್ ರಜಸ್ಸತ್ತ್ವೋಪಬೃಂಹಿತಾತ್ ।
ತಮಃಪ್ರಧಾನಸ್ತ್ವಭವದ್ ದ್ರವ್ಯಜ್ಞಾನಕ್ರಿಯಾತ್ಮಕಃ ॥ ೨೩॥

ಸೋಽಹಂಕಾರ ಇತಿ ಪ್ರೋಕ್ತೋ ವಿಕುರ್ವನ್ ಸಮಭೂತ್ ತ್ರಿಧಾ ।
ವೈಕಾರಿಕಸ್ತೈಜಸಶ್ಚ ತಾಮಸಶ್ಚೇತಿ ಯದ್ಭಿದಾ ।
ದ್ರವ್ಯಶಕ್ತಿಃ ಕ್ರಿಯಾಶಕ್ತಿರ್ಜ್ಞಾನಶಕ್ತಿರಿತಿ ಪ್ರಭೋಃ ॥ ೨೪ ॥

ತಾಮಸಾದಪಿ ಭೂತಾದೇರ್ವಿಕುರ್ವಾಣಾದಭೂನ್ನಭಃ ।
ತಸ್ಯ ಮಾತ್ರಾಗುಣಃ ಶಬ್ದೋ ಲಿಂಗಂ ಯದ್ ದ್ರಷ್ಟೃದೃಶ್ಯಯೋಃ ॥ ೨೫ ॥

ನಭಸೋಽಥ ವಿಕುರ್ವಾಣಾದಭೂತ್ ಸ್ಪರ್ಶಗುಣೋಽನಿಲಃ ।
ಪರಾನ್ವಯಾಚ್ಛಬ್ದವಾಂಶ್ಚ ಪ್ರಾಣ ಓಜಃ ಸಹೋ ಬಲಮ್ ॥ ೨೬ ॥

ವಾಯೋರಪಿ ವಿಕುರ್ವಾಣಾತ್ ಕಾಲಕರ್ಮಸ್ವಭಾವತಃ ।
ಉದಪದ್ಯತ ತೇಜೋ ವೈ ರೂಪವತ್ ಸ್ಪರ್ಶಶಬ್ದವತ್ ॥ ೨೭ ॥

ತೇಜಸಸ್ತು ವಿಕುರ್ವಾಣಾದಾಸೀದಂಭೋ ರಸಾತ್ಮಕಮ್ ।
ರೂಪವತ್ ಸ್ಪರ್ಶವಚ್ಚಾಂಭೋ ಘೋಷವಚ್ಚ ತದನ್ವಯಾತ್ ॥ ೨೮ ॥

ವಿಶೇಷಸ್ತು ವಿಕುರ್ವಾಣಾದಂಭಸೋ ಗಂಧವಾನಭೂತ್ ।
ಪರಾನ್ವಯಾದ್ ರಸಸ್ಪರ್ಶರೂಪಶಬ್ದಗುಣಾನ್ವಿತಃ ॥ ೨೯ ॥

ವೈಕಾರಿಕಾನ್ಮನೋ ಜಜ್ಞೇ ದೇವಾ ವೈಕಾರಿಕಾ ದಶ ।
ದಿಗ್ವಾತಾರ್ಕಪ್ರಚೇತೋಶ್ವಿವಹ್ನೀಂದ್ರೋಪೇಂದ್ರಮಿತ್ರಕಾಃ ॥ ೩೦ ॥

ತೈಜಸಾತ್ತು ವಿಕುರ್ವಾಣಾದಿಂದ್ರಿಯಾಣಿ ದಶಾಭವನ್ ।
ಜ್ಞಾನಶಕ್ತಿಃ ಕ್ರಿಯಾಶಕ್ತಿರ್ಬುದ್ಧಿಃ ಪ್ರಾಣಶ್ಚತೈಜಸೌ ॥ ೩೧ ॥

ಶ್ರೋತ್ರತ್ವಗ್‌ಘ್ರಾಣದೃಗ್‌ಜಿಹ್ವಾವಾಗ್‌ದೋರ್ಮೇಢ್ರಾಂಘ್ರಿಪಾಯವಃ ।
ಯ ಏತೇಽಸಂಗತಾ ಭಾವಾ ಭೂತೇಂದ್ರಿಯಮನೋಗುಣಾಃ ।
ಯದಾಯತನನಿರ್ಮಾಣೇ ನ ಶೇಕುರ್ಬ್ರಹ್ಮವಿತ್ತಮ ॥ ೩೨ ॥

ತದಾ ಸಂಹತ್ಯ ಚಾನ್ಯೋನ್ಯಂ ಭಗವಚ್ಛಕ್ತಿಚೋದಿತಾಃ ।
ಸದಸತ್ತ್ವಮುಪಾದಾಯ ನೋ ಭಯಂ ಸಸೃಜುರ್ಹ್ಯದಃ ॥ ೩೩ ॥

ವರ್ಷಪೂಗಸಹಸ್ರಾಂತೇ ತದಂಡಮುದಕೇಶಯಮ್ ।
ಕಾಲಕರ್ಮಸ್ವಭಾವಸ್ಥೋ(ಽ)ಜೀವೋ(ಽ)ಜೀವಮಜೀಜನತ್ ॥ ೩೪ ॥

ಸ ಏಷ ಪುರುಷಸ್ತಸ್ಮಾದಂಡಂ ನಿರ್ಭಿದ್ಯ ನಿರ್ಗತಃ ।
ಸಹಸ್ರೋರ್ವಂಘ್ರಿಬಾಹ್ವಕ್ಷಿಃ ಸಹಸ್ರಾನನಶೀರ್ಷವಾನ್ ॥ ೩೫ ॥

ಯಸ್ಯೇಹಾವಯವೈರ್ಲೋಕಾನ್ ಕಲ್ಪಯಂತಿ ಮನೀಷಿಣಃ ।
ಊರ್ವಾದಿಭಿರಧಃ ಸಪ್ತ ಸಪ್ತೋರ್ಧ್ವಂ ಜಘನಾದಿಭಿಃ ॥ ೩೬ ॥

ಪುರುಷಸ್ಯ ಮುಖಂ ಬ್ರಹ್ಮ ಕ್ಷತ್ರಮೇತಸ್ಯ ಬಾಹವಃ ।
ಊರ್ವೋರ್ವೈಶ್ಯೋ ಭಗವತಃ ಪದ್ಭ್ಯಾಂ ಶೂದ್ರೋ ವ್ಯಜಾಯತ ॥ ೩೭ ॥

ಭೂರ್ಲೋಕಃ ಕಲ್ಪಿತಃ ಪದ್ಭ್ಯಾಂ ಭುವರ್ಲೋಕೋಽಸ್ಯ ನಾಭಿತಃ ।
ಹೃದಾ ಸ್ವರ್ಲೋಕ ಉರಸಾ ಮಹರ್ಲೋಕೋ ಮಹಾತ್ಮನಃ ॥ ೩೮ ॥

ಗ್ರೀವಾಯಾಂ ಜನಲೋಕಶ್ಚ ತಪೋಲೋಕೋಽಸ್ಯ ನೇತ್ರಯೋಃ ।
ಮೂರ್ಧಭಿಃ ಸತ್ಯಲೋಕಸ್ತು ಬ್ರಹ್ಮಲೋಕಃ ಸನಾತನಃ ॥ ೩೯ ॥

ಕಟಿಭ್ಯಾಮತಳಂ ಕ್ಲೃಪ್ತಮೂರುಭ್ಯಾಂ ವಿತಳಂ ವಿಭೋಃ ।
ಜಾನುಭ್ಯಾಂ ಸುತಳಂ ಕ್ಲೃಪ್ತಂ ಜಂಘಾಭ್ಯಾಂ ತು ತಳಾತಳಮ್ ॥ ೪೦ ॥

ಮಹಾತಳಂ ತು ಗುಲ್ಫಾಭ್ಯಾಂ ಪ್ರಪದಾಭ್ಯಾಂ ರಸಾತಳಮ್ ।
ಪಾತಾಳಂ ಪಾದತಳತ ಇತಿ ಲೋಕಮಯಃ ಪುಮಾನ್ ॥ ೪೧ ॥

ಭೂರ್ಲೋಕಃ ಕಲ್ಪಿತಃ ಪದ್ಭ್ಯಾಂ ಭುವರ್ಲೋಕಸ್ತು ನಾಭಿತಃ ।
ಸ್ವರ್ಲೋಕಃ ಕಲ್ಪಿತೋ ಮೂರ್ಧ್ನಿ ಇತಿ ವಾ ಲೋಕಕಲ್ಪನಾ ॥ ೪೨ ॥

|| ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ
ಪಂಚಮೋಽಧ್ಯಾಯಃ ||

ಅಥ ಷಷ್ಠೋಽಧ್ಯಾಯಃ

ಬ್ರಹ್ಮೋವಾಚ—
ವಾಚೋ ವಹ್ನೇರ್ಮುಖಂ ಕ್ಷೇತ್ರಂ ಛಂದಸಾಂ ಸಪ್ತಧಾತವಃ ।
ಹವ್ಯಕವ್ಯಾಮೃತಾನ್ನಾನಾಂ ಜಿಹ್ವಾ ಸರ್ವರಸಸ್ಯ ಚ || ೧ ||

ಸರ್ವಾಸೂನಾಂ ಚ ವಾಯೋಶ್ಚ ತನ್ನಾಸೇ ಪರಮಾಯನೇ ।
ಅಶ್ವಿನೋರೋಷಧೀನಾಂ ಚ ಘ್ರಾಣೋ ಗಂಧಸ್ಯ ಚೈವ ಹಿ || ೨ ||

ರೂಪಾಣಾಂ ತೇಜಸಾಂ ಚಕ್ಷುರ್ದಿವಃ ಸೂರ್ಯಸ್ಯ ಚಾಕ್ಷಿಣೀ ।
ಕರ್ಣೌ ದಿಶಾಂ ಚ ತೀರ್ಥಾನಾಂ ಶ್ರೋತ್ರಮಾಕಾಶಶಬ್ದಯೋಃ || ೩ ||

ತದ್ಗಾತ್ರಂ ವಸ್ತುಸಾರಾಣಾಂ ಸೌಭಾಗ್ಯಸ್ಯ ಚ ಭಾಜನಮ್ ।
ತ್ವಗಸ್ಯ ಸ್ಪರ್ಶವಾಯ್ವೋಶ್ಚ ಸರ್ವಮೇಧಸ್ಯ ಚೈವ ಹಿ || ೪ ||

ರೋಮಾಣ್ಯುದ್ಭಿಜಜಾತೀನಾಂ ಯೈರ್ವಾ ಯಜ್ಞಸ್ತು ಸಂಭೃತಃ ।
ಕೇಶಶ್ಮಶ್ರುನಖಾನ್ಯಸ್ಯ ಶಿಲಾಲೋಹಾಭ್ರವಿದ್ಯುತಾಮ್ || ೫||

ಬಾಹವೋ ಲೋಕಪಾಲಾನಾಂ ಪ್ರಾಯಶಃ ಕ್ಷೇಮಕರ್ಮಣಾಮ್ ।
ವಿಕ್ರಮೋ ಭೂರ್ಭುವಃಸ್ವಶ್ಚ ಕ್ಷೇಮಸ್ಯ ಶರಣಸ್ಯ ಚ ।
ಸರ್ವಕಾಮವರಸ್ಯಾಪಿ ಹರೇಶ್ಚರಣ ಆಸ್ಪದಮ್ || ೬ ||

ಅಪಾಂ ವೀರ್ಯಸ್ಯ ಸರ್ಗಸ್ಯ ಪರ್ಜನ್ಯಸ್ಯ ಪ್ರಜಾಪತೇಃ ।
ಪುಂಸಃ ಶಿಶ್ನ ಉಪಸ್ಥಸ್ತು ಪ್ರಜಾತ್ಯಾನಂದನಿರ್ವೃತೇಃ || ೭ ||

ಪಾಯುರ್ಯಮಸ್ಯ ಮಿತ್ರಸ್ಯ ಪರಿಮೋಕ್ಷಸ್ಯ ನಾರದ ।
ಹಿಂಸಾಯಾ ನಿರ್ಋತೇರ್ಮೃತ್ಯೋರ್ನಿರಯಸ್ಯ ಗುದಃ ಸ್ಮೃತಃ || ೮ ||

ಪರಾಭೂತೇರಧರ್ಮಸ್ಯ ತಮಸಶ್ಚಾಪಿ ಪಶ್ಚಿಮಃ ।
ನಾಡ್ಯೋ ನದನದೀನಾಂ ತು ಗೋತ್ರಾಣಾಮಸ್ಥಿಸಂಹತಿಃ ॥ ೯ ॥

ಅವ್ಯಕ್ತರಸಸಿಂಧೂನಾಂ ಭೂತಾನಾಂ ನಿಧನಸ್ಯ ಚ ।
ಉದರಂ ವಿದಿತಂ ಪುಂಸೋ ಹೃದಯಂ ಮನಸಃ ಪದಮ್ ॥ ೧೦ ॥

ಧರ್ಮಸ್ಯ ಮಮ ತುಭ್ಯಂ ಚ ಕುಮಾರಾಣಾಂ ಭವಸ್ಯ ಚ ।
ವಿಜ್ಞಾನಸ್ಯ ಚ ತತ್ವಸ್ಯ ಪರಸ್ಯಾತ್ಮಾ ಪರಾಯಣಮ್ ॥ ೧೧ ॥

ಅಹಂ ಭವಾನ್ ಭವಶ್ಚೈವ ಯ ಇಮೇ ಮುನಯೋಽಗ್ರಜಾಃ ।
ಸುರಾಸುರನರಾ ನಾಗಾಃಖಗಾ ಮೃಗಸರೀಸೃಪಾಃ ॥ ೧೨ ॥

ಗಂಧರ್ವಾಪ್ಸರಸೋ ಯಕ್ಷಾ ರಕ್ಷೋಭೂತಗಣೋರಗಾಃ ।
ಪಶವಃ ಪಿತರಃ ಸಿದ್ಧಾ ವಿದ್ಯಾಧ್ರಾಶ್ಚಾರಣಾ ದ್ರುಮಾಃ ॥ ೧೩ ॥

ಅನ್ಯೇ ಚ ವಿವಿಧಾ ಜೀವಾ ಜಲಸ್ಥಲನಭೌಕಸಃ ।
ಗ್ರಹರ್ಕ್ಷಕೇತವಸ್ತಾರಾಸ್ತಡಿತಃ ಸ್ತನಯಿತ್ನವಃ ॥ ೧೪ ॥

ಸರ್ವಂ ಪುರುಷ ಏವೇದಂ ಭೂತಂ ಭವ್ಯಂ ಭವಚ್ಚ ಯತ್ ।
ತೇನೇದಮಾವೃತಂ ವಿಶ್ವಂ ವಿತಸ್ತಿಮಧಿತಿಷ್ಠತಾ ॥ ೧೫ ॥

ಸ್ವಧಿಷ್ಣ್ಯಂ ಪ್ರತಪನ್ ಪ್ರಾಣೋ ಬಹಿಶ್ಚ ಪ್ರತಪತ್ಯಸೌ ।
ಏವಂ ವಿರಾಜಂ ಪ್ರತಪಂಸ್ತಪತ್ಯಂತರ್ಬಹಿಃ ಪುಮಾನ್ ॥ ೧೬ ॥

ಸೋಽಮೃತಸ್ಯಾಭಯಸ್ಯೇಶೋ ಮರ್ತ್ಯಮನ್ನಂ ಯದತ್ಯಗಾತ್ ।
ಮಹಿಮೈಷ ತತೋ ಬ್ರಹ್ಮನ್ ಪುರುಷಸ್ಯ ದುರತ್ಯಯಃ ॥ ೧೭ ॥

ಪಾದೋಽಸ್ಯ ಸರ್ವಭೂತಾನಿ ಪುಂಸಃ ಸ್ಥಿತಿವಿದೋ ವಿದುಃ ।
ಅಮೃತಂ ಕ್ಷೇಮಮಭಯಂ ತ್ರಿಮೂರ್ಧ್ನೋಽಧಾಯಿ ಮೂರ್ಧಸು ॥ ೧೮ ॥

ಪಾದಾಸ್ತ್ರಯೋ ಬಹಿಸ್ತ್ವಾಸನ್ನಪ್ರಜಾನಾಂ ಯ ಆಶ್ರಯಾಃ ।
ಅಂತಸ್ತ್ರಿಲೋಕ್ಯಾಸ್ತ್ವಪರೋ ಗೃಹಮೇಧೈರ್ಬೃಹದ್ ಹುತಃ ॥ ೧೯ ॥

ಸೃತೀ ವಿಚಕ್ರಮೇ ವಿಷ್ವಕ್ ಸಾಶನಾನಶನೇ ಉಭೇ ।
ಯದವಿದ್ಯಾ ಚ ವಿದ್ಯಾ ಚ ಪುರುಷಸ್ತೂಭಯಾಶ್ರಯಃ ॥ ೨೦ ॥

ತಸ್ಮಾದಂಡಾದ್ ವಿರಾಡ್ ಜಜ್ಞೇ ಭೂತೇಂದ್ರಿಯಗುಣಾಶ್ರಯಃ ।
ತದ್ ದ್ರವ್ಯಮತ್ಯಗಾದ್ ವಿಶ್ವಂ ಗೋಭಿಃ ಸೂರ್ಯ ಇವಾಶ್ರಯಮ್ ॥ ೨೧ ॥

ಯದಾಽಸ್ಯ ನಾಭ್ಯಾನ್ನಳಿನಾದಹಮಾಸಂ ಮಹಾತ್ಮನಃ ।
ನಾವಿಂದಂ ಯಜ್ಞಸಂಭಾರಾನ್ ಪುರುಷಾವಯವಾನೃತೇ ॥ ೨೨ ॥

ತೇಷು ಯಜ್ಞಾಶ್ಚ ಪಶವಃ ಸವನಸ್ಪತಯಃ ಕುಶಾಃ ।
ಇದಂ ಚ ದೇವಯಜನಂ ಕಾಲಶ್ಚೋರುಗುಣಾನ್ವಿತಃ ॥ ೨೩ ॥

ವಸೂನ್ಯೋಷಧಯಃ ಸ್ನೇಹಾ ರಸಲೋಹಮೃದೋ ಜಲಮ್ ।
ಋಚೋ ಯಜೂಂಷಿ ಸಾಮಾನಿ ಚಾತುರ್ಹೋತ್ರಂ ಚ ಸತ್ತಮ ॥ ೨೪ ॥

ನಾಮಧೇಯಾನಿ ಮಂತ್ರಾಶ್ಚ ದಕ್ಷಿಣಾಶ್ಚ ವ್ರತಾನಿ ಚ ।
ದೇವತಾನುಕ್ರಮಃ ಕಲ್ಪಃ ಸಂಕಲ್ಪಃ ಸೂತ್ರಮೇವ ಚ ॥ ೨೫ ॥

ಗತಯೋ ಮತಯಃ ಶ್ರದ್ಧಾ ಪ್ರಾಯಶ್ಚಿತ್ತಂ ಸಮರ್ಪಣಮ್ ।
ಪುರುಷಾವಯವೈರೇತೈಃ ಸಂಭಾರಾಃ ಸಂಭೃತಾ ಮಯಾ ॥ ೨೬ ॥

ಇತಿ ಸಂಭೃತಸಂಭಾರಃ ಪುರುಷಾವಯವೈರಹಮ್ ।
ತಮೇವ ಪುರುಷಂ ಯಜ್ಞಂ ತೇನೈವಾಯಜಮೀಶ್ವರಮ್ ॥ ೨೭ ॥

ತತಸ್ತೇ ಭ್ರಾತರ ಇಮೇ ಪ್ರಜಾನಾಂ ಪತಯೋ ನವ ।
ಅಯಜನ್ ವ್ಯಕ್ತಮವ್ಯಕ್ತಂ ಪುರುಷಂ ಸುಸಮಾಹಿತಾಃ ॥ ೨೮ ॥

ತತಶ್ಚ ಮನವಃ ಕಾಲ ಈಜಿರೇ ಋಷಯೋಽಪರೇ ।
ಪಿತರೋ ವಿಬುಧಾ ದೈತ್ಯಾ ಮನುಷ್ಯಾಃ ಕ್ರತುಭಿರ್ವಿಭುಮ್ ॥ ೨೯ ॥

ನಾರಾಯಣೇ ಭಗವತಿ ತದಿದಂ ವಿಶ್ವಮಾಹಿತಮ್ ।
ಗೃಹೀತಮಾಯೋರುಗುಣೇ ಸರ್ಗಾದಾವಗುಣೇ ಸ್ವತಃ ॥ ೩೦ ॥

ಸೃಜಾಮಿ ತನ್ನಿಯುಕ್ತೋಽಹಂ ಹರೋ ಹರತಿ ತದ್ವಶಃ ।
ವಿಶ್ವಂ ಪುರುಷರೂಪೇಣ ಪರಿಪಾತಿ ತ್ರಿಶಕ್ತಿಧೃಕ್ ॥ ೩೧ ॥

ಇತಿ ತೇಽಭಿಹಿತಂ ತಾತ ಯಥೇದಮನುಪೃಚ್ಛಸಿ ।
ನಾನ್ಯದ್ ಭಗವತಃ ಕಿಂಚಿದ್ ಭಾವ್ಯಂ ಸದಸದಾತ್ಮಕಮ್ ॥ ೩೨ ॥

ನ ಭಾರತೀ ಮೇಽಂಗ ಮೃಷೋಪಲಕ್ಷ್ಯತೇ
ನ ಕರ್ಹಿಚಿನ್ಮೇ ಮನಸೋ ಮೃಷಾ ಗತಿಃ ।
ನ ಮೇ ಹೃಷೀಕಾಣಿ ಪತಂತ್ಯಸತ್ಪಥೇ
ಯನ್ಮೇ ಹೃದೌತ್ಕಂಠ್ಯವತಾ ಧೃತೋ ಹರಿಃ ॥ ೩೩ ॥

ಸೋಽಹಂ ಸಮಾಮ್ನಾಯಮಯಸ್ತಪೋಮಯಃ
ಪ್ರಜಾಪತೀನಾಮಭಿವಂದಿತಃ ಪತಿಃ ।
ಆಸ್ಥಾಯ ಯೋಗಂ ನಿಪುಣಂ ಸಮಾಹಿತ
ಸ್ತಂ ನಾಧ್ಯಗಚ್ಛಂ ಯತ ಆತ್ಮಸಂಭವಃ ॥ ೩೪ ॥

ನತೋಽಸ್ಮ್ಯಹಂ ತಚ್ಚರಣಂ ಸಮೀಯುಷಾಂ
ಭವಚ್ಛಿದಂ ಸ್ವಸ್ತ್ಯಯನಂ ಸುಮಂಗಳಮ್ ।
ಯಃ ಸ್ವಾತ್ಮಮಾಯಾವಿಭವಂ ಸ್ವಯಂ ಗತೋ
ನಾಹಂ ನಭಸ್ವಾಂಸ್ತಮಥಾಪರೇ ಕುತಃ ॥ ೩೫ ॥

ನಾಹಂ ನ ಯೂಯಂ ಬತ ತದ್ಗತಿಂ ವಿದು
ರ್ನ ವಾಮದೇವಃ ಕಿಮುತಾಪರೇ ಸುರಾಃ ।
ಯನ್ಮಾಯಯಾ ಮೋಹಿತಬುದ್ಧಯಸ್ತ್ವಿದಂ
ವಿನಿರ್ಮಿತಂ ಸ್ವಾತ್ಮಸಮಂ ವಿಚಕ್ಷ್ಮಹೇ ॥ ೩೬ ॥

ಯಸ್ಯಾವತಾರಕರ್ಮಾಣಿ ಗಾಯಂತಿ ಹ್ಯಸ್ಮದಾದಯಃ ।
ನ ಯಂ ವಿದಂತಿ ತತ್ವೇನ ತಸ್ಮೈ ಭಗವತೇ ನಮಃ ॥ ೩೭ ॥

ಸ ಏಷ ಆದ್ಯಃ ಪುರುಷಃ ಕಲ್ಪೇಕಲ್ಪೇ ಸೃಜತ್ಯಜಃ ।
ಆತ್ಮಾಽಽತ್ಮನ್ಯಾತ್ಮನಾಽಽತ್ಮಾನಂ ಸ ಸಂಯಚ್ಛತಿ ಪಾತಿ ಚ ॥ ೩೮ ॥

ವಿಶುದ್ಧಂ ಕೇವಲಂ ಜ್ಞಾನಂ ಪ್ರತ್ಯಕ್ ಸಮ್ಯಗವಸ್ಥಿತಮ್ ।
ಸತ್ಯಂ ಪೂರ್ಣಮನಾದ್ಯಂತಂ ನಿರ್ಗುಣಂ ನಿತ್ಯಮದ್ವಯಮ್ ॥ ೩೯ ॥

ಋತಂ ವಿಂದಂತಿ ಮುನಯಃ ಪ್ರಶಾಂತಾತ್ಮೇಂದ್ರಿಯಾಶಯಾಃ ।
ಯದಾ ತದೈವಾಸತ್ತರ್ಕೈಸ್ತಿರೋಧೀಯೇತ ವಿಪ್ಲುತಮ್ ॥ ೪೦ ॥

ಆದ್ಯೋಽವತಾರಃ ಪುರುಷಃ ಪರಸ್ಯ
ಕಾಲಃ ಸ್ವಭಾವಃ ಸದಸನ್ಮನಶ್ಚ ।

ದ್ರವ್ಯಂ ವಿಕಾರೋ ಗುಣ ಇಂದ್ರಿಯಾಣಿ
ವಿರಾಟ್ ಸ್ವರಾಟ್ ಸ್ಥಾಸ್ನು ಚರಿಷ್ಣು ಭೂಮ್ನಃ ॥ ೪೦ ॥

ಅಹಂ ಭವೋ ಯಜ್ಞ ಇಮೇ ಪ್ರಜೇಶಾ
ದಕ್ಷಾದಯೋ ಯೇ ಭವದಾದಯಶ್ಚ ।
ಸ್ವರ್ಲೋಕಪಾಲಾಃ ಖಗಲೋಕಪಾಲಾ
ನೃಲೋಕಪಾಲಾಸ್ತಳಲೋಕಪಾಲಾಃ ॥ ೪೧ ॥

ಗಂಧರ್ವವಿದ್ಯಾಧರಚಾರಣೇಶಾ
ಯೇ ಯಕ್ಷರಕ್ಷೋರಗನಾಗನಾಥಾಃ ।
ಯೇ ವಾ ಋಷೀಣಾಂ ಋಷಭಾಃ ಪಿತೃಣಾಂ
ದೈತ್ಯೇಂದ್ರಸಿದ್ಧೇಶ್ವರದಾನವೇಂದ್ರಾಃ ॥ ೪೨ ॥

ಅನ್ಯೇ ಚ ಯೇ ಪ್ರೇತಪಿಶಾಚಭೂತ
ಕೂಷ್ಮಾಂಡಯಾದೋಮೃಗಪಶ್ವಧೀಶಾಃ ।
ಯತ್ ಕಿಂ ಚ ಲೋಕೇ ಭಗವನ್ಮಹಸ್ವ
ದೋಜಃಸಹಸ್ವದ್ ಬಲವತ್ ಕ್ಷಮಾವತ್ ।
ಹ್ರೀಶ್ರೀವಿಭೂತ್ಯಾತ್ಮವದದ್ಭುತಾರ್ಣಂ
ತತ್ ತತ್ಪರಂ ರೂಪವದಸ್ವರೂಪಮ್ ॥ ೪೪ ॥

ಪ್ರಾಧಾನ್ಯತೋ ಯಾನೃಷಯ ಆಮನಂತಿ
ಲೀಲಾವತಾರಾನ್ ಪುರುಷಸ್ಯ ಭೂಮ್ನಃ ।
ಆಪೀಯತಾಂ ಕರ್ಮಕಷಾಯಶೋಷಾ
ನನುಕ್ರಮಿಷ್ಯೇ ತ ಇಮಾನ್ ಸುಪೇಶಲಾನ್ ॥ ೪೫ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ
ಷಷ್ಠೋಽಧ್ಯಾಯಃ ॥

ಅಥ ಸಪ್ತಮೋಽಧ್ಯಾಯಃ

ಬ್ರಹ್ಮೋವಾಚ—

ಯತ್ರೋದ್ಯತಃ ಕ್ಷಿತಿತಲೋದ್ಧರಣಾಯ ಬಿಭ್ರತ್
ಕ್ರೌಡೀಂ ತನುಂ ಸಕಲಯಜ್ಞಮಯೀಮನಂತಃ ।
ಅಂತರ್ಮಹಾರ್ಣವ ಉಪಾಗತಮಾದಿದೈತ್ಯಂ
ತಂ ದಂಷ್ಟ್ರಯಾಽದ್ರಿಮಿವ ವಜ್ರಧರೋ ದದಾರ ॥ ೧ ॥

ಜಾತೋ ರುಚೇರಜನಯತ್ ಸುಯಶಾಃ ಸುಯಜ್ಞ
ಆಕೂತಿಸೂನುರಮರಾನಥ ದಕ್ಷಿಣಾಯಾಮ್ ।
ಲೋಕತ್ರಯಸ್ಯ ಮಹತೀಮಹರದ್ ಯ ಆರ್ತಿಂ
ಸ್ವಾಯಂಭುವೇನ ಮನುನಾ ಹರಿರಿತ್ಯನೂಕ್ತಃ ॥ ೨ ॥

ಜಜ್ಞೇ ಚ ಕರ್ದಮಗೃಹೇ ದ್ವಿಜ ದೇವಹೂತ್ಯಾಂ
ಸ್ತ್ರೀಭಿಃ ಸಮಂ ನವಭಿರಾತ್ಮಗತಿಂ ಸ್ವಮಾತ್ರೇ ।
ಊಚೇ ಯ ಆತ್ಮಶಮಲಂ ಗುಣಸಂಗಪಂಕ
ಮಸ್ಮಿನ್ ವಿಧೂಯ ಕಪಿಲಃ ಸ್ವಗತಿಂ ಪ್ರಪೇದೇ ॥ ೩ ॥

ಅತ್ರೇರಪತ್ಯಮಭಿಕಾಂಕ್ಷತ ಆಹ ತುಷ್ಟೋ
ದತ್ತೋ ಮಯಾಽಹಮಿತಿ ಯದ್ ಭಗವಾನ್ ಸ ದತ್ತಃ ।
ಯತ್ಪಾದಪಂಕಜಪರಾಗಪವಿತ್ರದೇಹಾ
ಯೋಗರ್ಧಿಮಾಪುರಮಯೀಂ ಯದುಹೈಹಯಾದ್ಯಾಃ ॥ ೪ ॥

ತಪ್ತಂ ತಪೋ ವಿವಿಧಲೋಕಸಿಸೃಕ್ಷಯಾ ಮ
ಆದೌ ಸನಾತ್ ಸುತಪಸಸ್ತಪತಃ ಸ ನೋಽಭೂತ್ ।
ಪ್ರಾಕ್ಕಲ್ಪಸಂಪ್ಲವವಿನಷ್ಟಮಿಹಾತ್ಮತತ್ತ್ವಂ
ಸಮ್ಯಗ್ ಜಗಾದ ಮುನಯೋ ಯದಚಕ್ಷತಾತ್ಮನ್ ॥ ೫ ॥

ಧರ್ಮಸ್ಯ ದಕ್ಷದುಹಿತರ್ಯಜನಿ ಸ್ವಮೂರ್ತ್ಯಾ
ನಾರಾಯಣೋ ನರ ಇತಿ ಸ್ವತಪಃಪ್ರಭಾವಃ ।
ದೃಷ್ಟ್ವಾತ್ಮನೋ ಭಗವತೋ ನಿಯಮಾವಲೋಪಂ
ದೇವ್ಯಸ್ತ್ವನಂಗಪೃತನಾ ಘಟಿತುಂ ನ ಶೇಕುಃ ॥ ೬ ॥

ಕಾಮಂ ದಹಂತಿ ಕೃತಿನೋ ನನು ರೋಷದೃಷ್ಟ್ಯಾ
ರೋಷಂ ದಹಂತಮುತ ತೇ ನ ದಹಂತ್ಯಸಹ್ಯಮ್ ।
ಸೋಽಯಂ ಯದಂತರಮಲಂ ನಿವಿಶನ್ ಬಿಭೇತಿ
ಕಾಮಃ ಕಥಂ ನು ಪುನರಸ್ಯ ಮನಃ ಶ್ರಯೇತ ॥ ೭ ॥

ವಿದ್ಧಃ ಸಪತ್ನ್ಯುದಿತಪತ್ರಿಭಿರಂತಿ ರಾಜ್ಞೋ
ಬಾಲೋಽಪಿ ಸನ್ನುಪಗತಸ್ತಪಸೇ ವನಾಯ ।
ತಸ್ಮಾ ಅದಾದ್ ಧ್ರುವಗತಿಂ ಗೃಣತೇ ಪ್ರಸನ್ನೋ
ದಿವ್ಯಾಃ ಸ್ತುವಂತಿ ಮುನಯೋ ಯದುಪರ್ಯಧಸ್ತಾತ್ ॥ ೮ ॥

ಯದ್ ವೇನಮುತ್ಪಥಗತಂ ದ್ವಿಜವಾಕ್ಯವಜ್ರ
ನಿಷ್ಪಿಷ್ಟಪೌರುಷಭಗಂ ನಿರಯೇ ಪತಂತಮ್ ।
ಜ್ಞಾತ್ವಾಽರ್ಥಿತೋ ಜಗತಿ ಪುತ್ರಪದಂ ಚ ಲೇಭೇ
ದುಗ್ಧಾ ವಸೂನಿ ವಸುಧಾ ಸಕಲಾನಿ ಯೇನ ॥ ೯ ॥

ನಾಭೇರಸಾವೃಷಭ ಆಸ ಸುದೇವಿಸೂನು
ರ್ಯೋ ವೈ ಚಚಾರ ಸಮದೃಗ್ ಹೃದಿ ಯೋಗಚರ್ಯಾಮ್ ।
ಯತ್ ಪಾರಮಹಂಸ್ಯಮೃಷಯಃ ಪದಮಾಮನಂತಿ
ಸ್ವಸ್ಥಃ ಪ್ರಶಾಂತಕರಣಃ ಪರಿಮುಕ್ತಸಂಗಃ ॥ ೧೦ ॥

ಸತ್ರೇ ಮಮಾಸ ಭಗವಾನ್ ಹಯಶೀರ್ಷ ಏಷಃ
ಸಾಕ್ಷಾತ್ ಸ ಯಜ್ಞಪುರುಷಸ್ತಪನೀಯವರ್ಣಃ ।
ಛಂದೋಮಯೋ ಮಖಮಯೋಽಖಿಲದೇವತಾತ್ಮಾ
ವಾಚೋ ಬಭೂವುರುಶತೀಃ ಶ್ವಸತೋಽಸ್ಯ ನಸ್ತಃ ॥ ೧೧ ॥

ಮತ್ಸ್ಯೋ ಯುಗಾಂತಸಮಯೇ ಮನುನೋಪಲಬ್ಧಃ
ಕ್ಷೋಣೀಮಯೋ ನಿಖಿಲಜೀವನಿಕಾಯಕೇತಃ ।
ವಿಸ್ರಂಸಿತಾನುರುಭಯೇ ಸಲಿಲೇ ಮುಖಾನ್ಮ
ಆದಾಯ ತತ್ರ ವಿಜಹಾರ ಹ ವೇದಮಾರ್ಗಾನ್ ॥ ೧೨ ॥

ಕ್ಷೀರೋದಧಾವಮರದಾನವಯೂಥಪಾನಾ
ಮುನ್ಮಥ್ನತಾಮಮೃತಲಬ್ಧಯ ಆದಿದೇವಃ ।

ಪೃಷ್ಠೇನ ಕಚ್ಛಪವಪುರ್ವಿದಧಾರ ಗೋತ್ರಂ
ನಿದ್ರೇಕ್ಷಣೋಽದ್ರಿಪರಿವರ್ತಕಷಾಣಕಂಡೂಃ ॥ ೧೩ ॥

ತ್ರೈವಿಷ್ಟಪೋರುಭಯಹಾರಿ ನೃಸಿಂಹರೂಪಂ
ಕೃತ್ವಾ ಭ್ರಮದ್ ಭ್ರುಕುಟಿದಂಷ್ಟ್ರಕರಾಳವಕ್ತ್ರಮ್ ।
ದೈತ್ಯೇಂದ್ರಮಾಶು ಗದಯಾಽಭಿಪತಂತಮಾರಾ
ದೂರೌ ನಿಪಾತ್ಯ ವಿದದಾರ ನಖೈಃ ಸ್ಫುರಂತಮ್ ॥ ೧೪ ॥

ಅಂತಃಸರಸ್ಯುರುಬಲೇನ ಪದೇ ಗೃಹೀತೋ
ಗ್ರಾಹೇಣ ಯೂಥಪತಿರಂಬುಜಹಸ್ತ ಆರ್ತಃ ।
ಆಹೇದಮಾದಿಪುರುಷಾಖಿಲಲೋಕನಾಥ
ತೀರ್ಥಶ್ರವಃ ಶ್ರವಣಮಂಗಳನಾಮಧೇಯ ॥ ೧೫ ॥

ಸ್ಮೃತ್ವಾ ಹರಿಸ್ತಮರಣಾರ್ಥಿನಮಪ್ರಮೇಯ
ಶ್ಚಕ್ರಾಯುಧಃ ಪತಗರಾಜಭುಜಾಧಿರೂಢಃ ।
ಚಕ್ರೇಣ ನಕ್ರವದನಂ ವಿನಿಪಾಟ್ಯ ತಸ್ಮಾದ್
ಹಸ್ತೇ ಪ್ರಗೃಹ್ಯ ಭಗವಾನ್ ಕೃಪಯೋಜ್ಜಹಾರ ॥ ೧೬ ॥

ಜ್ಯಾಯಾನ್ ಗುಣೈರವರಜೋಽಪ್ಯದಿತೇಃ ಸುತಾನಾಂ
ಲೋಕಾನ್ ವಿಚಕ್ರಮ ಇಮಾನ್ ಯದಥೋಽಧಿಯಜ್ಞಃ ।
ಕ್ಷ್ಮಾಂ ವಾಮನೇನ ಜಗೃಹೇ ತ್ರಿಪದಚ್ಛಲೇನ
ಯಾಂಚಾಮೃತೇ ಪಥಿ ಚರನ್ ಪ್ರಭುಭಿರ್ನ ಚಾಲ್ಯಃ ॥ ೧೭ ॥

ನಾರ್ಥೋ ಬಲೇರಯಮುರುಕ್ರಮಪಾದಶೌಚ
ಮಂಭಃ ಶಿವಂ ಧೃತವತೋ ವಿಬುಧಾಧಿಪತ್ಯಮ್ ।
ಯೋ ವೈ ಪ್ರತಿಶ್ರುತಮೃತೇಽಪಿ ಚ ಶೀರ್ಷಮಾಣ
ಮಾತ್ಮನ್ಯಮಂಗ ಮನಸಾ ಹರಯೇಽಭಿಮೇನೇ ॥ ೧೮ ॥

ತುಭ್ಯಂ ಚ ನಾರದ ಭೃಶಂ ಭಗವಾನ್ ವಿವೃದ್ಧ
ಭಾವೇನ ಸಾಧು ಪರಿತುಷ್ಟ ಉವಾಚ ಯೋಗಮ್ ।
ಜ್ಞಾನಂ ಚ ಭಾಗವತಮಾತ್ಮಸುತತ್ತ್ವದೀಪಂ
ಯದ್ ವಾಸುದೇವಶರಣಾ ವಿದುರಂಜಸೈವ ॥ ೧೯ ॥

ಚಕ್ರಂ ಚ ದಿಕ್ಷ್ವವಿಹತಂ ದಶಸು ಸ್ವತೇಜೋ
ಮನ್ವಂತರೇಷು ಮನುವಂಶಧರೋ ಬಿಭರ್ತಿ ।
ದುಷ್ಟೇಷು ರಾಜಸು ದಮಂ ವಿದಧತ್ ಸ್ವಕೀರ್ತಿಂ
ಸತ್ಯೇ ನಿವಿಷ್ಟ ಉಶತೀಂ ಪ್ರಥಯಂಶ್ಚರಿತ್ರೈಃ ॥ ೨೦ ॥

ಧನ್ವಂತರಿಶ್ಚ ಭಗವಾನ್ ಸ್ವಯಮಾಸ ದೇವೋ
ನಾಮ್ನಾ ನೃಣಾಂ ಪುರುರುಜಾಂ ರುಜ ಆಶು ಹಂತಿ ।
ಯಜ್ಞೇ ಚ ಭಾಗಮಮೃತಾಯುರವಾಪ ಚಾದ್ಧಾ
ಆಯುಶ್ಚ ವೇದಮನುಶಾಸ್ತ್ಯವತೀರ್ಯ ಲೋಕೇ ॥ ೨೧ ॥

ಕ್ಷತ್ರಂ ಕ್ಷಯಾಯ ವಿಧಿನೋಪಹೃತಂ ಮಹಾತ್ಮಾ
ಬ್ರಹ್ಮಧ್ರುಗುಜ್ಝಿತಪಥಂ ನರಕೀರ್ತಿಲಿಪ್ಸು ।
ಉದ್ಧಂತ್ಯಸಾವವನಿಕಂಟಕಮುಗ್ರವೀರ್ಯ
ಸ್ತ್ರಿಸಪ್ತಕೃತ್ವ ಉರುಧಾರಪರಶ್ವಧೇನ ॥ ೨೨ ॥

ಕೃತ್ವ ಪ್ರಸಾದಸುಮುಖಃ ಕಲಯಾ ಕಲೇಶ
ಇಕ್ಷ್ವಾಕುವಂಶ ಅವತೀರ್ಯ ಗುರೋರ್ನಿದೇಶೇ ।
ತಿಷ್ಠನ್ ವನಂ ಸದಯಿತಾನುಜ ಆವಿವೇಶ
ಯಸ್ಮಿನ್ ವಿರುಧ್ಯ ದಶಕಂಧರ ಆರ್ತಿಮಾರ್ಚ್ಛತ್ ॥ ೨೩ ॥

ಯಸ್ಮಾ ಅದಾದುದಧಿರೂಢಭಯಾಂಗವೇಪೋ
ಮಾರ್ಗಂ ಸಪದ್ಯರಿಪುರಂ ಹರವದ್ ದಿಧಕ್ಷೋಃ ।
ದೂರೇಸುಹೃನ್ಮಥಿತರೋಷಸುಶೋಷದೃಷ್ಟ್ಯಾ
ತಾತಪ್ಯಮಾನಮಕರೋರಗನಕ್ರಚಕ್ರಃ ॥ ೨೪ ॥

ವಕ್ಷಃಸ್ಥಲಸ್ಪರ್ಶರುಗ್ಣಮಹೇಂದ್ರವಾಹ
ದಂತೈರ್ವಿಳಂಬಿತಕಕುಬ್ಜಯರೂಢಹಾಸಃ ।
ಸದ್ಯೋಽಸುಭಿಃ ಸಹ ವಿನೇಷ್ಯತಿ ದಾರಹರ್ತು
ರ್ವಿಸ್ಫೂರ್ಜಿತೈರ್ಧನುಷ ಉಚ್ಚರಿತೈಃ ಸಸೈನ್ಯಃ ॥ ೨೫ ॥

ಭೂಮೇಃ ಸುರೇತರವರೂಥವಿಮರ್ದಿತಾಯಾಃ
ಕ್ಲೇಶವ್ಯಯಾಯ ಕಲಯಾ ಸಿತಕೃಷ್ಣಕೇಶಃ ।

ಜಾತಃ ಕರಿಷ್ಯತಿ ಜನಾನುಪಲಕ್ಷ್ಯಮಾರ್ಗಃ
ಕರ್ಮಾಣಿ ಚಾತ್ಮಮಹಿಮೋಪನಿಬಂಧನಾನಿ ॥ ೨೬ ॥

ತೋಕೇನ ಜೀವಹರಣಂ ಯದುಲೂಪಿಕಾಯಾ
ಸ್ತ್ರೈಮಾಸಿಕಸ್ಯ ಚ ಪದಾ ಶಕಟೋಽಪವೃತ್ತಃ ।
ಯದ್ ರಿಂಗತಾಽಂತರಗತೇನ ದಿವಿಸ್ಪೃಶೋರ್ವಾ
ಉನ್ಮೂಲನಂ ತ್ವಿತರಥಾಽರ್ಜುನಯೋರ್ನ ಭಾವ್ಯಮ್ ॥ ೨೭ ॥

ಯದ್ವೈ ವ್ರಜೇ ವ್ರಜಪಶೂನ್ ವಿಷತೋಯಪೀತಾನ್
ಗೋಪಾಂಸ್ತು ಜೀವಯದನುಗ್ರಹದೃಷ್ಟಿವೃಷ್ಟ್ಯಾ ।
ತಚ್ಛುದ್ಧಯೇಽತಿವಿಷವೀರ್ಯವಿಲೋಲಜಿಹ್ವ
ಮುಚ್ಚಾಟಯಿಷ್ಯದುರಗಂ ವಿಹರದ್ ಹ್ರದಿನ್ಯಾಮ್ ॥ ೨೮ ॥

ತತ್ ಕರ್ಮ ದಿವ್ಯಮಿವ ಯನ್ನಿಶಿ ನಿಃಶಯಾನಂ
ದಾವಾಗ್ನಿನಾಽಽಶು ವಿಪಿನೇ ಪರಿದಹ್ಯಮಾನೇ ।
ಉನ್ನೇಷ್ಯತಿ ವ್ರಜಮಿತೋಽವಸಿತಾಂತಕಾಲಂ
ನೇತ್ರೇ ಪಿಧಾಯ ಸಬಲೋಽನಧಿಗಮ್ಯವೀರ್ಯಃ ॥ ೨೯ ॥

ಗೃಹ್ಣೀತ ಯದ್ಯದುಪಬದ್ಧುಮಮುಷ್ಯ ಮಾತಾ
ಶುಲ್ಬಂ ಸುತಸ್ಯ ನತು ತತ್ತದಮುಷ್ಯ ಮಾತಿ ।
ಯಜ್ಜೃಂಭತೋಽಸ್ಯ ವದನೇ ಭುವನಾನಿ ಗೋಪೀ
ಸಂವೀಕ್ಷ್ಯ ಶಂಕಿತಮನಾಃ ಪ್ರತಿಬೋಧಿತಸ್ಯ ॥ ೩೦ ॥

ನಂದಂ ಚ ಮೋಕ್ಷ್ಯತಿ ಭಯಾದ್ ವರುಣಸ್ಯ ಪಾಶಾದ್
ಗೋಪಾನ್ ಬಿಲೇಷು ಪಿಹಿತಾನ್ ಮಯಸೂನುನಾ ಚ ।
ಜಲ್ಪಾವೃತಂ ನಿಶಿ ಶಯಾನಮತಿಶ್ರಮೇಣ
ಲೋಕೇ ವಿಕುಂಠ ಉಪಧಾಸ್ಯತಿ ಗೋಕುಲಂ ಸ್ಮ ॥ ೩೧ ॥

ಗೋಪೈರ್ಮಖೇ ಪ್ರತಿಹತೇ ವ್ರಜವಿಪ್ಲವಾಯ
ದೇವೇಽಭಿವರ್ಷತಿ ಪಶೂನ್ ಕೃಪಯಾ ರಿರಕ್ಷುಃ ।
ಧರ್ತೋಚ್ಛಿಲೀಂಧ್ರಮಿವ ಸಪ್ತದಿನಾನಿ ಸಪ್ತ
ವರ್ಷೋ ಮಹೀಧ್ರಮನಘೈಕಕರೇ ಸಲೀಲಮ್ ॥ ೩೨ ॥

ಕ್ರೀಡನ್ ವನೇ ನಿಶಿ ನಿಶಾಕರರಶ್ಮಿಗೌರ್ಯಾಂ
ರಾಸೋನ್ಮುಖಃ ಕಳಪದಾಯತಮೂರ್ಚ್ಛಿತೇನ ।
ಉದ್ದೀಪಿತಸ್ಮರರುಜಾಂ ವ್ರಜಸದ್ವಧೂನಾಂ
ಹರ್ತುರ್ಹರಿಷ್ಯತಿ ಶಿರೋ ಧನದಾನುಗಸ್ಯ ॥ ೩೩ ॥

ಯೇ ಚ ಪ್ರಲಂಬಖರದರ್ದುರಕೇಶ್ಯರಿಷ್ಟ
ಮಲ್ಲೇಭಕಂಸಯವನಾಃ ಕುಜಪೌಂಡ್ರಕಾದ್ಯಾಃ ।
ಅನ್ಯೇಽಪಿ ಸಾಲ್ವಕಪಿಬಲ್ವಲದಂತವಕ್ರ
ಸಪ್ತೋಕ್ಷಶಂಬರವಿಡೂರಥರುಗ್ಮಿಮುಖ್ಯಾಃ ॥ ೩೪ ॥

ಯೇ ವಾ ಮೃಧೇ ಸಮಿತಿಶಾಲಿನ ಆತ್ತಚಾಪಾಃ
ಕಾಂಬೋಜಮತ್ಸ್ಯಕುರುಸೃಂಜಯಕೈಕಯಾದ್ಯಾಃ ।
ಯಾಸ್ಯಂತ್ಯದರ್ಶನಮಿತಾ ಬಲಪಾರ್ಥಭೀಮ
ವ್ಯಾಜಾಹ್ವಯೇನ ಹರಿಣಾ ನಿಲಯಂ ತದೀಯಮ್ ॥ ೩೫ ॥

ಕಾಲೇನ ಮೀಲಿತದೃಶಾಮವಮೃಶ್ಯ ನೃಣಾಂ
ಸ್ತೋಕಾಯುಷಾಂ ಸ್ವನಿಗಮೋ ಬತ ದೂರಪಾರಃ ।
ಆವಿರ್ಹಿತಸ್ತ್ವನುಯುಗಂ ಸ ಹಿ ಸತ್ಯವತ್ಯಾಂ
ವೇದದ್ರುಮಂ ವಿಟಪಶೋ ವಿಭಜಿಷ್ಯತಿ ಸ್ಮ ॥ ೩೬ ॥

ದೇವದ್ವಿಷಾಂ ನಿಗಮವರ್ತ್ಮನಿ ವಿಷ್ಠಿತಾನಾಂ
ಪೂರ್ಭಿರ್ಮಯೇನ ವಿಹಿತಾಭಿರದೃಶ್ಯಮೂರ್ತಿಃ ।
ಲೋಕಾನ್ ಘ್ನತಾಂ ಮತಿವಿಮೋಹಮತಿಪ್ರಲೋಭಂ
ವೇಷಂ ವಿಧಾಯ ಯದಭಾಷತ ಔಪಧರ್ಮ್ಯಮ್ ॥ ೩೭ ॥

ಯರ್ಹ್ಯಾಲಯೇಷ್ವಪಿ ಸತಾಂ ನ ಕಥಾ ಹರೇಃ ಸ್ಯುಃ
ಪಾಷಂಡಿನೋ ದ್ವಿಜಜನಾ ವೃಷಳಾ ನೃದೇವಾಃ ।
ಸ್ವಾಹಾ ಸ್ವಧಾ ವಷಡಿತಿ ಸ್ಮ ಗಿರೋ ನ ಯತ್ರ
ಶಾಸ್ತಾ ಭವಿಷ್ಯತಿ ಕಲೇರ್ಭಗವಾನ್ ಯುಗಾಂತೇ ॥ ೩೮ ॥

ಸರ್ಗೇ ತು ಯೋಽಹಮೃಷಯೋ ನವ ಯೇ ಪ್ರಜೇಶಾಃ
ಸ್ಥಾನೇಽಥ ಧರ್ಮಮಖಮನ್ವಮರಾವನೀಶಾಃ ।

ಅಂತೇ ತ್ವಧರ್ಮಹರಮನ್ಯುವಶಾಸುರಾದ್ಯಾ
ಮಾಯಾವಿಭೂತಯ ಇಮಾಃ ಪುರುಶಕ್ತಿಭಾಜಃ ॥ ೩೯ ॥

ವಿಷ್ಣೋರ್ನು ವೀರ್ಯಗಣನಾಂ ಕತಮೋಽರ್ಹತೀಹ
ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ ।
ಚಸ್ಕಂಭ ಯಃ ಸ್ವರಭಸಾ ಸ್ಖಲಿತಂ ತ್ರಿಪೃಷ್ಠಂ
ಯಸ್ಮಾಂ ನಿಶಾಮ್ಯ ಸದನಾದುರುಕಂಪಮಾನಮ್ ॥ ೪೦ ॥

ನಾಂತಂ ವಿದಾಮ್ಯಹಮಮೀ ಮುನಯಃ ಪ್ರಜೇಶಾ
ಮಾಯಾಬಲಸ್ಯ ಪುರುಷಸ್ಯ ಕುತೋಽಪರೇ ಯೇ ।
ಗಾಯನ್ ಗುಣಾನ್ ದಶಶತಾನನ ಆದಿದೇವಃ
ಶೇಷೋಽಧುನಾಽಪಿ ಸಮವಸ್ಯತಿ ನಾಸ್ಯ ಪಾರಮ್ ॥ ೪೧ ॥

ಯೇಷಾಂ ಸ ಏವ ಭಗವಾನ್ ದಯಯೇದನಂತಃ
ಸರ್ವಾತ್ಮನಾಽಶ್ರಿತಪದೋ ಯದಿ ನಿರ್ವ್ಯಲೀಕಮ್ ।
ತೇ ವೈ ವಿದಂತ್ಯತಿತರಂತಿ ಚ ದೇವಮಾಯಾಂ
ನೈಷಾಂ ಮಮಾಹಮಿತಿ ಧೀಃ ಶ್ವಸೃಗಾಲಭಕ್ಷ್ಯೇ ॥ ೪೨ ॥

ವೇದಾಹಮಂಗ ಪರಮಸ್ಯ ಹಿ ಯೋಗಮಾಯಾಂ
ಯೂಯಂ ಭವಶ್ಚ ಭಗವಾನಥ ದೈತ್ಯವರ್ಯಃ ।
ಪತ್ನೀ ಮನೋಃ ಸ ಚ ಮನುಸ್ತದಪತ್ಯಭೂತಾಃ
ಪ್ರಾಚೀನಬರ್ಹಿ ಋಭುರಂಗ ಉತ ಧ್ರುವಶ್ಚ ॥ ೪೩ ॥

ಇಕ್ಷ್ವಾಕುರೈಳಮುಚುಕುಂದವಿದೇಹಗಾಧಿ
ರಘ್ವಂಬರೀಷಸಗರಾ ಗಯನಾಹುಷಾದ್ಯಾಃ ।
ಮಾಂಧಾತ್ರಳರ್ಕಶತಧನ್ವನರಂತಿದೇವ
ದೇವವ್ರತಾ ಬಲಿರಮೂರ್ತರಯೋ ದಿಲೀಪಃ ॥ ೪೪ ॥

ಸೌಭರ್ಯುದಂಕಶಿಬಿದೇವಲಪಿಪ್ಪಲಾದಾಃ
ಸಾರಸ್ವತೋದ್ಧವಪರಾಶರಭೂರಿಷೇಣಾಃ ।
ಯೇಽನ್ಯೇ ವಿಭೀಷಣಹನೂಮದುಪೇಂದ್ರದತ್ತ
ಪಾರ್ಥಾರ್ಷ್ಟಿಷೇಣವಿದುರಶ್ರುತದೇವಮುಖ್ಯಾಃ ॥ ೪೫ ॥

ತೇ ವೈ ವಿದಂತ್ಯತಿತರಂತಿ ಚ ದೇವಮಾಯಾಂ
ಸ್ತ್ರೀಶೂದ್ರಹೂಣಶಬರಾ ಅಪಿ ಪಾಪಜೀವಾಃ ।
ಯದ್ಯದ್ಭುತಕ್ರಮಪರಾಯಣಶೀಲಶಿಕ್ಷಾ
ಸ್ತಿರ್ಯಗ್ಜನಾ ಅಪಿ ಕಿಮು ಶ್ರುತಧಾರಣಾ ಯೇ ॥ ೪೬ ॥

ಶಶ್ವತ್ ಪ್ರಶಾಂತಮಭಯಂ ಪ್ರತಿಬೋಧಮಾತ್ರಂ
ಶುದ್ಧಂ ಸಮಂ ಸದಸತಃ ಪರಮಾತ್ಮತತ್ತ್ವಮ್ ।
ಶಬ್ದೋ ನ ಯತ್ರ ಪುರುಕಾರಕವಾನ್ ಕ್ರಿಯಾರ್ಥೋ
ಮಾಯಾ ಪರೈತ್ಯಭಿಮುಖೇ ಚ ವಿಲಜ್ಜಮಾನಾ ॥ ೪೭ ॥

ತದ್ವೈ ಪದಂ ಭಗವತಃ ಪರಮಸ್ಯ ಪುಂಸೋ
ಬ್ರಹ್ಮೇತಿ ಯದ್ ವಿದುರಜಸ್ರಸುಖಂ ವಿಶೋಕಮ್ ।
ಸಮ್ಯಙ್ ನಿಶಾಮ್ಯ ಯತಯೋ ಯಮಲೋಕಹೇತುಂ
ಜಹ್ಯುಃ ಸುಧಾಮಿವ ನಿಪಾನಖನಿತ್ರಮಿಂದ್ರಃ ॥ ೪೮ ॥

ಸ ಶ್ರೇಯಸಾಮಪಿ ವಿಭುರ್ಭಗವಾನ್ ಯತೋಽಸ್ಯ
ಭಾವಸ್ವಭಾವವಿಹಿತಸ್ಯ ಸತಃ ಪ್ರಸಿದ್ಧಃ ।
ದೇಹೇ ಸ್ವಧಾತುವಿಗಮೇ ತು ವಿಶೀರ್ಯಮಾಣೇ
ವ್ಯೋಮೇವ ತತ್ರ ಪುರುಷೋ ನ ವಿಶೀರ್ಯತೇಽಜಃ ॥ ೪೯ ॥

ಸೋಽಯಂ ತೇಽಭಿಹಿತಸ್ತಾತ ಭಗವಾನ್ ವಿಶ್ವಭಾವನಃ ।
ಸಮಾಸೇನ ಹರೇರ್ನಾನ್ಯದನ್ಯಸ್ಮಾತ್ ಸದಸಚ್ಚ ಯತ್ ॥ ೫೦ ॥

ಇದಂ ಭಾಗವತಂ ನಾಮ ಯನ್ಮೇ ಭಗವತೋದಿತಮ್ ।
ಸಂಗ್ರಹೋಽಯಂ ವಿಭೂತೀನಾಂ ತದೇತದ್ ವಿಪುಳೀಕುರು ॥ ೫೧ ॥

ಯಥಾ ಹರೌ ಭಗವತಿ ನೃಣಾಂ ಭಕ್ತಿರ್ಭವಿಷ್ಯತಿ ।
ಸರ್ವಾತ್ಮನ್ಯಖಿಲಾಧಾರ ಇತಿ ಸಂಕಲ್ಪ್ಯ ವರ್ಣಯ ॥ ೫೨ ॥

ನೃಜನ್ಮನಿ ನ ತುಷ್ಯೇತ ಕಿಂ ಫಲಂ ಯಮನಶ್ವರೇ ।
ಕೃಷ್ಣೇ ಯದ್ಯಪವರ್ಗೇಶೇ ಭಕ್ತಿಃ ಸ್ಯಾನ್ನಾನಪಾಯಿನೀ ॥ ೫೩ ॥

ಕಿಂ ಸ್ಯಾದ್ ವರ್ಣಾಶ್ರಮಾಚಾರೈಃ ಕಿಂ ದಾನೈಃ ಕಿಂ ತಪಃಶ್ರುತೈಃ ।
ಸರ್ವಾಘಘ್ನೋತ್ತಮಶ್ಲೋಕೇ ನ ಚೇದ್ ಭಕ್ತಿರಧೋಕ್ಷಜೇ ॥ ೫೪ ॥

ಮಾಯಾಂ ವರ್ಣಯತೋಽಮುಷ್ಯ ಈಶ್ವರಸ್ಯಾನುಮೋದತಃ ।
ಶೃಣ್ವತಃ ಶ್ರದ್ಧಯಾ ನಿತ್ಯಂ ಮಾಯಯಾಽತ್ಮಾ ನ ಮುಹ್ಯತಿ ॥ ೫೩ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ ಸಪ್ತಮೋಽಧ್ಯಾಯಃ ॥

ಅಥ ಅಷ್ಟಮೋಽಧ್ಯಾಯಃ

ರಾಜೋವಾಚ—

ಬ್ರಹ್ಮಣಾ ಚೋದಿತೋ ಬ್ರಹ್ಮನ್ ಗುಣಾಖ್ಯಾನೇಽಗುಣಸ್ಯ ಚ ।
ಯಸ್ಮೈಯಸ್ಮೈ ಯಥಾ ಪ್ರಾಹ ನಾರದೋ ದೇವದರ್ಶನಃ ॥ ೧ ॥

ಏತದ್ ವೇದಿತುಮಿಚ್ಛಾಮಿ ತತ್ತ್ವಂ ವೇದವಿದಾಂ ವರ ।
ಹರೇರದ್ಭುತವೀರ್ಯಸ್ಯ ಕಥಾ ಲೋಕಸುಮಂಗಳಾಃ ॥ ೨ ॥

ಪ್ರಥಯಸ್ವ ಮಹಾಭಾಗ ಯಥಾಽಹಮಖಿಲಾತ್ಮನಿ ।
ಕೃಷ್ಣೇ ನಿವೇಶ್ಯ ನಿಃಸಂಗಂ ಮನಸ್ತ್ಯಕ್ಷ್ಯೇ ಕಳೇಬರಮ್ ॥ ೩ ॥

ಶೃಣ್ವತಃ ಶ್ರದ್ಧಯಾ ನಿತ್ಯಂ ಗೃಣತಶ್ಚ ಸ್ವಚೇಷ್ಟಿತಮ್ ।
ಕಾಲೇನಾನತಿದೀರ್ಘೇಣ ಭಗವಾನ್ ವಿಶತೇ ಹೃದಿ ॥ ೪ ॥

ಪ್ರವಿಷ್ಟಃ ಕರ್ಣರಂಧ್ರೇಣ ಸ್ವಾನಾಂ ಭಾವಸರೋರುಹಮ್ ।
ಧುನೋತಿ ಶಮಲಂ ಕೃಷ್ಣಃ ಸಲಿಲಸ್ಯ ಯಥಾ ಶರತ್ ॥ ೫ ॥

ಧೌತಾತ್ಮಾ ಪುರುಷಃ ಕೃಷ್ಣಪಾದಮೂಲಂ ನ ಮುಂಚತಿ ।
ಮುಕ್ತಸರ್ವಪರಿಕ್ಲೇಶಃ ಪಾಂಥಃ ಸ್ವಶರಣಂ ಯಥಾ ॥ ೬ ॥

ಯದಧಾತುಮತೋ ಬ್ರಹ್ಮನ್ ದೇಹಾರಂಭೋಽಸ್ಯ ಧಾತುಭಿಃ ।
ಯದೃಚ್ಛಯಾ ಹೇತುನಾ ವಾ ಭವಂತೋ ಜಾನತೇ ಯಥಾ ॥ ೭ ॥

ಆಸೀದ್ ಯದುದರಾತ್ ಪದ್ಮಂ ಲೋಕಸಂಸ್ಥಾನಲಕ್ಷಣಮ್ ।
ಯಾವಾನಯಂ ವೈ ಪುರುಷ ಇಯತ್ತಾವಯವೈಃ ಪೃಥಕ್ ।
ತಾವಾನಸಾವಿತಿ ಪ್ರೋಕ್ತಸ್ತಥಾಽವಯವವಾನಿವ ॥ ೮ ॥

ಅಜಃ ಸೃಜತಿ ಭೂತಾನಿ ಭೂತಾತ್ಮಾ ಯದನುಗ್ರಹಾತ್ ।
ದದೃಶೇ ಯೇನ ತದ್ರೂಪಂ ನಾಭಿಪದ್ಮಸಮುದ್ಭವಃ ॥ ೯ ॥

ಸ ಚಾಪಿ ಯತ್ರ ಪುರುಷೋ ವಿಶ್ವಸ್ಥಿತ್ಯುದ್ಭವಾಪ್ಯಯಃ ।
ಮುಕ್ತ್ವಾಽಽತ್ಮಮಾಯಾಂ ಮಾಯೇಶಃ ಶೇತೇ ಸರ್ವಗುಣಾಶ್ರಯಃ ॥ ೧೦ ॥

ಪುರುಷಾವಯವೈರ್ಲೋಕಾಃ ಸಪಾಲಾಃ ಪೂರ್ವಕಲ್ಪಿತಾಃ ।
ಲೋಕೈರಮುಷ್ಯಾವಯವಾಃ ಸಪಾಲೈರಿತಿ ಶುಶ್ರುಮಃ ॥ ೧೧ ॥

ಯಾವಾನ್ ಕಲ್ಪೋ ವಿಕಲ್ಪೋ ವಾ ಯಥಾ ಕಾಲೋಽನುಮೀಯತೇ ।
ಭೂತಭವ್ಯಭವಚ್ಛಬ್ದ ಆಯುರ್ಮಾನಂ ಚ ಯತ್ಸತಮ್ ॥ ೧೨ ॥

ಕಾಲಸ್ಯಾನುಗತಿರ್ಯಾ ತು ಲಕ್ಷ್ಯತೇಽಣ್ವೀ ಮಹತ್ಯಪಿ ।
ಯಾವತೀಃ ಕರ್ಮಗತಯೋ ಯಾದೃಶೀರ್ದ್ವಿಜಸತ್ತಮ ॥ ೧೩ ॥

ಯಸ್ಮಿನ್ ಕರ್ಮಸಮಾವಾಪೋ ಯಥಾ ಯೇನೋಪಗೃಹ್ಯತೇ ।
ಗುಣಾನಾಂ ಗುಣಿನಾಂ ಚೈವ ಪರಿಮಾಣಂ ಸುವಿಸ್ತರಮ್ ॥ ೧೪ ॥

ಭೂಪಾತಾಳಕಕುಬ್ವ್ಯೋಮಗ್ರಹನಕ್ಷತ್ರಭೂಭೃತಾಮ್ ।
ಸರಿತ್ಸಮುದ್ರದ್ವೀಪಾನಾಂ ಸಂಭವಂ ಚೈತದೋಕಸಾಮ್ ॥ ೧೫ ॥

ಪ್ರಮಾಣಮಂಡಕೋಶಸ್ಯ ಬಾಹ್ಯಾಭ್ಯಂತರವಸ್ತುನಃ ।
ಮಹತಾಂ ಚಾನುಚರಿತಂ ವರ್ಣಾಶ್ರಮವಿನಿರ್ಣಯಮ್ ॥ ೧೬ ॥

ಅವತಾರಾನುಚರಿತಂ ಯದಾಶ್ಚರ್ಯತಮಂ ಹರೇಃ ।
ಯುಗಾನಿ ಯುಗಮಾನಂ ಚ ಧರ್ಮೋ ಯಶ್ಚ ಯುಗೇಯುಗೇ ॥ ೧೭ ॥

ನೃಣಾಂ ಸಾಧಾರಣೋ ಧರ್ಮಃ ಸವಿಶೇಷಶ್ಚ ಯಾದೃಶಃ ।
ಶ್ರೇಣೀನಾಂ ರಾಜರ್ಷೀಣಾಂ ಚ ಧರ್ಮಃ ಕೃಚ್ಛ್ರೇಷು ಜೀವತಾಮ್ ॥ ೧೮ ॥

ತತ್ವಾನಾಂ ಪರಿಸಂಖ್ಯಾನಂ ಲಕ್ಷಣಂ ಹೇತುಲಕ್ಷಣಮ್ ।
ಪುರುಷಾರಾಧನವಿಧಿರ್ಯೋಗಸ್ಯಾಧ್ಯಾತ್ಮಿಕಸ್ಯ ಚ ॥ ೧೯ ॥

ಯೋಗೇಶ್ವರೈಶ್ವರ್ಯಗತಿಂ ಲಿಂಗಭಂಗಂ ಚ ಯೋಗಿನಾಮ್ ।
ವೇದೋಪವೇದಧರ್ಮಾಣಾಮಿತಿಹಾಸಪುರಾಣಯೋಃ ॥ ೨೦ ॥

ಸಂಭವಃ ಸರ್ವಭೂತಾನಾಂ ವಿಕ್ರಮಃ ಪ್ರತಿಸಂಕ್ರಮಃ ।
ಇಷ್ಟಾಪೂರ್ತಸ್ಯ ಕಾಮ್ಯಾನಾಂ ತ್ರಿವರ್ಗಸ್ಯ ಚ ಯೋ ವಿಧಿಃ ॥ ೨೧ ॥

ಯೋ ವಾಽನುಶಯಿನಾಂ ಸರ್ಗಃ ಪಾಷಂಡಸ್ಯ ಚ ಸಂಭವಃ ।
ಆತ್ಮನೋ ಬಂಧಮೋಕ್ಷೌ ಚ ವ್ಯವಸ್ಥಾನಂ ಸ್ವರೂಪತಃ ॥ ೨೨ ॥

ಯಥಾತ್ಮತಂತ್ರೋ ಭಗವಾನ್ ವಿಕ್ರೀಡತ್ಯಾತ್ಮಮಾಯಯಾ ।
ವಿಸೃಜ್ಯ ಚ ಯಥಾ ಮಾಯಾಮುದಾಸ್ತೇ ಸಾಕ್ಷಿವದ್ ವಿಭುಃ ॥ ೨೩ ॥

ಸರ್ವಮೇತಚ್ಚ ಭಗವಾನ್ ಪೃಚ್ಛತೋ ಮೇಽನುಪೂರ್ವಶಃ ।
ತತ್ವತೋಽರ್ಹಸ್ಯುದಾಹರ್ತುಂ ಪ್ರಪನ್ನಾಯ ಮಹಾಮುನೇ ॥ ೨೪ ॥

ಅತ್ರ ಪ್ರಮಾಣಂ ಹಿ ಭವಾನ್ ಪರಮೇಷ್ಠೀ ಯಥಾಽಽತ್ಮಭೂಃ ।
ಅಪರೇ ಹ್ಯನುತಿಷ್ಠಂತಿ ಪೂರ್ವೇಷಾಂ ಪೂರ್ವಜೈಃ ಕೃತಮ್ ॥ ೨೫ ॥

ನ ಮೇಽಸವಃ ಪರಾಯಂತಿ ಬ್ರಹ್ಮನ್ನನಶನಾದಮೀ ।
ಪಿಬತೋಽಚ್ಯುತಪೀಯೂಷಂ ತ್ವದ್ವಾಕ್ಯಾಬ್ಧಿ ವಿನಿಃಸೃತಮ್ ॥ ೨೬ ॥

ಸೂತ ಉವಾಚ—

ಸ ಉಪಾಮಂತ್ರಿತೋ ರಾಜ್ಞಾ ಕಥಾಯಾಮಿತಿ ಸತ್ಪತೇಃ ।
ಬ್ರಹ್ಮರಾತೋ ಭೃಶಂ ಪ್ರೀತೋ ವಿಷ್ಣುರಾತೇನ ಸಂಸದಿ ॥ ೨೭ ॥

ಆಹ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।
ಬ್ರಹ್ಮಣೇ ಭಗವತ್ಪ್ರೋಕ್ತಂ ಬ್ರಹ್ಮಕಲ್ಪ ಉಪಾಗತೇ ॥ ೨೮ ॥

ಯದ್ಯತ್ ಪರೀಕ್ಷಿದ್ ಋಷಭಃ ಪಾಂಡೂನಾಮನುಪೃಚ್ಛತಿ ।
ಆನುಪೂರ್ವ್ಯೇಣ ತತ್ ಸರ್ವಮಾಖ್ಯಾತುಮುಪಚಕ್ರಮೇ ॥ ೨೯ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ
ಅಷ್ಟಮೋಽಧ್ಯಾಯಃ ॥

ಅಥ ನವಮೋಽಧ್ಯಾಯಃ

ಶ್ರೀಶುಕ ಉವಾಚ—

ಆತ್ಮಮಾಯಾಮೃತೇ ರಾಜನ್ ಪರಸ್ಯಾನುಭವಾತ್ಮನಃ ।
ನ ಘಟೇತಾರ್ಥಸಂಬಂಧಃ ಸ್ವಪ್ನೇ ದ್ರಷ್ಟುರಿವಾಂಜಸಾ ॥ ೧ ॥

ಬಹುರೂಪ ಇವಾಭಾತಿ ಮಾಯಯಾ ಬಹುರೂಪಯಾ ।
ರಮಮಾಣೋ ಗುಣೇಷ್ವಸ್ಯಾ ಮಮಾಹಮಿತಿ ಮನ್ಯತೇ ॥ ೨ ॥

ಯರ್ಹಿ ವಾಯಂ ಮಹಿತ್ವೇ ಸ್ವೇ ಪರಸ್ಮಿನ್ ಕಾಲಮಾಯಯೋಃ।
ರಮತೇ ಗತಸಮ್ಮೋಹಸ್ತ್ಯಕ್ತ್ವೋದಾಸ್ತೇ ತದೋಭಯಮ್ ॥ ೩ ॥

ಆತ್ಮತತ್ವವಿಶುದ್ಧ್ಯರ್ಥಂ ಯದಾಹ ಭಗವಾನೃತಮ್ ।
ಬ್ರಹ್ಮಣೇಽದರ್ಶಯದ್ ರೂಪಮವ್ಯಲೀಕವ್ರತಾದೃತಃ ॥ ೪ ॥

ಸ ಆದಿದೇವೋ ಭಜತಾಂ ಪರೋ ಗುರುಃ
ಸ್ವಧಿಷ್ಣ್ಯಮಾಸ್ಥಾಯ ಸಿಸೃಕ್ಷಯೈಕ್ಷತ ।
ತಾಂ ನಾಧ್ಯಗಚ್ಛದ್ ದೃಶಮತ್ರ ಸಮ್ಮತಾಂ
ಪ್ರಪಂಚನಿರ್ಮಾಣವಿಧಿರ್ಯಯಾ ಭವೇತ್ ॥ ೫ ॥

ಸಂಚಿಂತಯನ್ ದ್ವ್ಯಕ್ಷರಮೇಕದಾಂಭ
ಸ್ಯುಪಾಶೃಣೋದ್ ದ್ವಿರ್ಗದಿತಂ ವಚೋ ವಿಭುಃ ।
ಸ್ಪರ್ಶೇಷು ಯಚ್ಷೋಡಶಮೇಕವಿಂಶಂ
ನಿಷ್ಕಿಂಚನಾನಾಂ ನೃಪ ಯದ್ ಧನಂ ವಿದುಃ ॥ ೬ ॥

ನಿಶಮ್ಯ ತದ್ವಕ್ತೃದಿದೃಕ್ಷಯಾ ದಿಶೋ
ವಿಲೋಕ್ಯ ತತ್ರಾನ್ಯದಪಶ್ಯಮಾನಃ ।
ಸ್ವಧಿಷ್ಣ್ಯಮಾಸ್ಥಾಯ ವಿಮೃಶ್ಯ ತದ್ಧಿತಂ
ತಪಸ್ಯುಪಾದಿಷ್ಟ ಇವಾದಧೇ ಮನಃ ॥ ೭ ॥

ದಿವ್ಯಂ ಸಹಸ್ರಾಬ್ದಮಮೋಘದರ್ಶನೋ
ಜಿತಾನಿಲಾತ್ಮಾ ವಿಜಿತೋಭಯೇಂದ್ರಿಯಃ ।
ಅತಪ್ಯತ ಸ್ಮಾಖಿಲಲೋಕತಾಪನಂ
ತಪಸ್ತಪೀಯಾಂಸ್ತಪತಾಂ ಸಮಾಹಿತಃ ॥ ೮ ॥

ತಸ್ಮೈ ಸ್ವಲೋಕಂ ಭಗವಾನ್ ಸಭಾಜಿತಃ
ಸಂದರ್ಶಯಾಮಾಸ ಪರಂ ನ ಯತ್ ಪದಮ್ ।
ವ್ಯಪೇತಸಂಕ್ಲೇಶವಿಮೋಹಸಾಧ್ವಸಂ
ಸಂದೃಷ್ಟವದ್ಭಿರ್ವಿಬುಧ್ಯೈರಭಿಷ್ಟುತಮ್ ॥ ೯ ॥

ನ ವರ್ತತೇ ಯತ್ರ ರಜಸ್ತಮಸ್ತಯೋಃ
ಸತ್ವಂ ಚ ಮಿಶ್ರಂ ನ ಚ ಕಾಲವಿಕ್ರಮಃ ।
ನ ಯತ್ರ ಮಾಯಾ ಕಿಮುತಾಪರೇ ಹರೇ
ರನುವ್ರತಾ ಯತ್ರ ಸುರಾಸುರಾರ್ಚಿತಾಃ ॥ ೧೦ ॥

ಶ್ಯಾಮಾವದಾತಾಃ ಶತಪತ್ರಲೋಚನಾಃ
ಪಿಶಂಗವಸ್ತ್ರಾಃ ಸುರುಚಃ ಸುಪೇಶಸಃ ।
ಸರ್ವೇ ಚತುರ್ಬಾಹವ ಉನ್ಮಿಷನ್ಮಣಿ
ಪ್ರವೇಕನಿಷ್ಕಾಭರಣಾಃ ಸುವರ್ಚಸಃ ॥ ೧೧ ॥

ಪ್ರವಾಳವೈಡೂರ್ಯಮೃಣಾಲವರ್ಚಸಾಂ
ಪರಿಸ್ಫುರತ್ಕುಂಡಲಮೌಳಿಮಾಲಿನಾಮ್ ।
ಭ್ರಾಜಿಷ್ಣುಭಿರ್ಯಃ ಪರಿತೋ ವಿರಾಜತೇ
ಲಸದ್ವಿಮಾನಾವಳಿಭಿರ್ಮಹಾತ್ಮನಾಮ್ ।
ವಿದ್ಯೋತಮಾನಪ್ರಮದೋತ್ತಮಾಭಿಃ
ಸವಿದ್ಯುದಭ್ರಾವಳಿಭಿರ್ಯಥಾ ನಭಃ ॥ ೧೨ ॥

ಶ್ರೀರ್ಯತ್ರ ರೂಪಿಣ್ಯುರುಗಾಯಪಾದಯೋಃ
ಕರೋತಿ ಮಾನಂ ಬಹುಧಾ ವಿಭೂತಿಭಿಃ ।
ಪ್ರೇಂಖಶ್ರಿತಾ ಯಾಃ ಕುಸುಮಾಕರಾನುಗೈ
ರ್ವಿಗೀಯಮಾನಾ ಪ್ರಿಯಕರ್ಮ ಗಾಯತೀ ॥ ೧೩ ॥

ದದರ್ಶ ತತ್ರಾಖಿಲಸಾತ್ವತಾಂ ಪತಿಂ
ಶ್ರಿಯಃಪತಿಂ ಯಜ್ಞಪತಿಂ ಜಗತ್ಪತಿಮ್ ।
ಸುನಂದನಂದಪ್ರಬಲಾರ್ಹಣಾದಿಭಿಃ
ಸ್ವಪಾರ್ಷದಮುಖ್ಯೈಃ ಪರಿಸೇವಿತಂ ವಿಭುಮ್ ॥೧೪॥

ಭೃತ್ಯಪ್ರಸಾದಾಭಿಮುಖಂ ದೃಗಾಸವೈಃ
ಪ್ರಸನ್ನಹಾಸಾರುಣಲೋಚನಾನನಮ್ ।
ಕಿರೀಟಿನಂ ಕುಂಡಲಿನಂ ಚತುರ್ಭುಜಂ
ಪೀತಾಂಶುಕಂ ವಕ್ಷಸಿ ಲಕ್ಷಿತಂ ಶ್ರಿಯಾ ॥ ೧೫ ॥

ಅಧ್ಯರ್ಹಣೀಯಾಸನಮಾಸ್ಥಿತಂ ಪರಂ
ವೃತಂ ಚತುಷ್ಷೋಡಶಪಂಚಶಕ್ತಿಭಿಃ ।
ಯುಕ್ತಂ ಭಗೈಃ ಸ್ವೈರಿತರತ್ರ ಚಾಧ್ರುವೈಃ
ಸ್ವ ಏವ ಧಾಮನ್ ರಮಮಾಣಮೀಶ್ವರಮ್ ॥ ೧೬ ॥

ತದ್ದರ್ಶನಾಹ್ಲಾದಪರಿಪ್ಲುತಾಂತರೋ
ಹೃಷ್ಯತ್ತನುಃ ಪ್ರೇಮಭರಾಶ್ರುಲೋಚನಃ ।
ನನಾಮ ಪಾದಾಂಬುಜಮಸ್ಯ ವಿಶ್ವಸೃಗ್
ಯತ್ ಪಾರಮಹಂಸ್ಯೇನ ಪಥಾಽಧಿಗಮ್ಯತೇ ॥ ೧೭ ॥

ತಂ ಪ್ರೀಯಮಾಣಂ ಸಮುಪಸ್ಥಿತಂ ಕವಿಂ
ಪ್ರಜಾವಿಸರ್ಗೇ ನಿಜಶಾಸನಾರ್ಹಣಮ್ ।
ಬಭಾಷ ಈಷತ್ಸ್ಮಿತಶೋಚಿಷಾ ಗಿರಾ
ಪ್ರಿಯಃ ಪ್ರಿಯಂ ಪ್ರೀತಮನಾಃ ಕರೇ ಸ್ಪೃಶನ್ ॥ ೧೮ ॥

ಶ್ರೀಭಗವಾನುವಾಚ—
ತ್ವಯಾಽಹಂ ತೋಷಿತಃ ಸಮ್ಯಗ್ ವೇದಗರ್ಭ ಸಿಸೃಕ್ಷಯಾ ।
ಚಿರಂ ಭೃತೇನ ತಪಸಾ ದುಸ್ತೋಷಃ ಕೂಟಯೋಗಿನಾಮ್ ॥ ೧೯ ॥

ವರಂ ವರಯ ಭದ್ರಂ ತೇ ವರೇಶಂ ಮಾಽಭಿವಾಂಛಿತಮ್ ।
ಸರ್ವಶ್ರೇಯಃಪರಿಶ್ರಾಮಃ ಪುಂಸಾಂ ಮದ್ದರ್ಶನಾವಧಿಃ ॥ ೨೦ ॥

ಮನೀಷಿತಾನುಭಾವೋಽಯಂ ಮಮ ಲೋಕಾವಲೋಕನಮ್ ।
ಯದುಪಶ್ರುತ್ಯ ರಹಸಿ ಚಕರ್ಥ ಪರಮಂ ತಪಃ ॥ ೨೧ ॥

ಪ್ರತ್ಯಾದಿಷ್ಟಂ ಮಯಾ ತತ್ರ ತ್ವಯಿ ಕರ್ಮವಿಮೋಹಿತೇ ।
ತಪೋ ಮೇ ಹೃದಯಂ ಸಾಕ್ಷಾದಾತ್ಮಾಽಹಂ ತಪಸೋಽನಘ ॥ ೨೨ ॥

ಸೃಜಾಮಿ ತಪಸೈವೇದಂ ಗ್ರಸಾಮಿ ತಪಸಾ ಪುನಃ ।

ಬಿಭರ್ಮಿ ತಪಸಾ ವಿಶ್ವಂ ವೀರ್ಯಂ ಮೇ ದುಸ್ತರಂ ತಪಃ ॥ ೨೩ ॥

ಬ್ರಹ್ಮೋವಾಚ—

ಭಗವನ್ ಸರ್ವಭೂತಾನಾಮಧ್ಯಕ್ಷೋಽವಸ್ಥಿತೋ ಗುಹಾಮ್ ।
ವೇದ ಹ್ಯಪ್ರತಿರುದ್ಧೇನ ಪ್ರಜ್ಞಾನೇನ ಚಿಕೀರ್ಷಿತಮ್ ॥ ೨೪ ॥

ಅಥಾಪಿ ನಾಥಮಾನಾಯ ನಾಥ ನಾಥಯ ನಾಥಿತಮ್ ।
ಪರಾವರೇ ಯಥಾ ರೂಪೇ ಜಾನೀಯಾಂ ತೇ ತ್ವರೂಪಿಣಃ ॥ ೨೫ ॥

ಯಥಾಽಽತ್ಮಮಾಯಾಯೋಗೇನ ನಾನಾಶಕ್ತ್ಯುಪಬೃಂಹಿತಃ ।
ವಿಲುಂಪನ್ ವಿಸೃಜನ್ ಗೃಹ್ಣನ್ ಬಿಭ್ರದಾತ್ಮಾನಮಾತ್ಮನಾ ॥ ೨೬ ॥

ಕ್ರೀಡಸ್ಯಮೋಘಸಂಕಲ್ಪ ಊರ್ಣನಾಭಿರ್ಯಥೋರ್ಣುತೇ ।
ತಥಾ ತದ್ವಿಷಯಾಂ ಧೇಹಿ ಮನೀಷಾಂ ಮಯಿ ಮಾಧವ ॥ ೨೭ ॥

ಭಗವಚ್ಛಿಕ್ಷಿತಮಹಂ ಕರವಾಣಿ ಹ್ಯತಂದ್ರಿತಃ ।
ನೇಹಮಾನಃ ಪ್ರಜಾಸರ್ಗಂ ಬಧ್ಯೇಯಂ ಯದನುಗ್ರಹಾತ್ ॥ ೨೮ ॥

ಯಾವತ್ಸಖಾ ಸಖ್ಯುರಿವೇಶ ತೇ ಕೃತಃ
ಪ್ರಜಾವಿಸರ್ಗೇ ವಿಭಜಾಮಿ ಭೋಜನಮ್ ।
ಅವಿಕ್ಲಮಸ್ತೇ ಪರಿಕರ್ಮಣಿ ಸ್ಥಿತೋ
ಮಾ ಮೇ ಸಮುನ್ನದ್ಧಮದೋಽಜಮಾನಿನಃ ॥ ೨೯ ॥

ಶ್ರೀಭಗವಾನುವಾಚ—

ಜ್ಞಾನಂ ಪರಮಗುಹ್ಯಂ ಮೇ ಯದ್ ವಿಜ್ಞಾನಸಮನ್ವಿತಮ್ ।
ಸರಹಸ್ಯಂ ತದಂಗಂ ಚ ಗೃಹಾಣ ಗದಿತಂ ಮಯಾ ॥ ೩೦ ॥

ಯಾವಾನಹಂ ಯಥಾಭಾವೋ ಯದ್ರೂಪಗುಣಕರ್ಮಕಃ ।
ತಥೈವ ತತ್ತ್ವವಿಜ್ಞಾನಮಸ್ತು ತೇ ಮದನುಗ್ರಹಾತ್ ॥ ೩೧ ॥

ಅಹಮೇವಾಸಮಗ್ರೇ ಚ ನಾನ್ಯದ್ ಯತ್ ಸದಸತ್ ಪರಮ್ ।
ಪಶ್ಚಾದಹಂ ತ್ವಮೇತಚ್ಚ ಯೋಽವಶಿಷ್ಯೇತ ಸೋಽಸ್ಮ್ಯಹಮ್ ॥ ೩೨ ॥

ಋತೇಽರ್ಥಂ ಯತ್ಪ್ರತೀಯೇತ ನ ಪ್ರತೀಯೇತ ಚಾತ್ಮನಿ ।
ತದ್ ವಿದ್ಯಾದಾತ್ಮನೋ ಮಾಯಾಂ ಯಥಾಭಾಸೋ ಯಥಾತಮಃ ॥ ೩೩ ॥

ಯಥಾ ಮಹಾಂತಿ ಭೂತಾನಿ ಭೂತೇಷೂಚ್ಚಾವಚೇಷು ಚ ।
ಪ್ರವಿಷ್ಟಾನ್ಯಪ್ರವಿಷ್ಟಾನಿ ತಥಾ ತೇಷು ನ ತೇಷ್ವಹಮ್ ॥ ೩೪ ॥

ಏತಾವದೇವ ಜಿಜ್ಞಾಸ್ಯಂ ತತ್ವಜಿಜ್ಞಾಸುನಾಽಽತ್ಮನಃ ।
ಅನ್ವಯವ್ಯತಿರೇಕಾಭ್ಯಾಂ ಯತ್ ಸ್ಯಾತ್ ಸರ್ವತ್ರ ಸರ್ವದಾ ॥ ೩೫ ॥

ಏತನ್ಮತಂ ಮ ಆತಿಷ್ಠ ಪರಮೇಣ ಸಮಾಧಿನಾ ।
ಭವಾನ್ ಕಲ್ಪವಿಕಲ್ಪೇಷು ನ ವಿಮುಹ್ಯತಿ ಕರ್ಹಿಚಿತ್ ॥ ೩೬ ॥

ಶ್ರೀಶುಕ ಉವಾಚ—
ಸಂಪ್ರದಶ್ಯೈವಮಜನೋ ಜನಾನಾಂ ಪರಮೇಷ್ಠಿನಃ ।
ಪಶ್ಯತಸ್ತಸ್ಯ ತದ್ರೂಪಮಾತ್ಮನೋ ನ್ಯರುಣದ್ ಹರಿಃ ॥ ೩೭ ॥

ಅಂತರ್ಹಿತೇಂದ್ರಿಯಾರ್ಥಾಯ ಹರಯೇಽವಹಿತಾಂಜಲಿಃ ।
ಸರ್ವಭೂತಮಯೋ ವಿಶ್ವಂ ಸಸರ್ಜೇದಂ ಸ ಪೂರ್ವವತ್ ॥ ೩೮ ॥

ಪ್ರಜಾಪತಿರ್ಧರ್ಮಪತಿರೇಕದಾ ನಿಯಮಾನ್ ಯಮಾನ್ ।
ಭದ್ರಂ ಪ್ರಜಾನಾಮನ್ವಿಚ್ಛನ್ನಾಚರತ್ ಸ್ವಾರ್ಥಕಾಮ್ಯಯಾ ॥ ೩೯ ॥

ತಂ ನಾರದಃ ಪ್ರಿಯತಮೋ ರಿಕ್ಥಾದಾನಾಮನುವ್ರತಃ ।
ಶುಶ್ರೂಷಮಾಣಃ ಶೀಲೇನ ಪ್ರಶ್ರಯೇಣ ದಮೇನ ಚ ॥ ೪೦ ॥

ಮಾಯಾಂ ವಿವಿದಿಷುರ್ವಿಷ್ಣೋರ್ಮಾಯೇಶಸ್ಯ ಮಹಾಮುನಿಃ ।
ಮಹಾಭಾಗವತೋ ರಾಜನ್ ಪಿತರಂ ಪರ್ಯತೋಷಯತ್ ॥ ೪೧ ॥

ತುಷ್ಟಂ ನಿಶಾಮ್ಯ ಪಿತರಂ ಲೋಕಾನಾಂ ಪ್ರಪಿತಾಮಹಮ್ ।
ದೇವರ್ಷಿಃ ಪರಿಪಪ್ರಚ್ಛ ಭವಾನ್ ಯನ್ಮಾಽನುಪೃಚ್ಛತಿ ॥ ೪೨ ॥

ತಸ್ಮಾ ಇದಂ ಭಾಗವತಂ ಪುರಾಣಂ ದಶಲಕ್ಷಣಮ್ ।
ಪ್ರೋಕ್ತಂ ಭಗವತಾ ಪ್ರಾಹ ಪ್ರೀತಃ ಪುತ್ರಾಯ ಭೂತಕೃತ್ ॥ ೪೩ ॥

ನಾರದಃ ಪ್ರಾಹ ಮುನಯೇ ಸರಸ್ವತ್ಯಾಸ್ತಟೇ ನೃಪ ।
ಧ್ಯಾಯತೇ ಬ್ರಹ್ಮ ಪರಮಂ ವ್ಯಾಸಾಯಾಮಿತತೇಜಸೇ ॥ ೪೪ ॥

ಯದುತಾಹಂ ತ್ವಯಾ ಪೃಷ್ಟೋ ವೈರಾಜಾತ್ ಪುರುಷಾದಿದಮ್ ।
ಯಥಾಽಽಸೀತ್ ತದುಪಾಖ್ಯಾಸ್ಯೇ ಪ್ರಶ್ನಾನನ್ಯಾಂಶ್ಚ ಕೃತ್ಸ್ನಶಃ ॥೪೫॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ವಿತೀಯಸ್ಕಂಧೇ
ನವಮೋಽಧ್ಯಾಯಃ ॥

ಅಥ ದಶಮೋಽಧ್ಯಾಯಃ

ಶ್ರೀಶುಕ ಉವಾಚ—

ಅತ್ರ ಸರ್ಗೋ ವಿಸರ್ಗಶ್ಚ ಸ್ಥಾನಂ ಪೋಷಣಮೂತಯಃ ।
ಮನ್ವಂತರೇಶಾನುಕಥಾ ನಿರೋಧೋ ಮುಕ್ತಿರಾಶ್ರಯಃ ॥ ೧ ॥

ದಶಮಸ್ಯ ವಿಶುದ್ಧ್ಯರ್ಥಂ ನವಾನಾಮಿಹ ಲಕ್ಷಣಮ್ ।
ವರ್ಣಯಂತಿ ಮಹಾತ್ಮಾನಃ ಶ್ರುತೇನಾರ್ಥೇನ ಚಾಂಜಸಾ ॥ ೨ ॥

ಭೂತಮಾತ್ರೇಂದ್ರಿಯಧಿಯಾಂ ಜನ್ಮ ಸರ್ಗ ಉದಾಹೃತಃ ।
ಬ್ರಹ್ಮಣೋ ಗುಣವೈಷಮ್ಯಾದ್ ವಿಸರ್ಗಃ ಪೌರುಷಃ ಸ್ಮೃತಃ ॥ ೩ ॥

ಸ್ಥಿತಿರ್ವೈಕುಂಠವಿಜಯಃ ಪೋಷಣಂ ತದನುಗ್ರಹಃ ।
ಮನ್ವಂತರಾಣಿ ಸದ್ಧರ್ಮಾ ಊತಯಃ ಕರ್ಮವಾಸನಾಃ ॥ ೪ ॥

ಅವತಾರಾನುಚರಿತಂ ಹರೇಶ್ಚಾಸ್ಯಾನುವರ್ತಿನಾಮ್ ।
ಪುಂಸಾಮೀಶಕಥಾ ಪ್ರೋಕ್ತಾ ನಾನಾಖ್ಯಾನೋಪಬೃಂಹಿತಾ ॥ ೫ ॥

ನಿರೋಧೋಽಸ್ಯಾನುಶಯನಮಾತ್ಮನಃ ಸಹ ಶಕ್ತಿಭಿಃ ।
ಮುಕ್ತಿರ್ಹಿತ್ವಾಽನ್ಯಥಾರೂಪಂ ಸ್ವರೂಪೇಣ ವ್ಯವಸ್ಥಿತಿಃ ॥ ೬ ॥

ಆಭಾಸಶ್ಚ ನಿರೋಧಶ್ಚ ಯತಸ್ತತ್ ತ್ರಯಮೀಯತೇ ।
ಸ ಆಶ್ರಯಃ ಪರಂ ಬ್ರಹ್ಮ ಪರಮಾತ್ಮೇತಿ ಶಬ್ದ್ಯತೇ ॥ ೭ ॥

ಆಧ್ಯಾತ್ಮಿಕೋ ಯಃ ಪುರುಷಃ ಸೋಽಸಾವೇವಾಧಿದೈವಿಕಃ ।
ಯಸ್ತತ್ರೋಭಯವಿಚ್ಛೇದಃ ಸ ಸ್ಮೃತೋ ಹ್ಯಾಧಿಭೌತಿಕಃ ॥ ೮ ॥

ಏತದೇಕತಮಾಭಾವೇ ಯದಾ ನೋಪಲಭಾಮಹೇ ।
ತ್ರಿತಯಂ ತತ್ರ ಯೋ ವೇದ ಸ ಆತ್ಮಾ ಸ್ವಾಶ್ರಯಾಶ್ರಯಃ ॥ ೯ ॥

ಪುರುಷೋಽಂಡಂ ವಿನಿರ್ಭಿದ್ಯ ಯದಾಸೌ ಸ ವಿನಿರ್ಗತಃ ।
ಆತ್ಮನೋಽಯನಮನ್ವಿಚ್ಛನ್ನಪೋಽಸ್ರಾಕ್ಷೀಚ್ಛುಚಿಃ ಶುಚೀಃ ॥ ೧೦ ॥

ತಾಸ್ವವಾತ್ಸೀತ್ ಸ್ವಸೃಷ್ಟಾಸು ಸಹಸ್ರಪರಿವತ್ಸರಾನ್ ।
ತೇನ ನಾರಾಯಣೋ ನಾಮ ಯದಾಪಃ ಪುರುಷೋದ್ಭವಾಃ ॥ ೧೧ ॥
ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥ ೧೨ ॥

ಏಕೋ ನಾನಾತ್ವಮನ್ವಿಚ್ಛನ್ ಯೋಗತಲ್ಪಾತ್ ಸಮುತ್ಥಿತಃ ।
ವೀರ್ಯಂ ಹಿರಣ್ಮಯಂ ದೇವೋ ಮಾಯಯಾ ವ್ಯಸೃಜತ್ ತ್ರಿಧಾ ॥ ೧೩ ॥

ಅಧಿದೈವಮಥಾಧ್ಯಾತ್ಮಮಧಿಭೂತಮಿತಿ ಪ್ರಭುಃ ।
ಪುನಸ್ತತ್ ಪೌರುಷಂ ವೀರ್ಯಂ ತ್ರಿಧಾಽಭಿದ್ಯತ ತಚ್ಛೃಣು ॥ ೧೪ ॥

ಅಂತಃ ಶರೀರ ಆಕಾಶೇ ಪುರುಷಸ್ಯ ವಿಚೇಷ್ಟತಃ ।
ಓಜಃ ಸಹೋ ಬಲಂ ಜಜ್ಞೇ ತತಃ ಪ್ರಾಣೋ ಮಹಾನಭೂತ್ ॥ ೧೫ ॥

ಅನುಪ್ರಾಣಂತಿ ಯಂ ಪ್ರಾಣಾಃ ಪ್ರಾಣಂತಂ ಸರ್ವಜಂತುಷು ।
ಅಪಾನಂತಮಪಾನಂತಿ ನರದೇವಮಿವಾನುಗಾಃ ॥ ೧೬ ॥

ಪ್ರಾಣೇನ ಕ್ಷಿಪತಾ ಕ್ಷುತ್ತೃಡಂತರಾ ಜಾಯತೇ ವಿಭೋಃ ।
ಪಿಪಾಸತೋ ಜಕ್ಷತಶ್ಚ ಪ್ರಾಙ್ ಮುಖಂ ನಿರಭಿದ್ಯತ ॥ ೧೭ ॥

ಮುಖತಸ್ತಾಲು ನಿರ್ಭಿಣ್ಣಂ ಜಿಹ್ವಾ ತತ್ರೋಪಜಾಯತೇ ।
ತತೋ ನಾನಾರಸೋ ಜಜ್ಞೇ ಜಿಹ್ವಯಾ ಯೋಽಧಿಗಮ್ಯತೇ ॥ ೧೮ ॥

ವಿವಕ್ಷೋರ್ಮುಖತೋ ಭೂಮ್ನೋ ವಹ್ನಿರ್ವಾಗ್ ವ್ಯಾಹೃತಂ ತಯೋಃ ।
ಜಲೇ ವೈ ತಸ್ಯ ಸುಚಿರಂ ನಿರೋಧಃ ಸಮಜಾಯತ ॥ ೧೯ ॥

ನಾಸಿಕೇ ನಿರಭಿದ್ಯೇತಾಂ ದೋಧೂಯತಿ ನಭಸ್ವತಿ ।
ತತ್ರ ವಾಯುರ್ಗಂಧವಹೋ ಘ್ರಾಣೋ ನಸಿ ಜಿಘೃಕ್ಷತಃ ॥ ೨೦ ॥

ಯದಾತ್ಮನಿ ನಿರಾಲೋಕ ಆತ್ಮಾನಂ ಚ ದಿದೃಕ್ಷತಃ ।
ನಿರ್ಭಿಣ್ಣೇ ಅಕ್ಷಿಣೀ ತಸ್ಯ ಜ್ಯೋತಿಶ್ಚಕ್ಷುರ್ಗುಣಗ್ರಹಃ ॥ ೨೦ ॥

ಬೋಧ್ಯಮಾನಸ್ಯ ಋಷಿಭಿರಾತ್ಮನಸ್ತಜ್ಜಿಘೃಕ್ಷತಃ ।
ಕರ್ಣೌ ಚ ನಿರಭಿದ್ಯೇತಾಂ ದಿಶಃ ಶ್ರೋತ್ರಂ ಗುಣಗ್ರಹಃ ॥ ೨೨॥

ವಸ್ತುನೋ ಮೃದುಕಾಠಿನ್ಯಲಘುಗುರ್ವುಷ್ಣಶೀತತಾಮ್ ।
ಜಿಘೃಕ್ಷತಸ್ತ್ವಙ್ ನಿರ್ಭಿಣ್ಣಾ ತಸ್ಯಾಂ ರೋಮಮಹೀರುಹಾಃ ।
ತತ್ರ ಚಾಂತರ್ಬಹಿರ್ವಾತಸ್ತ್ವಚಾ ಲಬ್ಧಗುಣಾವೃತಃ ॥ ೨೩ ॥
ಹಸ್ತೌ ರುರುಹತುಸ್ತಸ್ಯ ನಾನಾಕರ್ಮಚಿಕೀರ್ಷಯಾ ।
ತಯೋಸ್ತು ಬಲವಾನಿಂದ್ರ ಆದಾನಮುಭಯಾಶ್ರಯಮ್ ॥ ೨೪ ॥

ಗತಿಂ ಚಿಕೀರ್ಷತಃ ಪಾದೌ ರುರುಹಾತೇಽಭಿಕಾಮತಃ ।
ಪದ್ಭ್ಯಾಂ ಯಜ್ಞಃ ಸ್ವಯಂ ಹವ್ಯಂ ಕರ್ಮ ಯತ್ ಕ್ರಿಯತೇ ನೃಭಿಃ ॥ ೨೫ ॥

ನಿರಭಿದ್ಯತ ಶಿಶ್ನೋ ವೈ ಪ್ರಜಾನಂದಾಮೃತಾರ್ಥಿನಃ ।
ಉಪಸ್ಥ ಆಸೀತ್ ಕಾಮಾನಾಂ ಪ್ರಿಯಂ ತದುಭಯಾಶ್ರಯಮ್ ॥ ೨೬ ॥

ಉತ್ಸಿಸೃಕ್ಷೋರ್ಧಾತುಮಲಂ ನಿರಭಿದ್ಯತ ವೈ ಗುದಮ್ ।
ತತಃ ಪಾಯುಸ್ತತೋ ಮಿತ್ರ ಉತ್ಸರ್ಗ ಉಭಯಾಶ್ರಯಃ ॥ ೨೭ ॥

ಆಸಿಸೃಕ್ಷೋಃ ಪುರಃ ಪುರ್ಯಾಂ ನಾಭಿದ್ವಾರಮಪಾವೃತಮ್ ।
ತತೋಽಪಾನಸ್ತತೋ ಮೃತ್ಯುಃ ಪೃಥಕ್ತ್ವಮುಭಯಾಶ್ರಯಮ್ ॥ ೨೮ ॥

ಆದಿತ್ಸೋರನ್ನಪಾನಾನಾಂ ಅಸೃಕ್ ಕುಕ್ಷ್ಯಂತ್ರನಾಡಿಕೇ ।
ನದ್ಯಃ ಸಮುದ್ರಾಶ್ಚ ತಯೋಸ್ತುಷ್ಟಿಃ ಪುಷ್ಟಿಸ್ತದಾಶ್ರಯೇ ॥ ೨೯ ॥

ನಿದಿಧ್ಯಾಸೋರಾತ್ಮಮಾಯಾಂ ಹೃದಯಂ ನಿರಭಿದ್ಯತ ।
ತತೋ ಮನಶ್ಚಂದ್ರ ಇತಿ ಸಂಕಲ್ಪಃ ಕಾಮ ಏವ ಚ ॥ ೩೦ ॥

ತ್ವಕ್ಚರ್ಮಮಾಂಸರುಧಿರಮೇದೋಮಜ್ಜಾಸ್ಥಿಧಾತವಃ ।
ಭೂಮ್ಯಪ್ತೇಜೋಮಯಾಃ ಸಪ್ತ ಪ್ರಾಣೋ ವ್ಯೋಮಾಂಬುವಾಯುಭಿಃ ॥ ೩೧॥

ಗುಣಾತ್ಮಕಾನೀಂದ್ರಿಯಾಣಿ ಭೂತಾದಿಪ್ರಭವಾ ಗುಣಾಃ ।
ಮನಃ ಸರ್ವವಿಕಾರಾತ್ಮಾ ಬುದ್ಧಿರ್ವಿಜ್ಞಾನರೂಪಿಣೀ ॥ ೩೨ ॥

ಏತದ್ ಭಗವತೋ ರೂಪಂ ಸ್ಥೂಲಂ ತೇ ವ್ಯಾಹೃತಂ ಮಯಾ ।
ಮಹ್ಯಾದಿಭಿಶ್ಚಾವರಣೈರಷ್ಟಭಿರ್ಬಹಿರಾವೃತಮ್ ॥ ೩೩ ॥

ಅತಃ ಪರಂ ಸೂಕ್ಷ್ಮತಮಮವ್ಯಕ್ತಂ ನಿರ್ವಿಶೇಷಣಮ್ ।
ಅನಾದಿಮಧ್ಯನಿಧನಂ ನಿತ್ಯಂ ವಾಙ್ಮನಸೋಃ ಪರಮ್ ॥ ೩೪ ॥

ಅಮುನೀ ಭಗವದ್ರೂಪೇ ಮಯಾ ತೇ ಹ್ಯನುವರ್ಣಿತೇ ।
ಉಭೇ ಅಪಿ ನ ಗೃಹ್ಣಂತಿ ಮಾಯಾಸೃಷ್ಟೇಽವಿಪಶ್ಚಿತಃ ॥ ೩೫ ॥

ಸ ವಾಚ್ಯವಾಚಕತಯಾ ಭಗವಾನ್ ಬ್ರಹ್ಮರೂಪಧೃಕ್ ।
ನಾಮರೂಪಕ್ರಿಯಾ ಧತ್ತೇ ಸಕರ್ಮಾಕರ್ಮಕಃ ಪರಃ ॥ ೩೬ ॥

ಪ್ರಜಾಪತೀನ್ ಮನೂನ್ ದೇವಾನೃಷೀನ್ ಪಿತೃಗಣಾನ್ ಪೃಥಕ್ ।
ಸಿದ್ಧಚಾರಣಗಂಧರ್ವಾನ್ ವಿದ್ಯಾಧ್ರಾಸುರಗುಹ್ಯಕಾನ್ ॥ ೩೭ ॥

ಕಿನ್ನರಾಪ್ಸರಸೋ ನಾಗಾನ್ ಸರ್ಪಾನ್ ಕಿಂಪುರುಷಾನಪಿ ।
ಮಾತೃರಕ್ಷಃಪಿಶಾಚಾಂಶ್ಚ ಪ್ರೇತಭೂತವಿನಾಯಕಾನ್ ॥ ೩೮ ॥

ಕೂಷ್ಮಾಂಡೋನ್ಮಾದವೇತಾಳಾನ್ ಯಾತುಧಾನಾನ್ ಗ್ರಹಾನಪಿ ।
ಖಗಾನ್ ಮೃಗಾನ್ ಪಶೂನ್ ವೃಕ್ಷಾನ್ ಗಿರೀನ್ ನೃಪ ಸರೀಸೃಪಾನ್ ॥ ೩೯ ॥

ವಿವಿಧಾಶ್ಚತುರ್ವಿಧಾ ಯೇಽನ್ಯೇ ಜಲಸ್ಥಲನಭೌಕಸಃ ।
ಕುಶಲಾಕುಶಲಮಿಶ್ರಾಣಾಂ ಕರ್ಮಣಾಂ ಗತಯಸ್ತ್ವಿಮಾಃ ॥ ೪೦ ॥

ಸತ್ವಂ ರಜಸ್ತಮ ಇತಿ ತಿಸ್ರಃ ಸುರನೃನಾರಕಾಃ ।
ತತ್ರಾಪ್ಯೇಕೈಕಶೋ ರಾಜನ್ ಭಿದ್ಯಂತೇ ಗತಯಸ್ತ್ರಿಧಾ ॥ ೪೧ ॥

ಯದೈವೈಕತಮೋಽನ್ಯಾಭ್ಯಾಂ ಸ್ವಭಾವ ಉಪಹನ್ಯತೇ ।
ತದೈವೇದಂ ಜಗದ್ ಧಾತಾ ಭಗವಾನ್ ಧರ್ಮರೂಪಧೃಕ್ ।
ಪುಷ್ಣಾತಿ ಸ್ಥಾಪಯನ್ ವಿಶ್ವಂ ತಿರ್ಯಙ್ನರಸುರಾತ್ಮಭಿಃ ॥ ೪೨ ॥

ತತಃ ಕಾಲಾಗ್ನಿರುದ್ರಾತ್ಮಾ ಯತ್ ಸೃಷ್ಟಮಿದಮಾತ್ಮನಃ ।
ಸನ್ನಿಯಚ್ಛತಿ ತತ್ ಕಾಲೇ ಘನಾನೀಕಮಿವಾನಿಲಃ ॥ ೪೩ ॥

ಇತ್ಥಂಭಾವೇನ ಕಥಿತೋ ಭಗವಾನ್ ಭಗವತ್ತಮಃ ।
ನೇತ್ಥಂಭಾವೇನ ಹಿ ಪರಂ ದ್ರಷ್ಟುಮರ್ಹಂತಿ ಸೂರಯಃ ॥ ೪೪ ॥

ನ ಚಾಸ್ಯ ಜನ್ಮಕರ್ಮಾಣಿ ಪರಸ್ಯ ನ ವಿಧೀಯತೇ ।
ಕರ್ತೃತ್ವಂ ಪ್ರತಿಷೇಧಾರ್ಥಂ ಮಾಯಯಾಽರೋಪಿತಂ ಹಿ ತತ್ ॥ ೪೫ ॥

ಅಯಂ ತೇ ಬ್ರಹ್ಮಣಃ ಕಲ್ಪಃ ಸವಿಕಲ್ಪ ಉದಾಹೃತಃ ।
ವಿಧಿಃ ಸಾಧಾರಣೋ ಯತ್ರ ಸರ್ಗಾಃ ಪ್ರಾಕೃತವೈಕೃತಾಃ ॥ ೪೬ ॥

ಪರಿಮಾಣಂ ಚ ಕಾಲಸ್ಯ ಕಲ್ಪಲಕ್ಷಣವಿಗ್ರಹಮ್ ।
ಯಥಾ ಪರಸ್ತಾದ್ ವ್ಯಾಖ್ಯಾಸ್ಯೇ ಪಾದ್ಮಂ ಕಲ್ಪಮಿಮಂ ಶೃಣು ॥ ೪೭ ॥

ಶೌನಕ ಉವಾಚ—

ಯದಾಹ ನೋ ಭವಾನ್ ಸೂತ ಕ್ಷತ್ತಾ ಭಾಗವತೋತ್ತಮಃ ।
ಚಚಾರ ತೀರ್ಥಾನಿ ಭುವಸ್ತ್ಯಕ್ತ್ವಾ ಬಂಧೂನ್ ಸುದುಸ್ತ್ಯಜಾನ್ ॥ ೪೮ ॥

ಕುತ್ರ ಕೌಷಾರವೇಸ್ತಸ್ಯ ಸಂವಾದೋಽಧ್ಯಾತ್ಮಸಂಭವಃ ।
ಯದ್ವಾ ಸ ಭಗವಾಂಸ್ತಸ್ಮೈ ಪೃಷ್ಟಸ್ತತ್ತ್ವಮುವಾಚ ಹ ॥ ೪೯ ॥

ಬ್ರೂಹಿ ನಸ್ತದಿದಂ ಸೌಮ್ಯ ವಿದುರಸ್ಯ ವಿಚೇಷ್ಟಿತಮ್ ।
ಬಂಧುತ್ಯಾಗನಿಮಿತ್ತಂ ಚ ಯಥೈವಾಗತವಾನ್ ಪುನಃ ॥ ೫೦ ॥

ಸೂತ ಉವಾಚ—

ರಾಜ್ಞಾ ಪರೀಕ್ಷಿತಾ ಪೃಷ್ಟೋ ಯದವಾದೀನ್ಮಹಾಮುನಿಃ ।
ತದ್ವೋಽಭಿಧಾಸ್ಯೇ ಶೃಣುತ ರಾಜ್ಞಃ ಪ್ರಶ್ನಾನುಸಾರತಃ ॥ ೫೧ ॥

॥ ಇತಿ ಶ್ರೀಮದ್ಭಾಗವತೇ ಮಹಾಪುರಾಣೇ
ಪಾರಮಹಂಸ್ಯಾಮಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ವಿತೀಯಸ್ಕಂಧೇ ದಶಮೋಽಧ್ಯಾಯಃ ॥

॥ ಸಮಾಪ್ತಶ್ಚ ದ್ವಿತೀಯಸ್ಕಂಧಃ ॥

॥ ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಃ

ಶ್ರೀಮದ್ ಭಾಗವತ ತಾತ್ಪರ್ಯ ನಿರ್ಣಯಃ

ದ್ವಿತೀಯ ಸ್ಕಂಧ

ಓಂದನೇ ಅಧ್ಯಾಯ

ಅಧ್ಯಾಯ ಸಾರಾಂಶ

ಶುಕ: ಸಾವಿನ ಅಂಚಿನಲ್ಲಿರುವವನು ಏನು ಶ್ರವಣ ಮಾಡಬೇಕು ಏನು ಜಪಿಸಬೇಕು ಎಂದು ಮುಂತಾಗಿ ನೀನು ಕೇಳಿದ ಪ್ರಶ್ನೆ ಬಹಳ ಉತ್ತಮವಾದುದು. ಇದರಿಂದ ಲೋಕಕ್ಕೆ ಉಪಕಾರವಿದೆ. ಜನರು ವ್ಯರ್ಥವಾಗಿ ಆಯುಷ್ಯವನ್ನು ಕಳೆಯುತ್ತಾರೆ. ವಿಷಯಸುಖದಲ್ಲಿ ಆಸಕ್ತರಾಗಿ ಹಾಳಾಗುತ್ತಾರೆ. ಮುಮುಕ್ಷು ಹೀಗೆ ಮಾಡಬಾರದು. ಸದಾ ಶ್ರೀಹರಿಯ ಮಹಿಮೆಯನ್ನು ಶ್ರವಣ ಮಾಡಬೇಕು, ಜಪಿಸಬೇಕು, ಸ್ಮರಿಸಬೇಕು. ಅದರಿಂದ ಅಂತ್ಯಕಾಲದಲ್ಲಿ ಹರಿಸ್ಮರಣೆ ಲಭ್ಯವಾಗುವುದು. ವಿಧಿನಿಷೇಧಗಳಿಗೆ ಅತೀತರಾದ ಮುಕ್ತರೂ ಕೂಡ ಶ್ರವಣಾದಿಗಳನ್ನು ಆದರದಿಂದ ಮಾಡುತ್ತಾರೆ. ವಿಧಿನಿಷೇಧಬದ್ಧರಾದ ಸಂಸಾರಿ ಜೀವರ ಬಗ್ಗೆ ಏನು ಹೇಳಬೇಕು? ಅದರಿಂದ ರಾಜನೆ, ನಾನು ನಿನಗೆ ಭಾಗವತಪುರಾಣವನ್ನು ಉಪದೇಶಿಸುತ್ತೇನೆ. ಇದು ವೇದಕ್ಕೆ ಸಮಾನ. ಕೃಷ್ಣಾವತಾರಕ್ಕೆ ಮೊದಲೇ ಈ ಕೃಷ್ಣಕಥೆಯನ್ನು ಸರ್ವಜ್ಞರಾದ ನಮ್ಮ ತಂದೆ ವೇದವ್ಯಾಸರು ರಚಿಸಿದ್ದಾರೆ. ಇಂಥ ಗ್ರಂಥಗಳನ್ನು ಅಧ್ಯಯನ ಮಾಡುವುದೆ ಮುಮುಕ್ಷುಗಳಿಗೆ ಅವಶ್ಯ ಕರ್ತವ್ಯವಾಗಿದೆ. ಅಧ್ಯಯನದಲ್ಲಿ ಕಳೆಯುವ ಒಂದು ಮುಹೂರ್ತಕಾಲವೂ ಉತ್ತಮ ಸಾರ್ಥಕ ಆಯುಷ್ಯವೆನಿಸುತ್ತದೆ, ಖಟ್ವಾಂಗನೆಂಬ ರಾಜ ತನ್ನಾಯುಷ್ಯ ಒಂದು

ಮೂಹೂರ್ತಮಾತ್ರವಿದೆ ಎಂದು ತಿಳಿದು ಒಂದು ಮುಹೂರ್ತದ ಸಾಧನೆಯಿಂದಲೆ ಹರಿಪಾದವನ್ನು ಸೇರಿದ. ನಿನಗಾದರೊ ಒಂದು ಸಪ್ತಾಹಕಾಲ ಆಯುಷ್ಯವಿದೆ.

ಅಂತ್ಯಕಾಲ ಸಮೀಪಿಸಿತೆಂದು ತಿಳಿದಾಗ ಮುಮುಕ್ಷು ಮನೆಯನ್ನು ತೊರೆದು ತೀರ್ಥಯಾತ್ರೆ ಕೈಗೊಂಡು ಆಸನ ಪ್ರಾಣಾಯಾಮ ಪ್ರತ್ಯಾಹಾರ ಪೂರ್ವಕವಾಗಿ ಮುಖ್ಯಪ್ರಾಣನ ಮತ್ತು ಇಂದ್ರಿಯಾಭಿಮಾನಿ ದೇವತೆಗಳ ಅನುಗ್ರಹ ಸಂಪಾದಿಸಬೇಕು. ಬಳಿಕ ಭಗವಂತನ ಎಲ್ಲ ಅವಯವಗಳನ್ನು ಒಮ್ಮೆಲೆ ಧ್ಯಾನಿಸಲಾಗದವನು ಒಂದೊಂದಾಗಿ ಧ್ಯಾನಿಸಬೇಕು. ಆಗ ಮನೋನಿಗ್ರಹ ಕೈಗೂಡುತ್ತದೆ. ಶ್ರವಣಾದಿಗಳಿಂದ ಹರಿಯಲ್ಲಿಯೆ ಮನಸ್ಸು ನೆಲೆ ನಿಲ್ಲುವಂತಾಗುತ್ತದೆ. ಅವಯವಗಳ ಧ್ಯಾನ ಹೀಗೆ 'ಬ್ರಹ್ಮಾಂಡ ವ್ಯಾಪಿಯಾದ ಹರಿಯ ವಿರಾಡ್ರೂಪಕ್ಕೆ ಹದಿನಾಲ್ಕು ಲೋಕಗಳ ಈ ಬ್ರಹ್ಮಾಂಡ ಪ್ರತಿಮೆ ಎಂದು ಭಾವಿಸಬೇಕು. ಈ ಪ್ರತಿಮೆಯ ಪಾದತಲ ಪಾತಾಲ, ಕಾಲಿನ ಹಿಮ್ಮಡಿ ರಸಾತಲ. ಕಾಲಿನ ಗಂಟು ಮಹಾತಲ, ಮೀನಖಂಡ ತಲಾತಲ. ಮೊಣಕಾಲು ಸುತಲ, ತೊಡೆಗಳು ವಿತಲ ಅತಲಗಳು, ಸೊಂಟ ಭೂಲೋಕ, ನಾಭಿ ಅಂತರಿಕ್ಷ, ಎದೆ ಸ್ವರ್ಗ, ಕುತ್ತಿಗೆ ಮಹರ್ಲೋಕ, ಮುಖ ಜನಲೋಕ, ಹಣೆ ತಪೋಲೋಕ, ತಲೆ ಸತ್ಯಲೋಕ, ಬಾಹುಗಳು ಕಿವಿ ಮೂಗು ಕಣ್ಣು ಮುಂತಾದ ಎಲ್ಲ ಅವಯವಗಳೂ ಬ್ರಹ್ಮರುದ್ರಾದಿ ದೇವತೆಗಳು. ಪ್ರತಿಮೆಯ ಈ ಅವಯವಗಳು ಹರಿಯ ಸ್ವರೂಪಾವಯವಗಳಿಂದ ಹುಟ್ಟಿ ಅವುಗಳನ್ನೆ ಆಶ್ರಯಿಸಿವೆ ಎಂದು ತಿಳಿಯಬೇಕು.

★★★

ಮುಮುಕ್ಷುಗಳು ಸದಾ ಏನನ್ನು ಶ್ರವಣ ಮಾಡಬೇಕು ಏನು ಜಪಿಸಬೇಕು ಏನು ಮಾಡಬೇಕು ಎಂದು ಪರೀಕ್ಷಿತ ಶುಕಮುನಿಯಲ್ಲಿ ಪ್ರಶ್ನೆ ಮಾಡಿದ. ಶುಕಮುನಿ ಇದು ಬಹಳ ಉತ್ತಮವಾದ ಪ್ರಶ್ನೆ ಎಂದು ಹೊಗಳುತ್ತಿದ್ದಾರೆ—

ವರೀಯಾನೇಷ ತೇ ಪ್ರಶ್ನಃ ಕೃತೋ ಲೋಕಹಿತಂ ನೃಪ ।
ಆತ್ಮವಿತ್ಸಂಮತಃ ಪುಂಸಾಂ ಶ್ರೋತವ್ಯಾದಿಷು ಯಃ ಪರಃ ॥ ೧ ॥

ರಾಜನೆ, ಮುಮುಕ್ಷುಗಳು ಶ್ರವಣ ಮಾಡಬೇಕಾದುದು ಮುಂತಾದವುಗಳಲ್ಲಿ ಯಾವುದು ಶ್ರೇಷ್ಠ ಎಂದು ನೀನು ಕೇಳಿರುವಿ ಲೋಕಕ್ಕೆ ಹಿತವಾಗುವ ಪರಮಾತ್ಮ ಜ್ಞಾನಿಗಳಿಗೆ ಸಮ್ಮತವಾದ, ಈ ಪ್ರಶ್ನೆ ಅತ್ಯುತ್ತಮವಾಗಿದೆ.

'ಪುಂಸಾಂ ಶ್ರೋತವ್ಯಾದಿಷು ಯಃ ಪರಃ' ಮುಮುಕ್ಷುಗಳು ಕೇಳಬೇಕಾದ್ದು ಮುಂತಾದವುಗಳಲ್ಲಿ ಯಾವುದು ಶ್ರೇಷ್ಠ? ಎಂಬುದು ರಾಜ ಹಿಂದೆ ಮಾಡಿದ್ದ ಪ್ರಶ್ನೆ.

ಅದನ್ನು ಅನುವಾದ ಮಾಡಿ 'ಏಷ ತೇ ಪ್ರಶ್ನಃ ವರೀಯಾನ್' ಈ ನಿನ್ನ ಪ್ರಶ್ನೆ ಉತ್ತಮ ಎನ್ನುತ್ತಿದ್ದಾರೆ. ಅನುವಾದವನ್ನು ಅನುವಾದವೆಂದು ತಿಳಿಯಬೇಕಾದರೆ 'ಇತಿ' 'ಎಂದು' ಎಂಬ ಶಬ್ದಬೇಕು. 'ಯಾವುದು ಶ್ರೇಷ್ಠ 'ಎಂದು' ನೀನು ಮಾಡಿದ ಪ್ರಶ್ನೆ' ಎನ್ನಬೇಕು. ಇತಿ ಶಬ್ದ ಶ್ಲೋಕದಲ್ಲಿ ಇಲ್ಲ. ಅದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

ಯಃ ಪರ ಇತಿ ।

ಯಾವುದು ಶ್ರೇಷ್ಠ ಎಂದು.

ಬೇರೆ ವ್ಯಾಖ್ಯಾನಕಾರರು 'ಇತಿ' ಶಬ್ದ ಅಧ್ಯಾಹಾರ ಮಾಡಿಕೊಳ್ಳದೆ ಕೂಡಿಸಲು ವಿಫಲ ಪ್ರಯತ್ನ ನಡೆಸಿದ್ದಾರೆ. 'ಶ್ರೋತವ್ಯ ಮುಂತಾದ ಪ್ರಶ್ನೆಗಳಲ್ಲಿ ಶ್ರೇಷ್ಠವಾದ ಈ ಪ್ರಶ್ನೆ ಶ್ರೇಷ್ಠ' ಎನ್ನುತ್ತದೆ ವಿಶ್ವನಾಥ ಚಕ್ರವರ್ತಿ ವ್ಯಾಖ್ಯಾನ. ಮತ್ತು ವಲ್ಲಭಾಚಾರ್ಯ ವ್ಯಾಖ್ಯಾನ. ಆದರೆ ಪ್ರಶ್ನೆ ಶ್ರೋತವ್ಯವಲ್ಲ. ಪ್ರಶ್ನೆಯ ವಿಷಯ ಶ್ರೋತವ್ಯ. 'ಶ್ರೇಷ್ಠವಾದ ಈ ಪ್ರಶ್ನೆ ಶ್ರೇಷ್ಠ' ಎನ್ನುವುದೂ ಅನರ್ಥಕ. ಈ ಪ್ರಶ್ನೆ ಯಾವುದೆಂದೂ ಹೇಳಿಲ್ಲ. ವೀರರಾಘವ ವ್ಯಾಖ್ಯಾನದಲ್ಲಿ 'ಶ್ರೋತವ್ಯಾದಿಷು ಪರಃ' ಎಂದರೆ 'ಶ್ರೋತವ್ಯಾದಿಗಳಲ್ಲಿ ಗೋಚರವಾದ' ಶ್ರೋತವ್ಯವಿಷಯದ ಬಗ್ಗೆ ಕೇಳಿದ ಪ್ರಶ್ನೆ ಎಂದಿದೆ.[೧] ಆದರೆ ಶ್ರೋತವ್ಯಾದಿಗಳಲ್ಲಿ ಪ್ರಶ್ನೆ ಗೋಚರವಾಗುವುದಿಲ್ಲ. ಪ್ರಶ್ನೆಯಲ್ಲಿ ಶ್ರೋತವ್ಯಾದಿಗಳು ಗೋಚರವಾಗುತ್ತವೆ.

★★★

ಶ್ರೋತವ್ಯ ಯಾವುದೆಂದು ಪರೀಕ್ಷಿತ ಮಾಡಿದ ಪ್ರಶ್ನೆಗೆ ಶುಕಮುನಿ ಹೇಳುತ್ತಾರೆ—

ಶ್ರೋತವ್ಯಾನೀಹ ರಾಜೇಂದ್ರ ನೃಣಾಂ ಸಂತಿ ಸಹಸ್ರಶಃ ।
ಅಪಶ್ಯತಾಮಾತ್ಮತತ್ವಂ ಗೃಹೇಷು ಗೃಹಮೇಧಿನಾಂ ॥ ೨ ॥

ನಿದ್ರಯಾ ಹ್ರಿಯತೇ ನಕ್ತಂ ವ್ಯವಾಯೇನ ನವಂ ವಯಃ ।
ದಿವಾ ಚಾರ್ಥೇಹಯಾ ರಾಜನ್ ಕುಟುಂಬ ಭರಣೇನ ವಾ ॥ ೩ ॥

---

೧. ಶ್ರೋತವ್ಯಾದಿಷು ಮಧ್ಯೇ ಯಃ ಪರಃ ಶ್ರೇಷ್ಠಃ ಪ್ರಶ್ನಃ ಕೃತಃ ಏಷ ವರೀಯಾನ್ । -ಶ್ರೀಧರಃ

ಶ್ರೋತವ್ಯಾದಿಷು ಪರಃ ಗೋಚರಃ ಶ್ರೋತವ್ಯಾದ್ಯರ್ಥತತ್ವ ವಿಷಯಃ । -ವೀರರಾಘವಃ

ಶ್ರೋತವ್ಯಾದಿಷು ಪ್ರಶ್ನೇಷು ಮಧ್ಯೇ ಯಃ ಪ್ರಶ್ನಃ ಪರಃ । -ವಿಶ್ವನಾಥಃ

ಶ್ರೋತವ್ಯಾದಿಷು ಪ್ರಶ್ನೇಷು ಮಧ್ಯೇ ಯಃ ಪ್ರಥಮತಃ ಪೃಷ್ಟಃ ಸರ್ವಾತ್ಮನಾ ಕಿಂ ಕರ್ತವ್ಯಮಿತಿ ಏಷ ಪ್ರಶ್ನೋ ವರೀಯಾನ್ ಶ್ರೇಷ್ಠಃ । -ವಲ್ಲಭಾಚಾರ್ಯಃ

ಬಂಧಕ ಪ್ರಕೃತಿಯ ಪ್ರಭಾವದಿಂದ ಪರಾಪರತತ್ವಗಳನ್ನು ಸರಿಯಾಗಿ ತಿಳಿಯದೆ ಗೃಹಸ್ಥಾಶ್ರಮದಲ್ಲಿ ಕಾಮ್ಯ ಕರ್ಮಮಾಡುವ ತಾರ್ಕಿಕ ಸಾಂಖ್ಯ ಮುಂತಾದ ದಾರ್ಶನಿಕರು ಸರಿಯಾಗಿ ತಿಳಿದಿಲ್ಲವೆನ್ನುವುದಕ್ಕೆ ಅವರು ತಮ್ಮ ಆಯುಷ್ಯವನ್ನು ವ್ಯರ್ಥಮಾಡುವುದೆ ಸಾಕ್ಷಿ. ಅವರಿಗೆ ನವಯೌವನದ ರಾತ್ರಿಕಾಲ ನಿದ್ದೆಯಲ್ಲಿ ಸ್ತ್ರೀಸಂಗದಲ್ಲಿ ಕಳೆಯುತ್ತದೆ. ಹಗಲು ಭಗವದಾರಾಧನೆಗೆ ವಿನಿಯೋಗವಾಗದ ಧನವನ್ನು ಆರ್ಜಿಸುವುದರಲ್ಲಿ ಕಳೆಯುತ್ತದೆ. ಧನಿಕರಾಗಿದ್ದಲ್ಲಿ ಕುಟುಂಬ ಪಾಲನೆಯಲ್ಲಿ ಕಳೆಯುತ್ತದೆ. ಹೀಗೆ ವ್ಯರ್ಥ ಆಯುಷ್ಯ ಕಳೆವ ಅಜ್ಞಾನಿಗಳಾದ ದಾರ್ಶನಿಕರಿಗೆ ಶ್ರೋತವ್ಯಾದಿಗಳು ಸಾವಿರಾರು ಅವರ ಶಾಸ್ತ್ರಗಳೇ ಇವೆ.

ಈ ಶ್ಲೋಕದಲ್ಲಿ 'ರಾತ್ರಿ ನಿದ್ದೆಯಲ್ಲಿ ಕಳೆಯುತ್ತದೆ' ಎಂದು ಹೇಳಿದಂತೆ ಕಾಣುತ್ತದೆ. ತಾರ್ಕಿಕಾದಿ ದಾರ್ಶನಿಕರು ಪರಾಪರತತ್ವವನ್ನು ತಿಳಿದಿಲ್ಲ 'ಅಪಶ್ಯತಾಂ' ಎಂದಿದೆ. ಅವರು ಬಹಳ ವಿಚಾರ ಮಾಡುವವರು ಏಕೆ ತಿಳಿದಿಲ್ಲ? ಈ ಪ್ರಶ್ನೆಗೆ ಸಮಾಧಾನ—

ಅಪಶ್ಯತಾಂ ನಿದ್ರಯಾ ।

ಬಂಧಕ ಪ್ರಕೃತಿಯಿಂದ ಪರಾಪರತತ್ವವನ್ನು ತಿಳಿಯದವರಿಗೆ.

ಇಲ್ಲಿ 'ನಿದ್ರಯಾ' ಎಂಬುದನ್ನು 'ಅಪಶ್ಯತಾಂ' ಎಂಬಲ್ಲಿಯೂ ಅನ್ವಯಿಸಬೇಕು. ನಿದ್ರೆಯೆಂದರೆ ಬಂಧಕ ಪ್ರಕೃತಿ. ಅದರ ಪ್ರಭಾವದಿಂದ ಯಾವುದು ಪರತತ್ವ ಯಾವುದು ಅಪರತತ್ವ. ಯಾವುದು ಶ್ರೋತವ್ಯ ಯಾವುದು ಅಲ್ಲ ಎಂಬ ಪರಿಜ್ಞಾನ ಅವರಿಗೆ ಇಲ್ಲವಾಗಿದೆ ಎಂದರ್ಥ.

★★★

ನಿದ್ರೆ, ಬಂಧಕ ಪ್ರಕೃತಿ ಏನು ಮಾಡುತ್ತದೆ? ವಿಚಾರವಂತರಾದ ದಾರ್ಶನಿಕರೂ ಪರಾಪರತತ್ವಗಳನ್ನು ತಿಳಿದುಕೊಳ್ಳುವಲ್ಲಿ ಏಕೆ ವಿಫಲರಾಗುತ್ತಾರೆ? ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ—

ದೇಹಾಪತ್ಯಕಲತ್ರಾದಿಷ್ವಾತ್ಮದೈನ್ಯೇಷ್ವಸತ್ಸ್ವಪಿ ।
ತೇಷು ಪ್ರಸಕ್ತೋ ನಿಧನಂ ಪಶ್ಯನ್ನಪಿ ನ ಪಶ್ಯತಿ ॥ ೪ ॥

ಅಮಂಗಲಕರಗಳು ತನಗೇ ದೈನ್ಯ ಸ್ಥಿತಿ ತಂದುಕೊಡುವವು ಶರೀರ ಮಕ್ಕಳು ಹೆಂಡತಿ ಮೊದಲಾದವು. ಅವುಗಳಲ್ಲಿಯೆ ಹೆಚ್ಚಿನ ಆಸಕ್ತಿ ವಹಿಸಿ, ಬಂಧು ಮರಣಗಳ ದೃಷ್ಟಾಂತ ಕಾಣುತ್ತಿದ್ದರೂ ತನಗೆ ಮರಣವಿದೆ ಎಂಬುದನ್ನು ತಿಳಿದೂ ತಿಳಿಯ

ದಂತಾಗುತ್ತಾನೆ. ಬಂಧಕ ಪ್ರಕೃತಿಯಿಂದುಂಟಾದ ಅತಿಯಾದ ಆಸಕ್ತಿಯೆ ಇದಕ್ಕೆ ಮೂಲಕಾರಣ.

ಇಲ್ಲಿ ಅಸತ್ ಎಂದರೆ ಮಿಥ್ಯೆ ಎಂದೂ ನಶ್ವರವೆಂದೂ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ.[೧] ಅದು ಸರಿಯಲ್ಲ.

ಅಸತ್ಸು ಅಭದ್ರೇಷು । ಸದ್ಭಾವೇ ಸಾಧುಭಾವೇ ಚೇತಿ ವಚನಾತ್ ।

ಅಸತ್ ಎಂದರೆ ಅಮಂಗಲಕರ, ದುಷ್ಟ.

'ಸತ್ಯ, ಮಂಗಳಕರ ಎಂಬ ಅರ್ಥಗಳಲ್ಲಿಯೂ 'ಸತ್' ಶಬ್ದ ಪ್ರಯೋಗವಿದೆ' ಎಂದು ಭಗವದ್ಗೀತೆಯಲ್ಲಿ ಉಕ್ತವಾಗಿದೆ.

★★★

ಕೃತಾರ್ಥರಾದ ಮುಕ್ತರೂ ಕೂಡ ಶ್ರವಣಕೀರ್ತನಾದಿಗಳನ್ನು ಸದಾ ಮಾಡುತ್ತಾರೆ ಎಂದಮೇಲೆ ಜಿಜ್ಞಾಸು ಮುಮುಕ್ಷುಗಳ ಬಗ್ಗೆ ಏನು ಹೇಳಬೇಕು?—

ಪ್ರಾಯೇಣ ಮುನಯೋ ರಾಜನ್ ನಿವೃತ್ತಾ ವಿಧಿನಿಷೇಧತಃ ।
ನೈರ್ಗುಣ್ಯಸ್ಥಾ ರಮಂತೇ ಸ್ಮ ಗುಣಾನುಕಥನೇ ಹರೇಃ ॥ ೭ ॥

ಮುಕ್ತರಾದ ಜ್ಞಾನಿಗಳು ವಿಧಿ ನಿಷೇಧಾತೀತರಾದರೂ ಹೆಚ್ಚಾಗಿ, ಅಂದರೆ ಧ್ಯಾನಕಾಲ ಬಿಟ್ಟು ಬೇರೆಲ್ಲ ಕಾಲದಲ್ಲಿ ಹರಿಯ ಗುಣಗಾನದಲ್ಲಿಯೆ ಸುಖಿಸುತ್ತಾರೆ.

ಇಲ್ಲಿ 'ಪ್ರಾಯೇಣ' ಹೆಚ್ಚಾಗಿ, ಹರಿಯ ಗುಣಗಾನ ಮಾಡುತ್ತಾರೆ, ಕೆಲವೊಮ್ಮೆ ಮಾಡುವುದಿಲ್ಲ ಎಂದಿದೆ. ಇದಕ್ಕೆ ಏನು ಅಭಿಪ್ರಾಯ? 'ನೈರ್ಗುಣ್ಯಸ್ಥಾಃ' ಎಂಬ ಶಬ್ದದ ಅರ್ಥವೇನು? ಮುಕ್ತರೂ ಕೂಡ ಹರಿಯ ಗುಣಗಾನ ಮಾಡುತ್ತಾರೆ ಎನ್ನಲು ಏನು ಪ್ರಮಾಣ?

ಧ್ಯಾನಾಪೇಕ್ಷಯಾ ಪ್ರಾಯೇಣ । ನೈರ್ಗುಣ್ಯಸ್ಥಾ ಮುಕ್ತಾಃ ।
ಏತತ್ ಸಾಮ ಗಾಯನ್ನಾಸ್ತೇ ಇತಿ ಶ್ರುತೇಃ ।

ಮುಕ್ತರು ಕೆಲವೊಮ್ಮೆ ಧ್ಯಾನಮಾಡುತ್ತಿರುವುದರಿಂದ ಆಗ ಮಾತ್ರ ಗುಣಗಾನ

---

೧. ಅಸತ್ಸು ಮಿಥ್ಯಾಭೂತೇಷು । -ಶ್ರೀಧರಃ

ಅಸತ್ಸು ಅಂತವತ್ಸು । -ವೀರರಾಘವಃ

ಅಸತ್ಸ್ವಪಿ ಜೀವಾತ್ಮನೋ ದೇಹಾದಿ ಸಂಬಂಧಾಭಾವಾನ್ಮಿಥ್ಯಾಭೂತೇಷ್ವಪಿ । -ವಿಶ್ವನಾಥಃ

ವಿಲ್ಲ, ನೈರ್ಗುಣ್ಯಸ್ಥರೆಂದರೆ ಮುಕ್ತರು. 'ಮುಕ್ತಬ್ರಹ್ಮನು ಈ ಸಾಮವನ್ನು ಗಾನ ಮಾಡುತ್ತ ಇರುತ್ತಾನೆ' ಎಂದು ಶ್ರುತಿ ಇರುವುದರಿಂದ ಮುಕ್ತರೂ ಹರಿಯ ಗುಣಗಾನ ಮಾಡುತ್ತಾರೆ.

ಮುಕ್ತರು ಕೆಲವೊಮ್ಮೆ ಹರಿಯ ಗುಣಗಾನ ಮಾಡುವುದಿಲ್ಲವೆನ್ನುವುದು ನಿಜವೆ. ಆದರೆ ಆಗಲೂ ಹರಿಧ್ಯಾನವನ್ನೇ ಮಾಡುತ್ತಾರೆ ಹೊರತು ಲೌಕಿಕ ವ್ಯವಹಾರ ಮಗ್ನರಾಗುವುದಿಲ್ಲ. ಸತ್ವಾದಿ ಗುಣತ್ರಯ ರಹಿತನಾದ ವಿಷ್ಣು ನಿರ್ಗುಣನೆನಿಸುತ್ತಾನೆ. ಅವನ ಸ್ಥಾನ ನೈರ್ಗುಣ್ಯ, ಅಂದರೆ ಮೋಕ್ಷ, ಅಲ್ಲಿರುವವರು ನೈರ್ಗುಣ್ಯಸ್ಥರು, ಮುಕ್ತರೆಂದರ್ಥ. ತೈತ್ತಿರೀಯ ಉಪನಿಷತ್ತಿನಲ್ಲಿ ಭೃಗುವಲ್ಲಿಯಲ್ಲಿ ಮುಕ್ತಬ್ರಹ್ಮನು ಸಾಮಗಾನ ಮಾಡುತ್ತಾನೆ ಎಂದಿದೆ 'ಏತತ್ ಸಾಮಗಾಯನ್ನಾಸ್ತೇ ಹಾವು ಹಾವು ಹಾವು' ಎಂದು ಮುಂತಾಗಿ.

ವಿಧಿನಿಷೇಧಾತೀತರು ನೈರ್ಗುಣ್ಯಸ್ಥರು ಎಂದರೆ ವಿಧಿನಿಷೇಧಾತ್ಮಕ ವೇದೋಕ್ತ ಕಾಮ್ಯಕರ್ಮಗಳನ್ನು ಪರಿತ್ಯಜಿಸಿ ತ್ರಿಗುಣಾತೀತನಾದ ಪರಮಾತ್ಮನನ್ನು ಉಪಾಸನ ಮಾಡುವವರೆಂದು ವೀರರಾಘವ ವ್ಯಾಖ್ಯಾನ. ಆದರೆ ವೇದೋಕ್ತ ಕಾಮ್ಯಕರ್ಮವನ್ನು ಬಿಟ್ಟ ಮಾತ್ರಕ್ಕೆ ವೇದವನ್ನೇ ಪರಿತ್ಯಾಗ ಮಾಡಿದಂತಾಗದು. ಅದರಿಂದ ಪ್ರಾಯೇಣ ಹೆಚ್ಚಾಗಿ ವಿಧಿನಿಷೇಧಾತೀತರೆನ್ನುವುದು ಕೂಡಲಾರದು. ನಿರ್ಗುಣ ಪರಮಾತ್ಮನಲ್ಲಿ ಸಾಯುಜ್ಯ ಹೊಂದಿದವರೂ ಹರಿಯ ಗುಣಗಾನ ಮಾಡುತ್ತಾರೆ, ಸಾಯುಜ್ಯ ಸುಖಕ್ಕಿಂತ ಕೀರ್ತನ ಸುಖ ಹೆಚ್ಚಿನದು. ಜೀವನ್ಮುಕ್ತರು ಮಾತ್ರ ಕೇವಲ ಸಾಯುಜ್ಯಕ್ಕಾಗಿ ಕೀರ್ತನ ಮಾಡುತ್ತಾರೆ ಎನ್ನುತ್ತದೆ ವಿಶ್ವನಾಥ ವ್ಯಾಖ್ಯಾನ. ಆದರೆ ಜೀವನ್ಮುಕ್ತರು ಅದೇಕೆ ಹಾಗೆ ಮಾಡುತ್ತಾರೆ ಎನ್ನಲು ಕಾರಣವಿಲ್ಲ. ವಸ್ತುತಃ ಸಾಯುಜ್ಯಮುಕ್ತರು ವಿಧಿ ನಿಷೇಧಾತೀತರಾದರೂ ಹರಿಕೀರ್ತನೆ ಮಾಡುತ್ತ ಸ್ವರೂಪಾನಂದ ಅಭಿವ್ಯಕ್ತಿ ಮಾಡಿಕೊಳ್ಳುತ್ತಾರೆ. ಅದೇ ಸಾಯುಜ್ಯಸುಖ, ಅದೇ ಕೀರ್ತನಸುಖ.

★★★

ಸದಾ ಹರಿಯ ಕಥಾಶ್ರವಣ ಕೀರ್ತನಾದಿಗಳನ್ನು ಮಾಡಲು ಯೋಗ್ಯವಾದ ಉತ್ತಮ ಗ್ರಂಥ ಭಾಗವತ ಎನ್ನುತ್ತಾರೆ, ಶುಕಮುನಿ ಪರೀಕ್ಷಿತನಿಗೆ—

ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಂಮಿತಂ ।
ಅಧೀತವಾನ್ ದ್ವಾಪರಾದೌ ಪಿತುರ್ದ್ವೈಪಾಯನಾದಹಂ ॥ ೮ ॥

ಈ ಭಾಗವತವೆಂಬ ಪುರಾಣ ವೇದಕ್ಕೆ ಸಮಾನ. ಇದನ್ನು ನಾನು ದ್ವಾಪರದಲ್ಲಿ ಕೃಷ್ಣಾವತಾರಕ್ಕೆ ಮೊದಲೇ ತಂದೆಯಾದ ವೇದವ್ಯಾಸರಿಂದ ಅಧ್ಯಯನ ಮಾಡಿದ್ದೇನೆ.

ಇಲ್ಲಿ 'ದ್ವಾಪರಾದೌ' ಎಂದರೆ ದ್ವಾಪರಯುಗದ ಆದಿಭಾಗದಲ್ಲಿ ಎಂದು

ಹೇಳಿದಂತಾಗುತ್ತದೆ. ಆದರೆ ದ್ವಾಪರದ ಆದಿಭಾಗದಲ್ಲಿ ವ್ಯಾಸಾವತಾರವೆ ಆಗಿಲ್ಲ. ಅಂತ್ಯಭಾಗದಲ್ಲಿ ಆಯಿತು. ಬೇರೆ ವ್ಯಾಖ್ಯಾನಕಾರರಲ್ಲಿ 'ದ್ವಾಪರಃ ಆದಿಃ ಯಸ್ಯ ಕಾಲಸ್ಯ ತಸ್ಮಿನ್ ದ್ವಾಪರಾಂತೇ' ದ್ವಾಪರವೆ ಆದಿಯಾಗಿ ಉಳ್ಳದ್ದು ದ್ವಾಪರಾಂತ ಎಂದು ಶ್ರೀಧರವ್ಯಾಖ್ಯಾನ. ಆದರೆ ದ್ವಾಪರವು ಆದಿಯಾಗಿ ಉಳ್ಳದ್ದು ಕಲಿಯುಗವಾದೀತು ಹೊರತು ದ್ವಾಪರವಾಗಲಾರದು. ದ್ವಾಪರವೆಂದರೆ ಲಕ್ಷಣಾವೃತ್ತಿಯಿಂದ ದ್ವಾಪರದ ಅಂತ್ಯ, ಅವಸಾನ. ಅದರ ಆದಿ ಎಂದು ವಿಶ್ವನಾಥ ವ್ಯಾಖ್ಯಾನ. ಹೀಗೆ ಹೇಳಿದರೂ ಅವಸಾನದ ಆದಿಯಲ್ಲಿ ಇರುವುದು ದ್ವಾಪರದ ಕೊನೆ ಭಾಗ ಎಂದು ಸ್ಪಷ್ಟವಾಗುವುದಿಲ್ಲ. ಅವಸಾನದ ಆದಿಯಲ್ಲಿ ಇಡೀ ದ್ವಾಪರವಿರುತ್ತದೆ. ವೀರರಾಘವ ವ್ಯಾಖ್ಯಾನದಲ್ಲಿ ದ್ವಾಪರವೇ ಆದಿಯಾಗಿ ಉಳ್ಳುದ್ದು ಕಲಿಯುಗದ ಆದಿ ಎಂದಿದೆ.[೧] ಕಲಿಯುಗದ ಆದಿಯಲ್ಲಿ ವ್ಯಾಸಾವತಾರವಲ್ಲ. 'ತ್ರಿಯುಗಹೂತಿ' ಎಂದು ಪ್ರಸಿದ್ಧಿ ಇರುವುದರಿಂದ ಕಲಿಯುಗದಲ್ಲಿ ಯಾವ ಅವತಾರವೂ ಇಲ್ಲ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ—

ದ್ವಾಪರೇ, ಆದೌ ಚ ಕೃಷ್ಣಾವತಾರಾಪೇಕ್ಷಯಾ ।
ವ್ಯಾಸಃ ಷಟ್ ಶತ ವರ್ಷೀಯೋ ಧೃತರಾಷ್ಟ್ರಮಜೀಜನತ್ ॥

ಇತಿ ಸ್ಕಾಂದೇ।

ದ್ವಾಪರದಲ್ಲಿ, ಅದರಲ್ಲಿಯೂ ಕೃಷ್ಣಾವತಾರಕ್ಕಿಂತ ಮೊದಲು ಎಂದರ್ಥ. ವೇದವ್ಯಾಸರು ಆರುನೂರು ವರ್ಷ ವಯಸ್ಸಿನವರಾಗಿದ್ದಾಗ ಧೃತರಾಷ್ಟ್ರನನ್ನು ಹುಟ್ಟಿಸಿದರೆಂದು ಸ್ಕಾಂದ ಪುರಾಣದಲ್ಲಿದೆ.

ದ್ವಾಪರಾದೌ ಎಂಬುದು ಎರಡು ಪದ. ದ್ವಾಪರೇ ಆದೌ ಎಂದು ದ್ವಾಪರೇ ಎಂಬ ಸಪ್ತಮೀ ಲೋಪ ಆರ್ಷಪ್ರಯೋಗ. ಆದೌ ಎಂದರೆ ಕೃಷ್ಣಾವತಾರಕ್ಕಿಂತ ಮೊದಲು. 'ದ್ವಾಪರೇ ಚಾದೌ ಚ' ಎಂಬ ತಾತ್ಪರ್ಯಪಾಠದಲ್ಲಿ ದ್ವಾಪರ ಆದಿ ಶಬ್ದಗಳಿಗೆ ದ್ವಂದ್ವ ಸಮಾಸ ಏಕವಚನ. ಸಪ್ತಮೀಲೋಪ ಬೇಕಾಗಿಲ್ಲ.

ಕೃಷ್ಣಾವತಾರ ದ್ವಾಪರದ ಕೊನೆಭಾಗದಲ್ಲಾದುದರಿಂದ ಅದರ ಪೂರ್ವದಲ್ಲಿ ಎಂದರೆ ಅದೂ ದ್ವಾಪರದ ಕೊನೆಯೆ ಎಂದಂತಾಯಿತು. ದ್ವಾಪರದ ಆದಿಯಲ್ಲಿ ವ್ಯಾಸಾವತಾರವಂತೂ ಅಲ್ಲ. ಏಕೆಂದರೆ ಸ್ಕಾಂದಪುರಾಣದಲ್ಲಿ 'ವ್ಯಾಸರು

---

೧. ದ್ವಾಪರಃ ಆದಿರ್ಯಸ್ಯ ಕಾಲಸ್ಯ ತಸ್ಮಿನ್ ದ್ವಾಪರಾಂತೇ । -ಶ್ರೀಧರಃ

ದ್ವಾಪರ ಶಬ್ದೇನ ದ್ವಾಪರಾಂತ ಏವ ಲಕ್ಷ್ಯತೇ ತತಶ್ಚ ದ್ವಾಪರಸ್ಯ ದ್ವಾಪರಾಂತಸ್ಯ ಆದೌ ದ್ವಾಪರೋಪಾಂತೇ । -ವಿಶ್ವನಾಥಃ

ದ್ವಾಪರಃ ಆದಿರ್ಯಸ್ಯ ಸ ದ್ವಾಪರಾದಿಃ ಕಲಿಯುಗಾದಿಃ । -ವೀರರಾಘವಃ

ಧೃತರಾಷ್ಟ್ರನನ್ನು ಹುಟ್ಟಿಸಿದಾಗ ಅವರಿಗೆ ಆರುನೂರು ವರ್ಷ ವಯಸ್ಸು' ಎಂದಿದೆ. ಧೃತರಾಷ್ಟ್ರ ದ್ವಾಪರದ ಅಂತ್ಯಭಾಗದಲ್ಲಿ ಹುಟ್ಟಿದನೆಂಬುದು ಭಾರತದಲ್ಲಿ ಸ್ಪಷ್ಟವಿದೆ ಎಂದಮೇಲೆ ವ್ಯಾಸರು ಇದ್ದುದೂ ದ್ವಾಪರದ ಅಂತ್ಯಭಾಗದಲ್ಲಿ ಎಂದು ಸಿದ್ಧವಾಗುತ್ತದೆ. ಏಕೆ ಈ ಪ್ರಯಾಸ? 'ದ್ವಾಪರಾದೌ' ಎಂಬುದಕ್ಕಿಂತ ದ್ವಾಪರಾಂತೇ ಎಂದೇ ಹೇಳಬಹುದಿತ್ತು ಎಂಬ ಪ್ರಶ್ನೆ ಸಹಜ. ಆದರೆ ಕೃಷ್ಣಾವತಾರಕ್ಕೆ ಮೊದಲು ಎಂಬ ಅಂಶವನ್ನು ಪರ್ಯಾಯವಾಗಿ ಹೇಳಬೇಕಾಗಿದೆ. ಕೃಷ್ಣಾವತಾರಕ್ಕೆ ಮೊದಲೇ ಕೃಷ್ಣಾವತಾರದ ಕಥೆಯನ್ನು ಹೇಳಬೇಕೆಂದರೆ ವ್ಯಾಸರು ಸರ್ವಜ್ಞರೇ ಆಗಿರಬೇಕೆಂದು ಇದರಿಂದ ಸಿದ್ಧವಾಗುವುದು.

★★★

ನೀವು ಅಪರೋಕ್ಷಜ್ಞಾನಿಗಳು, ನಿಮಗೆ ಮುಕ್ತಿ ನಿಶ್ಚಿತ. ಹಾಗಿದ್ದರೂ ಏಕೆ ಭಾಗವತಾಧ್ಯಯನ ಮಾಡಿದಿರಿ ಎಂದು ಪ್ರಶ್ನೆ ಮಾಡಿಕೊಂಡು ಉತ್ತರವನ್ನು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ—

ಪರಿನಿಷ್ಠಿತೋಽಪಿ ನೈರ್ಗುಣ್ಯ ಉತ್ತಮಶ್ಲೋಕಲೀಲಯಾ ।
ಗೃಹೀತಚೇತಾ ರಾಜರ್ಷ ಆಖ್ಯಾನಂ ಯದಧೀತವಾನ್ ॥ ೯ ॥

ರಾಜರ್ಷಿ, ನನಗೆ ಮುಕ್ತಿ ನಿಶ್ಚಿತವೇ ಆಗಿದ್ದರೂ ಭಗವಂತನ ಲೀಲೆಯಿಂದ ಆಕರ್ಷಿತನಾಗಿ ನಾನು ಭಾಗವತವನ್ನು ಅಧ್ಯಯನ ಮಾಡಿದೆ.

ಇಲ್ಲಿ 'ನೈರ್ಗುಣ್ಯೇ ಪರಿನಿಷ್ಠಿತಃ' ಎಂದರೆ 'ನಿರ್ಗುಣಬ್ರಹ್ಮ ಧ್ಯಾನದಲ್ಲಿರುವವನು' ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಬ್ರಹ್ಮಾನಂದ ಮಗ್ನನಿಗೂ ಭಜನಾನಂದ ಆಕರ್ಷಕ ಎಂದು ಅಭಿಪ್ರಾಯವನ್ನು ಹೇಳುತ್ತಾರೆ.[೧] ಇದು 'ಯೇ ಮಂದಾಸ್ತೇಽನುಕಂಪ್ಯಂತೇ ಸವಿಶೇಷನಿರೂಪಣೈಃ' ನಿರ್ಗುಣಧ್ಯಾನಾಸಮರ್ಥರಿಗಾಗಿ ಅನುಕಂಪೆಯಿಂದ ಸಗುಣಧ್ಯಾನ ವಿಹಿತವಾಗಿದೆ ಎನ್ನುವ ಅವರ ವಾದಕ್ಕೇ ವಿರುದ್ಧ. ಅದರಿಂದ ಹೀಗೆ ಹೇಳಬೇಕು—

ಪರಿನಿಷ್ಠಿತೋಽಪಿ ಮುಕ್ತಿರಸ್ಯ ಭವಿಷ್ಯತೀತಿ ನಿಶ್ಚಿತೋಽಪಿ ।
ಉದರಂ ಸಂಶಯಃ ಪ್ರೋಕ್ತಃ ಪರಿನಿಷ್ಠಾ ವಿನಿಶ್ಚಯಃ ।
ಇತ್ಯಭಿಧಾನೇ ।

---

೧. ಬ್ರಹ್ಮಾನುಭವಾದಪಿ ಲೀಲಾಯಾ ಮಾಧುರ್ಯಾಧಿಕ್ಯೇಽಹಮೇವ ಪ್ರಮಾಣಮಿತಿ ಭಾವಃ । -ವಿಶ್ವನಾಥಃ

ನೈರ್ಗುಣ್ಯೇ ಗುಣಾತೀತೇ ಬ್ರಹ್ಮಣಿ ಪರಿನಿಷ್ಠಿತಃ ಪರ್ಯವಸಿತಾಂತಃಕರಣೋಽಪಿ । ಬ್ರಹ್ಮಾನಂದೇ ಸ್ಥಿತಸ್ಯಾಪಿ ಭಜನಾನಂದ ಆಕರ್ಷಕಃ । -ಗಿರಿಧರಃ

ಋಷ್ಯುತ್ತಮಾ ದೇವತಾಶ್ಚ ವಿಮುಕ್ತೌ ಪರಿನಿಶ್ಚಿತಾಃ ।
ತಥಾಪ್ಯಧಿಕಸೌಖ್ಯಾರ್ಥಂ ಯತಂತೇ ಶುಭಕರ್ಮಸು ॥
ವಿಮುಕ್ತಾಸ್ತು ಸ್ವಭಾವೇನ ನಿತ್ಯಂ ಧ್ಯಾನಾದಿ ತತ್ಪರಾಃ ॥

ಇತಿ ಗಾರುಡೇ ।

ಪರಿನಿಷ್ಠಿತೋಽಪಿ ಎಂದರೆ ಮುಕ್ತಿ ಈತನಿಗೆ ಆಗುವುದೆಂದು ನಿಶ್ಚಿತವಾಗಿರುವವನಾಗಿದ್ದರೂ ಎಂದರ್ಥ. ಸಂಶಯ 'ಉದರ'ವೆನಿಸುತ್ತದೆ. ನಿಶ್ಚಯ 'ಪರಿನಿಷ್ಠಾ' ಎನಿಸುತ್ತದೆ ಎಂದು ಅಭಿಧಾನ ಗ್ರಂಥದಲ್ಲಿದೆ.

ಋಷಿಶ್ರೇಷ್ಠರಿಗೂ ದೇವತೆಗಳಿಗೂ ಮುಕ್ತಿ ನಿಶ್ಚಿತ. ಆದರೂ ಮೋಕ್ಷದಲ್ಲಿ ಅಧಿಕ ಆನಂದಕ್ಕಾಗಿ ಅವರು ಶುಭಕರ್ಮಗಳಲ್ಲಿ ಪ್ರವೃತ್ತಿ ಮಾಡುತ್ತಾರೆ. ಮುಕ್ತರು ತಮ್ಮ ಸ್ವಭಾವಬಲದಿಂದ ಸದಾ ಧ್ಯಾನಾದಿತತ್ಪರರಾಗುತ್ತಾರೆ ಎಂದು ಗರುಡಪುರಾಣದಲ್ಲಿ ಹೇಳಿದೆ.

★★★

ಮೋಕ್ಷಸಾಧಕನು ಮೊದಲಿಗೆ ವಿಷಯಪದಾರ್ಥ ಸೇವನೆಯಿಂದ ವ್ಯಗ್ರವಾದ ಮನಸ್ಸನ್ನು ಆನಂದಮಯನಾದ ಭಗವಂತನ್ನಲ್ಲಿರಿಸಿ ಪರಮಾನಂದ ಪಡೆಯಬೇಕು ಎನ್ನುತ್ತಾರೆ ಶುಕಮುನಿ ಪರೀಕ್ಷಿತನಿಗೆ—

ನಿಯಚ್ಛೇದ್ ವಿಷಯೇಭ್ಯೋಽಕ್ಷಾನ್ ಮನಸಾ ಬುದ್ಧಿಸಾರಥಿಃ ।
ಮನಃ ಕರ್ಮಭಿರಾಕ್ಷಿಪ್ತಂ ಶುಭಾರ್ಥೇ ಧಾರಯೇದ್ ಧಿಯಾ ॥ ೧೮ ॥

ವಿಷಯ ಸುಖ ಅನಿತ್ಯವೆಂಬ ಬುದ್ಧಿಯನ್ನು ಸಾರಥಿಯಾಗಿ ಮಾಡಿಕೊಂಡು ಮನಸ್ಸನ್ನು ನಿಗ್ರಹಿಸಿ ಅಂದರೆ ಮನೋಭಿಮಾನಿಯ ಅನುಗ್ರಹ ಸಂಪಾದಿಸಿ ಆಮೂಲಕ ಇಂದ್ರಿಯಗಳನ್ನೂ ಅವುಗಳ ಅಭಿಮಾನಿಗಳ ಅನುಗ್ರಹದಿಂದ ವಿಷಯಗಳಿಂದ ಈಚೆಗೆ ಸೆಳೆದುಕೊಳ್ಳಬೇಕು. ಸಾರಥಿ ರೂಪವಾದ ಬುದ್ಧಿಯಿಂದ ಅಶುಭ ವಿಷಯ ಸೇವನೆಯಿಂದ ವ್ಯಗ್ರವಾದ ಮನಸ್ಸನ್ನು ಶುಭನಾದ ಆನಂದಮಯನಾದ ಪರಮಾತ್ಮನಲ್ಲಿ ತಂದು ನಿಲ್ಲಿಸಬೇಕು. ಆಗ ಪರಮಾನಂದಲಾಭ. ದಾರಿದ್ರ್ಯದಿಂದ ಬಳಲಿದವನಿಗೆ ಮಹಾನಿಧಿ ಸಿಕ್ಕಿದಂತಾಗುತ್ತದೆ.

ಇಲ್ಲಿ 'ಶುಭಾರ್ಥೇ' ಎಂದರೆ ಯಾವುದಾದರೊಂದು ಒಳ್ಳೆಯ ವಿಷಯ ಪದಾರ್ಥವಲ್ಲ.

ಶುಭಾರ್ಥೇ ಭಗವತಿ ।

ಶುಭಾರ್ಥವೆಂದರೆ ಆನಂದಮಯನಾದ ಭಗವಂತ.

★★★

ಭಗವಂತನಲ್ಲಿ ಮನಸ್ಸನ್ನಿಡುವುದೆಂದರೆ ಒಮ್ಮೆಗೇ ಭಗವಂತನ ಎಲ್ಲ ಅವಯವಗಳನ್ನು ಧ್ಯಾನಿಸಲು ಅಶಕ್ತನಾದವನು ಒಂದೊಂದೇ ಅವಯವವನ್ನು ಕ್ರಮವಾಗಿ ಧ್ಯಾನಿಸಬೇಕು—

ತತ್ರೈಕಾವಯವಂ ಧ್ಯಾಯೇದವ್ಯುಚ್ಛಿನ್ನೇನ ಚೇತಸಾ ।
ಮನೋ ನಿರ್ವಿಷಯಂ ಯುಂಕ್ತ್ವಾ ತತಃ ಕಿಂಚಿನ್ನ ಸಂಸ್ಮರೇತ್
ಪದಂ ತತ್ ಪರಮಂ ವಿಷ್ಣೋರ್ಮನೋ ಯತ್ರ ಪ್ರಸೀದತಿ ॥ ೧೯ ॥

ಒಂದೊಂದು ಭಗವದವಯವವನ್ನು ವಿಷಯವಾಸನಾರಹಿತವಾದ ಮನಸ್ಸಿನಿಂದ ಧ್ಯಾನಿಸಬೇಕು. ಬಳಿಕ ಸರ್ವಾವಯವ ಯುಕ್ತನಾದ ಭಗವಂತನಲ್ಲಿ ವಿಷಯಾಲೋಚನೆಯಿಲ್ಲದ ಮನಸ್ಸನ್ನು ನಿಲ್ಲಿಸಿ ಬೇರಾವುದನ್ನೂ ಸ್ಮರಿಸದಿರಬೇಕು.

ಇಲ್ಲಿ 'ಮನೋ ನಿರ್ವಿಷಯಂ ಯುಂಕ್ತ್ವಾ' ಎಂದರೆ ಯಾವ ವಿಷಯವಿಲ್ಲದಂತೆ ಮಾಡಿ ಮನಸ್ಸನ್ನು ವಿಷಯದಲ್ಲಿ ನಿಲ್ಲಿಸಬೇಕು ಎನ್ನುವುದು ವ್ಯಾಹತ. ಕಿಂಚಿನ್ನ ಸಂಸ್ಮರೇತ್ ಏನನ್ನೂ ಸ್ಮರಿಸಬಾರದು ಎಂದರೆ ಅದು ಅಶಕ್ಯ. ವಲ್ಲಭಾಚಾರ್ಯ ವ್ಯಾಖ್ಯಾನ ಹೇಳುತ್ತದೆ— ಮನಸ್ಸು ಯಾವ ವಿಷಯವನ್ನೂ ಚಿಂತಿಸದಂತೆ ಮಾಡಬೇಕು. ಮನಸ್ಸಿನ ಸರ್ವವೃತ್ತಿಗಳನ್ನೂ ನಿರೋಧಿಸಬೇಕು. ಏನನ್ನೂ ಸ್ಮರಿಸಕೂಡದು ಚಿತ್ತನಿರೋಧ ಮಾಡಬೇಕು ಎಂದು. ಶುಕದೇವ ವ್ಯಾಖ್ಯಾನದಲ್ಲಿ ಹೇಳಿದೆ— ಮನಸ್ಸು ಕಣ್ಣಿಗೆ ಕನ್ನಡಕದಂತೆ ಜೀವನಿಗೆ ಒಂದು ಸಾಧನ. ಮನಸ್ಸೆಂಬ ಕನ್ನಡಕವನ್ನು ಭಗವಂತನಿಂದ ಆಚೆಗಿಟ್ಟು ಜೀವ ತಾನೇ ಭಗವಂತನನ್ನು ಆಲಿಂಗಿಸಬೇಕು. ಸಾಧನವಾದ ಮನಸ್ಸು ಮೊದಲಾದುವನ್ನೂ ಚಿಂತಿಸಕೂಡದು ಎಂದು.[೧] ಆದರೆ ಧ್ಯಾನವನ್ನು ಇಲ್ಲಿ ಹೇಳುತ್ತಿದ್ದಾರೆ. ಧ್ಯಾನವು ಒಂದು ಮನೋವೃತ್ತಿ. ಮನಸ್ಸನ್ನು ಉಪರತಗೊಳಿಸಿ ಧ್ಯಾನ ಶಕ್ಯವಿಲ್ಲ. ಆದರಿಂದ ಹೀಗೆ ಹೇಳಬೇಕು—

---

೧. ಮನಃ ಸರ್ವಥಾ ನಿರ್ವಿಷಯಂ ಯುಕ್ತ್ವಾ ಯೋಗಸಂಹಿತಂ ಕೃತ್ವಾ ಸರ್ವ ವೃತ್ತಿನಿರೋಧಂ ಕೃತ್ವೇತ್ಯರ್ಥಃ । ತತಃ ಕಿಮಪಿ ನ ಸಂಸ್ಮರೇತ್ ಯೋಗ ಸಾಧಿತಪ್ರಯತ್ನೇನ ಚಿತ್ತಂ ನಿರುಧ್ಯ ತಿಷ್ಠೇತ್ । -ವಲ್ಲಭಾಚಾರ್ಯಃ

ಮನೋ ನಿರ್ವಿಷಯಂ ಕೃತ್ವಾ ಕರಣರೂಪಂ ಮನ ಉಪನೇತ್ರೋಪಮಂ ಭಗವದ್ರೂಪಾದಪಸಾರ್ಯ ಜ್ಞಾತ್ವೈವ ಕೇವಲಃ ಪಾದಪದ್ಮಾದ್ಯಾಲಿಂಗನಂ ಕುರ್ಯಾತ್ । ಕಿಂಚನ ಕರಣಾದಿಕಮಪಿ ನ ಸ್ಮರೇದಿತ್ಯರ್ಥಃ । -ಶುಕದೇವಃ

ವಿಷಯೇಭ್ಯೋ ನಿರ್ಗತ್ಯ ತತ್ರೈವ ಮನೋ ಯುಂಕ್ತ್ವಾऽನ್ಯನ್ನ ಸ್ಮರೇತ್ ॥

'ನಿರ್ವಿಷಯ' ಎಂದರೆ ವಿಷಯಪದಾರ್ಥದಿಂದ ನಿರ್ಗಮನ ಹೊಂದಿದ ಮನಸ್ಸನ್ನು ಭಗವಂತನಲ್ಲೇ ನಿಲ್ಲಿಸಿ ಬೇರೆ ಏನನ್ನೂ ಸ್ಮರಿಸದಿರಬೇಕು.

★★★

ಭಗವದವಯವ ಧ್ಯಾನದಿಂದ ಮನಸ್ಸು ನಿರ್ಮಲವಾಗುವುದು ಮಾತ್ರವಲ್ಲದೆ ಮನೋನಿಗ್ರಹಕ್ಕೆ ಸಾಧನವಾದ ಭಕ್ತಿಯೂ ಲಭಿಸುತ್ತದೆ—

ಯಸ್ಯಾಂ ಸಂಧಾರ್ಯಮಾಣಾಯಾಂ ಯೋಗಿನೋ ಭಕ್ತಿಲಕ್ಷಣಃ ।
ಆಶು ಸಂಪದ್ಯತೇ ಯೋಗ ಆಶ್ರಯಂ ಭದ್ರಮೀಕ್ಷತಃ ॥ ೨೦ ॥

ಒಂದೊಂದಾಗಿ ಭಗವಂತನ ಅವಯವಧ್ಯಾನವನ್ನು ಮಾಡುತ್ತಿದ್ದರೆ ಸಕಲ ಜಗದಾಶ್ರಯನಾದ ಭದ್ರನನ್ನು, ಅಂದರೆ, ಭಗವಂತನನ್ನು ಚಿಂತಿಸುವ, ಮನೋನಿಗ್ರಹೋಪಯೋಗಿ ಸಾಧನವನ್ನು ನಡೆಸುವ ಸಾಧಕನಿಗೆ ಭಕ್ತಿ ಎಂಬ ಮನೋನಿಗ್ರಹಸಾಧನ ಬೇಗನೆ ಸಿದ್ಧಿಸುತ್ತದೆ.

ಭದ್ರಂ ಹರಿಂ ।

ಇಲ್ಲಿ ಭದ್ರ ಎಂದರೆ ಹರಿ.

★★★

ಅವಯವ ಧ್ಯಾನವನ್ನು ಹೇಗೆ ಮಾಡಬೇಕು ಎಂಬುದನ್ನು ಶುಕಮುನಿಗಳಲ್ಲಿ ಪರೀಕ್ಷಿತ ಕೇಳುತ್ತಾನೆ—

ಯಥಾ ಸಂಧಾರ್ಯತೇ ಬ್ರಹ್ಮನ್ ಧಾರಣಾ ಯತ್ರ ಸಂಮತಾ ।
ಯಾದೃಶೀ ವಾ ಹರೇದಾಶು ಪುರುಷಸ್ಯ ಮನೋಮಲಂ ॥ ೨೧ ॥

ಮುನಿಯೆ, ಅವಯವಧ್ಯಾನವನ್ನು ಹೇಗೆ ಮಾಡಬೇಕು, ಅದಕ್ಕೆ ವಿಷಯ ಯಾವುದು? ಎಂಥ ಧ್ಯಾನವು ಸಾಧಕನ ಮನೋಮಲವನ್ನು ಬೇಗನೆ ಕಳೆಯುವುದು?

ಬೇರೆ ವ್ಯಾಖ್ಯಾನಕಾರರು ಯತ್ ಶಬ್ದವನ್ನು ಪ್ರಶ್ನಾರ್ಥದಲ್ಲಿ ಇಟ್ಟುಕೊಳ್ಳದೆ 'ಏತತ್ ಸರ್ವಂ ಬ್ರೂಹಿ' ಎಂದು ಶೇಷಪೂರಣ ಮಾಡಬೇಕೆಂದಿದ್ದಾರೆ. ಕಂಠತಃ ಏಕೆ ಹೇಳಿಲ್ಲ ಎಂದರೆ ಗುರುಗಳ ಮುಂದೆ ಹಾಗೆ ಆಜ್ಞೆ ಮಾಡಬಾರದೆಂಬ ಅಭಿಪ್ರಾಯ! ಹಾಗೆ ವಲ್ಲಭ ವ್ಯಾಖ್ಯಾನ ಹೇಳಿದೆ. ಆಜ್ಞೆ ಮಾಡಬಾರದು, ನಿಜ. ಪ್ರಾರ್ಥನೆ ಮಾಡಬಾರದೆ? ಆದರಿಂದ ಹೀಗೆ ಹೇಳಬೇಕು— ಇಲ್ಲಿ 'ಹೇಗೆ, ಯಾವ ವಿಷಯದಲ್ಲಿ, ಯಾವ ರೀತಿಯ ಧ್ಯಾನ ಎಂದು ಮೂರು ಪ್ರಶ್ನೆಗಳು. ಅದಕ್ಕೆ ಕಥಂ,

ಕುತ್ರ, ಕೀದೃಶೀ ಎಂಬ ಕಿಂ ಶಬ್ದಗಳು ಬೇಕಾಗಿದ್ದುವು. ಅವುಗಳ ಬದಲಿಗೆ ಯಥಾ ಯತ್ರ ಯಾದೃಶೀ ಎಂಬ ಯತ್ ಶಬ್ದಗಳಿವೆ. ಈ ಯತ್ ಶಬ್ದಗಳು ಪ್ರಶ್ನಾರ್ಥಕಗಳಲ್ಲ. 'ಯಥಾ ರಾಜಾ ತಥಾ ಪ್ರಜಾಃ' ರಾಜನು ಹೇಗೋ ಹಾಗೆ ಪ್ರಜೆಗಳು. ಇಲ್ಲಿ 'ಹೇಗೋ' ಎಂದು ಪ್ರಶ್ನೆಯಲ್ಲ, ಹೇಗೋ ಹಾಗೆ. ಇಂಥ ಕಡೆಗಳಲ್ಲಿ ಯಚ್ಛಬ್ದ ಬೇಕು. ಪ್ರಶ್ನೆಗೆ ಕಿಂಶಬ್ದ ಬೇಕು. ಪ್ರಕೃತದಲ್ಲಿ ಪರೀಕ್ಷಿತ ಪ್ರಶ್ನೆ ಮಾಡುವುದರಿಂದ, ಕಿಂ ಶಬ್ದ ಬೇಕಾಗಿತ್ತು. ಯಚ್ಛಬ್ದ ಪ್ರಯೋಗಿಸಲಾಗಿದೆ. ಈ ಸಮಸ್ಯೆಗೆ ಸಮಾಧಾನವೇನು? ಮತ್ತು ಈ ಮೂರು ಪ್ರಶ್ನೆಗಳಿಗೆ ಭಾಗವತದಲ್ಲಿ ಮುಂದೆ ಉತ್ತರಗಳು ಎಲ್ಲಿವೆ?

ಯಚ್ಛಬ್ದಃ ಪ್ರಶ್ನೇ । ಯತಶ್ಚೋದೇತಿ ಸೂರ್ಯ ಇತ್ಯಾದಿವತ್ ।
ಯಚ್ಛಬ್ದಸ್ತು ಪರಾಮರ್ಶೇ ಪ್ರಶ್ನಾರ್ಥೇ ಚಾಭಿಭಣ್ಯತೇ ॥

ಇತ್ಯಭಿಧಾನೇ ।

ಯಥೇತ್ಯಸ್ಯ ಜಿತಾಸನ ಇತ್ಯಾದಿ । ಯತ್ರ? ಸ್ಥೂಲೇ । ಯಾದೃಶೀತ್ಯಸ್ಯ ವಿಶೇಷ ಇತ್ಯಾದಿ ।

ಇಲ್ಲಿ ಯಚ್ಛಬ್ದ ಪ್ರಶ್ನಾರ್ಥದಲ್ಲಿದೆ. ಕಾಠಕ (೨.೧.೯)ದಲ್ಲಿ ಸೂರ್ಯನು ಯಾರ ಅಧೀನವಾಗಿ ಉದಿಸುತ್ತಾನೆ ಎನ್ನುವಲ್ಲಿ ಯಚ್ಛಬ್ದವಿರುವಂತೆಯೆ ಇಲ್ಲಿಯೂ ಯಚ್ಛಬ್ದವಿದೆ.[೧] 'ಯಚ್ಛಬ್ದವು 'ಹೇಗೋ ಹಾಗೆ' ಎಂದು ಮುಂತಾಗಿ ಪರಾಮರ್ಶ

---

೧. ಯತಶ್ಚೋದೇತಿ ಸೂರ್ಯೋಽಸ್ತಂ ಯತ್ರ ಚ ಗಚ್ಛತಿ ।
ತಂ ದೇವಾಃ ಸರ್ವೇ ಅರ್ಪಿತಾಸ್ತದು ನಾತ್ಯೇತಿ ಕಶ್ಚನ । ಏತದ್ವೈ ತತ್ ॥

'ಯಾರ ಪ್ರೇರಣೆಯಿಂದ ಸೂರ್ಯ ಉದಿಸುವನೋ ಯಾರ ಅಧೀನದಲ್ಲಿ ಸೂರ್ಯ ಅಸ್ತಮಿಸುವನೋ ಅಂಥ ಪರಮಾತ್ಮನನ್ನೆ ಎಲ್ಲ ದೇವತೆಗಳೂ ಆಶ್ರಯಿಸಿದ್ದಾರೆ. ಅವನಾಜ್ಞೆಯನ್ನು ಯಾರೂ ಅತಿಕ್ರಮಿಸುವುದಿಲ್ಲ, ನಚಿಕೇತನೇ, ನೀನು ಕೇಳಿದ ಮುಕ್ತನಿಯಾಮಕ ಪರಮಾತ್ಮ ಸ್ವರೂಪವು ಇದೇ ಆಗಿದೆ' ಎಂದು ಕಾಠಕದಲ್ಲಿ ಯಮ ಉಪದೇಶಿಸುತ್ತಾನೆ. ಶತಪಥ ಬ್ರಾಹ್ಮಣದಲ್ಲಿಯೂ (೧೪.೪.೩.೩೪) ಇದೇ ರೀತಿಯ ಮಂತ್ರವಿದೆ. ಆದರೆ ಅಲ್ಲಿ ಉತ್ತರಾರ್ಧ 'ತಂ ದೇವಾಶ್ಚಕ್ರಿರೇ ಧರ್ಮಂ ಸ ಏವಾದ್ಯ ಸ ಉ ಶ್ವಃ' ಎಂದಿದೆ. ಇದಕ್ಕೆ ಬೃಹದಾರಣ್ಯಕೋಪನಿಷತ್ತಿನಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಇಲ್ಲಿ ಎರಡೂ ಕಡೆ 'ತಂ ದೇವಾಃ' ಎಂದು ತತ್‌ಶಬ್ದವಿರುವುದರಿಂದ ಯತ್ ಶಬ್ದ ಹೇಗೆ ಪ್ರಶ್ನಾರ್ಥಕ? ಹೀಗೆ - ಇಲ್ಲಿ ತತ್ ಶಬ್ದಕ್ಕೆ ಯತ್‌ಶಬ್ದ ಸಂಬಂಧ ಕೂಡುವುದಿಲ್ಲ, ಯಾರು ಸೂರ್ಯ ನಿಯಾಮಕನೋ ಅವನೆ ಸರ್ವದೇವಾಶ್ರಯನೆನ್ನಲಾಗದು ತಾನೆ? ಸೂರ್ಯನಿಯಾಮಕ ಎಂಬುದು ಉಪಲಕ್ಷಣ. ಸರ್ವದೇವ ನಿಯಾಮಕ, ಸರ್ವದೇವಾಶ್ರಯನಾಗಬಹುದು. ನಿಜ. ಹಾಗೇ ಟೀಕೆಗಳಲ್ಲಿ ವ್ಯಾಖ್ಯಾನವಿದೆ. ಆದರೆ ಉಪಲಕ್ಷಣವನ್ನಾಶ್ರಯಿಸದೆ ಯತ್ ಶಬ್ದವನ್ನು ಪ್ರಶ್ನಾರ್ಥಕವಿಟ್ಟು ಕೊಂಡು ವ್ಯಾಖ್ಯಾನಾಂತರ ಶಕ್ಯವಿದೆ. ಮುಕ್ತಲೋಕದಲ್ಲಿ ಸೂರ್ಯನಿಯಾಮಕ ನಾರು? ಅವನನ್ನೇ ಎಲ್ಲ ದೇವತೆಗಳೂ ಆಶ್ರಯಿಸುವರೆ? ಅವನನ್ನು ಯಾರೂ ಅತಿಕ್ರಮಿಸುವು

ಮಾಡುವಲ್ಲಿಯೂ ಬರುತ್ತದೆ, ಹೇಗೆ? ಎಂದು ಮುಂತಾಗಿ ಪ್ರಶ್ನೆ ಮಾಡುವಲ್ಲಿಯೂ ಬರುತ್ತದೆ' ಎಂದು ಅಭಿಧಾನ ಗ್ರಂಥದಲ್ಲಿ ಹೇಳಿದೆ.

ಧ್ಯಾನ ಹೇಗೆ ಎಂಬ ಪ್ರಶ್ನೆಗೆ ಭಾಗವತದಲ್ಲಿ ಮುಂದೆ—

'ಜಿತಾಸನೋ ಜಿತಶ್ವಾಸೋ ಜಿತಸಂಗೋ ಜಿತೇಂದ್ರಿಯಃ' (೨.೧.೨೩)

ಎಂದು ಉತ್ತರ. ಯಾವ ವಿಷಯದಲ್ಲಿ ಎಂಬ ಪ್ರಶ್ನೆಗೆ-

ಸ್ಥೂಲೇ ಭಗವತೋ ರೂಪೇ ಮನಃ ಸಂಧಾರಯೇದ್ ಧಿಯಾ ॥

(೨.೧.೨೩)

ಎಂದು ಉತ್ತರ. ಎಂಥ ಧ್ಯಾನ? ಎಂಬ ಪ್ರಶ್ನೆಗೆ—

ವಿಶೇಷಸ್ತಸ್ಯ ದೇಹೋಽಯಂ ಸ್ಥವಿಷ್ಠಶ್ಚ ಸ್ಥವೀಯಸಾಂ ।

(೨.೧.೨೪)

ಎಂದು ಮುಂತಾಗಿ ಉತ್ತರ.

★★★

ಯಾವ ರೀತಿಯಲ್ಲಿ ಹರಿಯ ಧ್ಯಾನ ಮಾಡಬೇಕೆಂದು ಪರೀಕ್ಷಿತ ಕೇಳಿದ ಪ್ರಶ್ನೆಗೆ ಶುಕಮುನಿ ಹೇಳುತ್ತಾರೆ—

ವಿಶೇಷಸ್ತಸ್ಯ ದೇಹೋಽಯಂ ಸ್ಥವಿಷ್ಠಶ್ಚ ಸ್ಥವೀಯಸಾಂ ।
ಯತ್ರೇದಂ ದೃಶ್ಯತೇ ವಿಶ್ವಂ ಭೂತಂ ಭವ್ಯಂ ಭವಚ್ಚ ಯತ್ ॥ ೨೪ ॥

ಈ ಭೂತ ಭವಿಷ್ಯದ್ ವರ್ತಮಾನ ಎಲ್ಲ ಜಗತ್ತು ಬ್ರಹ್ಮಾಂಡಕೋಶದಲ್ಲಿ ಕಾಣುತ್ತದೆ. ಮಹತ್ತುಗಳಲ್ಲಿ ಅತ್ಯಂತ ಮಹತ್ತಾದ ಈ ಚತುರ್ದಶಲೋಕಾತ್ಮಕವಾದ ಬ್ರಹ್ಮಾಂಡ ಬ್ರಹ್ಮನಿಗೆ ಶರೀರ. ಅದರೊಳಗಿರುವ ಶ್ರೀಹರಿಗೆ ಶರೀರದಂತಿದೆ.

ಇಲ್ಲಿ ವಿಶೇಷವೆಂದರೆ ಭೂತವಿಶೇಷವಾದ ಪೃಥಿವಿ ಎಂದಿಟ್ಟುಕೊಂಡರೆ ಸಾವೃತಿ ಎಂದು ಹೇಳುವ ಸಪ್ತಾವರಣ ಕೂಡಲಾರದು. ಪಾತಾಲ ಇದರ ಪಾದತಲ ಎಂದು ಮುಂತಾಗಿ ಮುಂದೆ ಹೇಳುವುದೂ ಕೂಡಲಾರದು. ಆದಕ್ಕೆ ಹೀಗೆ ಹೇಳಬೇಕು—

ವಿಶೇಷ ಆಂಡಕೋಶಃ ।

ಶಿಲಾವತ್ ತಸ್ಯ ದೇಹೋಽಯಮಾಂಡಕೋಶಸ್ತು ಸಾವೃತಿಃ ।
ತತ್ತಂತ್ರತ್ವಾನ್ನ ತತ್‌ಸಂಸ್ಥದುಃಖಭೋಗೋಽಸ್ಯ ನ ಕ್ವಚಿತ್ ॥
ಇತಿ ಬ್ರಹ್ಮವೈವರ್ತೇ ॥

ದಿಲ್ಲವೆ? ಎಂದು ನಚಿಕೇತನ ಪ್ರಶ್ನೆ. 'ಏತದ್ವೈತತ್' ಅಮುಕ್ತಲೋಕದಲ್ಲಿ ಸೂರ್ಯಾದಿನಿಯಾಮಕವಾದ ಪರಬ್ರಹ್ಮವೇ ಮುಕ್ತಲೋಕದಲ್ಲಿಯೂ ನಿಯಾಮಕವಾಗಿದೆ ಎಂದು ಯಮನ ಉತ್ತರ. ವಾದಿರಾಜೀಯ ಕಾಠಕಟಿಪ್ಪಣಿ (೨.೧.೩) ಯಲ್ಲಿ ಇದು ಸೂಚಿತವಾಗಿದೆ.

ವಿಶೇಷವೆಂದರೆ ಬ್ರಹ್ಮಾಂಡಕೋಶ.

ಆವರಣ ಯುಕ್ತವಾದ ಈ ಬ್ರಹ್ಮಾಂಡ ಕೋಶ ಅಂದರೆ ಅದರೊಳಗಿರುವ ಚತುರ್ದಶ ಲೋಕಾತ್ಮಕವಾದ ಬ್ರಹ್ಮಶರೀರ ಶ್ರೀಹರಿಗೆ ಅಧೀನವಾಗಿರುವುದರಿಂದ ಶಿಲಾ ಪ್ರತಿಮೆಯಂತೆ ಶರೀರದಂತೆ ಹೊರತು ಶರೀರವಲ್ಲ. ಅದರೊಳಗಿರುವ ಪ್ರಯುಕ್ತ ಅವನಿಗೆ ದುಃಖಾನುಭವ ಎಲ್ಲಿಯೂ ಇಲ್ಲ ಎಂದು ಬ್ರಹ್ಮವೈವರ್ತ ಪುರಾಣದಲ್ಲಿದೆ.

★★★

ಭಗವಂತನ ಧ್ಯಾನ ಯಾವರೀತಿ ಮಾಡಬೇಕೆಂಬುದನ್ನು ಹೇಳಲು ಮೊದಲಿಗೆ ವಿರಾಟ್ ಶರೀರದ ಸ್ವರೂಪವನ್ನು ಹೇಳಿ ಈಗ ಈ ವಿರಾಟ್ ಶರೀರದಲ್ಲಿ ಧ್ಯಾನ ಮಾಡಬೇಕೆನ್ನುತ್ತಾರೆ—

ಅಂಡಕೋಶೇ ಶರೀರೇಽಸ್ಮಿನ್ ಸಪ್ತಾವರಣ ಸಂಯುತೇ ।
ವೈರಾಜಃ ಪುರುಷೋ ಯೋಽಸೌ ಭಗವಾನ್ ಧಾರಣಾಶ್ರಯಃ ॥೨೫॥

ಪಂಚಭೂತಗಳು ಅಹಂಕಾರ ಮಹತ್ತತ್ತ್ವಗಳೆಂಬ ಏಳು ಆವರಣಗಳಿಂದ ಕೂಡಿದ್ದು ಶರೀರದಂತಿರುವ ಈ ಬ್ರಹ್ಮಾಂಡಕೋಶದಲ್ಲಿ ವೈರಾಜ ಪುರುಷನಾದ ಭಗವಾನ್ ಶ್ರೀಹರಿಯನ್ನು ಧ್ಯಾನಿಸಬೇಕು.

ಇಲ್ಲಿ ವೈರಾಜಪುರುಷ ಭಗವಾನ್ ಯಾರು? ವಿರಾಟ್‌ಶರೀರ ಬ್ರಹ್ಮನ ಶರೀರವಾದ್ದರಿಂದ ಬ್ರಹ್ಮನೆಂದು ಗ್ರಹಿಸಬಹುದೆ? 'ಪದಂ ತತ್ಪರಮಂ ವಿಷ್ಣೋರ್ಮನೋ ಯತ್ರ ಪ್ರಸೀದತಿ' ಎಂದು ಹಿಂದೆ (ಶ್ಲೋ.೧೯) ವಿಷ್ಣುಧ್ಯಾನವನ್ನು ಹೇಳಲು ಉಪಕ್ರಮಿಸಿದೆ. ಮುಂದೆ 'ಪಕ್ಷ್ಮಾಣಿ ವಿಷ್ಣೋರಹನೀ ಉಭೇ ಚ' (ಶ್ಲೋ.೩೦) ಏವಂ ಪುರಾ ಧಾರಣಯಾತ್ಮಯೋನಿರ್ನಷ್ಟಾಂ ಸ್ಮೃತಿಂ (ಅ.೨.ಶ್ಲೋ.೧) ಎಂದು ವಿಷ್ಣುವಿನ ಶರೀರಾವಯವಗಳನ್ನು ಬ್ರಹ್ಮ ಧ್ಯಾನ ಮಾಡಿದ ನೆಂದಿದೆ. ಅದರಿಂದ ಹೀಗೆ ಹೇಳಬೇಕು—

ಅಂಡಕೋಶೋ ವಿರಾಟ್‌ಪ್ರೋಕ್ತೋ ವಿಶೇಷೇಣ ಪ್ರಕಾಶನಾತ್ ।
ವೈರಾಜಸ್ತದ್ಗತೋ ವಿಷ್ಣುರಥವಾ ಸರ್ವತೋ ವರಃ ॥

ಇತಿ ಭಾಗವತ ತಂತ್ರೇ

'ವಿಶೇಷವಾಗಿ ಪ್ರಕಾಶಿಸುವುದರಿಂದ ಬ್ರಹ್ಮಾಂಡಕೋಶವು ವಿರಾಟ್ ಎನಿಸಿದೆ. ವಿಷ್ಣು ಅದರೊಳಗಿರುವುದರಿಂದ ವೈರಾಜನೆನಿಸಿದ್ದಾನೆ. ಅಥವಾ ವಿಶೇಷವಾಗಿ ರಾಟ್ ಶ್ರೇಷ್ಠ ವಿರಾಟ್, ವೈರಾಜ ಎಂದರೂ ಅದೇ ಅರ್ಥ. ಬ್ರಹ್ಮಾದಿಗಳೆಲ್ಲರಿಗಿಂತಲೂ

ಶ್ರೇಷ್ಠನಾದ್ದರಿಂದ ವೈರಾಜನೆಂದು ವಿಷ್ಣು ಕರೆಸಿಕೊಳ್ಳುತ್ತಾನೆ' ಎಂದು ಭಾಗವತ ತಂತ್ರದಲ್ಲಿದೆ.

ವೀರರಾಘವ ವ್ಯಾಖ್ಯಾನದಲ್ಲಿ ವಿರಾಟ್ ಎಂದರೆ, ಅನಿರುದ್ಧ. ಅವನ ಅಂಶಭೂತನಾದ್ದರಿಂದ ವಿರಾಟ್‌ಶರೀರದಲ್ಲಿರುವ ಪುರುಷರೂಪಿ ವಿಷ್ಣು ವೈರಾಜನೆನಿಸುತ್ತಾನೆ ಎಂದಿದೆ. ಇದು ಈ ಭಾಗವತತಂತ್ರ ವಚನಕ್ಕೆ ವಿರುದ್ಧವಾಗಿದೆ.

★★★

ವಿರಾಟ್‌ಶರೀರದಲ್ಲಿ ಕ್ರಮವಾಗಿ ಒಂದೊಂದೇ ಅವಯವ ಯುಕ್ತವಾಗಿ ಹರಿಧ್ಯಾನ ಮಾಡುವ ಬಗೆಯನ್ನು ಹೇಳುತ್ತಾರೆ—

ಪಾತಾಲಮೇತಸ್ಯ ಹಿ ಪಾದಮೂಲಂ
ಪಠಂತಿ ಪಾರ್ಷ್ಣಿಪ್ರಪದೇ ರಸಾತಲಂ ।
ಮಹಾತಲಂ ವಿಶ್ವಸೃಜಃ ಸುಗುಲ್ಫೌ
ತಲಾತಲಂ ವೈ ಪುರುಷಸ್ಯ ಜಂಘೇ **॥ ೨೬ ॥**

ಈ ವಿರಾಟ್‌ಶರೀರಕ್ಕೆ ಪಾತಾಲ ಪಾದತಲ. ರಸಾತಲ ಪಾದಗಳ ಹಿಮ್ಮಡಿ ತುದಿಗಳು. ಮಹಾತಲ ಮಣಿಗಂಟು. ತಲಾತಲ ಮೊಳಕಾಲು.

ಇಲ್ಲಿ ಪಾತಾಲವು ಭಗವಂತನ ಪಾದತಲ ಎಂದು ಮುಂತಾಗಿ ಹೇಳಿದೆ. ಜಡವಾದ ಪಾತಾಲಾದಿಗಳು ಚಿನ್ಮಯನಾದ ಭಗವಂತನ ಅವಯವವಾಗಲು ಶಕ್ಯವಿಲ್ಲ. ಶ್ರೀಧರವ್ಯಾಖ್ಯಾನದಲ್ಲಿ ವಿರಾಟ್‌ಶರೀರ, ಅದರೊಳಗಿರುವ ಜೀವ, ಅವನ ಅಂತರ್ಯಾಮಿಯಾದ ಭಗವಂತ ಇವರೆಲ್ಲರಿಗೂ ಅಭೇದವನ್ನಾರೋಪಿಸಿ ಧ್ಯಾನ ಮಾಡಬೇಕೆನ್ನುವ ಅಭಿಪ್ರಾಯ ಎಂದಿದೆ. ಇದು ಅನ್ಯಥೋಪಾಸನೆ, ಅನರ್ಥಕಾರಿ. ಆದರಿಂದ ಹೀಗೆ ಹೇಳಬೇಕು—

ಪ್ರತಿಮಾಪೇಕ್ಷಯಾಽಂಗಾನಿ, ಸ್ವರೂಪಾಪೇಕ್ಷಯಾ ತಜ್ಜಾನಿ ತದಾಶ್ರಿತಾನಿ ಚ।

ವಿರಾಟ್ ಶರೀರ ಭಗವಂತನ ಪ್ರತಿಮೆ. ಪಾತಾಲಾದಿಗಳು ಈ ಪ್ರತಿಮೆಯ ಅವಯವಗಳು ಎಂಬ ಅಭಿಪ್ರಾಯದಿಂದ 'ಏತಸ್ಯ ಪಾದಮೂಲಂ' ಎಂದು ಮುಂತಾಗಿ ಹೇಳಿದೆ. ಏತಸ್ಯ ಎಂದರೆ ಭಗವಂತನ ಸ್ವರೂಪಶರೀರ ಪರವಾಗಿ ಇಟ್ಟುಕೊಂಡರೆ ಪಾತಾಲಾದಿ ಲೋಕಗಳು ಆ ಶರೀರದ ಪಾದಾದಿ ಅವಯವಗಳಿಂದ ಹುಟ್ಟಿ ಆ ಅವಯವಗಳನ್ನೇ ಆಶ್ರಯಿಸಿವೆ ಎಂಬ ಅಭಿಪ್ರಾಯದಿಂದ ಹಾಗೆ ಹೇಳಿದೆ.

★★★

ಅವಯವ ಧ್ಯಾನವನ್ನೇ ಮುಂದುವರಿಸಿ ಹೇಳುತ್ತಾರೆ—

ಛಂದಾಂಸ್ಯನಂತಸ್ಯ ಗಿರೋ ಗೃಣಂತಿ
ದಂಷ್ಟ್ರಾSರ್ಯಮೇಂದೂಡುಗಣಾ ದ್ವಿಜಾನಿ ।
ಹಾಸೋ ಜನೋನ್ಮಾದಕರೀ ಚ ಮಾಯಾ
ದುರಂತಸರ್ಗೋ ಯದಪಾಂಗ ಮೋಕ್ಷಃ ॥ ೩೧ ॥

ಗಾಯತ್ರೀ ಮುಂತಾದ ಛಂದಸ್ಸುಗಳು ಹರಿಯ ಮಾತುಗಳು. ಸೂರ್ಯಚಂದ್ರರು ಕೋರೆ ಹಲ್ಲುಗಳು. ನಕ್ಷತ್ರಗಳು ಹಲ್ಲುಗಳು. ಮೋಹನಶಕ್ತಿ ಮಂದಹಾಸ. ಜಗತ್‌ಸೃಷ್ಟಿ ಕಟಾಕ್ಷ.

ಇಲ್ಲಿ ಸೂರ್ಯಚಂದ್ರರು ಕೋರೆಹಲ್ಲುಗಳು, ಅಂದರೆ ಕೋರೆ ಹಲ್ಲುಗಳಿಂದ ಹುಟ್ಟಿ ಅವುಗಳನ್ನೇ ಆಶ್ರಯಿಸಿದವರು ಎಂದು ಹೇಳಿದೆ. ಆದರೆ 'ಚಕ್ಷುರಭೂತ್ ಪತಂಗಃ' (೨.೨.೩೦) ಎಂದು ಸೂರ್ಯ ಕಣ್ಣಿಂದ ಹುಟ್ಟಿ ಅಲ್ಲಿಯೆ ಇದ್ದಾನೆ ಎಂದಿದೆ. ಚಂದ್ರ ಮನಸಿನಿಂದ ಹುಟ್ಟಿ ಅಲ್ಲಿಯೆ ಇದ್ದಾನೆ ಎಂದು ಮುಂದೆ 'ಮನಸ್ತು ಸ ಚಂದ್ರಮಾಃ' (೨.೨.೩೪) ಎಂದು ಹೇಳುತ್ತಾರೆ. ಒಂದು ಅವಯವದಲ್ಲಿ ಹುಟ್ಟಿದವರು ತಿರುಗಿ ಇನ್ನೊಂದು ಅವಯವದಲ್ಲಿ ಹುಟ್ಟುವುದು ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಸಮಾಧಾನ—

ಬಹುರೂಪತ್ವಾದ್ ದಂಷ್ಟ್ರಾರ್ಯಮೇಂದೂ ಇತ್ಯಾದಿ ।
ಪ್ರತಿಮಾಪೇಕ್ಷಯಾಂಗಾನಿ ಭೂರಾದೀನಿ ಸ್ವರೂಪತಃ ।
ತದಾಶ್ರಿತಾನಿ ತಜ್ಜಾನಿ ಬಹ್ವಂಗತ್ವಂ ಬಹುತ್ವತಃ ॥

ಇತಿ ಬ್ರಹ್ಮತರ್ಕೇ ।

ಸೂರ್ಯ ಚಂದ್ರಾದಿ ದೇವತೆಗಳಿಗೆ ಬಹುರೂಪಗಳಿರುವುದರಿಂದ ಅನೇಕ ಅಂಗಗಳಿಂದ ಅನೇಕ ಬಾರಿ ಬೇರೆಬೇರೆ ರೂಪಗಳಿಂದ ಹುಟ್ಟಿ ಆ ಅಂಗಗಳಲ್ಲಿ ಆಶ್ರಿತರಾಗುವುದು ಶಕ್ಯ ಎಂಬ ಅಭಿಪ್ರಾಯದಿಂದ 'ದಂಷ್ಟ್ರಾರ್ಯಮೇಂದೂ, ಚಕ್ಷುರಭೂತ್ ಪತಂಗಃ, ಮನಸ್ತು ಸ ಚಂದ್ರಮಾಃ' ಎಂದು ಮುಂತಾಗಿ ಹೇಳಿದ್ದು ಕೂಡುತ್ತದೆ.

ಭೂಲೋಕಾದಿಗಳು ಪ್ರತಿಮೆಯ ಅಂಗಗಳೆ. ಸ್ವರೂಪಶರೀರವಿಟ್ಟುಕೊಂಡರೆ ಅದರ ಅವಯವಗಳಲ್ಲಿ ಹುಟ್ಟಿ ಅಲ್ಲಿಯೆ ಆಶ್ರಯಿಸಿವೆ ಎಂದು ಗ್ರಹಿಸಬೇಕು. ದೇವತೆಗಳು ಅನೇಕ ಅವಯವಗಳಲ್ಲಿ ಒಮ್ಮೆಲೆ ಹುಟ್ಟುವುದು ಅನೇಕ ರೂಪಗಳು ಅವರಿಗೆ ಇರುವುದರಿಂದ ಯುಕ್ತವೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಬೇರೆ ವ್ಯಾಖ್ಯಾನಕಾರರು ಇಲ್ಲಿ,

'ದಂಷ್ಟ್ರಾ ಯಮಃ ಸ್ನೇಹಕಲಾ ದ್ವಿಜಾನಿ'

ಎಂಬ ಅಪಪಾಠವಿಟ್ಟುಕೊಂಡಿರುವುದರಿಂದ ಅವರಿಗೆ ಇಲ್ಲಿ ಸಮಸ್ಯೆ ಬರಲಿಲ್ಲ. ಬೇರೆಕಡೆ ಬಂದರೂ 'ಉಪಾಸನೆಗಾಗಿ ಹೇಳಿದ್ದರಿಂದ ಉಪಾಸನೆಯನ್ನು ಶಾಸ್ತ್ರ ಹೇಳಿದಂತೆ ಮಾಡಬೇಕೇ ಹೊರತು ಪ್ರಶ್ನೆಗೆ ಅವಕಾಶವಿಲ್ಲ' ಎನ್ನುತ್ತದೆ ಜೀವಗೋಸ್ವಾಮಿ ವ್ಯಾಖ್ಯಾನ.[೧] ವಸ್ತುತಃ ಚೆನ್ನಾಗಿ ವಿಚಾರಮಾಡಿ ಸರಿಯಾಗಿ ತಿಳಿದೇ ಉಪಾಸನೆ ಮಾಡಬೇಕು. ಇಲ್ಲದಿದ್ದರೆ ಅನರ್ಥಫಲ.

ಇತಿ ದ್ವಿತೀಯಸ್ಕಂಧೇ ಪ್ರಥಮೋಽಧ್ಯಾಯಃ

ಎರಡನೇ ಅಧ್ಯಾಯ

ಅಧ್ಯಾಯ ಸಾರಾಂಶ

ಸೃಷ್ಟಿಯ ಆದಿಯಲ್ಲಿ ಸೃಷ್ಟಿಕರ್ತನಾದ ಚತುರ್ಮುಖ ಮೊದಲಿಗೆ ಈ ಅವಯವ ಧ್ಯಾನವನ್ನು ಮಾಡಿಯೆ ಚತುರ್ದಶ ಲೋಕಸೃಷ್ಟಿಗೆ ಸ್ಫೂರ್ತಿಯನ್ನು ಪಡೆಯಬೇಕಾಯಿತು. ಮನೋನಿಗ್ರಹಕ್ಕೆ ಇನ್ನೊಂದು ಸಾಧನ ಸಕಲಶಬ್ದಗಳೂ ಮುಖ್ಯವಾಗಿ ಪರಮಾತ್ಮನ ನಾಮಗಳೆಂದು ತಿಳಿಯುವುದು. ಇಂದ್ರಾದಿ ಶಬ್ದಗಳು ಇಂದ್ರಾದಿ ನಾಮಗಳೆಂದು ತಿಳಿದು ಅವರನ್ನು ಉಪಾಸನೆ ಮಾಡಿದರೆ ಮೋಕ್ಷಾದಿ ಪುರುಷಾರ್ಥಗಳು ಲಭಿಸಲಾರವು. ಆ ನಾಮಗಳಿಂದಲೂ ಹರಿಯನ್ನೆ ಉಪಾಸನೆ ಮಾಡಬೇಕು. ವಿಷಯಾಸಕ್ತಿಯನ್ನು ಬಿಡಬೇಕು.

ವಿರಾಡ್ರೂಪದ ಅವಯವಧ್ಯಾನದಿಂದ ಮನೋನಿಗ್ರಹ ಶಕ್ಯವಾದಾಗ ಉತ್ತಮಾಧಿಕಾರಿಗಳು ವ್ಯಾಪ್ತಭಗವದ್ರೂಪವನ್ನು ಧ್ಯಾನಿಸಬೇಕು. ಸತ್ ಚಿತ್ ಆನಂದ ಆತ್ಮ ಎಂಬ ನಾಲ್ಕು ಗುಣಗಳನ್ನು ಎಲ್ಲ ಮುಮುಕ್ಷುಗಳೂ ತಪ್ಪದೆ ಉಪಾಸನೆ ಮಾಡಬೇಕು. ಆಧಿ ವ್ಯಾಧಿಗಳಿದ್ದರೂ ಈ ಉಪಾಸನೆಯನ್ನು ಬಿಡಕೂಡದು. ಮಧ್ಯಮಾಧಿಕಾರಿಗಳು ತಮ್ಮ ಸ್ವರೂಪಶರೀರದ ಹೃದಯದಲ್ಲಿಯೂ ಮಂದಾಧಿಕಾರಿಗಳು ಬಾಹ್ಯಶರೀರದ ಹೃದಯದಲ್ಲಿಯೂ ಚತುರ್ಭುಜ ಪದ್ಮಚಕ್ರಶಂಖಗದಾಧಾರಿ ಭಗವದ್ರೂಪದ ಅವಯವಗಳನ್ನು ಒಂದೊಂದಾಗಿ ಧ್ಯಾನಿಸಬೇಕು. ಈ ಅವಯವಧ್ಯಾನದಿಂದ ಸಮಗ್ರಶರೀರ ಧ್ಯಾನಸಾಮರ್ಥ್ಯವನ್ನು ಗಳಿಸಬೇಕು. ಆ

---

೧. ತದೇವಮತ್ರ ಯುಕ್ತಿರ್ನಾನುಸಂಧೇಯಾ, ಕಿಂತೂಪಾಸನಾರ್ಥಂ ಶಾಸ್ತ್ರಾಜ್ಞೈವ ಕಾರಣಮಿತಿ ಸರ್ವಂ ಸಮಂಜಸಂ। -ಜೀವಗೋಸ್ವಾಮೀ

ಸಾಮರ್ಥ್ಯ ಲಭಿಸಿದ ಬಳಿಕವೂ ಧ್ಯಾನಾದಿ ನಿತ್ಯಕರ್ಮಾನಂತರದಲ್ಲಿ ತಿರುಗಿ ನಿತ್ಯವೂ ವಿರಾಡ್ರೂಪದ ಧ್ಯಾನ ಮಾಡಬಹುದು. ಅದರಿಂದ ಭಕ್ತಿಯೋಗ ಕೈಗೂಡುವುದು. ಅಪರೋಕ್ಷ ಲಭಿಸುವುದು. ಬಳಿಕ ಪ್ರಾರಬ್ಧ ಭೋಗಾನಂತರ ಚರಮಶರೀರ ತ್ಯಾಗ ಕಾಲದಲ್ಲಿ ಸುಖಾಸನದಲ್ಲಿ ಕುಳಿತು ಪ್ರಾಣಾಯಾಮ ಮಾಡಿ ಇಂದ್ರಿಯದೇವತೆಗಳು ಮನೋದೇವತೆಯಾದ ರುದ್ರನಲ್ಲಿಯೂ, ರುದ್ರ ಸರಸ್ವತಿಯಲ್ಲಿಯೂ, ಸರಸ್ವತಿ ಬ್ರಹ್ಮಲಕ್ಷ್ಮೀ ದ್ವಾರಾ ಕ್ರಮವಾಗಿ ಜೀವಾಂತರ್ಗತ ದೇಹಾಂತರ್ಗತ ಹಾಗೂ ವ್ಯಾಪ್ತವಾದ ಭಗವದ್ರೂಪಗಳಲ್ಲಿಯೂ ಲಯಹೊಂದುವರೆಂದು ಚಿಂತಿಸಬೇಕು.

ಬಳಿಕ ಕಾಲಿನ ಹಿಮ್ಮಡಿಯಿಂದ ಗುದದ್ವಾರವನ್ನು ಒತ್ತಿ ಮೂಲಾಧಾರದಿಂದ ಉದಾನವಾಯುವನ್ನು ಹೊರಡಿಸಿ ನಾಭಿ ಹೃದಯ ಕಂಠ ತಾಲು ಭ್ರೂಮಧ್ಯಗಳ ಮೂಲಕ ಸಹಸ್ರಾರಕ್ಕೆ ತಂದು ತಲೆಯನ್ನು ಭೇದಿಸಿ ಶರೀರತ್ಯಾಗ ಮಾಡಬೇಕು. ಸಾಧನ ತಾರತಮ್ಯಾನುಗುಣವಾಗಿ ಮಹರಾದಿ ವೈಕುಂಠ ಪರ್ಯಂತ ಲೋಕಗಳಲ್ಲಿ ಬ್ರಹ್ಮಪ್ರಲಯಪರ್ಯಂತ ವಾಸಮಾಡಿ ಸುಖಪ್ರಾರಬ್ಧ ಉಣಬೇಕು. ಲಯಕಾಲದಲ್ಲಿ ಪೃಥಿವ್ಯಾದಿ ತತ್ವಗಳು ಒಂದೊಂದಾಗಿ ಲಯಹೊಂದುವಾಗ ಆ ತತ್ವಗಳಲ್ಲಿರುವ ಭಗವದ್ರೂಪಗಳನ್ನು ಸೇರಿ ಕೊನೆಯಲ್ಲಿ ಮೋಕ್ಷದಾಯಕನಾದ ವಾಸುದೇವನನ್ನು ಸೇರಬೇಕು. ಬಳಿಕ ಜ್ಞಾನಿ ತಿರುಗಿ ಸಂಸಾರಕ್ಕೆ ಬರುವುದಿಲ್ಲ.

ಈ ಭಾಗವತ ಪುರಾಣವನ್ನು ವ್ಯಾಸರು ಮೂರುಬಾರಿ ವೇದಗಳನ್ನು ಪರಿಶೀಲಿಸಿ ರಚಿಸಿದಂತೆ ತೋರಿಕೊಂಡು, ಇದು ವೇದರಹಸ್ಯಗರ್ಭಿತವೆಂದು ತಿಳಿಸಿದ್ದಾರೆ.

★★★

ಮನೋಜಯಕ್ಕೆ ವಿರಾಡ್ರೂಪಧ್ಯಾನದಂತೆ ಎಲ್ಲ ಶಬ್ದಗಳೂ ಹರಿನಾಮಗಳೆನ್ನುವ ಉಪಾಸನೆಯೂ ಸಾಧನ ಎನ್ನುತ್ತಾರೆ—

ಶಬ್ದಸ್ಯ ಹಿ ಬ್ರಹ್ಮಣ ಏಷ ಪಂಥಾ
ಯನ್ನಾಮಭಿರ್ಧ್ಯಾಯತಿ ಧೀರಪಾರ್ಥೈಃ ।
ಪರಿಭ್ರಮಂಸ್ತತ್ರ ನ ವಿಂದತೇಽರ್ಥಾನ್
ಮಾಯಾಮಯೇ ವಾಸನಯಾ ಶಯಾನಃ ॥ ೨ ॥

ಭಗವದಿಚ್ಛಾಧೀನವಾದ ಸಂಸಾರದಲ್ಲಿ ಅವಿದ್ಯೆಯಿಂದ ಬದ್ಧನಾದ ಜೀವನು ಇಂದ್ರಾದಿ ಶಬ್ದಗಳಿಗೆ ಇಂದ್ರಾದಿಗಳೇ ಮುಖ್ಯ ವಾಚ್ಯರೆಂದು ಭ್ರಮಿಸಿ ಆ ಶಬ್ದಗಳಿಂದ ಅವರನ್ನೆ ಧ್ಯಾನಿಸುತ್ತಾನೆ. ಅದರಿಂದ ಮೋಕ್ಷಾದಿ ಪುರುಷಾರ್ಥಗಳನ್ನು ಹೊಂದುವುದಿಲ್ಲ. ಅಪರಿಮಿತ ಶಬ್ದರಾಶಿಗೆ ಮುಖ್ಯವಾಚ್ಯ ಹರಿಯೆ.

ಇಲ್ಲಿ 'ಏಷ ಪಂಥಾಃ' ಎಂದು ಚತುರ್ಮುಖ ಬ್ರಹ್ಮನನ್ನು ಸರ್ವಶಬ್ದವಾಚ್ಯ

ನೆಂದು ಹೇಳಿದಂತೆ ಕಾಣುತ್ತದೆ. ಮೊದಲನೆ ಶ್ಲೋಕದಲ್ಲಿ 'ಆತ್ಮಯೋನಿಃ' ಎಂದು ಚತುರ್ಮುಖಬ್ರಹ್ಮನೇ ಪ್ರಕೃತನಾಗಿದ್ದಾನೆ. ಆದರೆ ಚತುರ್ಮುಖಬ್ರಹ್ಮನಿಗೆ ಸರ್ವಶಬ್ದವಾಚ್ಯತ್ವ ಸಮರ್ಥನಮಾಡುವುದು ಯುಕ್ತವಲ್ಲ. ವೀರರಾಘವ ವ್ಯಾಖ್ಯಾನದಲ್ಲಿ 'ಶಬ್ದಬ್ರಹ್ಮ ಎಂದರೆ ವೇದ. ವೇದದ ಮಾರ್ಗ ಇದು, ಏನೆಂದರೆ ಕೇವಲ ಹೆಸರಿಗೆ ಮಾತ್ರ ಸಾರವತ್ತಾದ ಸ್ವರ್ಗಾದಿಗಳಿಗಾಗಿ ಕರ್ಮದಲ್ಲಿ ಬುದ್ಧಿಯನ್ನು ತೊಡಗಿಸುವುದು. ವೇದ ಸಾತ್ವಿಕ ರಾಜಸ ತಾಮಸ ಮೂರು ಬಗೆಯವರಿಗೂ ಬೇಕಾದುದನ್ನು ಹೇಳುತ್ತದೆ'. ಅದರಿಂದ ಸಾತ್ವಿಕನಿಗೆ ಈ ವೇದೋಕ್ತ ಕರ್ಮ ಪರಿತ್ಯಾಜ್ಯ'' ಎಂದು ಹೇಳಿದೆ.[೧] ಆದರೆ ರಾಜಸ ತಾಮಸರಿಗೆ ವೇದಾಧಿಕಾರವೆ ಇಲ್ಲ. ಸಾತ್ವಿಕರಿಗೂ ಮೇಲುನೋಟಕ್ಕೆ ಮಾತ್ರ ಕರ್ಮಕಾಂಡ ಕಾಮ್ಯಕರ್ಮಪರ. ವಾಸ್ತವದಲ್ಲಿ ವೇದವೆಲ್ಲವೂ ವಿಷ್ಣುಪರ. ನಿಷ್ಕಾಮಕರ್ಮಪರ. ಅದರಿಂದ ಹೀಗೆ ಹೇಳಬೇಕು—

ಏಷ ಹರಿಃ । ಯದಪಾರ್ಥ್ಯೆ ಧ್ಯಾಯತಿ ತತ್ರಾರ್ಥಾನ್ ನ ವಿಂದತೇ ।

ಸರ್ವಶಬ್ದಗಳ ಮುಖ್ಯಾರ್ಥ ಹರಿಯೆ. ಮುಖ್ಯಾರ್ಥವಲ್ಲದ ಇಂದ್ರಾದಿಗಳನ್ನು ಇಂದ್ರಾದಿ ಶಬ್ದಗಳಿಂದ ಧ್ಯಾನಿಸಿದರೆ ಪುರುಷಾರ್ಥಗಳನ್ನು ಹೊಂದದಿರುವುದು ಸಹಜ.

ಹಿಂದಿನ ಶ್ಲೋಕದಲ್ಲಿ ಚತುರ್ಮುಖಬ್ರಹ್ಮ ಪ್ರಕೃತನಾಗಿದ್ದರೂ ಆತ್ಮಯೋನಿಃ ಎಂಬ ಶಬ್ದದಿಂದ ಪ್ರಕೃತನಾಗಿದ್ದಾನೆ. ಆ ಶಬ್ದದಲ್ಲಿ ಆತ್ಮ ಎಂದರೆ ಪರಮಾತ್ಮ ಹರಿ. ಹರಿಯಿಂದ ಹುಟ್ಟಿದವನಾದ್ದರಿಂದ ಆತ್ಮಯೋನಿ ಎಂದು ಚತುರ್ಮುಖಬ್ರಹ್ಮ ಪ್ರಸಿದ್ಧನಾಗಿದ್ದಾನೆ. ಹೀಗೆ ಹರಿಯೂ ಪ್ರಕೃತನಾಗಿರುವುದರಿಂದ 'ಏಷಃ' ಎಂದು ಅವನನ್ನು ಪರಾಮರ್ಶ ಮಾಡಬಹುದು.

★★★

ಎಲ್ಲ ಶಬ್ದಗಳಿಗೂ ಮುಖ್ಯವಾಚ್ಯ ಹರಿಯೆ ಆದ್ದರಿಂದ ಬೇರೆ ದೇವತೆಗಳನ್ನು ಅವರ ಶಬ್ದಗಳಿಂದ ಸ್ಮರಿಸುವುದನ್ನು ನಿಲ್ಲಿಸಬೇಕು. ಆಗಲೆ ಮನೋಜಯ ಶಕ್ಯ ಎನ್ನುತ್ತಾರೆ—

ಅತಃ ಕವಿರ್ನಾಮಸು ಯಾವದರ್ಥಃ
ಸ್ಯಾದಪ್ರಮತ್ತೋ ವ್ಯವಸಾಯ ಬುದ್ಧಿಃ ।
ಸಿದ್ಧೇಽನ್ಯಥಾರ್ಥೇ ನ ಯತೇತ ತತ್ತತ್
ಪರಿಶ್ರಮಂ ತತ್ರ ಸಮೀಕ್ಷಮಾಣಃ ॥ ೩ ॥

---

೧. ವೇದೋ ಹಿ ಗುಣತ್ರಯ ಪ್ರಚುರಾಣಾಂ ಸ್ವರ್ಗಾದಿಫಲಾನಿ ತತ್ಸಾಧನಾನಿ ಚಾವಬೋಧಯತಿ । ಕೇವಲ ಸಾತ್ವಿಕಸ್ಯ ತು ಮುಮುಕ್ಷೋಸ್ತಾನಿ ಪರಿತ್ಯಾಜ್ಯಾನಿ । -ವೀರರಾಘವಃ

ಸರ್ವಶಬ್ದ ಮುಖ್ಯವಾಚ್ಯ ಹರಿಯೇ ಆಗಿರುವುದರಿಂದ ಜ್ಞಾನಿಯು ಇಂದ್ರಾದಿನಾಮಗಳಲ್ಲಿ ಇಂದ್ರಾದಿ ಸ್ಮರಣಶೀಲನಾಗಬಾರದು. ಶರೀರ ರಕ್ಷಣೆಗೆ ತಕ್ಕಷ್ಟೇ ಅವರನ್ನು ಸ್ಮರಿಸಿದರೆ ತಪ್ಪಲ್ಲ. ಅದು ಮನೋಜಯಕ್ಕೆ ಪ್ರತಿಬಂಧಕವಲ್ಲ. ಅವರನ್ನು ಸ್ಮರಿಸುವಾಗಲೂ ಹರಿಯನ್ನು ಮರೆಯಬಾರದಷ್ಟೆ. ಅವರನ್ನು ಸ್ಮರಿಸದೆ ಶರೀರ ರಕ್ಷಣೆಗೆ ಬೇಕಾದುದು ಸಿಗುವಂತಿದ್ದರೆ ಅದಕ್ಕೆ ಪುನಃ ಯತ್ನಿಸಕೂಡದು. ಹಾಗೆ ಯತ್ನ ಮಾಡುವುದರಿಂದ ಮನೋಜಯವಿಲ್ಲದಾಗವುದು ಮಾತ್ರವಲ್ಲದೆ ನರಕಾದಿ ಪ್ರಾಪ್ತಿಯೂ ಆಗುವುದೆಂದು ತಿಳಿದುಕೊಳ್ಳಬೇಕು.

ಈ ಶ್ಲೋಕಾರ್ಥವಿಷಯದಲ್ಲಿ ಸಂವಾದಿಯಾದ ಪ್ರಮಾಣ—

ಸರ್ವನಾಮಾ ಯತೋ ವಿಷ್ಣುಸ್ತದನ್ಯಾರ್ಥಾನ್ನ ತು ಸ್ಮರೇತ್ ।
ಸ್ಮರಂಸ್ತು ಯಾವದರ್ಥಃ ಸ್ಯಾದ್ ಅನ್ಯಥಾ ಸ್ವಾತ್ಮಹಾ ಸ್ಮೃತಃ ॥

ಇತಿ ಬ್ರಹ್ಮಾಂಡೇ ।

ವಿಷ್ಣುವೆ ಸರ್ವಶಬ್ದ ಮುಖ್ಯವಾಚ್ಯನಾದ್ದರಿಂದ ಇಂದ್ರಾದಿ ನಾಮಗಳಿಂದ ಇಂದ್ರಾದಿಗಳನ್ನು ಉಪಾಸನೆ ಮಾಡಕೂಡದು. ಶರೀರಧಾರಣಕ್ಕೆ ಬೇಕಾಗುವಷ್ಟನ್ನು ಪಡೆಯಲು ಉಪಾಸನೆ ಮಾಡಿದರೂ ಅಷ್ಟಕ್ಕೇ ನಿಲ್ಲಿಸಬೇಕು. ಇಲ್ಲದಿದ್ದರೆ ಮನೋಜಯವಿಲ್ಲದಂತಾಗುವುದು, ನರಕಾದಿ ಪ್ರಾಪ್ತವಾಗುವುದು ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ.

★★★

ಮನೋಜಯ ಲಭಿಸಿತೆಂದರೆ ಮುಂದೆ ಸ್ವಯೋಗ್ಯಧ್ಯಾನ ಮಾಡಬೇಕು—

ಏವಂ ಸ್ವಚಿತ್ತೇ ಸ್ವತಏವ ಸಿದ್ಧ
ಆತ್ಮಾ ಪ್ರಿಯೋಽರ್ಥೋ ಭಗವಾನನಂತಃ ।
ತಂ ನಿರ್ವೃತೋ ನಿಯತಾರ್ಥೋ ಭಜೇತ
ಸಂಸಾರಹೇತೂಪರಮಶ್ಚ ಯತ್ರ ॥ ೬ ॥

ಹೀಗೆ ತನ್ನ ಮನಸ್ಸು ಅನಾಯಾಸವಾಗಿ ತನ್ನ ವಶದಲ್ಲಿ ನಿಲ್ಲುವಂತಾದರೆ ಉತ್ತಮಾಧಿಕಾರಿ ವ್ಯಾಪ್ತವಾದ ಭಗವಂತನ ರೂಪವನ್ನು ನಿರಂತರ ಧ್ಯಾನಿಸಬೇಕು. ಏಕೆಂದರೆ ಆಗ ಆ ಭಗವದ್ರೂಪವೆ ಅವನಿಗೆ ಬೇರೆ ಎಲ್ಲಕ್ಕಿಂತ ಪ್ರಿಯವಾದ ವಸ್ತುವಾಗಿರುತ್ತದೆ. ಧ್ಯಾನಕಾಲದಲ್ಲಿ ನನಗೆ ಮುಂದೆ ಪರಮಾತ್ಮ ಪ್ರಾಪ್ತಿ ನಿಶ್ಚಿತವೆಂದು ವಿಶ್ವಾಸ ಬೇಕು. ಸ್ವರೂಪಾನಂದಾನುಭವದಿಂದ ರೋಮಾಂಚಗೊಳ್ಳಬೇಕು. ಅದರಿಂದ ಸಂಸಾರಹೇತುವಾದ ಅವಿದ್ಯಾಕಾಮಕರ್ಮಾದಿಗಳು ಸಮೂಲ ನಾಶವಾಗುವುವು.

ಇಲ್ಲಿ 'ನಿಯತಾರ್ಥಃ' ಎಂದರೇನು?

ಏತಮಿತಸ್ತಂ ಪ್ರೇತ್ಯಾಭಿಸಂಭವಿತಾಸ್ಮೀತಿ ನಿಯತಾರ್ಥಃ ।

ಛಾಂದೋಗ್ಯೋಪನಿಷತ್ತು (೩.೨.೯) ಹೇಳುವಂತೆ 'ಹೀಗೆ ನಾನು ಈ ಶರೀರದಿಂದ ಮರಣಹೊಂದಿದ ಬಳಿಕ ಪರಮಾತ್ಮನನ್ನು ಸೇರುತ್ತೇನೆ' ಎಂದು ಪ್ರಯೋಜನ ಲಾಭದ ಬಗ್ಗೆ ನಿಶ್ಚಯ ಉಳ್ಳವನು ಎಂದರ್ಥ.

★★★

ಧ್ಯಾನಕಾಲದಲ್ಲಿ ಉಪಾಸನೆ ಮಾಡಬೇಕಾದ ಭಗವದ್ಗುಣಗಳನ್ನು ಹೇಳುತ್ತಾರೆ—

ಸ ಸರ್ವವಿದ್ಧೃದ್ಯನುಭೂಶ್ಚ ಸರ್ವ
ಆತ್ಮಾ ಯಥಾ ಸುಪ್ತಜನೇಕ್ಷಿತೈಕಃ ।
ತಂ ಸತ್ಯಮಾನಂದನಿಧಿಂ ಭಜೇತ
ಸರ್ವಾತ್ಮನಾಽತೋಽನ್ಯತ ಆತ್ಮಘಾತಃ ॥ ೭ ॥

ಪರಮಾತ್ಮ ಸರ್ವಜ್ಞ , ಎಲ್ಲರ ಹೃದಯದಲ್ಲಿದ್ದಾನೆ. ಸ್ವೇಚ್ಛಾನುಸಾರ ರೂಪ ತಾಳುತ್ತಾನೆ, ಗುಣಪೂರ್ಣ, ಸ್ವಾಮಿ, ತಾನು ನಿದ್ರಿಸದವನು ನಿದ್ರಿಸುವವರೆಲ್ಲರನ್ನೂ ತಾನೊಬ್ಬನೆ ನೋಡುವಂತೆ ಪರಮಾತ್ಮ ಜಾಗ್ರದವಸ್ಥೆಯಲ್ಲಿಯೂ ಅಜ್ಞಾನಬದ್ಧರಾದ ಎಲ್ಲ ಜೀವರನ್ನೂ ಅಜ್ಞಾನರಹಿತನಾದ ತಾನು ನೋಡುತ್ತಾನೆ. ಇಂಥ ಸರ್ವೋತ್ತಮನಾದ ಆನಂದಮಯನಾದ ಪರಮಾತ್ಮನನ್ನು ಉಪಾಸನೆ ಮಾಡಬೇಕು. ಆಧಿ ವ್ಯಾದಿಗಳು ಬಂದರೂ ಈ ಉಪಾಸನೆಯನ್ನು ಬಿಡಬಾರದು. ಬಿಟ್ಟು ವಿಷಯಾಸಕ್ತನಾದರೆ ಆತ್ಮನಾಶ, ಅಂದರೆ ಮೋಕ್ಷ ಸಿಗಲಾರದು, ನರಕ ಸಿಗುವುದು.

ಈ ಶ್ಲೋಕದ ಅರ್ಥ ಪ್ರಮಾಣ ಸಿದ್ಧವಾಗಿದೆ—

ಯಥೈಕಸ್ತು ಬಹೂನ್ ಸುಪ್ತಾನ್ ಅಸುಪ್ತಃ ಪಶ್ಯತಿ ಪ್ರಭುಃ ।
ಏವಮೀಶೋ ಬಹೂನ್ ಜೀವಾನ್ ಅಜ್ಞಾನ್ ಪಶ್ಯತಿ ನಿತ್ಯದೃಕ್ ॥

ಇತಿ ವ್ಯೋಮಸಂಹಿತಾಯಾಂ ।

ಸ್ವಪ್ನೇನ ಶಾರೀರಮಭಿಪ್ರಹತ್ಯಾಸುಪ್ತಃ ಸುಪ್ತಾನಭಿಚಾಕಶೀತಿ । ಇತಿ ಚ ।
ಯಥೇಷ್ಟ ಭವನಾದ್ ವಿಷ್ಣುರನುಭೂಃ ಪರಿಕೀರ್ತಿತಃ ।
ಉದಧಿಃ ಕರ್ಮಣಾಮೀಶಃ ಸರ್ವಃ ಪೂರ್ಣಗುಣೋ ಯತಃ ॥
ಸತ್ಯಃ ಕೇವಲ ಸಾರತ್ವಾತ್ ನಿಯಮೋ ನಿಯತೇರಜಃ ॥

ಇತಿ ಬೃಹತ್ಸಂಹಿತಾಯಾಂ ॥

ನಿದ್ದೆ ಮಾಡದಿರುವವನು ನಿದ್ದೆಮಾಡುವ ಬಹುಜನರನ್ನು ಒಬ್ಬನೇ ನೋಡುವಂತೆ ಪರಮಾತ್ಮನೂ ಅಜ್ಞಾನಬದ್ಧರಾದ ಬಹುಜೀವರನ್ನು ಸರ್ವಜ್ಞನಾದ ತಾನೊಬ್ಬನೇ ನೋಡುತ್ತಾನೆ ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ. ಜೀವರಿಗೆ ಗಾಢನಿದ್ರೆ ಬರಿಸಿ ಪರಮಾತ್ಮ ತಾನು ನಿದ್ದೆ ಇಲ್ಲದವನಾಗಿದ್ದು ನಿದ್ರಿಸುವ ಜೀವರನ್ನು ಚೆನ್ನಾಗಿ ನೋಡುತ್ತಾನೆ ಎಂದೂ ಶ್ರುತಿ ಇದೆ. ಇಚ್ಛಾನುಸಾರ ರೂಪ ತಾಳುವುದರಿಂದ ಅನುಭೂಃ ಎಂದೂ, ಕರ್ಮಗಳಿಗೆ ಪ್ರೇರಕನಾದ್ದರಿಂದ ಉದಧಿ ಎಂದೂ, ಪೂರ್ಣಗುಣ ಉಳ್ಳವನಾದ್ದರಿಂದ ಸರ್ವ ಎಂದೂ, ಸರ್ವೋತ್ತಮನಾದರಿಂದ ಸತ್ಯ ಎಂದೂ ಎಲ್ಲರನ್ನೂ ನಿಯಮಿಸುವುದರಿಂದ ನಿಯಮ ಎಂದೂ ವಿಷ್ಣು ಕರೆಸಿಕೊಳ್ಳುವನೆಂದು ಬೃಹತ್ಸಂಹಿತೆಯಲ್ಲಿ ಹೇಳಿದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಸ್ವಪ್ನಜನೇಕ್ಷಿತೈಕಃ' ಎಂದು ಅಪಪಾಠವಿಟ್ಟು ಕೊಂಡು ಜೀವನು ಸ್ವಪ್ನದಲ್ಲಿ ಅನೇಕ ಶರೀರಧಾರಿಯಾಗಿ ಒಬ್ಬನೆ ಎಲ್ಲ ಶರೀರಗಳಲ್ಲಿ ದ್ರಷ್ಟೃವೆನಿಸುವಂತೆ ಭಗವಂತ ತಾನೇ ಎಲ್ಲ ಜೀವಶರೀರಗಳಲ್ಲಿ ದ್ರಷ್ಟೃ ಎನಿಸುತ್ತಾನೆ ಎಂದು ಅದ್ವೈತವನ್ನು ಹೇಳುತ್ತಾರೆ. ಇದು ಪ್ರಮಾಣ ವಿರುದ್ಧ.

★★★

ಉತ್ತಮಾಧಿಕಾರಿಗಳ ಧ್ಯಾನಪ್ರಕಾರವನ್ನು ಹೇಳಿ ಈಗ ಇತರರ ಧ್ಯಾನ ಪ್ರಕಾರವನ್ನು ಹೇಳುತ್ತಾರೆ—

ಅದೀನ ಲೀಲಾ ಹಸಿತೇಕ್ಷಣೋಲ್ಲಸದ್
ಭ್ರೂಭಂಗ ಸಂಸೂಚಿತಭೂರ್ಯನುಗ್ರಹಂ ।
ಈಕ್ಷೇತ ಚಿಂತಾಮಯಮೇನಮೀಶ್ವರಂ
ಯಾವನ್ಮನೋ ಧಾರಣಯಾऽವತಿಷ್ಠತೇ ॥ ೧೩ ॥

ಉತ್ತಮ ಲೀಲಾ ಮಂದಹಾಸ ಪೂರ್ವಕವಾದ ನೋಟದಲ್ಲಿ ಶೋಭಿಸುವ ಹುಬ್ಬಿನ ಕುಣಿತದಿಂದಲೆ ಮಹಾ ಅನುಗ್ರಹವನ್ನು ಸೂಚಿಸುತ್ತಿರುವಂತೆ, ತನ್ನನ್ನು ಚಿಂತಿಸುವವರಿಗೆ ಚಿಂತಿತವಾದ ಅಭೀಷ್ಟವನ್ನು ನೀಡುತ್ತಿರುವಂತೆ ಪರಮಾತ್ಮನನ್ನು ಧ್ಯಾನಿಸಬೇಕು. ಅವಯವಧ್ಯಾನದಿಂದ ಸಮಗ್ರರೂಪಧ್ಯಾನದಲ್ಲಿ ಮನಸ್ಸು ನಿಲ್ಲುವವರೆಗೂ ಹೀಗೇ ಧ್ಯಾನಿಸಬೇಕು.

ಇಲ್ಲಿ ಚಿಂತಾಮಯ ಎಂದರೆ ಚಿಂತೆಯ ಪರಿಣಾಮರೂಪನು ಪರಮಾತ್ಮ ಎಂದಂತೆ ಕಾಣುತ್ತದೆ. ಪರಮಾತ್ಮವಸ್ತು ಯಾವುದೇ ಬೇರೆ ವಸ್ತುವಿನ ಪರಿಣಾಮವಲ್ಲ. ಚಿಂತಾವಿಷಯನೆಂದು ವೀರರಾಘವ ವ್ಯಾಖ್ಯಾನ. ಚಿಂತಾವಿಷಯನೆಂದು ಪರಮಾತ್ಮನನ್ನು ಚಿಂತಿಸಬೇಕೆ? ಚಿಂತಾ ವಿಷಯತ್ವವೇ ದೊಡ್ಡ ಗುಣವಲ್ಲ. ಅದು

ಹೇಯ ಪದಾರ್ಥದಲ್ಲಿಯೂ ಇದೆ. ಚಿಂತೆಯಿಂದಲೇ ಆವಿರ್ಭವಿಸುವನೆನ್ನುತ್ತವೆ ಶ್ರೀಧರಾದಿ ವ್ಯಾಖ್ಯಾನಗಳು. ಪರಮಾತ್ಮ ಒಲಿದರೆ ಮಾತ್ರ ತಾನೆ ಸ್ವೇಚ್ಛೆಯಿಂದಲೆ ಆವಿರ್ಭವಿಸುವನು ಹೊರತು ನಮ್ಮ ಚಿಂತೆಯಿಂದಲೇ ಅಲ್ಲ. ಮತ್ತು ಈ ಅರ್ಥ ಶಬ್ದದಿಂದ ಹೇಗೆ ಹೊರಡುತ್ತದೆ? ಅದರಿಂದ ಹೀಗೆ ಹೇಳಬೇಕು—

ಚಿಂತಾಮಯಂ ಚಿಂತಾಪ್ರಧಾನಂ ।
ಯಸ್ಮಾತ್ ಸ ಚಿಂತಿತೋ ವಿಷ್ಣುಶ್ಚಿಂತಿತಂ ಪ್ರದದಾತ್ಯಜಃ ।
ತಸ್ಮಾಚ್ಚಿಂತಾಮಯಂ ದೇವಂ ವದಂತಿ ಜ್ಞಾನಚಕ್ಷುಷಃ ॥ ಇತಿ ಚ ।

ಚಿಂತಾಮಯ ಎಂದರೆ ಉಪಾಸಕರಿಗೆ ಸುಖ ನೀಡಲು ಅವರು ಮಾಡುವ ಭಕ್ತಿಪೂರ್ವಕ ಚಿಂತೆಯನ್ನು ಪ್ರಧಾನ ಸಾಧನವಾಗಿ ಪರಿಗಣಿಸುವವನು ಎಂದರ್ಥ.

ಪರಮಾತ್ಮನನ್ನು ಚಿಂತಿಸಿದರೆ ಚಿಂತಿತವಾದ ಫಲನೀಡುತ್ತಾನೆ. ಅದರಿಂದ ಜ್ಞಾನಿಗಳು ಅವನನ್ನು ಚಿಂತಾಮಯ ಎನ್ನುತ್ತಾರೆ. ಎಂದೂ ಬೃಹತ್ಸಂಹಿತೆಯಲ್ಲಿ ಹೇಳಿದೆ.

★★★

ನಿತ್ಯವೂ ಈ ರೀತಿ ಧ್ಯಾನ ಮಾಡಿದ ಬಳಿಕ ಹಿಂದೆ ಹೇಳಿದ ವಿರಾಟ್ ಧ್ಯಾನವನ್ನೂ ಮಾಡಬೇಕು. ಅದರಿಂದ ದೃಢಭಕ್ತಿಪೂರ್ವಕವಾದ ಅಖಂಡ ಧ್ಯಾನ ಮಾಡುವ ಸಾಮರ್ಥ್ಯ ಲಭಿಸುತ್ತದೆ—

ಯಾವನ್ನ ಜಾಯೇತ ಪರಾವರೇಽಸ್ಮಿನ್
ವಿಶ್ವೇಶ್ವರೇ ದ್ರಷ್ಟರಿ ಭಕ್ತಿಯೋಗಃ ।
ತಾವತ್ ಸ್ಥವೀಯಃ ಪುರುಷಸ್ಯ ರೂಪಂ
ಕ್ರಿಯಾವಸಾನೇ ಪ್ರಯತಃ ಸ್ಮರೇತ ॥ ೧೫ ॥

ಉತ್ತಮರಾದ ಬ್ರಹ್ಮಾದಿಗಳಿಗಿಂತಲೂ ಉತ್ತಮನಾದ ಸರ್ವಸಾಕ್ಷಿ ವಿಶ್ವನಿಯಾಮಕನಾದ ಈ ಹರಿಯಲ್ಲಿ ಅಖಂಡಧ್ಯಾನಸಾಧನವಾದ ದೃಢಭಕ್ತಿ ಒದಗಿಬಾರದ ತನಕವೂ ಷಡ್ಗುಣಪೂರ್ಣನಾದ ಆ ಭಗವಂತನ ವಿರಾಡ್ರೂಪವನ್ನು ನಿತ್ಯಕರ್ಮಾನುಷ್ಠಾನದ ಕೊನೆಯಲ್ಲಿ ಪ್ರಯತ್ನಪೂರ್ವಕವಾಗಿ ಧ್ಯಾನಿಸಲೇಬೇಕು.

ಇಲ್ಲಿ 'ಸ್ಥವೀಯಃ' ಮಹತ್ತಾದ ಎಂದರೇನು? ಯಾವ ರೂಪ ವಿವಕ್ಷಿತವಾಗಿದೆ? ವೀರರಾಘವ ವ್ಯಾಖ್ಯಾನದಲ್ಲಿ 'ಹೃದಯಾಂತರ್ಗತ ಪ್ರಾದೇಶಪರಿಮಿತವಾದ ಭಗವಚ್ಛರೀರವೇ ಇಲ್ಲಿ ವಿವಕ್ಷಿತ. ವಿರಾಡ್ರೂಪವಲ್ಲ, ಪ್ರಾದೇಶರೂಪಧ್ಯಾನಕ್ಕೆ ವಿರಾಡ್ರೂಪಧ್ಯಾನ ಉಪಯುಕ್ತವಲ್ಲ. ಒಂದು ರೂಪದ ಧ್ಯಾನಕ್ಕೆ ಇನ್ನೊಂದು ರೂಪದ ಧ್ಯಾನವೇಕೆ? ಅದರಿಂದ ವಿರಾಡ್ರೂಪವೆಂದೆನ್ನುವ ವ್ಯಾಖ್ಯಾನ ಅಜ್ಞಾನ ಮೂಲಕ'

ಎಂದಿದೆ.[೧] ಆದರೆ ಇಲ್ಲಿ ಭಕ್ತಿಯೋಗವೆಂದರೆ ಪ್ರಾದೇಶಧ್ಯಾನವಲ್ಲ, ಪ್ರಾದೇಶ ಧ್ಯಾನಕ್ಕೆ ಸಾಧನವಾದ ಭಕ್ತಿ. ಆ ಭಕ್ತಿಗೆ ವಿರಾಡ್ರೂಪಧ್ಯಾನ ಕಾರಣವೆಂದರೆ ತಪ್ಪಾಗುವುದಿಲ್ಲ. ಅದರಿಂದ ಹೀಗೇ ಹೇಳಬೇಕು—

ಸ್ಥವೀಯಃ ಪಾತಾಲಮೇತಸ್ಯೇತ್ಯಾದಿ ।

'ಸ್ಥವೀಯಃ' ಅತಿಮಹತ್ತಾದ ರೂಪವೆಂದರೆ 'ಪಾತಾಲವು ಈತನ ಪಾದತಲ' ಎಂದು ಮುಂತಾಗಿ ಹಿಂದೆ ಹೇಳಿದ ವಿರಾಡ್ರೂಪ.

★★★

ಹೀಗೆ ಸ್ವಯೋಗ್ಯ ಧ್ಯಾನ ಮಾಡಿ ಅದರಿಂದ ಅಪರೋಕ್ಷಾನಂತರ ಪ್ರಾರಬ್ಧವನ್ನೂ ತೀರಿಸಿ ಚರಮಶರೀರತ್ಯಾಗ ಮಾಡಬಯಸುವ ಜ್ಞಾನಿ ಏನು ಮಾಡಬೇಕು ಎಂದು ಹೇಳುತ್ತಾರೆ—

ಸ್ಥಿರಂ ಸುಖಂ ಚಾಸನಮಾಸ್ಥಿತೋ ಯತಿ-
ರ್ಯದಾ ಜಿಹಾಸುರಿಮಮಂಗ ಲೋಕಂ ।
ಕಾಲೇ ಚ ದೇಶೇ ಚ ಮನೋ ನ ಸಜ್ಜೇತ್
ಪ್ರಾಣಾನ್ನಿಯಚ್ಛೇನ್ಮನಸಾ ಜಿತಾಸುಃ ॥ ೧೬ ॥

ಇಂದ್ರಿಯನಿಗ್ರಹವುಳ್ಳ ಅಪರೋಕ್ಷಜ್ಞಾನಿ ಈ ಚರಮ ಶರೀರವನ್ನು ಬಿಡಲು ಇಚ್ಛಿಸಿದಾಗ ಸ್ಥಿರವಾದ ಸುಖಕರವಾದ ಆಸನದಲ್ಲಿ ಕುಳಿತು ಶರೀರತ್ಯಾಗಕ್ಕೆ ಇದು ಪುಣ್ಯಕಾಲವೆ? ಪುಣ್ಯದೇಶವೆ? ಎಂದು ಚಿಂತೆ ಮಾಡದೆ ಭಕ್ತಿಯಿಂದ ಪ್ರಾಣಾಯಾಮ ಮಾಡಿ ಪ್ರಾಣನ ಅನುಗ್ರಹ ಪಡೆದು ವಾಗಾದಿ ಇಂದ್ರಿಯ ದೇವತೆಗಳನ್ನು ಮನೋಭಿಮಾನಿಯ ವಶರೆಂದು ಧ್ಯಾನಿಸಬೇಕು.

ಇಲ್ಲಿ ಜಿತಾಸುಃ ಎಂದರೆ, ಪ್ರಾಣನನ್ನು ವಶದಲ್ಲಿ ತಂದುಕೊಂಡವನೆಂದು ಹೇಳಿದೆ. ಆದರೆ ದೇವೋತ್ತಮನಾದ ಅಂತರ್ಯಾಮಿಯಾದ ಪ್ರಾಣನನ್ನು ಯಾರು ತಾನೆ ವಶಕ್ಕೆ ತಂದುಕೊಳ್ಳಬಲ್ಲ? ಅದಕ್ಕೆ ಹೀಗೆ ಹೇಳಬೇಕು—

ಭಕ್ತ್ಯಾ ಪ್ರಾಣಂ ವಶಂ ನೀತ್ವಾ ಜಿತಪ್ರಾಣೋ ಭವತ್ಯುತ ॥

ಇತಿ ಷಾಡ್ಗುಣ್ಯೇ।

---

೧. ಸ್ಥವಿಷ್ಠಂ ರೂಪಂ ವೈರಾಜಸ್ಯ ಪೂರ್ವೋಕ್ತಂ ರೂಪಮಿತಿ ತು ಮಂದಂ । ರೂಪಾಂತರೋಪಾಸನಾಯಾ ಏತದ್ರೂಪೋಪಾಸನಾನುಪಯುಕ್ತತ್ವಾತ್ । -ವೀರರಾಘವಃ ।

ಭಕ್ತಿಯಿಂದ ಪ್ರಾಣನನ್ನು ವಶಕ್ಕೆ ತಂದುಕೊಂಡು ಜಿತಾಸು ಎನ್ನಿಸುತ್ತಾನೆ ಎಂದು ಷಾಡ್ಗುಣ್ಯ ಎಂಬ ಗ್ರಂಥದಲ್ಲಿ ಹೇಳಿದೆ.

★★★

ಜ್ಞಾನಿ, ಚರಮ ಶರೀರ ತ್ಯಾಗ ಕಾಲದಲ್ಲಿ ಇಂದ್ರಿಯ ದೇವತೆಗಳನ್ನು ಮನೋದೇವತೆಯ ಅಧೀನರೆಂದು ಚಿಂತಿಸಿದ ಬಳಿಕ ಮುಂದೆ ಮಾಡಬೇಕಾದುದನ್ನು ಹೇಳುತ್ತಾರೆ—

ಮನಶ್ಚ ಬುದ್ಧ್ಯಾಽಮಲಯಾ ನಿಯಮ್ಯ
ಕ್ಷೇತ್ರಜ್ಞ ಏತಾಂ ನಿನಯೇತ್ ತಮಾತ್ಮನಿ ।
ಆತ್ಮಾನಮಾತ್ಮನ್ಯವರುಧ್ಯ ಧೀರೋ
ಲಬ್ಧೋಪಶಾಂತಿರ್ವಿರಮೇತ ಕೃತ್ಯಾತ್ ॥ ೧೬ ॥

ಮನೋಭಿಮಾನಿರುದ್ರನನ್ನು ಬುಧ್ಯಭಿಮಾನಿನಿ ಸರಸ್ವತಿಯ ಅಧಿನನೆಂದು ಚಿಂತಿಸಿ ಬುಧ್ಯಭಿಮಾನಿನಿಯನ್ನು ಬ್ರಹ್ಮಲಕ್ಷ್ಮೀದ್ವಾರಾ ಜೀವಾಂತರ್ಯಾಮಿ ವಿಷ್ಣುವಿನ ವಶಳೆಂದು ಚಿಂತಿಸಬೇಕು. ಜೀವಾಂತರ್ಯಾಮಿ ವಿಷ್ಣುರೂಪವನ್ನು ದೇಹಾಂತರ್ಗತ ವಿಷ್ಣುರೂಪದೊಂದಿಗೆ ಐಕ್ಯದಿಂದ ಚಿಂತಿಸಬೇಕು. ದೇಹಾಂತರ್ಗತ ರೂಪವನ್ನೂ ಸರ್ವವ್ಯಾಪ್ತರೂಪದಲ್ಲಿ ಐಕ್ಯದಿಂದ ಚಿಂತಿಸಿ ಪರಮಾನಂದ ಹೊಂದಿ ಸುಮ್ಮನಾಗ ಬೇಕು. ಮುಂದೆ ಇನ್ನೂ ಉತ್ತಮವಾದ ಬೇರೆ ಧ್ಯೇಯ ವಸ್ತು ಇಲ್ಲದ್ದರಿಂದ ಬೇರೆ ಧ್ಯಾನವಿಲ್ಲ.

ಇಲ್ಲಿ 'ಕ್ಷೇತ್ರಜ್ಞ' 'ಆತ್ಮ'ಶಬ್ದಗಳು ವಿಷ್ಣುವಾಚಕವೆನ್ನುವುದು ಹೇಗೆ? ಏನು ಆಧಾರ? ಮನಸ್ಸು ಬುದ್ಧಿಗಳ ಲಯಕ್ಕೂ ಕ್ಷೇತ್ರಜ್ಞ ಆತ್ಮರ ಲಯಕ್ಕೂ ವ್ಯತ್ಯಾಸವಿಲ್ಲವೆ? ಎಂದರೆ,

ಜೀವಸ್ಥೋ ಭಗವಾನ್ ವಿಷ್ಣುಃ ಕ್ಷೇತ್ರಜ್ಞ ಇತಿ ಗೀಯತೇ ।
ದೇಹಸ್ಥೋಽಪಿ ಸ ಏವಾತ್ಮಾ ವ್ಯಾಪ್ತೋಽಪ್ಯಾತ್ಮೇತಿ ಭಣ್ಯತೇ ।
ಇತಿ ತತ್ವನಿರ್ಣಯೇ ।

ಹರೌ ಹರೇರ್ಭವೇನ್ನೀತಿಸ್ತದೇಕತ್ವಸ್ಯ ಚಿಂತನಂ ।
ಅನ್ಯತ್ರ ತನ್ನಿಯಮ್ಯಾದಿಚಿಂತನಂ ನೀತಿರುಚ್ಯತೇ ।
ಇತಿ ಪ್ರಕಾಶಸಂಹಿತಾಯಾಂ ।

ಜೀವಾಂತರ್ಯಾಮಿ ವಿಷ್ಣುರೂಪ ಕ್ಷೇತ್ರಜ್ಞ ಎನಿಸುತ್ತದೆ. ದೇಹಾಂತರ್ಯಾಮಿ

ಆತ್ಮ ಎನಿಸುತ್ತದೆ. ವ್ಯಾಪ್ತರೂಪವೂ ಆತ್ಮ ಎನಿಸುತ್ತದೆ ಎಂದು ತತ್ವನಿರ್ಣಯ ಗ್ರಂಥದಲ್ಲಿ ಹೇಳಿದೆ. ಹರಿಯ ಒಂದು ರೂಪಕ್ಕೆ ಇನ್ನೊಂದು ರೂಪದಲ್ಲಿ ಲಯವೆಂದರೆ ಅವುಗಳಿಗೆ ಐಕ್ಯ ಚಿಂತನೆಯೇ ಆಗಿದೆ. ಬೇರೆ ದೇವತೆಗಳಿಗೆ ಅಧೀನತ್ವಾದಿ ಚಿಂತನೆ ಲಯವೆನಿಸುತ್ತದೆ ಎಂದು ಪ್ರಕಾಶ ಸಂಹಿತೆಯಲ್ಲಿ ಹೇಳಿದೆ.

★★★

ವಿಷ್ಣುವಿಗಿಂತ ಉತ್ತಮವಾದ ಧ್ಯೇಯವಸ್ತು ಇಲ್ಲ, ವಿಷ್ಣುಲೋಕಕ್ಕೆ ಸಮವಾದ ಲೋಕವೂ ಇಲ್ಲ ಎನ್ನುತ್ತಾರೆ.

ನ ಯತ್ರ ಕಾಲೋಽನಿಮಿಷಾಂ ಪರಃ ಪ್ರಭುಃ
ಕುತೋ ನು ದೇವಾ ಜಗತಾಂ ಯ ಈಶಿರೇ ।
ನ ಯತ್ರ ಸತ್ವಂ ನ ರಜಸ್ತಮಶ್ಚ
ನ ವೈ ವಿಕಾರೋ ನ ಮಹಾನ್ ಪ್ರಧಾನಂ ॥ ೧೮ ॥

ವಿಷ್ಣುವಿನ ವಿಷಯದಲ್ಲಿ ದೇವೋತ್ತಮ ಮುಖ್ಯಪ್ರಾಣ ಏನೂ ಮಾಡಲು ಶಕ್ತನಲ್ಲವೆಂದಮೇಲೆ ಬೇರೆ ದೇವತೆಗಳ ಪಾಡೇನು? ಅವರು ಬೇರೆ ಲೋಕಗಳನ್ನು ಆಳಬಲ್ಲರು. ಜಗತ್ತಿಗೆ ಕಾರಣವಾದ ಸತ್ವ ರಜ ತಮಸ್ಸುಗಳಾಗಲಿ ಅಹಂಕಾರ ಮಹತ್ತತ್ವ ಪ್ರಧಾನಗಳಾಗಲಿ ವಿಷ್ಣುವಿನ ಸೃಷ್ಟ್ಯಾದಿ ವಿಷಯದಲ್ಲಿ ಏನೂ ಮಾಡಲು ಶಕ್ತವಲ್ಲ.

ಇಲ್ಲಿ 'ಅನಿಮಿಷಾಂ ಪರಃ ಪ್ರಭುಃ ಕಾಲಃ' ಎಂದು ಬ್ರಹ್ಮಾದಿ ದೇವತೆಗಳಿಗೂ ಮೀರಿದ ಶಕ್ತಿಶಾಲಿ ಕಾಲ ಎಂದು ಹೇಳಿದಂತೆ ಕಾಣುತ್ತದೆ. ಆದರೆ ಜಡವಾದ ಕಾಲಕ್ಕೆ ಬ್ರಹ್ಮಾದಿ ದೇವತೆಗಳನ್ನು ಆಳುವ ಶಕ್ತಿ ಉಂಟೆ? ಬೇರೆ ಎಲ್ಲ ವ್ಯಾಖ್ಯಾನಕಾರರೂ ಹೀಗೇ ವ್ಯಾಖ್ಯಾನ ಮಾಡಿದ್ದಾರೆ. ಅದು ಸರಿಯಲ್ಲ. ಹೀಗೆ ಹೇಳಬೇಕು—

ಕಾಲೋ ವಾಯುಃ ।

ಹರಿಶ್ಚ ಪ್ರಕೃತಿಶ್ಚೈವ ಬ್ರಹ್ಮವಾಯೂ ತಥೈವ ಚ ।
ಸುಪರ್ಣಶೇಷರುದ್ರಾಶ್ಚ ಶಕ್ರಃ ಸೂರ್ಯಯಮಾವಪಿ ।
ಅಗ್ನಿರ್ಯಮಾನುಜಶ್ಚೈವ ಕಾಲಶಬ್ದೇರಿತಾಃ ಕ್ರಮಾತ್ ।
ಪೂರ್ವೋಕ್ತಾಸ್ತ್ವಪರೋಕ್ತಾನಾಂ ಪ್ರಭವಃ ಸರ್ವಶೋ ಮತಾಃ ।
ಇತ್ಯುದ್ದಾಮಸಂಹಿತಾಯಾಂ ।

ಇಲ್ಲಿ ಕಾಲ ಎಂದರೆ ವಾಯು ವಿವಕ್ಷಿತನಾಗಿದ್ದಾನೆ. ಏಕೆಂದರೆ ಶ್ರೀಹರಿ, ಲಕ್ಷ್ಮಿ, ಬ್ರಹ್ಮವಾಯುಗಳು, ಗರುಡಶೇಷರುದ್ರರು, ಇಂದ್ರ, ಸೂರ್ಯಯಮರು, ಅಗ್ನಿ, ಶನಿ

ಇವರು ಕಾಲಶಬ್ದವಾಚ್ಯರು. ಇವರೆಲ್ಲರೂ ಮೊದಮೊದಲು ಉಕ್ತರಾದ್ದವರು ಅನಂತರ ಉಕ್ತರಾದವರನ್ನು ಶಾಸ್ತಿ ಮಾಡಬಲ್ಲರು ಎಂದು ಉದ್ದಾಮಸಂಹಿತೆಯಲ್ಲಿ ಹೇಳಿದೆ.

ಆದರಿಂದ 'ಅನಿಮಿಷಾಂ ಪರಃ ಪ್ರಭುಃ ಕಾಲಃ' ಎಂದರೆ ರುದ್ರಾದಿ ಕಾಲದೇವತೆಗಳನ್ನು ಆಳುವ ಕಾಲದೇವತೆ ಮುಖ್ಯಪ್ರಾಣ ವಿವಕ್ಷಿತ.

★★★

ಜ್ಞಾನಿಯ ದೇಹೋತ್ಕ್ರಮಣ ಪ್ರಕಾರವನ್ನು ಹೇಳುತ್ತಾರೆ—

ನಾಭ್ಯಾಂ ಸ್ಥಿತಂ ಹೃದ್ಯವರೋಪ್ಯ ತಸ್ಮಾದ್
ಉದಾನಗತ್ಯೋರಸಿ ತಂ ನಯೇನ್ಮುನಿಃ ।
ತತೋಽನುಸಂಧಾಯ ಧಿಯಾ ಮನಸ್ವೀ
ಸ್ವತಾಲುಮೂಲಂ ಶನಕೈರ್ನಯೇತ ॥ ೨೧ ॥

ಮೂಲಾಧಾರದಿಂದ ಉದಾನವಾಯುವನ್ನು ನಾಭಿಗೆ ತಂದು ಅಲ್ಲಿಂದ ಹೃದಯಕ್ಕೂ ಹೃದಯದಿಂದ ಎದೆಗೂ ಅಲ್ಲಿಂದ ನಿಧಾನವಾಗಿ ತಾಲುಮೂಲಕ್ಕೂ ಬ್ರಹ್ಮನಾಡಿ ಮಾರ್ಗದಿಂದಲೆ ತರಬೇಕು. ಬೇರೆ ನಾಡಿಗೆ ಹೋಗದಂತೆ ಮನಸ್ಸಿನಿಂದ ಅನುಸಂಧಾನ ಮಾಡಬೇಕು,

ಇಲ್ಲಿ ನಾಭಿ ಹೃದಯ ಎದೆ ತಾಲು ಹುಬ್ಬುಗಳ ಮಧ್ಯ ಶಿರಸ್ಸು ಇವೆಲ್ಲವೂ ಬ್ರಹ್ಮನಾಡಿಯಲ್ಲಿಯೆ ನಾಭಿ ಮುಂತಾದವುಗಳಿಗೆ ಸಮೀಪದಲ್ಲಿ ಇರುವ ಷಡ್‌ದಲ ಮುಂತಾದ ಪದ್ಮಗಳು ಎಂದು ವಿವಕ್ಷಿತವಾಗಿವೆ.

ಇಲ್ಲಿ 'ಉದಾನಗತಿ' ಎಂದರೆ 'ಉದಾನವಾಯುವಿನ ಗತಿ'ಯಲ್ಲ, ಉದಾನವಾಯುವಿನ ಗತಿ ಅಂದರೆ ಸಂಚಾರ ಉಳ್ಳ ಬ್ರಹ್ಮನಾಡಿ.

ಉದಾನಗತ್ಯಾ ಬ್ರಹ್ಮನಾಡ್ಯಾ। 'ಅಥೈಕಯೋರ್ಧ್ವ ಉದಾನಃ' ಇತಿ ಶ್ರುತೇಃ॥
ಪ್ರಾಣಾಪಾನಾವಿಡಾಯಾಂ ಚ ಪಿಂಗಲಾಯಾಂ ಚ ವರ್ತತಃ ।
ವ್ಯಾನಃ ಸಂಧಿಷು ಸರ್ವತ್ರ ಉದಾನೋ ಬ್ರಹ್ಮನಾಡಿಗಃ ।
ಸರ್ವತ್ರೈವ ಸಮಾನಸ್ತು ಸಮಂ ಚರತಿ ಸರ್ವಗಃ ॥

ಇತಿ ಭಾರತೇ ।

ಉದಾನಗತಿ ಎಂದರೆ ಬ್ರಹ್ಮನಾಡಿ. 'ಉದಾನವಾಯು ಒಂದು ಪ್ರಧಾನ ನಾಡಿಯಿಂದ ಮೇಲೇರುತ್ತದೆ' ಎಂದು ಶ್ರುತಿ ಇದೆ. ಪ್ರಾಣ ಅಪಾನಗಳು ಇಡಾಪಿಂಗಲಾ ನಾಡಿಗಳಲ್ಲಿ ಸಂಚರಿಸುತ್ತವೆ. ವ್ಯಾನ ಸಂಧಿಗಳಲ್ಲಿರುವ ನಾಡಿಗಳಲ್ಲಿ

ಉದಾನ ಬ್ರಹ್ಮನಾಡಿಯಲ್ಲಿ ಮತ್ತು ಎಲ್ಲೆಡೆ ಸಮಾನವಾಗಿ ಸಂಚರಿಸುವ ಸಮಾನ ಎಲ್ಲ ನಾಡಿಗಳಲ್ಲಿ ಸಂಚರಿಸುತ್ತದೆ ಎಂದು ಮಹಾಭಾರತದಲ್ಲಿದೆ.

★★★

ತಾಲುಮೂಲದಿಂದ ಮುಂದೆ ಉದಾನವಾಯುವನ್ನು ಎಲ್ಲಿಗೆ ಒಯ್ಯಬೇಕು ಎಂದು ಹೇಳುತ್ತಾರೆ—

ತಸ್ಮಾದ್ ಭ್ರುವೋರಂತರಮುನ್ನಯೇತ
ನಿರುದ್ಧಸಪ್ತಾಶ್ವಪಥೋಽನಪೇಕ್ಷಃ ।
ಸ್ಥಿತ್ವಾ ಮುಹೂರ್ತಾರ್ಧಮಕುಂಠದೃಷ್ಟಿ-
ರ್ನಿರ್ಭಿದ್ಯ ಮೂರ್ಧನ್ ವಿಸೃಜೇತ್ ಪರಂ ಗತಃ ॥ ೨೨ ॥

ಏಳು ಕುದುರೆಗಳಂತಿರುವ ಕಿವಿ ಕಣ್ಣು ಮೂಗು ನಾಲಿಗೆ ಎಂಬ ಇಂದ್ರಿಯಗಳ ಚಟುವಟಿಕೆಗಳನ್ನು ತಡೆದು ನಿಲ್ಲಿಸಿ ವಿಷಯ ಸುಖಾಪೇಕ್ಷೆಯನ್ನು ತೊರೆದು ತಾಲುಮೂಲದಲ್ಲಿರುವ ಉದಾನ ವಾಯುವನ್ನು ಮುಂದೆ ಹುಬ್ಬುಗಳ ನಡುವೆ ತಂದು ನಿಲ್ಲಿಸಿ ಅರ್ಧ ಮುಹೂರ್ತಕಾಲ ಹರಿಧ್ಯಾನ ಮಾಡಿ ಮಾರ್ಗದ ಬಗ್ಗೆ ಸರಿಯಾದ ದೃಷ್ಟಿ ಇಟ್ಟುಕೊಂಡು ಶಿರಸ್ಸಿನಲ್ಲಿ ಬ್ರಹ್ಮನಾಡಿಯ ದ್ವಿದಲ ಪದ್ಮಕ್ಕೆ ಉದಾನ ವಾಯುವನ್ನು ತರಬೇಕು. ಬಳಿಕ ಶಿರಸ್ಸನ್ನು ಭೇದಿಸಿ ಶರೀರ ತ್ಯಾಗ ಮಾಡಬೇಕು.

ಇದು ಪ್ರಾಣಾಯಾಮಾದಿ ಯೋಗಪ್ರಧಾನರಾದ ಸಾಧಕರಿಗೆ ಹೇಳಿದ್ದು ಹೊರತು ಎಲ್ಲರಿಗೆ ಅಲ್ಲ. ಭಕ್ತ್ಯಾದಿ ಪ್ರಧಾನರಾದ ಸಾಧಕರಿಗೆ ಇದು ಆವಶ್ಯಕವಲ್ಲ.

ಇಲ್ಲಿ 'ಪರಂ ಗತಃ' ಎಂದರೆ ಪರಬ್ರಹ್ಮಪ್ರಾಪ್ತ್ಯನಂತರ ಶರೀರತ್ಯಾಗ ಮಾಡಬೇಕೆಂದು ಹೇಳಿದಂತಿದೆ. ಹಾಗೇ ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ.[೧] ಆದರೆ ಉತ್ಕ್ರಮಣಾನಂತರ ಮಾರ್ಗದಲ್ಲಿ ಸಂಚಾರವಿದೆ. ಬಳಿಕ ಬ್ರಹ್ಮಲೋಕದಲ್ಲಿ ಪ್ರಳಯಪರ್ಯಂತ ಇದ್ದು ಪ್ರಲಯಾನಂತರ ಲಿಂಗಭಂಗ ಹೊಂದಿ ಪರಬ್ರಹ್ಮಪ್ರಾಪ್ತಿ. ಆದರಿಂದ ಹೀಗೆ ಹೇಳಬೇಕು—

ಪರಂ ಚಿಂತಯನ್ ।

'ಪರಬ್ರಹ್ಮನನ್ನು ಚಿಂತಿಸುತ್ತ' ಎಂದರ್ಥ.

'ಪರಂ ಮನಸಾ ಗತಃ' ಪರಬ್ರಹ್ಮನನ್ನು ಮನಸ್ಸಿನಿಂದ ಹೊಂದಿ ಎಂದರೆ ಚಿಂತಿಸಿ ಎಂದು ಮನಃಶಬ್ದ ಅಧ್ಯಾಹಾರ.

★★★

೧. ಪರಂ ಭಗವಂತಂ ಗತಃ ಸಾಯುಜ್ಯಂ ಪ್ರಾಪ್ತಃ । -ವಲ್ಲಭಃ

ದೇಹದಿಂದ ಉತ್ಕ್ರಮಣ ಹೊಂದಿದ ಜ್ಞಾನಿ ಪ್ರಳಯ ಪರ್ಯಂತ ಎಲ್ಲಿ ಇರುತ್ತಾನೆ, ಆಗ ಅವನ ಭೋಗಕ್ಕೆ ಜಡ ಮನಸ್ಸು ಇಂದ್ರಿಯಗಳು ಜೊತೆಗೆ ಇರುತ್ತವೆಯೆ ಎಂಬುದರ ಬಗ್ಗೆ ಹೇಳುತ್ತಾರೆ—

ಯದಿ ಪ್ರಯಾಸ್ಯತ್ಯಥ ಪಾರಮೇಷ್ಠ್ಯಂ
ವೈಹಾಯಸಾನಾಮುತ ಯದ್ ವಿಹಾರಂ ।
ಅಷ್ಟಾಧಿಪತ್ಯಂ ಗುಣಸನ್ನಿವಾಯೇ
ಸಹೈವ ಗಚ್ಛೇನ್ಮನಸೇಂದ್ರಿಯೈಶ್ಚ ॥ ೨೩ ॥

ದೇಹದಿಂದ ಉತ್ಕ್ರಮಣ ಹೊಂದಿದ ಜ್ಞಾನಿ ಬ್ರಹ್ಮಲೋಕಕ್ಕೆ ಅಥವಾ ಸಿದ್ಧರ ವಿಹಾರಸ್ಥಾನವಾದ ಮಹರಾದಿ ಲೋಕಕ್ಕೆ ಅಥವಾ ಅಣಿಮಾದಿ ಅಷ್ಟೈಶ್ವರ್ಯವಿರುವ ವೈಕುಂಠದ ಅಮುಕ್ತಸ್ಥಾನಕ್ಕೆ ಹೋಗುತ್ತಾನೆ. ಪರಮಮುಕ್ತಿ ಇನ್ನೂ ಬಂದಿಲ್ಲವಾದ್ದರಿಂದ ಜಡ ಮನಸ್ಸುಇಂದ್ರಿಯಗಳೊಂದಿಗೇ ಹೋಗುತ್ತಾನೆ.

ಯೋಗೇಶ್ವರಾಣಾಂ ಗತಿ ಮಾಮನಂತಿ
ಬಹಿಸ್ತ್ರಿಲೋಕ್ಯಾಃ ಪವನಾಂತರಾತ್ಮಾ ।
ನ ಕರ್ಮಭಿಸ್ತಾಂ ಗತಿಮಾಪ್ನುವಂತಿ
ವಿದ್ಯಾ ತಪೋ ಯೋಗ ಸಮಾಧಿಭಾಜಾಂ ॥ ೨೪ ॥

ಅಪರೋಕ್ಷಜ್ಞಾನ ತಪಸ್ಸು ಯೋಗ ನಿರಂತರಧ್ಯಾನಗಳಿಂದ ಯುಕ್ತರಾದ ಮಹಾಯೋಗಿಗಳು ಸೇರುವ ಸ್ಥಾನ ಮೂರು ಲೋಕಗಳ ಆಚೆಯೆ ಇದೆ. ಬ್ರಹ್ಮನಾಡಿಯಿಂದ ಉತ್ಕ್ರಮಣ ಹೊಂದಿದ ಪ್ರತೀಕಾಲಂಬನ ಯೋಗಿಗಳು ಸತ್ಯಲೋಕವನ್ನೂ ಅಪ್ರತೀಕಾಲಂಬನರು ವೈಕುಂಠದ ಅಮುಕ್ತಸ್ಥಾನವನ್ನೂ ಬೇರೆ ನಾಡಿಗಳಲ್ಲಿ ಉತ್ಕ್ರಾಂತಿ ಹೊಂದಿದವರು ಮಹರಾದಿ ಲೋಕಗಳನ್ನೂ ಹೊಂದುತ್ತಾರೆ. ಸತ್ಯಲೋಕದಲ್ಲಿ ತಮ್ಮ ಅಂತರಾತ್ಮನಾದ ಪವನನನ್ನೂ ವೈಕುಂಠದಲ್ಲಿ ಪವನನ ಅಂತರಾತ್ಮನಾದ ಹರಿಯನ್ನೂ ಜ್ಞಾನಿಗಳು ಹೊಂದುತ್ತಾರೆ. ಈ ಲೋಕಗಳನ್ನು ಕರ್ಮಾಚರಣೆಯಿಂದ ಯಾರೂ ಪಡೆಯಲಾರರು.

ಚಿನ್ಮಾತ್ರಾಣೇಂದ್ರಿಯಾಣ್ಯಾಹುರ್ಮುಕ್ತಾನಾಮನ್ಯದೈವ ತು ।
ತಾನ್ಯೇವ ಜಡಯುಕ್ತಾನಿ ಹ್ಯಭಿನ್ನಾನಿ ಸ್ವರೂಪತಃ ।

ಇತಿ ಬ್ರಾಹ್ಮೇ ।

ಪವನಸ್ಯಾಪ್ಯಂತರಾತ್ಮಾ ಯ ಸ್ತಂ । ಪವನಶ್ಚಾಂತರಾತ್ಮಾ ಚೇತಿ ವಾ ।

ಈಯುಸ್ತ್ರೀನ್ ಕರ್ಮಣಾ ಲೋಕಾನ್ ಜ್ಞಾನೇನೈವ ತದುತ್ತರಾನ್ ।
ತತ್ರ ಮುಖ್ಯಾ ಹರಿಂ ಯಾಂತಿ ತದನ್ಯೇ ವಾಯುಮೇವ ತು ।
ಅಪಕ್ವಾ ಯೇ ನ ತೇ ಯಾಂತಿ ವಾಯುಂ ವಾ ಹರಿಮೇವ ವಾ ।
ಸ್ಥಾನಮಾತ್ರಾಶ್ರಿತಾಸ್ತೇ ತು ಪುನರ್ಜನಿವಿವರ್ಜಿತಾಃ ।

ಇತಿ ಬ್ರಹ್ಮತರ್ಕೇ ।

'ಮುಕ್ತರ ಇಂದ್ರಿಯಗಳು ಅವರ ಸ್ವರೂಪದಿಂದ ಅಭಿನ್ನವಾಗಿರುವುದರಿಂದ ಚಿನ್ಮಯವೆನಿಸುವುವು. ಸಂಸಾರದಲ್ಲಿ ಆ ಚಿನ್ಮಯ ಇಂದ್ರಿಯಗಳು ಜಡೇಂದ್ರಿಯ ಮಿಶ್ರಗಳೇ ಆಗಿರುತ್ತವೆ' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

'ಪವನಾಂತರಾತ್ಮಾ' ಎಂಬಲ್ಲಿ 'ಯಃ ತಂ' ಎಂದು ಅಧ್ಯಾಹಾರ. 'ಪವನ'ನಿಗೆ ವಾಯುವಿಗೆ ಕೂಡ ಅಂತರಾತ್ಮನಾಗಿರುವ ವೈಕುಂಠಪತಿಯಾದ ವಿಷ್ಣುವನ್ನು ಎಂದು ಒಂದು ಅರ್ಥ. ಅಪ್ರತೀಕಾಲಂಬನರು ಅವನನ್ನು ವೈಕುಂಠದ ಅಮುಕ್ತಸ್ಥಾನದಲ್ಲಿ ಸೇರುತ್ತಾರೆ. 'ಪವನ'ನೆಂಬ ಚತುರ್ಮುಖನೆಂಬ ಅಂತರಾತ್ಮನನ್ನು ಪ್ರತೀಕಾ ಲಂಬನರು ಸತ್ಯಲೋಕದಲ್ಲಿ ಹೊಂದುತ್ತಾರೆ ಎಂದು ಇನ್ನೊಂದು ಅರ್ಥ.

ಬ್ರಹ್ಮತರ್ಕದಲ್ಲಿ ಹೀಗೆ ಹೇಳಿದೆ— ಯಾಗಾದಿ ಕಾಮ್ಯಕರ್ಮಗಳಿಂದ ಭೂಮಿ ಅಂತರಿಕ್ಷ ಸ್ವರ್ಗಲೋಕಗಳನ್ನು ಹೊಂದುತ್ತಾರೆ. ಅಲ್ಲಿಂದ ಮೇಲಿನ ಜನಲೋಕಾದಿಗಳನ್ನು ಜ್ಞಾನದಿಂದಲೆ ಹೊಂದಬೇಕು. ಜ್ಞಾನಿಗಳಲ್ಲಿ ಮುಖ್ಯರಾದ ಅಪ್ರತೀಕಾಲಂಬನರು ವೈಕುಂಠದಲ್ಲಿ ಹರಿಯನ್ನು ಹೊಂದುತ್ತಾರೆ. ಬೇರೆ ಪ್ರತೀಕಾಲಂಬನರು ಬ್ರಹ್ಮನನ್ನು ಹೊಂದುತ್ತಾರೆ. ಬ್ರಹ್ಮನಾಡಿಗಿಂತ ಬೇರೆ ನಾಡಿಗಳಲ್ಲಿ ಉತ್ಕ್ರಮಣ ಹೊಂದುವವರು ಬ್ರಹ್ಮನನ್ನಾಗಲಿ ಹರಿಯನ್ನಾಗಲಿ ಹೊಂದದೆ ಮಹರಾದಿಲೋಕಗಳಲ್ಲಿರುತ್ತಾರೆ. ಅವರಿಗೂ ಪುನರ್ಜನ್ಮವಿರುವುದಿಲ್ಲ'.

★★★

ದೇಹದಿಂದ ಉತ್ಕ್ರಮಣ ಹೊಂದಿದ ಜ್ಞಾನಿಗಳು ತಮ್ಮ ಸ್ಥಾನಗಳಿಗೆ ಹೋಗುವ ಮಾರ್ಗವನ್ನು ಹೇಳುತ್ತಾರೆ-

ವೈಶ್ವಾನರಂ ಯಾತಿ ವಿಹಾಯಸಾ ಗತಃ
ಸುಷುಮ್ನಯಾ ಬ್ರಹ್ಮಪಥೇನ ಶೋಚಿಷಾ ।
ವಿಧೂತಕಲ್ಕೋऽಥ ಹರೇರುದಸ್ತಾತ್
ಪ್ರಯಾತಿ ಚಕ್ರಂ ನೃಪ ಶೈಂಶುಮಾರಂ ॥ ೨೫ ॥

ಹೃದಯಾಗ್ರಪ್ರಕಾಶದಿಂದ ಬ್ರಹ್ಮನಾಡೀದ್ವಾರ ಬೆಳಗಿದಾಗ ಯೋಗಿ ಆ

ನಾಡಿಯಿಂದ ಉತ್ಕ್ರಮಣ ಹೊಂದಿ ಅರ್ಚಿರಾದಿ ಮಾರ್ಗದಿಂದ ವೈಶ್ವಾನರ ಲೋಕಕ್ಕೆ ಹೋಗುತ್ತಾನೆ. ಬಳಿಕ ಅಲ್ಲಿ ಪ್ರಾರಬ್ಧಪಾಪಮುಕ್ತನಾಗಿ ಇನ್ನೂ ಮೇಲೆ ಶಿಂಶುಮಾರಚಕ್ರದಲ್ಲಿರುವ ಧ್ರುವಲೋಕವನ್ನು ಸೇರುತ್ತಾನೆ.

ಇಲ್ಲಿ 'ಹರೇರುದಸ್ತಾತ್' ಎಂಬುದನ್ನು ಹಾಗೇ ಅನ್ವಯಿಸಬಾರದು. ವೀರರಾಘವ ವ್ಯಾಖ್ಯಾನದಲ್ಲಿ ಹರಿಗಿಂತ ಎಂದರೆ ಆದಿತ್ಯಮಂಡಲಕ್ಕಿಂತ ಮೇಲಿರುವ ಶಿಂಶುಮಾರಚಕ್ರ ಎಂದಿದೆ. ವಸ್ತುತಃ ಆದಿತ್ಯಲೋಕಕ್ಕಿಂತ ಮೇಲೆ ಸೋಮಲೋಕ. ಅದಕ್ಕಿಂತಲೂ ಮೇಲೆ ವೈಶ್ವಾನರಲೋಕ. ಅಲ್ಲಿಂದ ಇಂದ್ರಲೋಕವನ್ನು ದಾಟಿ ಧ್ರುವಲೋಕಕ್ಕೆ ಹೋಗಬೇಕು. ವೈಶ್ವಾನರಲೋಕಕ್ಕೆ ಬಂದವನು ಆದಿತ್ಯಲೋಕ ಕ್ಕಿಂತ ಮೇಲಿರುವ ಧ್ರುವಲೋಕಕ್ಕೆ ಹೋಗುತ್ತಾನೆ ಎನ್ನುವುದು ಅಸಂಗತ. ಅದರಿಂದ ಹರೇಃ ಎಂಬುದನ್ನು ಶೈಂಶುಮಾರಂ ಚಕ್ರಂ ಎಂಬಲ್ಲಿ ಅನ್ವಯ ಮಾಡಿದರೆ ದೋಷವಿಲ್ಲ ಮತ್ತು ಶಿಂಶುಮಾರನು ಹರಿಯ ಒಂದು ರೂಪ ಎಂದೂ ಹೇಳಿದಂತಾಗುವುದು. ಅದಕ್ಕೆ ಶ್ರೀಮದಾಚಾರ್ಯರು ಹೇಳುತ್ತಾರೆ—

ಹರೇಃ ಶೈಂಶುಮಾರಂ ಚಕ್ರಂ । ವೈಶ್ವಾನರೋದಸ್ತಾತ್ ।
ವೈಶ್ವಾನರೇ ದ್ಯುನದ್ಯಾಂ ವಾ ಸೂರ್ಯೇ ವಾ ದೇಹ ಏವ ವಾ ।
ವಿಧೂಯ ಸರ್ವಪಾಪಾನಿ ಯಾಂತಿ ಕಿಂಸುಘ್ನಕೇಶವಂ ।
ಇತಿ ಬ್ರಹ್ಮಾಂಡೇ ।

'ಹರೇಃ' ಎಂಬುದನ್ನು 'ಶೈಂಶುಮಾರಂ ಚಕ್ರಂ' ಎಂಬುದರೊಡನೆ ಅನ್ವಯಿಸಬೇಕು. ಉದಸ್ತಾತ್, ಮೇಲೆ, ಎಂದರೆ ವೈಶ್ವಾನರ ಲೋಕಕ್ಕಿಂತ ಮೇಲೆ ಎಂದರ್ಥ.

ಶಿಂಶುಮಾರ ಚಕ್ರ ಹರಿಯದೆಂದೂ ವೈಶ್ವಾನರಲೋಕಕ್ಕಿಂತ ಮೇಲಿದೆ ಎಂದೂ ಬ್ರಹ್ಮಾಂಡಪುರಾಣದ ಈ ವಚನದಿಂದ ಸ್ಪಷ್ಟವಾಗುವುದು—'ವೈಶ್ವಾನರ ಲೋಕದಲ್ಲಿ ಭಾಗೀರಥಿಯಲ್ಲಿ ಸೂರ್ಯನಲ್ಲಿ ಅಥವಾ ದೇಹದಲ್ಲಿ ಎಲ್ಲ ಪ್ರಾರಬ್ಧ ಪಾಪಗಳನ್ನೂ ಪರಿಹರಿಸಿಕೊಂಡು ಜ್ಞಾನಿ ಶಿಂಶುಮಾರರೂಪಿ ಹರಿಯನ್ನು ಹೊಂದುತ್ತಾನೆ' ಎಂದು.

★★★

ವೈಶ್ವಾನರ ಎಂದು ಜಾಠರಾಗ್ನಿಗೆ ಪ್ರಸಿದ್ಧವಾದ ಹೆಸರು. ಜ್ಞಾನಿ ವೈಶ್ವಾನರನನ್ನು ಹೊಂದುತ್ತಾನೆ ಎಂದುದು ಹೇಗೆ ಕೂಡುತ್ತದೆ ಎಂಬ ಪ್ರಶ್ನೆಗೆ ಸಮಾಧಾನವನ್ನು ಹೇಳುತ್ತಾರೆ—

ಯೋಽಂತಃ ಪಚತಿ ಭೂತಾನಾಂ ಯಸ್ತಪತ್ಯಂಡಮಧ್ಯಗಃ ।
ಸೋಽಗ್ನಿರ್ವೈಶ್ವಾನರೋ ಮಾರ್ಗೋ ದೇವಾನಾಂ ಪಿತೃಣಾಂ ಮುನೇಃ ॥೨೬

ಈ ಶ್ಲೋಕವೂ 'ದೇವಯಾನಂ ಪಿಂಗಲಾಭಿಃ' ಎಂಬ ಮುಂದಿನ ಶ್ಲೋಕವೂ ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಲುಪ್ತವಾಗಿದೆ. ಈ ಶ್ಲೋಕದ ಭಾವ—

'ಎಲ್ಲರ ಉದರದಲ್ಲಿದ್ದು ಆಹಾರವನ್ನು ಪಚನ ಮಾಡುವ ಪ್ರಸಿದ್ಧ ವೈಶ್ವಾನರ ಅಗ್ನಿಯೆ ಬ್ರಹ್ಮಾಂಡ ಮಧ್ಯದಲ್ಲಿರುವ ವೈಶ್ವಾನರಲೋಕದಲ್ಲಿಯೂ ಬೆಳಗುತ್ತಾನೆ. ಆದರಿಂದ ಆ ಲೋಕದಲ್ಲಿ ಬೆಳಗುವವನಿಗೂ ವೈಶ್ವಾನರ ಎಂಬ ಹೆಸರು ಯುಕ್ತವೆ. ದೇವಯಾನ ಪಿತೃಯಾನ ಬ್ರಹ್ಮಯಾನ ಈ ಮೂರು ಮಾರ್ಗಗಳಲ್ಲಿ ಹೋಗು ವವರೂ ಈ ವೈಶ್ವಾನರ ಲೋಕಕ್ಕೆ ಬರುತ್ತಾರೆ. ಆದರಿಂದ ವೈಶ್ವಾನರನನ್ನೆ ವಿಶೇಷವಾಗಿ ಮಾರ್ಗದೇವತೆ ಎಂದು ಹಿಂದೆ ಹೇಳಿದೆ'.

ಪಿತೃಯಾನಂ ದೇವಯಾನಂ ಬ್ರಹ್ಮಯಾನಮಿತಿ ತ್ರಿಧಾ ।
ಗಚ್ಛನ್ ವೈಶ್ವಾನರಂ ಯಾತಿ ತಸ್ಮಾನ್ಮಾರ್ಗಃ ಸ ಈರಿತಃ ॥

'ಪಿತೃಯಾನ ದೇವಯಾನ ಬ್ರಹ್ಮಯಾನ ಎಂದು ಮೂರು ಮಾರ್ಗಗಳಿಂದ ಹೋಗುವವರೂ ವೈಶ್ವಾನರಲೋಕಕ್ಕೆ ಹೋಗೇ ಹೋಗುವುದರಿಂದ ವೈಶ್ವಾನರ ನನ್ನು ಮಾರ್ಗವೆಂದು ವಿಶೇಷವಾಗಿ ಹೇಳುತ್ತಾರೆ'. ಎನ್ನುತ್ತದೆ ಭಾಗವತತಂತ್ರ.

★★★

ದೇವಯಾನ ಪಿತೃಯಾನ ಬ್ರಹ್ಮಯಾನ ಮಾರ್ಗಗಳಲ್ಲಿ ಹೋಗುವವರು ದೇಹದಿಂದ ಉತ್ಕ್ರಮಣ ಹೊಂದುವ ನಾಡಿಗಳು ಬೇರೆಬೇರೆ ಎಂದು ಹೇಳುತ್ತಾರೆ—

ದೇವಯಾನಂ ಪಿಂಗಲಾಭಿರಹಾನ್ಯೇತಿ ಶತಾಯುಷಾ ।
ರಾತ್ರೀರಿಡಾಭಿಃ ಪಿತೃಣಾಂ ವಿಷುವತ್ತಾಂ ಸುಷುಮ್ನಯಾ ॥ ೨೭ ॥

ಬಲಭಾಗದಲ್ಲಿರುವ ಪಿಂಗಲಾನಾಡಿಯಿಂದ ಉತ್ಕ್ರಮಣ ಹೊಂದಿದವರು ಅಹ ಎಂಬ ದೇವಯಾನ ಮಾರ್ಗವನ್ನೂ, ಎಡಭಾಗದಲ್ಲಿರುವ ಇಡಾ ನಾಡಿಯಿಂದ ಉತ್ಕ್ರಮಣ ಹೊಂದುವವರು ರಾತ್ರಿ ಎಂಬ ಪಿತೃಯಾನ ಮಾರ್ಗವನ್ನೂ, ನಡುವಿನ ಸುಷುಮ್ನಾ ಎಂಬ ಬ್ರಹ್ಮನಾಡಿಯಿಂದ ಉತ್ಕ್ರಮಣ ಹೊಂದುವವರು ವಿಷುವತ್ತಾ ಎಂಬ ಬ್ರಹ್ಮಯಾನವನ್ನೂ ಹೊಂದುತ್ತಾರೆ.

ದಕ್ಷಿಣಾಃ ಪಿಂಗಲಾಃ ಸರ್ವಾ ಇಡಾ ವಾಮಾಃ ಪ್ರಕೀರ್ತಿತಾಃ ।
ನಾಡ್ಯೋಽಥ ಮಧ್ಯಮಾ ಪ್ರೋಕ್ತಾ ಸುಷುಮ್ನಾ ವೇದಪಾರಗೈಃ ॥

ಇತಿ ಭಾಗವತತಂತ್ರೇ ।

ದೇವಯಾನಸ್ಯ ಮಾರ್ಗಸ್ಥಾ ಅಹಃಶಬ್ದಾಭಿಸಂಜ್ಞಿತಾಃ ।
ಪಿತೃಯಾನಸ್ಯ ಮಾರ್ಗಸ್ಥಾ ರಾತ್ರಿಶಬ್ದಾಹ್ವಯಾ ಮತಾಃ ।

ಇತಿ ಬೃಹತ್ತಂತ್ರೇ ।

ಶತಾಯುರ್ಮರಣಂ ಚೈವ ಕಾಲಿಕಂ ಪರಮಾವೃತಿಃ ।
ಇತ್ಯಭಿಧಾನೇ । ಪಿಂಗಲಾಭಿಃ ಶತಾಯುಷಾ ಅಹಃಸಂಜ್ಞಂ ದೇವಯಾನಮೇತಿ । ಇಡಾಭೀ ರಾತ್ರಿಸಂಜ್ಞಂ ಪಿತೃಯಾನಂ ।

ವಿಷುವತ್ತಾ ಬ್ರಹ್ಮಯಾನೋ ವಿಶೇಷೇಣ ಸುಖಂ ಯತಃ ।
ಪಿಂಗಲಾ ದೇವಯಾನಂ ಸ್ಯಾತ್ ಪಿಂಗಾಖ್ಯಸುಖದಂ ಯತಃ ।
ಇಡಾಽನ್ನದಾನಾತ್ ಪಿತೃಣಾಮೇವಂ ಮಾರ್ಗಾಃ ಪ್ರಕೀರ್ತಿತಾಃ ।

ಇತಿ ಬ್ರಹ್ಮತರ್ಕೇ ।

'ಹೃದಯದಲ್ಲಿ ಬಲಭಾಗದಲ್ಲಿರುವ ನಾಡಿಗಳಿಗೆ ಪಿಂಗಲಾ ನಾಡಿಗಳು ಎಂದು ಹೆಸರು. ಎಡಭಾಗದ ನಾಡಿಗಳಿಗೆ ಇಡಾ ನಾಡಿಗಳು ಎಂದು ಹೆಸರು. ಮಧ್ಯದ ನಾಡಿಗೆ ಸುಷುಮ್ನಾನಾಡಿ ಎಂದು ಹೆಸರು'. ಹೀಗೆ ಭಾಗವತ ತಂತ್ರದಲ್ಲಿ ಹೇಳಿದೆ.

'ದೇವಯಾನ ಮಾರ್ಗದಲ್ಲಿರುವ ದೇವತೆಗಳಿಗೆ ಅಹಃ ಎಂದು ಹೆಸರು. ಪಿತೃಯಾನ ಮಾರ್ಗದಲ್ಲಿರುವ ದೇವತೆಗಳಿಗೆ ರಾತ್ರಿ ಎಂದು ಹೆಸರು' ಎಂದು ಬೃಹತ್ತಂತ್ರದಲ್ಲಿ ಹೇಳಿದೆ.

ಶತಾಯುಃ ಕಾಲಿಕ ಪರ ಆವೃತಿ ಶಬ್ದಗಳಿಂದ ಮರಣ ಉಕ್ತವಾಗುತ್ತದೆ ಎಂದು ಅಭಿಧಾನಗ್ರಂಥದಲ್ಲಿ ಹೇಳಿದೆ.

ನೂರು ವರ್ಷ ಆಯುಷ್ಯದ ಕೊನೆಯಲ್ಲಿ ಬರುವುದರಿಂದ ಮರಣ 'ಶತಾಯು'ವೆನಿಸುತ್ತದೆ. ಕಾಲಯಮನಿಂದ ಉಂಟಾಗುವುದರಿಂದ 'ಕಾಲಿಕ'. ಪರ ಎಂಬ ಬ್ರಹ್ಮನ ಆಯುಷ್ಯದ ಕೊನೆಯಲ್ಲಿ ಎಲ್ಲರಿಗೂ ಬರುವುದರಿಂದ 'ಪರ'. ಮರಣಕಾಲದಲ್ಲಿ ಜ್ಞಾನಾದಿಗಳಿಗೆ ಆವರಣ ಬರುವುದರಿಂದ 'ಆವೃತಿ' ಎಂದೂ ಮರಣಕ್ಕೆ ಹೆಸರು.

ಆದರಿಂದ ಪಿಂಗಲಾನಾಡಿಗಳಿಂದ ಮರಣ ಹೊಂದುವುದರಿಂದ, ಅಂದರೆ ಉತ್ಕ್ರಮಣ ಹೊಂದುವುದರಿಂದ ಅಹಃ ಎಂಬ ಹೆಸರಿನ ದೇವಯಾನಮಾರ್ಗ ಲಭ್ಯವಾಗುತ್ತದೆ. ಇಡಾನಾಡಿಗಳಿಂದ ಉತ್ಕ್ರಮಣ ಹೊಂದುವುದರಿಂದ ರಾತ್ರಿ ಎಂಬ ಹೆಸರಿನ ಪಿತೃಯಾನ ಲಭ್ಯವಾಗುತ್ತದೆ ಎಂದರ್ಥ.

'ವಿಶೇಷವಾಗಿ ಸುಖ ನೀಡುವುದರಿಂದ ಬ್ರಹ್ಮಯಾನಮಾರ್ಗ ವಿಷುವತ್ತಾ ಎನಿಸಿದೆ. ಪಿಂಗ ಎನಿಸುವ ಸುಖವನ್ನು ಕೊಡುವುದರಿಂದ ದೇವಯಾನ ಮಾರ್ಗ ಪಿಂಗಲಾ ಎನಿಸುತ್ತದೆ. ಅನ್ನ ಕೊಡುವುದರಿಂದ ಪಿತೃಯಾನ ಮಾರ್ಗ ಇಡಾ ಎನಿಸುತ್ತದೆ. ಹೀಗೆ ಮೂರು ಮಾರ್ಗಗಳನ್ನು ಕೆಲವು ಪುರಾಣಗಳಲ್ಲಿ ವಿಷುವತ್ತಾ ಪಿಂಗಲಾ ಇಡಾ ಶಬ್ದಗಳಿಂದಲೆ ಹೇಳಿದೆ' ಎಂದು ಬ್ರಹ್ಮತರ್ಕದಲ್ಲಿದೆ.

★★★

ಪಿಂಗಲಾ ಮತ್ತು ಬ್ರಹ್ಮನಾಡಿಗಳಿಂದ ಉತ್ಕ್ರಮಣ ಹೊಂದಿ ವೈಶ್ವಾನರ ಮಾರ್ಗದಿಂದ ಬಂದ ಜ್ಞಾನಿಗಳು ಶಿಂಶುಮಾರಲೋಕಕ್ಕೆ ಬಂದು ಅಲ್ಲಿಂದ ಮಹರಾದಿ ಲೋಕಗಳಿಗೆ ಹೋಗುತ್ತಾರೆ ಎನ್ನುತ್ತಾರೆ—

ತದ್ ವಿಶ್ವನಾಭಿಂ ತ್ವಭಿಪದ್ಯ ವಿಷ್ಣೋ-
ರಣೀಯಸಾ ವಿರಜೇನಾತ್ಮನೈಕಂ ।
ನಮಸ್ಕೃತಂ ಬ್ರಹ್ಮವಿದಾಮುಪೈತಿ
ಕಲ್ಪಾಯುಷೋ ಯದ್ ವಿಬುಧಾ ರಮಂತೇ ॥ ೨೮ ॥

ಸಮಸ್ತ ಜಗದಾಧಾರನಾದ, ಬ್ರಹ್ಮಜ್ಞಾನಿಗಳಿಂದ ನಮಸ್ಕೃತವಾದ ಆ ವಿಷ್ಣುವಿನ ಶಿಂಶುಮಾರ ರೂಪವನ್ನು ಹೊಂದಿದ ಬಳಿಕ ಜ್ಞಾನಿಯು ದೋಷಮುಕ್ತವಾದ ಸೂಕ್ಷ್ಮ ಲಿಂಗದೇಹದಿಂದ, ಕಲ್ಪಾಯುಷಿಗಳಾದ ದೇವತೆಗಳು ವಿಹರಿಸುವ ಮಹರಾದಿ ಲೋಕಗಳನ್ನು ಸೇರುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಶಿಂಶುಮಾರನನ್ನು ಕೇವಲ ಗ್ರಹ ನಕ್ಷತ್ರಾದಿಧಾರಕನೆಂದಿದ್ದಾರೆ. ಮತ್ತು ವೀರರಾಘವ ವ್ಯಾಖ್ಯಾನದಲ್ಲಿ ಜ್ಞಾನಿಗಳೆಲ್ಲ ಜನಲೋಕವನ್ನು ಸೇರುತ್ತಾರೆ ಎಂದಿದೆ. ಬೇರೆ ವ್ಯಾಖ್ಯಾನಗಳಲ್ಲಿ ಮಹರ್ಲೋಕ ವನ್ನು ಸೇರುತ್ತಾರೆ ಎಂದಿದೆ. ವಸ್ತುತಃ ಜ್ಞಾನಿಗಳು ಎಲ್ಲರೂ ಒಂದು ಲೋಕವನ್ನು ಸೇರದೆ ಮಹರ್ಜನಸ್ತಪಃ ಸತ್ಯ ವೈಕುಂಠ ಎಂದು ಐದು ಲೋಕಗಳನ್ನೂ ತಾರತಮ್ಯಾನುಸಾರ ಸೇರುತ್ತಾರೆ. ಪಿಂಗಲಾ ನಾಡಿಯಿಂದ ಉತ್ಕ್ರಮಣ ಹೊಂದಿದವರಲ್ಲಿ ಕೆಳಗಿನವರು ಮಹರ್ಲೋಕವನ್ನೂ ಮಧ್ಯಮರು ಜನಲೋಕವನ್ನೂ ಉತ್ತಮರು ತಪೋಲೋಕವನ್ನೂ ಸೇರುತ್ತಾರೆ. ಇವರಿಗಿಂತ ಉತ್ತಮರು ಬ್ರಹ್ಮನಾಡಿಯಿಂದ ಉತ್ಕ್ರಮಣ ಹೊಂದಿ, ಅವರಲ್ಲಿಯೂ ಪ್ರತೀಕಾಲಂಬನರು ಸತ್ಯಲೋಕವನ್ನೂ ಅಪ್ರತೀಕಾಲಂಬನರು ವೈಕುಂಠದ ಅಮುಕ್ತಸ್ಥಾನವನ್ನೂ ಹೊಂದುತ್ತಾರೆ ಎನ್ನಬೇಕು. ಆದರಿಂದ ಸರಿಯಾದ ವ್ಯಾಖ್ಯಾನ ಹೀಗೆ—

ಅಶೇಷ ಜಗದಾಧಾರಃ ಶಿಂಶುಮಾರೋ ಹರಿಃ ಪರಃ ।
ಸರ್ವೇ ಬ್ರಹ್ಮವಿದೋ ನತ್ವಾ ತಂ ಯಾಂತಿ ಪರಮಂ ಪದಂ ॥
ಇತಿ ಬ್ರಹ್ಮಾಂಡೇ । ತದ್ ವಿಷ್ಣೋರ್ವಿಶ್ವಾಧಾರಂ ರೂಪಂ ಪ್ರತಿಪದ್ಯ
ಯತ್ರ ಕಲ್ಪಾಯುಷಃ ತಂ ಮಹರ್ಲೋಕಮುಪೈತಿ ।
ಮನ್ವಂತರಾಯುಷಃ ಸ್ವರ್ಗ್ಯಾ ಮಹರ್ಲೋಕೇ ತು ಕಾಲ್ಪಿಕಾಃ ।
ಆ ಬ್ರಹ್ಮಣೋ ಜನಾದ್ಯಾಸ್ತು ಮಹರ್ಲೋಕೇಽಪಿ ಯೇ ವರಾಃ ॥
ಇತಿ ಬ್ರಾಹ್ಮೇ ।

ಶಿಂಶುಮಾರರೂಪಿ ಪರಮಾತ್ಮ ಸಕಲ ಜಗದಾಧಾರ, ಸರ್ವೋತ್ತಮ. ಎಲ್ಲ ಬ್ರಹ್ಮಜ್ಞಾನಿಗಳೂ ಅವನನ್ನು ನಮಸ್ಕರಿಸಿಯೆ ಮೋಕ್ಷವನ್ನು ಪಡೆಯುತ್ತಾರೆ ಎಂದು ಬ್ರಹ್ಮಾಂಡಪುರಾಣ ಹೇಳಿದೆ. ಆದರಿಂದ ಶ್ಲೋಕಕ್ಕೆ ಹೀಗೆ ಅರ್ಥ— 'ತದ್ ಎಂದರೆ ವಿಷ್ಣುವಿನ ಸಕಲ ಜಗದಾಧಾರವಾದ ಆ ಶಿಂಶುಮಾರರೂಪವನ್ನು ನಮಸ್ಕರಿಸಿ ಯಾವ ಲೋಕಗಳಲ್ಲಿ ಕಲ್ಪಾಯುಷಿಗಳಿರುವರೋ ಆ ಮಹರಾದಿ ಲೋಕಗಳನ್ನು ಬ್ರಹ್ಮಜ್ಞಾನಿಗಳು ಹೊಂದುತ್ತಾರೆ' ಎಂದು.

ಶ್ಲೋಕದಲ್ಲಿ ಕಲ್ಪಾಯುಷಿಗಳು ವಾಸಮಾಡುವ ಲೋಕವೆಂದಿರುವುದು ಮಹರಾದಿ ಲೋಕಗಳನ್ನೆ. ಏಕೆಂದರೆ, ಬ್ರಹ್ಮಪುರಾಣದಲ್ಲಿ ಹೇಳಿದೆ. 'ಸ್ವರ್ಗಲೋಕ ದಲ್ಲಿರುವ ದೇವತೆಗಳು ಒಂದು ಮನ್ವಂತರ ಆಯುಷ್ಯ ಉಳ್ಳವರು. ಮಹರ್ಲೋಕ ಗಳಲ್ಲಿರುವವರು ಬ್ರಹ್ಮನ ದಿನ ಕಲ್ಪಕಾಲ ಆಯುಷ್ಯ ಉಳ್ಳವರು. ಜನ ಮುಂತಾದ ಲೋಕದ ದೇವತೆಗಳು ಮಹಾಕಲ್ಪಕಾಲ ಬ್ರಹ್ಮಪ್ರಲಯ ಪರ್ಯಂತ ಆಯುಷ್ಯ ಉಳ್ಳವರು. ಮಹರ್ಲೋಕದಲ್ಲಿಯೂ ಭೃಗು ಮುಂತಾದವರು ಉತ್ತಮರಾದ ಕೆಲವರು ಬ್ರಹ್ಮಪ್ರಲಯ ಪರ್ಯಂತ ಆಯುಷ್ಯ ಉಳ್ಳವರೆ' ಎಂದು.

★★★

ಮಹರಾದಿ ಲೋಕಗಳನ್ನು ಹೊಂದಿದ ಜ್ಞಾನಿಗಳೂ ಬ್ರಹ್ಮಪ್ರಳಯ ಕಾಲದಲ್ಲಿ ಸತ್ಯಲೋಕವನ್ನು ಸೇರುತ್ತಾರೆ—

ಅಥೋ ಅನಂತಸ್ಯ ಮುಖಾನಲೇನ
ದಂದಹ್ಯಮಾನಂ ಸ ನಿರೀಕ್ಷ್ಯ ವಿಶ್ವಂ ।
ನಿರ್ಯಾತಿ ಸಿದ್ಧೇಶ್ವರಜುಷ್ಟಧಿಷ್ಣ್ಯಂ
ಯದ್ ದ್ವೈಪರಾರ್ಧ್ಯಂ ತದು ಪಾರಮೇಷ್ಠ್ಯಂ ॥ ೨೬ ॥

ಬ್ರಹ್ಮಪ್ರಳಯ ಕಾಲದಲ್ಲಿ ಶೇಷಾಂತರ್ಗತ ಸಂಕರ್ಷಣನ ಮುಖದಿಂದ

ಹೊರಡುವ ಬೆಂಕಿಯಿಂದ ಲೋಕ ಸುಡುವುದನ್ನು ನೋಡಿ ಮಹರಾದಿ ಲೋಕಗಳಲ್ಲಿರುವ ಜ್ಞಾನಿಗಳು ಎರಡು ಪರಾರ್ಧಕಾಲ ಸುಖಭೋಗ ಉಳ್ಳ ಸತ್ಯಲೋಕವನ್ನು ಸೇರುತ್ತಾರೆ. ಸಿದ್ಧಪುರುಷರ ವಿಮಾನಗಳಿಂದ ತುಂಬಿದ ಉತ್ತಮಲೋಕ ಆ ಸತ್ಯಲೋಕ.

ನ ಯತ್ರ ಶೋಕೋ ನ ಜರಾ ನ ಮೃತ್ಯು-
ರ್ನಾರ್ಥಿರ್ನ ಚೋದ್ವೇಗ ಋತೇ ಕುತಶ್ಚಿತ್ ।
ಯಶ್ಚಿತ್ತತೋದಃ ಕ್ರಿಯಯಾಽನಿದಂವಿದಾಂ
ದುರಂತದುಃಖಪ್ರಭವಾನುದರ್ಶನಾತ್ ॥ ೩೦ ॥

ಸತ್ಯಲೋಕದಲ್ಲಿ ಯಾವುದರಿಂದಲೂ ದುಃಖವಿಲ್ಲ, ಜರೆಯಿಲ್ಲ, ಮರಣವಿಲ್ಲ, ಮನೋವ್ಯಥೆಯಿಲ್ಲ, ಭಯವಿಲ್ಲ, ಅಜ್ಞಾನಿಗಳ ನಿಷಿದ್ಧಕರ್ಮದಿಂದಾಗುವ ದುಃಖಜನ್ಮಗಳನ್ನು ಕಂಡು ಮನಸ್ಸು ನೋಯುವುದು ಅಲ್ಲಿ ಇಲ್ಲ.

ಇಲ್ಲಿ ಶ್ರೀಧರಾದಿ ವ್ಯಾಖ್ಯಾನಕಾರರು 'ಭೂಲೋಕದ ಅಜ್ಞಾನಿಗಳು ದುಃಖಪಡುತ್ತಿದ್ದಾರೆ ಎಂದು ಕರುಣೆಯಿಂದ ಮನಸ್ಸಿನಲ್ಲಿ ನೊಂದುಕೊಳ್ಳುತ್ತಾರೆ, ಸತ್ಯಲೋಕದ ಜನರು. ಅವರಿಗೆ 'ಋತೇ' ಈ ಒಂದು ಮನೋವೇದನೆ ಹೊರತು ಇನ್ನಾವ ದುಃಖವೂ ಇಲ್ಲ' ಎಂದು ವ್ಯಾಖ್ಯಾನಿಸಿದ್ದಾರೆ. 'ಋತ' ಎಂದರೆ ಸತ್ಯ, ಸತ್ಯಲೋಕ ಎಂದು ಸುಲಭವಾಗಿ ವ್ಯಾಖ್ಯಾನಿಸಲು ಬರುವಾಗ ಈ ಕ್ಲೇಶವೇಕೆ? 'ಅನಿದಂವಿದಾಂ' ಪ್ರಪಂಚ ವಿಲಕ್ಷಣ ಬ್ರಹ್ಮ ಜ್ಞಾನಿಗಳಿಗೆ ಈ ಬ್ರಹ್ಮಲೋಕದಲ್ಲಿಯೂ ಸಂಸಾರದುಃಖ ತಪ್ಪಿದ್ದಲ್ಲ ಎಂದು ಅರಿವಾಗುವುದರಿಂದ ವಿಷ್ಣುಲೋಕವನ್ನೆ ಅವರು ಬಯಸುತ್ತಾರೆ' ಎಂದು ವೀರರಾಘವ ವ್ಯಾಖ್ಯಾನ. ಇದು ಪ್ರಮಾಣವಿರುದ್ಧ, ಬ್ರಹ್ಮಲೋಕದಲ್ಲಿ ದುಃಖವಿಲ್ಲ. ಆದರಿಂದ ಹೀಗೆ ಹೇಳಬೇಕು—

ಋತೇ ಸತ್ಯಲೋಕೇ । ಅನಿದಂವಿದಾಂ ಅಬ್ರಹ್ಮವಿದಾಂ । ದುರಂತದುಃಖಂ ಚ ಪ್ರಭವಶ್ಚ ।

ಸರ್ವದುಃಖ ವಿಹೀನಾ ಯೇ ಮುಕ್ತಾಃ ಪ್ರಾಯಸ್ತು ತಾದೃಶಾಃ ।
ಅಮುಕ್ತಾಸ್ತು ಜನಾದ್ಯೇಷು ವಿಶೇಷೇಣ ತು ಸತ್ಯಗಾಃ ॥

ಇತಿ ವಾರಾಹೇ ।

ವಿಷ್ಣೋರ್ಲೋಕಂ ತದೈವೇಕೇ ಯಾಂತಿ ಕಾಲಾಂತರೇ ಪರೇ ।
ಆಜ್ಞಯೈವ ಹರೇಃ ಕೇಚಿದ್ ಅಪೂರ್ತೇಃ ಕೇಚಿದಂಜಸಾ ।
ವಿಹೃತ್ಯೈವಾನ್ಯಲೋಕೇಷು ಮುಚ್ಯಂತೇ ಬ್ರಹ್ಮಣಾ ಸಹ ॥

ಇತಿ ವಾಮನೇ ।

ಋತೇ ಎಂದರೆ ಸತ್ಯಲೋಕದಲ್ಲಿ ಎಂದರ್ಥ. ಅನಿದಂವಿದಾಂ ಎಂದರೆ ಬ್ರಹ್ಮಜ್ಞಾನವಿಲ್ಲದವರ ಕೊನೆಯಿಲ್ಲದ ದುಃಖಜನ್ಮಗಳಿಂದಾಗುವ ಮನಸ್ಸಿನ ವೇದನೆ ಸತ್ಯಲೋಕದಲ್ಲಿ ಇಲ್ಲ ಎಂದರ್ಥ.

ಮುಕ್ತರು ಸರ್ವಾತ್ಮನಾ ದುಃಖರಹಿತರು. ಜನಲೋಕಾದಿಗಳಲ್ಲಿ ಇರುವ ಅಮುಕ್ತರು ಪ್ರಾಯಃ ದುಃಖರಹಿತರೇ. ವಿಶೇಷವಾಗಿ ಸತ್ಯಲೋಕದ ಜನರು ದುಃಖರಹಿತರು ಎಂದು ವರಾಹಪುರಾಣ ಹೇಳಿದೆ.

ಹಿಂದೆ ೨೪ನೇ ಶ್ಲೋಕದಲ್ಲಿ ಅಪ್ರತೀಕಾಲಂಬನರಾದ ಜ್ಞಾನಿಗಳು ವೈಕುಂಠ ಲೋಕವನ್ನು ಪಡೆಯುವರು ಎಂದಿದೆ. ಆದರೆ ಆ ಜ್ಞಾನಿಗಳೆಲ್ಲರೂ ಏಕಕಾಲದಲ್ಲಿ ವೈಕುಂಠವನ್ನು ಸೇರುವುದಿಲ್ಲ. ವಾಮನಪುರಾಣದಲ್ಲಿ ಹೀಗೆ ಹೇಳಿದೆ— 'ಪರಮಾತ್ಮನಿಗೆ ಅತ್ಯಂತ ಪ್ರಿಯರಾದವರು ಉತ್ಕ್ರಮಣವಾದೊಡನೆ ನೇರವಾಗಿ ವೈಕುಂಠಕ್ಕೇ ಹೋಗುತ್ತಾರೆ. ಉಳಿದವರಲ್ಲಿ ಸಾಧನಪೂರ್ತಿಯಾದವರನ್ನು ಪರಮಾತ್ಮ ತನ್ನಿಚ್ಛೆಯಿಂದಲೆ ಎಂದಾದರೊಮ್ಮೆ ತನ್ನ ಲೋಕಕ್ಕೆ ಕರೆಸಿಕೊಳ್ಳುತ್ತಾನೆ. ಸಾಧನಪೂರ್ತಿಯಾಗದಿರುವವರು ಪೂರ್ತಿಯಾದೊಡನೆ, ಬ್ರಹ್ಮಪ್ರಳಯಕ್ಕಿಂತ ಮೊದಲೇ ವೈಕುಂಠವನ್ನೇ ಸೇರುತ್ತಾರೆ. ಈ ಅಪ್ರತೀಕಾಲಂಬನರಿಗಾಗಲಿ, ಸತ್ಯಲೋಕದಲ್ಲಿರುವ ಪ್ರತೀಕಾಲಂಬನರಿಗಾಗಲಿ, ಮಹರಾದಿ ಲೋಕದಲ್ಲಿರುವ ಜ್ಞಾನಿಗಳಿಗಾಗಲಿ ಎಲ್ಲರಿಗೂ ಮುಕ್ತಿ ಬ್ರಹ್ಮಪ್ರಳಯಕಾಲದಲ್ಲಿಯೇ, ಮಹತ್ತತ್ವಾಭಿ ಮಾನಿ ಬ್ರಹ್ಮನೊಂದಿಗೇ' ಎಂದು.

★★★

ಬ್ರಹ್ಮಪ್ರಲಯಕಾಲದಲ್ಲಿ ಬ್ರಹ್ಮಾಂಡವೂ ಅದರ ಆವರಣಗಳೂ ಲಯಹೊಂದು ವಾಗ ಚತುರ್ಮುಖ ಬ್ರಹ್ಮ ಹಾಗು ಇತರ ತತ್ತ್ವಾಭಿಮಾನಿ ದೇವತೆಗಳೊಂದಿಗೆ ಜ್ಞಾನಿ ಪೃಥಿವ್ಯಾದಿ ತತ್ತ್ವಗಳನ್ನು ಒಂದೊಂದಾಗಿ ದಾಟಿ ಮೋಕ್ಷ ಹೊಂದುತ್ತಾನೆ. ಅದರ ಕ್ರಮವನ್ನು ಹೇಳುತ್ತಾರೆ—

ತತೋ ವಿಶೇಷಂ ಪ್ರತಿಪದ್ಯ ನಿರ್ಭಯ-
ಸ್ತೇನಾತ್ಮನಾಽಪೋಽನಲಮೂರ್ಧ್ನಿ ಚ ತ್ವರನ್ ।
ಜ್ಯೋತಿರ್ಮಯೋ ವಾಯುಮುಪೇತ್ಯ ಕಾಲೇ
ವಾಯ್ವಾತ್ಮನಾ ಖಂ ಬೃಹದಾತ್ಮಲಿಂಗಂ ॥ ೩೦ ॥

ಮಹರಾದಿ ವೈಕುಂಠಪರ್ಯಂತ ಇರುವ ಜ್ಞಾನಿಗಳೆಲ್ಲರೂ ಬ್ರಹ್ಮಪ್ರಲಯ ಕಾಲದಲ್ಲಿ ಬ್ರಹ್ಮಾಂಡನಾಶವಾದಾಗ ಬ್ರಹ್ಮಾದಿದೇವತೆಗಳೊಂದಿಗೆ ಪೃಥಿವ್ಯಾವರಣ ದಲ್ಲಿರುವ ಅನ್ನಮಯ ಅನಿರುದ್ಧನನ್ನು ಸೇರಿ ಪೃಥಿವ್ಯಾವರಣ ನಾಶವಾಗುವಾಗ

ಅನ್ನಮಯ ಅನಿರುದ್ಧನೊಂದಿಗೆ ಜಲಾವರಣದಲ್ಲಿರುವ ಅನ್ನಮಯ ಅನಿರುದ್ಧನನ್ನು ಸೇರಿ ಬಳಿಕ ಅವನೊಂದಿಗೆ ಅಗ್ನ್ಯಾವರಣದಲ್ಲಿರುವ ಪ್ರಾಣಮಯ ಪ್ರದ್ಯುಮ್ನನನ್ನು ಸೇರಿ ಅವನೊಂದಿಗೆ ವಾಯ್ವಾವರಣದಲ್ಲಿರುವ ಪ್ರಾಣಮಯ ಪ್ರದ್ಯುಮ್ನನನ್ನು ಸೇರಿ ಅವನೊಂದಿಗೇ ಆಕಾಶಾವರಣದಲ್ಲಿರುವ ಪ್ರಾಣಮಯ ಪ್ರದ್ಯುಮ್ನನನ್ನು ಹೊಂದುತ್ತಾರೆ. ಪ್ರಲಯಕಾಲದ ಭಯ ದುಃಖ ಅವರಿಗಿಲ್ಲ. ಪೃಥಿವ್ಯಾದಿ ಪ್ರಾಪ್ತಿ ಕೇವಲ ಮೋಕ್ಷಮಾರ್ಗವಾಗಿರುವುದರಿಂದ ತ್ವರೆ ಮಾತ್ರವಿರುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಇದು ಬ್ರಹ್ಮಪ್ರಳಯವಲ್ಲ. ಸೃಷ್ಟಿಕಾಲದಲ್ಲಿಯೆ ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕಕ್ಕೆ ಬಂದ ಯೋಗಿ ಕೂಡಲೆ ಸ್ವೇಚ್ಛೆಯಿಂದ ಯೋಗಬಲದಿಂದ ಬ್ರಹ್ಮಾಂಡವನ್ನು ಭೇದಿಸಿ ಆವರಣಗಳನ್ನೂ ಒಂದೊಂದಾಗಿ ದಾಟಿ ವಿಷ್ಣುವಿನಲ್ಲಿ ಐಕ್ಯ ಹೊಂದುತ್ತಾನೆ. ಆವರಣಗಳನ್ನು ದಾಟುವುದೆಂದರೆ ಅವನ ಲಿಂಗದೇಹ ಪೃಥಿವಿಯಲ್ಲಿ ಐಕ್ಯ ಹೊಂದುತ್ತದೆ. ಆ ಪೃಥಿವೀಮಯವಾದ ಲಿಂಗಶರೀರವನ್ನು ಅಪ್ಪಿನಲ್ಲಿ ಲಯಗೊಳಿಸಿ ಜಲಮಯನಾಗುತ್ತಾನೆ. ಹೀಗೆ ತೇಜೋ ವಾಯು ಆಕಾಶಗಳಲ್ಲಿ ಒಂದಾಗುತ್ತಾನೆ. ಅಹಂಕಾರಾದಿಗಳನ್ನು ಸೇರಿ ಪ್ರಕೃತಿಯಲ್ಲಿ ಲಯಹೊಂದಿ ಅಲ್ಲಿಂದಾಚೆ ಮಹಾವೈಕುಂಠಲೋಕದಲ್ಲಿ ವಿಷ್ಣುವಿನಲ್ಲಿ ಸಾಯುಜ್ಯ ಪಡೆಯುತ್ತಾನೆ[೧] ವೀರರಾಘವ ವ್ಯಾಖ್ಯಾನದಲ್ಲಿ 'ಆನಂದಮಯನಾದ ವಿಷ್ಣುವಿನ ಸಾಮ್ಯದಿಂದ ತಾನೂ ಆನಂದಮಯನಾಗುತ್ತಾನೆ' ಎಂಬುದು ನಾಲ್ಕು ಶ್ಲೋಕಗಳ ತಾತ್ಪರ್ಯ. ಇದು ಪ್ರಮಾಣ ವಿರುದ್ಧ. ಬ್ರಹ್ಮ ಪ್ರಳಯಕಾಲದಲ್ಲಿಯೇ ಬ್ರಹ್ಮನೊಂದಿಗೆ ಎಲ್ಲ ಜ್ಞಾನಿಗಳಿಗೆ ಮುಕ್ತಿ. 'ಪರಾಂತಕಾಲೇ ಪರಿಮುಚ್ಯಂತಿ ಸರ್ವೇ' ಎಂದೇ ಶ್ರುತಿ ಹೇಳುತ್ತದೆ. ಅದರಿಂದ ಹೀಗೆ ಹೇಳಬೇಕು—

ಬ್ರಹ್ಮಣಾ ಸಹ । ವಿಶೇಷಂ ಪೃಥಿವೀಂ । ತೇನಾತ್ಮನಾ ಪೃಥಿವ್ಯಾತ್ಮನಾ । ಜ್ಯೋತಿರ್ಮಯಃ ಅಗ್ನಿಪ್ರಧಾನಃ ।

---

೧. ಯೇ ತು ಭಗವದುಪಾಸಕಾಃ ತೇ ಸ್ವೇಚ್ಛಯಾ ಬ್ರಹ್ಮಾಂಡಂ ಭಿತ್ವಾ ವೈಷ್ಣವಂ ಪದಮಾರುಹಂತಿ । -ಶ್ರೀಧರಃ

ಅಥ ಬ್ರಹ್ಮಲೋಕ ಏವ ಯದಿ ಮಹಾಕಲ್ಪ ಪರ್ಯಂತಂ ಸ್ಥಾತುಮಿಚ್ಛತಿ ತದಾ ಬ್ರಹ್ಮಣ ಸಹೈವ ಮುಚ್ಯತೇ ಯದಿ ಚ ತದನಂತರಮೇವ ಮೋಕ್ಷಮಿಚ್ಛತಿ ತದಾ ಸಪ್ತಾವರಣಾನಿ ನಿರ್ಭಿದ್ಯೈವ ಬ್ರಹ್ಮ ಪ್ರವಿಶತಿ । -ವಿಶ್ವನಾಥಃ

ಹಿರಣ್ಯಗರ್ಭೋಪಾಸಕಾನಾಂ ಬ್ರಹ್ಮಣಾ ಸಹ ಯಾ ಬ್ರಹ್ಮಣೋ ಗತಿಃ ಸಾ ಗತಿಃ । ಪೂರ್ವೋಕ್ತಸ್ತ್ವಂಡಂ ಭಿತ್ವಾ ಗಚ್ಛತಿ । -ವಲ್ಲಭಃ ।

ಪ್ರಕೃತ್ಯಾವರಣಾದ್ ಬಹಿರ್ಮಹಾವೈಕುಂಠಲೋಕಃ । -ಜೀವಗೋಸ್ವಾಮಿ

'ಆಕಾಶವತ್ ಸರ್ವಗತಶ್ಚ ನಿತ್ಯ' ಇತಿ ಪರಮಾತ್ಮ ಸದೃಶಂ ಕಿಂಚಿತ್ ।

ಬ್ರಹ್ಮಾದಿ ದೇವತೆಗಳೊಂದಿಗೇ ಬ್ರಹ್ಮಪ್ರಲಯಕಾಲದಲ್ಲಿ ಜ್ಞಾನಿ ಮೋಕ್ಷ ಹೊಂದುತ್ತಾನೆ. 'ವಿಶೇಷ' ಎಂದರೆ ನೂರು ಕೋಟಿ ಯೋಜನ ದಪ್ಪವಾದ ಬ್ರಹ್ಮಾಂಡಕಟಾಹರೂಪದ ಪೃಥಿವ್ಯಾವರಣ. ತೇನಾತ್ಮನಾ ಎಂದರೆ ಪೃಥಿವ್ಯಂತ ರ್ಯಾಮಿಯಾದ ಅನ್ನಮಯ ಅನಿರುದ್ಧನೊಂದಿಗೆ ಜಲಾವರಣಾಂತರ್ಯಾಮಿ ಅನ್ನಮಯ ಅನಿರುದ್ಧನನ್ನು ಹೊಂದುತ್ತಾನೆ ಎಂದರ್ಥ. 'ಜ್ಯೋತಿರ್ಮಯ' ಎಂದರೆ, ಜ್ಯೋತಿ ಎನಿಸಿದ ಅಗ್ನ್ಯಂತರ್ಗತ ಪ್ರಾಣಮಯ ಪ್ರದ್ಯುಮ್ನನೆ 'ಮಯ', ಪ್ರಧಾನ, ಅಂದರೆ ಜ್ಞಾನಿಗೆ ವಾಯ್ವಂತರ್ಗತನ ಪ್ರಾಪ್ತಿಯಾಗಲು ಪ್ರಧಾನಕಾರಣ ಎಂದರ್ಥ.

ಆಕಾಶವು 'ಆತ್ಮಲಿಂಗ'ವಾಗುವುದೆಂದರೆ, ಇತರ ಪಂಚಭೂತಗಳಿಗಿಂತ ಹೆಚ್ಚು ವ್ಯಾಪ್ತವಾಗಿದ್ದು ಹೆಚ್ಚು ಕಾಲವಿರುವಂಥದ್ದು ಆಕಾಶವಾದ್ದರಿಂದ ಸರ್ವವ್ಯಾಪಕನಾದ ನಿತ್ಯನಾದ ಪರಮಾತ್ಮನಿಗೆ ಅದು ಸ್ವಲ್ಪ ಸಾದೃಶ್ಯದಿಂದ ಕೂಡಿದೆ. ಅದರಿಂದ 'ಪರಮಾತ್ಮ ಆಕಾಶದಂತೆ ಸರ್ವವ್ಯಾಪಕ, ನಿತ್ಯ' ಎಂದು ದೃಷ್ಟಾಂತ ರೂಪವಾಗಿ ಪರಮಾತ್ಮನನ್ನು ತಿಳಿಸುತ್ತದೆ ಎಂದರ್ಥ.

ಜ್ಞಾನಿನಃ ಪ್ರಲಯೇ ಸರ್ವೇ ಬ್ರಹ್ಮಣಾ ಸಹ ಪಾರ್ಥಿವಂ ।
ಪರಮಾತ್ಮಾನಮಾವಿಶ್ಯ ವಾರಿಸ್ಥಂ ತತ್ಸಮನ್ವಿತಾಃ ।
ಅಗ್ನಿಸ್ಥಂ ತದ್ಯುತಾಶ್ಚೈವ ತೇನ ನೀತಾಶ್ಚ ವಾಯುಗಂ ।
ನಭೋಗತಂ ತೇನ ನೀತಾ ಮನಃಸ್ಥಂ ತದ್ಯುತಾಸ್ತಥಾ ।
ತತೋ ಬುದ್ಧಿಸ್ಥಮೀಶೇಶಂ ತತೋಽಹಂಕಾರಗಂ ಹರಿಂ ।
ತತೋ ವಿಜ್ಞಾನನಾಮಾನಂ ಮಹತ್ತತ್ವಗತಂ ಹರಿಂ ।
ತತ ಆನಂದನಾಮಾನಂ ಅವ್ಯಕ್ತಸ್ಥಂ ಜನಾರ್ದನಂ ।
ಪ್ರಾಪ್ತಾ ನಾವೃತ್ತಿಮಾಯಾಂತಿ ಶಾಂತೀಭೂತಾ ನಿರಾಮಯಾಃ ।
ಯೇಷಾಂ ಪದಾಂತರಾಪೇಕ್ಷಾ ವಾಯ್ವಾದೀನಾಂ ಮಹಾತ್ಮನಾಂ ।
ಆವೃತ್ಯ ತೇ ಪುನರ್ಯಾಂತಿ ಜ್ಞಾನಿನೋಽಪಿ ನಿರಾಮಯಾಃ ।
ಅನಾವೃತ್ತಿಮಸಂಮೂಢಾಃ ಪರಾನಂದೈಕಭಾಗಿನಃ ॥

ಇತಿ ಬ್ರಹ್ಮತರ್ಕೇ ।

'ಜ್ಞಾನಿಗಳೆಲ್ಲರೂ ಪ್ರಲಯಕಾಲದಲ್ಲಿ ಬ್ರಹ್ಮಾದಿ ದೇವತೆಗಳೊಂದಿಗೆ ಪೃಥಿವ್ಯಂತರ್ಗತನಾದ ಹರಿಯನ್ನು ಪ್ರವೇಶಿಸಿ ಅವನೊಂದಿಗೆ ಅಗ್ನ್ಯಂತರ್ಗತ ಹರಿಯನ್ನು ಸೇರಿ ಅವನೊಂದಿಗೆ ವಾಯ್ವಂತರ್ಗತನನ್ನು ಸೇರಿ ಅವನೊಂದಿಗೆ

ಆಕಾಶಾಂತರ್ಗತನನ್ನು ಸೇರಿ ಅವನೊಂದಿಗೆ ಮನೋಽಂತರ್ಗತನನ್ನು ಸೇರಿ ಅವನೊಂದಿಗೆ ಬುದ್ಧ್ಯಂತರ್ಗತನನ್ನು ಸೇರಿ ಅವನೊಂದಿಗೆ ಅಹಂಕಾರಾಂತರ್ಗತನನ್ನು ಸೇರಿ ಅವನೊಂದಿಗೆ ವಿಜ್ಞಾನನಾಮಕನಾದ ಮಹತ್ತತ್ವಾಂತರ್ಗತನನ್ನು ಸೇರಿ ಅವನೊಂದಿಗೆ ಆನಂದನಾಮಕನಾದ ಅವ್ಯಕ್ತಾಂತರ್ಗತನನ್ನು ಸೇರಿ ಬಳಿಕ ತಿರುಗಿ ಸಂಸಾರಕ್ಕೆ ಬಾರದೆ ಪರಮಾತ್ಮನಲ್ಲಿ ಮನಸ್ಸಿಟ್ಟು ದುಃಖರಹಿತರಾಗಿರುತ್ತಾರೆ. ಮಹಾತ್ಮರಾದ ವಾಯುಭಾರತಿ ರುದ್ರಪಾರ್ವತಿಯರು ಮಾತ್ರ ಜ್ಞಾನಿಗಳಾಗಿದ್ದರೂ ಕೂಡ ಬ್ರಹ್ಮಾದಿ ಪದವಿಯನ್ನು ಹೊಂದುವುದಕ್ಕಾಗಿ ತಿರುಗಿ ಸಂಸಾರಕ್ಕೆ ಬರುತ್ತಾರೆ. ಪುನಃ ಸಾಧನ ಪೂರ್ತಿಯಾದಾಗ ಮೋಹರಹಿತರಾದ ಅವರು ನಿರ್ದುಃಖರಾಗಿ ಉತ್ಕೃಷ್ಟ ಆನಂದ ಭಾಗಿಗಳಾಗಿ ಭಗವಂತನನ್ನು ಸೇರುತ್ತಾರೆ. ತಿರುಗಿ ಸಂಸಾರಕ್ಕೆ ಬರುವುದಿಲ್ಲ' ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

ಭೂಮ್ಯಬ್ಗಮನ್ನನಾಮಾನಂ ಪ್ರಾಣಮಗ್ನ್ಯಾದಿಸಂಸ್ಥಿತಂ ।
ಮಾನಸಂ ಮನಆದಿಸ್ಥಂ ವಿಜ್ಞಾನಂ ಮಹತಿ ಸ್ಥಿತಂ ।
ಆನಂದಮವ್ಯಕ್ತಗತಂ ಕ್ರಮಶೋ ಯಾಂತಿ ದೇವತಾಃ ।
ಬ್ರಹ್ಮಾದ್ಯಾಃ ಕೇಚಿದೇವಾತ್ರ ತದನ್ಯೇ ಕ್ರಮಶಃ ಪರಾನ್ ।

ಇತಿ ಬೃಹತ್ತಂತ್ರೇ ।

'ಜ್ಞಾನಿಗಳು ಕ್ರಮವಾಗಿ ಪೃಥಿವಿ ಜಲಗಳಲ್ಲಿರುವ ಅನ್ನಮಯ ಅನಿರುದ್ಧನನ್ನೂ ಅಗ್ನಿ ವಾಯು ಆಕಾಶಗಳಲ್ಲಿರುವ ಪ್ರಾಣಮಯ ಪ್ರದ್ಯುಮ್ನನನ್ನೂ ಮನಸ್ ಬುದ್ಧಿ ಅಹಂಕಾರಗಳಲ್ಲಿರುವ ಮನೋಮಯ ಸಂಕರ್ಷಣನನ್ನೂ ಮಹತ್ತತ್ವದಲ್ಲಿರುವ ವಿಜ್ಞಾನಮಯ ವಾಸುದೇವನನ್ನೂ ಅವ್ಯಕ್ತ ತತ್ವದಲ್ಲಿರುವ ಆನಂದಮಯ ನಾರಾಯಣನನ್ನೂ ಹೊಂದುತ್ತಾರೆ. ಬ್ರಹ್ಮ ಸರಸ್ವತೀ ವಾಯು ಭಾರತಿಯರು ಸಾಕ್ಷಾತ್ ಆನಂದಮಯನನ್ನೇ ಹೊಂದುತ್ತಾರೆ. ಬೇರೆ ದೇವತೆಗಳು ಕ್ರಮವಾಗಿ ಸ್ವೋತ್ತಮಪ್ರವೇಶದಿಂದ ಪ್ರಾಣಮಯಾದಿಗಳನ್ನು ಹೊಂದಿ ಬ್ರಹ್ಮನನ್ನು ಹೊಂದಿ ಅವನ ಮೂಲಕ ಆನಂದಮಯನನ್ನು ಹೊಂದುತ್ತಾರೆ' ಎಂದು ಬೃಹತ್ತಂತ್ರದಲ್ಲಿ ಹೇಳಿದೆ.

★★★

ಜ್ಞಾನಿಗಳು ಲಯಕಾಲದಲ್ಲಿ ತಾಮಸಾಹಂಕಾರಕಾರ್ಯವಾದ ತನ್ಮಾತ್ರೆಗಳಿಗೂ ತೈಜಸಾಹಂಕಾರಕಾರ್ಯವಾದ ಇಂದ್ರಿಯಗಳಿಗೂ ಕ್ರಮವಾಗಿ ಲಯವಾಗುವಾಗ ಅವುಗಳಲ್ಲಿದ್ದು ಗಂಧಾದಿವಿಷಯ ಭೋಗವನ್ನು ಪಡೆಯುತ್ತಾರೆ—

ಘ್ರಾಣೇನ ಗಂಧಂ ರಸನೇನ ವೈ ರಸಂ
ರೂಪಂ ತು ದೃಷ್ಟ್ಯಾ ಸ್ಪರ್ಶಂ ತ್ವಚೈವ ।
ಶ್ರೋತ್ರೇಣ ಚೋಪೇತ್ಯ ನಭೋಗುಣಂ ತತ್
ಪ್ರಾಯೇಣ ನಾವೃತ್ತಿಮುಪೈತಿ ಯೋಗೀ ॥ ೩೨ ॥

ಜ್ಞಾನಿಯು ಬ್ರಹ್ಮಪ್ರಳಯಕಾಲದಲ್ಲಿ ಪೃಥಿವಿಯ ಅನಂತರ ಗಂಧವನ್ನೂ ಜಲಾನಂತರ ರಸವನ್ನೂ ಅಗ್ನಿಯನಂತರ ರೂಪವನ್ನೂ ವಾಯುವಿನ ಅನಂತರ ಸ್ಪರ್ಶವನ್ನೂ ಆಕಾಶದ ನಂತರ ಶಬ್ದವನ್ನೂ ಕ್ರಮವಾಗಿ ಹೊಂದುತ್ತಾನೆ. ಆಗ ಘ್ರಾಣದಿಂದ ಗಂಧವನ್ನೂ ರಸನೆಯಿಂದ ರಸವನ್ನೂ ಚಕ್ಷುವಿನಿಂದ ರೂಪವನ್ನೂ ತ್ವಕ್ಕಿನಿಂದ ಸ್ಪರ್ಶವನ್ನೂ ಶ್ರೋತ್ರದಿಂದ ಶಬ್ದವನ್ನೂ ಭೋಗಿಸುತ್ತಾನೆ. ಹೀಗೆ ತಾಮಸಾಹಂಕಾರ ಕಾರ್ಯಗಳಾದ ತನ್ಮಾತ್ರೆಗಳು ನಾಶವಾದ ಬಳಿಕ ತೈಜಸಾಹಂಕಾರದ ಕಾರ್ಯಗಳಾದ ಘ್ರಾಣ ರಸನಾ ಚಕ್ಷು ತ್ವಕ್ ಶ್ರೋತ್ರಗಳಲ್ಲಿರುವ ಹರಿಯ ರೂಪಗಳೊಂದಿಗೆ ತೈಜಸಾಹಂಕಾರದ ಕಾರ್ಯವಾದ ಬುದ್ಧಿತತ್ತ್ವದಲ್ಲಿರುವ ಪ್ರಾಣಮಯನನ್ನು ಸೇರುತ್ತಾನೆ. ವಾಯುಭಾರತಿ ಮುಂತಾದವರನ್ನು ಹೊರತುಪಡಿಸಿ ಉಳಿದೆಲ್ಲ ಜ್ಞಾನಿಗಳೂ ಹೀಗೆ, ತಿರುಗಿ ಸಂಸಾರಕ್ಕೆ ಬಾರದೆಯೆ, ಮಾರ್ಗದಲ್ಲಿ ದಿವ್ಯಭೋಗಗಳನ್ನು ಅನುಭವಿಸುವರು. ಮುಕ್ತಿಯಲ್ಲಿಯೂ ಮುಕ್ತರು ಹೀಗೇ ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯಗಳಿಂದ ಮನಸ್ಸಿನಿಂದ ದಿವ್ಯ ವಿಷಯ ಭೋಗಗಳನ್ನು ಸಂಕಲ್ಪಮಾತ್ರದಿಂದ ಹೊಂದಿ ಸುಖಿಸುತ್ತಾರೆ.

ಇಲ್ಲಿ ಶ್ರೀಧರಾದಿ ವ್ಯಾಖ್ಯಾನಗಳಲ್ಲಿ ಘ್ರಾಣದಿಂದ ಅನುಭವಿಸುವ ಗಂಧ, ರಸನೆಯಿಂದ ತಿಳಿಯುವ ರಸ ಮುಂತಾದುವನ್ನು ಪೃಥಿವ್ಯಾದಿ ಭೇದನ ಕಾಲದಲ್ಲಿಯೆ ಭೋಗಿಸುತ್ತಾನೆ ಯೋಗಿ ಎಂದಿದೆ. ಆದರೆ ಅವರಿಗೆ ಘ್ರಾಣದಿಂದ ಅನುಭವಿಸುವ ರಸನೆಯಿಂದ ತಿಳಿಯುವ ಮುಂತಾಗಿ ವಿಶೇಷಣಗಳು ವ್ಯರ್ಥವಾಗುತ್ತವೆ. ಅದಕ್ಕೆ ವೀರರಾಘವ ವ್ಯಾಖ್ಯಾನದಲ್ಲಿ ಘ್ರಾಣಾದಿ ಇಂದ್ರಿಯಗಳಿಂದ ಗಂಧಾದಿಗಳನ್ನು ಅನುಭವಿಸುತ್ತ ಮುಂದುವರಿಯುತ್ತಾರೆ ಎಂದೇ ಹೇಳಿದೆ. ಆದರೂ ಈ ಶ್ಲೋಕ ಮಾರ್ಗದಲ್ಲಿ ಜ್ಞಾನಿಗೆ ಸಿಗುವ ಭೋಗವನ್ನು ಮಾತ್ರವಲ್ಲದೆ ಮೋಕ್ಷದಲ್ಲಿ ಸಿಗುವ ಭೋಗವನ್ನೂ ಹೇಳುತ್ತಿದೆ ಎನ್ನಬೇಕು—

ಪಂಚೇಂದ್ರಿಯೈರ್ಯೇ ವಿಷಯಾ ಏಷ್ಟವ್ಯಾಃ ಸರ್ವತೋ ವರಾಃ ।
ಮಾನಸಾಂಶ್ಚಾಖಿಲಾನ್ ಪ್ರಾಪ್ಯ ಮುಕ್ತಾ ಮೋದಂತಿ ದೇವತಾಃ ।
ತಥೋದ್ರಿಕ್ತನಿಜಾನಂದಾ ನಿತ್ಯಾನಂದಾ ಅಸಂವೃತಾಃ ॥

ಇತಿ ಷಾಡ್ಗುಣ್ಯೇ ।

'ಸ್ವರೂಪಭೂತವಾದ ಪಂಚೇಂದ್ರಿಯಗಳಿಂದ ಮುಕ್ತದೇವತೆಗಳು ಉತ್ತಮವಾದ ಯಾವುದೇ ವಿಷಯಗಳನ್ನು ಅನುಭವಿಸಲು ಬಯಸಿದರೂ ಅವುಗಳನ್ನು ಸಂಕಲ್ಪ ಮಾತ್ರದಿಂದ ಪಡೆದು ಮೋಕ್ಷದಲ್ಲಿ ನಿತ್ಯಸ್ವರೂಪಾನಂದಾವಿರ್ಭಾವ ಉಳ್ಳವರಾಗಿ ಸುಖಿಸುತ್ತಾರೆ' ಎಂದು ಷಾಡ್ಗುಣ್ಯ ಗ್ರಂಥದಲ್ಲಿ ಹೇಳಿದೆ.

★★★

ಜ್ಞಾನಿಗಳು ಮುಂದೆ ಅಹಂಕಾರಾದಿ ತತ್ತ್ವಾಂತರ್ಗತನಾದ ಹರಿಯನ್ನು ಸೇರುತ್ತಾರೆ—

ಸ ಭೂತಸೂಕ್ಷ್ಮೇಂದ್ರಿಯ ಸನ್ನಿಕರ್ಷಾತ್
ಸನಾತನೋಽಸೌ ಭಗವಾನನಾದಿಃ ।
ಮನೋಮಯಂ ದೇವಮಯಂ ವಿಕಾರ್ಯಂ
ಸಂಸಾದ್ಯ ಮತ್ಯಾ ಸಹ ತೇನ ಯಾತಿ ॥ ೩೩ ॥

ಆಕಾಶ ತತ್ತ್ವವನ್ನು ಸೇರಿದ ಜ್ಞಾನಿಸಹಿತನಾದ ಭಗವಂತನು ಭೂತ ತನ್ಮಾತ್ರ ಇಂದ್ರಿಯದೇವತೆಗಳು ಹಾಗೂ ಅವರ ಅಂತರ್ಗದ ಭಗವದ್ರೂಪಗಳೊಂದಿಗೆ ಮನಸ್ತತ್ತ್ವದಲ್ಲಿರುವ ಮನೋಮಯ ಸಂಕರ್ಷಣನನ್ನು ಹೊಂದುತ್ತಾನೆ. ಆ ಭಗವಂತ ವೇದವೇದ್ಯ ಅನಾದಿ. ವೈಕಾರಿಕಾಹಂಕಾರಜನ್ಯರಾದ ದೇವತೆಗಳನ್ನು ಲೋಕಪ್ರೇರಕರನ್ನಾಗಿ ಮಾಡಿದವನು.

ವಿಜ್ಞಾನತತ್ತ್ವಂ ಗುಣಸನ್ನಿರೋಧಂ
ತೇನಾತ್ಮನಾಽಽತ್ಮಾನಮುಪೈತಿ ಶಾಂತಿಂ ।
ಆನಂದಮಾನಂದಮಯೋಽವಸಾನೇ
ಸರ್ವಾತ್ಮಕೇ ಬ್ರಹ್ಮಣಿ ವಾಸುದೇವೇ ॥ ೩೪ ॥

ಜ್ಞಾನಿಯು ಅಹಂಕಾರತತ್ತ್ವದಲ್ಲಿರುವ ಮನೋಮಯ ಸಂಕರ್ಷಣನೊಂದಿಗೆ ಮಹತ್ತತ್ತ್ವದಲ್ಲಿರುವ ವಿಜ್ಞಾನಮಯ ವಾಸುದೇವನನ್ನು ಸೇರುತ್ತಾನೆ. ಆ ವಾಸುದೇವನೊಂದಿಗೆ ಅವ್ಯಕ್ತದಲ್ಲಿರುವ ಆನಂದಮಯ ನಾರಾಯಣನನ್ನು ಹೊಂದುತ್ತಾನೆ. ಆನಂದಮಯನು ಜ್ಞಾನಿಗಳೊಂದಿಗೆ ದ್ವಿಪರಾರ್ಧಾವಸಾನ ಕಾಲದಲ್ಲಿ ಮುಕ್ತಿದಾಯಕನಾದ ನಿರ್ಗುಣನಾದ ವಾಸುದೇವನನ್ನು ಸೇರುತ್ತಾನೆ.

ಭೂತಸೂಕ್ಷ್ಮೇಂದ್ರಿಯೈಶ್ಚ ಸಹ ಅನಾದಿರ್ಭಗವಾನಾಕಾಶಗೋ ಮನೋಮಯಂ ಯಾತಿ । ನಾದವತ್ವಾತ್ ಸನಾತನಃ ।

ನಾದೇನ ತೇನ ಮಹತಾ ಸನಾತನ ಇತಿ ಸ್ಮೃತಃ ।

ಇತಿ ಮೋಕ್ಷಧರ್ಮೇ । ವಿವಿಧಕಾರ್ಯಯುಕ್ತಂ ವಿಕಾರ್ಯಂ । ದೇವ-ಮಯಂ ದೇವಪ್ರಧಾನಂ ।

ಮನಃಸ್ಥಿತೋ ಹರಿರ್ನಿತ್ಯಂ ಸರ್ವದೇವೇಷು ಸಂಸ್ಥಿತಃ ।
ದೇವಪ್ರಧಾನಕಾನ್ ಲೋಕಾನ್ ಕರೋತ್ಯನುಗತಃ ಸದಾ ॥

ಇತಿ ವಾರಾಹೇ । ಭೂತಸೂಕ್ಷ್ಮಾಣಿ ಪಂಚಭೂತಾನಿ ಜೀವಾಶ್ಚ ।

ಪಂಚಭೂತೈಶ್ಚ ಶಬ್ದಾದ್ಯೈರಿಂದ್ರಿಯೈರ್ಜೀವರಾಶಿಭಿಃ ।
ಯುಕ್ತ ಆಕಾಶಗೋ ವಿಷ್ಣುರ್ಮನಸ್ಥಮುಪಗಚ್ಛತಿ ॥

ಇತಿ ವಾಮನೇ । ಯೋऽಸಾವನಾದಿರ್ಮನೋಮಯಸ್ತಮಿತಿ ವಾ । ವಿಪರ್ಯಯಶ್ಚ ತಸ್ಯೈವ ಗಂತೃತ್ವಮಿತಿ ಜ್ಞಾಪಯಿತುಂ । ಮತಿಸ್ಥೇನ ತೇನ ಮನಃಸ್ಥೇನ ಚ ಸಹ ವಿಜ್ಞಾನತತ್ವಂ ಯಾತಿ । ಗುಣಸನ್ನಿರೋಧಂ ನಿರ್ಗುಣಂ ವಾಸುದೇವಂ । ಏತಾಂ ಗತಿಂ ಗತೋ ನ ವಿಷಜ್ಜತೇ ।

ವಾಸುದೇವಾಶ್ರಿತಾ ದೇವಾ ಬ್ರಹ್ಮಾದ್ಯಾ ಮುಕ್ತಬಂಧನಾಃ ।
ಭೇದದೃಷ್ಟ್ಯಾಭಿಮಾನೇನ ಚಾವೃತ್ತಿಂ ನೈವ ಯಾಂತಿ ತೇ ।
ಭುಂಜತೇ ತು ಪೃಥಗ್ ಭೋಗಾನ್ನಾನಂದಂ ತತ್ಸ್ವರೂಪಕಂ ।
ಸ್ವರೂಪಂ ಚ ಪೃಥಕ್ ತೇಷಾಮಾವಿಷ್ಟಗ್ರಹವದ್ ಭವೇತ್ ।

ಇತಿ ಬ್ರಹ್ಮಾಂಡೇ ।

'ಭೂತಸೂಕ್ಷ್ಮೇಂದ್ರಿಯಸನ್ನಿಕರ್ಷಾತ್' ಎಂದರೆ ಭೂತಗಳು ಭೂತಸೂಕ್ಷ್ಮಗಳು ಇಂದ್ರಿಯಗಳು ಇವುಗಳನ್ನು ಸೇರಿ ಎಂದರ್ಥ. ಆಕಾಶದಲ್ಲಿರುವ ಅನಾದಿಯಾದ ಭಗವಂತ ಮನೋಮಯನನ್ನು ಹೊಂದುತ್ತಾನೆ. ವೇದರೂಪ ಶಬ್ದಗಳಿಂದ ಸ್ತುತಿಸಲ್ಪಡುವುದರಿಂದ ಸನಾತನ. ಆದರಿಂದ 'ಅನಾದಿ' ಎಂಬ ಶಬ್ದದಿಂದ ಪುನರುಕ್ತಿ ಇಲ್ಲ. 'ವೇದರೂಪಶಬ್ದದಿಂದ ಸ್ತುತಿಸಲ್ಪಡುವುದರಿಂದ ಸನಾತನನೆನಿಸುತ್ತಾನೆ' ಎಂದು ಮೋಕ್ಷಧರ್ಮದಲ್ಲಿ ಹೇಳಿದೆ. ನಾನಾ ವಿಧ ಕಾರ್ಯಗಳಿಂದ ಯುಕ್ತವಾಗಿರುವುದರಿಂದ ಅಹಂಕಾರತತ್ವ 'ವಿಕಾರ್ಯ' ಎನಿಸುತ್ತದೆ.

ದೇವಮಯ ಎಂದರೆ ಲೋಕದಲ್ಲಿ ದೇವತೆಗಳನ್ನು ಪ್ರೇರಕರನ್ನಾಗಿ ಮಾಡಿದವನು. 'ಮನಸ್ಸಿನಲ್ಲಿರುವ ಹರಿ ಎಲ್ಲ ದೇವತೆಗಳಲ್ಲಿದ್ದು ಲೋಕದಲ್ಲಿಯೂ ಇದ್ದು ದೇವತೆಗಳನ್ನು ಲೋಕಪ್ರೇರಕರನ್ನಾಗಿ ಮಾಡಿದ್ದಾನೆ' ಎಂದು ವರಾಹಪುರಾಣ ಹೇಳಿದೆ.

ಭೂತಸೂಕ್ಷ್ಮೇಂದ್ರಿಯಾಣಿ ಎಂಬಲ್ಲಿ ಭೂತಸೂಕ್ಷ್ಮಗಳೆಂದರೆ ಪಂಚಭೂತ ಗಳು ಮತ್ತು ಜೀವರೂ ವಿವಕ್ಷಿತರಾಗಿದ್ದಾರೆ, ತನ್ಮಾತ್ರೆಗಳು ಮಾತ್ರವಲ್ಲ, ಏಕೆಂದರೆ

ವಾಮನಪುರಾಣದಲ್ಲಿ 'ಪಂಚಭೂತಗಳು ಶಬ್ದಾದಿಗಳು ಇಂದ್ರಿಯಗಳು ಜೀವ ಸಮೂಹಗಳು ಇವುಗಳೊಂದಿಗೆ ಆಕಾಶಾಂತರ್ಗತನಾದ ವಿಷ್ಣು ಮನೋಮಯ ನನ್ನು ಸೇರುತ್ತಾನೆ' ಎಂದಿದೆ.

ಸ ಭೂತಸೂಕ್ಷ್ಮೇಂದ್ರಿಯ ಸನ್ನಿಕರ್ಷಾತ್ ಎಂಬಲ್ಲಿ 'ಸಃ' ಎಂದರೆ 'ಭಗವಾನ್' ಎಂದಿಟ್ಟುಕೊಳ್ಳಬಹುದು. ಅಥವಾ ಯಾವ ಅನಾದಿ ಮನೋಮಯ ಭಗವಂತನಿರು ವನೋ ಅವನನ್ನು 'ಸಃ' ಆ ಜ್ಞಾನಿ ಹೊಂದುತ್ತಾನೆ ಎಂದೂ ಅನ್ವಯಿಸಬಹುದು. ಭಗವಂತನು ಮನೋಮಯನನ್ನು ಹೊಂದುತ್ತಾನೆ ಎಂದು ಅನ್ವಯಿಸುವುದು, ಜೀವನಿಗೆ ಸ್ವಾತಂತ್ರ್ಯವಿಲ್ಲ, ಭಗವಂತನೆ ಅವನನ್ನು ಕರೆದುಕೊಂಡು ಹೋಗುವವನು ಎಂದು ತಿಳಿಸುವುದಕ್ಕಾಗಿ ಸಾರ್ಥಕವೆನಿಸುತ್ತದೆ.

'ಮತ್ಯಾ ಸಹ ತೇನ' ಎಂಬಲ್ಲಿ 'ತೇನ ಮತ್ಯಾ' ಎಂದು ಲಿಂಗ ವ್ಯತ್ಯಾಸವಾಗಿದೆ ಎಂದು ತಿಳಿಯಕೂಡದು. ಚಕಾರ ಸೇರಿಸಿ 'ತೇನ' ಮನಸ್ಸಿನಲ್ಲಿರುವ ಭಗವದ್ರೂಪದಿಂದಲೂ 'ಮತ್ಯಾ ಚ' ಬುದ್ಧಿತತ್ವದಲ್ಲಿರುವ ರೂಪದಿಂದಲೂ ಕೂಡಿ ವಿಜ್ಞಾನತತ್ವವನ್ನು ಸೇರುತ್ತಾನೆ ಎಂದು ಅನ್ವಯಿಸಬೇಕು. 'ಗುಣ ಸನ್ನಿರೋಧ' ಎಂದರೆ ಮೂರು ಗುಣಗಳನ್ನು ಸ್ವೀಕಾರ ಮಾಡದ ವಾಸುದೇವ ಎಂದರ್ಥ. ಅನಿರುದ್ಧ ಸ್ಥಿತಿಗಾಗಿ ಸತ್ವಗುಣವನ್ನೂ ಪ್ರದ್ಯುಮ್ನ ಸೃಷ್ಟಿಗಾಗಿ ರಜೋಗುಣವನ್ನೂ ಸಂಕರ್ಷಣ ಲಯಕ್ಕಾಗಿ ತಮೋಗುಣವನ್ನೂ ಪ್ರೇರಿಸುವುದಕ್ಕೆ ಸ್ವೀಕರಿಸುತ್ತಾನೆ. ವಾಸುದೇವ ಮುಕ್ತಿದಾಯಕ ನಾದ್ದರಿಂದ ಹಾಗೆ ಮಾಡುವುದಿಲ್ಲ. ಇದನ್ನೇ 'ಏತಾಂ ಗತಿಂ ಗತೋ ನ ವಿಷಜ್ಜತೇ' 'ವಾಸುದೇವನಲ್ಲಿ ಸಾಯುಜ್ಯಾದಿಗಳನ್ನು ಪಡೆದವನು ತಿರುಗಿ ಸಂಸಾರಕ್ಕೆ ಬರುವುದಿಲ್ಲ' ಎಂದಿದೆ.

ಬ್ರಹ್ಮಾಂಡಪುರಾಣದಲ್ಲಿ ಇದು ಸ್ಪಷ್ಟವಿದೆ—'ಭೇದದರ್ಶನದಿಂದಲೂ ಸ್ವಯೋಗ್ಯತತ್ವಜ್ಞಾನದಿಂದಲೂ ಸಂಸಾರಬಂಧನದಿಂದ ಮುಕ್ತರಾದ ಬ್ರಹ್ಮಾದಿ ದೇವತೆಗಳು ವಾಸುದೇವನ ಆಶ್ರಯದಲ್ಲಿದ್ದು ಎಂದೂ ಸಂಸಾರಕ್ಕೆ ಹಿಂತಿರುಗುವು ದಿಲ್ಲ. ಸಾಯುಜ್ಯಮುಕ್ತಿಯಲ್ಲಿ ಮುಕ್ತರು ಪರಮಾತ್ಮನ ಆನಂದವನ್ನು ಅನುಭವಿಸುವು ದಿಲ್ಲ. ತಮ್ಮ ಸ್ವರೂಪಭೂತವಾದ ಬೇರೆಯೆ ಆನಂದವನ್ನು ಅನುಭವಿಸುತ್ತಾರೆ. ಏಕೆಂದರೆ ಅವರ ಸ್ವರೂಪ ಹರಿಯಿಂದ ಬೇರೆಯೆ ಆಗಿರುತ್ತದೆ. ಮನುಷ್ಯನಲ್ಲಿ ಪಿಶಾಚಿ ಸೇರಿಕೊಳ್ಳುವಂತೆ ಪರಮಾತ್ಮನೊಳಗೆ ಮುಕ್ತರು ಪ್ರವೇಶಿಸಿ ಇರುವುದೆ ಸಾಯುಜ್ಯ' ಎಂದು.

★★★

ಇಷ್ಟರವರೆಗೆ ಭಾಗವತವನ್ನು ಸ್ವಲ್ಪ ಹೇಳಿದ್ದಾಯಿತು. ಇನ್ನೂ

ಮುಂದುವರಿಸಬೇಕು. ಅದಕ್ಕೆ ಶ್ರೋತೃಗಳಿಗೆ ಶ್ರದ್ಧೆ ಹುಟ್ಟಿಸಲು ಭಾಗವತವನ್ನು ಪ್ರಶಂಸಿಸುತ್ತಾರೆ—

ನ ಹ್ಯತೋಽನ್ಯಃ ಶಿವಃ ಪಂಥಾ ವಿಶ್ರುತಃ ಸಂಸೃತಾವಿಹ ।
ವಾಸುದೇವೇ ಭಗವತಿ ಭಕ್ತಿಯೋಗೋ ಯತೋ ಭವೇತ್ ॥ ೩೬ ॥

ಭಗವಾನ್ ವೇದವ್ಯಾಸರು ಕರುಣೆಯಿಂದ ಹೇಳಿದ ಗ್ರಂಥವಾದ್ದರಿಂದ ಈ ಭಾಗವತಕ್ಕಿಂತ ಬೇರೆ ಮೋಕ್ಷಕ್ಕೆ ಸುಲಭವಾದ ಮಾರ್ಗ ಈ ಯುಗದಲ್ಲಿ ಸಂಸಾರದಲ್ಲಿರುವ ಅಲ್ಪಾಯುಷಿಮಾನವರಿಗೆ ಇಲ್ಲ. ಅವರಿಗೆ ಭಾಗವತದಿಂದಲೆ ಭಗವಾನ್ ವಾಸುದೇವನಲ್ಲಿ ಭಕ್ತಿಯೋಗ ಸಾಧ್ಯ.

ಮುಂದಿನ ಶ್ಲೋಕದಲ್ಲಿ 'ಪರಮಾಪ್ತರಾದ ಭಗವಾನ್ ವೇದವ್ಯಾಸರು ಕರುಣೆಯಿಂದ ಭಾಗವತ ರಚಿಸಿದರೆ'ಂದು ಭಾಗವತದ ಮಹತ್ವವನ್ನು ಹೇಳುತ್ತಾರೆ. 'ಅತಃ' ಆ ಕಾರಣದಿಂದ ಭಾಗವತವೇ ಕಲಿಯುಗದಲ್ಲಿ ಅಲ್ಪಾಯುಷಿಗಳಾದ ಮಾನವರಿಗೆ ಶ್ರೇಯೋಮಾರ್ಗ ಎಂದು ಈ ಶ್ಲೋಕದಲ್ಲಿ 'ಅತಃ' ಎಂಬ ಶಬ್ದ ಹೇಳುತ್ತದೆ—

ಯದ್ ಭಗವಾನಾಹ ಅತೋ ಭಾಗವತಾಖ್ಯಾದ್ ಗ್ರಂಥಾತ್
ಶಿವಃ ಪಂಥಾ ನ ।

ಭಗವಾನ್ ವ್ಯಾಸರು ಭಾಗವತವನ್ನು ಹೇಳಿದ್ದರಿಂದ ಭಾಗವತಗ್ರಂಥಕ್ಕಿಂತ ಬೇರೆ ಸುಲಭವಾದ ಶ್ರೇಯೋಮಾರ್ಗವಿಲ್ಲ ಎಂದು 'ಅತಃ' ಶಬ್ದದ ಅರ್ಥ.

★★★

ಭಾಗವತದ ಮಹತ್ವ ಇದು—

ಭಗವಾನ್ ಬ್ರಹ್ಮ ಕಾರ್ತ್ಸ್ನ್ಯೇನ ತ್ರಿರನ್ವೀಕ್ಷ್ಯ ಮನೀಷಯಾ ।
ತದ್ಧಿ ಹ್ಯಪಶ್ಯತ್ ಕೂಟಸ್ಥೇ ರತಿರಾತ್ಮನ್ ಯತೋ ಭವೇತ್ ॥ ೩೭ ॥

ಪರಮಾತ್ಮನ ದರ್ಶನಾದಿಗಳಿಂದ ಲಭ್ಯವಾಗುವ ಸುಖ ಭಾಗವತ ಶ್ರವಣದಿಂದ ಸುಲಭ ಸಾಧ್ಯ. ಏಕೆಂದರೆ ಭಗವಾನ್ ವೇದವ್ಯಾಸರು ವೇದವನ್ನು ಲೀಲೆಯಿಂದ ಮೂರುಬಾರಿ ವಿಚಾರ ಮಾಡಿ ಅದರ ಸಾರರೂಪವಾಗಿ ಉತ್ಕೃಷ್ಟವಾಗಿ ಈ ಭಾಗವತ ಪುರಾಣವನ್ನು ರಚಿಸಿದ್ದಾರೆ.

ಇಲ್ಲಿ ಶ್ರೀಧರಾದಿ ವ್ಯಾಖ್ಯಾನಗಳಲ್ಲಿ 'ತದಧ್ಯವಸ್ಯತ್' ಎಂದು ಪಾಠ. ಭಕ್ತಿಯೋಗವೆ ಮುಕ್ತಿಸಾಧನವೆಂದು ವ್ಯಾಸರು ನಿಶ್ಚಯಿಸಿದರು ಎಂದರ್ಥ ಎನ್ನುತ್ತಾರೆ. ಭಾಗವತ ಪ್ರಶಂಸೆ ಇಲ್ಲಿ ಇಲ್ಲ. ವೇದಶಾಸ್ತ್ರ ಬಹಳ ದುರ್ಗಮವೆಂದು ತಿಳಿಸುವುದಕ್ಕಾಗಿ

ವ್ಯಾಸರು ಅದನ್ನು ಮೂರು ಬಾರಿ ವಿಚಾರ ಮಾಡಿದಂತೆ ತೋರಿಕೊಂಡರು ಎಂದು ವಿಶ್ವನಾಥ ವ್ಯಾಖ್ಯಾನ. 'ದುಷ್ಟಾನಾಂ ಮೋಹನಾಯ ಚ' ಎಂದು ಬ್ರಹ್ಮತರ್ಕವಚನದಲ್ಲಿ ಚಕಾರವಿರುವುದ ರಿಂದ ಈ ಅಭಿಪ್ರಾಯವನ್ನೂ ಇಟ್ಟುಕೊಳ್ಳಬಹುದು—

ತದ್ ಭಾಗವತಂ ಪುರಾಣಮಪಶ್ಯತ್ ।
ನಿತ್ಯಜ್ಞಾನೇನ ಸಿದ್ಧಂ ಚ ಪುನಃಪುನರವೇಕ್ಷತೇ ।
ಲೀಲಯೈವ ಹರಿರ್ದೇವೋ ದುಷ್ಟಾನಾಂ ಮೋಹನಾಯ ಚ ॥

ಇತಿ ಬ್ರಹ್ಮತರ್ಕೇ ।

'ತದ್ಧಿ ಹ್ಯಪಶ್ಯತ್' ಎಂಬಲ್ಲಿ 'ತದ್' ಎಂದರೆ ಭಾಗವತ ಪುರಾಣವನ್ನು 'ಅಪಶ್ಯತ್' ರಚಿಸಿದರು ಎಂದರ್ಥ.

'ವ್ಯಾಸರು ಎಲ್ಲವನ್ನೂ ಎಲ್ಲ ಕಾಲದಲ್ಲಿಯೂ ನಿತ್ಯಜ್ಞಾನದಿಂದ ತಿಳಿದವರೇ ಆದರೂ 'ತಿಳಿದಿಲ್ಲ, ಅವರೂ ವಿಚಾರ ಮಾಡಬೇಕಾಗುತ್ತದೆ' ಎಂದು ಅಸುರರಿಗೆ ಮೋಹ ಉಂಟುಮಾಡುವುದಕ್ಕಾಗಿ ಲೀಲೆಯಿಂದ ಪುನಃ ಪುನಃ ಮೂರು ಬಾರಿ ವೇದವನ್ನು ವಿಚಾರ ಮಾಡಿಯೇ ಭಾಗವತವನ್ನು ಬರೆದಂತೆ ತೋರಿಕೊಂಡರು' ಎಂದು ಬ್ರಹ್ಮತರ್ಕ ಹೇಳಿದೆ.

★★★

ಲಕ್ಷಣ ಮತ್ತು ಪ್ರಮಾಣಗಳಿಂದ ಭಗವಂತನನ್ನು ತಿಳಿಸುವುದು ಭಾಗವತದ ವೈಶಿಷ್ಟ್ಯ—

ಭಗವಾನ್ ಸರ್ವಭೂತೇಷು ಲಕ್ಷಿತಶ್ಚಾತ್ಮನಾ ಹರಿಃ ।
ದೃಶ್ಯೈರ್ಬುದ್ಧ್ಯಾದಿಭಿರ್ದ್ರಷ್ಟಾ ಲಕ್ಷಣೈರನುಮಾಪಕೈಃ ॥ ೩೮ ॥

ಎಲ್ಲರಲ್ಲಿಯೂ ಬುಧ್ಯಾದಿಗಳು ತಮ್ಮ ವಶದಲ್ಲಿ ಇಲ್ಲದಿರುವುದು ಅನುಭವಸಿದ್ಧವಾದ್ದರಿಂದ ಅವುಗಳ ಪ್ರೇರಣೆ ಮಾಡುವವ ಸ್ವತಂತ್ರನಾದ ಹರಿ ಬೇರೆ ಇದ್ದಾನೆ ಎಂದು ಅನುಮಾನದಿಂದ ತಿಳಿಯಲು ಸಾಧ್ಯವೆಂದು ಭಾಗವತಪುರಾಣದಲ್ಲಿ ಪ್ರತಿಪಾದನೆ ಇದೆ. ಜಗಜ್ಜನ್ಮಾದಿಕರ್ತನೆಂದು ಅವನ ಲಕ್ಷಣಗಳನ್ನೂ ಇಲ್ಲಿ ಹೇಳಿದೆ. ಹೀಗೆ ಹರಿ ವ್ಯಾಸರೂಪದಿಂದ ತನ್ನನ್ನೆ ಲಕ್ಷಣ ಪ್ರಮಾಣಗಳಿಂದ ತಿಳಿಸಿಕೊಡುವುದ ರಿಂದ ಈ ಗ್ರಂಥ ಬಹಳ ಶ್ರೇಷ್ಠ.

ಇಲ್ಲಿ ಶ್ರೀಧರಾದಿ ವ್ಯಾಖ್ಯಾನ ಪ್ರಕಾರ ಭಗವಂತ ಅನುಮಾನಾಗಮಗಳಿಂದ ವೇದ್ಯನೇ ಇರುವುದರಿಂದ ಅವನಲ್ಲಿ ಭಕ್ತಿಯೋಗ ಸಾಧ್ಯ ಎಂದಿಷ್ಟೇ ಅರ್ಥ.

ಭಾಗವತದಲ್ಲಿ ಭಗವಂತ ಪ್ರತಿಪಾದ್ಯನೆಂದು ಭಾಗವತಪ್ರಶಂಸೆ ಮಾಡುತ್ತಿಲ್ಲ. ಅದರಿಂದ ಹೀಗೆ ಹೇಳಬೇಕು—

ಲಕ್ಷಿತಶ್ಚಾಸ್ಮಿನ್ ಪುರಾಣೇ ಬುದ್ಧ್ಯಾದೀನಾಂ ಪಾರವಶ್ಯ
ದರ್ಶನಾದನ್ಯೋ ನಿಯಂತಾಽಸ್ತೀತಿ ।
ಸಮಾಧಾವಸಮಾಧೌ ಚ ನಿಃಸ್ವತಂತ್ರಸ್ಯ ದೇಹಿನಃ ।
ಅನ್ಯೋ ನಿಯಂತಾ ಭಗವಾನ್ ವಾಸುದೇವಃ ಪರಃ ಪ್ರಭುಃ ।
ಇತಿ ಬ್ರಹ್ಮತರ್ಕೇ ।

ಬುದ್ಧ್ಯಾದಿಗಳು ತಮ್ಮ ವಶದಲ್ಲಿ ಇಲ್ಲದಿರುವುದು ಎಲ್ಲರಿಗೂ ಅನುಭವ ಸಿದ್ಧವಾದ್ದರಿಂದ ಪ್ರೇರಕನಾಗಿ ಇನ್ನೊಬ್ಬ ಭಗವಂತ, ಇದ್ದಾನೆಯೆಂದು ಅನುಮಾನ ದಿಂದ ತಿಳಿಯಬಹುದೆಂದು ಈ ಭಾಗವತಪುರಾಣದಲ್ಲಿ ಹೇಳಿದೆ. ಅದರಿಂದ ಭಾಗವತ ಶ್ರೇಷ್ಠ.

'ಸ್ವೇಚ್ಛೆಯಿಂದ ಬುದ್ಧಿಯನ್ನು ಒಂದುಕಡೆ ಏಕಾಗ್ರತೆಯಿಂದ ನಿಲ್ಲಿಸುವುದಾಗಲಿ ಬೇರೆಕಡೆ ಹರಿಸುವುದಾಗಲಿ ನಮ್ಮ ವಶದಲ್ಲಿ ಇಲ್ಲ. ಅದರಿಂದ ಬುದ್ಧ್ಯಾದಿ ನಿಯಾಮಕನಾದ ಭಗವಂತ ಸರ್ವೋತ್ತಮ ಪ್ರಭು ವಾಸುದೇವ ನಮಗಿಂತ ಬೇರೆಯೆ ಇದ್ದಾನೆ' ಎಂದು ಬ್ರಹ್ಮತರ್ಕ ಹೇಳಿದೆ.

★★★

ಹರಿಯನ್ನೇ ಭಾಗವತದಲ್ಲಿ ವರ್ಣಿಸಿರುವುದರಿಂದ ಹರಿಯನ್ನೇ ಶ್ರವಣಾದಿ ಗಳಿಂದ ಉಪಾಸನೆ ಮಾಡಬೇಕು—

ತಸ್ಮಾತ್ ಸರ್ವಾತ್ಮನಾ ರಾಜನ್ ಹರಿಃ ಸರ್ವತ್ರ ಸರ್ವದಾ ।
ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯೋ ಭಗವಾನ್ ನೃಣಾಂ ॥ ೩೬ ॥

ಪರಮಾಪ್ತರಾದ ಶ್ರೀವೇದವ್ಯಾಸರು ಭಾಗವತದಲ್ಲಿ ಹರಿಯನ್ನೇ ವರ್ಣಿಸಿರುವುದರಿಂದ ಭಗವಾನ್ ಹರಿಯನ್ನೇ ಎಲ್ಲೆಡೆ ಎಲ್ಲ ಕಾಲದಲ್ಲಿ ಮಾನವರು ಶ್ರವಣ ಕೀರ್ತನ ಸ್ಮರಣಗಳಿಂದ ಉಪಾಸನೆ ಮಾಡಬೇಕು.

ಯಸ್ಮಾದ್ ಭಗವತೈಷ ಏವೋಕ್ತಃ ತಸ್ಮಾತ್
ಸ ಏವ ಶ್ರೋತವ್ಯಾದಿಃ ।

ಭಗವಾನ್ ವ್ಯಾಸರು ಹರಿಯನ್ನೇ ಭಾಗವತದಲ್ಲಿ ವರ್ಣಿಸಿರುವುದರಿಂದ ಅವನನ್ನೆ ಶ್ರವಣಾದಿಗಳಿಂದ ಭಜಿಸಬೇಕು.

ಇತಿ ದ್ವಿತೀಯಸ್ಕಂಧೇ ದ್ವಿತೀಯೋಽಧ್ಯಾಯಃ

ಮೂರನೇ ಅಧ್ಯಾಯ

ಅಧ್ಯಾಯ ಸಾರಾಂಶ

ಶುಕ :- ಸಾಯಲಿರುವ ಮುಮುಕ್ಷು ಏನು ಮಾಡಬೇಕೆಂಬುದನ್ನು ಹೇಳಿ ಈಗ ಏನು ಮಾಡಬಾರದೆಂಬುದನ್ನು ಹೇಳುತ್ತೇನೆ. ಬ್ರಹ್ಮವರ್ಚಸ್ಸು ಇಂದ್ರಿಯಪಾಟವ ಸಂತತಿ ಸಂಪತ್ತು ಮುಂತಾದ ಮೋಕ್ಷವಿರೋಧಿ ಕ್ಷುದ್ರಫಲಗಳಿಗೆ ಜನರು ವಾಯು ಇಂದ್ರ ದಕ್ಷ ಲಕ್ಷ್ಮೀ ಮುಂತಾದ ಅನ್ಯದೇವತೆಗಳನ್ನು ಭಜಿಸುತ್ತಾರೆ. ಹಾಗೆ ಮಾಡಬಾರದು. ಮೋಕ್ಷಕ್ಕೆ ವಿರೋಧಿಯಾಗದಂತೆ, ಎಲ್ಲ ಅಭೀಷ್ಟಗಳನ್ನು ಬಯಸಿದರೂ ಅದಕ್ಕೆ ಹರಿಯನ್ನೇ ಭಜಿಸಬೇಕು. ಅನ್ಯ ದೇವತಾರಾಧನೆ ಮಾಡುವವರೂ ಕೂಡ ಮೋಕ್ಷಯೋಗ್ಯರಾಗಿದ್ದಲ್ಲಿ ಅವರಿಗೆ ಭಗವದ್ಭಕ್ತರ ಸಂಗದಿಂದ ನಿಶ್ಚಲವಾದ ಹರಿಭಕ್ತಿ ಉದಿಸುವುದು. ಅದೇ ಶ್ರೇಯಃ ಸಾಧನ. ಬೇರೆಲ್ಲವೂ ವ್ಯರ್ಥ.

ಶೌನಕರು: ಸೂತರೆ, ಮುಂದೆ ಪರೀಕ್ಷಿತನೇನು ಕೇಳಿದ? ಶುಕರು ಏನು ಹೇಳಿದರು, ಅದನ್ನೂ ವಿವರಿಸಿರಿ. ಪರಮಾತ್ಮನ ಬಗ್ಗೆಯೆ ಸಜ್ಜನರು ಪರಸ್ಪರ ವಿನೋದ ಸಂಭಾಷಣೆಗಳನ್ನು ನಡೆಸುವುದು ಸ್ವಾಭಾವಿಕ. ಪರಮಾತ್ಮನ ಕಥೆಯನ್ನು ಬಿಟ್ಟು ಬಹುಕಾಲ ಬದುಕಿದ್ದೂ ಫಲವೇನು? ಹರಿಕಥೆ ಕೇಳುವಾಗ ಭಕ್ತಿಭಾವದಿಂದ ಮನ ಕರಗಿ ನೀರಾಗದಿದ್ದರೆ, ಮುಖ ಅರಳದಿದ್ದರೆ ಕಣ್ಣುಗಳಲ್ಲಿ ಆನಂದಬಾಷ್ಪ ಸುರಿಯದಿದ್ದರೆ ಮೈ ನವಿರೇಳದಿದ್ದರೆ ಅವನ ಮನಸು ಮನಸಲ್ಲ, ಬರಿ ಕಲ್ಲು.

★★★

ಮುಮುಕ್ಷು ಏನು ಶ್ರವಣ ಮಾಡಬೇಕು ಎಂಬುದನ್ನು ಹೇಳಿದ್ದಾಯಿತು. ಏನು ಶ್ರವಣ ಮಾಡಕೂಡದು, ಯಾರನ್ನು ಭಜಿಸಕೂಡದು ಎಂಬುದನ್ನು ಹೇಳುತ್ತ ಯಾವ ಯಾವ ಕಾಮನೆಗಳಿಂದ ಯಾರು ಯಾರನ್ನು ಅಜ್ಞರು ಸೇವಿಸುತ್ತಾರೆ ಎಂಬುದನ್ನೂ ಹೇಳಿ ಮುಂದೆ ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ—

ಅಕಾಮಃ ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ ।
ತೀವ್ರೇಣ ಭಕ್ತಿಯೋಗೇನ ಯಜೇತ ಪುರುಷಂ ಪರಂ ॥ ೧೦ ॥

ಭಗವಂತನನ್ನೆ ಬಯಸುವವನಾಗಲಿ ಅಥವಾ ಹಿಂದೆ ಹೇಳಿದ ಹೇಳದಿದ್ದ ಯಾವುದೇ ಕಾಮನೆ ಉಳ್ಳವನಾಗಲಿ ಮುಮುಕ್ಷುವೆ ಆಗಲಿ ಎಲ್ಲರೂ ತೀವ್ರ ಭಕ್ತಿಯೋಗದಿಂದ ಪರಮಪುರುಷ ನಾರಾಯಣನನ್ನೆ ಸೇವಿಸಬೇಕು.

ಅಕಾಮೋ ಧರ್ಮಕಾಮೋ ವಾ ಮೋಕ್ಷಕಾಮೋಽಪಿ ಯೋ ಭವೇತ್ ।
ಅಥವಾ ಸರ್ವಕಾಮೋ ಯಃ ಸ ವಿಷ್ಣುಂ ಪುರುಷಂ ಯಜೇತ್ ।
ಇತಿ ಸ್ಕಾಂದೇ ।

'ಕೇವಲ ಭಗವಂತನನ್ನೇ ಬಯಸುವ ಏಕಾಂತ ಭಕ್ತನಾಗಲಿ, ಶ್ರವಣಾದಿ ನಿವೃತ್ತ ಧರ್ಮವನ್ನು ಬಯಸುವವನಾಗಲಿ, ಮೋಕ್ಷಾರ್ಥಿಯಾಗಲಿ ಅಥವಾ ಬೇರೆ ಯಾವುದೇ ಬಗೆಯ ಕಾಮನೆ ಉಳ್ಳವನಾಗಲಿ ಅವನು ಪರಮಪುರುಷ ನಾರಾಯಣನನ್ನು ಭಜಿಸಬೇಕು' ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

★★★

ಮಾನವನ ಬದುಕಿನ ಕ್ಷಣಕ್ಷಣವೂ ಭಗವದಾರಾಧನೆಗೆ ಮೀಸಲಾಗಿರಬೇಕು. ಅದರಿಂದ ಭಗವದ್ಭಕ್ತರಾದ ಶುಕ ಪರೀಕ್ಷಿತರೊಳಗೆ ನಡೆದ ಮಾತುಕತೆ ಭಗವತ್ಪರವೇ ಆಗಿರುತ್ತದೆ, ಅದನ್ನು ನಮಗೆ ಹೇಳು ಎಂದು ಶೌನಕರು ಸೂತರಲ್ಲಿ ಕೇಳಿಕೊಳ್ಳುತ್ತಾರೆ—

ಆಯುರ್ಹರತಿ ವೈ ಪುಂಸಾಂ ಉದ್ಯನ್ನಸ್ತಂ ಚ ಯನ್ನಸೌ ।
ತಸ್ಯರ್ತೇ ಯಃ ಕ್ಷಣೋ ನೀತ ಉತ್ತಮಶ್ಲೋಕವಾರ್ತಯಾ ॥ ೧೭ ॥

ಸೂರ್ಯ ಉದಿಸುತ್ತ ಅಸ್ತಮಿಸುತ್ತ ಮಾನವರ ಆಯುಷ್ಯವನ್ನು ಕಳೆಯುತ್ತಾನೆ. ಭಗವಂತನ ಬಗ್ಗೆ ಶ್ರವಣ ಮಾಡದೆ ಕಳೆದ ಈ ಅಮೂಲ್ಯ ಕಾಲ ವ್ಯರ್ಥವಾಗಿ ಕಳೆಯಿತೆಂದೇ ತಿಳಿಯಬೇಕು.

ತಸ್ಯಾಯುಷ ಉತ್ತಮಶ್ಲೋಕವಾರ್ತಯಾ ಋತೇ ಯಃ ಕ್ಷಣಃ
ಸ ನೀತ ಏವ ವೃಥಾ ।

ಸೂರ್ಯನ ಉದಯಾಸ್ತಮಯಗಳಲ್ಲಿ ಕಳೆದುಹೋಗುವ ಅಮೂಲ್ಯವಾದ ಮಾನವನ ಆಯುಷ್ಯದಲ್ಲಿ ಒಂದು ಕ್ಷಣವಾದರೂ ಭಗವಂತನ ಬಗ್ಗೆ ಶ್ರವಣ ಮಾಡದೇ ಕಳೆಯಿತೆಂದರೆ ಅದು ಕಳೆದೇ ಹೋಯಿತು, ಅಂದರೆ ವ್ಯರ್ಥವಾಗಿ ಕಳೆಯಿತೆಂದೇ ಭಾವಿಸಬೇಕು ಎಂದು ಶ್ಲೋಕದ ಅಭಿಪ್ರಾಯ.

ಇತಿ ದ್ವಿತೀಯಸ್ಕಂಧೇ ತೃತೀಯೋಽಧ್ಯಾಯಃ

ನಾಲ್ಕನೇ ಅಧ್ಯಾಯ

ಅಧ್ಯಾಯ ಸಾರಾಂಶ

ಸೂತರು- ಶುಕಮುನಿಯ ಮಾತುಗಳನ್ನು ಕೇಳಿದಾಗ ಪರೀಕ್ಷಿತನ ಎದೆಯಲ್ಲಿ ಹರಿಭಕ್ತಿ ಇನ್ನೂ ದೃಢವಾಯಿತು. ವೈರಾಗ್ಯ ಹೆಚ್ಚಿತು. ಇನ್ನೂ ಹರಿಕಥೆಯನ್ನು ಕೇಳಬೇಕೆನಿಸಿತು.

ಪರೀಕ್ಷಿತ-ನಿಮ್ಮ ಮಾತುಗಳಿಂದ ನನ್ನೆಲ್ಲ ಅಜ್ಞಾನ ಪರಿಹಾರವಾಗುತ್ತಿದೆ. ಇನ್ನೂ ಹೇಳಿರಿ ಶ್ರೀಹರಿ ಸೃಷ್ಟಿಸ್ಥಿತಿಲಯಗಳನ್ನು ಹೇಗೆ ನಡೆಸುತ್ತಾನೆ, ಪ್ರಕೃತಿಯ ಸತ್ವಾದಿಗುಣಗಳನ್ನು ಅವನು ಒಮ್ಮೆಲೆ ಸ್ವೀಕರಿಸುವನೆ, ಕ್ರಮವಾಗಿಯೆ?

ಶುಕ-ಪ್ರಪಂಚದ ಸೃಷ್ಟಿ ಸ್ಥಿತಿ ಮುಂತಾದುವನ್ನು ಸ್ವಶಕ್ತಿಯಿಂದ ನಡೆಸುವ ಆ ಪರಮಪುರುಷನಿಗೆ ನಮನ. ತನ್ನನ್ನಾರಾಧಿಸುವ ಭಕ್ತರಿಗೆ ಸಾಯುಜ್ಯ ನೀಡುವ ಭಗವಂತನಿಗೆ ಪುನಃ ಪುನಃ ನಮನ. ತಪಸ್ಸು ಮನೋನಿಗ್ರಹ ಸದಾಚಾರಪರರೂ ಕೂಡ ಕರ್ಮ ಸ್ವಾತಂತ್ರ್ಯವನ್ನು ಅವನಿಗೆ ಒಪ್ಪಿಸದಿದ್ದಲ್ಲಿ ಅವರಿಗೆ ಏನೂ ಫಲ ಸಿಗಲಾರದು. ಪಾಪಿಗಳೂ ಕೂಡ ತನ್ನ ಭಕ್ತರನ್ನು ಸೇವಿಸಿದರೆ ಸಾಕು ಅವನು ಅವರನ್ನು ಪಾವನಗೊಳಿಸುತ್ತಾನೆ. ಆದಿ ಸೃಷ್ಟಿಯಲ್ಲಿ ಬ್ರಹ್ಮನಿಗೆ ವೇದೋಪದೇಶ ಮಾಡಿದ ವೇದವ್ಯಾಸರಿಗೆ ನಮನ. ಉದ್ದವ ಮುಂತಾದವರಿಗೆ ತನ್ನ ಮುಖ ಕಮಲದಿಂದ ಜ್ಞಾನದ ಮಧುವನ್ನು ಉಣಿಸಿದ ಭಗವಾನ್ ಶ್ರೀಕೃಷ್ಣನಿಗೆ ನಮನ. ರಾಜನೆ, ನೀನು ಕೇಳಿದ ವಿಷಯವನ್ನೇ ಹಿಂದೆ ನಾರದರು ಬ್ರಹ್ಮನಲ್ಲಿ ಕೇಳಿದಾಗ ಬ್ರಹ್ಮ ತನಗೆ ಹರಿ ನುಡಿದಂತೆ ಎಲ್ಲವನ್ನೂ ಉಪದೇಶಿಸಿದ. ನಿನ್ನ ಎಲ್ಲ ಪ್ರಶ್ನೆಗಳಿಗೂ ಅದರಲ್ಲಿಯೆ ಉತ್ತರಗಳು ಅಡಗಿವೆ. ಹೇಳುತ್ತೇನೆ ಕೇಳು.

★★★

ಸೂತರು ಶೌನಕರಿಗೆ ಹೇಳುತ್ತಾರೆ, ಶುಕಮುನಿಯ ಉಪದೇಶದಿಂದ ಪರೀಕ್ಷಿತ ಜ್ಞಾನ ವೈರಾಗ್ಯ ಸಂಪನ್ನನಾದ ಎಂದು—

ಆತ್ಮ ಜಾಯಾ ಸುತಾಗಾರ ಪಶು ದ್ರವಿಣ ಬಂಧುಷು ।
ರಾಜ್ಯೇ ಚಾವಿಕಲೇ ನಿತ್ಯನಿರೂಢಾಂ ಮಮತಾಂ ಜಹೌ ॥ ೨ ॥

ತನ್ನ ಶರೀರ, ಸತಿ ಸುತರು, ಮನೆ ಪಶು ದ್ರವ್ಯ ಬಂಧುಗಳು ಸಮೃದ್ಧವಾದ ರಾಜ್ಯ ಇವೆಲ್ಲವುಗಳಲ್ಲಿಯೂ ಮಮತೆ ಅಜ್ಞಾನಿಗಳಾದ ಬೇರೆಯವರಲ್ಲಿ ರೂಢಮೂಲ ವಾಗಿರುತ್ತದೆ. ಅಪರೋಕ್ಷ ಜ್ಞಾನಿಯಾದ ಪರೀಕ್ಷಿತ ಅದನ್ನು ಮೊದಲೆ ಬಿಟ್ಟವನು. ಶುಕಮುನಿಯ ಉಪದೇಶದಿಂದ ವಿಶೇಷವಾಗಿ ಅವುಗಳಲ್ಲಿ ವೈರಾಗ್ಯ ತಳೆದನು.

ಇಲ್ಲಿ ಮೇಲುನೋಟಕ್ಕೆ ಪರೀಕ್ಷಿತ ತನ್ನಲ್ಲಿಯೆ ಅಂದಿನವರೆಗೆ ರೂಢಮೂಲವಾಗಿದ್ದ ರಾಜ್ಯದ ಮೇಲಿನ ಮಮಕಾರವನ್ನು ಶುಕಮುನಿಯ ಉಪದೇಶದಿಂದ ತ್ಯಾಗಮಾಡಿದನೆಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ತಿಳಿದಿದ್ದಾರೆ- 'ಅದ್ಯಾವಧಿ ನಿತ್ಯನಿರೂಢಾಂ ಮಮತಾಂ ಜಹೌ' ಎಂದು ವಲ್ಲಭವ್ಯಾಖ್ಯಾನ. ಅದು ಸರಿಯಲ್ಲ. ಪರೀಕ್ಷಿತ ಅಪರೋಕ್ಷ ಜ್ಞಾನಿ. ಮತ್ತು ಇದೀಗ ಅವನದು ಚರಮಶರೀರ. ಅದರಿಂದ ಶರೀರಾದಿ ಮೋಹ ಅವನಿಗೆ ಇರುವುದು ಅಸಂಭಾವಿತ. ಈ ಸಮಸ್ಯೆಗೆ ಹೀಗೆ ಹೇಳಬೇಕು—

ಅನ್ಯೇಷಾಂ ನಿತ್ಯಂ ನಿರೂಢಾಂ ತದಾ ವಿಶೇಷತೋ ಜಹೌ ।

ಬೇರೆಯವರಿಗೆ ಸಾಮಾನ್ಯವಾಗಿ ಈ ಮಮತೆ ಸದಾ ರೂಢ ಮೂಲವಾಗಿರುತ್ತದೆ. ಅದನ್ನು ಅಪರೋಕ್ಷಿಯಾದ್ದರಿಂದ ರಾಜ ಮೊದಲೇ ಬಿಟ್ಟಿದ್ದ. ಈಗ ಶುಕಮುನಿಯ ಉಪದೇಶದಿಂದ ವಿಶೇಷವಾಗಿ ಪರಿತ್ಯಜಿಸಿದ.

★★★

ಸೂತರು ಹೇಳುತ್ತಾರೆ 'ಪರೀಕ್ಷಿತ ಸದಾ ಭಗವಂತನ ಉಪಾಸನೆಯಲ್ಲಿಯೆ ಸುಖ ಕಂಡವನು. ಅದರಿಂದ ಭಗವಂತನ ಬಗ್ಗೆಯೆ ಕೇಳುತ್ತಾನೆ' ಎಂದು—

ಸಂಸ್ಥಾಂ ವಿಜ್ಞಾಯ ಸಂನ್ಯಸ್ಯ ಕರ್ಮ ತ್ರೈವರ್ಗಿಕಂ ಚ ಯತ್ ।
ವಾಸುದೇವೇ ಭಗವತಿ ಸ್ವಾತ್ಮಭಾವಂ ದೃಢಂ ಗತಃ ॥ ೪ ॥

ಪರೀಕ್ಷಿತ ತನ್ನ ಮರಣದ ಬಗ್ಗೆ ತಿಳಿದಾಗ ಧರ್ಮಾರ್ಥಕಾಮ ಸಾಧನವಾದ ಕರ್ಮವನ್ನೆಲ್ಲ ತೊರೆದು ಭಗವಂತನನ್ನೆ ಗುಣಪೂರ್ಣನೆಂದು ನಿರಂತರ ದೃಢವಾಗಿ ಉಪಾಸನೆ ಮಾಡುತ್ತ ಸ್ವರೂಪಾನಂದ ಪಡೆದ.

ಇಲ್ಲಿ 'ಭಗವತಿ ಸ್ವಾತ್ಮಭಾವಂ' ಎಂದರೆ ಶ್ರೀಧರಾದಿವ್ಯಾಖ್ಯಾನ ಪ್ರಕಾರ 'ಭಗವಂತನನ್ನು ತಾನೇ ಎಂದು ತಿಳಿದ' ಎಂದರ್ಥ.

ವೀರರಾಘವ ವ್ಯಾಖ್ಯಾನದಲ್ಲಿ ಭಗವಂತ ಆತ್ಮ, ತಾನು ಅವನ ಶರೀರ ಎಂದು ತಿಳಿದ ಎಂದಿದೆ. ಎರಡೂ ಪ್ರಮಾಣ ವಿರುದ್ಧ-

ಆಪ್ತೇಃ ಸರ್ವಗುಣಾನಾಂ ಯ ಆತ್ಮನಾಮತಯಾ ಹರಿಂ ।
ಉಪಾಸ್ತೇ ನಿತ್ಯಶೋ ವಿದ್ವಾನ್ ಆಪ್ತಕಾಮಸ್ತದಾ ಭವೇತ್ ॥

ಇತಿ ವಾಮನೇ ।

'ಸರ್ವಗುಣಪೂರ್ಣನಾದ್ದರಿಂದ ಹರಿ 'ಆತ್ಮ'ನೆನಿಸಿದ್ದಾನೆ ಎಂದು ಸದಾ ಉಪಾಸನೆ ಮಾಡುವ ಜ್ಞಾನಿ ಆಪ್ತಕಾಮನಾಗುತ್ತಾನೆ' ಎಂದು ವಾಮನಪುರಾಣದಲ್ಲಿ ಹೇಳಿದೆ.

'ಸ್ವಾತ್ಮಭಾವ' ಎಂದರೆ 'ಸ್ವ-ಆತ್ಮಭಾವ.' ತನ್ನಲ್ಲಿರುವ ಆತ್ಮಭಾವ, ಆತ್ಮ ಎಂಬ ಭಾವನೆ. 'ಆತ್ಮ' ಎಂದರೆ ಸರ್ವಗುಣಗಳಿಂದ ಆಪ್ತ, ಪೂರ್ಣನಾದವನು ಹರಿ ಎಂಬ ಭಾವನೆ. ತನ್ನಲ್ಲಿರುವ ಈ ಭಾವನೆಯಿಂದ ಉಪಾಸನೆ ಮಾಡುವವನು ಆಪ್ತಕಾಮ, ಸುಖಿಯಾಗುತ್ತಾನೆ ಎನ್ನುತ್ತದೆ ವಾಮನ ಪುರಾಣ. ಆದರಿಂದ 'ಸ್ವಾತ್ಮಭಾವಂ ಗತಃ' ಎಂಬುದನ್ನು ಆವೃತ್ತಿ ಮಾಡಿ ಕೊಳ್ಳಬೇಕು. 'ಸ್ವಾತ್ಮ-ಭಾವ' ಎಂದರೆ ಸ್ವಭಾವ, ಸ್ವಭಾವಭೂತವಾದ ಆನಂದ. ಆದನ್ನು 'ಗತಃ' ಹೊಂದಿದನು. 'ಹರಿಯನ್ನು ಗುಣಪೂರ್ಣನೆಂದು ಉಪಾಸನೆ ಮಾಡಿ ಸ್ವರೂಪಾನಂದವನ್ನು ಪರೀಕ್ಷಿತ ಪಡೆದ' ಎಂದು ಹೇಳಿದಂತಾಯಿತು.

★★★

ಭಗವಂತನ ಅವತಾರ ಲೀಲೆಗಳು ಬಹಳ ಗಹನವಾಗಿವೆ. ಅವುಗಳನ್ನು ಹೇಳಿರೆಂದು ಪರೀಕ್ಷಿತ ಕೇಳಿದಾಗ ಶುಕಮುನಿ ಹೇಳತೊಡಗಿದರು. ಮೊದಲಿಗೆ ಹರಿಗುರು ನಮಸ್ಕಾರ ರೂಪವಾದ ಮಂಗಲಾಚರಣೆ ಮಾಡಿದರು—

ನಮಃ ಪರಸ್ಮೈ ಪುರುಷಾಯ ಭೂಯಸೇ
ಸದುದ್ಭವಸ್ಥಾನ ನಿರೋಧ ಲೀಲಯಾ ।
ಗೃಹೀತಶಕ್ತಿತ್ರಿತಯಾಯ ದೇಹಿನಾಂ
ಅಂತರ್ಭ್ರುವಾಯಾನುಪಲಭ್ಯವರ್ತ್ಮನೇ ॥ ೧೨ ॥

ಸತ್ಯ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುವುದಕ್ಕಾಗಿ ಲೀಲೆಯಿಂದ ಜ್ಞಾನ ಇಚ್ಛಾಕ್ರಿಯಾ ಎಂಬ ಮೂರು ಸ್ವರೂಪಭೂತ ಶಕ್ತಿಗಳನ್ನು ಸದಾ ಸ್ವೀಕರಿಸಿದವನು ಹರಿ. ಜೀವರಿಗೆ ಅಂತರ್ಯಾಮಿಯಾಗಿ ಒಳಗೇ ಇದ್ದರೂ ಅವನನ್ನು ಯಾರೂ ಅರಿಯಲಾರರು. ಗುಣಪೂರ್ಣನಾದ ಆ ಪರಮಪುರುಷನಿಗೆ ನಮಸ್ಕಾರ.

ಇಲ್ಲಿ 'ಗೃಹೀತಶಕ್ತಿತ್ರಿತಯಾಯ' ಎಂದರೆ ಬೇರೆ ವ್ಯಾಖ್ಯಾನಕಾರರು ಎಲ್ಲರೂ ಬ್ರಹ್ಮ ವಿಷ್ಣು ಮಹೇಶ್ವರ ರೂಪಗಳಿಂದ ತನ್ನ ಮಾಯಾಶಕ್ತಿಗಳಾದ ರಜಸ್ ಸತ್ವ ತಮಸ್ಸುಗಳನ್ನು ಸ್ವೀಕರಿಸಿದವನೆಂದು ಹೇಳಿದ್ದಾರೆ. ಆದರೆ ಭಗವಂತನಿಗೆ ಸೃಷ್ಟ್ಯಾದಿಕಾರ್ಯಗಳಲ್ಲಿ ತ್ರಿಗುಣಗಳು ಕೇವಲ ನಿಮಿತ್ತ ಮಾತ್ರ. ಮತ್ತು ಸದಾ ಇರುವವುಗಳಲ್ಲ. ನಿತ್ಯವಾದ ಸ್ವರೂಪಶಕ್ತಿಯಿಂದಲೆ ಪ್ರವೃತ್ತಿ ಮಾಡುತ್ತಾನೆ. ಪ್ರವೃತ್ತಿ

ಎಂದರೆ ಜ್ಞಾನ ಇಚ್ಛಾ ಪ್ರಯತ್ನಗಳು. ಅವು ಅವನ ಸ್ವರೂಪಭೂತವೇ ಆಗಿವೆ. ಆದರಿಂದ ಹೀಗೆ ಹೇಳಬೇಕು—

ಗೃಹೀತಶಕ್ತಿತ್ರಿತಯಾಯೇತಿ ।
ಇಚ್ಛಾ ಜ್ಞಾನಂ ಕ್ರಿಯಾ ಚೇತಿ ನಿತ್ಯಾಃ ಶಕ್ತಯ ಈಶಿತುಃ ।
ಸ್ವರೂಪಭೂತಾ ಅಪಿತು ಭೇದವದ್ ವ್ಯಾವಹಾರಿಕಾಃ ॥
ಇತಿ ಪ್ರಕಾಶಸಂಹಿತಾವಚನಾನ್ನಿತ್ಯಗೃಹೀತಶಕ್ತಿತ್ವಮೇವ ।

'ಗೃಹೀತಶಕ್ತಿ ತ್ರಿತಯಾಯ' ಎಂಬಲ್ಲಿ 'ಇಚ್ಛಾ ಜ್ಞಾನ ಕ್ರಿಯಾ ಎಂದು ಭಗವಂತನ ಮೂರು ಶಕ್ತಿ ನಿತ್ಯವಾಗಿ ಸ್ವರೂಪಭೂತವಾಗಿವೆ. ಹಾಗಿದ್ದರೂ ವಿಶೇಷ ಬಲದಿಂದ ಭೇದವ್ಯವಹಾರಗೋಚರವಾಗುತ್ತವೆ' ಎಂದು ಪ್ರಕಾಶಸಂಹಿತೆ ಹೇಳುವುದರಿಂದ ಸದಾ ಸ್ವರೂಪಭೂತಶಕ್ತಿಯನ್ನೇ ಸ್ವೀಕರಿಸಿದ್ದಾನೆ ಹರಿ ಎಂದು ವಿವಕ್ಷಿತ ಹೊರತು ಮಾಯಿಕವಾದ ಅನಿತ್ಯವಾದ ಗುಣತ್ರಯವನ್ನು ಸ್ವೀಕರಿಸಿದನೆಂದಲ್ಲ.

★★★

ಶುಕಮುನಿ ಪುನಃ ಭಗವಂತನನ್ನು ನಮಿಸುತ್ತಾರೆ. ಆ ಮೂಲಕ ಪುನಃ ಪುನಃ ನಮಿಸ ಬೇಕೆಂದೂ ತಿಳಿಸುತ್ತಾರೆ—

ಭೂಯೋ ನಮಃ ಸದ್‌ವೃಜಿನಚ್ಛಿದೇಽಸತಾಂ
ಅಸಂಭವಾಯಾಖಿಲಸತ್ತ್ವಮೂರ್ತಯೇ ।
ಪುಂಸಾಂ ಪುನಃ ಪಾರಮಹಂಸ್ಯ ಆಶ್ರಮೇ
ವ್ಯವಸ್ಥಿತಾನಾಮನುಮೃಗ್ಯದಾಶುಷೇ ॥ ೧೩ ॥

ಸಜ್ಜನರಿಗೆ ಪಾಪ ಪರಿಹಾರಕ. ಅಸುರರನ್ನು ನಿರ್ಮೂಲನ ಮಾಡುವವ, ಸಕಲ ಗುಣಪೂರ್ಣಸ್ವರೂಪ, ಸ್ವಾಶ್ರಮ ಧರ್ಮನಿಷ್ಠರಿಗೆ ತನ್ನನ್ನೆ ಕೊಡುವವನು ಇಂಥಹವನಿಗೆ ಪುನಃ ಪುನಃ ನಮಸ್ಕಾರ.

ಇಲ್ಲಿ ಅಖಿಲಸತ್ತ್ವಮೂರ್ತಿ ಎಂದರೆ ಪೂರ್ಣಸತ್ತ್ವಮಯ ಅಂದರೆ ಶುದ್ಧ ಸತ್ವಾತ್ಮಕ ಶರೀರ ಉಳ್ಳವನೆಂದು ಬೇರೆ ಎಲ್ಲ ವ್ಯಾಖ್ಯಾನಕಾರರೂ ಹೇಳುತ್ತಾರೆ. ಅದು ಸರಿಯಲ್ಲ. ಭಗವಂತ ಗುಣತ್ರಯರಹಿತ. ಗುಣತ್ರಯದಲ್ಲಿ ಯಾವ ಗುಣವೂ ಅವನಿಗೆ ಇಲ್ಲ. ಸತ್ವಗುಣ ಮಾತ್ರ ಇದೆ ಎಂದೂ ಎನ್ನಬಾರದು. ಆದರಿಂದ ಹೀಗೆ ಹೇಳಬೇಕು—

ಅಖಿಲಸತ್ತ್ವಮೂರ್ತಯೇ ಪೂರ್ಣಸಾಧುಭಾವಸ್ವರೂಪಾಯ ।
ನಿಃಶೇಷಗುಣಪೂರ್ಣತ್ವಾತ್ ಸತ್ತ್ವ ಇತ್ಯೇವ ತಂ ವಿದುಃ ॥
ಇತಿ ಮಹಾಸಂಹಿತಾಯಾಂ ।

ಅಖಿಲಸತ್ವಮೂರ್ತಯೇ ಎಂದರೆ ಪೂರ್ಣಸದ್ಗುಣ ಸ್ವರೂಪನಾದ ಎಂದರ್ಥ. 'ಎಲ್ಲ ಸದ್ಗುಣಗಳಿಂದ ಪೂರ್ಣನಾದ್ದರಿಂದಲೆ ಹರಿಯನ್ನು ಸತ್ವ ಎನ್ನುತ್ತಾರೆ' ಎಂದು ಮಹಾಸಂಹಿತೆಯಲ್ಲಿ ಹೇಳಿದೆ.

★★★

ನಮನರೂಪ ಮಂಗಳಾಚರಣೆ ಮಾಡಿ ಮುಂದೆ ಅನುಗ್ರಹ ಪ್ರಾರ್ಥನಾ ರೂಪವಾದ ಮಂಗಲಾಚರಣೆ ಮಾಡುತ್ತಾರೆ ಶುಕಮುನಿಗಳು—

ಸ ಏಷ ಆತ್ಮಾತ್ಮವತಾಮಧೀಶ್ವರ-
ಸ್ತ್ರಯೀಮಯೋ ಧರ್ಮಮಯಸ್ತಪೋಮಯಃ ।
ಗತವ್ಯಲೀಕೈರಜಶಂಕರಾದಿಭಿ-
ರ್ವಿತರ್ಕ್ಯಲಿಂಗೋ ಭಗವಾನ್ ಪ್ರಸೀದತಾಂ ॥ ೧೯ ॥

ಎಲ್ಲ ಜೀವಿಗಳಿಗೆ ಪ್ರಭು, ವೇದಾನುಸಾರಿಗಳಿಗೆ, ಧಾರ್ಮಿಕರಿಗೆ, ತಪಸ್ವಿಗಳಿಗೆ ವಶನಾಗುವವನು, ಬ್ರಹ್ಮರುದ್ರಾದಿಗಳೂ ಅವನನ್ನು ಪೂರ್ತಿ ಅರಿತುಕೊಳ್ಳಲಾಗದೆ ಬಹಳ ವಿಚಾರಮಾಡುತ್ತಾರೆ. ಇಂಥಾ ಭಗವಾನ್ ಶ್ರೀಹರಿ ಪ್ರಸನ್ನನಾಗಲಿ.

ಇಲ್ಲಿ ತ್ರಯೀಮಯ ಎಂದರೆ ವೇದಸ್ವರೂಪನೆಂದು ಹೇಳಿದಂತೆ ಕಾಣುತ್ತದೆ. ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ.[೧] ಅದು ಸರಿಯಲ್ಲ. ಪರಮಾತ್ಮ ಜಡವೇದ ಸ್ವರೂಪನಲ್ಲ. ಶ್ರೀಧರಾದಿ ವ್ಯಾಖ್ಯಾನಗಳಲ್ಲಿ ವೇದಮಾರ್ಗದಿಂದ ಜೀವಾಭಿನ್ನನೆಂದು ಉಪಾಸ್ಯ ಎಂದು ವಿವರಣೆ ಇದೆ. ಆದರೆ ಅದು ಮಯಟ್ ಪ್ರತ್ಯಯಾರ್ಥವಾಗುವುದಿಲ್ಲ.[೨] ಅದರಿಂದ ಹೀಗೆ ಹೇಳಬೇಕು—

ವೇದಾನುಸಾರಿವಶಗಃ ಸ್ವೇಚ್ಛಯಾ ತು ಹರಿರ್ಯತಃ ।
ಅತಃ ಸ್ವತಂತ್ರಮಪ್ಯಾಹುಃ ಪ್ರಾಜ್ಞಾ ವೇದಮಯೇತಿ ಹ ।

ಇತ್ಯಧ್ಯಾತ್ಮೇ ।

ಶ್ರೀಹರಿ ಸ್ವತಂತ್ರನಾದರೂ ಸ್ವೇಚ್ಛೆಯಿಂದ ಪ್ರೀತಿಯಿಂದ ವೇದಾನುಸಾರಿ

---

೧. ಪ್ರಮಾಣಂ ಚ ತ್ರಿವಿಧಂ ಶ್ರುತಿಸ್ಮೃತಿಪುರಾಣಾಖ್ಯಂ । ತತ್ ತ್ರಿತಯ ರೂಪೋಽಪಿ ಭಗವಾನೇವ ಅರ್ಥತಃ ಸ್ವರೂಪತಶ್ಚ। -ವಲ್ಲಭಾಚಾರ್ಯಃ

೨. ತ್ರಯೀಮಯಃ ಪೂರ್ವಭಾಗೋಕ್ತಕರ್ಮಾರಾಧ್ಯಃ । ತತ್ಫಲಪ್ರದ ಇತ್ಯರ್ಥಃ । ಧರ್ಮಮಯಃ ಸ್ಮಾರ್ತದಾನಾದಿ ಧರ್ಮಾರಾಧ್ಯಸ್ತತ್ಫಲಪ್ರದ ಇತ್ಯರ್ಥಃ । ತಪೋಮಯ ಉಪನಿಷದ್ಭಾಗೋಕ್ತೋಪಾಸನಾತ್ಮಕ ಜ್ಞಾನಮಯಃ ತಜ್ಞಾನ ಪ್ರಾಚುರ್ಯ ವೇದ್ಯಸ್ತತ್ಫಲಪ್ರದಃ ಇತ್ಯರ್ಥಃ। -ವೀರರಾಘವ

ಭಕ್ತರಿಗೆ ವಶನಾಗುವುದರಿಂದ ವೇದಮಯ ಎಂದು ಬಲ್ಲವರು ಅವನನ್ನು ಕರೆಯುತ್ತಾರೆ ಎಂದು ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ.

ತ್ರಯೀ ಎಂದರೆ ವೇದಾನುಸಾರಿಭಕ್ತರು ಎಂದು ಲಕ್ಷಣಾವೃತ್ತಿಯಿಂದ ವಿವಕ್ಷಿತವಾಗಿದೆ. ಮಯಟ್‌ಪ್ರತ್ಯಯ ಪ್ರಧಾನ ಎಂಬ ಅರ್ಥದಲ್ಲಿದೆ. ವೇದಾನುಸಾರಿಗಳು ಭಕ್ತರು ಪ್ರಧಾನರು, ಅಂದರೆ ಭಗವಂತ ಅವರ ಭಕ್ತಿಗೆ ಅಧೀನ ಎಂದಂತಾಯಿತು. ಈ ಅರ್ಥ ಕಾಲ್ಪನಿಕವಲ್ಲ, ಪ್ರಮಾಣಸಿದ್ಧ. ಹೀಗೇ ಧರ್ಮಮಯ ತಪೋಮಯ ಎಂದರೂ ಧಾರ್ಮಿಕರಿಗೆ ತಪಸ್ವಿಗಳಿಗೆ ಅಧೀನ ಭಗವಂತ ಎಂದರ್ಥ.

ಇತಿ ದ್ವಿತೀಯಸ್ಕಂಧೇ ಚತುರ್ಥೋಽಧ್ಯಾಯಃ

ಐದನೇ ಅಧ್ಯಾಯ

ಅಧ್ಯಾಯ ಸಾರಾಂಶ

ನಾರದ- ದೇವದೇವ ಸೃಷ್ಟಿಕರ್ತ, ನಿನಗಿದೊ ನಮಸ್ಕಾರ. ನನಗೆ ಪರಮಾತ್ಮ ತತ್ವವನ್ನು ಉಪದೇಶಿಸು. ಪರಾಪರ ತತ್ವಗಳನ್ನು ತಿಳಿದವನು ನೀನು. ನನ್ನ ಸಂದೇಹ ಇದು- ನೀನೊಬ್ಬನೆ ಸ್ವತಂತ್ರವಾಗಿ ಸೃಷ್ಟಿ ಮಾಡುತ್ತಿರುವೆ, ನಿನಗೆ ಸಮಾನರಾಗಲಿ ಉತ್ತಮರಾಗಲಿ, ಯಾರನ್ನೂ ನಾ ಕಾಣೆ. ಆದರೂ ನೀನು ಏಕಾಗ್ರ ಮನಸ್ಸಿನಿಂದ ತಪಸ್ಸು ಮಾಡುವುದನ್ನು ಕಂಡರೆ ನಿನಗಿಂತ ಉತ್ತಮನಾದ ಇನ್ನೊಬ್ಬ ವ್ಯಕ್ತಿ ಇರಬೇಕೆನಿಸುತ್ತದೆ. ನನಗೆ ನಿರ್ಣಯವನ್ನು ಹೇಳು.

ಬ್ರಹ್ಮ- ಲೋಕಹಿತಕ್ಕಾಗಿ ನೀನೀ ಪ್ರಶ್ನೆ ಮಾಡುತ್ತಿರುವಿ. ಒಳ್ಳೆಯದು. ಭಗವಂತನ ಮಹಿಮೆಯನ್ನು ವರ್ಣಿಸಲು ನನಗೆ ಇದರಿಂದ ಅವಕಾಶ ಲಭಿಸಿತು. ನಾನು ಸ್ವತಂತ್ರನೆನ್ನುವುದು ಸರ್ವಥಾ ಸುಳ್ಳು. ಅವನು ವ್ಯಕ್ತಗೊಳಿಸುವ ಪ್ರಪಂಚವನ್ನು ನಾನೂ ವ್ಯಕ್ತಗೊಳಿಸುವೆನಷ್ಟೆ. ಅಜ್ಞಾನದಿಂದ ಜನರು ನನ್ನನ್ನೆ ಸೃಷ್ಟಿಕರ್ತನೆನ್ನುತ್ತಾರೆ. ಅದನ್ನು ಕೇಳಿದ ಪಾಪ ಪರಿಹಾರಕ್ಕೆ ನಾನು ದ್ವಾದಶಾಕ್ಷರ ಮತ್ತು ಗಾಯತ್ರಿಗಳಿಂದ ಅವನನ್ನು ನಮಿಸುತ್ತೇನೆ.

ಪ್ರಕೃತಿ ಕರ್ಮ ಕಾಲ ಸ್ವಭಾವ ಯಾವುದೂ ಅವನಿಗೆ ಸಮವಲ್ಲ, ಹೆಚ್ಚೂ ಅಲ್ಲ. ವೇದಗಳು ಮುಖ್ಯವಾಗಿ ಹೇಳುವುದು ಅವನ ಮಹಿಮೆಗಳನ್ನೆ. ಅವನೆ ಮೂಲಪ್ರಕೃತಿಯೊಳಗೆ ಪ್ರವೇಶಿಸಿ ಅದಕ್ಕೆ ಪ್ರಪಂಚರೂಪವಾಗಿ ಪರಿಣಮಿಸುವ ಶಕ್ತಿಯನ್ನು ಪ್ರಚೋದಿಸುತ್ತಾನೆ. ನನಗೂ ಒಳಗೆ ಹೊರಗೆ ಪ್ರೇರಣೆ ನೀಡಿ ನನ್ನಿಂದ ಸೃಷ್ಟಿಮಾಡಿಸುತ್ತಾನೆ. ಸತ್ವಾದಿಗುಣಗಳು ಅವನಿಗೆ ಸದಾ ಅಧೀನ. ಅವುಗಳಿಂದ ಅವನು

ಜೀವರನ್ನು ಸಂಸಾರ ಬಂಧನದಲ್ಲಿ ಕೆಡವುತ್ತಾನೆ. ಆ ಗುಣಗಳಿಂದಲೆ ತನ್ನ ಜ್ಞಾನವನ್ನೂ ನೀಡಿ ಬಂಧವಿಮೋಚನೆ ಮಾಡುತ್ತಾನೆ. ಸೃಷ್ಟ್ಯಾದಿ ಕಾರ್ಯಗಳಲ್ಲಿ ಅವನು ತ್ರಿಗುಣಗಳನ್ನು ಬಳಸಿಕೊಳ್ಳುವುದು ಸ್ವೇಚ್ಛೆಯಿಂದ ಹೊರತು ಅವನು ಅವಿಲ್ಲದೆ ಕಾರ್ಯಮಾಡಲು ಅಶಕ್ತನಲ್ಲ. ಮಹದಾದಿ ತತ್ವಗಳನ್ನೂ ಅವುಗಳ ಅಭಿಮಾನಿಗಳನ್ನೂ ಅವನು ಸೃಜಿಸಿ ಬ್ರಹ್ಮಾಂಡವನ್ನೂ ಸೃಜಿಸುತ್ತಾನೆ. ಬ್ರಹ್ಮಾಂಡದಲ್ಲಿ ವಿರಾಡ್ರೂಪದಿಂದ ಅವನೂ ನಾನೂ ವ್ಯಕ್ತರಾದೆವು. ಅವನ ಪ್ರತಿಮಾರೂಪವಾದ ಬ್ರಹ್ಮಾಂಡದಲ್ಲಿ ಚತುರ್ದಶ ಲೋಕಗಳು ಅವಯವಗಳೆಂದು ಜ್ಞಾನಿಗಳು ಉಪಾಸನೆ ಮಾಡುತ್ತಾರೆ.

★★★

ಪರಮಾತ್ಮನ ಸೃಷ್ಟ್ಯಾದಿ ಕಾರ್ಯರಹಸ್ಯವನ್ನು ತಿಳಿಯುವುದು ಬಲು ದುಷ್ಕರ. ಅದನ್ನು ಹೇಳಿರೆಂದು ಪರೀಕ್ಷಿತ ಕೇಳಿದ್ದಕ್ಕೆ ಉತ್ತರವಾಗಿ ಶುಕಮುನಿ ಹೇಳುತ್ತಾರೆ. 'ಹಿಂದೆ ನಾರದರು ಈ ಪ್ರಶ್ನೆ ಮಾಡಿದ್ದಕ್ಕೆ ಬ್ರಹ್ಮದೇವರು ಅವರಿಗೆ ಹೇಳಿದ್ದನ್ನೆ ನಾನು ಹೇಳುತ್ತೇನೆ. ನಿನಗೆ ಅದೇ ಉತ್ತರ' ಎಂದು. ನಾರದರು ಬ್ರಹ್ಮನಿಗೆ ನಮಿಸಿ ಬೇಡಿಕೊಳ್ಳುತ್ತಾರೆ—

ನಾರದ ಉವಾಚ—

ದೇವದೇವ ನಮಸ್ತೇಽಸ್ತು ಭೂತಭಾವನ ಪೂರ್ವಜ ।
ತದ್ ವಿಜಾನೀಹಿ ಯಜ್ಜ್ಞಾನಂ ಆತ್ಮತತ್ವನಿದರ್ಶನಂ ॥ ೧ ॥

ಸೃಷ್ಟಿಕರ್ತನಾದ, ಎಲ್ಲರಿಗೂ ಮೊದಲಿಗೆ ಜನಿಸಿದವನಾದ ದೇವದೇವನೆ, ನಿನಗೆ ನಮಸ್ಕಾರ. ನನಗೆ ಪರಮಾತ್ಮತತ್ವವನ್ನು ಹೇಳುವ ಪುರಾಣವನ್ನು ತಿಳಿಸು.

ಇಲ್ಲಿ 'ವಿಜಾನೀಹಿ' ಎಂದರೆ ತಿಳಿ ಎಂದರ್ಥ. ತಿಳಿಸು ಎಂದರ್ಥವಾಗುವುದಿಲ್ಲ. ಅದಕ್ಕೆ 'ವಿಜ್ಞಾಪಯ' ಎನ್ನಬೇಕಾಗಿತ್ತು. ಈ ವ್ಯತ್ಯಾಸವೇಕೆ? ವೀರರಾಘವ ವ್ಯಾಖ್ಯಾನದಲ್ಲಿ 'ಅಂತರ್ಭಾವಿತ ಣಿಜರ್ಥ' ಅಂದರೆ 'ವಿಜ್ಞಾಪಯ' ಎಂಬುದರ ಅರ್ಥವನ್ನೆ ಇದಕ್ಕೆ ಇಟ್ಟುಕೊಳ್ಳಬೇಕು ಎಂದಿದೆ. ವಿಶ್ವನಾಥ ವ್ಯಾಖ್ಯಾನದಲ್ಲಿ 'ವಿಜಾನಾಸಿ' ನೀನು ತಿಳಿದಿರುವಿ ಎಂಬ ಅರ್ಥದಲ್ಲಿ ಈ ಶಬ್ದವಿಟ್ಟುಕೊಳ್ಳಬೇಕು ಎಂದಿದೆ. ವಂಶೀಧರ ವ್ಯಾಖ್ಯಾನದಲ್ಲಿ ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ಜ್ಞಾಧಾತುವಿಗೆ ತಿಳಿಸುವುದೆಂದೇ ಅರ್ಥ ಎಂದಿದೆ. ಇದೆಲ್ಲ ಬರಿ ಕಲ್ಪನೆಗಳು. ಶ್ರೀಮದಾಚಾರ್ಯರು ಮಹಾವ್ಯಾಕರಣ ಸೂತ್ರದಂತೆ ಈ ಪ್ರಯೋಗ ಬಹಳ ಅರ್ಥಗರ್ಭಿತವೆಂದು ತೋರಿಸಿದ್ದಾರೆ—

ವಿಜಾನೀಹಿ ವಿಜ್ಞಾಪಯ । 'ವ್ಯತ್ಯಯೋ ಭೇದಸ್ವಾತಂತ್ರ್ಯ ಕರಣೇಷು' ಇತಿ ವಚನಾತ್ ।

ವಿಜಾನೀಹಿ ಎಂದರೆ ತಿಳಿಸು ಎಂದರ್ಥ. ವಿಜ್ಞಾಪಯ ಎನ್ನಬೇಕಾಗಿರುವಲ್ಲಿ ವಿಜಾನೀಹಿ ಎಂದು ವ್ಯತ್ಯಾಸ ಮಾಡಿದ್ದು ಮಹಾವ್ಯಾಕರಣ ಸೂತ್ರಕ್ಕೆ ಸಂಮತ. 'ಭೇದ ಸ್ವಾತಂತ್ರ್ಯ ಕರಣತ್ವ ಈ ಮೂರನ್ನು ತಿಳಿಸುವುದಕ್ಕಾಗಿ ಶಬ್ದಪ್ರಯೋಗದಲ್ಲಿ ವ್ಯತ್ಯಾಸ ಮಾಡುವುದು ವಿಹಿತ' ಎನ್ನುತ್ತದೆ ಈ ಸೂತ್ರ.

ಪ್ರಕೃತ ಜ್ಞಾತೃವಾದ ನಾರದರಿಗಿಂತ ಚತುರ್ಮುಖ ಬ್ರಹ್ಮ ಜ್ಞಾನಾದಿಗುಣಗಳಲ್ಲಿ ಬಹಳ ಭಿನ್ನನಾಗಿದ್ದಾನೆ. ಅವರ ಜ್ಞಾನಕ್ಕೆ ಪ್ರಯೋಜಕ ಕರ್ತನಾಗಿದ್ದಾನೆ. ಕರ್ತೃತ್ವವೆ ಸ್ವಾತಂತ್ರ್ಯ. ನಾರದರ ಚಿತ್ತಾಭಿಮಾನಿಯಾದ್ದರಿಂದ ಜ್ಞಾನಕರಣಕ್ಕೆ ಅಭಿಮಾನಿಯಾದ ತಾನೂ ಜ್ಞಾನಕರಣವೆನಿಸುತ್ತಾನೆ.

ಅಥವಾ ನಾರದ ಮತ್ತು ಬ್ರಹ್ಮರ ಜ್ಞಾನಗಳಲ್ಲಿ ಮಹಾವೈಲಕ್ಷಣ್ಯವಿರುವು ದರಿಂದ ಭೇದವಿದೆ. ಹರಿಪ್ರೇರಣೆ ಇಲ್ಲದಿದ್ದರೆ ವಾಗಾದಿ ಇಂದ್ರಿಯಪ್ರವೃತ್ತಿ ವಿಪರೀತವಾಗ ಬಹುದಾದ್ದರಿಂದ ಹರಿಗೇ ಸ್ವಾತಂತ್ರ್ಯವಿದೆ. ಬ್ರಹ್ಮನಿಗೆ ದತ್ತ ಸ್ವಾತಂತ್ರ್ಯವಿದೆ. ಬ್ರಹ್ಮ ಕರ್ತ, ನಾರದ ಕೇವಲ ಕರಣ, ಈ ಜ್ಞಾನಯಜ್ಞದಲ್ಲಿ, ಆದ್ದರಿಂದ ಕರಣತ್ವವೂ ಇದೆ.

ಅಥವಾ 'ವ್ಯತ್ಯಯೋಽಭೇದ ಸ್ವಾತಂತ್ರ್ಯಕರಣೇಷು' ಎಂಬಲ್ಲಿ ಅಭೇದವೆಂದು ಪದಚ್ಛೇದ. ವಕ್ತೃಶ್ರೋತೃಗಳಾದ ಬ್ರಹ್ಮ-ನಾರದರ ಅಂತರ್ಯಾಮಿರೂಪಗಳಿಗೆ ಅಭೇದವಿದೆ ಎಂದು ಋಗ್‌ಭಾಷ್ಯ (೧.೮೫) ಪ್ರಕಾರ ಅರ್ಥೈಸಬೇಕು. ಅದರಿಂದ ವ್ಯತ್ಯಾಸ ಸಾಧುವೇ ಆಗಿದೆ.

★★★

ಭಗವಂತನ ಜಗತ್‌ಸೃಷ್ಟ್ಯಾದಿಕರ್ತೃತ್ವ ಮಹಿಮೆಯನ್ನು ಹೇಳು ಎಂದು ನಾರದರು ಬ್ರಹ್ಮನಲ್ಲಿ ಕೇಳಿಕೊಳ್ಳುತ್ತಾರೆ—

ಯದ್ರೂಪಂ ಯದಧಿಷ್ಠಾನಂ ಯತಃ ಸೃಷ್ಟಮಿದಂ ವಿಭೋ ।
ಯತ್‌ಸಂಸ್ಥಂ ಯತ್ಪರಂ ಯಚ್ಚ ತತ್ತತ್ತ್ವಂ ವದ ತತ್ತ್ವತಃ ॥ ೨ ॥

ಈ ಜಗತ್ತು ಯಾರ ಪ್ರತಿಮೆಯೋ, ಜಗತ್ತಿಗೆ ಯಾರು ಮೂಲ ಆಧಾರನೋ, ಯಾರಿಂದ ಜಗತ್ತು ನಿರ್ಮಿತವಾಯಿತೋ, ಯಾರ ಮೇಲೆ ಅದು ನಿಂತಿದೆಯೋ, ಯಾರಿಗಿಂತ ಕಡಿಮೆಯಾಗಿದ್ದು ಯಾರ ಅಧೀನವೋ ಅಂಥ ಹರಿಯ ಮಹಿಮೆಯನ್ನು ಯಥಾವತ್ತಾಗಿ ಹೇಳು.

ಇಲ್ಲಿ 'ಜಗತ್ತಿಗೆ ಯಾರು ಆಧಾರ' ಎಂದು ಕೇಳಿ, ತಿರುಗಿ ಜಗತ್ತು ಯಾರಲ್ಲಿ ನಿಂತಿದೆ ಎನ್ನುವುದು ಪುನರುಕ್ತವಾಗುತ್ತದೆ. ಅದಕ್ಕೆ ಬೇರೆ ವ್ಯಾಖ್ಯಾನಕಾರರು 'ಯತ್‌ಸಂಸ್ಥಂ' ಎಂದರೆ ಯಾರಲ್ಲಿ ಲಯಹೊಂದುವುದೋ ಎಂದು ಅರ್ಥ

ಮಾಡಿದ್ದಾರೆ. ಉಪಾದಾನವೆ ಕಾರ್ಯಕ್ಕೆ ಲಯಾಧಾರ. ಪ್ರಪಂಚಕ್ಕೆ ಲಯಾಧಾರ ಪರಮಾತ್ಮ. ಏಕೆಂದರೆ ಅವನೆ ಪ್ರಪಂಚಕ್ಕೆ ಉಪಾದಾನ ಎನ್ನುತ್ತಾರೆ. 'ಯಚ್ಚ' ಜಗತ್ತಿನ ಸ್ವರೂಪವೇನು ಎಂದು ವ್ಯಾಖ್ಯಾನಿಸಿದ್ದಾರೆ. 'ಯದ್ರೂಪಂ' ಎಂದರೆ ಜಗತ್ತಿನ ಲಕ್ಷಣವೇನು ಎಂದೂ ಅರ್ಥೈಸಿದ್ದಾರೆ. ಆದರೆ ಭಗವಂತನ ಕುರಿತು ನಾರದರು ಪ್ರಶ್ನಿಸುತ್ತಿದ್ದಾರೆ. ಆದರಿಂದ ಈ ವ್ಯಾಖ್ಯಾನಗಳು ಅಸಮರ್ಪಕ. ಅದಕ್ಕೆ ಹೀಗೆ ಹೇಳಬೇಕು—

ತದ್ವಶತ್ವಾದಿದಂ ರೂಪಂ ಹರೇರ್ನೈವ ಸ್ವರೂಪತಃ ।

ಇತಿ ಮಾನಸಸಂಹಿತಾಯಾಂ ।

ಅಧಿಷ್ಠಾನಮಿತಿ ಪ್ರೋಕ್ತಂ ಮೂಲಾಧಾರಂ ವಿಚಕ್ಷಣೈಃ ।
ಯತ್‌ಸ್ಥಿತಂ ದೃಶ್ಯತೇ ವಸ್ತು ಸಂಸ್ಥಾನಂ ತದುದೀರಿತಂ ।
ಉಭಯಂ ಹರಿರೇವಾಸ್ಯ ಜಗತೋ ಮುನಿಪುಂಗವ ॥

ಇತಿ ವಾಮನೇ ।

ಹರಿಃ ಪರೋಽಸ್ಯ ಜಗತೋ ಹ್ಯವ್ಯಕ್ತಾದೇಶ್ಚ ಕೃತ್ಸ್ನಶಃ ।
ಅತಸ್ತತ್ಪರಮೇವೇದಂ ವದಂತಿ ಮುನಯೋಽಮಲಾಃ ॥

ಇತಿ ಸಾತ್ವತಸಂಹಿತಾಯಾಂ ।

ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ ।
ವಿದ್ಯಮಾನೇ ವಿಭೇದೇಽಪಿ ಮಿಥೋ ನಿತ್ಯಂ ಸ್ವರೂಪತಃ ॥

ಇತಿ ಭವಿಷ್ಯತ್ಪರ್ವಣಿ ।

'ಜಗತ್ತು ಹರಿಯ ಅಧೀನವಾದ್ದರಿಂದ ಹರಿಯ ರೂಪವೆನಿಸಿದೆ ಹೊರತು ಹರಿಯ ಸ್ವರೂಪವಾಗಿಲ್ಲ' ಎಂದು ಮಾನಸಸಂಹಿತೆಯಲ್ಲಿ ಹೇಳಿದೆ. 'ಅಧಿಷ್ಠಾನವೆಂದು ಮೂಲಾಧಾರವನ್ನು ಕರೆಯುತ್ತಾರೆ. ಯಾವುದರ ಮೇಲೆ ವಸ್ತು ನಿಂತಿರುವುದು ಕಾಣುವುದೋ ಅದು ಸಂಸ್ಥಾನ ಎನಿಸುತ್ತದೆ. ಜಗತ್ತಿಗೆ ಅವೆರಡೂ ಬೇರೆಬೇರೆ ರೂಪಗಳಿಂದ ಒಬ್ಬನೆ ಹರಿಯಾಗಿದ್ದಾನೆ' ಎಂದು ವಾಮನಪುರಾಣದಲ್ಲಿ ಹೇಳಿದೆ. 'ಅವ್ಯಕ್ತದಿಂದಾರಂಭಿಸಿ ತೃಣಪರ್ಯಂತ ಎಲ್ಲ ಜಗತ್ತಿಗಿಂತಲೂ ಹರಿ ಉತ್ತಮ. ಆದರಿಂದ ಜಗತ್ತನ್ನು ತತ್ಪರ ಎಂದು ಬಲ್ಲವರು ಹೇಳುತ್ತಾರೆ' ಎಂದು ಸಾತ್ವತ ಸಂಹಿತೆಯಲ್ಲಿ ಹೇಳಿದೆ. 'ಯಾವುದರ ಅಸ್ತಿತ್ವ ಯಾರ ಅಧೀನವೋ ಅದಕ್ಕೆ ಅವನಿಂದ ಸ್ವರೂಪತಃ ಸದಾ ಭೇದವಿದ್ದರೂ ಅದನ್ನು ಅವನೇ ಎಂದು ಹೇಳುವುದುಂಟೆ'ಂದು ಭವಿಷ್ಯತ್ಪರ್ವದಲ್ಲಿ ಹೇಳಿದೆ.

★★★

ಜಗತ್ತಿಗೆ ಆಧಾರನಾದ ಹರಿಯ ಮಹಿಮೆಯನ್ನು ಹೇಳೆಂದು ವಿಜ್ಞಾಪಿಸಿ ಬ್ರಹ್ಮನಿಗೆ ಆಧಾರನಾದ ಸ್ವಾಮಿಯಾದ ಹರಿಯ ಮಹಿಮೆಯ ಬಗ್ಗೆಯೆ ನಾರದರು ಬ್ರಹ್ಮನಲ್ಲಿ ಕೇಳುತ್ತಿದ್ದಾರೆ—

ಯದ್ವಿಜ್ಞಾನೋ ಯದಾಧಾರೋ ಯತ್ಪರಸ್ತ್ವಂ ಯದಾತ್ಮಕಃ ।
ಏಕಃ ಸೃಜಸಿ ಭೂತಾನಿ ಭೂತೈರೇವಾತ್ಮಮಾಯಯಾ ॥ ೪ ॥

ನಿನಗೆ ಯಾರು ಜ್ಞಾನ ನೀಡುವನೋ ಯಾರು ಆಧಾರನೋ ಯಾರು ನಿನಗಿಂತ ಶ್ರೇಷ್ಠನೋ ಯಾರು ನಿನಗೆ ಸ್ವಾಮಿಯೋ ಆ ಹರಿಯ ಮಹಿಮೆಯನ್ನು ನನಗೆ ಹೇಳು. ಈಗ ನನ್ನ ಸಂದೇಹವಿದು- ಪಂಚಭೂತಗಳಿಂದ ಚರಾಚರ ಪ್ರಪಂಚವನ್ನು ಸ್ವಾಧೀನ ಪ್ರಕೃತಿಯಿಂದ ಸ್ವೇಚ್ಛೆಯಿಂದ ನೀನೊಬ್ಬನೆ ಸ್ವತಂತ್ರನಾಗಿ ಸೃಜಿಸುತ್ತಿರುವೆ ತಾನೆ?

ಇಲ್ಲಿ ಬೇರೆ ವ್ಯಾಖ್ಯಾನಕಾರರು ಎಲ್ಲರೂ ವಿಪರೀತವಾಗಿ ಅರ್ಥಗ್ರಹಿಸಿದ್ದಾರೆ. ನೀನು ತಪಸ್ಸು ಮಾಡುವುದನ್ನು ಕಂಡು ಲೋಕವು ನಿನಗೊಬ್ಬ ಆಶ್ರಯ ಬೇರೆ ಇರುವನೆಂದೇ ತಿಳಿದಿದೆ. ಆದರಂತೆ ನಿನಗೆ ಯಾರು ಆಶ್ರಯನೆಂದು ಕೇಳುತ್ತಿದ್ದೇನಷ್ಟೆ. ನನ್ನ ಅಭಿಪ್ರಾಯದಲ್ಲಿ ನೀನೇ ಸ್ವತಂತ್ರ, ಸೃಷ್ಟಿಕರ್ತ ಎನ್ನುತ್ತಾರೆ ಎಲ್ಲ ವ್ಯಾಖ್ಯಾನಕಾರರು.

ಮಮ ತು ತ್ವಮೇವ ಸ್ವತಂತ್ರಃ ಪರಮೇಶ್ವರ ಇತಿ ಬುದ್ಧಿಃ ।
ತವ ತಪಶ್ಚರಣೇನ ತು ಪರಶಂಕಯಾ ಪೃಚ್ಛಾಮೀತ್ಯಾಹ ।'

ಇದು ಸರಿಯಲ್ಲ, ನಾರದರು ಜ್ಞಾನಿಗಳು. ಹೀಗೆ ಹೇಳಬೇಕು—

ತದಧಿಕಂ ಜ್ಞಾತುಂ ಪೂರ್ವಪಕ್ಷಂ ದರ್ಶಯತಿ 'ಏಕಃ ಸೃಜಸೀ'ತ್ಯಾದಿನಾ ।

ಬ್ರಹ್ಮನಿಗಿಂತ ಹರಿಯೆ ಉತ್ತಮನೆಂದು ಬ್ರಹ್ಮನ ಮುಖದಿಂದಲೇ ಲೋಕಕ್ಕೆ ತಿಳಿಸಿಕೊಡುವ ಉದ್ದೇಶದಿಂದ 'ಹಿರಣ್ಯಗರ್ಭಃ ಸಮವರ್ತತಾಗ್ರೇ' ಇತ್ಯಾದಿ ವೇದವಾಕ್ಯದಿಂದ ಮೇಲುನೋಟಕ್ಕೆ ಕಾಣುವ ಬ್ರಹ್ಮಸರ್ವೋತ್ತಮತ್ವವನ್ನು ಪೂರ್ವಪಕ್ಷವಾಗಿ ತನ್ನ ಸಂದೇಹವೆಂಬಂತೆ ಪ್ರಸ್ತುತಪಡಿಸುತ್ತಾರೆ ನಾರದರು, 'ನೀನೊಬ್ಬನೆ ಸ್ವತಂತ್ರವಾಗಿ ಸೃಷ್ಟಿ ಮಾಡುವಿ ತಾನೆ?' ಎಂದು ಮುಂತಾಗಿ.

★★★

ಬ್ರಹ್ಮನೆ ಸೃಷ್ಟ್ಯಾದಿಗಳಲ್ಲಿ ಸ್ವತಂತ್ರಕರ್ತನೆಂಬ ಪೂರ್ವಪಕ್ಷವನ್ನು ದೃಢಪಡಿಸಲು ಇನ್ನೊಬ್ಬ ಕರ್ತನಿಲ್ಲವೆಂದೂ ನಾರದರು ಬ್ರಹ್ಮನ ಮುಂದೆ ಹೇಳುತ್ತಾರೆ—

ನಾಹಂ ವೇದ ಪರಂ ತ್ವಸ್ಮಾನ್ನಾವರಂ ನ ಸಮಂ ವಿಭೋ ।
ನಾಮರೂಪಗುಣೈರ್ಭಾವ್ಯಂ ಸದಸತ್ ಕಿಂಚಿದನ್ಯತಃ ॥ ೬ ॥

ಪ್ರಭು, ಮನುಷ್ಯ ಮೃಗ ಮುಂತಾದ ನಾಮಗಳಿಂದ, ಎರಡು ಕಾಲು ನಾಲ್ಕು ಕಾಲು ಮುಂತಾದ ರೂಪಗಳಿಂದ, ಬಿಳಿ ಕಪ್ಪು ಮುಂತಾದ ಗುಣಗಳಿಂದ ಯುಕ್ತವಾದ ಸ್ಥೂಲ ಸೂಕ್ಷ್ಮ ಯಾವುದೆ ಇರಲಿ ಎಲ್ಲವನ್ನೂ ಸ್ವತಂತ್ರವಾಗಿ ಸೃಷ್ಟಿ ಮಾಡಬಲ್ಲ ಇನ್ನೊಬ್ಬ ನಿನಗಿಂತ ಶ್ರೇಷ್ಠನಾಗಲಿ, ಕಡಿಮೆಯಾಗಲಿ ಸಮನಾಗಲಿ ಇರಬಹುದೆಂದು ನಾನು ಭಾವಿಸುವುದಿಲ್ಲ.

ಇಲ್ಲಿ ನೀನೇ ಸ್ವತಂತ್ರಕರ್ತ 'ಬೇರೆ ಇಲ್ಲ' ಎಂದು ನಾರದರು ಬ್ರಹ್ಮನನ್ನು ಹೊಗಳುತ್ತಿದ್ದಾರೆ. 'ಇದು ಕೇವಲ ಪೂರ್ವಪಕ್ಷವೆನ್ನುವಂತಿಲ್ಲ. ವೇದಾದಿಗಳಲ್ಲಿಯೂ ಬ್ರಹ್ಮ ವಿಷ್ಣುಗಳು ಅಭಿನ್ನರು ಎಂದು ಹೇಳಿದೆ. ಅದಕ್ಕೆ ಬ್ರಹ್ಮ ನಾರಾಯಣನ ಅಧೀನ ಎಂದೇ ಅರ್ಥ ತಾನೆ?' ಎಂಬ ಶಂಕೆ ಬರಬಹುದು. ಆದರೆ 'ಬ್ರಹ್ಮನು ನಾರಾಯಣ' ಎಂದು ಅಭೇದವನ್ನು ಮಾತ್ರ ನಾರದರು ಹೇಳಿದ್ದರೆ ಬ್ರಹ್ಮನು ನಾರಾಯಣನ ಅಧೀನ ಎಂದೇ ಅರ್ಥ, ಅಭೇದವಲ್ಲ ಎನ್ನಬಹುದಿತ್ತು. ನಾರದರು ಈಗ ಹಾಗೆ ಹೇಳುತ್ತಿಲ್ಲ. ನೀನೇ ಸ್ವತಂತ್ರಕರ್ತೃ, 'ಬೇರೆ ಇಲ್ಲ' ಎನ್ನುತ್ತಿದ್ದಾರೆ. ಅದರಿಂದ ಇದನ್ನು ಅವರ ಪೂರ್ವಪಕ್ಷವೆಂದೇ ತಿಳಿಯಬೇಕು.

ಅಭೇದವನ್ನು ಮಾತ್ರ ಹೇಳಿದರೆ ಅಧೀನ ಎಂಬ ಅರ್ಥವಿಟ್ಟುಕೊಳ್ಳಬಹುದು. ಅದಕ್ಕೆ ಇದು ಆಧಾರ—

ತ್ವದಧೀನಾ ಯತಃ ಸತ್ತಾ ಅವರಸ್ಯಾಪಿ ಕೇಶವ ।
ಅತಃ ಸ್ವರೂಪತಃ ಸಮ್ಯಕ್ ಸತಿ ಭೇದೇಽಪಿ ತದ್ ಭವಾನ್ ।

ಇತಿ ಮಾತ್ಸ್ಯೇ ।

'ಶ್ರೀಹರಿ, ನಿನಗಿಂತ ಕಡಿಮೆಯಾಗಿರುವವರ ಅಸ್ತಿತ್ವವೂ ನಿನ್ನ ಅಧೀನ. ಅದರಿಂದ ಸ್ವರೂಪದಿಂದ ನಿಮ್ಮೊಳಗೆ ಸ್ಫುಟವಾಗಿ ಭೇದವಿದ್ದರೂ ಅವರನ್ನು ನೀನೆ ಎಂದು ವೇದಾದಿಗಳಲ್ಲಿ ಹೇಳುವುದುಂಟು' ಎಂದು ಮತ್ಸ್ಯಪುರಾಣ ಹೇಳಿದೆ.

★★★

ನಾರದರ ಪ್ರಶ್ನೆಗೆ ಬ್ರಹ್ಮದೇವರು ಉತ್ತರ ಕೊಡುತ್ತ ಮೊದಲಿಗೆ ಅವರು ಮುಂದಿಟ್ಟ ಪೂರ್ವಪಕ್ಷ ಸುಳ್ಳು ಎನ್ನುತ್ತಿದ್ದಾರೆ—

ನಾನೃತಂ ಬತ ತಚ್ಚಾಪಿ ಯಥಾ ಮಾಂ ಪ್ರಬ್ರವೀಷಿ ಭೋಃ ।
ಅವಿಜ್ಞಾಯ ಪರಂ ಮತ್ತ ಏತಾವತ್ತ್ವಂ ಯತೋ ಹಿ ಮೇ ॥ ೧೦ ॥

ನೀನೆ ಸ್ವತಂತ್ರನಾಗಿ ಸೃಷ್ಟಿ ಮಾಡುವಿ ಎಂದು ಮುಂತಾಗಿ ನೀನು ಏನು

ಹೇಳಿದಿಯೋ ಅದು ಸುಳ್ಳಲ್ಲವೆ? ನನಗಿಂತ ಉತ್ತಮನೊಬ್ಬನಿರುವನೆನ್ನದೆ 'ನಿನಗಿಂತ ಉತ್ತಮನೊಬ್ಬನಿರುವನೆಂದು ನಾನು ಭಾವಿಸುವುದಿಲ್ಲ' ಎಂದೂ ನೀನು ಹೇಳಿದುದು ಸುಳ್ಳಲ್ಲವೆ? ಏಕೆಂದರೆ ನನ್ನ ಸಾಮರ್ಥ್ಯ ಏನಿದ್ದರೂ ಇಷ್ಟೇ, ಅದು ಭಗವಂತನ ಅಧೀನವೆ.

ಇಲ್ಲಿ 'ನಾನೃತಂ' 'ನೀನು ಹೇಳುವುದು ಸುಳ್ಳಲ್ಲ' ಎಂದು ಹೇಳಿದಂತೆ ಕಾಣುತ್ತದೆ. ಹಿಂದಿನ ಶ್ಲೋಕದಲ್ಲಿಯೂ 'ಸಮ್ಯಕ್ ಕಾರುಣಿಕಸ್ಯೇದಂ' ಒಳ್ಳೆಯ ಪ್ರಶ್ನೆ ಮಾಡಿರುವಿ ಎಂದೇ ಬ್ರಹ್ಮ ಪ್ರಶಂಸೆ ಮಾಡಿದ್ದಾನೆ. ಶ್ರೀಧರ ವ್ಯಾಖ್ಯಾನದಲ್ಲಿ 'ನೀನು ಹೇಳುವುದು ಸುಳ್ಳಲ್ಲ' ಎಂದೇ ವ್ಯಾಖ್ಯಾನವಿದೆ. ಆದರೆ 'ಪೂರ್ತಿ ಸುಳ್ಳಲ್ಲ' ಎಂದಿದೆ. 'ನನಗಿಂತ ಬೇರೆ ಒಬ್ಬ ಸೃಷ್ಟಿಕರ್ತನಿರುವನೆಂಬುದನ್ನು ತಿಳಿಯದೆ ನೀನು ನನ್ನನ್ನೇ ಸೃಷ್ಟಿಕರ್ತನೆಂದಿರುವೆಯಷ್ಟೆ, ತಿಳಿದೂ ಹಾಗೆ ಹೇಳಿದ್ದರೆ ಅದು ಪೂರ್ತಿ ಸುಳ್ಳಾಗುತ್ತಿತ್ತು' ಎಂದು ಸಮರ್ಥನೆ ಮಾಡಿದ್ದಾರೆ. ವಲ್ಲಭಾಚಾರ್ಯರ ವ್ಯಾಖ್ಯಾನದಲ್ಲಿಯೂ ಹೀಗೇ ಹೇಳಿದೆ. ಆದರೆ ವಿಶ್ವನಾಥ ವ್ಯಾಖ್ಯಾನದಲ್ಲಿ ಇದನ್ನು ಆಕ್ಷೇಪಿಸಿದೆ- 'ನಾರದ ಅಷ್ಟು ಅಜ್ಞನೆಂದು ಬ್ರಹ್ಮ ತಿಳಿದಿರುವನೆ?' ಎಂದು. 'ನನಗಿಂತ ಬೇರೆ ಕರ್ತನಿರುವುದನ್ನು ತಿಳಿಯದೆ 'ಮಮ ಏತಾವತ್ತ್ವಂ' ನನ್ನಲ್ಲಿಯೆ ಇಷ್ಟು ಸಾಮರ್ಥ್ಯವಿದೆ ಎಂದು ಲೋಕ ತಿಳಿದಿದೆ. ನಾರದರಲ್ಲ' ಎಂದಿದೆ. ನಾರದರು ಅಜ್ಞಲೋಕಾನುಕರಣ ಮಾಡಿ ಹಾಗೆ ಹೇಳಿದ್ದರಿಂದ ಅವರಿಗೆ ಅನೃತವಚನ ದೋಷವಿಲ್ಲ ಎಂದು ಬ್ರಹ್ಮ ಹೇಳುತ್ತಾನೆ ಎಂದಿದೆ.[೧] ಆದರಿಂದ 'ನಾನೃತಂ' ಎಂದರೆ 'ನಿನಗೆ ಸುಳ್ಳು ಹೇಳಿದ ದೋಷವಿಲ್ಲ' ಎನ್ನುವ ಅಭಿಪ್ರಾಯವೆಂದಾಯಿತು. ಅಂತೂ ಪೂರ್ವಪಕ್ಷ ಸುಳ್ಳೇ. ಆದರಿಂದ ಹೇಳುತ್ತಾರೆ—

ನಾನೃತಮಿತ್ಯಾಕ್ಷೇಪಃ ।

---

೧. ಯಥಾ ಮಾಮೀಶ್ವರತ್ವೇನ ಪ್ರಭಾಷಸೇ ತದಪಿ ತವ ಭಾಷಣಂ ನಾತ್ಯಂತಮನೃತಂ । ಯತಃ ಕಾರಣಾದೇತಾವತ್ತ್ವಭಾವಸ್ಯ ಭಾವ ಏತಾವತ್ತ್ವಂ ಮೇಽಸ್ತಿ । ಕಿಂತು ಮತ್ತಃ ಪರಮೀಶ್ವರಮವಿಜ್ಞಾಯ ಬ್ರೂಷೇ । ಅತಃ ಸಾದೃಶ್ಯಾತ್ತವೇಯಂ ಭ್ರಾಂತಿರ್ನತು ಬುದ್ಧಿಪೂರ್ವಮನೃತಮಿತ್ಯರ್ಥಃ । -ಶ್ರೀಧರ

ಯತ್ತವ ವಚನಂ ತ್ವತ್ತೋಽನ್ಯೋ ಮಹಾನ್ನಾಸ್ತೀತಿ ತದನೃತಂ ನ ಭವತಿ । ಅನೃತಂ ನಾಮಾನ್ಯಥಾ ಜ್ಞಾತ್ವಾಽನ್ಯಥಾ ವಚನಂ । ನ ತ್ವಜ್ಞಾನಾತ್ । ತದಜ್ಞ ವಚನಮಿತ್ಯೇವ ಲೋಕ ಪ್ರಸಿದ್ಧಿಃ । ಅಪ್ರಾಮಾಣ್ಯಸ್ಯ ತುಲ್ಯತ್ವೇಽಪ್ಯೇವಂ ವಚನೇಽನೃತವಾದದೋಷೋ ನಾಸ್ತೀತ್ಯರ್ಥಃ । -ವಲ್ಲಭಾಚಾರ್ಯಃ

ನಾನೃತಂ ನ ಮಿಥ್ಯಾ ಮತ್ತಃ ಪರಮವಿಜ್ಞಾಯ ಮಮೈತಾವತ್ತ್ವಂ ಲೋಕಾ ಬ್ರುವಂತೀತಿ ಶೇಷಃ । ತ್ವಂ ತು ಸರ್ವಜ್ಞೋಽಪಿ ತಾನೇವ ಜ್ಞಾಪಯಿತುಂ ತಾನನುಕೃತ್ಯ ಬ್ರೂಷೇ ಇತಿ ಭಾವಃ । -ವಿಶ್ವನಾಥಃ

ಸುಳ್ಳಲ್ಲವೆ? ಎಂದು ಆಕ್ಷೇಪ, ಕಾಕುಸ್ವರದಿಂದ 'ನಾನೃತಂ' ಎಂಬಲ್ಲಿ ವಿವಕ್ಷಿತವಾಗಿದೆ.

★★★

ತ್ರಿಮೂರ್ತಿಗಳ ಐಕ್ಯವನ್ನು ಹೇಳುವ ದುರ್ಮತವನ್ನು ನಾರದರು ಅನುವಾದ ಮಾಡಿದಾಗ ಅದನ್ನು ಕೇಳಿದ ದೋಷ ಪರಿಹಾರಕ್ಕೆ ಬ್ರಹ್ಮದೇವರು ವಾಸುದೇವ ದ್ವಾದಶಾಕ್ಷರ ಮಂತ್ರವನ್ನೂ ವಿಷ್ಣುಗಾಯತ್ರಿಯನ್ನೂ ನೆನೆದರು. ಆ ಮೂಲಕ ಮುಂದೆ ಹರಿಯ ಮಾಹಾತ್ಮ್ಯವನ್ನು ಹೇಳಲು ಮಂಗಳಾಚರಣೆಯನ್ನೂ ಮಾಡಿದರು—

ನಮಸ್ತಸ್ಮೈ ಭಗವತೇ ವಾಸುದೇವಾಯ ಧೀಮಹಿ ।
ಯನ್ಮಾಯಯಾ ದುರ್ಜಯಯಾ ಮಾಂ ವದಂತಿ ಜಗದ್ಗುರುಂ ॥ ೧೨ ॥

'ಓಂ ನಮೋ ಭಗವತೇ ವಾಸುದೇವಾಯ' 'ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ । ತನ್ನೋ ವಿಷ್ಣುಃ ಪ್ರಚೋದಯಾತ್।' ಆ ಭಗವಾನ್ ವಾಸುದೇವನಿಗೆ ನಮಸ್ಕಾರ. ಆ ವಾಸುದೇವನನ್ನೇ ಧ್ಯಾನ ಮಾಡುವೆವು. ಅವನ ಮಾಯೆಯನ್ನು ಯಾರೂ ಮೀರಲಾರರು. ಆ ಮಾಯೆಯಿಂದ ತಾನೆ, ನನ್ನನ್ನು ಜಗಜ್ಜನಕನೆಂದು ದುರ್ಜನರು ಹೇಳುತ್ತಾರೆ?

ಇಲ್ಲಿ ಮಾಯೆ ಎಂದರೆ ಅದ್ವೈತಿಗಳು ಹೇಳುವ ಅನಿರ್ವಚನೀಯವಾದ ಅವಿದ್ಯೆ ಎಂದು ತಿಳಿಯುವ ಸಂಭವವಿದೆ. ಅದಕ್ಕೆ ಹೇಳುತ್ತಾರೆ—

ಮುಖ್ಯಾ ಮಾಯಾ ಹರೇಃ ಶಕ್ತಿರಮುಖ್ಯಾ ಪ್ರಕೃತಿರ್ಮತಾ ।
ಅಥಾಮುಖ್ಯತಮಾ ಚೈವ ಮಾಯಾ ದೀನಾ ಪ್ರಕೀರ್ತಿತಾ ॥

'ಮಾಯೆ' ಎಂದರೆ ಮುಖ್ಯವಾಗಿ ಪರಮಾತ್ಮನ ಶಕ್ತಿ. ಚೇತನಪ್ರಕೃತಿ ಅಮುಖ್ಯಮಾಯೆ. ಜೀವರಲ್ಲಿರುವ ಸ್ವಗುಣಾಚ್ಛಾದಕ ಅತ್ಯಂತ ಅಮುಖ್ಯವಾದ ಮಾಯೆ. ಈ ಮೂರು ಬಗೆಯ ಮಾಯೆಯೂ 'ಯನ್ಮಾಯಯಾ ದುರ್ಜಯಯಾ' ಎಂಬಲ್ಲಿ ವಿವಕ್ಷಿತವಾಗಿದೆ ಹೊರತು ಅದ್ವೈತಿಗಳ ಅನಿರ್ವಚನೀಯ ಮಾಯೆಯಲ್ಲ.

★★★

'ನೀನು ಭಗವಂತನಿಗೆ ಸಮನೋ ಶ್ರೇಷ್ಠನೋ ಆಗದಿರಬಹುದು. ಆದರೆ ಪ್ರಕೃತಿ ಕರ್ಮಕಾಲಾದಿಗಳು ಭಗವಂತನಿಗೆ ಸಮ ಅಥವಾ ಶ್ರೇಷ್ಠವಾಗಿರಬಹುದು' ಎಂದು ನಾರದರು ಬ್ರಹ್ಮನಲ್ಲಿ ಪೂರ್ವಪಕ್ಷ ಮಾಡುತ್ತಾರೆ. ಸಾಂಖ್ಯರ ಪ್ರಕಾರ ಪ್ರಕೃತಿ ಸ್ವತಂತ್ರ ಕರ್ತೃ. ಚೇತನ ಸುಮ್ಮನೇ ಇರುತ್ತಾನೆ. ಮೀಮಾಂಸಕರ ಪ್ರಕಾರ ಕರ್ಮವೇ ಎಲ್ಲ

ಮಾಡಿಸುತ್ತದೆ, ವಿಷ್ಣು ನಾನಾ ಅವತಾರ ಮಾಡಿ ಬಳಲುವುದೂ ಕರ್ಮಾಧೀನ ವಂತೆ. ಕೆಲವರು ಹೇಳುತ್ತಾರೆ, ಕಾಲ ಎಲ್ಲಕ್ಕೂ ಕಾರಣ. ದೇವತೆಗಳಿಗೂ ಶುಕ್ರದೆಶೆ, ಶನಿದೆಶೆಗಳು ಬರುವುದುಂಟು. ಸ್ವಭಾವೋ ಬಲವಾನ್, ಸೃಷ್ಟಿಯಲ್ಲಿ ಎಲ್ಲ ಕಾರ್ಯಗಳೂ ಆಯಾ ವಸ್ತುಸ್ವಭಾವದಿಂದಲೆ ಎನ್ನುತ್ತಾರೆ ಚಾರ್ವಾಕರು. ಜೀವ ತನ್ನ ಅದೃಷ್ಟದ ಸಹಾಯದಿಂದ ಸೃಷ್ಟ್ಯಾದಿಗಳನ್ನು ಮಾಡುತ್ತಾನೆ, ಈಶ್ವರ ಬೇಡ ಎಂದು ಜೈನರು ಹೇಳುತ್ತಾರೆ. ಜೀವಾದ್ ಭವಂತಿ ಭೂತಾನಿ ಎಂದು ವಾದವೂ ಇದೆ. ಶೈವರು ಶಾಕ್ತರು ಮುಂತಾದವರಲ್ಲಿ ಶಿವ ಶಕ್ತಿ ಮುಂತಾದವರೆ ಸರ್ವೋತ್ತಮರೆಂಬ ವಾದವಿದೆ. ಈ ಎಲ್ಲ ಪೂರ್ವಪಕ್ಷಕ್ಕೆ ಬ್ರಹ್ಮನು ನೀಡುವ ಉತ್ತರ—

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ವಾಸುದೇವಾತ್ ಪರೋ ಬ್ರಹ್ಮನ್ ನ ಚಾನ್ಯೋಽರ್ಥೋಽಸ್ತಿ ತಾತ್ತ್ವತಃ ॥

ಪ್ರಕೃತಿ ಕರ್ಮ ಕಾಲ ಸ್ವಭಾವ ಜೀವ ಶಿವ ಶಕ್ತಿ ಮುಂತಾದವು ಯಾವುವೂ ವಾಸುದೇವನಿಗಿಂತ ಉತ್ತಮ್ಮ ಅಲ್ಲ, ಸಮವೂ ಅಲ್ಲ.

ಏಕೆಂದರೆ ಪ್ರಕೃತಿ ಕಾಲ ಕರ್ಮ ಸ್ವಭಾವ ಇವೆಲ್ಲವೂ ಜಡವೆಂದೇ ಆಯಾ ವಾದಿಗಳು ಒಪ್ಪಿದ್ದಾರೆ. ಜಡ ಚೇತನಾಧೀನವಾಗಿಯೆ ಪ್ರವೃತ್ತಿ ಮಾಡುವುದರಿಂದ ಅದು ಭಗವಂತನಿಗೆ ಸಮವಲ್ಲ. ಜೀವ ಅಸ್ವತಂತ್ರ ಎನ್ನುವುದು ಅನುಭವಸಿದ್ಧ. ಶಿವ ಶಕ್ತಿ ಮುಂತಾದವರೂ ಅಸ್ವತಂತ್ರರೆಂದು ಶ್ರುತಿಸ್ಮೃತಿಗಳಲ್ಲಿ ಸ್ಪಷ್ಟವಿದೆ. ಅದರಿಂದ ಶ್ರೀಹರಿಯೆ ಸರ್ವೋತ್ತಮ.

ಇಲ್ಲಿ ಬೇರೆ ವ್ಯಾಖ್ಯಾನಗಳು 'ಪರ' ಎಂದರೆ 'ಉತ್ತಮ' ವಾಸುದೇವನಿಗಿಂತ ಉತ್ತಮ ಏನೂ ಇಲ್ಲ ಎಂದೇ ಅರ್ಥೈಸಿದ್ದಾರೆ. ಆದರೆ ಉತ್ತಮ ಏಕೆ ಇಲ್ಲ ಎನ್ನಲು ಅವರು ಕೊಡುವ ಕಾರಣ ಸರಿಯಿಲ್ಲ. ಅದ್ವೈತದಲ್ಲಿ ಎಲ್ಲವೂ ಬ್ರಹ್ಮವೆ ಆಗಿರುವುದರಿಂದ ಬ್ರಹ್ಮಕ್ಕಿಂತ ಉತ್ತಮವಲ್ಲ. ವಿಶಿಷ್ಟಾದ್ವೈತದಲ್ಲಿ ಎಲ್ಲವೂ ವಿಷ್ಣುವಿನ ಶರೀರವಾದ್ದರಿಂದ ಅವನಿಗಿಂತ ಉತ್ತಮವಲ್ಲ. ವಸ್ತುತಃ ಎಲ್ಲವೂ ಅಸ್ವತಂತ್ರವಾದ್ದರಿಂದ ಉತ್ತಮವಲ್ಲ ಎನ್ನಬೇಕು. 'ತಾತ್ತ್ವತಃ' ಎಂಬಲ್ಲಿ ಬೇರೆ ವ್ಯಾಖ್ಯಾನಕಾರರಿಗೆ 'ತತ್ತ್ವತಃ' ಎಂದು ಪಾಠ. ಇದು ವ್ಯರ್ಥ. 'ತಾತ್ತ್ವತಃ' ಎಂಬ ಪಾಠದಲ್ಲಿ ಅದಕ್ಕೆ ವಿಶೇಷಾರ್ಥವಿದೆ—

ಪರಃ ಅಧಿಕಃ ।
ತದ್ವದೇವ ಸ್ಥಿತಂ ಯತ್ತು ತಾತ್ತ್ವಿಕಂ ತತ್ ಪ್ರಚಕ್ಷತೇ ॥ ಇತಿ ಕೌರ್ಮೇ ।

'ವಾಸುದೇವಾತ್ ಪರಃ' ಎಂದರೆ ಭಗವಂತನಿಗಿಂತ ಉತ್ತಮ ಯಾವುದೂ

ಅಲ್ಲ, ಅಸ್ವತಂತ್ರವಾದ್ದರಿಂದ ಎಂದರ್ಥ. 'ತಾತ್ವತ' ಎಂದರೇನೆಂಬ ಪ್ರಶ್ನೆಗೆ ಅದಕ್ಕೆ ಸಮಾನಾರ್ಥಕವಾದ ತಾತ್ವಿಕ ಶಬ್ದಕ್ಕೆ ವಿವರಣೆ ನೀಡುತ್ತ ಕೂರ್ಮಪುರಾಣ ಹೀಗೆ ಹೇಳಿದೆ— 'ತಾತ್ವಿಕ ಎಂದರೆ 'ಅದರಂತೆಯೇ ಇರುವ ವಸ್ತು' ಎನ್ನುತ್ತಾರೆ' ಎಂದು. ಅದರಿಂದ 'ಪರಃ' ಉತ್ತಮ ಮಾತ್ರವಲ್ಲ, 'ತಾತ್ವತಃ' ಅದರಂತೆಯೇ ಇರುವ, ಅದಕ್ಕೆ ಸಮಾನವಾದ ವಸ್ತುವೂ ದ್ರವ್ಯಕರ್ಮಾದಿ ಯಾವುದೂ ಅಲ್ಲ ಎಂಬ ವಿಶೇಷಾರ್ಥ ಲಭಿಸುತ್ತದೆ.

★★★

ಪ್ರಕೃತಿ ಕರ್ಮ ಕಾಲಾದಿಗಳು ಭಗವಂತನಿಗೆ ಸಮವಲ್ಲದಿದ್ದರೂ 'ಹಿರಣ್ಯಗರ್ಭಃ ಸಮವರ್ತತಾಗ್ರೇ' ಎಂದು ಮುಂತಾಗಿ ವೇದಗಳೇ ಹೇಳುವಂತೆ ನೀವೂ ನಿಮ್ಮಂಥವರೂ ಏಕೆ ಸಮರಾಗಬಾರದು ಎಂಬ ನಾರದರ ಶಂಕೆಗೆ ಬ್ರಹ್ಮನ ಉತ್ತರ—

ನಾರಾಯಣಪರಾ ವೇದಾ ದೇವಾ ನಾರಾಯಣಾಂಗಜಾಃ ।
ನಾರಾಯಣಪರಾ ಲೋಕಾ ನಾರಾಯಣಪರಾ ಮಖಾಃ ॥ ೧೫ ॥

'ಹಿರಣ್ಯಗರ್ಭಃ ಸಮವರ್ತತಾಗ್ರೇ' ಎಂದು ಮುಂತಾದ ವೇದವಾಕ್ಯಗಳೂ ಮುಖ್ಯವಾಗಿ ನಾರಾಯಣನನ್ನೇ ಪ್ರತಿಪಾದಿಸುತ್ತವೆ. ಅಮುಖ್ಯವೃತ್ತಿಯಿಂದ ಬೇರೆ ದೇವತೆಗಳನ್ನೂ ಹೇಳುತ್ತವೆ. ಅಮುಖ್ಯವೃತ್ತಿ ಏಕೆಂದರೆ ಆ ದೇವತೆಗಳು ನಾರಾಯಣನ ಅಂಗಗಳಿಂದ ಹುಟ್ಟಿದವರೆಂದು ವೇದಗಳೆ ಹೇಳುತ್ತವೆ. ಹಾಗೇ ನಾರಾಯಣನ ಅಂಗಗಳಿಂದ ಜನಿಸಿದವುಗಳೆಂದೇ ವೇದವು ಹದಿನಾಲ್ಕು ಲೋಕಗಳನ್ನು ಅಮುಖ್ಯವಾಗಿ ಹೇಳುತ್ತ ಮುಖ್ಯವಾಗಿ ನಾರಾಯಣನನ್ನೇ ಹೇಳುತ್ತವೆ. ಯಜ್ಞಗಳೂ ವಿಷ್ಣುಪ್ರೀತ್ಯರ್ಥವೆ ಇರುವುದರಿಂದ ಅವುಗಳನ್ನೂ ಅಮುಖ್ಯವೃತ್ತಿಯಿಂದಲೆ ವೇದಗಳು ಹೇಳುತ್ತವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಹೇಳುವಂತೆ 'ನಾರಾಯಣಪರಾ ವೇದಾಃ' ವೇದಗಳೆಲ್ಲವೂ ನಾರಾಯಣಪರವಾಗಿವೆ' ಎಂದರೆ, ದೇವತೆಗಳು, ಲೋಕಗಳು, ಯಜ್ಞಗಳು ಇವೆಲ್ಲವುಗಳ ವಿಷಯದಲ್ಲಿ ವೇದ ಏನೂ ಹೇಳುವುದೇ ಇಲ್ಲ ಎನ್ನುತ್ತಾರೆ. ಆಗ, ಬೇರೆ ಪ್ರಮಾಣವೆ ಇಲ್ಲವಾಗಿ ಎಲ್ಲವೂ ಕಾಲ್ಪನಿಕವೆನ್ನುವ ಪ್ರಸಂಗ. ಈ ವ್ಯಾಖ್ಯಾನ ಕಾರರು ವೇದಗಳೆಲ್ಲವೂ ಭಗವಂತನಿಂದ ನಿಶ್ವಾಸರೂಪದಿಂದ ಹುಟ್ಟಿದವುಗಳೆಂದೂ 'ನಾರಾಯಣಪರ' ಶಬ್ದವನ್ನು ವ್ಯಾಖ್ಯಾನಿಸಿರುವುದರಿಂದ ಆ ಪಕ್ಷದಲ್ಲಿ ಈ ಸಮಸ್ಯೆ ಇಲ್ಲ[೧] ನಿಜ. ಆದರೆ ಅದು ವ್ಯರ್ಥ. ಶ್ರೀಮದಾಚಾರ್ಯರು ಹೇಳುತ್ತಾರೆ—

೧. ನಾರಾಯಣಃ ಪರಃ ಕಾರಣಂ ಯೇಷಾಂ ತೇ । ನಾರಾಯಣಃ ಪರಸ್ತಾತ್ಪರ್ಯವಿಷಯೋ ಯೇಷಾಮಿತಿ ವಾ । -ಶ್ರೀಧರಃ

ವೇದಪ್ರತಿಪಾದ್ಯೇಷು ಸ ಪರ ಇತ್ಯಾದಿ ।
ಗಮ್ಯೇಜ್ಯಜ್ಞೇಯವಾಚ್ಯೇಷು ಯೋಜ್ಯೇಷು ಚ ಪರೋ ಹರಿಃ ।
ತಪಸಾ ಪೂಜ್ಯಮಾನಾನಾಂ ಸರ್ವಲೋಕೇಭ್ಯ ಏವ ಚ ।
ಇತಿ ವಾರಾಹೇ ।

ವೇದಪ್ರತಿಪಾದ್ಯಗಳೆನಿಸಿದ ಭಗವಂತ, ದೇವತೆಗಳು, ಲೋಕಗಳು, ಯಜ್ಞಗಳು ಮುಂತಾದವುಗಳ ಮಧ್ಯದಲ್ಲಿ ಭಗವಂತನೆ ಮುಖ್ಯವಾಗಿ ಪರಮಮುಖ್ಯ ವೃತ್ತಿಯಿಂದ ಪ್ರತಿಪಾದಿತನಾಗುವನು. ಅದಕ್ಕಿಂತ ಅಮುಖ್ಯವಾದ ವೃತ್ತಿಯಿಂದ ಇತರ ಎಲ್ಲವೂ ಪ್ರತಿಪಾದಿತವಾಗುತ್ತವೆ. ಅದರಿಂದ ಅವು ಭಗವಂತನಿಗಿಂತ ಉತ್ತಮವಲ್ಲ, ಸಮವೂ ಅಲ್ಲ. ವರಾಹಪುರಾಣದಲ್ಲಿ ಹೀಗೆ ಹೇಳಿದೆ— 'ನಾರಾಯಣಪರಾ ಗತಿಃ- ಎಂದರೆ ವೇದೋಕ್ತ ಗತಿಗಳಲ್ಲಿ ಗಮ್ಯಗಳಲ್ಲಿ ಶ್ರೇಷ್ಠ ಭಗವಂತನೆ ಎಂದರ್ಥ. 'ನಾರಾಯಣಪರಾ ಮಖಾಃ' ಎಂದರೆ ಯಜ್ಞಗಳಿಂದ ಆರಾಧ್ಯರಾಗುವವರಲ್ಲೆಲ್ಲ ಹರಿಯೇ ಶ್ರೇಷ್ಠ ಎಂದರ್ಥ. ನಾರಾಯಣಪರಂ ಜ್ಞಾನಂ ಎಂದರೆ ವೇದೋಕ್ತವಾದ ಜ್ಞೇಯವಸ್ತುಗಳಲ್ಲಿ ಶ್ರೇಷ್ಠ ಭಗವಂತನೆ ಎಂದರ್ಥ. ಹೀಗೇ ನಾರಾಯಣಪರಾ ವೇದಾಃ ಎಂದರೆ ವೇದವಾಚ್ಯಗಳಲ್ಲಿ ಹರಿಯೆ ಶ್ರೇಷ್ಠ. ನಾರಾಯಣಪರೋ ಯೋಗಃ ಎಂದರೆ ಯೋಜ್ಯಗಳಲ್ಲಿ, ಯೋಗದಿಂದ ಉಪಾಸ್ಯವಾದ ವಸ್ತುಗಳಲ್ಲಿ ಭಗವಂತನೆ ಶ್ರೇಷ್ಠ ನಾರಾಯಣಪರಂ ತಪಃ ಎಂದರೆ ತಪಸ್ಸಿನಿಂದ ಪೂಜ್ಯರಾಗಿರುವವರಲ್ಲೆಲ್ಲ ಭಗವಂತನೆ ಶ್ರೇಷ್ಠ. ನಾರಾಯಣಪರಾ ಲೋಕಾಃ ಎಂದರೆ ಎಲ್ಲ ಲೋಕ ಗಳಿಗಿಂತಲೂ ಅವುಗಳನ್ನು ಹುಟ್ಟಿಸಿದ ದೇವನೆ ಶ್ರೇಷ್ಠ ಎಂದರ್ಥ.'

★★★

ಗುಣತ್ರಯವನ್ನು ಹರಿ ಒಮ್ಮೆಲೆ ಪರಿಗ್ರಹಿಸುವನೆ ಅಥವಾ ಕಾಲಕಾಲಕ್ಕೆ ಕ್ರಮವಾಗಿಯೆ? ಎಂದು ಪರೀಕ್ಷಿತ ಶುಕಮುನಿಯಲ್ಲಿ ಕೇಳಿದ್ದ. ರಾಜನ ಪ್ರಶ್ನೆಗಳನ್ನೆಲ್ಲ ನಾರದರೂ ಬ್ರಹ್ಮನಲ್ಲಿ ಕೇಳಿದ್ದರೆಂದಮೇಲೆ ಈ ಪ್ರಶ್ನೆಯನ್ನೂ ನಾರದರು ಕೇಳಿರುತ್ತಾರೆ. ಅದಕ್ಕೆ ಬ್ರಹ್ಮ ಉತ್ತರಿಸುತ್ತಾನೆ—

ಸತ್ತ್ವಂ ರಜಸ್ತಮ ಇತಿ ನಿರ್ಗುಣಸ್ಯ ಗುಣಾಸ್ತ್ರಯಃ ।
ಸ್ಥಿತಿಸರ್ಗನಿರೋಧೇಷು ಗೃಹೀತಾ ಮಾಯಯಾ ವಿಭೋಃ ॥ ೧೮ ॥

ಗುಣಸಂಬಂಧ ಪ್ರಯುಕ್ತ ವಿಕಾರವಿಲ್ಲದ ಪ್ರಭು ಶ್ರೀಹರಿ ಸ್ವೇಚ್ಛೆಯಿಂದ ತಾನು

ನಾರಾಯಣಃ ಪರಂ ಕಾರಣಂಯೇಷಾಂ ತೇ ತಥೋಕ್ತಾಃ । ಯದ್ವಾ ನಾರಾಯಣಃ ಪರಂ ಪ್ರತಿಪಾದ್ಯಂ ಯೇಷಾಂ ತೇ ತಥೋಕ್ತಾಃ । -ವೀರರಾಘವಃ

ತನ್ನ ವಶಕ್ಕೆ ನಿತ್ಯವೂ ಪರಿಗ್ರಹಿಸಿರುವ ಸತ್ವ ರಜ ತಮ ಎಂಬ ಮೂರು ಗುಣಗಳನ್ನೆ ಪಾಲನ ಸೃಷ್ಟಿ ಸಂಹಾರಗಳಿಗಾಗಿ ವಿಶೇಷವಾಗಿ ಒಮ್ಮೆಲೆ ಗ್ರಹಣ ಮಾಡುವುದೂ ಉಂಟು. ಕ್ರಮವಾಗಿ ಗ್ರಹಣ ಮಾಡುವುದೂ ಉಂಟು.

ಈ ಶ್ಲೋಕದಲ್ಲಿ ಬ್ರಹ್ಮ ಯಾವ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾನೆ ಎನ್ನುವುದು ತಿಳಿಯುವುದಿಲ್ಲ, ಬೇರೆ ವ್ಯಾಖ್ಯಾನಕಾರರು ಬ್ರಹ್ಮಾದಿ ಜೀವರು ಪರಮಾತ್ಮನ ಅಧೀನರೇಕೆ? ಎಂಬ ಪ್ರಶ್ನೆಗೆ ಪರಮಾತ್ಮ ಗುಣತ್ರಯದಿಂದ ಬದ್ಧನಾಗುವುದಿಲ್ಲ, ಜೀವ ಬದ್ಧನಾಗುತ್ತಾನೆ ಎಂದು ಉತ್ತರ ಎನ್ನುತ್ತಾರೆ. ಆದರೆ ಹೀಗೆ ಹೇಳಿದರೆ ಹಿಂದೆ 'ಯಥಾ ಗುಣಾಂಸ್ತು ಪ್ರಕೃತೇರ್ಯುಗಪತ್ ಕ್ರಮಶೋಽಪಿವಾ ಬಿಭರ್ತಿ (೨.೪.೯) ಪರಮಾತ್ಮ ತ್ರಿಗುಣಗಳನ್ನು ಒಮ್ಮೆಲೆ ಸ್ವೀಕರಿಸುವನೆ ಕ್ರಮವಾಗಿಯೆ ಎಂದು ಕೇಳಿದ ಪ್ರಶ್ನೆಗೆ ಉತ್ತರವಿಲ್ಲದೆ ನ್ಯೂನತೆ ಬಂದೀತು. ಆದರಿಂದ ಹೇಳುತ್ತಾರೆ—

ಯುಗಪತ್ ಕ್ರಮಶೋಽಪಿವೇತ್ಯಸ್ಯ ಪರಿಹಾರಃ 'ಸತ್ವಂ ರಜಸ್ತಮ' ಇತಿ ।
ನಿತ್ಯಂ ಗೃಹಿತಾಃ ಸತ್ವಾದ್ಯಾಃ ಸ್ಥಿತ್ಯಾದಿಷು ವಿಶೇಷತಃ ।
ಯುಗಪತ್ ಕ್ರಮಶಶ್ಚೈವ ಗೃಹ್ಣಾತಿ ಭಗವಾನ್ ಸ್ವಯಂ ॥
ಇತಿ ಬ್ರಹ್ಮವೈವರ್ತೇ ।

ಪರಮಾತ್ಮ ತ್ರಿಗುಣಗಳನ್ನು ಒಮ್ಮೆಲೆ ಸ್ವೀಕರಿಸುವನೆ? ಅಥವಾ ಕ್ರಮವಾಗಿಯೆ? ಎಂಬ ಪ್ರಶ್ನೆಗೆ ಉತ್ತರ 'ಸತ್ವಂ ರಜಸ್ತಮಃ' ಎಂಬ ಶ್ಲೋಕದಲ್ಲಿ ಉಕ್ತವಾಗಿದೆ. ಬ್ರಹ್ಮ ವೈವರ್ತಪುರಾಣದಲ್ಲಿ ಇದರ ಅಭಿಪ್ರಾಯ ಹೀಗೆ ಉಕ್ತವಾಗಿದೆ— 'ಸತ್ವಾದಿ ಗುಣಗಳನ್ನು ಹರಿ ಸದಾ ತನ್ನಲ್ಲಿಟ್ಟುಕೊಂಡೇ ಇದ್ದಾನೆ. ಆದರೂ ಸ್ಥಿತಿ ಸೃಷ್ಟಿ ಲಯಗಳಿಗಾಗಿ ವಿಶೇಷವಾಗಿ ಅವುಗಳನ್ನು ಜೊತೆಗೂ ತೆಗೆದುಕೊಳ್ಳುತ್ತಾನೆ. ಕ್ರಮವಾಗಿಯೂ ತೆಗೆದುಕೊಳ್ಳುತ್ತಾನೆ' ಎಂದು.

ಪರಮಾತ್ಮ ಈಗ ಗುಣತ್ರಯಗಳನ್ನು ಜೊತೆಗೇ ತೆಗೆದುಕೊಳ್ಳುತ್ತಾನೆ, ಏಕೆಂದರೆ ಈಗ ಕೆಲವರಿಗೆ ಸೃಷ್ಟಿ ಕೆಲವರಿಗೆ ಸ್ಥಿತಿ, ಕೆಲವರಿಗೆ ಲಯಗಳಾಗಬೇಕು. ಆದರಿಂದ ಏಕಕಾಲದಲ್ಲಿ ಮೂರೂ ಗುಣಗಳು ಜೊತೆಗೇ ಬೇಕಾಗುತ್ತವೆ. ಆದರೆ ಆದಿಸೃಷ್ಟಿ ಕಾಲದಲ್ಲಿ ಎಲ್ಲರ ಸೃಷ್ಟಿಗೆ ಕೇವಲ ರಜೋ ಗುಣ ಸಾಕು. ಮಹಾಪ್ರಳಯ ಕಾಲದಲ್ಲಿ ಎಲ್ಲರ ಲಯಕ್ಕೆ ತಮೋಗುಣ ಒಂದೇ ಸಾಕು. ಹೀಗೆ ಕ್ರಮವಾಗಿಯೂ ಗ್ರಹಣ ಮಾಡುತ್ತಾನೆ.

★★★

ಸತ್ವಾದಿ ಗುಣಬದ್ಧನಾಗಿ ಈಶ್ವರನೆ ಜೀವನಾಗುತ್ತಾನೆ ಏಕೆಂದರೆ ಜೀವೇಶ್ವರ

ಭೇದದ ವಿಷಯದಲ್ಲಿ ಪ್ರಮಾಣವಿಲ್ಲ. ಆದರಿಂದ ಪರಮಾತ್ಮ ನಿರ್ಗುಣ ಹೇಗೆ? ಎಂಬ ಪ್ರಶ್ನೆ ಮಾಡಿಕೊಂಡು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಕಾರ್ಯಕಾರಣಕರ್ತೃತ್ವೇ ದ್ರವ್ಯಜ್ಞಾನಕ್ರಿಯಾಶ್ರಯಾಃ ।
ಬಧ್ನಂತಿ ನಿತ್ಯದಾ ಮುಕ್ತಂ ಮಾಯಿನಂ ಪುರುಷಂ ಗುಣಾಃ ॥ ೧೯ ॥

ಸ್ವತಃ ಜಡೇಂದ್ರಿಯ ರಹಿತನಾದ ನಿತ್ಯಜ್ಞಾನ ಸ್ವರೂಪನಾದ ಜೀವನನ್ನು ಸತ್ವರಜಸ್ತಮೋ ಗುಣಗಳು ಪರಮಾತ್ಮನ ಪ್ರೇರಣೆಯಿಂದ ಬಂಧಿಸುತ್ತವೆ. ತಮೋಗುಣವು ದ್ರವ್ಯದ ಅಂದರೆ ಶರೀರದ ಸಹಾಯದಿಂದ ಶಾರೀರ ವೇದನಾದಿ ಜನ್ಯ ದುಃಖಭೋಗ ತನ್ನದೆಂಬ ಅಭಿಮಾನ ಹುಟ್ಟಿಸುವ ಮೂಲಕ ಬಂಧಿಸುತ್ತದೆ. ಸತ್ವಗುಣವು ಜ್ಞಾನಗಳ ಅಂದರೆ ಜ್ಞಾನೇಂದ್ರಿಯಗಳ ಮತ್ತು ಮನಸ್ಸಿನ ಸಹಾಯದಿಂದ ವಿಷಯಜ್ಞಾನಜನ್ಯ ಸುಖಭೋಗದಲ್ಲಿ ಅಭಿಮಾನ ನೀಡಿ ಬಂಧಿಸುತ್ತದೆ. ರಜೋಗುಣವು ಕ್ರಿಯೆಗಳ ಅಂದರೆ ಕರ್ಮೇಂದ್ರಿಯಗಳ ಸಹಾಯದಿಂದ ಬಾಹ್ಯಕ್ರಿಯೆಗಳಿಗೆ ತಾನು ಕರ್ತನೆಂಬ ಅಭಿಮಾನ ಹುಟ್ಟಿಸಿ ಬಂಧಿಸುತ್ತದೆ. ಹೀಗೆ ತ್ರಿಗುಣಗಳು ಈಶ್ವರನ ಪ್ರೇರಣೆಯಿಂದ ಸ್ವತಃ ಜ್ಞಾನಾನಂದಮಯನಾದ ಜೀವನಿಗೆ ಸುಖದುಃಖಾದ್ಯಭಿಮಾನ ನೀಡಿ ಬಂಧಿಸುವುದರಿಂದ ಜೀವೇಶ್ವರರಿಗೆ ಭೇದ ಸತ್ಯ.

ಇಲ್ಲಿ ಹೇಳಿದ ತ್ರಿಗುಣಗಳ ಬಂಧಕತ್ವ ಪ್ರಮಾಣಸಿದ್ಧ ಎನ್ನುತ್ತಾರೆ—

ಜ್ಞಾನೇಂದ್ರಿಯೈಶ್ಚ ಮನಸಾ ಸತ್ವಂ ಬಧ್ನಾತಿ ಪೂರುಷಂ ।
ರಜಃ ಕರ್ಮೇಂದ್ರಿಯೈರ್ನಿತ್ಯಂ ಶರೀರೇಣ ತಮಸ್ತಥಾ ।
ಆಂತರಂ ಯತ್ತು ಕರ್ತೃತ್ವಂ ತತ್ ಸತ್ವೇನಾಭಿಮನ್ಯತೇ ।
ರಜಸಾ ತ್ವಭಿಮನ್ಯೇತ ಕರಣೈಃ ಕರ್ಮಕಾರಣೈಃ ।
ಶಾರೀರಂ ವೇದನಾದ್ಯಂ ತು ತಮಸಾ ಹ್ಯಭಿಮನ್ಯತೇ ।
ಅಕರ್ತಾ ಕರಣೈರ್ಹೀನಃ ಶರೀರೇಣ ವಿವರ್ಜಿತಃ ।
ನಿತ್ಯಜ್ಞಾನಸ್ವರೂಪೋಽಸೌ ಗುಣೈರೇವಾಭಿಮನ್ಯತೇ ।
ಏವಂ ಜೀವಃ ಪರೇಣೈವ ಪ್ರೇರಿತಃ ಸಂಸೃತಿಂ ವ್ರಜೇತ್ ।
ನ ಪರಃ ಸಂಸೃತಿಂ ಕ್ವಾಪಿ ಸ್ವಾತಂತ್ರ್ಯಾದಧಿಕತ್ವತಃ ।
ಏವಂ ಜೀವಪರೌ ಭಿನ್ನೌ ಕಿಮನ್ಯಚ್ಛ್ರೋತುಮಿಚ್ಛಸಿ ॥
ಇತಿ ಪಾದ್ಮೇ । ಮಾಯಿನಂ ಜ್ಞಾನಿನಂ ಸ್ವತಃ ॥

'ಜ್ಞಾನೇಂದ್ರಿಯಗಳಿಂದಲೂ ಮನಸ್ಸಿನಿಂಧಲೂ ಸತ್ವಗುಣವು ಜೀವನನ್ನು ಬಂಧಿ

ಸುತ್ತದೆ. ಕರ್ಮೇಂದ್ರಿಯಗಳಿಂದ ರಜೋಗುಣವು ಬಂಧಿಸುತ್ತದೆ. ಶರೀರದಿಂದ ತಮೋಗುಣವು ಬಂಧಿಸುತ್ತದೆ. ಅದು ಹೇಗೆಂದರೆ, ಸತ್ವಗುಣವು ಮನಸ್ಸಿನಲ್ಲಿ ಸುಖಾನುಭವರೂಪ ಕ್ರಿಯೆಗೆ ತಾನು ಕರ್ತನೆಂಬ ಅಭಿಮಾನವನ್ನು ಹುಟ್ಟಿಸುತ್ತದೆ. ಇದು ಕಾರಣಕರ್ತೃತ್ವ. ಕಾರಣವಾದ ಇಂದ್ರಿಯಗಳಿಂದ ವಿಷಯಾನುಭವ ಬಂದು ಅದರಿಂದ ಸುಖ ಭೋಕ್ತೃತ್ವ ಅಭಿಮಾನ. ರಜೋಗುಣವೂ ಕೂಡ ಕರ್ಮೇಂದ್ರಿಯ ರೂಪ ಕಾರಣಗಳಿಂದಲೆ ಗಮನಾದಿ ಕ್ರಿಯಾಕರ್ತೃತ್ವ ಅಭಿಮಾನವನ್ನು ನೀಡುತ್ತ ಬಂಧಿಸುತ್ತದೆ. ಅದರಿಂದ ಇದೂ ಕಾರಣಕರ್ತೃತ್ವಾಭಿಮಾನವೆ. ತಮೋಗುಣವು ಶರೀರದಲ್ಲಿ ಉಂಟಾಗುವ ವಾತಪಿತ್ತಾದಿ ಪ್ರಯುಕ್ತ ಕಾರ್ಯವಾದ ವೇದನೆಗಳಿಂದ ದುಃಖಾನುಭವ ಕರ್ತೃತ್ವಾಭಿಮಾನವನ್ನು ಹುಟ್ಟಿಸುತ್ತದೆ. ಇದೇ ಕಾರ್ಯಕರ್ತೃತ್ವಾಭಿಮಾನ. ಈ ಮೂರು ಬಗೆಯ ಬಂಧನವೂ ಜೀವನಿಗೆ ಸ್ವಾಭಾವಿಕವಲ್ಲ. ಸ್ವಭಾವತಃ ಅವನು ಜಡವಾದ ಇಂದ್ರಿಯಗಳಿಂದ ಜಡವಾದ ಶರೀರದಿಂದ ಯುಕ್ತನಲ್ಲ. ಅದರಿಂದ ಈ ಮೂರು ಬಗೆಯ ಕರ್ತೃತ್ವವೂ ಅವನಲ್ಲಿ ಸ್ವಭಾವತಃ ಇಲ್ಲ. 'ನಿತ್ಯದಾ ಮುಕ್ತಂ' ಎನ್ನುವುದರ ಅಭಿಪ್ರಾಯವಿದು. 'ಮಾಯಿನಂ' ಎಂಬಲ್ಲಿ ಮಾಯೆ ಎಂದರೆ ಜ್ಞಾನ. ಸ್ವರೂಪಭೂತವಾದ ಜ್ಞಾನದಿಂದ ಸದಾ ಯುಕ್ತನಾದವನು ಜೀವ. ಅವನನ್ನು ಈಶ್ವರಪ್ರೇರಣೆಯಿಂದ ಗುಣಗಳು ಅಭಿಮಾನದಲ್ಲಿ ಸಿಲುಕಿಸುತ್ತವೆ. ಹೀಗೆ ಜೀವ ಪರಮಾತ್ಮನ ಪ್ರೇರಣೆಯಿಂದಲೆ ಸಂಸಾರವನ್ನು ಹೊಂದುತ್ತಾನೆ. ಪರಮಾತ್ಮ ಸಂಸಾರದಲ್ಲಿ ಎಂದೂ ಬೀಳುವುದಿಲ್ಲ. ಏಕೆಂದರೆ ಅವನು ಸರ್ವೋತ್ತಮ, ಸ್ವತಂತ್ರ. ಹೀಗೆ ಜೀವ ಪರಮಾತ್ಮರು ಭಿನ್ನರು. ಇನ್ನೇನು ಕೇಳಬೇಕೆಂದು ಬಯಸುವಿ?' ಎಂದು ಪದ್ಮಪುರಾಣದಲ್ಲಿ ಹೇಳಿದೆ. ಅದರಿಂದ 'ಮಾಯಿನಂ' ಅಂದರೆ ಮಯಾವಿಯಾದ, ಅದ್ವೈತಿಗಳು ಹೇಳುವಂತೆ ಅವಿದ್ಯಾವಿಷಯನಾದ ಜೀವನನ್ನು ಅವಿದ್ಯಕವಾದ ಗುಣಗಳು ಬಂಧಿಸುತ್ತವೆ ಎಂದರ್ಥವಲ್ಲ. ಮಾಯೆ ಎಂದರೆ 'ಮಾಯಾ ವಯುನಂ ಜ್ಞಾನಂ' ಎಂದು ಕೋಶದಿಂದ ಜ್ಞಾನ ಎಂದರ್ಥ. ಮಾಯಿಯಾದ ಅಂದರೆ ನಿತ್ಯಜ್ಞಾನ ಸ್ವರೂಪನಾದ ಜೀವನನ್ನು ಸತ್ಯವಾದ ಪ್ರಾಕೃತ ಗುಣಗಳು ಬಂಧಿಸುತ್ತವೆ.

★★★

ತ್ರಿಗುಣಗಳಿಂದ ಜೀವನನ್ನು ಸಂಸಾರದಲ್ಲಿ ಬಂಧಿಸುವ ಪರಮಾತ್ಮ ಆ ತ್ರಿಗುಣಗಳಿಂದಲೆ ಅವನನ್ನು ಬಂಧಮುಕ್ತನನ್ನಾಗಿಯೂ ಮಾಡುತ್ತಾನೆ. ಅದರಿಂದ ಸರ್ವಥಾ ಜೀವೇಶ್ವರರಿಗೆ ಭೇದವೆ ಇದೆ ಎಂದು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ಸ ಏಷ ಭಗವಾನ್ ಲಿಂಗೈಸ್ತ್ರಿಭಿರೇತೈರಧೋಕ್ಷಜಃ ।
ಸ್ವಲಕ್ಷಿತಗತಿರ್ಬ್ರಹ್ಮನ್ ಸರ್ವೇಷಾಂ ಮಮ ಚೇಶ್ವರಃ ॥ ೨೦ ॥

ಬಂಧಕನಾದ ಆ ಪರಮಾತ್ಮನೆ ಪ್ರಸನ್ನನಾದರೆ, ಜೀವರ ಪ್ರಯತ್ನದಿಂದ

ಗೋಚರವಾಗದ ತನ್ನ ಸ್ವರೂಪವನ್ನು ಸೂಕ್ಷ್ಮ ಗುಣತ್ರಯಗಳಿಂದಲೆ ದರ್ಶನ ಮಾಡಿಸುತ್ತಾನೆ. ಅದರಿಂದ ಅವನು ಎಲ್ಲರಿಗೂ ನನಗೂ ಪ್ರಭುವಾಗಿದ್ದಾನೆ.

ಲಿಂಗೈರ್ಜ್ಞಾಪಕೈಃ ತ್ರಿಗುಣೈಃ । ಏತೈರ್ಲಿಂಗೈಃ
ಸ್ವಪ್ರಸಾದಾಜ್ಜೀವೇನ ಲಕ್ಷಿತ ಗತಿಃ ।
ಸ್ವಪ್ರಸಾದಾದಿಮಂ ಜೀವಃ ಪಶ್ಯೇತ್ ತೇನ ಸ್ವಲಕ್ಷಿತಃ ॥

ಇತಿ ಷಾಡ್ಗುಣ್ಯೇ ।

ಲಿಂಗೈಃ ಎಂದರೆ ಅನುಮಾಪಕವಾದ ಹೇತುಗಳಿಂದ ಎಂದರ್ಥವಲ್ಲ. ಏತೈಃ ಎಂದು ಬಂಧಕ ತ್ರಿಗುಣಗಳನ್ನು ಪರಾಮರ್ಶ ಮಾಡುವುದರಿಂದ ಪರಮಾತ್ಮ ಜ್ಞಾನವನ್ನು ಹುಟ್ಟಿಸುವ ಅವೇ ಗುಣತ್ರಯಗಳಿಂದ ಅಥವಾ ಗುಣತ್ರಯಾತ್ಮಕವಾದ ಶರೀರ ಇಂದ್ರಿಯ ಮನಸುಗಳಿಂದ ಎಂದರ್ಥ. 'ಏತೈರ್ಲಿಂಗೈಃ ಸ್ವಲಕ್ಷಿತಗತಿಃ' ಎಂದು ಅನ್ವಯ. ಸ್ವಲಕ್ಷಿತಗತಿಃ ಎಂದರೆ ಪರಮಾತ್ಮ ತಾನು ಕಂಡ ತನ್ನ ಸ್ವರೂಪ ಎಂದರ್ಥವಲ್ಲ. ಪರಮಾತ್ಮನ ಅನುಗ್ರಹದಿಂದ ಜೀವನು ತನ್ನ ಅಂದರೆ ಪರಮಾತ್ಮನ ಸ್ವರೂಪ ಕಾಣುತ್ತಾನೆ ಎಂದರ್ಥ. ಷಾಡ್ಗುಣ್ಯಗ್ರಂಥದ ಈ ವಚನ ಹೀಗೆ ಅರ್ಥ ಹೇಳಲು ಪ್ರಮಾಣವಾಗಿದೆ— 'ಪರಮಾತ್ಮನನ್ನು ಅವನ ಅನುಗ್ರಹದಿಂದ ಜೀವನು ನೋಡಬಲ್ಲ. ಅದರಿಂದ ಪರಮಾತ್ಮ ಸ್ವಲಕ್ಷಿತನೆನಿಸುತ್ತಾನೆ' ಎಂದು.

ತ್ರಿಗುಣಗಳಿಂದ ಜೀವನು ಪರಮಾತ್ಮನ ಸ್ವರೂಪವನ್ನು ತಿಳಿಯುವುದೆಂದರೆ ಹೀಗೆ— ಸ್ಥೂಲತ್ರಿಗುಣಗಳು ಹಿಂದೆ ಹೇಳಿದಂತೆ ಸುಖದುಃಖ ಭೋಗ ಕರ್ತೃತ್ವಾಭಿಮಾನ ಹುಟ್ಟಿಸಿ ಬಂಧಕವೆನಿಸಿದರೂ ಸೂಕ್ಷ್ಮತ್ರಿಗುಣಗಳು ಮೋಚಕ ವೆನಿಸುವುವು. ಪರಮಾತ್ಮನ ಅನುಗ್ರಹವಾದರೆ ಅವನ ಪ್ರೇರಣೆಯಿಂದ ಸೂಕ್ಷ್ಮ ಸತ್ವಗುಣವು ಆರು ಜ್ಞಾನೇಂದ್ರಿಯಗಳ ಮೂಲಕ ಪರಮಾತ್ಮನ ಬಗ್ಗೆ ಶ್ರವಣಾದಿಜ್ಞಾನ ಉಂಟುಮಾಡುತ್ತದೆ. ಸೂಕ್ಷ್ಮ ರಜೋಗುಣವು ಕರ್ಮೇಂದ್ರಿಯಗಳ ಮೂಲಕ ಹರಿಪ್ರೀತ್ಯರ್ಥ ಕರ್ಮಗಳನ್ನು ಮಾಡಿಸಿ ಅಂತಃಕರಣ ಶುದ್ಧಿದ್ವಾರಾ ಪರಮಾತ್ಮ ತತ್ವಜ್ಞಾನಕ್ಕೆ ಕಾರಣವಾಗುತ್ತದೆ. ಸೂಕ್ಷ್ಮ ತಮೋಗುಣವೂ ಕೂಡ ಶರೀರದಲ್ಲಿ ಹರಿಪ್ರೀತಿ ಕಾರಣವಾದ ಉಪವಾಸಾದಿ ದುಃಖ ಉಂಟುಮಾಡಿ ಪಾಪಪರಿಹಾರ ಪುಣ್ಯಪ್ರಾಪ್ತಿದ್ವಾರಾ ತತ್ವಜ್ಞಾನಕ್ಕೇ ಕಾರಣವಾಗುತ್ತದೆ.

ಅಥವಾ ಪರಮಾತ್ಮನ ಅನುಗ್ರಹವಿದ್ದರೆ ತ್ರಿಗುಣಾತ್ಮಕವಾದ ಶರೀರ ಇಂದ್ರಿಯ ಮನಸ್ಸುಗಳೇ ಮೇಲೆ ಹೇಳಿದಂತೆ ಮೋಚಕವೆನಿಸಬಹುದು ಎಂದರ್ಥ.

★★★

ಕಾಲ ಕರ್ಮ ಸ್ವಭಾವ ಪ್ರಕೃತಿಗಳನ್ನು ಸಾಧನವಾಗಿ ಬಳಸಿಕೊಂಡೇ ಪರಮಾತ್ಮ

ಸೃಷ್ಟ್ಯಾದಿಗಳನ್ನು ನಡೆಸುವುದಾದರೆ ಅವನ ಸ್ವಾತಂತ್ರ್ಯಕ್ಕೆ ಭಂಗ ಬರುವುದಿಲ್ಲವೆ ಎಂದು ಪ್ರಶ್ನೆ ಮಾಡಿಕೊಂಡು ಅದಕ್ಕೆ ಸಮಾಧಾನವನ್ನು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ಕಾಲಂ ಕರ್ಮ ಸ್ವಭಾವಂ ಚ ಮಾಯೇಶೋ ಮಾಯಯಾ ಸ್ವಯಾ ।
ಆತ್ಮನ್ ಯದೃಚ್ಛಯಾ ಪ್ರಾಪ್ತಂ ವಿಬುಭೂಷುರುಪಾದದೇ ॥ ೨೧ ॥

ಪರಮಾತ್ಮ ತಾನು ಎಲ್ಲವನ್ನೂ ಸೃಜಿಸಿ ಅವುಗಳೊಳಗೆ ಅನೇಕರೂಪಗಳಿಂದ ಪ್ರೇರಕನಾಗಿ ಪ್ರವೇಶಿಸಲು ಬಯಸಿ ತನ್ನಿಚ್ಛೆಯಿಂದಲೆ ತನ್ನಲ್ಲಿ ನೆಲೆಸಿರುವ ಕಾಲ ಕರ್ಮ ಪ್ರಕೃತಿಗಳನ್ನು ತನ್ನ ಶಕ್ತಿಯಿಂದಲೆ ಸೃಷ್ಟಿಗೆ ಬಳಸಿಕೊಂಡ ಅಂದರೆ ಅವುಗಳೊಳಗೆ ಪ್ರವೇಶಿಸಿ ಸೃಷ್ಟಿಗೆ ಪ್ರೇರಿಸಿದ.

ಸ್ವಯಾ ಮಾಯಯಾ ಸ್ವಶಕ್ತ್ಯಾ ।
ಯತ್ರಾನ್ಯ ಹೇತ್ವಭಾವಃ ಸ್ಯಾದೀಶ್ವರೇಚ್ಛಾದಿನಾ ವಿನಾ ।
ತದಿಚ್ಛಾ ಹಿ ಯದೃಚ್ಛಾ ಸ್ಯಾದತಸ್ತತ್ರ ಯದೃಚ್ಛಯಾ ॥
ಇತಿ ಬ್ರಹ್ಮತರ್ಕೇ ।

ಕಾಲಕರ್ಮಸ್ವಭಾವಾದಿ ನಿತ್ಯಯೇಶೇಚ್ಛಯಾ ಸದಾ ।
ಪ್ರಾಪ್ತಮೇವ ವಿಶೇಷೇಣ ಸೃಷ್ಟ್ಯಾದಾವುನ್ನಯತ್ಯಜಃ । ಇತಿ ಚ ।

ವಿಬುಭೂಷುಃ ಬಹುಧಾ ಬುಭೂಷುಃ ।
ಈಶೋ ಬಹ್ವೀಃ ಪುರಃ ಸೃಷ್ಟ್ವಾ ತತ್ರೈವ ಬಹುರೂಪತಾಂ ।
ತತ್ತನ್ನಿಯಾಮಕತಯಾ ಪ್ರಾಪ್ತುಂ ಕಾಲಾದ್ಯುಪಾದದೇ ॥ ಇತಿ ಚ ।

'ಸ್ವಯಾ ಮಾಯಯಾ' ಎಂದರೆ ಸ್ವಸಾಮರ್ಥ್ಯದಿಂದ ಎಂದರ್ಥ. ಅನಿರ್ವಚನೀಯವಾದ ಮಾಯೆಯಿಂದ ಎಂದರ್ಥವಲ್ಲ.

ಯದೃಚ್ಛಯಾ ಎಂದರೆ ವಲ್ಲಭಾಚಾರ್ಯರು ಹೇಳುವಂತೆ ಆಕಸ್ಮಿಕವಾಗಿ ಎಂದರ್ಥವಲ್ಲ. 'ಎಲ್ಲಿ ಪರಮಾತ್ಮನ ಇಚ್ಛಾಜ್ಞಾನಾದಿಗಳು ಹೊರತು ಬೇರೆ ಯಾವ ದೃಷ್ಟಕಾರಣವೂ ಇರುವುದಿಲ್ಲವೋ ಅಲ್ಲಿ ಯದೃಚ್ಛೆಯಿಂದ ಆಯಿತೆಂದು ಪ್ರಯೋಗ. ಏಕೆಂದರೆ ಪರಮಾತ್ಮನ ಇಚ್ಛಾದಿಗಳೇ ಯದೃಚ್ಛಾಶಬ್ದಾರ್ಥ' ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. 'ಕಾಲ ಕರ್ಮ ಸ್ವಭಾವ ಪ್ರಕೃತಿ ಮುಂತಾದುವು ನಿತ್ಯವಾದ ಪರಮಾತ್ಮನ ಇಚ್ಛೆಯಿಂದ ಪರಮಾತ್ಮನಲ್ಲಿ ಇದ್ದೇ ಇವೆ. ಸೃಷ್ಟ್ಯಾದಿಗಳಿಗೆ ಉನ್ಮುಖವಾಗುವಂತೆ ಅವುಗಳೊಳಗೆ ನಿಂತು ವಿಶೇಷವಾಗಿ ಪರಮಾತ್ಮ ಪ್ರೇರಿಸುತ್ತಾನೆ' ಎಂದೂ ಹೇಳಿದೆ. ವಿಬುಭೂಷುಃ ಎಂದರೆ ಬಹುರೂಪವನ್ನು ತಾಳಲು ಬಯಸಿ ಎಂದರ್ಥ. 'ಪರಮಾತ್ಮ

ಬ್ರಹ್ಮಾದಿ ಬಹುಜೀವರ ಬಹುಶರೀರಗಳನ್ನು ಸೃಜಿಸಿ ಅವುಗಳೊಳಗೇ ಬಹುರೂಪದಿಂದ ನಿಯಾಮಕನಾಗಿ ಪ್ರವೇಶಿಸುವುದಕ್ಕಾಗಿ ಮೊದಲಿಗೆ ಕಾಲ ಪ್ರಕೃತಿ ಮುಂತಾದುವನ್ನು ಬಹುಶರೀರ ಸೃಷ್ಟಿಗಾಗಿ ಪ್ರೇರಿಸಿದನೆ'ಂದೂ ಹೇಳಿದೆ.

★★★

ಕಾಲಾದಿಗಳಿಂದ ಮಹತ್ತತ್ತ್ವ ಸೃಷ್ಟಿಯಾಯಿತೆಂದು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ಕಾಲಾದ್ ಗುಣವ್ಯತಿಕರಾತ್ ಪರಿಣಾಮ ಸ್ವಭಾವತಃ ।
ಕರ್ಮಣೋ ಜನ್ಮ ಮಹತಃ ಪುರುಷಾಧಿಷ್ಠಿತಾದಭೂತ್ ॥ ೨೨ ॥

ಕಾಲ, ಗುಣತ್ರಯ ವೈಷಮ್ಯ, ಪ್ರಕೃತಿಯ ಪರಿಣಾಮಸ್ವಭಾವ ಮತ್ತು ಬ್ರಹ್ಮನ ಜನನಕ್ಕೆ ಕಾರಣವಾದ ಅದೃಷ್ಟ ಇವೆಲ್ಲವುಗಳನ್ನೂ ಪರಮಾತ್ಮ ಒಳಗೆ ನಿಂತು ಪ್ರೇರಿಸಿದ್ದರಿಂದ ಬ್ರಹ್ಮನ ಶರೀರವಾದ ಮಹತ್ತತ್ತ್ವ ಹುಟ್ಟಿತು.

ಇಲ್ಲಿ 'ಕಾಲಾದ್ ಗುಣವ್ಯತಿಕರಃ ಪರಿಣಾಮಃ ಸ್ವಭಾವತಃ' ಎಂದು ಶ್ರೀಧರಾದಿ ಗಳ ಪಾಠ. ಕಾಲದಿಂದ ಗುಣವೈಷಮ್ಯ. ಸ್ವಭಾವದಿಂದ ಪರಿಣಾಮ. ಅದೃಷ್ಟದಿಂದ ಮಹತ್ತತ್ತ್ವದ ಉತ್ಪತ್ತಿಃ. ಇವು ಮೂರು ಈಶ್ವರ ಪ್ರೇರಣೆ ಯಿಂದಾಯಿತು' ಎನ್ನುತ್ತಾರೆ. ಇದು ಷಾಡ್ಗುಣ್ಯಗ್ರಂಥಕ್ಕೆ ಅನುಗುಣವಲ್ಲ—

ಪ್ರಕೃತೇಃ ಪರಿಣಾಮಸ್ವಭಾವತಃ ।
ಗುಣಕಾಲ ಸ್ವಭಾವೇಭ್ಯ ಈಶೇನಾಧಿಷ್ಠಿತತ್ವತಃ ।
ಜಗದಾದಿ ಮಹತ್ತತ್ವಮಭೂತ್ ತಸ್ಯೇಚ್ಛಯಾ ಹರೇಃ ।
ಇತಿ ಷಾಡ್ಗುಣ್ಯೇ ।

'ಪರಿಣಾಮಸ್ವಭಾವತಃ' ಎಂದರೆ ಪ್ರಕೃತಿಯ ಪರಿಣಾಮಸ್ವಭಾವದಿಂದ ಎಂದರ್ಥ. ಏಕೆಂದರೆ ಕಾಲ ಕರ್ಮಗಳು ಕೇವಲ ನಿಮಿತ್ತಕಾರಣಗಳು, ಪರಿಣಾಮಿ ಕಾರಣಗಳಲ್ಲ.

ಈ ಶ್ಲೋಕದ ಅರ್ಥವನ್ನು ಷಾಡ್ಗುಣ್ಯಗ್ರಂಥದ ಈ ವಚನ ಹೇಳುತ್ತದೆ—'ಗುಣ, ಕಾಲ ಮತ್ತು ಪ್ರಕೃತಿಸ್ವಭಾವಗಳನ್ನು ಪರಮಾತ್ಮ ಒಳಗೆ ನಿಂತು ಪ್ರೇರಿಸಿದಾಗ ಅವನ ಇಚ್ಛೆಯಿಂದ ಜಗತ್ತಿಗೆ ಮೂಲಕಾರಣವಾದ ಮಹತ್ತತ್ತ್ವ ಜನಿಸಿತು' ಎಂದು.

★★★

ಮಹತ್ತತ್ತ್ವದಿಂದ ಅಹಂಕಾರತತ್ವದ ಉತ್ಪತ್ತಿಯನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಮಹತಸ್ತು ವಿಕುರ್ವಾಣಾತ್ ರಜಃಸತ್ತ್ವೋಪಬೃಂಹಿತಾತ್ ।
ತಮಃಪ್ರಧಾನಸ್ತ್ವಭವದ್ ದ್ರವ್ಯಜ್ಞಾನಕ್ರಿಯಾತ್ಮಕಃ ॥ ೨೩ ॥

ಸತ್ವಯುಕ್ತ ರಜಸ್ಸಿನಿಂದ ಪೂರ್ಣವಾದ ಮಹತ್ತತ್ತ್ವ ಪರಿಣಾಮಗೊಂಡಾಗ ಪಂಚಭೂತ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಜನಕವಾದ ಅಹಂಕಾರತತ್ವ ಹುಟ್ಟಿತು. ಅಹಂಕಾರತತ್ವದಲ್ಲಿ ಮಹತ್ತತ್ತ್ವಕ್ಕಿಂತ ಒಂದು ವೈಶಿಷ್ಟ್ಯವೇನೆಂದರೆ ಮಹತ್ತತ್ತ್ವದಲ್ಲಿ ತಮಸ್ಸು ಸತ್ವಕಾರ್ಯಕ್ಕೆ ಎಂದೂ ಪ್ರತಿಬಂಧಕವಾಗುವುದಿಲ್ಲ, ಅಹಂಕಾರದಲ್ಲಿ ಪ್ರತಿಬಂಧಕವಾಗುತ್ತದೆ ಎಂದು.

ಇಲ್ಲಿ ಶ್ರೀಧರಾದಿವ್ಯಾಖ್ಯಾನಗಳಲ್ಲಿ ದ್ರವ್ಯ ಎಂದರೆ ಪಂಚಭೂತಗಳು, ಜ್ಞಾನವೆಂದರೆ ದೇವತೆಗಳು, ಕ್ರಿಯೆ ಎಂದರೆ ಎಲ್ಲ ಇಂದ್ರಿಯಗಳು ಎಂದಿದೆ. ಇದಕ್ಕೆ ಪ್ರಮಾಣವಿಲ್ಲ.

ಭೂತಾನಿ ದ್ರವ್ಯನಾಮಾನಿ ಜ್ಞಾನಂ ಜ್ಞಾನೇಂದ್ರಿಯಾಣ್ಯಪಿ ।
ಕ್ರಿಯಾಂ ಕರ್ಮೇಂದ್ರಿಯಾಣ್ಯಾಹುಸ್ತನ್ಮೂಲತ್ವಾದಹಂ ತ್ರಿಧಾ ॥

ಇತಿ ಗಾರುಡೇ ।

ದ್ರವ್ಯಜ್ಞಾನ ಕ್ರಿಯಾತ್ಮಕಃ ಎಂಬಲ್ಲಿ ದ್ರವ್ಯ ಎಂದರೆ ಪಂಚಭೂತಗಳು, ಜ್ಞಾನ ಎಂದರೆ ಜ್ಞಾನೇಂದ್ರಿಯಗಳು. ಕ್ರಿಯೆ ಎಂದರೆ ಕರ್ಮೇಂದ್ರಿಯಗಳು. ಇವು ಮೂರನ್ನು ಉತ್ಪಾದಿಸುವ ಅಹಂಕಾರ ಮೂರು ಬಗೆಯಾಗಿದೆ ಎಂದು ಗರುಡಪುರಾಣದಲ್ಲಿ ಹೇಳಿದೆ.

★★★

ಅಹಂಕಾರತತ್ವ ಮೂರು ಬಗೆಯಾಗಿದೆ ಎಂದು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಸೋಽಹಂಕಾರ ಇತಿ ಪ್ರೋಕ್ತೋ ವಿಕುರ್ವನ್ ಸಮಭೂತ್ ತ್ರಿಧಾ ।
ವೈಕಾರಿಕಸ್ತೈಜಸಶ್ಚ ತಾಮಸಶ್ಚೇತಿ ಯದ್ಭಿದಾ ॥
ದ್ರವ್ಯಶಕ್ತಿಃ ಕ್ರಿಯಾಶಕ್ತಿರ್ಜ್ಞಾನಶಕ್ತಿರಿತಿ ಪ್ರಭೋಃ ॥ ೨೪ ॥

ಅಹಂಕಾರತತ್ವ ಪರಿಣಾಮಗೊಂಡು ಮೂರು ಬಗೆಯಾಯಿತು, ವೈಕಾರಿಕ ತೈಜಸ ತಾಮಸ ಎಂದು. ಅವುಗಳ ಲಕ್ಷಣಗಳು ದ್ರವ್ಯಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿ ಎಂದು.

ವಿಶಿಷ್ಟಕಾರ್ಯ ಶಕ್ತಿತ್ವಾದ್‌ದೇವಾ ವೈಕಾರಿಕಾಃ ಸ್ಮೃತಾಃ ।
ಅತಿಜಾಜ್ವಲ್ಯಮಾನತ್ವಾತ್ ತೈಜಸಾನೀಂದ್ರಿಯಾಣ್ಯಪಿ ।
ತಾಮಸಾನಿ ತು ಭೂತಾನಿ ಯತಸ್ತಾವನ್ನ ತೂಭಯಂ ॥

ಇತಿ ಪಾದ್ಮೇ ।

ಜ್ಞಾನೇಂದ್ರಿಯಾಣಾಂ ದೇವಾನಾಂ ಜ್ಞಾನಶಕ್ತಿರುದೀರಿತಾ ।
ಕ್ರಿಯಾ ಕರ್ಮೇಂದ್ರಿಯಾಣಾಂ ಚ ಭೂತಾನಾಂ ದ್ರವ್ಯಶಕ್ತಿತಾ ॥

ಇತಿ ಸ್ಕಾಂದೇ ।

ದ್ರವ್ಯಂ ತು ದ್ರವಣಪ್ರಾಪ್ಯಂ ದ್ವಯೋರ್ವಿವದಮಾನಯೋಃ ।
ಪೂರ್ವಂ ವೇಗಾಭಿಸಂಬಂಧಾದಾಕಾಶಸ್ತು ಪ್ರದೇಶತಃ ।

ಇತಿ ಪ್ರಕಾಶಸಂಹಿತಾಯಾಂ ।

'ಜ್ಞಾನ ಮತ್ತು ಕರ್ಮಗಳೆಂಬ 'ವಿಶಿಷ್ಟ ಕಾರ್ಯಕಾರಿ'ಗಳಾದ್ದರಿಂದ ಇಂದ್ರಿಯಾಭಿಮಾನಿ ದೇವತೆಗಳು 'ವೈಕಾರಿಕ'ರೆನಿಸುತ್ತಾರೆ. ಅವರನ್ನು ಹುಟ್ಟಿಸುವ ಅಹಂಕಾರಕ್ಕೂ ಅದೇ ಹೆಸರು. ಇಂದ್ರಿಯಗಳು ಅತಿ ಜಾಜ್ವಲ್ಯಮಾನವಾಗಿರುವುದರಿಂದ ಅವುಗಳಿಗೆ ತೈಜಸಗಳೆಂದು ಹೆಸರು. ಅವುಗಳನ್ನು ಹುಟ್ಟಿಸುವ ಅಹಂಕಾರಕ್ಕೂ ಅದೇ ಹೆಸರು. ಪಂಚಭೂತಗಳಿಗೆ ಈ ಎರಡೂ ವೈಶಿಷ್ಟ್ಯಗಳಿಲ್ಲದಿರುವುದರಿಂದ ತಾಮಸ ಎಂದು ಹೆಸರು. ಅವುಗಳನ್ನು ಹುಟ್ಟಿಸುವ ಅಹಂಕಾರಕ್ಕೂ ಅದೇ ಹೆಸರು. ಹೀಗೆ ಮೂರು ಬಗೆಯ ಅಹಂಕಾರಗಳಿಗೆ ಮೂರು ಹೆಸರುಗಳೆ'ಂದು ಪದ್ಮಪುರಾಣ ಹೇಳಿದೆ.

ಜ್ಞಾನೇಂದ್ರಿಯಗಳಿಗೂ ಅವುಗಳ ಅಭಿಮಾನಿ ದೇವತೆಗಳಿಗೂ ಜ್ಞಾನ ಉಂಟುಮಾಡುವ ಶಕ್ತಿ ಬರುವುದು ವೈಕಾರಿಕಾಹಂಕಾರದಿಂದ. ಕರ್ಮೇಂದ್ರಿಯಗಳಿಗೂ ಅವುಗಳ ಅಭಿಮಾನಿಗಳಿಗೂ ಕ್ರಿಯೆ ಉಂಟು ಮಾಡುವ ಶಕ್ತಿ ಬರುವುದು ತೈಜಸಾಹಂಕಾರದಿಂದ. ಪಂಚಭೂತಗಳಿಗೂ ಅವುಗಳ ಅಭಿಮಾನಿಗಳಿಗೂ ಶಕ್ತಿ ಬರುವುದು ತಾಮಸಾಹಂಕಾರದಿಂದ. ಆಯಾ ಶಕ್ತಿಗಳನ್ನು ಉಂಟುಮಾಡುವ ಸಾಮರ್ಥ್ಯವೇ ಮೂರು ಬಗೆಯ ಅಹಂಕಾರಗಳ ಲಕ್ಷಣಗಳು' ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

ಜ್ಞಾನೇಂದ್ರಿಯಗಳಲ್ಲಿ ಜ್ಞಾನೋತ್ಪಾದನಶಕ್ತಿ ಇರುವಂತೆ ಕರ್ಮೇಂದ್ರಿಯಗಳಲ್ಲಿ ಕರ್ಮೋತ್ಪಾದನ ಶಕ್ತಿ ಇರುವಂತೆ ಪಂಚಭೂತಗಳಲ್ಲಿ ಏನು ಶಕ್ತಿ ಇದೆ ಎಂದರೆ ಪ್ರಕಾಶಸಂಹಿತೆ ಹೇಳುತ್ತದೆ— 'ಇಬ್ಬರು ನಾ ಮೊದಲು ನಾ ಮೊದಲೆಂದು ಸ್ಪರ್ಧೆಯಿಂದ ವೇಗದಿಂದ ಧಾವಿಸಿ ಮುಟ್ಟಬಹುದಾದ ವಸ್ತು ದ್ರವ್ಯವೆನಿಸುತ್ತದೆ.

ಪಂಚಭೂತಗಳಿಗೆ ದ್ರವ್ಯಶಕ್ತಿ ಎಂದರೆ, ಇದುವೇ. ಇದನ್ನು ಅವುಗಳಲ್ಲಿ ಉಂಟು ಮಾಡುವ ಅಹಂಕಾರವೆ ತಾಮಸವೆನಿಸುತ್ತದೆ. ಪಂಚಭೂತಗಳಲ್ಲದೆ ಅವ್ಯಾಕೃತಾಕಾಶಕ್ಕೂ ಕೆಲವೆಡೆ ದ್ರವ್ಯಶಕ್ತಿ ಇದೆ ಎನ್ನುವುದುಂಟು. ಆದರೆ ಅವ್ಯಾಕೃತಾಕಾಶ ಸರ್ವವ್ಯಾಪ್ತವಾಗಿರುವುದರಿಂದ ನಾವು ಒಂದು ಕಡೆಯಿಂದ ಧಾವಿಸಿ ಬಂದು ಮುಟ್ಟಬಹುದಾದ ವಸ್ತುವಲ್ಲ. ಆದರೂ ಅದರ ಒಂದು ಭಾಗವನ್ನು ಇನ್ನೊಂದು ಭಾಗದಿಂದ ಬಂದು ಮುಟ್ಟಬಹುದು. ಅದರಿಂದ ಅದೂ ದ್ರವ್ಯವೆ', ಎಂದು.

★★★

ತಾಮಸಾಹಂಕಾರದಿಂದ ಪಂಚಭೂತಗಳ ಉತ್ಪತ್ತಿಯನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ. ಮೊದಲಿಗೆ ಆಕಾಶೋತ್ಪತ್ತಿ—

ತಾಮಸಾದಪಿ ಭೂತಾದೇರ್ವಿಕುರ್ವಾಣಾದಭೂನ್ನಭಃ ।
ತಸ್ಯ ಮಾತ್ರಾಗುಣಃ ಶಬ್ದೋ ಲಿಂಗಂ ಯದ್ ದ್ರಷ್ಟೃದೃಶ್ಯಯೋಃ ॥ ೨೫ ॥

ಭೂತಕಾರಣವಾದ ತಾಮಸಾಹಂಕಾರದ ಪರಿಣಾಮದಿಂದ ಮೊದಲಿಗೆ ಶಬ್ದ ಗುಣವೂ ಬಳಿಕ ಆಕಾಶವೂ ಹುಟ್ಟಿತು. ಆಕಾಶದಲ್ಲಿರುವ ಪಂಚೇಂದ್ರಿಯ ಗೋಚರವಾದ ಗುಣವೆಂದರೆ ಶಬ್ದ. ಅದು ಪರಮಾತ್ಮನನ್ನೂ ಜಗತ್ತನ್ನೂ ಪ್ರತಿಪಾದಿಸುವ ವರ್ಣಗಳಿಗೆ ವ್ಯಂಜಕವಾಗುವುದು.

ಪಂಚೇಂದ್ರಿಯಾಭಿಮೇಯತ್ವಾನ್ಮಾತ್ರಾಗುಣ ಇತೀರಿತಃ ।
ಇತಿ ಮಾತ್ಸ್ಯೇ ।
ಶಬ್ದೇನೈವ ಪರೋ ದ್ರಷ್ಟಾ ಜ್ಞಾಯತೇ ಜಗದೇವ ಚ ॥
ಇತಿ ವಿಷ್ಣುಸಂಹಿತಾಯಾಂ ।

ಪಂಚೇಂದ್ರಿಯಗಳಿಂದ ತಿಳಿಯಬಹುದಾದ ಗುಣವನ್ನು ಮಾತ್ರಾಗುಣ ಎನ್ನುತ್ತಾರೆ ಎಂದು ಮತ್ಸ್ಯಪುರಾಣ ಹೇಳಿದೆ.

'ಸರ್ವಸಾಕ್ಷಿಯಾದ ಭಗವಂತನನ್ನೂ ಸರ್ವ ದೃಶ್ಯವಾದ ಪ್ರಪಂಚವನ್ನೂ ಶಬ್ದದಿಂದಲೇ ತಿಳಿಯಬಹುದು' ಎಂದು ವಿಷ್ಣುಸಂಹಿತೆ ಹೇಳಿದೆ.

ಮುಂದಿನ ಶ್ಲೋಕದಲ್ಲಿ ಹೇಳುವಂತೆ ಸ್ಪರ್ಶಾದಿ ಗುಣಗಳಲ್ಲಿಯೂ ಮೂಲಕಾರಣ ರೂಪದಿಂದ ಶಬ್ದ ಸೇರಿರುವುದರಿಂದ ಶಬ್ದವು ಐದೂ ಇಂದ್ರಿಯಗಳಿಂದ ಜ್ಞೇಯವಾಗಿದೆ. ಅದರಿಂದ ಶಬ್ದ ಪಂಚೇಂದ್ರಿಯ ಗೋಚರಗುಣ ಎಂದುದು ಅರ್ಥಪೂರ್ಣವೇ ಆಗಿದೆ.

ಆಕಾಶಗುಣವಾದ ಧ್ವನ್ಯಾತ್ಮಕ ಶಬ್ದವೂ ವರ್ಣಗಳಿಗೆ ವ್ಯಂಜಕವಾದ್ದರಿಂದ ವರ್ಣದ್ವಾರಾ ಅದೂ ಪರಾಪರತತ್ವ ಬೋಧಕವೆಂದು 'ಲಿಂಗಂ ಯದ್ ದ್ರಷ್ಟೃದೃಶ್ಯಯೋಃ' ಎಂಬುದರ ಅಭಿಪ್ರಾಯವಾಗಿದೆ.

'ಆನೆಯನ್ನು ಕಂಡೆನೆಂದು ಒಬ್ಬನು ಮರೆಯಲ್ಲಿ ನಿಂತು ನುಡಿದರೆ ಆ ಶಬ್ದದಿಂದ ಆನೆಯನ್ನೂ ಆ ವ್ಯಕ್ತಿಯನ್ನೂ ತಿಳಿಯಬಹುದು. ಅದರಿಂದ ಶಬ್ದವು ದ್ರಷ್ಟೃ ದೃಶ್ಯಗಳೆರಡನ್ನೂ ತಿಳಿಸುತ್ತದೆ' ಎಂದು ಶ್ರೀಧರಾದಿಗಳ ವ್ಯಾಖ್ಯಾನ. ಇದು ಕ್ಲಿಷ್ಟ ಕಲ್ಪನೆ. ಆತ್ಮ ಅನಾತ್ಮಗಳ ಜ್ಞಾನ ಶಬ್ದದಿಂದಾಗುತ್ತದೆ ಎಂದು ವೀರರಾಘವ ವ್ಯಾಖ್ಯಾನ. ಇನ್ನೂ ಹೆಚ್ಚು ಸುಂದರವಾದ ವಿವರಣೆಯನ್ನು ವಿಷ್ಣು ಸಂಹಿತಾವಚನ ನೀಡಿರುವುದು ಮತ್ತು ಶ್ರೀಮದಾಚಾರ್ಯರು ತೋರಿಸಿರುವುದು ಇವರ ಗಮನಕ್ಕೆ ಬರಲಿಲ್ಲ!

★★★

ವಾಯುವಿನ ಉತ್ಪತ್ತಿಯನ್ನು ಹೇಳುತ್ತಾರೆ—

ನಭಸೋಽಥ ವಿಕುರ್ವಾಣಾದಭೂತ್ ಸ್ಪರ್ಶಗುಣೋಽನಿಲಃ ।
ಪರಾನ್ವಯಾಚ್ಛಬ್ದವಾಂಶ್ಚ ಪ್ರಾಣ ಓಜಃ ಸಹೋ ಬಲಂ ॥ ೨೬ ॥

ಆಕಾಶದ ಪರಿಣಾಮದಿಂದ ಸ್ಪರ್ಶಗುಣ ಉಳ್ಳ ವಾಯು ಹುಟ್ಟಿತು. ಅದರಲ್ಲಿ ಆಕಾಶವೂ ಉಪಾದಾನವಾಗಿ ಸೇರಿರುವುದರಿಂದ ಆಕಾಶಗುಣವಾದ ಶಬ್ದವೂ ಅದರಲ್ಲಿ ಇದೆ. ವಾಯುವಿನ ಸ್ವಾಭಾವಿಕ ಗುಣಗಳು ಪ್ರಾಣ ಓಜಸ್ ಸಹಸ್ ಮತ್ತು ಬಲ.

ಪ್ರಾಣ ಓಜಸ್ ಸಹಸ್ ಬಲಗಳೆಂದರೆ,

ಸರ್ವಚೇಷ್ಟಯಿತೃತ್ವಾತ್ತು ಪ್ರಾಣೋಽಭಿಭವಶಕ್ತಿತಃ ।
ಓಜಸ್ತ್ವನಭಿಭಾವ್ಯತ್ವಾತ್ ಸಹಶ್ಚ ಸ್ವೇಚ್ಛಯಾ ಕೃತೇಃ ।
ಬಲಂ ವಿಧಾರಕತ್ವಾಚ್ಚ ವಿಧೃತಿರ್ವಾಯುರುಚ್ಯತೇ ॥ ಇತಿ ಹಿ ಭಾರತೇ ।

ಎಲ್ಲರ ಶರೀರ ಚಟುವಟಿಕೆಗಳಿಗೆ ಪ್ರೇರಕನಾಗಿರುವುದು ಮುಖ್ಯಪ್ರಾಣನಲ್ಲಿರುವ ಪ್ರಾಣ ಎಂಬ ಗುಣ. ಎಲ್ಲರನ್ನೂ ಪರಾಭವಗೊಳಿಸುವ ಸಾಮರ್ಥ್ಯ ಓಜೋಗುಣ. ಇನ್ನೊಬ್ಬರಿಗೆ ಸೋಲದಿರುವುದು ಸಹೋಗುಣ. ತನ್ನಿಚ್ಛೆಯಂತೆ ಮಾಡುವ ಸಾಮರ್ಥ್ಯ ಬಲ ಎಂಬ ಗುಣ. ಪ್ರಪಂಚಧಾರಣ ಮಾಡುವ ಸಾಮರ್ಥ್ಯ ವಿಧೃತಿ ಎಂಬ ಗುಣ ಎಂದು ಮಹಾಭಾರತ ಹೇಳಿದೆ.

ಮಹಾಭಾರತದಲ್ಲಿ ಹೇಳಿರುವುದರಿಂದ ಭಾಗವತದಲ್ಲಿ 'ವಿಧೃತಿ' ಎಂಬ ಗುಣವೂ ವಿವಕ್ಷಿತವಾಗಿದೆ.

ಯದ್ಯಪಿ ಇಲ್ಲಿ ಪಂಚಭೂತಗಳಲ್ಲಿ ಒಂದಾದ ಜಡ ವಾಯುವಿನ ಉತ್ಪತ್ತಿಯನ್ನು ಹೇಳಲು ಹೊರಟಿದ್ದಾರೆ. ಪ್ರಾಣ ಓಜಸ್ಸು ಮುಂತಾದವು ಚೇತನನಾದ ಮುಖ್ಯಪ್ರಾಣನ ಗುಣಗಳು. ಆದರೆ ಭೂತದ ಪ್ರಸಂಗದಲ್ಲಿ ಅದೇ ಹೆಸರಿನ ಅದರ ಅಭಿಮಾನಿಯ ಗುಣಗಳನ್ನು ಹೇಳುತ್ತಿದ್ದಾರೆ ಎಂದಿಟ್ಟುಕೊಂಡರೆ ಅಸಂಗತಿ ಇಲ್ಲ.

ಇಂದ್ರಿಯ ಮನಸ್ಸು ಶರೀರಗಳಲ್ಲಿ ಓಜಸ್ ಸಹಸ್ ಬಲಗಳೆಂಬ ಗುಣಗಳು ಪ್ರಾಣವಾಯುವಿನಿಂದಾಗುತ್ತವೆ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಇದು ಕ್ಲಿಷ್ಟಕಲ್ಪನೆ.

★★★

ವೈಕಾರಿಕಾಹಂಕಾರದಿಂದ ಮನಸ್ಸಿನ ಮತ್ತು ದಶೇಂದ್ರಿಯಾಭಿಮಾನಿಗಳ ಉತ್ಪತ್ತಿ—

ವೈಕಾರಿಕಾನ್ಮನೋ ಜಜ್ಞೇ ದೇವಾ ವೈಕಾರಿಕಾ ದಶ ।
ದಿಗ್ವಾತಾರ್ಕಪ್ರಚೇತೋಽಶ್ವಿ ವಹ್ನೀಂದ್ರೋಪೇಂದ್ರಮಿತ್ರಕಾಃ ॥ ೩೦ ॥

ವೈಕಾರಿಕಾಹಂಕಾರದಿಂದ ಮನಸ್ಸು ಹುಟ್ಟಿತು ಮತ್ತು ಹತ್ತು ಮಂದಿ ದಶೇಂದ್ರಿಯಾಭಿಮಾನಿ ವೈಕಾರಿಕ ದೇವತೆಗಳೂ ಜನಿಸಿದರು. ಅವರು ಶ್ರೋತ್ರ ತ್ವಕ್ ಚಕ್ಷು ರಸನಾ ಘ್ರಾಣಗಳಿಗೆ ಕ್ರಮವಾಗಿ ದಿಗ್ದೇವತೆಗಳು, ವಾಯು, ಸೂರ್ಯ ವರುಣ ಅಶ್ವಿನಿಗಳು ಮತ್ತು ವಾಕ್‌ಪಾಣಿ ಪಾದ ಪಾಯು ಉಪಸ್ಥಗಳಿಗೆ ಕ್ರಮವಾಗಿ ಅಗ್ನಿ ಇಂದ್ರ ಉಪೇಂದ್ರ ಮಿತ್ರ ದಕ್ಷರು ಎಂದು ತಿಳಿಯಬೇಕು.

ಇಲ್ಲಿ ಉಪೇಂದ್ರನೆಂದರೆ ವಿಷ್ಣು. ಅವನು ಪಾದಾಭಿಮಾನಿ ಎಂದುದು ಹೇಗೆ ಕೂಡುತ್ತದೆ. ಜೀವಗೋಸ್ವಾಮಿಗೆ ಹೊರತು ಬೇರೆ ವ್ಯಾಖ್ಯಾನಕಾರರಿಗೆ ಈ ಸಮಸ್ಯೆಯೆ ಬರಲಿಲ್ಲ! ಹೀಗೆ ಹೇಳಬೇಕು—

ಅನಾದ್ಯನಂತೋಽಪಿ ಹರಿರ್ವೈಕಾರಿಕಗಣೇಷ್ವಜಃ ।
ಅವತೀರ್ಣಃ ಪದಾಂಗುಷ್ಠಮಧ್ಯಾಸ್ತೇ ವಿಶ್ವಭುಗ್ ವಿಭುಃ ।
ಪಾದದೇವಸ್ತು ಯಜ್ಞೋಽನ್ಯಸ್ತಂ ಪ್ರವಿಶ್ಯ ಹರಿಃ ಸ್ವಯಂ ।
ಸರ್ವಂ ವಿಧಾರಯನ್ ದೇಹೇ ವರ್ತತೇಽನಂತಶಕ್ತಿಧೃಕ್ ॥

ಇತಿ ವಹ್ನಿಪುರಾಣೇ ।

ಶ್ರೀಹರಿ ಜನನ ಮರಣಗಳಿಲ್ಲದವನಾದರೂ ವೈಕಾರಿಕಾಹಂಕಾರ ಜನ್ಯ ಶರೀರಿಗಳಾದ ಇಂದ್ರಿಯಾಭಿಮಾನಿ ದೇವತೆಗಳ ನಡುವೆ ತಾನೂ ಇದ್ದು ಪಾದಾಂಗುಷ್ಠದಲ್ಲಿ ಸರ್ವಪಾಲಕನಾಗಿದ್ದಾನೆ. ಹೇಗೆಂದರೆ ಪಾದಾಭಿಮಾನಿಯಾಗಿ

ಇನ್ನೊಬ್ಬ ಇಂದ್ರಪುತ್ರನಾದ ಯಜ್ಞನೆಂಬ ದೇವ ಇದ್ದಾನೆ. ಅವನನ್ನು ಪ್ರವೇಶಿಸಿ, ಸ್ವಯಂ ಎಲ್ಲವನ್ನೂ ಧರಿಸುತ್ತಲೇ, ಅನಂತಶಕ್ತಿಯುಳ್ಳ ಹರಿ ದೇಹದಲ್ಲಿ ನೆಲೆಸಿರುತ್ತಾನೆ.

ಜೀವಗೋಸ್ವಾಮಿ ವ್ಯಾಖ್ಯಾನ ಮಾತ್ರ ಹೀಗೇ ಹೇಳುತ್ತದೆ. ಉಳಿದವರಿಗೆ ಈ ಸಮಸ್ಯೆಯೇ ಇಲ್ಲ ತಾನೆ !

★★★

ತೈಜಸಾಹಂಕಾರದಿಂದ ಹತ್ತು ಇಂದ್ರಿಯಗಳೂ ಬುದ್ಧಿ ಪ್ರಾಣಗಳೂ ಹುಟ್ಟಿದುವು. ಜ್ಞಾನೇಂದ್ರಿಯಗಳಿಗೆ ಶಕ್ತಿ ಕೊಡುವುದು ಬುದ್ಧಿತತ್ತ್ವ. ಕರ್ಮೇಂದ್ರಿಯಗಳಿಗೆ ಶಕ್ತಿ ಕೊಡುವುದು ಪ್ರಾಣತತ್ತ್ವ. ಹೀಗೆ ಬಾಹ್ಯತತ್ತ್ವ ಸೃಷ್ಟಿಯಾದ ಬಳಿಕ ಆ ಎಲ್ಲ ತತ್ತ್ವಾಭಿಮಾನಿಗಳೂ ಸೇರಿ ಬ್ರಹ್ಮಾಂಡ ಸೃಷ್ಟಿ ಮಾಡಿದರು—

ತದಾ ಸಂಹತ್ಯ ಚಾನ್ಯೋನ್ಯಂ ಭಗವಚ್ಛಕ್ತಿಚೋದಿತಾಃ ।
ಸದಸತ್ತ್ವಮುಪಾದಾಯ ನೋ ಭಯಂ ಸಸೃಜುರ್ಹ್ಯದಃ ॥ ೩೩ ॥

ತತ್ತ್ವಗಳು ಭಗವಂತನ ಶಕ್ತಿಯಿಂದ ಪ್ರೇರಿತವಾಗಿ ಪರಸ್ಪರ ಸೇರಿ ಪಂಚಭೂತಗಳಿಂದ ಈ ಬ್ರಹ್ಮಾಂಡವನ್ನು ಸೃಷ್ಟಿಸಿದುವು. ಬ್ರಹ್ಮಾಂಡವೆ ನಮಗೆ ಸಂಸಾರಭಯಕ್ಕೆ ಕಾರಣವಾಗಿದೆ.

ಇಲ್ಲಿ 'ಸದಸತ್ತ್ವಂ ಉಪಾದಾಯ ನೋಭಯಂ' ಎಂಬುದಕ್ಕೆ ಸತ್ತ್ವ ಅಸತ್ತ್ವಗಳನ್ನು ಪ್ರತಿಯೋಗಿಯಾಗಿ ಗ್ರಹಿಸಿ 'ನೋಭಯಂ' ಅವೆರಡರ ಅಭಾವಗಳು ಸತ್ತ್ವಾಭಾವ ಅಸತ್ತ್ವಾಭಾವಗಳೆರಡು, ಅಂದರೆ ಪ್ರಪಂಚ ಅನಿರ್ವಚನೀಯ, ಮಿಥ್ಯಾ ಎಂದು ಅಪಾರ್ಥ ಪ್ರತೀತಿ ಉಂಟಾಗಬಹುದು. ಶ್ರೀಧರಾದಿ ವ್ಯಾಖ್ಯಾನಗಳು 'ಚೋಭಯಂ' ಎಂದು ಪಾಠವಿಟ್ಟುಕೊಂಡು ಸಮಷ್ಟಿ ವ್ಯಷ್ಟಿ ಎಂದು ಎರಡು ಬಗೆಯ ಶರೀರ ಎಂದು ಅರ್ಥೈಸಿವೆ. ವೀರರಾಘವ ವ್ಯಾಖ್ಯಾನದಲ್ಲಿ 'ನೋಭಯಂ' ಎಂದೇ ಪಾಠ. ಕಾರಣ ಕಾರ್ಯವೆರಡೂ ಅಲ್ಲದ ಬ್ರಹ್ಮಾಂಡ ಎಂದಿದೆ. ವಸ್ತುತಃ 'ನ ಉಭಯಂ' ಎಂದು ಪದಚ್ಛೇದವೆ ಅಲ್ಲ. 'ನಃ ಭಯಂ' ನಮಗೆ, ಸಂಸಾರಿ ಜೀವರಿಗೆ ಸಂಸಾರಭಯಕಾರಣ ಈ ಬ್ರಹ್ಮಾಂಡ ಎಂದರ್ಥ. ಸತ್ ಎಂದರೆ ವ್ಯಕ್ತವಾದ ಪೃಥಿವಿ ಅಪ್ ತೇಜಸ್ಸುಗಳು. ಅಸತ್ ಎಂದರೆ ಅವ್ಯಕ್ತವಾದ ಆಕಾಶ ವಾಯುಗಳು. ಈ ಪಂಚಭೂತಗಳನ್ನು ಉಪಾದಾನವಾಗಿ ಇಟ್ಟುಕೊಂಡು ಅವುಗಳ ಪರಿಣಾಮವಾದ ಬ್ರಹ್ಮಾಂಡವನ್ನು ತತ್ತ್ವಾಭಿಮಾನಿಗಳು ನಿರ್ಮಿಸಿದರು—

ಸದಸತ್ತ್ವಂ ವ್ಯಕ್ತಾವ್ಯಕ್ತತ್ವಂ । ನಃ ಭಯಂ । ಅದೋ ಬ್ರಹ್ಮಾಂಡಂ । ಬ್ರಹ್ಮಾಂಡಂ ಹಿ ವದಂತಿ ಜೀವಾನಾಂ ಭಯಕಾರಣಂ । ತತ್ರ ಹಿ ಸಂಸೃತಿಃ ।

ಆಕಾಶವಾಯೂ ತ್ವವ್ಯಕ್ತಾವಿತರೇಽಂಡೇ ಪ್ರಕಾಶಿತಾಃ ।
ತಥಾತ್ವಾದ್ ಬಾಹ್ಯಭೂತಾನಾಮಂಡಸ್ಥಾನಾಂ ಚ ಸಾ ಗತಿಃ ॥

ಇತಿ ಮಾತ್ಸ್ಯೇ ।

ಸದಸತ್ವವೆಂದರೆ ವ್ಯಕ್ತತ್ವ ಅವ್ಯಕ್ತತ್ವಗಳೆಂದರ್ಥ. ಧರ್ಮಿಪ್ರಧಾನ ನಿರ್ದೇಶ ದಿಂದ ವ್ಯಕ್ತವಾದ ಪೃಥಿವೀಜಲ ತೇಜಗಳು ಮತ್ತು ಅವ್ಯಕ್ತವಾದ ವಾಯು ಆಕಾಶಗಳು ಎಂದರ್ಥ. 'ನೋಭಯಂ' ಎಂಬಲ್ಲಿ ನಃ-ನಮಗೆ, ಭಯಂ- ಭಯಕಾರಣ ಎಂದು ಪದಚ್ಛೇದ. ಅದಃ ಎಂದರೆ ಈ ಬ್ರಹ್ಮಾಂಡ. ಬ್ರಹ್ಮಾಂಡವನ್ನು ಜೀವರಿಗೆ ಭಯಕಾರಣ ಎನ್ನುತ್ತಾರೆ ತಾನೆ? ಜನನ ಮರಣ ರೂಪದ ಸಂಸಾರ ಈ ಬ್ರಹ್ಮಾಂಡದೊಳಗೇ ಆಗುವುದು ತಾನೆ? ಮತ್ಸ್ಯಪುರಾಣದಲ್ಲಿ ಹೀಗೆ ಹೇಳಿದೆ- 'ಆಕಾಶ ವಾಯುಗಳು ಅವ್ಯಕ್ತವಾಗಿವೆ. ಉಳಿದ ಪೃಥಿವಿ ಜಲತೇಜಸ್ಸುಗಳು ವ್ಯಕ್ತವಾಗಿವೆ. ಬ್ರಹ್ಮಾಂಡದ ಹೊರಗೆ ಒಳಗೆ ಇರುವ ಎಲ್ಲ ಪಂಚಭೂತಗಳೂ ಹೀಗೇ ಕೆಲವು ವ್ಯಕ್ತಗಳು ಕೆಲವು ಅವ್ಯಕ್ತಗಳಾಗಿವೆ' ಎಂದು.

★★★

ಶ್ರೀಹರಿ ಬ್ರಹ್ಮಾಂಡದೊಳಗೆ ವಿರಾಡ್ರೂಪದಿಂದ ತಾನು ಅಭಿವ್ಯಕ್ತನಾಗುವುದಕ್ಕೆ ಬ್ರಹ್ಮಾಂಡವನ್ನು ಒಂದು ಸಾವಿರ ವರ್ಷಕಾಲ ಬೆಳೆಸಿದನೆಂದು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ವರ್ಷಪೂಗಸಹಸ್ರಾಂತೇ ತದಂಡಮುದಕೇಶಯಂ ।
ಕಾಲಕರ್ಮಸ್ವಭಾವಸ್ಥೋಽ ಜೀವೋಽ ಜೀವಮಜೀಜನತ್ ॥ ೩೪ ॥

ಕಾಲ ಕರ್ಮ ಸ್ವಭಾವಗಳಲ್ಲಿ ಪ್ರೇರಕನಾಗಿರುವ ಶ್ರೀಹರಿ ಆವರಣಜಲದಲ್ಲಿದ್ದ ಆ ಬ್ರಹ್ಮಾಂಡವನ್ನು ಸಾವಿರ ವರ್ಷಗಳ ಕೊನೆಯಲ್ಲಿ ತಾನು ಅದರೊಳಗೆ ವಿರಾಡ್ರೂಪದಿಂದ ವ್ಯಕ್ತನಾಗಲು ಬೇಕಾಗುವಷ್ಟು ದೊಡ್ಡದಾಗಿ ಬೆಳೆಸಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಅಜೀವಯತ್' ನಿಶ್ಚೇತನವಾಗಿದ್ದ ಬ್ರಹ್ಮಾಂಡವನ್ನು ಚತುರ್ಮುಖಾಂತರ್ಯಾಮಿಯಿಂದ ಪರಮಾತ್ಮ ಚತುರ್ಮುಖನ ಜನನದಿಂದ ಚೇತನಯುಕ್ತವನ್ನಾಗಿ ಮಾಡಿದ ಎಂದು ವಿವರಣೆ ನೀಡಿದ್ದಾರೆ. ಆದರೆ 'ಅಜೀಜನತ್' ಎಂಬುದು ಶುದ್ಧಪಾಠ. ಮತ್ತು ಭಗವಂತನ ವಿರಾಡ್ರೂಪದ ಅಭಿವ್ಯಕ್ತಿಯನ್ನೂ ಇಲ್ಲಿ ಹೇಳಬೇಕಾಗಿದೆ. ಚತುರ್ಮುಖನ ಜನನವನ್ನೂ ಹೇಳ ಬೇಕಾಗಿದೆ. ಆದರಿಂದ ಹೀಗೆ ಹೇಳಬೇಕು—

ಕಾಲಕರ್ಮಸ್ವಭಾವಸ್ಥಃ ಅಜೀವಃ ಪರಮೇಶ್ವರಃ ಅಜೀವಂ ಸ್ವಾತ್ಮಾನಮಜೀಜನತ್ । ತದಂಡಂ ಯಥಾ ಸ್ವಾತ್ಮಾನಂ ಪ್ರಸೂತೇ ತಥಾ ಚಕಾರ ।

ಯಃ ಪ್ರಾಣಧಾರಣಂ ಪ್ರಾಣಪ್ರಸಾದಾತ್ ಕುರುತೇಽನಿಶಂ ।
ಸ ಜೀವ ಇತಿ ಸಂದಿಷ್ಟಸ್ತದನ್ಯೋಽಜೀವ ಉಚ್ಯತೇ ।
ಯತ್‌ಪ್ರಸಾದಾತ್ ಸ ತು ಪ್ರಾಣಃ ಕುರುತೇ ಸ್ವಸ್ಯ ಧಾರಣಂ ।
ಇತಿ ವಾಯುಪ್ರೋಕ್ತೇ ।
ಕಾಲಕರ್ಮಸ್ವಭಾವಸ್ಥೋ ವಾಸುದೇವಃ ಪರಃ ಪುಮಾನ್ ।
ಅಕರೋದಂಡಮುದ್‌ವೃದ್ಧಮಾತ್ಮಪ್ರಸವಕಾರಣಂ ॥
ಇತಿ ಬ್ರಹ್ಮಾಂಡೇ । ಜೀವ ಇತಿ ವಾ ।
ಪ್ರಾಣಂ ಧಾರಯತೇ ಯಸ್ಮಾತ್ ಸ ಜೀವಃ ಪರಮೇಶ್ವರಃ ।
ಅಜೀವೋಽಪಿ ಮಹಾತೇಜಾಸ್ತ್ವಥವಾ ಜೀವಯನ್ ಜಗತ್ ॥
ಇತಿ ಸ್ಕಾಂದೇ ।

ಕಾಲ ಕರ್ಮ ಸ್ವಭಾವಗಳಲ್ಲಿರುವ 'ಅಜೀವಃ' ಜೀವವಿಲಕ್ಷಣನಾದ ಪರಮಾತ್ಮ 'ಅಜೀವಂ' ಜೀವಭಿನ್ನನಾದ 'ಸ್ವಾತ್ಮಾನಮಜೀಜನತ್' ತನ್ನನ್ನು ವ್ಯಕ್ತಗೊಳಿಸುವಷ್ಟು ಗಾತ್ರಕ್ಕೆ ಬ್ರಹ್ಮಾಂಡವನ್ನು ಬೆಳೆಸಿದನು. ಮುಖ್ಯಪ್ರಾಣನ ಅನುಗ್ರಹದಿಂದ ನಿರಂತರ ಪ್ರಾಣಧಾರಣ ಮಾಡುವವನು ಜೀವ. ಅವನಿಂದ ಬೇರೆಯಾದ ಪರಮಾತ್ಮ ಅಜೀವನೆನಿಸುತ್ತಾನೆ. ಏಕೆಂದರೆ ಆ ಪರಮಾತ್ಮನ ಅನುಗ್ರಹದಿಂದ ಮುಖ್ಯಪ್ರಾಣನೆ ತನ್ನ ದೇಹಧಾರಣೆ ಮಾಡಿಕೊಳ್ಳುತ್ತಾನೆ ಎಂದು ವಾಯುಪ್ರೋಕ್ತದಲ್ಲಿ ಹೇಳಿದೆ. ಕಾಲ ಕರ್ಮ ಸ್ವಭಾವಗಳಲ್ಲಿರುವ ಪರಮ ಪುರುಷ ವಾಸುದೇವ ಬ್ರಹ್ಮಾಂಡವನ್ನು ಅದರೊಳಗೆ ತನ್ನ ದೇಹದ ಅಭಿವ್ಯಕ್ತಿಗೆ ಬೇಕಾಗುವಷ್ಟು ಗಾತ್ರಕ್ಕೆ ಬೆಳೆಸಿಕೊಂಡನೆಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿರುವುದರಿಂದ ಭಾಗವತದ ಈ ಶ್ಲೋಕಕ್ಕೂ ಅದೇ ಅಭಿಪ್ರಾಯ ಹೇಳಬೇಕು. ಅಥವಾ 'ಜೀವಃ ಜೀವಮಜೀಜನತ್' ಎಂದು ಪದಚ್ಛೇದ. ಜಗತ್ತನ್ನು ಬದುಕಿಸುವ ಪರಮಾತ್ಮ ಜೀವೋತ್ತಮನಾದ ಚತುರ್ಮುಖನನ್ನು ಬ್ರಹ್ಮಾಂಡದಲ್ಲಿ ಹುಟ್ಟಿಸಿದನು ಎಂದರ್ಥ.

'ಮಹಾತೇಜಸ್ವಿಯಾದ ಪರಮಾತ್ಮ ಜೀವವಿಲಕ್ಷಣನಾದರೂ ಮುಖ್ಯಪ್ರಾಣ ನನ್ನು ಧರಿಸುವುದರಿಂದ ಜೀವನೆಂದೂ ಕರೆಸಿಕೊಳ್ಳುತ್ತಾನೆ. ಅಥವಾ ಜಗತ್ತನ್ನು ಬದುಕಿಸುವುದರಿಂದ ಅವನು ಜೀವನೆನಿಸುತ್ತಾನೆ ಎಂದು ಸ್ಕಂದಪುರಾಣದಲ್ಲಿ ಹೇಳಿದೆ.

★★★

ಬ್ರಹ್ಮಾಂಡವನ್ನು ಸಾಕಷ್ಟು ಬೆಳೆಸಿದ ಮೇಲೆ ಅದರೊಳಗೆ ವಿರಾಟ್‌ಪುರುಷ ರೂಪದಿಂದ ಪರಮಾತ್ಮನೂ, ಜೊತೆಗೆ ತಾನೂ, ಪ್ರಕಟರಾದೆವೆಂದು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ಸ ಏಷ ಪುರುಷಸ್ತಸ್ಮಾದಂಡಂ ನಿರ್ಭಿದ್ಯ ನಿರ್ಗತಃ ।
ಸಹಸ್ರೋರ್ವಂಘ್ರಿಬಾಹ್ವಕ್ಷಿ ಸಹಸ್ರಾನನಶೀರ್ಷವಾನ್ ॥ ೩೫ ॥

ಸಾವಿರ ತೊಡೆ ಕಾಲು ಕೈ ಕಣ್ಣುಗಳುಳ್ಳ ಸಾವಿರ ಮುಖ ತಲೆಗಳುಳ್ಳ ಆ ಪರಮಾತ್ಮನೂ ನಾನೂ ಆ ಬ್ರಹ್ಮಾಂಡದಲ್ಲೆಲ್ಲ ವ್ಯಾಪಿಸಿ ಪ್ರಾದುರ್ಭವಿಸಿದೆವು.

ಇಲ್ಲಿ 'ಸ ಏವ ಪುರುಷಃ' ಎಂದು ಬೇರೆ ವ್ಯಾಖ್ಯಾನಕಾರರ ಪಾಠ. 'ಸ ಏವ' ಅವನೇ, ಅಂದರೆ ತಾನೇ. ಬ್ರಹ್ಮ ತಾನು ವಿರಾಡ್ರೂಪದಿಂದ ಬ್ರಹ್ಮಾಂಡದೊಳಗೆ ಹುಟ್ಟಿ ಹೊರಗೆ ಬಂದೆನೆನ್ನುತ್ತಿದ್ದಾನೆ. ತನ್ನನ್ನು 'ಅವನು' ಎಂದುದೇಕೆ ಎಂದರೆ ವೀರರಾಘವ ವ್ಯಾಖ್ಯಾನ ಹೇಳುತ್ತದೆ— 'ಪರೋಕ್ಷ ನಿರ್ದೇಶಶ್ಚತುರ್ಮುಖಾಂತರ ಸಾಮ್ಯಾಭಿಪ್ರಾಯಃ' ತನ್ನಂತೆ ಬೇರೆ ಬ್ರಹ್ಮರೂ ಹೀಗೆ ಬ್ರಹ್ಮಾಂಡಗಳಲ್ಲಿ ಹುಟ್ಟುತ್ತಾರೆ, ಅವರಂತೆ ತಾನೂ ಒಬ್ಬ ಎಂಬ ಅಭಿಪ್ರಾಯ ಎಂದು. ವಸ್ತುತಃ 'ಸ ಏಷ' ಎಂದು ಪಾಠ. 'ಸಃ ಪುರುಷಃ' ಆ ಪುರುಷನಾಮಕನಾದ ಹರಿ, ಮತ್ತು 'ಏಷ ಪುರುಷಃ' ಪುರುಷನಾಮಕನಾದ ತಾನು ಇಬ್ಬರೂ ಬ್ರಹ್ಮಾಂಡದೊಳಗೆ ವಿರಾಡ್ರೂಪದಿಂದ ಪ್ರಾದುರ್ಭವಿಸಿದೆವು ಎನ್ನುತ್ತಿದ್ದಾನೆ ಬ್ರಹ್ಮ. ಈ ಅಂಶ ಬೇರೆ ವ್ಯಾಖ್ಯಾನಕಾರರಿಗೆ ತಿಳಿದಿಲ್ಲ.

ಅಂಡೇ ಜಾತೌ ಪುಮಾಂಸೌ ದ್ವೌ ಹರಿರ್ಬ್ರಹ್ಮಾ ತಥೈವ ಚ ।
ಅನಾದಿಸ್ತು ಹರಿಸ್ತತ್ರ ಬ್ರಹ್ಮಾ ಸಾದಿರುದಾಹೃತಃ । ಇತಿ ಚ ॥

'ಬ್ರಹ್ಮಾಂಡದಲ್ಲಿ ಪ್ರಾದುರ್ಭವಿಸಿದ ವಿರಾಟ್ ಪುರುಷರು ಇಬ್ಬರು. ಹರಿ ಮತ್ತು ಬ್ರಹ್ಮ ಎಂದು. ಅವರಲ್ಲಿ ಹರಿ ಅನಾದಿ, ಅವನಿಗೆ ವಿರಾಟ್ ಎಂಬ ಬ್ರಹ್ಮಾಂಡದಲ್ಲಿ ಅಭಿವ್ಯಕ್ತಿಯೇ ಪ್ರಾದುರ್ಭಾವ. ಬ್ರಹ್ಮ ಸಾದಿ, ಅವನಿಗೆ ವಿರಾಟ್‌ಶರೀರದಿಂದ ಜನನ', ಎಂದೂ ಸ್ಕಂದಪುರಾಣದಲ್ಲಿ ಹೇಳಿದೆ.

'ಅಂಡಂ ನಿರ್ಭಿದ್ಯ ತಸ್ಮಾನ್ನಿರ್ಗತಃ' ಎಂದರೆ ಬ್ರಹ್ಮಾಂಡವನ್ನು ಭೇದಿಸಿ ಅದರಿಂದ ಹೊರಗೆ ಬಂದನೆಂದು ಬೇರೆ ವ್ಯಾಖ್ಯಾನಕಾರರು ಹೇಳುವುದು ಪ್ರಮಾಣವಿರುದ್ಧ. 'ಬ್ರಹ್ಮಾಂಡವನ್ನು ಬೆಳೆಸಿ ಅದರಲ್ಲಿ ಎಲ್ಲೆಡೆ ವ್ಯಾಪಿಸಿ ಪ್ರಾದುರ್ಭೂತನಾದ' ಎಂದೇ ಹೇಳಬೇಕು.

★★★

ಪುರುಷಸೂಕ್ತದಲ್ಲಿ ಹೇಳಿದಂತೆ ಇಬ್ಬರು ವಿರಾಟ್‌ಪುರುಷರಿಂದ ಬ್ರಹ್ಮಾಂಡ ದಲ್ಲಿ ಹದಿನಾಲ್ಕು ಲೋಕಗಳ ಸೃಷ್ಟಿಯಾಯಿತು ಎಂದು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ಯಸ್ಯೇಹಾವಯವೈರ್ಲೋಕಾನ್ ಕಲ್ಪಯಂತಿ ಮನೀಷಿಣಃ ।
ಊರ್ವಾದಿಭಿರಧಃ ಸಪ್ತ ಸಪ್ತೋರ್ಧ್ವಂ ಜಘನಾದಿಭಿಃ ॥ ೩೬ ॥

ಆ ಪರಮಾತ್ಮನ ಮತ್ತು ನನ್ನ ಅವಯವಗಳಿಂದ ಹದಿನಾಲ್ಕು ಲೋಕಗಳ ಸೃಷ್ಟಿಯಾಯಿತೆಂದು ಜ್ಞಾನಿಗಳು ತಿಳಿಯುತ್ತಾರೆ. ಅದು ಹೇಗೆಂದರೆ ತೊಡೆಯಿಂದ ಅಂಗಾಲಿನ ವರೆಗೆ ಕೆಳಗಿನ ಏಳು ಪಾತಾಲ ಲೋಕಗಳು, ಸೊಂಟದಿಂದ ತಲೆಯವರೆಗೆ ಮೇಲಿನ ಭೂಲೋಕ ಮುಂತಾದ ಏಳು ಲೋಕಗಳು.

ಇಲ್ಲಿ ಲೋಕಗಳು ಪರಮಾತ್ಮನ ಅವಯವಗಳಿಂದ ಹುಟ್ಟುವುದಕ್ಕೂ ಬ್ರಹ್ಮನ ಅವಯವಗಳಿಂದ ಹುಟ್ಟುವುದಕ್ಕೂ ಬಹಳ ವ್ಯತ್ಯಾಸವಿದೆ. ಪರಮಾತ್ಮನ ಅವಯವ ಲೋಕಸೃಷ್ಟಿಗೆ ಸ್ವತಂತ್ರಕರ್ತೃ. ಬ್ರಹ್ಮನ ಅವಯವ ಲೋಕಗಳಿಗೆ ಉಪಾದಾನ, ಪರಿಣಾಮಿಕಾರಣ. ಅದರಿಂದ ಅವಯವೈಃ ಎಂಬಲ್ಲಿರುವ ತೃತೀಯಾ ವಿಭಕ್ತಿ ಕರ್ತೃ ಎಂಬರ್ಥದಲ್ಲಿದ್ದು ವಿಷ್ಣುಪಕ್ಷದಲ್ಲಿ ಮುಖ್ಯಾರ್ಥಕ. ಬ್ರಹ್ಮಪಕ್ಷದಲ್ಲಿ ಮುಖ್ಯಾರ್ಥ ಕೂಡದಿರುವುದರಿಂದ ಅಮುಖ್ಯಾರ್ಥಕ—

ಹರೇರವಯವೈರ್ಲೋಕಾಃ ಸೃಷ್ಟಾ ಇತಿ ವಿಕಲ್ಪನಂ ।
ಸಾಕ್ಷಾತ್ ಸತ್ಯಮತೋಽನ್ಯಸ್ಮಾದ್ ವ್ಯಾವಹಾರಿಕಮುಚ್ಯತೇ ॥
ಇತಿ ಮಾತ್ಸ್ಯೇ ।

'ಹರಿಯ ಅವಯವಗಳಿಂದ ಲೋಕಗಳು ಸಾಕ್ಷಾತ್ ಸೃಷ್ಟವಾದವೆಂದು ಕಲ್ಪಿಸುವುದೆಂದರೆ, ತಿಳಿಯುವುದು, ಸತ್ಯ, ಅಬಾಧಿತ. ಬ್ರಹ್ಮನ ಅವಯವಗಳಿಂದ ಲೋಕಗಳು ಸೃಷ್ಟವಾದುವು ಎನ್ನುವುದು ವ್ಯವಹಾರ ಮಾತ್ರ' ಎಂದು ಮತ್ಸ್ಯ ಪುರಾಣದಲ್ಲಿ ಹೇಳಿದೆ.

ಅದರಿಂದ 'ಅವಯವಜನ್ಯವಾದ ಲೋಕಗಳನ್ನು ಅವಯವಗಳೆಂದೇ ಉಪಾಸನೆಗಾಗಿ ಕಲ್ಪಿಸುವುದು ಯುಕ್ತ. ತತ್ತದವಯವಪ್ರಭವಾನಾಂ ತತ್ತದವಯತ್ವೇನೋಪಾಸನಂ ಯುಕ್ತಂ' ಎಂದು ವೀರರಾಘವ ವ್ಯಾಖ್ಯಾನ ಹೇಳುವುದು ಮತ್ಸ್ಯಪುರಾಣಕ್ಕೆ ವಿರುದ್ಧ ಎಂದಂತಾಯಿತು.

★★★

'ಬ್ರಾಹ್ಮಣೋಽಸ್ಯ ಮುಖಮಾಸೀತ್' ಎಂದು ಮುಂತಾಗಿ ಪುರುಷಸೂಕ್ತದಲ್ಲಿ

ಹೇಳಿದಂತೆ ವಿರಾಡ್ರೂಪದಿಂದ ಬ್ರಾಹ್ಮಣಾದಿ ವರ್ಣಗಳು ಹುಟ್ಟಿದ ಬಗೆಯನ್ನು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ಪುರುಷಸ್ಯ ಮುಖಂ ಬ್ರಹ್ಮ ಕ್ಷತ್ರಮೇತಸ್ಯ ಬಾಹವಃ ।
ಊರ್ವೋರ್ವೈಶ್ಯೋ ಭಗವತಃ ಪದ್ಭ್ಯಾಂ ಶೂದ್ರೋ ವ್ಯಜಾಯತ ॥೩೭

ವಿರಾಟ್‌ಪುರುಷನ ಮುಖದಿಂದ ಬ್ರಾಹ್ಮಣನೂ ಬಾಹುಗಳಿಂದ ಕ್ಷತ್ರಿಯನೂ ತೊಡೆಗಳಿಂದ ವೈಶ್ಯನೂ ಪಾದಗಳಿಂದ ಶೂದ್ರನೂ ಹುಟ್ಟಿದರು.

ಇಲ್ಲಿ ಪುರುಷಸೂಕ್ತದಲ್ಲಿಯೂ ಭಾಗವತದಲ್ಲಿಯೂ ಬ್ರಾಹ್ಮಣನಿಗೆ ಮುಖಾಭೇದವನ್ನೂ ಕ್ಷತ್ರಿಯನಿಗೆ ಬಾಹ್ವಭೇದವನ್ನೂ ಹೇಳಿದ್ದು ಕಾರ್ಯಕಾರಣ ಗಳಿಗೆ ಭೇದಾಭೇದವಿರುವುದರಿಂದ ಕೂಡುತ್ತದೆ ಎಂದು ಶುಕದೇವ ವ್ಯಾಖ್ಯಾನ ಹೇಳುತ್ತದೆ. ವಸ್ತುತಃ ಹರಿಯ ಮುಖಬಾಹುಗಳು ನಿಮಿತ್ತಕಾರಣವಾದ್ದರಿಂದ ಅತ್ಯಂತ ಭೇದವಿದೆ. ಮುಖಬಾಹುಗಳಿಂದ ಹುಟ್ಟಿದ್ದರಿಂದ ಮುಖಬಾಹುಗಳೆಂದೇ ಹೇಳಿದೆ. ಈ ವಿಷಯದಲ್ಲಿ ಬ್ರಹ್ಮಪುರಾಣವಚನವಿರುವುದರಿಂದ ಸಪ್ತಸು ಪ್ರಥಮಾ ಎಂಬ ಸೂತ್ರಪ್ರಕಾರ 'ಮುಖಂ ಬಾಹವಃ' ಎಂದು ಪ್ರಥಮಾ ವಿಭಕ್ತಿ ಪಂಚಮ್ಯರ್ಥದಲ್ಲಿದೆ ಎಂದಿಟ್ಟುಕೊಳ್ಳಬೇಕು.

ಬ್ರಾಹ್ಮಣೋ ಮುಖಮಿತ್ಯೇವ ಮುಖಾಜ್ಜಾತತ್ವಹೇತುತಃ ।
ಯಥಾಽವದಚ್ಛ್ರುತೌ ತದ್ವಜ್ಜೀವೋ ಬ್ರಹ್ಮೇತಿ ವಾಗ್ ಭವೇತ್ ।
ಇತಿ ಬ್ರಾಹ್ಮೇ ॥

'ಪುರುಷಸೂಕ್ತದಲ್ಲಿ ಬ್ರಾಹ್ಮಣ ಮುಖದಿಂದ ಹುಟ್ಟಿದ್ದರಿಂದ ಮುಖವೆ ಬ್ರಾಹ್ಮಣ ಎಂದಿದೆ. ಹಾಗೇ ಜೀವನು ಬ್ರಹ್ಮ ಎಂದು ಹೇಳಿದಲ್ಲೆಲ್ಲ ಜೀವ ಬ್ರಹ್ಮನಿಂದ ಹುಟ್ಟಿದ್ದಾನೆ ಎಂದು ಅರ್ಥಗ್ರಹಿಸಬೇಕು' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಇತಿ ದ್ವಿತೀಯಸ್ಕಂಧೇ ಪಂಚಮೋಽಧ್ಯಾಯಃ

ಆರನೇ ಅಧ್ಯಾಯ

ಅಧ್ಯಾಯ ಸಾರಾಂಶ

ಬ್ರಹ್ಮ ನಾರದರಿಗೆ ಉಪದೇಶಿಸುತ್ತಾನೆ—ಇಂದ್ರಿಯ, ಇಂದ್ರಿಯಗೋಲಕ, ಇಂದ್ರಿಯಾಭಿಮಾನಿ, ಇಂದ್ರಿಯವಿಷಯಗಳಿಗೆ ಎಲ್ಲವುಗಳಿಗೂ ಪರಮಪುರುಷನ

ಸ್ವರೂಪಾವಯವಗಳು ಉತ್ಪತ್ತಿ ಸ್ಥಾನಗಳು 'ಪುರುಷ ಏವೇದಂ ಸರ್ವಂ' ಎಂಬಂತೆ ಭೂತ ಭವಿಷ್ಯ ವರ್ತಮಾನ ಪದಾರ್ಥಗಳೆಲ್ಲವೂ ಅವನ ಅಧೀನ. ಒಳಗೆ ಹೊರಗೆ ಎಲ್ಲೆಡೆ ಅವನೇ ವ್ಯಾಪಿಸಿದ್ದಾನೆ ಬ್ರಹ್ಮಾಂಡದೊಳಗೆ ಮಾತ್ರವಲ್ಲ, ಹೊರಗೂ ಅವನೆ ಕಾಣುತ್ತಾನೆ. ಮುಕ್ತರಿಗೂ ಅವನೆ ಒಡೆಯ. ಎಲ್ಲ ಜೀವರೂ ಅವನ ಒಂದು ಅಂಶಕ್ಕೆ ಮಾತ್ರ ಸಮಾನ. ಅನಂತಾಸನ ಶ್ವೇತದ್ವೀಪ ವೈಕುಂಠಗಳಲ್ಲಿ ಇನ್ನೂ ಮೂರು ಅಂಶಗಳಿವೆ. ಆ ಪುರುಷನಿಂದಲೆ ಬ್ರಹ್ಮಾಂಡವ್ಯಾಪಿ ವಿರಾಡ್ರೂಪದಿಂದ ನಾನು ಜನಿಸಿದೆ. ನನ್ನ ಶರೀರ ಪಂಚಭೂತಾತ್ಮಕ. ಅವನದು ಅಪ್ರಾಕೃತ. ಮುಂದೆ ನಾನು ಹರಿಯ ನಾಭಿ ಕಮಲದಿಂದ ಚತುರ್ಮುಖ ರೂಪದಿಂದಲೂ ಜನಿಸಿದ್ದೇನೆ. ಆಗ ನಾನು ಅವನನ್ನು ಆರಾಧಿಸಲು ಅವನ ಅವಯವಗಳನ್ನು ಹೊರತು ಬೇರೆ ಸಾಮಗ್ರಿಯನ್ನು ಕಾಣದಾದೆ. ಅದರಿಂದ ಕೆರೆಯ ನೀರನ್ನು ಕೆರೆಗೆ ಚೆಲ್ಲುವಂತೆ ಅವನ ಅವಯವಗಳಲ್ಲಿ ಆಶ್ರಯಿಸಿರುವ ಪಶು ದರ್ಭೆ ಭೂಮಿ ಕಾಲ ಧನಸಂಪತ್ತು ಮುಂತಾದವುಗಳಿಂದಲೇ ಅವನನ್ನು ಆರಾಧಿಸಿದೆ. ಯಜ್ಞಪುರುಷನನ್ನು ಅವನ ಅವಯವಗಳಿಂದಲೇ ಆರಾಧಿಸಿದೆ. ಬಳಿಕ ಎಲ್ಲ ಮುನಿಗಳೂ ಪ್ರಜಾಪತಿಗಳೂ ಮನುಗಳೂ ದೇವತೆಗಳೂ ಯಜ್ಞಗಳಿಂದ ಅವನನ್ನು ಆರಾಧಿಸಿದರು. ಅವನ ಪ್ರೇರಣೆಯಿಂದಲೆ ನಾನು ಸೃಷ್ಟಿ ಮಾಡುತ್ತೇನೆ. ರುದ್ರ ಸಂಹಾರ ಮಾಡುತ್ತಾನೆ. ಅವನೆ ಜಗದ್ರಕ್ಷಕ. ನಾರದ, ನಿನ್ನ ಪ್ರಶ್ನೆಗೆ ಸರಿಯಾಗಿ ಉತ್ತರಿಸಿದ್ದೇನೆ. ನಾನೆಂದೂ ಸುಳ್ಳಾಡಿದವನಲ್ಲ, ನಾನು ಎಲ್ಲರಿಗಿಂತ ಹೆಚ್ಚು ಬಲ್ಲವನಾದರೂ ಹರಿಯನ್ನು ಪೂರ್ಣವಾಗಿ ತಿಳಿಯಲಾರೆ. ಸ್ಮರಣ ಮಾತ್ರದಿಂದ ಕರ್ಮಬಂಧನವನ್ನು ಕಳೆವ ಹರಿಯ ಅವತಾರ ರೂಪಗಳನ್ನೂ ಕೆಲವನ್ನು ಹೇಳುವೆನು.

★★★

'ಚಕ್ಷೋಃ ಸೂರ್ಯೋ ಅಜಾಯತ' ಎಂದು ಮುಂತಾಗಿ ವಿರಾಟ್ ಪುರುಷನ ಅವಯವಗಳಿಂದ ಇಂದ್ರಿಯ ದೇವತೆಗಳ ಉತ್ಪತ್ತಿಯನ್ನು ಸಂಕ್ಷೇಪದಿಂದ ಪುರುಷಸೂಕ್ತ ಹೇಳಿದೆ. ಅದನ್ನು ವಿಸ್ತಾರವಾಗಿ ಬ್ರಹ್ಮ ನಾರದರಿಗೆ ಹೇಳುತ್ತಾನೆ—

ರೂಪಾಣಾಂ ತೇಜಸಾಂ ಚಕ್ಷುರ್ದಿವಃ ಸೂರ್ಯಸ್ಯ ಚಾಕ್ಷಿಣೀ ।
ಕರ್ಣೌ ದಿಶಾಂ ಚ ತೀರ್ಥಾನಾಂ ಶ್ರೋತ್ರಮಾಕಾಶಶಬ್ದಯೋಃ ॥ ೩ ॥

ವಿರಾಟ್‌ಪುರುಷನ ಚಕ್ಷುರಿಂದ್ರಿಯದಿಂದ ರೂಪ ಮತ್ತು ತೇಜಸ್ಸುಗಳೂ, ಚಕ್ಷುರಿಂದ್ರಿಯ ಗೋಲಕದಿಂದ ದ್ಯುಲೋಕಾಭಿಮಾನಿ ಸೂರ್ಯನೂ, ಶ್ರೋತ್ರ ಗೋಲಕಗಳಿಂದ ಶ್ರೋತ್ರಾಭಿಮಾನಿ ದಿಗ್ದೇವತೆಗಳು ಮತ್ತು ಶಾಸ್ತ್ರಗಳೂ, ಶ್ರೋತ್ರೇಂದ್ರಿಯದಿಂದ ಶಬ್ದ ಮತ್ತು ಆಕಾಶಗಳೂ ಜನಿಸಿದುವು.

ಇಲ್ಲಿ 'ತೀರ್ಥಾನಾಂ' ಎಂದು ಗಂಗಾದಿತೀರ್ಥಗಳು ವಿರಾಟ್‌ಪುರುಷನ ಕಿವಿಗಳಿಂದ ಜನಿಸಿದುವೆಂದು ಹೇಳಿದಂತೆ ಕಾಣುತ್ತದೆ. ವಲ್ಲಭವ್ಯಾಖ್ಯಾನದಲ್ಲಿ 'ತೀರ್ಥಾನಾಂ ಗಂಗಾದೀನಾಂ' ಎಂದು ಸ್ಪಷ್ಟ ಹೇಳಿದೆ. ಎಲ್ಲ ವ್ಯಾಖ್ಯಾನಕಾರರಿಗೂ ಇದೇ ಅಭಿಪ್ರಾಯ. ಆದರೆ ಮುಂದೆ, 'ನಾಡ್ಯೋ ನದನದೀನಾಂ ತು ಗೋತ್ರಾಣಾಮಸ್ಥಿಸಂಹತಿಃ' ಎಂದು (ಶ್ಲೋಕ ೧೦) ನಾಡಿಗಳಿಂದ ಎಲ್ಲ ನದಿಗಳು ಉತ್ಪನ್ನವಾಗುವುದನ್ನು ಪ್ರತ್ಯೇಕ ಹೇಳಿದೆ. ಅದರಿಂದ ಇಲ್ಲಿ ತೀರ್ಥಾನಾಂ ಎಂದರೆ ಶಾಸ್ತ್ರಗಳಿಗೆ ಎಂದರ್ಥ. ಅದಕ್ಕೆ ಹೇಳುತ್ತಾರೆ—

ತೀರ್ಥಾನಾಂ ಶಾಸ್ತ್ರಾಣಾಂ ।

ತೀರ್ಥಗಳೆಂದರೆ ಇಲ್ಲಿ ಶಾಸ್ತ್ರಗಳೆಂದು ವಿವಕ್ಷಿತವಾಗಿದೆ.

★★★

ವಿರಾಟ್‌ಪುರುಷನ ರೋಮ ಕೂದಲು ಉಗುರುಗಳಿಂದ ಸೃಷ್ಟಿಯನ್ನು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ರೋಮಾಣ್ಯುದ್ಭಿಜಜಾತೀನಾಂ ಯೈರ್ವಾ ಯಜ್ಞಸ್ತು ಸಂಭೃತಃ ।
ಕೇಶಶ್ಮಶ್ರುನಖಾನ್ಯಸ್ಯ ಶಿಲಾಲೋಹಾಭ್ರವಿದ್ಯುತಾಂ ॥ ೫ ॥

ವಿರಾಟ್‌ಪುರುಷನ ರೋಮಮೂಲಗಳಿಂದ ಯಾಗ ಸಾಧನವಾದ ಪಲಾಶಾದಿ ವೃಕ್ಷಗಳೂ, ರೋಮಾಗ್ರಗಳಿಂದ ಬೇರೆ ವೃಕ್ಷಗಳೂ, ಕೂದಲುಗಳಿಂದ ಮೋಡಗಳೂ, ಮೀಸೆಗಳಿಂದ ಮಿಂಚುಗಳೂ ಉಗುರುಗಳಿಂದ ಕಲ್ಲು ಲೋಹಗಳೂ ಹುಟ್ಟಿದುವು.

ಇಲ್ಲಿ ಎಲ್ಲ ವೃಕ್ಷಗಳೂ ರೋಮಗಳಿಂದ ಹುಟ್ಟಿದುವು ಅಥವಾ ವಿಭೀತಕ (ತಾರೆಗಿಡ)ಮುಂತಾದ ಪಾಪವೃಕ್ಷಗಳನ್ನು ಹೊರತುಪಡಿಸಿ ಬೇರೆ ಯಾಗೋಪಯುಕ್ತ ವೃಕ್ಷಗಳು ಮಾತ್ರ ರೋಮಗಳಿಂದ ಹುಟ್ಟಿದುವು ಎಂದು ಭಾಗವತದಲ್ಲಿ ಬ್ರಹ್ಮದೇವರು ಸಂದೇಹವನ್ನೇ ಹೇಳುತ್ತಿದ್ದಾರೆ ಎಂದು ಬೇರೆ ವ್ಯಾಖ್ಯಾನಕಾರರ ಅಭಿಪ್ರಾಯವಿದೆ.[೧] ಬ್ರಹ್ಮದೇವರಿಗೆ ಸಂದೇಹವೆ? ಅದರಿಂದ ಹೀಗೆ ಹೇಳಬೇಕು—

ಯಾಜ್ಞಿಕಾ ರೋಮಮೂಲಸ್ಥಾ ರೋಮಾಂತಸ್ಥಾಸ್ತು ತತ್ಪರೇ ।
ಉದ್ಭಿಜೋ ವಾಸುದೇವಸ್ಯ ಲಿಂಗಗಾಸ್ತು ಜರಾಯುಜಾಃ ॥

ಇತಿ ಪಾದ್ಮೇ ।

---

೧. ಉದ್ಭಿಜಾ ವೃಕ್ಷಾದಯಃ । ತೇಷಾಂ ಜಾತಯಃ ಅವಾಂತರಾ ಧವಖದಿರತ್ವಾದಯಃ । ಸರ್ವೇ ವೃಕ್ಷಾ ಇತಿ ಯಾವತ್ । ಅಥವಾ ಯೇ ಪಾಪವೃಕ್ಷಾ ವಿಭೀತಕಾದಯಸ್ತೇಷಾಂ ನ ತಾನಿ ಸ್ಥಾನಾನೀತ್ಯಾಹ । -ವಲ್ಲಭಃ

ಹರೇಃ ಶ್ಮಶ್ರಾ ಶ್ರಯಾ ವಿದ್ಯುಚ್ಛಿಲಾಲೋಹಾ ನಖಾಶ್ರಯಾಃ।

ಇತ್ಯಾಗ್ನೇಯೇ ।

ಯಾಗೋಪಯುಕ್ತವಾದ ವೃಕ್ಷಗಳು ವಿರಾಟ್‌ಪುರುಷನ ರೋಮಮೂಲ ಗಳಲ್ಲಿ ಹುಟ್ಟಿ ಅಲ್ಲಿಯೆ ಆಶ್ರಯ ಪಡೆದಿವೆ. ಬೇರೆ ವೃಕ್ಷಗಳು ರೋಮಾಗ್ರಗಳಿಂದ ಹುಟ್ಟಿ ಅಲ್ಲಿಯೆ ಆಶ್ರಯ ಪಡೆದಿವೆ. ಜರಾಯುಜಗಳು ಲಿಂಗದಿಂದ ಹುಟ್ಟಿ ಅಲ್ಲಿಯೆ ಆಶ್ರಯ ಪಡೆದಿವೆ. ಎಂದು ಪದ್ಮಪುರಾಣದಲ್ಲಿ ಹೇಳಿದೆ. ಹರಿಯ ಮೀಸೆಯಲ್ಲಿ ಮಿಂಚು, ನಖಗಳಲ್ಲಿ ಕಲ್ಲು ಮತ್ತು ಲೋಹಗಳು ಹುಟ್ಟಿ ಅಲ್ಲಿಯೆ ಆಶ್ರಯ ಪಡೆದಿವೆ ಎಂದು ಅಗ್ನಿಪುರಾಣದಲ್ಲಿ ಹೇಳಿದೆ.

ಅದರಿಂದ 'ಯೈರ್ವಾ ಯಜ್ಞಸ್ತು ಸಂಭೃತಃ' ಎಂಬಲ್ಲಿ ವಾಕಾರ ಸಂಶಯವನ್ನು ಹೇಳುವುದಿಲ್ಲ, ವ್ಯವಸ್ಥಿತ ವಿಕಲ್ಪವನ್ನು ಹೇಳುತ್ತದೆ. 'ನಖದಲ್ಲಿ ಕಲ್ಲು ಮತ್ತು ಲೋಹಗಳು' ಎಂಬುದನ್ನು ಸಾದೃಶ್ಯಬಲದದಿಂದ ಊಹಿಸಿ ತಿಳಿಯಬೇಕೆಂದು ಬೇರೆ ವ್ಯಾಖ್ಯಾನಕಾರರು ಹೇಳುವುದು, ಪ್ರತ್ಯಕ್ಷ ಅಗ್ನಿಪುರಾಣ ವಚನವಿರುವಾಗ, ಅನಾವಶ್ಯಕ ವೆಂದಂತಾಯಿತು.[೧]

★★★

ವಿರಾಟ್‌ಪುರುಷನ ಬಾಹುಗಳಿಂದ, ಪಾದ ಮತ್ತು ಪಾದವಿಕ್ರಮಗಳಿಂದಾದ ಸೃಷ್ಟಿಯನ್ನು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ಬಾಹವೋ ಲೋಕಪಾಲಾನಾಂ ಪ್ರಾಯಶಃ ಕ್ಷೇಮಕರ್ಮಣಾಂ ।
ವಿಕ್ರಮೋ ಭೂರ್ಭುವಃಸ್ವಶ್ಚ ಕ್ಷೇಮಸ್ಯ ಶರಣಸ್ಯ ಚ ।
ಸರ್ವಕಾಮವರಸ್ಯಾಪಿ ಹರೇಶ್ಚರಣ ಆಸ್ಪದಂ ॥ ೭ ॥

ಲೋಕಕ್ಷೇಮಕಾರಕರಾದ ಹೆಚ್ಚಿನ ಲೋಕಪಾಲಕರು ಬಾಹುಗಳಿಂದ ಹುಟ್ಟಿದರು. ಪಾದವಿಕ್ಷೇಪಗಳಿಂದ ಭೂಲೋಕ ಅಂತರಿಕ್ಷ ಸ್ವರ್ಗಗಳೂ ಹುಟ್ಟಿದುವು. ಪಾದದಿಂದ ಕ್ಷೇಮ ಮೋಕ್ಷ ಮತ್ತು ಸಕಲೇಷ್ಟಪ್ರಾಪ್ತಿಗಳೂ ಹುಟ್ಟಿದುವು.

ಇಲ್ಲಿ 'ಪ್ರಾಯಶಃ ಕ್ಷೇಮಕರ್ಮಣಾಂ' ಎಂದರೆ 'ಹೆಚ್ಚಾಗಿ ಕ್ಷೇಮವನ್ನೆ ಮಾಡುತ್ತಾರೆ. ಹಿಂಸೆ ಮಾಡುವುದೂ ಇದೆ, ಉದಾ: ಇಂದ್ರ ಮಳೆಗರೆದು ಲೋಕಕ್ಷೇಮ ಮಾಡುತ್ತಾನೆ, ಆದರೆ ಆ ಮಳೆಯಲ್ಲಿ ಕೆಲವು ಪ್ರಾಣಿಗಳು ಕ್ರಿಮಿಕೀಟಗಳು

---

೧. ಪಾದಕರನಖಾನಿ ಶಿಲಾಲೋಹಾನಾಮಿತಿ ಸಾದೃಶ್ಯಾದೂಹ್ಯಂ । -ಶ್ರೀಧರಃ

ಸಾಯುವುದೂ ಉಂಟು' ಎಂದು ಅಭಿಪ್ರಾಯವನ್ನು ಗಿರಿಧರ ವ್ಯಾಖ್ಯಾನ ಹೇಳಿದೆ. 'ಹೆಚ್ಚಾಗಿ ಲೋಕಪಾಲಕರಿಗೆ ಬಾಹುಗಳು ಆಶ್ರಯ, ಇನ್ನೂ ಬೇರೆ ಕ್ಷೇಮಕಾರಕರಿಗೂ ಅವು ಆಶ್ರಯಗಳೆ' ಎಂದು ಜೀವಗೋಸ್ವಾಮಿ ವ್ಯಾಖ್ಯಾನ. 'ಇಂದ್ರಾದಿಲೋಕ ಪಾಲಕರಿಗೆ ಮಾತ್ರವಲ್ಲದೆ ಬೇರೆ ಧರ್ಮನಿಷ್ಠರಿಗೂ ಬಾಹುಗಳು ಆಶ್ರಯ. ಆದರೆ ಕಾಮ್ಯಕರ್ಮ ಮಾಡುವವರಿಗೆ ಅಲ್ಲ'ಎಂದು ವಲ್ಲಭವ್ಯಾಖ್ಯಾನ. ಇವೆಲ್ಲ ಅಪವ್ಯಾಖ್ಯಾನಗಳು. 'ಕ್ಷೇಮಸ್ಯ ಶರಣಸ್ಯ ಚ' ಎಂಬಲ್ಲಿ ಶರಣ ಎಂದರೆ ಭಯದಿಂದ ರಕ್ಷಿಸುವುದು ಎಂದು ಶ್ರೀಧರವ್ಯಾಖ್ಯಾನ. ಅನಿಷ್ಟನಿವಾರಣ ಎಂದು ವೀರರಾಘವ ವ್ಯಾಖ್ಯಾನ, ಶುಕದೇವವ್ಯಾಖ್ಯಾನ, ವಲ್ಲಭವ್ಯಾಖ್ಯಾನಗಳು. ರಕ್ಷಕ ವಸ್ತು ಎಂದು ವಿಶ್ವನಾಥ ವ್ಯಾಖ್ಯಾನ. [೧]ವಸ್ತುತಃ ಈ ಸಾಮಾನ್ಯ ಅರ್ಥಕ್ಕಿಂತ ಉತ್ತಮವಾದ ಅರ್ಥ ಬ್ರಹ್ಮಪುರಾಣದಲ್ಲಿ ಉಕ್ತವಾಗಿದೆ, ಶರಣ ಎಂದರೆ ಮೋಕ್ಷ ಎಂದು. ಭಾಗವತದಲ್ಲಿಯೂ 'ಪರೀಕ್ಷಿತ ಮೋಕ್ಷ ಪಡೆದ' ಎಂಬುದನ್ನು 'ಹರಿಪಾದವನ್ನು ಸೇರಿದ' 'ಭೇಜೇ ಖಗೇಂದ್ರ ಧ್ವಜ ಪಾದಮೂಲಂ' ಎಂದು ಹೇಳಿದೆ. ಹರಿಪಾದ ಮೋಕ್ಷಸ್ಥಾನ ಎಂದಂತಾಯಿತು. ಆದರಿಂದ ಹರಿಪಾದದಲ್ಲಿ ಆಶ್ರಯ ಪಡೆದ 'ಶರಣ'ವೆಂದರೆ ಮೋಕ್ಷ ಸ್ವರೂಪಾನಂದಾನುಭವ ಎಂದಂತಾಯಿತು. ಹರಿಪಾದವೇ ಮೋಕ್ಷಸ್ಥಾನ ಎಂದರೂ ಪಾದಸಾಯುಜ್ಯವಲ್ಲ. ಆಯಾ ಅಂಗಗಳಲ್ಲಿ ಹುಟ್ಟಿದ ದೇವತೆಗಳಿಗೆ ಆಯಾ ಅಂಗಗಳಲ್ಲಿಯೆ ಸಾಯುಜ್ಯ ಎಂಬ ನಿಯಮವಿದೆ. ಆದರಿಂದ ತತ್ವಾಭಿಮಾನಿಗಳಲ್ಲದ ಬೇರೆ ಅಪ್ರತೀಕಾಲಂಬನರಿಗೆ 'ಪಾದಮೂಲ' ಅಂದರೆ ವೈಕುಂಠಾದಿಲೋಕಗಳು, ಮುಕ್ತಿಗೆ, ಅಂದರೆ ಸ್ವರೂಪಾನಂದಾನುಭವಕ್ಕೆ ಆಶ್ರಯಗಳೆನ್ನಬೇಕು. ಹಾಗೇ ಹೇಳುತ್ತಾರೆ—

ಬ್ರಾಹ್ಮಣವೈಶ್ಯಾದೀನ್ ವರ್ಜಯಿತುಂ ಪ್ರಾಯಶ ಇತಿ ।
ಮೋಕ್ಷಃ ಶಾಂತಿಶ್ಚ ಶರಣಂ ನಿರ್ವಾಣಂ ಚಾಭಿಧೀಯತೇ ।
ಇತಿ ಬ್ರಾಹ್ಮೇ ।

---

೧. ವೃಷ್ಟ್ಯಾದಿನಾ ಪಿಪೀಲಿಕಾದಿ ವಿನಾಶಸ್ಯಾಪಿ ಸಂಭವಾತ್ ಪ್ರಾಯೋಗ್ರಹಣಂ । -ಗಿರಿಧರಃ

ಬಾಹವಃ ಪ್ರಾಯಶಃ ಪ್ರಾಚುರ್ಯೇಣ ಲೋಕಪಾಲಾನಾಂ ಕ್ಷೇತ್ರಂ । ಅನ್ಯೇಷಾಮಪಿ ಕ್ಷೇಮಕರ್ಮಣಾಂ ಪಾಲನಕರ್ತೄಣಾಮಿತ್ಯರ್ಥಃ । -ಜೀವಗೋಸ್ವಾಮೀ

ಅನ್ಯೇಷಾಮಪಿ ಧರ್ಮಕರ್ತೄಣಾಂ ಭಗವದ್ಬಾಹವಃ ಸ್ಥಾನಂ । ಜಗದ್ರಕ್ಷಕತ್ವಾತ್ । ಸಪ್ತಭಿರ್ಧಾರ್ಯತೇ ಮಹೀತಿ ವಾಕ್ಯಾತ್ । ಪ್ರಾಯಶ ಇತಿ ಸಕಾಮ ಧರ್ಮಕರ್ತೃ ವ್ಯುದಾಸಾರ್ಥಮುಕ್ತಂ । -ವಲ್ಲಭಾಚಾರ್ಯಃ

ಶರಣಂ ಭಯಾದ್ರಕ್ಷಣಂ । -ಶ್ರೀಧರಃ

ಶರಣಸ್ಯ ಚಾನಿಷ್ಟನಿವಾರಣಸ್ಯ । -ವೀರರಾಘವಃ

ಶರಣಸ್ಯ ರಕ್ಷಕವಸ್ತುನಃ । -ವಿಶ್ವನಾಥಃ

ಭೇಜೇ ಖಗೇಂದ್ರಧ್ವಜಪಾದಮೂಲಂ ॥ ಇತಿ ಚ ।
ಸ್ವೋತ್ಪತ್ತ್ಯಂಗೇಷು ದೇವಾನಾಮನ್ಯೇಷಾಂ ಪಾದಮೂಲತಃ ।
ಮುಕ್ತಿಸ್ತು ವಿಹಿತಾ ವಿಷ್ಣೋರ್ನಿರ್ದಿಷ್ಟೇಷು ಯಥಾವಚಃ ।
ಇತ್ಯಧ್ಯಾತ್ಮೇ ।

ಲೋಕಪಾಲಕರಲ್ಲಿ ಬ್ರಹ್ಮ ಅಗ್ನಿಗಳೆಂಬ ಬ್ರಾಹ್ಮಣರು, ವೈಶ್ಯನಾದ ಕುಬೇರ, ಶೂದ್ರನಾದ ನಿಋತಿ ಇವರು ಹೊರತಾಗಿ ಬೇರೆ ಕ್ಷತ್ರಿಯರಾದ ಇಂದ್ರಾದಿಗಳು ಮಾತ್ರ ವಿಷ್ಣುವಿನ ಬಾಹುಗಳಲ್ಲಿ ಹುಟ್ಟಿದ್ದಾರೆ ಎಂಬ ಅಭಿಪ್ರಾಯದಿಂದ ಪ್ರಾಯಶಃ ಎಂದಿದೆ. ಶರಣ ಎಂದರೆ ಇಲ್ಲಿ ಮೋಕ್ಷ ವಿವಕ್ಷಿತ. ಮೋಕ್ಷವನ್ನು 'ಶಾಂತಿ' 'ಶರಣ' ನಿರ್ವಾಣ ಎಂದೂ ಹೇಳುತ್ತಾರೆ ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ. ಮತ್ತು ಭಾಗವತದಲ್ಲಿಯೂ ಪರೀಕ್ಷಿತ ಗರುಡಧ್ವಜನ ಪಾದಮೂಲವನ್ನು ಸೇರಿದ, ಅಂದರೆ ಮುಕ್ತನಾದ ಎಂದಿದೆ. ಪಾದಮೂಲದಲ್ಲಿ ಮುಕ್ತಿ ಎಲ್ಲರಿಗೂ ಇಲ್ಲ. ಚಕ್ಷೋಃ ಸೂರ್ಯೋ ಅಜಾಯತ ಇತ್ಯಾದಿ ಹೇಳಿದಂತೆ ತತ್ವಾಭಿಮಾನಿ ದೇವತೆಗಳಿಗೆ ಅವರು ಹುಟ್ಟಿದ ಆಯಾ ಭಗವದಂಗಗಳಲ್ಲಿಯೆ ಮುಕ್ತಿ. ಉಳಿದ ಅಪ್ರತೀಕಾಲಂಬನರಿಗೆ ಪಾದಮೂಲದಲ್ಲಿ ಅಂದರೆ ವೈಕುಂಠ ಮಹರಾದಿ ಲೋಕಗಳಲ್ಲಿ ಮುಕ್ತಿ ಎಂದು ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ.

★★★

ವಿರಾಟ್‌ಪುರುಷನ ಮಧ್ಯದೇಹದಿಂದಾದ ಸೃಷ್ಟಿಯ ವಿವರವನ್ನು ಬ್ರಹ್ಮ ನಾರದರಿಗೆ ಹೇಳುತ್ತಿದ್ದಾನೆ—

ಧರ್ಮಸ್ಯ ಮಮ ತುಭ್ಯಂ ಚ ಕುಮಾರಾಣಾಂ ಭವಸ್ಯ ಚ ।
ವಿಜ್ಞಾನಸ್ಯ ಚ ತತ್ವಸ್ಯ ಪರಸ್ಯಾತ್ಮಾ ಪರಾಯಣಂ ॥ ೧೧ ॥

ವಿರಾಟ್‌ಪುರುಷನ ಮಧ್ಯದೇಹದಿಂದ ಧರ್ಮಾಭಿಮಾನಿಯಾದ ನಾನೂ ನೀನೂ ಸನಕಾದಿಗಳೂ ಶಿವನೂ ವಿಜ್ಞಾನತತ್ವ ಹಾಗೂ ಅದರ ಅಭಿಮಾನಿಯಾದ ಸರಸ್ವತಿಯೂ ಹುಟ್ಟಿದೆವು.

ಇಲ್ಲಿ 'ಆತ್ಮಾ' ಎಂದರೆ ಬೇರೆ ಎಲ್ಲ ವ್ಯಾಖ್ಯಾನಪ್ರಕಾರ ಅಂತಃಕರಣ ಚಿತ್ತ. ಆದರೆ ಇದರ ಹಿಂದಿನ ಶ್ಲೋಕದಲ್ಲಿ 'ಹೃದಯಂ ಮನಸಃ ಪದಂ' 'ಪರಮಾತ್ಮನ ಹೃದಯದಿಂದ ಮನಸ್ಸು ಹುಟ್ಟಿತು' ಎಂದು ಹೇಳಿ ಒಡನೆ 'ಆತ್ಮ'ದಿಂದ ಬ್ರಹ್ಮನಾರದ ಸನತ್ಕುಮಾರಾದಿಗಳು ಹುಟ್ಟಿದರು ಎಂದಿದೆ. ಹೃದಯ ಎಂದರೂ ಮನಸ್ಸೆ. ಪುನಃ

ಆತ್ಮಶಬ್ದವೇಕೆ? ಮತ್ತು ಬ್ರಹ್ಮ ನಾರದ ಸನತ್ಕುಮಾರಾದಿಗಳು ಪರಮಾತ್ಮನ ಮಧ್ಯದೇಹದಿಂದ ಹುಟ್ಟಿದರು ಎಂದು ಹೇಳುವ ವಾಮನಪುರಾಣ ವಚನದ ವಿರೋಧವೂ ಬರುತ್ತದೆ. ಆದರಿಂದ ಹೀಗೆ ಹೇಳಬೇಕು—

ಕುಮಾರಬ್ರಹ್ಮರುದ್ರಾದ್ಯಾ ಹರೇರ್ಮಧ್ಯಾತ್ ಸಮುದ್ಗತಾಃ ।

ಇತಿ ವಾಮನೇ ।

ಆತ್ಮೇತಿ ಮಧ್ಯದೇಹಶ್ಚ ಸರ್ವದೇಹೋಽಪಿ ವಾ ಭವೇತ್ ।
ಮನೋ ಬುದ್ಧಿರಹಂಕಾರಶ್ಚಿತ್ತಂ ಜೀವಶ್ಚ ಕಥ್ಯತೇ ।
ಅಥವಾ ಸ್ವಯಮೇವೇತಿ ವಾಯುರ್ಬ್ರಹ್ಮಾಽಪಿ ವಾ ಭವೇತ್ ।
ಮುಖ್ಯತೋ ಬ್ರಹ್ಮ ಪರಮಮಾತ್ಮಶಬ್ದೇನ ಭಣ್ಯತೇ ॥

ಇತಿ ನಾಮಮಹೋದಧೌ ।

ದೇಹೇಂದ್ರಿಯಾದಿಭೇದೇನ ನಿರ್ಭೇದೋಽಪಿ ಹರಿಃ ಸ್ವಯಂ ।
ಭಣ್ಯತೇ ಕೇವಲೈಶ್ವರ್ಯಾದನಾದ್ಯಾನಂದಚಿದ್‌ಘನಃ ।

ಇತಿ ಗಾರುಡೇ ।

ಸನತ್ಕುಮಾರಾದಿಗಳು, ಬ್ರಹ್ಮರುದ್ರಾದಿಗಳು ವಿರಾಡ್ರೂಪಿ ಹರಿಯ ಮಧ್ಯದೇಹದಿಂದ ಹುಟ್ಟಿದರು ಎಂದು ವಾಮನಪುರಾಣ ಹೇಳುವುದರಿಂದ ಭಾಗವತದಲ್ಲಿ ಆತ್ಮ ಶಬ್ದಕ್ಕೆ ಮಧ್ಯದೇಹವೆಂದೇ ಅರ್ಥಗ್ರಹಿಸಬೇಕು. ಆತ್ಮಶಬ್ದಕ್ಕೆ ಮಧ್ಯ ದೇಹ ಎಂಬ ಅರ್ಥ ಕೋಶದಲ್ಲಿ ಉಕ್ತವೂ ಆಗಿದೆ. 'ಆತ್ಮ ಶಬ್ದಕ್ಕೆ ಮಧ್ಯದೇಹ, ಪೂರ್ಣದೇಹ, ಮನಸ್ಸು ಬುದ್ಧಿ ಅಹಂಕಾರ ಚಿತ್ತ ಜೀವ ಇವೆಲ್ಲವೂ ಅರ್ಥಗಳೆ. ತಾನು ಎಂಬ ಅರ್ಥದಲ್ಲಿಯೂ ಆ ಶಬ್ದವಿದೆ. ವಾಯುಬ್ರಹ್ಮರೂ ಆತ್ಮ ಎನಿಸುತ್ತಾರೆ. ಮುಖ್ಯವಾಗಿ ಆತ್ಮಶಬ್ದಾರ್ಥ ಪರಬ್ರಹ್ಮ' ಎಂದು ನಾಮಮಹೋದಧಿಯಲ್ಲಿ ಹೇಳಿದೆ. ಪರಮಾತ್ಮನಲ್ಲಿ ಅವನ ಶರೀರ ಇಂದ್ರಿಯಾದಿಗಳಿಗೆ ಪರಸ್ಪರವಾಗಿ ಅಥವಾ ಅವುಗಳಿಂದ ಪರಮಾತ್ಮನಿಗೆ ಭೇದವಿಲ್ಲ. ಆದರೂ ಪೂರ್ಣಾನಂದಜ್ಞಾನ ಸ್ವರೂಪನಾದ ಅವನು ಅಚಿಂತ್ಯಶಕ್ತಿಯಿಂದ ಶರೀರಾದಿ ಭಿನ್ನನೆಂದು ವ್ಯವಹಾರ ಗೋಚರನಾಗುತ್ತಾನೆ ಎಂದು ಗರುಡ ಪುರಾಣದಲ್ಲಿ ಹೇಳಿದೆ.

★★★

'ಪುರುಷ ಏವೇದಂ ಸರ್ವಂ' 'ಸ ಭೂಮಿಂ ವಿಶ್ವತೋ ವೃತ್ವಾ' ಎಂದು ಪುರುಷ ಸೂಕ್ತದಲ್ಲಿ ಹೇಳಿದಂತೆ ಸಮಸ್ತ ಚರಾಚರವೂ ವಿರಾಡ್ರೂಪಿ ಭಗವಂತನ ಅಧೀನ ಎಂದು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಸರ್ವಂ ಪುರುಷ ಏವೇದಂ ಭೂತಂ ಭವ್ಯಂ ಭವಚ್ಚ ಯತ್ ।
ತೇನೇದಮಾವೃತಂ ವಿಶ್ವಂ ವಿತಸ್ತಿಮಧಿತಿಷ್ಠತಾ ॥ ೧೫ ॥

ಭೂತ ಭವಿಷ್ಯ ವರ್ತಮಾನ ಪ್ರಪಂಚವೆಲ್ಲವೂ ವಿರಾಟ್‌ಪುರುಷನಾದ ಹರಿಯ ಅಧೀನ. ಅವನು ಎಲ್ಲರ ಹೃದಯದೊಳಗೆ ಇದ್ದು ಹೊರಗೂ ಇಡೀ ಪ್ರಪಂಚವನ್ನು ಆವರಿಸಿದ್ದಾನೆ.

ಇಲ್ಲಿ ಜಗತ್ತು ಮಿಥ್ಯೆ, ಅದು ಪರಬ್ರಹ್ಮನಿಂದ ಬೇರೆಯಾಗಿ ಸತ್ಯವಾಗಿರುವ ಪದಾರ್ಥವಲ್ಲ, ಪರಬ್ರಹ್ಮವೆ ಆಗಿದೆ ಎಂದು ಶ್ರೀಧರವ್ಯಾಖ್ಯಾನ. ಜಗತ್ತು ಸತ್ಯವೇ ಆದರೂ ವಿಷ್ಣುವಿನ ಶರೀರವಾಗಿದೆ, ಬೇರೆಯಲ್ಲ, ಎಂದು ವೀರರಾಘವ ವ್ಯಾಖ್ಯಾನ. ಪರಬ್ರಹ್ಮನೆ ಜಗತ್ತಾಗಿ ಪರಿಣಾಮ ಹೊಂದಿರುವುದರಿಂದ ಕಾರ್ಯಕಾರಣಗಳಿಗೆ ಭೇದಾಭೇದವಿರುವುದರಿಂದ ಪುರುಷನೇ ಜಗತ್ತು ಎಂದು ಅಭೇದ ಉಕ್ತವಾಗಿದೆ ಎನ್ನುತ್ತವೆ ಶುಕದೇವವ್ಯಾಖ್ಯಾನ, ವಲ್ಲಭವ್ಯಾಖ್ಯಾನಗಳು.[೧] ಇವೆಲ್ಲವೂ ಪ್ರಮಾಣ ವಿರುದ್ಧವಾಗಿವೆ ಎನ್ನುತ್ತಾರೆ—

ಸರ್ವಂ ಪುರುಷ ಏವೇತಿ ಭಣ್ಯತೇऽಭೇದವಜ್ಜಗತ್ ।
ತದಧೀನಂ ತು ಸತ್ತಾದಿ ಯತೋ ಹ್ಯಸ್ಯ ಸದಾ ಭವೇತ್ ॥

ಇತಿ ಬ್ರಹ್ಮತರ್ಕೇ ।

ವಿತಸ್ತಿಮಾತ್ರಂ ಹೃದಯಮಾಸ್ಥಾಯ ವ್ಯಾಪ್ನುತೇ ಜಗತ್ ।

ಇತಿ ಗಾರುಡೇ ।

ಜಗತ್ತು ಪರಮಾತ್ಮನ ಅಧೀನ, ಅವನಿಂದಲೇ ಜಗತ್ತಿಗೆ ಸ್ಥಿತ್ಯಾದಿಗಳು. ಅದರಿಂದ ಜಗತ್ತೆಲ್ಲವೂ ಪರಮಾತ್ಮನೇ ಎಂದು ಅಭಿನ್ನತ್ವ ವ್ಯವಹಾರವೆಂದು ಬ್ರಹ್ಮತರ್ಕದಲ್ಲಿ

---

೧. ಸರ್ವಂ ಪುರುಷ ಏವ ನ ತತಃ ಪೃಥಗಿತ್ಯರ್ಥಃ। ಪ್ರಪಂಚೇನ ತಸ್ಯಾಪರಿಚ್ಛೇದಂ ವಕ್ತುಂ ಸ ಭೂಮಿಮಿತ್ಯರ್ಥಮಾಹ । -ಶ್ರೀಧರಃ

ನಾಮರೂಪವಿಭಾಗಾನರ್ಹಾತಿಸೂಕ್ಷ್ಮ ಪ್ರಕೃತಿ ಪುರುಷ ಕಾಲ ಶರೀರಕಸ್ಯ ಪರಮ ಪುರುಷಸ್ಯೈವ ವಿಭಕ್ತನಾಮರೂಪ ಪ್ರಕೃತಿ ಪುರುಷ ಕಾಲ ಶರೀರ ಪರಮಾತ್ಮಾತ್ಮಕ ಜಗದಾಕಾರೇಣಾವಸ್ಥಾನಾದಯಮೈಕ್ಯೋಪದೇಶ ಉಪಪನ್ನಃ। -ವೀರರಾಘವಃ

ಇದಂ ಸರ್ವಂ ಚಿದಚಿದಾತ್ಮಕಂ ಶಕ್ತಿಶಕ್ತಿಮತೋಃ ಕಾರ್ಯಕಾರಣ ಯೋರ್ಭೇದಾಭೇದಸಂಬಂಧಸ್ಯ ಸರ್ವಶಾಸ್ತ್ರಸಂಮತತ್ವಾತ್ ಪುರುಷ ಏವ । -ಶುಕದೇವಃ

ಪೂರ್ವೋಕ್ತಂ ನಿರೂಪಿತಂ ಸರ್ವಂ ಪುರುಷ ಏವ । ಇದಮಪಿ ಪರಿ ದೃಶ್ಯಮಾನಂ ಜಡಾತ್ಮಕಂ ಸರ್ವಂ ಪುರುಷ ಏವ । -ವಲ್ಲಭಾಚಾರ್ಯಃ

ಹೇಳಿದೆ. ಪರಮಾತ್ಮ ಎಲ್ಲರ ಚೋಟುದ್ದದ ಹೃದಯದಲ್ಲಿದ್ದು ಹೊರಗೂ ಇಡೀ ಪ್ರಪಂಚವನ್ನು ವ್ಯಾಪಿಸಿದ್ದಾನೆ ಎಂದು ಗರುಡ ಪುರಾಣ ಹೇಳಿದೆ.

★★★

ಶ್ರೀಹರಿ ಎಲ್ಲರ ಒಳಗೂ ಹೊರಗೂ ವ್ಯಾಪಿಸಿರುವುದರಿಂದ ಎಲ್ಲರೂ ಸದಾ ಅವನ ಅಧೀನರೆ. ಅವರು ಮುಕ್ತರಾದಾಗ ಅಧೀನರಾಗದಿದ್ದಲ್ಲಿ ಮುಕ್ತಿಯನ್ನೇ ಹರಿ ಕೊಡಲಾರ ಎನ್ನುತ್ತಾರೆ ಬ್ರಹ್ಮದೇವರು ನಾರದರಿಗೆ—

ಸ್ವಧಿಷ್ಣ್ಯಂ ಪ್ರತಪನ್ ಪ್ರಾಣೋ ಬಹಿಶ್ಚ ಪ್ರತಪತ್ಯಸೌ ।
ಏವಂ ವಿರಾಜಂ ಪ್ರತಪನ್ ತಪತ್ಯಂತರ್ಬಹಿಃ ಪುಮಾನ್ ।
ಸೋऽಮೃತಸ್ಯಾಭಯಸ್ಯೇಶೋ ಮರ್ತ್ಯಮನ್ನಂ ಯದತ್ಯಗಾತ್ ॥ ೧೬ ॥

ಶ್ರೀಹರಿ ಜೀವಶರೀರದಲ್ಲಿದ್ದು ಒಳಗೆ ನೋಡುತ್ತ ಹೊರಗೂ ವಿಷಯ ಪದಾರ್ಥಗಳನ್ನು ಅನುಭವಿಸುತ್ತಾನೆ. ಹಾಗೇ ಬ್ರಹ್ಮಾಂಡದೊಳಗೂ ಎಲ್ಲ ನೋಡುತ್ತಾನೆ ಹೊರಗೂ ನೋಡುತ್ತಾನೆ. ಪುರುಷಸೂಕ್ತದಲ್ಲಿ ಹೇಳಿದಂತೆ ಅಮೃತ ವೆನಿಸಿದ ಮುಕ್ತಸಮುದಾಯಕ್ಕೂ ಸ್ವಾಮಿ. ಏಕೆಂದರೆ ವಿನಾಶಿಯಾದ ಅವ್ಯಕ್ತ ಮಹದಾದಿ ತತ್ವಗಳಿಂದ ಬದ್ಧರಾದ ಸಂಸಾರಿಗಳಿಗೆ ಅವನು ಸ್ವಾಮಿ. ಬಂಧಕವಾದ ಅವ್ಯಕ್ತಾದಿಗಳಿಗೂ ಅವುಗಳಿಂದ ಬದ್ಧರಾದ ಜೀವರಿಗೂ ಅವನು ಸ್ವಾಮಿಯಾಗಿರು ವಾಗ ಮುಕ್ತಿಯಲ್ಲಿ ಅವರು ತನ್ನ ಅಧೀನದಲ್ಲಿ ಇಲ್ಲವಾಗುವುದಾದರೆ ಮುಕ್ತಿಯನ್ನೇ ಕೊಡಲಾರ.

ಇಲ್ಲಿ 'ಸೂರ್ಯನು ತನ್ನ ಮಂಡಲವನ್ನು ಪ್ರಕಾಶಿಸುತ್ತ ಹೊರಗೂ ಹೇಗೆ ಬೆಳಗುವನೋ ಹಾಗೇ ವಿರಾಟ್‌ಪುರುಷನೂ ತನ್ನ ಶರೀರವನ್ನು ಮಾತ್ರವಲ್ಲದೆ ಬ್ರಹ್ಮಾಂಡವನ್ನೂ ಒಳಗೆ ಹೊರಗೆ ಎಲ್ಲೆಡೆ ಪ್ರಕಾಶಿಸುತ್ತಾನೆ, ಅವನು ಸರ್ವಾತ್ಮಕ ಮಾತ್ರವಲ್ಲ, ಕರ್ಮ ಫಲವಾದ ಅನಿತ್ಯವಾದ ಸುಖದುಃಖಭೋಗವನ್ನೂ ಮೀರಿ ನಿಂತವನಾದ್ದರಿಂದ ನಿತ್ಯಮುಕ್ತನಾಗಿದ್ದು ಸ್ವಾನಂದಕ್ಕೆ ಸ್ವಾಮಿಯೂ ಆಗಿರುತ್ತಾನೆ. ಎಂದು ಶ್ರೀಧರ ವ್ಯಾಖ್ಯಾನ ಮುಂತಾದುವು ಹೇಳುತ್ತವೆ. ಜೀವನ ಶರೀರದಲ್ಲಿದ್ದೂ ಕರ್ಮಫಲ ಉಣದಿರುವುದರಿಂದ ಅವನು ಮೋಕ್ಷದಾಯಕ ಎಂದು ವೀರರಾಘವ ವ್ಯಾಖ್ಯಾನ. ಇವುಗಳಿಗೆ ಪ್ರಮಾಣದ ಆಧಾರವಿಲ್ಲ. ಶ್ರೀಮದಾಚಾರ್ಯರು ಹೇಳು ತ್ತಾರೆ—

ಪಶ್ಯನ್ ಸ್ವಧಿಷ್ಣ್ಯಂ ದೇಹಂ ಸ ಬಹಿಷ್ಠಾನ್ ವಿಷಯಾನಪಿ ।
ಏವಮಂಡಾಂತರಂ ಪಶ್ಯನ್ ಬಹಿಃ ಸರ್ವಂ ಚ ಪಶ್ಯತಿ ॥

ಇತಿ ವಾಮನೇ ।

ಅವ್ಯಕ್ತಮಾತ್ಮನೋಽನ್ನಂ ಚ ಮಹದಾದಿ ವಿನಾಶಿ ಚ ।
ಯದತೀತಃ ಪರೋ ವಿಷ್ಣುಃ ಸ ಏವಾತೋ ವಿಮೋಕ್ಷದಃ ॥
ಇತಿ ನಾರದೀಯೇ ॥

'ಶ್ರೀಹರಿ ತನ್ನ ಸ್ಥಾನವಾದ ಜೀವಶರೀರವನ್ನು ನೋಡುತ್ತ ಹೊರಗಿನ ವಿಷಯ ಪದಾರ್ಥಗಳನ್ನೂ ಅನುಭವಿಸುತ್ತಾನೆ, ಹೀಗೆಯೆ, ಬ್ರಹ್ಮಾಂಡದ ಒಳಗೆ ಎಲ್ಲವನ್ನೂ ನೋಡುತ್ತ ಹೊರಗೂ ನೋಡುತ್ತಾನೆ' ಎಂದು ವಾಮನ ಪುರಾಣ ಹೇಳಿದೆ. 'ತನಗೆ ಭೋಗ್ಯವಾದ ವಿನಾಶಿಯಾದ ಅವ್ಯಕ್ತಮಹದಾದಿಗಳನ್ನೂ ಅವುಗಳಿಂದ ಬದ್ಧರಾದ ಜೀವರನ್ನೂ ಆಳುವವನು ವಿಷ್ಣುವಾದ್ದರಿಂದ ಅವನು ಮುಕ್ತರಿಗೂ ಅಧಿಪತಿ. ಅವನೆ ಮೋಕ್ಷದಾಯಕ' ಎಂದು ನಾರದೀಯ ಪುರಾಣ ಹೇಳಿದೆ.

★★★

'ಏತಾವಾನಸ್ಯ ಮಹಿಮಾ' ಎಂಬ ಪುರುಷಸೂಕ್ತ ಮಂತ್ರಾರ್ಥವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಮಹಿಮೈಷ ತತೋ ಬ್ರಹ್ಮನ್ ಪುರುಷಸ್ಯ ದುರತ್ಯಯಃ ।
ಪಾದೋಽಸ್ಯ ಸರ್ವಭೂತಾನಿ ಪುಂಸಃ ಸ್ಥಿತಿವಿದೋ ವಿದುಃ ।
ಅಮೃತಂ ಕ್ಷೇಮಮಭಯಂ ತ್ರಿಮೂರ್ಧ್ನೋಽಧಾಯಿ ಮೂರ್ಧಸು ॥೧೮॥

ಅದರಿಂದ ಪರಮಪುರುಷನ ಮಹಿಮೆ ಅಪಾರ. ಮೂರು ಶಿರಸ್ಸುಗಳುಳ್ಳ 'ತ್ರಿಮೂರ್ಧ' ಎಂಬ ಒಂದು ಅವತಾರದಲ್ಲಿ ಹರಿ ತನ್ನ ಮೂರು ಶಿರಸ್ಸುಗಳಿಂದ ಅನಂತಾಸನ ವೈಕುಂಠ ಪದ್ಮನಾಭ ಎಂಬ ಮೂರು ಪುರಗಳನ್ನೂ ಧರಿಸಿದ್ದಾನೆ. ಸರ್ವಜೀವರು ಅವನ ಒಂದು ಭಿನ್ನಾಂಶ ಮಾತ್ರರಾಗಿದ್ದಾರೆ ಎಂದು ಜೀವರ ಸ್ಥಿತಿಯನ್ನು ಪ್ರತ್ಯಕ್ಷ ಕಂಡು ಅರಿತ ಜ್ಞಾನಿಗಳು ಕಂಡಿದ್ದಾರೆ.

ಇಲ್ಲಿ ಅಮೃತ ಕ್ಷೇಮ ಅಭಯಗಳೆಂದರೆ ಜನಲೋಕ ತಪೋಲೋಕ ಸತ್ಯಲೋಕಗಳೆಂದು ಶ್ರೀಧರ, ಶುಕದೇವ, ವಲ್ಲಭರ ವ್ಯಾಖ್ಯಾನ. ಸ್ಥಿತಿಪದೋ ವಿದುಃ ಎಂದು ಪಾಠ. ಜೀವರು ಅವನ ಪಾದಗಳಂತಿರುವ ಲೋಕಗಳಲ್ಲಿ ಸ್ಥಿತರಾಗಿದ್ದಾರೆ' ಎನ್ನುತ್ತಾರೆ. 'ಪಾದೇಷು ಸರ್ವಭೂತಾನಿ' ಎಂದು ಪಾಠ. ಅದಕ್ಕೂ ಅದೇ ಅರ್ಥ. ಅದರಿಂದ ಪುನರುಕ್ತಿ ಮತ್ತು ಈ ವ್ಯಾಖ್ಯಾನಗಳೆಲ್ಲವೂ ಪ್ರಮಾಣ ವಿರೋಧ ವಿರುವುದರಿಂದಲೂ ಅಗ್ರಾಹ್ಯಗಳೆನ್ನುತ್ತಾರೆ—

ಸ್ವರೂಪಾಂಶೋ ವಿಭಿನ್ನಾಂಶ ಇತಿ ದ್ವೇಧಾಂಶ ಇಷ್ಯತೇ ।
ಅನಂತಾಸನ ವೈಕುಂಠ ಪದ್ಮನಾಭಾಃ ಸ್ವಯಂ ಹರಿಃ ।

ಜೀವಾ ಇಮೇ ವಿಭಿನ್ನಾಂಶಾ ಧರ್ಮಾಧರ್ಮಾದಿಸಂಯುತಾಃ ।
ಇತಿ ವಾಮನೇ । ಸರ್ವಸ್ಯ ಯಥಾವತ್ ಸ್ಥಿತಿವಿದಃ ।
ತ್ರಿಮೂರ್ಧಾ ಸನ್ ಹರಿರ್ಧತ್ತೇ ದ್ಯುತ್ರಯಂ ಮೂರ್ಧಭಿಸ್ತ್ರಿಭಿಃ ।
ಅನಂತಾಸನ ವೈಕುಂಠ ನಾರಾಯಣಪುರಾಣಿ ತು ।
ಬಹುಲಕ್ಷೋಚ್ಛ್ರಿತೇಷ್ವೇಷು ಸ ವಸತ್ಯಮೃತೋ ಹರಿಃ ।
ಇತಿ ಮಾತ್ಸ್ಯೇ ।

'ಪರಮಾತ್ಮನ ಅಂಶಗಳು ಎರಡು ಬಗೆಯವು. ಸ್ವರೂಪಾಂಶ ಮತ್ತು ಭಿನ್ನಾಂಶ ಎಂದು. ಅನಂತಾಸನ ವೈಕುಂಠ ಮತ್ತು ಪದ್ಮನಾಭ ಈ ಮೂರು ಹರಿಯ ಸ್ವರೂಪಾಂಶಗಳು. ಪುಣ್ಯಪಾಪ ಬದ್ಧರಾದ ಈ ಜೀವರೆಲ್ಲರೂ ಪರಮಾತ್ಮನ ಭಿನ್ನಾಂಶರು' ಎಂದು ವಾಮನ ಪುರಾಣದಲ್ಲಿ ಹೇಳಿದೆ. ಅದರಿಂದ ಪಾದ ಎಂದರೆ ಇಲ್ಲಿ ಭಿನ್ನಾಂಶ ವಿವಕ್ಷಿತವಾಗಿದೆ. ಭಿನ್ನಾಂಶರು ಜೀವರು. ಸ್ಥಿತಿ ವಿದಃ ಎಂದರೆ ಎಲ್ಲ ಜೀವರ ಸ್ಥಿತಿಯನ್ನು ಸರಿಯಾಗಿ ತಿಳಿದವರು ಜೀವರನ್ನು ಪರಮಾತ್ಮನ ಭಿನ್ನಾಂಶರೆಂದು ತಿಳಿದಿದ್ದಾರೆ. ಈ ವಿಷಯದಲ್ಲಿ ಅವರ ಅನುಭವವೆ ಸಾಕ್ಷಿಯಾಗಿದೆ ಎಂದರ್ಥ. ಮೂರು ಶಿರಸ್ಸುಗಳುಳ್ಳ 'ತ್ರಿಮೂರ್ಧ'ನೆಂಬ ರೂಪದಿಂದ ಅವತರಿಸಿ ಶ್ರೀಹರಿ 'ಮೂರು ಶಿರಸ್ಸುಗಳಿಂದ ಮೂರು ದ್ಯುಲೋಕಗಳನ್ನು ಧರಿಸುತ್ತಾನೆ. ಅನಂತಾಸನ ವೈಕುಂಠ ಶ್ವೇತದ್ವೀಪಗಳೇ ಆ ಮೂರು ದ್ಯುಲೋಕಗಳು. ಅವು ದ್ಯುಲೋಕಗಳು ಏಕೆಂದರೆ ಬಹುಲಕ್ಷ ಯೋಜನ ಎತ್ತರದವುಗಳು. ಒಂದು ಲಕ್ಷ ಯೋಜನ ಎತ್ತರದ ಅಂತರಿಕ್ಷಕ್ಕಿಂತ ಮೇಲಿನ ಎಲ್ಲ ಲೋಕಗಳೂ ದ್ಯುಲೋಕಗಳೆ. ಧಾಮತ್ರಯಗಳೂ ಬಹುಲಕ್ಷ ಯೋಜನ ಎತ್ತರದಲ್ಲಿ ಇವೆ ಎಂದಮೇಲೆ ದ್ಯುಲೋಕವೆನಿಸುವುದೆಂದು ಬೇರೆ ಹೇಳಬೇಕಾಗಿಲ್ಲ. ಈ ದ್ಯುಲೋಕಗಳಲ್ಲಿ ಹರಿ ಕ್ರಮವಾಗಿ ಅಮೃತ ಕ್ಷೇಮ ಅಭಯವೆನಿಸುವ ಅನಂತಾಸನ ವೈಕುಂಠ ಪದ್ಮನಾಭರೂಪಗಳಿಂದ ಇರುತ್ತಾನೆ ಎಂದು ಮತ್ಸ್ಯಪುರಾಣದಲ್ಲಿ ಹೇಳಿದೆ.

★★★

'ತ್ರಿಪಾದೂರ್ಧ್ವ ಉದೈತ್ ಪುರುಷ' ಎಂಬ ಮಂತ್ರದಲ್ಲಿ ಹೇಳಿದಂತೆ ಮೂಲೋಕಗಳಿಂದ ಹೊರಗೇ ಈ ಧಾಮತ್ರಯಗಳಿವೆ. ಅವುಗಳನ್ನು ಹೊಂದಲು ಬೇಕಾದ ಜ್ಞಾನ ಕರ್ಮಸಾಧನಗಳನ್ನೂ ಹರಿಯೆ ನಮ್ಮೊಳಗೆ ನಿಂತು ಮಾಡಿಸುತ್ತಾನೆ ಎಂದು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಪಾದಾಸ್ತ್ರಯೋ ಬಹಿಸ್ತ್ವಾಸನ್ನಪ್ರಜಾನಾಂ ಯ ಆಶ್ರಯಾಃ ।
ಅಂತಸ್ತ್ರಿಲೋಕ್ಯಾಸ್ತ್ವಪರೋ ಗೃಹಮೇಧೈರ್ಬೃಹದ್ವ್ರತಃ ॥ ೧೯ ॥

ಸೃತೀ ವಿಚಕ್ರಮೇ ವಿಷ್ವಕ್ ಸಾಶನಾನಶನೇ ಉಭೇ ।
ಯದವಿದ್ಯಾ ಚ ವಿದ್ಯಾ ಚ ಪುರುಷಸ್ತೂಭಯಾಶ್ರಯಃ ॥ ೨೦ ॥

ಅನಂತಾಸನ ವೈಕುಂಠ ಶ್ವೇತದ್ವೀಪಗಳೂ ಅವುಗಳಲ್ಲಿರುವ ಭಗವದ್ರೂಪಗಳೂ ಮೂರು ಲೋಕಗಳಿಗಿಂತ ಹೊರಗೇ ಇವೆ. ಪುತ್ರರಿಗೆ ದಾಯಭಾಗ ನೀಡದವರಾದ ದೇವತೆಗಳಿಗೆ ಮಾತ್ರ ಇವು ಆಶ್ರಯವೆನಿಸುತ್ತವೆ. ಉಳಿದವರಿಗೆ ಮೂಲೋಕದೊಳಗೇ ಇನ್ನೊಂದು ವೈಶ್ವಾನರಲೋಕವಿದೆ ಅಲ್ಲಿ ಇರುವ ವೈಶ್ವಾನರನನ್ನು ಗೃಹಸ್ಥಾಶ್ರಮಿಗಳು ಯಜ್ಞಗಳಿಂದ ಆರಾಧಿಸುತ್ತಾರೆ. ಆ ಲೋಕವನ್ನು ಹೊಂದುತ್ತಾರೆ. ಅದಕ್ಕೆ ನಾನಾರೂಪಗಳುಳ್ಳ ಹರಿ ದೇವತೆಗಳಿಗೂ ಋಷಿಗಳಿಗೂ ಸಂಬಂಧಿಸಿದ ಜ್ಞಾನಕರ್ಮಯೋಗಗಳನ್ನು ಅವರಲ್ಲಿ ನಿಂತು ತಾನೇ ಮಾಡಿಸುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಅಪ್ರಜಾನಾಂ' ಎಂದರೆ ಮಕ್ಕಳನ್ನು ಪಡೆಯದಿರುವ, ಅಂದರೆ ಬ್ರಹ್ಮಚಾರಿ ವಾನಪ್ರಸ್ಥ ಸನ್ಯಾಸಿಗಳಿಗೆ ಮೂಲೋಕದಿಂದ ಹೊರಗೆ ಸ್ಥಾನ, ಗೃಹಸ್ಥರಿಗೆ ಒಳಗೆ ಸ್ವರ್ಗದಲ್ಲಿ ಎಂದು ವಿವರಣೆ ನೀಡಿದ್ದಾರೆ. ವೀರರಾಘವ ವ್ಯಾಖ್ಯಾನದಲ್ಲಿಯೂ ವಿಶ್ವನಾಥ ವ್ಯಾಖ್ಯಾನದಲ್ಲಿಯೂ ಅಪ್ರಜರೆಂದರೆ ಹುಟ್ಟಿಲ್ಲದ ಮುಕ್ತರು ಪ್ರಕೃತಿಯ ಆಚೆ ಪರಮವ್ಯೋಮದಲ್ಲಿರುತ್ತಾರೆ ಎಂದಿದೆ. ಸಾಶನ ಅನಶನ ಮಾರ್ಗಗಳೆಂದರೆ ಸ್ವರ್ಗಮೋಕ್ಷ ಮಾರ್ಗಗಳೆಂದೂ ಎಲ್ಲ ವ್ಯಾಖ್ಯಾನ ಕಾರರ ಅಭಿಪ್ರಾಯ. ಇದೆಲ್ಲವೂ ಪ್ರಮಾಣವಿರುದ್ಧ ಅದರಿಂದ ಹೇಳುತ್ತಾರೆ—

ಅನಂತಾಸನ ವೈಕುಂಠ ನಾರಾಯಣಪುರಾಣಿ ತು ।
ತ್ರೀಣಿ ಧಾಮಾನಿ ವೈ ವಿಷ್ಣೋಸ್ತ್ರಿಲೋಕಾದ್ ಬಹಿರೇವ ಚ ।
ಅದಾಯಾದಾಸ್ತು ಪುತ್ರಾಣಾಮುದ್ರಿಕ್ತಜ್ಞಾನಚಕ್ಷುಷಃ ।
ನಾರಾಯಣಪರಾ ದೇವಾ ಏವಂ ತಾನ್ಯಾಪ್ನುವಂತಿ ಚ ।
ಸ ಏವಾನ್ಯಸ್ವರೂಪೇಣ ಶಕ್ರಲೋಕಸಮೀಪಗಃ ।
ಇಜ್ಯೋ ಯಜ್ಞಪುಮಾನ್ನಾಮ ಜ್ಞಾನಿನಾಂ ಗೃಹಿಣಾಂ ಪದಂ ।
ಯತೀನಾಂ ಧ್ರುವಲೋಕಸ್ಥೋ ವನಿನಾಂ ಮೇರುಮಧ್ಯಗಃ ।
ಆದಿತ್ಯಮಂಡಲಸ್ಥಸ್ತು ಜ್ಞಾನಿನಾಂ ಬ್ರಹ್ಮಚಾರಿಣಾಂ ।

ಇತಿ ಬ್ರಹ್ಮಾಂಡೇ ।

ತ್ರಿಪಾತ್ ಸ ಏವ ಭಗವಾನ್ ಸರ್ವಪ್ರಾಣಿಷು ಸಂಸ್ಥಿತಃ ।
ನಿರನ್ನೇಷು ಚ ವಿದ್ವತ್ಸು ತ್ರಿದಶೇಷ್ವಿತರೇಷು ಚ ।

ಇತ್ಯಧ್ಯಾತ್ಮೇ ।

'ಅನಂತಾಸನ ವೈಕುಂಠ ಶ್ವೇತದ್ವೀಪ ಇವು ವಿಷ್ಣುವಿನ ಧಾಮತ್ರಯಗಳು. ಇವು ಮೂಲೋಕಗಳಿಗಿಂತ ಆಚೆ ಇವೆ. ಅವುಗಳಲ್ಲಿ ಹರಿಯ ಮೂರು ರೂಪಗಳಿವೆ. ಅಪ್ರಜರಾದ ಅಂದರೆ, 'ತೇಷಾಂ ನ ಪುತ್ರಾ ದಾಯಮುಪಯಂತಿ' ಎಂದು ಶ್ರುತಿ ಹೇಳುವಂತೆ ಪುತ್ರರಿಗೆ ದಾಯಭಾಗ ಕೊಡದಿರುವ ಉತ್ತಮ ಜ್ಞಾನ ಚಕ್ಷುಗಳುಳ್ಳ ನಾರಾಯಣ ಭಕ್ತರಾದ ದೇವತೆಗಳು ಮಾತ್ರ ಆ ಲೋಕಗಳನ್ನು ಹೊಂದುತ್ತಾರೆ. ಹರಿಯೆ ಇನ್ನೊಂದು ರೂಪದಿಂದ ಇಂದ್ರಲೋಕದ ಸಮೀಪ ಕೆಳಗೆ ಇರುವ ವೈಶ್ವಾನರ ಲೋಕದಲ್ಲಿಯೂ ಇದ್ದಾನೆ. ಯಜ್ಞಪುರುಷನಾಮಕವಾದ ಈ ರೂಪ ಜ್ಞಾನಿಗಳಾದ ಗೃಹಸ್ಥರಿಗೆ ಉಪಾಸ್ಯವಾಗಿದ್ದು ಪ್ರಾಪ್ಯವೂ ಆಗಿದೆ. ಜ್ಞಾನಿಗಳಾದ ಯತಿಗಳಿಗೆ ಧ್ರುವಲೋಕದಲ್ಲಿರುವ ಭಗವದ್ರೂಪ, ವಾನಪ್ರಸ್ಥರಿಗೆ ಮೇರು ಪರ್ವತದ ಮಧ್ಯದಲ್ಲಿರುವ ಭಗವದ್ರೂಪ, ಬ್ರಹ್ಮಚಾರಿಗಳಿಗೆ ಸೂರ್ಯ ಮಂಡಲದಲ್ಲಿರುವ ಭಗವದ್ರೂಪ ಉಪಾಸ್ಯವೂ ಪ್ರಾಪ್ಯವೂ ಆಗಿದೆ' ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ಭಾಗವತದಲ್ಲಿ ಗೃಹಸ್ಥರ ಉಪಾಸ್ಯಮೂರ್ತಿಯನ್ನು ಹೇಳಿದ್ದು ಉಪಲಕ್ಷಣ. ಯತಿ ವಾನಪ್ರಸ್ಥ ಬ್ರಹ್ಮಚಾರಿಗಳಿಗೆ ಬ್ರಹ್ಮಾಂಡಪುರಾಣ ಹೇಳುವ ಉಪಾಸ್ಯಮೂರ್ತಿಗಳನ್ನೂ ಜೊತೆಗೆ ಇಟ್ಟುಕೊಳ್ಳಬೇಕು. ''ತ್ರಿಪಾತ್' ಎನಿಸಿದ ಭಗವಂತನೆ ಎಲ್ಲ ಜೀವರಲ್ಲಿಯೂ ಇದ್ದಾನೆ. ಅಂದರೆ, ಅನಶನರೆನಿಸಿದ ಜ್ಞಾನಿಗಳಾದ ದೇವತೆಗಳಲ್ಲಿಯೂ ಇದ್ದಾನೆ, ಸಾಶನರೆನಿಸಿದ ಜ್ಞಾನಿಗಳಾದ ಋಷಿಗಳಲ್ಲಿಯೂ ಇದ್ದಾನೆ' ಎಂದು ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ.

★★★

'ತಸ್ಮಾದ್ ವಿರಾಳಜಾಯತ' ಎಂದು ಮುಂತಾಗಿ ಪುರುಷಸೂಕ್ತದಲ್ಲಿ ಬ್ರಹ್ಮನ ಎರಡು ರೂಪಗಳ ಉತ್ಪತ್ತಿ ರುದ್ರಾದಿ ಸಮಸ್ತ ಪ್ರಪಂಚಕ್ಕಿಂತ ಬ್ರಹ್ಮ ಉತ್ತಮನೆನಿಸಿದುದು ಉಕ್ತವಾಗಿದೆ. ಅದನ್ನು ಬ್ರಹ್ಮ ನಾರದರಿಗೆ ಹೇಳುತ್ತಾನೆ—

ತಸ್ಮಾದಂಡಾದ್ ವಿರಾಡ್ ಜಜ್ಞೇ ಭೂತೇಂದ್ರಿಯಗುಣಾಶ್ರಯಃ ।
ತದ್ ದ್ರವ್ಯಮತ್ಯಗಾದ್ ವಿಶ್ವಂ ಗೋಭಿಃ ಸೂರ್ಯ ಇವಾತ್ರಯಂ ॥೨೧॥

ಆ ಬ್ರಹ್ಮಾಂಡದಲ್ಲಿ ವ್ಯಾಪಿಸಿ ಜನಿಸಿದ ಬ್ರಹ್ಮನೆ ಭೂತ ಇಂದ್ರಿಯ ಗುಣಮಯವಾದ ಶರೀರದಿಂದ ಹರಿಯ ನಾಭಿ ಕಮಲದಲ್ಲಿ ಇನ್ನೊಮ್ಮೆ ಜನಿಸಿದ. ಅವನು ಬ್ರಹ್ಮಾಂಡವನ್ನೂ ಅದರೊಳಗಿನ ಹದಿನಾಲ್ಕು ಲೋಕವನ್ನೂ ಜ್ಞಾನಾದಿ ಗುಣದಿಂದ ಮೀರಿಸಿ ಉತ್ತಮನೆನಿಸಿದ, ಸೂರ್ಯ ತನ್ನ ಕಿರಣಗಳಿಂದ ಅಂತರಿಕ್ಷವನ್ನು ಮೀರಿಸಿ ಶ್ರೇಷ್ಠನೆನಿಸುವಂತೆ. ಆದರೆ ಅವನಿಗಿಂತಲೂ ಭೂತ ಇಂದ್ರಿಯ ಗುಣಮಯವಾದ ಶರೀರವಿಲ್ಲದ ಹರಿಯೆ ಶ್ರೇಷ್ಠ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಯಸ್ಮಾದಂಡಂ ವಿರಾಡ್‌ಜಜ್ಞೇ' ಎಂದು ಪಾಠವಿಟ್ಟುಕೊಂಡು ಬ್ರಹ್ಮಾಂಡವನ್ನೂ ವಿರಾಟ್ ಪುರುಷನನ್ನೂ ಹುಟ್ಟಿಸಿದ ಭಗವಂತ ಬ್ರಹ್ಮಾಂಡಕ್ಕಿಂತ ಶ್ರೇಷ್ಠನೆನಿಸಿದ ಎಂದು ಹೇಳುತ್ತಾರೆ. ವಲ್ಲಭವ್ಯಾಖ್ಯಾನದಲ್ಲಿ ಮಾತ್ರ ಅಂಡದಿಂದ ಜನಿಸಿದ ವಿರಾಟ್‌ಪುರುಷನು ಅಂಡವನ್ನು ಮೀರಿ ಹೊರಗಡೆಯೂ ಪ್ರಕಾಶಿಸಿದ ಎಂದು ವಿವರಣೆ ನೀಡಿದೆ. 'ಎಲ್ಲ ಜೀವರಿಗಿಂತ ಬ್ರಹ್ಮ ಉತ್ತಮ, ಬ್ರಹ್ಮನಿಗಿಂತ ಪರಮಾತ್ಮ ಉತ್ತಮ' ಎಂಬ ಪ್ರಮೇಯ ಯಾರ ವ್ಯಾಖ್ಯಾನದಲ್ಲಿಯೂ ಸಿಗುವುದಿಲ್ಲ. ಪುರುಷ ಸೂಕ್ತದಲ್ಲೂ ಭಾಗವತ ಶ್ಲೋಕದಲ್ಲೂ ಈ ಪ್ರಮೇಯ ಸ್ವರಸವಾಗಿ ಪ್ರತಿಪಾದಿತವಾಗಿದೆ, ಗರುಡಪುರಾಣವಚನದ ಸಂವಾದವೂ ಇದೆ-

ತಸ್ಮಾದ್ಧರೇರಂಡಮಭೂದಂಡಾದಪಿ ಚತುರ್ಮುಖಃ ।
ಸ ವಿರಾಣ್‌ನಾಮಕಸ್ತಸ್ಮಾದಧಿಕೋ ಹರಿರೇವ ತು ॥
ಅಂಡಾಜ್ಜಾತಸ್ಯ ತಸ್ಯಾನ್ಯದ್ ರೂಪಂ ಪದ್ಮಾದಭೂದ್ಧರೇಃ ।
ಯದೋಭಯಾತ್ಮಕೋ ಜಜ್ಞೇ ಬ್ರಹ್ಮಾ ಲೋಕಪಿತಾಮಹಃ ।
ತದೈವ ಸೋತಿರಿಕ್ತೋಽಭೂಚ್ಛರ್ವಪೂರ್ವಪರಾನ್ ಜನಾನ್ ॥

'ಶ್ರೀಹರಿಯಿಂದ ಬ್ರಹ್ಮಾಂಡ ಹುಟ್ಟಿತು. ಬ್ರಹ್ಮಾಂಡದಿಂದ ವಿರಾಟ್ ನಾಮಕನಾದ ಬ್ರಹ್ಮ ಹುಟ್ಟಿದ. ಅವನಿಗಿಂತ ಹರಿಯೆ ಶ್ರೇಷ್ಠ. ಏಕೆಂದರೆ ಬ್ರಹ್ಮನು ಭೂತ ಇಂದ್ರಿಯ ಗುಣಮಯವಾದ ಶರೀರ ಉಳ್ಳವ, ಹರಿಗೆ ಅಂಥ ಶರೀರವಿಲ್ಲ. ಬ್ರಹ್ಮಾಂಡದಿಂದ ಜನಿಸಿದ ಆ ಬ್ರಹ್ಮನ ಇನ್ನೊಂದು ರೂಪ ಹರಿಯ ನಾಭಿ ಕಮಲ ದಿಂದ ಹುಟ್ಟಿತು. ಹೀಗೆ ಎರಡು ರೂಪಗಳಿಂದ ಜನಿಸಿದ ಲೋಕಪಿತಾಮಹನಾದ ಬ್ರಹ್ಮನು ರುದ್ರಾದಿಸಮಸ್ತ ಪ್ರಪಂಚವನ್ನೂ ಮೀರಿಸಿ ಉತ್ತಮನೆನಿಸಿದ' ಎಂದು ಗರುಡಪುರಾಣ ಹೇಳಿದೆ.

★★★

ವಿರಾಟ್‌ಪುರುಷನ ಅವಯವಗಳಿಂದಲೆ ಯಾಗಸಾಧನಗಳನ್ನು ಸಂಗ್ರಹಿಸಿ ಅವನನ್ನು ತಾನು ಯಜ್ಞದಿಂದ ಆರಾಧಿಸಿದೆನ್ನುತ್ತಾನೆ ಬ್ರಹ್ಮ—

ಯದಾಽಸ್ಯ ನಾಭ್ಯಾನ್ನಲಿನಾದಹಮಾಸಂ ಮಹಾತ್ಮನಃ ।
ನಾವಿದಂ ಯಜ್ಞಸಂಭಾರಾನ್ ಪುರುಷಾವಯವಾದೃತೇ ॥ ೨೨ ॥

ನಾಮಧೇಯಾನಿ ಮಂತ್ರಾಶ್ಚ ದಕ್ಷಿಣಾಶ್ಚ ವ್ರತಾನಿ ಚ ।
ದೇವತಾನುಕ್ರಮಃ ಕಲ್ಪಃ ಸಂಕಲ್ಪಃ ಸೂತ್ರಮೇವ ಚ ॥ ೨೫ ॥

ನಾನು ಮಹಾತ್ಮನಾದ ಹರಿಯ ನಾಭಿ ಕಮಲದಿಂದ ಜನಿಸಿದಾಗ ಆ

ಯಜ್ಞಪುರುಷನ ಅವಯವಗಳಲ್ಲಿ ಹೊರತಾಗಿ ಇನ್ನೆಲ್ಲಿಯೂ ಯಾಗಸಾಧನಗಳು ನನಗೆ ದೊರೆಯಲಿಲ್ಲ. ಆದರಿಂದ ಅವನ ಅವಯವಗಳಿಂದಲೇ ಹುಟ್ಟಿದ ಯಾಗಸಾಧನಗಳನ್ನು ಅವನ ಪೂಜೆಗಾಗಿ ಸಂಗ್ರಹಿಸಿದೆನು. ಯಾಗನಾಮಗಳು, ಮಂತ್ರಗಳು ದಕ್ಷಿಣೆಗಳು, ಬ್ರಹ್ಮಚರ್ಯಾದಿವ್ರತಗಳು, ದೇವತೆಗಳ ತಾರತಮ್ಯಕ್ರಮ, ಆಶ್ವಲಾಯನಾದಿ ಕಲ್ಪಸೂತ್ರಗ್ರಂಥ, ಯಜ್ಞ ಮಾಡುವೆನೆಂದು ಸಂಕಲ್ಪಿಸುವುದು, ಕರ್ಮಮೀಮಾಂಸಾ ದೇವಮೀಮಾಂಸಾ ಬ್ರಹ್ಮ ಮೀಮಾಂಸಾ ಸೂತ್ರಗಳು ಇತ್ಯಾದಿ ಯಾಗ ಸಾಧನಗಳನ್ನು ಸಂಗ್ರಹಿಸಿದೆನು.

ಬ್ರಹ್ಮದೇವರು ಭಗವಂತನ ಮೂರು ರೂಪಗಳನ್ನು ಪಶುಗಳನ್ನಾಗಿ ಮಾಡಿಕೊಂಡು ಯಜ್ಞದಿಂದ ಮೂರು ಲೋಕಗಳನ್ನು ಆರಾಧಿಸಿದರೆಂದು ಕೆಲವೆಡೆ ಹೇಳಿದ್ದುಂಟು. ಇದು ಹೇಗೆ ಸಾಧ್ಯ? ಮೂರು ಲೋಕಗಳನ್ನು ಪಶುಗಳನ್ನಾಗಿ ಮಾಡಿಕೊಂಡು ಮಾನಸ ಯಜ್ಞದಿಂದ ಮೂರು ಭಗವದ್ರೂಪಗಳನ್ನು ಆರಾಧಿಸಿದರು. ಮೂರು ಲೋಕಗಳನ್ನು ಭಗವಂತನ ಅಧೀನವೆಂದು ಚಿಂತಿಸುವುದೇ ಮೂರು ಲೋಕಗಳನ್ನು ಪಶುಗಳನ್ನಾಗಿ ಮಾಡಿಕೊಳ್ಳುವ ಮಾನಸಯಜ್ಞವೆನಿಸುತ್ತದೆ. ಆದರಿಂದ ಭಗವದ್ರೂಪಗಳನ್ನು ಪಶುಗಳನ್ನಾಗಿ ಮಾಡಿಕೊಂಡರು ಎನ್ನುವ ಮಾತಿಗೆ ಭಗವಂತನ ಪ್ರತಿಮೆಗಳಾಗಿರುವ ಮೂರು ಲೋಕಗಳನ್ನು ಪಶುಗಳನ್ನಾಗಿ ಚಿಂತಿಸಿದರೆಂದರ್ಥ. ರೂಪವೆಂದರೆ ಪ್ರತಿಮೆ. ಮೂರು ಲೋಕಗಳನ್ನು ಆರಾಧಿಸಿದರೆಂದರೆ ಮೂಲೋಕಗಳೊಳಗಿರುವ ಮೂರು ಭಗವದ್ರೂಪಗಳನ್ನು ಆರಾಧಿಸಿದರೆಂದೇ ಅರ್ಥ. ಈ ರೀತಿಯಲ್ಲಿ ಅರ್ಥವನ್ನು ಗ್ರಹಿಸುವುದು ಗರುಡ ಪುರಾಣಸಂಮತ—

ತ್ರಿಲೋಕಸ್ಥಾನಗಂ ವಿಷ್ಣುಮಯಜಚ್ಚ ಸಮಾಹಿತಃ ।
ತದ್ರೂಪಭೂತಾನ್ ತ್ರೀನ್ ಲೋಕಾನ್ ಪಶೂನ್ ಕೃತ್ವಾ ಮಹಾಮನಾಃ॥
ಇತಿ ಗಾರುಡೇ । ಸೂತ್ರಂ ಮೀಮಾಂಸಾಸೂತ್ರಂ ।

ಮೂರು ಲೋಕಗಳೆಂಬ ಸ್ಥಾನಗಳಲ್ಲಿರುವ ವಿಷ್ಣುವನ್ನು ಅವನ ಪ್ರತಿಮಾ ರೂಪವಾದ ಮೂರು ಲೋಕಗಳನ್ನು ಪಶುಗಳನ್ನಾಗಿ ಚಿಂತಿಸಿ ಮಾನಸಯಜ್ಞದಿಂದ ಬ್ರಹ್ಮದೇವರು ಆರಾಧಿಸಿದರೆಂದು ಗರುಡಪುರಾಣದಲ್ಲಿ ಹೇಳಿದೆ. ಸೂತ್ರ ಎಂದರೆ ಕರ್ಮಮೀಮಾಂಸಾ ದೇವಮೀಮಾಂಸಾ ಬ್ರಹ್ಮಮೀಮಾಂಸಾ ಎಂಬ ಮೂರು ಮೀಮಾಂಸಾಸೂತ್ರಗಳೆಂದರ್ಥ.

ಕರ್ಮಸ್ವರೂಪ ದೇವತಾಸ್ವರೂಪ ದೇವತೆಗಳೊಳಗಿರುವ ಪರಮಾತ್ಮ ಸ್ವರೂಪಗಳನ್ನು ತಿಳಿದೇ ಯಜ್ಞ ಮಾಡಬೇಕು. ಆದಕ್ಕೆ ಮೂರು ಸೂತ್ರಗಳೂ ಸಾಧನಗಳು ಆದರಿಂದ ಅವೂ ಯಾಗಸಾಧನಗಳಲ್ಲಿ ಸೇರುತ್ತವೆ.

★★★

'ಪುರುಷ ಏವೇದಂ ಸರ್ವಂ' 'ಎಲ್ಲವೂ ಭಗವಂತನ ಅಧೀನ' ಎಂದರೆ ನಾವೆಲ್ಲರೂ ಎಲ್ಲ ಯಾಗಸಾಧನಗಳಿಂದ ಭಗವಂತನನ್ನೆ ಆರಾಧಿಸುವುದರಿಂದ ಎಲ್ಲವೂ ಅವನ ಅಧೀನ ಎನ್ನುತ್ತಾರೆ ಬ್ರಹ್ಮದೇವರು ನಾರದರಿಗೆ—

ತತಸ್ತೇ ಭ್ರಾತರ ಇಮೇ ಪ್ರಜಾನಾಂ ಪತಯೋ ನವ ।
ಅಯಜನ್ ವ್ಯಕ್ತಮವ್ಯಕ್ತಂ ಪುರುಷಂ ಸುಸಮಾಹಿತಾಃ ॥ ೨೮ ॥

ತತಶ್ಚ ಮನವಃ ಕಾಲ ಈಜಿರೇ ಋಷಯೋಽಪರೇ ।
ಪಿತರೋ ವಿಬುಧಾ ದೈತ್ಯಾ ಮನುಷ್ಯಾಃ ಕ್ರತುಭಿರ್ವಿಭುಂ ॥ ೨೯ ॥

ನಾರಾಯಣೇ ಭಗವತಿ ತದಿದಂ ವಿಶ್ವಮಾಹಿತಂ ।
ಗೃಹೀತಮಾಯೋರುಗುಣೇ ಸರ್ಗಾದಾವಗುಣೇ ಸ್ವತಃ ॥ ೩೦ ॥

ಬಳಿಕ ನಿನ್ನ ಸೋದರರು ಈ ಒಂಬತ್ತು ಮಂದಿ ಪ್ರಜಾಪತಿಗಳೂ ಸ್ವಭಾವತಃ ಅವ್ಯಕ್ತನಾದ ಒಲಿದರೆ ವ್ಯಕ್ತನಾಗುವ ವಿರಾಟ್‌ಪುರುಷನಾದ ಹರಿಯನ್ನು ಮಾನಸ ಯಜ್ಞದಿಂದ ಆರಾಧಿಸಿದರು. ಬಳಿಕ ವಸಂತಾದಿ ಕಾಲದಲ್ಲಿ ಮನುಗಳು ಋಷಿಗಳು, ಪಿತೃಗಳು, ದೇವತೆಗಳು, ಅಸುರರು, ಚಕ್ರವರ್ತಿಗಳು ಯಜ್ಞಗಳಿಂದ ಪರಮಾತ್ಮನನ್ನು ಪೂಜಿಸಿದರು. ಅದರಿಂದ ಸ್ವತಃ ತ್ರಿಗುಣವರ್ಜಿತನಾಗಿದ್ದು ಸೃಷ್ಟ್ಯಾದಿಗಳಿಗಾಗಿ ತ್ರಿಗುಣಗಳನ್ನು ಪರಿಗ್ರಹಿಸುವ ಹರಿಗೇ ಎಲ್ಲವೂ ಅಧೀನವಾಗಿವೆ.

ಇಲ್ಲಿ ಇಡಿ ಪ್ರಪಂಚ ಭಗವಾನ್ ನಾರಾಯಣನಲ್ಲಿ ನಿಂತಿದೆ ಎನ್ನುವುದಕ್ಕೆ ಏನು ಪ್ರಸಕ್ತಿ ಎನ್ನುವುದು ತಿಳಿಯುವುದಿಲ್ಲ. ಹಿಂದೆ ಎಲ್ಲ ದೇವತೆಗಳು ಋಷಿಗಳು ಮುಂತಾದವರು ನಾರಾಯಣನನ್ನು ಆರಾಧಿಸಿದರು ಎಂದಿದೆ. ಈಗ ನಾರಾಯಣ ಜಗತ್ತಿಗೆ ಆಶ್ರಯ ಎಂದಿದೆ. ಇವುಗಳಿಗೆ ಪರಸ್ಪರ ಸಂಬಂಧವೇನು? ಇದಕ್ಕೆ ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ, ಇವುಗಳಿಗೆ ಪರಸ್ಪರ ಸಂಬಂಧವಿಲ್ಲ. ಆದರೆ ನಾರದರು ಬ್ರಹ್ಮನಲ್ಲಿ 'ಯದ್ರೂಪಂ ಯದಧಿಷ್ಠಾನಂ ಯತಃ ಸೃಷ್ಟಮಿದಂ ವಿಭೋ' ಎಂದು ಈ ಜಗತ್ತಿಗೆ ಅಧಿಷ್ಠಾನ, ಆಶ್ರಯ ಯಾವುದೆಂದೂ ಪ್ರಶ್ನಿಸಿದ್ದರು. ಅದನ್ನೀಗ ಬ್ರಹ್ಮ ಉತ್ತರಿಸುತ್ತಿದ್ದಾನೆ' ಎಂದು. ಆದರೆ ಈ ಪ್ರಶ್ನೆಗೆ ಉತ್ತರ ಹಿಂದೆ—

ಕಾಲಾದ್ ಗುಣವ್ಯತಿಕರಾತ್ ಪರಿಣಾಮಸ್ಸ್ವಭಾವತಃ
ಕರ್ಮಣೋ ಜನ್ಮ ಮಹತಃ ಪುರುಷಾಧಿಷ್ಠಿತಾದಭೂತ್ ॥

'ಕಾಲ ಗುಣವೈಷಮ್ಯ ಪ್ರಕೃತಿಯ ಪರಿಣಾಮಸ್ವಭಾವ ಜೀವಾದೃಷ್ಟ ಎಲ್ಲದಕ್ಕೂ ಭಗವಂತ ಅಧಿಷ್ಠಾನ'ವೆಂದು ಹೇಳಿಯಾಗಿದೆ.

ಮತ್ತು ಇಲ್ಲಿ 'ತದಿದಂ ವಿಶ್ವಮಾಹಿತಂ' 'ತತ್ ಆ ಕಾರಣದಿಂದ ಎಲ್ಲ ಜಗತ್ತು ಭಗವಂತನ ಅಧೀನ' ಎಂದಿದೆ. ಯಾವ ಕಾರಣದಿಂದ? ಎಲ್ಲರೂ ಎಲ್ಲ ವಸ್ತುಗಳಿಂದ ಭಗವಂತನನ್ನೇ ಆರಾಧಿಸುವುದರಿಂದ ಎನ್ನುವುದು ಸ್ಪಷ್ಟವಿದೆ. ಅದರಿಂದ ಹೇಳುತ್ತಾರೆ—

ಯಸ್ಮಾತ್ ತಮೇವಾಯಜನ್ ತಸ್ಮಾದಿದಂ ತಸ್ಮಿನ್ನಾಹಿತಂ ।
ನಿತ್ಯಂ ಗೃಹೀತಾಃ ಸತ್ವಾದ್ಯಾ ಜೀವವಜ್ಜಡವನ್ನ ತು ।
ಮಿಥ್ಯಾಮಾನಾತ್ ಸ್ವರೂಪತ್ವಾತ್ ಸ್ವಾತಂತ್ರ್ಯಾದ್ ಬಹಿರೇವ ತು ।
ಇತಿ ಬ್ರಹ್ಮತರ್ಕೇ ।

ಜಗತ್ಪೂಜ್ಯರಾದ ಬ್ರಹ್ಮಾದಿ ದೇವತೆಗಳು ಋಷಿಗಳು ಮುಂತಾದವರೂ ಭಗವಾನ್ ನಾರಾಯಣನನ್ನೇ ಆರಾಧಿಸುವುದರಿಂದ ಈ ಜಗತ್ತೆಲ್ಲವೂ ಅವನ ಅಧೀನ ಎಂದು 'ತದಿದಂ ವಿಶ್ವಮಾಹಿತಂ' ಎನ್ನುವಲ್ಲಿ ಉಕ್ತವಾಗಿದೆ.

ಈ ಶ್ಲೋಕದಲ್ಲಿ ಹರಿ ಸೃಷ್ಟಿಗಾಗಿ ಗುಣತ್ರಯವನ್ನು ಸ್ವೀಕರಿಸಿದನೆಂದರೆ ಹಿಂದೆ ಸ್ವೀಕರಿಸಿರಲಿಲ್ಲವೆಂದಂತಾಗುವುದು. ಆಗ ಅದಕ್ಕೆ ಅಸ್ತಿತ್ವವೆ ಇರಲಾರದು ಅನಾದಿತ್ವಕ್ಕೆ ಭಂಗ ಬಂದೀತು, ಹರಿ ಗುಣಗಳನ್ನು ಸ್ವೀಕರಿಸಿದರೆ ಗುಣಬದ್ಧನೆನಿಸುವ ಪ್ರಸಂಗವೂ ಇದೆ ಎಂಬ ಶಂಕೆಗಳಿಗೆ ಬ್ರಹ್ಮತರ್ಕ ಸಮಾಧಾನ ನೀಡಿದೆ— 'ಸತ್ವಾದಿಗುಣಗಳನ್ನು ಶ್ರೀಹರಿ ಸದಾ ಸ್ವೀಕರಿಸಿಯೆ ಇದ್ದಾನೆ. ವಿಶೇಷವಾಗಿ ಸೃಷ್ಟ್ಯಾದಿಕಾಲದಲ್ಲಿ ಸ್ವೀಕರಿಸು ತ್ತಾನೆ. ತ್ರಿಗುಣಸ್ವೀಕಾರವಿದು ಜೀವರಂತೆ ಮಿಥ್ಯಾಭಿಮಾನದಿಂದಲ್ಲ, ಆದರಿಂದ ಬದ್ಧನೆನಿಸುವ ಪ್ರಸಂಗವಿಲ್ಲ. ಜಡಪದಾರ್ಥಗಳಂತೆ ಗುಣಸ್ವರೂಪವಾಗಿರುವು ದರಿಂದಲೂ ಅಲ್ಲ. ಅದರಿಂದ ಹರಿಗೆ ವಿಕಾರಿತ್ವಪ್ರಸಂಗ ವಿಲ್ಲ. ಅಭಿಮಾನವಾಗಲಿ ವಿಕಾರವಾಗಲಿ ಇಲ್ಲದಂತೆ ಗುಣಗಳನ್ನು ಪರಿಗ್ರಹಿಸುತ್ತಾನೆ. ಏಕೆಂದರೆ ಅವನು ಸ್ವತಂತ್ರ. ಗುಣಗಳು ಅವನಿಗೆ ಅಧೀನವಾಗಿವೆ. ಅವನಲ್ಲಿ ಯಾವ ದೋಷಗಳಿಗೂ ಕಾರಣವಾಗಲಾರವು' ಎಂದು.

★★★

ನಾರದರ ಎಲ್ಲ ಪ್ರಶ್ನೆಗಳಿಗೂ ತಾನು ಉತ್ತರಿಸಿದ್ದೇನೆ ಎನ್ನುತ್ತಾರೆ ಬ್ರಹ್ಮದೇವರು—

ಇತಿ ತೇಽಭಿಹಿತಂ ತಾತ ಯಥೇದಮನುಪೃಚ್ಛಸಿ ।
ನಾನ್ಯದ್ ಭಗವತಃ ಕಿಂಚಿದ್ ಭಾವ್ಯಂ ಸದಸದಾತ್ಮಕಂ ॥ ೩೨ ॥

ಭಗವಂತನಿಂದ ಸೃಷ್ಟವಾಗುವ ಈ ವ್ಯಕ್ತಾವ್ಯಕ್ತ ಪ್ರಪಂಚ ಭಗವಂತನಿಗಿಂತ ಬೇರೆ ಸ್ವತಂತ್ರ ವಸ್ತುವಾಗಿ ಇರುವುದಿಲ್ಲ. ಹೀಗೆ ನೀನು ಕೇಳಿದ್ದನ್ನು ಎಲ್ಲವನ್ನೂ ನಾನು ನಿನಗೆ ಹೇಳಿದ್ದೇನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ ಸದಸದಾತ್ಮಕವಾದ ಅಂದರೆ ಕಾರ್ಯಕಾರಣಾತ್ಮಕವಾದ ಪ್ರಪಂಚ ಯಾವುದೂ ಬ್ರಹ್ಮನಿಗಿಂತ ಬೇರೆಯಲ್ಲ ಎಂದೇ ವ್ಯಾಖ್ಯಾನ ಮಾಡಿದ್ದಾರೆ. ವೀರರಾಘವ ವ್ಯಾಖ್ಯಾನದಲ್ಲಿ ಪ್ರಪಂಚ ಬ್ರಹ್ಮನ ಶರೀರವಾಗಿಯೆ ಇದೆ ಹೊರತು ಬೇರೆಯಾಗಿ ಇಲ್ಲ ಎಂದಿದೆ. ವಲ್ಲಭವ್ಯಾಖ್ಯಾನದಲ್ಲಿ ಸತ್ ಆದ ಘಟಾದಿಗಳು ಮಾತ್ರವಲ್ಲದೆ ಅಸತ್ತಾದ ಮೊಲದ ಕೋಡು ಮತ್ತು ಚಿಪ್ಪಿನಲ್ಲಿ ಕಾಣುವ ಬೆಳ್ಳಿ ಇವೂ ಕೂಡ ಬ್ರಹ್ಮರೂಪವೆ ಆಗಿವೆ ಎಂದಿದೆ. ಅಸತ್‌ಪದಾರ್ಥ ಬ್ರಹ್ಮ ರೂಪವಲ್ಲದಿದ್ದರೆ ಅದು ಕಾಣಿಸಲಾರದು, ವ್ಯವಹಾರಗೋಚರವೂ ಅನುವ್ಯವಸಾಯ ಗೋಚರವೂ ಆಗದು ಎಂದಿದೆ.[೧] ಈ ವ್ಯಾಖ್ಯಾನಗಳೆಲ್ಲವೂ ಪ್ರಮಾಣವಿರುದ್ಧ.

ಸದಿತಿ ವ್ಯಕ್ತಮುದ್ದಿಷ್ಟಂ ಅಸದವ್ಯಕ್ತಮುಚ್ಯತೇ ।
ಗಮ್ಯಾಗಮ್ಯ ಸ್ವರೂಪತ್ವಾತ್ ತತ್ಸತ್ತಾದಿ ಹರೇರ್ಯತಃ ।
ಅತಸ್ತಸ್ಮಾದನ್ಯದೇವ ಹ್ಯನನ್ಯದಿತಿ ಭಣ್ಯತೇ । ಇತಿ ಚ ।

ಸತ್ ಎಂದರೆ ತಿಳಿಯಲು ಯೋಗ್ಯವಾದ ವ್ಯಕ್ತವಾದ ವಸ್ತು. ಅಸತ್ ಎಂದರೆ ತಿಳಿಯಲಾಗದ, ಅವ್ಯಕ್ತವಾದ ವಸ್ತು. ಅದರ ಅಸ್ತಿತ್ವ ಪ್ರವೃತ್ತಿ ಮುಂತಾದುವು ಹರಿಯಿಂದಲೆ ಆಗುವುದರಿಂದ, ಅದು ಅವನಿಗಿಂತ ಬೇರೆಯೆ ಆದರೂ ಬೇರೆಯಲ್ಲ ಎಂದು ವ್ಯವಹಾರ ಎಂದು ಬ್ರಹ್ಮತರ್ಕ ಹೇಳಿದೆ.

★★★

ಪರಮಾತ್ಮನನ್ನು ಪೂರ್ತಿಯಾಗಿ ಪರಮಾತ್ಮನೇ ತಿಳಿಯಬೇಕು. ಅವನು ತಿಳಿದಷ್ಟು ಸರ್ವಜ್ಞರಾದ ಬ್ರಹ್ಮವಾಯುಗಳೂ ತಿಳಿಯಲಾರರೆಂದಮೇಲೆ ಉಳಿದವರ ಪಾಡೇನು? ಎಂದು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

---

೧. ಸದಸದಾತ್ಮಕಂ ಕಾರ್ಯಕಾರಣಾತ್ಮಕಂ ಭಾವ್ಯಂ ಸೃಜ್ಯಂ ಭಗವತಃ ಸಕಾಶಾದನ್ಯತ್ ಪೃಥಕ್ ನ ಭವತಿ । -ಶ್ರೀಧರಃ

ಚೇತನಾಚೇತನಾತ್ಮಕಂ ಕೃತ್ಸ್ನಂ ಜಗತ್ ಕಿಂಚಿದಪಿ ಭಗವತಃ ಅನ್ಯತ್ ಪೃಥಗಿತಿ ನ ಭಾವ್ಯಂ ನಾನುಸಂಧೇಯಂ । -ವೀರರಾಘವಃ

ಸದಸದಾತ್ಮಕಮಿತಿ । ಸದಸದ್‌ವ್ಯವಹಾರಯೋಗ್ಯಂ ಘಟಾದಿಕಂ ಶಶಶೃಂಗಾದಿಕಂ ಭ್ರಮವಿಷಯಶ್ಚ। ತಸ್ಮಾದ್ ಯತ್ರಾಪಿ ಮಿಥ್ಯಾ ಪ್ರತ್ಯಯಸ್ತದ್ವಿಷಯೋಽಪಿ ಭಗವಾನ್ । ಅನ್ಯಥಾ ತಸ್ಯ ಭಾನಂ ಜ್ಞಾನಂ ಚ ನೋತ್ಪದ್ಯೇತ । ಅನುವ್ಯವಸಾಯಶ್ಚ ನ ಭವೇತ್ । -ವಲ್ಲಭಃ

ಭಾನಂ ಶುಕ್ತಿರಜತಾದೇಃ । ಜ್ಞಾನಂ ಶಶಶೃಂಗಾದೇಃ । ತಥಾಚ ಪ್ರತಿಭಾಸರೂಪೇಣ ವಚನರೂಪೇಣಾನುವ್ಯವಸಾಯ ವಿಷಯರೂಪೇಣ ಚ ಯಾ ತತ್ಸತ್ತಾ ಸಾ ತೇಷಾಂ ಬ್ರಹ್ಮ ರೂಪತ್ವಂ ವಿನಾ ನೋಪಪದ್ಯತ ಇತಿ ತೇಷಾಮಪಿ ತೇನ ರೂಪೇಣ ಬ್ರಹ್ಮತ್ವಂ ।
-ಪುರುಷೋತ್ತಮಃ

ನತೋಽಸ್ಮ್ಯಹಂ ತಚ್ಚರಣಂ ಸಮೀಯುಷಾಂ
ಭವಚ್ಛಿದಂ ಸ್ವಸ್ತ್ಯಯನಂ ಸುಮಂಗಲಂ ।
ಯಃ ಸ್ವಾತ್ಮಮಾಯಾವಿಭವಂ ಸ್ವಯಂ ಗತೋ
ನಾಹಂ ನಭಸ್ವಾಂಸ್ತಮಥಾಪರೇ ಕುತಃ ॥ ೩೫ ॥

ಹರಿ ತನ್ನ ಸ್ವರೂಪಭೂತವಾದ ಮಹಿಮೆಯನ್ನು ಪೂರ್ತಿಯಾಗಿ ತಾನೇ ತಿಳಿಯಬಲ್ಲ. ನಾನಾಗಲಿ ಮುಖ್ಯಪ್ರಾಣನಾಗಲಿ ಅವನಷ್ಟು ತಿಳಿಯಲಾರೆವು. ಎಂದಮೇಲೆ ಉಳಿದವರ ಪಾಡೇನು? ಅಂಥ ಹರಿಯ ಪಾದವನ್ನು ನಮಿಸುತ್ತೇನೆ. ಶರಣಾಗತರಿಗೆ ಸಂಸಾರ ಭಯಪರಿಹಾರ ಮಾಡುವಂಥಹುದು. ಪರಮ ಮಂಗಳಕರವಾದ ಆ ವಿಷ್ಣುಪಾದವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು (ವೀರರಾಘವ ಹೊರತು)

ಯೋ ಹ್ಯಾತ್ಮಮಾಯಾ ವಿಭವಂ ಸ್ಮ ಪರ್ಯಗಾತ್

ಯಥಾ ನಭಃ ಸ್ವಾಂತಮಥಾಪರೇ ಕುತಃ ?

ಎಂದು ಅಪಪಾಠವಿಟ್ಟುಕೊಂಡು 'ಭಗವಂತನ ಮಹಿಮೆಯನ್ನು ಇಷ್ಟು ಎಂದು ಭಗವಂತನೇ ತಿಳಿದಿಲ್ಲ, ಆಕಾಶ ತನ್ನ ಎಲ್ಲೆಯನ್ನು ತಾನು ಕಾಣದಿರುವಂತೆ, ಉಳಿದವರ ಪಾಡೇನು? ಏಕೆ ತಿಳಿದಿಲ್ಲವೆಂದರೆ ಅದಕ್ಕೆ ಕೊನೆಯಿಲ್ಲ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಇವರು 'ಪರ್ಯಗಾತ್' ಎಂಬಲ್ಲಿ 'ಪರಿ' ಶಬ್ದ ನಿಷೇಧಾರ್ಥ ವೆಂದಿಟ್ಟುಕೊಂಡು 'ಇಷ್ಟು' ಎಂದು ಅಧ್ಯಾಹಾರ ಮಾಡಿಕೊಂಡು ಕ್ಲೇಶಪಟ್ಟಿದ್ದಾರೆ.[೧] ಭಗವಂತನ ಮಹಿಮೆಗೆ ಇಲ್ಲದಿದ್ದ ಎಲ್ಲೆಯನ್ನು ಭಗವಂತನೂ ತಿಳಿದಿಲ್ಲ ಎನ್ನುವುದಕ್ಕೆ ಆಕಾಶ ತನ್ನ ಎಲ್ಲೆಯನ್ನು ತಾನು ತಿಳಿಯದಿರುವಂತೆ ಎಂಬ ಉದಾಹರಣೆಯೂ ಸರಿಯಲ್ಲ. ಜಡವಾದ ಆಕಾಶ ಏನೂ ತಿಳಿಯದು ತಾನೆ? ಅದರಿಂದ ಹೀಗೆ ಹೇಳಬೇಕು—

ಸರ್ವಜೀವನಿಕಾಯೇಷು ಬ್ರಹ್ಮವಾಯೂ ಹರೇರ್ವಿದೌ ।
ನ ಚಾನ್ಯಸ್ತಾದೃಶೋ ವೇತ್ತಾ ಯಾವದ್ ವೇತ್ತಿ ಹರಿಃ ಸ್ವಯಂ ।
ತಾವತ್ ತಾವಪಿ ನೋ ವಿಷ್ಣುಂ ಜಾನೀತೋ ಲೋಕವಂದಿತೌ ॥

ಇತಿ ಬ್ರಹ್ಮಾಂಡೇ ।

---

೧. ಸ್ವಮಾಯಾವಿಸ್ತಾರಂ ಯಃ ಸ್ವಯಮಪಿ ಪರ್ಯಗಾತ್ । ಪರಿ ಶಬ್ದೋ ನಿಷೇಧೇ । ಏತಾವಾನಿತಿ ನ ಜ್ಞಾತವಾನಿತ್ಯರ್ಥಃ । ಅಪರೇ ಕುತೋ ಜಾನೀಯುಃ? ನನು ಸರ್ವಜ್ಞಃ ಕಥಂ ನ ಜಾನಾತಿ ? ಅಂತಾಭಾವಾದಿತಿ ದೃಷ್ಟಾಂತೇನಾಹ ಯಥಾ ಸ್ವಸ್ಯಾಂತಂ ನಭೋ ನಾಪ್ನೋತಿ ತದ್ವತ್। ನಹಿ ಖಪುಷ್ಪಾದರ್ಶನಂ ಸಾರ್ವಜ್ಞಂ ವಿಹಂತಿ । - ಶ್ರೀಧರಃ

'ಎಲ್ಲ ಜೀವರ ನಡುವೆ ಬ್ರಹ್ಮವಾಯುಗಳೇ ಹರಿಯನ್ನು ಹೆಚ್ಚು ತಿಳಿದವರು. ಇತರರು ಯಾರೂ ಅಷ್ಟು ತಿಳಿದಿಲ್ಲ. ಆದರೆ ಹರಿ ತಾನು ತನ್ನ ಮಹಿಮೆಯನ್ನು ತಿಳಿದಷ್ಟು ಲೋಕಪೂಜ್ಯರಾದ ಇವರೂ ತಿಳಿದಿಲ್ಲ ಎಂದರೆ ಉಳಿದವರ ಪಾಡೇನು?' ಎಂದು ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ.

★★★

ಪರಮಾತ್ಮನ ಅವತಾರ ಕ್ರಮ ಉದ್ದೇಶ ಮುಂತಾದುವನ್ನು ಸಂಕ್ಷೇಪವಾಗಿ ಬ್ರಹ್ಮದೇವರು ನಾರದರಿಗೆ ತಿಳಿಸುತ್ತಾರೆ—

ಸ ಏಷ ಆದ್ಯಃ ಪುರುಷಃ ಕಲ್ಪೇಕಲ್ಪೇ ಸೃಜತ್ಯಜಃ ।
ಆತ್ಮಾಽಽತ್ಮನ್ಯಾತ್ಮನಾಽಽತ್ಮಾನಂ ಸ ಸಂಯಚ್ಛತಿ ಪಾತಿ ಚ ॥ ೩೮ ॥

ಆದಿ ಪುರುಷ ಪದ್ಮನಾಭ ಬ್ರಹ್ಮನ ಪ್ರತಿದಿವಸದಲ್ಲಿಯೂ ತಾನೇ ತನ್ನಿಚ್ಛೆಯಿಂದಲೆ ತನ್ನ ಸ್ವರೂಪಭೂತವಾದ ಮತ್ಸ್ಯಾದಿ ಅವತಾರವನ್ನು ವ್ಯಕ್ತಮಾಡುತ್ತಾನೆ. ಅದರಿಂದ ಅಸುರರನ್ನು ಸಂಹರಿಸುತ್ತಾನೆ, ಭಕ್ತರನ್ನು ಪೊರೆಯುತ್ತಾನೆ, ವ್ಯಾಸಾದಿ ಅವತಾರಗಳಲ್ಲಿ ಜ್ಞಾನಕಾರ್ಯವನ್ನೂ ಮಾಡುತ್ತಾನೆ.

ಇಲ್ಲಿ ಭಗವಂತ ತನ್ನನ್ನು ತಾನೇ ಸೃಷ್ಟಿ ಮಾಡಿಕೊಳ್ಳುತ್ತಾನೆ, ರಕ್ಷಿಸಿಕೊಳ್ಳುತ್ತಾನೆ ಸಂಹರಿಸಿಕೊಳ್ಳುತ್ತಾನೆ ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರೂ ಹೇಳುತ್ತಾರೆ. ಸೃಷ್ಟಿ ಸ್ಥಿತಿಲಯಗಳನ್ನು ಹೊಂದುವ ಪ್ರಪಂಚವೂ ತಾನೆ, ಪ್ರಪಂಚ ಕಾರಣವಾದ ಮಾಯೆಯೂ ತಾನೆ, ಅದರ ಅಧಿಷ್ಠಾನವೂ ತಾನೆ ಎಂದು ವಂಶೀಧರ. ಎಲ್ಲ ವಿರುದ್ಧ ಧರ್ಮಗಳು ಒಬ್ಬನಲ್ಲಿಯೆ ಬಂದುದರಿಂದ ಮಹಾಮಹಿಮೆ ಬಂದಂತಾಯಿತೆಂದು ಪುರುಷೋತ್ತಮಗೋಸ್ವಾಮಿ.[೧] ಇದು ಭಾಗವತ ತಂತ್ರಕ್ಕೆ ವಿರುದ್ಧವಾಗಿದೆ—

ಸ್ವಯಮೇವ ಸ್ವರೂಪಾಣಿ ಮತ್ಸ್ಯಕೂರ್ಮಾದಿಕಾನ್ಯಜಃ ।
ಸ್ವಾತ್ಮನ್ಯೇವೇಚ್ಛಯಾ ಸೃಷ್ಟ್ವಾ ತೈರ್ದೇವಾದೀನ್ ಪ್ರಪಾತ್ಯಸೌ ।

---

೧. ಕರ್ತಾ ಈಶ್ವರಃ, ಸೃಜ್ಯಂ ಪಾಲ್ಯಂ ಸಂಹಾರ್ಯಂ ವಿಶ್ವಂ, ತನ್ನಿಮಿತ್ತಾ ಮಾಯಾ, ತದಧಿಷ್ಠಾನಂ ಹರಿರೇವ ಸರ್ವಂ ತಥಾತಥಾ ಭವತೀತಿ ಭಾವಃ । -ವಂಶೀಧರಃ

ಆತ್ಮನ್ಯೇವಾಧಾರೇ ಆತ್ಮನಾ ಪರಮಾತ್ಮಭೂತೇನಾತ್ಮಾನಮುಪಾದಾನಮಾತ್ಮೈವ ಕರ್ತಾ ಸೃಜತಿ, ಸಂಯಚ್ಛತಿ ಸಂಹರತಿ ಪಾತಿ ಚ । -ವೀರರಾಘವಃ

ಏವಂ ವಿರುದ್ಧ ಧರ್ಮಾಶ್ರಯತ್ವ ನಿಗಮನೇನ ಮಾಹಾತ್ಮ್ಯಂ ಭಗವತೋ ನಿರೂಪಿತಂ । -ಪುರುಷೋತ್ತಮಃ

ಸಂಯಚ್ಛತ್ಯಸುರಾನ್ ವಿಷ್ಣುಃ ಕಲ್ಪೇಕಲ್ಪೇ ಜಗತ್ಪ್ರಭುಃ ।
ತಿರೋಹಿತಂ ಸ್ವರೂಪಂ ಚ ಪ್ರಕಾಶಯತಿ ಶಾಶ್ವತಃ ॥

ಇತಿ ಭಾಗವತತಂತ್ರೇ ॥

'ತಾನೇ ತನ್ನ ಸ್ವರೂಪಭೂತವಾದ ಮತ್ಸ್ಯಕೂರ್ಮಾದಿ ರೂಪಗಳನ್ನು ತನ್ನಲ್ಲಿಯೆ ತನ್ನಿಚ್ಛೆಯಿಂದಲೆ ಬ್ರಹ್ಮನ ಪ್ರತಿದಿವಸದಲ್ಲಿಯೂ ವ್ಯಕ್ತಮಾಡಿ ಅವುಗಳಿಂದ ದೇವಾದಿ ಸಜ್ಜನರನ್ನು ಕಾಪಾಡುತ್ತಾನೆ. ಅಸುರರನ್ನು ಮರ್ದಿಸುತ್ತಾನೆ, ಮರೆಯಾದ ತನ್ನ ಸ್ವರೂಪವನ್ನು ವ್ಯಾಸಾದಿ ಅವತಾರಗಳಿಂದ ತಿಳಿಸುತ್ತಾನೆ' ಎಂದು ಭಾಗವತ ತಂತ್ರ ಹೇಳಿದೆ.

★★★

ವ್ಯಾಸಾದಿ ಅವತಾರಗಳಲ್ಲಿ ಪರಮಾತ್ಮ ತಿಳಿಸಿದ ತನ್ನ ಸ್ವರೂಪವೇನೆಂಬುದನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ವಿಶುದ್ಧಂ ಕೇವಲಂ ಜ್ಞಾನಂ ಪ್ರತ್ಯಕ್ ಸಮ್ಯಗವಸ್ಥಿತಂ ।
ಸತ್ಯಂ ಪೂರ್ಣಮನಾದ್ಯಂತಂ ನಿರ್ಗುಣಂ ನಿತ್ಯಮದ್ವಯಂ ॥ ೩೯ ॥

ಋತಂ ವಿಂದಂತಿ ಮುನಯಃ ಪ್ರಶಾಂತಾತ್ಮೇಂದ್ರಿಯಾಶಯಾಃ
ಯದಾ ತದೈವಾಸತ್ತರ್ಕೈಸ್ತಿರೋಧೀಯೇತ ವಿಪ್ಲುತಂ ॥ ೪೦ ॥

ಪರಮಾತ್ಮಸ್ವರೂಪ ನಿರ್ದುಷ್ಟ, ಅನುಪಮ, ಜ್ಞಾನರೂಪ, ಎಲ್ಲರೊಳಗೆ ಇದ್ದೂ ಲೇಪವಾಗದೆ ಚೆನ್ನಾಗಿರುವುದು, ಸತ್ಯ, ಗುಣಪೂರ್ಣ, ಉತ್ಪತ್ತಿನಾಶರಹಿತ, ಗುಣತ್ರಯರಹಿತ, ಶರೀರದಿಂದಲೂ ನಿತ್ಯ, ಸ್ವಗತಭೇದರಹಿತ, ನಿರ್ವಿಕಾರ, ವ್ಯಾಸಾದಿ ಅವತಾರಗಳಲ್ಲಿ ಹರಿ ರಚಿಸಿದ ಶಾಸ್ತ್ರಗಳಿಂದ ವಿಷಯವಿರಕ್ತರಾದ ಜ್ಞಾನಿಗಳು ಈ ಪರಮಾತ್ಮಸ್ವರೂಪವನ್ನು ಅರಿತಾಗಲೇ ದುಷ್ಟಶಾಸ್ತ್ರಗಳಲ್ಲಿ ಹೇಳಿದ ದುಷ್ಟತರ್ಕಗಳಿಂದ ಅಂತಃಕರಣ ಮಲಿನವಾಗುವುದಿಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ನಿರ್ಗುಣ ಅದ್ವಿತೀಯ ಬ್ರಹ್ಮರೂಪಜ್ಞಾನದ ಪರವಾಗಿ ಶ್ಲೋಕವನ್ನು ವ್ಯಾಖ್ಯಾನಿಸಿದ್ದಾರೆ. ಬ್ರಹ್ಮತರ್ಕದಲ್ಲಿ ಸರಿಯಾದ ವ್ಯಾಖ್ಯಾನ ಉಕ್ತವಾಗಿದೆ—

ಋತಂ ತದಾತ್ಮನಾ ಜ್ಞಪ್ತೇಃ ಸತ್ಯಂ ಸಾಧುತ್ವತಃ ಪರಂ ।
ಸಮ್ಯಕ್ ಸಂಸ್ಥಮದೂಷ್ಯತ್ವಾತ್ ಶುದ್ಧಂ ದೋಷೋಜ್ಝಿತತ್ವತಃ ।

ಕೇವಲಂ ತಾದೃಶಾಭಾವಾತ್ ಪ್ರತ್ಯಗಂತರವಸ್ಥಿತೇಃ ।
ಏತದೇತಾದೃಶಂ ತತ್ವಂ ಯೋ ವೇದ ಸ ವಿಮುಚ್ಯತೇ ॥

ಇತಿ ಬ್ರಹ್ಮತರ್ಕೇ ।

ಋತ ಎಂದರೆ ಹಿಂದಿನಂತೆಯೆ ಮುಂದೆಯೂ ಗೋಚರವಾಗುವುದು, ನಿರ್ವಿಕಾರವಸ್ತು. ಸತ್ಯ ಎಂದರೆ ಸದ್ಗುಣಭರಿತ. ಜೀವರೊಳಗಿದ್ದೂ ಅವರ ದೋಷಲೇಪವಿಲ್ಲದ್ದರಿಂದ ಸಮ್ಯಕ್‌ಸಂಸ್ಥ ಎನಿಸುತ್ತದೆ. ಶುದ್ಧ ಎಂದರೆ ದೋಷರಹಿತ. ಕೇವಲ ಎಂದರೆ ಅನುಪಮ. ಪ್ರತ್ಯಕ್ ಎಂದರೆ ಅಂತರ್ಯಾಮಿ. ಇಂಥ ಪರಮಾತ್ಮ ಸ್ವರೂಪವನ್ನು ತಿಳಿಯುವವನು ಮುಕ್ತಿ ಹೊಂದುತ್ತಾನೆ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

★★★

ಪರಮಾತ್ಮನ ಅವತಾರಗಳನ್ನು ವಿಸ್ತಾರವಾಗಿ ಹೇಳಲು ಬ್ರಹ್ಮದೇವರು ಉಪಕ್ರಮಿಸುತ್ತಾರೆ—

ಆದ್ಯೋಽವತಾರಃ ಪುರುಷಃ ಪರಸ್ಯ
ಕಾಲಃ ಸ್ವಭಾವಃ ಸದಸನ್ಮನಶ್ಚ ।
ದ್ರವ್ಯಂ ವಿಕಾರೋ ಗುಣ ಇಂದ್ರಿಯಾಣಿ
ವಿರಾಟ್ ಸ್ವರಾಟ್ ಸ್ಥಾಸ್ನು ಚರಿಷ್ಣು ಭೂಮ್ನಃ ॥ ೪೧ ॥
ಅಹಂ ಭವೋ ಯಜ್ಞ ಇಮೇ ಪ್ರಜೇಶಾಃ
ದಕ್ಷಾದಯೋ ಯೇ ಭವದಾದಯಶ್ಚ ॥ ೪೨ ॥

ಯತ್ಕಿಂಚ ಲೋಕೇ ಭಗವನ್ಮಹಸ್ವದ್
ಓಜಃ ಸಹಸ್ವದ್ ಬಲವತ್ ಕ್ಷಮಾವತ್ ।
ಹ್ರೀಶ್ರೀವಿಭೂತ್ಯಾತ್ಮವದದ್ಭುತಾರ್ಣಂ
ತತ್ತತ್ ಪರಂ ರೂಪವದಸ್ವರೂಪಂ ॥ ೪೪ ॥

ಪರಮಾತ್ಮನ ಮೊದಲನೆಯ ಅವತಾರ ಪುರುಷ. ಕಾಲ ಸ್ವಭಾವಾಭಿಮಾನಿ ಗಳು, ಮುಖ್ಯಪ್ರಾಣ ಲಕ್ಷ್ಮಿ ಮನಸ್ಸು ಪಂಚಭೂತ ಬ್ರಹ್ಮಾಂಡ ಸತ್ವಾದಿಗುಣ ದಶೇಂದ್ರಿಯಾಭಿಮಾನಿಗಳು ಗರುಡ ಇಂದ್ರ, ಸ್ಥಾವರ ಜಂಗಮಗಳು, ನಾನು, ರುದ್ರ, ಇಂದ್ರಪುತ್ರನಾದ ಯಜ್ಞ ದಕ್ಷ ಮುಂತಾದ ಈ ಪ್ರಜಾಪತಿಗಳು, ನೀನು ಮತ್ತು ಇನ್ನಿತರ ಮುನಿಗಳು, ಹೆಚ್ಚೇಕೆ, ಲೋಕದಲ್ಲಿ ಐಶ್ವರ್ಯವೀರ್ಯಾದಿ ಷಡ್ಗುಣಉಳ್ಳ, ಮಹತ್ತಾದ

ಪರಾಕ್ರಮಉಳ್ಳ, ಸಹನೆಉಳ್ಳ, ಶಾರೀರ ಬಲಉಳ್ಳ, ಕ್ಷಮಾಗುಣ ಲಜ್ಜೆ ಕಾಂತಿ, ವಿಶೇಷಶಕ್ತಿ ಮನೋನಿಗ್ರಹ ಉಳ್ಳ, ಆಶ್ಚರ್ಯಕರವಾದ ಉತ್ತಮವಾದ ಎಲ್ಲ ವಸ್ತುವೂ ಪರಮಾತ್ಮನಿಗೆ ಪ್ರಿಯವಾದ್ದರಿಂದ ಪರಮಾತ್ಮ ಸ್ವರೂಪವಲ್ಲದಿದ್ದರೂ ಪರಮಾತ್ಮನೆ ಎಂದು ಹೇಳುವುದುಂಟು.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಸಹಸ್ರಶೀರ್ಷಾ ಪುರುಷಃ' ಎಂಬ ವಿರಾಟ್ ಪುರುಷನೇ ಪ್ರಥಮಾವತಾರ. ಕಾಲ ಸ್ವಭಾವಾದಿಗಳು ಭಗವಂತನೆ ಮಾಯಾಶಕ್ತಿಯಿಂದ ಸ್ವೀಕರಿಸಿದ ರೂಪಗಳು. ಯಜ್ಞನೆಂದರೆ ವಿಷ್ಣುವೆ. ಅವನು ಸಾಕ್ಷಾದವತಾರ. ಬ್ರಹ್ಮಾದಿಗಳು ಆವೇಶಾವತಾರ. ಕಾಲಾದಿಗಳು ಮಾಯಾಶಕ್ತಿಯ ಕಾರ್ಯಗಳು ಹೀಗೆ ರೂಪವತ್ ಅಸ್ವರೂಪಂ ಸಾಕಾರ ನಿರಾಕಾರ ಭಗವಂತನ ಸ್ವರೂಪವೆ, ಪರತತ್ವವೆ ಎಂದಿದ್ದಾರೆ. 'ರೂಪವತಃ ಸ್ವರೂಪಂ' ಎಂದು ವೀರರಾಘವ ವ್ಯಾಖ್ಯಾನದ ಪಾಠ. ಈ ಪಾಠವೂ ವ್ಯಾಖ್ಯಾನವೂ ಅಶುದ್ಧ, ಪ್ರಮಾಣವಿರುದ್ಧ.[೧]

ಯಃ ಶೇತೇ ಪ್ರಲಯೇ ವಿಷ್ಣುಃ ಶೂನ್ಯನಾಮಾ ಮಹಾಕೃತಿಃ ।
ಸ ತು ನಾರಾಯಣೋ ನಾಮ ನರಾಣಾಮಯನತ್ವತಃ ।
ರೂಪಂ ದ್ವಿತೀಯಂ ಭವತಿ ದೀಪಾದ್ ದೀಪಾಂತರಂ ಯಥಾ ।
ಸಿಸೃಕ್ಷೋಸ್ತಸ್ಯ ಪುರುಷ ಇತ್ಯಾಹುಸ್ತದ್ವಿದೋ ಜನಾಃ ।
ಸ ರಮಾಯಾ ದ್ವಿತೀಯೇ ತು ರೂಪೇ ಪ್ರಕೃತಿಸಂಜ್ಞಿತೇ ।
ವೀರ್ಯಮಾಧತ್ತ ಪುರುಷೋ ಮಹಾಂಸ್ತಸ್ಮಾದಜಾಯತ ।

---

೧. ಸದಸತ್ ಕಾರ್ಯಕಾರಣಾತ್ಮಕಂ ಸರ್ವಂ ವಿಶ್ವಮೇವ, ತದೇವ ವಿವೃಣೋತಿ ಮನ ಇತ್ಯಾದಿ। ವಿರಾಟ್ ಸಮಷ್ಟಿ ಶರೀರಂ। ಸ್ವರಾಟ್ ಸಮಷ್ಟಿ ಜೀವೋ ಹಿರಣ್ಯಗರ್ಭಃ। ಸ್ಥಾಸ್ನು ಸ್ಥಾವರಂ ಚರಿಷ್ಣು ಜಂಗಮಂ ಚ ವ್ಯಷ್ಟಿಶರೀರಂ। ಸ ಏಕೋಽಪಿ ಮಾಯಾಶಕ್ತ್ಯಾನಾನಾ ಭವೇದಿತ್ಯರ್ಥಃ ।
-ವಿಶ್ವನಾಥಃ

ಪರಸ್ಯ ಭೂಮ್ನಃ ಪುರುಷಃ ಪ್ರಕೃತಿಪ್ರವರ್ತಕಃ ಯಸ್ಯ ಸಹಸ್ರಶೀರ್ಷೇತ್ಯುಕ್ತೋ ಲೀಲಾವಿಗ್ರಹಃ ಸ ಆದ್ಯೋಽವತಾರಃ...ರೂಪವತ್ ಪ್ರಶಸ್ತರೂಪ ಯುಕ್ತಂ ಅಸ್ವರೂಪಂ ಯತ್ ತತ್ ಸರ್ವಂ ಪರಂ ತತ್ವಂ ತದ್ವಿಭೂತಿರಿತ್ಯರ್ಥಃ। -ಶ್ರೀಧರಃ

ಯಸ್ಯ ಸಹಸ್ರಶೀರ್ಷೇತ್ಯುಕ್ತೋ ಲೀಲಾವಿಗ್ರಹಃ ಸ ಆದ್ಯೋಽವತಾರಃ । ಸ ಏವ ಸಮಷ್ಟಿ ಶರೀರಗ್ರಹಣೇನ ವೈರಾಜಃ ಪುರುಷ ಇತ್ಯುಚ್ಯತೇ।... ಕಿಂ ಬಹುನಾ? ರೂಪವತ್ ರೂಪಯುಕ್ತಂ। ಅಸ್ವರೂಪಂ ನೀರೂಪಂ । -ಶುಕದೇವಃ

ರೂಪವತಃ ಪ್ರಶಂಸಾಯಾಂ ಮತುಪ್। ಅಕರ್ಮಕೃತಸ್ವೇಚ್ಛೋಪಾತ್ತದಿವ್ಯ ಮಂಗಲಾಸ್ಪದವಿಗ್ರಹಸ್ಯ ಭಗವತೋ ವಿರಾಟ್‌ಪುರುಷಸ್ಯ ಸ್ವೀಯಾ ವಿಭೂತಿರಿತ್ಯರ್ಥಃ ।
-ವೀರರಾಘವಃ

ಯೋಽಸೌ ಹಿರಣ್ಯಗರ್ಭಾಖ್ಯಃ ಪುರುಷಃ ಸೋಽಪಿ ಭಣ್ಯತೇ ।
ಶ್ರದ್ಧೇತ್ಯುಕ್ತಾ ತು ತತ್ಪತ್ನೀ ಸಾಪಿ ಪ್ರಕೃತಿರುಚ್ಯತೇ ।
ಪ್ರಲಯೇ ತ್ವಶರೀರೌ ತೌ ವಿಭಾಗೇನ ವ್ಯವಸ್ಥಿತೌ ।
ಶರೀರಂ ಪ್ರಾಪ್ಯ ಪುರುಷಾತ್ ಸಂಯೋಗಂ ತೌ ಪ್ರಚಕ್ರತುಃ ।
ತತಃ ಪುನರ್ಮಹತ್ತತ್ತ್ವಂ ಪ್ರಜಾತಂ ಜಗದಂಕುರಂ ।
ಸ್ವಸ್ಯೈವ ಪುತ್ರತಾಂ ಯಾತಂ ಅಹಂಕಾರಸ್ತತೋಽಜನಿ ॥

ಇತಿ ವ್ಯೋಮಸಂಹಿತಾಯಾಂ ।

ಹರಿಯ ಮೊದಲನೆ ಅವತಾರವೆಂದರೆ ಬ್ರಹ್ಮಾಂಡದೊಳಗಿನ ವಿರಾಟ್ ರೂಪವೂ ಅಲ್ಲ, ವಿರಾಟ್‌ನಾಮಕ ಚತುರ್ಮುಖನೂ ಅಲ್ಲ. 'ಲಯಕಾಲದಲ್ಲಿ ಜಗದುದರನಾದ ಮಹಾಕಾಯದ ವಿಷ್ಣು ಸರ್ವಚೇತನರಿಗೆ ಆಶ್ರಯನಾದ್ದರಿಂದ ನಾರಾಯಣನೆಂದೂ ಸೃಷ್ಟ್ಯಾದಿ ವ್ಯಾಪಾರ ಶೂನ್ಯನಾದ್ದರಿಂದ ಶೂನ್ಯನೆಂದೂ ಕರೆಸಿಕೊಂಡು ವಟಪತ್ರದ ಮೇಲೆ ಮಲಗಿರುತ್ತಾನೆ. ಬಳಿಕ ಸೃಷ್ಟಿಕಾಲದಲ್ಲಿ ಸೃಷ್ಟಿ ಮಾಡಬಯಸಿದಾಗ ದೀಪದಿಂದ ದೀಪದಂತೆ ಅವನ ಈ ರೂಪದಿಂದ ಪುರುಷ ಎಂಬ ಇನ್ನೊಂದು ರೂಪ ವ್ಯಕ್ತವಾಯಿತು. ಇದು ಮೊದಲನೆ ಅವತಾರ. ಆಗಲೆ ಲಕ್ಷ್ಮಿಯೂ ಪ್ರಕೃತಿ ಎಂಬ ಇನ್ನೊಂದು ರೂಪ ತಾಳಿದಳು. ಆ ಪ್ರಕೃತಿಯಲ್ಲಿ ಪುರುಷ ವೀರ್ಯಾಧಾನ ಮಾಡಿದಾಗ ಹಿರಣ್ಯಗರ್ಭ ಜನಿಸಿದ. ಅವನಿಗೂ ಪುರುಷ ಎಂದು ಹೆಸರು. ಅವನ ಪತ್ನಿ ಶ್ರದ್ಧಾದೇವಿ. ಅವಳಿಗೂ ಪ್ರಕೃತಿ ಎಂದು ಹೆಸರು. ಲಯಕಾಲದಲ್ಲಿ ಸ್ಥೂಲಶರೀರವಿಲ್ಲದಿದ್ದುದರಿಂದ ಬೇರೆಯಾಗಿದ್ದ ಈ ಪುರುಷ ಪ್ರಕೃತಿಗಳು ಹರಿಯಿಂದ ಶರೀರ ಪಡೆದು ಜೊತೆ ಸೇರಿದರು. ಆಗ ಬ್ರಹ್ಮಾಂಡೋತ್ಪತ್ತಿಗೆ ಕಾರಣವಾದ ಮಹತತ್ತ್ವಕ್ಕೆ ಅಭಿಮಾನಿಯಾಗಿ ಹಿರಣ್ಯಗರ್ಭ ಸ್ಥೂಲ ಶರೀರದಿಂದ ತನಗೆ ಮಗನಾಗಿ ಇನ್ನೊಮ್ಮೆ ಜನಿಸಿದ. ಅವನಿಂದ ಅಹಂಕಾರ ತತ್ತ್ವಾಭಿಮಾನಿಗಳು ಜನಿಸಿದರು' ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ.

ಪುರುಷಸ್ತಸ್ಯೈವಾದ್ಯೋಽವತಾರಃ । ಕಾಲಾದಯೋ ರೂಪವತ್,
ಅಸ್ವರೂಪಮಪಿ । ಪ್ರಿಯತ್ವಾತ್ ।

ಪುರುಷಾದ್ಯಾ ಹರೇ ರೂಪಂ ಬ್ರಹ್ಮಾದ್ಯಾಸ್ತತ್ಪ್ರಿಯಾಃ ಸ್ಮೃತಾಃ ।
ಸ್ವರೂಪಭೂತಾ ನೈವೈತೇ ತತ್ಸನ್ನಿಧಿಯುತಾ ಅಪಿ ।

ಇತಿ ಪಾದ್ಮೇ ।

ಕಾಲೋ ವಸ್ತು ಸ್ವಭಾವಶ್ಚ ಪ್ರಕೃತಿಃ ಪ್ರಾಣ ಏವ ಚ ।
ಮನಶ್ಚ ಪಂಚ ಭೂತಾನಿ ವಿಕಾರಸ್ತ್ರಿಗುಣಾ ಅಪಿ ॥

ನ ಸ್ವರೂಪಂ ಹರೇರೇತತ್ ತಥ್ಯಾಪ್ಯೇಷು ಹರಿಃ ಸ್ಥಿತಃ ।
ಇತಿ ಬ್ರಾಹ್ಮೇ । ಸತ್ ಪ್ರಾಣಃ । ಸದಿತಿ ಪ್ರಾಣ ಇತಿ ಶ್ರುತೇಃ ।
ದ್ರವ್ಯಂ ತು ಪಂಚ ಭೂತಾನಿ ವಿಕಾರೋಽಂಡಮುದಾಹೃತಂ ।
ವಿರಾಜಂ ಗರುಡಂ ಪ್ರಾಹುಃ ಸ್ವರಾಡಿಂದ್ರ ಉದಾಹೃತಃ ॥

ಇತಿ ಷಾಡ್ಗುಣ್ಯೇ ।

ಸರ್ವಂ ತು ರೂಪವದ್ ವಿಷ್ಣೋರ್ವಿಶೇಷೇಣ ವಿಭೂತಿಮತ್ ।
ಅತಿಪ್ರಿಯತ್ವಾನ್ನೈವೈತತ್ ಸ್ವರೂಪಮಪಿ ಭಣ್ಯತೇ ॥

ಇತಿ ಸ್ಕಾಂದೇ ।

ಪುರುಷನೆ ಶ್ರೀಹರಿಯ ಮೊದಲ ಸ್ವರೂಪಾವತಾರ. ಕಾಲಾದಿಗಳೂ ಅವುಗಳ ಅಭಿಮಾನಿಗಳೂ ಅವನ ಸ್ವರೂಪರಲ್ಲ, ಆದರೂ ಅತಿ ಪ್ರಿಯರಾದ್ದರಿಂದ ಅವನ ಅವತಾರವೆನ್ನುವುದುಂಟು. ಪದ್ಮಪುರಾಣದಲ್ಲಿ ಹೇಳಿದೆ— 'ಪುರುಷ, ಮತ್ಸ್ಯ, ಕೂರ್ಮಾದಿಗಳೇ ಹರಿಯ ಸ್ವರೂಪಾವತಾರಗಳು. ಬ್ರಹ್ಮಾದಿಗಳು ಅವನಿಗೆ ಪ್ರಿಯರೆನಿಸಿದ್ದಾರೆ. ಅವನ ಸನ್ನಿಧಾನ ಪಾತ್ರರೂ ಆಗಿದ್ದಾರೆ. ಹೊರತು, ಅವನಿಗೆ ಸರ್ವಥಾ ಸ್ವರೂಪ ಭೂತರಲ್ಲ'. ಎಂದು. 'ಕಾಲ, ವಸ್ತು ಸ್ವಭಾವ, ಪ್ರಕೃತಿ, ಪ್ರಾಣ, ಮನಸ್ಸು, ಪಂಚಭೂತಗಳು, ಬ್ರಹ್ಮಾಂಡ, ಮೂರು ಗುಣಗಳು—ಇವು ಹರಿಯ ಸ್ವರೂಪವಲ್ಲ ಆದರೂ ಇವುಗಳಲ್ಲಿ ಹರಿಯ ಸನ್ನಿಧಾನವಿದೆ' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ. ಅದರಿಂದ ಭಾಗವತದಲ್ಲಿ ಸತ್ ಎಂದರೆ ಮುಖ್ಯಪ್ರಾಣ. 'ಪ್ರಾಣನಿಗೆ ಸತ್ ಎಂದು ಹೆಸರು' ಎಂದು ಶ್ರುತಿಯೂ ಹೇಳುತ್ತದೆ. ದ್ರವ್ಯ, ವಿಕಾರ, ವಿರಾಟ್, ಸ್ವರಾಟ್ ಶಬ್ದಗಳ ಅರ್ಥ ಷಾಡ್ಗುಣ್ಯ ಎಂಬ ಗ್ರಂಥದಲ್ಲಿ ಹೀಗೆ ಉಕ್ತವಾಗಿದೆ— 'ದ್ರವ್ಯವೆಂದರೆ ಪಂಚಭೂತಗಳು, ವಿಕಾರವೆಂದರೆ ಬ್ರಹ್ಮಾಂಡ, ವಿರಾಟ್ ಎಂದರೆ ಗರುಡ, ಸ್ವರಾಟ್ ಎನಿಸಿದವನು ಇಂದ್ರ' ಎಂದು. 'ರೂಪವದಸ್ವರೂಪಂ' ಎಂದೇ ಪಾಠ. ಅದರ ಅರ್ಥವೂ ಸ್ಕಂದಪುರಾಣದಲ್ಲಿ ಹೇಳಿದಂತೆ ಹೀಗೇ ತಿಳಿಯಬೇಕು— 'ವಿಶೇಷಶಕ್ತಿಯುಕ್ತವಾದ ಎಲ್ಲ ವಸ್ತುವೂ ವಿಷ್ಣುವಿಗೆ ಅತಿಪ್ರಿಯವಾಗಿರುವುದರಿಂದ ಅವನ ಸ್ವರೂಪದಂತೆ ಎಂದು ಉಕ್ತವಾಗುತ್ತವೆ ಹೊರತು ಇವು ಸರ್ವಥಾ ಅವನ ಸ್ವರೂಪವಲ್ಲ'.

ಸ್ವತೋ ಮಹತ್ತ್ವಂ ತು ಮಹೋ ವಿಶೇಷಪ್ರಾಪ್ತಿಶಕ್ತಿತಾ ।
ವಿಭೂತಿರ್ಲಕ್ಷಣೋನ್ನಾಹೋ ಲಕ್ಷ್ಮೀಶಬ್ದೇನ ಭಣ್ಯತೇ ॥

ಇತಿ ಬ್ರಹ್ಮತರ್ಕೇ ।

ಪ್ರಧಾನತ್ವೇನ ಸರ್ವೇಷಾಂ ಮತ್ಸ್ಯಕೂರ್ಮಾದಯೋ ಹರೇಃ ।
ಅವತಾರಾಃ ಶ್ರುತೌ ಖ್ಯಾತಾಃ ಸ ಏವೈತೇ ತತಃ ಸ್ಮೃತಾಃ ॥
ನ ಸ್ವರೂಪಂ ತು ಬ್ರಹ್ಮಾದ್ಯಾಃ ಸ್ಮೃತಾ ಮಾಯಾವಿಭೂತಯಃ ।
ಸ್ವೇಚ್ಛಯೈಷಾಂ ವಿಶಿಷ್ಟತ್ವಂ ಕುರುತೇ ತತ್ ತಥಾ ಸ್ಮೃತಾಃ ।
ಇತಿ ವ್ಯೋಮಸಂಹಿತಾಯಾಂ ।

ಯಜ್ಞಶಬ್ದೋದಿತೌ ದ್ವೌ ತು ದೇವೌ ಲೋಕಪುರಸ್ಕೃತೌ ।
ಏಕೋ ನಾರಾಯಣಸ್ತತ್ರ ರುದ್ರಚ್ಛಿನ್ನಸ್ತಥಾ ಪರಃ ।
ಸ ತು ಯಜ್ಞಾಭಿಮಾನೀಸ್ಯಾತ್ ತತ್ಪತಿಃ ಕೇಶವಃ ಸ್ಮೃತಃ ॥
ಇತಿ ಪಾದ್ಮೇ ॥

'ಮಹಸ್ವತ್' ಎಂಬಲ್ಲಿ ಮಹಃ ಎಂದರೆ ಹುಟ್ಟಿನಿಂದಲೆ ಬಂದ ಮಹತ್ವ. 'ಹ್ರೀ ಶ್ರೀವಿಭೂತ್ಯಾತ್ಮವತ್' ಎಂಬಲ್ಲಿ 'ವಿಭೂತಿ' ಎಂದರೆ ವರಾದಿಗಳಿಂದ ವಿಶೇಷವಾಗಿ ಬಂದ ಶಕ್ತಿ. ಶ್ರೀಶಬ್ದಸಮಾನಾರ್ಥಕವಾದ ಲಕ್ಷ್ಮೀಶಬ್ದಕ್ಕೆ 'ಹೆಚ್ಚು ಸೌಂದರ್ಯಲಕ್ಷಣ ಗಳಿರುವುದೆಂ'ದರ್ಥ ವೆಂದು ಬ್ರಹ್ಮತರ್ಕದಲ್ಲಿ ಹೇಳಿದೆ. 'ಹರಿಯ ಮತ್ಸ್ಯ ಕೂರ್ಮಾದಿ ಅವತಾರಗಳು ಬ್ರಹ್ಮರುದ್ರಾದಿ ಸಮಸ್ತ ಪ್ರಪಂಚಕ್ಕಿಂತ ಶ್ರೇಷ್ಠವಾದ್ದರಿಂದ ಅವತಾರಗಳೆಂದೇ ಶ್ರುತಿಯಲ್ಲಿ ಪ್ರಸಿದ್ಧವಾಗಿವೆ. ಅದರಿಂದ ಅವು ಪರಮಾತ್ಮ ಸ್ವರೂಪಗಳೇ. ಬ್ರಹ್ಮಾದಿಗಳು ಭಗವಂತನ ಸ್ವರೂಪರಲ್ಲ. ಸ್ಮೃತಿಗಳಲ್ಲಿ ಅವರನ್ನು ಮಾಯಾವಿಭೂತಿಗಳೆನ್ನುವುದುಂಟು. ಏಕೆಂದರೆ ಮಾಯೆ ಎಂದರೆ ಭಗವಂತನ ಇಚ್ಛೆ. ಭಗವಂತ ಸ್ವೇಚ್ಛೆಯಿಂದ ಅವರನ್ನು 'ವಿ-ಭೂತಿ'ಗಳನ್ನಾಗಿ ವೈಶಿಷ್ಟ್ಯ ಯುಕ್ತರನ್ನಾಗಿ ಮಾಡುತ್ತಾನೆ' ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ.

'ಅಹಂ ಭವೋ ಯಜ್ಞಃ' ಎಂಬಲ್ಲಿ ಯಜ್ಞ ಎಂದರೆ ರುಚಿ ಪ್ರಜಾಪತಿಯ ಮಗನಾಗಿ ಜನಿಸಿದ ಯಜ್ಞನಾಮಕನಾದ ಹರಿ ಎಂದಿಟ್ಟುಕೊಂಡರೆ ಹರಿಯ ವಿಭೂತಿರೂಪಗಳಾದ ಬ್ರಹ್ಮಾದಿಗಳ ನಡುವೆ ಸ್ವರೂಪಾವತಾರವನ್ನು ಹೇಳುವುದು ಕೂಡಲಾರದು. ಅದರಿಂದ ಇಂದ್ರಪುತ್ರನಾದ ಯಜ್ಞನೆಂಬ ವಿಭೂತಿ ರೂಪವಿಟ್ಟುಕೊಳ್ಳಬೇಕು. ಯಜ್ಞ ಎಂಬ ಹೆಸರಿನವರು ಇಬ್ಬರಿದ್ದಾರೆ ಎಂದು ಪದ್ಮಪುರಾಣ ಹೇಳುತ್ತದೆ— 'ಯಜ್ಞ ಎಂಬ ಹೆಸರಿನವರು ಜಗದ್ವಂದ್ಯರು ಇಬ್ಬರಿದ್ದಾರೆ. ಅವರಲ್ಲಿ ಒಬ್ಬನು ನಾರಾಯಣನ ಸ್ವರೂಪಾವತಾರ. ಇನ್ನೊಬ್ಬನು ದಕ್ಷಯಜ್ಞ ಧ್ವಂಸಕಾಲದಲ್ಲಿ ರುದ್ರನಿಂದ ಶಿರಚ್ಛೇದ ಹೊಂದಿದವನು. ಅವನು ಯಜ್ಞಾಭಿಮಾನಿಯಾದ್ದರಿಂದ ಯಜ್ಞನೆನಿಸಿದ್ದಾನೆ. ಅವನಿಗೆ ಪ್ರಭು ಕೇಶವ' ಎಂದು.

ಮುಂದಿನ ಅಧ್ಯಾಯದ ಎರಡನೇ ಶ್ಲೋಕ—

'ಜಾತೋ ರುಚೇರಜನಯತ್ ಸುಯಶಾಃ ಸುಯಜ್ಞಃ' ಇತ್ಯಾದಿ ಇಲ್ಲಿ ಹೇಳುವ ಯಜ್ಞಾವತಾರಕ್ಕೂ ಈ ಪದ್ಮಪುರಾಣವಚನ ವಿವರಣೆ ನೀಡುವುದೆಂಬ ಅಭಿಪ್ರಾಯ ದಿಂದ ಈ ಅಧ್ಯಾಯದ ಕೊನೆಯಲ್ಲಿ ಈ ವಚನವನ್ನು ಹೇಳಿದ್ದು ಅರ್ಥಪೂರ್ಣವಾಗುತ್ತದೆ. ಇಲ್ಲದಿದ್ದರೆ 'ಸ್ವತೋ ಮಹತ್ತ್ವಂ ತು ಮಹೋ' ಎಂಬ ಬ್ರಹ್ಮತರ್ಕ ವಚನಕ್ಕಿಂತ ಮೊದಲಿಗೇ ಈ ವಚನ ಬರಬೇಕಾಗಿತ್ತು. ಹೃಷೀಕೇಶ ತೀರ್ಥರ ಪಾಠದಲ್ಲಿ ಮೊದಲಿಗೇ ಬಂದಿದೆ. ಎರಡೂ ಪಾಠಗಳು ಸರಿಯೆ.

ಇತಿ ದ್ವಿತೀಯಸ್ಕಂಧೇ ಷಷ್ಠೋऽಧ್ಯಾಯಃ

ಏಳನೇ ಅಧ್ಯಾಯ

ಅಧ್ಯಾಯ ಸಾರಾಂಶ

ಬ್ರಹ್ಮದೇವರು ಹೇಳುತ್ತಾರೆ—'ವರಾಹ ಯಜ್ಞ ಕಪಿಲ ದತ್ತಾತ್ರೇಯ ವಿಷ್ಣು ನರ ನಾರಾಯಣ ವಾಸುದೇವ ಪೃಥು ಋಷಭ ಹಯಗ್ರೀವ ಮತ್ಸ್ಯ ಕೂರ್ಮ ನರಸಿಂಹ ಹರಿ ವಾಮನ ಮಹಿದಾಸ ರಾಜರಾಜೇಶ್ವರ, ಧನ್ವಂತರಿ ಪರಶುರಾಮ ರಾಮ ಕೃಷ್ಣ ವೇದವ್ಯಾಸ ಬುದ್ಧ ಕಲ್ಕಿ- ಇವರಲ್ಲಿ ನರ ಪೃಥು ಇಬ್ಬರು ಆವೇಶಾವತಾರರು. ಉಳಿದವರೆಲ್ಲರೂ ಸ್ವರೂಪಾವತಾರರು. ಇವಲ್ಲದೆ ಇನ್ನೂ ವಿಭೂತಿರೂಪಗಳು ಅಸಂಖ್ಯವಾಗಿವೆ. ಜೀವರಲ್ಲಿ ಕೆಲವರು ಉಳಿದವರಿಗಿಂತ ಮೇಲೆನಿಸಲು ಈ ವಿಭೂತಿರೂಪಗಳು ಅವರಲ್ಲಿ ಇರುವುದು ಕಾರಣ. ನಾರದ, ನಿನಗೆ ನಾನು ಹರಿಯ ಮಹಿಮೆಗಳನ್ನು ಸಂಕ್ಷೇಪವಾಗಿ ತಿಳಿಸಿದ್ದೇನೆ. ಮುಂದೆ ವ್ಯಾಸಾವತಾರವಾದಾಗ ನೀನು ಇದನ್ನು ಅವರಲ್ಲಿ ವಿಜ್ಞಾಪಿಸಿ ಭಾಗವತ ಪುರಾಣ ರಚಿಸಲು ವಿಜ್ಞಾಪಿಸು. ಅದರಿಂದ ಸಜ್ಜನರಿಗೆ ಮೋಕ್ಷ ಸಾಧನೆಯಾಗಲಿ.'

★★★

ಬ್ರಹ್ಮದೇವರು ನಾರದರಿಗೆ ಪರಮಾತ್ಮನ ಯಜ್ಞಾವತಾರವನ್ನು ವರ್ಣಿಸುತ್ತಾರೆ—

ಜಾತೋ ರುಚೇರಜನಯತ್ ಸುಯಶಾಃ ಸುಯಜ್ಞ
ಆಕೂತಿಸೂನುರಮರಾನಥ ದಕ್ಷಿಣಾಯಾಂ ।
ಲೋಕತ್ರಯಸ್ಯ ಮಹತೀಮಹರದ್ ಯ ಆರ್ತಿಂ
ಸ್ವಾಯಂಭುವೇನ ಮನುನಾ ಹರಿರಿತ್ಯನೂಕ್ತಃ ॥ ೨ ॥

ಒಳ್ಳೆಯ ಕೀರ್ತಿಶಾಲಿಯಾದ ಭಗವಂತ ರುಚಿಪ್ರಜಾಪತಿಯಿಂದ ಆಕೂತಿಯಲ್ಲಿ ಮಗನಾಗಿ ಹುಟ್ಟಿದನು. ಬಳಿಕ ಅವನು ಇಂದ್ರ ಪದವಿಯನ್ನು ಹೊಂದಿ ಲಕ್ಷ್ಮಿಯ ಅವತಾರಳಾದ ದಕ್ಷಿಣಾದೇವಿಯಲ್ಲಿ ತುಷಿತರೆಂಬ ದೇವತೆಗಳನ್ನು ಹುಟ್ಟಿಸಿದನು. ಮತ್ತು ಮೂರು ಲೋಕಗಳಿಗೆ ಅಸುರರಿಂದ ಉಂಟಾದ ಪೀಡೆಯನ್ನು ಕಳೆದನು. ಅವನನ್ನು ಸಾಕ್ಷಾತ್ ಹರಿಯೆಂದು ತಿಳಿದ ಸ್ವಾಯಂಭುವ ಮನು ಈಶಾವಾಸ್ಯೋಪನಿಷತ್ತಿನ ಮಂತ್ರಗಳಿಂದ ಸ್ತುತಿಸಿದನು.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಮನುನಾ ಹರಿರಿತ್ಯನೂಕ್ತಃ' ಎಂದರೆ ಅನು-ಅನಂತರ, ಯಜ್ಞನು ಮೂಲೋಕವನ್ನು ಅಸುರರಿಂದ ರಕ್ಷಿಸಿದ ಬಳಿಕ, ಸ್ವಾಯಂಭುವ ಮನುವಿನಿಂದ 'ಹರಿರಿತಿ ಉಕ್ತಃ' 'ನೀನು ಹರಿ' ಎಂದು ಹೊಗಳಲ್ಪಟ್ಟನೆಂ'ದು ವ್ಯಾಖ್ಯಾನ ಮಾಡಿದ್ದಾರೆ. ಮನು ಯಜ್ಞನನ್ನು ಹೊಗಳಿದ ಮಾತು ಈಶಾವಾಸ್ಯೋಪನಿಷನ್ಮಂತ್ರ ಹೊರತು ಬೇರೆ ಇಲ್ಲ. ಆ ಮಂತ್ರದಲ್ಲಿ 'ಹರಿ' ಎಂಬ ಹೆಸರೆ ಇಲ್ಲ. ಅದರಿಂದ 'ಹರಿರಿತಿ' ಹರಿ ಎಂದು ತಿಳಿದು 'ಅನೂಕ್ತಃ' ವೇದಮಂತ್ರದಿಂದ ಸ್ತುತಿಸಲ್ಪಟ್ಟ ಎಂದು ವ್ಯಾಖ್ಯಾನಿಸಬೇಕು.

ಯಜ್ಞೀಶತ್ವಾತ್ ಸ್ವಯಂ ವಿಷ್ಣುರ್ಯಜ್ಞೋ ರುಚಿಸುತಃ ಸ್ಮೃತಃ ॥
ಕ್ರಿಯಾಭಿಮಾನಾದ್ ಯಜ್ಞೋಽಸಾವಿಂದ್ರಸೂನುಃ ಪ್ರಕೀರ್ತಿತಃ ॥
ಇತಿ ಪಾದ್ಮೇ ।

ಹರಿರಿತಿ ಜ್ಞಾತ್ವೇಶಾವಾಸ್ಯಮಿತ್ಯಾದಿನಾಽನೂಕ್ತಃ ।
ತ್ರಯೀ ಶ್ರುತಿರ್ನಿತ್ಯವಾಕ್ ಚ ವೇದೋಽನುವಚನಂ ತಥಾ ॥
ಇತಿ ಹ್ಯಭಿಧಾನಂ ।

'ರುಚಿಪ್ರಜಾಪತಿಯ ಮಗನಾಗಿ ಯಜ್ಞನಾಮಕನಾಗಿ ಜನಿಸಿದ ವಿಷ್ಣು ಸ್ವತಃ ಯಜ್ಞಭೋಕ್ತನಾದ್ದರಿಂದ ಯಜ್ಞನೆನಿಸಿದ್ದಾನೆ. ಯಜ್ಞಕ್ರಿಯೆಗೆ ಅಭಿಮಾನಿಯಾದುದರಿಂದ ಇಂದ್ರಪುತ್ರನೊಬ್ಬ ಯಜ್ಞನೆನಿಸಿದ್ದಾನೆ' ಎಂದು ಪದ್ಮಪುರಾಣದಲ್ಲಿ ಹೇಳಿದೆ.

'ಹರಿರಿತ್ಯನೂಕ್ತಃ' ಎಂದರೆ ಹರಿ ಎಂದು ತಿಳಿದು 'ಈಶಾವಾಸ್ಯಮಿದಂ ಸರ್ವಂ' ಎಂದು ಮುಂತಾದ ವೇದಮಂತ್ರಗಳಿಂದ ಹೊಗಳಲ್ಪಟ್ಟನೆಂದರ್ಥ. ಅನು ಅನಂತರ ಉಕ್ತಃ ಹೇಳಲ್ಪಟ್ಟನೆಂದಲ್ಲ. ಅನು ಉಪಸರ್ಗ ಸೇರಿದಾಗ ವಚನ 'ಅನುವಚನ'ವೆಂದರೆ ವೇದವಾಕ್ಯವೆ. ಅಭಿಧಾನ ಎಂಬ ಕೋಶ ಹಾಗೇ ಹೇಳುತ್ತದೆ— 'ತ್ರಯೀ, ಶ್ರುತಿ, ನಿತ್ಯವಾಕ್, ವೇದ, ಅನುವಚನ ಇವೆಲ್ಲವೂ ಸಮಾನಾರ್ಥಕಗಳು' ಎಂದು.

★★★

ಬ್ರಹ್ಮದೇವರು ನಾರದರಿಗೆ ದತ್ತಾತ್ರೇಯಾವತಾರವನ್ನು ಹೇಳುತ್ತಾರೆ—

ಅತ್ರೇರಪತ್ಯಮಭಿಕಾಂಕ್ಷತ ಆಹ ತುಷ್ಟೋ
ದತ್ತೋ ಮಯಾಹಮಿತಿ ಯದ್ ಭಗವಾನ್ ಸ ದತ್ತಃ।
ಯತ್ಪಾದಪಂಕಜಪರಾಗಪವಿತ್ರದೇಹಾ
ಯೋಗರ್ಧಿಮಾಪುರಮಯೀಂ ಯದುಹೈಹಯಾದ್ಯಾಃ ॥ ೪ ॥

ಹರಿಗೆ ಸಮಾನನಾದ ಪುತ್ರ ಜನಿಸಿಲೆಂದು ಬಯಸಿದ ಅತ್ರಿಮುನಿಗೆ ಹರಿ ತನಗೆ ಸಮಾನ ತಾನೇ ಹೊರತು ಇನ್ನೊಬ್ಬನಿಲ್ಲ ಎಂದು ತನ್ನನ್ನೇ 'ದತ್ತಃ' ನಿನಗೆ ಕೊಟ್ಟೆನೆಂದ. ಆಗ ಅವತರಿಸಿದ ಹರಿಗೆ ದತ್ತ ಆತ್ರೇಯ ಎಂದೇ ನಾಮಕರಣವಾಯಿತು. ಈ ದತ್ತಾತ್ರೇಯನ ಪಾದಕಮಲದ ದೂಳಿನಿಂದ ದೇಹಪಾವಿತ್ರ್ಯ ಪಡೆದ ಕಾರ್ತವೀರ್ಯ ಮುಂತಾದವರು ವಿಷ್ಣುಸೇವೆಗೇ ವಿನಿಯೋಗವಾಗುವಂಥ ಅಣಿಮಾದಿ ಯೋಗಸಿದ್ಧಿಯನ್ನು ಪಡೆದರು.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಅಮಯೀಂ' ಎನ್ನದೆ,

'ಯೋಗರ್ದ್ಧಿಮಾಪುರುಭಯೀಂ'

ಎಂಬ ಪಾಠವಿಟ್ಟುಕೊಂಡು ಯೋಗಬಲದಿಂದ ಭುಕ್ತಿಮುಕ್ತಿಗಳೆರಡನ್ನೂ ಸಂಪಾದಿಸಿಕೊಂಡರೆಂದು ವ್ಯಾಖ್ಯಾನಿಸಿದ್ದಾರೆ. ಆದರೆ ಮುಕ್ತಿ ಯೋಗೈಶ್ವರ್ಯ ವೆನಿಸಲಾರದು.

ಅಮಯೀಂ ವಿಷ್ಣುಪ್ರಧಾನಾಂ।

ಅ ಎಂದರೆ ವಿಷ್ಣು. ಮಯ ಎಂದರೆ ಪ್ರಧಾನ. ವಿಷ್ಣುವಿಗೇ ಮುಖ್ಯವಾಗಿ ಸಮರ್ಪಿತವಾಗುವಂಥ ಅಣಿಮಾದಿ ಅಷ್ಟೈಶ್ವರ್ಯಸಿದ್ಧಿಯನ್ನು ಕಾರ್ತವೀರ್ಯಾದಿ ರಾಜರು ಪಡೆದರೆಂದರ್ಥ.

★★★

ಬ್ರಹ್ಮದೇವರು ನಾರದರಿಗೆ ವಿಷ್ಣು ಎಂಬ ಅವತಾರವನ್ನು ವರ್ಣಿಸುತ್ತಾರೆ—

ತಪ್ತಂ ತಪೋ ವಿವಿಧಲೋಕಸಿಸೃಕ್ಷಯಾ ಮ
ಆದೌ ಸನಾತ್ ಸುತಪಸಸ್ತಪತಃ ಸ ನೋಽಭೂತ್
ಪ್ರಾಕ್‌ಕಲ್ಪ ಸಂಪ್ಲವ ವಿನಷ್ಟಮಿಹಾತ್ಮತತ್ತ್ವಂ
ಸಮ್ಯಗ್ ಜಗಾದ ಮುನಯೋ ಯದಚಕ್ಷತಾತ್ಮನ್ ॥ ೫ ॥

ಆದಿಯಲ್ಲಿ ನಾನು ವಿವಿಧ ಲೋಕಗಳನ್ನು ಸೃಷ್ಟಿ ಮಾಡಲು ಬಯಸಿ ತಪಸ್ಸು

ಮಾಡಿದೆ. ಆಗ ತಪಸ್ವಿಯಾದ ಸನಕ ಹುಟ್ಟುವ ಮೊದಲೆ ಶ್ರೀಹರಿ ವಿಷ್ಣು ಎಂಬ ಹೆಸರಿನಿಂದ ಲೋಕರಕ್ಷಣೆಗಾಗಿ ಅವತರಿಸಿದ. ಮುನಿಗಳು ತಮ್ಮ ಹೃದಯದಲ್ಲಿ ಸದಾ ಧ್ಯಾನಿಸುವ ಪರಮಾತ್ಮ ತತ್ವವು ಪ್ರಲಯದಿಂದಾಗಿ ಆಗ ಮರೆಯಾಗಿತ್ತು. ಅದನ್ನು ವಿಷ್ಣು ಸಜ್ಜನರಿಗೆ ಉಪದೇಶಿಸಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಸ ಚತುಃಸನೋಽಭೂತ್' ಎಂದು ಪಾಠವಿಟ್ಟುಕೊಂಡು ಸನಕಾದಿಗಳು ನಾಲ್ವರೂ ಪರಮಾತ್ಮನ ಅವತಾರವೆಂದಿದ್ದಾರೆ. ವೀರರಾಘವ ವ್ಯಾಖ್ಯಾನದಲ್ಲಿ 'ಚತುಃ ಸನಃ' ಚತುರ್ಥನು ಸನಕ ಎಂದರೆ ಅರ್ಥಾತ್ ಸನಾತನ ಸನಂದನರು ಎರಡನೆ ಮೂರನೆಯವರೆಂದಿಟ್ಟುಕೊಳ್ಳಬೇಕು. ಯಾರಿಗೋ ಅವನು ಎಂದು ಬಹುವ್ರೀಹಿ. ಅಂದರೆ ಮೊದಲನೆಯವನು ಸನತ್ಕುಮಾರ ಭಗವದವತಾರ ಎಂದಿದೆ.' ಈ ಪಾಠ ಮತ್ತು ವ್ಯಾಖ್ಯಾನಗಳು ಅಶುದ್ಧ.

ಮೇ ತಪತಃ ಸತಃ । ಸಃ ನಃ ಅರ್ಥೇ । ಸನಾತ್ ಪೂರ್ವಂ ।

ಬ್ರಹ್ಮಣಸ್ತಪತಃ ಪೂರ್ವಂ ವಿಷ್ಣುರ್ಜಾತ ಉರುಕ್ರಮಃ ।
ಸರ್ವಲೋಕ ಹಿತಾರ್ಥಾಯ ಯೇನ ರೂಪಂ ಪ್ರಕಾಶಿತಂ ।
ಯಶ್ಚ ಪಾತಿ ಸದಾ ಲೋಕಾನ್ ಅಜಿತೋ ಜಯತಾಂ ವರಃ ।
ತಸ್ಮಾದ್ ರುದ್ರಃ ಸಮುತ್ಪನ್ನಃ ಸರ್ವಸಂಹಾರಕೃದ್ ವಿಭುಃ ।
ಏತೇ ತ್ರಿಪುರುಷಾಃ ಪ್ರೋಕ್ತಾಃ ಸೃಷ್ಟಿಸ್ಥಿತ್ಯಂತಕಾರಿಣಃ ।
ನಿಮಿತ್ತಮಾತ್ರಂ ತೌ ದೇವೌ ವಿಷ್ಣುಃ ಸರ್ವಸ್ಯ ಕಾರಣಂ ॥

ಇತಿ ಸ್ಕಾಂದೇ ।

'ಮೇ ತಪತಃ' ಎಂದರೆ ತಪಸ್ಸು ಮಾಡುತ್ತಿದ್ದ ನನ್ನಿಂದ ವಿಷ್ಣು ಜನಿಸಿದ ಎಂದರ್ಥವಲ್ಲ. ವಿಷ್ಣು ಬ್ರಹ್ಮಪುತ್ರನಲ್ಲ. ನಾನು ತಪಸ್ಸು ಮಾಡುತ್ತಿದ್ದಾಗ ವಿಷ್ಣು ವ್ಯಕ್ತನಾದ ಎಂದರ್ಥ. 'ಸನಾತ್ ಆದೌ ಸನಃ ಅಭೂತ್' ಸನಕನಿಗಿಂತ ಮೊದಲಿಗೆ ಸನಕ ಹುಟ್ಟಿದನೆಂದು ಅನ್ವಯಿಸಿದರೆ ವ್ಯಾಹತವಾಗುತ್ತದೆ. ಅದರಿಂದ 'ಸನಃ' ಎಂಬುದನ್ನು 'ಸಃ ನಃ' ಎಂದು ಬಿಡಿಸಿ 'ಅರ್ಥೇ' ಎಂದು ಸೇರಿಸಿ ನಮ್ಮ ರಕ್ಷಣೆಗಾಗಿ ವಿಷ್ಣು 'ಸನಾತ್ ಆದೌ' ಸನಕನಿಗಿಂತ ಮೊದಲು ವ್ಯಕ್ತನಾದನೆಂದು ವ್ಯಾಖ್ಯಾನಿಸಬೇಕು. ಏಕೆಂದರೆ ಸ್ಕಂದಪುರಾಣದಲ್ಲಿ ಹೀಗೆ ಹೇಳಿದೆ—

'ಬ್ರಹ್ಮನು ತಪಸ್ಸು ಮಾಡುತ್ತಿದ್ದಾಗ ಸನಕನಿಗಿಂತ ಮೊದಲು ಶ್ರೀಹರಿ ಸರ್ವಲೋಕಹಿತಕ್ಕಾಗಿ 'ವಿಷ್ಣು' ರೂಪದಿಂದ ಅವತರಿಸಿದ. ಅವನು ತನ್ನ ಸ್ವರೂಪವನ್ನು ಮುನಿಗಳಿಗೆ ಉಪದೇಶಿಸಿದ. ಉತ್ಕೃಷ್ಟ ಜಯಶಾಲಿಯಾದ ಅಜಿತನಾದ ಆ ವಿಷ್ಣುವೆ ಲೋಕಗಳನ್ನು ಸದಾ ರಕ್ಷಿಸುತ್ತಾನೆ. ಅವನಿಂದಲೆ ಸರ್ವಸಂಹಾರ

ಕಾರಕನಾದ ರುದ್ರ ಹುಟ್ಟಿದ. ಈ ಮೂವರು ಬ್ರಹ್ಮ ವಿಷ್ಣು ರುದ್ರರು ಸೃಷ್ಟಿಸ್ಥಿತಿ ಲಯಕಾರಕರು. ಅವರಲ್ಲಿ ಬ್ರಹ್ಮರುದ್ರರು ನಿಮಿತ್ತ ಮಾತ್ರ. ವಿಷ್ಣುವೆ ಎಲ್ಲವನ್ನೂ ಸ್ವತಂತ್ರವಾಗಿ ಮಾಡುವವನು' ಎಂದು.

★★★

ಬ್ರಹ್ಮದೇವರು ನಾರದರಿಗೆ ನರ ನಾರಾಯಣಾವತಾರಗಳನ್ನು ಹೇಳುತ್ತಾರೆ—

ಧರ್ಮಸ್ಯ ದಕ್ಷ ದುಹಿತರ್ಯಜನಿ ಸ್ವಮೂರ್ತ್ಯಾ
ನಾರಾಯಣೋ ನರ ಇತಿ ಸ್ವತಪಃಪ್ರಭಾವಃ ।
ದೃಷ್ಟ್ವಾತ್ಮನೋ ಭಗವತೋ ನಿಯಮಾವಲೋಪಂ
ದೇವ್ಯಸ್ತ್ವನಂಗ ಪೃತನಾ ಘಟಿತುಂ ನ ಶೇಕುಃ ॥ ೬ ॥

ಯಮಧರ್ಮನಿಂದ ದಕ್ಷಪುತ್ರಿಯಾದ ಮೂರ್ತಿದೇವಿಯಲ್ಲಿ ಶ್ರೀಹರಿ ತನ್ನ ಚಿನ್ಮಯ ಶರೀರದಿಂದಲೆ ಲೋಕಶಿಕ್ಷಣಕ್ಕಾಗಿ ತಪಸ್ಸು ಮಾಡುವ ನರ ನಾರಾಯಣ ಹರಿ ಕೃಷ್ಣ ಎಂಬ ನಾಲ್ಕು ರೂಪಗಳಿಂದ ಅವತರಿಸಿದ. ಸದಾ ತನ್ನ ಸ್ವರೂಪವನ್ನು ಪ್ರತ್ಯಕ್ಷ ಅನುಭವಿಸುವ ಆ ಭಗವಂತನ ತಪಸ್ಸನ್ನು ಕೆಡಿಸಲು ಮನ್ಮಥನ ಸೇನೆಯಂತಿರುವ ಅಪ್ಸರೆಯರೂ ಶಕ್ತರಾಗಲಿಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ನಾರಾಯಣೋ ನರ ಇತಿ' ಎಂಬ ಮಾತಿನಿಂದ ನರ ನಾರಾಯಣ ಎಂದು ಎರಡೇ ಅವತಾರವೆಂದು ಗ್ರಹಿಸಿದ್ದಾರೆ. ವಸ್ತುತಃ ಹರಿ ಕೃಷ್ಣ ಎಂಬೆರಡು ಅವತಾರಗಳೂ ಜೊತೆಗೇ ಆಗಿವೆ. ಬದರಿಕಾಶ್ರಮದಲ್ಲಿ ಜೊತೆಯಾಗಿ ತಪಸ್ಸು ಮಾಡುತ್ತ ಪ್ರಸಿದ್ಧರಾದವರೆಂದು ನರನಾರಾಯಣರನ್ನು ಮಾತ್ರ ಭಾಗವತ ಹೇಳಿದೆ. ನರ ಶೇಷನ ಅವತಾರ. ಹರಿಯ ಆವೇಶ. ನಾರಾಯಣ ಸ್ವರೂಪಾವತಾರ ಎಂಬ ವಿಶೇಷವೂ ಇಲ್ಲಿ ಗ್ರಾಹ್ಯ. ಬೇರೆ ವ್ಯಾಖ್ಯಾನಕಾರರು ಅದನ್ನು ಹೇಳುವುದಿಲ್ಲ.

ನರೋ ನಾರಾಯಣಶ್ಚೈವ ಹರಿಃ ಕೃಷ್ಣಸ್ತಥೈವ ಚ ।
ಚತ್ವಾರೋ ಧರ್ಮತನಯಾ ಹರಿರೇವ ತ್ರಯೋ ಮತಃ ।
ಅನಂತೋ ನರನಾಮಾऽತ್ರ ತಸ್ಮಿಂಸ್ತು ನರನಾಮವಾನ್ ।
ವಿಶೇಷೇಣ ಸ್ವಯಂ ವಿಷ್ಣುರ್ನಿವಸತ್ಯಂಬುಜೇಕ್ಷಣಃ ।
ತಸ್ಮಾಚ್ಚತುರ್ಧಾ ಧರ್ಮಸ್ಯ ಜಾತೋ ವಿಷ್ಣುರಿತೀರಿತಃ ।

ಇತಿ ಷಾಡ್ಗುಣ್ಯೇ ।

ನರ ನಾರಾಯಣ ಹರಿ ಕೃಷ್ಣ ಎಂದು ನಾಲ್ಕು ಮಂದಿ ಧರ್ಮಪುತ್ರರು. ಅವರಲ್ಲಿ

ಮೂವರು ಮಾತ್ರ ಸಾಕ್ಷಾತ್ ಹರಿ. ನರನು ಶೇಷನ ಅವತಾರ. ಅವನಲ್ಲಿ ನರನಾಮಕನಾಗಿ ಹರಿ ಸ್ವಯಂ ಆವೇಶಗೊಂಡಿದ್ದಾನೆ. ಆದರಿಂದ ನಾಲ್ಕು ಮಂದಿಧರ್ಮಪುತ್ರರಾಗಿ ವಿಷ್ಣು ಅವತರಿಸಿದನೆಂದು ಹೇಳುವುದುಂಟು ಎಂದು ಷಾಡ್ಗುಣ್ಯ ಎಂಬ ಗ್ರಂಥದಲ್ಲಿ ಹೇಳಿದೆ.

★★★

ಧ್ರುವ ವರದ ವಾಸುದೇವಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ವಿದ್ಧಃ ಸಪತ್ನ್ಯುದಿತ ಪತ್ರಿಭಿರಂತಿ ರಾಜ್ಞೋ
ಬಾಲೋಽಪಿ ಸನ್ನುಪಗತಸ್ತಪಸೇ ವನಾಯ ।
ತಸ್ಮಾ ಅದಾದ್ ಧ್ರುವಗತಿಂ ಗೃಣತೇ ಪ್ರಸನ್ನೋ
ದಿವ್ಯಾಃ ಸ್ತುವಂತಿ ಮುನಯೋ ಯದುಪರ್ಯಧಸ್ತಾತ್ ॥ ೮ ॥

ಮಲತಾಯಿಯ ವಾಗ್‌ಬಾಣಗಳಿಂದ ನೊಂದ ಧ್ರುವ ಬಾಲಕನಾದರೂ ತಪಸ್ಸಿಗಾಗಿ ಕಾಡಿಗೆ ನಡೆದ. ಅವನ ಸ್ತುತಿಗೆ ಪ್ರಸನ್ನನಾದ ವಾಸುದೇವ ಮೇಲೆ ಮತ್ತು ಕೆಳಗೆ ದೇವತೆಗಳು ಮುನಿಗಳು ನಿಂತು ಸ್ತುತಿಸುವ ಧ್ರುವಮಂಡಲದ ಆಧಿಪತ್ಯವನ್ನು ನೀಡಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಯಾವುದೋ ಒಂದು ಅವತಾರ' ಚರಿತ್ರೇಣೈವ ಕಮಪ್ಯವತಾರಂ ಸೂಚಯತಿ' ಎಂದಿದ್ದಾರೆ. ವಿಶ್ವನಾಥ ವ್ಯಾಖ್ಯಾನದಲ್ಲಿ ಮಾತ್ರ 'ಇಲ್ಲಿ ಅವತಾರ ಕಾರ್ಯವನ್ನು ಹೇಳಿದ್ದಾರೆ. ಅವತಾರದ ಹೆಸರು ಹೇಳಿಲ್ಲ. ದಶಮಸ್ಕಂಧದಲ್ಲಿ ವಸುದೇವ ದೇವಕಿಯರಿಗೆ ಶ್ರೀಕೃಷ್ಣ ಮಗನಾಗಿ ಅವತರಿಸುವ ಕಾಲದಲ್ಲಿ ನಾನು ಹಿಂದೆ ಪೃಶ್ನಿಗರ್ಭ ಎಂಬ ಹೆಸರಿನಿಂದ ನಿಮ್ಮ ಮಗನಾಗಿ ಅವತರಿಸಿದ್ದೆ, ಎನ್ನುತ್ತಾನೆ, ಅವತಾರದ ಹೆಸರು ಮಾತ್ರ ಇದೆ ಅವತಾರ ಕಾರ್ಯ ಹೇಳಿಲ್ಲ. ಎರಡನ್ನೂ ಸೇರಿಸಿ ಈ ಅವತಾರ ಕಾರ್ಯ ಆ ಅವತಾರದ್ದು ಎಂದರೆ ಎರಡೂ ಕಡೆ ನ್ಯೂನತೆ ಪರಿಹಾರವಾಯಿತು' ಎಂದಿದೆ. ಪ್ರಕಾಶಸಂಹಿತೆಯಲ್ಲಿ ನಿಃಸಂದಿಗ್ಧವಾಗಿ ಇದು ವಾಸುದೇವ ದ್ವಾದಶಾಕ್ಷರಮಂತ್ರಪ್ರತಿಪಾದ್ಯ ಧ್ರುವವರದ ವಾಸುದೇವ ಅವತಾರವೆಂದು ಹೇಳಿರುವಾಗ ವ್ಯರ್ಥ ಊಹಾಪೋಹಗಳೇಕೆ?

ಅವತಾರೋ ಮಹಾವಿಷ್ಣೋರ್ವಾಸುದೇವ ಇತೀರಿತಃ ।
ಯೋ ಧ್ರುವಾಯ ನಿಜಂ ಪ್ರಾದಾತ್ ಸ್ಥಾನಮನ್ಯಾನಧಿಷ್ಠಿತಂ ।
ಇತಿ ಪ್ರಕಾಶಸಂಹಿತಾಯಾಂ ।

ಇನ್ನೊಬ್ಬರ ಆಳ್ವಿಕೆಯಲ್ಲಿಲ್ಲದಿದ್ದ ತನ್ನ ಒಂದು ಲೋಕವನ್ನು ಧ್ರುವನಿಗೆ ಕೊಟ್ಟ ವಿಷ್ಣುವಿನ ಅವತಾರ ವಾಸುದೇವ ನಾಮಕವಾಗಿದೆ ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

★★★

ಪೃಥು ಎಂಬ ಆವೇಶಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಯದ್ವೇನಮುತ್ಪಥಗತಂ ದ್ವಿಜವಾಕ್ಯವಜ್ರ
ನಿಷ್ಪಿಷ್ಟಪೌರುಷಭಗಂ ನಿರಯೇ ಪತಂತಂ ।
ಜ್ಞಾತ್ವಾಽರ್ಥಿತೋ ಜಗತಿ ಪುತ್ರಪದಂ ಚ ಲೇಭೇ
ದುಗ್ಧಾ ವಸೂನಿ ವಸುಧಾ ಸಕಲಾನಿ ಯೇನ ॥ ೯ ॥

ವೇನರಾಜ ಅಧರ್ಮಮಾರ್ಗವನ್ನು ತುಳಿದ. ವಜ್ರಾಯುಧದಂಥ ಮುನಿಶಾಪಗಳಿಂದ ಪೌರುಷ ಐಶ್ವರ್ಯಗಳನ್ನು ಕಳೆದುಕೊಂಡು ನರಕದಲ್ಲಿ ಬೀಳಲು ಅಣಿಯಾದ. ಇದನ್ನು ತಿಳಿದು ಅವನ ಮರಣಾನಂತರ ಲೋಕವನ್ನು ಕಾಪಾಡಲು ಮುನಿಗಳು ಪರಮಾತ್ಮನನ್ನು ಪ್ರಾರ್ಥಿಸಿದರು. ಆಗ ವೇನನ ಬಲ ಬುಜದಿಂದ ಹುಟ್ಟಿದ ಪೃಥುಚಕ್ರವರ್ತಿಯಲ್ಲಿ ಪೃಥುನಾಮಕನಾಗಿ ಹರಿ ಆವೇಶಗೊಂಡು, ಗೋರೂಪದ ಭೂಮಿಯಿಂದ ಸಮಸ್ತ ಸಂಪತ್ತನ್ನು ಹಾಲು ಕರೆದು ಕೊಟ್ಟ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಪುತ್ರಪದಂ ಲೇಭೇ' ಎಂದರೆ ಮಗನಾಗಿ ಹುಟ್ಟಿ ತಂದೆಯನ್ನು ನರಕದಿಂದ ಪಾರುಮಾಡಿದ್ದರಿಂದ 'ಪುತ್ರ' ಎಂಬ ಸಾರ್ಥಕನಾಮವನ್ನು ಪಡೆದ, ಪುತ್ ಎಂದರೆ ನರಕ, ತ್ರ ರಕ್ಷಿಸುವವ ಎಂದಿದ್ದಾರೆ. ಪೃಥು ಆವೇಶಾವತಾರವೆಂದೂ ಹೇಳಿಲ್ಲ. ವಸ್ತುತಃ ಪಾಪಿ ವೇನ ಉದ್ಧಾರಕ್ಕೆ ಯೋಗ್ಯನಲ್ಲ. 'ಪುತ್ರಪದಂ ಲೇಭೇ' ಎಂದರೆ ಪೃಥು ಎಂಬ ಪುತ್ರನಲ್ಲಿ ಪದವನ್ನು ಅಂದರೆ ಸ್ಥಾನವನ್ನು ಆವೇಶವನ್ನು ಹೊಂದಿದ ಎಂದಿಷ್ಟೇ ಅರ್ಥ.

ಪೃಥುರ್ನಾಮ ಮಹಾರಾಜಸ್ತತ್ರ ವಿಷ್ಣುಃ ಸ್ವಯಂ ಪ್ರಭುಃ ।
ಪೃಥುನಾಮಾ ಚತುರ್ಬಾಹುಃ ಪ್ರವಿಷ್ಟಸ್ತೇನ ಚಾರ್ಥಿತಃ ॥

ಇತಿ ಮಹಾಸಂಹಿತಾಯಾಂ ।

ಪೃಥು ಎಂದರೆ ಒಬ್ಬ ಚಕ್ರವರ್ತಿ. ಅವನಲ್ಲಿ ಶ್ರೀಹರಿ ಪೃಥು ಎಂಬ ಹೆಸರಿನಿಂದ ಸ್ವಯಂ ಪ್ರವಿಷ್ಟನಾದ. ಏಕೆಂದರೆ ಪೃಥು ಪೂರ್ವಜನ್ಮದಲ್ಲಿ ಅದನ್ನು ಪ್ರಾರ್ಥಿಸಿದ್ದ. ಈಗ ಮುನಿಗಳೂ ಪ್ರಾರ್ಥಿಸಿದರು ಎಂದು ಮಹಾಸಂಹಿತೆಯಲ್ಲಿ ಹೇಳಿದೆ.

★★★

ಋಷಭಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ನಾಭೇರಸಾವೃಷಭ ಆಸ ಸುದೇವಿಸೂನು-
ರ್ಯೋ ವೈ ಚಚಾರ ಸಮದೃಗ್ ಹೃದಿ ಯೋಗಚರ್ಯಾಂ ।
ಯತ್ ಪಾರಮಹಂಸ್ಯಮೃಷಯಃ ಪದಮಾಮನಂತಿ
ಸ್ವಸ್ಥಃ ಪ್ರಶಾಂತಕರಣಃ ಪರಿಮುಕ್ತಸಂಗಃ ॥ ೧೦ ॥

ಶ್ರೀಹರಿ ನಾಭಿರಾಜನಿಂದ ಮೇರುದೇವಿಯಲ್ಲಿ ಋಷಭ ನಾಮಕನಾಗಿ ಅವತರಿಸಿದ. ಅವನು ಎಲ್ಲರ ಹೃದಯದಲ್ಲಿ ಸಮನಾಗಿ ಇರುವ ತನ್ನನ್ನೇ ಕಾಣುತ್ತ ಲೋಕಶಿಕ್ಷೆಗಾಗಿ ಪರಮಹಂಸರ ಯೋಗವನ್ನು ಆಚರಿಸಿದ. ಪರಮಹಂಸ ಧರ್ಮದ ಉಪದೇಶ ಪಡೆಯಲು ಅವನ ಋಷಭರೂಪವನ್ನೆ ಪರಮಹಂಸರು ಆಶ್ರಯಿಸಬೇಕೆಂದು ಮುನಿಗಳು ಹೇಳುತ್ತಾರೆ. ಏಕೆಂದರೆ ಋಷಭ ತನ್ನಲ್ಲೇ ತಾನು ಸುಖಸ್ವರೂಪವಾದ ಇಂದ್ರಿಯಗಳಿಂದ ತೃಪ್ತಿಯನ್ನು ಅನುಭವಿಸುತ್ತ ಬಾಹ್ಯ ಸುಖಾಪೇಕ್ಷೆ ಇಲ್ಲದವನಾಗಿದ್ದ.

ಇಲ್ಲಿ 'ಪಾರಮಹಂಸ್ಯ ಪದ' ಎಂದರೆ ಪರಮಹಂಸರ ಚಿಹ್ನೆಯಾದ ಋಷಭನ ಯೋಗಚರ್ಯೆಯನ್ನು ಋಷಿಗಳು ಅಭ್ಯಾಸ ಮಾಡಿದರು ಎಂದು ಹೇಳಿದಂತೆ ಕಾಣುತ್ತದೆ. ವಿಶ್ವನಾಥ ವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ. ವಿಶೇಷಾರ್ಥವನ್ನು ಹೀಗೆ ಹೇಳಬೇಕು—

ಯದ್ರೂಪಂ ಪರಮಹಂಸಪ್ರಾಪ್ಯಂ ಪದಮಾಮನಂತಿ ।

ಪರಮಾತ್ಮನ ಆ ಋಷಭರೂಪವನ್ನು ಪರಮಹಂಸರು ಪರಮಹಂಸ ಧರ್ಮೋಪದೇಶ ಪಡೆಯುವ ಸಲುವಾಗಿ ಹೊಂದಬೇಕು ಎಂದು ಮುನಿಗಳು ಹೇಳುತ್ತಾರೆ.

★★★

ಹಯಗ್ರೀವಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಸತ್ರೇ ಮಮಾಸ ಭಗವಾನ್ ಹಯಶೀರ್ಷ ಏಷ
ಸಾಕ್ಷಾತ್ ಸ ಯಜ್ಞಪುರುಷಸ್ತಪನೀಯವರ್ಣಃ ।
ಛಂದೋಮಯೋ ಮಖಮಯೋಽಖಿಲದೇವತಾತ್ಮಾ
ವಾಚೋ ಬಭೂವುರುಶತೀಃ ಶ್ವಸತೋಽಸ್ಯ ನಸ್ತಃ ॥ ೧೧ ॥

ಚಿನ್ನದಂತೆ ಹೊಳೆವ ಯಜ್ಞಪುರುಷನಾದ ಶ್ರೀಹರಿ ನನ್ನ ಸತ್ರಯಾಗದಲ್ಲಿ

ಹಯಗ್ರೀವನಾಗಿ ಅವತರಿಸಿದ. ವೇದಗಳು ಯಜ್ಞಗಳು ದೇವತೆಗಳು ಲೋಕಗಳು ಇವೆಲ್ಲಕ್ಕೂ ಈ ಹಯಗ್ರೀವನೆ ಆಧಾರ. ಅವನು ಮೂಗಿನಿಂದ ಶ್ವಾಸಬಿಡುವಾಗ ಅಪೌರುಷೇಯವಾದ ನಿರ್ದೋಷವಾದ ವೇದಗಳು ಪ್ರಾದುರ್ಭವಿಸಿದುವು.

ಇಲ್ಲಿ ವೇದ, ಯಜ್ಞ ಮತ್ತು ದೇವತೆಗಳೆಲ್ಲ ಬ್ರಹ್ಮಸ್ವರೂಪವೆಂದು ಹೇಳಿದಂತೆ ಕಾಣುತ್ತದೆ. ಶ್ರೀಧರವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ. ಆದರೆ ಮಹಾಸಂಹಿತೆಯ ವಿರೋಧ ಬರುತ್ತದೆ.[೧]

ಛಂದಾಂಸಿ ಚ ಮಖಾಶ್ಚೈವ ದೇವಾ ಲೋಕಾಶ್ಚ ಸರ್ವಶಃ ।
ಸರ್ವೇ ವಿಷ್ಣೌ ಸ್ಥಿತಾ ಯಸ್ಮಾದತಃ ಸರ್ವಮಯೋ ಹ್ಯಸೌ ॥

ಇತಿ ಮಹಾಸಂಹಿತಾಯಾಂ ।

ವೇದಗಳು, ಯಜ್ಞಗಳು, ದೇವತೆಗಳು ಎಲ್ಲ ಲೋಕಗಳು ಎಲ್ಲವೂ ವಿಷ್ಣುವಿನಲ್ಲಿಯೆ ಆಶ್ರಯ ಪಡೆದಿವೆ. ಆದರಿಂದ ಅವನು ಸರ್ವಮಯ, ಅಂದರೆ ಛಂದೋಮಯ ಮಖಮಯ ಅಖಿಲದೇವತಾತ್ಮನೆಂದು ಮುಂತಾಗಿ ಉಕ್ತನಾಗಿದ್ದಾನೆ ಎಂದು ಮಹಾಸಂಹಿತೆ ಹೇಳುತ್ತದೆ.

★★★

ಮತ್ಸ್ಯಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಮತ್ಸ್ಯೋ ಯುಗಾಂತಸಮಯೇ ಮನುನೋಪಲಬ್ಧಃ
ಕ್ಷೋಣೀಮಯೋ ನಿಖಿಲಜೀವನಿಕಾಯಕೇತಃ ।
ವಿಸ್ರಂಸಿತಾನುರುಭಯೇ ಸಲಿಲೇ ಮುಖಾನ್ಮ
ಆದಾಯ ತತ್ರ ವಿಜಹಾರ ಹ ವೇದಮಾರ್ಗಾನ್ ॥ ೧೨ ॥

ನನ್ನ ಮುಖದಿಂದ ಹೊರಟ ನಾನಾ ವೇದಗಳನ್ನು ಹಯಗ್ರೀವನೆಂಬ ಅಸುರ ಅಪಹರಿಸಿದಾಗ ಶ್ರೀಹರಿ ಮತ್ಸ್ಯರೂಪದಿಂದ ಅವತರಿಸಿ ಅವನನ್ನು ಸಂಹರಿಸಿ ವೇದಗಳನ್ನು ತಿರುಗಿ ನನಗೆ ತಂದಿತ್ತು ನೀರಲ್ಲಿ ಕ್ರೀಡಿಸಿದ. ಬಳಿಕ ಚಾಕ್ಷುಷಮನ್ವಂತರಪ್ರಲಯ ಕಾಲದಲ್ಲಿ ಸತ್ಯವ್ರತ ರಾಜನೆಂಬ ಭಾವಿ ವೈವಸ್ವತ ಮನುವಿಗೆ ಕಾಣಿಸಿಕೊಂಡು ಭೂರೂಪದ ನಾಕೆಯನ್ನು ಧರಿಸಿ ಎಲ್ಲ ಜೀವರಿಗೆ ಆಶ್ರಯ ನೀಡಿ ಪ್ರಲಯ ಸಮುದ್ರದಲ್ಲಿ ಕ್ರೀಡಿಸಿದ.

---

೧. ಛಂದೋಮಯೋ ವೇದಮಯಃ । ತದ್ವಿಧೇಯಾ ಯೇ ಮಖಾಸ್ತನ್ಮಯಃ। ಅಮೃತಮಯ ಇತಿ ವಾ ಪಾಠಃ । ಮಖೈರ್ಯಜನೀಯಾ ಅಖಿಲಾ ಯಾ ದೇವತಾಸ್ತದಾತ್ಮಾ ಚ ।
-ಶ್ರೀಧರಃ

ಇಲ್ಲಿ ಸಮುದ್ರದಲ್ಲಿ ಸಂಚರಿಸುವ ಮತ್ಸ್ಯಮೂರ್ತಿ ಭೂಮಿಗೆ ಹೇಗೆ ಆಧಾರ ಎಂಬುದನ್ನು ಸ್ಪಷ್ಟಗೊಳಿಸುತ್ತಾರೆ—

ಕ್ಷೋಣೀಮಯ ನೌಕಾಶ್ರಯತ್ವಾತ್ ಕ್ಷೋಣೀಮಯಃ ।

ಸತ್ಯವ್ರತರಾಜ ಭೂರೂಪವಾದ ನೌಕೆಯಲ್ಲಿ ಎಲ್ಲ ಬೀಜಗಳನ್ನೂ ಸಪ್ತರ್ಷಿಗಳನ್ನೂ ತುಂಬಿಕೊಂಡು ಆ ನೌಕೆಯನ್ನು ಮತ್ಸ್ಯನ ಕೊಂಬಿಗೆ ಕಟ್ಟಿದ್ದರಿಂದ ಪ್ರಲಯ ಕಾಲದಲ್ಲಿ ಭೂಮಿಗೆ ಮತ್ಸ್ಯ ಆಧಾರನೆನಿಸಿದ. ಆದರಿಂದ ಕ್ಷೋಣೀಮಯನೆನಿಸಿದ.

★★★

ಗಜೇಂದ್ರವರದನಾದ ಹರಿ ಎಂಬ ಅವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಸ್ಮೃತ್ವಾ ಹರಿಸ್ತಮರಣಾರ್ಥಿನಮಪ್ರಮೇಯ-
ಶ್ಚಕ್ರಾಯುಧಃ ಪತಗರ್ರಾಜಭುಜಾಧಿರೂಢಃ ।
ಚಕ್ರೇಣ ನಕ್ರವದನಂ ವಿನಿಪಾಟ್ಯ ತಸ್ಮಾದ್
ಹಸ್ತೇ ಪ್ರಗೃಹ್ಯ ಭಗವಾನ್ ಕೃಪಯೋಜ್ಜಹಾರ ॥ ೧೬ ॥

ಗರುಡಾರೂಢನಾದ ಚಕ್ರಾಯುಧನಾದ ಹರಿನಾಮಕ ತಾಪಸಮನು ಶರಣಾರ್ಥಿಯಾದ ಗಜೇಂದ್ರನಿಗೊಲಿದು ಚಕ್ರದಿಂದ ಮೊಸಳೆಯ ಬಾಯನ್ನು ಕತ್ತರಿಸಿ ಸೊಂಡಿಲಲ್ಲಿ ಹಿಡಿದು ಗಜೇಂದ್ರನನ್ನು ಕೃಪೆಯಿಂದ ಮೇಲೆತ್ತಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಹರಿ ಎಂಬ ಅವತಾರವೆಂದು ಮಾತ್ರ ಹೇಳುತ್ತಿದ್ದಾರೆ. ಶ್ರೀಮದಾಚಾರ್ಯರು ನಾಲ್ಕನೆಯ ಮನ್ವಂತರದ ಪ್ರವರ್ತಕನಾದ ತಾಪಸ ಮನು ಹರಿಯ ಅವತಾರ, ಅವನಿಗೇ ಹರಿ ತಾಪಸ ಎಂದು ಎರಡು ಹೆಸರುಗಳು ಎಂದು ವಿಶೇಷಾಂಶವನ್ನು ಹೇಳುತ್ತಾರೆ—

ಹರಿಸ್ತಾಪಸನಾಮಾಸೌ ಜಾತಸ್ತಪಸಿ ವೈ ಮನುಃ ।
ಗಜೇಂದ್ರಂ ಮೋಚಯಾಮಾಸ ಸಸರ್ಜ ಚ ಜಗದ್ ವಿಭುಃ ॥

ಇತಿ ಮಾತ್ಸ್ಯೇ ।

'ಹರಿ ಎಂಬ ಅವತಾರ ನಾಲ್ಕನೆ ಮನು. ಪ್ರಿಯವ್ರತರಾಜ ತಪಸ್ಸು ಮಾಡಿದಾಗ ಇವನು ಅವತಾರ ಮಾಡಿದ್ದರಿಂದ ತಾಪಸನೆಂದೂ ಕರೆಸಿಕೊಂಡ. ಇವನೇ ಗಜೇಂದ್ರನನ್ನು ಮೊಸಳೆಯಿಂದ ಬಿಡಿಸಿದ' ಎಂದು ಮತ್ಸ್ಯಪುರಾಣದಲ್ಲಿ ಹೇಳಿದೆ.

ಚತುರ್ಥ ಉತ್ತಮಭ್ರಾತಾ ಮನುರ್ನಾಮ್ನಾ ಚ ತಾಪಸಃ ।
ಹರಿರಿತ್ಯಾಹುತೋ ಯೇನ ಗಜೇಂದ್ರೋ ಮೋಚಿತೋ ಗ್ರಹಾತ್ ॥
(೮.೧.೨೭)

ಎಂದು ಭಾಗವತದಲ್ಲಿ ಮುಂದೆ ಹೇಳುವುದರಿಂದ ತಾಪಸಮನುವೆ ಗಜೇಂದ್ರವರದನೆಂಬುದು ಸ್ಪಷ್ಟವಿದೆ. ಶ್ರೀಹರಿ ತಾಪಸಾವತಾರದಲ್ಲಿ ಗಜೇಂದ್ರನನ್ನು ಕಾಪಾಡಿದನೆಂದು ವಿಜಯಧ್ವಜರು ಹೇಳುತ್ತಾರೆ. 'ತಾಮಸ ನಾಮಸೌ ಜಾತಸ್ತಮಸಿ ವೈ ಮನುಃ' ಎಂಬ ಪಾಠಪ್ರಕಾರ ತಾಮಸ ಎಂದೂ ಈತನಿಗೆ ಹೆಸರನ್ನು ಸತ್ಯಧರ್ಮರು ಒಪ್ಪಿದ್ದಾರೆ. ಯಾದುಪತ್ಯಪ್ರಕಾರ ಹರಿ, ತಾಪಸ ಎಂದು ಒಬ್ಬನಿಗೇ ಹೆಸರುಗಳು. ಛಲಾರಿ ನಾರಾಯಣಾಚಾರ್ಯರು ಗಜೇಂದ್ರವರದ ಹರಿ, ನಾಲ್ಕನೆ ಮನು ತಾಪಸ ಇಬ್ಬರೂ ಬೇರೆ ಎನ್ನುತ್ತಾರೆ.

★★★

ವಾಮನಾವತಾರದ ಮಹಿಮೆಯನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ನಾರ್ಥೋ ಬಲೇರಯಮುರುಕ್ರಮ ಪಾದಶೌಚಂ
ಅಂಭಃ ಶಿವಂ ಧೃತವತೋ ವಿಬುಧಾಧಿಪತ್ಯಂ ।
ಯೋ ವೈ ಪ್ರತಿಶ್ರುತಮೃತೇಽಪಿ ಚ ಶೀರ್ಷಮಾಣಂ
ಆತ್ಮನ್ಯಮಂಗ ಮನಸಾ ಹರಯೇಽಭಿಮೇನೇ ॥ ೧೮ ॥

ವಾಮನನ ಪಾದೋದಕವನ್ನು ಶಿರದಲ್ಲಿ ಧರಿಸಿದ ಬಲಿಚಕ್ರವರ್ತಿಗೆ ದೇವಲೋಕದ ಆದಿಪತ್ಯ ಮುಖ್ಯಫಲವಲ್ಲ. ಏಕೆಂದರೆ ಅವನು ತಾನು ವಾಗ್ದಾನ ಮಾಡಿದ ಮೂರುಹೆಜ್ಜೆ ಭೂಮಿದಾನ ಮಾಡಲು ಶಕ್ತನಾಗದಿದ್ದರೂ ಅದರ ಬದಲಿಗೆ ತನ್ನ ತಲೆಯನ್ನೆ ಹೆಜ್ಜೆಯಳತೆಯ ಪ್ರದೇಶವಾಗಿ ಭಕ್ತಿಯಿಂದ ಅರ್ಪಿಸಿದ.

ಇಲ್ಲಿ ವಾಮನ ಬಲಿಯನ್ನು ವಂಚಿಸಿದ್ದೇಕೆ ಎಂದು ಪ್ರಶ್ನೆ ಎತ್ತಿಕೊಂಡು ಬಲಿಗೆ ವಾಮನನ ಪಾದೋದಕ ಸಿಕ್ಕಾಗ ಸ್ವರ್ಗಾಧಿಪತ್ಯದಂಥ ಲೌಕಿಕ ಸಂಪತ್ತು ಬೇಡವೆನಿಸಿತ್ತು. ಅದರಿಂದ ವಾಮನ ಅದನ್ನು ಅಪಹರಿಸಿದನೆಂದು ವೀರರಾಘವ ವ್ಯಾಖ್ಯಾನ ಹೇಳಿದೆ. ಶುಕದೇವವ್ಯಾಖ್ಯಾನವೂ ಹಾಗೇ ಹೇಳಿದೆ. ವಲ್ಲಭ ವ್ಯಾಖ್ಯಾನದಲ್ಲಿ ಬಲಿಗೆ ಸ್ವರ್ಗಾಧಿಪತ್ಯ ಮೊದಲೂ ಇಷ್ಟವಿರಲಿಲ್ಲ. ಆದರೂ ವಾಮನನಿಗೆ ಸಮರ್ಪಿಸಲೆಂದೇ ಅದನ್ನು ಸಂಪಾದಿಸಿದ್ದ. ಈಗ ವಾಮನ ಅದನ್ನು ಅಪಹರಿಸಿದ ಎಂದಿದೆ. ಶ್ರೀಧರ ವಿಶ್ವನಾಥ ವ್ಯಾಖ್ಯಾನಗಳಲ್ಲಿ 'ಈ ಸ್ವರ್ಗಾಧಿಪತ್ಯ ಬೇಡ, ನಿನಗೆ ನನ್ನ ಸಾಲೋಕ್ಯಾದಿಗಳನ್ನು ಕೊಡುತ್ತೇನೆ' ಎನ್ನುವುದು ವಾಮನನ ಅಭಿಪ್ರಾಯ ಎಂದಿದೆ. ಈ

ವ್ಯಾಖ್ಯಾನಗಳು ಯಾವುವೂ ಸರಿಯಲ್ಲ. ಬಲಿಗೆ ಮುಂದಿನ ಮನ್ವಂತರದಲ್ಲಿ ಸ್ವರ್ಗಾಧಿಪತ್ಯ ಸಿಗುತ್ತಿದ್ದರೂ ಅಸುರಾವೇಶದಿಂದ ಈಗಲೆ ಅದನ್ನು ಅಪಹರಿಸಿದ್ದು ತಪ್ಪೆಂದು ವಾಮನ ಶಿಕ್ಷಿಸಿದ. ಆಗ ಪಶ್ಚಾತ್ತಾಪದಿಂದ ತಲೆಯನ್ನು ಬಾಗಿ ಸಮರ್ಪಿಸಿದ್ದರಿಂದ ವಾಮನ ಕ್ಷಮಿಸಿ ಮುಂದಿನ ಮನ್ವಂತರದಲ್ಲಿ ಸ್ವರ್ಗಾಧಿಪತ್ಯವನ್ನು ಕೊಡುವೆನೆಂದ. ಬ್ರಹ್ಮದೇವರು ಹೇಳುತ್ತಾರೆ. ಈ ಸ್ವರ್ಗಾಧಿಪತ್ಯ ಲಾಭ ಬಲಿಯ ಭಕ್ತಿಗೆ ತಕ್ಕಫಲವಲ್ಲ, ಮುಂದೆ ಮೋಕ್ಷದಲ್ಲಿ ಅಧಿಕಾನಂದವನ್ನೂ ಹರಿ ನೀಡಲಿದ್ದಾನೆ ಎಂದು. ಇಲ್ಲದಿದ್ದರೆ, ಬಲಿಗೆ ಲೌಕಿಕ ಸಂಪತ್ತು ಬೇಡವೆಂದೇ ಅಪಹರಿಸಿದರೆ ಮುಂದಿನ ಮನ್ವಂತರದಲ್ಲಿ ಅದನ್ನು ವಾಮನ ಏಕೆ ನೀಡುತ್ತಾನೆ? ಸಾಲೋಕ್ಯಾದಿಗಳೂ ಕೂಡಾ ಬಲಿಗೆ ದಾನದ ಫಲವಲ್ಲ, ಅದು ಅಪರೋಕ್ಷಜ್ಞಾನದ ಫಲ. ಅದು ಬಲಿಗೆ ನಿಶ್ಚಿತವೆ. ಅದರಿಂದ ಮೋಕ್ಷದಲ್ಲಿ ಅಧಿಕಾನಂದವೆ ಫಲವೆನ್ನಬೇಕು.

ಐಂದ್ರಂ ಪದಂ ನಾಂತರೀಯಂ ಫಲಂ ತು ಹರಿತೋಷಣಂ ।
ಜಗದ್ದಾತುರ್ಬಲೇರ್ಯಸ್ಮಾದಾನಂದೋದ್ರಿಕ್ತತಾ ಭವೇತ್ ॥
ಇತಿ ಬ್ರಹ್ಮತರ್ಕೇ । ಶೀರ್ಷಾಖ್ಯಂ ಮಾನಂ ।

ಮೂಲೋಕವನ್ನು ಹರಿಗೆ ದಾನ ಮಾಡಿದ ಬಲಿಗೆ ಸ್ವರ್ಗಾಧಿಪತ್ಯ ಕೇವಲ ಆನುಷಂಗಿಕ ಫಲವಷ್ಟೇ. ಮುಖ್ಯಫಲ ಪರಮಾತ್ಮನ ಅನುಗ್ರಹ. ಏಕೆಂದರೆ ಪರಮಾತ್ಮನ ಅನುಗ್ರಹದಿಂದ ಮೋಕ್ಷದಲ್ಲಿ ಅಧಿಕ ಆನಂದ ಲಭ್ಯವಾಗುತ್ತದೆ ಎಂದು ಬ್ರಹ್ಮತರ್ಕ ಹೇಳಿದೆ. 'ಶೀರ್ಷಮಾಣಂ' ಎಂದರೆ ವಾಮನನ ಹೆಜ್ಜೆಯಳತೆಯ ಪ್ರದೇಶವಾಗಿ ಬಲಿ ತನ್ನ ತಲೆಯನ್ನೇ ಇತ್ತ ಎಂದರ್ಥ.

★★★

ಮಹಿದಾಸಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ತುಭ್ಯಂ ಚ ನಾರದ ಭೃಶಂ ಭಗವಾನ್ ವಿವೃದ್ಧ
ಭಾವೇನ ಸಾಧು ಪರಿತುಷ್ಟ ಉವಾಚ ಯೋಗಂ ।
ಜ್ಞಾನಂ ಚ ಭಾಗವತಮಾತ್ಮ ಸುತತ್ವದೀಪಂ
ಯದ್ ವಾಸುದೇವಶರಣಾ ವಿದುರಂಜಸೈವ ॥ ೧೯ ॥

ನಾರದ, ನನಗೂ ನಿನಗೂ ಮಹಿದಾಸರೂಪಿ ಹರಿ ಕರ್ಮಯೋಗವನ್ನೂ ಭಗವಂತನ ಸ್ವರೂಪವನ್ನು ಚೆನ್ನಾಗಿ ಪ್ರಕಾಶಗೊಳಿಸುವ ಜ್ಞಾನಯೋಗವನ್ನೂ ಪ್ರೀತಿಯಿಂದ ಉಪದೇಶಿಸಿದನು. ಅದನ್ನು ವಿಷ್ಣುವಿನ ಪರಮಭಕ್ತರು ಮಾತ್ರ ಸರಿಯಾಗಿ ತಿಳಿಯಬಲ್ಲರು.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ ಹಂಸಾವತಾರ ವರ್ಣಿತವಾಗಿದೆ ಎಂದಿದ್ದಾರೆ. 'ವಿಷ್ಣುಧರ್ಮೋತ್ತರದಲ್ಲಿ ನಾರದರಿಗೆ ಭಕ್ತಿಯೋಗವನ್ನು ಉಪದೇಶಿ ಸಿದ ರೂಪವಿದು. ಭಾಗವತದಲ್ಲಿ ಮುಂದೆ ಏಕಾದಶಸ್ಕಂಧದಲ್ಲಿ ಸನಕಾದಿಗಳಿಗೆ ಕರ್ಮಯೋಗವನ್ನು ಉಪದೇಶಿಸಿದ ಹಂಸರೂಪವೆ ಬೇರೆ' ಎನ್ನುತ್ತಿದ್ದಾರೆ. ನಿನಗೂ ಉಪದೇಶಿಸಿದನೆಂದು ಹೇಳುವ ಮೂಲಕ ನಾರದಾವತಾರವನ್ನೂ ಹೇಳಿದಂತಾ ಯಿತು ಎನ್ನುತ್ತದೆ ವಿಶ್ವನಾಥ ವ್ಯಾಖ್ಯಾನ. ಆದರೆ ಬ್ರಹ್ಮಪುರಾಣ ಈ ಭಾಗವತ ಶ್ಲೋಕಕ್ಕೆ ಅಕ್ಷರಶಃ ವ್ಯಾಖ್ಯಾನ ಮಾಡಿರುವುದರಿಂದ ಅದರಂತೆ ಇಲ್ಲಿ ಮಹಿದಾಸಾವತಾರವೆ ವಿವಕ್ಷಿತವಾಗಿದೆ—

ಐತರೇಯೋ ಹರಿಃ ಪ್ರಾಹ ನಾರದಾಯ ಸ್ವಕಾಂ ತನುಂ ।
ಯತ್ ಪ್ರಾಪುರ್ವೈಷ್ಣವಾ ನಾನ್ಯೇ ಯದೃತೇ ನ ಸುಖಂ ಪರಂ ।

ಇತಿ ಬ್ರಾಹ್ಮೇ ॥

ಐತರೇಯ ಮಹಿದಾಸರೂಪನಾದ ಹರಿ ನಾರದರಿಗೆ ತನ್ನ ಸ್ವರೂಪವನ್ನು ಉಪದೇಶಿಸಿದ. ಅದನ್ನು ವಿಷ್ಣುಭಕ್ತರು ಮಾತ್ರ ಅರಿಯಬಲ್ಲರು. ಅದನ್ನರಿಯದೆ ಮೋಕ್ಷಸುಖ ಲಭ್ಯವಾಗದು ಎಂದು ಬ್ರಹ್ಮಪುರಾಣ ಹೇಳಿದೆ.

★★★

ಪ್ರಿಯವ್ರತಾದಿ ಚಕ್ರವರ್ತಿಗಳಲ್ಲಿ ಆವೇಶಗೊಂಡ ಹರಿಯ ರಾಜರಾಜೇಶ್ವರಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಚಕ್ರಂ ಚ ದಿಕ್ಷ್ವವಿಹತಂ ದಶಸು ಸ್ವತೇಜೋ
ಮನ್ವಂತರೇಷು ಮನುವಂಶಧರೋ ಬಿಭರ್ತಿ ।
ದುಷ್ಟೇಷು ರಾಜಸು ದಮಂ ವಿದಧತ್ ಸ್ವಕೀರ್ತಿಂ
ಸತ್ಯೇ ನಿವಿಷ್ಟ ಉಶತೀಂ ಪ್ರಥಯಂಶ್ಚರಿತ್ರೈಃ ॥ ೨೦ ॥

ಹದಿನಾಲ್ಕು ಮನ್ವಂತರಗಳಲ್ಲಿ ಮನುವಂಶದ ಪ್ರಿಯವ್ರತಾದಿ ಚಕ್ರವರ್ತಿ ಗಳಲ್ಲಿದ್ದು ಅವರಿಗೆ ಶಕ್ತಿ ಸಾಮರ್ಥ್ಯ ನೀಡಿ ಅವರ ಮೂಲಕ ದುಷ್ಟರಾಜರನ್ನು ಮಣಿಸಿ ಸತ್ಯಧರ್ಮಗಳನ್ನು ನಡೆಸಿ ನಿರ್ಮಲಕೀರ್ತಿಯನ್ನು ತನ್ನ ಚರಿತ್ರೆಗಳಿಂದ ಹರಡುತ್ತ ದಶದಿಕ್ಕುಗಳಲ್ಲಿ ಅಪ್ರತಿಹತವಾಗಿ ತನ್ನ ಪ್ರಭಾವವನ್ನು ಬೀರುವ ಚಕ್ರ ಶಂಖ ಗದಾ ಅಭಯಗಳನ್ನು ಧರಿಸುತ್ತಾನೆ ರಾಜರಾಜೇಶ್ವರ ರೂಪನಾದ ಹರಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಮನ್ವಂತರಾವತಾರಗಳ ವರ್ಣನೆ ಎಂದಿದ್ದಾರೆ. ಮನ್ವಂತರಗಳಲ್ಲಿ ಮಾಡುವ ಅವತಾರಗಳ ವರ್ಣನೆ ಎಂದು ಶುಕದೇವ ಮತ್ತು

ವಲ್ಲಭವ್ಯಾಖ್ಯಾನ. ಆಯಾ ಮನುಗಳ ರೂಪದಿಂದ ಅವತಾರಗಳೆಂದು ವಿಶ್ವನಾಥ ವ್ಯಾಖ್ಯಾನ. ಇವು ಅಬೋಧಕವಾಗಿವೆ.

ಮನ್ವಂತರೇಷು ಭಗವಾನ್ ಚಕ್ರವರ್ತಿಷು ಸಂಸ್ಥಿತಃ ।
ಚತುರ್ಭುಜೋ ಜುಗೋಪೈತದ್ ದುಷ್ಟರಾಜನ್ಯನಾಶಕಃ ।
ರಾಜರಾಜೇಶ್ವರೇತ್ಯಾಹುರ್ಮುನಯಶ್ಚಕ್ರವರ್ತಿನಾಂ ।
ವೀರ್ಯದಂ ಪರಮಾತ್ಮಾನಂ ಶಂಖಚಕ್ರಗದಾಧರಂ ॥

ಇತಿ ಸತ್ಯಸಂಹಿತಾಯಾಂ ।

'ಚತುರ್ಭುಜಗಳಲ್ಲಿ ಶಂಖ ಚಕ್ರ ಗದಾ ಅಭಯಗಳನ್ನು ಧರಿಸಿದ ಭಗವಾನ್ ಶ್ರೀಹರಿ ಮನ್ವಂತರಗಳಲ್ಲಿ ಚಕ್ರವರ್ತಿಗಳಲ್ಲಿ ಇದ್ದು ದುಷ್ಟರಾಜರನ್ನು ನಾಶಮಾಡಿ ಲೋಕವನ್ನು ಕಾಪಾಡಿದ. ಚಕ್ರವರ್ತಿಗಳಲ್ಲಿ ಶಕ್ತಿ ತುಂಬುವ ಈ ಭಗವದವತಾರವನ್ನು ಮುನಿಗಳು ರಾಜರಾಜೇಶ್ವರ ಎಂದು ಕರೆಯುತ್ತಾರೆ' ಎಂದು ಸತ್ಯ ಸಂಹಿತೆಯಲ್ಲಿ ಹೇಳಿದೆ.

★★★

ರಾಮಾವತಾರವನ್ನು ಬ್ರಹ್ಮದೇವರು ನಾರದರಿಗೆ ವರ್ಣಿಸುತ್ತಾರೆ—

ಕೃತ್ಸ್ನ ಪ್ರಸಾದ ಸುಮುಖಃ ಕಲಯಾ ಕಲೇಶ
ಇಕ್ಷ್ವಾಕುವಂಶ ಅವತೀರ್ಯ ಗುರೋರ್ನಿದೇಶೇ ।
ತಿಷ್ಠನ್ ವನಂ ಸದಯಿತಾನುಜ ಆವಿವೇಶ
ಯಸ್ಮಿನ್ ವಿರುಧ್ಯ ದಶಕಂಧರ ಆರ್ತಿಮಾರ್ಛತ್ ॥ ೨೩ ॥

ಪ್ರಾಣಾದಿ ಕಲೆಗಳಿಗೆ ಪ್ರಭುವಾದ ಶ್ರೀಹರಿ ಬ್ರಹ್ಮಾದಿಗಳಿಗೆ ಪೂರ್ಣಾನುಗ್ರಹ ಮಾಡುತ್ತ ಸ್ವರೂಪಾಂಶದಿಂದ ಇಕ್ಷ್ವಾಕುವಂಶದಲ್ಲಿ ರಾಮನಾಗಿ ಅವತರಿಸಿ ಪಿತೃವಾಕ್ಯಪರಿಪಾಲನೆಗಾಗಿ ಸೀತಾ ಲಕ್ಷ್ಮಣ ಸಮೇತನಾಗಿ ಕಾಡನ್ನು ಸೇರಿದ. ಅವನಲ್ಲಿ ವಿರೋಧ ಮಾಡಿ ರಾವಣ ನಾಶ ಹೊಂದಿದ.

ಇಲ್ಲಿ 'ಕಲೇಶ' ಎಂಬಲ್ಲಿ ಹೇಳುವ ಕಲೆ ಶ್ರೀಧರವ್ಯಾಖ್ಯಾನ ಪ್ರಕಾರ ಮಾಯೆ. ವೀರರಾಘವ ವ್ಯಾಖ್ಯಾನದಲ್ಲಿ ಪ್ರಕೃತಿಪುರುಷರು. ಶುಕದೇವನ ಪ್ರಕಾರ ಪ್ರಕೃತಿ ಪುರುಷಕಾಲಾದಿಗಳೆಲ್ಲವೂ ಕಲೆ. ವಲ್ಲಭವ್ಯಾಖ್ಯಾನದಲ್ಲಿ 'ಕಲೇಶ' ಎಂಬಲ್ಲಿ ಕಲೆ ಎಂದರೆ ಅಂಶಗಳು. ಕಲೇಶ ಎಂದರೆ ವೈಕುಂಠದಲ್ಲಿರುವ ಸಕಲ ಕಲಾನಿಧಿ ವಿಷ್ಣುಮೂರ್ತಿಯೆ ರಾಮನಾಗಿ ಬಂದನೆನ್ನುತ್ತಾರೆ. 'ಕಲಯಾ' ಎಂಬಲ್ಲಿ ಕಲೆ ಎಂದರೆ ಸೀತೆ ಎನ್ನುತ್ತಾರೆ. ಉಳಿದವರೆಲ್ಲರೂ ಲಕ್ಷ್ಮಣಾದಿಗಳು ಕಲೆಗಳು ಎನ್ನುತ್ತಾರೆ. ವಸ್ತುತಃ

'ಶ್ರೀರಾಮನ ಶರೀರ ನಮ್ಮಂತೆ ಪ್ರಾಣಾದಿ ಷೋಡಶಕಲೆಗಳಿಂದಾದುದಲ್ಲ, ಅವನು ಷೋಡಶಕಲೆಗಳಿಗೆ ಪ್ರಭು, ಆದರಿಂದ ಅವನ ಶರೀರ ಕೇವಲ ಜ್ಞಾನಾನಂದಮಯವೆ'ಂದು ಹೇಳುವ ಅಭಿಪ್ರಾಯದಿಂದ ಕಲೇಶ ಎಂದಿದೆ. 'ಕಲಯಾ' ಎಂದರೆ ಸ್ವರೂಪದ ಒಂದು ಅಂಶದಿಂದ ಶ್ರೀರಾಮ ಬಂದ. ಅಂಶಕ್ಕೂ ಮೂಲರೂಪಕ್ಕೂ ಯಾವ ಭೇದವೂ ಇಲ್ಲವೆಂಬುದನ್ನು ತನ್ನ ಸಾಮರ್ಥ್ಯದಿಂದ ವ್ಯಕ್ತಗೊಳಿಸಿದನೆನ್ನಲು ಕಲಯಾ ಎಂದಿದೆ.

ಪ್ರಾಣಾದಿಕಲೇಶಃ ।

ಕಲೇಶ ಎಂದರೆ ಪ್ರಾಣ ಮುಂತಾದ ಹದಿನಾರು ಕಲೆಗಳಿಗೆ ಪ್ರಭು ಎಂದರ್ಥ.

ಸ್ಥೂಲಶರೀರಧಾರಿಯಾದ ಪ್ರತಿಯೊಬ್ಬ ವ್ಯಕ್ತಿಯಲ್ಲಿರುವ ಹದಿನಾರು ಪ್ರಾಣಾದಿ ಕಲೆಗಳು ಷಟ್‌ಪ್ರಶ್ನೋಪನಿಷತ್ತಿನಲ್ಲಿ ಉಕ್ತವಾಗಿವೆ. ಅವು— ಪ್ರಾಣ, ಶ್ರದ್ಧೆ, ಆಕಾಶ, ವಾಯು ತೇಜ ಜಲ ಪೃಥ್ವಿ, ಇಂದ್ರಿಯಗಳು, ಮನಸ್ಸು, ಅನ್ನ ವೀರ್ಯ ತಪಸ್ಸು ಮಂತ್ರ ಕರ್ಮ ಇಂದ್ರಿಯಗೋಲಕಗಳು ಮತ್ತು ವ್ಯಕ್ತಿಯ ಹೆಸರು. ಇವುಗಳಿಗೂ ಇವುಗಳ ಅಭಿಮಾನಿ ದೇವತೆಗಳಿಗೂ ಹರಿ ಪ್ರಭು ಎಂದರ್ಥ.

★★★

ಶ್ರೀರಾಮಾವತಾರ ವರ್ಣನೆಯನ್ನೇ ಬ್ರಹ್ಮದೇವರು ಮುಂದುವರಿಸುತ್ತಾರೆ—

ಯಸ್ಮಾ ಅದಾದುದಧಿರೂಢಭಯಾಂಗವೇಪೋ
ಮಾರ್ಗಂ ಸಪದ್ಯರಿಪುರಂ ಹರವದ್ ದಿಧಕ್ಷೋಃ ।
ದೂರೇಸುಹೃನ್ಮಥಿತರೋಷಸುಶೋಷದೃಷ್ಟ್ಯಾ
ತಾತಪ್ಯಮಾನಮಕರೋರಗನಕ್ರಚಕ್ರಃ ॥ ೨೪ ॥

ರಾಮ ಸೀತೆಯಿಂದ ವಿಯುಕ್ತನಾದಾಗ ಅವನು ಕುಪಿತನಾಗಿ ತ್ರಿಪುರದಹನಕ್ಕೆ ಹೊರಟ ರುದ್ರನಂತೆ ಲಂಕೆಯನ್ನು ಸುಡಲು ಬಯಸಿ, ಉರಿವ ಕೋಪಾಗ್ನಿ ತುಂಬಿದ ದೃಷ್ಟಿಯಿಂದ ಸಮುದ್ರರಾಜನನ್ನು ದಿಟ್ಟಿಸಿ ನೋಡಿದ. ಒಡನೆ ಸಮುದ್ರದ ಮೀನು ಹಾವು ಮೊಸಳೆಗಳೆಲ್ಲ ಬೆಂದುವು. ರಾಮನ ಭಯದಿಂದ ಸಮುದ್ರರಾಜ ನಡುಗುತ್ತ ಕೂಡಲೆ ಲಂಕೆಗೆ ದಾರಿ ಕೊಟ್ಟ.

ಇಲ್ಲಿ 'ದೂರೇಸುಹೃತ್' ಎಂಬ ಶಬ್ದವನ್ನು ಬೇರೆ ವ್ಯಾಖ್ಯಾನಕಾರರೆಲ್ಲರೂ ಸಪ್ತಮೀ ತತ್ಪುರುಷ ಅಲುಕ್ ಸಮಾಸವೆಂದು ಸ್ವೀಕರಿಸಿದ್ದಾರೆ. 'ಕಂಠೇಕಾಲಃ' ಎಂದು ಮುಂತಾಗಿ ಬಹುವ್ರೀಹಿಯಲ್ಲಿ ಮಾತ್ರ ಸಪ್ತಮೀಅಲುಕ್‌ಸಮಾಸ ಪ್ರಯೋಗದಲ್ಲಿ

ಕಂಡಿದೆ. 'ಮಥಿತರೋಷ ಸುಶೋಣ ದೃಷ್ಟ್ಯಾ' ಎಂದು ಎಲ್ಲರೂ ಅಪಪಾಠವಿಟ್ಟು ಕೊಂಡಿದ್ದಾರೆ.

ದೂರಸ್ಥಾ ಸುಹೃದ್ ಯಸ್ಯ ಭಗವತಃ ಸ ದೂರೇಸುಹೃತ್ ।
ಸುಶೋಷೋऽಗ್ನಿಃ ।
ಅಗ್ನಿಃ ಸುಶೋಷಃ ಕಕ್ಷಘ್ನಸ್ತಿಮಿರಾರಿರ್ಹಿರಣ್ಯದಃ ।
ಇತಿ ಹ್ಯಭಿಧಾನೇ ।

ಭಗವಾನ್ ಶ್ರೀರಾಮನಿಗೆ ಪತ್ನಿ ಸೀತೆ ದೂರದಲ್ಲಿದ್ದಳು. ಅಂಥ ಶ್ರೀರಾಮ ದೂರೇಸುಹೃತ್ ಎನಿಸುತ್ತಾನೆ. ಸುಶೋಷ ಎಂದರೆ ಅಗ್ನಿ. ಅಭಿಧಾನ ಗ್ರಂಥದಲ್ಲಿ 'ಅಗ್ನಿ ಸುಶೋಷ ಕಕ್ಷಘ್ನ ತಿಮಿರಾರಿ ಹಿರಣ್ಯದ ಈ ಶಬ್ದಗಳು ಸಮಾನಾರ್ಥಕಗಳು' ಎಂದಿದೆ.

★★★

ಶ್ರೀರಾಮಾವತಾರ ವರ್ಣನೆಯನ್ನು ಇನ್ನೂ ಮುಂದುವರಿಸುತ್ತಾರೆ—

ವಕ್ಷಸ್ಥಲಸ್ಪರ್ಶರುಗ್ಣಮಹೇಂದ್ರವಾಹ-
ದಂತೈರ್ವಿಲಂಬಿತಕಕುಬ್ಜಯರೂಢಹಾಸಃ ।
ಸದ್ಯೋऽಸುಭಿಃ ಸಹ ವಿನೇಷ್ಯತಿ ದಾರಹರ್ತು-
ರ್ವಿಸ್ಫೂರ್ಜಿತೈರ್ಧನುಷ ಉಚ್ಚರಿತೈಃ ಸಸೈನ್ಯಃ ॥ ೨೫ ॥

ಯುದ್ಧದಲ್ಲಿ ಇಂದ್ರನ ಐರಾವತ ದಂತಗಳಿಂದ ತನ್ನೆದೆಯನ್ನು ತಿವಿದಾಗ ತನ್ನ ದಿಗ್ವಿಜಯಕ್ಕೆ ಸ್ವಲ್ಪ ವಿಲಂಬವಾಯಿತೆಂದು ಅಟ್ಟಹಾಸ ಮಾಡಿದವನು ರಾವಣ. ಆದರೆ ಅವನಿಂದ ಅಪಹೃತಳಾದ ಸೀತೆಯನ್ನು ತರಲು ರಾಮ ಲಂಕೆಗೆ ಹೋಗಿ ಬಿಲ್ಲಿನ ಠೇಂಕಾರ ಧ್ವನಿ ಮಾಡಿದಾಗ ಅದರಿಂದಲೆ ರಾವಣ ಧೈರ್ಯಗುಂದಿದ. ಬಳಿಕ ರಾಮನ ಬಾಣಗಳಿಂದ ಸೈನ್ಯ ಸಹಿತನಾಗಿ ಮರಣಹೊಂದಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕಪಾಠ ಬೇರೆಯಾಗಿದೆ—

ವಕ್ಷಃಸ್ಥಲಸ್ಪರ್ಶರುಗ್ಣಮಹೇಂದ್ರವಾಹ-
ದಂತೈರ್ವಿಡಂಬಿತ ಕಕುಬ್‌ಜುಷ ಊಢಹಾಸಂ ।
ಸದ್ಯೋऽಸುಭಿಃ ಸಹ ವಿನೇಷ್ಯತಿ ದಾರಹರ್ತು-
ರ್ವಿಸ್ಫೂರ್ಜಿತೈರ್ಧನುಷ ಉಚ್ಚರತೋऽಧಿಸೈನ್ಯೇ ॥

'ದಾರಹರ್ತೃ ಎಂದರೆ ಸೀತಾಪಹಾರಿಯಾದ ರಾವಣ. ಅವನ ಅಟ್ಟಹಾಸವನ್ನು

ಪ್ರಾಣಗಳೊಂದಿಗೆ ರಾಮ ಧನುಷ್ಟಂಕಾರದಿಂದ ವಿನೇಷ್ಯತಿ, ಅಪನೇಷ್ಯತಿ ದೂರ ಮಾಡುತ್ತಾನೆ' ಎಂದು ವ್ಯಾಖ್ಯಾನಿಸುತ್ತಾರೆ. ಮೂಲಪಾಠದಲ್ಲಿ ಹೀಗೆ ವ್ಯಾಖ್ಯಾನ ಮಾಡಬೇಕು—

ವಿನೇಷ್ಯತಿ ವಿನಾಶಂ ಏಷ್ಯತಿ । ದಾರಹರ್ತುರ್ಭಗವತಃ ।
ಧನುರ್ವಿಸ್ಫೂರ್ಜಿತೈರ್ನಷ್ಟೋ ರಾವಣಃ ಪೂರ್ವಮೇವ ತು ।
ಪುನಃ ಶರೈ ರಾಮಮುಕ್ತೈಃ ಸಾನುಬಂಧೋ ವಿನಶ್ಯತಿ ॥ ಇತಿ ಸ್ಕಾಂದೇ॥

ವಿನೇಷ್ಯತಿ ಎಂದರೆ 'ವಿಪ್ರಿಯ' ಇತ್ಯಾದಿ ಸ್ಥಳಗಳಂತೆ 'ವಿ' ಎಂದರೆ ಅಭಾವ, ವಿನಾಶ. ಅದನ್ನು 'ನೇಷ್ಯತಿ' ತನಗೆ ತಂದುಕೊಳ್ಳುತ್ತಾನೆ. 'ವಿ ವಿನಾಶಮಾತ್ಮಾನಂ ನೇಷ್ಯತಿ, ಅರ್ಥಾತ್ ವಿನಾಶಮೇಷ್ಯತಿ' ಎಂಬ ವ್ಯುತ್ಪತ್ತಿಯಂತೆ ರಾವಣ ವಿನಾಶ ಹೊಂದುವನು ಎಂದರ್ಥ. ದಾರಹರ್ತುಃ ಎಂದರೆ ಅಪಹೃತಳಾದ ಸೀತೆಯನ್ನು ಹಿಂದೆ ತರಲು ಹೊರಟ ಶ್ರೀರಾಮನ ಎಂದರ್ಥ. ಭಾಗವತ ಶ್ಲೋಕದ ನಮ್ಮ ಪಾಠದ ಛಾಯೆಯಂತಿರುವ ಶ್ಲೋಕ ಸ್ಕಂದಪುರಾಣದಲ್ಲಿ ಸಿಗುವುದರಿಂದ ನಮ್ಮ ಪಾಠವೆ ಸರಿ. ಸ್ಕಂದಪುರಾಣದಲ್ಲಿ ಹೀಗೆ ಹೇಳಿದೆ— 'ಧನುಷ್ಟಂಕಾರದಿಂದ ರಾವಣ ಮೊದಲಿಗೆ ಧೈರ್ಯಗುಂದುತ್ತಾನೆ. ಪುನಃ ರಾಮ ಪ್ರಯೋಗಿಸಿದ ಬಾಣಗಳಿಂದ ಸಪರಿವಾರನಾಗಿ ನಾಶಹೊಂದುತ್ತಾನೆ' ಎಂದು.

★★★

ಕೃಷ್ಣಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಭೂಮೇಃ ಸುರೇತರ ವರೂಥ ವಿಮರ್ದಿತಾಯಾಃ
ಕ್ಲೇಶವ್ಯಯಾಯ ಕಲಯಾ ಸಿತಕೃಷ್ಣಕೇಶಃ ।
ಜಾತಃ ಕರಿಷ್ಯತಿ ಜನಾನುಪಲಕ್ಷ್ಯಮಾರ್ಗಃ
ಕರ್ಮಾಣಿ ಚಾತ್ಮಮಹಿಮೋಪನಿಬಂಧನಾನಿ ॥ ೨೬ ॥

ಅಸುರ ಸೈನ್ಯಗಳ ಭಾರದಿಂದ ಪೀಡಿತಳಾದ ಭೂದೇವಿಯ ಕ್ಲೇಶವನ್ನು ಕಳೆಯಲು ಬಿಳಿ ಕಪ್ಪು ಕೂದಲುಗಳುಳ್ಳ ಭಗವಂತ ಬಿಳಿಕೂದಲಿನಾವೇಶದಿಂದ ಬಲರಾಮನಾಗಿ ಕಪ್ಪುಕೂದಲಿನ ಪ್ರಾದುರ್ಭಾವದಿಂದ ಕೃಷ್ಣನಾಗಿ ಅವತರಿಸಿ ಜನರಿಗೆ ತಾನು ಭಗವಂತನೆಂದು ತೋರಗೊಡದೆ ಭಗವಂತನೊಬ್ಬನಿಂದಲೆ ಸಾಧ್ಯವಾದ ಲೀಲೆಗಳನ್ನು ನಡೆಸುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ ಬಲರಾಮ ಬಿಳಿ ಏಕೆ ಎಂದು ತೋರಿಸಲು

ತನ್ನ ಕಪ್ಪುಕೂದಲನ್ನೆ ಹರಿ ಬಿಳಿಯಾಗಿ ಮಾಡಿಕೊಂಡ ಹೊರತು, ನರೆಕೂದಲು ಅವನಿಗಿಲ್ಲ. ಭೂಭಾರಹರಣ ಅಲ್ಪಕಾರ್ಯ, ಅದಕ್ಕೆ ನನ್ನ ಈ ಬಿಳಿ ಕಪ್ಪು ಕೂದಲುಗಳೇ ಸಾಕೆಂದು ತೋರುವುದಕ್ಕೂ ಹಾಗೆ ಮಾಡಿಕೊಂಡ ಹೊರತು ಬಿಳಿ ಕಪ್ಪು ಕೂದಲುಗಳೇ ಅವತರಿಸಿದುವೆನ್ನಕೂಡದು. ಬಿಳಿ ಕಪ್ಪು ಕೂದಲುಳ್ಳ ಹರಿ ಅವತರಿಸಿದನೆನ್ನಬೇಕು. ಇಲ್ಲದಿದ್ದರೆ 'ಕೃಷ್ಣಸ್ತು ಭಗವಾನ್‌ಸ್ವಯಂ' 'ಕೃಷ್ಣ ಭಗವಂತನೆ' ಎನ್ನಲಾಗದು. 'ಕೃಷ್ಣ ಕಪ್ಪುಕೂದಲು' ಎನ್ನುವ ಪ್ರಸಂಗವಿತ್ತು ಎನ್ನುತ್ತಾರೆ. [೧]ಇದು ಪರಮಾತ್ಮನಿಗೂ ಅವನ ಶರೀರಕ್ಕೂ ಅವನ ಅವಯವಗಳಿಗೂ ಭೇದವನ್ನು ಹೇಳುವ ದುರ್ಮತದ ವಾದ. ವಸ್ತುತಃ ಕೂದಲಿಗೂ ಭಗವಂತನಿಗೂ ಭೇದವಿಲ್ಲ. ಕೂದಲಿನಲ್ಲಿ ಎಲ್ಲ ವರ್ಣಗಳೂ ಇರುವುದರಿಂದ ಕಪ್ಪನ್ನು ಬಿಳಿ ಮಾಡಬೇಕಾಗುವ ಪ್ರಸಂಗವೂ ಇಲ್ಲ.

ರಾಮ ಏಕೋ ಹ್ಯನಂತಾಂಶಸ್ತತ್ರ ರಾಮಾಭಿಧೋ ಹರಿಃ ।
ಶುಕ್ಲಕೇಶಾತ್ಮಕಸ್ತಿಷ್ಠನ್ ರಮಯಾಮಾಸ ವೈ ಜಗತ್ ॥ ಇತಿ ಬ್ರಾಹ್ಮೇ ।
ವಿಷ್ಣೋರ್ನಾನ್ಯೇನ ಕರ್ಮಾಣಿ ಪರೇಷಾಂ ತನ್ನಿಬಂಧನಂ ।
ಇತಿ ಮಾತ್ಸ್ಯೇ ॥

ಪರಶುರಾಮ ದಾಶರಥಿರಾಮರಿಗಿಂತ ಬೇರೆ ಇನ್ನೊಬ್ಬ ರಾಮನೆಂದರೆ, ಬಲರಾಮ ಶೇಷನ ಅವತಾರ. ಅವನಲ್ಲಿ ಹರಿಯ ಶುಕ್ಲಕೇಶರೂಪನಾದ ರಾಮ ಆವಿಷ್ಟನಾಗಿ ಜಗತ್ತನ್ನು ಆನಂದ ಪಡಿಸಿದ ಎಂದು ಬ್ರಹ್ಮಪುರಾಣ ಹೇಳಿದೆ. ಪರಮಾತ್ಮನ ಲೀಲೆಗಳು ಸ್ವತಂತ್ರವಾಗಿ ಪರಮಾತ್ಮನಿಂದಲೆ ಆಗುತ್ತವೆ, ಇನ್ನೊಬ್ಬರ ಪಾತ್ರ ಅದರಲ್ಲಿ ಏನೂ ಇರುವುದಿಲ್ಲ. ಆದರೆ ಇನ್ನೊಬ್ಬರ ಎಲ್ಲ ಕಾರ್ಯಗಳೂ ಪರಮಾತ್ಮನ ಪ್ರಭಾವದಿಂದಲೆ ನಡೆಯುತ್ತವೆ ಎಂದು ಮತ್ಸ್ಯಪುರಾಣ ಹೇಳಿದೆ.

★★★

ಕೃಷ್ಣಾವತಾರ ವರ್ಣನೆಯನ್ನು ಬ್ರಹ್ಮದೇವರು ಮುಂದುವರಿಸುತ್ತಾರೆ—

ತೋಕೇನ ಜೀವಹರಣಂ ಯದುಲೂಪಿಕಾಯಾ-
ಸ್ತ್ರೈಮಾಸಿಕಸ್ಯ ಚ ಪದಾ ಶಕಟೋಽಪವೃತ್ತಃ ।

---

೧. ಅಜರಾಮರಸ್ಯೇಶಾಸ್ಯಾರ್ಧಪಲಿತತ್ವಾಸಂಭವಾತ್ ಏಕಕೇಶ ಈಶೇಚ್ಛಯಾ ರಾಮಸ್ಯ ಶ್ವೇತರೂಪಜ್ಞಾಪನಾರ್ಥಂ ತದೈವ ಶ್ವೇತೋಽಭೂದಿತಿ ಗಮ್ಯತೇ । -ವಂಶೀಧರಃ

ಸಿತಕೃಷ್ಣಕೇಶತ್ವಂ ಶೋಭೈವ । ನ ತು ವಯಃ ಪರಿಣಾಮಕೃತಂ । ಭಾರಾವತರಣ ರೂಪಂ ಕಾರ್ಯಂ ಕಿಯದೇತತ್? ಮತ್‌ಕೇಶಾವೇವ ಕರ್ತುಂ ಸಮರ್ಥೌ ಇತಿ ದ್ಯೋತನಾರ್ಥಂ ರಾಮಕೃಷ್ಣಯೋರ್ವರ್ಣ ಸೂಚನಾರ್ಥಂ ಚ ಕೇಶೋದ್ಧರಣಮಿತಿ ಗಮ್ಯತೇ । -ವಿಶ್ವನಾಥಃ

ಯದ್ರಿಂಗತಾಽಂತರಗತೇನ ದಿವಿಸ್ಪೃಶೋರ್ವಾ
ಉನ್ಮೂಲನಂ ತ್ವಿತರಥಾಽರ್ಜುನಯೋರ್ನ ಭಾವ್ಯಂ ॥ ೨೭ ॥

ಸಣ್ಣ ಶಿಶುವಾದ ಕೃಷ್ಣ ಪೂತನೆಯ ಪ್ರಾಣಾಪಹಾರ ಮಾಡಿದ್ದು ಮೂರು ತಿಂಗಳ ಶಿಶುಕೃಷ್ಣ ಪಾದದಿಂದ ಶಕಟಾಸುರನನ್ನು ಕೊಂದಿದ್ದು, ಅಂಬೆಗಾಲಿಕ್ಕುವ ಕೃಷ್ಣ ನಡುವೆ ಬಂದು ಸಾವಿರ ಧನುಃಪ್ರಮಾಣಕ್ಕಿಂತ ಹೆಚ್ಚು ಎತ್ತರದ ಜೋಡಿ ಅರ್ಜುನ ವೃಕ್ಷಗಳನ್ನು ಕೆಡವಿದ್ದು ಇವೆಲ್ಲವೂ ಕೃಷ್ಣ ಸಾಕ್ಷಾದ್ ಭಗವಂತನಲ್ಲದಿದ್ದರೆ ಸರ್ವಥಾ ಅಶಕ್ಯ.

ಇಲ್ಲಿ 'ದಿವಿಸ್ಪೃಶೋಃ' ಎಂದರೆ ಮರಗಳು ಸ್ವರ್ಗಲೋಕವನ್ನು ಮುಟ್ಟುತ್ತಿದ್ದುವು ಎಂದರ್ಥವಲ್ಲ. ಆದರಿಂದ ಬೇರೆ ವ್ಯಾಖ್ಯಾನಕಾರರೆಲ್ಲರೂ ಬಹಳ ಎತ್ತರದವು ಗಳೆಂದು ಕಷ್ಟದಿಂದ ವ್ಯಾಖ್ಯಾನಿಸಿದ್ದಾರೆ. ಇದು ದ್ಯುಶಬ್ದದ ಮುಖ್ಯಾರ್ಥ—

ಸಹಸ್ರ ಧನುಷಸ್ತೂರ್ಧ್ವಂ ದ್ಯುಶಬ್ದೇನಾಪಿ ಭಣ್ಯತೇ ।
ಇತಿ ತಂತ್ರಮಾಲಾಯಾಂ । ಇತರಥಾ -ವಿಷ್ಣುರ್ನಚೇತ್, ಸ್ವ ಮಹಿಮ
ನಿಬಂಧತ್ವೇನ ನ ಭಾವ್ಯಂ ।

ಸಾವಿರ ಧನುಃಪ್ರಮಾಣಕ್ಕಿಂತ ಮೇಲಿನ ಪ್ರದೇಶವನ್ನು, ದ್ಯುಶಬ್ದದಿಂದ ವ್ಯವಹರಿಸುತ್ತಾರೆ ಎಂದು ತಂತ್ರಮಾಲಾ ಗ್ರಂಥದಲ್ಲಿ ಹೇಳಿದೆ. 'ಇತರಥಾ' ಎಂದರೆ, ಕೃಷ್ಣ ಸಾಕ್ಷಾತ್ ಭಗವಂತನಲ್ಲದಿದ್ದರೆ, ಅವನ ಲೀಲೆಗಳು ಅವನಿಗೆ ತನ್ನ ಶಕ್ತಿಯಿಂದಲೇ ಮಾಡಲು ಸಾಧ್ಯವಾಗಲಾರವು ಎಂದರ್ಥ.

★★★

ಶ್ರೀಕೃಷ್ಣಾವತಾರ ವರ್ಣನೆಯನ್ನು ಇನ್ನೂ ಮುಂದುವರಿಸುತ್ತಾರೆ—

ತತ್ ಕರ್ಮ ದಿವ್ಯಮಿವ ಯನ್ನಿಶಿ ನಿಃಶಯಾನಂ
ದಾವಾಗ್ನಿನಾಽಽಶು ವಿಪಿನೇ ಪರಿದಹ್ಯಮಾನೇ ।
ಉನ್ನೇಷ್ಯತಿ ವ್ರಜಮಿತೋಽವಸಿತಾಂತಕಾಲಂ
ನೇತ್ರೇ ಪಿಧಾಯ ಸಬಲೋಽನಧಿಗಮ್ಯವೀರ್ಯಃ ॥ ೨೮ ॥

ಬಲರಾಮ ಸಹಿತನಾದ ಶ್ರೀಕೃಷ್ಣನ ಮಹಿಮೆ ಬ್ರಹ್ಮಾದಿಗಳಿಗೂ ಪೂರ್ಣ ತಿಳಿಯಲಾಗದವು. ರಾತ್ರಿ ಕಾಡಿನಲ್ಲಿ ಗೊಲ್ಲರು ಮಲಗಿದ್ದಾಗ ಸುತ್ತಲೂ ಕಾಳ್ಗಿಚ್ಚು ಆವರಿಸಿತು. ಎಲ್ಲರೂ ಅಂತ್ಯಕಾಲ ಬಂದಿತೆಂದುಕೊಂಡರು. ಆಗ ಕೃಷ್ಣ ಅವರನ್ನು ಪಾರುಮಾಡಿದ. ಮುಂಜಾಟವಿಯಲ್ಲಿಯೂ ಕಾಳ್ಗಿಚ್ಚು ಆವರಿಸಿತು. ಆಗಲೂ ಎಲ್ಲರಿಗೂ

ಕಣ್ಣುಮುಚ್ಚಲು ಹೇಳಿ ಕ್ಷಣದಲ್ಲಿ ಅವರನ್ನು ಬೆಂಕಿಯಿಂದ ಪಾರುಮಾಡಿದ. ಈ ಲೀಲೆಗಳು ಕೃಷ್ಣನಿಗೂ ಸ್ತೋತ್ರಾರ್ಹದಂತೆಯೆ.

ಇಲ್ಲಿ 'ದಿವ್ಯಮಿವ' ಎಂಬಲ್ಲಿ ಇವಶಬ್ದ ಲೋಕೋಕ್ತಿ ಹೊರತು ಶಾಸ್ತ್ರೀಯವಲ್ಲ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. 'ಜನ್ಮ ಕರ್ಮ ಚ ಮೇ ದಿವ್ಯಂ' ಎಂದಿರುವುದರಿಂದ ಭಗವಂತನ ಎಲ್ಲ ಕರ್ಮಗಳೂ ಅಲೌಕಿಕ, ದಿವ್ಯವೆ ಆಗಿದ್ದರೂ ಲೋಕದೃಷ್ಟಿಯಿಂದ ಇವನ್ನು ಮಾತ್ರ ಅಲೌಕಿಕದಂತೆ ದಿವ್ಯದಂತೆ ಎಂದಿದೆ ಎನ್ನುತ್ತಾರೆ. ಶುಕದೇವ ವ್ಯಾಖ್ಯಾನದಲ್ಲಿ 'ಇವ ಶಬ್ದ ಕೇವಲ ಪಾದಭರ್ತಿಗಾಗಿ ಇದೆ. ಅರ್ಥವಿವಕ್ಷೆ ಇಲ್ಲ' ಎಂದಿದೆ. ವಂಶೀಧರ ಮತ್ತು ಗಿರಿಧರ ವ್ಯಾಖ್ಯಾನಗಳಲ್ಲಿ ದಿವ್ಯಮಿವ ಎಂದರೆ ದಿವ್ಯಮೇವ ಎಂದು ಅರ್ಥ ಉಕ್ತವಾಗಿದೆ. [೧]ವಸ್ತುತಃ ದಿವ್ಯ ಎಂದರೆ ಇಲ್ಲಿ ಅಲೌಕಿಕ ಎಂದರ್ಥವಲ್ಲ.

ದಿವ್ಯಮಿವ ಸ್ತುತ್ಯಮಿವ ತದಪೇಕ್ಷಯಾ । ಅನ್ಯೇಷಾಂ ಸ್ತುತ್ಯಮೇವ ಯತ್ ತಸ್ಯ ತಚ್ಚ ದಿವ್ಯಮಿವ ।

'ದಿವ್ಯಮಿವ' ಎಂದರೆ ಸ್ತುತ್ಯದಂತೆ, ಕೃಷ್ಣನಿಗೆ. ಬೇರೆಯವರಿಗೆ ಸ್ತುತ್ಯವೇ ಆಗಿರುವ ಕೃಷ್ಣನ ಲೀಲೆ ಕೃಷ್ಣನಿಗೆ ಸ್ತುತ್ಯದಂತೆ ಎಂದರ್ಥ.

'ದಿವ್ಯ' ಎಂದರೆ ಸ್ತುತ್ಯ. ಏಕೆಂದರೆ ದಿವ್‌ಧಾತುವಿಗೆ ಸ್ತುತಿ ಎಂದರ್ಥ. ಕೃಷ್ಣನ ಲೀಲೆ ಬ್ರಹ್ಮಾದಿಗಳಿಗೆ ಸ್ತೋತ್ರಾರ್ಹವೆ. ಆದರೂ ಭಾಗವತದಲ್ಲಿ 'ದಿವ್ಯಮಿವ' ಸ್ತುತ್ಯದಂತೆ ಎಂದಿರುವುದು 'ಕೃಷ್ಣನಿಗೆ ಸ್ತುತ್ಯದಂತೆ' ಎಂಬ ಅಭಿಪ್ರಾಯದಿಂದ ಹೊರತು, ಬ್ರಹ್ಮಾದಿಗಳಿಗೂ ಹಾಗೆ ಎಂದರ್ಥವಲ್ಲ. ಬ್ರಹ್ಮಾದಿಗಳು ಸ್ತೋತ್ರ ಮಾಡುವುದು ಸ್ತೋತ್ರಪ್ರಿಯನಾದ ಕೃಷ್ಣನ ಸಂತೋಷಕ್ಕಾಗಿ. ಇನ್ನೊಬ್ಬರ ಸಂತೋಷಕ್ಕಾಗಿ ಹೊಗಳುವುದೇ ಲೋಕದಲ್ಲಿ ಸ್ತೋತ್ರವೆನಿಸುತ್ತದೆ ತಾನೆ ! ಈ ಅರ್ಥದಲ್ಲಿ ಬ್ರಹ್ಮಾದಿಗಳಿಗೆ ಸ್ತೋತ್ರಾರ್ಹ ಕೃಷ್ಣನ ಲೀಲೆಗಳು. ಕೃಷ್ಣನೂ ತನ್ನ ಮಹಿಮೆ ಅಸಾಧಾರಣವೆಂದು ಹೊಗಳುತ್ತಾನೆ. ಆದರೆ ಆ ಹೊಗಳಿಕೆ 'ಸ್ತೋತ್ರ'ವಾಗುವುದಿಲ್ಲ, ಸ್ತೋತ್ರದಂತಾಗುತ್ತದೆ ಎಂದು ಅಭಿಪ್ರಾಯ.

★★★

---

೧. ಇವೋಽತ್ರೈವಾರ್ಥೇ ಬೋಧ್ಯಃ ಲೋಕೋಕ್ತಿರೇವ, ನ ಶಾಸ್ತ್ರೋಕ್ತಿಃ। ಶಾಸ್ತ್ರಂ ತು ಜನ್ಮ ಕರ್ಮ ಚ ಮೇ ದಿವ್ಯಮಿತ್ಯಾಹ । -ವಂಶೀಧರಃ

ತದಪಿ ಕರ್ಮ ದಿವ್ಯಮಿವಾಮಾನುಷಮಿವೇತಿ ಲೌಕಿಕೋಕ್ತಿಃ । -ವೀರರಾಘವಃ

ದಿವ್ಯಮಿವೇತಿ ಲೋಕೋಕ್ತಿರೀತ್ಯೈವೋಕ್ತಿಃ । ವಸ್ತುತಸ್ತು ಸರ್ವಂ ಕರ್ಮ ತಸ್ಯಾಪ್ರಾಕೃತಮೇವ। ಜನ್ಮ ಕರ್ಮ ಚ ಮೇ ದಿವ್ಯಮಿತಿ ಭಗವದುಕ್ತಿಃ । -ವಿಶ್ವನಾಥಃ

ಇವೇತಿ ಪಾದಪೂರಣಾರ್ಥಕಮವ್ಯಯಂ । -ಶುಕದೇವಃ

ಕೃಷ್ಣಾವತಾರ ವರ್ಣನೆಯನ್ನೇ ಇನ್ನೂ ಮುಂದುವರಿಸುತ್ತಾರೆ—

ನಂದಂ ಚ ಮೋಕ್ಷ್ಯತಿ ಭಯಾದ್ ವರುಣಸ್ಯ ಪಾಶಾತ್
ಗೋಪಾನ್ ಬಿಲೇಷು ಪಿಹಿತಾನ್ ಮಯಸೂನುನಾ ಚ ।
ಜಲ್ಪ್ಯಾವೃತಂ ನಿಶಿ ಶಯಾನಮತಿಶ್ರಮೇಣ
ಲೋಕೇ ವಿಕುಂಠ ಉಪಧಾಸ್ಯತಿ ಗೋಕುಲಂ ಸ್ಮ ॥ ೩೧ ॥

ಶ್ರೀಕೃಷ್ಣ ನಂದನನ್ನು ವರುಣನ ಪಾಶಭಯದಿಂದ ಪಾರುಮಾಡುತ್ತಾನೆ, ವ್ಯೋಮಾಸುರ ಗುಹೆಯಲ್ಲಿ ಅಡಗಿಸಿಟ್ಟ ಗೊಲ್ಲರನ್ನು ಕಾಪಾಡುತ್ತಾನೆ. ದುಷ್ಟಶಾಸ್ತ್ರ ಪ್ರಭಾವದಿಂದ ಭಗವಂತನನ್ನು ಪೂರ್ತಿ ಮರೆತು ಸಂಸಾರದುಃಖದಿಂದ ನೊಂದು ಸಾಧನಾನುಷ್ಠಾನವನ್ನೂ ಮಾಡದಿರುವ ಗೋಕುಲದ ಜನರನ್ನು ವೈಕುಂಠಕ್ಕೆ ಕಳಿಸುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಜಲ್ಪ್ಯಾವೃತಂ' ಎನ್ನುವಲ್ಲಿ 'ಅಹ್ನ್ಯಾಪೃತಂ' ಎಂದು ಪಾಠವಿಟ್ಟುಕೊಂಡು ಗೊಲ್ಲರು ಹಗಲು ಶ್ರಮಕಾರ್ಯ ನಿರತರಾಗುತ್ತಾರೆ, ರಾತ್ರಿ ಶ್ರಮದಿಂದ ಮಲಗುತ್ತಾರೆ, ಸಾಧನಾನುಷ್ಠಾನವೆ ಇಲ್ಲ, ಇಂಥವರನ್ನು ವೈಕುಂಠಕ್ಕೆ ಕಳಿಸಿದನೆಂಬುದೂ ದಿವ್ಯಲೀಲೆ ಎಂದು ವ್ಯಾಖ್ಯಾನ ಮಾಡಿದ್ದಾರೆ. ಅದಕ್ಕಿಂತಲೂ 'ಜಲ್ಪ್ಯಾವೃತಂ' 'ಮಿಥ್ಯಾಜ್ಞಾನ ಜನಕ ದುಷ್ಟಶಾಸ್ತ್ರ ಪ್ರಭಾವಕ್ಕೊಳಗಾಗಿ ದ್ದಾರೆ' ಎಂಬ ಪಾಠ ಉತ್ತಮ. ಗೊಲ್ಲರು ದುಷ್ಟಶಾಸ್ತ್ರಪ್ರಭಾವದಿಂದಲೆ ಇಂದ್ರನನ್ನೇ ಸರ್ವೋತ್ತಮನೆಂದು ಬಗೆದು ಪೂಜಿಸಿದಾಗ ಅದನ್ನು ತಡೆದು ಕೃಷ್ಣ ಗಿರಿಯಜ್ಞ ಮಾಡಿಸಿದ ತಾನೆ?

ಅನ್ಯಥಾಜ್ಞಾನಹೇತುರ್ಯಾ ವಾಕ್ ಸಾ ಜಲ್ಪಿಃ ಪ್ರಕೀರ್ತಿತಾ ॥
ಇತಿ ತಂತ್ರಮಾಲಾಯಾಂ ।

ಯತ್ತು ಸರ್ವಾತ್ಮನಾಽಜ್ಞಾನಂ ನಿಶಾ ಸಾ ಪರಿಕೀರ್ತಿತಾ ॥
ಇತಿ ಕೌರ್ಮೇ ।

ಮಿಥ್ಯಾಜ್ಞಾನಕ್ಕೆ ಕಾರಣವಾಗುವ ಮಾತು 'ಜಲ್ಪಿ' ಎನಿಸುತ್ತದೆ. ಎಂದು ತಂತ್ರಮಾಲಾ ಗ್ರಂಥದಲ್ಲಿ ಉಕ್ತವಾಗಿದೆ. ಪೂರ್ತಿ ಅಜ್ಞಾನ ರಾತ್ರಿ ಎನಿಸುತ್ತದೆ ಎಂದು ಕೂರ್ಮಪುರಾಣದಲ್ಲಿ ಹೇಳಿದೆ.

★★★

ಕೃಷ್ಣಾವತಾರ ವರ್ಣನೆಯನ್ನೇ ಇನ್ನೂ ಮುಂದುವರಿಸುತ್ತಾರೆ—

ಕ್ರೀಡನ್ ವನೇ ನಿಶಿ ನಿಶಾಕರ ರಶ್ಮಿಗೌರ್ಯಾಂ
ರಾಸೋನ್ಮುಖಃ ಕಲಪದಾಯತಮೂರ್ಛಿತೇನ ।
ಉದ್ದೀಪಿತಸ್ಮರರುಜಾಂ ವ್ರಜಸದ್ವಧೂನಾಂ
ಹರ್ತುರ್ಹರಿಷ್ಯತಿ ಶಿರೋ ಧನದಾನುಗಸ್ಯ ॥ ೩೩ ॥

ಶ್ರೀಕೃಷ್ಣ ಬೆಳದಿಂಗಳಿನಿಂದ ಬೆಳಗಿದ ವನದಲ್ಲಿ ರಾಸಕ್ರೀಡೆಗೆ ಉದ್ಯುಕ್ತನಾಗಿ ಕ್ರೀಡಿಸುತ್ತಿದ್ದಾಗ ಅವನ ಮಧುರವಾದ ಸಪ್ತಸ್ವರಯುಕ್ತವಾದ ಗಾನವನ್ನು ಕೇಳಿ ಕಾಮಬಾಧೆಗೊಳಗಾಗಿದ್ದ ಗೋಕುಲದ ಹೆಣ್ಣುಗಳನ್ನು ಕುಬೇರನ ಭೃತ್ಯನಾದ ಶಂಖ ಚೂಡಾಸುರ ಅಪಹರಿಸಿದ. ಕೃಷ್ಣ ಅವನ ತಲೆಯನ್ನೆ ಅಪಹರಿಸಿದ.

ಇಲ್ಲಿ ಮೂರ್ಛಿತ ಎಂದರೆ 'ಆಲಾಪ ವಿಶೇಷಯುಕ್ತ' ಎಂದು ಬೇರೆ ವ್ಯಾಖ್ಯಾನ ಕಾರರು ಹೇಳುತ್ತಾರೆ. ಸಪ್ತಸ್ವರ ಸಂಯೋಜನೆ ಉಳ್ಳದ್ದು ಎಂದು ಸಂಗೀತ ಶಾಸ್ತ್ರದಲ್ಲಿ ಹೇಳಿದೆ—

ಕಲಪದಂ ಚ ಆಯತಂ ಚ ।
ಸಪ್ತಸ್ವರಸಮಾಹಾರೋ ಮೂರ್ಛನೇತಿ ಪ್ರಕೀರ್ತಿತಾ ॥
ಇತಿ ಗಾಂಧರ್ವೇ ।

'ಕಲಪದಾಯತಮೂರ್ಛಿತ' ಎಂದರೆ ಮಧುರಪದಗಳಿಂದ ಕೂಡಿ ದೀರ್ಘವಾಗಿದ್ದು ಸಪ್ತಸ್ವರಸಂಮೇಲನದಿಂದಲೂ ಯುಕ್ತವಾದ ಗಾನ ಎಂದರ್ಥ. ಸಪ್ತಸ್ವರ ಸಂಮೇಲನವೆ ಮೂರ್ಛನೆ ಎನಿಸಿದೆ ಎಂದು ಸಂಗೀತಶಾಸ್ತ್ರದಲ್ಲಿ ಹೇಳಿದೆ.

★★★

ಕೃಷ್ಣಾವತಾರ ವರ್ಣನೆಯನ್ನು ಇನ್ನೂ ಮುಂದುವರಿಸುತ್ತಾರೆ—

ಯೇ ಚ ಪ್ರಲಂಬಖರ ದರ್ದುರ ಕೇಶ್ಯರಿಷ್ಟ
ಮಲ್ಲೇಭ ಕಂಸ ಯವನಾಃ ಕುಜ ಪೌಂಡ್ರಕಾದ್ಯಾಃ ।
ಅನ್ಯೇಽಪಿ ಸಾಲ್ವ ಕಪಿ ಬಲ್ವಲ ದಂತವಕ್ರ
ಸಪ್ತೋಕ್ಷ ಶಂಬರ ವಿಡೂರಥ ರುಗ್ಮಿಮುಖ್ಯಾಃ ॥ ೩೪ ॥

ಯೇ ವಾ ಮೃಧೇ ಸಮಿತಿಶಾಲಿನ ಆತ್ತಚಾಪಾಃ
ಕಾಂಬೋಜ ಮತ್ಸ್ಯ ಕುರು ಸೃಂಜಯ ಕೈಕಯಾದ್ಯಾಃ ।
ಯಾಸ್ಯಂತ್ಯದರ್ಶನಮಿತಾ ಬಲ ಪಾರ್ಥ ಭೀಮ
ವ್ಯಾಜಾಹ್ವಯೇನ ಹರಿಣಾ ನಿಲಯಂ ತದೀಯಂ ॥ ೩೫ ॥

ಪ್ರಲಂಬ ಧೇನುಕ ಬಕ ಕೇಶಿ ಅರಿಷ್ಟ ಮಲ್ಲ ಕುವಲಯಾಪೀಡ ಕಂಸ ಕಾಲಯವನ ನರಕ ಪೌಂಡ್ರಕ ಮುಂತಾದವರೂ ಸಾಲ್ವ ಮೈಂದ ವಿವಿಧ ಬಲ್ವಲ ದಂತವಕ್ರ ಸಪ್ತವೃಷಭಗಳು, ಶಂಬರ ವಿದೂರಥ ರುಗ್ಮಿ ಮುಂತಾದವರೂ ಕುರುಪಾಂಡವ ಯುದ್ಧದಲ್ಲಿ ಬಿಲ್ಲು ಹಿಡಿದು ಹೋರಾಡಿದ ಕಾಂಬೋಜ ಮತ್ಸ್ಯ ಕುರು ಸೃಂಜಯ ಕೈಕಯ ಮುಂತಾದ ದೇಶಗಳ ರಾಜರೂ ಬಲರಾಮ ಅರ್ಜುನ ಭೀಮ ಮುಂತಾದವರಲ್ಲಿ ಅವೇ ನಾಮಗಳಿಂದಿದ್ದ ಕೃಷ್ಣನಿಂದಲೆ ಹತರಾಗಿ ಅವರಿಗೆ ಯೋಗ್ಯವಾದ ಸ್ಥಾನಗಳನ್ನು ಹೊಂದಿದರು.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಪ್ರಲಂಬ ಮುಂತಾದವರೆಲ್ಲರಿಗೂ ಕೃಷ್ಣ ಮೋಕ್ಷವನ್ನೇ ನೀಡಿದನೆಂದು ಹೇಳಿದ್ದಾರೆ. ವಿಶ್ವನಾಥ ವ್ಯಾಖ್ಯಾನದಲ್ಲಿ ಪ್ರಲಂಬ ಧೇನುಕ ಮುಂತಾದವರಿಗೆ ಸಾಯುಜ್ಯವನ್ನೂ ಪೌಂಡ್ರಕದಂತವಕ್ರ ಮುಂತಾದವರಿಗೆ ವೈಕುಂಠವನ್ನೂ ಕೊಟ್ಟನೆಂದಿದೆ. [೧]'ನಿಲಯಂ ತದೀಯಂ' ಎಂದು ಕೃಷ್ಣ ಎಲ್ಲರಿಗೂ ತನ್ನ ಲೋಕವನ್ನು ಕೊಟ್ಟನೆಂದು ಸಾಮಾನ್ಯವಾಗಿ ಹೇಳಿದರೂ ಮುಕ್ತಿ ನಿತ್ಯಸಂಸಾರ

---

೧. ಯೇ ಚ ಪ್ರಲಂಬಾದಯಃ ತೇ ಸರ್ವೇ ಹರಿಣಾ ಹೇತುಭೂತೇನ ತದೀಯಂ ನಿಲಯಂ ಅದರ್ಶನಂ ದರ್ಶನಾಯೋಗ್ಯಂ ವೈಕುಂಠಮಲಂ ಯಾಸ್ಯಂತಿ ।... ಬಲೋ ಭೀಮಃ ಪಾರ್ಥ ಇತ್ಯಾದಯೋ ವ್ಯಾಜಾಹ್ವಯಾಃ ಕಪಟನಾಮಾನಿ ಯಸ್ಯ । - ಶ್ರೀಧರಃ

ಯೇ ಚ ಪ್ರಲಂಬಾದಯಸ್ತೇ ಸರ್ವೇ ಹರಿಣಾ ಹೇತುಭೂತೇನ ಕೇಚಿದಲ-ಮತ್ಯರ್ಥಮದರ್ಶನಂ ಸಾಯುಜ್ಯಂ, ಕೇಚಿಚ್ಚ ತದೀಯಂ ನಿಲಯಂ ವೈಕುಂಠಂ ಯಾಸ್ಯಂತಿ । ಬಲ ಭೀಮ ಪಾರ್ಥಾದಯೋ ವ್ಯಾಜೇನೈವಾಹ್ವಯಾಃ ನಾಮಾನಿ ಯಸ್ಯ ತೇನ ।... ಅತ್ರ ಪ್ರಲಂಬಖರಾದಯಃ ಸಾಯುಜ್ಯಂ ಪೌಂಡ್ರಕ ದಂತವಕ್ರಾದಯೋ ವೈಕುಂಠಂ ಯಾಸ್ಯಂತೀತಿ ವಿವೇಚನೀಯಂ । -ವಿಶ್ವನಾಥಃ

ಯೇ ಚ ಪ್ರಲಂಬಾದಯಸ್ತೇ ಸರ್ವೇ ಹರಿಣಾ ಹೇತುಭೂತೇನ ತದೀಯಂ ಹರಿಸಂಬಂಧಿ ಅದರ್ಶನಂ ಪ್ರಾಕೃತೇಂದ್ರಿಯಾವಿಷಯಂ ವೈಕುಂಠನಿಲಯಂ ಲೋಕಂ ಯಾಸ್ಯಂತಿ ।... ಬಲಭೀಮಪಾರ್ಥಾ ಇತಿ ವ್ಯಾಜಾಃ ಕಪಟಾ ಆಹ್ವಯಾ ನಾಮಾನಿ ಯಸ್ಯ ತೇನ । ಬಲಭೀಮಾದಿರೂಪೇಣ ಚ ಸ ಏವ ಹರಿಃ ಸರ್ವಸಂಹರ್ತೇತ್ಯರ್ಥಃ। -ವೀರರಾಘವಃ

ಯೇ ಚ ಪ್ರಲಂಬಾದಯಸ್ತೇ ಅದರ್ಶನಂ ಪ್ರಾಕೃತೇಂದ್ರಿಯಾವಿಷಯಂ ತದೀಯಂ ಹರಿಸಂಬಂಧಿ ನಿಲಯಂ ಸ್ಥಾನಂ ವೈಕುಂಠಂ ಯಾಸ್ಯಂತಿ । ಬಲೋ ಭೀಮಃ ಪಾರ್ಥ ಇತ್ಯಾದಯೋ ವ್ಯಾಜಾಹ್ವಯಾಃ ನಿಮಿತ್ತನಾಮಾನಿ ಯಸ್ಯ । -ಶುಕದೇವಃ

ಏತೇ ಸರ್ವೇ ದೈತ್ಯಾ ದೈತ್ಯಾಂಶರಾಜಾನಶ್ಚ ಭಗವತಾ ಹತಾಃ ತದೀಯಂ ನಿಲಯಂ ವೈಕುಂಠಂ ಗತಾಃ ।... ಅತ ಏವ ಹನನಾದಿಕಮನುಕ್ತ್ವೈವ ತದ್‌ಗೃಹಗಮನಂ ನಿರೂಪಿತಂ । ಜಾತಃ ಕಂಸವಧಾರ್ಥಾಯೇತ್ಯಾದಿ ತು ದೃಶ್ಯಮಾನಾಭಿಪ್ರಾಯಂ । ಕಲ್ಪಾಂತರಾಭಿಪ್ರಾಯಂ ವಾ । ಬಲಪಾರ್ಥಭೀಮಾ ಇತಿ ತೇಷ್ವಾವಿಷ್ಟಸ್ಯ ಭಗವತ ಏವ ನಾಮ । ಪರಂ ವ್ಯಾಜೇನ । -ವಲ್ಲಭಃ

ತಮಸ್ಸುಗಳನ್ನು ಯೋಗ್ಯತಾನುಸಾರವಾಗಿ ಕೊಟ್ಟನೆಂದೇ ಗ್ರಹಿಸಬೇಕು. ಎಲ್ಲವೂ ವಿಷ್ಣುವಿನ ಲೋಕಗಳೆ. ಎಲ್ಲ ಲೋಕಗಳಿಗೂ ಅವನೆ ಪ್ರಭು. ವೈಕುಂಠಾದಿ ಧಾಮತ್ರಯ ಮಾತ್ರ ಅವನ ಲೋಕವೆಂದು ಪ್ರಸಿದ್ಧಿ. ಅದರಿಂದ ತಮಸ್ಸೂ ಅವನ ಲೋಕವೆ ಎಂಬ ಅಭಿಪ್ರಾಯದಿಂದ 'ತದೀಯಂ ನಿಲಯಂ ಯಾಸ್ಯಂತಿ' ಎಂದು ಭಾಗವತ ಹೇಳಿದೆ—

ವಿದ್ವೇಷಿಣೋಽಪ್ಯುದಾಸೀನಾ ಭಕ್ತಾ ಅಪಿ ನ ಸಂಶಯಃ ।
ಹರೇರ್ಹಿ ಸದನಂ ಯಾಂತಿ ವ್ಯಕ್ತಂ ಭಕ್ತೈಸ್ತು ಗಮ್ಯತೇ ॥
ಆರಭ್ಯ ತಮ ಆ ಮುಕ್ತೇಃ ಕೃಷ್ಣಸ್ಯ ಸದನಂ ಯತಃ ।
ಅವ್ಯಕ್ತ ಹರಿಲೋಕತ್ವಾದನ್ಯೇಷಾಮನ್ಯಲೋಕತಾ ॥

ಇತಿ ಬೃಹತ್ಸಂಹಿತಾಯಾಂ ॥

ಹರಿದ್ವೇಷಿಗಳು, ಉದಾಸೀನರು, ಭಕ್ತರು ಎಲ್ಲರೂ ವಿಷ್ಣುಲೋಕವನ್ನೇ ಹೊಂದುತ್ತಾರೆ, ಸಂಶಯವಿಲ್ಲ. ಏಕೆಂದರೆ ತಮಸ್ಸಿನಿಂದ ತೊಡಗಿ ವೈಕುಂಠದ ವರೆಗಿನ ಎಲ್ಲ ಲೋಕಗಳೂ ವಿಷ್ಣುಲ್ಲೋಕಗಳೆ. ಅವುಗಳಲ್ಲಿ ವೈಕುಂಠದಲ್ಲಿರುವ ಭಗವದ್ರೂಪ ವ್ಯಕ್ತ. ಅದನ್ನು ಭಕ್ತರು ಹೊಂದುತ್ತಾರೆ. ತಮಸ್ಸಿನಲ್ಲಿ ಭಗವದ್ರೂಪ ಅವ್ಯಕ್ತ. ಅದನ್ನು ದ್ವೇಷಿಗಳು ಹೊಂದುತ್ತಾರೆ. ಅವ್ಯಕ್ತ ಭಗವದ್ರೂಪದ ಲೋಕವನ್ನು ದ್ವೇಷಿಗಳು ಹೊಂದುವುದರಿಂದ ಅವರಿಗೆ ಅನ್ಯಲೋಕ ಪ್ರಾಪ್ತಿ ಎಂದು ವ್ಯವಹಾರ ಎಂದು ಬೃಹತ್ಸಂಹಿತೆಯಲ್ಲಿ ಹೇಳಿದೆ.

'ಬಲಪಾರ್ಥಭೀಮವ್ಯಾಜಾಹ್ವಯೇನ' ಎಂಬಲ್ಲಿ ಬಲ ಪಾರ್ಥ ಭೀಮ ನಾಮಗಳು ಹರಿಯ ಕಪಟನಾಮಗಳೆಂದು ಎಲ್ಲ ವ್ಯಾಖ್ಯಾನಕಾರರು ಹೇಳುತ್ತಾರೆ. ವಸ್ತುತಃ ಅವು ಹರಿಯ ಮುಖ್ಯನಾಮಗಳು. ವ್ಯಾಜದಿಂದ, ಅಂದರೆ ಕಾರಣಾಂತರ ದಿಂದ ಅವು ಬೇರೆಯವರಲ್ಲಿ ಪ್ರಸಿದ್ಧವಾಗಿವೆಯಷ್ಟೆ. ಇದು ಸ್ಕಂದಪುರಾಣದಲ್ಲಿ ಸ್ಪಷ್ಟವಿದೆ—

ರಾಮಭೀಮಾರ್ಜುನಾದೀನಿ ವಿಷ್ಣೋರ್ನಾಮಾನಿ ಸರ್ವಶಃ ।
ರಮಣಾಭಯವರ್ಣಾದ್ಯಾಃ ಶಬ್ದವೃತ್ತೇರ್ಹಿ ಹೇತವಃ ।
ಹರಿರ್ಹಿ ತತ್ರತತ್ರಸ್ಥೋ ರಮಣಾದೀನ್ ಕರೋತ್ಯಜಃ ।
ಅತಸ್ತಸ್ಯೈವ ನಾಮಾನಿ ವ್ಯಾಜಾದನ್ಯಗತಾನಿ ತು ।
ವ್ಯವಹಾರಪ್ರವೃತ್ತ್ಯರ್ಥಂ ದುಷ್ಟಾನಾಂ ಮೋಹನಾಯ ಚ ।

ಇತಿ ಸ್ಕಾಂದೇ ।

ರಾಮ ಭೀಮ ಅರ್ಜುನ ಮುಂತಾದ ನಾಮಗಳು ಎಲ್ಲವೂ ಮುಖ್ಯವಾಗಿ

ವಿಷ್ಣುನಾಮಗಳು. ರಮಿಸುವುದು ಭಯವಿಲ್ಲದಿರುವುದು ಬಿಳಿಬಣ್ಣ ಮುಂತಾದವು ಆ ಶಬ್ದಗಳ ಪ್ರವೃತ್ತಿನಿಮಿತ್ತಗಳು. ಹರಿ ಬಲರಾಮಾದಿಗಳಲ್ಲಿದ್ದು ರಮಿಸುವುದು ಮುಂತಾದುವನ್ನು ವ್ಯಕ್ತಮಾಡುತ್ತಾನೆ. ಆದರಿಂದ ಆ ಹೆಸರುಗಳು ಮುಖ್ಯವಾಗಿ ಅವನಿಗೇ ಸಲ್ಲುವುವು. ಅವನು ಅವರಲ್ಲಿರುವ ನಿಮಿತ್ತದಿಂದ ಅವರಿಗೆ ಆ ನಾಮಗಳು ಬಂದಿವೆ. ಅದು ವ್ಯವಹಾರಕ್ಕಾಗಿ ಮತ್ತು ದುಷ್ಟಜನ ಮೋಹನಕ್ಕಾಗಿ ಎಂದು ಸ್ಕಂದಪುರಾಣದಲ್ಲಿ ಹೇಳಿದೆ.

★★★

ವ್ಯಾಸಾವತಾರವನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಕಾಲೇನ ಮೀಲಿತದೃಶಾಮವಮೃಶ್ಯ ನೃಣಾಂ
ಸ್ತೋಕಾಯುಷಾಂ ಸ್ವನಿಗಮೋ ಬತ ದೂರಪಾರಃ ।
ಆವಿರ್ಹಿತಸ್ತ್ವನುಯುಗಂ ಸ ಹಿ ಸತ್ಯವತ್ಯಾಂ
ವೇದದ್ರುಮಂ ವಿಟಪಶೋ ವಿಭಜಿಷ್ಯತಿ ಸ್ಮ ॥ ೩೬ ॥

ಕಾಲಪ್ರಭಾವದಿಂದ ತತ್ತ್ವಜ್ಞಾನರಹಿತರಾದ ಅಲ್ಪಾಯುಷಿ ಮಾನವರಿಗೆ ತನ್ನ ವೇದರಾಶಿ ದುರ್ಗಮವಾಗುವುದೆಂದು ವಿಚಾರಮಾಡಿ ಹರಿ ಐದು ಮಹಾ ಯುಗಗಳಲ್ಲಿ ಸತ್ಯವತಿಯಲ್ಲಿ ಆವಿರ್ಭೂತನಾಗಿ ವೇದವೃಕ್ಷವನ್ನು ಶಾಖೋಪಶಾಖೆ ಗಳಾಗಿ ವಿಭಾಗಿಸುತ್ತಾನೆ.

ಇಲ್ಲಿ 'ಅನುಯುಗಂ' ಎಂದರೆ ಪ್ರತಿ ಚತುರ್ಯುಗದಲ್ಲಿ ವ್ಯಾಸಾವತಾರವೆಂದು ಹೇಳಿದಂತೆ ಕಾಣುತ್ತದೆ. ವಲ್ಲಭವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ. ಆದರಿಂದ ಪುರಾಣ ಕಥೆಗಳೆಲ್ಲವೂ ಆಯಾ ಚತುರ್ಯುಗಕ್ಕೆ ಮಾತ್ರ ಸಂಬಂಧಿಸಿದವುಗಳೆಂದೂ ಹೇಳಿದೆ. ವಿಶ್ವನಾಥ ವ್ಯಾಖ್ಯಾನದಲ್ಲಿ ಯುಗ ಎಂದರೆ ಕಲ್ಪ, ಪ್ರತಿಕಲ್ಪದಲ್ಲಿ ವೇದವಿಭಾಗ ಎಂದಿದೆ. ವಸ್ತುತಃ ಐದು ಚತುರ್ಯುಗಗಳಲ್ಲಿ ಅವುಗಳ ದ್ವಾಪರಾಂತ್ಯದಲ್ಲಿ ವ್ಯಾಸಾವತಾರ ಮತ್ತು ವೇದವಿಭಾಗ—

ತೃತೀಯೇ ಸಪ್ತಮೇ ಚೈವ ಷೋಡಶೇ ಪಂಚವಿಂಶಕೇ ।
ಅಷ್ಟಾವಿಂಶೇ ಯುಗೇ ಕೃಷ್ಣಃ ಸತ್ಯವತ್ಯಾಮಜಾಯತ ।
ವ್ಯಾಸಾಚಾರ್ಯಾಸ್ತು ಪೂರ್ವೇಷು ಚರಮೇ ಸ್ವಯಮೇವ ತು
ವಿವ್ಯಾಸ ವೇದಾಂಶ್ಚಕ್ರೇ ಚ ಭಾರತಂ ವೇದಸಂಮಿತಂ ॥ ಇತಿ ಚ ॥

ಮೂರು ಏಳು ಹದಿನಾರು ಇಪ್ಪತ್ತೈದು ಇಪ್ಪತ್ತೆಂಟನೇ ದ್ವಾಪರಗಳ ಕೊನೆಯಲ್ಲಿ

ಸತ್ಯವತಿಯಲ್ಲಿ ವ್ಯಾಸಾವತಾರವಾಯಿತು. ಮೊದಲಿನ ನಾಲ್ಕು ಯುಗಗಳಲ್ಲಿ ಬೇರೆಯವರು ವ್ಯಾಸರು, ಅವರಿಗೆ ಆಚಾರ್ಯ ಅಂದರೆ ಗುರುವಾಗಿ ಭಗವದವತಾರ ವ್ಯಾಸ ಮಾರ್ಗದರ್ಶನ ಮಾಡುತ್ತಾನೆ. ಕೊನೆಯ ಇಪ್ಪತ್ತೆಂಟನೆಯ ದ್ವಾಪರದಲ್ಲಿ ತಾನೇ ವ್ಯಾಸನಾಗಿ ಆಚಾರ್ಯನಾಗಿ ವೇದವಿಭಾಗ ಮಾಡುತ್ತಾನೆ. ಮತ್ತು ವೇದ ಸಮಾನಾರ್ಥಕವಾದ ಭಾರತವನ್ನೂ ರಚಿಸುತ್ತಾನೆ ಎಂದೂ ಸ್ಕಂದಪುರಾಣದಲ್ಲಿ ಹೇಳಿದೆ.

★★★

ಹರಿಯ ವಿಭೂತಿರೂಪಗಳನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಸರ್ಗೇ ತು ಯೋಽಹಮೃಷಯೋ ನವ ಯೇ ಪ್ರಜೇಶಾಃ
ಸ್ಥಾನೇಽಥ ಧರ್ಮ ಮಖ ಮನ್ವಮರಾವನೀಶಾಃ ।
ಅಂತೇ ತ್ವಧರ್ಮಹರಮನ್ಯುವಶಾಸುರಾದ್ಯಾಃ
ಮಾಯಾವಿಭೂತಯ ಇಮಾಃ ಪುರುಶಕ್ತಿಭಾಜಃ ॥ ೩೯ ॥

ಸೃಷ್ಟಿಗಾಗಿ ನಾನು, ಮರೀಚಿ ಮುಂತಾದ ಋಷಿಗಳು, ಒಂಬತ್ತು ಮಂದಿ ಪ್ರಜಾಪತಿಗಳು, ಸ್ಥಿತಿಗಾಗಿ ಧರ್ಮ ಯಜ್ಞ ಮನುಗಳು ಇಂದ್ರರು ಪ್ರಿಯವ್ರತಾದಿ ರಾಜರು, ಸಂಹಾರಕ್ಕಾಗಿ ಅಧರ್ಮ ರುದ್ರ ಕ್ರೋಧವಶಾದಿ ಅಸುರರು ಇವರೆಲ್ಲರೂ ಹರಿಯ ಮಾಯಾವಿಭೂತಿರೂಪ ಉಳ್ಳವರು.

ಇಲ್ಲಿ ಮಾಯಾವಿಭೂತಿ ಎಂದರೆ ಭಗವಂತ ಮಾಯೆಯಿಂದ, ಅಂದರೆ ತ್ರಿಗುಣಾತ್ಮಕ ಅವಿದ್ಯೆಯಿಂದ ಅನೇಕ ರೂಪ ತಾಳುವುದು ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಅದರಂತೆ ಬ್ರಹ್ಮ ವಿಷ್ಣು ರುದ್ರರು ಮುಂತಾದವರೆಲ್ಲರೂ ಭಗವಂತನ ಬೇರೆಬೇರೆ ರೂಪಗಳು. ವೀರರಾಘವ ವ್ಯಾಖ್ಯಾನದಲ್ಲಿ ಮಾಯಾವಿಭೂತಿ ಎಂದರೆ ಆಶ್ಚರ್ಯಕರವಾದ ಭಗವದಧೀನ ಚೇತನರು ಎಂದಿಷ್ಟೇ ಅರ್ಥ. ವಸ್ತುತಃ ಮಾಯೆ ಎಂದರೆ ಭಗವದಿಚ್ಛೆ. ಭಗವಂತ ಸ್ವೇಚ್ಛೆಯಿಂದ ಬ್ರಹ್ಮಾದಿಗಳಲ್ಲಿ ತನ್ನ ರೂಪಗಳನ್ನು ಇಟ್ಟು ಅವರಲ್ಲಿ ವಿಶೇಷ ಸಾಮರ್ಥ್ಯವನ್ನು ವ್ಯಕ್ತಮಾಡುತ್ತಾನೆ. ಅದರಿಂದ ಬ್ರಹ್ಮಾದಿಗಳು ಭಗವಂತನ ಮಾಯಾವಿಭೂತಿಗಳೆನಿಸುತ್ತಾರೆ ಎಂಬುದು ಪ್ರಮಾಣಸಿದ್ಧವಾಗಿದೆ—

ಹರೀಚ್ಛಯಾ ವಿಭೂತಿರ್ಯಾ ಬ್ರಹ್ಮಾದೀನಾಂ ಸದಾ ಭವೇತ್
ಇಚ್ಛಯಾ ವಾ ಬಹುವಿಧಸ್ತೇಷು ವಿಷ್ಣುಃ ಸ್ವಯಂ ಸ್ಥಿತಃ ।
ಅತೋ ಮಾಯಾವಿಭೂತಿತ್ವಂ ತೇಷಾಂ ಮತ್ಸ್ಯಾದಿಕಾಃ ಸ್ವಯಂ ॥

ಇತ್ಯಧ್ಯಾತ್ಮೇ ।

ವಿಭೂತಿ ಎಂದರೆ ವಿಶೇಷಶಕ್ತಿ ಹರೀಚ್ಛೆಯಿಂದ ಬ್ರಹ್ಮಾದಿಗಳಲ್ಲಿ ಸದಾ ಇರುತ್ತದೆ. ಆದರಿಂದ ಬ್ರಹ್ಮಾದಿಗಳು ಮಾಯಾವಿಭೂತಿಗಳೆನಿಸುತ್ತಾರೆ. ಅಥವಾ ಹರಿ ಸ್ವೇಚ್ಛೆಯಿಂದ ನಾನಾ ರೂಪತಾಳಿ ಬ್ರಹ್ಮಾದಿಗಳಲ್ಲಿರುತ್ತಾನೆ. ಆದರಿಂದಲೂ ಅವರು ಮಾಯಾವಿಭೂತಿಗಳೆನಿಸುತ್ತಾರೆ. ಮತ್ಸ್ಯಾದಿಗಳನ್ನೂ ಹರಿ ಸ್ವೇಚ್ಛೆಯಿಂದ ಮಾಡಿಕೊಂಡ ನಾನಾರೂಪಗಳೆಂದು ಮಾಯಾವಿಭೂತಿ ಶಬ್ದದಿಂದ ವ್ಯವಹರಿಸುವುದುಂಟು ಎಂದು ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ.

★★★

ಭಗವಂತನ ಶಕ್ತಿ ಅನಂತವಾಗಿದೆ ಎನ್ನುತ್ತಾರೆ ಬ್ರಹ್ಮದೇವರು—

ನಾಂತಂ ವಿದಾಮ್ಯಹಮಮೀ ಮುನಯಃ ಪ್ರಜೇಶಾಃ
ಮಾಯಾಬಲಸ್ಯ ಪುರುಷಸ್ಯ ಕುತೋಽಪರೇ ಯೇ ।
ಗಾಯನ್ ಗುಣಾನ್ ದಶಶತಾನನ ಆದಿದೇವಃ
ಶೇಷೋಽಧುನಾಪಿ ಸಮವಸ್ಯತಿ ನಾಸ್ಯ ಪಾರಂ ॥ ೪೧ ॥

ಶ್ರೀಹರಿಯ ಇಚ್ಛಾಸಾಮರ್ಥ್ಯದ ಎಲ್ಲೆಯನ್ನು ನಾನು ತಿಳಿದಿಲ್ಲ, ಈ ಮುನಿಗಳಾಗಲಿ ಪ್ರಜಾಪತಿಗಳಾಗಲಿ ತಿಳಿದಿಲ್ಲ, ಇನ್ನು ಉಳಿದವರ ಪಾಡೇನು? ಆದಿದೇವ ಶೇಷನೂ ಹರಿಯ ಗುಣಗಳನ್ನು ಹಾಡುತ್ತಲೆ ಇದ್ದಾನೆ, ಇಂದಿಗೂ ಕೊನೆಗಾಣುತ್ತಿಲ್ಲ.

ಕೊನೆ ಇದೆ ಆದರೆ ಅದನ್ನು ಕಾಣುವ ಸಾಮರ್ಥ್ಯ ಯಾರಿಗೂ ಇಲ್ಲ ಎಂದು ಶ್ಲೋಕದ ತಾತ್ಪರ್ಯವಲ್ಲ. ಕೊನೆಯೆ ಇಲ್ಲ, ಅದರಿಂದ ಯಾರೂ ಕಾಣುತ್ತಿಲ್ಲ.

ವಿದುರ್ನಾಂತಂ । ಅನಂತತ್ವಾತ್ ।

ಕೊನೆಯನ್ನು ಯಾರೂ ತಿಳಿದಿಲ್ಲ, ಏಕೆಂದರ ಅದು ಇಲ್ಲ.

★★★

ಭಗವಂತನ ಗುಣಗಳನ್ನು ಪೂರ್ತಿಯಾಗಿ ಯಾರೂ ತಿಳಿಯಲಾರರೆಂದರೆ ಮುಕ್ತಿಯಾಗುವುದಾದರೂ ಹೇಗೆ ಎಂದರೆ ಬ್ರಹ್ಮದೇವರು ಹೇಳುತ್ತಾರೆ—

ಯೇಷಾಂ ಸ ಏವ ಭಗವಾನ್ ದಯಯೇದನಂತಃ
ಸರ್ವಾತ್ಮನಾ ಶ್ರಿತಪದೋ ಯದಿ ನಿರ್ವ್ಯಲೀಕಂ ।
ತೇ ವೈ ವಿದಂತ್ಯತಿತರಂತಿ ಚ ದೇವಮಾಯಾಂ
ನೈಷಾಂ ಮಮಾಹಮಿತಿ ಧೀಃ ಶ್ವಸೃಗಾಲಭಕ್ಷ್ಯೇ ॥ ೪೨ ॥

ಕಪಟವಿಲ್ಲದೆ ಎಲ್ಲ ಬಗೆಯಿಂದಲೂ ತ್ರಿಕರಣಗಳಿಂದ ಹರಿಯ ಪಾದಾರವಿಂದ

ವನ್ನು ಭಜಿಸುವವರಿಗೆ, ನರಿನಾಯಿಗಳು ತಿನ್ನುವ ಈ ಪಾರ್ಥಿವ ಶರೀರದಲ್ಲಿ ನಾನು ನನ್ನದೆಂಬ ಅಭಿಮಾನ ಬಿಟ್ಟವರಿಗೆ ಪರಮಾತ್ಮ ದಯೆದೋರುತ್ತಾನೆ. ಆಗಲೆ ಅವರು ಅವನ ಮಹಿಮೆಯನ್ನು ಯಥಾಶಕ್ತಿ ತಿಳಿಯುತ್ತಾರೆ, ಸಂಸಾರವನ್ನು ದಾಟುತ್ತಾರೆ.

ಇಲ್ಲಿ 'ದೇವಮಾಯಾಂ ವಿದಂತಿ ಅತಿ ತರಂತಿ ಚ' ಎಂದರೆ ದೇವಮಾಯೆಯನ್ನು ತಿಳಿಯುತ್ತಾರೆ. ಮತ್ತು ಅದನ್ನು ಅತಿಕ್ರಮಿಸುತ್ತಾರೆ' ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ಎಲ್ಲ ವ್ಯಾಖ್ಯಾನಕಾರರೂ ಹೇಳಿದ್ದಾರೆ. ಆದರೆ ದೇವಮಾಯೆಯನ್ನು ಯಾರೂ ದಾಟುವಂತಿಲ್ಲ. ಜೀವಮಾಯೆಯಾದ ಪ್ರಕೃತಿಬಂಧವನ್ನು ದಾಟಬಹುದು ಅದೇ ಮೋಕ್ಷ. ಅದರಿಂದ ಹೀಗೆ ಹೇಳಬೇಕು—

ದೇವಮಾಯಾಂ ವಿದಂತಿ, ಸಂಸಾರಮತಿತರಂತಿ ಚ ।

ದೇವನ ಮಾಹಾತ್ಮ್ಯರೂಪವಾದ ಮಾಯೆಯನ್ನು ಯಥಾಶಕ್ತಿ ತಿಳಿಯುತ್ತಾರೆ, ಅದರಿಂದ ಸಂಸಾರವನ್ನು ದಾಟುತ್ತಾರೆ.

★★★

ಹರಿಯ ಅನುಗ್ರಹದಿಂದ ಅವನ ಮಹಿಮೆಯನ್ನು ಅರಿಯಬಲ್ಲವರು ಯಾರೆಂದು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ತೇ ವೈ ವಿದಂತ್ಯತಿತರಂತಿ ಚ ದೇವಮಾಯಾಂ
ಸ್ತ್ರೀಶೂದ್ರಹೂಣಶಬರಾ ಅಪಿ ಪಾಪಜೀವಾಃ ।
ಯದ್ಯದ್ಭುತಕ್ರಮ ಪರಾಯಣ ಶೀಲ ಶಿಕ್ಷಾಃ
ತಿರ್ಯಗ್‌ಜನಾ ಅಪಿ ಕಿಮು ಶ್ರುತಧಾರಣಾ ಯೇ ॥ ೪೬ ॥

ಸ್ತ್ರೀ ಶೂದ್ರ ಹೂಣ ಶಬರರು ಪಾಪಯೋನಿಯಲ್ಲಿ ಹುಟ್ಟಿದವರಾದರೂ ಹರಿಯನ್ನೇ ಆಶ್ರಯಿಸಿದರೆ, ಸ್ವಭಾವದಿಂದಲೆ ಹರಿಪರರಾಗಿದ್ದು ಹರಿಭಕ್ತಿಯ ಉಪದೇಶ ಪಡೆದಿದ್ದರೆ, ಅವರೂ ಹರಿಯ ಮಹಿಮೆಯನ್ನರಿತು ಸಂಸಾರವನ್ನು ದಾಟಬಲ್ಲರು. ಅಂಥ ಜರಿತಾರ್ಯಾದಿ ಪಕ್ಷಿಗಳೂ ಹಾಗೆ ಮಾಡಿದ್ದಾರೆಂದ ಮೇಲೆ ವಿಧ್ಯುಕ್ತವಾಗಿ ಶ್ರವಣ ಮಾಡಿ ಧ್ಯಾನ ಮಾಡುವವರ ಬಗ್ಗೆ ಏನು ಹೇಳಬೇಕು?

ಇಲ್ಲಿ 'ಅದ್ಭುತಕ್ರಮಪರಾಯಣ ಶೀಲಶಿಕ್ಷಾಃ' ಎಂದರೆ ಅದ್ಭುತವಾಗಿ ಮೂಲೋಕವನ್ನಳೆದ ಪರಮಾತ್ಮನ ಭಕ್ತರ ಶೀಲವನ್ನು ಅಭ್ಯಾಸ ಮಾಡಿದವರು ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಎಲ್ಲ ವ್ಯಾಖ್ಯಾನಕಾರರೂ ಹೇಳಿದ್ದಾರೆ.[೧] ವಸ್ತುತಃ

೧. ಅದ್ಭುತಾಃ ಕ್ರಮಾಃ ಪಾದನ್ಯಾಸಾ ಯಸ್ಯ ಹರೇಃ ತತ್ಪರಾಯಣಾಸ್ತದ್ಭಕ್ತಾಃ ತೇಷಾಂ ಶೀಲೇ ಶಿಕ್ಷಾ ಯೇಷಾಂ ತೇ । -ಶ್ರೀಧರಃ

ಹರಿಭಕ್ತರ ಶೀಲವನ್ನು ಅಭ್ಯಾಸ ಮಾಡಿದರೆ ಸಾಲದು. ಅವನ ಶೀಲ, ಅಂದರೆ ಸ್ವಭಾವವೆ ಹರಿಪರವಾಗಿರಬೇಕು. ಅದರಿಂದ ಹೀಗೆ ಅರ್ಥ ಹೇಳಬೇಕು—

ತತ್ಪರಾಯಣಾಸ್ತಚ್ಛೀಲಾಸ್ತಚ್ಛಿಕ್ಷಾಶ್ಚ।

ಹರಿಯನ್ನೇ ಆಶ್ರಯಿಸಿರಬೇಕು, ಸ್ವಭಾವದಿಂದಲೆ ಹರಿಪರರಾಗಿರಬೇಕು, ಹರಿ ವಿಷಯದಲ್ಲಿ ಶ್ರವಣಾದಿ ಮಾಡಿರಬೇಕು.

'ಅದ್ಭುತಕ್ರಮ' ಶಬ್ದವನ್ನು ಪರಾಯಣ, ಶೀಲ, ಶಿಕ್ಷ ಮೂರೂ ಕಡೆ ಅನ್ವಯಿಸಬೇಕು.

★★★

ಪರಮಾತ್ಮನ ಲಕ್ಷಣಗಳನ್ನು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ—

ಶಶ್ವತ್ ಪ್ರಶಾಂತಮಭಯಂ ಪ್ರತಿಬೋಧಮಾತ್ರಂ
ಶುದ್ಧಂ ಸಮಂ ಸದಸತಃ ಪರಮಾತ್ಮ ತತ್ತ್ವಂ।
ಶಬ್ದೋ ನ ಯತ್ರ ಪುರುಕಾರಕವಾನ್ ಕ್ರಿಯಾರ್ಥೋ
ಮಾಯಾ ಪರೈತ್ಯಭಿಮುಖೇ ಚ ವಿಲಜ್ಜಮಾನಾ ॥ ೪೭ ॥

ಪರಮಾತ್ಮ ಸದಾ ಏಕಪ್ರಕಾರನಾಗಿಯೆ ಇರುತ್ತಾನೆ. ಪೂರ್ಣ ಸುಖಿ, ಸದೃಶನಾದವ ಇನ್ನೊಬ್ಬನಿಲ್ಲದಿರುವುದರಿಂದ ನಿರ್ಭಯ. ನಿರ್ದೋಷ ಜ್ಞಾನ ಸ್ವರೂಪ, ರಾಗಾದಿದೋಷರಹಿತ, ವೈಷಮ್ಯ ರಹಿತ, ವ್ಯಕ್ತ ಅವ್ಯಕ್ತ ಪ್ರಪಂಚಕ್ಕಿಂತ ವಿಲಕ್ಷಣ, ಅವ್ಯಕ್ತಾದಿ ಪ್ರಪಂಚದಲ್ಲಿ ಮಮತೆ ಇಲ್ಲದವನು, ಪದಸಮನ್ವಯದಿಂದ ಪ್ರತಿ ಪದದಿಂದಲೂ ಹರಿಯನ್ನು ಹೇಳಬಲ್ಲ ವೇದವೂ ಅವನನ್ನು ಪೂರ್ತಿ ತಿಳಿಸಲಾರದು. ಅವನ ಕೃಪಾಕಟಾಕ್ಷ ಪಾತ್ರನಾದವನಿಗೂ ಬಂಧಕಪ್ರಕೃತಿ ಬಳಿಯಲ್ಲಿ ಸುಳಿಯಲಾರದು.

ಇಲ್ಲಿ 'ಆತ್ಮತತ್ತ್ವಂ' ಎಂದರೆ ಪರಮಾತ್ಮ ಜೀವಾತ್ಮನ ಸ್ವರೂಪನೆ, ಬೇರೆ ಅಲ್ಲ ಎಂದರ್ಥ. 'ಶಬ್ದೋ ನ ಯತ್ರ' ಎಂದರೆ ಪರಮಾತ್ಮನನ್ನು ಶಬ್ದವು ತಿಳಿಸುವುದಿಲ್ಲ, ಪರಮಾತ್ಮನಲ್ಲಿ ನಾವು ಕಲ್ಪಿಸಿಕೊಂಡ ಅವಾಸ್ತವ ಆಕಾರವನ್ನು ಇಲ್ಲವೆಂದು ಮಾತ್ರ ಹೇಳುತ್ತದೆ ಎಂದರ್ಥ, ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.[೧] ಪ್ರತ್ಯಕ್ಷಾನುಮಾನಗಳು ಮಾತ್ರವಲ್ಲದೆ ವೇದದ ಕರ್ಮಕಾಂಡವೂ ಅವನನ್ನು ತಿಳಿಸಲಾರದು. ಕೇವಲ

---

೧. ಆತ್ಮತತ್ತ್ವಂ ಆತ್ಮನೋ ಜ್ಞಾತುಃ ಸ್ವರೂಪಮೇವ ತತ್ । ನ ತತೋ ಭಿನ್ನಂ । ತಂ ತ್ವೌಪನಿಷದಂ ಪುರುಷಂ ಪೃಚ್ಛಾಮೀತಿ ಶಬ್ದಬೋಧ್ಯತ್ವಪ್ರತೀತೇಃ ಕುತೋ ಬೋಧರೂಪತ್ವಂ ತತ್ರಾಹ ಶಬ್ದೋ ನ ಯತ್ರೇತಿ । ಆರೋಪಿತ ನಿವೃತ್ತಾವೇವ ಶಬ್ದಸ್ಯ ವ್ಯಾಪಾರಃ। ನ ತು ತದ್ಬೋಧೇ ಇತ್ಯರ್ಥಃ। -ಶ್ರೀಧರಃ

ವೇದಾಂತಮಾತ್ರ ವೇದ್ಯ ಎಂಬುದು 'ಶಬ್ದೋ ನ ಯತ್ರ' ಎನ್ನುವುದರ ಅಭಿಪ್ರಾಯ ಎನ್ನುತ್ತದೆ ವೀರರಾಘವ ವ್ಯಾಖ್ಯಾನ. ಇವೆಲ್ಲ ಪ್ರಮಾಣ ವಿರುದ್ಧ.

ಅವ್ಯಕ್ತಾದ್ಯನಹಂಮಾನಾದಾತ್ಮತತ್ತ್ವಂ ಹರಿಃ ಸ್ಮೃತಃ ।
ಅಶಬ್ದಶ್ಚಾಪ್ರಸಿದ್ಧತ್ವಾತ್ ಶಾಂತಃ ಪೂರ್ಣಸುಖತ್ವತಃ ॥

ಇತಿ ಬ್ರಹ್ಮತರ್ಕೇ ।

ಅವ್ಯಕ್ತಾದಿ ಪ್ರಪಂಚದಲ್ಲಿ ಜೀವರಂತೆ ಅಭಿಮಾನವಿಲ್ಲದವನಾದ್ದರಿಂದ ಪರಮಾತ್ಮ ಆತ್ಮತತ್ತ್ವವೆನಿಸಿದ್ದಾನೆ. ಶಬ್ದದಿಂದ ಪೂರ್ತಿ ತಿಳಿಯಲಾಗದವನಾದ್ದರಿಂದ ಶಬ್ದಾಗೋಚರನೆನಿಸಿದ್ದಾನೆ. ಪೂರ್ಣಸುಖಸ್ವರೂಪನಾದ್ದರಿಂದ ಶಾಂತನೆನಿಸಿದ್ದಾನೆ ಎಂದು ಬ್ರಹ್ಮತರ್ಕ ಹೇಳಿದೆ.

★★★

ಮೋಕ್ಷವನ್ನು ಮಾತ್ರವಲ್ಲದೆ ಬೇರೆ ಅಭೀಷ್ಟವನ್ನೂ ಜ್ಞಾನಿಗಳಿಗೆ ಪರಮಾತ್ಮ ಕೊಡುತ್ತಾನೆ ಎಂದು ಬ್ರಹ್ಮದೇವರು ನಾರದರಿಗೆ ಹೇಳುತ್ತಾರೆ.

ಸ ಶ್ರೇಯಸಾಮಪಿ ವಿಭುರ್ಭಗವಾನ್ ಯತೋಽಸ್ಯ
ಭಾವಸ್ವಭಾವವಿಹಿತಸ್ಯ ಸತಃ ಪ್ರಸಿದ್ಧಃ ।
ದೇಹೇ ಸ್ವಧಾತುವಿಗಮೇ ತು ವಿಶೀರ್ಯಮಾಣೇ
ವ್ಯೋಮೇವ ತತ್ರ ಪುರುಷೋ ನ ವಿಶೀರ್ಯತೇಽಜಃ ॥ ೪೯ ॥

ಸ್ವಭಾವದಿಂದ ಭಕ್ತನಾದ ಸತ್ಪುರುಷನಿಗೆ ಒಲಿದು ಮೈದೋರುವ ಭಗವಂತ ಮೋಕ್ಷವನ್ನು ಮಾತ್ರವಲ್ಲದೇ ಎಲ್ಲ ಅಭೀಷ್ಟಗಳನ್ನೂ ಕೊಡುತ್ತಾನೆ. ಜೀವನಿಗೆ ಒಂದು ದೇಹ ವಿಯೋಗ ಹೊಂದಿದರೂ ಇನ್ನೊಂದು ಬರುತ್ತದೆ, ಅವನು ನಾಶ ಹೊಂದುವುದಿಲ್ಲ. ಆದರಿಂದ ಪರಮಾತ್ಮ ನೀಡುವ ಸ್ವರ್ಗಾದಿಫಲವನ್ನು ಅವನು ಅನುಭವಿಸುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ 'ಸತಃ ಪ್ರಸಿದ್ಧಿಃ' ಎಂದು. 'ಭಾವಸ್ವಭಾವ ವಿಹಿತ' ಎಂಬುದಕ್ಕೆ ಬ್ರಾಹ್ಮಣಾದಿಗಳ ಸ್ವಭಾವಗಳಿಂದ ನಡೆದ ಕರ್ಮ ಎಂದು ಶ್ರೀಧರವ್ಯಾಖ್ಯಾನ, ವೀರರಾಘವವ್ಯಾಖ್ಯಾನಗಳು, ದಾಸ್ಯಾದಿ ಭಾವದ ಸ್ವಭಾವದಿಂದ ಮಾಡಿದ ಕರ್ಮ ಎಂದು ವಿಶ್ವನಾಥವ್ಯಾಖ್ಯಾನ. ಮುಮುಕ್ಷು ಬುಭುಕ್ಷುಗಳ ಸ್ವಭಾವದಿಂದಾದ ನಿವೃತ್ತಿ ಪ್ರವೃತ್ತಿ ಕರ್ಮಗಳೆಂದು ಶುಕದೇವ ವ್ಯಾಖ್ಯಾನ. ಎಲ್ಲರೂ ಕರ್ಮಫಲಸಿದ್ಧಿ ಭಗವಂತನಿಂದಾಗುತ್ತದೆ ಎಂದೇ ಅಭಿಪ್ರಾಯ ಹೇಳಿದ್ದಾರೆ. ಆದರೆ ಅಪರೋಕ್ಷ ಜ್ಞಾನದ ಫಲ ಈಗ ಪ್ರಕೃತವಾಗಿದೆ. ಅಪರೋಕ್ಷದ ಫಲವಾಗಿ ಮೋಕ್ಷವನ್ನು

ಮಾತ್ರವಲ್ಲದೆ ಬೇರೆ ಎಲ್ಲ ಫಲಗಳನ್ನೂ ಕೊಡುತ್ತಾನೆ ಎನ್ನಬೇಕು. ಅದಕ್ಕೆ ಕರ್ಮಫಲದಾತ ಭಗವಂತನೆಂದು ಹೇಳುವುದು ಅಸಂಗತವಾಗುತ್ತದೆ. ಆದರಿಂದ 'ಭಾವಸ್ವಭಾವ ವಿಹಿತ' ಎಂದರೆ ಸ್ವಾಭಾವಿಕ ಭಕ್ತ. ಅವನಿಗೊಲಿದು 'ಪ್ರಸಿದ್ಧ' ಪ್ರತ್ಯಕ್ಷನಾದ ಭಗವಂತ ಎಲ್ಲವನ್ನೂ ಕೊಡುತ್ತಾನೆ ಎನ್ನಬೇಕು.

ಭಾವ ಸ್ವಭಾವೋ ಭಕ್ತಿಸ್ವಭಾವಃ । ತೇನ ನಿರ್ಮಿತಸ್ಯ ಸತ್ಪುರುಷಸ್ಯ ಪ್ರಸಿದ್ಧಃ ।
ಭಾವೋ ಭಕ್ತಿಃ ಪ್ರಣಾಮಶ್ಚ ಪ್ರಾವಣ್ಯಮಪಿ ಚಾದರಃ ।
ಇತ್ಯಭಿಧಾನಾತ್ ।

ಭಾವಸ್ವಭಾವ ಎಂದರೆ ಸ್ವಾಭಾವಿಕ ಭಕ್ತಿ ಉಳ್ಳವನು. ಸ್ವಾಭಾವಿಕ ಭಕ್ತಿಯುಕ್ತನಾಗಿ ಹುಟ್ಟಿದ ಸತ್ಪುರುಷನಿಗೆ ಪ್ರಸಿದ್ಧ ಅಂದರೆ ಪ್ರತ್ಯಕ್ಷನಾದ ಭಗವಂತ ಎಂದರ್ಥ. ಏಕೆಂದರೆ, 'ಭಾವ, ಭಕ್ತಿ ಪ್ರಣಾಮ, ಪ್ರಾವಣ್ಯ, ಆದರ ಇವು ಸಮಾನಾರ್ಥಕಗಳೆ'ಂದು ಕೋಶವಿದೆ.

ಫಲದಾಸೆಯಿಂದ ಭಕ್ತಿ ಮಾಡಿದ್ದರೆ ಕರ್ಮಾನುಗುಣವಾದ ಕಾಮಿತವಾದ ಒಂದು ಫಲವನ್ನು ಮಾತ್ರ ಭಗವಂತ ಕೊಡುತ್ತಿದ್ದ. ಜ್ಞಾನಿ ಸ್ವಾಭಾವಿಕವಾಗಿಯೆ ಭಕ್ತಿ ಮಾಡಿದ್ದರಿಂದ ಎಲ್ಲ ಫಲವನ್ನೂ ಕೊಡುತ್ತಾನೆ ಎಂದರ್ಥ.

★★★

ನಾರದರ ಎಲ್ಲ ಪ್ರಶ್ನೆಗಳಿಗೆ ಉತ್ತರ ಹೇಳಿ ಮುಗಿಸಿ ಕೊನೆಯಲ್ಲಿ ಬ್ರಹ್ಮದೇವರು ಹೇಳುತ್ತಾರೆ—

ಸೋಽಯಂ ತೇಽಭಿಹಿತಸ್ತಾತ ಭಗವಾನ್ ವಿಶ್ವಭಾವನಃ ।
ಸಮಾಸೇನ ಹರೇರ್ನಾನ್ಯತ್ ಅನ್ಯಸ್ಮಾತ್ ಸದಸಚ್ಚ ಯತ್ ॥ ೫೦ ॥

ನಾರದ, ಜಗತ್ಕರ್ತನಾದ ಭಗವಂತನ ಬಗ್ಗೆ ನೀನು ಕೇಳಿದ್ದನ್ನೆಲ್ಲ ಹೇಳಿದ್ದೇನೆ. ಸಂಕ್ಷೇಪವಾಗಿ ಹೇಳಬೇಕೆಂದರೆ, ಕಾರ್ಯಕಾರಣ ರೂಪವಾದ ಈ ಪ್ರಪಂಚ ಅಸ್ವತಂತ್ರವಾದ್ದರಿಂದ, ಸ್ವತಂತ್ರನಾದ ಭಿನ್ನನಾದ ಭಗವಂತನಿಗಿಂತ ಬೇರೆಯೆ ಆದರೂ, ಬೇರೆ ಅಲ್ಲ ಎನಿಸಿದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ ಭಗವಂತ ಪ್ರಪಂಚ ರೂಪವಾಗಿ ಪರಿಣಮಿಸುವುದರಿಂದ ಪರಿಣಾಮರೂಪಪ್ರಪಂಚಕ್ಕೆ ಪರಿಣಾಮಿಯಾದ ಭಗವಂತನಿಗಿಂತ ಬೇರೆ ಅಸ್ತಿತ್ವವಿಲ್ಲ, ಪರಿಣಾಮವಿಲ್ಲದೆಯೂ ಭಗವಂತನಿಗೆ ಅಸ್ತಿತ್ವವಿದೆಯಾದ್ದರಿಂದ ಅವನು ಬೇರೆ ಎಂದಿದ್ದಾರೆ. ಈ ಪರಿಣಾಮವಾದ ಪ್ರಮಾಣವಿರುದ್ಧ, ಆದರಿಂದ ಪರಮಾತ್ಮ ಸ್ವತಂತ್ರನಾದ್ದರಿಂದ ಅವನು ಪ್ರಪಂಚಕ್ಕಿಂತ

ಬೇರೆಯೆ. ಪ್ರಪಂಚ ಬೇರೆಯಾದರೂ ಅವನ ಅಧೀನವಾದ್ದರಿಂದ ಬೇರೆ ಅಲ್ಲ ! ಎಂದೇ ಹೇಳಬೇಕು.

ಸತ್ತಾದಿರ್ಯತ್ ಸ್ವತೋ ವಿಷ್ಣೋಸ್ತಸ್ಮಾದನ್ಯಃ ಸ ಸರ್ವತಃ ।
ಯತ್ ಸತ್ತಾದಿರತೋಽನ್ಯಸ್ಯ ನಾನ್ಯತ್ವಂ ಭೇದಿನೋಽಪಿತು ॥

ಇತಿ ಬ್ರಹ್ಮಾಂಡೇ ।

ಹರಿಗೆ ಅಸ್ತಿತ್ವಾದಿ ಸ್ವತಃ ಅದರಿಂದ ಅವನು ಎಲ್ಲಕ್ಕಿಂತ ಬೇರೆ. ಎಲ್ಲಕ್ಕೂ ಅಸ್ತಿತ್ವಾದಿ ಅವನಿಂದ. ಅದರಿಂದ ಅದು ಬೇರೆಯಾದರೂ ಬೇರೆ ಅಲ್ಲ ಎನಿಸುತ್ತದೆ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

★★★

ಬ್ರಹ್ಮದೇವರು ನಾರದರಿಗೆ ಭಗವಂತನ ಅವತಾರಾದಿಗಳನ್ನು ಸಂಕ್ಷೇಪವಾಗಿ ಹೇಳಿ 'ಇದನ್ನು ವಿಸ್ತಾರವಾಗಿ ವರ್ಣಿಸುವ ಭಾಗವತ ಪುರಾಣವನ್ನು ರಚಿಸಲು ವೇದವ್ಯಾಸರಲ್ಲಿ ಕೇಳಿಕೊಳ್ಳಿ. ಏಕೆಂದರೆ, ಮಾನವ ಜನ್ಮದ ಸಾರ್ಥಕತೆ ಭಕ್ತಿಯಿಂದ. ಭಕ್ತಿ ಭಾಗವತದಿಂದ' ಎನ್ನುತ್ತಾರೆ—

ನೃಜನ್ಮನಿ ನ ತುಷ್ಯೇತ ಕಿಂ ಫಲಂ ಯಮನಶ್ವರೇ ।
ಕೃಷ್ಣೇ ಯದ್ಯಪವರ್ಗೇಶೇ ಭಕ್ತಿಃ ಸ್ಯಾನ್ನಾನಪಾಯಿನೀ ॥ ೫೩ ॥

ಕಿಂ ಸ್ಯಾದ್ ವರ್ಣಾಶ್ರಮಾಚಾರೈಃ ಕಿಂ ದಾನೈಃ ಕಿಂ ತಪಃಶ್ರುತೈಃ ।
ಸರ್ವಾಘಘ್ನೋತ್ತಮಶ್ಲೋಕೇ ನ ಚೇದ್ ಭಕ್ತಿರಧೋಕ್ಷಜೇ ॥೫೪॥

ಮೋಕ್ಷದಾಯಕನಾದ ಭಗವಂತನಲ್ಲಿ ಅವಿಚ್ಛಿನ್ನವಾದ ಭಕ್ತಿ ಬಾರದಿದ್ದಲ್ಲಿ ಮನುಷ್ಯಜನ್ಮ ಯಮನ ವಶವಾಗಿ ನಶಿಸುವುದು ಹೊರತು ಏನು ಫಲ ಸಾಧಿಸಿ ದಂತಾದೀತು? ಸ್ವರ್ಗಾದಿ ನಶ್ವರ ಫಲಸಾಧನೆಯಿಂದ ತೃಪ್ತಿ ಪಟ್ಟುಕೊಳ್ಳುವಂತಿಲ್ಲ.

ಈ ಶ್ಲೋಕಗಳು ಎರಡೂ ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಇಲ್ಲ. ವೀರರಾಘವ ವ್ಯಾಖ್ಯಾನದಲ್ಲಿ ಇವೆ, ಸ್ವಲ್ಪ ವ್ಯತ್ಯಾಸವಾಗಿ—

ನೃಜನ್ಮನಿ ನ ತುಷ್ಯೇತ ಕೃತೇನ ಭಗವಾನ್ ಯದಿ ।
ಧರ್ಮಾರ್ಥಕಾಮೈಃ ಕಿಂ ತರ್ಹಿ ಕಾರ್ಯಂ ಸಿಧ್ಯತಿ ನಶ್ವರೈಃ ।
ಕೃಷ್ಣೇ ನ ಚೋತ್ತಮಶ್ಲೋಕೇ ಚೇದ್ ಭಕ್ತಿರನಪಾಯಿನೀ
ಕಿಂ ಸ್ಯಾದ್ ವರ್ಣಾಶ್ರಮಾಚಾರದಾನ ಹೋಮಾದಿಭಿಃ ಕೃತೈಃ ॥

ಸ್ವರ್ಗಾದಿ ಫಲವಿರುವಾಗ ಏನು ಫಲವೆಂದು ಆಕ್ಷೇಪಿಸುವುದು ಹೇಗೆ ಕೂಡುತ್ತದೆ ಎಂಬ ಪ್ರಶ್ನೆ ಬಂದರೆ ಹೇಳುತ್ತಾರೆ—

ಆಕ್ಷಿಪ್ಯತೇ ಕಿಮಿತ್ಯೇತದ್ ಯತೋಽಲ್ಪಫಲತಾ ಭವೇತ್ ।
ವಸ್ತುನೋ ಯಸ್ಯ ಚಾಲ್ಪತ್ವಂ ಪುಂಸೋ ವಾ ನೇತಿ ಚೋಚ್ಯತೇ ॥
ಇತಿ ಪ್ರಕಾಶಸಂಹಿತಾಯಾಂ ।

ಒಂದು ಸಾಧನದಿಂದ ಸಿಗುವ ಫಲ ಅಲ್ಪವಾಗಿದ್ದರೆ ಅದೇನು ಸಾಧನ ಎಂದು ಆಕ್ಷೇಪಿಸುವುದುಂಟು. ಅದೇನು ಫಲವೆಂದು ಆಕ್ಷೇಪಿಸುವುದುಂಟು. ಅವನೆಂಥ ಸಾಧಕ ಎಂದೂ ಆಕ್ಷೇಪಿಸುವುದುಂಟು. ಹಾಗೇ ಅದು ಸಾಧನವಲ್ಲ, ಅದು ಫಲವಲ್ಲ, ಅವನು ಸಾಧಕನೆ ಅಲ್ಲ ಎನ್ನುವುದೂ ಉಂಟೆಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

ಇತಿ ದ್ವಿತೀಯಸ್ಕಂಧೇ ಸಪ್ತಮೋಽಧ್ಯಾಯಃ

ಎಂಟನೇ ಅಧ್ಯಾಯ

ಅಧ್ಯಾಯ ಸಾರಾಂಶ

ಪರೀಕ್ಷಿತ- ಶುಕಮುನಿಗಳೆ, ನನ್ನ ಈ ಪ್ರಶ್ನೆಗಳಿಗೆ ಸಮಾಧಾನ ನೀಡಿರಿ. ಸ್ವಾಭಾವಿಕವಾಗಿ ಜಡಶರೀರ ರಹಿತನಾದ ಜೀವನಿಗೆ ಜಡಶರೀರ ಬರಲು ಹರೀಚ್ಛೆ ಒಂದೇ ಕಾರಣವೆ? ಬೇರೆ ಕಾರಣವೂ ಉಂಟೆ? ಹದಿನಾಲ್ಕು ಲೋಕವಾಗಿ ಪರಿಣಮಿಸುವ ಪದ್ಮವನ್ನು ನಾಭಿಯಲ್ಲಿ ಹೊತ್ತವನು ಹರಿ ಎಂದ ಮೇಲೆ ಅವನಿಗೂ ನಾನಾ ಅವಯವಗಳುಳ್ಳ ಶರೀರವಿದೆ ಎಂದಾಯಿತು. ಜೀವರಿಗಿಂತ ಅವನಲ್ಲಿ ಏನು ವಿಶೇಷವಿದೆ? ಮುಕ್ತನಿಯಾಮಕನು ಯಾವ ಲೋಕದಲ್ಲಿ ಇರುತ್ತಾನೆ? ಅವನ ಸ್ವರೂಪಾವಯವಗಳಿಂದ ಲೋಕಗಳ ಸೃಷ್ಟಿಯಾಯಿತು. ಲೋಕಗಳು ಅವನ ಪ್ರತಿಮೆಯ ಅವಯವಗಳು ಎಂದಿರುವಿರಿ. ಇದನ್ನು ಇನ್ನೂ ವಿಶದವಾಗಿ ಹೇಳಿರಿ. ಬ್ರಹ್ಮನ ದ್ವಿಪರಾರ್ಧಕಲ್ಪ, ದಿನಕಲ್ಪ ಮನ್ವಂತರಗಳ ಪರಿಮಾಣವೆಷ್ಟು? ಭೂತ ಭವಿಷ್ಯ ವರ್ತಮಾನ ಕಾಲಗಳನ್ನು ತಿಳಿಯುವುದು ಹೇಗೆ? ಆಯುಸ್ಸಿನ ಪರಿಮಾಣವನ್ನು ಹೇಗೆ ತಿಳಿಯಬೇಕು? ಪರಮಾಣುಕಾಲ ಪರಮಮಹತ್ಕಾಲಗಳನ್ನು ಹೇಗೆ ತಿಳಿಯಬೇಕು? ಕರ್ಮಾನುಸಾರ ಸಿಗುವ ಸ್ಥಾನಗಳೆಷ್ಟು ಯಾವುವು? ಮಹದಾದಿ ತತ್ವಗಳ ಪರಿಮಾಣ, ಅಭಿಮಾನಿಗಳ ಸಾಮರ್ಥ್ಯಗಳೆಷ್ಟು? ಭೂಮಿ ಪಾತಾಳ ದಿಕ್ಕು ಆಕಾಶ ಮುಂತಾದವುಗಳ ಪರಿಮಾಣವೆಷ್ಟು? ಇವುಗಳಲ್ಲಿ ವಾಸಿಸುವ ಜೀವರ ಉತ್ಪತ್ತಿ ಬ್ರಹ್ಮಾಂಡಪರಿಮಾಣ ಮರೀಚಿ ಮುಂತಾದವರ ಚರಿತ್ರೆ ಹರಿಯ ಅವತಾರ

ಚರಿತ್ರೆಗಳು, ಯುಗಗಳ ಪರಿಮಾಣ. ಮನುಷ್ಯರ ಸಾಮಾನ್ಯ ವಿಶೇಷ ಧರ್ಮಗಳು, ಆಪದ್ಧರ್ಮಗಳು, ತತ್ವಗಳ ಸಂಖ್ಯೆ ಅವುಗಳ ಲಕ್ಷಣಗಳು, ಅವುಗಳಿಗೆ ಕಾರಣನಾದ ಭಗವಂತನ ಲಕ್ಷಣಗಳು. ಅವನ ಆರಾಧನ, ಧ್ಯಾನಾದಿ ಯೋಗ ಅಣಿಮಾದಿ ಅಷ್ಟಸಿದ್ಧಿಗಳು. ಭಕ್ತಿಯೋಗಿಗಳ ಲಿಂಗಭಂಗ ವೇದ ಉಪವೇದ ಧರ್ಮಶಾಸ್ತ್ರ ಇತಿಹಾಸ ಪುರಾಣಗಳು, ಜೀವರ ಉತ್ಪತ್ತ್ಯಾದಿಗಳು, ಯಾಗ, ಲೋಕಸೇವೆ ಕಾಮ್ಯಕರ್ಮ ಧರ್ಮಾದಿ ಪುರುಷಾರ್ಥಗಳು ಜೀವರ ಗರ್ಭವಾಸ ಉತ್ಪತ್ತಿ ಬಂಧ ಮೋಕ್ಷಗಳು ಮೋಕ್ಷದಲ್ಲಿ ಸ್ವರೂಪಾನಂದಾನುಭವ ಇವೆಲ್ಲವನ್ನೂ ಹೇಳಿರಿ. ನಾನು ಅನ್ನ ಉಣದಿದ್ದರೂ ಹರಿಯ ಗುಣಗಾನಾಮೃತಪಾನದಿಂದ ನನ್ನ ಕಣ್ಣು ಕಿವಿ ಮುಂತಾದ ಇಂದ್ರಿಯಗಳು ದೃಢವಾಗಿಯೆ ಇವೆ.

ಸೂತರು-ಹೀಗೆ ಪರೀಕ್ಷಿತ ಕೇಳಿಕೊಂಡಾಗ ಶುಕಮುನಿ ವೇದತುಲ್ಯವಾದ ಭಾಗವತ ಪುರಾಣವನ್ನು ಉಪದೇಶಿಸಿದರು. ವಾಸುದೇವ ಬ್ರಹ್ಮಕಲ್ಪದ ಆದಿಯಲ್ಲಿ ಬ್ರಹ್ಮನಿಗೆ ಹೇಳಿದ್ದ ಆ ಪುರಾಣವನ್ನೆ ಪದ್ಮನಾಭ ಚತುರ್ಮುಖನಿಗೆ ಹೇಳಿದ. ಅದರಲ್ಲಿಯೆ ಪರೀಕ್ಷಿತನ ಎಲ್ಲ ಪ್ರಶ್ನೆಗಳಿಗೆ ಉತ್ತರವಿದೆ. ಅದರಿಂದ ಅದನ್ನೆ ಶುಕಮುನಿ ಹೇಳಿದರು.

★★★

ಪರೀಕ್ಷಿತ ಶುಕರಲ್ಲಿ ಕೇಳುತ್ತಾನೆ, ವಿರಾಟ್‌ಪುರುಷನ ಅಂಗಗಳಿಂದ ಲೋಕಗಳು ಹೇಗೆ ಹುಟ್ಟಿದುವು?

ಪುರುಷಾವಯವೈರ್ಲೋಕಾಃ ಸಪಾಲಾಃ ಪೂರ್ವಕಲ್ಪಿತಾಃ ।
ಲೋಕೈರಮುಷ್ಯಾವಯವಾಃ ಸಪಾಲೈರಿತಿ ಶುಶ್ರುಮಃ ॥ ೧೧ ॥

ವಿರಾಟ್‌ಪುರುಷನ ಸ್ವರೂಪಾವಯವಗಳಿಂದ ಲೋಕಗಳೂ ಲೋಕ ಪಾಲಕರೂ ಹುಟ್ಟಿದರು. ಆ ಲೋಕ ಲೋಕಪಾಲಕರನ್ನು ಪ್ರತಿಮಾರೂಪ ಅವಯವರೂಪದಿಂದ ಧ್ಯಾನಿಸಬೇಕೆಂದೂ ವಿಹಿತವಾಗಿದೆ ಎಂದು ಕೇಳಿದ್ದೇನೆ. ಅದರಿಂದ ಅವಯವಗಳಿಂದ ಲೋಕದ ಉತ್ಪತ್ತಿಯನ್ನು ಹೇಳಿರಿ.

ಮೇಲುನೋಟಕ್ಕೆ ಇಲ್ಲಿ ವಿರೋಧ ಕಾಣುತ್ತದೆ. ಹಿಂದಿನ ಕಲ್ಪಗಳಲ್ಲಿ ಪುರುಷನ ಅವಯವಗಳಿಂದ ಲೋಕಕಲ್ಪನೆ ಎಂದು ಕೇಳಿದ್ದೇವೆ. ಈ ಕಲ್ಪದಲ್ಲಿ ಲೋಕಗಳಿಂದ ಅವಯವ ಕಲ್ಪನೆ ಎನ್ನುತ್ತೀರಿ. ಧಾತಾ ಯಥಾ ಪೂರ್ವಮಕಲ್ಪಯತ್ ಎನ್ನುವುದಕ್ಕೆ ಇದು ವಿರುದ್ಧ ತಾನೆ ? ಎಂದು ವೀರರಾಘವ ವ್ಯಾಖ್ಯಾನ. ಅವಯವಗಳಿಂದ ಲೋಕಕಲ್ಪನೆ, ಲೋಕಗಳಿಂದ ಅವಯವಕಲ್ಪನೆ ಎಂದು ಅನ್ಯೋನ್ಯಾಶ್ರಯ ದೋಷ ಬರುತ್ತದೆ ಎಂಬ ಪ್ರಶ್ನೆ ಬಂದರೆ ಹೇಳುತ್ತಾರೆ—

ನಿಜಾವಯವೇಭ್ಯಃ ಸೃಷ್ಟಿಃ । ಬಾಹ್ಯಾವಯವಾಃ ಲೋಕೈಃ ಕಲ್ಪ್ಯಂತೇ ।

ಸ್ವರೂಪಾವಯವಗಳಿಂದ ಲೋಕಗಳು ಲೋಕಪಾಲಕರೊಡನೆ ಕಲ್ಪಿತವಾದವು ಎಂದರೆ, ಸೃಷ್ಟಿಸಲ್ಪಟ್ಟುವು. ಲೋಕಗಳಿಂದ ಅವಯವ ಕಲ್ಪನೆ ಎಂದರೆ ಪ್ರತಿಮಾರೂಪವಾದ ಅವಯವಗಳು ಈ ಲೋಕಗಳೆಂದು ಧ್ಯಾನಕಾಲದಲ್ಲಿ ಚಿಂತಿಸುವುದು ವಿಹಿತವಾಗಿದೆ ಎಂಬುದು ಶ್ಲೋಕದ ಅರ್ಥ. ಅದರಿಂದ ವಿರೋಧವಿಲ್ಲ, ಅನ್ಯೋನ್ಯಾಶ್ರಯವಿಲ್ಲ.

★★★

ಪರೀಕ್ಷಿತ ಶುಕಮುನಿಗಳಲ್ಲಿ ಕರ್ಮ ಗುಣ ಗುಣಿಗಳ ಬಗ್ಗೆ ಕೇಳುತ್ತಾನೆ—

ಯಸ್ಮಿನ್ ಕರ್ಮಸಮಾವಾಪೋ ಯಥಾ ಯೇನೋಪಗೃಹ್ಯತೇ ।
ಗುಣಾನಾಂ ಗುಣಿನಾಂ ಚೈವ ಪರಿಮಾಣಂ ಸುವಿಸ್ತರಂ ॥ ೧೪ ॥

ಕರ್ಮ ಸಂಪಾದಿಸುವವನು ಯಾರು? ಅದನ್ನು ಸ್ವೀಕರಿಸುವವನು ಯಾರು? ಗುಣಗುಣಿಗಳ ಅಂದರೆ ಮಹದಾದಿ ತತ್ವಗಳ ಮತ್ತು ಅವುಗಳ ಅಭಿಮಾನಿಗಳ ವ್ಯಾಪ್ತಿ ಎಷ್ಟು?

ಇಲ್ಲಿ ಬೇರೆ ವ್ಯಾಖ್ಯಾನಕಾರರಿಗೆ 'ಪರಿಮಾಣಂ ಸುವಿಸ್ತರಂ' ಎಂಬುದು 'ಪರಿಣಾಮಮಭೀಪ್ಸತಾಂ' ಎಂದು ಪರಿವರ್ತನೆ ಹೊಂದಿದೆ. 'ಗುಣಪರಿಣಾಮ ವಾದ ದೇವಾದಿಶರೀರವನ್ನು ಬಯಸುವ ಗುಣಿಗಳಾದ ಜೀವರಲ್ಲಿ ಯಾರು ಕರ್ಮ ಮಾಡಿ ದೇವಾದಿಶರೀರ ಹೊಂದುತ್ತಾನೆ?' ಎಂದು ಪ್ರಶ್ನೆ.[೧] ಮುಮುಕ್ಷುವಾದ ಪರೀಕ್ಷಿತ ಹೀಗೆ ಕಾಮ್ಯಕರ್ಮದ ಬಗ್ಗೆ ಕೇಳುವುದು ಸಹಜವೆನಿಸುವುದಿಲ್ಲ.

ಜೀವೇ ಕರ್ಮಸಮಾವಾಪಃ । ಪರಮೇಶ್ವರೇಣ ಗೃಹ್ಯತೇ ।
ಗುಣಿನಾಂ ಮಹದಾದಿಜೀವಾನಾಂ ಸಾಮರ್ಥ್ಯೇ ಪರಿಮಾಣಂ
ದೇವಾಸುರೇಭ್ಯೋ ಮಘವಾನಿತ್ಯಾದಿ ।

ಭಗವದಾರಾಧನ ರೂಪವಾಗಿ ಜೀವ ಕರ್ಮ ಮಾಡುತ್ತಾನೆ. ತನ್ನ ಆರಾಧನೆ ಎಂದು ಅದನ್ನು ಭಗವಂತ ಸ್ವೀಕರಿಸುತ್ತಾನೆ. 'ಗುಣಿನಾಂ ಪರಿಮಾಣಂ' ಎಂದರೆ

---

೧. ಗುಣಾನಾಂ ಸತ್ವಾದೀನಾಂ ಪರಿಣಾಮಂ ದೇವಾದಿರೂಪಮಿಚ್ಛತಾಂ ಗುಣಿನಾಂ ಜೀವಾನಾಂ ಮಧ್ಯೇ ಯಸ್ಮಿನ್ ಪರಿಣಾಮೇ ಕರ್ಮಣಾಂ ಪುಣ್ಯಪಾಪಾನಾಂ ಸಮವಾಯಃ ಸಮುದಾಯಃ? ಕೇನ ಕರ್ಮಸಮುದಾಯೇನ ಕಥಂ ಕೃತೇನ ಕೋಽಧಿಕಾರೀ ದೇವಾದಿಭಾವಂ ಪ್ರಾಪ್ನೋತಿ? ಇತ್ಯರ್ಥಃ । -ಶ್ರೀಧರಃ

ಮಹದಾದಿ ತತ್ವಾಭಿಮಾನಿಗಳಾದ ಜೀವರ ಸಾಮರ್ಥ್ಯದ ಪರಿಮಿತಿ ಎಷ್ಟೆಂದು ಪ್ರಶ್ನೆ. ಅದಕ್ಕೆ ಉತ್ತರವನ್ನು ಮುಂದೆ ಪಂಚಮಸ್ಕಂಧದಲ್ಲಿ—

ದೇವಾಸುರೇಭ್ಯೋ ಮಘವಾನ್ ಪ್ರಧಾನಃ
ದಕ್ಷಾದಯೋ ಬ್ರಹ್ಮಸುತಾಶ್ಚ ತೇಷಾಂ । (೫.೫.೨೨)

ಎಂದು ಮುಂತಾಗಿ ಹೇಳಲಾಗಿದೆ.

ಹೀಗೆ ಮುಂದೆ ಶುಕಮುನಿ ಹೇಳುವ ಉತ್ತರದಿಂದಲೆ ಪರೀಕ್ಷಿತನ ಪ್ರಶ್ನೆಯ ಅಭಿಪ್ರಾಯವನ್ನು ನಾವು ತಿಳಿಯಬಹುದು. ಅದರಿಂದ ಬೇರೆ ವ್ಯಾಖ್ಯಾನಕಾರರು ಹೇಳಿದ ಪ್ರಶ್ನಾಭಿಪ್ರಾಯ ಸರಿಯಲ್ಲ.

★★★

ಪರೀಕ್ಷಿತ ಶುಕಮುನಿಗಳಲ್ಲಿ ಧರ್ಮಾಚರಣೆಯ ಬಗ್ಗೆ ಪ್ರಶ್ನೆ ಕೇಳುತ್ತಿದ್ದಾನೆ—

ನೃಣಾಂ ಸಾಧಾರಣೋ ಧರ್ಮಃ ಸವಿಶೇಷಶ್ಚ ಯಾದೃಶಃ ।
ಶ್ರೇಣೀನಾಂ ರಾಜರ್ಷಿಣಾಂ ಚ ಧರ್ಮಃ ಕೃಚ್ಛ್ರೇಷು ಜೀವತಾಂ ॥ ೧೮ ॥

ಎಲ್ಲ ವರ್ಣಾಶ್ರಮದವರ ಸಾಧಾರಣ ಧರ್ಮ ಯಾವುದು? ಆಯಾ ವರ್ಣಾಶ್ರಮಗಳ ವಿಶೇಷ ಧರ್ಮಗಳು ಯಾವುವು? ಯುದ್ಧದಲ್ಲಿ ಅಂಗರಕ್ಷಕರ ಧರ್ಮ ಯಾವುದು? ಆಪತ್ಕಾಲದಲ್ಲಿ ನಡೆಸುವ ಧರ್ಮ ಯಾವುದು ?

ಇಲ್ಲಿ ಬೇರೆ ವ್ಯಾಖ್ಯಾನಕಾರರಿಗೆ ಶ್ರೇಣಿಗಳೆಂದರೆ ಆಯಾ ವೃತ್ತಿಗಳಿಂದ ಜೀವನ ನಡೆಸುವವರು. ಆದರೆ ಮುಂದೆ ಇದಕ್ಕೆ ಉತ್ತರವಾಗಿ ಶುಕಮುನಿಗಳು ಏನೂ ಹೇಳುವುದು ಕಂಡುಬರುವುದಿಲ್ಲ. ವಸ್ತುತಃ ಶ್ರೇಣಿಗಳೆಂದರೆ ಯುದ್ಧದಲ್ಲಿ ನಾಯಕನಿಗೆ ಅಂಗರಕ್ಷಕರಾಗಿ ಕಾರ್ಯ ನಿರ್ವಹಿಸುವವರು. ಅವರ ಧರ್ಮ ಏನೆಂಬುದು ಮುಂದೆ ಯುದ್ಧವರ್ಣನೆಯ ಪ್ರಸಂಗಗಳಲ್ಲಿ ಉಕ್ತವಾಗಿದೆ—

ಶ್ರೇಣೀನಾಮಂಗರಕ್ಷಕಾಣಾಂ । ಯುದ್ಧೇಷೂಚ್ಯತೇ ।

ಶ್ರೇಣಿಗಳೆಂದರೆ ಅಂಗರಕ್ಷಕರು. ಅವರ ಧರ್ಮವು ಯುದ್ಧ ಪ್ರಸಂಗಗಳಲ್ಲಿ ಮುಂದೆ ಉಕ್ತವಾಗಿದೆ.

★★★

ಪರೀಕ್ಷಿತನು ಶುಕಮುನಿಗಳಲ್ಲಿ ಇನ್ನೂ ಬೇರೆ ಪ್ರಶ್ನೆಗಳನ್ನು ಮಾಡುತ್ತಾನೆ—

ತತ್ತ್ವಾನಾಂ ಪರಿಸಂಖ್ಯಾನಂ ಲಕ್ಷಣಂ ಹೇತುಲಕ್ಷಣಂ ।
ಪುರುಷಾರಾಧನವಿಧಿರ್ಯೋಗಸ್ಯಾಧ್ಯಾತ್ಮಿಕಸ್ಯ ಚ ॥ ೧೯ ॥

ತತ್ತ್ವಗಳ ಸಂಖ್ಯೆ, ಅವುಗಳ ಲಕ್ಷಣ, ಜಗತ್ಕಾರಣನಾದ ಭಗವಂತನ ಲಕ್ಷಣ, ಅವನ ಆರಾಧನ ಕ್ರಮ, ಪರಮಾತ್ಮನ ಧ್ಯಾನಾದಿಗಳ ಲಕ್ಷಣಗಳು ಯಾವುವು?

ಇಲ್ಲಿ ಹೇತುಲಕ್ಷಣವೆಂದರೆ ತತ್ತ್ವಗಳು ಯಾವ ಕಾರ್ಯಗಳಿಗೆ ಹೇತುಗಳಾಗುತ್ತವೆ ಎನ್ನುವ ಲಕ್ಷಣ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಇದು ತತ್ತ್ವಸ್ವರೂಪ ಲಕ್ಷಣದಲ್ಲಿಯೆ ಸೇರುವುದರಿಂದ ತಿರುಗಿ ಕೇಳುವುದು ವ್ಯರ್ಥ.

ಹೇತುಲಕ್ಷಣಂ ಬ್ರಹ್ಮಲಕ್ಷಣಂ ।

ಹೇತುಲಕ್ಷಣವೆಂದರೆ ಜಗತ್ತಿಗೆ ಕಾರಣನಾದ ಪರಬ್ರಹ್ಮನ ಲಕ್ಷಣ.

★★★

ಪರೀಕ್ಷಿತನು ಇನ್ನೂ ಮುಂದುವರಿಸಿ ಶುಕಮುನಿಗಳಲ್ಲಿ ಕೇಳುತ್ತಾನೆ—

ಯೋಗೇಶ್ವರೈಶ್ವರ್ಯಗತಿಂ ಲಿಂಗಭಂಗಂ ಚ ಯೋಗಿನಾಂ ।
ವೇದೋಪವೇದಧರ್ಮಾಣಾಮಿತಿಹಾಸಪುರಾಣಯೋಃ ॥ ೨೦ ॥

ಯೋಗೇಶ್ವರರ ಅಣಿಮಾದ್ಯೈಶ್ವರ್ಯಪ್ರಾಪ್ತಿಯನ್ನೂ, ಭಕ್ತಿಯೋಗಿಗಳ ಚರಮಶರೀರತ್ಯಾಗವನ್ನೂ ವೇದ, ಉಪವೇದ, ಧರ್ಮಶಾಸ್ತ್ರ ಇತಿಹಾಸ ಪುರಾಣಗಳ ಸ್ವರೂಪವನ್ನೂ ಹೇಳಿರಿ.

ಇಲ್ಲಿ ಲಿಂಗಭಂಗವೆಂದರೆ ಶ್ರೀಧರ ಶುಕದೇವ ವಲ್ಲಭರ ಪ್ರಕಾರ ಲಿಂಗಶರೀರನಾಶ. ಅದನ್ನು ಭಾಗವತದಲ್ಲಿ ಮುಂದೆ ಹೇಳುತ್ತಿಲ್ಲ. ವೀರರಾಘವರ ಪ್ರಕಾರ ಯೋಗಿಗಳ ಶರೀರಪಾತ. ಅದು ಹಿಂದೆ 'ಸ್ಥಿರಂ ಸುಖಂ ಚಾಸನಂ' (೨.೨.೧೬) ಎಂದು ಮುಂತಾಗಿ ಹೇಳಿಯಾಗಿದೆ. ಆದರಿಂದ ಹೀಗೆ ಹೇಳಬೇಕು— ಯೋಗಿಗಳು ಎರಡು ಬಗೆ. ಕೆಲವರು ಯಮನಿಯಮಾದಿ ಕಠಿನ ಯೋಗಾಭ್ಯಾಸವನ್ನು ಹೆಚ್ಚಾಗಿ ಮಾಡುವವರು. ಅವರ ಲಿಂಗಭಂಗ ಎಂದರೆ ಚರಮಶರೀರ ತ್ಯಾಗವಿಧಿ ಹಿಂದೆ ಉಕ್ತವಾಗಿದೆ. ಇನ್ನು ಕೆಲವರು ಭಕ್ತಿಯೋಗಿಗಳು, ಭಕ್ತಿಯಿಂದ ಶ್ರವಣಾದಿಗಳನ್ನೆ ವಿಶೇಷವಾಗಿ ಮಾಡುವವರು. ಅವರ ಚರಮಶರೀರತ್ಯಾಗ ಮುಂದೆ 'ಪಾನೇನ ತೇ ದೇವ ಕಥಾಸುಧಾಯಾಃ' (೩.೬.೨೪) ಎಂದು ಮುಂತಾಗಿ ಬರುತ್ತದೆ.

ಯೋಗತೋ ಲಿಂಗಭಂಗಃ ಪೂರ್ವೋಕ್ತಃ ।
'ಪಾನೇನ ತೇ ದೇವೇ'ತ್ಯಾದಿ ಪಶ್ಚಾತ್ ।

ಯೋಗಾಭ್ಯಾಸದಿಂದ ಶರೀರತ್ಯಾಗ ಮಾಡುವುದು ಹಿಂದೆ ಉಕ್ತವಾಗಿದೆ. ಭಕ್ತಿಯೋಗಿಗಳ ಶರೀರತ್ಯಾಗ ಮುಂದೆ 'ಪಾನೇನ ತೇ ದೇವ ಕಥಾಸುಧಾಯಾಃ' ಎಂದು ಮುಂತಾಗಿ ಉಕ್ತವಾಗುತ್ತದೆ. ಅದರ ಬಗ್ಗೆಯೆ ಪರೀಕ್ಷಿತ ಕೇಳುತ್ತಿದ್ದಾನೆ.

★★★

ಪರಮಾತ್ಮ ಜೀವರಿಗೆ ಬಂಧಮೋಕ್ಷಗಳನ್ನು ನೀಡುವ ಬಗೆಯನ್ನು ಪರೀಕ್ಷಿತ ಶುಕಮುನಿಗಳಲ್ಲಿ ಕೇಳುತ್ತಾನೆ—

ಯಥಾಽಽತ್ಮತಂತ್ರೋ ಭಗವಾನ್ ವಿಕ್ರೀಡತ್ಯಾತ್ಮಮಾಯಯಾ ।
ವಿಸೃಜ್ಯ ಚ ಯಥಾ ಮಾಯಾಮುದಾಸ್ತೇ ಸಾಕ್ಷಿವದ್‌ವಿಭುಃ ॥ ೨೩ ॥

ಸ್ವತಂತ್ರನಾದ ಪರಮಾತ್ಮ ಸ್ವೇಚ್ಛೆಯಿಂದಲೂ ಸ್ವಾಧೀನವಾದ ಪ್ರಕೃತ್ಯಾದಿಗಳಿಂದಲೂ ಜೀವರನ್ನು ಬಂಧಿಸಿ ಕ್ರೀಡಿಸುವುದನ್ನೂ ಸ್ವೇಚ್ಛೆಯಿಂದಲೇ ಆ ಪ್ರಕೃತ್ಯಾದಿಗಳನ್ನು ಬಿಡಿಸಿ ಸಾಕ್ಷಿ ಪುರುಷನಂತೆ ತಾನು ನಿರ್ಲಿಪ್ತನಾಗಿರುವುದನ್ನೂ ವರ್ಣಿಸಿರಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಸೃಷ್ಟಿಕಾಲದಲ್ಲಿ ಭಗವಂತ ತನ್ನ ಅನಿರ್ವಚನೀಯಾವಿದ್ಯಾರೂಪ ಮಾಯೆಯಿಂದ ಪ್ರಪಂಚ ಸೃಷ್ಟಿಮಾಡಿ ಕ್ರೀಡಿಸುವುದನ್ನು ಮತ್ತು ಪ್ರಲಯಕಾಲದಲ್ಲಿ ಅವೆಲ್ಲವನ್ನೂ ಲಯಮಾಡಿ ಉದಾಸೀನನಾಗಿರುವುದನ್ನು ಪರೀಕ್ಷಿತ ಕೇಳುತ್ತಿದ್ದಾನೆ ಎನ್ನುತ್ತಾರೆ. ವಸ್ತುತಃ ಮಾಯೆ ಎಂದರೆ ಭಗವಂತನ ಇಚ್ಛೆ ಮತ್ತು ಪ್ರಕೃತ್ಯಾದಿಗಳು. ಮಾಯೆಯಿಂದ ಕ್ರೀಡಿಸುವುದೆಂದರೆ ಜೀವರಿಗೆ ಸಂಸಾರ ನೀಡುವುದು. ಉದಾಸೀನನಾಗುವುದೆಂದರೆ ಸಂಸಾರದಿಂದ ಬಿಡಿಸಿ ಬಳಿಕ ತಿರುಗಿ ಸಂಸಾರ ನೀಡದಿರುವುದು—

'ದ್ವೇಧಾ ವಾವಾತ್ಮಮಾಯಾ ತದ್ರೂಪಾ ತದ್ವಶಾ ಚೇತಿ । ತದ್ವಶಯಾ ಸಂಸಾರಯತಿ । ಸ್ವರೂಪಯಾ ವಿಮೋಚಯತ್ಯುದಾಸ್ತೇ ತದ್ವಶಾಂ ವಿಮುಕ್ತಸ್ಥಃ। ಇತರಯೈನಂ ರಮಯತಿ । ಏಷ ಆತ್ಮೈಷ ಆನಂದ' ಇತಿ ಸೌಕರಾಯಣಶ್ರುತಿಃ ।

'ಆತ್ಮಮಾಯೆ ಎರಡು ಬಗೆಯಾಗಿದೆ. ಪರಮಾತ್ಮ ಸ್ವರೂಪಭೂತವಾದ ಇಚ್ಛೆ ಮತ್ತು ಅವನ ಅಧೀನವಾದ ಪ್ರಕೃತಿ ಎಂದು. ಆನಂದಸ್ವರೂಪನಾದ ಆ ಪರಮಾತ್ಮ ಅವನ ಅಧೀನವಾದ ಪ್ರಕೃತಿಯಿಂದ ಜೀವನಿಗೆ ಸಂಸಾರ ಉಂಟುಮಾಡುತ್ತಾನೆ. ಸ್ವರೂಪಭೂತವಾದ ಇಚ್ಛೆಯಿಂದ ಜೀವನನ್ನು ಸಂಸಾರಮುಕ್ತನನ್ನಾಗಿ ಮಾಡುತ್ತಾನೆ. ಮುಕ್ತನಿಯಾಮಕನಾದ ಅವನೇ ಅವನ ಅಧೀನವಾದ ಪ್ರಕೃತಿಯನ್ನು ಜೀವನಿಂದ

ದೂರವಿರಿಸುತ್ತಾನೆ. ಸ್ವರೂಪಭೂತ ಇಚ್ಛೆಯಿಂದ ಮುಕ್ತಜೀವನನ್ನು ಸಂತೋಷ ಗೊಳಿಸುತ್ತಾನೆ' ಎಂದು ಸೌಕರಾಯಣಶ್ರುತಿ ಹೇಳಿದೆ.

ಆತ್ಮಮಾಯೆ ಎರಡೇ ಬಗೆಯೆಂದು ಶ್ರುತಿ ಹೇಳುವುದರಿಂದ ಮೂರನೆಯದಾದ ಅನಿರ್ವಚನೀಯ ಅವಿದ್ಯಾರೂಪವಾದ ಆತ್ಮಮಾಯೆ ಅಪ್ರಾಮಾಣಿಕ. ಭಾಗವತ ಶ್ಲೋಕ ಈ ಶ್ರುತಿಯ ಛಾಯಾನುವಾದ ರೂಪ ವಾಗಿರುವುದರಿಂದ ವೀರರಾಘವ ವ್ಯಾಖ್ಯಾನದಲ್ಲಿ ಹೇಳಿದಂತೆ ಪರಮಾತ್ಮ ತನ್ನ ಅಧೀನವಾದ ಮಾಯೆಯಿಂದ ಸೃಷ್ಟಿಲಯಗಳನ್ನು ನಡೆಸುತ್ತಾನೆ ಎನ್ನುವುದೂ ಶ್ಲೋಕಾಭಿಪ್ರಾಯವಲ್ಲ.

★★★

ಶುಕಮುನಿಯೆ, ನೀವು ಚತುರ್ಮುಖಬ್ರಹ್ಮನಂತೆ ಸಂಪ್ರದಾಯ ಸಿದ್ಧವಾದ ತತ್ವವಿಷಯದಲ್ಲಿ ಆಪ್ತ ಉಪದೇಶಕರು ಎನ್ನುತ್ತಾನೆ ಪರೀಕ್ಷಿತ—

ಅತ್ರ ಪ್ರಮಾಣಂ ಹಿ ಭವಾನ್ ಪರಮೇಷ್ಠೀ ಯಥಾಽಽತ್ಮಭೂಃ ।
ಅಪರೇ ಹ್ಯನುತಿಷ್ಠಂತಿ ಪೂರ್ವೇಷಾಂ ಪೂರ್ವಜೈಃ ಕೃತಂ ॥ ೨೫ ॥

ಪೂರ್ವಿಕರಾದ ಮರೀಚಿ ಮುಂತಾದವರಿಗೂ ಪೂರ್ವಿಕರಾದ ಬ್ರಹ್ಮಾದಿಗಳು ಉಪದೇಶಿಸಿದ್ದನ್ನೆ ಬೇರೆ ಎಲ್ಲರೂ ಅನುಷ್ಠಾನ ಮಾಡುತ್ತಾರೆ. ಅದರಿಂದ ಚತುರ್ಮುಖಬ್ರಹ್ಮನೆ ಅತ್ಯಂತ ಆಪ್ತನಾದ ಉಪದೇಶಕ. ಅವನ ಸಂಪ್ರದಾಯದಂತೆ ಉಪದೇಶಿಸುವ ನೀವೂ ಆಪ್ತ ಉಪದೇಶಕರೇ.

ಇಲ್ಲಿ 'ಪೂರ್ವಿಕರು ಹೇಳಿದ್ದನ್ನೆ ಇತರರು ಅನುಷ್ಠಾನ ಮಾಡುತ್ತಾರೆ' ಎಂದು ಶ್ಲೋಕದ ಉತ್ತರಾರ್ಧದಲ್ಲಿ ಹೇಳಿದ್ದು ಪೂರ್ವಾರ್ಧಕ್ಕೆ ಹೇಗೆ ಸಂಗತವಾಗಿದೆ ಎನ್ನುವುದು ತಿಳಿಯುವುದಿಲ್ಲ. 'ಶುಕಮುನಿಗಳೆ, ನೀವು ಚತುರ್ಮುಖನಂತೆಯೆ ಆಪ್ತ ಉಪದೇಶಕರಾಗಿರುವಿರಿ' ಎಂದು ಪೂರ್ವಾರ್ಧದಲ್ಲಿ ಹೇಳಿದೆ. ಇತರರು ಎಂದರೆ ನಿಮ್ಮಂಥವರು ಸಂಪ್ರದಾಯದಿಂದ ತಿಳಿದು ಅನುಷ್ಠಾನ ಮಾಡುವವರು. ಅದರಿಂದ ನೀವೂ ಆಪ್ತ ಉಪದೇಶಕರೆ ಎಂದು ಶ್ರೀಧರ ಶುಕದೇವ ವ್ಯಾಖ್ಯಾನಗಳು ಹೇಳುತ್ತವೆ. ಇತರರು ಪೂರ್ವಿಕರು ಹೇಳಿದಂತೆ ಅನುಷ್ಠಾನ ಮಾಡುವವರು, ನೀವು ಮಾತ್ರ ಚತುರ್ಮುಖನಂತೆ ಚೆನ್ನಾಗಿ ತಿಳಿದವರು. ಅದರಿಂದ ನೀವೇ ಆಪ್ತ ಉಪದೇಶಕರು ಎಂದು ಶ್ರೀಧರವ್ಯಾಖ್ಯಾನದಲ್ಲಿ ಇನ್ನೊಂದು ವಿವರಣೆಯೂ ಇದೆ.ಇದನ್ನು ವಿಶ್ವನಾಥ ವ್ಯಾಖ್ಯಾನ ಅನುಸರಿಸಿದೆ. ನೀವು ಚೆನ್ನಾಗಿ ತಿಳಿದವರು ಮಾತ್ರವಲ್ಲದೆ ಬ್ರಹ್ಮನಾರದ ವ್ಯಾಸರಿಂದ ಕ್ರಮವಾಗಿ ಸಂಪ್ರದಾಯವೂ ನಿಮಗೆ ಬಂದಿರುತ್ತದೆ, ಎಲ್ಲರೂ ಹಿಂದಿನವರ ಸಂಪ್ರದಾಯದಂತೆ ತಾನೆ ಅನುಷ್ಠಾನ ಮಾಡುತ್ತಾರೆ ಎಂದು ವೀರರಾಘವ ವ್ಯಾಖ್ಯಾನ. ನಮಗೆ ನೀವು ಹೇಳುವುದರಲ್ಲಿ ವಿಶ್ವಾಸವಿದೆ, ಸಂದೇಹವಿಲ್ಲ. ಇತರರು

ವಿಚಾರಮಾಡದೆಯೆ ಹಿಂದಿನವರು ಹೇಗೆ ಮಾಡುವರೋ ಹಾಗೇ ಅನುಷ್ಠಾನ ಮಾಡುತ್ತಾರೆ ಎನ್ನುತ್ತದೆ ವಲ್ಲಭವ್ಯಾಖ್ಯಾನ. ಆದರೆ 'ಅಪರೇ ಹಿ' ಎಂದು ಹಿ ಶಬ್ದ ಹೇತ್ವರ್ಥದಲ್ಲಿರುವುದರಿಂದ 'ಬೇರೆ ಎಲ್ಲರೂ ಪೂರ್ವಿಕರಿಗೂ ಪೂರ್ವಿಕರಾದ ಬ್ರಹ್ಮವಾಯು ಮುಂತಾದವರಿಂದ ಉಕ್ತವಾದುದನ್ನೇ ಅನುಷ್ಠಾನ ಮಾಡುವುದರಿಂದ ಆ ಬ್ರಹ್ಮವಾಯು ಮುಂತಾದವರೆ ಪರಮ ಆಪ್ತ ಉಪದೇಶಕರು' ಎಂದು ಸ್ಪಷ್ಟವಾಗಿ ಶ್ಲೋಕ ಹೇಳುತ್ತಿದೆ, ಎನ್ನುತ್ತಾರೆ—

ಯಸ್ಮಾದನುತಿಷ್ಠಂತಿ ತಸ್ಮಾತ್ ಪರಮೇಷ್ಠೀ ಪ್ರಮಾಣಂ ।

ಬ್ರಹ್ಮಾದಿಗಳು ಹೇಳಿದಂತೆ ಇತರರು ಅನುಷ್ಠಾನ ಮಾಡುವುದರಿಂದ ಬ್ರಹ್ಮ ಮುಖ್ಯವಾಗಿ ಆಪ್ತ ಉಪದೇಶಕನೆನಿಸಿದ್ದಾನೆ.

★★★

ಪರೀಕ್ಷಿತನ ಪ್ರಾರ್ಥನೆಯನ್ನು ಕೇಳಿ ಸಂತುಷ್ಟರಾದ ಶುಕಮುನಿ ಭಾಗವತವನ್ನು ಅವನಿಗೆ ಉಪದೇಶಿಸಿದರೆಂದು ಸೂತರು ಶೌನಕರಿಗೆ ಹೇಳುತ್ತಾರೆ—

ಸ ಉಪಾಮಂತ್ರಿತೋ ರಾಜ್ಞಾ ಕಥಾಯಾಮಿತಿ ಸತ್ಪತೇಃ ।
ಬ್ರಹ್ಮರಾತೋ ಭೃಶಂ ಪ್ರೀತೋ ವಿಷ್ಣುರಾತೇನ ಸಂಸದಿ ॥ ೨೭ ॥

ಆಹ ಭಾಗವತಂ ನಾಮ ಪುರಾಣಂ ಬ್ರಹ್ಮಸಂಮಿತಂ ।
ಬ್ರಹ್ಮಣೇ ಭಗವತ್ಪ್ರೋಕ್ತಂ ಬ್ರಹ್ಮಕಲ್ಪ ಉಪಾಗತೇ ॥ ೨೮ ॥

ಹೀಗೆ ಮುನಿಗಳ ಸಭೆಯಲ್ಲಿ ಪರೀಕ್ಷಿತ ಶುಕಮುನಿಯನ್ನು ಭಾಗವತ ಕಥಾಪ್ರವಚನಕ್ಕೆ ಪ್ರಾರ್ಥಿಸಿದಾಗ ಅವರು ಬಲು ಸಂತುಷ್ಟರಾಗಿ ಬ್ರಹ್ಮಕಲ್ಪದ ಆದಿಯಲ್ಲಿ ಬ್ರಹ್ಮನಿಗೆ ಶ್ರೀಹರಿ ಉಪದೇಶಿಸಿದ ವೇದತುಲ್ಯವಾದ ಭಾಗವತ ಪುರಾಣವನ್ನು ಉಪದೇಶಿಸಿದರು.

ಇಲ್ಲಿ ವಿಷ್ಣುರಾತನ ಪ್ರಾರ್ಥನೆ ಕೇಳಿ ಬ್ರಹ್ಮರಾತ ಸಂತುಷ್ಟನಾದನೆಂದಿದೆ. ವಿಷ್ಣುರಾತ ಎಂದರೆ ಪರೀಕ್ಷಿತ. ಅವನು ಹುಟ್ಟುವಾಗಲೆ ಆಶ್ವತ್ಥಾಮರ ಬ್ರಹ್ಮಾಸ್ತ್ರದಿಂದ ಸತ್ತಿದ್ದ. ಅವನನ್ನು ಶ್ರೀಕೃಷ್ಣ ಬದುಕಿಸಿಕೊಟ್ಟಿದ್ದರಿಂದ ವಿಷ್ಣುವಿನಿಂದ ರಾತ ಬದುಕಿಸಿ ಕೊಡಲ್ಪಟ್ಟವನು ಎಂಬ ನಾಮ ಸಾರ್ಥಕ. ಶುಕಮುನಿ ವೇದವ್ಯಾಸರ ಪುತ್ರ. ಅವರು 'ಬ್ರಹ್ಮರಾತ' ಹೇಗೆ? ಬ್ರಹ್ಮಜ್ಞಾನವನ್ನು ನೀಡುವವರಾದ್ದರಿಂದ ಎನ್ನುತ್ತವೆ ವೀರರಾಘವ ಶುಕದೇವ ವ್ಯಾಖ್ಯಾನಗಳು. ಭಾಗವತವನ್ನು ಹೇಳಿ ವೇದಾರ್ಥವನ್ನು ಪುಷ್ಟಿಗೊಳಿಸಲಿ ಎನ್ನುವ ಆಸೆಯಿಂದ ಬ್ರಹ್ಮ ಅಂದರೆ ವೇದ ಶುಕಮುನಿಯನ್ನು ರಕ್ಷಿಸಿರುವುದರಿಂದ

ಅವರು ಬ್ರಹ್ಮರಾತರು ಎನ್ನುತ್ತದೆ ವಲ್ಲಭವ್ಯಾಖ್ಯಾನ. ಆದರೆ ಬ್ರಹ್ಮಪುರಾಣ ಸ್ಪಷ್ಟವಾಗಿ 'ಬ್ರಹ್ಮರಾತ' ಶಬ್ದದ ಅರ್ಥವನ್ನು ಹೀಗೆ ಹೇಳಿದೆ—

ಬಾಲೋಽಪಿ ಸ ಗುರುತ್ವೇನ ಮುನಿಭ್ಯೋ ಬ್ರಹ್ಮಣಾ ಯತಃ
ದತ್ತೋಽತೋ ಬ್ರಹ್ಮರಾತೇತಿ ನಾಮ ವೈಯಾಸಕೇರಭೂತ್ ॥

ಇತಿ ಬ್ರಾಹ್ಮೇ ।

'ಬಾಲಕನಾದರೂ ಈತ ನಿಮಗೆ ಗುರುವೆಂದು ಶುಕಮುನಿಯನ್ನು ಬ್ರಹ್ಮದೇವರು ಮುನಿಗಳಿಗೆ ನೀಡಿದ್ದರಿಂದ ವ್ಯಾಸಪುತ್ರ ಶುಕಮುನಿಗೆ ಬ್ರಹ್ಮರಾತ ಎಂದು ಹೆಸರಾಯಿತು' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

★★★

'ಬ್ರಹ್ಮಕಲ್ಪ ಉಪಾಗತೇ' 'ಬ್ರಹ್ಮಕಲ್ಪ ಬಂದಾಗ' ಎಂಬಲ್ಲಿ ಬ್ರಹ್ಮಕಲ್ಪ ಎಂದರೇನು? ಎಲ್ಲ ಕಲ್ಪಗಳಿಗಿಂತ ಮೊದಲಿನ ಕಲ್ಪ ಎಂದು ವಿಶ್ವನಾಥ ವ್ಯಾಖ್ಯಾನ. ಸೃಷ್ಟಿಪ್ರಾರಂಭದ ಕಲ್ಪ ಎಂದು ಶುಕದೇವ ವ್ಯಾಖ್ಯಾನ. ಆದರೆ ಅದಕ್ಕೆ ಬ್ರಹ್ಮಕಲ್ಪ ಎಂಬ ಹೆಸರು ಹೇಗೆ ಬಂದಿತು? ಬ್ರಹ್ಮಪುರಾಣವೆ ಅದನ್ನೂ ಹೇಳಿದೆ—

ಯತ್ರ ಬ್ರಹ್ಮಾಂತರೋತ್ಪತ್ತಿರ್ಬ್ರಹ್ಮಕಲ್ಪಃ ಸ ಈರಿತಃ । ಇತಿ ಚ ।

ಹಿಂದಿನ ಬ್ರಹ್ಮನಿಗೆ ಮುಕ್ತಿಯಾದ ಬಳಿಕ ಇನ್ನೊಬ್ಬ ಬ್ರಹ್ಮನ ಉತ್ಪತ್ತಿಯಾಗುವ ಕಾಲ ಬ್ರಹ್ಮಕಲ್ಪವೆನಿಸುತ್ತದೆ ಎಂದೂ ಬ್ರಹ್ಮಪುರಾಣ ಹೇಳಿದೆ.

ಬ್ರಹ್ಮಾಂಡದ ಹೊರಗೆ ಪುರುಷನಾಮಕನಾದ ಬ್ರಹ್ಮ ಹುಟ್ಟಿದಾಗ ವಾಸುದೇವ ಅವನಿಗೆ ಭಾಗವತವನ್ನು ಉಪದೇಶಿಸಿದ. ಬಳಿಕ ಆ ಬ್ರಹ್ಮನೆ ಇನ್ನೊಮ್ಮೆ ಬ್ರಹ್ಮಾಂಡದೊಳಗೆ ಚತುರ್ಮುಖನಾಗಿ ಹುಟ್ಟಿದಾಗಲೂ ಪದ್ಮನಾಭ ಇನ್ನೊಮ್ಮೆ ಭಾಗವತವನ್ನು ಉಪದೇಶಿಸಿದ. ಎರಡೂ ಬ್ರಹ್ಮಕಲ್ಪಗಳು. ಬ್ರಹ್ಮನ ಪರನಾಮಕವಾದ ನೂರುವರ್ಷ ಆಯುಷ್ಯರೂಪವಾದ ಬ್ರಹ್ಮಕಲ್ಪ ಇಲ್ಲಿ ವಿವಕ್ಷಿತವಲ್ಲ.

ಇತಿ ದ್ವಿತೀಯಸ್ಕಂಧೇ ಅಷ್ಟಮೋಽಧ್ಯಾಯಃ

ಒಂಬತ್ತನೇ ಅಧ್ಯಾಯ

ಅಧ್ಯಾಯ ಸಾರಾಂಶ

ಶುಕ- ಜೀವ ಸ್ವಭಾವತಃ ಜಡಶರೀರರಹಿತನಾದರೂ ಪರಮಾತ್ಮನ ಇಚ್ಛೆಯಿಂದ, ಅವನ ಅಧೀನವಾದ ಪ್ರಕೃತಿಯಿಂದ, ಜಡಶರೀರಾಭಿಮಾನ ಬರುತ್ತದೆ. ಭಗವಂತನ ಅನುಗ್ರಹದಿಂದ ಜೀವ ತನ್ನ ಸ್ವರೂಪಭೂತ ಜ್ಞಾನಾನಂದಗಳನ್ನು ಅನುಭವದಿಂದ ತಿಳಿದಾಗ ಜಡಶರೀರಗಳಲ್ಲಿ ನಾನು ನನ್ನದೆಂಬ ಅಭಿಮಾನ ತಾಳುವುದಿಲ್ಲ, ಸ್ವರೂಪಾನಂದವನ್ನೆ ಅನುಭವಿಸುತ್ತಾನೆ.

ಚತುರ್ಮುಖ ಬ್ರಹ್ಮ ಪರಮಾತ್ಮನ ನಾಭಿಕಮಲದಲ್ಲಿ ಕುಳಿತು ಪ್ರಪಂಚ ಸೃಷ್ಟಿ ಹೇಗೆ ಮಾಡಬೇಕೆಂದು ಆಲೋಚಿಸಿದಾಗ ಮೊದಲಿಗೆ ಏನೂ ತಿಳಿಯದಾಯಿತು. ನೀರಿನಲ್ಲಿ 'ತಪ ತಪ' ಎಂದು ಧ್ವನಿ ಕೇಳಿಸಿತು. ಯಾರ ಧ್ವನಿ ಇದೆಂದು ಸುತ್ತಲೂ ಅರಸಿ ನೋಡಿ, ಕಮಲದ ನಾಳದಲ್ಲಿಯೂ ಹುಡುಕಿ ಕಾಣಲಾಗದೆ ಕೊನೆಗೆ ತಪಸ್ಸನ್ನೆ ಮಾಡಿದ. ಸಾವಿರ ದಿವ್ಯವರ್ಷಕಾಲ ತಪಸ್ಸು ಸಾಗಿತು. ಆಗ ಒಲಿದು ಮೈದೋರಿದ ಶ್ರೀಹರಿ ಶ್ವೇತದ್ವೀಪಲೋಕದ ಮುಕ್ತಸ್ಥಾನವನ್ನು ತೋರಿದ. ಕೇವಲ ಸುಖಮಯವಾದ ಆ ಲೋಕವನ್ನು ಮೀರಿಸುವ ಇನ್ನೊಂದು ಲೋಕವಿಲ್ಲ. ಅಲ್ಲಿ ರಜಸ್ತಮೋಗುಣಗಳಾಗಲಿ ರಜಸ್ತಮೋ ಮಿಶ್ರವಾದ ಸತ್ವಗುಣವಾಗಲಿ ಇಲ್ಲ. ಕಾಲದ ಪ್ರಭಾವವಾದ ಜರೆಮರಣಗಳಿಲ್ಲ, ಅಲ್ಲಿರುವವರೆಲ್ಲರೂ ವಿಷ್ಣುಭಕ್ತರು. ಎಲ್ಲರೂ ಚತುರ್ಭುಜರು. ಕಮಲದಂಥ ಕಣ್ಣಿನವರು. ಸುಂದರರು ಪಿತಾಂಬರ ಉಟ್ಟವರು. ಅವರ ವಿಮಾನಗಳಲ್ಲಿ ಮೋಡಗಳ ನಡುವೆ ಮಿಂಚಿನಂತೆ ಹೊಳೆವ ಉತ್ತಮ ಸ್ತ್ರೀಯರಿರುತ್ತಾರೆ. ಲಕ್ಷ್ಮೀದೇವಿ ಅಲ್ಲಿ ತನ್ನ ವಿಭೂತಿರೂಪಗಳೊಂದಿಗೆ ಪ್ರಿಯಕರನಾದ ಹರಿಯ ಲೀಲೆಗಳನ್ನು ಹಾಡುತ್ತ ಪಾದಸೇವೆ ಮಾಡುತ್ತಾಳೆ. ಅಲ್ಲಿ ಚತುರ್ಮುಖ ಪಾರ್ಷದರೊಂದಿಗೆ ಮೆರೆವ ಲಕ್ಷ್ಮೀರಮಣನನ್ನು ಕಂಡ. ಆನಂದದಿಂದ ಮೈರೋಮಾಂಚಗೊಂಡು ಕಣ್ಣಲ್ಲಿ ಆನಂದಬಾಷ್ಪ ಸುರಿಸುತ್ತ ಅವನ ಪಾದಕಮಲಗಳಿಗೆ ಮಣಿದ. ಹರಿ, ನೀನು ನಿನ್ನಿಚ್ಛೆಯಂತೆ ಅವತಾರಮಾಡಿ ಲೀಲೆಯಿಂದ ಜಗತ್ತನ್ನು ನಿರ್ಮಿಸಿ ಪಾಲಿಸಿ ಲಯಗೈದು ಕ್ರೀಡಿಸುವ ಬಗೆಯನ್ನು ನಾನು ತಿಳಿಯಬೇಕು. ನೀನು ಪ್ರೇರಿಸಿದಂತೆ ನಾನು ಸೃಷ್ಟಿಕಾರ್ಯ ಮಾಡುವೆನು. ಆದರೆ ಅದು ನನಗೆ ಬಂಧಕವಾಗದಿರಲಿ. ಅದರಿಂದ ನನಗೆ ಅಹಂಕಾರ ಬಾರದಿರಲಿ.

ಹರಿ: ಎಲ್ಲ ಮುಮುಕ್ಷುಗಳೂ ಸಾಮಾನ್ಯವಾಗಿ ಉಪಾಸನೆ ಮಾಡಬೇಕಾದ. ಗುಣಗಳ ಜ್ಞಾನ 'ಜ್ಞಾನ'ವೆನಿಸುತ್ತದೆ. ಅವರವರಿಗೆ ಯೋಗ್ಯವಾದ ಗುಣಗಳ ಬಗ್ಗೆ ತಿಳಿಯುವುದು ವಿಜ್ಞಾನ. ಈ ಜ್ಞಾನ ವಿಜ್ಞಾನಗಳೆರಡನ್ನೂ ನಾನು ನಿನಗೆ ಅನುಗ್ರಹಿಸು

ತ್ತೇನೆ. 'ಆತ್ಮೈವೇದಮಗ್ರ ಆಸೀತ್' ಎಂದು ಶ್ರುತಿಯಲ್ಲಿ ಸೃಷ್ಟಿಯ ಆದಿಯಲ್ಲಿ ಭಗವಂತನೊಬ್ಬನೆ ಇದ್ದ ಎನ್ನುವುದು 'ಅವನೊಬ್ಬನೆ ಸ್ವತಂತ್ರನಾಗಿದ್ದ. ಬೇರೆಯವರು ಅಸ್ವತಂತ್ರರಾದ್ದರಿಂದ ಇದ್ದೂ ಇಲ್ಲದಂತೆ' ಎನ್ನುವ ಅಭಿಪ್ರಾಯದಿಂದ. ಸೃಷ್ಟಿಗೆ ಮೊದಲಾಗಲಿ ಕೊನೆಯಲ್ಲಾಗಲಿ ಜೀವರಿಗೆ ಇಲ್ಲದಿದ್ದ ಸ್ವಾತಂತ್ರ್ಯಾನುಭವ ನಡುವೆ ಇದೆ ಎಂದರೆ ಅದು ಭ್ರಮೆಯೆ ಸರಿ. ಪ್ರಪಂಚ ಅಸ್ವತಂತ್ರ ಮಾತ್ರವಲ್ಲ, ಅದರಿಂದ ಅವನಿಗೇನೂ ಪ್ರಯೋಜನವೂ ಇಲ್ಲ. ಅದರಿಂದಲೂ ಅದು ಇದ್ದೂ ಇಲ್ಲದಂತೆ. ಯದ್ಯಪಿ ಪರಮಾತ್ಮನೂ ಪ್ರಪಂಚದಲ್ಲಿ ಇದ್ದೂ ಇಲ್ಲದಂತೆ ಎನ್ನುವುದುಂಟು. ಆದರೆ ಅದು ಆತ ಒಳಗೂ ಹೊರಗೂ ವ್ಯಾಪ್ತನಾಗಿರುವುದರಿಂದ ಪ್ರಪಂಚ ಅವನಿಗೆ ಆಶ್ರಯವಲ್ಲ ಎಂಬ ಅಭಿಪ್ರಾಯದಿಂದ ಹೇಳಿದ್ದೆಂದು ತಿಳಿಯಬೇಕು. ಅವನು ಹೇಗೆ ಸರ್ವಗತನೋ ಹಾಗೇ ಅವನ ಜ್ಞಾನಶಕ್ತ್ಯಾದಿಗಳೂ ಸರ್ವವಿಷಯಕವಾಗಿವೆ.

ಶುಕ-ಬಳಿಕ ಬ್ರಹ್ಮ ಹರಿಗೆ ಕೈಮುಗಿದು ಅವನಾಜ್ಞೆಯಂತೆ ಸೃಷ್ಟಿಕಾರ್ಯದಲ್ಲಿ ತೊಡಗಿದ. ಅವನಿಂದ ಆಜ್ಞಪ್ತರಾದ ನಾರದರು ವೇದವ್ಯಾಸರಲ್ಲಿ ಹತ್ತು ವಿಷಯ ಗಳನ್ನು ಪ್ರತಿಪಾದಿಸುವ ಭಾಗವತ ಪುರಾಣವನ್ನು ರಚಿಸಲು ವಿಜ್ಞಾಪಿಸಿಕೊಂಡರು. ವ್ಯಾಸರು ಅವರಿಂದ ಉಪದೇಶ ಪಡೆದಂತೆ ಲೋಕಕ್ಕೆ ತೋರಿಕೊಂಡರು.

★★★

ಸ್ವತಃ ಚಿದಾನಂದಮಯನಾದ ಜೀವನಿಗೆ ಜಡದೇಹ ಹೇಗೆ ಬಂದಿತೆಂದು ಪರೀಕ್ಷಿತ ಕೇಳಿದ ಪ್ರಶ್ನೆಗೆ ಶುಕಮುನಿ ಉತ್ತರ ಕೊಡುತ್ತಿದ್ದಾರೆ—

ಆತ್ಮಮಾಯಾಮೃತೇ ರಾಜನ್ ಪರಸ್ಯಾನುಭವಾತ್ಮನಃ
ನ ಘಟೇತಾರ್ಥಸಂಬಂಧಃ ಸ್ವಪ್ನೇ ದ್ರಷ್ಟುರಿವಾಂಜಸಾ ॥ ೧ ॥

ಬಹುರೂಪ ಇವಾಭಾತಿ ಮಾಯಯಾ ಬಹುರೂಪಯಾ
ರಮಮಾಣೋ ಗುಣೇಷ್ವಸ್ಯಾ ಮಮಾಹಮಿತಿ ಮನ್ಯತೇ ॥ ೨ ॥

ಯರ್ಹಿ ವಾಯಂ ಮಹಿತ್ವೇ ಸ್ವೇ ಪರಸ್ಮಿನ್ ಕಾಲಮಾಯಯೋಃ ।
ರಮತೇ ಗತಸಂಮೋಹಸ್ತ್ಯಕ್ತ್ವೋದಾಸ್ತೇ ತದೋಭಯಂ ॥ ೩ ॥

ರಾಜನೆ, ಸ್ವಪ್ನದಲ್ಲಿ ಆನೆ ಕುದುರೆ ಮುಂತಾದುವನ್ನು ನೋಡುವ ಜೀವನಿಗೆ ಅವುಗಳ ದರ್ಶನರೂಪದ ಸಂಬಂಧವು. ಭಗವದಿಚ್ಛೆ ಹಾಗೂ ಭಗವದಧೀನವಾದ ಪ್ರಕೃತಿಗಳಿಂದ ಹೊರತು ಬೇರೆ ಕಾರಣದಿಂದ ಕೂಡುವುದಿಲ್ಲ. ಹಾಗೇ ಸದಾ ಜ್ಞಾನಸ್ವರೂಪನಾದ ಜೀವನಿಗೆ ದೇಹೇಂದ್ರಿಯಾದಿ ಸಂಬಂಧ ಮತ್ತು

ಬಾಹ್ಯಪದಾರ್ಥಗಳ ದರ್ಶನಸಂಬಂಧ ಜಾಗ್ರದವಸ್ಥೆಯಲ್ಲಿ ಭಗವದಿಚ್ಛೆ ಹಾಗೂ ಭಗವದಧೀನವಾದ ಪ್ರಕೃತಿಗಳಿಂದ ಹೊರತು ಬೇರೆ ಕಾರಣದಿಂದ ಕೂಡುವುದಿಲ್ಲ. ಪ್ರಕೃತಿ ಸುರ ಅಸುರ ಮಾನವಾದಿ ಶರೀರಗಳಾಗಿ ನಾನಾರೂಪ ತಾಳುವಾಗ ಜೀವ ಅವುಗಳಲ್ಲಿ ನಾನು ನನ್ನದೆಂದು ಅಭಿಮಾನಪಡುತ್ತಾನೆ, ಅದರಿಂದ ಸುರ ಅಸುರ ಮಾನವಾದಿ ಬಹುರೂಪಿಯಂತೆ ಕಾಣುತ್ತಾನೆ. ಸತ್ವಾದಿ ಗುಣಗಳ ಪ್ರಭಾವದಿಂದ ವಿಹಿತ ನಿಷಿದ್ಧ ಕರ್ಮ ಮಾಡುತ್ತಿರುವುದರಿಂದ ಪ್ರಕೃತಿ ಆ ಕರ್ಮಾನುಗುಣವಾಗಿ ಸುರ ಅಸುರಾದಿ ನಾನಾ ಶರೀರಗಳನ್ನು ನಿರ್ಮಿಸಿ ಕೊಡುತ್ತದೆ. ಕಾಲಪ್ರಕೃತಿ ಗಳಿಂದಾಗುವ ವಿಕಾರಕ್ಕೊಳಗಾಗದ ಚಿನ್ಮಯವಾದ ತನ್ನ ನಿಜರೂಪವನ್ನು ಭಗವದನುಗ್ರಹದಿಂದ ಜೀವ ತಿಳಿದಾಗ ಕಾಲ ಪ್ರಕೃತಿಗಳಿಂದಾಗುವ ಜಡಶರೀರದಲ್ಲಿ ಅಭಿಮಾನ ತೊರೆದು ಸ್ವರೂಪಭೂತ ಚಿನ್ಮಯಶರೀರದಲ್ಲಿಯೆ ಸುಖ ಕಾಣುತ್ತಾನೆ.

ಇಲ್ಲಿ ಆತ್ಮಮಾಯೆ ಎಂದರೆ ಅವಿದ್ಯೆ ಎಂದು ವಿಶ್ವನಾಥ ವ್ಯಾಖ್ಯಾನ. ಅವಿದ್ಯೆಯ ಸಂಬಂಧದಿಂದ ಪರಮಾತ್ಮನಿಗೆ ಜಡಶರೀರ ಪ್ರಾಪ್ತಿ ಎಂದಂತಾಯಿತು. ಆದರೆ ಜೀವನಿಗೆ ಜಡಶರೀರ ಹೇಗೆ ಬಂದಿತೆಂದು ಪರೀಕ್ಷಿತ ಮಾಡಿದ್ದ ಪ್ರಶ್ನೆಗೆ ಪರಮಾತ್ಮನಿಗೆ ಜಡಶರೀರ ಅವಿದ್ಯೆಯಿಂದೆ ಬಂದಿತೆಂದು ಉತ್ತರಿಸುವುದು ಅಸಂಗತವಾಗುತ್ತದೆ. ಅದರಿಂದ ಆತ್ಮಮಾಯೆ ಎಂದರೆ ಭಗವದಿಚ್ಛೆ ಮತ್ತು ಭಗವಂತನ ಅಧೀನವಾದ ಬಂಧಕ ಪ್ರಕೃತಿ ಎನ್ನಬೇಕು.

ಪರಸ್ಯ ಅರ್ಥವ್ಯತಿರಿಕ್ತಸ್ಯ । 'ಯದಧಾತುಮತ' ಇತ್ಯಸ್ಯ ಹ್ಯುತ್ತರಂ ।
ಅಶರೀರಸ್ಯ ಜೀವಸ್ಯ ಶರೀರೋತ್ಪತ್ತಿ ಕಾರಣಂ ।
ಈಶ್ವರೇಚ್ಛಾ ಪ್ರಾಥಮಿಕಾ ತಾಂ ವಿನಾ ನಹಿ ಕಿಂಚನ ।
ದ್ವಿತೀಯಾ ಪ್ರಕೃತಿಃ ಪ್ರೋಕ್ತಾ ತದ್ರೂಪಾ ಹಿ ಗುಣಾಸ್ತ್ರಯಃ ।
ತೇಷಾಂ ಸಂಪಾತಜೋ ಭಾವೋ ಮಮಾಹಮಿತಿ ಯಾ ಮತಿಃ ।
ದೇಹಾತ್ಪರಸ್ಯ ದೇಹಿತ್ವಮಹಂಭಾವಮೃತೇ ಕುತಃ ।
ಯಥಾ ರಜಸ್ತಮೋಭಾವೈರ್ವಿನಾ ಸ್ವಪ್ನೇ ನ ಜಾಯತೇ ।
ನಿದ್ರಾಕಾಮಾದ್ಯಭಾವೇನ ತದ್ವದ್ ದೇಹಃ ಕ್ವ ತಾನ್ ವಿನಾ ।
ತಸ್ಮಾತ್ ಪ್ರಕೃತ್ಯೈವ ಪುಮಾನ್ ಮಾನುಷಾದಿ ವಿಕಾರಯಾ ।
ಮಾನುಷಾದಿರಿವಾಭಾತಿ ನಿತ್ಯಚೈತನ್ಯರೂಪವಾನ್ ।
ಯದಾ ಸ್ವರೂಪಂ ಜಾನಾತಿ ಕಾಲಪ್ರಕೃತಿ ವರ್ಜಿತಂ ।
ವಾಸುದೇವಪ್ರಸಾದೇನ ತದಾ ಮುಕ್ತೋ ಭವತ್ಯಸೌ ॥

ಇತಿ ಭವಿಷ್ಯತ್‌ಪುರಾಣೇ ॥

ಪರಸ್ಯ ಎಂದರೆ ಪರಮಾತ್ಮನಿಗೆ ಎಂದರ್ಥವಲ್ಲ, ಶರೀರದಿಂದ ಬೇರೆಯಾದ ಜೀವನಿಗೆ ಎಂದರ್ಥ. ಏಕೆಂದರೆ 'ಯದಧಾತುಮತಃ' ಸ್ವಭಾವತಃ ಜಡದೇಹ ರಹಿತನಾದ ಜೀವನಿಗೆ ಅಸ್ವಾಭಾವಿಕವಾದ ದೇಹಸಂಬಂಧ ಹೇಗೆ ಬಂದಿದೆ ಎಂದು ಜೀವನ ಬಗ್ಗೆಯೆ ಪ್ರಶ್ನೆಮಾಡಿದ್ದಾನೆ. ಅದಕ್ಕೆ ಇದು ಉತ್ತರವಾದ್ದರಿಂದ ಇಲ್ಲಿ ಜೀವನ ಬಗ್ಗೆಯೆ ಹೇಳುವುದು ಸಂಗತವಾಗುತ್ತದೆ. ಈ ಶ್ಲೋಕಗಳ ಅಭಿಪ್ರಾಯವೆ ಭವಿಷ್ಯತ್ ಪುರಾಣದಲ್ಲಿ ಹೀಗೆ ಉಕ್ತವಾಗಿದೆ—'ಸ್ವತಃ ಜಡಶರೀರ ರಹಿತನಾದ, ಜಡಶರೀರಭಿನ್ನನಾದ ಜೀವನಿಗೆ ಶರೀರ ಉಂಟಾಗಲು ಮುಖ್ಯಕಾರಣ ಈಶ್ವರೇಚ್ಛೆ. ಅದಿಲ್ಲದೆ ಏನೂ ಆಗದು. ಎರಡನೆ ಕಾರಣ ಪ್ರಕೃತಿ. ಅದು ಭಗವಂತನ ಅಧೀನ. ಸತ್ವಾದಿ ಗುಣತ್ರಯ ಅದರ ಸ್ವರೂಪ. ಅದರ ಸಂಬಂಧದಿಂದ ಜೀವನಿಗೆ ದೇಹಾದಿಗಳಲ್ಲಿ ನಾನು ನನ್ನದೆಂಬ ಅಭಿಮಾನ. ದೇಹಭಿನ್ನನಾದ ಜೀವನಿಗೆ ಈ ಅಭಿಮಾನವಿಲ್ಲದಿದ್ದರೆ ದೇಹಸಂಬಂಧ ಹೇಗೆ ಕೂಡುತ್ತದೆ? ಬಾಹ್ಯೇಂದ್ರಿಯ ಉಪರತವಾಗದಿದ್ದರೆ ಕಾಮನೆಗಳು ವಿಷಯಾನುಭವ ಸಂಸ್ಕಾರ ಗುಣತ್ರಯಸಂಬಂಧಗಳಿಲ್ಲದೆ ಜೀವನಿಗೆ ಸ್ವಪ್ನದಲ್ಲಿ ಕಾಣುವ ಪದಾರ್ಥ ಉಂಟಾಗದು. ಹಾಗೆಯೆ ಗುಣತ್ರಯ ಸಂಬಂಧವಿಲ್ಲದೆ ಜೀವನಿಗೆ ಶರೀರ ಸಂಬಂಧ ಉಂಟಾಗದು. ಆದರಿಂದ ಗುಣತ್ರಯಾತ್ಮಕ ಪ್ರಕೃತಿ ಸುರ ಅಸುರ ಮಾನವಾದಿ ನಾನಾ ಶರೀರರೂಪವಾಗಿ ಪರಿಣಮಿಸುವುದರಿಂದ ಅದರಲ್ಲಿ ಅಭಿಮಾನ ತಳೆದ ಜೀವ ನಾನಾ ಶರೀರಿಯಂತೆ ಕಾಣುತ್ತಾನೆ. ವಸ್ತುತಃ ಅವನು ಸದಾ ಜ್ಞಾನಸ್ವರೂಪನೆ ಆಗಿರುತ್ತಾನೆ. ಅವನು ಕಾಲಕರ್ಮಗಳಿಂದಾಗುವ ವಿಕಾರಗಳ ಸಂಬಂಧವಿಲ್ಲದ ತನ್ನ ಸ್ವರೂಪವನ್ನು ಭಗವಂತನ ಅನುಗ್ರಹದಿಂದ ತಿಳಿದುಕೊಂಡಾಗ ಮುಕ್ತನಾಗುತ್ತಾನೆ'.

★★★

ಪರೀಕ್ಷಿತನಿನ್ನೂ ಅನೇಕ ಪ್ರಶ್ನೆಗಳನ್ನು ಮಾಡಿದ್ದಾನೆ. ಅವೆಲ್ಲಕ್ಕೂ ಭಾಗವತದಲ್ಲಿ ಮುಂದೆ ಸಮಾಧಾನಗಳು ಬರುತ್ತವೆ ಎನ್ನುತ್ತಾರೆ ಶುಕಮುನಿಗಳು—

ಆತ್ಮತತ್ವವಿಶುದ್ಧ್ಯರ್ಥಂ ಯದಾಹ ಭಗವಾನ್ ಋತಂ ।
ಬ್ರಹ್ಮಣೇऽದರ್ಶಯದ್ ರೂಪಂ ಅವ್ಯಲೀಕವ್ರತಾದೃತಃ ॥ ೪ ॥

ಪರಮಾತ್ಮ ಜೀವಾತ್ಮರ ಆನಂದಸ್ವರೂಪತ್ವವನ್ನು ತಿಳಿಸುವ ಭಾಗವತವನ್ನು ಭಗವಂತನೆ ಹೇಳಿದ್ದರಿಂದ ಅದು ವಿಶ್ವಸನೀಯವಾಗಿದ್ದು ನಿನ್ನ ಬೇರೆ ಪ್ರಶ್ನೆಗಳಿಗೆ ಉತ್ತರವಾಗಿ ಅದನ್ನೇ ಹೇಳುತ್ತೇನೆ. ಮೊದಲಿಗೆ ಭಗವಂತ ಬ್ರಹ್ಮನಿಗೆ ತೋರಿದ ರೂಪವೇನೆಂದು ಕೇಳಿರುವೆ. ಅದನ್ನು ಹೇಳುತ್ತೇನೆ. ತನಗೆ ಅತ್ಯಂತ ಪ್ರಿಯವಾದ ತಪಸ್ಸಿಗೆ ಒಲಿದ ಭಗವಂತ ಬ್ರಹ್ಮನಿಗೆ ನಿಜರೂಪವನ್ನು ತೋರಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಭಗವಾನ್ ಯದಾಹ ತದ್ ಋತಂ' 'ಭಗವಂತ ಹೇಳಿದ್ದರಿಂದ ಭಾಗವತ 'ಋತ' ಸತ್ಯ, ವಿಶ್ವಸನೀಯ' ಎನ್ನುವಲ್ಲಿ ಬರುವ ಋತಶಬ್ದವನ್ನು 'ಬ್ರಹ್ಮಣೇಽದರ್ಶಯನ್ ಋತಂ ರೂಪಂ' ಬ್ರಹ್ಮನಿಗೆ ಸತ್ಯವಾದ, ಚಿನ್ಮಯವಾದ ರೂಪವನ್ನು ತೋರಿದ' ಎಂದು ಮುಂದೆ ಅನ್ವಯಿಸಿದ್ದಾರೆ. 'ಪರಮಾತ್ಮನಿಗೂ ಶರೀರವಿದೆ, ಅವನ ನಾಭಿಯಿಂದ ಕಮಲ ಹೊರಟಿದೆ. ಅವನ ಉಪಾಸನೆಯಿಂದ ಜೀವರಿಗೆ ಹೇಗೆ ಮೋಕ್ಷ ಸಿಕ್ಕೀತು ಎಂದು ಪರೀಕ್ಷಿತ ಪ್ರಶ್ನೆ ಮಾಡುತ್ತಾನೆ, ಅದಕ್ಕೆ, ಪರಮಾತ್ಮನಿಗೆ ಶರೀರವಿದ್ದರೂ ಅದು ಜೀವನ ಶರೀರದಂತೆ ಮಿಥ್ಯೆ ಅಲ್ಲ, ಸತ್ಯ ಎಂದು ಶುಕಮುನಿ ಉತ್ತರಿಸುತ್ತಾರೆ' ಎಂದಿದ್ದಾರೆ. ಆದರೆ ಜೀವನ ಶರೀರ ಮಿಥ್ಯಾ ಅಲ್ಲ. ಅದು ಸತ್ಯವೆ. ಅದರಲ್ಲಿ ತಾನು ತನ್ನದೆಂಬ ಅಭಿಮಾನ, ಅದರಿಂದ ನಿಷಿದ್ಧಕರ್ಮ, ಅದರಿಂದ ಪುನಃ ಶರೀರ ಲಾಭ—ಹೀಗೆ ಹೇಳಬೇಕು ಹೊರತು ಜೀವನ ಶರೀರ ಮಿಥ್ಯಾ ಭಗವಂತನದು ಸತ್ಯ ಎಂದಲ್ಲ, ಅದರಿಂದ ಋತ ಶಬ್ದವನ್ನು ಯದಾಹ ಭಗವಾನ್ ಎಂಬಲ್ಲಿಗೇ ಅನ್ವಯಿಸಬೇಕು—

ಯತೋ ಭಗವದುಕ್ತಂ ಪ್ರಮಾಣಂ ಅತಸ್ತದುಕ್ತಂ
ಪುರಾಣಂ ತ್ವತ್ಪ್ರಶ್ನಾನಾಮುತ್ತರತ್ವೇನ ವಕ್ಷ್ಯೇ ।

'ಯದಾಹ ಭಗವಾನ್ ಋತಂ' ಎಂದರೆ ಭಾಗವತ ಪುರಾಣವನ್ನು ಭಗವಂತ ಹೇಳಿದ್ದರಿಂದ ಅದು ಸತ್ಯ, ವಿಶ್ವಸನೀಯ. ನಿನ್ನ ಬೇರೆ ಪ್ರಶ್ನೆಗಳಿಗೆ ಉತ್ತರವಾಗಿ ನಾನು ಅದನ್ನೇ ಹೇಳುತ್ತೇನೆ ಎಂದು ಅಭಿಪ್ರಾಯ.

★★★

ನಾಭಿಕಮಲದಲ್ಲಿ ಹುಟ್ಟಿದ ಬ್ರಹ್ಮ ಪ್ರಪಂಚ ಸೃಷ್ಟಿಯನ್ನು ಹೇಗೆ ಮಾಡಬೇಕೆಂದು ಚಿಂತಿಸುತ್ತಿದ್ದಾಗ 'ತಪ, ತಪ' ತಪಸ್ಸು ಮಾಡು, ತಪಸ್ಸು ಮಾಡು' ಎಂದು ಶಬ್ದ ಕೇಳಿಸಿತು. ಅದರಂತೆ ಬ್ರಹ್ಮ ತಪಸ್ಸು ಮಾಡಿದ ಎಂದು ಶುಕಮುನಿಗಳು ಪರೀಕ್ಷಿತನಿಗೆ ಹೇಳುತ್ತಾರೆ—

ದಿವ್ಯಂ ಸಹಸ್ರಾಬ್ದಮಮೋಘದರ್ಶನೋ
ಜಿತಾನಿಲಾತ್ಮಾ ವಿಜಿತೋಭಯೇಂದ್ರಿಯಃ ।
ಅತಪ್ಯತ ಸ್ಮಾಖಿಲಲೋಕತಾಪನಂ
ತಪಸ್ತಪೀಯಾಂಸ್ತಪತಾಂ ಸಮಾಹಿತಃ ॥ ೮ ॥

ಚತುರ್ಮುಖ ಬ್ರಹ್ಮ ತಪಸ್ವಿಗಳಲ್ಲೆಲ್ಲ ಅತ್ಯುತ್ತಮ. ಅವನು ಸರ್ವಲೋಕಪ್ರಕಾಶಕ

ನಾದ ಭಗವಂತನನ್ನು ದೇವಮಾನದ ಸಾವಿರ ವರ್ಷಗಳ ಕಾಲ ಪ್ರಾಣ ಮನಸ್ಸು ಇಂದ್ರಿಯಗಳ ನಿಗ್ರಹಪೂರ್ವಕವಾಗಿ ಧ್ಯಾನಿಸಿದ.

ಇಲ್ಲಿ 'ತಪೋಽತಪ್ಯತ' 'ತಪಸ್ಸನ್ನು ಕುರಿತು ತಪಸ್ಸು ಮಾಡಿದನೆಂದುದು ಅಸಂಗತ. ತಪಃ- ತಪಸ್ಸನ್ನು, ಅತಪ್ಯತ ಮಾಡಿದನು' ಎಂದು ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. 'ಅತಪ್ಯತ' ಶಬ್ದದಿಂದಲೇ ತಪಸ್ಸು ಮಾಡಿದನೆಂದು ಅರ್ಥ ಹೊರಡುತ್ತಿರುವಾಗ 'ತಪಃ' ಎಂಬ ಶಬ್ದವೇಕೆ? ಆದರಿಂದ 'ತಪಃ' ಎಂದರೆ ಜ್ಞಾನರೂಪನಾದ ಭಗವಂತನನ್ನು ಕುರಿತು ಅತಪ್ಯತ-ತಪಸ್ಸು ಮಾಡಿದನೆನ್ನಬೇಕು. 'ಅಖಿಲ ಲೋಕತಾಪನಂ' ಎಂದರೆ 'ಎಲ್ಲ ಲೋಕಗಳನ್ನು ಸುಡುವಂಥ' ಎಂದು ಅರ್ಥಪ್ರತೀತಿ ಉಂಟಾಗುತ್ತದೆ. ವಲ್ಲಭ ವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ. ಬ್ರಹ್ಮ ತಪಸ್ಸು ಮಾಡಿದಾಗ ಅವನೊಳಗಿದ್ದ ಲೋಕಗಳೆಲ್ಲ ಕಾವೇರಿ ಒಣಗಿದುವು. ಬಿಸಿಲಲ್ಲಿ ಹಾಕಿದ ಬಟ್ಟೆ ಒಣಗುವಂತೆ ಎಂದು ವಿವರಣೆ ನೀಡಿದೆ. 'ಅತಪ್ಯತ' ಎಂದರೂ ಪ್ರಾಣಾಯಾಮದಿಂದ ಶರೀರದಲ್ಲಿ ತಾಪ ಉಂಟುಮಾಡಿಕೊಂಡನೆಂದೇ ವಿವರಣೆ ನೀಡಿದೆ. ಇದು ಸರಿಯಲ್ಲ. ಸರಿಯಾದ ವಿವರಣೆ ಷಾಡ್ಗುಣ್ಯ ಎಂಬ ಗ್ರಂಥದಲ್ಲಿ ಇದೆ. 'ತಪತಾಂ ತಪೀಯಾನ್' ಎಂಬಲ್ಲಿ 'ತಪೀಯಾನ್' ಎಂದರೆ 'ತಪಸ್ವಿಗಳಿಗಿಂತ ಹೆಚ್ಚಿನ ತಪಸ್ವಿ' ಎಂದರ್ಥ. ಪುನಃ 'ತಪತಾಂ' 'ತಪಸ್ವಿಗಳಿಗಿಂತ' ಎಂದು ಸೇರಿಸಿದ್ದು ವ್ಯರ್ಥ ಎಂಬ ಶಂಕೆಗೂ ಅವಕಾಶವಿದೆ, ಅದಕ್ಕೆ ಹೇಳುತ್ತಾರೆ—

ತಪೋ ಬ್ರಹ್ಮ । ತಪಸೋಽಧ್ಯಜಾಯತೇತಿ ಶ್ರುತೇಃ ।
ಅಖಿಲಲೋಕಪ್ರಕಾಶನಂ ಯತ್ ತದಾಲೋಚಯಾಮಾಸ ।
ತಪತಾಂ ತಪೀಯಾನಿತ್ಯನೇನಾತ್ಯುತ್ತಮೋತ್ತಮತ್ವಮುಕ್ತಂ ಭವತಿ ।
ಮಹಾನ್ಮಹೀಯಸಾಮಾದಿ ಬ್ರೂಯಾದತ್ಯುತ್ತಮೋತ್ತಮಂ ।
ಯತ್ರಾಧಿಕಂ ವದೇತ್ ಕಿಂಚಿಜ್ಜ್ಞೇಯೋಽರ್ಥಸ್ತತ್ರ ಚಾಧಿಕಃ ।
ಇತಿ ವ್ಯಾಸನಿರುಕ್ತೇ ।
ತಪೋರೂಪಂ ಪರಂ ಬ್ರಹ್ಮ ಬ್ರಹ್ಮಾಽಚಿಂತಯದಂಜಸಾ ।
ಇತಿ ಷಾಡ್ಗುಣ್ಯೇ ॥

ತಪಸ್ಸೆಂದರೆ ಪರಮಾತ್ಮ. ಏಕೆಂದರೆ,

'ಋತಂ ಚ ಸತ್ಯಂ ಚಾಭೀದ್ಧಾತ್ ತಪಸೋಽಧ್ಯಜಾಯತ'

'ಪ್ರಕಾಶಮಾನನಾದ ಪರಮಾತ್ಮನಿಂದಲೇ ಕರ್ಮವೂ ಜಗತ್ತೂ ಉಂಟಾಯಿತು' ಎಂದು ಶ್ರುತಿ ಭಗವಂತನನ್ನು ತಪಸ್ಸೆಂಬ ಶಬ್ದದಿಂದ ಕರೆದಿದೆ.

'ಅಖಿಲಲೋಕ ತಾಪನಂ' ಎಂದರೆ ಸಕಲ ಲೋಕ ಪ್ರಕಾಶಕನಾದ ಪರಮಾತ್ಮ ಎಂದರ್ಥ. ಅಂಥ ಪರಮಾತ್ಮನನ್ನು ಅತಪ್ಯತ ಧ್ಯಾನಮಾಡಿದನೆಂದರ್ಥ.

'ತಪತಾಂ ತಪೀಯಾನ್' ಎಂದರೆ ತಪಸ್ವಿಗಳಾದ ಇಂದ್ರಾದಿಗಳಿಗಿಂತ ಹೆಚ್ಚು ತಪಸ್ವಿಗಳಾದ ರುದ್ರಾದಿಗಳಿಗಿಂತಲೂ ಹೆಚ್ಚಿನ ತಪಸ್ವಿ ಚತುರ್ಮುಖ ಎಂದರ್ಥ. ತಪಸ್ವಿಗಳಲ್ಲಿ ಅತ್ಯುತ್ತಮರಿಗಿಂತಲೂ ಉತ್ತಮತ್ವವನ್ನು ಹೇಳಿದಂತಾಯಿತು. ಅದರಿಂದ 'ತಪತಾಂ' ಎಂಬ ಶಬ್ದ ವ್ಯರ್ಥವಲ್ಲ. ವ್ಯಾಸನಿರುಕ್ತ ಗ್ರಂಥದಲ್ಲಿ ಹೀಗೆ ಹೇಳಿದೆ— 'ಮಹೀಯಸಾಂ ಮಹಾನ್, ಮಹತಾಂ ಮಹೀಯಾನ್' ತಪತಾಂ ತಪೀಯಾನ್ ಇತ್ಯಾದಿ ಪ್ರಯೋಗಗಳು 'ಅತ್ಯುತ್ತಮರಿಗಿಂತಲೂ ಉತ್ತಮ' ಎಂಬ ಅರ್ಥವನ್ನು ಹೇಳುತ್ತವೆ. ಏಕೆಂದರೆ ಅಧಿಕ ಶಬ್ದವೇನಾದರೂ ಪ್ರಯುಕ್ತವಾಗುವಲ್ಲಿ ಅದು ಹೇಳುವ ಪ್ರಮೇಯ ಉತ್ತಮ ಎಂದು ಅಭಿಪ್ರಾಯವಿರುತ್ತದೆ' ಎಂದು.

'ತಪೋಽತಪ್ಯತ' ಎಂದರೆ ಜ್ಞಾನರೂಪನಾದ ಪರಮಾತ್ಮನನ್ನು ಬ್ರಹ್ಮ ಚೆನ್ನಾಗಿ ಧ್ಯಾನಿಸಿದ ಎಂದರ್ಥ ಎಂದು ಷಾಡ್ಗುಣ್ಯವೆಂಬ ಗ್ರಂಥದಲ್ಲಿ ಹೇಳಿದೆ.

★★★

ಭಗವಂತನ ಲೋಕದ ವೈಶಿಷ್ಟ್ಯವೇನೆಂದು ಪರೀಕ್ಷಿತ ಕೇಳಿದ್ದ ಪ್ರಶ್ನೆಗೆ ಶುಕಮುನಿ ಉತ್ತರಿಸುತ್ತಾರೆ—

ತಸ್ಮೈಸ್ವಲೋಕಂ ಭಗವಾನ್ ಸಭಾಜಿತಃ
ಸಂದರ್ಶಯಾಮಾಸ ಪರಂ ನ ಯತ್ ಪದಂ ।
ವ್ಯಪೇತ ಸಂಕ್ಲೇಶ ವಿಮೋಹ ಸಾಧ್ವಸಂ
ಸಂದೃಷ್ಟವದ್ಭಿರ್ವಿಬುಧೈರಭಿಷ್ಟುತಂ ॥ ೯ ॥

ಶ್ವೇತದ್ವೀಪವು ಕ್ಲೇಶ ಮೋಹ ಭಯವರ್ಜಿತ, ಅಪರೋಕ್ಷ ಜ್ಞಾನಿಗಳಾದ ದೇವತೆಗಳಿಂದ ಸ್ತುತ್ಯವಾಗಿದೆ. ಅದಕ್ಕಿಂತ ಉತ್ತಮವಾದ ಇನ್ನೊಂದು ಲೋಕವಿಲ್ಲ. ತಪಸ್ಸಿನಿಂದ ಆರಾಧಿತನಾದ ಪರಮಾತ್ಮ ತನ್ನ ಇಂಥ ಶ್ವೇತದ್ವೀಪಲೋಕವನ್ನು ಬ್ರಹ್ಮನಿಗೆ ತೋರಿಸಿದ.

ಯತ್‌ಯತಃ । ಯತ್ತದಿತ್ಯಾದಯಃ ಶಬ್ದಾಃ ಪಂಚಮ್ಯಂತಾಃ ಪ್ರಕೀರ್ತಿತಾಃ ।
ಇತಿ ಚ ।

'ಯತ್' ಎಂದರೆ ಯಾವುದಕ್ಕಿಂತ ಎಂದರ್ಥ. ಯತ್ ತತ್ ಇತ್ಯಾದಿ ಶಬ್ದಗಳು ಪಂಚಮೀವಿಭಕ್ತ್ಯಂತವಾಗಿಯೂ ಇರುತ್ತವೆ ಎಂದೂ ಹೇಳಿದೆ.

ಆದರಿಂದ 'ಯತ್ ಪದಂ ಪರಂ ನ ಪರಂ' 'ಯಾವ ಲೋಕವು ಉತ್ತಮವಾಗಿದೆ ಉತ್ತಮವಾಗಿಲ್ಲ' ಎಂಬ ವ್ಯಾಹತ ಅರ್ಥವನ್ನಾಗಲಿ 'ಯತ್‌ಪದಂ ಪರಂ ನ' 'ಯಾವ ಲೋಕವು ಉತ್ತಮವಲ್ಲ' ಎಂದು ಅಪಾರ್ಥವನ್ನಾಗಲಿ ಗ್ರಹಿಸಬಾರದು. ಇನ್ನೊಂದು ಲೋಕ ಆದಕ್ಕಿಂತ ಉತ್ತಮವಿಲ್ಲ ಎಂದರ್ಥ.

★★★

ಬ್ರಹ್ಮದೇವರು ಕಂಡ ಶ್ವೇತದ್ವೀಪದ ವೈಶಿಷ್ಟ್ಯವನ್ನು ಶುಕಮುನಿ ಇನ್ನೂ ವಿವರಿಸುತ್ತಾರೆ—

ನ ವರ್ತತೇ ಯತ್ರ ರಜಸ್ತಮಸ್ತಯೋಃ
ಸತ್ವಂ ಚ ಮಿಶ್ರಂ ನ ಚ ಕಾಲ ವಿಕ್ರಮಃ ।
ನ ಯತ್ರ ಮಾಯಾ ಕಿಮುತಾಪರೇ ಹರೇ-
ರನುವ್ರತಾ ಯತ್ರ ಸುರಾಸುರಾರ್ಚಿತಾಃ ॥ ೧೦ ॥

ಆ ಶ್ವೇತದ್ವೀಪದಲ್ಲಿ ರಜೋಗುಣ ತಮೋಗುಣಗಳೂ ಅವುಗಳಿಂದ ಮಿಶ್ರವಾದ ಸತ್ವಗುಣವೂ ಕಾಲಪ್ರಯುಕ್ತವಾದ ವೃದ್ಧಿಕ್ಷಯಾದಿಗಳೂ ತ್ರಿಗುಣಾತ್ಮಕ ಜಡಪ್ರಕೃತಿಯೂ ಕಾರ್ಯಕಾರಿಯಾಗುವುದಿಲ್ಲ ಎಂದಮೇಲೆ ಬೇರೆ ಯಾವ ಪ್ರಾಕೃತ ವಸ್ತುವೂ ಬಂಧಕವಾಗುವುದಿಲ್ಲವೆಂದು ಬೇರೆ ಏನು ಹೇಳಬೇಕು? ಅಲ್ಲಿ ಹರಿಯ ಸೇವಕರು ಸುರಾಸುರರಿಂದ ಪೂಜಿತರಾಗುತ್ತಾರೆ.

ಮಾಯಾತೀತತ್ವಾತ್ ।

ಈ ಶ್ಲೋಕದಲ್ಲಿ ಹೇಳಿದಂತೆ ಶ್ವೇತದ್ವೀಪದ ಮುಕ್ತಸ್ಥಾನದಲ್ಲಿ ಬಂಧಕಮಾಯೆ ಏನೂ ಕಾರ್ಯಕಾರಿಯಾಗದಿರುವುದರಿಂದ ಇದಕ್ಕಿಂತ ಶ್ರೇಷ್ಠವಾದ ಇನ್ನೊಂದು ಲೋಕವಿಲ್ಲ ಎಂಬ ಅಭಿಪ್ರಾಯದಿಂದ 'ಪರಂ ನ ಯತ್ ಪದಂ' ಎಂದು ಹಿಂದೆ ಹೇಳಿದೆ.

★★★

ಶ್ವೇತದ್ವೀಪದಲ್ಲಿ ಲಕ್ಷ್ಮೀದೇವಿ ಅನೇಕರೂಪಗಳಿಂದ ಹರಿಯ ಪಾದಸೇವೆ ಮಾಡುತ್ತಿದ್ದಾಳೆ ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ—

ಶ್ರೀರ್ಯತ್ರ ರೂಪಿಣ್ಯುರುಗಾಯಪಾದಯೋಃ
ಕರೋತಿ ಮಾನಂ ಬಹುಧಾ ವಿಭೂತಿಭಿಃ ।
ಪ್ರೇಂಖಶ್ರಿತಾ ಯಾಃ ಕುಸುಮಾಕರಾನುಗೈ-
ರ್ವಿಗೀಯಮಾನಾ ಪ್ರಿಯಕರ್ಮ ಗಾಯತೀ ॥ ೧೧ ॥

ಶ್ವೇತದ್ವೀಪದಲ್ಲಿ ಲಕ್ಷ್ಮೀದೇವಿ ಉಯ್ಯಾಲೆಯಾಡುವ ತನ್ನ ಅನೇಕ ರೂಪಗಳಿಂದೊಡಗೂಡಿ ಮೂರ್ತಿಮತ್ತಾಗಿ ಪ್ರಿಯಕರನಾದ ಹರಿಯ ಲೀಲೆಗಳನ್ನು ಕೊಂಡಾಡುತ್ತ ಅವನ ಪಾದಸೇವೆ ಮಾಡುತ್ತ ಬ್ರಹ್ಮಾದಿಗಳಿಂದ ಸ್ತುತಿಸಲ್ಪಡುತ್ತಾಳೆ.

ಪ್ರೇಂಖಶ್ರಿತಾಃ ಯಾಃ ವಿಭೂತಯಃ ।

'ಪ್ರೇಂಖಶ್ರಿತಾಯಾಃ' ಎಂಬುದು ಷಷ್ಠ್ಯಂತವಾದ ಒಂದು ಪದ ಎಂದಿಟ್ಟುಕೊಂಡರೆ ಅನ್ವಯವಿಲ್ಲ. ಅದಕ್ಕೆ 'ಯಾಃ ಪ್ರೇಂಖಶ್ರಿತಾಃ' ಎಂದು ಎರಡು ಪದಗಳಾಗಿಟ್ಟುಕೊಳ್ಳಬೇಕು. 'ತಾಭಿಃ' ಎಂದು ಅಧ್ಯಾಹಾರ ಮಾಡಿ 'ಉಯ್ಯಾಲೆ ಯಾಡುವ ತನ್ನ ರೂಪಗಳೊಂದಿಗೆ' ಎಂದು ಅನ್ವಯಿಸಬೇಕು.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಪ್ರೇಂಖಂ ಶ್ರಿತಾ ಯಾ' ಎಂದು ಪಾಠವಿಟ್ಟುಕೊಂಡು 'ಉಯ್ಯಾಲೆಯಾಡುವ ಲಕ್ಷ್ಮಿ' ಎಂದು ಅನ್ವಯಿಸಿದ್ದಾರೆ. 'ಯಾಃ' ಎಂಬಲ್ಲಿರುವ ವಿಸರ್ಗವನ್ನು ತೊರೆದಿದ್ದಾರೆ.

★★★

ಬ್ರಹ್ಮದೇವರು ಶ್ವೇತದ್ವೀಪದಲ್ಲಿ ಭಗವಂತನನ್ನು ಕಂಡರೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ—

ದದರ್ಶ ತತ್ರಾಖಿಲ ಸಾತ್ವತಾಂ ಪತಿಂ
ಶ್ರಿಯಃ ಪತಿಂ ಯಜ್ಞಪತಿಂ ಜಗತ್ಪತಿಂ ।
ಸುನಂದನಂದಪ್ರಬಲಾರ್ಹಣಾದಿಭಿಃ
ಸ್ವಪಾರ್ಷದ ಮುಖ್ಯೈಃ ಪರಿಸೇವಿತಂ ವಿಭುಂ ॥ ೧೪ ॥

ಸಕಲ ಮುಕ್ತರಿಗೊಡೆಯ ಲಕ್ಷ್ಮೀಪತಿ ಯಜ್ಞೇಶ್ವರ ಜಗನ್ನಾಥನಾದ ಶ್ರೀಹರಿಯನ್ನು ಶ್ವೇತದ್ವೀಪದಲ್ಲಿ ಚತುರ್ಮುಖ ದರ್ಶನ ಮಾಡಿದ. ಸುನಂದ, ನಂದ, ಪ್ರಬಲ, ಅರ್ಹಣ ಮುಂತಾದ ಮುಕ್ತದ್ವಾರಪಾಲಕರೂ ಬ್ರಹ್ಮಶೇಷ ಗರುಡಾದಿ ಮುಕ್ತದೇವತೆಗಳೂ ಭಗವಂತನನ್ನು ಸೇವಿಸುತ್ತಿರುವುದನ್ನೂ ಕಂಡ.

ಇಲ್ಲಿ 'ಸಾತ್ವತಾಂ ಪತಿಂ' ಎಂದರೇನು? ಸಾತ್ವತರೆಂದರೆ ಯಾದವರೆಂದು ಪ್ರಸಿದ್ಧ. ಶ್ವೇತದ್ವೀಪದಲ್ಲಿ ಯಾದವರು ಮಾತ್ರ ಇರುತ್ತಾರೆ ಎನ್ನಲಾಗದು. ಸಾತ್ವತ ರೆಂದರೆ ಎಲ್ಲ ಭಗವದ್ಭಕ್ತರು ಎಂದು ಶುಕದೇವ ವ್ಯಾಖ್ಯಾನ. ಭಗವಂತನ ಸೇವಕರು ಎಂದು ವಲ್ಲಭವ್ಯಾಖ್ಯಾನ. ಭಗವಂತ ಅವತಾರಮಾಡುವಾಗ ಈ ಸೇವಕರೇ ಜೊತೆಯಲ್ಲಿ ಅವತರಿಸುತ್ತಾರೆ ಎಂದೂ ವಲ್ಲಭವ್ಯಾಖ್ಯಾನ ಹೇಳುತ್ತದೆ. ಆದರೆ ಈ

ಲೋಕ ಹಿಂದೆ ಹೇಳಿದಂತೆ ಮಾಯಾತೀತ. ಬಂಧಕ ಪ್ರಕೃತಿಯ ಪ್ರಭಾವ ಇಲ್ಲಿ ಇಲ್ಲ. ಎಲ್ಲರೂ ಮುಕ್ತರು. ಅವರಿಗೆ ಅವತಾರವಿಲ್ಲ ಎಂಬುದು 'ಜಗದ್‌ವ್ಯಾಪಾರವರ್ಜಂ' ಎಂಬ ಬ್ರಹ್ಮಸೂತ್ರದ ಸಿದ್ಧಾಂತ ಆದರಿಂದ ಸಾತ್ವತರೆಂದರೆ ಮುಕ್ತರೆಂದೇ ಅರ್ಥ ಗ್ರಹಿಸಬೇಕು. ಆಗ ಸುನಂದ ನಂದ ಮುಂತಾದ ದ್ವಾರಪಾಲಕರೂ ಆದಿಪದದಿಂದ ಹೇಳಿದ ಬ್ರಹ್ಮಾದಿ ದೇವತೆಗಳೂ ಮುಕ್ತರೆಂದೇ ಗ್ರಹಿಸಬೇಕು.

ಸತ್ವಂ ತು ಶೋಭನತ್ವಂ ಸ್ಯಾತ್ ತದ್ಯುಕ್ತಾಃ ಸಾತ್ವತಾ ಮತಾಃ ।

ಇತ್ಯಧ್ಯಾತ್ಮೇ ।

ಮುಕ್ತೈಃ ಸ್ವಪಾರ್ಷದೈಃ ಪೂರ್ವೈರ್ಬ್ರಹ್ಮಾದ್ಯೈಶ್ಚೈವ ಸಂಯುತಂ ।

ಬ್ರಹ್ಮಾ ದದರ್ಶ ತಪಸಾ ಭಗವಂತಂ ಹರಿಂ ಪ್ರಭುಂ ॥ ಇತಿ ಗಾರುಡೇ ।

'ಅಖಿಲಸಾತ್ವತಾಂ ಪತಿಂ' ಎಂಬಲ್ಲಿ ಅಧ್ಯಾತ್ಮಗ್ರಂಥ ಹೇಳುವಂತೆ, 'ಸಾತ್ವತರೆಂದರೆ ಸತ್ವ, ಶುಭ ಉಳ್ಳವರು. ಮೋಕ್ಷವೆ, ಶುಭ, ಪರಮಮಂಗಳ. ಆದರಿಂದ ಸಾತ್ವತರೆಂದರೆ ಮುಕ್ತರು ಅವರಿಗೆ ಒಡೆಯ ಭಗವಂತ' ಎಂದರ್ಥ. 'ಶ್ವೇತದ್ವೀಪದಲ್ಲಿ ಇರುವವರೆಲ್ಲ ಮುಕ್ತರೆಂದಮೇಲೆ ಸುನಂದ ನಂದ ಮುಂತಾದವರೂ, ಬ್ರಹ್ಮಾದಿಗಳೂ ಮುಕ್ತರೇ. ಅವರಿಂದ ಕೂಡಿದ ಶ್ರೀಹರಿಯನ್ನು ಬ್ರಹ್ಮದೇವರು ತಪಸ್ಸಿನಿಂದ ಕಂಡರು' ಎಂದು ಗರುಡಪುರಾಣ ಹೇಳಿದೆ.

★★★

ಬ್ರಹ್ಮದೇವರು ಶ್ವೇತದ್ವೀಪದಲ್ಲಿ ಕಂಡ ಭಗವಂತನ ವೈಭವವನ್ನು ಶುಕಮುನಿ ಪರೀಕ್ಷಿತನಿಗೆ ವರ್ಣಿಸುತ್ತಾರೆ—

ಕಿರೀಟಿನಂ ಕುಂಡಲಿನಂ ಚತುರ್ಭುಜಂ
ಪೀತಾಂಶುಕಂ ವಕ್ಷಸಿ ಲಕ್ಷಿತಂ ಶ್ರಿಯಾ ।
ಅಧ್ಯರ್ಹಣೀಯಾಸನಮಾಸ್ಥಿತಂ ಪರಂ
ವೃತಂ ಚತುಃಷೋಡಶಪಂಚಶಕ್ತಿಭಿಃ ॥ ೧೬ ॥

ಕಿರೀಟಕುಂಡಲಗಳಿಂದ ಒಪ್ಪುವ ಚತುರ್ಭುಜ ಪೀತಾಂಬರಧಾರಿ ಎದೆಯಲ್ಲಿ ಶ್ರೀವತ್ಸಲಕ್ಷಣದಿಂದ ಕೂಡಿ ಶೇಷಾಸನ ಮಂಡಿತನಾಗಿದ್ದಾನೆ, ನಾಲ್ಕು ಹದಿನಾರು ಐದು ಶಕ್ತಿಗಳಿಂದ ಪರಿವೃತನಾಗಿದ್ದಾನೆ, ಶ್ವೇತದ್ವೀಪದಲ್ಲಿ ಭಗವಂತ. ಅವನನ್ನು ಬ್ರಹ್ಮ ದರ್ಶನ ಮಾಡಿದ.

ಇಲ್ಲಿ ನಾಲ್ಕು ಹದಿನಾರು ಐದು ಶಕ್ತಿಗಳೆಂದರೆ ಯಾವುವು? ಶ್ರೀಧರ

ವೀರರಾಘವ ಶುಕದೇವ ವಲ್ಲಭ ಇವರೆಲ್ಲರೂ ಪಂಚವಿಂಶತಿ ತತ್ವಗಳು ಪ್ರಕೃತಿ ಪುರುಷ ಮಹದಹಂಕಾರ ಮುಂತಾದುವು ಎಂದೇ ವ್ಯಾಖ್ಯಾನಿಸುತ್ತಾರೆ. ಆದರೆ ಈ ಹಿಂದೆ 'ನ ಯತ್ರ ಮಾಯಾ ಕಿಮುತಾಪರೇ' ಪ್ರಕೃತಿಯೆ ಇಲ್ಲವೆಂದ ಮೇಲೆ ಪ್ರಕೃತಿ ವಿಕಾರವಾದ ಮಹದಾದಿಗಳೆಲ್ಲಿ ಎಂದು ಮುಕ್ತಲೋಕದಲ್ಲಿ ಬಂಧಕ ಪ್ರಕೃತ್ಯಾದಿಗಳನ್ನು ಇಲ್ಲವೆನ್ನಲಾಗಿದೆ. ಪ್ರಕೃತ್ಯಾದಿಗಳಿದ್ದರೂ ಬಂಧಕತ್ವಕಾರ್ಯವಿಲ್ಲ ದಿರುವುದರಿಂದ ಪ್ರಕೃತ್ಯಾದಿಗಳಿಲ್ಲ ಎಂದಿದೆ. ಆದರಿಂದ ವಿರೋಧವಿಲ್ಲವೆಂದು ವಿಶ್ವನಾಥವ್ಯಾಖ್ಯಾನ ಹೇಳುತ್ತದೆ. ಕಾರ್ಯವಿಲ್ಲದಿದ್ದರೂ ಪ್ರಕೃತ್ಯಾದಿಗಳಿವೆ ಎನ್ನುವುದರಿಂದ ಏನು ವೈಭವವನ್ನು ವರ್ಣಿಸಿದಂತಾಯಿತು? ವಿಶ್ವನಾಥ ಜೀವಗೋಸ್ವಾಮಿ ವ್ಯಾಖ್ಯಾನಗಳು ನಾಲ್ಕು ಶಕ್ತಿಗಳೆಂದರೆ ಧರ್ಮಜ್ಞಾನ ವೈರಾಗ್ಯಐಶ್ವರ್ಯಗಳು, ಹದಿನಾರು ಶಕ್ತಿಗಳೆಂದರೆ ನಂದಸುನಂದಾದಿ ಹದಿನಾರು ದ್ವಾರಪಾಲಕರು, ಐದು ಶಕ್ತಿಗಳೆಂದರೆ ಕೂರ್ಮ ನಾಗರಾಜ ಗರುಡ ಛಂದಸ್ಸು ಮಂತ್ರಗಳೆಂದೂ ಐದು ಪೀಠದೇವತೆಗಳು ಎಂದೂ ವಿವರಣೆ ನೀಡುತ್ತವೆ. ಆದರೆ ಭಾಗವತತಂತ್ರದ ಪ್ರಕಾರ ಇಲ್ಲಿ ಶಕ್ತಿಗಳೆಂದರೆ ಭಗವಂತನ ಸ್ವರೂಪಭೂತವಾದ ಶಕ್ತಿಗಳು ವಿವಕ್ಷಿತವಾಗಿವೆ. ನಂದ ಸುನಂದಾದಿ ದ್ವಾರಪಾಲಕರು ಭಗವಂತನ ಸ್ವರೂಪಭೂತರಲ್ಲ—

ಇಚ್ಛಾದ್ಯಾ ಮೋಚಿಕಾದ್ಯಾಶ್ಚ ಅಣಿಮಾದ್ಯಾಶ್ಚ ಶಕ್ತಯಃ ।
ಪ್ರದಿಷ್ಟಾ ವಾಸುದೇವಾದ್ಯಾ ದಾಮೋದರಪರಾಸ್ತಥಾ ।
ಅಂಗಾನಿ ವಿಮಲಾದ್ಯಾಸ್ತು ಪ್ರಹ್ವಾದ್ಯಾತ್ಮಾದಿಕಾ ಮತಾಃ ।
ಏವಂ ಷೋಡಶಭಿಶ್ಚೈವ ಪಂಚಭಿಶ್ಚ ಹರಿಃ ಸ್ವಯಂ ।
ಚತುರ್ಭಿಶ್ಚ ವೃತೋ ನಿತ್ಯಂ ತತ್ಸ್ವರೂಪಾಶ್ಚ ಶಕ್ತಯಃ ।
ಇತಿ ಭಾಗವತತಂತ್ರೇ ।

'ಇಚ್ಛಾ ಜ್ಞಾನ ಕ್ರಿಯಾ ಬಲ ಎಂಬ ನಾಲ್ಕು ಶಕ್ತಿಗಳು, ಮೋಚಿಕಾ ಸೂಕ್ಷ್ಮಾ ಸೂಕ್ಷ್ಮಾಮೃತಾ ಜ್ಞಾನಾಮೃತಾ ಆಪ್ಯಾಯಿನೀ ವ್ಯಾಪಿನೀ ವ್ಯೋಮರೂಪಿಣೀ ಅನಂತಾ ಅಣಿಮಾ ಮಹಿಮಾ ಗರಿಮಾ ಲಘಿಮಾ ಪ್ರಾಪ್ತಿ ಪ್ರಾಕಾಮ್ಯ ಈಶಿತ್ವ ವಶಿತ್ವ ಎಂಬ ಹದಿನಾರು ಶಕ್ತಿಗಳು. ಅಥವಾ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ರೊಂದಿಗೆ ಕೇಶವಾದಿ ದ್ವಾದಶ ಹೀಗೆ ಹದಿನಾರು ಶಕ್ತಿಗಳು. ಕೃದ್ಧೋಲ್ಕ ಮಹೋಲ್ಕ ವೀರೋಲ್ಕ ದ್ಯುಲ್ಕ ಸಹಸ್ರೋಲ್ಕ ಎಂದು ಐದು ಶಕ್ತಿಗಳು. ಅಥವಾ ವಿಮಲಾ ಉತ್ಕರ್ಷಿಣೀ ಜ್ಞಾನಾ ಕ್ರಿಯಾ ಯೋಗಾ ಎಂದು ಐದು ಶಕ್ತಿಗಳು, ಪ್ರಹ್ವೀ ಸತ್ಯಾ ಈಶಾನಾ ಅನುಗ್ರಹಾ ಎಂದು ನಾಲ್ಕು ಶಕ್ತಿಗಳು, ಅಥವಾ ಆತ್ಮಾ ಅಂತರಾತ್ಮಾ ಪರ ಮಾತ್ಮಾ ಜ್ಞಾನಾತ್ಮಾ ಎಂದು ನಾಲ್ಕು ಶಕ್ತಿಗಳು'— ಹೀಗೆ ನಾಲ್ಕುಶಕ್ತಿಗಳು ಹದಿನಾರು ಶಕ್ತಿ

ಗಳು ಐದುಶಕ್ತಿಗಳೊಂದಿಗೆ ಸದಾ ಆವೃತನಾಗಿದ್ದಾನೆ. ಈ ಶಕ್ತಿಗಳು ಕೇವಲ ಆವರಣ ಗಳಲ್ಲ. ಭಗವಂತನ ಸ್ವರೂಪಗಳೂ ಆಗಿವೆ ಎಂದು ಭಾಗವತ ತಂತ್ರದಲ್ಲಿ ಹೇಳಿದೆ.

★★★

ಬ್ರಹ್ಮದೇವರು ಪರಮಾತ್ಮನನ್ನು ಕಂಡು ಸಂತೋಷದಿಂದ ಪಾದಗಳಿಗೆರಗಿ ದರು. ಪರಮಾತ್ಮ ಅವರ ಕೈಹಿಡಿದು 'ಇಷ್ಟವಾದ ವರವನ್ನು ಕೇಳು. ನೀನು ನನ್ನ ತಪಸ್ಸು ಮಾಡಿರುವಿ, ಆ ತಪಸ್ಸಿನ ಮಹಿಮೆ ನನ್ನ ಲೋಕದ ದರ್ಶನಲಾಭ' ಎಂದ, ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ—

ಮನೀಷಿತಾನುಭಾವೋಽಯಂ ಮಮ ಲೋಕಾವಲೋಕನಂ
ಯದುಪಶ್ರುತ್ಯ ರಹಸಿ ಚಕರ್ಥ ಪರಮಂ ತಪಃ ॥ ೨೧ ॥

ತಪ ಎಂಬ ಶಬ್ದವನ್ನು ಕೇಳಿ ಗೋಪ್ಯವಾಗಿ ಉತ್ತಮ ತಪಸ್ಸು ಮಾಡಿರುವಿ. ನನಗೆ ಇಷ್ಟವಾದ ಈ ತಪಸ್ಸಿನ ಮಹಿಮೆ ನಿನಗೆ ನನ್ನ ಲೋಕದ ದರ್ಶನ ಲಾಭ.

ಇಲ್ಲಿ 'ಮನೀಷಿತಾನುಭಾವಃ' ಎಂದರೆ ಶ್ರೀಧರ ಶುಕದೇವ ವಲ್ಲಭರ ವ್ಯಾಖ್ಯಾನ ಪ್ರಕಾರ 'ನನ್ನ ಸಂಕಲ್ಪದ ಮಹಿಮೆ' ಎನ್ನುತ್ತಾನೆ ಭಗವಂತ. 'ನೀನು ನಿನ್ನ ತಪೋಬಲದಿಂದ ನನ್ನ ಲೋಕವನ್ನು ಕಂಡೆನೆಂದುಕೊಳ್ಳಬೇಡ, ನಿನಗೆ ಅದನ್ನು ತೋರಿಸುವ ಸಂಕಲ್ಪವನ್ನು ನಾನು ಮಾಡಿದ್ದೆನಷ್ಟೆ' ಎನ್ನುತ್ತಾನೆ. ಆದರೆ ಬ್ರಹ್ಮದೇವರಿಗೆ ಇಂಥ ಅಹಂಕಾರವಿರುವುದು ಅಸಂಭಾವಿತ. ಅದರಿಂದ ಮನೀಷಿತವೆಂದರೆ ಇಚ್ಛೆಯಲ್ಲ, ಇಚ್ಛಾವಿಷಯ, ಇಷ್ಟ. 'ತಪಸ್ಸು ಇಷ್ಟವಾದ್ದರಿಂದಲೆ ನಾನು 'ತಪ' ಎಂದು ಆದೇಶ ನೀಡಿದೆ. ಅದರಂತೆ ನೀನು ತಪಸ್ಸು ಮಾಡಿದೆ' ಎನ್ನುತ್ತಾನೆ ಭಗವಂತ.

ಮನೀಷಿತಂ ತಪಃ ।

ಮನೀಷಿತ ಎಂದರೆ ಪರಮಾತ್ಮನಿಗೆ ಇಷ್ಟವಾದ ತಪಸ್ಸು.

★★★

'ನೀನು ತಪಸ್ಸು ಮಾಡಿದುದು ನನ್ನ ಪ್ರೇರಣೆಯಿಂದ. ನನಗೆ ತಪಸ್ಸು ಬಹಳ ಇಷ್ಟ. ತಪಸ್ಸೆಂದರೆ ಜ್ಞಾನ. ನಾನು ಜ್ಞಾನಸ್ವರೂಪ' ಎಂದು ಪರಮಾತ್ಮ ಬ್ರಹ್ಮನಿಗೆ ಹೇಳುತ್ತಾನೆ—

ಪ್ರತ್ಯಾದಿಷ್ಟಂ ಮಯಾ ತತ್ರ ತ್ವಯಿ ಕರ್ಮವಿಮೋಹಿತೇ ।
ತಪೋ ಮೇ ಹೃದಯಂ ಸಾಕ್ಷಾದಾತ್ಮಾಽಹಂ ತಪಸೋಽನಘ ॥ ೨೨ ॥

ಸೃಜಾಮಿ ತಪಸ್ಯೈವೇದಂ ಗ್ರಸಾಮಿ ತಪಸಾ ಪುನಃ ।
ಬಿಭರ್ಮಿ ತಪಸಾ ವಿಶ್ವಂ ವೀರ್ಯಂ ಮೇ ದುಸ್ತರಂ ತಪಃ ॥ ೨೩ ॥

ಸೃಷ್ಟಿಯ ಆರಂಭದಲ್ಲಿ ಸೃಷ್ಟಿ ಹೇಗೆ ಮಾಡಬೇಕೆಂಬುದನ್ನು ನೀನು ಅರಿಯದಿದ್ದಾಗ ತಪಸ್ಸು ಮಾಡೆಂದು ನಾನೆ ನಿನಗೆ ಆದೇಶಿಸಿದೆ. ಜ್ಞಾನರೂಪವಾದ ತಪಸ್ಸು ನನಗೆ ಬಲು ಪ್ರಿಯ. ತಪಸ್ಸಿನಿಂದಲೆ ನಾನು ಲಭ್ಯ. ತಪಸ್ಸಿನಿಂದಲೆ ಈ ಪ್ರಪಂಚವನ್ನು ಸೃಜಿಸುತ್ತೇನೆ. ತಪಸ್ಸಿನಿಂದಲೆ ಲಯ ಮಾಡುತ್ತೇನೆ. ತಪಸ್ಸಿನಿಂದಲೆ ಪಾಲಿಸುತ್ತೇನೆ. ಏಕೆಂದರೆ ನಾನು ಜ್ಞಾನಸ್ವರೂಪ. ನನ್ನ ವೀರ್ಯಬಲ ಮುಂತಾದುವು ನನ್ನ ಅಪಾರ ಜ್ಞಾನಸ್ವರೂಪವೆ.

ಇಲ್ಲಿ ವಲ್ಲಭವ್ಯಾಖ್ಯಾನ ಹೇಳುತ್ತದೆ- 'ಸೃಷ್ಟಿಯನ್ನು ಸ್ವಾರ್ಥಕ್ಕಾಗಿ ಮಾಡ ಬೇಕೋ ಪರಾರ್ಥಕ್ಕೋ ಎಂದು ಬ್ರಹ್ಮ ಸಂದೇಹಪಟ್ಟಾಗ' ಎಂದು. ಆದರೆ ಬ್ರಹ್ಮನೆಂದೂ ಸ್ವಾರ್ಥಕ್ಕಾಗಿ ಏನೂ ಮಾಡುವುದಿಲ್ಲ. ಅದರಿಂದ ಹೀಗೆ ಹೇಳಬೇಕು—

ಕರ್ಮವಿಮೋಹಿತೇ ಇದಂ ಕಾರ್ಯಮಿತ್ಯಜಾನತಿ । ಹೃದಯಂ ಪ್ರಿಯಂ ।
ಪ್ರಿಯಂ ಹೃದಯಮುದ್ರಿಕ್ತಂ ಕಾಂತಮಿತ್ಯಭಿಧೀಯತೇ। ಇತ್ಯಭಿಧಾನಾತ್।
ತಪಃ ಪ್ರಿಯಂ ಸದಾ ವಿಷ್ಣೋಸ್ತಪಸ್ಯೈವಾಪ್ಯತೇ ಹರಿಃ ।
ಸ್ವಯಂ ಚ ತಪಸ್ಯೈವೇದಂ ಬಿಭರ್ತಿ ಜ್ಞಾನಮೇವ ಹಿ ।
ತಪಃಶಬ್ದಾಭಿಧಂ ಪ್ರೋಕ್ತಂ ಜ್ಞಾನರೂಪೋ ಹರಿರ್ಯತಃ ।
ಜ್ಞಾನವೀರ್ಯೋ ಜ್ಞಾನಬಲೋ ಜ್ಞಾನಾನಂದ ಉದಾಹೃತಃ ॥
ಇತಿ ಬೃಹತ್ಸಂಹಿತಾಯಾಂ ।

'ಕರ್ಮವಿಮೋಹಿತೇ' ಎಂದರೆ 'ಬ್ರಹ್ಮ ಸೃಷ್ಟಿಕಾರ್ಯದಲ್ಲಿ ಅಜ್ಞಾನ ಹೊಂದಿದ್ದಾಗ' ಎಂದರ್ಥ, ಭ್ರಾಂತಿ ಸಂದೇಹಗಳನ್ನು ಹೊಂದಿದ್ದಾಗ ಎಂದಲ್ಲ. 'ಹೃದಯಂ' ಎಂದರೆ ಇಲ್ಲಿ ಬಹಳ ಪ್ರಿಯವಾದುದು ಎಂದರ್ಥ. ಏಕೆಂದರೆ ಕೋಶದಲ್ಲಿ 'ಪ್ರಿಯ ಹೃದಯ ಉದ್ರಿಕ್ತ ಕಾಂತ ಇವು ಸಮಾನಾರ್ಥಕಗಳೆ'ಂದು ಉಕ್ತವಾಗಿದೆ. 'ಜ್ಞಾನರೂಪವಾದ ತಪಸ್ಸೇ ವಿಷ್ಣುವಿಗೆ ಸದಾ ಪ್ರಿಯ. ಜ್ಞಾನದಿಂದಲೆ ಜೀವನಿಗೆ ವಿಷ್ಣು ಲಭ್ಯನಾಗುತ್ತಾನೆ. ತಾನು ಜ್ಞಾನದಿಂದಲೆ ಈ ಪ್ರಪಂಚವನ್ನು ಪಾಲಿಸುತ್ತಾನೆ. ಜ್ಞಾನವೆ ತಪಸ್ಸೆಂಬ ಶಬ್ದದಿಂದ ಉಕ್ತವಾಗುತ್ತದೆ. ಹರಿ ಜ್ಞಾನಸ್ವರೂಪನಾದ್ದರಿಂದ ಅವನ ವೀರ್ಯ ಬಲ ಆನಂದಗಳು ಜ್ಞಾನರೂಪವೇ ಆಗಿವೆ' ಎಂದು ಬೃಹತ್ಸಂಹಿತೆಯಲ್ಲಿ ಉಕ್ತವಾಗಿದೆ.

★★★

'ಇಷ್ಟವಾದ ವರವನ್ನು ಕೇಳು' ಎಂದು ಶ್ರೀಹರಿ ಆಜ್ಞೆ ಮಾಡಿದ್ದರಿಂದ ಬ್ರಹ್ಮದೇವರು ಕೇಳಿದರು, 'ನಿನ್ನ ಪರ ಅವರ ರೂಪಗಳನ್ನು ಉಪದೇಶಿಸು' ಎಂದು. ಅದಕ್ಕೆ ಶ್ರೀಹರಿ ತನ್ನ 'ಪರ' ಅಂದರೆ ಉತ್ತಮವಾದ ಸ್ವರೂಪವನ್ನು ತಿಳಿಸುತ್ತೇನೆ ಎನ್ನುತ್ತಾನೆ—

ಜ್ಞಾನಂ ಪರಮಗುಹ್ಯಂ ಮೇ ಯದ್ ವಿಜ್ಞಾನಸಮನ್ವಿತಂ
ಸರಹಸ್ಯಂ ತದಂಗಂ ಚ ಗೃಹಾಣ ಗದಿತಂ ಮಯಾ ॥ ೩೦ ॥

ಮುಮುಕ್ಷುಗಳೆಲ್ಲರೂ ಸಾಧಾರಣವಾಗಿ ತಿಳಿಯಲೇಬೇಕಾಗಿರುವ ನನ್ನ ಪರರೂಪದ ಸ್ವಾತಂತ್ರ್ಯಾದಿ ಮಹಿಮೆಗಳನ್ನೂ ಆಯಾ ಮುಮುಕ್ಷುಗಳಿಗೆ ಬಿಂಬೋಪಾಸನೆಗೆ ಯೋಗ್ಯವಾದ ಅದರ ವಿಶೇಷಗುಣಗಳನ್ನೂ ಉಪನಿಷತ್ತುಗಳಲ್ಲಿ ಹೇಳಿದೆ. ಅದು ಗೋಪ್ಯ. ವೇದಾಂಗ ನಿರುಕ್ತಾದಿಗಳೂ ಅದರ ಜ್ಞಾನಕ್ಕೆ ಸಾಧನಗಳಾಗಿವೆ. ಅವೆಲ್ಲವನ್ನೂ ನಿನಗೆ ಹೇಳುತ್ತೇನೆ, ಕೇಳು.

ಮುಮುಕ್ಷುಗಳೆಲ್ಲರೂ ಸಾಧಾರಣವಾಗಿ 'ಪರಮಾತ್ಮನೇ ಸ್ವತಂತ್ರ 'ಉಳಿದ ಎಲ್ಲರೂ ಅಸ್ವತಂತ್ರರು' ಎಂದು ಮುಂತಾಗಿ ತಿಳಿಯಲೇಬೇಕು. ಇದು 'ಜ್ಞಾನ' ಎನಿಸುತ್ತದೆ. ಆಯಾ ಮುಮುಕ್ಷುವು ತನ್ನ ಯೋಗ್ಯತಾನುಸಾರ ಪರಮಾತ್ಮನ ವಿಶೇಷಗುಣಗಳನ್ನೂ ಉಪಾಸನೆ ಮಾಡಬೇಕು. ಉದಾ: ಬ್ರಹ್ಮದೇವರು ಸರ್ವವೇದ ಪ್ರತಿಪಾದ್ಯವಾದ ಭಗವಂತನ ಸರ್ವರೂಪ ಸರ್ವಗುಣ ಸರ್ವಕರ್ಮಗಳನ್ನೂ ಉಪಾಸನೆ ಮಾಡಬೇಕು. ಅದು ಅವರಿಗೆ ಯೋಗ್ಯ. ಅದರಿಂದ ಅದರ ಜ್ಞಾನ ಅವರಿಗೆ 'ವಿಜ್ಞಾನ' ಎನಿಸುತ್ತದೆ. ಅನ್ಯರು ವೇದೋಕ್ತವಾದ ಎಲ್ಲ ರೂಪ ಗುಣ ಕರ್ಮಗಳ ಉಪಾಸನೆಗೆ ಶಕ್ತರಲ್ಲ. ಅದರಿಂದ ಅವರಿಗೆ ಅದು ವಿಜ್ಞಾನವಲ್ಲ. ಮುಂದಿನ ಶ್ಲೋಕದಲ್ಲಿ—

ಯಾವಾನಹಂ ಯಥಾಭಾವೋ ಯದ್ರೂಪಗುಣಕರ್ಮಕಃ ।
ತಥೈವ ತತ್ವವಿಜ್ಞಾನಮಸ್ತು ತೇ ಮದನುಗ್ರಹಾತ್ ।

ಎಂದು ಪರಮಾತ್ಮ ಬ್ರಹ್ಮದೇವರಿಗೆ ವೇದೋಕ್ತ ಸಕಲ ರೂಪಗುಣಕರ್ಮಗಳ 'ವಿಜ್ಞಾನ'ವನ್ನು ಅನುಗ್ರಹಿಸುತ್ತಾನೆ. ಮುಂದೆ ಚತುಃಶ್ಲೋಕೀಭಾಗವತದಲ್ಲಿ 'ಅಹಮೇವಾಸಮಗ್ರೇ ಚ' ಎಂದು ಎಲ್ಲ ಮುಮುಕ್ಷುಗಳೂ ಉಪಾಸನೆ ಮಾಡಬೇಕಾದ ಸ್ವಾತಂತ್ರ್ಯಾದಿ ಗುಣಗಳ 'ಜ್ಞಾನ'ದ ವಿವರಣೆ ಬರುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಜ್ಞಾನ-ವಿಜ್ಞಾನ ಶಬ್ದಗಳಿಗೆ ನಾನಾ ಬಗೆಯಿಂದ ಅರ್ಥ ಹೇಳಿದ್ದಾರೆ. ಶ್ರೀಧರೀಯದಲ್ಲಿ ಜ್ಞಾನವೆಂದರೆ ಶಾಸ್ತ್ರೋಕ್ತವಾದ ಜ್ಞಾನ. ವಿಜ್ಞಾನವೆಂದರೆ ಅನುಭವ ಎಂದಿದೆ. ಅನುಭವಸಹಿತವಾದ ಶಾಸ್ತ್ರೋಕ್ತ ಭಗವತ್

ಸ್ವರೂಪಜ್ಞಾನವನ್ನು ಭಗವಂತ ಕೊಡುತ್ತಾನೆ ಎಂದರ್ಥ. ವಲ್ಲಭಾಚಾರ್ಯ ವ್ಯಾಖ್ಯಾನ ಇದನ್ನು ಒಪ್ಪುವುದಿಲ್ಲ. 'ಜ್ಞಾನ' ಎಂದರೆ ಅಖಂಡ ಅನುಭವ. ವಿಜ್ಞಾನ ವೆಂದರೆ ವಿವಿಧ ಪ್ರಪಂಚ ವಿಷಯಕಜ್ಞಾನ ಎನ್ನುತ್ತಾರೆ. ಶುಕದೇವನ ವ್ಯಾಖ್ಯಾನದಲ್ಲಿ ಜ್ಞಾನ ಎಂದರೆ ಮುಖ್ಯವಾದ ಸ್ವರೂಪಜ್ಞಾನ. ವಿಜ್ಞಾನ ಎಂದರೆ ವಿವಿಧ ಗುಣಶಕ್ತಿಗಳ ಅವಾಂತರಜ್ಞಾನ. ವೀರರಾಘವ ವ್ಯಾಖ್ಯಾನದಲ್ಲಿ ಜ್ಞಾನವೆಂದರೆ ಮುಖ್ಯವಾಗಿ ತಿಳಿಯಬೇಕಾದ ಭಗವಂತನ ಸ್ವರೂಪಜ್ಞಾನ, ವಿಜ್ಞಾನವೆಂದರೆ ಅದನ್ನು ತಿಳಿಸುವ ಶಾಸ್ತ್ರ[೧] ಇದೆಲ್ಲವೂ ಸ್ವೇಚ್ಛಾನುಸಾರ ಕಲ್ಪಿಸಿದ ಅರ್ಥಗಳು. ಪ್ರಮಾಣ ಸಿದ್ಧವಲ್ಲ.

ಯೇನ ಯೇನ ಯಥಾ ಜ್ಞಾತ್ವಾ ನಿಯತಂ ಮುಕ್ತಿರಾಪ್ಯತೇ ।
ತದ್ ವಿಜ್ಞಾನಮಿತಿ ಪ್ರೋಕ್ತಂ, ಜ್ಞಾನಂ ಸಾಧಾರಣಂ ಸ್ಮೃತಂ ।
ಇತಿ ವಾಮನೇ ।

ಯಾವ ಯಾವ ಮುಮುಕ್ಷುವಿಗೆ ಎಷ್ಟು ಗುಣಗಳನ್ನು ಬಿಂಬನಲ್ಲಿ ಉಪಾಸನೆ ಮಾಡಿದರೆ ನಿಶ್ಚಿತವಾಗಿ ಮುಕ್ತಿ ದೊರೆಯುವುದೊ ಅಷ್ಟು ಗುಣಗಳ ಜ್ಞಾನ ಆ ಮುಮುಕ್ಷುವಿಗೆ 'ವಿಜ್ಞಾನ' ಏನಿಸುತ್ತದೆ. ಸಾಧಾರಣವಾಗಿ ಎಲ್ಲ ಮುಮುಕ್ಷುಗಳೂ ಉಪಾಸನೆ ಮಾಡಬೇಕಾದ ಗುಣಗಳ ಜ್ಞಾನ 'ಜ್ಞಾನ'ವೆನಿಸುತ್ತದೆ ಎಂದು ವಾಮನಪುರಾಣ ಹೇಳಿದೆ.

★★★

ನಿನ್ನ 'ಪರ' ರೂಪವೆನಿಸಿದ ಸ್ವರೂಪ ಸ್ವತಂತ್ರ 'ಅವರ' ರೂಪವೆನಿಸಿದ ಪ್ರಪಂಚ ಅಸ್ವತಂತ್ರ ಹೇಗೆಂಬುದನ್ನು ನನಗೆ ಉಪದೇಶಿಸು ಎಂದು ಬ್ರಹ್ಮದೇವರು ಕೇಳಿಕೊಂಡಿರುವುದರಿಂದ ಶ್ರೀಹರಿ ತಾನೇ ಸ್ವತಂತ್ರ ಎಂಬುದನ್ನು ಯುಕ್ತಿ ಯುಕ್ತವಾಗಿ

---

೧. ಜ್ಞಾನಂ ಶಾಸ್ತ್ರೋಕ್ತಂ ವಿಜ್ಞಾನಮನುಭವಃ । -ಶ್ರೀಧರಃ

ಮೇ ಮಮ ಭಗವತೋ ಜ್ಞಾನಂ ಶಬ್ದದ್ವಾರಾ ಯಾಥಾರ್ಥ್ಯನಿರ್ಧಾರಣಂ ವಿಜ್ಞಾನೇನ ಮದನುಭವೇನಾಪಿ ಯುಕ್ತಂ । -ಜೀವಗೋಸ್ವಾಮೀ

ನ ಕೇವಲಂ ಮದ್ರೂಪಸ್ಯ ಜ್ಞಾನಮೇವ ತುಭ್ಯಂ ದದಾಮಿ, ಅಪಿತು ವಿಜ್ಞಾನೇನಾನುಭವೇನ ಸಮನ್ವಿತಂ ಯತ್ ತದಪಿ । -ವಿಶ್ವನಾಥಃ

ವಿವಿಧ ಜ್ಞಾನಂ ವಿಜ್ಞಾನಂ । ಅಸ್ಯಾನುಭವಸ್ಯ ಜಾತತ್ವಾತ್ ಅಸ್ಯೈವ ಜ್ಞಾನರೂಪತ್ವಾತ್ ವಿಜ್ಞಾನಂ ನಾನುಭವಃ । -ವಲ್ಲಭಃ

ವಿಜ್ಞಾನೇನ ವಿವಿಧ ಗುಣಶಕ್ತಿ ವಿಷಯಕೇಣಾವಾಂತರಜ್ಞಾನೇನ ಸಹಿತಂ ಏವಂಭೂತಮಸ್ಮದ್‌ವಿಷಯಕಂ ಜ್ಞಾನಂ । -ಶುಕದೇವಃ

ಜ್ಞಾನಂ ಪ್ರಾಧಾನ್ಯೇನ ಜ್ಞಾತವ್ಯ ಭಗವತ್‌ಸ್ವರೂಪ ವಿಷಯಕಂ ಜ್ಞಾನಂ ವಿಜ್ಞಾಯತೇಽನೇನೇತಿ ವಿಜ್ಞಾನಂ ಶಾಸ್ತ್ರಂ ಯೋಗಶ್ಚ । ತಾಭ್ಯಾಂ ಸಹಿತಂ । -ವೀರರಾಘವಃ

ಉಪದೇಶಿಸಲು ಚತುಃ ಶ್ಲೋಕೀ ಮೂಲ ಭಾಗವತದ ಮೊದಲನೆ ಶ್ಲೋಕವನ್ನು ಉಪದೇಶಿಸುತ್ತಾನೆ—

ಅಹಮೇವಾಸಮಗ್ರೇ ಚ ನಾನ್ಯದ್ ಯತ್ ಸದಸತ್ ಪರಂ ।
ಪಶ್ಚಾದಹಂ ತ್ವಮೇತಚ್ಚ ಯೋऽವಶಿಷ್ಯೇತ ಸೋऽಸ್ಮ್ಯಹಂ ॥ ೩೨ ॥

ಸೃಷ್ಟಿಗೆ ಮೊದಲೂ ನಾನೇ ಸ್ವತಂತ್ರನಾಗಿದ್ದೆ. ಅನಂತರ ಪ್ರಲಯಕಾಲ ದಲ್ಲಿಯೂ ಸ್ವತಂತ್ರವಾಗಿ ಉಳಿಯುವವನು ನಾನೇ ಆಗಿರುತ್ತೇನೆ. ಅದರಿಂದ ಸ್ಥಿತಿಕಾಲದಲ್ಲಿಯೂ ನಾನೇ ಸ್ವತಂತ್ರ, ಬೇರೆ ಯಾವುದೇ ಕಾರ್ಯಕಾರಣ ಪ್ರಪಂಚ ವಾಗಲಿ ನೀನಾಗಲಿ ಈ ಜೀವಸಮೂಹವಾಗಲಿ ಸ್ವತಂತ್ರವಾಗಿ ಇಲ್ಲ ಎನ್ನುವುದು ಸಿದ್ಧವಾಗುತ್ತದೆ.

ಸೃಷ್ಟಿಗಿಂತ ಮೊದಲಾಗಲಿ ಅನಂತರ ಪ್ರಲಯವಾದ ಬಳಿಕವಾಗಲಿ ಜೀವರಿಲ್ಲ ಎನ್ನುವಂತಿಲ್ಲ. ಜೀವರು ಅನಾದಿ ನಿತ್ಯರು. ಆದರೆ ಅಸ್ವತಂತ್ರರಾಗಿ ಸುಪ್ತ್ಯವಸ್ಥೆಯಲ್ಲಿರುತ್ತಾರೆ. ಸ್ಥಿತಿಕಾಲದಲ್ಲಿ ಮಾತ್ರ ಎಚ್ಚರವಿದ್ದು ತಾವು ಸ್ವತಂತ್ರರೆಂದು ಭ್ರಮಿಸುತ್ತಾರೆ. ಇದು ಭ್ರಮೆ ಎನ್ನಲೇಬೇಕು. ಮೊದಲು ಕಡೆಗಳಲ್ಲಿ ಅಸ್ವತಂತ್ರರಾಗಿರುವವರು ನಡುವೆ ಸ್ವತಂತ್ರರೆನ್ನಲು ಶಕ್ಯವಿಲ್ಲ ತಾನೆ? ಬ್ರಹ್ಮದೇವರು ಕೇಳಿದ್ದರು, 'ಜೀವರಿಗೆ ತಾವು ಸ್ವತಂತ್ರರೆಂದು ಅನುಭವವಿರುವಾಗ ಅವರು ಅಸ್ವತಂತ್ರರೇಕೆ? ನೀನೊಬ್ಬನೆ ಸ್ವತಂತ್ರ ಹೇಗೆ?' ಎಂದು ಅದಕ್ಕೆ ಉತ್ತರವಾಗಿ ಶ್ರೀಹರಿ ಹೇಳುತ್ತಾನೆ, 'ಜೀವರ ಈ ಸ್ವಾತಂತ್ರ್ಯಾನುಭವ ಕೇವಲ ಭ್ರಮೆ' ಎಂದು.

ಇಲ್ಲಿ ಶ್ರೀಧರೀಯ ವ್ಯಾಖ್ಯಾನದ ಪ್ರಕಾರ ಶ್ಲೋಕಕ್ಕೆ ಹೀಗೆ ಅರ್ಥ— 'ಸೃಷ್ಟಿಗೆ ಮೊದಲು ನಾನೊಬ್ಬನೆ ಇದ್ದೆ. ಬೇರೆ ಸ್ಥೂಲಸೂಕ್ಷ್ಮ ಪ್ರಪಂಚ ಇರಲಿಲ್ಲ. ಅವು ನನ್ನಲ್ಲೇ ಲೀನವಾಗಿದ್ದರಿಂದ ನಾನೊಬ್ಬನೆ ಇದ್ದೆ. ಆಗ ನಾನು 'ಆಸಮೇವ' ಕೇವಲ ಇದ್ದೆ. ಏನೂ ಸೃಷ್ಟಿ ಮಾಡದೆ ಸುಮ್ಮನಿದ್ದೆ. ಸೃಷ್ಟಿಯ ಅನಂತರವೂ ನಾನೊಬ್ಬನೆ ಇದ್ದೇನೆ. ಏಕೆಂದರೆ ಈ ಜಗತ್ತು ನಾನೇ ಆಗಿದ್ದೇನೆ. ಪ್ರಲಯದಲ್ಲಿ ಉಳಿಯುವವನೂ ನಾನೆ. ಹೀಗೆ ನಾನು ಅನಾದಿ ನಿತ್ಯ, ಅದ್ವಿತೀಯನಾಗಿದ್ದೇನೆ'.[೧] —ಇದು ಸರಿಯಲ್ಲ. ಲಯಕಾಲದಲ್ಲಿಯೂ ಜೀವರಿದ್ದರು, ನಿದ್ದೆ ಮಾಡುತ್ತಿದ್ದರು. ಪ್ರಕೃತಿಯೂ ಇದ್ದಿತು. ಕಾಲಅದೃಷ್ಟಾದಿಗಳಿದ್ದುವು. ಸ್ಥೂಲ ಪ್ರಪಂಚ ಮಾತ್ರವಿರಲಿಲ್ಲ, ಪ್ರಕೃತಿ ಕಾಲಾದಿಗಳು ಬ್ರಹ್ಮನಲ್ಲಿ ಲೀನವಾಗಿದ್ದುವು ಎನ್ನುವುದೂ ಅರ್ಥಶೂನ್ಯ. ಆದರಿಂದ ಸದಸತ್ತುಗಳು ಅಂದರೆ ಸ್ಥೂಲಸೂಕ್ಷ್ಮಗಳು ಇರಲಿಲ್ಲವೆಂದರೆ ಸ್ವತಂತ್ರವಾಗಿರಲಿಲ್ಲ, ಸ್ವತಂತ್ರವಾಗಿ ಹರಿಯೊಬ್ಬನೆ ಇದ್ದನೆಂದು

---

೧. ಅಹಮೇವಾಗ್ರೇ ಸೃಷ್ಟೇಃ ಪೂರ್ವಮಾಸಂ ಸ್ಥಿತಃ । ನಾನ್ಯತ್ ಕಿಂಚಿತ್ । ಯತ್ ಸತ್ ಸ್ಥೂಲಂ, ಅಸತ್ ಸೂಕ್ಷ್ಮಂ, ಪರಂ ತಯೋಃ ಕಾರಣಂ ಪ್ರಧಾನಂ, ತಸ್ಯಾಪ್ಯಂತರ್ಮುಖತಯಾ ತದಾ ಮಯ್ಯೇವ ಲೀನತ್ವಾತ್ । -ಶ್ರೀಧರಃ

ಹೇಳಬೇಕಾಗುತ್ತದೆ. ಅದ್ವೈತದಲ್ಲಿಯೂ ಲಯಕಾಲದಲ್ಲಿ 'ತಮ ಆಸೀತ್' ಎಂದು ಅಜ್ಞಾನದ ಅಸ್ತಿತ್ವ ಒಪ್ಪಿ ಅದು ಅಪಾರಮಾರ್ಥಿಕ, ಪಾರಮಾರ್ಥಿಕವಾಗಿ ಬ್ರಹ್ಮ ಒಂದೇ ಇತ್ತು ಎನ್ನಲಾಗಿದೆ. ಅದರಿಂದ ಶ್ಲೋಕಕ್ಕೆ ಹೀಗೆ ಅರ್ಥ ಹೇಳಬೇಕು—

ಪರಂ ಸ್ವತಂತ್ರಂ ನ ।

ವಿಷ್ಣೋರಧೀನಂ ಪ್ರಾಕ್ ಸೃಷ್ಟೇಸ್ತಥೈವ ಚ ಲಯಾದನು ।
ಅಸ್ಯ ಸತ್ವಪ್ರವೃತ್ತ್ಯಾದಿ ವಿಶೇಷೇಣಾಧಿಗಮ್ಯತೇ ।
ಸ್ವಾತಂತ್ರ್ಯಂ ಸ್ಥಿತಿಕಾಲೇ ತು ಕಥಂಚಿದ್ ಬುದ್ಧಿಮೋಹತಃ ।
ಪ್ರತೀಯಮಾನಮಪಿ ತು ತಸ್ಮಾನ್ನೈವೇತಿ ಗಮ್ಯತಾಂ ।
ಜನಿಷ್ಯೇಽಹಂ ಲಯಿಷ್ಯೇಽಹಮಿತಿ ನ ಹ್ಯಭಿಸಂಧಿತಃ ।
ಅತೋ ಜೀವನಮಪ್ಯೇತದ್ ಭವೇದೀಶಾಭಿಸಂಧಿತಂ ।
ಅತಃ ಸ್ವರೂಪಭೇದೇಽಪಿ ಹ್ಯಾತ್ಮೈವೇದಮಿತಿ ಶ್ರುತಿಃ ।
ವದತ್ಯಸ್ಯೇಶತಂತ್ರತ್ವಾದ್ಯಥಾಽಶಕ್ತಸ್ತ್ವಸನ್ನಿತಿ ।
ವಿದ್ಯಂತೇ ಹಿ ತದಾ ಜೀವಾಃ ಕಾಲಕರ್ಮಾದಿಕಂ ತಥಾ ।
ಕ್ವಾನ್ಯಥಾ ಹಿ ಪುನಃ ಸೃಷ್ಟಿಃ ಪೂರ್ವಕರ್ಮಾನುಸಾರಿಣೀ ॥

ಇತಿ ಬ್ರಹ್ಮತರ್ಕೇ । ತ್ವಮೇತಚ್ಚ ಪರಂ ನ ಭವತಿ । ಸ್ವತಂತ್ರಂ ನ ॥

'ಸದಸತ್ ಪರಂ ನಾಸೀತ್' ಎಂದರೆ ಕಾರ್ಯಕಾರಣ ಪ್ರಪಂಚ ಸ್ವತಂತ್ರವಾಗಿರಲಿಲ್ಲ' ಎಂದರ್ಥ. ಏಕೆಂದರೆ ಬ್ರಹ್ಮತರ್ಕ ಹೀಗೆ ಹೇಳಿದೆ— 'ಅಹಮೇವಾಸಮಗ್ರೇ' ಎಂದರೆ ಸೃಷ್ಟಿಗೆ ಮೊದಲು ನಾನೊಬ್ಬನೆ ಇದ್ದೆ. 'ಪಶ್ಚಾದ್ ಯೋಽವಶಿಷ್ಯೇತ ಸೋಽಸ್ಮ್ಯಹಂ' ಎಂದರೆ ಲಯದಲ್ಲಿಯೂ ನಾನೊಬ್ಬನೆ ಇದ್ದೇನೆ, ಅಂದರೆ ಸ್ವತಂತ್ರನಾಗಿದ್ದೇನೆ ಎಂದರ್ಥ. ಸೃಷ್ಟಿಗೆ ಮೊದಲೂ ಅನಂತರ ಪ್ರಲಯದಲ್ಲಿಯೂ ಸ್ವತಂತ್ರವಾಗಿ ಇಲ್ಲದಿರುವ ಜೀವಜಡಪ್ರಪಂಚದ ಅಸ್ತಿತ್ವ ಪ್ರವೃತ್ತಿ ಮುಂತಾದುವು ಆ ಕಾಲದಲ್ಲಿ ಸ್ವತಂತ್ರವಾಗಿ ಅನುಭವಕ್ಕೆ ಬಾರದಿರುವುದರಿಂದ ವಿಷ್ಣುವಿನ ಅಧೀನವೆಂದು ಸಿದ್ಧಿಸುವುದು. ಸೃಷ್ಟಿಗೆ ಮೊದಲೂ ಕಡೆಯಲ್ಲೂ ಅಸ್ವತಂತ್ರರಾದವರು ನಡುವೆ ಸ್ವತಂತ್ರರು ಎನ್ನಲಾಗದು. ವಿಷ್ಣುವಿನ ಅಧೀನರೆಂದೇ ಹೇಳಬೇಕು. ಸ್ಥಿತಿಕಾಲದಲ್ಲಿ ಜೀವರಿಗೆ ಸ್ವಾತಂತ್ರ್ಯಾನುಭವವಿರುವುದರಿಂದ ಈ ಅನುಮಾನ ಅನುಭವಬಾಧಿತ ಎಂಬ ಶಂಕೆ ಸಲ್ಲದು ಏಕೆಂದರೆ ಈ ಅನುಭವ ಮನಸ್ಸಿನಲ್ಲಿರುವ ಅಜ್ಞಾನದಿಂದ ಬಂದ ಭ್ರಮೆಯಾಗಿದೆ. ಅದರಿಂದ ಸ್ವಾತಂತ್ರ್ಯ ಅನುಭವದಲ್ಲಿ ಕಂಡುಬರುತ್ತಿದ್ದರೂ ಅದು ವಾಸ್ತವವಾಗಿ ಇಲ್ಲ ಎಂದೇ ತಿಳಿಯಬೇಕು. ನಾನು ಹುಟ್ಟುವೆನು, ನಾನು ಸಾಯುವೆನು ಎಂದು ಜನನ ಮರಣಗಳ ವಿಷಯದಲ್ಲಿ

ಪ್ರವೃತ್ತ್ಯಾದಿಗಳು ಸ್ವೇಚ್ಛೆಯಿಂದ ಆಗುವುದಿಲ್ಲ ಎಂದಮೇಲೆ ಬದುಕು ಕೂಡ ಭಗವದಿಚ್ಛೆಯಿಂದಲೆ ಆಗುತ್ತದೆ ಎನ್ನಬೇಕು. ಸೃಷ್ಟಿಗೆ ಮೊದಲೂ ಕಡೆಯಲ್ಲೂ ಜೀವಜಡಪ್ರಪಂಚ ಸ್ವತಂತ್ರವಾಗಿರಲಿಲ್ಲ ಎಂಬುದನ್ನು 'ಆತ್ಮೈವೇದಮಗ್ರ ಆಸೀತ್' ಎಂಬ ಶ್ರುತಿ ಸ್ಪಷ್ಟವಾಗಿ ಹೇಳಿದೆ. ಏಕೆಂದರೆ ಬ್ರಹ್ಮ-ಪ್ರಪಂಚಗಳಿಗೆ ಸ್ವರೂಪ ಭೇದವಿರುವುದರಿಂದ ಭಿನ್ನವಾದ ಪ್ರಪಂಚವಿದ್ದರೂ ಇರಲಿಲ್ಲ ಎನ್ನುವುದು ಸ್ವತಂತ್ರವಾಗಿರಲಿಲ್ಲ ಎನ್ನುವ ಅಭಿಪ್ರಾಯದಿಂದಲೆ ಎನ್ನುವುದು ಸ್ಪಷ್ಟ. ಅಶಕ್ತನಾದವನು ಇದ್ದರೂ ಇಲ್ಲ ಎಂದು ಲೋಕದಲ್ಲಿ ಗೌಣವಾಗಿ ವ್ಯವಹರಿಸುವಂತೆ ಪ್ರಪಂಚ ಭಗವದಧೀನನಾಗಿರುವುದರಿಂದ ಇಲ್ಲ ಎಂದು ಶ್ರುತಿ ವ್ಯವಹರಿಸಿದೆ. ಲಯಕಾಲ ದಲ್ಲಿಯೂ ಜೀವರು ಕಾಲ ಅದೃಷ್ಟ ಪ್ರಕೃತಿ ಮುಂತಾದುವು ಇದ್ದೇ ಇವೆ. ಜೀವರೂ ಕಾಲಾದೃಷ್ಟಾದಿಗಳೂ ಸರ್ವಥಾ ಇಲ್ಲದಿದ್ದರೆ ಮುಂದೆ ಸೃಷ್ಟಿಕಾಲದಲ್ಲಿ ಜೀವರ ಕರ್ಮಾನುಸಾರಿಯಾದ ಸೃಷ್ಟಿ ಹೇಗೆ ಉಂಟಾದೀತು?' ಎಂದು. 'ತ್ವಮೇತಚ್ಚ ಪರಂ ನ ಭವತಿ' ಎಂದು ಅನ್ವಯಿಸಿ ನೀನೂ ಈ ಪ್ರಪಂಚವೂ ನನ್ನಂತೆ ಸ್ವತಂತ್ರವಲ್ಲ ಎಂದು ಅರ್ಥಗ್ರಹಿಸಬೇಕು.

★★★

ಲಯಕಾಲದಲ್ಲಿ ಪರಬ್ರಹ್ಮನೊಬ್ಬನೆ ಇದ್ದ, ಜೀವಜಡಾತ್ಮಕ ಪ್ರಪಂಚವಿರಲಿಲ್ಲ ಎಂದು 'ಆತ್ಮೈವೇದಮಗ್ರ ಆಸೀತ್' ಇತ್ಯಾದಿ ಶ್ರುತಿ ಹೇಳಿದರೂ ಅದು 'ಸ್ವತಂತ್ರವಾಗಿರಲಿಲ್ಲ' ಎಂಬ ಅಭಿಪ್ರಾಯದ ಗೌಣಪ್ರಯೋಗ ಎಂದು ಹಿಂದಿನ ಪದ್ಯದಲ್ಲಿ ಹೇಳಿದೆ. ಅಸ್ವತಂತ್ರವಾದುದು ಇದ್ದೂ ಇಲ್ಲದಂತೆ ಎಂದು ಅಭಿಪ್ರಾಯ. ಇಷ್ಟೇ ಅಲ್ಲದೆ, ಪ್ರಪಂಚದಿಂದ ಪರಮಾತ್ಮನಿಗೆ ಏನೂ ಪ್ರಯೋಜನವಾಗಬೇಕಾಗಿಲ್ಲ, ಆಗುವುದೂ ಇಲ್ಲ, ಅದರಿಂದಲೂ ಅದು ಇದ್ದೂ ಇಲ್ಲದಂತೆ ಎಂದು ಇದೀಗ ಚತುಃಶ್ಲೋಕೀ ಮೂಲಭಾಗವತದ ಎರಡನೆ ಪದ್ಯ ಹೇಳುತ್ತದೆ—

ಋತೇಽರ್ಥಂ ಯತ್‌ಪ್ರತೀಯೇತ ನ ಪ್ರತೀಯೇತ ಚಾತ್ಮನಿ ।
ತದ್‌ವಿದ್ಯಾದಾತ್ಮನೋ ಮಾಯಾಂ ಯಥಾಽಽಭಾಸೋ ಯಥಾ ತಮಃ ॥

ಪರಮಾತ್ಮನಲ್ಲಿ ಪ್ರಪಂಚ ಅವನ ಪ್ರಯೋಜನಕ್ಕಾಗಿ ಇಲ್ಲದಿದ್ದರೂ 'ಅವನ ಪ್ರಯೋಜನಕ್ಕಾಗಿಯೆ ಇದೆ' ಎಂದು ಕೆಲವು ವಾದಿಗಳ ಮಾತಿನಿಂದ ಭಾಸವಾಗುತ್ತದೆ. ಆದರೆ ವೇದಾದಿಶಾಸ್ತ್ರಗಳನ್ನು ಕಂಡರೆ ಹಾಗೆ ಭಾಸವಾಗುವುದಿಲ್ಲ. ಪ್ರಪಂಚದಿಂದ ಪ್ರಯೋಜನವಿದೆ ಎಂದರೆ ಪರಮಾತ್ಮ ಪರಮಾತ್ಮನೆ ಅಲ್ಲ ಎಂದಾದೀತು. ಆದರಿಂದ ಪರಮಾತ್ಮನಿಗೆ ಪ್ರಯೋಜನವಿಲ್ಲದ್ದರೂ ಅವನ ಇಚ್ಛೆಯಂತೆ ಪ್ರಪಂಚ ಅವನಲ್ಲಿ ಇದೆ. ಪ್ರತಿಬಿಂಬನಾದ ಜೀವ ಹೇಗೆ ಅವನ ಇಚ್ಛಾಧೀನನೋ, ಜಡಪ್ರಕೃತಿ ಹೇಗೆ ಅವನ

ಇಚ್ಛಾಧೀನವೋ ಹಾಗೇ ಇತರ ಕಾಲಾದೃಷ್ಟಾದಿಗಳೂ ಅವನ ಇಚ್ಛಾಧೀನ ವಾಗಿ ಅವನಿಗೆ ಏನೂ ಪ್ರಯೋಜನ ಉಂಟುಮಾಡದೇ ಇರುತ್ತವೆ. ಆದರಿಂದ ಶ್ರುತಿಯಲ್ಲಿ 'ಅವು ಇದ್ದೂ ಇಲ್ಲ' ಎಂದು ವ್ಯವಹರಿಸಲಾಗಿದೆ.

ಇಲ್ಲಿ ಶ್ರೀಧರೀವ್ಯಾಖ್ಯಾನ ಪ್ರಕಾರ 'ಯಥಾತ್ಮಮಾಯಾ ಯೋಗೇನ' ಎಂದು ಬ್ರಹ್ಮನು ಮಾಯೆಯ ಅಂದರೆ ಅವಿದ್ಯೆಯ ಬಗ್ಗೆ ತಿಳಿಯ ಬಯಸಿದ್ದರಿಂದ ಅದರ ಲಕ್ಷಣವನ್ನು ಪರಮಾತ್ಮ ತಿಳಿಸುತ್ತಿದ್ದಾನೆ. 'ವಾಸ್ತವ ಅರ್ಥವಿಲ್ಲದಿದ್ದರೂ ಇರುವಂತೆ ಭಾಸವಾಗುವುದು, ವಾಸ್ತವ ಅರ್ಥವಿದ್ದರೂ ಇರುವಂತೆ ಕಾಣದಿರುವುದು, ಇವೆರಡೂ ಮಾಯೆ ಎಂದು ತಿಳಿಯಬೇಕು. ಎರಡು ಚಂದ್ರರಿಲ್ಲದಿದ್ದರೂ ಇರುವಂತೆ ಕಾಣುವುದುಂಟು. ಇರುವ ರಾಹುವೂ ಇರುವಂತೆ ಕಾಣುವುದಿಲ್ಲ ಎಂಬುದು ಈ ಎರಡಕ್ಕೆ ಸರಿಯಾದ ದೃಷ್ಟಾಂತ. ಅಥವಾ ಚಿಪ್ಪು ವಾಸ್ತವದಲ್ಲಿ ಬೆಳ್ಳಿ ಅಲ್ಲದಿದ್ದರೂ ಬೆಳ್ಳಿಯಂತೆ ಕಾಣುವುದು ಮತ್ತು ಸೂರ್ಯನ ಬೆಳಕು ಹರಡಿದ್ದರೂ ಗೂಬೆಗೆ ಬೆಳಕಿಲ್ಲ ಬರಿ ಕತ್ತಲು ಎಂದು ಕಾಣುವುದು ದೃಷ್ಟಾಂತಗಳು.'[೧] ಆದರೆ ಈ ವ್ಯಾಖ್ಯಾನ ಸರಿಯಲ್ಲ, ಶ್ಲೋಕದಲ್ಲಿ ಅವಿದ್ಯಾಲಕ್ಷಣಕ್ಕೂ ದೃಷ್ಟಾಂತಕ್ಕೂ ಭೇದವೆ ಕಾಣುವುದಿಲ್ಲ. 'ಪ್ರತೀಯೇತ' 'ಆಭಾಸಃ'-ಇದು ಕೇವಲ ಪುನರುಕ್ತಿ. ವೀರರಾಘವ ವ್ಯಾಖ್ಯಾನ ಪ್ರಕಾರ ಇಲ್ಲಿ ಜೀವಜಡಗಳು ಹೇಗೆ ಪರಸ್ಪರ ವಿಲಕ್ಷಣ ಎಂದು ಈ ಶ್ಲೋಕ ವರ್ಣಿಸುತ್ತದೆ. 'ಅರ್ಥ ಎಂದರೆ ಪುರುಷಾರ್ಥರೂಪವಾದ ಜೀವಸ್ವರೂಪದ ಅನುಸಂಧಾನವಿಲ್ಲದಿದ್ದಾಗ ಜಡದ ಅನುಸಂಧಾನ ಬರುತ್ತದೆ. ಜೀವಸ್ವರೂಪದ ಅನುಸಂಧಾನವಿದ್ದಾಗ 'ಸಾ ನಿಶಾ ಪಶ್ಯತೋ ಮುನೇಃ' ಎಂಬಂತೆ ಜಡದ ಅನುಸಂಧಾನವಿರುವುದಿಲ್ಲ, ಬೆಳಕು ಕಾಣುವಾಗ ಕತ್ತಲು ಕಾಣಿಸದು, ಕತ್ತಲು ಕಾಣಿಸುವಾಗ ಬೆಳಕು ಕಾಣಿಸದು ಹೇಗೋ ಹಾಗೆ. ಇದು ಪರಮಾತ್ಮನ ಮಾಯೆ' ಎಂದು. ಆದರೆ ಇದೂ ಅನುಭವ ವಿರುದ್ಧ. 'ನಾನು ನನ್ನದು' ಎಂದು ಜೀವಜಡಗಳು ಜೊತೆಯಾಗಿಯೇ ಕಾಣುತ್ತವೆ ತಾನೆ? ವಸ್ತುತಃ ಪ್ರಮಾಣಸಿದ್ಧವಾದ ಅರ್ಥ ಇದು—

---

೧. ಅರ್ಥಮೃತೇ-ಪ್ರತೀಯಮಾನಾರ್ಥಾಭಾವವತಿ, ಯತ್ ಪ್ರತೀಯತೇ, ತತ್ ಮಾಯಾಂ ವಿದ್ಯಾತ್ । ತತ್ ಮಾಯಾಪದಾರ್ಥ ಇತಿ ಜಾನೀಯಾತ್ । ತಥಾ ಚ ಸ್ವಾಧಿಕರಣೇ ವರ್ತಮಾನಾಭಾವಪ್ರತಿಯೋಗಿ ಮಾಯೇತಿ ಫಲಿತಂ । ತಸ್ಯಾತ್ಮೈವಾಧಿಷ್ಠಾನಂ, ಅನ್ಯಸ್ಯ ಸರ್ವಸ್ಯ ಕಲ್ಪಿತತ್ವಾದಿತ್ಯಭಿಪ್ರಾಯೇಣ ಆತ್ಮನ ಇತ್ಯುಕ್ತಂ । ನನು ಸ್ವಪ್ರಕಾಶಸ್ಯಾತ್ಮನಃ ಸದಾ ಭಾನಾತ್ ಕಥಂ ತತ್ರಾರೋಪ ಇತಿ ಶಂಕಾಯಾಮಾಹ- 'ನ ಪ್ರತೀಯೇತ ಚಾತ್ಮನೀ'ತಿ । ಪೂರ್ಣಾನಂದ ಸ್ವರೂಪ ಸ್ವಪ್ರಕಾಶಾತ್ಮನಿ ನ ಪ್ರತೀಯತ ಇತಿ ಯತ್ ತದಪಿ ಮಾಯೇತ್ಯರ್ಥಃ । ತಥಾಚ ಸ್ವಪ್ರಕಾಶೇಽಪ್ಯಪ್ರಕಾಶಸ್ಯ ಕಲ್ಪಿತತ್ವಾತ್ ತನ್ಮೂಲಕಃ ಸರ್ವಸ್ಯಾರೋಪಃ । ಅರ್ಥಾಭಾವೇಽಪಿ ಪ್ರತೀಯ ಮಾನತ್ವೇ ದೃಷ್ಟಾಂತಃ ಯಥಾಽಽಭಾಸಃ । ಶುಕ್ತ್ಯಾದೌ ರೂಪ್ಯಾದ್ಯಾಭಾಸಃ । ಪ್ರಕಾಶ ಸ್ವರೂಪೇ ತದಭಾವತ್ವೇನ ಕಲ್ಪ್ಯಮಾನತ್ವೇ ಯಥಾ ತಮ ಇತಿ । ಮಧ್ಯಾಹ್ನ ಸೂರ್ಯಾಲೋಕೇ ತದಭಾವತ್ವೇನೋಲೂಕೈಃ ಕಲ್ಪ್ಯಮಾನಂ ತಮಃ । -ಶ್ರೀಧರ ವ್ಯಾಖ್ಯಾನಭಾವ

ಅರ್ಥವದಿವ ಪ್ರತೀಯತೇ । ನ ಚ ಪರಮಾತ್ಮನ್ಯರ್ಥವತ್ ಪ್ರತೀಯತೇ।
ಅರ್ಥಂ ಪ್ರಯೋಜನಮೃತೇ । ನಹಿ ಜೀವ ಪ್ರಕೃತಿಭ್ಯಾಮೀಶ್ವರಸ್ಯಾರ್ಥಃ॥
ಮುಖ್ಯತೋ ವಿಷ್ಣುಶಕ್ತಿರ್ಹಿ ಮಾಯಾಶಬ್ದೇನ ಭಣ್ಯತೇ ।
ಉಪಚಾರತಸ್ತು ಪ್ರಕೃತಿರ್ಜೀವಶ್ಚೈವ ಹಿ ಭಣ್ಯತೇ । ಇತಿ ಚ ।

ಯಥಾऽऽಭಾಸೋ ಜೀವಃ ।
ಸರ್ವಂ ಪರೇ ಸ್ಥಿತಮಪಿ ನೈವ ತತ್ರೇತಿ ಭಣ್ಯತೇ ।
ಯತೋ ಹರೇರ್ನ ಜೀವೇನ ಜೀವನಂ ನ ಹರೌ ತತಃ ।
ಜೀವಃ ಪ್ರಕೃತಿರಪ್ಯತ್ರ ಯತೋ ನೈವ ಹಿ ಬಂಧಕೃತ್ ।
ಕರ್ಮ ಚಾಫಲದಾತೃತ್ವಾತ್ ಕಾಲಶ್ಚಾಪರಿಣಾಮನಾತ್ ।
ಯಥಾ ಛತ್ರಧರಾದ್ಯಾಸ್ತು ರಥಸ್ಥಾ ಅಪಿ ಸರ್ವಶಃ ।
ರಥಿನೋ ನೈವ ಭಣ್ಯಂತೇ ಏವಂ ಹರಿಗತಾ ಅಪಿ ।

ಇತರ ವಾದಿಗಳ ಮಾತನ್ನು ಕೇಳಿದಾಗ ಪ್ರಪಂಚ ಪರಮಾತ್ಮನಿಗೆ ಪ್ರಯೋಜನಕಾರಿಯಂತೆ ಭಾಸವಾಗುತ್ತದೆ. ವೇದಾದಿಶಾಸ್ತ್ರಗಳನ್ನು ಕಂಡಾಗ ಪರಮಾತ್ಮನಲ್ಲಿ ಪ್ರಯೋಜನಕಾರಿಯಾಗಿ ಕಾಣುವುದಿಲ್ಲ. 'ಅರ್ಥಂ' ಎಂದರೆ ಪ್ರಯೋಜನವನ್ನು 'ಋತೇ' ಉಂಟುಮಾಡದೆ ಇದೆ ಎಂದರ್ಥ. ಪರಮಾತ್ಮನಿಗೆ ಜೀವಪ್ರಕೃತಿಗಳಿಂದ ಏನೂ ಪ್ರಯೋಜನವಿಲ್ಲ ತಾನೆ? ಇದ್ದರೆ ಅವನು ಪರಮಾತ್ಮ ನೆನಿಸಲಾರ. 'ತದ್ವಿದ್ಯಾದಾತ್ಮನೋ ಮಾಯಾಂ' ಎಂದರೆ ಭಗವದಿಚ್ಛಾಧೀನವಾದ ಜೀವ ಪ್ರಕೃತಿ ಮುಂತಾದುವು ಭಗವಂತನ ಮಾಯೆ ಎನಿಸುತ್ತವೆ ಎಂದರ್ಥ. ಇದಕ್ಕೆ ಬ್ರಹ್ಮತರ್ಕವಚನವೆ ಪ್ರಮಾಣ. ಅದು ಹೇಳುತ್ತದೆ, 'ಮಾಯಾ ಎಂದರೆ ಮುಖ್ಯವಾಗಿ ವಿಷ್ಣುಶಕ್ತಿ, ಗೌಣವಾಗಿ ಪ್ರಕೃತಿ. ಜೀವರನ್ನೂ ಆ ಶಬ್ದ ಹೇಳುತ್ತದೆ' ಎಂದು. ''ಶ್ಲೋಕದಲ್ಲಿ ಮಾಯಾ ಎಂದರೆ ಆಭಾಸ ತಮಸ್ಸುಗಳೆಂದಿವೆ, ಜೀವಪ್ರಕೃತಿ ಗಳೆಂದಿಲ್ಲ'' ಎನ್ನಕೂಡದು. ಆಭಾಸ ಎಂದರೆ ಪ್ರತಿಬಿಂಬನಾದ ಜೀವನೆ ವಿವಕ್ಷಿತ. ಮತ್ತು ತಮಃ ಎಂದರೆ ಪ್ರಕೃತಿ. ಬ್ರಹ್ಮತರ್ಕ ಈ ಭಾಗವತ ಪದ್ಯವನ್ನು ಹೀಗೆ ವ್ಯಾಖ್ಯಾನಿಸಿದೆ— 'ಎಲ್ಲ ಪ್ರಪಂಚ ಪರಮಾತ್ಮನಲ್ಲಿದ್ದರೂ ಪ್ರಯೋಜನವಿಲ್ಲದ್ದರಿಂದ ಅವನಲ್ಲಿಲ್ಲ ಎನಿಸುತ್ತದೆ. ಜೀವನಿಂದ ಹರಿಗೆ ಜೀವನ ಉಂಟಾಗುವುದಿಲ್ಲ, ಪ್ರಕೃತಿಯಿಂದ ಬಂಧನ ಉಂಟಾಗುವುದಿಲ್ಲ, ಕರ್ಮದಿಂದ ಫಲ ಉಂಟಾಗುವುದಿಲ್ಲ, ಕಾಲದಿಂದ ವಾರ್ಧಕ್ಯ ಮರಣಾದಿ ವಿಕಾರ ಉಂಟಾಗುವುದಿಲ್ಲ, ಅದರಿಂದ ಜೀವ ಪ್ರಕೃತಿ ಕರ್ಮಕಾಲಗಳು ಹರಿಯಲ್ಲಿದ್ದರೂ ಇಲ್ಲ ಎನಿಸುತ್ತವೆ. ಹೇಗೆ ಛತ್ರಧಾರಿಗಳು ಮುಂತಾದವರು ರಥದಲ್ಲಿ ರಾಜನ ಜೊತೆಗೇ ಇದ್ದರೂ ರಾಜ ರಥಿಕನೆನಿಸುತ್ತಾನೆ

ಛತ್ರಧಾರಿ ಮುಂತಾದವರೂ ರಥಿಕರೆನಿಸುವುದಿಲ್ಲ. ಏಕೆಂದರೆ ರಥಚಲನೆಗೆ ರಾಜ ಏರಿರುವುದೇ ಕಾರಣ. ಛತ್ರಧಾರಿಗಳು ರಥವೇರುವುದರಿಂದ ರಾಜನಿಗೆ ಪ್ರಯೋಜನವಿದ್ದರೂ ರಥ ಚಲಿಸುವಂತಾಗುವಲ್ಲಿ ಅವರ ಪಾತ್ರವೇನೂ ಇರುವುದಿಲ್ಲ. ಆದರಿಂದ ಅವರು ರಥಿಕರಲ್ಲ. ಹಾಗೇ ಜೀವ ಪ್ರಕೃತಿ ಮುಂತಾದುವು ಹರಿಯಲ್ಲಿ ಇದ್ದರೂ ಹರಿಯಲ್ಲಿ ಅವುಗಳಿಂದಾಗಬಹುದಾದ ಕಾರ್ಯವೇನಿಲ್ಲದ್ದ ರಿಂದ ಹರಿಯಲ್ಲಿ ಅವು ಇದ್ದೂ ಇಲ್ಲದಂತೆ ಎನಿಸುತ್ತವೆ.''

★★★

'ಹರಿಯಲ್ಲಿ ಪ್ರಪಂಚವಿದ್ದೂ ಇಲ್ಲದಂತೆ' ಎನ್ನುವಂತೆ 'ಪ್ರಪಂಚದಲ್ಲಿ ಹರಿ ಇದ್ದೂ ಇಲ್ಲದಂತೆ' ಎಂದೂ 'ನ ಚ ಭೂತಸ್ಥಃ' ಎನ್ನುವುದುಂಟು. ಪ್ರಪಂಚ ಹರಿಯ ಅಧೀನವಾದ್ದರಿಂದ, ಪ್ರಪಂಚದಿಂದ ಹರಿಗೆ ಏನೂ ಪ್ರಯೋಜನವಿಲ್ಲದ್ದರಿಂದ ಹರಿಯಲ್ಲಿ ಪ್ರಪಂಚವಿಲ್ಲ ಎನ್ನುವುದಾದರೆ, 'ಹರಿಯು ಪ್ರಪಂಚದ ಅಧೀನ, ಪ್ರಪಂಚಕ್ಕೆ ಹರಿಯಿಂದೇನೂ ಪ್ರಯೋಜನವಿಲ್ಲ' ಎಂಬ ಕಾರಣದಿಂದ ಪ್ರಪಂಚದಲ್ಲಿ ಹರಿ ಇಲ್ಲ ಎನ್ನಲಾಗಿದೆಯೆ ಎಂಬ ಶಂಕೆ ಬಂದರೆ, ಪ್ರಪಂಚದಲ್ಲಿ ಹರಿ ಇದ್ದರೂ ಹೊರಗೂ ವ್ಯಾಪಿಸಿ ಇರುವುದರಿಂದ ಆಧಾರಕ್ಕಾಗಿ ಪ್ರಪಂಚದ ಅಪೇಕ್ಷೆ ಹರಿಗೆ ಇಲ್ಲ. ಆದರಿಂದ ಪ್ರಪಂಚದಲ್ಲಿ ಹರಿ ಇಲ್ಲ, ಪ್ರಪಂಚವನ್ನು ಅವನು ಆಶ್ರಯಿಸಿಕೊಂಡಿಲ್ಲ ಎಂದು ಅಭಿಪ್ರಾಯ ಎಂದು ಚತುಃಶ್ಲೋಕೀ ಭಾಗವತದ ಮೂರನೇ ಪದ್ಯ ಹೇಳುತ್ತದೆ—

ಯಥಾ ಮಹಾಂತಿ ಭೂತಾನಿ ಭೂತೇಷೂಚ್ಚಾವಚೇಷು ಚ ।
ಪ್ರವಿಷ್ಟಾನ್ಯಪ್ರವಿಷ್ಟಾನಿ ತಥಾ ತೇಷು ನ ತೇಷ್ವಹಂ ॥ ೩೪ ॥

ಪಂಚ ಮಹಾಭೂತಗಳು ಸ್ಥೂಲಸೂಕ್ಷ್ಮ ಶರೀರಗಳಲ್ಲಿ ಉಪಾದಾನವಾಗಿ ಪ್ರವೇಶಿಸಿದ್ದು ಹೊರಗೂ, ಅಂದರೆ ಶರೀರಗಳಿಲ್ಲದ ದೇಶ ಕಾಲಗಳಲ್ಲಿಯೂ ಇರುವುದರಿಂದ, ಆಧಾರಕ್ಕೆ ಶರೀರಗಳನ್ನು ಅಪೇಕ್ಷಿಸದೆ ಇರುವುದರಿಂದ, 'ಪ್ರವೇಶಿಸಿಲ್ಲ' ಎಂದೂ ವ್ಯವಹಾರವಿದೆ. ಹಾಗೇ ಭಗವಂತನೂ ಪ್ರಪಂಚದೊಳಗೆ ಆಧಾರನಾಗಿ ಪ್ರವೇಶಿಸಿದ್ದು ಹೊರಗೂ, ಅಂದರೆ ಪ್ರಪಂಚವಿಲ್ಲದ ದೇಶಕಾಲ ಗಳಲ್ಲಿಯೂ ಇರುವುದರಿಂದ ಆಧಾರಕ್ಕಾಗಿ ಪ್ರಪಂಚವನ್ನು ಅಪೇಕ್ಷಿಸದಿರುವುದರಿಂದ 'ಪ್ರಪಂಚದಲ್ಲಿ ಇಲ್ಲ'ವೆಂದೂ ವ್ಯವಹಾರ ಕಾಣುತ್ತದೆ.

ಇಲ್ಲಿ ಶ್ರೀಧರೀಯ ವ್ಯಾಖ್ಯಾನ ಹೇಳುತ್ತದೆ. 'ಭೂತೇಷೂಚ್ಚಾವಚೇಷ್ವನು' ಎಂದು ಪಾಠ. ಮಹಾಭೂತಗಳು ಭೌತಿಕಪದಾರ್ಥಗಳಲ್ಲಿ ಅನು-ಅವು ಸೃಷ್ಟಿಯಾದ ಅನಂತರ, ಪ್ರವೇಶಿಸಿದಂತೆ ಕಾಣುತ್ತವೆ. ಏಕೆಂದರೆ ಅವುಗಳಲ್ಲಿ ಮಹಾಭೂತ

ಗಳಿರುವುದು ಕಂಡುಬರುತ್ತದೆ. ಆದರೆ ವಾಸ್ತವವಾಗಿ ಅವು ಕಾರಣ ರೂಪದಲ್ಲಿ ಈ ಮೊದಲೂ ಅವುಗಳಲ್ಲಿ ಇದ್ದುವು. ಆದರಿಂದ ಪ್ರವೇಶಮಾಡಿಲ್ಲ. ಹಾಗೆಯೆ ಭೂತ ಭೌತಿಕ ಪದಾರ್ಥಗಳಲ್ಲಿ ಪರಮಾತ್ಮನ ಅಸ್ತಿತ್ವವೂ ಕಾರಣ ರೂಪದಲ್ಲಿ ಮೊದಲೆ ಇದೆ ಹೊರತು ಸೃಷ್ಟಿಯಾದ ಅನಂತರ ಪ್ರವೇಶಮಾಡಿಲ್ಲ'.

ವೀರರಾಘವ ವ್ಯಾಖ್ಯಾನ ಹೇಳುತ್ತದೆ —'ತೇಜೋ ವಾಯು ಆಕಾಶಗಳು ಭೌತಿಕ ವಸ್ತುಗಳಲ್ಲಿ ಪ್ರವಿಷ್ಟವಾದರೂ ಪ್ರವಿಷ್ಟವಲ್ಲ ಎನ್ನಬಹುದು, ಏಕೆಂದರೆ ಮಡಕೆ ಒಡೆದರೆ ಆ ಮಹಾಭೂತಗಳು ಒಡೆಯುವುದಿಲ್ಲ. ಮಡಿಕೆ ಸಣ್ಣಗಿದ್ದರೂ ಮಹಾಭೂತಗಳು ದೊಡ್ಡವಾಗಿರುತ್ತವೆ. ಹಾಗೇ ಭಗವಂತ ಶರೀರರೂಪವಾದ ಜಡಚೇತನಲ್ಲಿ ಆತ್ಮರೂಪದಿಂದ ಪ್ರವೇಶಿಸಿರೂ ಅವುಗಳ ದೋಷಗಳಿಂದ ಅವನಿಗೆ ದೋಷವಿಲ್ಲ. ಅದರಿಂದ ಪ್ರವಿಷ್ಟನಲ್ಲ ಎನ್ನಬಹುದು'. ಆದರೆ ಇವೆಲ್ಲ ಕೇವಲ ಕಲ್ಪನೆಗಳು. ಬ್ರಹ್ಮತರ್ಕ ಬೇರೆ ರೀತಿಯಿಂದ ವ್ಯಾಖ್ಯಾನ ಮಾಡುತ್ತಿದೆ. ಅದೇ ಗ್ರಾಹ್ಯ—

ಯಥಾ ಮಹಾಂತಿ ಭೂತಾನಿ ಶರೀರೇಷು ಬಹಿಸ್ತಥಾ ।
ಏವಂ ಹರಿಶ್ಚ ಭೂತೇಷು ಬಹಿಶ್ಚ ವ್ಯಾಪ್ತಿಹೇತುತಃ ।
ತಸ್ಮಾತ್ ತತ್‌ಸ್ಥೋ ನ ತತ್‌ಸ್ಥಶ್ಚ ಪ್ರೋಚ್ಯತೇ ಹರಿರೀಶ್ವರಃ ॥ ಇತಿ ಚ ।

ಮಹಾಭೂತಗಳು ಶರೀರಗಳಲ್ಲಿ ಒಳಗೂ ಹೊರಗೂ ಇರುವಂತೆ ಹರಿಯೂ ಎಲ್ಲ ಜೀವಜಡಗಳಲ್ಲಿ ಒಳಗೂ ಹೊರಗೂ ವ್ಯಾಪಿಸಿರುವುದರಿಂದ ಅವುಗಳಲ್ಲಿ ಇರುವನೆಂದೂ ಇಲ್ಲವೆಂದೂ ಎರಡೂ ರೀತಿಯಾಗಿ ಶಾಸ್ತ್ರಗಳಲ್ಲಿ ಉಕ್ತನಾಗುತ್ತಾನೆ.

★★★

ಚತುಃಶ್ಲೋಕೀ ಮೂಲಭಾಗವತದ ನಾಲ್ಕನೇ ಶ್ಲೋಕ—

ಏತಾವದೇವ ಜಿಜ್ಞಾಸ್ಯಂ ತತ್ವಜಿಜ್ಞಾಸುನಾಽಽತ್ಮನಃ ।
ಅನ್ವಯವ್ಯತಿರೇಕಾಭ್ಯಾಂ ಯತ್ ಸ್ಯಾತ್ ಸರ್ವತ್ರ ಸರ್ವದಾ ॥ ೩೫ ॥

ಅನ್ಯವಸ್ತುಗಳಿರುವ ಇಲ್ಲದ ದೇಶಕಾಲಗಳಲ್ಲಿ ಎಲ್ಲೆಡೆಯಲ್ಲೂ ಪರಮಾತ್ಮನ ಶಕ್ತಿಜ್ಞಾನಾದಿ ಗುಣಗಳು ಸರ್ವವಿಷಯಕವಾಗಿಯೆ ಇರುತ್ತವೆ. ಪರಮಾತ್ಮನ ಅಸಾಧಾರಣ ಶಕ್ತಿಜ್ಞಾನಾದಿ ಗುಣಧರ್ಮಗಳನ್ನು ತಿಳಿಯಬಯಸುವವನು ಅವುಗಳ ಸದಾ ಸರ್ವವಿಷಯಕತ್ವವನ್ನು ಮನನ ಮಾಡಬೇಕು.

ಹಿಂದಿನ ಪದ್ಯದಲ್ಲಿ ಪರಮಾತ್ಮನ ಸರ್ವಗತತ್ವವನ್ನು ಹೇಳಿ, ಈ ಪದ್ಯದಲ್ಲಿ ಅವನ ಶಕ್ತಿಜ್ಞಾನಾದಿಗಳಿಗೆ ಅನ್ವಯವ್ಯತಿರೇಕ ಅಂದರೆ ಸರ್ವವಿಷಯಕತ್ವವನ್ನು ಹೇಳಿದೆ ಮತ್ತು

ಆದರ ಜ್ಞಾನಕ್ಕೆ ಸಾಧನ ಮನನವೆಂದೂ ಹೇಳಿದೆ. 'ಸರಹಸ್ಯಂ ತದಂಗಂ ಚ' ಎಂದು, ತದಂಗ ಎಂದರೆ, ಜ್ಞಾನಸಾಧನವನ್ನೂ ಹೇಳುತ್ತೇನೆ ಎಂದಿದ್ದರಿಂದ ಇಲ್ಲಿ ಆ ಜ್ಞಾನಸಾಧನ ಉಕ್ತವಾಗಿದೆ.

ಶ್ರೀಧರೀಯ ವ್ಯಾಖ್ಯಾನದಲ್ಲಿ ಅನ್ವಯವ್ಯತಿರೇಕವೆಂದರೆ ಕಾರ್ಯಪ್ರಪಂಚ ದಲ್ಲಿ ಎಲ್ಲೆಡೆ ಕಾರಣ ರೂಪದಿಂದ ಸೇರಿರುವುದು ಅನ್ವಯ. ಕಾರಣಾವಸ್ಥೆಯಲ್ಲಿ ಕಾರ್ಯವಿಲ್ಲದಾಗಲೂ ಕಾರಣವಿರುವುದು ವ್ಯತಿರೇಕ. ಅಥವಾ ಜಾಗ್ರದಾದಿ ಅವಸ್ಥೆಗಳಲ್ಲಿ ಸಾಕ್ಷಿಯಾಗಿ ಒಳಗಿರುವುದು ಅನ್ವಯ. ಸಮಾಧ್ಯವಸ್ಥೆಯಲ್ಲಿ ವ್ಯತಿರೇಕ. ವೀರರಾಘವ ವ್ಯಾಖ್ಯಾನದಲ್ಲಿ ಅನ್ವಯವೆಂದರೆ ಕಾರ್ಯರೂಪ ಕಾರಣ ರೂಪಗಳಿಂದ ಎಲ್ಲೆಡೆ ಚಿದಚಿತ್‌ಶರೀರನಾದ ಭಗವಂತನಿರುವುದು ಅನ್ವಯ. ಅವನಿಗಿಂತ ಹೊರತಾಗಿ ಇನ್ನೊಂದಿಲ್ಲದಿರುವುದು ವ್ಯತಿರೇಕ. ಆದರೆ ಹಿಂದಿನ ಪದ್ಯದಲ್ಲಿ ಹೇಳಿದ್ದಕ್ಕಿಂತ ಹೆಚ್ಚಿಗೆ ಇಲ್ಲಿ ಏನೂ ಹೇಳದಿರುವುದರಿಂದ ಪುನರುಕ್ತಿಯಾಗುತ್ತದೆ. ಆದರಿಂದ ಹೀಗೆ ಹೇಳಬೇಕು—

ಅನ್ಯಭಾವಾಭಾವಕಾಲೇ ದೇಶೇ ಚ ತದ್ವಿದ್ಯಮಾನಾ-
ವಿದ್ಯಮಾನ ಶಕ್ತಿಮಾಂಶ್ಚೇತ್ಯನ್ವಯವ್ಯತಿರೇಕೌ ।

ತನಗಿಂತ ಬೇರೆಯಾದ ವಸ್ತುವಿರುವ ಕಾಲದಲ್ಲಿಯೂ ದೇಶದಲ್ಲಿಯೂ ಪರಮಾತ್ಮನ ಶಕ್ತಿ ಇದೆ. ಆ ವಸ್ತು ಇಲ್ಲದ ಕಾಲ ದೇಶಗಳಲ್ಲಿಯೂ ಪರಮಾತ್ಮನ ಶಕ್ತಿ ಇದೆ. ಇವು ಅನ್ವಯವ್ಯತಿರೇಕಗಳು. ಆ ವಸ್ತುವಿನ ವಿಷಯದಲ್ಲಿಯೂ ಬೇರೆ ವಸ್ತು ವಿಷಯದಲ್ಲಿಯೂ ಶಕ್ತಿ ಇರುತ್ತದೆ. ಇವೂ ಅನ್ವಯ ವ್ಯತಿರೇಕಗಳು. ಶಕ್ತಿ ಉಪಲಕ್ಷಣ. ಜ್ಞಾನಇಚ್ಛಾಕ್ರಿಯಾದಿ ಎಲ್ಲ ಗುಣಗಳೂ ಹೀಗೇ ಅನ್ವಯವ್ಯತಿರೇಕ ಉಳ್ಳವುಗಳು ಅಂದರೆ ಸದಾ ಸರ್ವತ್ರ ಸರ್ವ ವಿಷಯಕವಾಗಿರುತ್ತವೆ ಎಂದರ್ಥ. ಆದರಿಂದ ಪುನರುಕ್ತಿ ದೋಷವಿಲ್ಲ.

★★★

ಶ್ರೀಹರಿ ಬ್ರಹ್ಮನಿಗೆ ಮೂಲಭಾಗವತವನ್ನು ಉಪದೇಶಿಸಿ ಸೃಷ್ಟಿಗೆ ಆಜ್ಞೆಮಾಡಿ ಅಂತರ್ಧಾನನಾದಾಗ ಬ್ರಹ್ಮ ಅವನಿಗೆ ಕೈಮುಗಿದು ಸೃಷ್ಟಿ ಮಾಡಿದ—

ಅಂತರ್ಹಿತೇಂದ್ರಿಯಾರ್ಥಾಯ ಹರಯೇಽವಹಿತಾಂಜಲಿಃ ।
ಸರ್ವಭೂತಮಯೋ ವಿಶ್ವಂ ಸಸರ್ಜೇದಂ ಸ ಪೂರ್ವವತ್ ॥ ೩೮ ॥

ಹೊರಕಣ್ಣಿಗೆ ಕಾಣುತ್ತಿದ್ದ ರೂಪವನ್ನು ಶ್ರೀಹರಿ ಅಂತರ್ಧಾನಗೊಳಿಸಿದಾಗ ಅವನಿಗೆ ಕೈಮುಗಿದು ಸರ್ವಜೀವೋತ್ತಮನಾದ ಬ್ರಹ್ಮ ಪೂರ್ವಕಲ್ಪದಂತೆಯೇ ಈ ಕಲ್ಪದಲ್ಲಿಯೂ ಜಗತ್ತನ್ನು ಸೃಜಿಸಿದ.

ಇಲ್ಲಿ 'ಸರ್ವಭೂತಮಯ' ಎಂದರೆ ವೀರರಾಘವ ವ್ಯಾಖ್ಯಾನದಲ್ಲಿ 'ಮಯ' ಎಂದರೆ ಪ್ರಚುರ. ಸರ್ವಜೀವರ ವಿಷಯದಲ್ಲಿ ಜ್ಞಾನದಿಂದ ಪೂರ್ಣನಾಗಿದ್ದಾನೆ. ಬ್ರಹ್ಮ ಎಂದರ್ಥ. ಶುಕದೇವ ವ್ಯಾಖ್ಯಾನದಲ್ಲಿ ವಿರಾಟ್ ದೇಹಾಭಿಮಾನಿ ಎಂದರ್ಥ. ಆದರೆ ಪ್ರಕೃತದಲ್ಲಿ ಎಲ್ಲ ಜೀವರ ಸೃಷ್ಟಿಗೆ ಆವಶ್ಯಕವಾದ ಸಾಮರ್ಥ್ಯ ಉಕ್ತವಾಗಬೇಕು. ಅದಕ್ಕೆ ಹೀಗೆ ಹೇಳಬೇಕು—

ಸರ್ವಸ್ಯಾಪಿ ಪ್ರಧಾನತ್ವಾತ್ ಸ ಸರ್ವಮಯ ಈರ್ಯತೇ । ಇತಿ ಚ ।

ಚತುರ್ಮುಖನು ಸರ್ವಜೀವೋತ್ತಮ, ಸರ್ವಜೀವಸ್ವಾಮಿಯಾದ್ದರಿಂದ ಸರ್ವಭೂತಮಯ ಎನಿಸುತ್ತಾನೆ. 'ಮಯ' ಎಂದರೆ ಪ್ರಧಾನ, ಸ್ವಾಮಿ.

★★★

ಚತುರ್ಮುಖ ಹೀಗೆ ಸೃಷ್ಟಿ ಮಾಡಿದ ಬಳಿಕ ನಾರದರು ತಂದೆಯಾದ ಚತುರ್ಮುಖನ ಬಳಿಯಲ್ಲಿ ಭಾಗವತವನ್ನು ಅಧ್ಯಯನ ಮಾಡಲು ಬಯಸಿ, ಅವನನ್ನು ಪ್ರೀತಿಯಿಂದ ಸೇವೆ ಮಾಡಿ ಒಲಿಸಿಕೊಂಡರು—

ಮಾಯಾಂ ವಿವಿದಿಷುರ್ವಿಷ್ಣೋರ್ಮಾಯೇಶಸ್ಯ ಮಹಾಮುನಿಃ ।
ಮಹಾಭಾಗವತೋ ರಾಜನ್ ಪಿತರಂ ಪರ್ಯತೋಷಯತ್ ॥ ೪೧ ॥

ಬ್ರಹ್ಮಾದಿಗಳ ಮಾಹಾತ್ಮ್ಯವನ್ನು ನಿಯಂತ್ರಿಸುವ ಹರಿಯ ಮಾಹಾತ್ಮ್ಯವನ್ನು ಮಹಾಭಗವದ್ಭಕ್ತರಾದ ಮಹಾಮುನಿ ನಾರದರು ತಿಳಿಯಲು ಬಯಸಿ ತಂದೆಯಾದ ಬ್ರಹ್ಮನನ್ನು ಸೇವೆಯಿಂದ ಒಲಿಸಿಕೊಂಡರು.

ಇಲ್ಲಿ 'ಮಾಯೇಶಸ್ಯ ವಿಷ್ಣೋರ್ಮಾಯಾಂ' ಎಂಬಲ್ಲಿ 'ವಿಷ್ಣುವಿನ ಮಾಯೆ' ಯನ್ನು ನಾರದರು ತಿಳಿಯಬಯಸಿದರು ಎಂದಿಷ್ಟೇ ಸಾಕಾಗಿತ್ತು. 'ಮಾಯಾಧಿ ಪತಿಯಾದ ವಿಷ್ಣುವಿನ ಮಾಯೆ' ಎನ್ನುವುದು ವ್ಯರ್ಥ. ವೀರರಾಘವ ವ್ಯಾಖ್ಯಾನದಲ್ಲಿ ಮಾಯಾಧಿಪತಿಯಾದ ವಿಷ್ಣುವಿನ ಮಾಯೆಯನ್ನು ಎಂದೇ ವ್ಯಾಖ್ಯಾನಿಸಿದೆ. ಮಾಯೆ ಎಂದರೆ ಆಶ್ಚರ್ಯಕರಶಕ್ತಿ ಎಂದಿದೆ. ನಾರದರು ಶಕ್ತಿಯನ್ನು ಮಾತ್ರವಲ್ಲದೆ ಎಲ್ಲ ಮಾಹಾತ್ಮ್ಯವನ್ನೂ ತಿಳಿಯಲು ಬಯಸಿದ್ದರು. ಅದರಿಂದ ಹೀಗೆ ಹೇಳಬೇಕು—

ಮಾಯಾಂ ಮಾಹಾತ್ಮ್ಯಂ ವಿವಿದಿಷುಃ । ಅನ್ಯೇಷಾಂ ಮಾಹಾತ್ಮ್ಯಪತೇಃ ।
ಮುಖ್ಯತೋ ವಿಷ್ಣುಮಾಹಾತ್ಮ್ಯಂ ಮಾಯಾಶಬ್ದೋದಿತಂ ಭವೇತ್ ।
ಪ್ರಧಾನತ್ವಾಚ್ಚ ಮಾತೃತ್ವಾತ್ ಮೇಯತ್ವಂ ಚೈವ ತಸ್ಯ ಹಿ । ಇತಿ ಚ ।

ಮಾಯಾಂ ವಿವಿದಿಷುಃ ಎಂದರೆ ವಿಷ್ಣುವಿನ ಮಾಹಾತ್ಮ್ಯವನ್ನು ತಿಳಿಯಬಯಸಿದರೆಂದರ್ಥ. ಮಾಯೇಶಸ್ಯ ಎಂಬಲ್ಲಿ ಮಾಯಾ ಶಬ್ದಕ್ಕೆ ಅನ್ಯ ಎಂದು ವಿಶೇಷಣವನ್ನು ಸೇರಿಸಿ ಅನ್ಯರ ಎಂದರೆ ಬ್ರಹ್ಮಾದಿಗಳ ಮಾಹಾತ್ಮ್ಯಕ್ಕೆ ಶ್ರೀಹರಿ ಅಧಿಪತಿ, ನಿಯಾಮಕ ಎಂದು ಅರ್ಥಗ್ರಹಿಸಬೇಕು. ಮಾಯಾಶಬ್ದ ಮಾಹಾತ್ಮ್ಯವಾಚಕ. ಅದರಲ್ಲಿಯೂ ಮುಖ್ಯವಾಗಿ ವಿಷ್ಣುಮಾಹಾತ್ಮ್ಯವನ್ನು ಹೇಳಲು ಮಾಯಾಶಬ್ದ ಪ್ರಯೋಗ ಎಂಬ ವಿಷಯದಲ್ಲಿ ಪ್ರಮಾಣವಚನ ಹೀಗೆ ಹೇಳುತ್ತದೆ— 'ಮುಖ್ಯವಾಗಿ ವಿಷ್ಣುಮಾಹಾತ್ಮ್ಯ ಮಾಯಾಶಬ್ದದಿಂದ ಉಕ್ತವಾಗುತ್ತದೆ. ಏಕೆಂದರೆ ಪ್ರಧಾನ ಎಂಬ ಅರ್ಥದ ಮಯಶಬ್ದಕ್ಕೆ ಸಮಾನಾರ್ಥಕ ಮಾಯಾಶಬ್ದವಾಗಿದೆ. ಸರ್ವಜ್ಞನಾದ್ದ ರಿಂದಲೂ ಸರ್ವರಿಂದ ಜ್ಞೇಯನಾದ್ದರಿಂದಲೂ ಮಾಯಾಶಬ್ದ ಅನ್ವರ್ಥಕವಾಗಿದೆ.

★★★

ಚತುರ್ಮುಖ ಪ್ರೀತಿಯಿಂದ ಭಗವಂತ ತನಗೆ ಉಪದೇಶಿಸಿದ ಮೂಲ ಭಾಗವತವನ್ನು ನಾರದರಿಗೆ ಉಪದೇಶಿಸಿದ. ನಾರದರು ಅದನ್ನೆ ವೇದವ್ಯಾಸರಿಗೆ ಉಪದೇಶಿಸಿ ವಿಸ್ತಾರವಾಗಿ ಭಾಗವತ ಮಹಾಪುರಾಣ ರಚಿಸಲು ಪ್ರೇರಿಸಿದರು—

ನಾರದಃ ಪ್ರಾಹ ಮುನಯೇ ಸರಸ್ವತ್ಯಾಸ್ತಟೇ ನೃಪ ।
ಧ್ಯಾಯತೇ ಬ್ರಹ್ಮ ಪರಮಂ ವ್ಯಾಸಾಯಾಮಿತತೇಜಸೇ ॥ ೪೪ ॥

ಅಮಿತ ತೇಜಸ್ವಿಯೂ ಸರ್ವಜ್ಞರೂ ಆದ ವೇದವ್ಯಾಸರು ಸರಸ್ವತೀ ತೀರದಲ್ಲಿ ಲೋಕಶಿಕ್ಷಣಕ್ಕಾಗಿ ಪರಮಾತ್ಮನ ಧ್ಯಾನದಲ್ಲಿ ಕುಳಿತಿದ್ದಾಗ ನಾರದರು ಬಂದು ಮೂಲಭಾಗವತವನ್ನು ಅವರಿಗೆ ಉಪದೇಶಿಸಿದರು.

ಇಲ್ಲಿ ವೇದವ್ಯಾಸರನ್ನು ಅಮಿತತೇಜಸ್ವಿಗಳೆಂದು ಸರ್ವಜ್ಞರೆಂದು ಹೇಳಿದ್ದರಿಂದಲೆ ಅವರು ನಾರದರಿಂದ ಉಪದೇಶ ಪಡೆದುದು ಕೇವಲ ಅಸುರಮೋಹನಕ್ಕಾಗಿ ಮತ್ತು ನಾರದರಿಗೆ ಮೂಲಭಾಗವತ ಸಂಪ್ರದಾಯಜ್ಞರೆಂಬ ಪ್ರಸಿದ್ಧಿ ನೀಡುವುದಕ್ಕಾಗಿ ಎನ್ನುವುದು ಸ್ಪಷ್ಟವಿದೆ. ಆದರೂ ವ್ಯಾಸರು ಭಗವಂತನ ಆವೇಶಾವತಾರವೆನ್ನುವವರಿಗೆ ಹೀಗೆ ಹೇಳಬೇಕಾಗುತ್ತದೆ—

ಹರಿರ್ವ್ಯಾಸಾದಿರೂಪೇಣ ಸರ್ವಜ್ಞೋಽಪಿ ಸ್ವಯಂ ಪ್ರಭುಃ ।

ಶೃಣೋತಿ ನಾರದಾದಿಭ್ಯೋ ಮೋಹಾಯೈಷಾಂ ಪ್ರಸಿದ್ಧಯೇ ।

ಇತಿ ಪಾದ್ಮೇ ।

'ಶ್ರೀಹರಿ ವ್ಯಾಸಾದಿ ಅವತಾರಗಳಲ್ಲಿಯೂ ಸ್ವಯಂ ಸರ್ವಜ್ಞ, ಸರ್ವಶಕ್ತನೆ ಆದರೂ ಅಸುರಮೋಹನಕ್ಕಾಗಿಯೂ ನಾರದಾದಿಗಳಿಗೆ ಕೀರ್ತಿ ತರುವುದ ಕ್ಕಾಗಿಯೂ ಅವರಿಂದ ಉಪದೇಶವನ್ನು ಕೇಳುತ್ತಾನೆ' ಎಂದು ಪದ್ಮಪುರಾಣದಲ್ಲಿ ಹೇಳಿದೆ.

★★★

ವಿರಾಟ್‌ಪುರುಷನ ಅವಯವಗಳಿಂದ ಲೋಕಸೃಷ್ಟಿಯಾದ ಬಗೆಯನ್ನು ಪರೀಕ್ಷಿತ ಕೇಳಬಯಸಿದ. ಅದನ್ನು ಹೇಳುತ್ತೇನೆ ಕೇಳು ಎನ್ನುತ್ತಿದ್ದಾರೆ ಶುಕಮುನಿಗಳು—

ಯದುತಾಹಂ ತ್ವಯಾ ಪೃಷ್ಟೋ ವೈರಾಜಾತ್ ಪುರುಷಾದಿದಂ ।
ಯಥಾಽಽಸೀತ್ ತದುಪಾಖ್ಯಾಸ್ಯೇ ಪ್ರಶ್ನಾನನ್ಯಾಂಶ್ಚ ಕೃತ್ಸ್ನಶಃ ॥ ೪೫ ॥

ರಾಜನೆ, ನೀನು ವಿರಾಟ್‌ಪುರುಷಾಂತರ್ಗತನಾದ ಶ್ರೀಹರಿಯಿಂದ ಈ ಜಗತ್ತು ಹುಟ್ಟಿದ ಬಗೆಯನ್ನು ಕೇಳಬಯಸಿದ್ದಿ. ಅದನ್ನೂ ಇನ್ನೂ ಬೇರೆ ವಿಷಯಗಳನ್ನೂ ಭಾಗವತ ಪ್ರವಚನದ ಮೂಲಕ ನಿನಗೆ ಉಪದೇಶಿಸುತ್ತೇನೆ.

ಇಲ್ಲಿ ವೈರಾಜ ಪುರುಷನೆಂದರೆ ಯಾರು? ವಿರಾಟ್ ಎಂದರೆ ಬ್ರಹ್ಮಾಂಡ. ಅದಕ್ಕೆ ಅಧಿಪತಿಯಾದ ಪುರುಷನೆಂದರೆ ಚತುರ್ಮುಖ ಎಂದು ಗ್ರಹಿಸುವ ಸಂಭವವಿದೆ. ವೀರರಾಘವ ವ್ಯಾಖ್ಯಾನದಲ್ಲಿ 'ವೈರಾಜಾಖ್ಯಾತ್ ಅನಿರುದ್ಧಸೃಷ್ಟಾತ್ ಚತುರ್ಮುಖಾತ್' ಎಂದೇ ವ್ಯಾಖ್ಯಾನ ಮಾಡಲಾಗಿದೆ. ಅದಕ್ಕೆ ಪ್ರಮಾಣ ಪುರಃಸರವಾಗಿ ಹೇಳುತ್ತಾರೆ—

ವಿರಾಡ್‌ಬ್ರಹ್ಮಾ ಸಮುದ್ದಿಷ್ಟಸ್ತದ್ಗತಃ ಪರಮೋ ಯತಃ ।
ಅತೋ ವೈರಾಜ ಇತ್ಯೇನಮಾಹುರೀಶತ್ವತೋ ವಿರಾಟ್ ॥

ಇತಿ ಬೃಹತ್ಸಂಹಿತಾಯಾಂ ।

ವಿರಾಟ್ ಎಂದರೆ, ಬ್ರಹ್ಮಾಂಡಕ್ಕೆ ಅಧಿಪತಿಯಾದ್ದರಿಂದ, ಬ್ರಹ್ಮ. ಅವನ ಅಂತರ್ಯಾಮಿ ಹರಿಯಾದ್ದರಿಂದ ಅವನನ್ನು ವೈರಾಜ ಎನ್ನುತ್ತಾರೆ ಎಂದು ಬೃಹತ್ಸಂಹಿತೆಯಲ್ಲಿ ಹೇಳಿದೆ.

ಇತಿ ದ್ವಿತೀಯಸ್ಕಂಧೇ ನವಮೋಽಧ್ಯಾಯಃ

ಹತ್ತನೆಯ ಅಧ್ಯಾಯ

ಅಧ್ಯಾಯ ಸಾರಾಂಶ

ಸರ್ಗ ವಿಸರ್ಗ ಸ್ಥಾನ ಪೋಷಣ ಊತಿ ಮನ್ವಂತರ ಈಶಕಥಾ ನಿರೋಧ ಮುಕ್ತಿ ಆಶ್ರಯ- ಇವೇ ಭಾಗವತಪುರಾಣದ ಹತ್ತು ವಿಷಯಗಳು. ಆಶ್ರಯ ಎಂದರೆ ಸರ್ವಾಶ್ರಯನಾದ ಭಗವಂತ. ಅವನ ಬಗ್ಗೆ ಹೇಳುವುದಕ್ಕಾಗಿಯೆ ಉಳಿದ ಒಂಬತ್ತು ವಿಷಯಗಳ ಪ್ರತಿಪಾದನೆ. ಸರ್ಗ ಎಂದರೆ ಮಹದಾದಿ ತತ್ವಗಳ ಮತ್ತು ಬ್ರಹ್ಮಾಂಡದ ಸೃಷ್ಟಿ. ವಿಸರ್ಗ ಎಂದರೆ ಬ್ರಹ್ಮಾಂಡದೊಳಗಿನ ಹದಿನಾಲ್ಕು ಲೋಕಗಳ ಸೃಷ್ಟಿ ಪುರುಷನಾಮಕ ಬ್ರಹ್ಮನ ಚತುರ್ದಶಲೋಕಾತ್ಮಕ ಶರೀರಸೃಷ್ಟಿ. ಇದನ್ನು ಪೌರುಷ ಎಂದೂ ಹೇಳುತ್ತಾರೆ. ಶ್ರೀಹರಿ ದುಷ್ಟನಿಗ್ರಹಾದಿಗಳಿಂದ ಮೆರೆಯುವುದು ಸ್ಥಾನ. ಅವನು ಭಕ್ತರಿಗೆ ಮಾಡುವ ಅನುಗ್ರಹವೆ ಪೋಷಣ. ಮನ್ವಂತರಗಳಲ್ಲಿ ಸಜ್ಜನರು ನಡೆಸುವ ಧರ್ಮಾನುಷ್ಠಾನವೆ ಮನ್ವಂತರ. ಜೀವರ ಅನಾದಿಕರ್ಮ ಹಾಗೂ ಸಂಸ್ಕಾರಗಳು ಊತಿಗಳು. ವಿಷ್ಣುವೈಷ್ಣವರ ಕಥೆಗಳು ಈಶಕಥೆ ಎನಿಸುವುವು. ಲಯಕಾಲದಲ್ಲಿ ಜೀವರು ಭಗವಂತನ ಉದರದಲ್ಲಿ ನಿದ್ರಿಸುವುದು ನಿರೋಧ. ಜೀವರು ತಮ್ಮ ಪ್ರಕೃತಿಬಂಧವನ್ನು ಕಳೆದುಕೊಂಡು ಸ್ವರೂಪಭೂತ ಚಿನ್ಮಯಶರೀರದಿಂದಿರುವುದು ಮುಕ್ತಿ. ಪ್ರಪಂಚಕ್ಕೆ ಜ್ಞಾನ ಲಯ ಸೃಷ್ಟಿ ಸ್ಥಿತಿ ಉಂಟುಮಾಡುವುದು ಯಾರ ಲಕ್ಷಣವೋ ಆ ನಾರಾಯಣನೆ ಆಶ್ರಯ. ಅವನೆ ಪರಮಾತ್ಮ.

ಜೀವರಿಗೆ ರೂಪಾದಿಜ್ಞಾನ, ಚಕ್ಷುರಾದಿಇಂದ್ರಿಯಗಳು, ಬಾಹ್ಯವಾದ ಪ್ರಕಾಶ- ಈ ಮೂರೂ ಬೇಕು. ಆಗ ಮೂರೂ ತಿಳಿಯುತ್ತವೆ. ಅವು ಇಲ್ಲದಿರುವ ಸುಪ್ತ್ಯವಸ್ಥೆಯಲ್ಲಿ ಏನೂ ತಿಳಿಯುವುದಿಲ್ಲ. ಅಂಥ ಸುಪ್ತಿಯಲ್ಲಿಯೂ ಸ್ವತಂತ್ರನಾಗಿ ಎಲ್ಲವನ್ನೂ ತಿಳಿಯುವ ಪರಮಾತ್ಮನೆ ಆಶ್ರಯ.

ಅವನು ಬ್ರಹ್ಮಾಂಡದೊಳಗೆ ವ್ಯಕ್ತನಾಗಿ ಗರ್ಭೋದಕದಲ್ಲಿ ಮಲಗಿ ನಾರಾಯಣನೆನಿಸಿದ. ಬಳಿಕ ತಾನು ಯೋಗಶಯ್ಯೆಯಿಂದ ಎದ್ದು ಹಿರಣ್ಮಯವಾದ ವೀರ್ಯವನ್ನು ಅಧಿದೈವ ಅಧ್ಯಾತ್ಮ ಅಧಿಭೂತವೆಂದು ಮೂರು ಬಗೆಯಾಗಿ ಮಾಡಿ ಬ್ರಹ್ಮಶರೀರವನ್ನು ನಿರ್ಮಾಣಮಾಡಿದ ಅದರಲ್ಲಿ ಮುಖ್ಯಪ್ರಾಣನನ್ನೂ ಇಂದ್ರಿಯ ದೇವತೆಗಳನ್ನೂ ಇಂದ್ರಿಯ ಗೋಲಕಗಳನ್ನೂ ವಿಷಯಗಳನ್ನೂ ಅಭಿಮಾನಿ ದೇವತೆಗಳನ್ನೂ ಸೃಜಿಸಿದ. ಪ್ರಜಾಪತಿ ಮನು ದೇವ ಋಷಿ ಮುಂತಾದವರನ್ನು ಸೃಜಿಸಿದ. ಅವರಲ್ಲಿ ಸಾತ್ವಿಕ ರಾಜಸ ತಾಮಸಗಳೆಂದು ಮೂರು ಬಗೆಯವರಿರುತ್ತಾರೆ. ಸಾತ್ವಿಕರು ರಾಜಸ ತಾಮಸರ ಪೀಡೆಗಳೊಗಾದಾಗ ಅವನು ಮತ್ಸ್ಯಾದಿ ಅವತಾರ

ಗಳನ್ನು ಮಾಡಿ ಅವರನ್ನು ಕಾಪಾಡುತ್ತಾನೆ. ಹೀಗೆ ಸೃಷ್ಟ್ಯಾದಿಕರ್ತನೆಂದು ಭಗವಂತನನ್ನು ಉಪಾಸನೆ ಮಾಡಿದರೆ ಸಂಸಾರಬಂಧ ವಿಮೋಚನೆಯಾಗುವುದು ವೇದಗಳಿಗೆ ಇದನ್ನು ಹೇಳುವುದರಲ್ಲಿಯೆ ಹೆಚ್ಚಿನ ಆದರವಿದೆ. ಇದು ಬ್ರಹ್ಮನ ಪ್ರಥಮದಿನಕಲ್ಪದ ವಿವರ. ಹೀಗೇ ಬೇರೆ ದಿನ ಕಲ್ಪಗಳಲ್ಲಿಯೂ ಸೃಷ್ಟ್ಯಾದಿಗಳಿವೆ.

ಶೌನಕರು-ಸೂತರೆ, ವಿದುರನಿಗೆ ತೀರ್ಥಯಾತ್ರೆಯಲ್ಲಿ ಮೈತ್ರೇಯರ ಭೆಟ್ಟಿ ಎಲ್ಲಿ ಆಯಿತು? ಮೈತ್ರೇಯರು ಏನು ಉಪದೇಶ ನೀಡಿದರು? ವಿದುರ ಬಂಧುಗಳಿಂದ ದೂರ ಹೋದುದೇಕೆ? ಹಿಂತಿರುಗಿ ಬಂದುದೇಕೆ? ವಿದುರನ ಈ ವೃತ್ತಾಂತಗಳನ್ನು ಹೇಳಿರಿ.

ಸೂತರು- ಪರೀಕ್ಷಿತನಿಗೆ ಶುಕಮುನಿ ಉಪದೇಶಿಸಿದ್ದನ್ನೆ ನಾನೂ ನಿಮಗೆ ಹೇಳುತ್ತೇನೆ. ಅದರಲ್ಲಿಯೆ ನಿಮ್ಮ ಪ್ರಶ್ನೆಗಳಿಗೂ ಉತ್ತರವಿದೆ.

★★★

ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ,

'ಈ ಭಾಗವತದಲ್ಲಿ ಪುರಾಣದ ಹತ್ತು ಲಕ್ಷಣಗಳಿವೆ. ಅವು- ಸರ್ಗ, ವಿಸರ್ಗ, ಸ್ಥಾನ, ಪೋಷಣ, ಊತಿ, ಮನ್ವಂತರ, ಈಶಕಥಾ, ನಿರೋಧ, ಮುಕ್ತಿ, ಆಶ್ರಯಗಳು. ಆಶ್ರಯವೆಂದರೆ ಭಗವತ್ಸ್ವರೂಪ ನಿರೂಪಣೆ. ಅದನ್ನು ವಿಶೇಷವಾಗಿ ತಿಳಿಸಲು ಉಳಿದ ಒಂಬತ್ತು ಲಕ್ಷಣಗಳಿವೆ.' ಎಂದು ಅವುಗಳನ್ನು ಒಂದೊಂದಾಗಿ ವಿವರಿಸುತ್ತಾರೆ. ಮೊದಲಿಗೆ ಸರ್ಗವಿಸರ್ಗಗಳು—

ಭೂತಮಾತ್ರೇಂದ್ರಿಯಧಿಯಾಂ ಜನ್ಮ ಸರ್ಗ ಉದಾಹೃತಃ ।
ಬ್ರಹ್ಮಣೋ ಗುಣವೈಷಮ್ಯಾದ್ ವಿಸರ್ಗಃ ಪೌರುಷಃ ಸ್ಮೃತಃ ॥ ೩ ॥

ಪರಬ್ರಹ್ಮ ನಾರಾಯಣನಿಂದ ಗುಣವೈಷಮ್ಯನಾಮಕವಾದ ಮಹತ್ತತ್ತ್ವದಿಂದ ಅಹಂಕಾರದ್ವಾರಾ ಪಂಚಭೂತ ತನ್ಮಾತ್ರ ಇಂದ್ರಿಯ ಬುದ್ಧಿ ಸಹಿತವಾದ ಬ್ರಹ್ಮಾಂಡದ ಸೃಷ್ಟಿ ಸರ್ಗ ಎನಿಸುತ್ತದೆ. ಬ್ರಹ್ಮಾಂಡದಲ್ಲಿ ವಿರಾಟ್‌ನಾಮಕ ಬ್ರಹ್ಮನ ಸೃಷ್ಟಿ ವಿಸರ್ಗ ಎಂದೂ ಪೌರುಷ ಎಂದೂ ಕರೆಸಿಕೊಳ್ಳುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರೆಲ್ಲರೂ 'ಮಹದಾದಿ ಬ್ರಹ್ಮಾಂಡ ಪರ್ಯಂತ ಮಾತ್ರವಲ್ಲದೆ ವಿರಾಟ್ ನಾಮಕಬ್ರಹ್ಮನ ಸೃಷ್ಟಿಯೂ ಸರ್ಗವೆನಿಸುತ್ತದೆ. ಮುಂದೆ ಬ್ರಹ್ಮನು ನಡೆಸುವ ಚರಾಚರ ಸೃಷ್ಟಿ ವಿಸರ್ಗ ಎನಿಸುತ್ತದೆ. ಪೌರುಷ ಎಂದರೆ ಪುರುಷನೆನಿಸಿದ ಬ್ರಹ್ಮನು ಮಾಡುವ ಸೃಷ್ಟಿ' ಎಂದಿದ್ದಾರೆ. ವಸ್ತುತಃ ಶ್ರೀಹರಿ ಮಾಡುವ ಬ್ರಹ್ಮಾಂಡದೊಳಗಿನ ಹದಿನಾಲ್ಕು ಲೋಕರೂಪವಾದ ಬ್ರಹ್ಮನ ಶರೀರಸೃಷ್ಟಿಯೆ

ವಿಸರ್ಗ, ಅನುಸರ್ಗ, ಪೌರುಷ ಎಂದು ಕರೆಸಿಕೊಳ್ಳುತ್ತದೆ ಹೊರತು ಬ್ರಹ್ಮನು ಮಾಡುವ ಚರಾಚರ ಸೃಷ್ಟಿಯಲ್ಲ. ಅದರಿಂದ ಹೀಗೆ ಹೇಳಬೇಕು—

ಮಹದಾದ್ಯಂಡಪರ್ಯಂತಃ ಸರ್ಗೋಽಂಡೇ ಬ್ರಹ್ಮಣಸ್ತು ಯಃ ।
ಅನುಸರ್ಗ ಇತಿ ಪ್ರೋಕ್ತಃ ಪೌರುಷಶ್ಚೇತಿ ಕಥ್ಯತೇ ।
ಪಂಚಭೂತಸಮೂಹೇನ ಜಾತಃ ಪುರುಷ ಉಚ್ಯತೇ ।
ಬಹುತ್ವಾತ್ ತತ್ರ ಭೂತಾನಾಂ ತಾವತ್ತ್ವಾತ್ ತತ್ವಮೇಕಜಂ ॥
ಇತಿ ವ್ಯೋಮಸಂಹಿತಾಯಾಂ ।

'ಮಹತ್ತತ್ತ್ವವನ್ನಾರಂಭಿಸಿ ಬ್ರಹ್ಮಾಂಡಪರ್ಯಂತಸೃಷ್ಟಿ ಸರ್ಗ ಎನಿಸುತ್ತದೆ. ಬ್ರಹ್ಮಾಂಡದಲ್ಲಿ ವಿರಾಟ್‌ನಾಮಕ ಬ್ರಹ್ಮನಿಗೆ ಹದಿನಾಲ್ಕು ಲೋಕರೂಪವಾದ ಶರೀರವನ್ನು ಶ್ರೀಹರಿ ಸೃಜಿಸುವುದು ಅನುಸರ್ಗ ಎಂದೂ ವಿಸರ್ಗವೆಂದೂ ಪುರುಷರೂಪ ಬ್ರಹ್ಮನ ವಿರಾಟ್‌ಶರೀರಸೃಷ್ಟಿರೂಪವಾದ್ದರಿಂದ ಪೌರುಷವೆಂದೂ ಕರೆಸಿಕೊಳ್ಳುತ್ತದೆ. ಪಂಚಭೂತಗಳ ಪಂಚೀಕರಣದಿಂದ ಹುಟ್ಟಿದ ಚತುರ್ಮುಖ ಪುರುಷ ಎನಿಸುತ್ತಾನೆ. ಅದರಿಂದ ಪಂಚೀಕರಣವಿಲ್ಲದ ಬ್ರಹ್ಮಾಂಡಬಾಹ್ಯಸೃಷ್ಟಿ ಪೌರುಷವೆನಿಸುವುದಿಲ್ಲ. ಬ್ರಹ್ಮಾಂಡದೊಳಗೆ ಎಲ್ಲೆಡೆ ಪಂಚೀಕರಣವಿದ್ದರೂ ಭೂಮಿ ಪೃಥಿವೀಭೂತದಿಂದ, ನದಿಸಮುದ್ರಗಳು ಅಪ್‌ಭೂತದಿಂದ ಎಂದು ಮುಂತಾಗಿ ಒಂದೊಂದು ಭೂತದಿಂದಲೆ ಒಂದೊಂದು ಸೃಷ್ಟಿ ಎಂಬ ವ್ಯವಹಾರ ಕಾಠಿನ್ಯ ಶೀತಸ್ಪರ್ಶ ಮುಂತಾದವುಗಳ ಆಧಿಕ್ಯಪ್ರಯುಕ್ತವಾಗಿದೆ' ಎಂದು ವ್ಯೋಮಸಂಹಿತೆಯಲ್ಲಿ ಹೇಳಿದೆ.

★★★

ನಿರೋಧ ಮತ್ತು ಮುಕ್ತಿಗಳೆಂದರೇನೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ—

ನಿರೋಧೋಽಸ್ಯಾನುಶಯನಂ ಆತ್ಮನಃ ಸಹ ಶಕ್ತಿಭಿಃ ।
ಮುಕ್ತಿರ್ಹಿತ್ವಾಽನ್ಯಥಾರೂಪಂ ಸ್ವರೂಪೇಣ ವ್ಯವಸ್ಥಿತಿಃ ॥ ೬ ॥

ಮುಕ್ತ ಅಮುಕ್ತ ಜೀವಸಮೂಹವು ಶ್ರೀಹರಿಯ ಉದರವನ್ನು ಪ್ರವೇಶಿಸಿ ಇಚ್ಛಾದಿಶಕ್ತಿಗಳೊಂದಿಗೆ ಲಯಕಾಲದಲ್ಲಿ ನಿದ್ದೆ ಮಾಡುವುದು ನಿರೋಧವೆನಿಸು ವುದು. ಜೀವನು ಅಸ್ವಾಭಾವಿಕವಾದ ಪ್ರಕೃತಿಬಂಧವನ್ನು ಕಳೆದುಕೊಂಡು ಜ್ಞಾನಾನಂದಾತ್ಮಕ ಸ್ವರೂಪಶರೀರದಿಂದ ಇರುವುದು ಮುಕ್ತಿ ಎನಿಸುವುದು.

ಇಲ್ಲಿ ಶ್ರೀಧರೀವ್ಯಾಖ್ಯಾನ ಪ್ರಕಾರ ಶ್ರೀಹರಿ ಯೋಗನಿದ್ರೆ ಮಾಡುವಾಗ ಜೀವನು ತನ್ನ ಜೀವೋಪಾಧಿಯೊಂದಿಗೆ ಮಲಗುವುದು ನಿರೋಧ. ಅಸ್ವಾಭಾವಿಕವಾದ ಅವಿದ್ಯಾಕಲ್ಪಿತ ಕರ್ತೃತ್ವಾದಿಗಳನ್ನು ತೊರೆದು ಬ್ರಹ್ಮಸ್ವರೂಪದಿಂದಿರುವುದು ಮುಕ್ತಿ. ಇದು ಪ್ರಮಾಣವಿರುದ್ಧ—

ಅನುಪ್ರವಿಶ್ಯ ಪರಮಂ ಜೀವಸ್ಯ ಶಯನಂ ತು ಯತ್ ।
ಸಹೈವ ಶಕ್ತಿಭಿಃ ಸ್ವೀಯೈರಿಚ್ಛಾದ್ಯೈರಪ್ರಕಾಶಿತೈಃ ।
ಸ ನಿರೋಧ ಇತಿ ಪ್ರೋಕ್ತೋ ವಿಮುಕ್ತಿರ್ಯತ್ರ ಮೋಕ್ಷಣಂ ।

ಇತಿ ನಾರದೀಯೇ ।

ಲಯಕಾಲದಲ್ಲಿ ಜೀವನ ಇಚ್ಛಾದಿಗಳು ಪ್ರಕಟವಾಗದಿರುವುದರಿಂದ ಇಚ್ಛಾದ್ಯನುಕೂಲ ಶಕ್ತಿಗಳು ಸುಪ್ತವಾಗಿರುತ್ತವೆ ಎನ್ನಬೇಕು. ಹೀಗೆ ಇಚ್ಛಾದಿ ಶಕ್ತಿಗಳಿಂದ ಕೂಡಿಕೊಂಡೇ ಜೀವನು ಪರಮಾತ್ಮನ ಉದರವನ್ನು ಪ್ರವೇಶಿಸಿ ನಿದ್ದೆ ಮಾಡುವುದು 'ನಿರೋಧ'ವೆನಿಸುತ್ತದೆ. ಜೀವನು ವಿಶೇಷವಾಗಿ ಪ್ರಕೃತಿ ಬಂಧದಿಂದ ಬಿಡುಗಡೆ ಹೊಂದಿರುವ ಅವಸ್ಥೆ ವಿಮುಕ್ತಿ ಎನಿಸುತ್ತದೆ ಎಂದು ನಾರದೀಯ ಪುರಾಣದಲ್ಲಿ ಹೇಳಿದೆ.

★★★

'ಆಶ್ರಯ' ಎಂದರೇನೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ—

ಆಭಾಸಶ್ಚ ನಿರೋಧಶ್ಚ ಯತಸ್ತತ್ ತ್ರಯಮೀಯತೇ ।
ಸ ಆಶ್ರಯಃ ಪರಂ ಬ್ರಹ್ಮ ಪರಮಾತ್ಮೇತಿ ಶಬ್ದ್ಯತೇ ॥ ೭ ॥

ಪ್ರಪಂಚದ ಜ್ಞಾನ, ಲಯ ಮತ್ತು ಸೃಷ್ಟಿಸ್ಥಿತಿಗಳು ಈ ಮೂರು ಯಾರಿಂದಾಗುವುವೋ ಯಾರಲ್ಲಿ ಆಶ್ರಯಿಸಿವೆಯೋ ಜಗದಾಶ್ರಯನಾದ ಆ ಶ್ರೀಹರಿ ಆಶ್ರಯನೆನಿಸುತ್ತಾನೆ. ಪರಬ್ರಹ್ಮ ಪರಮಾತ್ಮನೆಂದರೂ ಅವನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಯತಸ್ತತ್ ತ್ರಯಮೀಯತೇ' ಎಂಬಲ್ಲಿ 'ಯತಶ್ಚಾಧ್ಯವಸೀಯತೇ' ಎಂದು ಪಾಠವಿಟ್ಟುಕೊಂಡಿದ್ದಾರೆ. 'ಆಭಾಸ' ಎಂದರೆ ಸೃಷ್ಟಿ ನಿರೋಧ ಎಂದರೆ ಲಯ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಪ್ರಮಾಣ ವಿರೋಧ ಬರುತ್ತದೆ—

ಸೃಷ್ಟಿಸ್ಥಿತ್ಯಪ್ಯಯಾಭಾಸಾ ಯದ್ಬಲಾದ್ ಯತ್ರ ಚ ಸ್ಥಿತಾಃ ।
ತದ್‌ಬ್ರಹ್ಮ ಜಗದಾಧಾರಂ ವಾಸುದೇವೇತಿ ತದ್ ವಿದುಃ ॥

ಇತಿ ಭಾಗವತತಂತ್ರೇ ।

ಭಾಗವತ ತಂತ್ರದಲ್ಲಿ ಹೀಗೆ ಹೇಳಿದೆ—

'ಸೃಷ್ಟಿ ಸ್ಥಿತಿ ಲಯ ಜ್ಞಾನಗಳು ಯಾರ ಬಲದಿಂದ ಜಗತ್ತಿಗೆ ಆಗುತ್ತಿದ್ದು ಯಾರಲ್ಲಿ ಲಕ್ಷಣರೂಪವಾಗಿ ಆಶ್ರಯಿಸಿವೆಯೋ ಜಗದಾಶ್ರಯನಾದ ಆ ಹರಿ ಆಶ್ರಯನೆನಿಸಿದ್ದಾನೆ. ಅವನನ್ನು ಪರಬ್ರಹ್ಮ ಪರಮಾತ್ಮನೆಂದು ಮಾತ್ರವಲ್ಲದೆ ವಾಸುದೇವನೆಂದೂ ಬಲ್ಲವರು ತಿಳಿಯುತ್ತಾರೆ'.

ಭಾಗವತ ಶ್ಲೋಕದಲ್ಲಿ 'ಆಭಾಸ' ಎಂದರೆ ಜ್ಞಾನವೆಂದೇ ಅರ್ಥ. ಅದರ ಜೊತೆಗೆ 'ನಿರೋಧಶ್ಚ ತತ್' 'ನಿರೋಧ', ಲಯವೂ 'ತಚ್ಚ' ಪೂರ್ವೋಕ್ತ ಸೃಷ್ಟಿಸ್ಥಿತಿ ಎಂಬ ದ್ವಯವೂ ಹೀಗೆ ತ್ರಯಂ ಮೂರು ಕಾರ್ಯಗಳೂ 'ಯತಃ' ಯಾರಿಂದಾಗುತ್ತಿದ್ದು ಯಾರಲ್ಲಿ ಲಕ್ಷಣರೂಪವಾಗಿ ಆಶ್ರಯಿಸಿವೆಯೋ ಅವನು ಆಶ್ರಯ ಎಂದು ವ್ಯಾಖ್ಯಾನ ಸೂಚಿತವಾಗಿದೆ.

★★★

ಬ್ರಹ್ಮಾದಿ ಜೀವರೂ ಸೃಷ್ಟ್ಯಾದಿಗಳನ್ನು ಮಾಡುವುದರಿಂದ, 'ಸೃಷ್ಟ್ಯಾದಿ ವ್ಯಾಪಾರಾಶ್ರಯನಿಗೆ ಆಶ್ರಯ ಎಂದು ಹೆಸರು' ಎಂದರೆ ಅವನು ವಿಷ್ಣುವೆ ಆಗಬೇಕಿಲ್ಲ ಎಂಬ ಶಂಕೆಗೆ ಆಸ್ಪದವಿದೆ. ಅದರಿಂದ 'ಆಶ್ರಯರಾದ ಬ್ರಹ್ಮಾದಿಗಳಿಗೂ ಆಶ್ರಯನಾದವನನ್ನೇ 'ಆಶ್ರಯ' ಎನ್ನಬೇಕು' ಎಂಬ ಅಭಿಪ್ರಾಯದಿಂದ ಬ್ರಹ್ಮಾದಿ ಜೀವರು ಜ್ಞಾನಕ್ಕಾಗಿ ಪರಾಶ್ರಯಾಪೇಕ್ಷಿಗಳು, ವಿಷ್ಣು ಅಪೇಕ್ಷಿಸುವುದಿಲ್ಲ ಎಂದು ಮುಂದೆ ಹೇಳುತ್ತಾರೆ. ಅದಕ್ಕೆ ಈಗ ಬ್ರಹ್ಮಾದಿಜೀವರು ಪರಾಶ್ರಯಾಪೇಕ್ಷಿಗಳೆಂಬು ದನ್ನು ಸ್ಪಷ್ಟಪಡಿಸುತ್ತಾರೆ ಶುಕಮುನಿಗಳು—

ಆಧ್ಯಾತ್ಮಿಕೋ ಯಃ ಪುರುಷಃ ಸೋಽಸಾವೇವಾಧಿದೈವಿಕಃ ।
ಯಸ್ತತ್ರೋಭಯವಿಚ್ಛೇದಃ ಸ ಸ್ಮೃತೋ ಹ್ಯಾಧಿಭೌತಿಕಃ ॥ ೮ ॥

ಆಧ್ಯಾತ್ಮಿಕವಾದ ಚಕ್ಷುರಿಂದ್ರಿಯದಲ್ಲಿ ಪ್ರೇರಕನಾದ ಸೂರ್ಯನೆ ಆಧಿ ದೈವಿಕವಾದ ಸೂರ್ಯಮಂಡಲದಲ್ಲಿ ನಿಯಾಮಕನಾಗಿದ್ದಾನೆ. ಅವನು ಪ್ರೇರಕನಾಗಿದ್ದರೆ ಚಕ್ಷುರಿಂದ್ರಿಯ ಸೂರ್ಯಪ್ರಕಾಶ ಇವೆರಡರಿಂದ ಆಧಿಭೌತಿಕವಾದ ರೂಪಾದಿಗಳ ಜ್ಞಾನ ಬರುತ್ತದೆ. ಆಧಿಭೌತಿಕವಾದ ರೂಪಾದಿಗಳ ಪ್ರೇರಕ ದೇವತೆಗಳು ಪ್ರೇರಕರಾಗಿದ್ದರೆ ರೂಪಾದಿಜ್ಞಾನದಿಂದ ಆಧ್ಯಾತ್ಮಿಕವಾದ ಚಕ್ಷುರಿಂದ್ರಿಯ ಆಧಿದೈವಿಕವಾದ ಪ್ರಕಾಶ ಇವೆರಡರ ಅಸ್ತಿತ್ವ ಅನುಮಾನದಿಂದ ನಿಶ್ಚಯವಾಗುವುದು. ಹೊಗೆಯಿಂದ ಬೆಂಕಿ ಇದೆ ಎಂದು ಊಹಿಸುವಂತೆ ರೂಪಾದಿಜ್ಞಾನದಿಂದ ಅದಕ್ಕೆ ಕಾರಣವಾದ ಚಕ್ಷುರಿಂದ್ರಿಯ, ಸಹಕಾರಿಯಾದ ಪ್ರಕಾಶಗಳನ್ನು ಊಹಿಸುವುದು ಸಾಧ್ಯ.

ಹೀಗೆ ನಮಗೆ ಜೀವರಿಗೆ, ರೂಪಾದಿಗಳನ್ನು ತಿಳಿಯಲು ಚಕ್ಷುರಾದಿ ಇಂದ್ರಿಯಗಳ ಮತ್ತು ಪ್ರಕಾಶಾದಿಗಳ ಆಶ್ರಯ ಬೇಕು. ಚಕ್ಷುರಾದಿ ಇಂದ್ರಿಯ ಮತ್ತು ಪ್ರಕಾಶಾದಿಗಳನ್ನು ಅನುಮಾನದಿಂದ ತಿಳಿದುಕೊಳ್ಳಲು ರೂಪಾದಿಜ್ಞಾನ ಬೇಕು. ಹೀಗೆ ನಾವೆಲ್ಲರೂ ಪರಾಶ್ರಯರು. ಪರಮಾತ್ಮನಿಗೆ ಯಾರ ಆಶ್ರಯವೂ ಬೇಕಾಗಿಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಜೀವರ ಪರಾಶ್ರಯತ್ವವನ್ನು ಹೇಳಿಲ್ಲ. ಶ್ರೀಧರೀಯಪ್ರಕಾರ ಆಧ್ಯಾತ್ಮಿಕಪುರುಷ ಎಂದರೆ ಚಕ್ಷುರಾದಿ ಇಂದ್ರಿಯಗಳಿಂದ ಅನುಭವ ಪಡೆಯುವ ಜೀವ. ಆಧಿದೈವಿಕಪುರುಷರೆಂದರೆ ಸೂರ್ಯಾದಿಗಳು. ಇವರಿಬ್ಬರೂ ಬ್ರಹ್ಮಸ್ವರೂಪರೇ. ಉಭಯವಿಚ್ಛೇದಕ್ಕೆ ಎಂದರೆ ಇಬ್ಬರಲ್ಲಿ ಭೇದ ಉಂಟಾಗಲು ಕಾರಣ ಆಧಿಭೌತಿಕವಾದ ದೇಹ. ವೀರರಾಘವ ವ್ಯಾಖ್ಯಾನ ಪ್ರಕಾರ ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿಕ ಮೂರಕ್ಕೂ ಅಂತರ್ಯಾಮಿ ಒಬ್ಬನೆ ಪರಮಾತ್ಮ. 'ಉಭಯವಿಚ್ಛೇದ' ಎಂದರೆ ಜ್ಞಾತೃ, ಜ್ಞಾನಕರಣಗಳಿಗಿಂತ ವಿಲಕ್ಷಣವಾದ ಜ್ಞೇಯವಾದ ಶಬ್ದಾದಿ ಆಧಿಭೌತಿಕದಲ್ಲಿಯೂ ಅವನೆ ಅಂತರ್ಯಾಮಿ ಎಂದರ್ಥ. ಈ ಎರಡೂ ವ್ಯಾಖ್ಯಾನ ಪ್ರಕಾರ ಶ್ಲೋಕದಲ್ಲಿ 'ಉಭಯವಿಚ್ಛೇದ' ಶಬ್ದ ವ್ಯರ್ಥ. ಏಕೆಂದರೆ ಮುಂದಿನ ಶ್ಲೋಕದಲ್ಲಿ ಇವರ ಪ್ರಕಾರ ಜ್ಞಾತೃ ಜ್ಞೇಯಜ್ಞಾನಕರಣಗಳು ಒಂದನ್ನೊಂದು ಆಶ್ರಯಿಸಿವೆ ಎನ್ನಲಾಗಿದೆ. ಅದಕ್ಕೆ ಇಲ್ಲಿ ಈ ವಿಶೇಷಣ ಬೇಕಾಗಿಲ್ಲ. ವಸ್ತುತಃ ಇಲ್ಲಿ ಈ ವಿಶೇಷಣವೆ ಪರಸ್ಪರಾಶ್ರಯವನ್ನು ತಿಳಿಸುತ್ತದೆ. ಮುಂದಿನ ಶ್ಲೋಕದಲ್ಲಿ ಸುವ್ಯವಸ್ಥೆಯ ಸ್ವರೂಪನಿರೂಪಣೆ.

ಆಧಿಭೌತಿಕೇನ ರೂಪೇಣ ಹಿ ಚಕ್ಷುಃಪ್ರಕಾಶಯೋಃ
ಸಮ್ಯಕ್ ಪರಿಜ್ಞಾನಂ ।

ಆದಿಭೌತಿಕವಾದ ರೂಪಾದಿ ಜ್ಞಾನ ಬಂದಾಗಲೆ ಅದಕ್ಕೆ ಕಾರಣವಾದ ಚಕ್ಷುಸ್ ಮತ್ತು ಪ್ರಕಾಶಗಳನ್ನು ಸರಿಯಾಗಿ ಊಹಿಸಿ ತಿಳಿಯಲು ಸಾಧ್ಯ.

ಇದು ಉಪಲಕ್ಷಣ. 'ಉಭಯೋರ್ವಿಚ್ಛೇದಃ' ಎಂಬಂತೆ 'ಉಭಾಭ್ಯಾಂ ವಿಚ್ಛೇದಃ' ಎಂದೂ ಬಿಡಿಸಬೇಕು. ಚಕ್ಷುಸ್ ಮತ್ತು ಪ್ರಕಾಶಗಳ ಅಭಿಮಾನಿಗಳ ಆಶ್ರಯದಿಂದ ರೂಪಾದಿಗಳ ಜ್ಞಾನ ಬರಲು ಸಾಧ್ಯ. ಹೀಗೆ ಪರಸ್ಪರಾಶ್ರಯ.

★★★

ಜೀವರಿಗೆ ಜ್ಞಾನಸಂಪಾದನೆಯಲ್ಲಿ ಪರಸ್ಪರ ಆಶ್ರಯಿಸುವ ಆಧ್ಯಾತ್ಮಿಕಾದಿ ಮೂರರ ಅಪೇಕ್ಷೆ ಇದೆ ಎಂದು ಹೇಳಿ ಪರಮಾತ್ಮನಿಗೆ ಅದು ಇಲ್ಲ ಎನ್ನುವುದು ಸುವ್ಯವಸ್ಥೆಯಲ್ಲಿ ಸಿದ್ಧವಾಗಿದೆ ಎನ್ನುತ್ತಾರೆ ಶುಕಮುನಿಗಳು—

ಏತದೇಕತಮಾಭಾವೇ ಯದಾ ನೋಪಲಭಾಮಹೇ ।
ತ್ರಿತಯಂ ತತ್ರ ಯೋ ವೇದ ಸ ಆತ್ಮಾ ಸ್ವಾಶ್ರಯಾಶ್ರಯಃ ॥ ೯ ॥

ಈ ಮೂರರಲ್ಲಿ ಒಂದೂ ಇಲ್ಲದಿರುವಾಗ ಸುಪ್ತಿಯಲ್ಲಿ ನಾವು ಏನನ್ನೂ ತಿಳಿಯುವುದಿಲ್ಲ. ಆಗ ಆ ಮೂರನ್ನೂ ಅವುಗಳ ಅಭಿಮಾನಿಗಳನ್ನೂ ತಿಳಿಯುವವನು ಜೀವಾಂತರ್ಯಾಮಿ ಪರಮಾತ್ಮ. ಅವನೆ ಚೆನ್ನಾಗಿ ಆಶ್ರಯರಾದ ಬ್ರಹ್ಮಾದಿಗಳಿಗೂ ಆಶ್ರಯನೆನಿಸುವುದರಿಂದ 'ಆಶ್ರಯ' ಎಂದರೆ ಅವನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಜ್ಞಾತೃಜ್ಞೇಯಕರಣಗಳಿಗೆ ಪರಸ್ಪರಾಶ್ರಯವನ್ನು ಹೇಳಿ ಸಾಕ್ಷಿ ಚೈತನ್ಯಕ್ಕೆ ಅದು ಇಲ್ಲ ಎಂದಿದ್ದಾರೆ. 'ಏಕಮೇಕತರಾಭಾವೇ' ಎಂದು ಪಾಠ. ಆದರೆ 'ಯದಾ' ಶಬ್ದಸ್ವಾರಸ್ಯವನ್ನು ಹೇಳಿಲ್ಲ.

ಸುಪ್ತಾವಪಿ ಯಃ ಸರ್ವಂ ವೇತ್ತಿ ಜೀವಾನಾಂ ಸ ಪರಃ ।
ಸ್ವಪ್ನೇನ ಶಾರೀರಮಭಿಪ್ರಹತ್ಯಾಸುಪ್ತಃ ಸುಪ್ತಾನಭಿಚಾಕಶೀತಿ ।
ಇತಿ ಶ್ರುತೇಃ । ಸುಷ್ಠ್ವಾಶ್ರಯಾಣಾಮಪ್ಯಾಶ್ರಯಃ ।

ಜೀವರಿಗೆ ಸುಪ್ತ್ಯಾದಿ ಅವಸ್ಥೆಗಳಲ್ಲಿ ಬಾಹ್ಯಪದಾರ್ಥಜ್ಞಾನವಿಲ್ಲದಿರುವಾಗಲೂ ಎಲ್ಲವನ್ನೂ ತಿಳಿಯುವವನು ಪರಮಾತ್ಮ. 'ಜೀವನಿಗೆ ಸ್ವಪ್ನಾವಸ್ಥೆಯನ್ನಿತ್ತು ತಾನು ಸುಪ್ತನಾಗದೆ ಸುಪ್ತಜೀವ ಹಾಗೂ ಆಧ್ಯಾತ್ಮಿಕಾದಿ ಸಕಲ ಪದಾರ್ಥಗಳನ್ನೂ ಚೆನ್ನಾಗಿ ನೋಡುತ್ತಾನೆ ಪರಮಾತ್ಮ' ಎಂದು ಶ್ರುತಿ ಹೇಳುತ್ತದೆ. 'ಸ್ವಾಶ್ರಯಾಶ್ರಯಃ' -ಚೆನ್ನಾಗಿ ಆಶ್ರಯರಾದ ಬ್ರಹ್ಮಾದಿಗಳಿಗೂ ಆಶ್ರಯ ಶ್ರೀಹರಿ ಎಂದರ್ಥ.

ಬೇರೆ ವ್ಯಾಖ್ಯಾನಕಾರರು 'ತನಗೂ ಆಶ್ರಯ, ಅನ್ಯರಿಗೂ ಆಶ್ರಯ' ಎಂದು ವ್ಯಾಖ್ಯಾನಿಸಿದ್ದಾರೆ. ಅನ್ಯರಿಗೆ ಎಂದು ಅಧ್ಯಾಹಾರ ಬೇಕಾಗುತ್ತದೆ. ಆಶ್ರಯರಿಗೆ ಆಶ್ರಯ ಎಂದಾಗ ಈ ದೋಷವಿಲ್ಲ. ತನ್ನ ಆಶ್ರಯಕ್ಕೆ ತಾನು ಆಶ್ರಯ ಎಂದು ಅನ್ಯೋನ್ಯಾಶ್ರಯವನ್ನೂ ತಿಳಿಯುವ ಪ್ರಸಂಗವಿಲ್ಲ. ಏಕೆಂದರೆ 'ಸ್ವ-ಆಶ್ರಯ' ಅಲ್ಲ 'ಸು ಆಶ್ರಯ' ಎಂದು ಬಿಡಿಸಬೇಕು.

★★★

ವೈರಾಜಪುರುಷನಿಂದಾದ ಸೃಷ್ಟಿಯನ್ನು ಶುಕಮುನಿ ಹೇಳುತ್ತಾರೆ—

ಪುರುಷೋಽಂಡಂ ವಿನಿರ್ಭಿದ್ಯ ಯದಾಽಸೌ ಸ ವಿನಿರ್ಗತಃ ।
ಆತ್ಮನೋಽಯನಮನ್ವಿಚ್ಛನ್ನಪೋಽಸ್ರಾಕ್ಷೀಚ್ಛುಚಿಃ ಶುಚೀಃ ॥ ೧೦ ॥

ತಾಸ್ವವಾತ್ಸೀತ್ ಸ್ವಸೃಷ್ಟಾಸು ಸಹಸ್ರಪರಿವತ್ಸರಾನ್ ।
ತೇನ ನಾರಾಯಣೋ ನಾಮ ಯದಾಪಃ ಪುರುಷೋದ್ಭವಾಃ ॥ ೧೧ ॥

ಶ್ರೀಹರಿ ಬ್ರಹ್ಮಾಂಡದೊಳಗೆ ತನ್ನ ಶರೀರ ಪ್ರಮಾಣಕ್ಕೆ ಸರಿಯಾದ ಅವಕಾಶ ಮಾಡಿಕೊಂಡು ಪುರುಷನಾಮಕನಾಗಿ ಪ್ರಕಟನಾದಾಗ ತನಗೆ ಮಲಗಲು ಸ್ಥಳವನ್ನು ಬಯಸಿ ಸ್ವತಃ ಶುದ್ಧನಾದ ತಾನು ಶುದ್ಧವಾದ ಗರ್ಭೋದಕವನ್ನು ಸೃಜಿಸಿದ. ಮತ್ತು ಅದರಲ್ಲಿ ಸಾವಿರ ದಿವ್ಯವರ್ಷಕಾಲ ಮಲಗಿದ. ನರನಿಂದ ಅಂದರೆ ನಾಶರಹಿತ ಪುರುಷನಾಮಕ ಹರಿಯಿಂದ ಸೃಷ್ಟವಾದ್ದರಿಂದ ನೀರು ನಾರ ಎನಿಸಿತು. ನಾರವೆನಿಸಿದ ನೀರಲ್ಲಿ ಮಲಗಿದ್ದರಿಂದ ಹರಿ ನಾರಾಯಣನೆನಿಸಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ವೈರಾಜಪುರುಷನೆಂದರೆ ಚತುರ್ಮುಖ ಎಂದಿದ್ದಾರೆ. ಚತುರ್ಮುಖರೂಪಿ ಪರಮಾತ್ಮ ನೀರಲ್ಲಿ ಮಲಗಿ ನಾರಾಯಣನೆನಿಸಿದ್ದಾನೆ ಎನ್ನುತ್ತದೆ ವೀರರಾಘವ ವ್ಯಾಖ್ಯಾನ. ವಲ್ಲಭವ್ಯಾಖ್ಯಾನದಲ್ಲಿ ಈ ವೈರಾಜಪುರುಷ ಬ್ರಹ್ಮಾಂಡವನ್ನು ಭೇದಿಸಿ ಹೊರಗೆ ಬಂದು ತನಗೆ ವಾಸಮಾಡಲು ಸ್ಥಳ ಎಲ್ಲಿ ಎಂದು ಹುಡುಕತೊಡಗಿದ. ಅಂದಿನವರೆಗೆ ಬ್ರಹ್ಮಾಂಡದೊಳಗಿದ್ದುದರಿಂದ ಈ ಸಮಸ್ಯೆ ಇರಲಿಲ್ಲ. ಈಗ ಪುರುಷ ನೀರನ್ನು ಸೃಜಿಸಿ ಅದರಲ್ಲಿ ವಾಸ ಮಾಡಿ ನಾರಾಯಣನೆನಿಸಿದ[೧] ಎಂದಿದೆ. ವಸ್ತುತಃ 'ವಿನಿರ್ಗತಃ' ಎಂದರೆ ಹೊರಗೆ ಬಂದನೆಂದರ್ಥವಲ್ಲ, ವ್ಯಕ್ತನಾದನೆಂದರ್ಥ. ಈ ಪುರುಷನೂ ಚತುರ್ಮುಖನಲ್ಲ, ವಿಷ್ಣು ಎಂದು ನಾರಾಯಣಾಧ್ಯಾತ್ಮದಲ್ಲಿ ಸ್ಪಷ್ಟವಾಗಿ ಹೇಳಿದೆ—

ವಿನಿರ್ಗತಃ ಪ್ರಕಾಶಿತಃ ।
ಅಂಡಂ ಪ್ರವಿಷ್ಟೋ ಯೋ ವಿಷ್ಣುಃ ಸೋಽಂಡಂ ಭಿತ್ವಾ ಪ್ರಕಾಶಿತಃ ।
ಸೋಽಪೋಽಸೃಜತ್ ತತೋ ನಾರಾ ನರೋಽನಾಶಾತ್ ಪರೋ ಯತಃ॥
ಇತಿ ನಾರಾಯಣಾಧ್ಯಾತ್ಮೇ ।

'ವಿನಿರ್ಗತ' ಎಂದರೆ ಬ್ರಹ್ಮಾಂಡದಿಂದ ಹೊರಗೆ ಬಂದನೆಂದರ್ಥವಲ್ಲ, ಒಳಗೆ

---

೧. ಪುರುಷಶ್ಚತುರ್ಮುಖರೂಪೀ ಅಸೌ ಪರಮಾತ್ಮಾ ಅಪಃ ಜಲಾನ್ಯಸ್ರಾಕ್ಷೀತ್ । ಸ್ವಸೃಷ್ಟಾಸು ತಾಸ್ವಪ್ಸು ಅವಾತ್ಸೀತ್ । ಏತದೇವ ನಾರಾಯಣ ಶಬ್ದಪ್ರವೃತ್ತಿ ನಿಮಿತ್ತಮಿತ್ಯಾಹ ।
-ವೀರರಾಘವಃ

ವಸ್ತುತಸ್ತು ಕಟಾಹಂ ವಿನಿರ್ಭಿದ್ಯೈವ ನಿರ್ಗತಃ। ಅತ ಏವಾತ್ಮನ ಆಶ್ರಯಾಪೇಕ್ಷಾ। ಪೂರ್ವಮಂಡಮೇವಾಶ್ರಯತ್ವೇನ ಸ್ಥಿತಂ। ತಸ್ಮಿನ್ ಭಗ್ನೇ ಆಶ್ರಯಾಂತರಮನ್ವಿಚ್ಛನ್ ಅಪೋಽಸ್ರಾಕ್ಷೀತ್।
-ವಲ್ಲಭಃ ।

ಪ್ರಕಟನಾದ ಎಂದರ್ಥ. ಏಕೆಂದರೆ, 'ಬ್ರಹ್ಮಾಂಡವನ್ನು ಪ್ರವೇಶಿಸಿದ ವಿಷ್ಣು ಬ್ರಹ್ಮಾಂಡವನ್ನು ತನಗೆ ಬೇಕಾದಷ್ಟು ಗಾತ್ರಕ್ಕೆ ಬೆಳೆಸಿ ಅದರೊಳಗೆ ಪ್ರಕಟನಾದ. ಮತ್ತು ತನ್ನ ವಾಸಕ್ಕಾಗಿ ಅದರೊಳಗೇ ಗರ್ಭೋದಕವನ್ನು ನಿರ್ಮಿಸಿದ. ಅವನಿಗೇ ನಾಶರಹಿತನಾದ್ದರಿಂದ 'ನರ' ಎಂದು ಹೆಸರು' ಎಂದು ನಾರಾಯಣಾಧ್ಯಾತ್ಮ ಗ್ರಂಥದಲ್ಲಿ ಹೇಳಿದೆ.

★★★

ನೀರಮೇಲೆ ಮಲಗಿದ ನಾರಾಯಣ ಬ್ರಹ್ಮಾಂಡದೊಳಗೆ ಆಧ್ಯಾತ್ಮಿಕಾದಿ ತ್ರಿವಿಧ ಸೃಷ್ಟಿ ಮಾಡಿ ಅವುಗಳಿಗೆ ನಿಯಾಮಕನಾಗಿ ತಾನೂ ಮೂರು ಬಗೆಯಾಗಿ ರೂಪು ತಳೆದ ಎನ್ನುತ್ತಾರೆ ಶುಕಮುನಿಗಳು—

ಏಕೋ ನಾನಾತ್ವಮನ್ವಿಚ್ಛನ್ ಯೋಗತಲ್ಪಾತ್ ಸಮುತ್ಥಿತಃ ।
ವೀರ್ಯಂ ಹಿರಣ್ಮಯಂ ದೇವೋ ಮಾಯಯಾ ವ್ಯಸೃಜತ್ತ್ರಿಧಾ ॥ ೧೩ ॥

ಒಬ್ಬ ನಾರಾಯಣ ನಿಯಾಮಕಬಹುರೂಪ ತಳೆಯಲು ಬಯಸಿ ಯೋಗತಲ್ಪದಿಂದೆದ್ದು ಹಿರಣ್ಮಯವಾದ ಬ್ರಹ್ಮಾಂಡವನ್ನೂ ಬ್ರಹ್ಮಶರೀರವನ್ನೂ ಸ್ವೇಚ್ಛೆಯಿಂದ ಆಧ್ಯಾತ್ಮಿಕಾದಿ ಮೂರು ಬಗೆಯಿಂದ ಸೃಷ್ಟಿಮಾಡಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಪ್ರಲಯದಲ್ಲಿ ತನ್ನ ಅಂಶಭೂತರಾದ ಜೀವರನ್ನು ತನ್ನಲ್ಲಿ ಏಕೀಕರಿಸಿ ಇಟ್ಟುಕೊಂಡು ಮಲಗಿದ್ದ ಪರಮಾತ್ಮ ತಾನು ಈಗ ಬಹುವಾಗಲು ಬಯಸಿ ಅಂಶಭೂತರಾದ ಜೀವರನ್ನು ತನ್ನಿಂದ ಬೇರ್ಪಡಿಸಿದ ಎಂದಿದ್ದಾರೆ.[೧] ಇದು ಪ್ರಮಾಣ ವಿರುದ್ಧ. ಅದರಿಂದ ಹೀಗೆ ಹೇಳಬೇಕು—

ತತ್ತನ್ನಿಯಾಮಕತ್ವೇನ ಬಹುತ್ವಂ ಪ್ರಾಪ್ತುಮೀಶ್ವರಃ ।
ಅಂಡಂ ಸ್ವವೀರ್ಯಂ ತತ್ಸ್ಥಃ ಸನ್ ಕಾಮಾದಂತಸ್ತ್ರಿಧಾ ವ್ಯಧಾತ್ ।
ಇತಿ ಚ ।

ಅಂತಃಸ್ಥಿತಹರೇಃ ಕಾಮಾದಂಡೇ ಬ್ರಹ್ಮಾ ತತೋಽಜನಿ ।
ತತ್ರ ದೇವಾಶ್ಚ ಸಂಜಾತಾಃ ಪುನಸ್ತತ್ತ್ವಾತ್ಮಕಾಃ ಪ್ರಭೋಃ । ಇತಿ ಚ ।

'ತಾನು ನಿರ್ಮಿಸುವ ಆಯಾ ವಸ್ತುಗಳಿಗೆ ತಾನು ನಿಯಾಮಕನಾಗಿ ನಾನಾ

---

೧. ಏಕಃ ಪ್ರಲಯೇ ಸ್ವಾಂಶಾನ್ ಜೀವಾನ್ ಆತ್ಮನಿ ವಿಲಾಪ್ಯ ಏಕತ್ವೇನಾಸ್ಥಿತಃ ಅನು ಅನಂತರಂ ಸೃಷ್ಟಿಕಾಲೇ ನಾನಾತ್ವಮಿಚ್ಛನ್ ತಾನೇವ ಜೀವಾನ್ ಆತ್ಮನಃ ಸಕಾಶಾದ್ ವಿಭಕ್ತಾನ್ ಕುರ್ವನ್ । -ವಿಶ್ವನಾಥಃ

ರೂಪಗಳನ್ನು ಹೊಂದುವುದಕ್ಕಾಗಿ ಮೊದಲಿಗೆ ಬ್ರಹ್ಮಾಂಡರೂಪವಾದ ತನ್ನ ವೀರ್ಯವನ್ನು, ಅದರೊಳಗಿದ್ದು 'ಸ್ವೇಚ್ಛೆಯಿಂದ ಮೂರು ಬಗೆಯಾಗಿ ನಿರ್ಮಿಸಿದ' ಎಂದೂ, 'ಬ್ರಹ್ಮಾಂಡದೊಳಗಿರುವ ಹರಿಯ ಇಚ್ಛೆಯಿಂದ ಬ್ರಹ್ಮ ಜನಿಸಿದ. ಮತ್ತು ತತ್ವಾಭಿಮಾನಿ ದೇವತೆಗಳೂ ಎರಡನೇ ಬಾರಿ ಬ್ರಹ್ಮಾಂಡದೊಳಗೆ ಜನಿಸಿದರು' ಎಂದೂ ನಾರಾಯಣಾಧ್ಯಾತ್ಮದಲ್ಲಿ ಉಕ್ತವಾಗಿದೆ.

ವಲ್ಲಭವ್ಯಾಖ್ಯಾನದಲ್ಲಿ ಪರಮಾತ್ಮ ವಾಸುದೇವ ತನ್ನ ಮಾಯಾರೂಪ ಭಾರ್ಯೆಯ ಸನ್ನಿಧಿಯಲ್ಲಿ ಬಹುರೂಪ ಹೊಂದಲು ತನ್ನ ಸಚ್ಚಿದಾನಂದ ರೂಪವಾದ ವೀರ್ಯವನ್ನು ಸದ್ರೂಪ ಚಿದ್ರೂಪ ಆನಂದರೂಪವೆಂದು ಮೂರಾಗಿ ಸೃಜಿಸಿದ. ಅಧಿಭೂತ ಸದ್ರೂಪ, ಅಧ್ಯಾತ್ಮ, ಚಿದ್ರೂಪ, ಅಧಿದೈವ ಆನಂದ ಎಂದು ಹೇಳಿದ್ದಾರೆ.[೧] ಇದಕ್ಕೆ ಪ್ರಮಾಣದ ಆಧಾರ ಸಾಲದು. ಪ್ರಮಾಣದಲ್ಲಿ 'ಅಂಡಂ ಸ್ವವೀರ್ಯಂ' ಬ್ರಹ್ಮಾಂಡರೂಪವಾದ ವೀರ್ಯವನ್ನು ಅಧಿಭೂತಾದಿ ಮೂರು ಬಗೆಯಾಗಿ ನಿರ್ಮಿಸಿದನೆಂದಿದೆ.

ಎಲ್ಲ ತತ್ವ ತತ್ವಾಭಿಮಾನಿಗಳ ಮೇಲನದಿಂದ ಬ್ರಹ್ಮಾಂಡ ಹುಟ್ಟಿತು. ಅಂಥ ಬ್ರಹ್ಮಾಂಡದಿಂದ ಮುಂದೆ ಅಗ್ನ್ಯಾದಿ ತತ್ವದೇವತೆಗಳ ಸೃಷ್ಟಿಯನ್ನು ಹೇಳುವುದು ಕೂಡಲಾರದು ಎಂಬ ಪ್ರಶ್ನೆಗೆ ಬೇರೆ ವ್ಯಾಖ್ಯಾನಗಳಲ್ಲಿ ಸಮಾಧಾನ ಸಿಗುವುದಿಲ್ಲ. ವಸ್ತುತಃ 'ತತ್ರ ದೇವಾಶ್ಚ ಸಂಜಾತಾಃ ಪುನಃ' ಇನ್ನೊಮ್ಮೆ ತತ್ವದೇವತೆಗಳು ಹುಟ್ಟುತ್ತಾರೆ. ಅದರಿಂದ ಅಸಂಗತಿ ಇಲ್ಲ.

★★★

ಶ್ರೀಹರಿ ಬ್ರಹ್ಮಶರೀರರೂಪವಾದ ವೀರ್ಯದಿಂದ ಪಂಚಭೂತಗಳನ್ನೂ ಇಂದ್ರಿಯಗಳನ್ನೂ ದೇವತೆಗಳನ್ನೂ ಸೃಷ್ಟಿಮಾಡಿದ. ಆಗ ಪಾಯು ಇಂದ್ರಿಯವನ್ನೂ ಅದರ ಅಭಿಮಾನಿಯಾದ ಮಿತ್ರನನ್ನೂ ಸೃಷ್ಟಿ ಮಾಡಿದ್ದನ್ನು ಹೇಳುತ್ತಾರೆ—

ಉತ್ಸಿಸೃಕ್ಷೋರ್ಧಾತುಮಲಂ ನಿರಭಿದ್ಯತ ವೈ ಗುದಂ ।
ತತಃ ಪಾಯುಸ್ತತೋ ಮಿತ್ರ ಉತ್ಸರ್ಗ ಉಭಯಾಶ್ರಯಃ ॥ ೨೭ ॥

ಚತುರ್ಮುಖ ಮಲವಿಸರ್ಜನೆ ಮಾಡಲು ಬಯಸಿದಾಗ ಗುದವೂ, ಅದರಲ್ಲಿ ಪಾಯು ಇಂದ್ರಿಯವೂ, ಅದಕ್ಕೆ ಅಭಿಮಾನಿಯಾದ ಮಿತ್ರದೇವನೂ, ಪಾಯು ಮಿತ್ರ ಈ ಇಬ್ಬರ ಬಲದಿಂದ ಮಲವಿಸರ್ಜನೆಯೂ ಉಂಟಾಯಿತು.

---

೧. ವಾಸುದೇವಸ್ಯ ಮಾಯಾರೂಪಾ ಯಾ ಭಾರ್ಯಾ ತಯಾ ಹೇತುಭೂತಯಾ ತಸ್ಯಾಃ ಸನ್ನಿಧಿಮಾತ್ರೇಣೈವ ಸ್ವಸ್ಮಿನ್ನೇವ ವಿದ್ಯಮಾನಂ ಬೀಜಾತ್ಮಕಂ ವೀರ್ಯಂ ಸಚ್ಚಿದಾನಂದರೂಪಂ ತ್ರಿಧಾ ಸದ್ರೂಪಚಿದ್ರೂಪಾನಂದರೂಪ ಭೇದೇನ ತ್ರಿಧಾ ಅಸೃಜತ್ । -ವಲ್ಲಭಃ

ಬ್ರಹ್ಮನ ಶರೀರ ದಿವ್ಯ, ಅದರಲ್ಲಿ ಅಸಾರಾಂಶರೂಪವಾದ ಮಲವಿಲ್ಲ, ಮತ್ತು ಮಲವಿಸರ್ಜನೆಗೆ ಪಾಯು ಇಂದ್ರಿಯ ಮತ್ತು ಅದರ ಅಭಿಮಾನಿ ದೇವತೆಗಳನ್ನು ಸರ್ವಶಕ್ತನಾದ ಬ್ರಹ್ಮ ಅವಲಂಬಿಸುವುದೂ ಕೂಡುವುದಿಲ್ಲ. ಆದರಿಂದ ಬ್ರಹ್ಮಶರೀರದಲ್ಲಿ ಪಾಯು ಇಂದ್ರಿಯ ಏಕೆ ಉಂಟಾಯಿತು ಎಂಬ ಪ್ರಶ್ನೆಗೆ ಸಮಾಧಾನ ಬೇರೆ ವ್ಯಾಖ್ಯಾನಗಳಲ್ಲಿ ಇಲ್ಲ. ಅದನ್ನು ಪ್ರಮಾಣ ಪುರಃಸರವಾಗಿ ಹೇಳುತ್ತಾರೆ—

ಮಲಾದಿಕಂ ಕದಾಚಿತ್ತು ಬ್ರಹ್ಮಾ ಲೋಕಾಭಿಪತ್ತಯೇ ।
ಆತ್ಮನೋ ನಿರ್ಮಮೇ ಕಾಮಾತ್ ಸರ್ವೇಷಾಮಭವತ್ ತತಃ ।
ವಶಿತ್ವಾತ್ ತಸ್ಯ ದಿವ್ಯತ್ವಾತ್ ಇಚ್ಛಯಾ ಭವತಿ ಪ್ರಭೋಃ ॥ ಇತಿ ಚ ।

ಮಲವಾಗಲಿ ಮಲವಿಸರ್ಜನೆಯಾಗಲಿ ಬ್ರಹ್ಮನಿಗೆ ಅವನ ಶರೀರದಲ್ಲಿ ಬೇಡ. ಆದರೂ ಲೋಕಕ್ಕೆ ಬೇಕು. ಆದರಿಂದ ಪಾಯು ಇಂದ್ರಿಯ, ಮಲವಿಸರ್ಜನೆಗಳನ್ನು ಸೃಜಿಸಬೇಕೆಂದು ಸ್ವೇಚ್ಛೆಯಿಂದ ತತ್ಕಾಲದಲ್ಲಿ ಮಲವನ್ನೂ ಮಲವಿಸರ್ಜನೆಯನ್ನೂ ತನ್ನ ಶರೀರದಲ್ಲಿ ಸೃಷ್ಟಿ ಮಾಡಿದ. ಆದರಿಂದ ಲೋಕದಲ್ಲಿ ಎಲ್ಲರಿಗೂ ಅವು ಉಂಟಾದುವು. ಇಲ್ಲದಿದ್ದರೆ, ಬ್ರಹ್ಮನ ಶರೀರ ದಿವ್ಯ, ಅದರಲ್ಲಿ ಅಸಾರಾಂಶರೂಪ ಮಲವಿಲ್ಲ. ಅವನು ಸ್ವತಂತ್ರ, ಪಾಯು ಇಂದ್ರಿಯ, ಆದರ ಅಭಿಮಾನಿಗಳ ಅಪೇಕ್ಷೆ ಅವನಿಗಿಲ್ಲ ಎಂದು ಹೇಳಿದೆ.

★★★

ಹರಿಪ್ರತಿಮಾರೂಪವಾಗಿ ಉಪಾಸನೆಗೆ ಬೇಕಾಗುವ ಭೂತ ಇಂದ್ರಿಯ ದೇವತಾಸೃಷ್ಟಿಯನ್ನು ಪೂರ್ತಿ ಹೇಳಿ ಮುಕ್ತಾಯ ಮಾಡುತ್ತಾರೆ ಶುಕಮುನಿಗಳು—

ಏತದ್ ಭಗವತೋ ರೂಪಂ ಸ್ಥೂಲಂ ತೇ ವ್ಯಾಹೃತಂ ಮಯಾ ।
ಮಹ್ಯಾದಿಭಿಶ್ಚಾವರಣೈರಷ್ಟಭಿರ್ಬಹಿರಾವೃತಂ ॥ ೩೩ ॥

ಅತಃ ಪರಂ ಸೂಕ್ಷ್ಮತಮಮವ್ಯಕ್ತಂ ನಿರ್ವಿಶೇಷಣಂ ।
ಅನಾದಿಮಧ್ಯನಿಧನಂ ನಿತ್ಯಂ ವಾಙ್ಮನಸೋಃ ಪರಂ ॥ ೩೪ ॥

ಪಂಚಭೂತಗಳು ಅಹಂಕಾರತತ್ವ ಮಹತ್ತತ್ವ ಪ್ರಕೃತಿ ಎಂಬ ಎಂಟು ಆವರಣಗಳಿಂದ ಯುಕ್ತವಾದ ಈ ಬ್ರಹ್ಮನ ಶರೀರ ಪರಮಾತ್ಮನ ಸ್ಥೂಲ ಪ್ರತಿಮಾರೂಪವಾಗಿದೆ. ಅದನ್ನು ನಿನಗೆ ಹೇಳಿದ್ದೇನೆ.

ಈ ಸ್ಥೂಲ ರೂಪಕ್ಕಿಂತ ವಿಲಕ್ಷಣ, ಅತ್ಯಂತ ಸೂಕ್ಷ್ಮ, ಅವ್ಯಕ್ತ ನಿರತಿಶಯ, ಆದಿ ಮಧ್ಯ ಅಂತರಹಿತ, ನಿತ್ಯ, ಮಾತಿಗೂ ಮನಸಿಗೂ ನಿಲುಕದುದು ಹರಿಯ ನಿಜರೂಪ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಬ್ರಹ್ಮಾಂಡ ಪರಮಾತ್ಮನ ಸ್ಥೂಲಶರೀರವೆ. ಹಾಗಾದರೆ, ಹಸಿವು ಬಾಯಾರಿಕೆ ಮುಂತಾದುವು ಪರಮಾತ್ಮನಿಗೆ ಇವೆಯೆ? ಎಂಬ ಪ್ರಶ್ನೆ ಸಹಜ. ಹಾಗೇ ಪರಮಾತ್ಮನಿಗೆ ಕಣ್ಣು ಮೂಗು ಕಿವಿ ಮುಂತಾದ ಭೌತಿಕ ಇಂದ್ರಿಯಗಳಿವೆಯೆ ಎಂಬ ಪ್ರಶ್ನೆಯೂ ಬರುತ್ತದೆ. ಬ್ರಹ್ಮದೇವ ಸಮಷ್ಟಿಜೀವ. ಅವನಿಗೂ ಈ ಕಣ್ಣು ಕಿವಿ ಮುಂತಾದ ಇಂದ್ರಿಯಗಳಿಲ್ಲ. ಅದನ್ನು ಹೇಳಿದ್ದು ಹೇಗೆ ಕೂಡುತ್ತದೆ ಎಂಬ ಪ್ರಶ್ನೆಯನ್ನೂ ಶುಕದೇವ ವ್ಯಾಖ್ಯಾನದಲ್ಲಿ ಎತ್ತಿಕೊಂಡು ಹೀಗೆ ಸಮಾಧಾನ ನೀಡಿದೆ—

'ಬ್ರಹ್ಮಾಂಡ ಶ್ರೀಹರಿಯ ಶರೀರವೆ. ಆದರೂ ಹಸಿವು ಬಾಯಾರಿಕೆ ಮುಂತಾದುವು ಜೀವಧರ್ಮಗಳು, ಆ ಶರೀರದ ಅಭಿಮಾನಿಯಾದ ಚತುರ್ಮುಖನಿಗೆ ಸಲ್ಲುತ್ತವೆ. ಕಣ್ಣು ಕಿವಿ ಮುಂತಾದ ವ್ಯಷ್ಟಿಜೀವಶರೀರಾಯವಗಳು ಪರಮಾತ್ಮನಿಗೆ ಮಾತ್ರವಲ್ಲ, ಸಮಷ್ಟಿ ಜೀವ ಚತುರ್ಮುಖನಿಗೂ ಇಲ್ಲ. ಆದರೂ ವ್ಯಷ್ಟಿ ಜೀವರಿಗೆ ಇದೆ ಎಂಬುದನ್ನು ತಿಳಿಸಲು ಅದು ಉಕ್ತವಾಗಿದೆ'.

'ಸ್ಥೂಲರೂಪ ಶ್ರೀಹರಿಯ ಪ್ರತಿಮೆ ಹೊರತು ಅವನ ಶರೀರವಲ್ಲ. ಅವನ ಶರೀರ ಸೂಕ್ಷ್ಮ. ಅಂದರೆ, ಸರ್ವವ್ಯಾಪ್ತವಾಗಿದ್ದರೂ ಅವನ ಅನುಗ್ರಹವಿಲ್ಲದೆ ಯಾರಿಗೂ ಕಾಣಲಾಗದು' ಎಂದು ಭಾಗವತ ಸ್ಪಷ್ಟ ಹೇಳುತ್ತಿದ್ದರೂ ವೀರರಾಘವ ವ್ಯಾಖ್ಯಾನ ಹೇಳುತ್ತದೆ— ಈ ಸೂಕ್ಷ್ಮರೂಪ ಪರಮಾತ್ಮನದಲ್ಲ, ಜೀವನದು, ಮುಕ್ತ ಜೀವಸ್ವರೂಪ ಇಲ್ಲಿ ಉಕ್ತವಾಗಿದೆ. ಅದು ಸೂಕ್ಷ್ಮ ಅಂದರೆ ಅಣುಪರಿಮಾಣದ್ದು. ಅವ್ಯಕ್ತ ಕಣ್ಣಿಗೆ ಕಾಣಿಸದು. ನಿರ್ವಿಶೇಷಣ, ರೂಪರಸಾದಿ ವಿಶೇಷಣರಹಿತ, ವಾಙ್‌ಮನಸಾಗೋಚರ, ದೇವಮನುಷ್ಯಾದಿ ನಾಮದಿಂದ ಬುದ್ಧಿಗೆ ಗೋಚರವಾಗುವುದಿಲ್ಲ ಎಂದು ಹೇಳಿದೆ.

ಶ್ರೀಧರೀಯ ಮುಂತಾದ ವ್ಯಾಖ್ಯಾನಗಳು ಸಮಷ್ಟಿ ಲಿಂಗಶರೀರದ ವರ್ಣನೆ ಇದು ಎನ್ನುತ್ತವೆ.

ಹೀಗೆ ಎರಡೂ ಶ್ಲೋಕಗಳಿಗೆ ಅಪವ್ಯಾಖ್ಯಾನ ಮಾಡುವುದು ಪ್ರಮಾಣ ವಿರುದ್ಧ ಎನ್ನುತ್ತಾರೆ—

ಸ್ಥೂಲಂ ಭಗವತೋ ರೂಪಂ ಬ್ರಹ್ಮದೇಹ ಉದಾಹೃತಃ ।
ತತ್ತಂತ್ರತ್ವಾಚ್ಚ ಸೂಕ್ಷ್ಮಂ ಚ ಶಂಖಚಕ್ರಗದಾಧರಂ ॥
ಇತಿ ಚಾಧ್ಯಾತ್ಮೇ । ನಿರ್ವಿಶೇಷಣಂ ನಿರತಿಶಯಂ ।
ಅಸ್ಯ ಕಾವ್ಯಸ್ಯ ಕವಯೋ ನ ಸಮರ್ಥಾ ವಿಶೇಷಣೇ । ಇತಿವತ್ ॥

'ಸ್ಥೂಲವಾದ ಭಗವಂತನ ರೂಪವೆಂದರೆ ಭಗವಂತನ ಶರೀರವಲ್ಲ, ಬ್ರಹ್ಮನ

ಶರೀರ. ಆದರೂ ಅದು ಭಗವಂತನ ಅಧೀನವಾದ್ದರಿಂದ ಭಗವಂತನ ರೂಪ ಎಂದಿದೆ. ಭಗವಂತನ ಶರೀರ ಸೂಕ್ಷ್ಮವಾದುದು, ಶಂಖಚಕ್ರ ಗದಾಧಾರಿ, ಎಂದು ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ. ನಿರ್ವಿಶೇಷಣ ಎಂದರೆ ನಿರ್ಗುಣ ಎಂದರ್ಥ ವಲ್ಲ. ವಿಶೇಷಣ ಎಂದರೆ ಗುಣ. ಗುಣದಲ್ಲಿ ಮೀರಿಸುವಂಥದ್ದು ಇನ್ನೊಂದು ಇಲ್ಲ ಎಂದರ್ಥ. 'ಈ ಕಾವ್ಯವನ್ನು ಗುಣದಲ್ಲಿ ಮೀರಿಸಬಲ್ಲ ಇನ್ನೊಂದು ಕಾವ್ಯ ರಚಿಸಲು ಕವಿಗಳು ಯಾರೂ ಸಮರ್ಥರಲ್ಲ' ಎಂದು ಹೇಳುವಾಗ ಗುಣ ಎಂಬ ಅರ್ಥದಲ್ಲಿ ವಿಶೇಷಣ ಶಬ್ದಪ್ರಯೋಗ ಕಂಡಿದೆ.

★★★

ಭಗವಂತನ ಪ್ರತಿಮಾರೂಪವಾದ ಸ್ಥೂಲರೂಪವನ್ನೂ ಶರೀರರೂಪವಾದ ಸೂಕ್ಷ್ಮರೂಪವನ್ನೂ ಹೇಳಿ ಇವೆರಡೂ ಅಜ್ಞಾನಿಗಳಿಗೆ ತಿಳಿಯುವುದಿಲ್ಲ ಎನ್ನುತ್ತಾರೆ ಶುಕಮುನಿಗಳು—

ಅಮುನೀ ಭಗವದ್ರೂಪೇ ಮಯಾ ತೇ ಹ್ಯನುವರ್ಣಿತೇ ।
ಉಭೇ ಅಪಿ ನ ಗೃಹ್ಣಂತಿ ಮಾಯಾಸೃಷ್ಟೇಽವಿಪಶ್ಚಿತಃ ॥ ೩೫ ॥

ಈ ಸ್ಥೂಲ ಸೂಕ್ಷ್ಮಗಳೆಂಬ ಎರಡೂ ಭಗವದ್ರೂಪಗಳನ್ನು ನಾನು ನಿನಗೆ ವರ್ಣಿಸಿದ್ದೇನೆ. ಇವೆರಡನ್ನೂ ಪ್ರಕೃತಿನಿರ್ಮಿತವಾದ ಈ ಲೋಕದಲ್ಲಿ ಅಜ್ಞರು ತಿಳಿಯುವುದಿಲ್ಲ.

ಇಲ್ಲಿ ಎಲ್ಲ ಬೇರೆ ವ್ಯಾಖ್ಯಾನಕಾರರೂ ಈ ಎರಡೂ ರೂಪಗಳು ಮಾಯಾಸೃಷ್ಟವಾದ್ದರಿಂದ ಜ್ಞಾನಿಗಳು ಸ್ವೀಕರಿಸುವುದಿಲ್ಲ ಎಂದಿದ್ದಾರೆ. ವಿಶ್ವನಾಥ ವ್ಯಾಖ್ಯಾನದಲ್ಲಿ ಈ ಎರಡೂ ರೂಪಗಳನ್ನು ಜ್ಞಾನಿಗಳು ಹೊಂದಲು ಬಯಸುವುದಿಲ್ಲ, ಉಪಾಸನೆಗಾಗಿ ಅಜ್ಞರು ಮಾತ್ರ ಸ್ವೀಕರಿಸುತ್ತಾರೆ, ಜ್ಞಾನಿಗಳು ಉಪಾಸನೆಗೂ ಸ್ವೀಕರಿಸುವುದಿಲ್ಲ ಎಂದಿದೆ. ವಲ್ಲಭವ್ಯಾಖ್ಯಾನದಲ್ಲಿ ಶುಕಮುನಿ ಹೇಳುತ್ತಾರೆ, 'ಇದನ್ನು ನಾನು ನಿನಗಾಗಿ ಹೇಳಿದ್ದೇನೆ, ನನಗೆ ಇದು ಬೇಡ. ನನಗೆ ಇದರಿಂದ ಉಪಯೋಗವಿಲ್ಲ. ನನ್ನಂಥ ಜ್ಞಾನಿಗಳು ಸಾಕ್ಷಾತ್ ಭಗವತ್ಸ್ವರೂಪ ವನ್ನು ಅರಿಯಬಲ್ಲರು' ಎಂದಿದೆ.

ಹೀಗೆ ಎಲ್ಲರೂ ಶುಕಮುನಿಯ ಈ ಉಪದೇಶ ಅಜ್ಞಾನಿಗಳಿಗಾಗಿ ಹೊರತು ಜ್ಞಾನಿಗಳು ಅದನ್ನು ಸ್ವೀಕರಿಸುವುದಿಲ್ಲ ಎಂದಿದ್ದಾರೆ. ಭಾಗವತ ಮೊದಲಿಗೇ ಹೀಗೆ ಜ್ಞಾನಿಗಳಿಗೆ ಅಗ್ರಾಹ್ಯವಾದ ಉಪದೇಶವನ್ನು ನೀಡಿದರೆ ಅದು ಮೋಕ್ಷಶಾಸ್ತ್ರ ಹೇಗಾದೀತು? ಅದರಿಂದ ಹೇಳುತ್ತಾರೆ—

ಮಾಯಾಸೃಷ್ಟೇ ಜಗತಿ ಯೇ ಅವಿಪಶ್ಚಿತಃ ।

ಪ್ರಕೃತಿನಿರ್ಮಿತವಾದ ಈ ಜಗತ್ತಿನಲ್ಲಿ ಅಜ್ಞರಾದವರು ಮಾತ್ರ ಈ ಎರಡು ಭಗವದ್ರೂಪಗಳನ್ನು ತಿಳಿಯುವುದಿಲ್ಲ. ಜ್ಞಾನಿಗಳು ತಿಳಿಯುತ್ತಾರೆ.

ಮಾಯಾಸೃಷ್ಟೇ ಎಂದು ದ್ವಿತೀಯಾವಿಭಕ್ತಿದ್ವಿವಚನವಾಗಿ ಭಗವದ್ರೂಪಗಳಿಗೆ ವಿಶೇಷಣವೆಂದು ಬೇರೆ ವ್ಯಾಖ್ಯಾನಕಾರರು ಗ್ರಹಿಸಿದ್ದಾರೆ. 'ವಿಪಶ್ಚಿತಃ' ಎಂದು ಪದವಿಭಾಗ ಮಾಡಿದ್ದಾರೆ. ಅದು ಸರಿಯಲ್ಲ. 'ಮಾಯಾಸೃಷ್ಟೇ' ಪ್ರಕೃತಿನಿರ್ಮಿತವಾದ ಜಗತ್ತಿನಲ್ಲಿ ಎಂದು ಸಪ್ತಮೀ ಏಕವಚನ. 'ಅವಿಪಶ್ಚಿತಃ' ಎಂದು ಪದವಿಭಾಗ ಇಟ್ಟುಕೊಳ್ಳಬೇಕು.

★★★

ಬ್ರಹ್ಮದೇಹಾಂತರ್ಗತನಾದ ಹರಿ ಮಾಡಿದ ಸೃಷ್ಟಿಯನ್ನು ಹೇಳಿ ಮುಂದೆ ಸ್ಥಿತಿಯನ್ನು ಹೇಳಲು ನಾಮರೂಪಕ್ರಿಯಾಗಳ ನಿಯಮನವನ್ನು ಹೇಳುತ್ತಾರೆ ಶುಕಮುನಿಗಳು—

ಸ ವಾಚ್ಯವಾಚಕತಯಾ ಭಗವಾನ್ ಬ್ರಹ್ಮರೂಪಧೃಕ್ ।
ನಾಮರೂಪಕ್ರಿಯಾ ಧತ್ತೇ ಸಕರ್ಮಾಽಕರ್ಮಕಃ ಪರಃ ॥ ೩೬ ॥

ಬ್ರಹ್ಮದೇಹಾಂತರ್ಗತನಾದ ಭಗವಂತ ನಾಮರೂಪಕ್ರಿಯೆಗಳನ್ನು ವಾಚ್ಯ ವಾಚಕಗಳಾಗಿರುವಂತೆ ನಿಯಮಿಸುತ್ತಾನೆ. ಮುಖ್ಯಕರ್ತನಾದ್ದರಿಂದ ಅವನು ಸಕರ್ಮನೂ ಹೌದು, ಕರ್ಮದಿಂದ ಅವನಿಗೆ ಏನೂ ಪ್ರಯೋಜನ ವಿಲ್ಲದಿರುವುದರಿಂದ ಕರ್ಮಮಾಡಿಯೂ ಅಕರ್ಮನೆಂದೂ ಕರೆಸಿಕೊಳ್ಳುತ್ತಾನೆ.

ಇಲ್ಲಿ ಶ್ರೀಧರೀಯದಲ್ಲಿ ನಾಮರೂಪಕ್ರಿಯೆಗಳನ್ನು ಸೃಷ್ಟಿಮಾಡುತ್ತಾನೆ, ಮಾಯೆಯಿಂದ ಸಕರ್ಮ, ವಸ್ತುತ. ಅಕರ್ಮ ಎಂದಿದೆ. ಇದು ಪ್ರಮಾಣವಿರುದ್ಧ.

ನಾಮ್ನೈವ ವಾಚಕತ್ವೇನ ನಾಮರೂಪಕ್ರಿಯಾ ಅಪಿ ।
ವಾಚ್ಯತ್ವೇನ ಹರಿರ್ದೇವೋ ನಿಯಾಮಯತಿ ಚೈಕರಾಟ್ । ಇತಿ ಚ ।
ಕರ್ತೃತ್ವಾತ್ತು ಸಕರ್ಮಾಽಸೌ ನಿಷ್ಫಲತ್ವಾದಕರ್ಮಕಃ । ಇತಿ ಚ ।

'ನಾಮ ರೂಪ ಕ್ರಿಯೆ ಈ ಮೂರರಲ್ಲಿ ನಾಮಮಾತ್ರ ವಾಚಕವಾಗಿರುವಂತೆ, ನಾಮರೂಪಕ್ರಿಯೆ ಮೂರೂ ವಾಚ್ಯವಾಗಿರುವಂತೆ ಸರ್ವೇಶ್ವರನಾದ ಹರಿ ನಿಯಮಿಸುತ್ತಾನೆ' ಎಂದು ವಚನವಿದೆ. ಹರಿ ಸ್ವತಂತ್ರನಾಗಿ ಕರ್ಮ ಮಾಡುವುದ ರಿಂದ ಸಕರ್ಮ. ಆದರೆ ಆ ಕರ್ಮದಿಂದ ಅವನಿಗೆ ಏನೂ ಫಲವಾಗಬೇಕಾಗಿಲ್ಲ ವಾದ್ದರಿಂದ ಅವನು ಅಕರ್ಮ.

★★★

ಬ್ರಹ್ಮದೇಹಾಂತರ್ಗತನಾದ ಹರಿ ನಾಮರೂಪಕ್ರಿಯೆಗಳನ್ನು ನಿಯಮಿಸುತ್ತಾನೆ ಎನ್ನುವುದನ್ನೆ ವಿವರಿಸುತ್ತಾರೆ—

ಪ್ರಜಾಪತೀನ್ ಮನೂನ್ ದೇವಾನ್ ಋಷೀನ್ ಪಿತೃಗಣಾನ್ ಪೃಥಕ್ ।
ಸಿದ್ಧಚಾರಣಗಂಧರ್ವಾನ್ ವಿದ್ಯಾಧ್ರಾಸುರಗುಹ್ಯಕಾನ್ ॥ ೩೭ ॥

ಪ್ರಜಾಪತಿ ಮನು ದೇವ ಋಷಿ ಪಿತೃ ಸಿದ್ಧ ಚಾರಣ ಗಂಧರ್ವ ವಿದ್ಯಾಧರ ಅಸುರ ಗುಹ್ಯಕ ಮುಂತಾದವರನ್ನೂ ಅವರ ಕ್ರಿಯೆಗಳನ್ನೂ ವಾಚ್ಯವನ್ನಾಗಿ, ಅವರ ಹೆಸರುಗಳನ್ನು ವಾಚಕವನ್ನಾಗಿ ಹರಿಯೆ ನಿಯಮಿಸುತ್ತಾನೆ.

ಪ್ರಜಾಪತ್ಯಾದೀನ್ ಧತ್ತೇ ।

ಪ್ರಜಾಪತೀನ್ ಮನೂನ್ ಎಂದು ಮುಂತಾಗಿ ದ್ವಿತೀಯಾಂತವಾದ ಎಲ್ಲ ಶಬ್ದಗಳಿಗೂ ಹಿಂದಿನ ಶ್ಲೋಕದಲ್ಲಿ ಬಂದ 'ಧತ್ತೇ' ಎಂಬ ಕ್ರಿಯಾಪದದೊಂದಿಗೇ ಅನ್ವಯ.

★★★

ಪ್ರಜಾಪತಿ ಮನು ದೇವ ಅಸುರ ರಾಕ್ಷಸ ಮುಂತಾಗಿ ಉತ್ತಮ ಮಧ್ಯಮ ಅಧಮ ಜಾತಿಗಳನ್ನು ಹೇಳಿದ ಬಳಿಕ ಈ ಜಾತಿ ಭೇದಕ್ಕೆ ಸತ್ವಾದಿಕಾರಣವನ್ನು ಹೇಳುತ್ತಾರೆ—

ಸತ್ವಂ ರಜಸ್ತಮ ಇತಿ ತಿಸ್ರಃ ಸುರನೃನಾರಕಾಃ ।
ತತ್ರಾಪ್ಯೇಕೈಕಶೋ ರಾಜನ್ ಭಿದ್ಯಂತೇ ಗತಯಸ್ತ್ರಿಧಾ ॥ ೪೧ ॥

ಜೀವರಲ್ಲಿ ಜಾತಿಗಳು ಸಾತ್ವಿಕ ರಾಜಸ ತಾಮಸ ಎಂದು ಮೂರು ವಿಧ. ದೇವತೆಗಳು ಋಷಿಗಳು ಮುಂತಾದವರು ಸಾತ್ವಿಕರು, ಮನುಷ್ಯರು ರಾಜಸರು, ಅಸುರರು ಮುಂತಾದವರು ತಾಮಸರು. ಈ ಮೂರು ವರ್ಗಗಳಲ್ಲಿಯೂ ತಿರುಗಿ ಸಾತ್ವಿಕ ರಾಜಸ ತಾಮಸರೆಂದು ಮೂರು ವರ್ಗಗಳಿವೆ.

ತಾಮಸಾಸ್ತಾಮಸಾ ದೈತ್ಯಾಃ ಪ್ರಧಾನಾ ದೇವಶತ್ರವಃ ।
ತಾಮಸಾ ರಾಜಸಾಸ್ತೇಷಾಮನುಗಾಸ್ತೇಷು ಸಾತ್ವಿಕಾಃ ।
ಅನಾಖ್ಯಾತಾಸುರಾಃ ಪ್ರೋಕ್ತಾ ಮಾನುಷಾ ದುಷ್ಟಚಾರಿಣಃ ।
ರಾಜಸಾಸ್ತಾಮಸಾಶ್ಚೈವ ಮಧ್ಯಾ ರಾಜಸರಾಜಸಾಃ ।
ರಾಜಸಾಃ ಸಾತ್ವಿಕಾಸ್ತತ್ರ ಮಾನುಷೇಷೂತ್ತಮಾ ಗಣಾಃ ।
ದೇವಾಃ ಪೃಥಗನಾಖ್ಯಾತಾಃ ಸ್ಮೃತಾಃ ಸಾತ್ವಿಕತಾಮಸಾಃ ।
ಅತಾತ್ವಿಕಾಸ್ತಥಾಽಽ ಖ್ಯಾತಾಃ ಸ್ಮೃತಾಃ ಸಾತ್ವಿಕರಾಜಸಾಃ ।

ಸಾತ್ವಿಕಾಃ ಸಾತ್ವಿಕಾಸ್ತತ್ರ ತಾತ್ವಿಕಾಃ ಪರಿಕೀರ್ತಿತಾಃ ।
ತೇಷಾಂ ಚ ಸಾತ್ವಿಕಾಃ ಶೇಷಗರುತ್ಮದ್ರುದ್ರತತ್‌ಸ್ತ್ರಿಯಃ ।
ತತೋಽಪಿ ದೇವೀ ಬ್ರಹ್ಮಾಣೀ ಬ್ರಹ್ಮಾ ಚೈವ ತತಃ ಸ್ವಯಂ ॥

ದೇವಶತ್ರುಗಳಲ್ಲಿ ಪ್ರಧಾನರಾದ ದೈತ್ಯರು ತಾಮಸರಲ್ಲಿ ತಾಮಸರು. ಅವರ ಭೃತ್ಯರು ತಾಮಸರಲ್ಲಿ ರಾಜಸರು. ಅಪ್ರಸಿದ್ಧರಾದ ಅಸುರರು ತಾಮಸರಲ್ಲಿ ಸಾತ್ವಿಕರು. ಮನುಷ್ಯಾಧಮರು ರಾಜಸರಲ್ಲಿ ತಾಮಸರು. ಮನುಷ್ಯಮಧ್ಯರು ರಾಜಸರಲ್ಲಿ ರಾಜಸರು. ಮನುಷ್ಯೋತ್ತಮರು ರಾಜಸರಲ್ಲಿ ಸಾತ್ವಿಕರು. ಅಪ್ರಸಿದ್ಧ ದೇವತೆಗಳು ಸಾತ್ವಿಕರಲ್ಲಿ ತಾಮಸರು. ಪ್ರಸಿದ್ಧರಾದ, ತತ್ವಾಭಿಮಾನಿಗಳಲ್ಲದ ದೇವತೆಗಳು ಸಾತ್ವಿಕರಲ್ಲಿ ರಾಜಸರು. ತತ್ವಾಭಿಮಾನಿ ದೇವತೆಗಳು ಸಾತ್ವಿಕರಲ್ಲಿ ಸಾತ್ವಿಕರು. ಸಾತ್ವಿಕ ಸಾತ್ವಿಕರಲ್ಲಿಯೂ ಸಾತ್ವಿಕರು ಶೇಷಗರುಡರುದ್ರರು ಮತ್ತು ಅವರ ಪತ್ನಿಯರು. ಅವರಿಗಿಂತ ಹೆಚ್ಚಿನ ಸಾತ್ವಿಕರು ಭಾರತಿ ಸರಸ್ವತಿಯರು. ಅವರಿಗಿಂತಲೂ ಹೆಚ್ಚಿನ ಸಾತ್ವಿಕರು ಬ್ರಹ್ಮವಾಯುಗಳು.

★★★

ಧರ್ಮಾಂತರ್ಗತ ಧರ್ಮಪ್ರವರ್ತಕನಾದ ಶ್ರೀಹರಿ ಮತ್ಸ್ಯಾದಿ ಅವತಾರಗಳಿಂದ ಪಾಲನೆಯನ್ನು ಮಾಡುತ್ತಾನೆ ಎಂದು ಹೇಳುತ್ತಾರೆ—

ಯದ್ಯೈವೈಕತಮೋಽನ್ಯಾಭ್ಯಾಂ ಸ್ವಭಾವ ಉಪಹನ್ಯತೇ ।
ತದ್ಯೈವೇದಂ ಜಗದ್ಧಾತಾ ಭಗವಾನ್ ಧರ್ಮರೂಪಧೃಕ್ ।
ಪುಷ್ಣಾತಿ ಸ್ಥಾಪಯನ್ ವಿಶ್ವಂ ತಿರ್ಯಙ್‌ನರಸುರಾತ್ಮಭಿಃ ॥ ೪೨ ॥

ತ್ರಿವಿಧ ಸಾತ್ವಿಕರಲ್ಲಿ ಮತ್ತು ರಾಜಸ ಸಾತ್ವಿಕರಲ್ಲಿ ಯಾರನ್ನಾದರೂ ರಾಜಸರು ತಾಮಸರು ಬಾಧಿಸಿದಾಗ ಶ್ರೀಹರಿ ಧರ್ಮದಲ್ಲಿದ್ದು ಧರ್ಮಪ್ರವರ್ತಕನಾಗಿ ತಿರ್ಯಙ್ ನರ ಸುರ ರೂಪಗಳ ಮತ್ಸ್ಯಾದಿ ಅವತಾರಗಳ ಮೂಲಕ ಲೋಕವನ್ನು ಕಾಪಾಡಿ ಪೋಷಿಸುತ್ತಾನೆ.

ಸಾತ್ವಿಕೇಷು ತ್ರಿಷು ಯದಾ ತ್ವೇಕಸ್ಯ ಪ್ರತಿಬಾಧನಂ ।
ರಜಸ್ತಮೋಭ್ಯಾಂ ವಿಷ್ಣುರ್ಹಿ ತದಾ ಪ್ರಾದುರ್ಭವತ್ಯಜಃ ।
ರಾಜಸಾಂಸ್ತಾಮಸಾನ್ ಹತ್ವಾ ಸಾತ್ವಿಕಾನ್ ವರ್ಧಯಿಷ್ಯತಿ ।

ಇತಿ ಸ್ಕಾಂದೇ ।

ತ್ರಿವಿಧಸಾತ್ವಿಕರಲ್ಲಿ ಯಾರನ್ನಾದರೂ ರಾಜಸ ತಾಮಸರು ಬಾಧಿಸಿದಾಗ ವಿಷ್ಣು

ಅವತರಿಸುತ್ತಾನೆ. ಮತ್ತು ರಾಜಸರನ್ನೂ ತಾಮಸರನ್ನೂ ಸಂಹರಿಸಿ ಸಾತ್ವಿಕರನ್ನು ಪೋಷಿಸುತ್ತಾನೆ ಎಂದು ಸ್ಕಂದಪುರಾಣದಲ್ಲಿ ಉಕ್ತವಾಗಿದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು,

'ಯದೈವೈಕತಮೋಽನ್ಯಾಭ್ಯಾಂ ಸ್ವಭಾವ ಉಪಹನ್ಯತೇ'

ಯಾವಾಗ ಒಂದು ಗುಣ ಬೇರೆ ಎರಡು ಗುಣಗಳಿಂದ ಆಕ್ರಮಿಸಲ್ಪಡುತ್ತದೋ ಆಗ ಹಿಂದೆ ಹೇಳಿದ ಸಾತ್ವಿಕಾದಿ ಮೂರು ಜಾತಿಗಳಲ್ಲಿ ಪುನಃ ಸಾತ್ವಿಕಾದಿ ಮೂರು ವರ್ಗಗಳುಂಟಾಗುತ್ತವೆ ಎಂದು ವ್ಯಾಖ್ಯಾನ ಮಾಡಿದ್ದಾರೆ. ಆದರೆ 'ಸ್ವಭಾವ ಉಪಹನ್ಯತೇ' 'ಸ್ವಭಾವ ಆಕ್ರಮಣಕ್ಕೊಳಗಾಗುವುದೆ'ಂದರೆ ಅದು ಸ್ವಭಾವ ಯೋಗ್ಯತೆ ಜೀವರಲ್ಲಿ ಭಿನ್ನಭಿನ್ನವೆಂದು ಒಪ್ಪದ ಈ ವ್ಯಾಖ್ಯಾನಕಾರರಿಗೆ ಉಚಿತವಾಗುವುದಿಲ್ಲ ಮತ್ತು ಪರಮಾತ್ಮನು ಅವತಾರವೆತ್ತುವ ಸಂದರ್ಭ ಈ ವ್ಯಾಖ್ಯಾನಗಳ ಪ್ರಕಾರ ಉಕ್ತವಾಗದಿರುವುದರಿಂದ ನ್ಯೂನತೆ ಬರುತ್ತದೆ.

★★★

ಸೃಷ್ಟಿ ಸ್ಥಿತಿಗಳನ್ನು ಮಾಡುವ ಶ್ರೀಹರಿಯೆ ಕೊನೆಯಲ್ಲಿ ಲಯವನ್ನೂ ಮಾಡುತ್ತಾನೆ ಎನ್ನುತ್ತಾರೆ ಶುಕಮುನಿಗಳು—

ತತಃ ಕಾಲಾಗ್ನಿರುದ್ರಾತ್ಮಾ ಯತ್ಸೃಷ್ಟಮಿದಮಾತ್ಮನಃ ।
ಸನ್ನಿಯಚ್ಛತಿ ತತ್ ಕಾಲೇ ಘನಾನೀಕಮಿವಾನಿಲಃ ॥ ೪೩ ॥

ಸ್ಥಿತಿಕಾರ್ಯ ಮುಗಿಸಿದ ಬಳಿಕ ಲಯಕಾಲ ಪ್ರಾಪ್ತವಾದಾಗ ಕಾಲ ಅಗ್ನಿ ರುದ್ರ ಇವರಲ್ಲಿ ಅಂತರ್ಗತನಾದ ನರಸಿಂಹ ಬ್ರಹ್ಮಾಂತರ್ಗತ ರೂಪದಿಂದ ತಾನು ಸೃಜಿಸಿದ ಜಗತ್ತನ್ನು ತಾನೇ ಲಯ ಮಾಡುತ್ತಾನೆ, ಮೋಡವನ್ನು ತರುವ ಗಾಳಿ ತಾನೇ ಆ ಮೋಡವನ್ನು ದೂರ ಅಟ್ಟುವಂತೆ.

ಇಲ್ಲಿ 'ಕಾಲಾಗ್ನಿರುದ್ರಾತ್ಮಾ' ಎಂದರೆ ಕಾಲಾಗ್ನಿರುದ್ರರೂಪನಾದ ಭಗವಂತ ಲಯ ಮಾಡುತ್ತಾನೆ, ಬ್ರಹ್ಮರೂಪನಾದ ಭಗವಂತ ಸೃಷ್ಟಿ ಮಾಡುತ್ತಾನೆ, ಎಂದು ಅಪಾರ್ಥ ಪ್ರತೀತವಾಗುತ್ತದೆ. ಹಿಂದೆ ಹೇಳಿದ 'ತಿರ್ಯಕ್ ನರ ಸುರ' ಶಬ್ದದಿಂದಲೂ ಭಗವಂತ ತಿರ್ಯಕ್ ಪ್ರಾಣಿಯೆ, ಮನುಷ್ಯನೆ ಆಗುತ್ತಾನೆ ಎಂದೂ ಹೇಳಿದಂತೆ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರು ಹೇಳಿದ್ದಾರೆ. ಅದರಿಂದ ಹೇಳುತ್ತಾರೆ—

ಮತ್ಸ್ಯಾದಿರೂಪೀ ಪೋಷಯತಿ ನೃಸಿಂಹೋ ರುದ್ರಸಂಸ್ಥಿತಃ ।
ವಿಲಾಪಯೇದ್ ವಿರಿಂಚಸ್ಥಃ ಸೃಜತೇ ವಿಷ್ಣುರವ್ಯಯಃ ।

ಇತಿ ವಾಮನೇ ।

ಮತ್ಸ್ಯಾದಿಗಳಂಥ ರೂಪ ತಳೆದು ಹರಿ ಲೋಕವನ್ನು ಪೋಷಿಸುತ್ತಾನೆ. ರುದ್ರನಲ್ಲಿದ್ದು ನರಸಿಂಹ ಲಯ ಮಾಡುತ್ತಾನೆ ಬ್ರಹ್ಮನಲ್ಲಿದ್ದು ಅವನೆ ಸೃಷ್ಟಿ ಮಾಡುತ್ತಾನೆ ಎಂದು ವಾಮನ ಪುರಾಣ ಹೇಳಿದೆ.

★★★

ಸೃಷ್ಟಿ ಸ್ಥಿತಿ ಲಯಾದಿಗಳನ್ನು ನಡೆಸುವ ಸಗುಣ ಬ್ರಹ್ಮನನ್ನೇ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ಶ್ರುತಿಗಳು ಹೇಳುತ್ತವೆ, 'ತಮೇವಂ ವಿದ್ವಾನಮೃತ ಇಹ ಭವತಿ' ಎಂದು ಮುಂತಾಗಿ ಶ್ರುತಿಗಳೂ ಮೋಕ್ಷಕ್ಕಾಗಿ ಸಗುಣ ಬ್ರಹ್ಮಾಪರೋಕ್ಷವನ್ನೇ ವಿಧಿಸುತ್ತವೆ, ಹೊರತು ನಿರ್ಗುಣ ಬ್ರಹ್ಮನ ಅಪರೋಕ್ಷವನ್ನಲ್ಲ ಎಂದು ಶುಕಮುನಿಗಳು ಹೇಳುತ್ತಾರೆ—

ಇತ್ಥಂಭಾವೇನ ಕಥಿತೋ ಭಗವಾನ್ ಭಗವತ್ತಮಃ ।
ನೇತ್ಥಂಭಾವೇನ ಹಿ ಪರಂ ದ್ರಷ್ಟುಮರ್ಹಂತಿ ಸೂರಯಃ ॥ ೪೪ ॥

ಅತ್ಯಂತ ಷಡ್ಗುಣಪೂರ್ಣನಾದ್ದರಿಂದ ಮುಖ್ಯವಾಗಿ ಭಗವಾನ್ ಎನಿಸುವ ಪರಮಪುರುಷ ನಾರಾಯಣನೆ ಯತೋ ವಾ ಇಮಾನಿ ಎಂದು ಮುಂತಾದ ಶ್ರುತಿಗಳಲ್ಲಿ ಸೃಷ್ಟ್ಯಾದಿಕರ್ತನೆಂದು ಉಕ್ತನಾಗಿದ್ದಾನೆ. ಜ್ಞಾನಿಗಳೂ ಮೋಕ್ಷಕ್ಕಾಗಿ ಸೃಷ್ಟ್ಯಾದಿಕರ್ತನಾದ ಪರಮಾತ್ಮನನ್ನೇ ಸಾಕ್ಷಾತ್ಕರಿಸಿಕೊಳ್ಳಬೇಕು.

ಇಲ್ಲಿ 'ಇತ್ಥಂಭಾವೇನ ಕಥಿತಃ' ಪರಮಾತ್ಮ ಸೃಷ್ಟ್ಯಾದಿಕರ್ತನೆಂದು ಶ್ರುತಿಯಲ್ಲಿ ಹೇಳಿದೆ. ಆದರೆ ಜ್ಞಾನಿಗಳು ಮಾತ್ರ 'ನೇತ್ಥಂಭಾವೇನ ದ್ರಷ್ಟುಮರ್ಹಂತಿ' ಸೃಷ್ಟ್ಯಾದಿಕರ್ತನೆಂದು ಭಗವಂತನನ್ನು ಉಪಾಸನ ಮಾಡಬಾರದು ಎಂದು ಹೇಳಿದಂತೆ ಕಾಣುತ್ತದೆ. ಹಾಗೇ ಶ್ರೀಧರೀಯ ಮುಂತಾದವು ವ್ಯಾಖ್ಯಾನ ಮಾಡಿವೆ.

ವೇದ ಹೇಳಿದಂತೆ ಉಪಾಸನೆ ಮಾಡಬಾರದೆನ್ನುವುದು ವೈದಿಕರಾದವರು ಹೇಳುವ ಮಾತಲ್ಲ, ಆದರಿಂದ ಹೇಳುತ್ತಾರೆ—

ಭಗವತ್ತಮಃ ನಾ ಪುರುಷಃ ।

ಅತ್ಯಂತ ಷಡ್ಗುಣಪೂರ್ಣನಾದ 'ನಾ' ಎಂದರೆ ಪುರುಷ, ಪರಮ ಪುರುಷ ನಾರಾಯಣ ಎಂದರ್ಥ.

'ನ ಇತ್ಥಂಭಾವೇನ' ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಪದವಿಭಾಗ ಮಾಡಿದ್ದಾರೆ. ಹಾಗೆ ಮಾಡಬಾರದು. 'ನಾ ಇತ್ಥಂಭಾವೇನ' ಎಂದು ಪದವಿಭಾಗ.

ನೃಶಬ್ದದ ರೂಪ 'ನಾ' ಎಂದು. ಪುರುಷ ಎಂದರ್ಥ. 'ಭಗವತ್ತಮಃ' ಎಂಬುದರೊಡನೆ ಅನ್ವಯ ಮಾಡಬೇಕು.

★★★

ಪರಮಾತ್ಮನ ಸೃಷ್ಟಿಕರ್ತೃತ್ವಾದಿಗಳನ್ನು ಹೇಳುವ ಅಭಿಪ್ರಾಯ ವೇದಕ್ಕೆ ಇಲ್ಲ, ಅದನ್ನು ನಿಷೇಧಿಸುವುದರಲ್ಲಿಯೆ ಅದಕ್ಕೆ ತಾತ್ಪರ್ಯ, ಏಕೆಂದರೆ ಪರಮಾತ್ಮ ನಿಷ್ಕ್ರಿಯ ಎಂದು ಆಕ್ಷೇಪ ಮಾಡಿಕೊಂಡು ಅದಕ್ಕೆ ಸಮಾಧಾನ ಹೇಳುತ್ತಿದ್ದಾರೆ ಶುಕಮುನಿಗಳು—

ನ ಚಾಸ್ಯ ಜನ್ಮಕರ್ಮಾಣಿ ಪರಸ್ಯ ನ ವಿಧೀಯತೇ ।
ಕರ್ತೃತ್ವಂ ಪ್ರತಿಷೇಧಾರ್ಥಂ ಮಾಯಯಾಽಽರೋಪಿತಂ ಹಿ ತತ್ ॥೪೫॥

ಈ ಜಗತ್ತಿಗೆ ಉತ್ಪತ್ತಿ ಕರ್ಮಗಳು ಭಗವಂತನಿಂದಲೆ ಎನ್ನುತ್ತ ವೇದವು ಭಗವಂತನ ಕರ್ತೃತ್ವವನ್ನು ಹೇಳುವುದಕ್ಕೇ ಹೊರಟಿದೆ ಹೊರತು ಅದಕ್ಕೆ ಅದರಲ್ಲಿ ತಾತ್ಪರ್ಯವಿಲ್ಲ ಎನ್ನಲಾಗದು. ಮೋಕ್ಷಸಾಧನವೂ ಜೀವರಿಗೆ ಭಗವಂತನ ಕರ್ತೃತ್ವ ಜ್ಞಾನವೇ ಆಗಿದೆ. ಕರ್ತೃತ್ವ ಭಗವಂತನಲ್ಲಿ ಕಲ್ಪಿತವಲ್ಲ, ಸ್ವೇಚ್ಛೆಯಿಂದ ಅವನು ತನ್ನಲ್ಲಿ ನಿತ್ಯ ಇರಿಸಿಕೊಂಡಿದ್ದಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—
ನಾಸ್ಯ ಕರ್ಮಣಿ ಜನ್ಮಾದೌ ಪರಸ್ಯಾನುವಿಧೀಯತೇ ।
ಕರ್ತೃತ್ವಪ್ರತಿಷೇಧಾರ್ಥಂ ಮಾಯಯಾರೋಪಿತಂ ಹಿ ತತ್ ।

'ಪರಮಾತ್ಮನಿಗೆ ಜನ್ಮಾದಿಕರ್ಮದಲ್ಲಿ ಕರ್ತೃತ್ವವಿಲ್ಲ, ಶ್ರುತಿಯಲ್ಲಿ ಅದು ವರ್ಣಿತವಾಗಿದೆ. ಏಕೆಂದರೆ, ಕರ್ತೃತ್ವ ನಿಷೇಧಕ್ಕಾಗಿ. ಅದು ಮಾಯೆಯಿಂದ ಆರೋಪಿತ ತಾನೆ!' ಎಂದು ಶ್ರೀಧರೀಯದಲ್ಲಿ ಹೇಳಿದೆ.

ಪರಮಾತ್ಮ ಸೃಷ್ಟಿಕರ್ತನೆಂಬುದು ಜನರಿಗೆ ತಿಳಿಯದಿರುವ, ವೇದದಲ್ಲಿ ಮಾತ್ರ ಕಂಡು ಬರುವ ಪ್ರಮೇಯ. ಅದನ್ನು ವೇದವು ತಾನೇ ಹೇಳಿ, ತಾನೇ ನಿಷೇಧ ಮಾಡುವುದೇಕೆ? ಸುಮ್ಮನೆ ಗೊಂದಲ ಉಂಟುಮಾಡಬೇಕೆಂದೆ? ಶ್ಲೋಕದ ಈ ಪಾಠವೂ ಸರಿಯಲ್ಲ.

ಜನ್ಮಕರ್ಮಾಣಿ, ವಿಧೀಯತ ಇತಿ ಕ್ರಿಯಾವಿಶೇಷಣಂ ।
ಪ್ರತಿಷೇಧಾಯ ಬಂಧಸ್ಯ ಜೀವಾನಾಂ ಪರಮೇಶಿತುಃ ।
ಸ್ವೇಚ್ಛಯೈವ ತು ಕರ್ತೃತ್ವಂ ನಿತ್ಯಾರೂಢಂ ಚಿದಾತ್ಮಕಂ ।

ಇತಿಭವಿಷ್ಯತ್‌ಪುರಾಣೇ । ರೂಪ ಉಪರಿಭಾವ ಇತಿ ಧಾತುಃ ।
ಸುಭದ್ರಾಂ ರಥಾಮಾರೋಪ್ಯೇತ್ಯಾದಿವಚ್ಚ। ಸ್ವಾಭಾವಿಕೀ ಜ್ಞಾನ ಬಲ ಕ್ರಿಯಾ ಚೇತಿ ಚ ।

'ಜನ್ಮಕರ್ಮಾಣಿ' ಎಂಬುದು 'ಕರ್ತೃತ್ವಂ ವಿಧೀಯತೇ' ಎಂಬ ಕ್ರಿಯೆಗೆ ವಿಶೇಷಣ. ಪರಮಾತ್ಮನಿಂದಲೆ ಜಗತ್ತಿಗೆ ಜನ್ಮಕರ್ಮಗಳಾಗುತ್ತವೆ ಎಂದು ಹೇಳುತ್ತ ಕರ್ತೃತ್ವವನ್ನು ಹೇಳುತ್ತದೆ ಎಂದರ್ಥ.

ಈ ಶ್ಲೋಕದ ಛಾಯಾನುವಾದ ಭವಿಷ್ಯತ್‌ಪುರಾಣದ ಈ ಶ್ಲೋಕದಲ್ಲಿ ಬಂದಿದೆ—'ಜೀವರ ಸಂಸಾರಬಂಧ ನಿವೃತ್ತಿಗಾಗಿ ಸೃಷ್ಟ್ಯಾದಿಕರ್ತೃತ್ವವು ಪರಮಾತ್ಮನ ಸ್ವೇಚ್ಛೆಯಿಂದಲೆ ಅವನಲ್ಲಿ ಸದಾ ಇರಿಸಿಕೊಳ್ಳಲ್ಪಟ್ಟಿದೆ. ಅದು ಕಲ್ಪಿತವಲ್ಲ, ಅವನ ಚೈತನ್ಯಸ್ವರೂಪವೇ ಆಗಿದೆ' ಎಂದು. 'ರೂಪ ಉಪರಿಭಾವೇ' ಎಂದು ಧಾತುವ್ಯಾಖ್ಯಾನವಿರುವುದರಿಂದ ಮತ್ತು 'ಸುಭದ್ರೆಯನ್ನು ರಥದಲ್ಲಿ ಆರೋಪಿಸಿ' ಎಂದು ಮುಂತಾಗಿ ಪ್ರಯೋಗವಿರುವುದರಿಂದ, ಕರ್ತೃತ್ವ 'ಆರೋಪಿತ' ಎಂದ ಮಾತ್ರಕ್ಕೆ 'ಕಲ್ಪಿತ' ಎಂದು ಅರ್ಥವಾಗುವುದಿಲ್ಲ. ಜ್ಞಾನ ಬಲ ಕ್ರಿಯೆಗಳು ಪರಮಾತ್ಮನಲ್ಲಿ ಸ್ವಾಭಾವಿಕ ಹೊರತು ಕಲ್ಪಿತವಲ್ಲ ಎಂದು ಶ್ರುತಿಯೂ ಹೇಳುತ್ತದೆ.

ಸುಭದ್ರಾಂ ಅಭಿಮನ್ಯುಂ ಚ ರಥಮಾರೋಪ್ಯ ಕಾಂಚನಂ

(ಮ.ಭಾ.ಆದಿ.೨೩.೪೭)

'ಸುಭದ್ರೆಯನ್ನೂ ಅಭಿಮನ್ಯುವನ್ನೂ ಬಂಗಾರದ ರಥದಲ್ಲಿ ಆರೋಪಿಸಿ' 'ಇರಿಸಿ' ಎಂದು ಮಹಾಭಾರತದಲ್ಲಿ ಹೇಳಿದೆ. ಇಲ್ಲಿ ಆರೋಪವೆಂದರೆ ಭ್ರಾಂತಿಯಲ್ಲ.

★★★

ಬ್ರಹ್ಮಾಂಡದೊಳಗೆ ಭಗವಂತ ಸ್ಥಾವರ ಜಂಗಮ ಸೃಷ್ಟಿಮಾಡಿದ ಕ್ರಮ ಎಲ್ಲ ಕಲ್ಪಗಳಲ್ಲಿಯೂ ಒಂದೇ ರೀತಿ ಇರುತ್ತದೆ. ವ್ಯತ್ಯಾಸವಾಗುವುದಿಲ್ಲ ಎನ್ನುತ್ತಾರೆ, ಶುಕಮುನಿಗಳು—

ಅಯಂ ತೇ ಬ್ರಹ್ಮಣಃ ಕಲ್ಪಃ ಸವಿಕಲ್ಪ ಉದಾಹೃತಃ ।
ವಿಧಿಃ ಸಾಧಾರಣೋ ಯತ್ರ ಸರ್ಗಾಃ ಪ್ರಾಕೃತವೈಕೃತಾಃ ॥ ೪೬ ॥

ಇದು ಎಲ್ಲ ಬ್ರಹ್ಮಕಲ್ಪ ಅವಾಂತರಕಲ್ಪಗಳಲ್ಲಿ ಒಂದೇ ರೀತಿಯಾಗಿ ನಡೆಯುವ ಪ್ರಾಕೃತ ವೈಕೃತ ಸೃಷ್ಟಿಗಳ ಕ್ರಮ. ರಾಜನೆ, ಅದನ್ನು ನಾನು ನಿನಗೆ ಹೇಳಿದ್ದೇನೆ.

ಅನ್ಯಕಲ್ಪಾನಾಂ ಸಾಧಾರಣಃ । ಯತ್ರೈವ ಪ್ರಾಕೃತವೈಕೃತಾಃ ಸರ್ವಸರ್ಗಾಃ । ಅನ್ಯ ಬ್ರಹ್ಮಕಲ್ಪಾನಾಂ ಚ ಸಾಧಾರಣಃ ।

'ಸಾಧಾರಣಃ' ಸಮಾನ ಎಂದರೆ 'ಬೇರೆ ಅವಾಂತರ ಕಲ್ಪಗಳಲ್ಲಿಯೂ' ಸಮಾನ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. ಪ್ರಾಕೃತ ವೈಕೃತ ಎಂದು ಎಲ್ಲ ಬಗೆಯ ಸೃಷ್ಟಿ ಇರುವುದು ಬ್ರಹ್ಮಕಲ್ಪದಲ್ಲಿ ಮಾತ್ರವಾದ್ದರಿಂದ 'ಬೇರೆ ಬ್ರಹ್ಮಕಲ್ಪಗಳಲ್ಲಿಯೂ' ಸಮಾನ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ ಶ್ರೀಮದ್ ಭಾಗವತ ತಾತ್ಪರ್ಯನಿರ್ಣಯೇ ದ್ವಿತೀಯಸ್ಕಂಧೇ ದಶಮೋಽಧ್ಯಾಯಃ

ದ್ವಿತೀಯಃ ಸ್ಕಂಧಃ ಸಂಪೂರ್ಣಃ